
ಶಂಬಾ ಕೃತಿ ಸಂಪುಟ

ಕಂನಡ - ಕಂಮುಡಿ ೧



ಕನ್ನಡ ಪುಸ್ತಕ ಪ್ರಾಧಿಕಾರ
ಚಾಮರಾಜಪೇಟೆ,
ಬೆಂಗಳೂರು 560 018

ಜನಪ್ರಿಯ ಪುಸ್ತಕ ಮಾಲೆ

ಶಂಬಾ ಕೃತಿಸಂಪುಟ

೨

ಕಂನಡ - ಕಂನುಡಿ

ಮಲ್ಲೇಪುರಂ ಜಿ. ವೆಂಕಟೇಶ

ಸಂಪಾದಕ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಪಂಪಮಹಾಕವಿ ರಸ್ತೆ

ಚಾಮರಾಜಪೇಟೆ, ಬೆಂಗಳೂರು - ೫೬೦ ೦೧೮

SHAMBA KRUTI SAMPUTA : VOL. 2

KANNADA - KANNUDI

Complete Works of Dr. Shamba Joshi

Edited by : Prof. Mallepuram G. Venkatesha

Kannada University, Hampi

Published by The Administrative Officer

Kannada Pustaka Pradhikara

(Kannada Book Authourity)

Pampa Mahakavi Road, Chamarajpet

Bangalore - 560 018

First Edition : 1999

Page : xxxii + viii + 475

ISBN 81 - 7713 - 001 - 3

ಈ ಆವೃತ್ತಿಯ ಹಕ್ಕುಗಳು : ಕನ್ನಡ ಪುಸ್ತಕ ಪ್ರಾಧಿಕಾರ

ಮುಖಪುಟ ವಿನ್ಯಾಸ : ಟಿ. ಎಫ್. ಹಾದಿಮನಿ

ಬೆಲೆ : **125/-**

ಲಕ್ಷ್ಮೀ ಮುದ್ರಣಾಲಯ


LAKSHMI MUDRANALAYA

ಚಾಮರಾಜಪೇಟೆ, ಬೆಂಗಳೂರು

ದೂರವಾಣಿ : ೬೬೧೩೧೨೩, ೬೬೧೮೭೫೨

ಸಂಪಾದಕ ಸಲಹಾ ಸಮಿತಿ

ಡಾ. ಎಚ್. ಜೆ. ಲಕ್ಕಪ್ಪಗೌಡ	*ಅಧ್ಯಕ್ಷರು*
ಡಾ. ದೇ. ಜವರೇಗೌಡ	*ಸದಸ್ಯರು*
ಡಾ. ದೇವೇಂದ್ರಕುಮಾರ ಹಕಾರಿ	*ಸದಸ್ಯರು*
ಶ್ರೀಮತಿ ವಿಮಲ ಡಿಸ್ಕಳ್ಕರ್	*ಸದಸ್ಯರು*
ಶ್ರೀ ವಿ. ಎನ್. ಮಲ್ಲಿಕಾರ್ಜುನ ಸ್ವಾಮಿ	*ಆಡಳಿತಾಧಿಕಾರಿಗಳು*



ಕನ್ನಡ
ನುಡಿಯ ಹುಟ್ಟು ಅಥವಾ ನಿರುಕ್ತ

ಕವಿಗಳಿಗಿದು ಕೈಗನ್ನಡಿ
-ನಾಗವರ್ಮ

ಬರೆದವರು:
ಶಂ. ಬಾ. ಜೋಶಿ


ಬೆಲೆ: ಒಂದು ರೂಪಾಯಿ

ಮೊದಲನೆಯ ಮುದ್ರಣದ ಒಳಪುಟ


ಕನ್ನಡ
ನುಡಿಯ ಜೀವಾಳ

ಸರಸ್ವತಿ ನಿಲಯ
ಧಾರವಾಡ


ಕನ್ನಡನುಡಿಯ ಜೀವಾಳದ ಮುಖಪುಟ


Government of Bombay
Kannada Research Grant Publication.

ಕನ್ನಡದ ನೆಲೆ

ಶಂ. ಬಾ. ಜೋಶಿ

ಮೊದಲನೆಯ ಮುದ್ರಣದ ಮುಖಪುಟ



ಎಡೆಗಳು ಹೇಳುವ
ಕಂನಾಡ ಕತೆ

ಶಂ. ಬಾ. ಜೋಶಿ

೧೯೪೬

ಮಾಧವ ಬಲ್ಲಾಳ ಬಂಧುಗಳು
ಧಾರವಾಡ

ಎಡೆಗಳು ಹೇಳುವ ಕಂನಾಡ ಕತೆಯ ಒಳಪುಟ




ಬೀChi ಅವರೊಡನೆ




ಅಣ್ಣ ಭಾನು ಬಾಳದೀಕ್ಷಿತ ಜೋಶಿ, ಳ. ಶಂಬಾ ಜೋಶಿ
ಜಿ. ಪತ್ನಿ, ಪಾರ್ವತಿಬಾಯಿ (ಹಿಂಬದಿ) ಶಂಬಾ ಮಕ್ಕಳು
ಬಲ್ಲಾಳ ಜೋಶಿ, ವಿಮಲಡಿಸ್ಕಳ್ಕರ್ ಹಾಗೂ ಮಧುಕರ ಜೋಶಿ.




ಧಾರವಾಡದ ಶಂಬಾ ಅವರ ಮನೆಯ ಎದುರು ೧. ಚಿದಂಬರ ದೀಕ್ಷಿತ್
೨. ಶಂಬಾ ೩. ನೆಗಳೂರು ರಂಗನಾಥ ೪. ಮಾಸ್ತಿ ೫. ತೀನಂಶ್ರೀ ೬. ಕಂ. ವೆಂ. ರಾಘವಾಚಾರ್
೭. ರಘುನಾಥರಾವ್ ನಾಡಿಗ್, ೮. ವಿ. ಎಂ. ಇನಾಂದಾರ್




ಶಂಬಾ ಅವರ ಮನೆಯ ಎದುರು
ಶೇಗೋ ಕುಲಕರ್ಣಿ ಮತ್ತು ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾವ್.



ಶಂಬಾ ಅವರು ಬಾಳಿಬದುಕಿದ ಮನೆ (೧೯೭೦)



ಡಾ. ಶಿವರಾಮಕಾರಂತ ಅವರೊಡನೆ



ಶಂಬಾ: ಒಂದು ಅಪರೂಪ ಚಿತ್ರ



ಮಿತ್ರರೊಡನೆ ಮಧ್ಯೆ ಶಂಬಾ (೧೯೩೯)

ಮುನ್ನುಡಿ

ಜ್ಞಾನ ಸಂಪಾದನೆ ಮತ್ತು ಜ್ಞಾನ ಪ್ರಸಾರಗಳ ಅತ್ಯಂತ ಪ್ರಬಲ ಮತ್ತು ಪರಿಣಾಮಕಾರಿ ಮಾಧ್ಯಮ ಅಕ್ಷರ ಮಾಧ್ಯಮ. ಈ ಮಾಧ್ಯಮದಲ್ಲಿ ಆಹ್ಲಾದಕಾರಿಯೂ, ಅತ್ಯಾಕರ್ಷಕವೂ, ಜೀವನ ಸೌಂದರ್ಯದಾಯಕವೂ, ಸಂಸ್ಕೃತಿ ಸಂಪನ್ನವೂ, ಬುದ್ಧಿ ಮನಸ್ಸುಗಳ ವರ್ಧಕವೂ ಆದ ಅಪೂರ್ವ ಮಾಧ್ಯಮವೇ ಸಾಹಿತ್ಯ. ನಿತ್ಯ ಪರಿವರ್ತನಶೀಲವಾದ ಜಗತ್ತಿನ ಜ್ಞಾನ ವಿಜ್ಞಾನ ಸಂಸ್ಕೃತಿಗಳನ್ನು ತಲೆಮಾರಿನಿಂದ ತಲೆಮಾರಿಗೆ ಪ್ರಸಾರ ಮಾಡುತ್ತ ಮನುಷ್ಯನ ಜೀವನವನ್ನು ಪುಷ್ಟಿಗೊಳಿಸುತ್ತ, ತುಷ್ಟಿಗೊಳಿಸುತ್ತ, ವಿಕಾಸಗೊಳಿಸುತ್ತ, ಪೂರ್ಣತೆಯ ಕಡೆಗೆ ಅವನನ್ನು ಕರೆದೊಯ್ಯುವುದೇ ಇದರ ಪರಮ ಗುರಿ. ಇಂಥ ಜೀವನೋತ್ಥಾನಕಾರಿಯಾದ ಉತ್ತಮ ಜ್ಞಾನಸಂಪತ್ತನ್ನು ವಿಶಿಷ್ಟ ಹಾಗೂ ಅರ್ಥಪೂರ್ಣ ಗ್ರಂಥಗಳ ಮೂಲಕ ಕನ್ನಡ ಓದುಗರಿಗೆ ಒದಗಿಸುವ ಗುರುತರ ಜವಾಬ್ದಾರಿಯನ್ನು ಕನ್ನಡ ಪುಸ್ತಕ ಪ್ರಾಧಿಕಾರ ಹೊತ್ತುಕೊಂಡು ನಿರ್ವಹಿಸುತ್ತಿದೆ.

ಜ್ಞಾನ, ಸಂಸ್ಕೃತಿ ಮತ್ತು ಸಾಹಿತ್ಯ ಪ್ರಸಾರ ಕಾರ್ಯಕ್ಕೆ ಕರ್ನಾಟಕ ಸರ್ಕಾರ ಬಹು ಹಿಂದಿನಿಂದ ಒತ್ತಾಸೆ ನೀಡುತ್ತ ಬಂದಿದೆ. ಈ ಮೌಲಿಕ ಪರಂಪರೆಯನ್ನು ಆರಂಭಿಸಿದ ಕೀರ್ತಿ ಕರ್ನಾಟಕ ಕಂಡ ಅತ್ಯಂತ ದಕ್ಷ ಹಾಗೂ ದೂರದೃಷ್ಟಿಯ ಮುಖ್ಯಮಂತ್ರಿಗಳಲ್ಲಿ ಒಬ್ಬರಾದ ಶ್ರೀ ಕೆಂಗಲ್ ಹನುಮಂತಮ್ಯ ಅವರಿಗೆ ಸಲ್ಲಬೇಕು. ಕನ್ನಡದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ಶ್ರೇಷ್ಠ ಗ್ರಂಥಗಳನ್ನು ಸುಲಭ ಬೆಲೆಯಲ್ಲಿ ಓದುಗರಿಗೆ ತಲುಪಿಸುವ ಸ್ತುತ್ಯ ಕಾರ್ಯವನ್ನು ಅಂದಿನಿಂದ ನಿರ್ವಹಿಸುತ್ತ ಬಹುಬೇಡಿಕೆಯ ನೂರಾರು ಕೃತಿಗಳನ್ನು ಸರ್ಕಾರ ಪ್ರಕಟಿಸಿ ಜನಮನ್ನಣೆಯನ್ನು ಗಳಿಸಿದೆ.

ಇದುವರೆಗೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಪ್ರಕಟಿಸುತ್ತಿದ್ದ ಇಂಥ ಪ್ರಾಚೀನ ಹಾಗೂ ಆಧುನಿಕ ಜನಪ್ರಿಯ ಪುಸ್ತಕಗಳನ್ನು ಈಗ ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸುತ್ತಿದೆ. ಅಲಭ್ಯವಾಗಿರುವ ಹಾಗೂ ಬಹು ಬೇಡಿಕೆಯ, ಸಾಹಿತ್ಯ ಮೌಲ್ಯ ಮತ್ತು ವೈಚಾರಿಕ ಮೌಲ್ಯಗಳನ್ನು ಒಳಗೊಂಡಿರುವ ಕೃತಿಗಳನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ಕನ್ನಡ ಸಹೃದಯರಿಗೆ ನೀಡುವುದೇ ಈ 'ಜನಪ್ರಿಯ ಪುಸ್ತಕಮಾಲೆ'ಯ ಮುಖ್ಯೋದ್ದೇಶ.

ಈ ಮಾಲೆಯಲ್ಲಿ ಕನ್ನಡದ ಅತ್ಯಂತ ಪ್ರಸಿದ್ಧ ಹಾಗೂ ಸ್ವೋಪಜ್ಞಶೀಲ ವಿದ್ವಾಂಸರಾದ, ಡಾ. ಶಂಬಾ ಜೋಶಿ ಅವರ ಸಮಗ್ರ ಕೃತಿಗಳನ್ನು ಒಟ್ಟು ಆರು ಸಂಪುಟಗಳಲ್ಲಿ ಪುಸ್ತಕ ಪ್ರಾಧಿಕಾರವು ಇದೀಗ ಪ್ರಕಟಿಸುತ್ತಿದೆ. ಲೇಖಕರೊಬ್ಬರ ಸಮಗ್ರ ಕೃತಿಗಳ ಸಂಪುಟಗಳನ್ನು ಹೊರತರುವಲ್ಲಿ ಇದು ಪ್ರಾಧಿಕಾರದ ಯೋಜನೆಯ ಮೊದಲ ಪ್ರಯತ್ನ. ಡಾ : ಶಂಕರರಾವ್ ಬಾಳದೀಕ್ಷಿತ ಜೋಶಿ ಅವರು ಕರ್ನಾಟಕ ಕಂಡ ಅತ್ಯಂತ ಶ್ರೇಷ್ಠ ಸಾಂಸ್ಕೃತಿಕ ಸಂಶೋಧಕರು. ನಮ್ಮ ಈ ನಾಡಿನ ಪ್ರತಿಭಾಪೂರ್ಣ ವಿದ್ವತ್ ಪರಂಪರೆಯಲ್ಲಿ

ಡಾ. ಜೋಶಿ ಅವರದ್ದು ಅಪೂರ್ವವೂ ಮತ್ತು ವಿಶಿಷ್ಟವೂ ಆದ ಮಾರ್ಗ. ಜೋಶಿ ಅವರು ಹಿಡಿದಿರುವ ಮತ್ತು ನಡೆದು ಬಂದಿರುವ ಈ ಮಾರ್ಗ ಅನ್ಯಸುಗಮವಾದುದಲ್ಲ. ಅವರು ಪರಂಪರಾಗತ ಸಂಶೋಧನೆಗೆ ಮತ್ತು ಕರ್ನಾಟಕದ ಸಾಂಸ್ಕೃತಿಕ ಹಾಗೂ ವಿದ್ವತ್ ಕ್ಷೇತ್ರಕ್ಕೆ ವಿನೂತನ ಆಯಾಮವನ್ನು ನೀಡಿದ ಅಪರೂಪದ ಸಂಶೋಧಕರು. ಅವರು ತೆರೆದ ಆಯಾಮಗಳು ವೈವಿಧ್ಯಮಯವಾದವುಗಳು. ಕನ್ನಡ ವಿದ್ವತ್ ಪರಂಪರೆಯಲ್ಲಿ ಹೊಸ ಸಂಶೋಧನ ಪದ್ಧತಿಯೊಂದನ್ನೆ ಅವರು ರೂಪಿಸಿದರು. ಸಂಶೋಧನೆಗೆ ವಿಶಾಲವ್ಯಾಪ್ತಿಯನ್ನು ಮತ್ತು ಗಟ್ಟಿತಳಹದಿಯನ್ನು ನೀಡುವ ಸಲುವಾಗಿ ಹಲವು ಬಗೆಯ ಜ್ಞಾನಮಾರ್ಗಗಳನ್ನು ತಮ್ಮ ಶೋಧನೆ ಹಾಗೂ ಸತ್ಯಪ್ರತಿಪಾದನೆಯ ಆಕರಗಳನ್ನಾಗಿ ದುಡಿಸಿಕೊಂಡರು. ಅವರು ನಡೆಸಿದ ಸಾಂಸ್ಕೃತಿಕ ಅನ್ವೇಷಣೆ ಬೌದ್ಧಿಕ ವ್ಯಾಪಾರವಲ್ಲ; ವರ್ತಮಾನದ ವಿಸಂಗತಿಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅವುಗಳನ್ನು ದಾಟಿ ಸರ್ವಮಾನ್ಯವೆನಿಸಬಹುದಾದ ವೈಜ್ಞಾನಿಕ ಚಿಂತನೆಯ ಒಂದು ವಿಶಿಷ್ಟ ಉಪಕ್ರಮವಾಗಿ ಅದನ್ನು ಸ್ವೀಕರಿಸಿದರು. ತಾವು ಸತ್ಯವೆಂದು ನಂಬಿದ ಮತ್ತು ಕಂಡ ಅಂಶಗಳನ್ನು ಅನ್ಯಮೂಲಗಳಿಂದ ಪರೀಕ್ಷಿಸುವುದಕ್ಕಾಗಿ ಮತ್ತು ಪರಿಷ್ಕರಿಸುವುದಕ್ಕಾಗಿ ಅವರು ಪ್ರಾಚೀನ ಗಡಿಪ್ರದೇಶಗಳನ್ನು ಕಾಣುವ ವಿಶೇಷ ಪ್ರಯತ್ನ ಮಾಡಿದರು. ಕನ್ನಡ ನಾಡಿನಲ್ಲಿ ಮಾತ್ರವಲ್ಲದೇ ಮಹಾರಾಷ್ಟ್ರ, ಮಧ್ಯಪ್ರದೇಶ, ಬಂಗಾಳ, ಬಿಹಾರ ಮತ್ತು ಇನ್ನು ಹಲವು ಹತ್ತುಕಡೆಗಳಿಂದ ತಮ್ಮ ಸಂಶೋಧನೆಗೆ ಪೂರಕವಾದ ನೂರಾರು ಸಾಕ್ಷಿ ಮತ್ತು ಸಾಮಗ್ರಿಗಳನ್ನು ಹೆಕ್ಕಿಹೆಕ್ಕಿ ತೆಗೆದು; ಆ ಮೂಲಕ ವಿವಿಧ ವಾದ ಮತ್ತು ಅಭಿಪ್ರಾಯಗಳ ನಡುವೆ ಗೊಂದಲಮಯವಾಗಿದ್ದ ಕನ್ನಡನಾಡಿನ ಭೌಗೋಳಿಕ ಜಾನಾಂಗಿಕ ಮತ್ತು ಸಾಂಸ್ಕೃತಿಕ ಎಲ್ಲೆಗಳನ್ನು ಪುನರ್‌ರಚನೆ ಮಾಡಿದರು. ತಾವು ಸಮೃದ್ಧವಾಗಿ ಕಂಡು ಹಿಡಿದು, ಅಧ್ಯಯನಮಾಡಿದ ಆಕರಗಳ ಬೆಳಕಿನಲ್ಲಿ ನೂತನ ನೆಲೆಗಳನ್ನು ಕಂಡು ಕಾಣಿಸಿದರು. ಹಾಗೆಯೇ, ತಮ್ಮ ಸತತ ಪರಿಶ್ರಮ ಮತ್ತು ಶ್ರದ್ಧಾತಪಸ್ಸುಗಳಿಂದ ದರ್ಶಿಸಿದ ಆ ನೆಲೆಗಳ ಮತ್ತು ಸೆಲೆಗಳ ಫಲಿತಗಳನ್ನು ಕಾಲಕಾಲಕ್ಕೆ ಕನ್ನಡದ ಅಗ್ರಮಾನ್ಯ ವಿದ್ವಾಂಸರ, ಸಂಶೋಧಕರ ಎದುರು ಇಟ್ಟು ಆರೋಗ್ಯಕರ ಚರ್ಚೆ ಮತ್ತು ವಿದಗ್ಧವಾದಗಳ ವೇದಿಕೆಯನ್ನು ಸೃಷ್ಟಿಸುವ ಮೂಲಕ ಕನ್ನಡನಾಡಿನಲ್ಲಿ ಹೊಸ ಸಾಂಸ್ಕೃತಿಕ ಹಾಗೂ ಐತಿಹಾಸಿಕ ಚಿಂತನೆಗಳ ಮಿಂಚಿನ ಅಲೆಗಳನ್ನು ಎಬ್ಬಿಸಿದರು.

ಡಾ : ಶಂಬಾ ಅವರ ಆಸಕ್ತಿ, ಅಧ್ಯಯನ, ಸಂಶೋಧನೆ ಮತ್ತು ಚಿಂತನೆಗಳ ಬೀಸು ತುಂಬಾ ವ್ಯಾಪಕವಾದುದು. ಈ ಕಾರಣ ಅವರು ಇತಿಹಾಸದ ಭಾಷಾ ವಿಶ್ಲೇಷಣಾ ಪದ್ಧತಿಯನ್ನು ಕರುನಾಡಿನ ಎಡೆಗಳ ಹೆಸರುಗಳ, ದೇವತಾ ಪ್ರತಿರೂಪಗಳ, ಸಾಂಕೇತಿಕ ನೆಲೆಗಳ, ಮನೋವೈಜ್ಞಾನಿಕ ಶೋಧನೆಗಳ, ಧಾರ್ಮಿಕ, ಚಿಂತನೆಗಳ ಸಂಕೀರ್ಣ ಪಥವನ್ನು ಹಿಡಿದು ನಡೆದರು. ತಿರುವು ಮುರುವು ಆಗಿರುವ ಸಮಕಾಲೀನ ಮೌಲ್ಯಗಳ ಜೊತೆಗೆ ಪ್ರಾಚೀನ ಸಂಸ್ಕೃತಿಯ ಸಾಧಾರವಿಷಯಗಳನ್ನು ಇಟ್ಟು ತೌಲನಿಕವಾಗಿ ನೋಡಿದ್ದು ಮತ್ತು ವಿಶ್ಲೇಷಿಸಿದ್ದು ಜಾಗತಿಕ ಸಾಂಸ್ಕೃತಿಕ ಅಧ್ಯಯನದ ಅಖಂಡ ಇತಿಹಾಸದಲ್ಲೇ ಹೊಸಬಗೆಯದು. ಹೀಗಾಗಿ ಆಧುನಿಕ ಸಮಾಜದ ಬಹುಮುಖಿ ನೆಲೆಗಳನ್ನು ಅರಿಯಲು ಮತ್ತು ಅರ್ಥೈಸಲು ಪ್ರಾಚೀನ ಆಕರಗಳನ್ನು ಯಥೇಚ್ಛವಾಗಿ ಬಳಸಿಕೊಂಡು ಮುನ್ನಡೆದ ಶಂಬಾ ಅವರು ಹೊಸ ಅರ್ಥಗ್ರಹಣ ಪದ್ಧತಿಯನ್ನೇ ತಮ್ಮ ಬರಹಗಳ ಮೂಲಕ ನಮಗೆ ನೀಡಿದ್ದಾರೆ. ಇಂದಿನ ಸಂಕೀರ್ಣಯುಗದ ಮಾನವನ ಅಧೋಗತಿಗೆ ಸಮಾಜ ಸಮ್ಮುಖ ಆಚರಣೆಗಳು ಹಿಂದೆ ಸರಿದು ವ್ಯಕ್ತಿ ವಿಶಿಷ್ಟ ಆಚರಣೆಗಳು ದೈತ್ಯಾಕಾರವನ್ನು ತಳೆದು ನಿಂತದ್ದೆ ಕಾರಣವೆಂದು ತಮ್ಮ ಸತತ ಮತ್ತು ಸುವಿಸ್ತಾರವಾದ ಸಂಶೋಧನೆಯ ನೆಲೆಯಲ್ಲಿ ಅವರು ಕಂಡುಕೊಂಡಿದ್ದಾರೆ. ಈ ಎಲ್ಲಾ ಕಾರಣಗಳಿಂದಾಗಿ ಡಾ : ಶಂಬಾ ಅವರದು ಬಹುಮುಖವಾದ ಮತ್ತು ಬಹುಶ್ರುತವಾದ ಅಪರೂಪದ ವ್ಯಕ್ತಿತ್ವ. ಅವರು ನಮ್ಮ ಸಾಂಸ್ಕೃತಿಕ ಚಿಂತಕರಲ್ಲಿ ಪ್ರಥಮರಲ್ಲಿ ಪ್ರಥಮರು. ಕಲ್ಪನಾಪ್ರಧಾನ ಸಾಂಪ್ರದಾಯಕ ಸಾಂಸ್ಕೃತಿಕ ಇತಿಹಾಸದ ಪರಂಪರೆಯ ಮೃದುಶಯ್ಯೆಯ ಮೇಲೆ ನಿರಾಳವಾಗಿ ಮಲಗಿದ್ದ ವೈದಿಕಶಾಹಿ ಚಿಂತನಕ್ರಮವನ್ನು, ತನ್ನ ಜಾತ್ಯತೀತ ನಿಲುವಿನ ಸತ್ಯಶೋಧನೆಯ ಅಚ್ಚರಿಗೊಳಿಸುವ ಫಲಿತಗಳ ಮೂಲಕ ತಲ್ಲಣಗೊಳಿಸಿ ಹೂತು ಹೋಗಿದ್ದ ತಥ್ಯಗಳಿಗೆ

ಜೀವದಾನ ಮಾಡಿ ಹೊಸ ಬೆಳಕಿನ ಪಥವನ್ನು ನಿರ್ಮಿಸಿದ ಅಸಾಧಾರಣ ವ್ಯಕ್ತಿ. ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾಳಜಿಗಳು, ವಿಶಾಲನೆಲೆಗಟ್ಟಿನ ಸೂಕ್ಷ್ಮತಮ ಚಿಂತನೆಗಳು, ಅಪ್ರಿಯವಾದರೂ ಕಷ್ಟದ ಕಲ್ಲುಮುಳ್ಳುಗಳನ್ನು ತುಳಿದು ಸತ್ಯಸೂರ್ಯನನ್ನು ದರ್ಶನ ಮಾಡಿಸುವ ವಿದ್ವತ್ ತಪಸ್ಸು-ಇವುಗಳೆಲ್ಲ ಅನ್ಯಾದೃಶ್ಯವಾಗಿ ಮೈತಳೆದು ನಿಂತ ಅವರ ಬರಹಗಳ ಸುಮಾರು ೪೦೦೦ ಪುಟಗಳ ಬೃಹತ್ ರಾಶಿಯೇ ನಮ್ಮ ಮುಂದಿದೆ. ಭೂತ ಮತ್ತು ವರ್ತಮಾನಗಳನ್ನು ನಿಷ್ಕೃಷ್ಟವಾಗಿ ಅರಿತು ಅವುಗಳ ತಳಹದಿಯ ಮೇಲೆ ಬಹುಶ್ರುತ ಚಿಂತನೆ ಮತ್ತು ಕ್ರಿಯೆಗಳನ್ನು ರೂಪಿಸುವ ಅದ್ಭುತ ಸ್ಫೂರ್ತಿಯ ಜೀವಕೇಂದ್ರಗಳಿವು. ಈ ಕಾರಣಗಳಿಂದಾಗಿ ಜೋಶಿ ಅವರ ಸಮಗ್ರ ಕೃತಿಗಳನ್ನು ಪ್ರಾಧಿಕಾರ ಹೊರತರುವ ಮೂಲಕ ಕನ್ನಡನಾಡಿನ ಜನರಿಗೆ ತಮ್ಮ ಸಂಸ್ಕೃತಿ ಮತ್ತು ಇತಿಹಾಸ ಪರಿಜ್ಞಾನವನ್ನು ಬೆಳಸಿಕೊಳ್ಳಲು ಇವು ಸಾಧಕವಾಗುತ್ತವೆ ಎಂದು ಭಾವಿಸಿದ್ದೇನೆ. ೨೦ನೆಯ ಶತಮಾನದ ಅಂಚಿನಲ್ಲಿ ನಿಂತಿರುವ ನಮಗೆ ಇವು ಹೊಸ ಆಕರಗಳಾಗಿ, ಮೌಲ್ಯಗಳ ಅನ್ವೇಷಣೆಯ ದಾರಿದೀಪಗಳಾಗಿ, ಮುಂದೆ ನಡೆಯಬಹುದಾದ ಮತ್ತು ನಡೆಯಬೇಕಾದ ಅರ್ಥಪೂರ್ಣ ಪಥಗಳನ್ನು ತಿಳಿಸುವ ಮೈಲುಗಲ್ಲುಗಳಾಗಿ ನೆಲೆನಿಲ್ಲುತ್ತವೆಂಬ ನಂಬುಗೆ ನಮ್ಮದು. ಈ ದೃಷ್ಟಿಯಿಂದ ಇವು ಈ ಶತಮಾನದ ಅಮೂಲ್ಯ ಸಂಪುಟಗಳು.

ಕನ್ನಡನಾಡಿನ ಸಾಂಸ್ಕೃತಿಕ ಮತ್ತು ಸಾಹಿತ್ಯಕ ಶ್ರೀಮಂತ ಆಕರಗಳನ್ನು ಕನ್ನಡ ಓದುಗರಿಗೆ ಒದಗಿಸಬೇಕೆಂಬ ಹೆಬ್ಬಯಕೆಯಿಂದ ಕರ್ನಾಟಕ ಸರ್ಕಾರದ ಉಪ ಮುಖ್ಯಮಂತ್ರಿಗಳೂ ಹಾಗು ಹಣಕಾಸು ಸಚಿವರಾದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯ ಅವರು ಈ ಸಂಪುಟಗಳ ಪ್ರಕಟಣೆಗಳಿಗಾಗಿ ವಿಶೇಷ ಅನುವಾದವನ್ನು ತುಂಬಾ ಪ್ರೀತಿ ಮತ್ತು ಸಂತೋಷಗಳಿಂದ ಒದಗಿಸಿಕೊಟ್ಟಿದ್ದಾರೆ. ಲೋಕಸೇವಾ ಆಯೋಗದ ಸದಸ್ಯರಾದ ಶ್ರೀ ಮುಕುಡಪ್ಪ ಅವರು ಈ ಯೋಜನೆಯಲ್ಲಿ ವಿಶೇಷ ಆಸಕ್ತಿತೋರಿ ಸಹಕರಿಸಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಸಹೃದಯ ಸದಸ್ಯರು ಈ ಯೋಜನೆ ನನಸಾಗಲು ಒತ್ತಾಸೆ ನೀಡಿದ್ದಾರೆ. ಈ ಸಂಪುಟಗಳ ಸಲಹಾ ಸಮಿತಿಯ ಮಾನ್ಯ ಸದಸ್ಯರುಗಳಾದ ಪ್ರೊ : ದೇ. ಜವರೇಗೌಡ, ಪ್ರೊ. ದೇವೇಂದ್ರಕುಮಾರ ಹಕಾರಿ ಮತ್ತು ಶ್ರೀಮತಿ ವಿಮಲ ಡಿಸ್ಕಳ್ಕರ್ ಅವರು ಸೂಕ್ತ ಸಲಹೆ ಮತ್ತು ಮಾರ್ಗದರ್ಶನಗಳನ್ನು ನೀಡಿ ಈ ಸಂಪುಟಗಳು ಉಪಯುಕ್ತವಾಗಿ ಪ್ರಕಟವಾಗುವಲ್ಲಿ ನೆರವಾಗಿದ್ದಾರೆ. ಪ್ರಸಿದ್ಧ ವಿದ್ವಾಂಸರೂ ಮತ್ತು ಸಂಶೋಧಕರೂ ಹಾಗು ಡಾ : ಶಂಬಾ ಅವರ ಅಭಿಮಾನಿಗಳೂ ಆದ ಪ್ರೊ : ಮಲ್ಲೇಪುರಂ ಜಿ. ವೆಂಕಟೇಶ ಅವರು ಈ ಆರು ಸಂಪುಟಗಳ ಬಹು ಜವಾಬ್ದಾರಿಯುತವಾದ ಸಂಪಾದಕತ್ವವನ್ನು ವಹಿಸಿಕೊಂಡು ವಿಶೇಷ ಪರಿಶ್ರಮ, ಶ್ರದ್ಧೆ ಮತ್ತು ಅರ್ಪಣಾ ಮನೋಭಾವಗಳಿಂದ ದುಡಿದಿದ್ದಾರೆ. ಖ್ಯಾತ ಯುವಕಲಾವಿದ ಶ್ರೀ ಹಾದಿಮನಿ ಅವರು ಈ ಸಂಪುಟಗಳಿಗೆ ಅರ್ಥಪೂರ್ಣ ಮುಖಪುಟಗಳನ್ನು ವಿನ್ಯಾಸಗೊಳಿಸಿ ಇವುಗಳ ಸೌಂದರ್ಯವನ್ನು ವರ್ಧಿಸಿದ್ದಾರೆ. ಕಲಾತ್ಮಕ ಮುದ್ರಣಕ್ಕೆ ಹೆಸರಾದ ಲಕ್ಷ್ಮಿ ಮುದ್ರಣಾಲಯದ ಶ್ರೀ ಅಶೋಕ ಕುಮಾರ್ ಮತ್ತು ಸಿಬ್ಬಂದಿ ವರ್ಗ ಅತ್ಯಂತ ಆಸಕ್ತಿ ಮತ್ತು ಸಂತೋಷದಿಂದ ಅತ್ಯಲ್ಪಕಾಲದಲ್ಲಿ ಈ ಸಂಪುಟಗಳನ್ನು ಮುದ್ರಿಸಿ ದಾಖಲೆ ನಿರ್ಮಿಸಿದ್ದಾರೆ. ಪ್ರಾಧಿಕಾರದ ಸಿಬ್ಬಂದಿ ವರ್ಗ ಇವುಗಳ ತ್ವರಿತ ಪ್ರಕಟಣೆಗಾಗಿ ಹಗಲಿರುಳು ಶ್ರಮಿಸಿದೆ. ಇವರೆಲ್ಲರಿಗೂ ವೈಯಕ್ತಿಕವಾಗಿ ಮತ್ತು ಪ್ರಾಧಿಕಾರದ ಪರವಾಗಿ ಗೌರವದ ಪ್ರೀತಿಯ ಕೃತಜ್ಞತೆಗಳು.

ಡಾ|| ಎಚ್. ಜೆ. ಲಕ್ಕಪ್ಪಗೌಡ
ಅಧ್ಯಕ್ಷರು

ದಿನಾಂಕ : ೮.೦೭.೧೯೯೯
ಬೆಂಗಳೂರು - ೫೬೦ ೦೧೮

ಸಂಪಾದಕನ ಅರಿಕೆ

ಶಂಬಾ ಎಂಬ ಎರಡಕ್ಷರಗಳಿಂದಲೇ ಸುಪ್ರಸಿದ್ಧರಾದ ಡಾ. ಶಂಕರ ಬಾಳದೀಕ್ಷಿತ ಜೋಶಿ (೧೮೯೬-೧೯೯೧) ಕನ್ನಡದ ಮಹಾವಿದ್ವಾಂಸರು. ಅವರು ಕನ್ನಡ ಸಂಶೋಧನ ಕ್ಷೇತ್ರದ ಅಶ್ವತ್ಥವೃಕ್ಷ. ಬಹುಶ್ರುತರೂ, ಚಿಂತಕರೂ ಆದ ಶಂಬಾ, ಎಪ್ಪತ್ತು ವರ್ಷಗಳಿಗೂ ಹೆಚ್ಚುಕಾಲ 'ಜೀವನದ ಅರ್ಥಗ್ರಹಣ ಪದ್ಧತಿ'ಯ ಜಾಡು ಹಿಡಿದು ನಡೆಸಿದ ಕೆಲಸಗಳು ಅನನ್ಯವಾದವು. ಅವರು ವಿದ್ವತ್ತು ಮತ್ತು ವೈಚಾರಿಕ ಚಿಂತನೆಗಳ ಅಪೂರ್ವ ಸಂಗಮವಾಗಿದ್ದರು. ಅವರು ಸೃಜಿಸಿದ ಸಾಂಸ್ಕೃತಿಕ ಸಂಶೋಧನೆ, ಭೂತ ಹಾಗೂ ವರ್ತಮಾನ ಕಾಲಗಳ ನಡುವಣ ನೆಲೆಗಳನ್ನು ತಿಳಿಯಲು ಅನುವು ಮಾಡಿಕೊಡುತ್ತವೆ. 'ಕೃತಿಗಳೇ ಆಕೃತಿ ನಿರ್ಮಾಣಕ್ಕೆ ಮುಖ್ಯ ನೆಲೆಗಳು' ಎಂಬುದು ಅವರ ನಿಷ್ಠೆ ಹಾಗೂ ಶ್ರದ್ಧೆ. ವ್ಯಕ್ತಿವಿಶಿಷ್ಟ ಸಂಗತಿಗಳು ಬದುಕಿನಲ್ಲಿ ಗೌಣವಾಗಿದ್ದು, ಜೀವನ ಸಮಷ್ಟಿ ಸಂಗತಿಗಳು ಮುಖ್ಯವಾಗಬೇಕೆಂಬ ಹಂಬಲ ಅವರದಾಗಿತ್ತು. ಅವರು ಈ ಜಾಡಿನಲ್ಲಿ ಕೊನೆಯ ವರೆಗೂ ನಡೆದರು.

ಡಾ. ಶಂ. ಬಾ. ಅವರು ತೀರಿಕೊಂಡು ಇಂದಿಗೆ ಎಂಟು ವರ್ಷಗಳು ಆದುವು. ೧೯೯೬ ಅವರ ಜನ್ಮ ಶತಮಾನೋತ್ಸವದ ವರ್ಷ. ಆ ಹೊತ್ತಿಗೆ ಅವರ ಎಲ್ಲ ಪುಸ್ತಕಗಳು ಪ್ರಕಟಗೊಳ್ಳಬೇಕೆಂಬ ಅಪೇಕ್ಷೆ ಇತ್ತು. ಆ ಬಗೆಗೆ ಪ್ರಯತ್ನ ನಡೆದರೂ ಆಗ ಕೈಗೂಡಲಿಲ್ಲ. ಒಮ್ಮೆ ಖ್ಯಾತಕಲಾವಿದ, ಗೆಳೆಯ ಸಿ. ಚಂದ್ರಶೇಖರ್ ಅವರ ಮನೆಯಲ್ಲಿ ಲೋಕಸೇವಾ ಆಯೋಗದ ಸದಸ್ಯರೂ ಶಂಬಾ ಜೋಶಿ ಅವರ ಪ್ರಿಯ ಅಭಿಮಾನಿಗಳೂ ಕನ್ನಡ ಸಂಸ್ಕೃತಿ ಅಭ್ಯಾಸಿಗಳೂ ಆದ ಶ್ರೀ ಮುಕಡಪ್ಪ ಅವರ ಸ್ನೇಹವಾಯಿತು. ಅವರು ಶಂಬಾ ಅವರ ಕೃತಿಗಳು ಹಲವು ಸಂಪುಟಗಳಾಗಿ ಸಮಗ್ರರೂಪದಲ್ಲಿ ಬರಬೇಕೆಂದು ಹೇಳಿ ಒತ್ತಾಯಿಸಿದರು. ಅನಂತರ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿ ಡಾ. ಎಚ್. ಜೆ. ಲಕ್ಕಪ್ಪಗೌಡ ಅವರು ಬಂದ ಮೇಲೆ ನನ್ನ ಅಭಿಲಾಷೆಯನ್ನೂ ಶ್ರೀ ಮುಕಡಪ್ಪ ಅವರ ಇಚ್ಛೆಯನ್ನೂ ಅವರ ಬಳಿ ಹೇಳಿಕೊಂಡೆ. ಅನಂತರ ಈ ಯೋಜನೆಗೆ ಚಾಲನೆ ಸಿಕ್ಕಿತು. ಕರ್ನಾಟಕ ಸರ್ಕಾರದ ಉದಾರವಾದ ನೆರವು ಈ ಯೋಜನೆಗೆ ದೊರಕಿ, ಈ ಹಿನ್ನೆಲೆಯಲ್ಲಿ ಶಂಬಾ ಕೃತಿಸಂಪುಟಗಳು ಹೊರಬರುತ್ತಿವೆ.

ನಮ್ಮ ಕಾಲದ ಅಪರೂಪ ವಿದ್ವಾಂಸರೂ ಸಾಂಸ್ಕೃತಿಕ ಆಚಾರ್ಯರೂ ಆದವರೊಬ್ಬರ ಸಮಗ್ರ ಸಾಹಿತ್ಯವನ್ನು ಸಂಪಾದಿಸುವ ದೊಡ್ಡಹೊಣೆಯನ್ನು ಗೌರವವನ್ನು ಪಡೆದಿರುವುದು ನನಗೆ ತುಂಬಾ ಸಂತೋಷ ಉಂಟು ಮಾಡಿದೆ. ಇದು ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಎಚ್. ಜೆ. ಲಕ್ಕಪ್ಪಗೌಡ ಹಾಗೂ ಲೋಕಸೇವಾ ಆಯೋಗದ ಸದಸ್ಯರಾದ ಶ್ರೀ ಮುಕಡಪ್ಪ ಅವರ ವಿಶ್ವಾಸದಿಂದ ಸಾಧ್ಯವಾಗಿದೆ. ಅದಕ್ಕಾಗಿ ಅವರಿಬ್ಬರಿಗೂ ನನ್ನ ಕೃತಜ್ಞತಾಪೂರ್ವಕವಾದ ವಂದನೆಗಳು ಮೊದಲಿಗೆ ಸಲ್ಲುತ್ತವೆ.

ಶಂಬಾ ಜೋಶಿ ಅವರು ಪುಸ್ತಕರೂಪದಲ್ಲಿ ಪ್ರಕಟಿಸಿರುವ ಸಾಹಿತ್ಯ ಸುಮಾರು ಡೆಮ್ಮ್ಯ ಆಕಾರದಲ್ಲಿ ನಾಲ್ಕು ಸಾವಿರ ಪುಟಗಳಾಗುತ್ತವೆ. ೧೯೨೧ ರಿಂದ ಹಿಡಿದು ೧೯೮೬ರ ವರೆಗಿನ ಕಾಲಾವಧಿಯಲ್ಲಿ ಈ ಎಲ್ಲ ಕೃತಿಗಳು ರಚನೆಗಳಾಗಿವೆ. ಇವಲ್ಲದೆ ನೂರಾರು ಬಿಡಿಲೇಖನಗಳಿವೆ. ಅವು ವಿವಿಧ ವಿಷಯಗಳಿಗೆ ಸೇರಿವೆ. ಅವುಗಳಲ್ಲಿ ಅಪೂರ್ವವಾದ ಕೆಲವು ಲೇಖನಗಳನ್ನು ಆಯ್ದು ಪುಸ್ತಕರೂಪದಲ್ಲಿ 'ಕನ್ನಡ ಪುಸ್ತಕ ಪ್ರಾಧಿಕಾರ'ವು ೧೯೯೬ರಲ್ಲಿ ಪ್ರಕಟಿಸಿದೆ. ಅವರು ಬರೆದಿರುವ ಒಟ್ಟು ಪುಸ್ತಕಗಳು ಮೂವತ್ತೆರಡು. ಇವುಗಳಲ್ಲಿ ಮರಾಠಿ ಅನುವಾದ 'ಭಗವದ್ಗೀತೆ'ಯ ಮೊದಲಭಾಗ ಮತ್ತು ರಾನಡೆ ಅವರ 'ಉಪನಿಷತ್ ರಹಸ್ಯ'ದ 'ಮನಃಶಾಸ್ತ್ರ'ದ ಭಾಗ ಇವುಗಳನ್ನು ಸಂಪುಟಗಳಲ್ಲಿ ಸೇರಿಸಿಲ್ಲ. ಉಳಿದ ಎಲ್ಲ ಪುಸ್ತಕಗಳು ಸೇರ್ಪಡೆಗೊಂಡಿವೆ. ಅವುಗಳನ್ನು ವಿಷಯ ಹಾಗೂ ಚಾರಿತ್ರಿಕಾನುಗುಣವಾಗಿ ಜೋಡಿಸಿ ಈ ಸಂಪುಟಗಳನ್ನೂ ಸಿದ್ಧಪಡಿಸಿ ಹೀಗೆ ವಿನ್ಯಾಸಗೊಳಿಸಲಾಗಿದೆ.

ಸಂಪುಟ - ೧ ಕಂನಾಡು-ಕರ್ನಾಟ

ಈ ಸಂಪುಟದಲ್ಲಿ ಕಣ್ಮರೆಯಾದ ಕನ್ನಡ ೧೯೩೩, ಮಹಾರಾಷ್ಟ್ರದ ಮೂಲ ೧೯೩೪, ಮರ್ಹಾಟಿ ಸಂಸ್ಕೃತಿ : ಕೆಲವು ಸಮಸ್ಯೆಗಳು - ೧೯೮೯, (ಮರ್ಹಾಟಿ ಸಂಸ್ಕೃತಿ : ಕಾಂಹಿ ಸಮಸ್ಯಾ - ೧೯೫೭ರ ಮರಾಠಿ ಕೃತಿಯ ಕನ್ನಡಾನುವಾದ) ಕರ್ನಾಟದ ವೀರಕ್ಷತ್ರಿಯರು - ೧೯೩೭ ಇವು ಮುಖ್ಯವಾಗಿ ಕನ್ನಡದ ನೆಲೆಯನ್ನೂ ಮೂಲಿಗರ ಸಾಂಸ್ಕೃತಿಕ ನೆಲೆಗಳನ್ನು ಕುರಿತಿವೆ.

ಸಂಪುಟ - ೨ ಕಂನಡ-ಕಂನುಡಿ

ಈ ಸಂಪುಟವು 'ಕನ್ನಡದ ನೆಲೆ ೧೯೩೯, ಎಡೆಗಳು ಹೇಳುವ ಕಂನಾಡ ಕತೆ ೧೯೪೭, ಕಂನುಡಿಯ ಹುಟ್ಟು ೧೯೩೭, ಕನ್ನಡ ನುಡಿಯ ಜೀವಾಳ ೧೯೪೦ ಇವುಗಳನ್ನು ಒಳಗೊಂಡಿದೆ. ಮೊದಲೆರಡು ಪುಸ್ತಕಗಳು ಕನ್ನಡ ಸಂಸ್ಕೃತಿ ವಿಚಾರಧಾರೆಯ ಮೂಲಗಾಮಿ ಚರ್ಚೆಗಳನ್ನು ಮತ್ತು ಭಾಷೆಯ ಹಲವು ಬಗೆಯ ನಂಟುಗಳ ವಿಶಿಷ್ಟ ನೆಲೆಗಳನ್ನು ಚರ್ಚಿಸುತ್ತವೆ.

ಸಂಪುಟ - ೩ ಕರ್ನಾಟ ಸಂಸ್ಕೃತಿ

ಈ ಸಂಪುಟವು ಹಾಲುಮತದರ್ಶನ ೧೯೬೦, ಕರ್ನಾಟ : ಸಂಸ್ಕೃತಿಯ ಪೂರ್ವಪೀಠಿಕೆ ಭಾಗ - ೨, ೧೯೬೭ ಇವೆರಡನ್ನು ಒಳಗೊಂಡಿದೆ ಈ ಹಿಂದಿನ ಕಂನಾಡ ಮೂಲಿಗರ ಸಂಸ್ಕೃತಿ-ಭಾಷೆ, ಪಾರಸ್ಪರಿಕ ಸಂಬಂಧ ಅವುಗಳ ಇಳಿಗಾಲಕ್ಕೆ ಈಡಾದ ಕಾರಣಮೀಮಾಂಸೆಯನ್ನು ಕುರಿತು ಈ ಸಂಪುಟಗಳು ಚರ್ಚಿಸುತ್ತವೆ.

ಸಂಪುಟ - ೪ ಭಾರತೀಯ ಸಂಸ್ಕೃತಿ

ಋಗ್ವೇದಸಾರ : ನಾಗಪ್ರತಿಮಾ ವಿಚಾರ - ೧೯೭೨, ಸತ್ತ್ಯ-ಸತ್ಯ ೧೯೭೫, ಭಾಷೆ ಮತ್ತು ಸಂಸ್ಕೃತಿ ೧೯೭೫ ಇವುಗಳನ್ನು ಒಳಗೊಂಡಿದೆ. ಕಂನಾಡ ನೆಲೆಯಿಂದ ಅಖಿಲ ಭಾರತೀಯ ಸಂಸ್ಕೃತಿಯ ಜೀವನ ಕ್ರಮವನ್ನು, ಜೀವನದ ಅರ್ಥಗ್ರಹಣದ ನೆಲೆಗಳನ್ನು ಇವು ವ್ಯಾಖ್ಯಾನಿಸಿ ತಿಳಿಸುತ್ತವೆ.

ಸಂಪುಟ - ೫ ಮಾನವ ಸಂಸ್ಕೃತಿ

ಈ ಸಂಪುಟವು ಪ್ರವಾಹ ಪತಿತರ ಕರ್ಮ ಹಿಂದೂ ಎಂಬ ಧರ್ಮ ೧೯೭೬, ಶ್ರೀಮತ್ ಭಗವದ್ಗೀತೆಯಲ್ಲಿ ಹುದುಗಿರುವ ರಾಜಯೋಗದ ಸ್ವರೂಪ ೧೯೭೭, ಮಾನವಧರ್ಮದ ಆಕೃತಿ ೧೯೭೯, ಬುಧನ ಜಾತಕ ೧೯೮೦, ಬಿತ್ತಿದ್ದನ್ನು ಬೆಳಕೊ ೧೯೮೪, ಜೀವನದ ಅರ್ಥಗ್ರಹಣ ಪದ್ಧತಿ ೧೯೮೬ ಇವುಗಳನ್ನು ಒಳಗೊಂಡಿದೆ. ಇವುಗಳಲ್ಲಿ ಕಂನಾಡು, ಭಾರತೀಯ ನೆಲೆಗಳಿಂದ ಜಾಗತಿಕ ಸಂಸ್ಕೃತಿ ನೆಲೆಗಳ ಪುರಾಣ ಹಾಗೂ ಹಲವು ಜ್ಞಾನಶಾಖೆಗಳ ಜಾಡು ಹಿಡಿದು ಮನುಷ್ಯನ ಅಧಃಪತನಕ್ಕೆ ಕಾರಣವಾದ ನೆಲೆಗಳನ್ನು ತಿಳಿಯುವ ಕಡೆಗೆ ಸಾಗುತ್ತವೆ.

ಸಂಪುಟ - ೬ ಸಂಸ್ಕೃತಿ-ಸಾಹಿತ್ಯ

ಈ ಸಂಪುಟವು, ಮಹರ್ಷಿ ಅರವಿಂದ ಘೋಷ ಇವರ ಸಂಕ್ಷಿಪ್ತ ಚರಿತ್ರವು ೧೯೨೧, ಟಿಳಕ ಕಥಾಮೃತಸಾರ ೧೯೩೨, ರೂಢಿ ಹಾಗೂ ಭಾವಿಕ ಕಲ್ಪನೆಗಳು ೧೯೪೦, ಎದ್ದೇಳು ಕನ್ನಡಿಗಾ ಅಥವಾ ಸಂತೋಷವೆ ಏಳ್ಗೆಯ ಮೂಲ - ೧೯೪೩, ಯಕ್ಷ ಪ್ರಶ್ನೆ ಅಥವಾ ಬರಲಿರುವ ಸಮಾಜ ೧೯೪೮, ಸಮಾಜದರ್ಶನ ೧೯೪೯, ಮಕ್ಕಳ ಒಡಪುಗಳು ೧೯೪೦, ಸೌಂದರ್ಯವಿಚಾರ ೧೯೪೯, ದಾರಿಯ ಬುತ್ತಿ ೧೯೫೦, ಕರ್ಣನ ಮೂರು ಚಿತ್ರಗಳು ೧೯೪೭, ಇವುಗಳನ್ನು ಒಳಗೊಂಡಿದೆ. ಇವುಗಳಲ್ಲಿ ಎರಡು ಜೀವನ ಚರಿತ್ರೆಗಳು, ನಾಲ್ಕು ಸಮಾಜ ಚಿಂತನೆಗಳೂ, ನಾಲ್ಕು ಸಾಹಿತ್ಯ ಸಂಸ್ಕೃತಿಯನ್ನು ಒಳಗೊಂಡ ಪುಸ್ತಕಗಳಿವೆ.

ಶಂಬಾ ಜೋಶಿಯವರ ಎಲ್ಲ ಪುಸ್ತಕಗಳನ್ನು ಈ ಆರುಸಂಪುಟಗಳಲ್ಲಿ ಅಡಕಗೊಳಿಸಲಾಗಿದೆ. ಆರನೆಯ ಸಂಪುಟಕ್ಕೆ ಸೇರಬೇಕಾದ ೧೯೭೬ರಲ್ಲಿ ಪ್ರಕಟವಾದ 'ಕನ್ನಡ ಸಾಹಿತ್ಯ ಅಭಿವೃದ್ಧಿ' ಪುಸ್ತಿಕೆ ಕೊನೆಯ ವೇಳೆಯ ವರೆಗೂ ಲಭ್ಯವಾಗಲಿಲ್ಲ. ಅದನ್ನು ಇಲ್ಲಿ ಸೇರಿಸಲಾಗಿಲ್ಲ.

ಶಂಬಾ ಅವರು ಸಾಂಸ್ಕೃತಿಕ ಸಂಶೋಧನೆಯ ಹಾದಿಯಲ್ಲಿ ನಡೆದದ್ದು ಸುದೀರ್ಘ ನೆಲೆಯಲ್ಲೇ. ಅವರು ಅತ್ತ ಮಹಾರಾಷ್ಟ್ರ, ಇತ್ತ ಕರ್ನಾಟಕ ಈ ಎರಡೂ ಸಾಂಸ್ಕೃತಿಕ ಸಾಗರದಲ್ಲಿ ಮಿಂದೆದ್ದವರು. ಅವರು ಉಸಿರಾಡಿದ್ದು ಕಂನಾಡಿನ ಪುಣ್ಯ. ಅವರ ಕೃತಿಗಳನ್ನು ಬೇರೆ ಬೇರೆ ಕ್ಷೇತ್ರದ ಹಾಗೂ ಬೇರೆ ಬೇರೆ ಕಾಲಘಟ್ಟದ ಓದುಗರಿಗೆ ಪುನರ್ ಓದಿಕೆಗೆ ಸಜ್ಜುಗೊಳಿಸಿಕೊಡುವ ಆವಶ್ಯಕತೆ ಇತ್ತು. ಆ ಬಗೆಯ ಸಜ್ಜುಗೊಳಿಸುವ ಸಂಪಾದಕತ್ವದ ಕೆಲಸವನ್ನು ಈ ಆರು ಸಂಪುಟಗಳಲ್ಲಿ ಕೈಗೊಳ್ಳಲಾಗಿದೆ. ಈ ಸಂಪುಟಗಳನ್ನು ಸಿದ್ಧಪಡಿಸುವಾಗ ಕೆಲವೊಂದು ನಿಯಮಗಳನ್ನು ಹಾಕಿಕೊಳ್ಳಲಾಯಿತು. ಆ ನಿಯಮಗಳು ಹೀಗಿವೆ:

i) ಶಂಬಾ ಅವರ ಕಾಲದಲ್ಲಿ ಪ್ರಕಟವಾದ ಮೊದಲ ಮುದ್ರಣ ಹಾಗೂ ಆನಂತರದ ಪುನರ್ಮುದ್ರಣಗಳನ್ನು ಗಮನಿಸುವುದು

ii) ಶಂಬಾ ಅವರ ಕೃತಿಗಳಲ್ಲಿ ಕಾಣಬರುವ. ಅಚ್ಚಿನ ದೋಷಗಳು, ಉದ್ಧೃತ ಭಾಗಗಳ ಪರಿಷ್ಕರಣ, ಹಾಗೂ ಟಿಪ್ಪಣಿಗಳ ಆಮೂಲಾಗ್ರ ಪರಿಷ್ಕರಣ ಹಾಗೂ ಸೂಕ್ತವಾದ ಎಡೆಗಳಲ್ಲಿ ಅಧ್ಯಾಯಗಳ ಮರುವಿಂಗಡಣ.

iii) ಪ್ರತಿಸಂಪುಟಗಳ ಅನುಬಂಧಗಳಲ್ಲಿ ಶಂಬಾ ಕೃತಿಗಳ ವಿವರಣಾತ್ಮಕ ಸೂಚಿ, ಆಕರ ಗ್ರಂಥಗಳ ಸೂಚಿ, ಶಬ್ದಸೂಚಿ ನೀಡುವುದು.

iv) ಪ್ರತಿ ಸಂಪುಟಗಳಿಗೂ ಪ್ರತ್ಯೇಕವಾದ ಪ್ರಸ್ತಾವನೆ ಬರೆಯುವುದು.

ಈ ಪ್ರಸ್ತಾವನೆಯು ಸಮಕಾಲೀನ ಸಂಸ್ಕೃತಿ, ಭಾಷೆಯ ವಾಗ್ವಾದಗಳನ್ನು ಶಂಬಾ ಜೋಶಿಯವರ ಸಾಂಸ್ಕೃತಿಕ ನಡೆಯ ನೆಲೆಗಳನ್ನು ಅವರ ಕೊಡುಗೆಗಳ ವೈಶಿಷ್ಟ್ಯಗಳು ಅದರಲ್ಲಿ ಬರುವಂತೆ ನೋಡಿಕೊಳ್ಳುವುದು.

v) ಪ್ರತಿಸಂಪುಟಗಳಿಗೂ ಆಯಾ ಸಂಪುಟಗಳಲ್ಲಿ ಇರುವ ಅಪರೂಪದ ಪುಸ್ತಕಗಳ ಮುಖಚಿತ್ರ, ಶಂಬಾ ಅವರ ಹಳೆಯ ಭಾವಚಿತ್ರ ಮೊದಲಾದುವುಗಳನ್ನು ನೀಡುವುದು.

ಈ ಅಂಶಗಳಿಗೆ ಸಂಪಾದಕ ಸಲಹಾ ಸಮಿತಿಯ ಸದಸ್ಯರೆಲ್ಲರೂ ಒಪ್ಪಿಗೆ ಸೂಚಿಸಿದರು. ಶಂಬಾ ಜೋಶಿಯವರ ಮಗಳು ಶ್ರೀಮತಿ ವಿಮಲ ಡಿಸ್ಕಳ್ಕರ್ ಅವರು ನೀಡಿದ ಸಲಹೆ ಮತ್ತು ಸಹಕಾರಗಳು ಈ ಸಂಪುಟಗಳು ಉತ್ತಮಗೊಳ್ಳಲು ಪರೋಕ್ಷವಾಗಿ ಕಾರಣವಾಗಿವೆ.

ಇನ್ನು, ಕೃತಜ್ಞತೆಯಿಂದ ನೆನೆಯಬೇಕಾದದ್ದು ಈ ಸಂಪುಟಗಳಿಗೆ ಚಾಲನೆ ಕೊಟ್ಟು, ವಿಶೇಷಾನುದಾನ ನೀಡಿದ ಕರ್ನಾಟಕ ಸರಕಾರಕ್ಕೆ, ಲೋಕಸೇವಾ ಆಯೋಗದ ಸದಸ್ಯರೂ ನನ್ನ ಹಿರಿಯ ಮಿತ್ರರೂ ಆದ ಶ್ರೀ ಮುಕಡಪ್ಪ ಅವರಿಗೆ, ಈ ಹೊಣೆಗಾರಿಕೆಯನ್ನು ನನ್ನ ಹೆಗಲಿಗೆ ಹೊರಿಸಿ ಅಡಿಗಡಿಗೂ ಪ್ರೋತ್ಸಾಹ ನೀಡಿ ಈ ಸಂಪುಟಗಳು ಉತ್ತಮವಾಗಿ ಬರಲು ಕಾರಣರಾದ ಹಿರಿಯ ವಿದ್ವಾಂಸರೂ ಸಮರ್ಥ ಆಡಳಿತಗಾರರೂ ಆದ ಡಾ. ಎಚ್. ಜೆ. ಲಕ್ಕಪ್ಪಗೌಡ ಅವರಿಗೆ, ಸಂಪಾದಕ ಸಲಹಾ ಸಮಿತಿಯ ಸದಸ್ಯರಾದ ಡಾ. ದೇ ಜವರೇಗೌಡ, ಶ್ರೀಮತಿ ವಿಮಲ ಡಿಸ್ಕಳ್ಕರ್ ಹಾಗೂ ಡಾ. ದೇವೇಂದ್ರಕುಮಾರ ಹಕಾರಿ ಅವರಿಗೆ, ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ವಿ. ಎವ್. ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕರಾದ ಶ್ರೀ ಜೆ. ಎನ್. ಶಾಮರಾವ್ ಅವರಿಗೆ, ಸಿಬ್ಬಂದಿವರ್ಗದವರಿಗೆ, ಹಲವು ಬಗೆಗಳಲ್ಲಿ ನೆರವಾದ ವಿದ್ವಾನ್ ಎಂ. ಆರ್. ರಕ್ಷಿತ್, ಶಂಬಾ ವಿಚಾರ ವೇದಿಕೆಯ ಎಸ್. ಶಿವಲಿಂಗಯ್ಯ ಇವರಿಗೆ, ಶ್ರೀ ಕೃಷ್ಣಾನಂದ ಕಾಮತ್, ಶ್ರೀ. ಕೆ. ಜಿ. ಸೋಮಶೇಖರ್, ಎಂ. ಮಲ್ಲಿಕಾರ್ಜುನಯ್ಯ ಇನ್ನು ಮುಂತಾದ ಗೆಳೆಯರು ತೆಗೆದ ಛಾಯಾಚಿತ್ರಗಳನ್ನು ವಿಶ್ವಾಸ ಹಾಗೂ ಕೃತಜ್ಞತಾಪೂರ್ವಕವಾಗಿ ಉಪಯೋಗಿಸಿಕೊಳ್ಳಲಾಗಿದೆ. ಈ ಮಹನೀಯರಿಗೆ, ಆರು ಸಂಪುಟಗಳ ಮುಖಪುಟ ವಿನ್ಯಾಸ ಮಾಡಿಕೊಟ್ಟ ತರುಣ ಕಲಾವಿದ ಶ್ರೀ ಹಾದಿಮನಿ ಅವರಿಗೆ, ಅಂದವಾಗಿ ಮುದ್ರಿಸಿಕೊಟ್ಟ ಲಕ್ಷ್ಮೀ ಮುದ್ರಣಾಲಯದ ಗೆಳೆಯರಾದ ಶ್ರೀ ಅಶೋಕ್ ಕುಮಾರ್ ಮತ್ತು ಅವರ ಎಲ್ಲ ಸಿಬ್ಬಂದಿ ವರ್ಗದವರಿಗೆ, ಪರೋಕ್ಷವಾಗಿ ಅಪರೋಕ್ಷವಾಗಿ ಹಲವು ವಿಧಗಳಲ್ಲಿ ನೆರವಾದ ಹಾಗೂ ಈ ಮೇಲೆ ಹೆಸರಿಸದ ಎಲ್ಲರಿಗೂ ತುಂಬು ವಂದನೆಗಳು.

ಇವು ಡಾ. ಶಂ. ಬಾ. ಜೋಶಿ ಅವರ ಕೃತಿಸಂಪುಟಗಳು. ಇದರ ಗುಣಾತ್ಮಕ ಶ್ರೇಯಸ್ಸೆಲ್ಲವೂ ಅವರಿಗೆ ಸಲ್ಲಬೇಕು. ಉಪನಿಷತ್ತು ಶ್ರೇಯಸ್ಸು- ಪ್ರೇಯಸ್ಸು ಎಂದು ಎರಡು ತತ್ತ್ವಗಳನ್ನು ಹೇಳುತ್ತದೆ. ಶ್ರೇಯಸ್ಸು ಮುಖ್ಯವೆಂದು, ಅದೇ ಜೀವನ ಶ್ರದ್ಧೆಯೆಂದು, ಉಪನಿಷತ್ತು ಹೇಳುತ್ತದೆ. ಶಂಬಾ ಕನ್ನಾಡಿನ ಶ್ರೇಯಸ್ಸಿಗಾಗಿ ದುಡಿದವರು. ಇದರ ಸಮಗ್ರದರ್ಶನವನ್ನು ಅವರ ಕೃತಿಗಳು ರುಜುವಾತುಗೊಳಿಸುತ್ತವೆ. ಅವರ ಸಮಗ್ರ ಸಂಪುಟಗಳನ್ನು ನಿಮ್ಮ ಉಡಿಯಲ್ಲಿ ಹಾಕುತ್ತಿದ್ದೇವೆ. ಸಂಪುಟಗಳು ಹಲವು ರೀತಿಯ ಓದಿಕೆಗೆ ಹಾಗೂ ನಿಮ್ಮ ಪ್ರೀತಿಗೆ ಒಳಗಾಗಲಿ. ಈ ಸಂಪುಟಗಳಲ್ಲಿ ಏನಾದರೂ ಕೊರತೆಗಳಿದ್ದರೆ ಅದು ಸಂಪಾದಕನ ಸೀಮಿತ ಫಲ. ಇದಕ್ಕಾಗಿ ಕನ್ನಾಡ ಓದುಗರು ಮನ್ನಿಸಬೇಕು. ಇಷ್ಟು ಹೇಳಿದರೆ ತೀರೀತೆ?

ಕನ್ನಾಡಿನ ಜನರು ಈ ಸಂಪುಟಗಳನ್ನು ಸಹೃದಯತೆಯಿಂದ ಸ್ವೀಕರಿಸಬೇಕೆಂದೂ ಕುಗ್ಗಿರುವ ಕನ್ನಾಡನ್ನು ಹಿಗ್ಗುವ ತೆರದಲ್ಲಿ ಹೊರಳಬೇಕೆಂದೂ ಬೇಡುತ್ತೇನೆ. ನಮ್ಮ ತರುಣ ಜನಾಂಗವು ಶಂಬಾ ಅವರನ್ನು ಹೊಸ ಓದಿನ ನೆಲೆಯಲ್ಲಿ ಸ್ವೀಕರಿಸಬೇಕೆಂದೂ ಕೋರುತ್ತೇನೆ.

ಜುಲೈ ೨೫, ೧೯೯೯
ಕನ್ನಡ ವಿಶ್ವವಿದ್ಯಾಲಯ-ಹಂಪಿ

ಮಲ್ಲೇಪುರಂ ಜಿ. ವೆಂಕಟೇಶ
ಸಂಪಾದಕ

ಪ್ರಸ್ತಾವನೆ

ಪೂರ್ವಪೀಠಿಕೆ

ಕನ್ನಡ ಸಂಸ್ಕೃತಿಯ ಅಧ್ಯಯನವೆಂದರೆ : ಮಾನವ ಜೀವಿತೇತಿಹಾಸಗಳ ಅಧ್ಯಯನವೆಂದೇ ಗ್ರಹಿಸುವುದು ಸರಿ! ಸಂಸ್ಕೃತಿಯ ಸದ್ಯತನಗಳ ಹುಡುಕಾಟದಲ್ಲಿ ಮನುಷ್ಯನ ಜೀವಂತಿಕೆಯ ಪ್ರಶ್ನೆ ಇದೆ. ಹಾಗಾದರೆ, ಸಂಸ್ಕೃತಿಯ ಜೀವಂತಿಕೆಯನ್ನು ಬಗೆದು ನೋಡುವ ಕ್ರಮ ಯಾವುದು? ಈ ಪ್ರಶ್ನೆಗೆ ಕನ್ನಡ ಸಂಸ್ಕೃತಿಯ ನೆಲೆಯಲ್ಲಿ ನಡೆದ ಅಧ್ಯಯನಗಳು ಮೂಲತಃ ಎಂಪಿರಿಯಲಿಸ್ಟ್ ಮಾದರಿಯ ಅಧ್ಯಯನಗಳೇ ಆಗಿವೆ. ವಿದ್ವಾಂಸರು ಇದನ್ನು ಅಲ್ಲಲ್ಲಿ ಗುರುತಿಸಿದ್ದಾರೆ. ಇಂತಹ ಎಂಪಿರಿಯಲಿಸ್ಟ್ ಮಾದರಿಯ ಅಧ್ಯಯನಗಳು, ಸಂಸ್ಕೃತಿಯ ಅಧ್ಯಯನದ ನೆಲೆಗಳನ್ನು ಏಕಘನಾಕೃತಿಯಾಗಿ ನೋಡುತ್ತವೆಯೇ ಹೊರತು; ಅನ್ಯಮಾದರಿಯಾಗಲ್ಲ. ಇವು ವರ್ತಮಾನದ ಜನರ, ಭಾಷೆ, ಆಚಾರಗಳನ್ನು ಗಮನಿಸುವುದಿಲ್ಲ. ವರ್ತಮಾನದ ಇತಿಹಾಸಕ್ಕೆ ಏಕಸೂತ್ರವಾದ ಎಳೆಗಳನ್ನು ಅವು ಪೂರ್ಣವಾಗಿ ನಿರಾಕರಿಸುತ್ತವೆ. ಇಂತಹ ನಿರಾಕರಣೆಗಳು, ಸಂಸ್ಕೃತಿಯ ನೈಜನೆಲೆಗಳ ಅಧ್ಯಯನಕ್ಕೆ ನಿಜಕ್ಕೂ ಆತಂಕಕಾರಿ ಆದವುಗಳೇ. ಹೀಗಾಗಿ, ಸಾಂಸ್ಕೃತಿಕ ಇತಿಹಾಸದ ಭೂಮಿಕೆಯ ಸ್ವಲ್ಪ ಪರಿಚಯದ ಆವಶ್ಯಕತೆ ಇದೆ. ಅದನ್ನು ಇಲ್ಲಿ ಕೆದಕಿ ನೋಡುವ ಪ್ರಯತ್ನವನ್ನು ಶಂಬಾ ಜೋಶಿಯವರ 'ಕಂನಡ' 'ಕಂನುಡಿ' ಪರಿಪ್ರೇಕ್ಷ್ಯದ ಮೂಲಕ ಮಾಡಲಾಗಿದೆ.

ಸಾಂಸ್ಕೃತಿಕ ಇತಿಹಾಸದ ಸಂಕಲ್ಪನೆ

ಶಂಬಾ ಜೋಶಿಯವರ ಪ್ರಾರಂಭಿಕ ಬರೆಹಗಳು ಎಂಪಿರಿಯಲಿಸ್ಟ್ ಅಧ್ಯಯನ ಮಾದರಿಗೆ ವಿರುದ್ಧವಾಗಿ ಅಥವಾ ಪ್ರತಿಕ್ರಿಯಾತ್ಮಕವಾಗಿ ಹುಟ್ಟಿಕೊಂಡ ಅಧ್ಯಯನದ ಅಥವಾ ಚಿಂತನೆಯ ನೆಲೆಗಳೇ ಆಗಿವೆ. ಇದು ನನ್ನ ದೃಢವಾದ ನಂಬುಗೆ ಆಗಿದೆ. ಇಂಥ ನೆಲೆಗಳು ಜೀವಂತ ಜನಾಂಗದ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಿಂತನೆಗೆ ಅದರ ಹಿಂದಿನ 'ಇತಿಹಾಸ'ವನ್ನು ತಿಳಿಯುವುದು ಅಗತ್ಯವೆಂಬುದನ್ನು ಸೂಚಿಸುತ್ತವೆ. ಇದು ಸುಸಂಬದ್ಧ ತೀರ್ಮಾನವೇ ಹೌದು. ಹಿಂದಿನ ಜೀವಂತ ಬದುಕನ್ನು ಅರ್ಥಮಾಡಿಕೊಳ್ಳುವುದರಲ್ಲಿ ಇತಿಹಾಸವು ತುಂಬ ಪ್ರಯೋಜನಕಾರಿಯಾದದ್ದು ಹೌದು. ಈ ಬಗೆಯ ಅಧ್ಯಯನದ ಭೂಮಿಕೆಯು ಇತಿಹಾಸ 'ಒಂದು ಚಲನೆ' ಎಂದೇ ಗ್ರಹಿಸುತ್ತದೆ.[೧] ಏಕೆಂದರೆ : ಮನುಷ್ಯನ ವಾಸ್ತವ ಭೂಮಿಕೆಯು ಉದ್ದಕ್ಕೂ ಚಲನೆಯಿಂದಲೇ ಕೂಡಿದೆ.

---

೧. Louis Dumont; Essays in Social Anthropology, Faber & Faber 1962, P. 56

ಈ ಚಲನೆಯು ಎಲ್ಲಿಯೂ ನಿಲುಗಡೆ ಹೊಂದಿಲ್ಲ. ಚಲನೆಯು ಜೀವಂತಿಕೆಯ ಪ್ರಶ್ನೆ. ಈ ಮಾದರಿಯ ಜ್ಞಾನ, ತತ್ತ್ವಜ್ಞಾನದ ನೆಲೆಯಲ್ಲೂ ಉಂಟು. ಇವೆಲ್ಲ ಮರಳಿ ಸಂಸ್ಕೃತಿ ಮತ್ತು ಇತಿಹಾಸದ ಪರ್ಯಾಯ ಭೂಮಿಕೆಗಳ ಒಳನೋಟಗಳಾಗುವುದೇ ಸದ್ಯದ ತುರ್ತುಗಳಾಗಿವೆ. ಶಂಬಾ ಅವರು 'ಕಣ್ಮರೆಯಾದ ಕನ್ನಡ ಮತ್ತು 'ಮಹಾರಾಷ್ಟ್ರದ ಮೂಲ'ಗಳನ್ನು ಹುಡುಕಲು ಹೊರಟರಷ್ಟೆ. ಶಂಬಾ ಚಿಂತನೆಯ ಪ್ರಕಾರ 'ಇತಿಹಾಸ'ವೆಂದರೆ 'ಸ್ವಂತದ್ದರ ಜ್ಞಾನ' ಕೂಡ.[೧] ಇದು ಅವರ ಮೊದಮೊದಲಿನ ಕೃತಿಗಳಲ್ಲಿ ಬಲವಾಗಿಯೂ ಖಚಿತವಾಗಿಯೂ ನಿರೂಪಿತವಾಗಿವೆ. ಈ ನಾಡಿನ ಅದರಲ್ಲೂ ವಿಶೇಷತಃ ಕರ್ನಾಟಕ ಮತ್ತು ಮಹಾರಾಷ್ಟ್ರಗಳ ಸಾಂಸ್ಕೃತಿಕ ಮತ್ತು ಸಾಮಾಜಿಕ ಸಮಸ್ಯೆಗಳ ಕೆಲವು ನಿಟ್ಟಿನ ಅಧ್ಯಯನ ಇದನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ನೆರವಾಗುತ್ತವೆ. ಶಂಬಾ ಅವರು ತಮ್ಮ ಪ್ರಾರಂಭದ ಮೂರ್ನಾಲ್ಕು ದಶಕಗಳ ಕಾಲ ನಡೆಸಿದ ಸಾಂಸ್ಕೃತಿಕ ಇತಿಹಾಸದ ಅಧ್ಯಯನದ ಪರಿಕ್ರಮಗಳು ಮನುಷ್ಯ ಸಂಸ್ಕೃತಿಯ ಹೆಜ್ಜೆ ಗುರುತುಗಳನ್ನು ಹುಡುಕುವ ಹಂಬಲವನ್ನೇ ಪ್ರಧಾನವಾಗಿ ಹೊತ್ತಿದ್ದುವು. ಇದು, ಅವರ ಮುಂದಿನ ಅಧ್ಯಯನಗಳಿಗೂ ಕೂಡ ಬೇರೆ ತೆರನಾದ ಪರಿಪ್ರೇಕ್ಷ್ಯವನ್ನು ನಿರ್ಮಿಸಿದುವು. ಅವರ 'ಹಾಲುಮತ ದರ್ಶನ'ದಲ್ಲಿ ಇತಿಹಾಸದ ಭೂಮಿಕೆಯು ಇನ್ನಷ್ಟು ಆಳವಾದುದನ್ನು, ಅದಕ್ಕೊಂದು ಮುಖ್ಯಭಿತ್ತಿಯೊಂದು ನಿರ್ಮಿತಿಗೊಂಡಿದ್ದನ್ನು ನಾವು ಕಾಣುತ್ತೇವೆ. ಇಲ್ಲಿಯ ಭಿತ್ತಿಯು, ನಾನು ಈ ಮೊದಲೇ ಹೇಳಿದಂತೆ ಅದು ತಾತ್ತ್ವಿಕ ನೆಲೆಯಿಂದ ರೂಪಿತಗೊಂಡದ್ದೇ ಹೊರತು; ಎಂಪಿರಿಯಲಿಸ್ಟ್ ಮಾದರಿಯ ಚರಿತ್ರೆಯ ಅಧ್ಯಯನದ ಪ್ರಕ್ರಿಯೆಯನ್ನು ಗತಾನುಗತಿಕವಾಗಿ ಪಡೆದದ್ದಲ್ಲ. ಎಂಪಿರಿಯಲಿಸ್ಟ್ ಮಾದರಿಯ ಚರಿತ್ರೆಯ ಭೂಮಿಕೆಯು ಜೀವನಸ್ಥ ನೆಲೆಗಳಿಂದ ಹೊರತಾದುದು. ಜೀವನಸ್ಥ ನೆಲೆಗಳು, ಚರಿತ್ರೆಯ ಪ್ರಕ್ರಿಯೆಯ ಮುಂಚಲನೆಯನ್ನು ಬೆನ್ನು ಹತ್ತುತ್ತವೆ. ಇದನ್ನು ನಾವು ಸೂಕ್ಷ್ಮವಾಗಿ ಅಲ್ಲದಿದ್ದರೂ ಸ್ಥೂಲವಾಗಿಯಾದರೂ ತಿಳಿಯುವ ಅಗತ್ಯವಿದೆ. ಈ ಸಂಪುಟದಲ್ಲಿ ಆಕಲನಗೊಂಡಿರುವ ಪುಸ್ತಕಗಳು ಈ ಅಂಶವನ್ನು ಒತ್ತಿಹೇಳುತ್ತವೆ.

ಇದನ್ನು ಇನ್ನೊಂದು ರೀತಿಯಿಂದಲೂ ವ್ಯಾಖ್ಯಾನಿಸಿಕೊಳ್ಳಬಹುದೇನೋ? ಚರಿತ್ರೆಯಲ್ಲಾಗಲಿ ಅಥವಾ ವಿಜ್ಞಾನದಲ್ಲಾಗಲಿ, ಸಂಶೋಧನೆಯು ಒಂದು ಸಮಸ್ಯೆ ಅಥವಾ ಸಮಸ್ಯೆಯಿಂದ ಉದ್ಭವಗೊಂಡ ಪ್ರಶ್ನೆಯಿಂದಲೇ ಶುರುವಾಗುತ್ತದೆಯಷ್ಟೆ. ಒಬ್ಬ ಚಾರಿತ್ರಿಕ ಸಂಶೋಧಕನೂ ಕೂಡ ಇಂತಹ ಪ್ರಶ್ನೆಗಳನ್ನು ಕೇಳುತ್ತಾನೆ ಅಥವಾ ಇಂತಹ ಸಮಸ್ಯೆಗಳ ಬಗ್ಗೆ ಚಿಂತಿಸುತ್ತಾನೆ. ಹೀಗೆ ಚಿಂತಿಸುವುದಕ್ಕೆ ಹಲವು ಕಾರಣಗಳಿವೆ. ತನ್ನ ಕಾಲದ ಇತಿಹಾಸಕಾರ ಕೆಲವೊಂದು ಚಾರಿತ್ರಿಕ ಘಟನೆಗಳ ಬಗ್ಗೆ ಒದಗಿಸಿದ ದಾಖಲೆಗಳ ಬಗೆಯನ್ನು ಕಂಡು ಅತೃಪ್ತಿಗೊಳ್ಳುತ್ತಾನೆ. ಅಥವಾ ಅಂಥದೊಂದು ದಾಖಲೆ ಪಟ್ಟಿಯ ಆಂತರಿಕ ಅಸಮರ್ಪಕತೆಗಳಿಂದ ಕೂಡಿರುವುದನ್ನು ಗಮನಿಸುತ್ತಾನೆ. ಅಂದರೆ : ಮಾತು ಮತ್ತು ನಡೆವಳಿಯ ವಿರೋಧಾಭಾಸಗಳನ್ನು ಅವನು ಪರ್ಯಾಯವಾಗಿ ಗುರುತಿಸುತ್ತಾನೆ. ಇದನ್ನು ಒಂದು ಉದಾಹರಣೆಯಿಂದ ಇನ್ನಷ್ಟು ಸ್ಪಷ್ಟ ಮಾಡಿಕೊಳ್ಳಬಹುದು. ನಮಗೆಲ್ಲರಿಗೂ ಗೊತ್ತಿರುವಂತೆ ಕವಿರಾಜಮಾರ್ಗದ ಒಂದು ಪದ್ಯ ಹೀಗಿದೆ. ಈ ಪದ್ಯ ಕುರಿತೇ ಶಂಬಾ ಜೋಶಿ ಅವರು ದೀರ್ಘಕಾಲ ಕಂಡಡ-ಕಂನಾಡ ಸಂಸ್ಕೃತಿಯ ಮೂಲನೆಲೆಗಳನ್ನು ತಿಳಿಯಲು ಪ್ರಧಾನವಾಕ್ಯವಾಗಿಯೂ ಪರಿಕಲ್ಪನೆಯಾಗಿಯೂ ಬಳಸಿಕೊಂಡರು.

---

೧. "ಇತಿಹಾಸವು ಬಾಹ್ಯ ಘಟನೆಗಳ ಅಥವಾ ಸಂಗತಿಗಳ ಜ್ಞಾನವಲ್ಲ. ಅದು ಒಂದು ರೀತಿಯಲ್ಲಿ ಸ್ವಂತದರ ಬಗೆಗಿನ ಜ್ಞಾನ." ಹೀಗೆಂದು ಆರ್. ಜಿ. ಕಾಲಿಂಗ್‌ವುಡ್ ನಂತಹ ಮಹಾಶಯ ಈ ಮಾತನ್ನು ಹೇಳಿ ಸುಮಾರು ಆರುವತ್ತು ದಶಕಗಳು ಮೀರಿದುವು. ಆದರೆ, ನಮ್ಮ ಇತಿಹಾಸದ ಅಧ್ಯಯನ ಕ್ರಮವು, ಚಾರಿತ್ರಿಕ ಕಾಲಘಟ್ಟದ ಸರಳ ರೇಖಾತ್ಮಕ ನೆಲೆಯಲ್ಲಿ ನಡೆಯಿತೇ ಹೊರತು-ವಕ್ರಪಾತಳಿಯ ನೆಲೆಗಟ್ಟನ್ನು ಹುಡುಕಲು ತೊಡಗಲಿಲ್ಲ. ಒಂದು ರೀತಿಯಲ್ಲಿ ಹೇಳುವುದಾದರೆ; ಮನುಷ್ಯನೊಬ್ಬನ ನುಡಿವಳಿ-ನಡೆವಳಿಗಳಲ್ಲಿ ಇದು ಸ್ಪಷ್ಟವಾಗಿ ಮೈದೋರುತ್ತದೆ. ಈ ಸಂಗತಿಯನ್ನು ಅರ್ನೆಸ್ಟ್ ಕ್ಯಾಸಿರರ್ ಕೂಡ ತಾತ್ತ್ವಿಕ ಭೂಮಿಕೆಯಿಂದ ಪ್ರವೇಶಿಸಿ ಚಿಂತಿಸುತ್ತಾನೆ. ವಿವರಗಳಿಗೆ ನೋಡಿ : Ernest Cassirer, 'Essay on Man' Yale University 1944 p. 64

ಕಾವೇರಿಯಿಂದಮಾಗೋ
ದಾವರಿವರಮಿರ್ದ ನಾಡದಾ ಕನ್ನಡದೊಳ್॥

ಕರ್ನಾಟದ ವೈಭವವನ್ನು ಅದು ಉತ್ತರದ ಗೋದಾವರಿಯಿಂದ ಹಿಡಿದು ದಕ್ಷಿಣದ ಕಾವೇರಿಯ ವರೆಗೆ ಹಬ್ಬಿತ್ತು ಎಂಬುದು ಈ ಪದ್ಯದ ಸ್ಥೂಲವಾದ ಅರ್ಥವಷ್ಟೆ. ಇದು ಕವಿಯ ಕಾಲ್ಪನಿಕ ನುಡಿಯೋ ಅಥವಾ ಇದರಲ್ಲಿ ಚಾರಿತ್ರಿಕ ಸತ್ಯಾಂಶವಿದೆಯೋ? ಅನ್ನುವುದು ನಮ್ಮ ಮುಂದಿರುವ ಪ್ರಶ್ನೆ. ಇದು ಕೆಲವರಿಗೆ ಸಮಸ್ಯೆಯಾಗಿ ಕಾಡಿದ್ದೂ ಉಂಟು ಕೆಲವು ಮಹಾರಾಷ್ಟ್ರ ವಿದ್ವಾಂಸರು "ಮಹಾರಾಷ್ಟ್ರದ ಗಡಿಗಳು ದೂರದ ತುಂಗಭದ್ರೆಯ ವರೆಗೂ ಹಬ್ಬಿತ್ತು" ಎಂದು ಪ್ರತಿಪಾದಿಸುತ್ತಾರೆ. ಆದರೆ, ಕನ್ನಡದ ವಿದ್ವಾಂಸರು "ಕರ್ನಾಟಕದ ಗಡಿಯು ಗೋದಾವರಿ ವರೆಗೂ ಚಾಚಿದ್ದುವು" ಎಂದು ಪ್ರತಿಪಾದಿಸುತ್ತಾರೆ. ಇಲ್ಲಿ ಎರಡೂ ಬಗೆಯ ವಾಗ್ವಾದಗಳು ನಮ್ಮ ಮುಂದಿವೆ. ಆದರೆ, ಇವೆರಡೂ ವಾದಗಳು ಸಮರ್ಪಕವಲ್ಲ ಅಥವಾ ಇವೆರಡೂ ವಾದಗಳ ಭೂಮಿಕೆಯಲ್ಲಿ ಸುಳ್ಳೇ ಇರಬಹುದು. ಇವೆರಡೂ ತಾತ್ವಿಕ ಭೂಮಿಕೆಗಳು ತಮ್ಮ ಹೆಗಲನ್ನು ತಾವೇ ತಟ್ಟಿಕೊಳ್ಳುವ ನಡೆವಳಿಗಳೇ ಆಗಿವೆ. ಇವೆರಡೂ ಕೂಡಾ ತಾರ್ಕಿಕ ಭೂಮಿಕೆಗಳ ಹಿನ್ನೆಲೆಯಲ್ಲಿ ತಮ್ಮ ತಮ್ಮ ವಾದಗಳನ್ನು ಮಂಡಿಸುವ ಕಡೆ ಗಮನವನ್ನು ಹರಿಸಿವೆ. ಶಂಬಾ ಅವರು ಇತಿಹಾಸದ ಭೂಮಿಕೆಯನ್ನು ಮೇಲುನೋಟದ ಚಾರಿತ್ರಿಕ ಕಾಲದ ನೆಲೆಯಲ್ಲಿ ನೋಡಲು ಹೋಗಲಿಲ್ಲ. ಅದರ ಬದಲಾಗಿ "ಕರ್ನಾಟಕ ಮತ್ತು ಮಹಾರಾಷ್ಟ್ರಗಳ ಸಾಂಸ್ಕೃತಿಕ ಭಾಷಿಕ ಸಂಗತಿಗಳು ಉದ್ಭವವಾಗುವುದಕ್ಕೆ ತೋರಿಸಿದ ಪ್ರಕ್ರಿಯಾತ್ಮಕ ಕಾಲ ಯಾವುದಿರಬಹುದು" ಎಂಬ ಪ್ರಶ್ನೆಯನ್ನು ಮೂಲಗಾಮಿಯಾಗಿ ಕೇಳಲು ಹೊರಟರು. ಅವರೇ ಮುಂದುವರಿದು ಈ ಎರಡೂ ರಾಜ್ಯಗಳ ಸಾಮಾನ್ಯ ಸಾಂಸ್ಕೃತಿಕ ತಳಹದಿ ಯಾವುದು? ಎಂದೂ ಪ್ರಶ್ನಿಸಿಕೊಂಡರು. ಇದಕ್ಕೆ ಅವರು ಕಂಡುಕೊಂಡ ಉತ್ತರ ಹೆಚ್ಚು ಖಚಿತವಾಗಿದೆ. ಅದು 'ಕಂದಮಿಳು'.[೩]

ಇಷ್ಟೂ ಅಲ್ಲದೆ, ಮಹಾರಾಷ್ಟ್ರವು ಕರ್ನಾಟ ಪೂರ್ವದ, ಮಹಾರಾಷ್ಟ್ರ ಪೂರ್ವದ ತಳಹದಿಯ ಸಾಂಸ್ಕೃತಿಕ ನೆಲದ ಮೇಲೆಯೇ ಬೆಳೆಯಿತು ಎಂಬ ನೆಲೆಗೆ ಶಂಬಾ ತಲುಪುತ್ತಾರೆ. ಸತ್ಯ ಇತಿಹಾಸದ ನೆಲೆಯ ಕಡೆಗೆ ಅವರ ಗಮನ ಇರುವುದನ್ನು ಕಾಣಬಹುದು. ಸಾಂಸ್ಕೃತಿಕ ನೆಲೆಯ ಮುಖಾಂತರ ಕರ್ನಾಟಕ ಮತ್ತು ಮಹಾರಾಷ್ಟ್ರಗಳು ರೂಪುಗೊಂಡವು ಎಂಬ ಪರಿಕಲ್ಪನೆಯನ್ನು ಶಂಬಾ ಅವರು ಪ್ರತಿಪಾದಿಸಿದ್ದಾರೆ. ಇದನ್ನು ಶಂಬಾ ಅವರ ವಿವೇಚನೆಯ ನೆಲೆಯಲ್ಲಿಯೇ ನೋಡಿದರೆ: ಹಳಗನ್ನಡ ಭಾಷೆ ರೂಪುಗೊಳ್ಳುವ ವರೆಗೆ 'ಕಂದಮಿಳ' ಮೂಲ ಭಾಷಿಕರು ಬೇರೆ ಬೇರೆ ಸಾಂಸ್ಕೃತಿಕ ಸ್ತರಗಳ ಬೆಳವಣಿಗೆಯ ಬಗ್ಗೆ ದಾಖಲೆ ಒದಗಿಸಬಹುದೇ? ಎಂದು ಅವರು ತಮ್ಮ ಕೃತಿಗಳಲ್ಲಿ ಪ್ರಶ್ನೆ ಮಾಡಿಕೊಂಡಿದ್ದಾರೆ. ಆಹಾರ ಸಂಗ್ರಹ, ಪ್ರಾಣಿಗಳ ಸಾಕುವಿಕೆ, ಆಹಾರ ನಿರ್ಮಾಣ (ಕೃಷಿ ಸಂಬಂಧೀ ಚಿಂತನೆಗಳು) ಇತ್ಯಾದಿಗಳ ಮೂಲಕ ವಿವಿಧ ಘಟ್ಟದ ಅದರ ಸಾಮಾನ್ಯ ಸಾಮಾಜಿಕ ವಿಕಾಸದ ಬೆಳವಣಿಗೆಯ ಹಿನ್ನೆಲೆಯಲ್ಲಿ ಅವರು ಉತ್ತರ ಕಂಡುಹಿಡಿದುಕೊಳ್ಳಲು ಪ್ರಯತ್ನಿಸಿದ್ದಾರೆ.[೪] ಈ ಪ್ರಯತ್ನ ಕನ್ನಡದ ಮಟ್ಟಿಗಂತೂ ಎಷ್ಟು ಪ್ರಥಮವೋ ಇಂದಿಗೂ ಅದು ಅಷ್ಟೇ ಪ್ರಥಮ ಪಂಕ್ತಿಯ ಸಂಶೋಧನೆಯೇ ಆಗಿದೆ. ಹಟ್ಟಿಕಾರರ ಬಗ್ಗೆ, ಧನಗಾರರ ಬಗ್ಗೆ ಮೊದಲ ಸಂಶೋಧನೆ ಶಂಬಾ ಅವರದೇ

---

೩. ಶಂಬಾ ಜೋಶಿಯವರು 'ದ್ರಾವಿಡ' ಪದಕ್ಕೆ ಅಂಟಿಕೊಂಡಿರುವ ತಪ್ಪುಗ್ರಹಿಕೆಗೆ ಎಡೆಮಾಡಿಕೊಡುವ ವಿವಿಧಾರ್ಥಗಳನ್ನು ದೂರ ಮಾಡುವುದಕ್ಕಾಗಿ ರೂಪಿಸಿಕೊಂಡ ಹೊಸ ಪರಿಕಲ್ಪನೆಯಿದು.

೪. ಶಂಬಾ ಅವರು, ಕಣ್ಮರೆಯಾದ ಕನ್ನಡ, ಕರ್ನಾಟಕ ವೀರಕ್ಷತ್ರಿಯರು, ಕಂನಡದ ನೆಲೆ-ಈ ಕೃತಿಗಳಲ್ಲಿ ವಿವಿಧ ಐತಿಹಾಸಿಕ ಸುಳುಹುಗಳ ಮುಖಾಂತರ ನರ್ಮದಾ-ಕಾವೇರಿ ಪ್ರದೇಶದ (ದಂಡಕಾರಣ್ಯ ಪ್ರದೇಶದ) ಪ್ರಾಚೀನ ಜನರ ಸಾಂಸ್ಕೃತಿಕ ಬೆಳವಣಿಗೆಯ ಸ್ತರಗಳನ್ನು ಸ್ಥೂಲವಾಗಿ ಹೀಗೆ ಸಂಗ್ರಹಿಸಸುತ್ತಾರೆ. ಮೊದಲನೆಯದಾಗಿ ಆಹಾರ ಸಂಗ್ರಹಣೆಯ ಸ್ತರದಲ್ಲಿ ಜನರ ಉಪಜೀವನವು ಮರಗಿಡಗಳ, ಸಸ್ಯಪ್ರಪಂಚದ ಮೇಲೆ ಅವಲಂಬಿತವಾಗಿದ್ದರಿಂದ ಅವರು ಮುಖ್ಯವಾಗಿ ವೃಕ್ಷ ಪೂಜಕರಾಗಿದ್ದರು. (ವಿದರ್ಭದಲ್ಲಿ ಝಾಡಿಮಂಡಲ ಇದ್ದು ಆ ಜನರನ್ನು 'ಜೇಡರು' ಎಂದು ಕರೆಯುವುದನ್ನು ಇಲ್ಲಿ ನೆನೆಯಬಹುದು). ಕಾವೇರಿ ಹತ್ತಿರ ತಳಕಾಡು ಜನರನ್ನು ಮರವಾರರು ಎನ್ನುತ್ತಾರೆ. ಇನ್ನೊಂದು ಸಾಸಂಸ್ಕೃತಿಕ ಸ್ತರವೆಂದರೆ:

ಆಗಿರುವುದು ಈ ನೆಲೆಯಲ್ಲಿ ವಿನಾ ಕಾರಣವಲ್ಲ. ಈಗ, ಹಿಂದೆ ಎತ್ತಿದ ಮೂಲಗಾಮಿ ಪ್ರಶ್ನೆಗೆ ಮರಳಿ ಬರುತ್ತೇನೆ. ಚಾರಿತ್ರಿಕ ನೆಲೆಯ ಅಧ್ಯಯನದ ಹಿಂದಿರುವ ಸಾಂಸ್ಕೃತಿಕ ಹಾಗೂ ತಾತ್ವಿಕ ಪ್ರೇರಣೆಗಳು ಯಾವುವು? ಎಂಬುದೇ ಈಗ ನಾವು ಕೇಳಿಕೊಳ್ಳಬಹುದಾದ ಪ್ರಶ್ನೆ. ಇದು ಮರಳಿ ನಮ್ಮನ್ನು ಕೈಹಿಡಿದು ನಡೆಸುವ ವರ್ತಮಾನಕಾಲದ ಬದುಕನ್ನು ಬಗೆದು ನೋಡುವ ಪ್ರಯತ್ನಗಳಿಂದಲೇ ಆಗುತ್ತದೆ. ಈ ಮಾತನ್ನು ಇನ್ನೊಂದು ರೀತಿಯಿಂದಲೂ ವಿವರಿಸಿಕೊಳ್ಳಬಹುದು. ಇತಿಹಾಸಕಾರನು ಎಂಥ ಮಾದರಿಯ ಪ್ರಶ್ನೆ ಕೇಳುತ್ತಾನೆ ಎನ್ನುವುದರ ಆಧಾರದ ಮೇಲೆ ಸಮರ್ಪಕವಾದ ಹಾಗೂ ಸೂಕ್ತವಾದ ಉತ್ತರ ರೂಪದ ಸಂಗತಿಗಳು ನಿರ್ಧಾರಿತವಾಗುತ್ತವೆ. ಈ ಸಾಕ್ಷ್ಯಾಧಾರಗಳು ವಿವಿಧ ಬಗೆಯವು ಆಗಿರಬಹುದು. ಪ್ರಾಚ್ಯವಸ್ತು, ಸಾಹಿತ್ಯಕ, ಪೌರಾಣಿಕ, ಜಾನಪದೀಯ, ಧಾರ್ಮಿಕಸಂಪ್ರದಾಯ, ಸ್ಥಳನಾಮ, ತುಲನಾತ್ಮಕ ಭಾಷಾಶಾಸ್ತ್ರ.[೫] ಇವುಗಳಲ್ಲದೆ, ಮಾನವಶಾಸ್ತ್ರೀಯ ಅಧ್ಯಯನದ ನೆಲೆಗಳಿಂದಲೂ ಈ ಸಂಗತಿಗಳ ವಿಸ್ತರಣೆ ಸಾಧ್ಯ. ಈ ಎಲ್ಲ ಪಾರಸ್ಪರಿಕ ನೆಲೆಗಳ ಸಾಂಸ್ಕೃತಿಕ ಅಧ್ಯಯನಗಳಿಂದ ತಕ್ಕಷ್ಟು ಪರಿಗಣಿತವಾಗಿ ಸಾಕ್ಷ್ಯಾಧಾರಗಳನ್ನು ಪಡೆದದ್ದಾಗಿರಬಹುದು. ಸಾಕ್ಷ್ಯ ಸಂಗತಿಗಳು ನಿಜವಾಗಿ ಅವು ಸುಳುಹುಗಳಾಗಿದ್ದು ಸಾಕ್ಷ್ಯಾಧಾರಗಳ ಒಪ್ಪಿಗೆಯ ವಿಮರ್ಶೆಯ ರೀತಿಯಲ್ಲಿ ಒಪ್ಪಿಗೆಯಾಗಿರುತ್ತದ್ದಲ್ಲದೆ; ಅದರ ಮೌಲ್ಯವು ಚರಿತ್ರಕಾರನು ಎಷ್ಟರಮಟ್ಟಿಗೆ ಅದರ ಮೇಲೆ ಬೆಳಕು ಚೆಲ್ಲುತ್ತಾನೆನ್ನುವುದರ ಮೇಲೆಯೂ ನಿರ್ಣಯವಾಗುತ್ತದೆ.

ಚಾರಿತ್ರಿಕ ಭೂಮಿಕೆಯು ಈಗ ಹೊಸ ತೊಡವುಗಳಿಂದ ಮುಂದುವರೆದಿದೆಯಷ್ಟೆ. ಮಾನವನ ಕ್ರಿಯೆಯ ಅಥವಾ ನೈಸರ್ಗಿಕ ಸಂಗತಿಗಳ ಅಥವಾ ವಿಜ್ಞಾನದ ಉನ್ನತ ನೆಲೆಯ ಸಾಮಾನ್ಯೀಕರಣಗಳು, ಅಂದರೆ : ಮಾನಸಿಕ ವಿಶ್ಲೇಷಣ ಕಲ್ಪನೆಗಳ ಬಳಕೆಯ ಮುಖಾಂತರ ಮಾನವನ ಚಟುವಟಿಕೆಯ ಹಿಂದಿನ ಉದ್ದೇಶಗಳನ್ನು ಬಹಿರಂಗಗೊಳಿಸಲು; ಅನೇಕ ಬಗೆಯ ಸಾಮಾನ್ಯೀಕರಣಗಳನ್ನು ಬಳಸಿಕೊಳ್ಳಲು ತೊಡಗಿಕೊಳ್ಳಲಾಗಿದೆ.[೬] ಈ ಬಗೆಯ ತಂತ್ರಗಳನ್ನು ಬಳಕೆ ಮಾಡುವಾಗ ವಿವೇಕವುಳ್ಳ ಇತಿಹಾಸಕಾರನು ವಿಮರ್ಶಾತ್ಮಕ ತಿಳವಳಿಕೆಯನ್ನು ಹೊಂದಿರುತ್ತಾನಲ್ಲದೆ ಎಚ್ಚರವನ್ನೂ ಹೊಂದಿರುತ್ತಾನೆ. ಮುಖ್ಯವಾಗಿ ಸಂಶೋಧನಾ ನೆಲೆಯ ಸಾಮಾನ್ಯೀಕರಣಗಳನ್ನು ಬಳಕೆ ಮಾಡುವಾಗ ಸುಸಂಗತವೂ ಆದ ಉತ್ತರವನ್ನು ಕಂಡುಕೊಳ್ಳುವ ಪ್ರಾಮಾಣಿಕ ಪ್ರಯತ್ನವನ್ನು ಅವನು ಮಾಡುತ್ತಲೇ ಇರುತ್ತಾನೆ. ವಿಶೇಷಜ್ಞರಿಗೆ ಬಹಳ ಮಹತ್ವವಾದ ತಂತ್ರಜ್ಞಾನಗಳ ಕಟ್ಟುನಿಟ್ಟಾದ ಬಳಕೆಯ ಬಗೆಗೆ ಭಯಪಡಬೇಕಾದ ಅಗತ್ಯವಿಲ್ಲ. ಒಂದು ಪಕ್ಷ ಅಯಶಸ್ವಿಯಾದರೂ ಅವನು ತಲುಪಿರುವ ಮುಖ್ಯ ನೆಲೆಗಳಿಗೆ ಬಾಧಕವೂ ಇರುವುದಿಲ್ಲ. ಐತಿಹಾಸಿಕ ವಿವರಣೆಯು ಅನೇಕ ಬಗೆಯ ಐತಿಹಾಸಿಕ ಸುಳುಹುಗಳು ಅಥವಾ ಸಾಕ್ಷ್ಯಾಧಾರಗಳಿಂದ ಹೆಣೆದ ಸೂಕ್ಷ್ಮ ನೇಯ್ಗೆಯಾಗಿರುತ್ತದೆ. ಈ ವಿವಿಧ ಬಾಗಿಲುಗಳಿಂದ ಅವನ ಮುಖ್ಯ ಪರಿಕಲ್ಪನೆಗಳು ನಿರಂತರವಾಗಿ ರಕ್ಷಣೆಗೊಳಗಾಗಿರುತ್ತವೆ. ಯಾವುದೊಂದು ದುರ್ಬಲ ಕೊಂಡಿ ಅಥವಾ

ದನಗಾಹಿಗಳು ಮತ್ತು ಕೃಷಿಕರದ್ದು. ಅವರೆಂದರೆ ಧನಗಾರರು ಮತ್ತು ಹಟ್ಟಿಕಾರರು. ಒಟ್ಟಿನಲ್ಲಿ ಈ ಬಗೆಯ ಸಾಂಸ್ಕೃತಿಕ ಸ್ತರಗಳ ಅಧ್ಯಯನದಿಂದ 'ಕಂವಮಿಳ'ದ ಪ್ರಾಚೀನ ಕರ್ನಾಟಕ ಮತ್ತು ಮಹಾರಾಷ್ಟ್ರಗಳ ಪೂರ್ವನೆಲೆಯನ್ನು ಸಾಂಸ್ಕೃತಿಕ ತಳಹದಿಯ ತಳವನ್ನು ಅವರು ತಡಕಾಡಿದ್ದಾರೆ. ತಡಕಾಡಲು ಅವರಿಗೆ ಸಾಧ್ಯವಾಗಿದೆ.

೫. ಶಂಬಾ ಅವರು ನಡೆಸುವ ಅಧ್ಯಯನದ 'ಅರ್ಥಗ್ರಹಣ ಪದ್ಧತಿ'ಯ ಈ ಬಗೆಯ ಶಾಸ್ತ್ರೀಯ ನೆಲೆ ಈಗ ಹೆಚ್ಚು ಆಕಾರವನ್ನು ಪಡೆಯಬೇಕಾಗಿದೆ. ಈಚಿನ ಅಧ್ಯಯನಗಳಲ್ಲಿ, ಈ ಬಗೆಯ ಉಪಕರಣಗಳ ನೆರವನ್ನು ಪಡೆಯುತ್ತಿರುವುದನ್ನು ನಾವು ಕಾಣಬಹುದು. ಕೆ. ವಿ. ನಾರಾಯಣ, ಬಸವರಾಜಕಲ್ಗುಡಿ, ಟಿ. ಎಸ್. ಸತ್ಯನಾಥ್ ಮೊದಲಾದವರ ಬರೆಹಗಳು ಈ ಬಗೆಯ ನೆಲೆಯನ್ನು ಪ್ರಧಾನವಾಗಿ ಎತ್ತಿ ಹಿಡಿದಿವೆ.

೬. A. L. Kroeber; "History, Evolutinalism and Functionalism, their type of interpretation of Culture" ಎಂದು ಹೇಳಿ ಅರುವತ್ತು ವರ್ಷಗಳಿಗೂ ಮಿಕ್ಕಿದುವು. ನಮ್ಮ ಕರ್ನಾಟಕ ಸಾಂಸ್ಕೃತಿಕ ಅಧ್ಯಯನದ ಭೂಮಿಕೆಗೆ ಹೊಸ ನೆಲೆಗಳು ಪ್ರಾಪ್ತವಾಗಿ, ಇನ್ನಷ್ಟು ಬಗೆಬಗೆಯ ಅಧ್ಯಯನದ ಮಾದರಿಗಳು ನಮ್ಮಲ್ಲಿ ಬೆಳೆಯಬೇಕಾಗಿತ್ತು. ಇನ್ನು ಮುಂದಾದರೂ ಬೆಳೆಯಲಿಯ

ದಾರವೊಂದರ ಎಳೆಯು ಶಿಥಿಲವಾದರೆ, ಸಂಶೋಧಕನಿಗೆ ಅದು ಕ್ಷೋಭೆಗೊಳಪಡಿಸಬಹುದಾದರೂ ಇತಿಹಾಸಕಾರನ ಮುಖ್ಯ ಕಸುಬಿಗೆ ಕುಠಾರವಾಗುವುದಿಲ್ಲ. ನನ್ನ ಮಾತಿನಲ್ಲಿ; ಪರಿಕಲ್ಪನೆಗಳ ನೆಲೆ, ಚರಿತ್ರಕಾರನ ವಾಸ್ತವಿಕ ತಿಳಿವಳಿಕೆ, ಶಾಸ್ತ್ರಜ್ಞಾನಗಳ ಐಕ್ಯತೆ, ಮತ್ತು ಒಟ್ಟು ವಿಕಾಸದ ಮಾದರಿಗಳನ್ನು ಗಮನಿಸಿ 'ಮಾನವ ಸಂಸ್ಕೃತಿ'ಯ ಒಟ್ಟು ನೆಲೆಗಳನ್ನು ಜೀವಂತವಾಗಿ ಹಿಡಿಯಬೇಕೆನ್ನುವುದರ ಕಡೆಗೆ ನನ್ನ ಮಾತಿದೆ. ಹೀಗಾಗಿ ಸಂಶೋಧಕ ಹಾಗೂ ಚರಿತ್ರಕಾರ ಏಕಕಾಲಕ್ಕೆ ಎರಡು ಪಾತಳಿಗಳನ್ನು ನಿಗ್ರಹಿಸುವಂತಾಗಬೇಕಾಗುತ್ತದೆ.

ಈ ಸಂಗತಿಗಳನ್ನು ಈ ಸಂಪುಟದಲ್ಲಿ ಆಕಲನಗೊಂಡಿರುವ ಕೃತಿಗಳ ಒಟ್ಟು ಸಾಂಸ್ಕೃತಿಕ ತಿಳಿವಳಿಕೆಯ ಪರಿಪ್ರೇಕ್ಷ್ಯದಲ್ಲೂ ನೋಡಬಹುದು. ಮೂಲಭೂತವಾಗಿಯೊ ಪ್ರಾಥಮಿಕ ಹಂತದಲ್ಲ ಎರಡು ವಿಷಯ ಜ್ಞಾನಗಳು ಬೇಕು. ಅವು ಮಾಹಿತಿ ಅಥವಾ ದಾಖಲೆಗಳ ಸಂಗ್ರಹ ಮತ್ತು ಚರಿತ್ರಜ್ಞನ ಸೂಕ್ಷ್ಮಜ್ಞತೆ-ಎಂಬ ಎರಡು ಬಗೆಯ ನೆಲೆಗಳೇ. ಇವು ವಿಷಯಜ್ಞಾನಗಳೂ ಕೂಡಾ. ದಾಖಲೆಗಾರ ಹಾಗೂ ಚರಿತ್ರಕಾರ ಇವುಗಳ ಬಗೆಗೆ ವಿಶೇಷಜ್ಞಾನ ಹೆಚ್ಚುತ್ತಿರುವ ಈ ದಿನಗಳಲ್ಲಿ ಇಂತಹ ಪಾತ್ರಗಳು ಹೆಚ್ಚು ಹೆಚ್ಚಾಗಿ ಪ್ರತ್ಯೇಕಗೊಂಡಿವೆ. ಒಂದು ಉದಾಹರಣೆ ಹೇಳಬಹುದಾದರೆ: ವಾಸ್ತುಶಿಲ್ಪಶಾಸ್ತ್ರಜ್ಞನು ತನ್ನ ವಿಶೇಷ ಕ್ಷೇತ್ರದಲ್ಲಿ ಮಾತ್ರ ಕೆಲಸ ಮಾಡಲು ತೊಡಗುತ್ತಾನೆ. ಜ್ಞಾನದ ಇತರೆ ಕ್ಷೇತ್ರಗಳಲ್ಲಿಯಂತೆ, ಐತಿಹಾಸಿಕ ವಿದ್ವತ್ತಿನ ಕ್ಷೇತ್ರದಲ್ಲೂ ಇಂತಹ ಸಮಸ್ಯೆಗಳು ಅನಿವಾರ್ಯವಾಗಿ ಸೃಷ್ಟಿಯಾಗಿ ಬಿಟ್ಟಿವೆ.[೭] ಇದು ಅನಿವಾರ್ಯ ಕೂಡಾ. ಇದನ್ನು ಎರಡು ರೀತಿಯಿಂದ ವಿವರಿಸಬಹುದು: ಮೊದಲನೆಯದು ಪ್ರಾಚೀನ ನಾಗರಿಕತೆಯ ಬಹುರೂಪತೆಗಳನ್ನು ಕುರಿತು ಬೆಲೆಯುಳ್ಳ ವಿವರಗಳನ್ನು ನೀಡಬಹುದಾದರೆ; ಎರಡನೆಯದು, ಮನುಷ್ಯನ ನಂಬಿಕೆಗಳು, ದೃಷ್ಟಿಕೋನ, ಉಡುಪುಗಳು, ಜಾನಪದ ರೀತಿ-ನೀತಿ, ಆರ್ಥಿಕ ಅನುಕರಣೆಗಳು, ಸಾಂಸ್ಕೃತಿಕ ಸಂಘರ್ಷಣೆಯ ಸಂಗತಿಗಳು ಮೊದಲನೆಯದರ ಜತೆಗೆ ಆಂತರಿಕ ರೂಪಗಳನ್ನು ಕೊಡುತ್ತದೆ. ಇಲ್ಲೇ ಒಂದು ಮಾತನ್ನು ನಾವು ಹೆಚ್ಚು ಖಚಿತಗೊಳಿಸಿಕೊಳ್ಳಬೇಕು. ಕೆಲವು ಐತಿಹಾಸಿಕ ಸಂಗತಿಗಳು 'ಕಠಿಣ' ಅನ್ನುವ ಮನೋಭಾವವಾಗಲಿ (ಉದಾ: ಪ್ರಾಚ್ಯವಸ್ತು ಶಾಸ್ತ್ರೀಯಶೋಧಗಳು) ಮತ್ತು ಇತರವು 'ಮೃದು' ರೀತಿಯವು (ಉದಾ: ಪೌರಾಣಿಕ, ಜಾನಪದೀಯ ಇತ್ಯಾದಿ) ಎಂದು ನಾವು ಚಿಂತಿಸಬೇಕಾದ ಅಗತ್ಯವಿಲ್ಲವಷ್ಟೆ. ಇವೆರಡರ ತಾಳ-ಮೇಳದಲ್ಲಿ ನಮ್ಮ ಸಾಂಸ್ಕೃತಿಕ ಪ್ರಕ್ರಿಯಾತ್ಮಕ ಕಾಲದ ನೆಲೆಗಳನ್ನು ತಿಳಿಯುವುದು ಮುಖ್ಯ ಉದ್ದೇಶವಾಗಿದೆ. ಈ ಬಗೆಯ ಬಲವತ್ತರವಾದ ಒತ್ತಾಯವನ್ನು ಶಂಬಾ ಜೋಶಿಯವರ ಶೋಧನೆಗಳು ಮತ್ತು ಆಂತರಿಕ ತಾತ್ವಿಕ ವಿನ್ಯಾಸಗಳು ನಮ್ಮನ್ನು ಒತ್ತಾಯಿಸುತ್ತಿವೆ.[೮] ಇಲ್ಲಿ ಒಂದು ಮಾತನ್ನು ಹೇಳಬೇಕು. ಒಂದು ಬಗೆಯ ಸಾಕ್ಷ್ಯಾಧಾರದಿಂದ ಇನ್ನೊಂದಕ್ಕೆ ಬದಲಾಗುವ ವಿಮರ್ಶಾತ್ಮಕ ಸ್ವೀಕರಣೆಯ ಒರೆಗಲ್ಲು-ಅಂದರೆ ವಿಮರ್ಶಾತ್ಮಕ ಸ್ವೀಕರಣೆಯ ಸಾಧನಗಳಿಂದ ಮಾತ್ರ ಯಾವುದು ನಿಜವಾದ ಅರ್ಥವಿವರಣೆ ಮತ್ತು ಯಾವುದು ಕಾಲ್ಪನಿಕ ಅರ್ಥವಿವರಣೆ ಎಂಬುದು ಅಂತಿಮವಾಗಿ ನಿರ್ಧಾರವಾಗುತ್ತದೆ!

---

೭. ಒಬ್ಬ ವಾಸ್ತುಶಿಲ್ಪಿಗೆ, ತನ್ನ ಕ್ಷೇತ್ರದಲ್ಲಿಯ ಶೋಧನೆಗಳ ಹೊರತಾಗಿ ಉಳಿದವುಗಳ ಬಗೆಗೆ ತಲೆ ಕೆಡಿಸಿಕೊಳ್ಳಲು ಹೋಗುವುದಿಲ್ಲ. ಇಷ್ಟು ಮಾತ್ರವಲ್ಲ ಅವನಿಗೆ ಬೇರಾವುದೂ ಕೂಡ ಪ್ರಬುದ್ಧ ಐತಿಹಾಸಿಕ ನಾಣ್ಯವಾಗುವುದಿಲ್ಲ. ಇದೇ ಮಾತನ್ನು ಹಲವು ನೆಲೆಗಳಲ್ಲಿ ಮಂಡಿಸಬಹುದು. ಇದು ಸಾಂಪ್ರದಾಯಿಕ ಭಾರತೀಯ ಚಿಂತನ ಮಾದರಿಯ ದಾರಿಗಳು; ತನ್ನ ದಾರಿಗೆ ಬರದವುಗಳನ್ನು ಹತ್ತಿರಕ್ಕೂ ಬಿಟ್ಟುಕೊಡುವುದಿಲ್ಲ. ಆದರೆ, ನಿಜವಾದ ಇತಿಹಾಸ ಬರೆಯುವವರಿಗೆ ಅನೇಕ ಬಗೆಯ ಶೋಧನೆಗಳು, ಸಾಹಿತ್ಯಕ ದಾಖಲೆಗಳು ಸಮನಾದ ಮುಖ್ಯ ಸಾಕ್ಷ್ಯಾಧಾರಗಳಾಗುತ್ತವೆ.

೮. ಪ್ರಾದೇಶಿಕ ಸೀಮಿತತೆಯ ಹಿನ್ನೆಲೆಯಲ್ಲಿ ಕೈಗೊಳ್ಳುವ ಅಧ್ಯಯನದ ನೆಲೆಗಳ ಬಗೆಗೆ ಆರ್. ಸಿ. ಮುಜುಂದಾರ್ ಅವರು ಕಟುವಾಗಿ ಟೀಕಿಸುತ್ತಾರೆ : "The responsibility of reconstructing the history and Culture of ancient India must be taken out of the hands of such sanskritists and archeologists. Their proper activities should be limited to collecting the data and arranging them scientifically. The function of reconstructing the history and Culture of India proper belongs to the historian who alone can correctly assess the different value of the different types of data collected by specialists. This, of course, does not mean that a Sanskritist or an archeologist cannot be also a historion. For each of them may be a properly qualified historian by necessary knowledge and training. But it would be a mistake to suppose that an expert Sanskritist, or archeologist is necessarily also a good historian, though unfortunately he often regards himself as such" ABORI, XL (1959) p. 10.

ಅನೇಕ ತತ್ತ್ವಶಾಸ್ತ್ರಜ್ಞರು ಮತ್ತು ಇತಿಹಾಸಕಾರರು ಐತಿಹಾಸಿಕ ವಿವರಣೆಗಳೆಂಬುವ ಅವಕುಂಠಿತವಾದ ವೈಜ್ಞಾನಿಕ ಸಂಗತಿಗಳೆಂದು ಗುರುತಿಸುವುದು ಒಂದು ತಪ್ಪು ಗ್ರಹಿಕೆಯೇ ಆಗಿದೆ. ಅದು ಯಾವುದೇ ತರತಮ ಭೇದವಿಲ್ಲದೆ, ಗೌಣವಾಗಿ ನೈಸರ್ಗಿಕ ವಿಜ್ಞಾನಗಳನ್ನು 'ಅನುಕರಿಸುವುದರಿಂದ ಬರುವ ಫಲಿತಾಂಶವಷ್ಟೆ'. ಐತಿಹಾಸಿಕ ವಿವರಣೆಯ ರೀತಿಯು ಒಂದು ಕತೆ ಮತ್ತು ಕಾದಂಬರಿಯನ್ನು ಹೋಲುತ್ತದೆ. ಈ ವಿಷಯವಾಗಿ ಅರ್ನೆಸ್ಟ್ ಕ್ಯಾಸಿರರ್‌ನ ಮಾತುಗಳು ಹೀಗಿವೆ:

> "...... an understanding of human life is the general theme and ultimate aim of historical knowledge. In history, we regard all the works of man, and we wish to reconstitute them into this original state we wish to understand and feel the life from which they are derived" (P. 178-1944)

ಈ ಮಾತುಗಳು 'ಜೀವನಸತ್ಯ' ಮತ್ತು ಐತಿಹಾಸಿಕ ವಿವರಣೆಯ ನೆಲೆಗಳನ್ನು ಒಂದೆಡೆ ತರುವ ಪ್ರಯತ್ನವನ್ನು ಮಾಡುತ್ತಿವೆ. ಹೀಗಾಗಿಯೇ 'ಐತಿಹಾಸಿಕ' ಪರಿಕಲ್ಪನೆಯನ್ನು ತನ್ನ ವಿಚಾರದ ಕಕ್ಷೆಗೆ ಬೇಕೆಂದೇ ಎಳೆದು ಮಂಡಿಸಿಕೊಳ್ಳಬಹುದು. ಇದು ಆ ಶಾಸ್ತ್ರದ ನಿಲುವು ಆಗಬಹುದೇ ಹೊರತು, 'ಮಾನವ ಇತಿಹಾಸ'ದ ಕೊಂಡಿಯಾಗಬಾರದು ಅಷ್ಟೆ. ಈ ಬಗೆಯ ಇತಿಹಾಸಕ್ಕೆ ಬೇಕಾದ ಪೂರ್ವದ ತೊಡವುಗಳನ್ನು ನಾವು ಕಳಚಿಟ್ಟು ನಡೆಸುತ್ತಿರುವ ಅಧ್ಯಯನಗಳು ಪೂರ್ವಕಲ್ಪಿತ ನೆಲೆಗಳೆಂದೇ ತಿಳಿಯಬೇಕಾಗುತ್ತದೆ. ಇದರಿಂದ, 'ಜೀವನಸತ್ಯ'ದ ಹೊರಗಡೆ ಚರಿತ್ರೆಯ ಮಾತುಗಳಿಗೆ ವ್ಯಾಖ್ಯಾನ ಮಾಡಬೇಕಾಗುತ್ತದೆ. ಆದರೆ, ಒಂದಂತೂ ನಿಜ. ನಾವು ಚರಿತ್ರೆಯಿಂದ ಕಲಿಯಬೇಕಾದ ಪಾಠಕ್ಕಿಂತ, ಚರಿತ್ರೆ ನಮಗೆ ಕಲಿಸಿಕೊಟ್ಟಿರುವ ಪಾಠ ಎಂಥದ್ದೆಂಬುದು ಮುಖ್ಯ. ಈ ನೆಲೆಯಿಂದ ಅರ್ನೆಸ್ಟ್ ಕ್ಯಾಸಿರರ್‌ನ ಮಾತುಗಳನ್ನು ಮತ್ತು ಶಂಬಾ ಜೋಶಿಯವರ ಚಿಂತನೆಗಳನ್ನು ಒಂದರ ಪಕ್ಕ ಮತ್ತೊಂದನ್ನು ಇಟ್ಟು ನೋಡಬೇಕಾಗುತ್ತದೆ. ನಾನು ಬೇಕಂತಲೇ ಶಂಬಾ ಜೋಶಿ ತಾತ್ತ್ವಿಕವಾಗಿ ನಿರೂಪಿಸಿರುವ ಇತಿಹಾಸದ 'ವಾಸ್ತವ ಸತ್ಯ' ಮತ್ತು ಸಾಂಸ್ಕೃತಿಕ ಇತಿಹಾಸದ 'ಜೀವನ ಸತ್ಯ' ಈ ಅಧ್ಯಯನದ ಭೂಮಿಕೆಗಳು ಒಂದು ಮತ್ತೊಂದನ್ನು ಅಪ್ಪಿ ಹಿಡಿದಿವೆಯೇ ಹೊರತು ಅವೆರಡೂ ಕೂಡ ಭಿನ್ನಭಿನ್ನವಾದವಲ್ಲ ಎಂದದ್ದು. ಆದರೆ, ಇವೆರಡರ ತಾರತಮ್ಯ ತಿಳಿಯಬೇಕಾಗಿದೆ. ಈ ಮಾದರಿಯ ತಿಳಿವಳಿಕೆ ಮರಳಿ ನಾವು ಸಂಸ್ಕೃತಿಯ ಅಂತರಾಳವನ್ನು ತಡುಕುವ ಜೀವನ ಪರಿಗಳು ಎಂದು. ಶಂಬಾ ಜೋಶಿಯವರ 'ಜೀವನ ಸತ್ಯ'ದ ಸಾಂಸ್ಕೃತಿಕ ಭೂಮಿಕೆಯು ವ್ಯಕ್ತಿಯ ನೆಲೆಯಿಂದ ಹೊರಡದೆ, ಸಮಷ್ಟಿಯ ಭೂಮಿಕೆಯಿಂದಲೇ ಹೊರಡುತ್ತದೆ. ಇದು ಒಂದು ರೀತಿ ಮಾನವನ ಒಟ್ಟು ಐಕ್ಯದ ಬದುಕನ್ನು ಹುಡುಕುವ, ಅದನ್ನು ಸದ್ಯದ ನೆಲೆಯಲ್ಲಿ ತಡಕುವ ಮಾದರಿಗಳೇ ಆಗಿವೆ! ಈ ಸಂಗತಿಗಳನ್ನು ವಾಸ್ತವಸತ್ಯದ ನೆಲೆಗಳ ಭೂಮಿಕೆಯಿಂದ ನೋಡಬಹುದಾಗಿದೆ.

ವಾಸ್ತವಸತ್ಯದ ನೆಲೆಗಳು

ಶಂಬಾ ಅವರ ಇಡಿಯಾದ ಕೃತಿಗಳ ಗ್ರಹಿಕೆಗೆ ಅಡ್ಡವಾಗಿರುವ ಮುಖ್ಯ ತೊಡಕೆಂದರೆ : ಅವರ ಯುಗದ ಮತ್ತು ಆನಂತರದ ಸಂಶೋಧನೆಯ ತಿಳಿವಳಿಕೆ ಖಚಿತವಾದ ನೆಲೆಗಳನ್ನು ಪಡೆಯದಿರುವುದೇ ಆಗಿದೆ. ಶಂಬಾ ನಮ್ಮ ಕಾಲದ ಬಹುದೊಡ್ಡ ಸಾಂಸ್ಕೃತಿಕ ಸಂಶೋಧಕರಷ್ಟೆ. ಆ ಸಂಪ್ರದಾಯದ ಮುಖ್ಯವಾದ ಒಂದು ಧಾರೆ ಎಂದು ಹೇಳಿದರೆ; ಅವರ ವಿಷಯದಲ್ಲಿ ಒಂದು ಅಮುಖ್ಯ ಮಾಹಿತಿಯನ್ನು ನೆನಪಿಸಿಕೊಂಡಂತಾಗುವುದೇ ಹೊರತು ಅವರ ಚಿಂತನದ ತಿಳುವಳಿಕೆಯತ್ತ ಏನನ್ನೂ ಮಾಡಿದಂತಾಗುವುದಿಲ್ಲ. ಏಕೆಂದರೆ ಈ ಮಾತನ್ನು ಇನ್ನಷ್ಟು ವಿಸ್ತರಿಸಿ ಹೇಳಬೇಕಾಗುತ್ತದೆ. ಅವರ ಸಂಶೋಧನಾ ತಿಳುವಳಿಕೆಯ ಬೇರುಗಳು ಕೇವಲ ಪಶ್ಚಿಮ ದೇಶದ ಶಾಸ್ತ್ರಗಳ ತಿಳುವಳಿಕೆಯಲ್ಲಿಲ್ಲ ಅಥವಾ ನಮ್ಮ ದೇಶದ ಸಂಸ್ಕೃತಿ ಚಿಂತಕರ ಪ್ರಭಾವದ ನೆಲೆಯಲ್ಲೂ ಅದು ಕಾಲೂರಿಲ್ಲ. ಒಂದು ರೀತಿಯಲ್ಲಿ ಶಂಬಾ ಅವರನ್ನು ನಾವು ನಮ್ಮ ಸಂಶೋಧಕರು ಎಂದು ಕರೆಯುವುದು

ಸಹ ನಮಗಿನ್ನೂ ಅವರು ಯಾತಕ್ಕಾಗಿ ಮುಖ್ಯರಾಗುತ್ತಾರೆ ಎಂಬ ಖಚಿತವಾದ ತಿಳುವಳಿಕೆ ಇಲ್ಲದಿರುವುದೇ ಕಾರಣವೆಂದು ಹೇಳಿದರೆ ತಪ್ಪಾಗಲಾರದು. ಶಂಬಾ ಅವರ ಕಾಲದ ಅಥವಾ ಅವರ ಕೃತಿಗಳ ಹಿಂದೆ ಇರುವ ಮುಖ್ಯ ನಿಲುವೆಂದರೆ ಮನುಷ್ಯನ ಮನಸ್ಸಿನ ಬಗ್ಗೆ ಮತ್ತು ಒಟ್ಟು ಮಾನವ ಸಂಸ್ಕೃತಿಯ ತಳಹದಿಯ ರಚನಾ ಕ್ರಮದ ವಿವಿಧ ನೆಲೆಗಳ ಬಗೆಗೆ. ಶಂಬಾ ಅವರ ಸಂಸ್ಕೃತಿ ಚಿಂತನದ ಬೇರುಗಳು ನವೋದಯ ಪೂರ್ವದಿಂದ ಹಿಡಿದು ಎಲ್ಲಾ ಮಜಲುಗಳಲ್ಲೂ ಹಾಯ್ದು ಬಂದಿವೆ. ಆದರೆ, ಅವುಗಳು ತಳಸೇರಿದ್ದು ಇನ್ನೆಲ್ಲಿಯೋ? ಅವರ ಬರೆಹಗಳಲ್ಲಿ ಈ ಬೇರುಗಳ ಮೂಲದಲ್ಲಿರುವ ಸ್ತರಗಳು ಹೊರಚಾಚಿ ಎದ್ದು ಕಾಣುತ್ತವೆ. ಶಂಬಾ ಅವರ ಚಿಂತನೆಯ ಮೂಲವಿರುವುದು ಸಂಸ್ಕೃತಿಯ ಕೇಂದ್ರವಾಗಿ ತೋರುವ ಮುಖ್ಯ ಪ್ರವಾಹದಲ್ಲಿ ತಾನೆ? ಆದ್ದರಿಂದ ಅವರ ಸಂಸ್ಕೃತಿ ಚಿಂತನದ ಹಿಂದೆ ತೀರ ವೈದಿಕ ಸಂಸ್ಕೃತಿಯ ಛಾಯೆಯೂ ಇಲ್ಲ; ಪಶ್ಚಿಮ ಸಂಸ್ಕೃತಿಯ ನಿಲುವುಗಳ ಮಾದರಿ ರೂಪಗಳೂ ಇಲ್ಲ. ಅವರ ಕನ್ನಡ ಸಂಸ್ಕೃತಿಯ ಮುಖ್ಯ ಎಳೆ ಇರುವುದೇ ಜನಾಂಗಗಳ ಸ್ಮೃತಿಗಳಲ್ಲಿ. ಈ ವಿಚಾರಗಳು ಈ ಸಂಪುಟದಲ್ಲಿ ಆಕಲನಗೊಂಡಿರುವ ಮೊದಲ ಪುಸ್ತಕ 'ಕಂನಡದ ನೆಲೆ'ಯಲ್ಲಿ ಆಳವಾಗಿ ಎದ್ದು ತೋರುತ್ತದೆ. ಶಂಬಾ ಅವರು, ಉಳಿದ ಸಂಸ್ಕೃತಿ ಸಂಶೋಧಕರ ಚಿಂತನೆಗಿಂತ ಭಿನ್ನವಾದ ನಿಲುವುಗಳಲ್ಲಿ ನಮ್ಮ ಮುಂದೆ ಕಾಣಸಿಗುವುದೇ ಈ ಮಾದರಿಯ ನಿಲುವುಗಳಲ್ಲಿ ಎಂಬುದನ್ನು ಮರೆತು ನಡೆಯುವಂತಿಲ್ಲ. ಭಾಷೆ ಮತ್ತು ಜನಾಂಗದ ಸ್ಮೃತಿಗಳ ಸಂಬಂಧದ ಬಗ್ಗೆ ನಾವು ಕಲಿತುಕೊಳ್ಳುವುದು ಬಹಳವಿದೆ. ಈ ಹಿನ್ನೆಲೆಯಲ್ಲಿ, ಶಂಬಾ ಅವರು ಮಾಡಿರುವ ಅಧ್ಯಯನದ ಮಾದರಿಗಳು ಮುಂದಿನ ಸಂಸ್ಕೃತಿ ಚಿಂತಕರ ಪ್ರಮುಖವಾದ ನೆಲೆಗಳೂ ಆಗಬೇಕಾದ ಆವಶ್ಯಕತೆಯಿದೆ.

ಈ ಕಾರಣದಿಂದ ಶಂಬಾ ಅವರ ಸಂಸ್ಕೃತಿ ಅಧ್ಯಯನದ ನೆಲೆಗಳು ಅದರಲ್ಲೂ ಕನ್ನಡ ಸಂಸ್ಕೃತಿಯನ್ನು ಕುರಿತಾದ ಅಧ್ಯಯನದ ನೆಲೆಗಳು ಬಹುಮುಖೀ ರೂಪದ ವಿನ್ಯಾಸವನ್ನು ತನಗೆ ತಾನೇ ಪಡೆಯುತ್ತ ಹೋಯಿತು. ಹೀಗಾಗಿ, ಅವರು 'ಕಣ್ಮರೆಯಾದ ಕನ್ನಡ'ದಲ್ಲಿ ಮಂಡಿಸಿದ ಸಿದ್ಧಾಂತಕ್ಕೆ ಪೂರಕ ಎಳೆಗಳನ್ನು ಹಿಡಿದು ಸಾಗುತ್ತಲೇ ಹೋದರು. ಈ ಸಂಪುಟದ ಕೃತಿಗಳು ಪರ್ಯಾಯವಾಗಿ ಈ ಅಂಶವನ್ನು ಹಿಡಿದು ಚರ್ಚಿಸುತ್ತವೆ. ಈ ಮಾತನ್ನು ಒಂದೆರಡು ಉದಾಹರಣೆಗಳಿಂದ ವಿವರಿಸಿದರೆ ಇನ್ನಷ್ಟು ಸ್ಪಷ್ಟವಾಗುತ್ತದೆ. "ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್" ಎಂದು ಹೇಳಿದ ಕವಿರಾಜಮಾರ್ಗಕಾರನ ಪ್ರಾಸಂಗಿಕ ಎಳೆಯನ್ನು ಹಿಡಿದು ನಡೆದ ಶಂಬಾ ತಲುಪಿದ್ದು ಕನ್ನಡ ಸಂಸ್ಕೃತಿಯ ಪ್ರಾಚೀನ ಜನಾಂಗದ ಮೂಲ ನೆಲೆಗಳಿಗೆ ತಾನೆ? ಕಂನುಡಿ-ಕಂನಡ ತನ್ನ ಆಕೃತಿಯನ್ನು ಆಕಾರವನ್ನು ಪಡೆದದ್ದು 'ನರ್ಮದಾ ಪರಿಸರದಲ್ಲಿ' ಎಂಬ ಮುನ್ನೆಲೆಗೆ ತಲುಪುತ್ತ, ಸ್ಥಳನಾಮ, ಸ್ಥಳಪುರಾಣ, ದೇವತಾವಿಚಾರ, ನಡೆವಳಿ-ನುಡಿವಳಿಗಳೊಳಗಿನ ವೈಶಿಷ್ಟ್ಯಗಳು, ಐತಿಹಾಸಿಕ ಪರಂಪರೆಗಳನ್ನು ಕೈಜೋಡಿಸಿ ಹಿಡಿಯಲು ಹೊರಟರು. ಈ ಮಾದರಿಯ ಅಧ್ಯಯನದ ಸ್ವರೂಪವೇ ಉಳಿದ ಸಂಶೋಧಕ ಮತ್ತು ಚಿಂತಕರಿಗಿಂತ ಶಂಬಾರನ್ನು ಬೇರೆ ಬಗೆಯ ಸಂಶೋಧಕರಾಗಿ ಕಾಣಿಸುತ್ತದೆ. ಶಂಬಾ ಅವರು ಈಗಲೂ ಕೂಡ ವೈದಿಕ ಸಂಸ್ಕೃತಿಯ ಬೇರುಗಳನ್ನು ಹುಡುಕುವ ಬದಲು; ಅದಕ್ಕೂ ಆಚೆ ಕಂದಮಿಳ ಸಂಸ್ಕೃತಿಯಲ್ಲಿ ಈ ಸಂಸ್ಕೃತಿಯ ಎಳೆಗಳನ್ನು ಹುಡುಕಲು ಪ್ರಯತ್ನಿಸಿದ್ದು ಕಾಲದ ದೃಷ್ಟಿಯಿಂದ ಮಹತ್ವದ ಅಂಶವೇ ಆಗಿದೆ.[೯] ಮಾತೃದೇವತೆಯ ಆರಾಧನೆ, ಮಾತೃಪ್ರಧಾನ ಮೌಲ್ಯಗಳು, ಪುರುಷ ಪ್ರಧಾನ ವೈದಿಕ ಸಂಸ್ಕೃತಿಗಿಂತ ಮೊದಲೇ ಇಲ್ಲಿ ಬದುಕಿದ್ದವು ಮಾತ್ರವಲ್ಲ; ಕೊನೆಗೆ ವೈದಿಕಸಂಸ್ಕೃತಿ ಕೂಡ ತನ್ನ ಒಡಲೊಳಗೆ ಆ ಮೌಲ್ಯಗಳನ್ನು ಸ್ವೀಕರಿಸಬೇಕಾಯಿತು. ಈ ವಿಚಾರದ ಎಚ್ಚರವನ್ನು ಅವರ ಕೃತಿಗಳು ನಮಗೆ ಮಾಡಿಕೊಡುತ್ತವೆ. ಮುಖ್ಯವಾಗಿ ಸಂಸ್ಕೃತಿಯ ಒಳಸುಳಿಯಾದ ಜಾನಪದ ಸಂಸ್ಕೃತಿ ಯಲ್ಲಿ ಇಂದಿಗೂ ಉಳಿದುಕೊಂಡು ಬಂದಿರುವ ಮಾನವನಾಗಿ ಬಾಳಬೇಕೆನ್ನುವ ಎಚ್ಚರವನ್ನು ತೆಗೆಯುತ್ತಾರೆ. ಆದ್ದರಿಂದಲೇ ಶಂಬಾ ಅವರ ಚಿಂತನೆಯು, ಸಾಂಪ್ರದಾಯಿಕ ನಿಲುವುಗಳನ್ನು ಹಿಡಿಯದೆ, ಬೇರೆ ಬಗೆಯ ನಿಲುವುಗಳನ್ನು ಗ್ರಹಿಸಲು ತೊಡಗುತ್ತದೆ.

---

೯. "ಮಾನವ ಸಂಸ್ಕೃತಿಯು ಬೆಳೆದ ಕ್ರಮದ ಅಭ್ಯಾಸಕ್ಕೆ ಇಲ್ಲಿ ದೊರೆವ ಅನುಕೂಲತೆಗಳು ಬೇರೆಡೆಗೆ, ಇಷ್ಟು ಸುಸಂಗತವಾಗಿ

ಶಂಬಾ ತಮ್ಮ ತಿಳಿವಳಿಕೆಯ ಎಲ್ಲಾ ಮಜಲುಗಳನ್ನು ವರ್ತಮಾನ ಕಾಲದ ನೆಲೆಗೆ ಒಡ್ಡಿ ಬರೆಯಲು ತೊಡಗಿದ್ದರಿಂದ ಅವರ ಸಂಸ್ಕೃತಿ ಚಿಂತನೆಯಲ್ಲಿ ಬಹುಮುಖ್ಯವಾದ ಸೂಕ್ಷ್ಮತೆಗಳು ಹುಟ್ಟಿಕೊಂಡವು. ಇವುಗಳಲ್ಲಿ ಎದ್ದು ಕಾಣುವ ಅಂಶವೆಂದರೆ ಇತಿಹಾಸದ ಮತ್ತು ಸಾಂಸ್ಕೃತಿಕ ವ್ಯಾಸಂಗದ ಎಲ್ಲಾ ಬಗೆಯ ಸಂಗತಿಗಳೂ ಗ್ರಾಹ್ಯ ಎನ್ನುವ ನಂಬಿಕೆಯಿಂದ ಅವರು ಸಂಸ್ಕೃತಿ ವ್ಯಾಸಂಗದ ಸಂವೇದನೆಯನ್ನು, ಅಗಾಧವಾಗಿ ಹಿಗ್ಗಿಸಿಬಿಟ್ಟದ್ದು. ಅದಕ್ಕಾಗಿ ಅವರು ಸಂಸ್ಕೃತಿ ಚಿಂತನದ ಎಳೆಗಳ ಎಡೆಯನ್ನು ಹಿಡಿದರು. ಉಳಿದವರಿಗೆ ಸಾಧ್ಯವಾಗದೆ ಇದ್ದದ್ದು ಶಂಬಾ ಅವರಿಗೆ ಸಾಧ್ಯವಾಯಿತು. ಯಾವುದನ್ನು ಸಾಂಸ್ಕೃತಿಕ ವ್ಯಾಸಂಗದ ಸತ್ಯದ ಎಳೆಗಳು ಎಂದು ಹೇಳುತ್ತೇವೆಯೋ ಅದರ ಮೂಲಾಂಶದ ಕಡೆ ತಮ್ಮ ಚಿಂತನೆಯನ್ನು ಅವರು ಹರಿಸಿದರು. ಬಹುಶಃ ಈ ಬಗೆಯ ತೆರೆದ ದೃಷ್ಟಿಯಿಂದಾಗಿ ಕನ್ನಡ ಸಂಶೋಧನಾ ಪರಂಪರೆಗೆ ಹೊಸ ತೊಡವುಗಳನ್ನು ಅವರು ಇಡಲು ಸಾಧ್ಯವಾಯಿತು.[೧೦] ಸಂಶೋಧನೆಯಲ್ಲಿ, ಮಡಿವಂತಿಕೆ ಮತ್ತು ಸಂಕೋಚದ ನೆಲೆಗಳನ್ನು ಆಚೆಗೆ ತಳ್ಳಲು ಉಪಕ್ರಮಿಸಿದ್ದು-ಅವರ ಆಗಾಮೀ ಸಾಂಸ್ಕೃತಿಕ ನೆಲೆಯ ಅಧ್ಯಯನದ ಕಾರಣದಿಂದ ಎಂಬುದನ್ನು ಸದ್ಯ ನಾವು ಅರ್ಥ ಮಾಡಿಕೊಳ್ಳಬೇಕಿದೆ!

ಶಂಬಾ ಸಂಸ್ಕೃತಿ ವ್ಯಾಸಂಗವನ್ನೇ ನೆಚ್ಚಿಕೊಂಡಿದ್ದರಿಂದ ಅವರು ಹಲವಾರು ಬಗೆಯಲ್ಲಿ ಒಬ್ಬ 'ಚಿಂತನಶೀಲ ಸಂಸ್ಕೃತಿ ಸಂಶೋಧಕ' ಎಂದು ಹೇಳಬಹುದು. ಅವರ ಕಾಲದ ಉಳಿದ ವ್ಯಾಸಂಗಿಗಳಿಗೆ ಈ ಮಾತುಗಳನ್ನು ಹೊಂದಿಸಿ ಹೇಳುವುದು ತುಂಬ ಕಷ್ಟ.[೧೧] ಶಂಬಾ ಅವರ ಸಂಸ್ಕೃತಿ ಚಿಂತನದಲ್ಲಿ 'ಬಿಡಿಬಿಡಿ'ಯಾದ ಕೃತಿ ಶೋಧನೆಗಿಂತ 'ಇಡಿ'ಯಾದ ಆಕೃತಿ ಶೋಧನೆಯೇ ಪ್ರಧಾನವಾದ ಸ್ವರೂಪವನ್ನು ಪಡೆದದ್ದನ್ನು ಗಮನಿಸಿದರೆ ನನ್ನ ಮಾತಿನ ಹುರುಳು ತಥ್ಯವಾದೀತು. ಈ ಮಾತುಗಳನ್ನು ಅವರ ಕಾಲದ ಉಳಿದ ಶೋಧಕರು ಬಳಸುವ ಉಪಕರಣಗಳಿಗೆ ಸಂಬಂಧಿಸಿದಂತೆಯೂ ನಾವು ಗಮನಿಸಬಹುದು. ಶಾಸನ, ಭಾಷಾಶಾಸ್ತ್ರ, ಸಾಹಿತ್ಯದ ಆಧಾರಗಳು ಮಾತ್ರ ಸಂಸ್ಕೃತಿ ವ್ಯಾಸಂಗದ ಮುಖ್ಯ ಉಪಕರಣಗಳಾಗಿದ್ದುದರಿಂದ; ಅವರ ಶೋಧನೆಯಲ್ಲಿ 'ಇಡಿ'ಯಾದ ಆಕೃತಿಯ ಗ್ರಹಿಕೆ-ತನ್ನ ಮೂಲರೂಪೀ ಆಶಯದೊಂದಿಗೆ ಹೊರಬರಲು ಸಾಧ್ಯವಾಗಲಿಲ್ಲವೆಂಬುದನ್ನು ಈಗ ನಾವು ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾಗಿದೆ.

ದೊರೆಯುವಂತೆ ತೋರುವುದಿಲ್ಲ. ತೀರ ಪ್ರಾಥಮಿಕ ಹಂತದಿಂದ ಒಂದೊಂದು ಮಟ್ಟ ಮುಂದುವರೆಯುತ್ತ ಬಂದ ಜೀವನಕ್ರಮ ಸೂಚಕ ಶಬ್ದ-ಸಂಕೇತಗಳನ್ನು ಈವರೆಗೂ ಉಳಿಸಿಕೊಂಡು ಬಂದಿರುವ ಜನ ಹಾಗೂ ಭಾಷೆಯ ಅವಶೇಷಗಳು, ಇಂದು ಭಾರತದಲ್ಲಿ; ಅದರಲ್ಲಿಯೂ ಕಂದಮಿಳ ಶಾಖೆಗಳಲ್ಲಿ ಎಷ್ಟು ಸ್ಪಷ್ಟ ಹಾಗೂ ನಿಶ್ಚಿತ ರೂಪದಲ್ಲಿ ದೊರೆಯುತ್ತಿವೆಯೋ ಅಷ್ಟು. ಸಂಸ್ಕೃತದಲ್ಲಿ ಸಹ ಇಲ್ಲ ಎಂದು ಹೇಳಲು ಯಾವ ಆತಂಕವೂ ತೋರದು" ಕರ್ನಾಟಕದ ಸಂಸ್ಕೃತಿಯ ಪೂರ್ವಪೀಠಿಕೆ-ಶಂಬಾ ಜೋಶಿ, ಪುಟ : ೯೭ (೧೯೬೭) ಶಂಬಾ ಅವರ ಈ ಮಾತಿನೊಡನೆ ಎಂ. ಹರಮಾನ್ಸ್ ವೆಲರ್ ಅವರ ಮಾತು ಕೇಳಿ : "Sheep and Cattle are the oldest domesticated animals, and the first Centre of their domestication might have been in India" J.B.B.R.A.S. Vol. Part II (ಉದ್ಧೃತ ಶಂಬಾ ಅವರ ಮೇಲಿನ ಕೃತಿಯಿಂದ ಪು. ೯೭)

೧೦. "ಎಡೆಗಳ ಹೆಸರಿನ ಹಿನ್ನೆಲೆಯಲ್ಲಿ ನಮ್ಮ ನಾಡಿಗರ ರೂಢಿ, ಸಂಪ್ರದಾಯ ಮತ್ತು ಪೂರ್ವಪರಂಪರೆಗಳನ್ನು ಮಾನವ ಸಮಾಜವಿಕಾಸಶಾಸ್ತ್ರದ ಬೆಂಬಲದಿಂದ ಹೊಂದಿಸಿ ಹೇಳುವುದೇ ಈ ಲೇಖನದ ಗುರಿಯಾಗಿದೆ. ಇದಕ್ಕೆ ಆಧಾರವಾಗಿ ಇನ್ನುಳಿದ ಸಾಧನೆಗಳನ್ನು ಉಪಯೋಗಿಸಿಕೊಂಡಿದೆ. ಶಾಸನ, ಭಾಷಾಶಾಸ್ತ್ರ, ಸಾಹಿತ್ಯದ ಆಧಾರಗಳನ್ನು ನನ್ನ ಕೈಗೆ ನಿಲುಕಿದಷ್ಟು ಬಳಸಿಕೊಂಡಿದ್ದೇನೆ. ಇವಕ್ಕೆ ಪ್ರಥಮ ಪ್ರಾಶಸ್ತ್ಯವನ್ನು ಕೊಟ್ಟು ಪರಂಪರೆಗಳನ್ನು ಅಲ್ಲಗಳೆಯುವುದಕ್ಕೆ ಮನಸ್ಸು ಮಾಡಿಲ್ಲ. ಏಕೆಂದರೆ: ಸಂಪ್ರದಾಯ, ಪೂರ್ವ ಪರಂಪರೆಗಳು ಪ್ರತ್ಯಕ್ಷ ಜೀವನದ ಭಾಗವಾಗಿದ್ದು, ಶಾಸನಾದಿಗಳು ಅದರ ನೆಳಲು. ಆದುದರಿಂದ ಅವುಗಳಿಗೆ, ನನ್ನ ತಿಳುವಳಿಕೆಯಂತೆ ಗೌಣಸ್ಥಾನವಲ್ಲದೆ ಪ್ರಥಮ ಸ್ಥಾನವು ದೊರೆಯಲಾರದು". ಎಡೆಗಳು ಹೇಳುವ ಕಂನಾಡ ಕತೆ- ಕಂನಡ-ಕಂನಡು, ಸಂಪುಟ ೨ ಪುಟ:

೧೧. ನಮ್ಮಲ್ಲಿ 'ಸಂಶೋಧಕ'ರು ಸಿಗುತ್ತಾರೆ ನಿಜ; ಆದರೆ 'ಸಂಸ್ಕೃತಿ ಸಂಶೋಧಕ'ರು ಮತ್ತಷ್ಟು ದುರ್ಲಭ. ಅದರಲ್ಲೂ

'ಕಂನಾಡು' ಪರಿಕಲ್ಪನೆಯ ಮುಖಾಂತರ ಕನ್ನಡ ಸಂಸ್ಕೃತಿಯ ಆಳವನ್ನು ಹುಡುಕುವ ಶಂಬಾ ಅವರು ಆ ಕ್ಷೇತ್ರದ ಒಬ್ಬ ಒಂಟಿಸಲಗನಂತೆ ನಿಂತುಕೊಳ್ಳುತ್ತಾರೆ. ಶಂಬಾ ಅವರ 'ಕಂನಡ-ಕಂನಾಡು' ಪರಿಕಲ್ಪನೆಯ ತತ್ತ್ವಗ್ರಹಿಕೆ, ಅನ್ಯ ಸಂಸ್ಕೃತಿ ಚಿಂತಕರಿಗಿಂತ ಭಿನ್ನರಾಗುವುದಕ್ಕೆ ಸಾಧ್ಯವಾಗಿದೆ. ಹೀಗೆ ಸಾಧ್ಯವಾಗಿರುವುದರಿಂದಲೇ ಶಂಬಾ 'ಕಂನುಡಿ' ಮತ್ತು 'ಕಂನಾಡು' ಎಂಬ ಪರಿಕಲ್ಪನೆಯನ್ನು ಸುಲಭವಾಗಿ ಅಥವಾ ಸರಳವಾಗಿ ಬಳಸಲು ಹೋಗುವುದಿಲ್ಲ. ಒಂದು ಮಾತನ್ನು ಇಲ್ಲಿಯೇ ಸ್ಪಷ್ಟಪಡಿಸಿಬಿಡಬೇಕು. ಕನ್ನಡದಲ್ಲಿ ಶಂಬಾ ಅವರು 'ಕಣ್ಮರೆಯಾದ ಕನ್ನಡ'ಬರೆಯುವ ಕಾಲಕ್ಕೆ ಸಂಸ್ಕೃತಿ ಪರಿಕಲ್ಪನೆ, ಸಂಸ್ಕೃತಿಯ ಪುನಾರಚನೆಯ ಕಲ್ಪನೆ ಇನ್ನೂ ಒಂದು ನೆಲೆಗೆ ಬಂದಿರಲಿಲ್ಲ. ಈ ಅಂಶದ ವಿವರಗಳನ್ನು ಬಯಸುವವರು ಈ ಸಂಪಾದಕನ 'ಕಂನಾಡ-ಕರ್ನಾಟ'ದ ಮೊದಲ ಸಂಪುಟದ ಪ್ರಸ್ತಾವನೆ ಓದಬಹುದು. ಇಷ್ಟು ಮಾತ್ರವಲ್ಲ; ಅದರ ಪರಿಕಲ್ಪನೆಯೇ ತಳೆಗೆ ಹತ್ತಿರಲಿಲ್ಲವೆಂಬುದನ್ನು ನಾವು ತೀವ್ರವಾಗಿ ಗಮನಿಸಬೇಕು. ಕೇವಲ 'ಸಂಸ್ಕೃತಿ' ಎಂದರೆ, ರೂಪಕದ ಭಾಷೆಯಲ್ಲಿ ಹೇಳುವುದಾದರೆ 'ಭುಜ ತಟ್ಟಿ'ಕೊಳ್ಳುವ ಆವೇಶದಲ್ಲಿ ಮುಳುಗಿದ್ದ ಸಂದರ್ಭ ಮಾತ್ರ. "ತನ್ನ ಸಂಸ್ಕೃತಿ ದೊಡ್ಡದು" ಎಂಬ ಭಾವಾವೇಶವೇ ಸಂಶೋಧನ ಮತ್ತು ವಿಶ್ಲೇಷಣಗಳ ಪೂರ್ವಗ್ರಹಿಕೆಯಾಗಿದ್ದುದರಿಂದ ಕನ್ನಡ ಮತ್ತು ಕರ್ನಾಟಕ ಪದಗಳ ಚರ್ಚೆ, ನ,ಣಗಳ ಬೇಕು-ಬೇಡ, ತಪ್ಪು-ಸರಿ: ಇಂಥ ಮಾದರಿಯ ಚರ್ಚೆಗಳು ನಡೆಯಲು ಸಾಧ್ಯವಾಯಿತೇ ಹೊರತು; ಅದರಾಚೆಗೆ ದಾಟುವುದಕ್ಕೆ ಸಾಧ್ಯವಾಗಲಿಲ್ಲ-ಎಂಬುದನ್ನು ನಾವು ಮರೆತು ನಡೆಯುವಂತಿಲ್ಲ. ಈಗ ನಾವು ಈ ಬಗೆಯ ಚರ್ಚೆಯಿಂದ ಪೂರ ಮುಕ್ತವಾಗಿದ್ದೇವೆಂದು ಹೇಳಲು ಧೈರ್ಯವಿಲ್ಲ. ಆದರೆ, ಒಂದಂತೂ ಸತ್ಯ. ನಾವು ಈಗ ಇಡುತ್ತಿರುವ ಹೆಜ್ಜೆಗಳಲ್ಲಿ ಅಂತರ್‌ಶಿಸ್ತೀಯ ನೆಲೆಗಳು ಬಂದು ಕೂಡಿವೆ. ಅವುಗಳ ಮುಂದಿನ ಬೆಳವಣಿಗೆ ಹೇಗೆ ಎಂಬುದು ಚರಿತ್ರೆಯ ಮಾತು.

ಕಂನಡ-ಕಂನುಡಿ ವ್ಯಾಖ್ಯಾನ

ಈ ಸರಣಿಯ ಮೊದಲ ಸಂಪುಟದಲ್ಲಿ ಶಂಬಾ ಜೋಶಿ ಅವರ ಕಂನಾಡು-ಕರ್ನಾಟ ನೆಲೆಗಳನ್ನು ಕುರಿತು ಪರಿಶೀಲಿಸಿದ್ದಾಯಿತು. ಈ ಸಂಪುಟವು ಆ ನೆಲೆಗಳ ಮುಂದುವರಿಕೆಯೇ ಆಗಿದೆ. 'ಕಂನುಡಿ ಕಂನಡ' ಎಂಬ ಮುಖ್ಯ ಪರಿಕಲ್ಪನೆಗಳ ಮೇಲೆ ಒತ್ತು ನೀಡಿದೆ. ಈ ಅಂಶವನ್ನು ಪರಿಗಣಿಸಿ ಮೊದಲು 'ಕಂನಡ' ಎಂಬ ಪರಿಕಲ್ಪನೆಯ ಚಾರಿತ್ರಿಕ ವ್ಯುತ್ಪತ್ತಿ ಎಳೆಗಳನ್ನು ಕುರಿತು ಕೆಲವು ಸಂಗತಿಗಳನ್ನು ಈಗ ಮಂಡಿಸಬಹುದು. ಶಂಬಾ ಜೋಶಿ ಹಾಗೂ ಅವರ ಸಮಕಾಲೀನರು ಈ ಪರಿಕಲ್ಪನೆ ಕುರಿತು ತಾಳಿದ ನಿಲುವುಗಳನ್ನು ತಲುಪಿದ ಸಂಗತಿಗಳನ್ನು ಹೀಗೆ ಸಂಗ್ರಹಿಸಬಹುದು:

(ಅ) ಕರ್ನಾಟ (ಕ) ಎಂಬ ಪದಕ್ಕೆ ಸಂಸ್ಕೃತ ಮೂಲವಾಗಿ ನಿಷ್ಪತ್ತಿ ನೀಡುವ ಕೆಲವು ಉಲ್ಲೇಖಗಳುಂಟು. ಅವುಗಳಲ್ಲಿ 'ಶಬ್ದರತ್ನಾವಲಿ'ಯು "ಕರ್ಣೇಷು ಅಟತಿ ಪ್ರಭೂತ ಯಶಸ್ವಿನ ಏತದ್ದೇಶಸ್ಯ ರಾಜ್ಞೋ ಗುಣಾದಿ ಕೀರ್ತನೇನ ಸರ್ವೇಷಾಂ ಕರ್ಣೇಷು ಭ್ರಮತೀತಿ, ಕರ್ಣ್+ಅಟ್+ಅಚ್ ಇದರ ಸ್ಥೂಲಾರ್ಥ ಹೀಗೆ: ಯಾವ ದೇಶದ ರಾಜನ ಕೀರ್ತಿಯು ಎಲ್ಲರ ಕಿವಿಯಲ್ಲಿಯೂ ಮೊಳಗುತ್ತಿರುವುದೋ ಆ ದೇಶ. ಕ್ರಿ. ಶ. ೧೩೫೯ರಲ್ಲಿ ಇದ್ದ ಕೇಶವವರ್ಣಿ ಎಂಬ ಜೈನಪಂಡಿತನು ಭೇದನಾರ್ಥಕವಾದ ಕರ್ಣ ಧಾತುವಿನಿಂದ ಕರ್ಣಾಟ ಪದವಾಯಿತೆಂದು ದಿವ್ಯಭಾಷೆಯಿಂದ ಬೇರೆಯಾಗಿ, ವ್ಯವಹಾರದಲ್ಲಿರುವ ಭಾಷೆಯೆಂದೂ ಹೇಳಿದ್ದಾನೆ. ವಿಶ್ವಗುಣಾದರ್ಶ ಚಂಪೂವೆಂಬ ಕೃತಿಯಲ್ಲಿ ವೇಂಕಟಾಧ್ವರಿಯು:

'ಚಿಂತನಶೀಲ ಸಂಸ್ಕೃತಿ ಸಂಶೋಧಕ'ರು ಇಲ್ಲವೆಂದೇ ಹೇಳಬಹುದು. ಶಂಬಾ ಅವರು ಉಳಿದ ಶೋಧಕರಿಗಿಂತ ಒಂಟಿ ಜೀವವಾಗಿ ನಿಲ್ಲುವುದರ ಕಾರಣ ಮೀಮಾಂಸೆಯೂ ಇದರ ಹಿನ್ನೆಲೆಯಲ್ಲಿ ಇದೆ--ಎಂದು ಹೇಳಿದರೆ ಸತ್ಯವನ್ನು ಮರೆಮಾಚಿದಂತೆ ಆಗುವುದಿಲ್ಲ.

ಕರ್ಣಾಟಕದೇಶೋ ಯಃ ಪೂರ್ವಂ ಕರ್ಣದೇಶಮಭೂಷಯತ್।
ಸ ಏಷ ಸಾಂಪ್ರತಂ ಪಶ್ಯ ಚಕ್ಷುಷೋರ್ಭೂಷಣಾಯತೇ॥

(ಶ್ಲೋಕ ೨೪೯)

ಕರ್ಣಯೋಃ ಅಟತೀತಿ ಕರ್ಣಾಟಃ, ಅಟ ಗತೌ ಇತಿ
ಧಾತೋಃ ನಿಷ್ಪನ್ನಶ್ಶಬ್ದಃ

ಎಂಬ ನಿರೂಪಣೆಗಳುಂಟು. ಇದು ಪ್ರಾಚೀನರು 'ಕರ್ಣಾಟ' ಎಂಬ ಪದಕ್ಕೆ ನೀಡುವ ನಿಷ್‌ಪತ್ತಿಗಳು ಹಾಗೂ ವಿವರಣೆಗಳು.

ಆ) ಇನ್ನು ಆಧುನಿಕರು ಹೇಳುವ ಅಂಶಗಳು ಹೀಗಿವೆ. ಕನ್ನಡ ಎಂಬುದು ದೇಶ್ಯ ಶಬ್ದ. ಇದು ಕರ್ಣಾಟ ಎಂಬ ಸಂಸ್ಕೃತ ರೂಪವನ್ನು ಧಾರಣೆ ಮಾಡಿತೆಂದು ಖಚಿತವಾಗಿ ಹೇಳುತ್ತಾರೆ. ಕನ್ನಡ ಎಂಬುದು ದ್ವಿರುಕ್ತಿದೋಷದಿಂದ ಕೂಡಿದ್ದೆಂದು ಶಂಬಾ ಜೋಶಿ ವಾದಿಸುತ್ತಾರೆ. ಅವರ ವಾದಗಳು ಈ ಸಂಪುಟದ 'ಕಂನಡದ ನೆಲೆ' ಹಾಗೂ 'ಎಡೆಗಳು ಹೇಳುವ ಕಂನಾಡ ಕತೆ' ಎಂಬ ಎರಡು ಕೃತಿಗಳಲ್ಲೂ ಈ ಚರ್ಚೆಗಳು ವಿವರವಾಗಿ ಬಂದಿವೆ. ಆದರೆ, 'ಕಂನಡ' ಎಂಬ ಪರಿಭಾಷೆ ಯುಕ್ತವೆಂದೂ 'ಕಂನುಡಿ' ಎಂಬ ಪದವು ಪೋಷಕವೆಂದೂ ವಿವರಿಸುತ್ತಾರೆ. ಈ ಅಂಶಗಳಿಗೂ ಮೊದಲು ಆಧುನಿಕ ಭಾಷಾ ವಿದ್ವಾಂಸರು ನಿರ್ಣಯರೂಪ ತಾಳುವ ಕೆಲವು ಅಂಶಗಳನ್ನು ನೋಡಬಹುದು.

೧. ರಾಬರ್ಟ್ ಕಾಲ್ಡ್‌ವೆಲ್ : ದಕ್ಷಿಣ ದಖನಿನ ನೆಲವು ಕಪ್ಪುಭೂಮಿಯಾಗಿದೆ, ಆದ್ದರಿಂದ ಇದು ಕರ್ ನಾಡು (=ಕಪ್ಪು ನಾಡು). ಇದು ಕರ್ಣಾಟ ಎಂಬ ಪದದ ಮೂಲರೂಪ. ಇದು ಗುಂಡರ್ಟ್ ಸಾಹೇಬರಿಂದ ಪ್ರೇರಿತ ನಿಷ್ಪತ್ತಿ.

೨. ಎಚ್. ನಾರಾಯಣರಾಯ : ಕನ್ನಡ ನಾಡು ಸಮುದ್ರ ಮಟ್ಟಕ್ಕಿಂತ ಎತ್ತರವಾಗಿ ಘಟ್ಟದ ಮೇಲಿದೆ. ಇದರಿಂದ ಕರುನಾಡು (=ಎತ್ತರವಾದ ನಾಡು) ಇದು ಮುಂದೆ ದ್ರಾವಿಡ ಭಾಷೆಗಳಲ್ಲಿ 'ಕನ್ನಡ' ಎಂದೂ ಸಂಸ್ಕೃತದಲ್ಲಿ ಕರ್ಣಾಟ ಎಂದೂ ಪರಿವರ್ತಿತವಾಗಿದೆ.

೩. ಆರ್. ತಾತಾಚಾರ್ಯ : ಕರುನಡಂ ಎಂಬುದೂ ಕನ್ನಡಂ ಎಂಬುದೂ ತಮಿಳು ಲಕ್ಷಣ ಗ್ರಂಥಗಳಲ್ಲಿ ವೃತ್ತಿಗಳಲ್ಲಿ ಉಕ್ತವಾಗಿವೆ. ತಮಿಳಿನಲ್ಲಿ ಕರು ಎಂದರೆ ಬೆಟ್ಟ. ಕೀಲ್ನಾಡಿನವರಾದ ತಮಿಳರು ಮೇಲ್ನಾಡನ್ನು ಕರುನಾಡು-ಕರುನಡಂ, ಎಂದು ಕರೆದಿರಬಹುದು. ಕನ್ನಡಕ್ಕೆ ನಿಷ್ಪತ್ತಿ ಬೇರೆ ಕಮ್ಮಿತು+ನಡೆ = ಕಂ ನಡೆ> ಕನ್ನಡ

೪. ಎಂ. ಗೋವಿಂದ ಪೈ : ಕರಂ, ಕರು, ಕಡು ಎಂಬುವು ದೊಡ್ಡ, ವಿಸ್ತಾರವಾದ ಮಹಾ ಎಂಬ ಅರ್ಥವನ್ನು ಕೊಡುವ ಪದಗಳು. ಆದ್ದರಿಂದ 'ಕರುನಾಡು' ಎಂದರೆ ಮಹಾರಾಷ್ಟ್ರ. ಕರು+ನಾಡು>ಕರ್> ನಾಡು>ಕರ್ನಾಡು (=ದೊಡ್ಡದೇಶ) ಎಂಬ ಕನ್ನಡ ಸಮಾಸ ಪದವೇ ಸಂಸ್ಕೃತದಲ್ಲಿ 'ಕರ್ಣಾಟ' ಎಂದಾಗಿರಬೇಕು. ಈ ಅಂಶಗಳಿಗೆ ರಾ-ಹ-ದೇಶಪಾಂಡೆ ಮತ್ತು ಮಾಸ್ತರ್ ಎಂಬುವರ ಅಭಿಪ್ರಾಯಗಳು ಸಮನಾಗಿವೆ.

೫. ರಾ. ನರಸಿಂಹಾಚಾರ್ಯ : ಕಮ್ಮಿತು+ನಾಡು = ಕನ್ನಾಡು>ಕನ್ನಡು>ಕನ್ನಡ. ಕನ್ನಡದೇಶವು ಗಂಧದ ಮರದ ಕಾಡುಗಳಿಂದಲೂ ತಾವರೆ ಕೊಳಗಳಿಂದಲೂ ಕೂಡಿದೆ. ಆದ್ದರಿಂದ, ಕಮ್ಮಿತು ಎಂಬ ವಿಶೇಷಣ ಈ ನಾಡಿಗೆ ಅನುರೂಪವೆಂದು ಬಗೆದಿದ್ದಾರೆ.

೬. ಬಿ. ಎಂ. ಶ್ರೀಕಂಠಯ್ಯ : ಕರ್+ನಾಟ್+ಅಗಂ ಎಂದರೆ ಕರಿಯ ನಾಡನ್ನೂ ಒಳಗೊಂಡ ಪ್ರದೇಶ. ಇದು ಗುಂಡರ್ಟ್ ಅವರ ಅಭಿಪ್ರಾಯವನ್ನೇ ಪೋಷಿಸುತ್ತದೆ.

೭. ಫಾದರ್ ಹೆರಾಸ್ : ಕಣ್ ನಿರ್ ಪದದ ಸಂಸ್ಕೃತರೂಪವೇ 'ಕರ್ಣಾಟಕ' ಆಗಿರಬಹುದೆಂದು ಹೇಳುತ್ತಾರೆ.

೮. ದ. ರಾ. ಬೇಂದ್ರೆ ಹಾಗೂ ಬೆಟಗೇರಿ ಕೃಷ್ಣಶರ್ಮರು : ಕನ್ (ಎಂದರೆ ಕಾಣು ಅಥವಾ ಒಡಮೂಡು) ಎಂಬ ಧಾತುವಿನಿಂದ ಕನ್ನಡ ಹುಟ್ಟಿದೆ. ಕನ್+ಅಳ್ = ಕನ್ನಳ್, ಕನ್ನಡ್ ಕನ್ನಡ : ಕನ್+ಅಳ್ ಇದರ ಅರ್ಥ ಒಡಮೂಡುವುದನ್ನು ಉಳ್ಳದ್ದು. ಆದುದರಿಂದ ಭಾವಗಳನ್ನು ಒಡಮೂಡಿಸುವುದು ಯಾವುದೋ ಅದು ಕನ್ನಡ.

೯. ಪಂಡಿತ ಮುಳಿಯ ತಿಮ್ಮಪ್ಪಯ್ಯ : ಕರ್ ಅಥವಾ ಕನ್ ಎಂಬ ದಸ್ಯುವರ್ಗದಿಂದ ಕನ್ನಡ ಎಂದು ಹೆಸರಾಗಿರಬಹುದು. ಕರು ಪದಕ್ಕೆ ಎತ್ತರ, ಶಿಖರ ಎಂಬ ಅರ್ಥಗಳಿವೆ. ಕನ್ ಮತ್ತು ಕರ್ ಎಂಬ ರೂಪಗಳು ಅಭಿನ್ನ. ಆದ್ದರಿಂದ, ಕನ್+ನಾಡು= ಕನ್ನಡ (ಕನ್ನಡ) : ಕರ್+ನಾಡು=ಕರುನಾಡು ಕಱುತಳದ ನಾಟರೆ ಕನ್ನಡಿಗರು. ಆದಿಜನಾಂಗದೊಳಗಿನವರಾದ ಕನ್ ಮತ್ತು ನಾಟರು ಬೆರೆತು ಕನ್ನಡಿಗರು ಎನಿಸಿರಬಹುದು.

೧೦. ಬಿ. ಎ. ಸಾಲೆತೊರೆ : ಕನ್ನಾಡು ಅಥವಾ ಕರ್ನಾಡು ಎಂಬ ಪದದ ಮೂಲ ಅರ್ಥ ಒಂದು ಮಹಾನಾಡು ಅಥವಾ ಎತ್ತರವಾದ ನಾಡು ಆಗಿದ್ದು, ಅದನ್ನು ಸಂಸ್ಕೃತಕ್ಕೆ ತಿರುಗಿಸಿದಾಗ ಕರ್ನಾಟ, ಕರ್ಣಾಟಕ, ಮಹಾರಾಷ್ಟ್ರ ಆಗಿರಬೇಕು.

೧೧. ತೀ ನಂ. ಶ್ರೀಕಂಠಯ್ಯ : ಕರ್ಣಾ(ನಾ)ಟ, ಕಣಾ(ನಾ)ಟಕ ಶಬ್ದಗಳು ಮೂಲತಃ ಸಂಸ್ಕೃತ ಶಬ್ದಗಳಲ್ಲ. ಪುನ್ನಾಡು ಸಂಸ್ಕೃತಕ್ಕೆ ಬರುವಾಗ ಪುನ್ನಾಟ ಆದಂತೆ ಕರ್ನಾಡು ಎಂಬ ದೇಶ್ಯಶಬ್ದ ಸಂಸ್ಕೃತಜ್ಞರ ಉಚ್ಚಾರಣೆಯಲ್ಲಿ ಕಣಾ(ನಾ)ಟ ಎಂಬ ರೂಪವನ್ನು ತಾಳಿರಬೇಕು.

೧೨. ಶಂ. ಬಾ. ಜೋಶಿ : ಳ, ಣ ಮತ್ತು ನ ಗಳಲ್ಲಿ ಪರಸ್ಪರ ಪಲ್ಲಟವುಂಟು. ಕಳವರು (ಕಳ್ವರು ಅಥವಾ ಕಳ್ಳರು=ಕಳಭ್ರರು) ಎಂಬ ದ್ರಾವಿಡ ವರ್ಗದ ಬಹುಪ್ರಾಚೀನ ಶಾಖೆಯ ಜನಾಂಗವೇ ಕಣ್ಣರು ಅಥವ ಕನ್ನರು. ಕನ್ನಡ ನಾಡು ಕನ್ನಾಡು (ಕಂನಡ) ಇದು ಮುಂದೆ ಕನ್ನಾಡು ಕನ್ನಾಟ ಕರ್ಣಾಟ ಈ ಕ್ರಮದಿಂದ ಸಂಸ್ಕೃತದಲ್ಲಿ ಸೇರಿಕೊಂಡಿದೆ. ಕರ್ಣಾಟಕದಲ್ಲಿರುವ ದ್ವಿರುಕ್ತಿದೋಷ ಕನ್ನಾಡು-ಎಂಬ ರೂಪದಲ್ಲಿ ಸ್ವಲ್ಪವೂ ಇಲ್ಲ. ಇದು ಶಂಬಾ ಅವರ ನಿಲುವು. ಶಂಬಾ ಅವರು ಈ ಹಿಂದಿನ ಎಲ್ಲ ವಿದ್ವಾಂಸರ ವಿವರಗಳನ್ನು ಪರಿಶೀಲಿಸಿ ಒಂದೆರಡರ ಕೊರತೆಯ ಎಡೆಗಳನ್ನು ತೋರಿಸಿದ್ದಾರೆ. ತಮ್ಮ ನಿಲುವಿಗಾಗಿ ಜನಾಂಗ, ಪ್ರಾಚೀನ ಸ್ಮೃತಿ, ಪುರಾಣ, ಎಡೆಗಳ ಹೆಸರು, ಕಾವ್ಯ-ಶಾಸನಾದಿಗಳ ವಿವರಗಳು ಹಾಗೂ ಬುಡಕಟ್ಟುಗಳ ವಿವರಗಳನ್ನೂ ಹೇರಳವಾಗಿಯೂ ವಿಪುಲವಾಗಿಯೂ ಬಳಸಿಕೊಂಡಿದ್ದಾರೆ.

ಈ ಹಿನ್ನೆಲೆಯಲ್ಲಿ ಶಂಬಾ ಅವರು ಕಂನುಡಿ-ಕಂನಡಗಳ ಮುಖಾಂತರ ಅವರು ತಲುಪಿದ ಸಂಗತಿಗಳನ್ನು ಹೀಗೆ ಸಂಗ್ರಹವಾಗಿ ಹೇಳಬಹುದು. ಬೃಹತ್‌ಸಂಹಿತೆ ಮತ್ತು ಮಹಾಭಾರತವೇ ಮೊದಲಾದ ಕೃತಿಗಳಲ್ಲಿ ಕರ್ಣಾಟ ದೇಶವನ್ನು ವನವಾಸಿ, ಕುಂತಲ, ಮಹಿಷಮಂಡಲ-ಎಂಬ ಮಾತುಗಳಿಂದ ಬೇರೆಯಾಗಿಯೇ ಹೇಳಿದೆ. ಈಗ ಇವೆಲ್ಲ ಕನ್ನಡನಾಡಿನಲ್ಲಿ ಸೇರಿ ಹೋಗಿದ್ದರೂ ಮಹಾಭಾರತದ ಕಾಲಕ್ಕೆ ಕರ್ಣಾಟವೆಂಬ ಪ್ರದೇಶವೇ ಬೇರೆ ಇದ್ದಿರಬೇಕಷ್ಟೆ. ನೃಪತುಂಗ ಹೇಳುವ ಪ್ರಕಾರ ಕಾವೇರಿಯಿಂದ ಗೋದಾವರಿಯ ವರೆಗಿನ ನಾಡು ಕನ್ನಡ ಜನಪದ. ಅನೇಕ ಒಳನಾಡುಗಳು ಈ ಎರಡೂ ನದಿಗಳ ನಡುವೆ ಇದ್ದಿರಬೇಕು. ಕಾವೇರಿಯಿಂದ ದಕ್ಷಿಣಕ್ಕಿರುವುದು ತಮಿಳುನಾಡು; ಅಲ್ಲಿ ಕರ್ನಾಟಕಕ್ಕೆ ಅವಕಾಶ ಇಲ್ಲ. ಆದ್ದರಿಂದ, ಗೋದಾವರಿಯಿಂದ ಉತ್ತರಕ್ಕೆ ಕಂನಾಡು ಇದ್ದಿರಬೇಕು. ಆಂಡಯ್ಯನು ತನ್ನ 'ಕಬ್ಬಿಗರ ಕಾವ'ದಲ್ಲಿ 'ಕನ್ನಡಮೆನಿಪ್ಪಾ ನಾಡು' ಎಂದು ಹೇಳುತ್ತಾನೆ. ಉತ್ತರ-ದಕ್ಷಿಣ ಕನ್ನಡ ಜಿಲ್ಲೆಗಳೆಂಬುದು ಸರ್ವಶ್ರುತ. ಈ ಪ್ರದೇಶವನ್ನು ಒಂದೊಂದು ಕಾಲದಲ್ಲಿ ಒಂದೊಂದು ಹೆಸರಿನಿಂದ ಕರೆಯುತ್ತಿದ್ದರು. ಆದ್ದರಿಂದ, ಈ ಹೆಸರು ಹೆಚ್ಚು-ಕಡಿಮೆ ೧೩ನೆಯ ಶತಮಾನದ ಆಂಡಯ್ಯನ ಕಾಲದಲ್ಲಿ ದೃಢವಾಗಿರಬೇಕು. ಬಿಜಾಪುರ ಜಿಲ್ಲೆಯಲ್ಲಿ ಕ್ರಿ. ಶ. ೧೨೧೦ರಲ್ಲಿ ಹುಟ್ಟಿದ ಒಂದು ಶಾಸನದಿಂದ 'ಕನ್ನಡ ನಾಲ್ಸಾಯಿರ' ನಾಡೊಂದು ಇದ್ದಿರಬೇಕೆಂಬುದು ತಿಳಿದು ಬರುತ್ತದೆ. ಕ್ರಿ. ಶ. ೧೨೧೦ಕ್ಕೆ ಹಿಂದೆ, ಬಿಜ್ಜಳನ

ಕಾಲದಲ್ಲಿ 'ತರ್ದೇವಾಡಿ' ಎಂಬ ಹೆಸರಿತ್ತು. ಹಿಂದೆ ಹೇಳಿದಂತೆ 'ಕರ್ಣಾಟ'ವು ಗೋದಾವರಿಯಿಂದ ಉತ್ತರಕ್ಕೆ ಇದ್ದಿರಬೇಕು.

ಆದ್ದರಿಂದ, ಗೋದಾವರಿಯಿಂದ ಉತ್ತರಕ್ಕೆ ಕನ್ನಡದ ಕುರುಹುಗಳು ಇದ್ದೇ ತೀರಬೇಕು. ಇವನ್ನು ವಿಂಗಡಿಸಿ ತೋರಿಸುವ ಮುನ್ನ ಮತ್ತೊಂದು ಸಮಸ್ಯೆ ಅಥವಾ ಸಿಕ್ಕು ಬಿಡಿಸಿಕೊಳ್ಳಬೇಕಾಗಿದೆ. ಆರ್ಯರ ಕಾಲದಲ್ಲಿ, ದಕ್ಷಿಣಾ ಪಥದಲ್ಲಿ ಎಂದರೆ ವಿಂಧ್ಯಗಿರಿಯಿಂದ ಕೆಳಭಾಗಕ್ಕೆ ಇದ್ದ ಜನ ಯಾರು? ಆರ್ಯರೇನೋ ಆರಂಭದಲ್ಲಿ ಎಲ್ಲರನ್ನೂ 'ಆಂಧ್ರ'ರೆಂದು ಕರೆದರು ನಿಜ, ಆದರೆ, ಕಾಲಕಳೆದ ಹಾಗೆಲ್ಲ ಬಳಕೆ ಮತ್ತು ಬೆರಕೆಗಳು ಹೆಚ್ಚಾದಂತೆಲ್ಲ ಅದೇ ಆಂಧ್ರದಲ್ಲಿ ಒಳಭೇದಗಳು ಹೆಚ್ಚಾದುವಷ್ಟೆ. ಅಂದಿನಿಂದ 'ಆಂಧ್ರ' ಎಂಬ ಮಾತು ಹಿಂದೆ ಉಳಿದು 'ಕರ್ನಾಟ-ದ್ರವಿಡ' ತಲೆಯೆತ್ತಿ ಮೆರೆಯಲಾರಂಭಿಸಿತ್ತು. 'ಆಂಧ್ರ'ಕ್ಕೆ ತೆಲುಗು ಎಂಬ ಹೆಸರು ಪ್ರಾಪ್ತವಾಗುವ ಮುನ್ನ ಅದು ಇನ್ನೂ ಬಾಲ್ಯಾವಸ್ಥೆಯಲ್ಲೇ ಇತ್ತು. ತೆಲುಗಿಗೆ ತವರು ಮನೆಯಾದ 'ವೆಂಗಿಮಂಡಲ' ೧೨ನೆಯ ಶತಮಾನದ ವರೆಗೂ ಕನ್ನಡ ಕವಿಗಳ ಜನ್ಮಭೂಮಿ. ನೃಪತುಂಗನ ಕಾಲಕ್ಕೆ ಈ ವೆಂಗಿಮಂಡಲ ಕನ್ನಡದಲ್ಲಿಯೇ ಸೇರಿ ಹೋಗಿತ್ತು. ಅದರ ಸಾಹಿತ್ಯಕೃಷಿ ಹನ್ನೊಂದನೆಯ ಶತಮಾನದ ವರೆಗೂ ತಲೆದೋರಲಿಲ್ಲ ಎಂಬುದನ್ನು ಗಮನಿಸಬೇಕು. ಅನಂತರ ತಲೆದೋರಿದ್ದು ಕನ್ನಡರ ಕೃಷಿಯಿಂದ ತಾನೆ? ಇದಕ್ಕೆ ಇನ್ನೊಂದು ದಿಕ್ಕಿನಿಂದ ಆಧಾರವಿದೆ. ಒಂಬತ್ತನೆಯ ಶತಮಾನದ ವರೆಗೂ ತೆಲುಗು ರಾಜರಿಗೂ ಸಾಮಂತರಿಗೂ ಕನ್ನಡ ಬಿರುದುಗಳೇ ಇದ್ದುವು. ಇದನ್ನು ನಾವು ಗಮನಿಸಬೇಕು. ಈ ಕಾರಣಗಳಿಂದ ಪ್ರಾಚೀನ ಕಾಲದಲ್ಲಿ ತೆಲುಗು ಭಾಷೆಯು ವಿಂಧ್ಯದಿಂದ ನೀಲಗಿರಿಯ ವರೆಗೂ ತಲೆಯೆತ್ತಿ ಮೆರೆಯುತ್ತಿದ್ದಿಲ್ಲ. ತೆಲುಗಿಗೆ ತೆಲುಗು ಧಾತುವಿನಿಂದಲೇ ಸಿದ್ಧವಾದ ದೇಶವಾಚಕ ಶಬ್ದವಿಲ್ಲದಿರುವುದನ್ನು ಗಮನಿಸಬೇಕು. ತೆಲುಗು ಜನರು ರಾಷ್ಟ್ರ ಕಟ್ಟಿಕೊಂಡು ಬಾಳಿದವರಲ್ಲ. ಮರಾಠಿಯ ಪಾಡೂ ತೆಲುಗರಂತೆಯೇ ಆಯಿತು. ಏಳು ಮತ್ತು ಎಂಟನೆಯ ಶತಮಾನದ ವರೆಗೂ ತೆಲುಗು-ಮಹಾರಾಷ್ಟ್ರ ಹಸುಗೂಸುಗಳೇ. ಕಂನಾಡಿನಲ್ಲೆ ಇದ್ದು ಹೊಸ ವಿಸ್ತರಣವನ್ನು ಮರ್‍ಹಾಟ ಪಡೆಯಿತೆಂಬುದು ಈಗ ಚಾರಿತ್ರಿಕವಾಗಿ ಒಪ್ಪಿಕೊಳ್ಳುತ್ತಿರುವ ಸಂಗತಿ. ದ್ರಾವಿಡರು ಎಂದರೆ ಯಾರು? ತಮಿಳರು ಮಾತ್ರ. ಇವರು ಕಾವೇರಿಯಿಂದ ಉತ್ತರಕ್ಕೆ ಬಂದವರೇ ಅಲ್ಲ. ಬಾದಾಮಿಯವರೆಗೂ ಒಂದು ಸಲ ದಂಡೆತ್ತಿ ಬಂದಿದ್ದರೂ ಅವರು ಮಾತ್ರ ಇಲ್ಲಿ ನೆಲೆಯೂರಲಿಲ್ಲ.

ಇನ್ನು ಪ್ರಾಕೃತದ ಮಾತು. ಇದರ ಅವತಾರ ಕ್ರಿ.ಶ. ನಾಲ್ಕು-ಐದು ಶತಮಾನಗಳ ಹೊತ್ತಿಗೆ ಮುಗಿದು ಹೋಗಿತ್ತು. ಅಲ್ಲದೆ, ಅದು ದಕ್ಷಿಣಾಪಥದ ಜನರ ಮನೆ ಮಾತು ಪ್ರಾಕೃತ ಆಗಿರಲಿಲ್ಲ, ಎಂಬುದನ್ನು ನಾವು ಗಮನಿಸಬೇಕಾಗಿದೆ. ಇನ್ನುಳಿದದ್ದು ಕನ್ನಡವೊಂದೇ. ಈ ಭಾಷೆಯೇ, ಈ ಕಂನಡ ಜನಾಂಗವೇ ಪ್ರಾಚೀನ ಕಾಲದಲ್ಲಿ ವಿಂಧ್ಯ-ಕಾವೇರಿಯ ವರೆಗೂ ಹಬ್ಬಿಕೊಂಡಿರಬೇಕು. ಆರ್ಯರ ಹೊಡೆತಕ್ಕೆ ಮೊದಲು ಸಿಕ್ಕವರೇ ಇವರು. ಅಂದಿನಿಂದ ಕನ್ನಡಿಗರು ನರ್ಮದಾ ಪ್ರದೇಶದಿಂದ ಸ್ಥಾನ ಕಳೆದುಕೊಳ್ಳುತ್ತ ಬಂದರು. ಗೋದಾವರಿ ನರ್ಮದೆಗಳ ನಡುವೆ ಆರ್ಯರು ಕಾಲೂರಿದರು. ಕನ್ನಡವು ಗೋದಾವರಿಯಿಂದ ಕೆಳಕ್ಕಿಳಿಯಿತು. ಆದ್ದರಿಂದ, ಕನ್ನಡದ ಮೂಲಸ್ಥಾನ ಪ್ರಾಚೀನ ಕಾಲದಲ್ಲಿ ನರ್ಮದಾ ನದಿಯ ತೀರಪ್ರಾಂತವೇ ಇದ್ದಿರಬೇಕು. ಇದನ್ನು ಸ್ಪಷ್ಟಪಡಿಸುವುದಕ್ಕೆ ಉಪಲಬ್ಧ ಆಧಾರಗಳಂತೂ ಬೇಕಾದಷ್ಟಿವೆ. ಇದನ್ನು ನಾವು ಸಂಗ್ರಹಿಸಿ ಹೀಗೆ ಪರಿಶೀಲಿಸ ಬಹುದು. ೧. ಕುರುಬರೂ ಮಲೆಯರೂ ಮಧ್ಯಪ್ರಾಂತದಲ್ಲಿ ಇನ್ನೂ ಇದ್ದಾರೆ. ಇವರ ಭಾಷೆಯಲ್ಲಿ ಹಳಗನ್ನಡ ಸರ್ವನಾಮಗಳು ಈಗಲೂ ಬಳಕೆಯಲ್ಲಿವೆ. ಕರ್ನಾಟಕದಿಂದ ಬಂದವರು ಈ ಸ್ಥಳಕ್ಕೆ ನರ್ಮದಾ ನದಿಯನ್ನು ದಾಟಿ ಬಂದರಂತೆ. ನಡುವೆ ಗೋದಾವರಿ ಇವರಿಗೆ ಸಿಗಲಿಲ್ಲ. ಆದ್ದರಿಂದ, ಗೋದಾವರಿಯ ಉತ್ತರಕ್ಕೆ ಕರ್ಣಾಟ. ನೀಲಗಿರಿಯ ನುಡಿಗೂ ಇವರ ನುಡಿಗೂ ಅತಿ ಹತ್ತಿರದ ಸಂಬಂಧವಿದೆ! ೨. ಕುರುಬರೂ ಹೊಲೆಯರೂ ಗೊಲ್ಲರೂ-ವರ್‍ಹಾಡ- ನಾಗಪೂರದ ನಿವಾಸಿಗಳು, ಇವರ ಇಂದಿನ ಬಳಕೆ ಬಿಜಾಪುರದ ಕನ್ನಡವನ್ನೇ ಹೋಲುತ್ತದೆ. ಇವರ ಭಾಷೆಗೂ ನೀಲಗಿರಿಯ ಬಡಗರ ಮಾತಿಗೂ ಪರಸ್ಪರ ಸಾಮ್ಯ ಇರುವುದರಿಂದ ಬಡಗರು ಈ ಪ್ರದೇಶಗಳಿಂದ

ಒಂದಾನೊಂದು ಕಾಲದಲ್ಲಿ ಬಂದು ನೀಲಗಿರಿಯಲ್ಲಿ ನೆಲೆಸಿರಬೇಕು. ೩. ಹಳಬರು ಅಥವಾ ಹಳೆಪೈಕರು-ವರ್ಹಾಡ ಮಧ್ಯಪ್ರಾಂತಗಳಲ್ಲಿ ಸುಮಾರು ಒಂದು ಲಕ್ಷ ಜನರಿದ್ದಾರೆ. ಈಗ ಇವರು 'ಹಳಬಿ' ಭಾಷೆಯೆಂಬ ಒಂದು ಬಗೆಯ ಮಿಶ್ರಭಾಷೆಯನ್ನು ಆಡುತ್ತಾರೆ. ಬನವಾಸಿ, ತುಳುನಾಡುಗಳಲ್ಲಿರುವ ಈ ಪಂಗಡದ ಜನರು ಕಲ್ಬುರ್ಗಿಯಿಂದ ಬಂದವರೆಂದು ಹೇಳಿಕೊಳ್ಳುವುದರಿಂದ ಒಂದು ಕಾಲಕ್ಕೆ ಇವರ ಮಾತು ಕಂನಡವೇ ಆಗಿರಬೇಕು. ಆದರೆ, ವಾಸ್ತವವಾಗಿ ಇವರು ಮಧ್ಯಪ್ರಾಂತಕ್ಕೆ ಸೇರಿದವರು. ಹುಲಿಮಯ್ಯನ ಆರಾಧನೆ ಇವರ ವಿಶಿಷ್ಟ ಆಚರಣೆಗಳಲ್ಲಿ ಒಂದು. ಪ್ರಾಚೀನ ಕರ್ಣಾಟವೇ ಆ ಪ್ರದೇಶ. ೪. ಕಂನಡರು-ಇವರು ಖಾನ್ದೇಶ ನಾಸಿಕಗಳಲ್ಲೂ ಇದ್ದಾರೆ. ಅಲ್ಲಿ ಆಳಿಹೋದ ರಾಜರು ಗೋವಳರು ಅಥವಾ ಗವಳಿಗರು ಕನ್ನಡದವರೇ. ಗುಜರಾತ ಮಾಳವಗಳಲ್ಲಿಯೂ ಗಂಗಾ ಯಮುನಾ ತೀರಗಳಲ್ಲಿಯೂ ಇವರು ಇದ್ದರು. ಅಲ್ಲದೆ, ಈ ಪ್ರಾಂತಗಳಲ್ಲಿ ಅನೇಕ ವೀರಗಲ್ಲುಗಳಿವೆ. ನಾಸಿಕ ಜಿಲ್ಲೆಯ ಇವರ ಗ್ರಾಮದಲ್ಲಿಯೂ ಚೌಸಾಲೆಯಲ್ಲಿಯೂ ಅವು ಹೇರಳವಾಗಿರುವುದನ್ನು ಮರೆತು ನಡೆಯುವಂತಿಲ್ಲ. ಮರಾಠರಲ್ಲಂತೂ ವೀರಗಲ್ಲುಗಳನ್ನು ನೆಡುವ ಪದ್ಧತಿ-ಆಚರಣೆ ಇಲ್ಲವೇ ಇಲ್ಲ. ಇದು ಕಂನಡರ ವಿಶಿಷ್ಟಪದ್ಧತಿ ಮತ್ತು ಆಚರಣೆ! ಅಲ್ಲದೆ, ಇಲ್ಲಿರುವ ಕುಣಬಿ, ಕೋಳಿ, ವಂಜಾರಿಗಳು ವೀರಗಲ್ಲುಗಳನ್ನು ಪೂಜಿಸುತ್ತಾರೆ; ಇವರು ಮರಾಠರಲ್ಲ. ಆದ್ದರಿಂದ, ಆ ಪ್ರದೇಶಗಳಲ್ಲಿ ಪ್ರಾಚೀನ ಕಾಲದಲ್ಲೇ ಕಂನಡರು ಇದ್ದಿರಬೇಕು. ೫. ಖಾನ್ದೇಶದಲ್ಲಿ ಡಾಂಗನಾಡು, ಮೇವಾಸಿ ಎಂಬ ಹೆಸರಿನ ಎರಡು ಭಿನ್ನ ಸಂಸ್ಥಾನಗಳಿವೆ. ಕುಣಬಿಗಳು, ಕನ್ನಡ ಕುರುಬನ ಮರಾಠಿ ಅವತಾರ, ಧನಗರರು, ತಂಬುಲಿಗರು, ಗೊರವರು ಮುಂತಾದ ಕನ್ನಡದವರು ಇವರು ಈಗಲೂ ಇಲ್ಲಿ ಇದ್ದಾರೆ. ೬. ಮಹಾರಾಷ್ಟ್ರಿ ಎಂಬುದು ಮರಾಠಿ ನಾಡಿಗೂ ನುಡಿಗೂ ಮೂಲ ಅಲ್ಲ. ಇದು ಮೊದಲು ಹುಟ್ಟಿದ್ದು ವರ್ಹಾಟದಲ್ಲಿ. ಈ ನುಡಿ 'ಮಹಾರಾಷ್ಟ್ರಿ' ಪ್ರಾಕೃತಕ್ಕಿಂತಲೂ ಹಿಂದಿನ ಭಾಷೆ. ವರ್ಹಾಟದಲ್ಲಿ ಇದು ಮೊದಲು ಇದ್ದಿಲ್ಲ. ಇವೆರಡಕ್ಕೂ ಜನ್ಯ-ಜನಕ ಸಂಬಂಧವೇ ಇಲ್ಲ. ಮಹಾರಾಷ್ಟ್ರಿ ಪ್ರಾಕೃತ ಏನಿದೆಯೋ ಅದು ಹಲವು ಬೇರೆಬೇರೆ ಪ್ರಾಕೃತಗಳ ಮಿಶ್ರಣ. ಈ ಪ್ರಾಕೃತಕ್ಕೂ ಮರಾಠಿ ಭಾಷೆಗೂ ಕೆಲವು ಶಬ್ದ ಸಾಮ್ಯಗಳು ಮಾತ್ರ ಇವೆ. ತಾಯಿ ಮಕ್ಕಳ ಸಂಬಂಧವಿಲ್ಲ. ಸ್ಟೆನ್‌ಕೊನೊ ಅವರು "ಮರಾಠಿ ಭಾಷೆಯು ದ್ರಾವಿಡ ಭಾಷೆಯ ಮೂಲಾಧಾರದಿಂದ ವಿಕಾಸಹೊಂದಿತು" ಎಂದು ಹೇಳುತ್ತಾರೆ.[೧೨]

ಇಲ್ಲಿ ದ್ರಾವಿಡ ಭಾಷೆ ಎಂದರೆ ಕನ್ನಡವಲ್ಲದೆ ಬೇರೆ ಅಲ್ಲ. ಇದರಿಂದ ಹಿಂದಕ್ಕೆ ಒಂದಾನೊಂದು ಕಾಲದಲ್ಲಿ ಈಗ ಮರಾಠಿ ಪ್ರಚುರವಾಗಿರುವ ನಾಡುಗಳಲ್ಲಿ ಕನ್ನಡವೇ ಇದ್ದಿರಬೇಕು. ಮರಾಠಿ ಪ್ರಬಲವಾದಂತೆ ಕನ್ನಡದ ಅತ್ತೆಯನ್ನು ಓಡಿಸಿರಬೇಕು. ನರ್ಮದೆಯಿಂದ ಗೋದಾವರಿಯ ವರೆಗೆ ಅಲ್ಲಿಂದ ಇತ್ತ ಕೃಷ್ಣಾ ನದಿಯ ವರೆಗೆ ಕನ್ನಡಕ್ಕೆ ನೆಲೆ ತಪ್ಪುತ್ತಾ ಬಂತು. ಮರ್ಹಾಟ-ವರ್ಹಾಟ-ಇವಕ್ಕೆ ಬಹುಜನರು ಒಪ್ಪಬಹುದಾದ ವ್ಯುತ್ಪತ್ತಿ ಇನ್ನೂ ಹೊರಬಂದಿಲ್ಲ ನಿಜ. ಆದರೆ, ಸ್ಥೂಲವಾಗಿ ಅದನ್ನು ಹೀಗೆ ಹೇಳಬಹುದು. ಮರ-ಹಟ್ಟಿ ಎಂದರೆ ದೊಡ್ಡ ನಾಡು. ಅದಕ್ಕೆ ಕನ್ನಡದಿಂದ ವ್ಯುತ್ಪತ್ತಿ ಹೇಳಬಹುದು. ಇದೇ ಕಾಲಕ್ರಮೇಣ ಸಂಸ್ಕೃತದಲ್ಲಿ ಮಹಾರಾಷ್ಟ್ರ ಆಯಿತು. ಆದ್ದರಿಂದ, ಈ ದೇಶದ ಮೊದಲ ಹೆಸರು ಕಂನಡ. ಅಲ್ಲದೆ, ಇದಕ್ಕೆ ಸುಳಿವು ಕೊಡುವಂತೆ, ಕಂನಾಡು ಎಂಬ ತಾಲ್ಲೂಕು ಕೂಡ ಈಗ ಖಾನ್ದೇಶದಲ್ಲಿದೆ! ಕಂಡರ ದೇಶ (ಕನ್ನಡರ ದೇಶ) ಎಂಬುದರ ವಿಕೃತರೂಪವೇ ಖಾನ್ದೇಶ. ಕಂಡರು ವಿಂಧ್ಯ-ಮಲಯಾಳಗಳ ಕಾಡುಗಳನ್ನು ಬಿಟ್ಟು ನಾಡಿಗೆ ಬಂದರು. ಕೂಡಲೇ ಅವರು ಕನ್ನಡರಾದರು. ಕನ್ನಾಡು>ಕನ್ನಡು>ಕನ್ನಡ. ಆದ್ದರಿಂದ, ಇವರು ಮೊದಲಿದ್ದ ನಾಡು ವಿಂಧ್ಯದ ನೆರೆಹೊರೆಯಲ್ಲಿತ್ತು. ೭. ಮರಾಠರ ಕುಲದೇವತೆಗಳು ಪುಂಡಾರಿ, ಕಂಡಾರಿ ಮತ್ತು ಮಲ್ಲಾರಿಗಳು, ಇವುಗಳನ್ನೇ ಕನ್ನಡರು ಮೊದಲು ಪೂಜಿಸುತ್ತಿದ್ದ ದೇವತಾ ಪ್ರತಿಮೆಗಳು. ಪುಂಡರನಾಡು>ಪುನ್ನಾಡು>ಪುನ್ನಾಟ. ಪ್ರಾಚೀನ 'ಪುನ್ನಾಟ' ದೇಶವು

---

೧೨. ಸ್ಟೆನ್‌ಕೊನೊ ಅವರ ಮಾತು ಹೀಗಿದೆ : "The substratum over which Gujarati and Marathi have spread was Dravidian."

ಈ ಜನಾಂಗದ ಕೊನೆಯ ಅವಶೇಷ. ಕಂಡರಿಗೆ ಹಗೆಯಾದವನು ಕಂಡಾರಿ>ಖಂಡೇರಾಯ>ಖಂಡೋಬ. ವಿಂಧ್ಯದ ದಕ್ಷಿಣಕ್ಕೆ ಇವರು ಒಂದು ಕಾಲದಲ್ಲಿ ಮೆರೆದಿದ್ದಿರಬೇಕು. ಇವರೇ ಕನ್ನಡಿಗರಿಗೆ ಮೂಲ. ಮಲೆಯರಿಗೆ ವೈರಿ ಮಲ್ಲಾರಿ. ಇವನಿಗೆ ಏಳು ಕೋಟಿ ಭಕ್ತಗಣ ಉಂಟು. ಈ ದೇವತೆಯ ಗುಡಿಯಲ್ಲಿ 'ಏಳು ಕೋಟಿ' ಎಂಬ ಪಡೆನುಡಿಯನ್ನು ಈಗಲೂ ಮರಾಠರು ಉದ್‌ಘೋಷಿಸುತ್ತಾರೆ. ಇವೆಲ್ಲವನ್ನು ನೋಡಿದರೆ, ಈ ದೇವತೆಗಳ ಮೂಲ ಆರಾಧಕರು ಕನ್ನಡಿಗರು ಎಂದು ಕಾಣುತ್ತದೆ! ೮. ಆಳಿದ ಅರಸು ಮನೆತನಗಳ ಮೂಲ-ಚೂಲವನ್ನು ಬಗೆದು ನೋಡಿದರೆ ಅಲ್ಲಿ ಕಾಣುವುದು ಅರಸು ಮನೆತನಗಳೇ, ಕ್ರಿ. ಪೂ. ೪ನೆಯ ಶತಮಾನದಲ್ಲಿ ಕನ್ನಡನಾಡು ಚಂದ್ರಗುಪ್ತನ ಅಧೀನದಲ್ಲಿತ್ತು, ಅಶೋಕನ ಕಾಲದಲ್ಲಿಯೂ ಹೀಗೆಯೇ. ಅವನು ಬನವಾಸಿ, ಮಹಿಷಮಂಡಲಗಳಿಗೆ ಬೌದ್ಧ ಧರ್ಮೋಪದೇಶಕರನ್ನು ಕಳುಹಿಸಿದ ಸಂಗತಿ ತಿಳಿದಿರುವಂಥದ್ದೇ. ಅವನು ಬರೆಸಿದ ಶಾಸನಗಳಲ್ಲಿ ರಾಷ್ಟ್ರಿಕ, ಪಿಟಣಿಕರ ರಾಜ್ಯಗಳ ಉಲ್ಲೇಖವಿರುವುದನ್ನು ಗಮನಿಸಬಹುದು! ರಾಷ್ಟ್ರಿಕರು (ನಾಡವರು) ಪಿಟಣಿಕರು (ಪೈಠಣಿಕರು) ಕನ್ನಡರೇ ಇದ್ದಿರಬೇಕೆಂಬುದು ನಿಶ್ಚಿತ. ಕ್ರಿ. ಪೂ. ೨೦೦ ರಿಂದ ೨೨೫ರ ವರೆಗೆ ಸಾತವಾಹನರು ಆಳಿದರು. ಇವರ ಶಾಸನಗಳೆಲ್ಲ ಪ್ರಾಕೃತದಲ್ಲಿದ್ದರೂ ಇವರು ಆಳಿದ ನಾಡಿನ ಸಾಮಾನ್ಯಭಾಷೆ ಕನ್ನಡವೇ. ಸಾತವಾಹನರು ಕನ್ನಡರೆಂದು ಹೇಳಲು ಯಾವ ಅಡ್ಡಿಯೂ ಇದ್ದಂತೆ ತೋರುವುದಿಲ್ಲ. ಪುಲುಮಾಯಿ, ಹಾಲ ಎಂಬ ರಾಜರುಗಳ ಹೆಸರನ್ನು ಗಮನಿಸಿದರೆ ಸಾಕು! ಇವರಾದ ಮೇಲೆ ಬಂದವರು ವಾಕಾಟಕರು. ಈ ಮನೆತನದ ರಾಜರುಗಳ ಹೆಸರು 'ಸೇನ' ಎಂದೇ ಮುಕ್ತಾಯವಾಗುತ್ತದೆ. ಬಂಗಾಳದಲ್ಲಿ 'ಸೇನ' ಮನೆತನ ಆಳಿದ್ದನ್ನು ನಾವು ನೆನಪಿಗೆ ತಂದುಕೊಳ್ಳಬಹುದು! ಇವರು ಕರ್ಣಾಟ ಕ್ಷತ್ರಿಯರೆಂಬುದು ಸ್ವತಃ ಸಿದ್ಧವಾದ ಸಂಗತಿ. ಮಿಥಿಲೆಯ ನಾನ್ಯದೇವನು ಕರ್ಣಾಟಕದವನು. ಇವರೆಲ್ಲ ಕರ್ನಾಟ ರಾಜರು. ಉತ್ತರ ದೇಶದಲ್ಲಿ ಅಷ್ಟು ದೂರ ವ್ಯಾಪಿಸಿರಬೇಕಾದರೆ 'ಕರ್ನಾಟ'ದ ಮೂಲಸ್ಥಾನವನ್ನು ತಿಳಿಯಲು ಹೆಚ್ಚಿನ ಅಡ್ಡಿ ಇದ್ದಂತೆ ತೋರುವುದಿಲ್ಲ. ಆದರೆ, ಇವರ ಏಳಿಗೆಯ ಮೂಲ ನೋಡಬೇಕಾದರೆ, ವಿಂಧ್ಯದ ಬುಡಕ್ಕೆ ಹೋಗಬೇಕು. ಇದರಿಂದಲೂ ಕರ್ನಾಟದ ಸ್ಥಾನ ನರ್ಮದಾ ತೀರವೆಂದೇ ತೋರುತ್ತದೆ. ದೇವಗಿರಿಯ ಯಾದವರು ಮರಾಠರಲ್ಲ, ಕನ್ನಡರೇ. ಇದಿಷ್ಟು ಈ ಸಂಪುಟದಲ್ಲಿ ಶಂಬಾ ನಡೆಸುವ ಸಾಂಸ್ಕೃತಿಕ ಸಂವಾದದ ಮುಖ್ಯ ಚರ್ಚೆಗಳು.

ಕನ್ನಡ ಸಂಸ್ಕೃತಿಯ ಪುನಾರಚನೆಯ ಶೋಧಕ್ಕಾಗಿ ಶಂಬಾ ಅವರು ಬಳಸಿಕೊಂಡ ಸಾಮಗ್ರಿಗಳ ಬಗೆಗೆ ವಿದ್ವಾಂಸರಲ್ಲಿ ಐಕಮತ್ಯ ಇರುವುದನ್ನು ಗಮನಿಸಬಹುದು.[೧೩] ಇದೆಲ್ಲವನ್ನು ಗಮನಿಸಿದರೆ 'ಕಂನುಡಿ' ಮತ್ತು 'ಕಂನಾಡು' ಪರಿಕಲ್ಪನೆಗಳನ್ನು ಕನ್ನಡ ಸಂಸ್ಕೃತಿಯ ಮುಖ್ಯ ಎಳೆಗಳ ಎಡೆಯನ್ನು ತಲುಪಲು ಶಂಬಾ ಅವರು

---

೧೩. "ಶ್ರೀಮಾನ್ ಜೋಶಿಯವರು ಎಷ್ಟು ಕಷ್ಟಪಟ್ಟಿದ್ದಾರೆಂಬುದನ್ನು ಆಡಿತೋರಿಸುವುದಕ್ಕಿಂತ ಅವರ ಗ್ರಂಥಗಳ ಯಾವ ಹಾಳೆಯನ್ನಾದರೂ ಓದಿ ನೋಡಬೇಕೆಂದು ಕೇಳುವುದು ಒಳ್ಳೆಯದು. ಅವರ ಪರಿಶ್ರಮ, ಆಯ್ಕೆ, ಜೋಡಣೆ, ಕೌಶಲ್ಯ-ಇವನ್ನು ಮೆಚ್ಚಿ ಹೊಗಳದಿರುವುದು ಸಾಧ್ಯವಿಲ್ಲ" (ಡಿ. ಎಲ್. ಎನ್., ಪೀಠಿಕೆಗಳು, ಲೇಖನಗಳು ೧೯೭೧, ಪುಟ, ೬೦೮)
"ನಮ್ಮಲ್ಲಿನ ಕೆಲವು ಮೂಲಭೂತ ನಂಬುಗೆಗಳನ್ನು ಅವು ಅಲುಗಾಡಿಸುತ್ತವೆ ಯೋಚಿಸಲು ಹೊಸ ವಿಚಾರಗಳು, ಮೆಲುಕು ಹಾಕಲು ವಿಪುಲ ಸಾಮಗ್ರಿ ಇವರ ಈ ಗ್ರಂಥದಲ್ಲಿವೆ" (ಬಾ. ರಾ. ಗೋಪಾಲ್, ಕನ್ನಡ ಭಾರತಿ, ಸಂ. : ಎಲ್. ಎಸ್. ಶೇಷಗಿರಿರಾವ್, ೧೯೮೪ ಪುಟ : ೧೮೨) "ತಮ್ಮ ಸಿದ್ಧಾಂತಗಳ ಸಮರ್ಥನೆಗೆ ಶಂಬಾ ಅವರು ಪ್ರಮಾಣಗಳ ಕುರಿತು ಯಾವ ಕಾರ್ಪಣ್ಯವನ್ನು ಕಾಣಿಸಿಲ್ಲ. ರಾಶಿರಾಶಿಯಾಗಿ ವೇದ, ಉಪನಿಷತ್ತು, ಇತಿಹಾಸ, ಶಾಸನ, ಆಖ್ಯಾಯಿಕೆ, ಜಾನಪದ-ಸಾಹಿತ್ಯ, ನಡೆವಳಿ-ನುಡಿವಳಿ ಏನೆಲ್ಲ ಸೂರೆ ಮಾಡಿದ್ದಾರೆ. ಮೂವತ್ತಕ್ಕೂ ಮಿಕ್ಕ ಪಾಶ್ಚಾತ್ಯ, ಪೌರ್ವಾತ್ಯ ವಿದ್ವಾಂಸರನ್ನು ಉದಾಹರಿಸಿದ್ದಾರೆ. ಪ್ರತಿಪಾದನೆಯಷ್ಟೇ ಪ್ರತಿಪಾದ್ಯದಲ್ಲಿಯೂ ಜೋಶಿಯವರು ಪ್ರಭಾವಿಯಾಗಿದ್ದಾರೆ." (ಶ್ರೀ ಗೌರೀಶ ಕಾಯ್ಕಿಣಿ, ಅಧ್ಯಯನ, ಸಂ : ಡಾ|| ಎಂ. ಚಿದಾನಂದಮೂರ್ತಿ, ೧೯೮೦ ಪು. ೪೭)
"ಪ್ರಾಚೀನ ಕರ್ನಾಟಕದ ವ್ಯಾಪ್ತಿ ಅಥವಾ ಉತ್ತರ ಭಾರತದ ಸಂಸ್ಕೃತಿಯ ಮೇಲೆ ಕನ್ನಡ ಪ್ರಭಾವ ಬೀಳುವಾಗ ಅವರ ಸಂಶೋಧನೆಗಳು ಗಣನೀಯ ಬೆಲೆಯವಾಗಿವೆಯೆಂದು ಹೇಳಲೇಬೇಕು." (ಡಾ. ಸೂರ್ಯನಾಥ ಕಾಮತ್, ಅಧ್ಯಯನ ಸಂ. : ಡಾ|| ಚಿದಾನಂದಮೂರ್ತಿ, ೧೯೮೦, ಪುಟ. ೧೩೫)

ತಮ್ಮ ಕೃತಿಗಳ ಮುಖಾಂತರ ಹುಡುಕಿಕೊಂಡರು-ಎಂಬುದು ಸರಳವಾದ ಮಾತೇನೂ ಅಲ್ಲ. ಅವರು ಬರೆಯುವ ಕಾಲಕ್ಕೆ ಅಥವಾ ಕನ್ನಡ ಸಂಸ್ಕೃತಿಯ ಮುಖ್ಯ ಎಳೆಗಳ ತಾತ್ತ್ವಿಕ ವಿನ್ಯಾಸವನ್ನು ಕುರಿತು ಚಿಂತನೆ ಉಪಕ್ರಮಿಸುವ ಸಮಯದಲ್ಲಿ ಅವರಿಗೆ ಎದುರಾದದ್ದೇ ಕನ್ನಡ ಅಥವಾ ಕರ್ನಾಟಕ ಎಂಬ ಅಮೂರ್ತ ಮಾತುಗಳು. ಆ ಕಾಲದ ಕೃತಿಗಳನ್ನು ಗಮನಿಸಿದವರಿಗೆ ಎದ್ದು ನಿಲ್ಲುವ ಅಂಶ ಇದು. ತನ್ನ ಭಾಷೆಯ ತನ್ನ ಸಂಸ್ಕೃತಿಯ ಅರಿವು ಒಂಚೂರು ಇಲ್ಲದೆ ಕೇವಲ ಬಡಬಡಿಕೆಯ ಮಾತುಗಳನ್ನು ಆಡುತ್ತಿರುವುದು ಶಂಬಾ ಅವರಿಗೆ ಪ್ರಿಯವಾಗಲಿಲ್ಲ.[೧೪] ಹೀಗಾಗಿ, ಅವರು ತಮಗೆ ತಾವೆ ಹಾಕಿಕೊಂಡ ಪ್ರಶ್ನೆಗಳೇ ಸಂಸ್ಕೃತಿಯ ಪುನಾರಚನೆಗೆ ಬೇಕಾದ ಸಾಮಗ್ರಿಗಳನ್ನು, ಗ್ರಹಿಕೆಯ ಕ್ರಮಗಳನ್ನು, ಶೋಧನೆಯ ಇತ್ಯಾತ್ಮಕ ನೆಲೆಗಳನ್ನು ಕಣ್ಣ ಮುಂದೆ ತಂದವು. ಈ ಬಗೆಯ ಅಧ್ಯಯನ ಸಾಮಗ್ರಿಯೇ ಕಾಲದ ದೃಷ್ಟಿಯಿಂದ ನಮಗೆ ಬೆರಗನ್ನು ತರುತ್ತದೆ. ನಮ್ಮ ಸಂಸ್ಕೃತಿಯೆಂಬುದು ಯಾವುದು? ಸಂಸ್ಕೃತಿಯ ತಾತ್ತ್ವಿಕ ನೆಲೆಗಳು ಯಾವುವು? ಕನ್ನಡದ ಮೂಲಿಗರು ಯಾರು? ಕನ್ನಡದ ಪೂರ್ವೋತ್ತರ ನೆಲೆಗಳು ಎಲ್ಲಿವೆ? ಈ ಬಗೆಯ ಪ್ರಶ್ನೆಗಳು ಪ್ರಾಥಮಿಕ ಪ್ರಶ್ನೆಗಳಾದರೂ ಗಟ್ಟಿಯಾದ ಹಾಗೂ ಕಾಲದ ದೃಷ್ಟಿಯಿಂದ ತುಂಬ ಅಗತ್ಯವಾದ ಪ್ರಶ್ನೆಗಳೇ ಆಗಿದ್ದುವು. ಇಂಥ ಪ್ರಶ್ನೆಗಳನ್ನು ಅವರು ಕೇಳಿಕೊಳ್ಳುವ ಅಗತ್ಯವನ್ನೂ ತುರ್ತನ್ನೂ ಅವರ ಕಾಲದ ಮಾತುಗಳು ಉಂಟುಮಾಡುತ್ತವೆ ಎಂಬುದನ್ನು ಈಗಾಗಲೇ ಗಮನಿಸಿದ್ದೇವೆ. ಇದು ಒಂದು ರೀತಿಯಲ್ಲಿ ಸಂಸ್ಕೃತಿಯನ್ನು ತನ್ನ ಕಾಲದ ತಾತ್ತ್ವಿಕ ವಿನ್ಯಾಸಗಳ ನೆಲೆಯಲ್ಲೇ ಹುಡುಕಿಕೊಳ್ಳುವ ಬಗೆಯಾಗಿದೆ. ಈ ಮಾದರಿಗಳೇ ಒಬ್ಬನನ್ನು ಈ ಮೊದಲೇ ಹೇಳಿದ ಹಾಗೆ ಚಿಂತನಶೀಲ ಸಂಸ್ಕೃತಿ ಸಂಶೋಧಕನನ್ನಾಗಿ ರೂಪಿಸುತ್ತದೆ. ಇದನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಕನ್ನಡ ಸಂಸ್ಕೃತಿಯ ಮೂಲಗ್ರಾಹಿಯಾದ ನೆಲೆಗಳನ್ನು ಸಂಗತಿಗಳನ್ನು ಸ್ವರೂಪಗಳನ್ನು ಇಡಿಯಾದ ಆಕೃತಿಯಲ್ಲಿ ಗ್ರಹಿಸಿಕೊಳ್ಳುವುದು ಅನಿವಾರ್ಯವಾಗುತ್ತವೆ.

ಸಂಸ್ಕೃತಿಯ ಶೋಧನೆಯಲ್ಲಿ ಶಂಬಾ ಅವರು ಎರಡು ಮುಖ್ಯ ಹಿನ್ನೆಲೆಗಳನ್ನು ಕೈಜೋಡಿಸಿ ಹಿಡಿದದ್ದನ್ನು ನಾವು ತಿಳಿಯಬಹುದಾಗಿದೆ. ಸಂಸ್ಕೃತಿಗೆ ದೇಹ ಮತ್ತು ಆತ್ಮಗಳು ಇರುತ್ತವೆ. ಅವರ ಶೋಧನೆಗೆ ತಾತ್ತ್ವಿಕ ಭಿತ್ತಿಯಾದದ್ದು ಒಂದು ಹೆಣಿಗೆಯಲ್ಲಿ ಆತ್ಮಸಂಸ್ಕೃತಿ ಮತ್ತೊಂದು ಹೆಣಿಗೆಯಲ್ಲಿ ಭೌತಸಂಸ್ಕೃತಿ. ಇವೆರಡರ ನೆಲೆಗಳನ್ನು ಜೋಡುನೆಲೆಗಳಾಗಿ ಸ್ವೀಕರಿಸಿದ್ದರಿಂದಲೇ ಅವರು 'ಕಂನಾಡು' ಪರಿಕಲ್ಪನೆಯ ಮುಖಾಂತರ ಸಂಸ್ಕೃತಿಯ ಇಡಿಯಾದ ಗ್ರಹಿಕೆಯ ಕಡೆಗೆ ನಡೆಯಲು ಸಾಧ್ಯವಾಯಿತು. ಇದನ್ನು ನಾವು ಮರೆತು ನಡೆಯುವುಂತಿಲ್ಲ- ಎಂಬುದನ್ನು ಅವರ ಅಧ್ಯಯನದ ಹಲವಾರು ಮಾದರಿಗಳು ರುಜುವಾತು ಪಡಿಸುತ್ತವೆ. ಹೀಗಾಗಿ, ಶಂಬಾ ಅವರು 'ಕಂನಾಡು' ಪರಿಕಲ್ಪನೆಯ ಮುಖಾಂತರ ಸಂಸ್ಕೃತಿಯ ಪುನರ್‌ಶೋಧನಕ್ಕೆ ತಮ್ಮ ಬರೆಹಗಳನ್ನು ಒಡ್ಡಿ ಕೊಳ್ಳುತ್ತಾರೆ.[೧೫] ಯಾವುದನ್ನು ಹಿಂದಿನ ವಿದ್ವಾಂಸರು ಸಂಸ್ಕೃತಿಯ ಬಾಹ್ಯಸ್ವರೂಪಗಳನ್ನು ಮಾತ್ರ ಅವಲಂಬಿಸಿ ಸ್ಥೂಲದೃಷ್ಟಿಯಿಂದ ಸಮೀಕ್ಷಿಸಿದ್ದರೋ ಅದನ್ನು ಶಂಬಾ ಸಂಸ್ಕೃತಿಯ ಪುನಾರಚನೆಯ

---

೧೪. "ಮೊದಲು ಕರ್ನಾಟ ಎಂಬುದು ಎಲ್ಲಿಯವರೆಗೆ ಇದ್ದೀತು? 'ಗೋದಾವರಿವರಂ' ಎಂಬುದು ನಿಜವೇ? ಅತಿಶಯೋಕ್ತಿಯೆ? ಇದನ್ನು ಕೂಲಂಕಷವಾಗಿ ಸಮೀಕ್ಷಿಸಿದವರು ಅಂದು ಯಾರು ಇಲ್ಲದ್ದು ವಿಷಾದವನ್ನುಂಟುಮಾಡಿತು. ಕೆಲವರನ್ನು ವಿಚಾರಿಸಿದರೆ ಅಭಿಮಾನದ ಆವೇಶದಲ್ಲಿ ಅದನ್ನು 'ವಾಸ್ತವಸತ್ಯ' ಎನ್ನುವುದನ್ನು ಕಾಣಿಸಿತು. ಇನ್ನು ಕೆಲವರಿಗೆ ಅದು ನಮ್ಮ ಕವಿಗಳ 'ಅತ್ಯುಕ್ತಿ' ಎಂದು ಎನಿಸಿದ್ದು ತಿಳಿಯಿತು. ಇಂತಹ ಸಂದರ್ಭದಲ್ಲಿ. ಈ ನಾಡಿನ ಗಡಿಯ ಪೂರ್ವೋತ್ತರಗಳ ವಿಚಾರದೊಡನೆಯೆ 'ಮೂಲಿಗರು ಯಾರು?' ಎಂಬ ಪ್ರಶ್ನೆಯೂ ತಲೆಯೆತ್ತಿ ನಿಂತಿತ್ತು" (ಕರ್ನಾಟ ಸಂಸ್ಕೃತಿಯ ಪೂರ್ವಪೀಠಿಕೆ (ಪ್ರಸ್ತಾಪ) ದ್ವಿತೀಯ ಭಾಗ ಬಿನ್ನಹ ಪುಟ. ೫, ೧೯೬೬)

೧೫. "ಕರ್ನಾಟಕದ ಇತಿಹಾಸವನ್ನು ಬಿಚ್ಚಿಡುವುದರಲ್ಲಿ, ಅದರ ಆತ್ಮಗೌರವವನ್ನು ಎತ್ತಿಹಿಡಿಯುವಲ್ಲಿ, ಜೀವನದುದ್ದಕ್ಕೂ ಸತ್ಯವನ್ನು ಒಂದು ದೈವವಾಗಿ ಆರಾಧಿಸಿಕೊಂಡು ಬಂದಿರುವಲ್ಲಿ ಜೋಶಿಯವರಂತಹ ವ್ಯಕ್ತಿಗಳು ಬಹಳ ಜನ ದೊರಕಲಾರರು." (ಎಂ. ಚಿದಾನಂದಮೂರ್ತಿ ಸಂಪಾದಕರ ಮಾತು, ಅಧ್ಯಯನ ೧೯೮೦)

ಸಂದರ್ಭದಲ್ಲಿ ಸಂಸ್ಕೃತಿಯ 'ಆತ್ಮ'ವನ್ನು ಹುಡುಕಲು ಪ್ರಯತ್ನಿಸುತ್ತಾರೆ. ಈ ಬಗೆಯ ಶೋಧನೆ ಮತ್ತು ಚಿಂತನೆ ಎರಡೆರಡೂ ಒಟ್ಟೊಟ್ಟಿಗೆ ಕೈಹಿಡಿದು ನಡೆಯುವ ಸಂಗತಿಯೇ. ಹೀಗಾಗಿ, ಶಂಬಾ ಅವರು ಈ ಹೊತ್ತಿಗೂ ನಮಗೆ ಪ್ರಸ್ತುತರಾಗಲೂ ಸಾಧ್ಯವಾಗಿದೆ.

ಶಂಬಾ, ಈ ಜನಾಂಗದ ಸ್ಮೃತಿಯನ್ನೂ ಅವರ ನೆಲೆ-ಬೆಲೆಗಳನ್ನೂ ಹಿಡಿದಿಟ್ಟ ಚಿಂತನಶೀಲ ಸಂಸ್ಕೃತಿ ಸಂಶೋಧಕ. ಅವರು ಈ ಯುಗದ ದೊಡ್ಡ ದನಿ. ಸಾಂಸ್ಕೃತಿಕ ಪರಂಪರೆಯ ಸಮುದ್ರದಲ್ಲಿ ಮುಳುಗಿ ಅಲ್ಲಿಂದ ಚರಿತ್ರೆಯ ನೈಜಸಂಗತಿಗಳನ್ನು ಕಾಲ-ದೇಶ-ಸ್ಥಳಗಳ ಪರಿಧಿಯಲ್ಲಿರುವ ಅನನ್ಯತೆಗಳನ್ನು ತಮ್ಮ ಕೃತಿಗಳಿಂದ ಬಿಂಬಿಸುತ್ತ, ಅದನ್ನು ಬಯಲಿಗೆ ತರುತ್ತ ಬಂದ ದೊಡ್ಡಸಾಹಸಿ. ಅಂಥ ಸಾಂಸ್ಕೃತಿಕ ಸಾಹಸಕ್ಕೆ ಇಳಿಯುವ ಸಾಮರ್ಥ್ಯ ಶಂಬಾ ಅವರಿಗಿತ್ತು. ಸಾಂಸ್ಕೃತಿಕ ಸಾತತ್ಯದ ಒಳಸುಳಿಗಳನ್ನು ಬರಮಾಡಿಕೊಳ್ಳುವ ಸಾಮರ್ಥ್ಯದ ಜೊತೆಗೆ : ಕಾಲಕಾಲದ ವಿಶಿಷ್ಟ ಐಕ್ಯತೆಗಳನ್ನು ಸ್ವೀಕರಿಸುವ, ಶೋಧಿಸುವ, ವೈಚಾರಿಕವಾಗಿ ಹುಡುಕುವ ಸಾಮರ್ಥ್ಯದಿಂದಾಗಿ ಕಂನಾಡಿನ ನೆಲೆ-ಹಿನ್ನೆಲೆ-ಮುನ್ನೆಲೆಗಳನ್ನು ಏಕಗ್ರಾಹಿಯಾಗಿ ಹಿಡಿಯಲು ಅವರಿಗೆ ಸಾಧ್ಯವಾಯಿತು. ಸಾಂಸ್ಕೃತಿಕ ಪ್ರಜ್ಞೆಯನ್ನು ಒಳಗೊಳ್ಳುವ ದಿಟ್ಟಕೃತಿಗಳನ್ನು ಬರೆಯಲು ಸಾಧ್ಯವಾದದ್ದೇ ಅವರಿಗಿದ್ದ ಆತ್ಮಸಂಸ್ಕೃತಿ ಮತ್ತು ಬಾಹ್ಯಸಂಸ್ಕೃತಿಗಳ ಗಾಢವಾದ ತಿಳುವಳಿಕೆಯ ಕಾರಣದಿಂದ. ಸಂಸ್ಕೃತಿಯ ಪುನಾರಚನೆಯಲ್ಲಿ ಶಂಬಾ ಅವರು ಸಂಸ್ಕೃತಿಯನ್ನು 'ಗತಿ'ಯ ನೆಲೆಯಲ್ಲಿ ಗ್ರಹಿಸುತ್ತಾರೆ; ಉಳಿದವರು 'ಸ್ಥಿತಿ'ಯ ನೆಲೆಯಲ್ಲೇ ಗ್ರಹಿಸುವುದರಿಂದ ಅವರು ಸಂಸ್ಕೃತಿಯನ್ನು ಕೇವಲ ಕಾವ್ಯ, ಶಾಸನಗಳ ಮಟ್ಟಿಗೆ ಮಾತ್ರ ಗ್ರಹಿಸುವ ನೆಲೆಗಳು ತಮ್ಮ ಎದುರಿಗೆ ಬಂದು ನಿಲ್ಲುತ್ತವೆ. ಹೀಗಾಗಿ, ಜನಾಂಗದ ಸ್ಮೃತಿಯ ಪ್ರತೀಕಗಳಾದ ಪುರಾಣದ ಸಂಕೇತ ಪ್ರತಿಮೆಗಳನ್ನು ಶಂಬಾ ತಮ್ಮ ಅಧ್ಯಯನಕ್ಕೆ ಆವಶ್ಯಕವಾದ ಉಪಾಂಗವೆಂದು ತಿಳಿದು ಬಳಸಿಕೊಂಡರು. ಇದರಿಂದ, ಸಮಕಾಲೀನ ಸಾಂಸ್ಕೃತಿಕ ಜಗತ್ತನ್ನು ಅರ್ಥೈಸಿಕೊಳ್ಳಲು ನೆರವಾದದ್ದು ಒಂದು ಕಾರಣವಾದರೆ, ಸಂಸ್ಕೃತಿಯ ಪುನಾರಚನೆಗೆ ತಮ್ಮನ್ನು ತೊಡಗಿಸಿಕೊಳ್ಳಲು ಮತ್ತೊಂದು ರೀತಿಯಲ್ಲಿ ನೆರ ವಾಯಿತು. ಭಾಷಿಕ ಆಕೃತಿ ಮತ್ತು ಸಾಂಸ್ಕೃತಿಕ ಆಕೃತಿಗಳನ್ನು ಅದರ ಮೂಲರೂಪೀ ಆಶಯದೊಂದಿಗೆ ಗ್ರಹಿಸುತ್ತ ಬಂದರು. ಆದ್ದರಿಂದ, ಅವರ ಕೃತಿಗಳು ಒಂದೆಡೆ ಕಂನಾಡ ಸಂಸ್ಕೃತಿಯ ಒಟ್ಟು ನೆಲೆಯನ್ನು ಇಡಿಯಾಗಿ ಗ್ರಹಿಸಲು ಸಾಧ್ಯವಾದ ಬಗೆಗಳನ್ನು ಪ್ರಾರಂಭದ 'ಕಂನುಡಿ' ಮತ್ತು 'ಕಂನಾಡು' ಪರಿಕಲ್ಪನೆಗಳು ನೆರವಾದವು. ಕಾಲದ ದೃಷ್ಟಿಯಿಂದ ಶಂಬಾ ಅವರ ಈ ಮಾದರಿಯ ಅಧ್ಯಯನಗಳು ತುಂಬ ಮಹತ್ವಪೂರ್ಣವೂ ಅರ್ಥಪೂರ್ಣವೂ ಹೌದು. ಈ ಸಂಪುಟದ ಪುಸ್ತಕಗಳು ಇದನ್ನು ರುಜುವಾತುಗೊಳಿಸುತ್ತವೆ. ಶಂಬಾ ಜೋಶಿ ಅವರು 'ಎಡೆಗಳು ಹೇಳುವ ಕಂನಾಡ ಕತೆ' ಎಂಬ ಪುಸ್ತಕದ ಮಾತಿನಿಂದಲೇ ಈ ಪ್ರಸ್ತಾವನೆಯನ್ನೂ ಮುಗಿಸಬಹುದು

> ಜನಗಳಿಗೆ ತಮ್ಮ ನಾಡಿನ, ನುಡಿಯ ನಿಜಸ್ವರೂಪದ ತಿಳುವಳಿಕೆಯೂ ಈ ವರೆಗೆ ಅವಶ್ಯವೆನಿಸಿರಲಿಲ್ಲ. 'ಕನ್ನಡ'ವೆಂಬುದು ಮೂಲದಲ್ಲಿ ದೇಶದ ಹೆಸರೊ ಭಾಷೆಯ ಹೆಸರೊ ಎಂಬುದೂ ಮರೆತುಹೋಗಿತ್ತು! ರಾಮ್ಯಾ, ಬಶ್ಯಾ ಎಂದು ಬಹಳ ದಿನಗಳಿಂದ ಕರೆಯಿಸಿಕೊಳ್ಳುತ್ತಿದ್ದವನಿಗೆ ರಾಮ, ಬಸವಂತನೆಂದು ಯಾರಾದರೂ ತಿದ್ದಿ ಹೇಳಿದರೂ ಆತನಿಗೆ ತನ್ನ ಹೆಸರು ರಾಮ, ಬಸವಂತನೆಂದು ಸರಿಯಾಗಿ ಹೇಳಲೂ ಸಂಕೋಚವೆನಿಸುವಂತಾಗಿದೆ ನಮ್ಮ ನಾಡಿಗರ ಪಾಡು. ನಮ್ಮ ನಾಡು, ನುಡಿಗಳ ಶುದ್ಧ ಅರ್ಥವತ್ತಾದ ರೂಪಗಳನ್ನು ಬಳಸುವುದಕ್ಕೂ ಮನಸಿನ ಸಿದ್ಧತೆಯಾಗಬೇಕಾಗಿದೆ ಇನ್ನೂ! ಇಂತಿದು ಆರ್ಯರು ಗೆದ್ದು ಸೋತ, ಕಂನಾಡ ಮೊದಲಿಗರ ಸೋತು ಗೆದ್ದ ಸಂಕ್ಷಿಪ್ತ ಕತೆ.

ಮಲ್ಲೇಪುರಂ ಜಿ. ವೆಂಕಟೇಶ

ಪರಿವಿಡಿ

ಕನ್ನಡದ ನೆಲೆ

ಅರಿಕೆ

‘ಕಣ್ಮರೆಯಾದ ಕನ್ನಡ’ವನ್ನು ಬರೆದಾಗ (೧೯೩೩) ಕನ್ನಡ ನಾಡವರ ಮೊದಲ ನೆಲೆವೀಡಾವುದೆಂಬ ಮಾತು ಸ್ಪಷ್ಟವಾಯಿತು. ‘ಮಹಾರಾಷ್ಟ್ರದ ಮೂಲ’ದಿಂದ (೧೯೩೪) ಕನ್ನಡ ಮತ್ತು ಮರಹಟ್ಟಗಳೆರಡೂ ಪ್ರಾಚೀನಕಾಲದಲ್ಲಿ ಅಭಿನ್ನದೇಶಗಳಾಗಿದ್ದುವೆಂಬುದು ಗಮನಕ್ಕೆ ಬಂದಿತು. ‘ಕರ್ಣಾಟದ ವೀರಕ್ಷತ್ರಿಯರು’ ಎಂಬ ಪುಸ್ತಕದಲ್ಲಿ (೧೯೩೬) ಕನ್ನಡದ ಮೊದಲಿಗರು ಹಟ್ಟಿಕಾರವೃತ್ತಿಯವರೆಂಬ ಮಾತು ಬೆಳಕಿಗೆ ಬಂದು ಈ ಜನಗಳ ಋಗ್ವೇದಕಾಲದ ವರೆಗಿನ ಸುಳುಹುದೋರಿತು. ಮತ್ತು ಕರ್ಣಾಟ-ಮಹಾರಾಷ್ಟ್ರಗಳಲ್ಲಿ ಹಬ್ಬಿಕೊಂಡಿದ್ದ ಮೂಲ ಹಟ್ಟಿಕಾರ ಜನಾಂಗವು ಒಂದೆಯೆಂದೂ ಆಂಧ್ರರು ಇದೇ ಪಂಗಡದವರೆಂದೂ ಗೊತ್ತಾಯಿತು.

ಆದರು, ಕನ್ನಡದ ಮೊದಲಿಗರು ಇನ್ನೂ ಅಷ್ಟು ನಿಚ್ಚಳವಾಗಿ ಒಡಮೂಡಿ ಕಂಡಿದ್ದಿಲ್ಲ. ಇತ್ತೀಚಿನ ಅಭ್ಯಾಸದಲ್ಲಿ ಈ ವಿಷಯವನ್ನು ಕುರಿತು ನನಗೆ ತಿಳಿದ ಮತ್ತು ಹೊಳೆದ ಸಂಗತಿಗಳನ್ನು ಪ್ರಸ್ತುತ ಪುಸ್ತಕದಲ್ಲಿ ಒಟ್ಟೈರಿಸಿದ್ದೇನೆ. ಇದುವೆ “ಕನ್ನಡದ ನೆಲೆ”. ಕನ್ನಡರ ಇಷ್ಟದೇವತೆ ‘ವಿಷ್ಣು-ಕೃಷ್ಣ’ನಾದರೂ, ಕುಲದೈವತವು ‘ರುದ್ರ-ಶಿವ’ನು. ಆದುದರಿಂದ, ‘ಶಿವರಹಸ್ಯ’ವನ್ನರಿಯದೆ ಕನ್ನಡರ ಸಂಪೂರ್ಣ ನೆಲೆಯು ಹತ್ತಲಾರದೆಂದು ನನ್ನ ಮನವರಿಕೆಯಾಗಿ, ಈ ವಿಷಯದಲ್ಲಿಯೂ ಒಂದು ಸ್ವತಂತ್ರ ಪುಸ್ತಕ ಅವಶ್ಯವೆನಿಸಿ, ಅದನ್ನೂ ಪ್ರಕಟಿಸಿದ್ದಾಯಿತು.

‘ಕನ್ನಡದ ನೆಲೆ’ಯಲ್ಲಿ, ಈ ನಾಡನ್ನು ನಿಲ್ಲಿಸಲು ಮೊದಲು ಕಾರಣವಾದ ಮೂಲಜನಾಂಗವು ಆವುದು? ಎಂಬುದೆ ಮುಖ್ಯಪ್ರಶ್ನೆ ‘ಶಿವರಹಸ್ಯ’ವು ಇದಕ್ಕೆ ಪೋಷಕವಾದ ಒಂದು ಪ್ರಬಂಧ. ಕನ್ನಡದ ಮೊದಲಿಗರು ಯಾರು? ಅವರ ಗುಣ-ಸ್ವಭಾವಗಳು ಎಂತಹವು? ಎಂಬುದರ ಸ್ಪಷ್ಟಜ್ಞಾನವಿಲ್ಲದೆ ಕನ್ನಡ ಸಂಸ್ಕೃತಿಯ ಸರಿಯಾದ ಅರ್ಥವೇ ಆಗಲಾರದು. ಆದುದರಿಂದ, ಈ ನಾಡಿನ ಏಳ್ಗೆಯನ್ನು ಬಯಸುವ, ನಾಡು ಮತ್ತು ನುಡಿಯ ಸೇವಕರಿಗೆ ಕನ್ನಡ ಮೂಲಜನಾಂಗದ ಸಮಸ್ಯೆಯು ಬಹಳ ಮಹತ್ವದ್ದಾಗಿದೆ. ಹಿಂದಿನ ತೊಡಕುಗಳು ತಿಳಿಯದೆ ಇಂದಿನ ತೊಂದರೆಗಳನ್ನು ನಿವಾರಿಸಿಕೊಳ್ಳಲಿಕ್ಕೆ ಆಗಲಾರದು. ಈ ದೃಷ್ಟಿಯಿಂದಲೂ ಕನ್ನಡದ ನೆಲೆಯನ್ನು ಕಂಡುಕೊಳ್ಳುವದು ಒಂದು ಆವಶ್ಯಕ ಕರ್ತವ್ಯವೆ ಆಗಿದೆ.

ಪ್ರಸ್ತುತ ಗ್ರಂಥದಲ್ಲಿ ಕೊರತೆಗಳು ಏನೂ ಉಳಿದಿಲ್ಲವೆಂದು ಹೇಳುವ ಎದೆಗಾರಿಕೆಯು ನನ್ನಲ್ಲಿ ಇಲ್ಲವಾದರೂ ಕನ್ನಡಿಗರ ಹುಟ್ಟು ಮತ್ತು ಬೆಳವಿಗೆಯನ್ನು ಕುರಿತು ಇಷ್ಟೊಂದು ವಿಶದವಾಗಿ ವಿವೇಚಿಸಿದ ಪುಸ್ತಕವು ಇದೆ. ಮೊದಲನೆಯದೆಂದು ತಲೆವಾಗಿ ಹೇಳಬಯಸುತ್ತೇನೆ. ಕನ್ನಡದ ಮೂಲಜನಾಂಗವಾವುದು ಎಂಬುದು ಬೆಳಕಿಗೆ ಬರುವುದರಿಂದ ನಮ್ಮ ಇತಿಹಾಸದೊಳಗಿನ ಹಲವು ಸಂದಿಗ್ಧ ಸಮಸ್ಯೆಗಳೆಲ್ಲ ತನ್ನ ತಾನೆ ಬಿಟ್ಟುಹೋಗುತ್ತಲಿವೆ. ಈ ನಾಡಿಗೆ ‘ಕನ್ನಡ’ ಎಂಬ ಹೆಸರು ಏಕೆ ಬಂದಿತು? ಕನ್ನಡ-ಮರಾಠಿಗಳ ಸಂಬಂಧವೇನು? ಕನ್ನಡ. ತಮಿಳ

ಮತ್ತು ಆಂಧ್ರರು ಮೊದಲು ಒಂದೇ ಶಾಖೆಯವರೆಂದರೇನು? ಹೇಗೆ? ಮೂಲಕರ್ಣಾಟದ ವಿಸ್ತಾರವೆಷ್ಟು? ಹೇಗೆ ಕ್ಷೀಣವಾಯ್ತು? 'ದಕ್ಷಿಣಾಪಥದಲ್ಲೆಲ್ಲ ಕರ್ಣಾಟದ ವಿಜಯಧ್ವಜವನ್ನು ಮೆರೆಯಿಸಿ, ಉತ್ತರದವರಿಗೂ ತಮ್ಮ ಶೌರ್ಯ, ಧೈರ್ಯಗಳ ಮಾದರಿಯನ್ನು ತೋರಿದ ಈ ನಾಡಿನ ಆ ಗಂಡುಕುಲವು (Material race) ಆವುದು?' ಎಂಬಿವೆ ಮೊದಲಾದ ಮನದ ಕೊರೆಗೆ ನನ್ನ ಮಟ್ಟಿಗಾದರೂ ಸಮಾಧಾನಕರವಾದ ಉತ್ತರವು ದೊರೆಯುತ್ತಲಿದೆ. ನನ್ನ ಸಂದೇಹಗಳಿಗೆ ದೊರೆತ ಉತ್ತರವು ಇನ್ನುಳಿದವರಿಗೂ ಅಲ್ಪಸ್ವಲ್ಪ ಉಪಯುಕ್ತವಾಗ ಬಹುದೆಂಬ ಆಸೆಯಿದೆ. ಇದರೊಳಗಿನ ಎಲ್ಲ ಮಾತುಗಳು ಎಲ್ಲರ ಒಪ್ಪಿಗೆಯನ್ನು ಪಡೆಯುವುವೆಂದು ನಾನು ತಿಳಿದಿಲ್ಲವಾದರೂ, ಪ್ರಸ್ತುತ ಪುಸ್ತಕವು ಓದುಗರನ್ನು ಹೊಸ ದಿಕ್ಕಿನಿಂದ ವಿಚಾರಮಾಡುವುದಕ್ಕೆ ಹಚ್ಚಿದರೂ ಸಾಕು; ನನ್ನ ಶ್ರಮವು ಸಾರ್ಥಕವಾಯ್ತೆಂದು ಬಗೆಯುತ್ತೇನೆ.

ಇದನ್ನು ಬರೆಯುವುದಕ್ಕೂ ಬರೆದ ಬಳಿಕ ಬೆಳಕಿಗೆ ತರುವುದಕ್ಕೂ ನನಗೆ ಬಗೆಬಗೆಯಿಂದ ನೆರವಾದ ಎಲ್ಲ ಮಹನೀಯರುಗಳಿಗೂ ನನ್ನ ವಂದನೆಗಳನ್ನು ಸಮರ್ಪಿಸದೆ ಇರಲಾರೆನು. ಮುಂಬೈ ಸರಕಾರದ ಕನ್ನಡ ಸಂಸ್ಕೃತಿ ಸಂಶೋಧನ ಸಮಿತಿಗೆ ಈ ಪುಸ್ತಕವನ್ನು ಪ್ರಕಟಿಸಲು ಶಿಫಾರಸು ಮಾಡಿದ ಕರ್ಣಾಟಕ ವಿದ್ಯಾವರ್ಧಕ ಸಂಘಕ್ಕೂ, ಪ್ರಕಟಣೆಗೆ ಒಪ್ಪಿ ಇದರ ಅಚ್ಚಿನ ವೆಚ್ಚವನ್ನು ದಯಪಾಲಿಸಿದ 'ಕನ್ನಡ ಸಂಸ್ಕೃತಿ ಸಂಶೋಧನ ಸಮಿತಿ'ಗೂ ಋಣಿಯಾಗಿದ್ದೇನೆ.

ಕಾರಹುಣ್ಣಿವೆ
೨.೬.೧೯೩೯

ಶಂ. ಬಾ. ಜೋಶಿ

ಮೊದಲ ಮಾತು

> To understand the present age, therefore it is necessary
> to go back to a considerably earlier time.
>
> **-Bertrand Russell**

ಮನೆಕಟ್ಟಬೇಕೆನ್ನುವವರು ಮೊದಲು ಅದನ್ನು ಕಟ್ಟತಕ್ಕ ನೆಲದಲ್ಲಿ ಪೊಳ್ಳು-ಗಟ್ಟಿಗಳು ಎಲೆಲ್ಲಿವೆಯೆಂಬುದನ್ನು ಚೆನ್ನಾಗಿ ಅರಿತವರಾಗಿಬೇಕು. ಡೊಗರಿದ್ದಲ್ಲಿ ಅದನ್ನು ಅಗಿದುನೋಡಿ ತುಂಬಿಕೊಳ್ಳದೆ ಕಟ್ಟಿದ ಗೋಡೆಗಳು ಕುಸಿದು, ಕಟ್ಟಡವು ನೆಲಕ್ಕುರುಳುವುದು ಖಂಡಿತ. ಮನೆಯಂತೆ ನಾಡು ಕಟ್ಟುವ ವಿಷಯದಲ್ಲಿಯೂ ಈ ಮಾತು ಅಕ್ಷರಶಃ ನಿಜವಾಗಿದೆ. ಆದುದರಿಂದಲೆ ಕನ್ನಡದ ನೆಲೆಯನ್ನು ಅರಿದವರಿಂದ ಈ ನಾಡನ್ನು ಕಟ್ಟಲಿಕ್ಕಾಗಲಾರದೆಂದು ಹೇಳಬಹುದಾಗಿದೆ. ಕನ್ನಡದ ಐತಿಹ್ಯವನ್ನು ಅರಿತುಕೊಳ್ಳದೆ ನಡೆದ ಈ ನಾಡಿನ ಏಳಿಗೆಯ ಪ್ರಯತ್ನಗಳು ವಿಶೇಷ ಫಲಕಾರಿಯಾಗಲಾರವು. ನದಿಯ ಉಪಮೆಯಿಂದ ಈ ಮಾತು ಇನ್ನೂ ಸ್ಪಷ್ಟವಾಗಬಹುದು. ಕರ್ಣಾಟಕ-ನದೀಪ್ರವಾಹವು ಯಾವ ಯಾವ ದಿಕ್ಕಿನಿಂದ ಹೇಗೆ ಹರಿದುಬಂದಿದೆ? ಇದರ ಗತಿಯ ರೀತಿ ಯಾವುದು? ಆಳವೆಷ್ಟು? ಪ್ರವಾಹದ ವೇಗವೇನು? ಇದಕ್ಕೆ ಬಂದು ಸೇರಿದ ನದಿ, ಉಪನದಿಗಳಾವುವು? ಎಂಬಿವೆ ಮೊದಲಾದ ಸಂಗತಿಗಳ ಸ್ಪಷ್ಟಜ್ಞಾನವಿಲ್ಲದೆ ಎಲ್ಲಿ ಅಣೆಕಟ್ಟು ಕಟ್ಟಿದರೆ ಜನಶಕ್ತಿಯ ನೀರನ್ನು ಸರಿಯಾಗಿ ತಿರುಗಿಸಿಕೊಂಡು ನಾಡಿನ ಬೆಳವಣಿಗೆಯ ಹೆಚ್ಚು ಹೆಚ್ಚಿನ ಕೆಲಸಗಳನ್ನು ಕೈಕೊಳ್ಳಲಿಕ್ಕಾದೀತು ಎಂಬುದು ಗೊತ್ತಾಗಲಾರದು. ನಾಡಿನ ನೆಲೆಯನ್ನರಿಯದೆ ಮಾಡಿದ ದೇಶೋದ್ಧಾರದ ಪರಿಶ್ರಮಗಳು ಅಷ್ಟು ಯಶಸ್ವಿಯಾಗಲಾರವೆಂಬುದು ನಿಶ್ಚಿತ. ಆದಕಾರಣ, ದೇಶದ ಪೂರ್ವಇತಿಹಾಸವನ್ನು ದುರ್ಲಕ್ಷಿಸುವುದು ಎಂದೂ ಜಾಣತನವೆನಿಸಲಾರದು.

ನಾಡಿನ ಏಳಿಗೆಗಾಗಿ ಹೆಣಗುವವರಿಗೆ ತಮ್ಮ ಇತಿಹಾಸ, ಸಂಸ್ಕೃತಿಗಳ ಸಾಮಾನ್ಯಜ್ಞಾನವಾದರೂ ಇರಲೇಬೇಕು. ರೋಗಿಗೆ ಔಷಧಕೊಟ್ಟು ಅವನನ್ನು ನಿರೋಗಿಯಾದ ಬಲವಂತನನ್ನು ಮಾಡಬೇಕೆಂದು ಹಂಬಲಿಸುವ ವೈದ್ಯರು (ಡಾಕ್ಟರರು) ಆತನಿಗೆ ಆದ ಬೇನೆಯ ಇತಿಹಾಸವನ್ನೆ ಕಿವಿಯ ಮೇಲೆ ಹಾಕಿಕೊಳ್ಳದೆ ಸುಮ್ಮನೆ ಆ ಸೊಪ್ಪು, ಈ ಬೇರು ತಂದು ಅರೆದರೆದು ಕುಡಿಸುವ ಗಡಬಿಡಿಯನ್ನು ನಡೆಸಿದರೆ ಆ ರೋಗಿಯ ಗತಿಯೇನಾಗಬೇಕು! ಸರಿ; ಬರಿ ಹಿಂದಿನ ಇತಿಹಾಸವನ್ನೆ ಕೆದರುತ್ತ ಕುಳ್ಳಿರುವುದು ಹೆಡ್ಡತನವೆನಿಸುವುದು. ಆದರೆ, ತನ್ನ ನಿಜಸ್ಥಿತಿಯ ಅರಿವನ್ನುಂಟುಮಾಡಿಕೊಡುವ ಇತಿಹಾಸವನ್ನು ದುರ್ಲಕ್ಷಿಸುವುದೂ ಆತ್ಮಘಾತವಾಗದೆ ಇರಲಾರದು. ಈ ಗಳಿಗೆಯಲ್ಲಿ ಉಪಯುಕ್ತವಾದ ಕೆಲಸವೇ ಕೆಲಸ; ಉಳಿದುದೆಲ್ಲವೂ ಅಲ್ಲದ ಕೆಲಸ ಎಂಬ ಕಿರುಗಣ್ಣಿನವರ ಸಂಖ್ಯೆಯು ನಮ್ಮಲ್ಲಿ ಹೆಚ್ಚಾಗುತ್ತಲಿದ್ದುದು ಒಳ್ಳೆಯ ಲಕ್ಷಣವಲ್ಲ. 'ಇದರ ಉಪಯೋಗವೇನು ಈಗ?' ಎಂದು ಕೇಳಿ ತಟ್ಟನೆ

ಉತ್ತರವನ್ನು ಅಪೇಕ್ಷಿಸುವವರು ಕೆಲವರುಂಟು. 'ಈಗ ಈ ಸಂಶೋಧನೆಯಿಂದ ಏನು ಬಡವರ ಹೊಟ್ಟೆಯ ಚಿಂತೆ ತಪ್ಪುವುದೆ?' 'ಸಾಕ್ಷರತಾ ಪ್ರಸಾರವಾದಂತಾಯಿತೆ?' ಎಂದು ಮುಂತಾಗಿ ಪ್ರಶ್ನಿಸುವವರುಂಟು. ಈ ಪ್ರಶ್ನೆಗಳು ಕೇಳುವವರ ದೇಶಹಿತಬುದ್ಧಿಯ ನಿದರ್ಶಕಗಳಾಗಿದ್ದರೂ ಅವರ ಕಿರುನೋಟವನ್ನು ಹೊರಗೆಡುಹುತ್ತಲಿವೆ. ನಮ್ಮ ನಾಡಿನ ಆರ್ಥಿಕ ಸಮಸ್ಯೆಯನ್ನು ಬಿಡಿಸುವುದು, ಜನಸಾಮಾನ್ಯರನ್ನೆಲ್ಲ ಅಕ್ಷರಸ್ಥರನ್ನಾಗಿ ಮಾಡುವುದು ಇವೆಲ್ಲವೂ ಅತ್ಯಂತ ಸ್ತುತ್ಯಕಾರ್ಯಗಳಾಗಿವೆ. ನಮ್ಮ ನಾಡಿನ ಏಳ್ಗೆಗೆ ಈ ಕಾರ್ಯಗಳು ನಡೆಯಲೇಬೇಕು. ಆದರೆ, ಜನರಿಗೆ ಬರಿ ಊಟದ ಚಿಂತೆ ತಪ್ಪಿ ಓದುಬರೆಹಗಳು ಬಂದರೆ ಆಗಲಿಲ್ಲ. ತಿಳುವಳಿಕೆ ಬರಬೇಕು; ಮೂಢಭಾವನೆಗಳು ತೊಲಗಬೇಕು; ದೃಷ್ಟಿಯು ವಿಶಾಲವಾಗಬೇಕು. ಜನರಿಗೆ 'ಸುಧಾರಿಸಿರಿ, ಮೇಲೆ ಏಳಿರಿ' ಎಂದು ಆವೇಶದಿಂದ ಉಪನ್ಯಾಸ ಕೊಡುತ್ತ ಅಲೆವ ನೂರಾರು ಗಡಿಬಿಡಿ ಗಂಗರಿಂದ ಆಗದಷ್ಟು ಮತಪರಿವರ್ತನದ ಕಾರ್ಯವು, ಪ್ರಶಾಂತವಾದ ಏಕಾಂತದಲ್ಲಿ, ಆಳವಾದ ಸಂಶೋಧನೆಯ ಕೊನೆಯಲ್ಲಿ ಸ್ಫುರಿಸಿದ ಸತ್ಯದ ಜ್ಯೋತಿಯ ಒಂದಂಶವನ್ನು ಕಾಣಲು ಸಮರ್ಥರಾದ ಒಂದು ವ್ಯಕ್ತಿಯಿಂದಲೂ ಸಹಜವಾಗಿ ಜರುಗುವುದು. ಡಾರ್ವಿನನ ವಿಕಾಸವಾದವು, ಕಾರ್ಲಮಾರ್ಕ್ಸನ ಸಮಾಜಸಮತಾವಾದವು, ಫ್ರಾಯಿಡನ ಲಿಂಗಮಹಾತ್ಮ್ಯವು ಜಗತ್ತಿನಲ್ಲಿ ಮಾಡಿರುವ ಮತ್ತು ಮಾಡುತ್ತಲಿರುವ ಕ್ರಾಂತಿಯು ಹಿಂದೆ ಆಗಿಹೋದ ಎಲ್ಲ ರಾಜ್ಯಕ್ರಾಂತಿ, ಸಾಮಾಜಿಕ ಕ್ರಾಂತಿಗಳನ್ನೂ ಮೀರಿದೆ. ಇಜಿಪ್ತ, ಬಾಬಿಲೋನ, ಊರ್, ಮೊಹೆಂಜೋದಾರೊಗಳಲ್ಲಿ ದೊರೆತ ಪ್ರಾಚೀನ ಅವಶೇಷಗಳು ಜಗತ್ತಿನ ವಿಚಾರಪ್ರವಾಹವನ್ನೆ ಬದಲಿಸುತ್ತಲಿವೆ. ಆದರೆ, ಇಂದಿನ ಕೆಲಸಗಳ ಬರಿ ಜಂಜಾಲದಲ್ಲಿ ಸಿಕ್ಕುಬಿದ್ದು ಮುಂಗಾಣದವರಾದ ಅದೂರದರ್ಶಿಗಳು ಆವುದೆ ಬಗೆಯ ಶುದ್ಧ ಜ್ಞಾನೋಪಾಸನೆಯನ್ನು ತಿರಸ್ಕರಿಸುವುದುಂಟು. ಇಂತಹರು, ಕೇವಲ ಉಪಯುಕ್ತವಾದಿಗಳು (Utilitarians) ಎಂದೆನಿಸುವ ಯುರೋಪ ಮತ್ತು ಅಮೇರಿಕೆಯವರು ಸಂಶೋಧನಕ್ಕೆ ಕೊಡುತ್ತಿರುವ ಮನ್ನಣೆ ಮಹತ್ವಗಳನ್ನು ನೋಡಿಕೊಂಡಾದರೂ ತಮ್ಮ ಬುದ್ಧಿಯನ್ನು ತಿದ್ದಿಕೊಳ್ಳುವುದು ಅವಶ್ಯವಿದೆ.

ರಾಷ್ಟ್ರ-ನಿರ್ಮಾಣ-ಕಾರ್ಯದಲ್ಲಿ ತೊಡಗಿದ ಕಾರ್ಯಕರ್ತರಿಗೆ ಭವಿಷ್ಯದ ಕಗ್ಗತ್ತಲೆಯಲ್ಲಿ ಆಗಾಗ ದಾರಿತೋರುವ ತಿಳಿಬೆಳಕು ದೊರೆಯುತ್ತಿರುವುದು ಒಂದೊಂದು ಜ್ಞಾನಶಾಖೆಯ ತಪಸ್ವಿಗಳಿಂದಲೇ . ಆದುದರಿಂದ ಜ್ಞಾನಸಾಗರದ ನೆಲೆಯನ್ನು ಕಂಡುಹಿಡಿಯುವುದಕ್ಕಾಗಿ ನಡೆದ ಹಾಗೂ ನಡೆಯುತ್ತಲಿರುವ ಪ್ರತಿಯೊಂದು ಬಗೆಯ ಸಂಶೋಧನ ಕಾರ್ಯವೂ ಉಪಯುಕ್ತವೆಂದೇ ಹೇಳಬಹುದು. 'ತನ್ನ ತಾನು ಅರಿತೊಡೆ ತನ್ನ ಅರಿವೆ ಗುರು' ಎಂಬುದೊಂದು ಅನುಭಾವದ ವಚನ. ಸ್ವ-ಸ್ವರೂಪದ ಜ್ಞಾನವಾದವನಿಗೆ ಅವನ ಏಳಿಗೆಗಾಗಿ ಹೊರಗಿನ ಗುರುವಿನ ಅವಶ್ಯಕತೆಯಿಲ್ಲ. ವೇದಾಂತವು ವ್ಯಕ್ತಿಯ ಆತ್ಮದರ್ಶನವನ್ನು ಮಾಡಿಕೊಡುವುದಾದರೆ ಇತಿಹಾಸವು ರಾಷ್ಟ್ರ-ಪುರುಷನ ನಿಜಸ್ವರೂಪವನ್ನು ಕಣ್ಣೆದುರು ನಿಲ್ಲಿಸಬಹುದು. ನಿಜವಾದ ಇತಿಹಾಸವನ್ನು ದುರ್ಲಕ್ಷಿಸಿದುದರಿಂದಲೆ ನಾವಿಂದು ಈ ಕೀಳುಸ್ಥಿತಿಗೆ ಬಂದಿದ್ದೇವೆ.

ಅನಾದಿ, ಅನಂತ, ಅವ್ಯಕ್ತವಾಗಿರುವ ವಿಶ್ವಚಾಲಕ ಶಕ್ತಿಯ ಸಾಕಾರ ಸಗುಣಮೂರ್ತಿಯ ಸಮ್ಯಗ್ದರ್ಶನವನ್ನು ಮಾಡಿಸುವ ಸಾಮರ್ಥ್ಯವು ಇತಿಹಾಸದಲ್ಲಿದೆ.* ಜಗದ್ರಂಗದ ಮೇಲೆ ಬೇರೆ ಬೇರೆ ಕಾಲ-ಪರಿಸ್ಥಿತಿಗಳ ಸನ್ನಿವೇಶಗಳಲ್ಲಿ ವಿಶ್ವಶಕ್ತಿಯು ನಡೆಯಿಸಿದ ಬಗೆಬಗೆಯ ಲೀಲಾವಿಲಾಸಗಳೆ ಇತಿಹಾಸ. ಆ ನಾಟ್ಯಲೀಲೆಯ ಗುಟ್ಟು ಗೊತ್ತಾಗಿ ಆ ಆನಂದಾನುಭಾವದಲ್ಲಿ ನಾವೂ ಪಾಲುಗಾರರಾಗಬೇಕಿದ್ದರೆ ಇತಿಹಾಸದ ಸರಿಯಾದ ಅಭ್ಯಾಸವು ಒಂದು ಮಹತ್ವದ ಸಾಧನವಾಗಿದೆ. ಇತಿಹಾಸವು ಮನುಷ್ಯನ ದೃಷ್ಟಿಯನ್ನು ವಿಶಾಲಮಾಡಿಸಬಲ್ಲುದು; ಇತಿಹಾಸದ ಅರಿವಿಲ್ಲದ 'ಕುನ್ನಿಮಾನವರು' ತಮ್ಮಿಂದ ಹೊರಗೆ ಏನಾದರೂ ಜಗತ್ತಿದೆಯೆಂಬುದನ್ನೆ ಅರಿಯರು. ಬೆಕ್ಕಿನಂತೆ

---

* 'ಇತಿಹಾಸ'ದ ವ್ಯಾಖ್ಯಾನವು 'ಮಾನವ‌ಇತಿಹಾಸ' ಎಂಬ ನೆಲೆಯಲ್ಲಿ ಮುಂದುವರೆದದ್ದು 'ಮಾನವಧರ್ಮದ ಆಕೃತಿ' ಗ್ರಂಥದಲ್ಲಿ. ಆ ಪುಸ್ತಕದ ಪ್ರಾರಂಭದ ಪ್ರಸ್ತಾವನೆ ಗಮನಾರ್ಹ- (ಸಂ.)

ಕಣ್ಣುಮುಚ್ಚಿ ಹಾಲು ಕುಡಿಯಬಂದರೂ ಕಾಲಪುರುಷನು ತಲೆಯ ಮೇಲೆ ಏಟು ಹಾಕದೆ ಬಿಡನು. ಸುತ್ತಲಿನ ಜಾಗತಿಕ ಪರಿಸ್ಥಿತಿಯ ಆಗು-ಹೋಗುಗಳನ್ನು ನಿರೀಕ್ಷಿಸದೆ ತಮ್ಮ ಉಬ್ಬಿನಲ್ಲಿ, ತಮ್ಮ ಮಬ್ಬಿನಲ್ಲಿ ಮೈಮರೆತವರಾದುದರಿಂದಲೆ ಹಿಂದೂ ದೇಶದವರು ಹಿಂದೆ ಪೆಟ್ಟು ತಿಂದುದುಂಟು. ಇಂದು ಮತ್ತೆ ಅದೇ ಬಗೆಯ ತಪ್ಪನ್ನು ಮಾಡಿ ಕೇಡಿಗೆ ಈಡಾಗುವುದು ಜಾಣ್ಮೆಯಾದೀತೆ?

ಸತ್ಯವೇ ದೇವರು. ಸತ್ಯದ ಸಾಕ್ಷಾತ್ಕಾರವಾಗುವುದಕ್ಕೆ ಇತಿಹಾಸ ಶಾಸ್ತ್ರವೂ ಒಂದು ದಿವ್ಯವಾದ ಕೈದೀಪ. ನಮ್ಮ ಇತಿಹಾಸದ ವಿದ್ಯುದ್ದೀಪವು ನಮ್ಮ ನಾಡಿನಲ್ಲಿ ತೊಳಗಿ ಬೆಳಗುತ್ತಿಲ್ಲವಾದುದರಿಂದಲೆ ಜಾತಿ, ಕುಲ, ಧರ್ಮ, ಮತ, ಪಂಥಗಳ ದುರಭಿಮಾನದ ಕಗ್ಗತ್ತಲೆಯಲ್ಲಿ ನಮ್ಮ ಜನಗಳು ಮುಗ್ಗರಿಸುತ್ತಲಿದ್ದುದು ಕಂಡುಬರುತ್ತಲಿದೆ. ಧರ್ಮದ ಹೆಸರಿನಲ್ಲಿ ಅಧರ್ಮವು ನಡೆದಿದೆ. ನಮ್ಮ ನಾಡಿನ ಏಳಿಗೆಗೆ ಅಡ್ಡ ಬರುತ್ತಲಿರುವ ಜಾತಿ, ಕುಲ, ಧರ್ಮ, ಮತ, ಪಂಥಗಳ ದುರಭಿಮಾನಗಳನ್ನು ತೊಡೆದುಹಾಕುವುದಕ್ಕೆ ಸತ್ಯ-ಇತಿಹಾಸದಂಥ ಅಮೋಘವಾದ ಸಾಧನವು ಬೇರೊಂದಿಲ್ಲ. ನಮ್ಮ ನಾಡಿನಲ್ಲಿ ಹಿಂದಕ್ಕೆ ಆದ ಅನುಲೋಮ, ಪ್ರತಿಲೋಮ ವಿವಾಹಗಳ ಇತಿಹಾಸವು ಬೆಳಕಿಗೆ ಬಂದರೆ ನಮ್ಮ ಜನಗಳ ಜಾತಿಯ ಹೆಮ್ಮೆ, ಕುಲದ ಬಿಂಕಗಳೆಲ್ಲವೂ ಸಡಿಲದೆ ಇರಲಾರವು. ನಮ್ಮ ದೇವತೆಗಳು ಒಡಮೂಡಿದುದು, ಮಾಯವಾದುದು ಇವುಗಳ ಗುಟ್ಟು ಗೊತ್ತಾದರೆ ಧರ್ಮ-ಧರ್ಮಗಳ ಎಷ್ಟೋ ಹೊಡೆದಾಟಗಳು ಕಡಿಮೆಯಾಗುವುದು ನಿಶ್ಚಿತ. 'ಶಿವಸರ್ವೋತ್ತಮ' ಅಥವಾ 'ವಿಷ್ಣುಸರ್ವೋತ್ತಮ'ನೆಂದು ಕೂಗಿ, ಕಿರಿಚಿ ಕಾದಾಡುವ ಹುಂಬರ ಮೈತುಂಬಿದ ಗಾಳಿಯನ್ನು ಬಿಡಿಸುವುದಕ್ಕೆ ಇತಿಹಾಸವೊಂದೇ ಉತ್ತಮವಾದ ಉಪಾಯವು. ನಿಜವಾಗಿ ನೋಡಿದರೆ ವೇದದಲ್ಲಿ ಇಂದ್ರನಿಗೆ ಇರುವ ಇಂಬು ಮತ್ತಾರಿಗೂ ಇಲ್ಲ. ವೈದಿಕ ಧರ್ಮಾಭಿಮಾನಿಗಳೆಂದು ಹೆಮ್ಮೆಪಡುವವರು ಇಂದ್ರನನ್ನು ಆರಾಧಿಸಬೇಕು. ಇಂದ್ರನಿಗೇ ಹಿರಿಯ ಪಟ್ಟವನ್ನು ಕೊಡಬೇಕು. ವಿಷ್ಣುವು ಉಪೇಂದ್ರನು! ಉಪ-ಇಂದ್ರನು ಇಂದ್ರನಿಗೆ ಸಮಾನನೆಂತು? ಶಿವ(ರುದ್ರ)ನು ಆರ್ಯರ ದೇವತೆಯೆ? ಎಂಬುದೆ ಮೊದಲು ಸಂದೇಹಾಸ್ಪದವಾಗಿದೆ.* ಆದುದರಿಂದ 'ಶಿವಸರ್ವೋತ್ತಮ', 'ವಿಷ್ಣುಸರ್ವೋತ್ತಮ'ವೆಂಬ ಮಾತು ಅವೈದಿಕ. ಲಿಂಗಪೂಜೆಯು ವೇದಕಾಲದ ಆರ್ಯರಿಗೆ ಸಮ್ಮತವಿರಲಿಲ್ಲ. ಇಷ್ಟೆ ಅಲ್ಲ, ಲಿಂಗಪೂಜೆಯು ದ್ರಾವಿಡರದೂ ಅಲ್ಲ, 'ಲಿಂಗ'ವೆಂಬುದು ದ್ರಾವಿಡರಿಗಿಂತಲೂ ಮೊದಲು ಹಿಂದೂದೇಶದಲ್ಲಿ ನೆಲಸಿದ್ದ ಕೋಲ (Austro-Asiatic) ಜನಾಂಗದ ಭಾಷಾವರ್ಗಕ್ಕೆ ಸೇರಿದ ಶಬ್ದವೆಂದು ಪ್ರಿಲಸ್ಕಿಯವರು ಪ್ರತಿಪಾದಿಸುತ್ತಾರೆ.[೧] ನಮ್ಮವರು ಲಿಂಗ ಮತ್ತು ಯೋನಿಪೂಜೆಗಳಿಗೆ ಬಹಳ ಉದಾತ್ತ ಸ್ವರೂಪವನ್ನು ಕೊಟ್ಟು ಅದರ ವಿಶಿಷ್ಟ ಜ್ಞಾನವನ್ನೇ ನಿರ್ಮಿಸಿದ್ದುದು ನಿಜ. ಮೂಲದಲ್ಲಿ ರುದ್ರ ಮತ್ತು ಲಿಂಗಗಳು ಬಿನ್ನವಾಗಿದ್ದರೂ[೨] ಇವೆರಡನ್ನೂ ಒಂದುಗೂಡಿಸಿ ಅದ್ವೈತಭಾವದಿಂದ ಭಜಿಸುವುದು ಸೋಜಿಗವನ್ನುಂಟು ಮಾಡುವಂತಹದಾಗಿದೆ. ಇಂತಿವೆಲ್ಲ ಮಾತುಗಳ ಮನವರಿಕೆಯಾದರೆ ನಮ್ಮ ಧರ್ಮ, ದೇವತೆಗಳ ಬಗೆಗೆ ಇರುವ ದುರಭಿಮಾನವು ಎಷ್ಟೊ ಮಟ್ಟಿಗೆ ಕಡಿಮೆಯಾಗುವುದರಲ್ಲಿ ಸಂದೇಹವಿಲ್ಲ. ಧರ್ಮ, ಸಂಸ್ಕೃತಿಗಳ ಬಾಹ್ಯಸ್ವರೂಪದಲ್ಲಿ ಕಾಲಕಾಲಕ್ಕೆ ಮಾರ್ಪಾಟಗಳಾಗುತ್ತಿರುತ್ತವೆಂಬ ಅರಿವು ಸ್ವಲ್ಪ ತಲೆದೋರಿದರೂ ಸಾಕು; ಅದರಿಂದ ಜಾತಿ-ಮತಗಳ ಜಗಳಗಳೊಳಗಿನ ತೀವ್ರತೆಯ ತೀಕ್ಷ್ಣತೆಯೂ ಹೋಗಿಬಿಡುವುದು.

ಆರ್ಯರು-ಅನಾರ್ಯರು (ದಸ್ಯುಗಳು, ರಾಕ್ಷಸರು) ಎಂಬ ತಂಡಗಳ ಕಾಲವೊಂದು ಹಿಂದಾಯ್ತು. ವೈದಿಕರು-ಅವೈದಿಕರು (ಬೌದ್ಧ, ಜೈನ) ಎಂಬ ಮತಗಳ ಯುಗವು ಉರುಳಿಹೋಯ್ತು; ಹಿಂದೂ-ಮುಸಲ್ಮಾನವೆಂಬ ಧರ್ಮಕಲಹಗಳ ಅವಧಿಯೂ ಮುಗಿಯುತ್ತ ಬಂತು. ಇದೀಗ ದೇಶಾಭಿಮಾನದ ಮೆಟ್ಟಲನ್ನೇರಿ ಮಾನವ ಕುಟುಂಬದ ಐಕ್ಯದ ಹಿರಿಗುರಿಯ ಕಡೆಗೆ ವೇಗದಿಂದ ಸಾಗಿದ್ದೇವೆ. ಯುಗ-ಧರ್ಮವನ್ನರಿತುಕೊಂಡು ಕಾಲಕ್ಕೆ

---

* ಈ ಚರ್ಚೆಯ ವಿಶೇಷ ಸಂಗತಿಗಳನ್ನು ತಿಳಿಯುವವರು 'ಶಿವರಹಸ್ಯ' ಪುಸ್ತಕದ ಎರಡು-ಮೂರು ನೆಲೆಗಳನ್ನು ಗಮನಿಸಬೇಕು ಮೊದಲು 'ಕನ್ನಡದ ನೆಲೆ' ಬರೆದು ಅದೇ ವರ್ಷ 'ಶಿವರಹಸ್ಯ'ವನ್ನೂ ಬರೆದರು. ಈ ಆಲೋಚನೆಯ ಪ್ರತಿಫಲ ಅಲ್ಲಿ ಕಾಣಸಿಕ್ಕಿತು (ಸಂ).

ತಕ್ಕಂತೆ ತಮ್ಮನ್ನು ಮಾರ್ಪಡಿಸಿಕೊಳ್ಳುವುದರಲ್ಲಿಯೆ ಜಾಣ್ಮೆಯಿದೆ. ಮೊದಲು ನಾವು ಯಾರೆ ಇರಲಿ, ಎಲ್ಲಿಯವರೆ ಇರಲಿ, ನಾವು ಈಗ ನೆಲಸಿರುವ ನಾಡು ನಮ್ಮದು. ಅದರೊಡನೆ ಸಮರಸವಾಗಿ ಆ ನಾಡಿನ ಏಳ್ಗೆಗಾಗಿ, ಆ ನಾಡಿನ ಮುಖಾಂತರವಾಗಿ ಮಾನವಕೋಟಿಯ ಕಲ್ಯಾಣಕ್ಕಾಗಿ ದುಡಿಯುವುದರಲ್ಲಿಯೆ ನಮ್ಮ ಮೇಲ್ಮೆಯೂ ಇದೆ. ಇದುವೆ ಇಂದಿನ ಧರ್ಮ. ಇದಕ್ಕೆ ವಿಪರೀತವಾಗಿ ನಡೆವುದೆ ಅಧರ್ಮ.

ಕರ್ನಾಟದಲ್ಲಿ ನೆಲೆಸಿರುವ ಹಲವು ಪಂಗಡಗಳಲ್ಲಿ ಈ ಭಾವನೆಯು ಸಾಕಷ್ಟು ಜಾಜ್ವಲ್ಯವಾಗಿಲ್ಲವಾದುದರಿಂದಲೇ ನಾವು ಹಿಂದುಳಿದಿರುವುದು. ಹಿಂದೂದೇಶದ ಉಳಿದ ಪ್ರಾಂತಗಳಲ್ಲಿ ಕಾಲೂರಿ ನಿಂತ ಜನಾಂಗಗಳು ಆಯಾ ನಾಡಿನೊಂದಿಗೆ ಒಂದುಗೂಡಿ, ಆ ನಾಡಿನ ಅಭಿಮಾನ ತಾಳಿ ಕೆಲಸ ಮಾಡುತ್ತಿರಲು ಕರ್ನಾಟದೊಳಗಿನ ಜನಗಳು ಮಾತ್ರ ಇದರೊಡನೆ ಸಮರಸವಾಗುವುದಕ್ಕೆ ಇನ್ನೂ ಮೀನ-ಮೇಷ ಮಾಡುತ್ತಿದ್ದುದರ ಕಾರಣವೇನು? ಇದರ ಕಾರಣ ಮೀಮಾಂಸೆಯನ್ನು ಅರಿತುಕೊಂಡು ಜನಗಳಲ್ಲಿ ಸರಿಯಾದ ತಿಳುವಳಿಕೆಯನ್ನುಂಟು ಮಾಡುವವರೆಗೆ ಕನ್ನಡದ ಮುನ್ನಡೆಯು ಹೀಗೆಯೆ ಮುಗ್ಗರಿಸುತ್ತ ಸಾಗತಕ್ಕುದೇ ಸರಿ. ಕನ್ನಡವನ್ನು ಮರಳಿ ಕಟ್ಟಬೇಕೆನ್ನುವವರು ಮಾಡಬೇಕಾದ ಹಿರಿಗೆಲಸಗಳಲ್ಲಿ ಇದೊಂದು. ಕನ್ನಡದೊಡನೆ ಹೊಂದಿಕೊಳ್ಳಲು ಅಸಿಮಿಸಿಗೊಳ್ಳುತ್ತಿದ್ದವರು ಆರೆಯ ಮಾತಿನವರು ಮಾತ್ರ, ಎಂದು ಭಾವಿಸುವುದು ಸರಿಯಾಗಲಾರದು ಅಥವಾ ಕೇವಲ ಬ್ರಾಹ್ಮಣರು ಎಂದು ಹೇಳುವುದೂ ತಪ್ಪು. ಒಂದು ಕಾಲದಲ್ಲಿ 'ತಾವು ಕನ್ನಡಿಗರು' ಎಂದು ಹೇಳಿಕೊಳ್ಳಲು ಸಿದ್ಧರಿದ್ದವರು ದೊರೆಯುವುದೇ ಅಪರೂಪವಾಗಿದ್ದಿತು. ಈ ಮಾತಿನ ವಿಶೇಷ ವಿಸ್ತಾರವು ಇಲ್ಲಿ ಅಪ್ರಸ್ತುತ. ಒಂದು ಕಾಲವು ಹಾಗಿದ್ದರೂ ಇಂದು 'ನಾವೇ ಕನ್ನಡಿಗರು', 'ನಾವೂ ಕನ್ನಡಿಗರ', ಎಂಬೀ ಬಗೆಯ ಸೆಣಸಾಟವು ಸ್ವಲ್ಪ ಸ್ವಲ್ಪ ಆರಂಭವಾಗುತ್ತಲಿದೆ. ಆದರೆ, ಕನ್ನಡಜನಾಂಗದ ಇತಿಹಾಸವು ಸರಿಯಾಗಿ ಗೊತ್ತಾಗದೆ ಇದ್ದರೆ ಈ ತಿಕ್ಕಾಟಕ್ಕೆ ವಿಪರೀತ ಸ್ವರೂಪವು ಪ್ರಾಪ್ತವಾಗುವ ಹೆದರಿಕೆಯು ಇಲ್ಲದೆ ಇಲ್ಲ.

ಆದುದರಿಂದ ಕನ್ನಡಿಗರೆಂಬ ಅಭಿಮಾನವಿರುವ ಪ್ರತಿಯೊಬ್ಬನಿಗೂ ಕನ್ನಡದ ಸಾಂಸ್ಕೃತಿಕ ಪರಿವರ್ತನಗಳ ಐತಿಹ್ಯವು ಚೆನ್ನಾಗಿ ಗೊತ್ತಿರುವುದು ಅತ್ಯವಶ್ಯ. ಕನ್ನಡದ ಸಾಂಸ್ಕೃತಿಕ ಪರಿವರ್ತನಗಳ ಐತಿಹ್ಯವನ್ನು ಅರಿತುಕೊಳ್ಳಲು ಕನ್ನಡದ ನೆಲೆಯನ್ನು ಕಂಡುಕೊಳ್ಳುವುದೇ ಮಿಗಿಲಾದ ಹಾದಿ. ಕನ್ನಡದ ನೆಲೆಯನ್ನು ಅರಿತುಕೊಳ್ಳಲು ಬೇರೆ ಬೇರೆ ದಿಕ್ಕಿನಿಂದ ಹಲವು ಪ್ರಯತ್ನಗಳು ನಡೆಯುವುದು ಆವಶ್ಯಕ. ಅಂತಹ ಒಂದು ಅಲ್ಪಪ್ರಯತ್ನದಲ್ಲಿ ಕಂಡುಬಂದ ಕೆಲಸಂಗತಿಗಳನ್ನು ಮುಂದಿನ ಪ್ರಕರಣಗಳಲ್ಲಿ ವಿವರಿಸಲಾಗಿದೆ.

ಟಿಪ್ಪಣಿ

೧. Bagachi P.C., ***Pre. Aryan and Pre-Dravidian in India*** P. 8

೨. ***ಶಿವರಹಸ್ಯ***, ಪುಟ ೨೯-೩೭

'ಕನ್ನಡಿಗ' ಎಂಬ ಮಾತು ತಲೆಯೆತ್ತಿದ ಪರಿಸ್ಥಿತಿ

ಮನುಷ್ಯನು ತನ್ನ ಹೆಸರನ್ನು ತಾನೇ ಇಟ್ಟುಕೊಳ್ಳುವ ಅಥವಾ ಹೇಳಿಕೊಳ್ಳುವ ಪರಿಪಾಠವು ಕಡಮೆ. ತನ್ನ ಹೆಸರನ್ನು ಎತ್ತಿ ಹೇಳಬೇಕಾಗುವ ಹೊತ್ತು ಬರುವ ವರೆಗೂ ಸಾಮಾನ್ಯವಾಗಿ ಯಾವನೂ ತನ್ನ ಹೆಸರನ್ನು ಉಸಿರುವುದಿಲ್ಲ. ತಾನು ಹೊರನಾಡಿಗೆ ಹೋದಾಗ ಅಥವಾ ಹೆರವರು ತಮ್ಮಲ್ಲಿ ಬಂದಾಗ ಇಲ್ಲವೆ ಯಾರೊಬ್ಬರಿಂದ ತಾನು ಬೇರೆಯೆಂಬುದನ್ನು ತೋರಿಸಿಕೊಂಬಾಗ ತನ್ನ ಹೆಸರನ್ನು ಒಡನುಡಿಯಬೇಕಾಗುತ್ತದೆ. ಇನ್ನೂ ಒಂದಿಷ್ಟು ಬಿಚ್ಚಿ ಹೇಳಬಹುದಾದರೆ, ಹೆಸರಿಡುವವರು ಹೆರವರು. ತನಗೆ ತಾನೆ ಹೆಸರಿಟ್ಟುಕೊಳ್ಳುವಾಗಲು ಕೂಡ ಆ ಮನುಷ್ಯನು ಒಂದರಗಳಿಗೆ ತನ್ನಿಂದ ಭಿನ್ನನಾಗಬೇಕಾಗುತ್ತದೆ. ತನ್ನಿಂದ ತಾನು ಬೇರೆಯಾಗಲು ಬಾರದವನು ತನಗೆ ತಾನೇ ಹೆಸರಿಟ್ಟುಕೊಳ್ಳಲಾರನು. ತಾನೇ ತಾನಾಗಿರುವಾಗ ಯಾರು ಯಾರಿಗೆ ಹೆಸರಿಡಬೇಕು? ಆದುದರಿಂದಲೆ ಹೆಸರು ಬರುವುದು ಹೆರವರಿಂದ; ಹೆರವರ ಕಾರಣದಿಂದ.

ಕರ್ಣಾಟದ ಹೆಸರಿನ ಪ್ರಾಚೀನತಮ ಉಲ್ಲೇಖವೆಂದರೆ ಮಹಾಭಾರತದೊಳಗಿನದೆ. ಈಗಿನ ಮಹಾಭಾರತದ ರಚನಾಕಾಲವು ಕ್ರಿ. ಶ. ಕ್ಕೆ ಮೊದಲು ೨-೩ನೆಯ ಶತಮಾನವೆಂದು ವಿದ್ವಾಂಸರ ಮತವಿದೆ.[೧] ಈ ಮಹಾಭಾರತದ ಮೂಲಗ್ರಂಥವೊಂದು ಬೇರೆಯಿದ್ದಿತೆಂದೂ ಅದು ಸಣ್ಣದಿದ್ದು ಈಗಿನ ಸ್ವರೂಪದಲ್ಲಿ ಮುಂದೆ ರಚಿಸಲ್ಪಟ್ಟಿತೆಂದು ಬಲ್ಲಿದರ ಅಭಿಪ್ರಾಯವಿದೆ. ಈಗ ಪ್ರಚಾರದಲ್ಲಿರುವ ಮಹಾಭಾರತದ ಬೇರೆ ಬೇರೆ ಪ್ರತಿಗಳಲ್ಲಿ ಒಂದರಿಂದೊಂದು ಭಿನ್ನವಾದ ಎಷ್ಟೋ ಪಾಠಾಂತರಗಳಿದ್ದರೂ 'ಕರ್ಣಾಟದ' ಹೆಸರಿಲ್ಲದ ಪ್ರತಿಯೇ ಇಲ್ಲ. ಆದುದರಿಂದ ಕರ್ಣಾಟವು, ಕ್ರಿಸ್ತಶಕದ ಮುಂದೆ ೨-೩ ಶತಮಾನದಲ್ಲಿ ಬರೆಯಲ್ಪಟ್ಟ ಈಗ ದೊರೆವ ಮಹಾಭಾರತದ ರಚನಾಕಾಲದಲ್ಲಂತೂ ಸರಿಯೆ, ಅದಕ್ಕೂ ಮೊದಲಿನ ಮೂಲಭಾರತವು ಆದ ಕಾಲದಲ್ಲಿಯೇ ಅಸ್ತಿತ್ವದಲ್ಲಿದ್ದಿತೆಂದು ಊಹಿಸಬಹುದಾಗಿದೆ. ಅದು ಹೇಗಿದ್ದರೂ ಕ್ರಿ. ಶ. ದ ಮೊದಲು ೨೦೦-೩೦೦ರ ಸುಮಾರಿಗೆ ಕರ್ಣಾಟಕವು ತಲೆಯೆತ್ತಿಕೊಂಡಿತ್ತೆಂಬುದನ್ನು ಅಲ್ಲಗಳೆಯುವುದು ಯಾರಿಂದಲೂ ಸಾಧ್ಯವಿಲ್ಲ. ಕ್ರಿ. ಶ. ೨ನೆಯ ಶತಮಾನದ ಸುಮಾರಿಗೆ ಬರೆಯಲ್ಪಟ್ಟ ಮೃಚ್ಛಕಟಿಕ ನಾಟಕದಲ್ಲಿ ಕರ್ಣಾಟರ ಕಲಹದ ಒಂದು ವಿಶಿಷ್ಟ ರೀತಿಯ ಉಲ್ಲೇಖವು ಬಂದಿದೆ. ಆದುದರಿಂದ ಕ್ರಿಸ್ತಶಕದ ಆದಿಭಾಗದಲ್ಲಿ ಕರ್ಣಾಟರ ಗುಣಸ್ವಭಾವಾದಿಗಳ ವಿಶೇಷ ಪರಿಚಯವು ಭರತಖಂಡದ ಎಲ್ಲ ಭಾಗದವರಿಗೂ ಆಗಿದ್ದಿತೆಂದು ಕಂಡುಬರುತ್ತದೆ.

ಇದೆ ಸುಮಾರಿಗೆ ಬರೆಯಲ್ಪಟ್ಟ ಒಂದು ಗ್ರೀಕ್‌ನಗೆಯಾಟದಲ್ಲಿರುವ ಕನ್ನಡ ಮಾತುಗಳ ವಿಚಾರವೂ ಬಹಳ ಮಹತ್ವದ್ದಾಗಿದೆ. ಈ ಮಾತುಗಳು ಕನ್ನಡವೆಂದು ಡಾ. ಹಲ್ಸ, ಡಾ. ಶಾಮಶಾಸ್ತ್ರಿ, ಶ್ರೀ. ಆರ್. ನರಸಿಂಹಾಚಾರ್ಯ, ಶ್ರೀ. ಗೋವಿಂದ ಪೈ ಮೊದಲಾದ ವಿದ್ವಾಂಸರು ನಿರ್ಧರಿಸಿದ್ದಾರೆ. ಇಜಿಪ್ತಿನಲ್ಲಿ ದೊರೆತ ಗ್ರೀಕ

ನಾಟಕದಲ್ಲಿ ಕನ್ನಡ ಮಾತುಗಳು ಬಂದುದನ್ನು ನೋಡಿದರೆ ಕ್ರಿ. ಶ. ೨ನೆಯ ಶತಕದ ಸುಮಾರಿಗೆ ಕನ್ನಡರಿಗೂ ಗ್ರೀಕರಿಗೂ ಬಳಕೆಯಿದ್ದಿತೆಂದ ವ್ಯಕ್ತವಾಗುತ್ತಿದೆ, ಚಂದ್ರವಳ್ಳಿಯ ಅಗಿತದಲ್ಲಿ ಶ್ರೀ ಆರ್. ನರಸಿಂಹಾಚಾರ್ಯರಿಗೆ ದೊರೆತ ಗ್ರೀಕ ನಾಣ್ಯಗಳಿಂದ ಪ್ರಾಚೀನ ಕಾಲಕ್ಕೆ ಗ್ರೀಕರೊಡನೆ ಕರ್ನಾಟರ ವ್ಯಾಪಾರ ವ್ಯವಹಾರಗಳು ನಡೆಯುತ್ತಿದ್ದುದು ಬೆಳಕಿಗೆ ಬಂದಿದೆ.[೨] ಕ್ರಿಸ್ತಶಕದ ಮೊದಲು ಒಂದೆರಡು ಶತಮಾನಗಳಿಂದ ಕ್ರಿ. ಶ. ದ ೨-೩ನೆಯ ಶತಮಾನದವರೆಗೆ ಠಾಣೆ, ಚೌಲ ಈ ಭಾಗದ ಪಶ್ಚಿಮಕರಾವಳಿಯಲ್ಲಿ ಗ್ರೀಕರು ವ್ಯಾಪಾರಕ್ಕಾಗಿ ನೆಲಸಿದ್ದರೆಂದೂ ಕಂಡುಬಂದಿದೆ.[೩]

ಇಂತಿವೆಲ್ಲ ಕಾರಣಗಳಿಂದ ಕ್ರಿಸ್ತಶಕಕ್ಕೆ ಮೊದಲಿನಿಂದಲೂ-ಕೊನೆಗೆ ಕ್ರಿಸ್ತಶಕದ ಆರಂಭಕಾಲದಲ್ಲಂತು ನಿಶ್ಚಿತವಾಗಿ ಕರ್ನಾಟಕವು ಸುಪ್ರಸಿದ್ಧವಾಗಿ ಇದ್ದಿತೆಂಬಲ್ಲಿ ಸಂದೇಹವೇ ಇಲ್ಲ.

ಹೀಗಿದ್ದರೂ ಕರ್ನಾಟದ ಅಸ್ತಿತ್ವದ ಬಗ್ಗೆ ಸಂದೇಹಪಟ್ಟುಕೊಳ್ಳುವಂತಹ ಹಲವು ಪ್ರಮಾಣಗಳೂ ಉಂಟು. ಕರ್ನಾಟದ ಇತಿಹಾಸವೆಂದರೆ ವಿರೋಧಾಭಾಸಗಳ ಆಗರ. ಮಹಾಭಾರತದಲ್ಲಿ (ಕ್ರಿ. ಪೂ. ೩೨೦-೨೨೦) ಕರ್ನಾಟದ ಹೆಸರಿದೆ.[೪] ಆದರೆ ಅಶೋಕನ ಶಾಸನಗಳಲ್ಲಿ (ಕ್ರಿಸ್ತಪೂರ್ವ ೨೫೦) ಒಂದರಲ್ಲಿಯೂ ಕರ್ನಾಟದ ಉಲ್ಲೇಖವಿಲ್ಲ. ಕರ್ನಾಟಕಕ್ಕೆ ಅಶೋಕನ ಸಂದೇಶವಾಹಕರು ಬಂದುದುಂಟು. 'ತಿರುಳ್ಗನ್ನಡದ ಕೋಪಣ ನಗರ' (ಕೊಪ್ಪಳ) ಮಾಸ್ಕಿಗಳಲ್ಲಿ ಅಶೋಕನ ಶಾಸನಗಳು ದೊರೆತಿವೆ; ಅಲ್ಲದೆ ಸಿದ್ಧಪುರ (ಮೈಸೂರು ಸಂಸ್ಥಾನ) ದಲ್ಲಿವೆ. ರಕ್ಷಿತನೆಂಬ ಬುದ್ಧಭಿಕ್ಷುವು ಅಶೋಕನ ಕಾಲಕ್ಕೆ ಬನವಾಸಿಗೂ ಇನ್ನೊಬ್ಬನು ಮಹಿಷಮಂಡಲಕೂ ಹೋಗಿದ್ದನೆಂದೂ ಮಹಾವಂಶವೆಂಬ ಗ್ರಂಥವು ಹೇಳುತ್ತದೆ.[೫] ಈ ನಾಡೆಲ್ಲವೂ ಅಶೋಕನ ಸಾಮ್ರಾಜ್ಯಕ್ಕೆ ಒಳಪಟ್ಟಿತ್ತು. ಆದರೆ ಅಶೋಕನ ಕರ್ನಾಟದ ಹೆಸರನ್ನೆ ಎತ್ತಿಲ್ಲ.

ಸುಮಾರು ಕ್ರಿಸ್ತಶಕದ ಎರಡನೆಯ ಶತಮಾನದಲ್ಲಿ ರಚಿತವಾದ ಮೃಚ್ಛಕಟಿಕದಲ್ಲಿ ಕರ್ನಾಟದ ಹೆಸರಿದೆ.[೬] ಆದರೆ ಈ ಕಾಲದಲ್ಲಿ ಕರ್ನಾಟದಲ್ಲಿ ಆಳುತ್ತಿದ್ದ ಸಾತವಾಹನರ (ಕ್ರಿ. ಪೂ. ೨೦೮-೨೪೯) ಒಂದು ಗ್ರಂಥದಲ್ಲಾಗಲಿ, ಯಾವ ಶಾಸನಗಳಲ್ಲಾಗಲಿ ಕರ್ನಾಟದ ಹೆಸರು ಬಂದಿದ್ದರೆ ಆಣೆ! ಹಾಲನೆಂಬ ಸಾತವಾಹನರಾಜನು ಬರೆದ 'ಗಾಥಾಸಪ್ತಶತಿ'ಯಲ್ಲಿ 'ತುಪ್ಪ, ಪೊಡೆ (ಹೊಡೆ), ತೀರ್ (ಸಮರ್ಥನಾಗು)' ಎಂದು ಮುಂತಾದ ಅಚ್ಚಕನ್ನಡದ ಮಾತುಗಳು ದೊರೆಯಬಹುದು.[೭] ಸಾತವಾಹನರಲ್ಲಿ 'ಹಾಲ', 'ಪುಲಮಾಯಿ' ಎಂಬ ಹೆಸರುಗಳಲ್ಲಿ ಕನ್ನಡದ ಅಂದವು ಕಾಣಬರುತ್ತಿರಬಹುದು. ಆದರೆ, ಅವರು ತಮಗೆ ಕರ್ನಾಟರೆಂದುಕೊಂಡುದು ಎಲ್ಲಿಯ್ಯೂ ದೊರೆಯದು. ಬಳ್ಳಾರಿಜಿಲ್ಲೆಯ ಹಿರೇಹಡಗಲಿ ಮತ್ತು ಮಾಯಿಕೊಂಡಗಳಲ್ಲಿ ದೊರೆತ ಪ್ರಾಚೀನ ಶಾಸನಗಳಿಂದ ಈ ಭಾಗಕ್ಕೆ 'ಸಾತವಾಹನಿಹರ' ಎಂಬ ಹೆಸರಿದ್ದುದು ಬೆಳಕಿಗೆ ಬಂದಿದೆ. ಆದುದರಿಂದ ಸಾತವಾಹನರು ಕನ್ನಡಿಗರೇ ಆಗಿರಬೇಕೆಂದು ಶ್ರೀ ತಿರುಮಲೆ ತಾತಾಚಾರ್ಯರು ನಿರ್ಧರಿಸಿದ್ದಾರೆ.[೮] ಸಾತವಾಹನರಿಗ ಆಂಧ್ರರು ಅಥವಾ ಆಂಧ್ರಭೃತ್ಯರೆಂದು ಪುರಾಣಗಳಲ್ಲಿರುವ ಉಲ್ಲೇಖಗಳು ಅಸಂಬದ್ಧ ಎಂದು ಡಾ. ಸುಕಥನಕರರ ಅಭಿಪ್ರಾಯವಿದೆ.[೯] ಸಾತವಾಹನರಿಗೆ 'ಕುಂತಲಸ್ವಾಮಿ'ಗಳು ಎಂದು ವಾತ್ಸ್ಯಾಯನು ಹೇಳುತ್ತಾನೆ. ಸಾಮಾನ್ಯವಾಗಿ ಕುಂತಲ ಮತ್ತು ಕರ್ನಾಟಕಗಳು ಅಭಿನ್ನವೆಂದು ಆಧುನಿಕ ಸಂಶೋಧಕರಿಗೆ ಕಂಡುಬರುತ್ತಲಿದೆ.[೧೦] ಆದರೂ ಸಾತವಾಹನರು ಇದರ ಬಗೆಗೆ ಸಂಪೂರ್ಣ ಮೌನಿಗಳು.

೬ನೆಯ ಶತಮಾನದಿಂದ ಚಲುಕ್ಯರು ದಕ್ಷಿಣಾಪಥದ ಸಾಮ್ರಾಟರಾದರು. ಇವರ ರಾಜಧಾನಿ ಬಾದಾಮಿ. ಅಚ್ಚಕನ್ನಡದ ಊರು. ಬಾದಾಮಿ (ಕಿಸುವೊಳಲು) ಕರ್ನಾಟದ ಹೃದಯ-ಚೊಕ್ಕಟವಾದ ಕನ್ನಡ ಊರು, ಎಂದು ಪ್ರಾಚೀನಕಾಲದಿಂದಲೂ ವಿಖ್ಯಾತಿಯುಂಟು. ಇವರಿಗೆ ತಾವು 'ವಾತಾಪೀಪುರವರಾಧೀಶ್ವರ'ರೆಂಬ ಅಭಿಮಾನವೂ ಇಲ್ಲದಿಲ್ಲ. ಇವರ ದಂಡು 'ಅನಂತಂ, ಅಜೇಯಂ ಕರ್ನಾಟಕ ಬಲಂ' ಎಂದು ವಿಖ್ಯಾತವಾಗಿದ್ದಿತೆಂದು ರಾಷ್ಟ್ರಕೂಟರ ಶಾಸನಗಳಿಂದ ಗೊತ್ತಾಗುತ್ತದೆ.[೧೧] ಆದರೆ, ಇವರು ತಾವಾಗಿ ಹೆಮ್ಮೆಯಿಂದ ತಮ್ಮನ್ನು 'ಕನ್ನಡಿಗರು' ಎಂದುಕೊಂಡುದು ಎಲ್ಲಿಯೂ ಕಾಣಬರುವುದಿಲ್ಲ. ಆದರೂ ಇವರು ಕನ್ನಡಿಗರೆಂಬುದು ಸುಳ್ಳಲ್ಲ. 'ಚಲುಕ್ಯರು ಕನ್ನಡಿಗರು' ಎಂಬ ಬಗ್ಗೆ ಶ್ರೀ ಮಂ ಗೋವಿಂದ ಪೈ ಮತ್ತು ಶ್ರೀ ಆರ್. ಪಂಚಮುಖಿಯವರು ಇನ್ನೂ ಕೆಲವು

ಕಾರಣಗಳನ್ನು ಕೊಟ್ಟು ಲೇಖನಗಳನ್ನು ಬರೆದಿದ್ದಾರೆ.[೧೨] ಹ್ಯೂಯನ್‌ತ್ಸಾಂಗನೆಂಬ ಚೀನೀಪ್ರವಾಸಿಯು (ಕ್ರಿ. ಶ. ೬೩೦) ಬಾದಾಮಿಯಲ್ಲಿ ಆಳುತ್ತಿದ್ದ ೨ನೆಯ ಪುಲಿಕೇಶಿರಾಜನನ್ನು 'ಮಹಾರಾಷ್ಟ್ರ'ದ ಅರಸನೆಂದೂ ವರ್ಣಿಸಿದ್ದಾನೆ.

ಆದರೆ, ಆಗ ಕರ್ಣಾಟವು ಇನ್ನೂ ಜೀವಂತವಾಗಿದ್ದಿತೆಂದು ಸುಮಾರು ಆ ಕಾಲಾವಧಿಯೊಳಗಾಗಿ ಬರೆಯಲ್ಪಟ್ಟ ಎಷ್ಟೋ ಸಂಸ್ಕೃತ ಗ್ರಂಥಗಳಲ್ಲಿ ಬಂದಿರುವ ಕರ್ಣಾಟದ ಹೆಸರಿನ ಉಲ್ಲೇಖಗಳಿಂದ ಗೊತ್ತಾಗುತ್ತಿದೆ. ಮಾರ್ಕಂಡೇಯ ಪುರಾಣ, ವರಾಹಮಿಹಿರನ ಬೃಹತ್‌ಸಂಹಿತೆ (ಸುಮಾರು ೬ನೆಯ ಶತಮಾನ), ಭಾಗವತ[೧೩] (ಕ್ರಿ. ಶ. ೫೫೦-೬೫೦) ಈ ಗ್ರಂಥಗಳು ಕರ್ಣಾಟರ ಅಸ್ತಿತ್ವದ ಬಗ್ಗೆ ಸಾಕ್ಷಿ ಹೇಳುತ್ತಲಿವೆ.

೮ನೆಯ ಶತಮಾನದ ಮಧ್ಯದ ಸುಮಾರಿಗೆ ರಾಷ್ಟ್ರಕೂಟರು ಬಾದಾಮಿಯ ಚಲುಕ್ಯರನ್ನು ತಳ್ಳಿ ಆಳಲಾರಂಭಿಸಿದರು. 'ರಾಷ್ಟ್ರಿಕ' ಎಂದರೆ ಗೌಡ ಮತ್ತು ನಾಡಿನವ ಎಂಬ ಎರಡರ್ಥಗಳಿವೆಯೆಂದೂ ನಮ್ಮ 'ನಾಡವರೇ' ರಾಷ್ಟ್ರಕರೆಂದೂ ಬೇರೊಂದೆಡೆಯಲ್ಲಿ ಪ್ರತಿಪಾದಿಸಿದ್ದಾಗಿದೆ.[೧೪] ಪಾಲೀಕೋಶದಲ್ಲಿ ರಠಿಕೋ, ರಠಿಯೋ 'an inhabitant' ಎಂದು ಅರ್ಥ ಕೊಟ್ಟಿದೆ.[೧೫] ಆದುದರಿಂದ 'ರಟ್ಟಲೂರುಪುರವರಾಧೀಶ್ವರ'ರೆಂದೂ ಹೇಳಿಕೊಳ್ಳುವವರೂ ಮಾನ್ಯಖೇಟವು ರಾಜಧಾನಿಯಾಗಿ ಉಳ್ಳವರೂ (ಇವೆರಡೂ ಕನ್ನಡ ಊರುಗಳು) ಆದ ರಾಷ್ಟ್ರಕೂಟರು ಕನ್ನಡಿಗರೆಂಬ ಬಗೆಗೆ ಸಂದೇಹಪಟ್ಟುಕೊಳ್ಳಬೇಕಾದುದಿಲ್ಲ. ಡಾ. ಅಳತೇಕರರೆಂಬ ಮಹಾರಾಷ್ಟ್ರೀಯ ಸಂಶೋಧಕರು ರಾಷ್ಟ್ರಕೂಟರು ಕನ್ನಡಿಗರೆಂದೇ ಪ್ರತಿಪಾದಿಸಿದ್ದಾರೆ.[೧೬] ಕಾಶ್ಮೀರದೇಶದ ಪ್ರಾಚೀನ ಇತಿಹಾಸ ಗ್ರಂಥವಾದ ರಾಜತರಂಗಿಣಿಯಲ್ಲಿ 'ರಟ್ಟರು ಕರ್ಣಾಟರು' ಎಂದುದುಂಟು.[೧೭] ರಟ್ಟರು ಮತ್ತು ರಾಷ್ಟ್ರಕೂಟರು ಒಂದೇ ಎಂದು ಶಾಸನಗಳಿಂದ ಸಿದ್ಧವಾಗಿದೆ.[೧೮]

ಇಷ್ಟೆ ಅಲ್ಲ, ರಾಷ್ಟ್ರಕೂಟರ ದಂಡಿಗೂ 'ಕರ್ಣಾಟ ಸೈನ್ಯ' ಎಂಬುದಾಗಿ ಹೊರನಾಡುಗಳಲ್ಲಿ ಕರೆವ ವಾಡಿಕೆಯಿದ್ದಿತೆಂದು ಕಂಡುಬರುತ್ತದೆ! ಡಾ. ಕೀಲಹಾರ್ನರು "ಮಹೇಂದ್ರಪಾಲನ ಕಾಲದ ಎರಡು ಶಾಸನ"ಗಳನ್ನು ಕುರಿತು ಬರೆದ ಟಿಪ್ಪಣಿಯಲ್ಲಿ ಅಭಿಪ್ರಾಯಪಟ್ಟಿರುವುದೇನೆಂದರೆ: ಈ ಅರಸನು ತಾನು ಸೋಲಿಸಿದೆನೆಂದು ಹೇಳುವ 'ಕರ್ಣಾಟ ಸೈನ್ಯ'ವು ರಾಷ್ಟ್ರಕೂಟರೇ ಆಗಿರಬೇಕೆಂದು ನನ್ನ ಅಭಿಪ್ರಾಯವು.

> In my opinion the *'Karnata army'* which is said to have been defeated by him can only have been an army of the Rashtrakutas.[೧೯]

ಈ ರಾಜರ ಕನ್ನಡದ ಅಭಿಮಾನದ ಬಗ್ಗೆ ಸಂದೇಹಕ್ಕೆ ಎಡೆಯಿಲ್ಲ. ರಾಷ್ಟ್ರಕೂಟ ಚಕ್ರವರ್ತಿ ನೃಪತುಂಗದೇವನನ್ನು (೮೧೫) 'ನಿನ್ನನ್ನಂ ನೀನೆ, ನೀನೆ' ಎಂದು ಕೃತಜ್ಞತೆಯಿಂದ ಎದೆಉಕ್ಕಿ ಕನ್ನಡ ಕವಿಗಳು ಬಾಯಾರೆ ಹೊಗಳಿದ್ದಾರೆ. ಕನ್ನಡ ಸಾಹಿತ್ಯಕ್ಕೆ-ಕವಿಗಳಿಗೆ ರಾಜಮಾರ್ಗವನ್ನು ಮಾಡಿಕೊಟ್ಟ ಮಹಾರಾಜನೇ ಇವನು. ಇದೇ ವಂಶದ ಮೂರನೆಯ ಕೃಷ್ಣನು (೯೪೦-೯೬೮) ಭರತಖಂಡದಲ್ಲಿ ಮಹಾ ಸಾಮ್ರಾಟನೆನಿಸಿ ವಿಖ್ಯಾತನಾದನು. ವಿಂಧ್ಯದಿಂದ ರಾಮೇಶ್ವರದ ವರೆಗೆ ಏಕಛತ್ರಾಧಿಪನೆನಿಸಿದ್ದನು. ಸಿಂಹಳರಿಂದ ಕಪ್ಪಕಾಣಿಕೆಗಳನ್ನು ಪಡೆದನು. ಇಂತಹ ರಾಜಾಧಿರಾಜನಾದ ೩ನೆಯ ಕೃಷ್ಣನಿಗೆ ತನ್ನ ಭಾಷಾಭಿಮಾನ ವಿಲ್ಲದೆ ಇದ್ದರೆ ಆತನು ಪೊನ್ನನೆಂಬ ಕನ್ನಡ ಕವಿಗೆ ತನ್ನ ಓಲಗದಲ್ಲಿ ಕವಿಚಕ್ರವರ್ತಿಯೆಂಬ ಬಿರುದನ್ನಿತ್ತು ಮನ್ನಣೆಮಾಡುತ್ತಿದ್ದನೆ?[೨೦] ಇದೆ ೩ನೆಯ ಕೃಷ್ಣನ ಒಂದು ಶಾಸನವು ಉತ್ತರ ಹಿಂದುಸ್ತಾನದಲ್ಲಿ ಜೂರಾ ಎಂಬಲ್ಲಿ ದೊರೆತಿದೆ.[೨೧] ಅದು ಆ ಕಾಲದ ತಿಳಿಗನ್ನಡನುಡಿಯಲ್ಲಿದೆ! ಈ ರಾಷ್ಟ್ರೂಕೂಟರ ಒಂದು ಶಾಖೆಯು ಗುಜರಾತದಲ್ಲಿ ಆಳುತ್ತಿದ್ದಿತು. ನವಸರಿ, ಬಡೋದೆ ಭಾಗದಲ್ಲಿ ಸಿಕ್ಕಿರುವ ಪ್ರಾಚೀನ ತಾಮ್ರಪಟಗಳಲ್ಲಿ ಸಂಸ್ಕೃತ ಭಾಷೆಯಿದ್ದು, ಅವು ನಾಗರಿಲಿಪಿಯಲ್ಲಿ ಬರೆಯಲ್ಪಟ್ಟಿದ್ದರೂ ಕೊನೆಗೆ ಈ ರಾಷ್ಟ್ರಕೂಟ ರಾಜರು ಕನ್ನಡದಿಂದ ಒಪ್ಪ (ಸಹಿ) ಹಾಕಿದುದು ಬೆಳಕಿಗೆ ಬಂದಿದೆ.[೨೨] ಇನಿತೊಂದು ಕನ್ನಡದ ಹೆಮ್ಮೆಯಿರುವ ರಾಷ್ಟ್ರಕೂಟರೂ ತಮ್ಮನ್ನು 'ಕನ್ನಡಿಗರು', 'ಕರ್ಣಾಟರು' ಎಂದು ಏಕೆ ಹೇಳಿಕೊಂಡಿರಲಿಕ್ಕಿಲ್ಲ?

ಈ ಸುಮಾರಿಗೂ 'ಕರ್ಣಾಟ'ದ ಹೆಸರು ಮೂಲೆಗುಂಪಾಗಿದ್ದಿತೆಂದು ಭಾವಿಸುವ ಕಾರಣವಿಲ್ಲ. ಏಕೆಂದರೆ ರಾಜಶೇಖರನೆಂಬ ೧೦ನೆಯ ಶತಮಾನದ ಕವಿಯು "ಕರ್ಣಾಟೋ ಯುದ್ಧ ತಂತ್ರೇ ಚತುರಮತಿಃ, ಸಮರ

ಕರ್ಮಣಿ ನಿಸರ್ಗೋದ್ಭವಾ ಏವ ಕರ್ಣಾಟಾಃ" ಎಂದೂ "ಕಿಂಬ್ರೂಥ!.....ಅಖಂಡಿತ ಪುರುಷಾಕಾರಾಃ ಹಿ ಕರ್ಣಾಟಾಃ" ಎಂದು ಕನ್ನಡಿಗರ ಶೌರ್ಯ, ಧೈರ್ಯಗಳನ್ನು ಮುಕ್ತಕಂಠದಿಂದ ಸ್ತುತಿಸಿದ್ದಾನೆ! ಈ ಕವಿಯ ಕಣ್ಣೆದುರು ಆಗಿನ ಮಹಾಸಾಮ್ರಾಟರಾದ ರಾಷ್ಟ್ರಕೂಟರು ಹಾಗೂ ಅವರ ವೀರಸೈನಿಕರಲ್ಲದೆ ಬೇರಿನ್ನಾರೂ ಇರಲಾರರೆಂಬುದು ಸ್ಪಷ್ಟ. ಏಕೆಂದರೆ ಸಾಧಾರಣವಾಗಿ ಈತನು ರಾಷ್ಟ್ರಕೂಟ ೩ನೆಯ ಕೃಷ್ಣನ ಸಮಕಾಲೀನ.

ರಾಷ್ಟ್ರಕೂಟರ ಕಾಲದ ವರೆಗೂ ನೆರೆಹೊರೆಯ ನಾಡಿನವರು ಕರ್ಣಾಟದ ಹೆಸರನ್ನು ಹೇಳುವರು; ಆದರೆ ಕರ್ಣಾಟದ ರಾಜರೆ ಮಾತ್ರ ತಮ್ಮ ನಾಡಿನ ಹೆಸರಿನಿಂದ ಹೆಮ್ಮೆಪಟ್ಟುಕೊಳ್ಳುವುದು ಕಂಡುಬರುವುದಿಲ್ಲ. ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ; ಆದುದರಿಂದ ಈ ನಾಡಿನ ಜನಗಳಲ್ಲಿಯೂ ತಾವು ಕರ್ಣಾಟರೆಂಬ ವಿಶೇಷವಾದ ಅಭಿಮಾನವು ಆ ಕಾಲಕ್ಕೆ ಕಾಣಿಸಿಕೊಳ್ಳದಿದ್ದಲ್ಲಿ ಸೋಜಿಗವಿಲ್ಲ. ಆದರೆ, ಇದಕ್ಕೆ ಕೆಲವೊಂದು ಅಪವಾದಗಳೂ ಇಲ್ಲದಿಲ್ಲ. ಕದಂಬರ ಒಂದು ಪ್ರಾಚೀನ ಶಾಸನದಲ್ಲಿ 'ಸಮಸ್ತ ಕರ್ಣಾಟ ಭೂವರ್ಗ ಭರ್ತಾರ'ನೆಂದು ಅರಸನ ವರ್ಣನೆಯಿದೆ.[೨೩] ಆದರೆ ಇದು ಕೃತ್ರಿಮವಾದ (Spurious) ತಾಮ್ರಪಟವೆಂದು ಕಂಡುಬಂದಿದೆ. ಇದು ತಾನು ತೋರಿಸಿಕೊಳ್ಳುವಂತೆ ಕ್ರಿ. ಶ. ೪೫೦ನೆಯ ವರುಷದ ಶಾಸನವಲ್ಲದಿದ್ದರೂ ಕನಿಷ್ಠ ೭-ಆನೆಯ ಶತಮಾನದಲ್ಲಾದರೂ ಬರೆಯಲ್ಪಟ್ಟುದೆಂದು ಅದರ ಅಕ್ಷರಗಳಿಂದ ಊಹಿಸಬಹುದಾಗಿದೆ. ಆದುದರಿಂದ ಸುಮಾರು ೭-ಆನೆಯ ಶತಕದಲ್ಲಿ ಆ ತಾಮ್ರಪಟವನ್ನು ಕೆತ್ತಿಸಿದವನಿಗಾದರೂ 'ಸಮಸ್ತ ಕರ್ಣಾಟಕ'ದ-ಅಖಂಡ ಕರ್ಣಾಟಕದ ಸ್ಪಷ್ಟವಾದ ಕಲ್ಪನೆಯು ಬಂದಿದ್ದತೆಂಬುದು ಸ್ಪಷ್ಟವಿದೆ. ಎರಡನೆಯ ಪುಲಿಕೇಶಿ ಮಹಾರಾಜನನ್ನು ಮಹಾರಾಷ್ಟ್ರರಾಜನೆಂದು ಹ್ಯೂಯೆನ್‌ತ್ಸಾಂಗನು ಹೇಳಿದರೂ ಈ ರಾಜಾಧಿರಾಜ ಪರಮೇಶ್ವರನ ಸೊಸೆಯು ತಾನು 'ಕರ್ಣಾಟರಾಜಪ್ರಿಯೆ' ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾಳೆ. ಈ ಕರ್ಣಾಟ ಮಹಾರಾಣಿಯು ಭೂಲೋಕದ ಮೇಲಣ ಪ್ರತ್ಯಕ್ಷ ಸರಸ್ವತಿಯೇ ಸರಿ, ಎಂದು ಮುಂತಾಗಿ ಸಂಸ್ಕೃತ ಭಾಷೆಯೊಳಗಿನ ದಂಡಿ, ರಾಜಶೇಖರಾದಿ ಉದ್ದಾಮ ಕವಿಗಳೇ ಹೊಗಳಿದ್ದಾರೆ. ಇಂತಹ ಅಸಾಮಾನ್ಯ ಕವಿತಾಸಾಮರ್ಥ್ಯವುಳ್ಳ ಮಹಾರಾಜ್ಞಿಯು ತಾನು ಆ ಉಚ್ಚಸ್ಥಿತಿಗೆ ಏರಿದ ಮೇಲೆ 'ಕರ್ಣಾಟದವಳು ತಾನು' ಎಂಬುದನ್ನು ಆಗಲೂ ನೆನಪಿಟ್ಟುದು ಸೋಜಿಗದ ಸಂಗತಿ!

ಸಾತವಾಹನರು, ಬಾದಾಮಿಯ ಚಲುಕ್ಯರು, ರಾಷ್ಟ್ರಕೂಟರು, 'ತಾವು ಕರ್ಣಾಟದ ರಾಜರು', 'ಕರ್ಣಾಟಕರು' ಎಂದು ಅಭಿಮಾನದಿಂದ ಹೇಳಿಕೊಳ್ಳದಿರಲು ಕಾರಣಗಳೇನು? ಇದಕ್ಕೆ ಒಂದು ಕಾರಣವಂತೂ ಸ್ಪಷ್ಟವಿದೆ. ಅದೇನೆಂದರೆ: ಸಾತವಾಹನರಿಂದ ರಾಷ್ಟ್ರಕೂಟರ ವರೆಗೂ ಎಂದರೆ ಸುಮಾರು ಹತ್ತನೆಯ ಶತಮಾನದ ಕೊನೆಯ ವರೆಗೆ ವಿಂಧ್ಯ-ನೀಲಗಿರಿಗಳ ನಡುವಣ ನಾಡಿನಲ್ಲಿ ಕನ್ನಡರಿಗೆ ಎದುರಾಳಿಯಾಗಿ ಮುಂದೆ ಬರಲು ತೆಲುಗು ಇಲ್ಲವೆ ಮರಾಠಿ ಆವುದೊಂದೂ ತಲೆಯೆತ್ತಿ ತನ್ನ ಕಾಲಮೇಲೆ ತಾನು ನಿಲ್ಲುವಷ್ಟು ಸಾಮರ್ಥ್ಯವನ್ನು ಇನ್ನೂ ಸಂಪಾದಿಸಿರಲಿಲ್ಲ. ಆದುದರಿಂದ ದಕ್ಷಿಣಾಪಥದಲ್ಲಿ ತಾವೇ ತಾವಾಗಿ ಮೆರೆಯುತ್ತಿದ್ದ ಕನ್ನಡಿಗರಿಗೆ, ತಮ್ಮ ಮನೆಯಲ್ಲಿ 'ತಾವು ಕನ್ನಡಿಗರು' ಎಂದು ಹೇಳಿಕೊಳ್ಳುವ ಆವಶ್ಯಕತೆಯಾದರೂ ಏನು? ೧೧ನೆಯ ಶತಮಾನದಿಂದ ಮುಂದೆ ಇದೆಲ್ಲ ಪರಿಸ್ಥಿತಿಯೂ ಕ್ರಮವಾಗಿ ಬದಲಾಗಲಾರಂಭಿಸಿತು. ಹೊಯ್ಸಳರ ಕಾಲಕ್ಕೆ ಎಂದರೆ ಸುಮಾರು ೧೨-೧೩ನೆಯ ಶತಮಾನಕ್ಕೆ ಈ ನಾಡಿನವರಲ್ಲಿ 'ತಾವು ಕನ್ನಡಿಗರು' ಎಂಬ ಅಭಿಮಾನದ ಜ್ಯೋತಿಯು ಅಮಂದವಾಗಿ ಬೆಳಗತೊಡಗಿದುದು ಕಂಡುಬರುತ್ತದೆ.


ಕ್ರಿ. ಶ. ೯೦೦ನೆಯ ವರುಷದ ರಾಷ್ಟ್ರಕೂಟರ ಕಾಲದ ಒಂದು ಶಾಸನವು ದೊರೆತಿದ್ದು ಅದರಲ್ಲಿ "ಕಣ್ಣಾಡಿ ಅರಸರ್.... ಕೊಟ್ಟೋರ್" ಎಂದು ಬರೆದಿದೆ.[೨೪] ಇಲ್ಲಿ 'ಕಣ್ಣಾಡಿ' ಅರಸರೆಂದರೆ ಕನ್ನಡಿ(ಗ) ರಾಜರು, ಎಂದು ಅರ್ಥಮಾಡಲು ಅವಕಾಶವಿದೆ. ತಮಿಳರ ದಾಳಿಗಳ ತೊಂದರೆಯನ್ನು ಆಗಾಗ ಅನುಭವಿಸಬೇಕಾಗುತ್ತಿದ್ದ ಕರ್ಣಾಟದ ದಕ್ಷಿಣ ಭಾಗದಲ್ಲಿ ಈ ಶಾಸನವು ದೊರೆತಿದೆ. ಇನ್ನೊಂದು ಭಾಷೆಯವರ ಆಘಾತದ ಅನುಭವವು ಬಂದಾಗಲೆ ಮನುಷ್ಯನಿಗೆ ತನ್ನ ಭಾಷೆಯ ಎಚ್ಚರವುಂಟಾಗುವ ಸಂಭವವಿದೆ. ಆದುದರಿಂದಲೆ, ಈ ಶಾಸನದಲ್ಲಿ ಆ

ರಾಷ್ಟ್ರಕೂಟರಾಜನನ್ನು 'ಕಣ್ಣಡಿ' ಅರಸನೆಂದು ಹೇಳಿರಬಹುದಾಗಿ ತೋರುತ್ತದೆ. ಈ ಶಾಸನದಲ್ಲಿ ಹಳಗನ್ನಡ ಭಾಷೆಯಿದ್ದರೂ ಅದರಲ್ಲಿ ತಮಿಳುಪದಗಳು ಬಹಳವಾಗಿ ಬೆರೆತುಕೊಂಡಿವೆ! 'It contains several Tamil words' ಎಂದು ಇದನ್ನು ಓದಿದ ಸಂಶೋಧಕರು ಬರೆದಿಟ್ಟಿದ್ದಾರೆ.

ಆದರೆ, ಈ ಶಾಸನದಲ್ಲಿರುವ 'ಕಣ್ಣಡಿ ಅರಸರ್' ಎಂಬುದಕ್ಕೆ ಇದನ್ನು ಓದಿ ಸಂಗ್ರಹಿಸಿದ ಸಂಶೋಧಕರು ಬೇರೆ ಅರ್ಥವನ್ನು ಮಾಡಿದ್ದಾರೆ.[೨೫] ಕ್ರಿ. ಶ. ೯೦೦ರಲ್ಲಿ ರಾಷ್ಟ್ರಕೂಟ ಎರಡನೆಯ ಕೃಷ್ಣನು ಆಳುತ್ತಿದ್ದನು. ಕೃಷ್ಣ ಶಬ್ದವೆ ಮಾರ್ಪಟು ಈ ಶಾಸನದಲ್ಲಿ 'ಕಣ್ಣಡಿ' ಎಂದಾಗಿರಬೇಕು, ಎಂದು ಸಂಪಾದಕರ ಅಭಿಪ್ರಾಯ. ಕೃಷ್ಣ ಶಬ್ದವು ಕನ್ಹ, ಕನ್ನರ ಅಥವಾ ಕನ್ನಡ ಆಗಬಹುದು; ಅದು 'ಕಣ್ಣಡಿ' ಎಂದು ಏಕೆ ಮತ್ತು ಹೇಗೆ ಮಾರ್ಪಟ್ಟಿತೊ ತಿಳಿಯದಾಗಿದೆ! ಆದುದರಿಂದ 'ಕಣ್ಣಡಿ' ಎಂಬುದು ಕನ್ನಡಿ(ಗ) ಶಬ್ದದ ಪ್ರಾಥಮಿಕರೂಪವಾಗಿರಬಹುದೇನೊ ಎಂದು ಸಂದೇಹ.

ಕ್ರಿ. ಶ. ೧೧೫೨ರ ಸುಮಾರಿನ ಒಂದು ಶಾಸನದಲ್ಲಿ 'ಕನ್ನಡಿ'ಯ ಕೇತಯ್ಯನಾಯಕ ಎಂಬ ಒಂದು ಹೆಸರು ಕಾಣಿಸಿಕೊಳ್ಳುವುದು. ಇಲ್ಲಿ 'ಕನ್ನಡಿ' ಎಂಬುದು ದೇಶವಾಚಕವಾಗಿದ್ದು ಅದರ ಅರ್ಥ ಕನ್ನಡಿಗನು ಎಂದು ಮಾಡಲಾಗಿದೆ. ಶ್ರೀ ಪಿ. ಶಂಕರನಾರಾಯಣ, ಇವರು ಬರೆದ ತೆಲುಗುಕೋಶದಲ್ಲಿ 'ಕನ್ನಡಿ' 'a native or inhabitant of Carnatic ' ಎಂದು ದೊರೆಯುತ್ತದೆ. ತೆಲುಗರಂತೆ ತಮಿಳರಲ್ಲಿಯೂ ಕನ್ನಡಿಗರಿಗೆ 'ಕನ್ನಡಿ'ಯವರೆಂದು ಕರೆವ ವಾಡಿಕೆಯು ಇದ್ದಿತೆಂದು ಶಾಸನಾದಿಗಳಿಂದ ವ್ಯಕ್ತವಾಗುತ್ತದೆ. 'ಕನ್ನಡಿಯನ' ಕಾಲುವೆ, 'ಕನ್ನಡಿ'ಯ ರಾವುತರು, ಕನ್ನಡಿಯ ನಾಯಕರ್ ಎಂದು ಮುಂತಾದ ಪ್ರಾಚೀನ ಪ್ರಯೋಗಗಳು ದೊರೆಯುತ್ತವೆ. ಮಾರವಾಡಿ, ಗುಜರಾತಿ, ಹಿಂದುಸ್ತಾನಿ ಭಾಷೆಗಳಲ್ಲಿ 'ಕನಡಿ' ಭಾಷಾ, 'ಕನಡಿ' ಲೋಕ ಎಂದು ಹೇಳುವ ರೂಢಿಯು ಈಗಲೂ ಉಂಟು. ಮರಾಠಿಯಲ್ಲಿ 'ಕಾನಡಿ' ಎನ್ನುವರು. ಸಂಸ್ಕೃತೋದ್ಭವ (ಆರ್ಯವರ್ಗದ) ಈ ಭಾಷೆಗಳಲ್ಲಿ ದ್ವಿತ್ವದ ಹಿಂದಿನ ಹ್ರಸ್ವಾಕ್ಷರವನ್ನು ಹಲವೆಡೆಗಳಲ್ಲಿ ತಟ್ಟನೆ ಉಚ್ಚರಿಸಲಿಕ್ಕೆ ಆಗದಿರುವುದರಿಂದ ಹಿಂದಿ, ಮಾರವಾಡಿ ಭಾಷೆಗಳಲ್ಲಿ ಕನ್ನಡಿಯೊಳಗಿನ ನಕಾರದ ದ್ವಿತ್ವವು ಲೋಪಹೊಂದಿತು; ಮರಾಠಿಯವರು ತಮ್ಮ ಪದ್ಧತಿಯಂತೆ ದ್ವಿತ್ವಾಕ್ಷರದ ಹಿಂದಿನ ಹ್ರಸ್ವಾಕ್ಷರವನ್ನು ದೀರ್ಘಮಾಡಿಕೊಂಡಿದ್ದಾರೆ. ಕಕ್ಕ-ಕಾಕಾ, ಕಪ್ಪಡ-ಕಾಪಡ ಆದಂತೆ ಕನ್ನಡಿ-ಕಾನಡಿ ಆಯಿತು.

ರಾಷ್ಟ್ರಕೂಟ ರಾಜನ ಕನ್ನಡ ಒಪ್ಪ



ಮತಂ ಮಮ ಶ್ರೀಧ್ರುವರಾಜದೇವಸ್ಯ
ಶ್ರೀಕರ್ಕರಾಜ ಸುತಸ್ಯ ಯದುಪರಿಲಿಖಿತಂ*

---

* ಈ ಶಾಸನದ ಭಾಷೆಯೆಲ್ಲವೂ ಸಂಸ್ಕೃತ. ಲಿಪಿಯು ತೀರ ಕೊನೆಯ ಮೇಲಣ ಒಪ್ಪ (ಸಹಿ) ಬಿಟ್ಟು ಉಳಿದುದೆಲ್ಲವೂ ನಾಗರಿಲಿಪಿಯಲ್ಲಿದೆ. ಆದರೆ ಇಲ್ಲಿ ಕೊಟ್ಟ ಒಪ್ಪ (ಸಹಿ)ವು ಮಾತ್ರ ಹಳಗನ್ನಡ ಲಿಪಿಯಲ್ಲಿದ್ದುದು ವಿಚಾರಾರ್ಹವಾಗಿದೆ.

ಗುಜರಾತಿನಲ್ಲಿರುವ ಗುಜರಾತಿ; ಬಂಗಾಲದಲ್ಲಿರುವವನು ಬಂಗಾಲಿ. ಹಾಗೆ ಕನ್ನಡ (ದೇಶ)ದಲ್ಲಿರುವವನು ಕನ್ನಡಿ. ಒಂದು ಪ್ರದೇಶದಲ್ಲಿ ವಾಸಿಸುವವನು ಎಂಬರ್ಥದಲ್ಲಿ (ಕೆಲವು) ದೇಶವಾಚಕಗಳ ಕೊನೆಗೆ 'ಇ' ಎಂಬ ತದ್ಧಿತ ಪ್ರತ್ಯಯವು ಸೇರುವುದನ್ನು ಗುಜರಾತಿ, ಕೊಂಕಣಿ, ಮಲೆಯಾಳಿ ಮೊದಲಾದ ಪದಗಳ ಪ್ರಯೋಗಗಳಲ್ಲಿ ಕಂಡುಕೊಳ್ಳಬಹುದು. 'ಗುಜರಾತಿ', 'ಮಲೆಯಾಳಿ' ಇವುಗಳಂತೆ 'ಕನ್ನಡಿ' ಎಂಬ ಪ್ರಯೋಗವೂ ಒಂದು ಕಾಲಕ್ಕೆ ರೂಢವಾಗಿರಬೇಕು. ಆದರೆ, ೧೨ನೆಯ ಶತಮಾನದ ಮುಂದಿನ ಕಾಲದಲ್ಲಿ 'ಇ' ಪ್ರತ್ಯಯವು 'ಇಗ' ಎಂಬುದಾಗಿ ಪರಿಣಮಿಸಿದ್ದುದು ಕಂಡುಬರುತ್ತದೆ.[೨೬] ಒಂದಾನೊಂದು ಕಾಲದಲ್ಲಿ 'ಇ' ಅಥವಾ 'ಇಗ' ಎಂಬ ಯಾವ ಪ್ರತ್ಯಯವನ್ನೂ ಸೇರಿಸದೆ ಕನ್ನಡನ್, ಕನ್ನಡರ್ ಎಂದು ಹೇಳುವ ರೂಢಿಯೂ ಇದ್ದುದು ತಮಿಳು ಸಾಹಿತ್ಯದಿಂದ ಬೆಳಕಿಗೆ ಬಂದಿದೆ.[೨೭] ಅಂತು ಸಾತವಾಹನರಿಗಿಂತ (ಬಾದಾಮಿ) ಚಲುಕ್ಯರಲ್ಲಿ, ಈ ಚಲುಕ್ಯರಿಗಿಂತ ರಾಷ್ಟ್ರಕೂಟರಲ್ಲಿ ಕನ್ನಡದ ಅಭಿಮಾನವು ಹೆಚ್ಚು ಹೆಚ್ಚಿನ ಪ್ರಮಾಣದಲ್ಲಿ ಕಾಣಿಸಿಕೊಳ್ಳಲಾರಂಭಿಸಿದುದು ಸುಳ್ಳಲ್ಲ. ರಾಷ್ಟ್ರಕೂಟರ ತರುವಾಯ ಅವರ ಸ್ಥಳದಲ್ಲಿ ಬಂದ ಕಲ್ಯಾಣ ಚಲುಕ್ಯರಲ್ಲಿ (೯೭೩-೧೧೯೦) ಇವರೆಲ್ಲರಿಗಿಂತಲೂ ಈ ನಾಡಿನ ಸ್ವಲ್ಪ ಹೆಚ್ಚಿನ ಅಭಿಮಾನವು ಅವರ ಶಾಸನಾದಿಗಳಿಂದ ಕಂಡುಬರುತ್ತಲಿದೆ.[೨೮] ಕಲ್ಯಾಣ ಚಲುಕ್ಯರ ಮನೆತನವನ್ನು ಮೇಲ್ಮೆಗೆ ತಂದ ನೂರ್ಮಡಿ ತೈಲಪನೇ ಕನ್ನಡಕವಿ ರನ್ನನ ಆಶ್ರಯದಾತನು. ಬಿಲ್ಹಣನು ವಿಕ್ರಮಾಂಕದೇವಚರಿತೆಯಲ್ಲಿ ೬ನೆಯ ವಿಕ್ರಮನನ್ನು 'ಕರ್ಣಾಟೇಂದು'ವೆಂದು ವಿಶೇಷಿಸಿದ್ದಾನೆ. ಕೇತಯ್ಯ ಮತ್ತು ಕಾವೆಯ ನಾಯಕಾದಿ ಜನಸಾಮಾನ್ಯರ ಹೆಸರುಗಳ ಮುಂದೆಯೂ ಕನ್ನಡಿಯವರು ಎಂದರೆ ಕನ್ನಡಿಗರು ಎಂಬ ಉಪಪದವು ಸೇರಿಕೊಂಡುದು ಇವರ ಆಳಿಕೆಯಲ್ಲಿಯೆ (ಕ್ರಿ. ಶ. ೧೧೫೨) ಕಣ್ಣಿಗೆ ಬೀಳುತ್ತದೆ!

ಕ್ರಿ. ಶ. ೧೧೦೮ರ ಒಂದು ಶಾಸನದಲ್ಲಿ ಅತ್ಯಂತ ವಿಚಾರಾರ್ಹವಾದ ಒಂದು ತೊಡಕು ಅಡಕವಾಗಿದೆ. ಶ್ರೀರಂಗಪಟ್ಟಣ ತಾಲ್ಲೂಕಿನ ಶಾಸನವು ಅದು. ಆ ಶಾಸನಕ್ಕೆ ಸಾಕ್ಷಿ ಹಾಕಿದ ಒಬ್ಬ ಕುಲಕರಣಿಯು 'ಕನ್ನಡಿಗ ಸೇನಬೋವನು ಸಾಕ್ಷಿ' ಎಂದು ಬರೆದುಕೊಂಡಿದ್ದಾನೆ![೨೯] ಈತನು ಹೀಗೆ ಬರೆದುಕೊಳ್ಳಲು ಕಾರಣವೇನು? ಕರ್ಣಾಟದಲ್ಲಿ ಹಳ್ಳಿಹಳ್ಳಿಗೆ ಕೆಲಸಮಾಡುವ ಕರಣಿಕರು (ಸೇನಬೋವರು) ಆಗಂತು ಕನ್ನಡಿಗರೆ ಇರಬಹುದಲ್ಲವೆ? ಹಾಗಿದ್ದರೆ, ಈತನಿಗೆ ತಾನು 'ಕನ್ನಡಿಗನು' ಎಂದು ಪ್ರತ್ಯೇಕಿಸಿ ಹೇಳಿಕೊಳ್ಳುವ ಕಾರಣವೇನು? ಇದು ಮತ್ತೆ ಎಲ್ಲಿ? ಉತ್ತರಕರ್ಣಾಟದಲ್ಲಿ ಅಲ್ಲ; ಮೈಸೂರ ಹೃದಯಾಂತರಾಳದಲ್ಲಿ - ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ! ಇದರ ಕಾರಣಮೀಮಾಂಸೆಯೇನು? (ಕಲ್ಯಾಣ) ಚಲುಕ್ಯರಿಗಿಂತಲೂ ಹೊಯ್ಸಳರ ಕಾಲದ ಕನ್ನಡದ ಅಭಿಮಾನದ ಬಣ್ಣವು ಇನ್ನೂ ಒಂದು ಕೈಹೆಚ್ಚು. ೧೦-೧೧ನೆಯ ಶತಮಾನಕ್ಕಿಂತ ೧೨ ಮತ್ತು ೧೩ನೆಯ ಶತಮಾನಗಳ ಕನ್ನಡಿಗರಲ್ಲಿ ತಮ್ಮತನದ ಭಾವನೆಯು ಹೆಚ್ಚು ಹೆಚ್ಚು ಸುಸ್ಪಷ್ಟವಾಗಿ ಮೈಗೊಳ್ಳಲಾರಂಭಿಸಿದುದನ್ನು ಆ ಕಾಲದ ಶಾಸನಗಳಿಂದ ಕಂಡುಕೊಳ್ಳಬಹುದಾಗಿದೆ. ಮಂತ್ರಿಗಳು, ದಂಡನಾಯಕರು, ಪಂಡಿತರು, ಪಾಮರರು, ತಾವು ಕನ್ನಡಿಗರೆಂದುಕೊಳ್ಳುವುದಕ್ಕೆ ನಾನು ತಾನೆಂದು ಹೆಮ್ಮೆಯಿಂದ ಮುಂದೆ ಬಂದುದು ಈ ಕಾಲದಲ್ಲಿಯೇ. 'ಕರ್ಣಾಟ ಕುಳಮಳ ಮಾರ್ತಾಂಡ ಹೆಗ್ಗಡೆ ಬಂದುದು ಗೋವಿಂದಮಯ್ಯ....(೧೧೬೦);[೩೦]

'ಕರ್ಣಾಟವಂಶೋದ್ಭವಂ ಕರಂ ಒಪ್ಪಂ ಬಡೆದಿರ್ಪನ್
ಊರ್ಜಿತಯಶಂ ಶ್ರೀವಿಷ್ಣು ದಂಡಾಧಿಪಂ (೧೯೬೨);[೩೧]

'ಕರ್ಣಾಟ ಕುಲಕಮಳ ಷಂಡಮಂಡನ ಪ್ರಚಂಡ ಮಾರ್ತಂಡ ಗೋವಿಂದರಾಜಾನುಜಂ[೩೨]....(೧೧೬೮); ಈ ಬಗೆಯಾಗಿ ರಾಜಾಧಿಕಾರಿಗಳು ತಮ್ಮನ್ನು ಕರ್ಣಾಟರೆಂದು ವಿಶೇಷಿಸಿ ಹೇಳಿಕೊಂಡಿರುವ ಉದಾಹರಣಗಳು ಈ ಕಾಲದಷ್ಟು ಹಿಂದಣ ಶತಮಾನಗಳಲ್ಲಿ ದೊರೆತಿಲ್ಲ.

ಬ್ರಾಹ್ಮಣರಲ್ಲಿಯೂ ಕರ್ಣಾಟಕರೆಂಬ ವರ್ಗವು ವಿಶೇಷವಾಗಿ ಮುಂದೆ ಬಂದುದು ಈ ಕಾಲದಲ್ಲಿಯೇ ಎಂದು ಊಹಿಸಲು ಅವಕಾಶವಿದೆ. 'ಹಳೆಯ ಕರ್ಣಾಟರು' ಎಂಬ ಬ್ರಾಹ್ಮಣರನ್ನು ಮೈಸೂರು ಸುತ್ತಲು ಮಾತ್ರ ಕಾಣಬಹುದಾಗಿದೆ. ಹಿಂದಕ್ಕೆ ಕನ್ನಡ ಬ್ರಾಹ್ಮಣರು ಉತ್ತರಕರ್ಣಾಟದಲ್ಲಿಯೂ ಕೆಲವರಿದ್ದರೆಂದು ತೋರುತ್ತದೆ.

ಧಾರವಾಡ ಇತಿಹಾಸಮಂಡಳದವರಿಗೆ ಚಲುಕ್ಯ ವಿನಯಾದಿತ್ಯನ ಕಾಲದ ಒಂದು ತಾಮ್ರಪಟವು ದೊರೆತಿದ್ದು ಅದರಲ್ಲಿ 'ಕನ್ನಡಾನ್ವಯ ಕಾಶವಕೌವೇರಭಟ್ಟ'ನು ಎಂಬೀ ಬಗೆಯ ಹೆಸರಿದೆ. ಈ ತಾಮ್ರಪಟದಲ್ಲಿ ಬರೆದಿರುವ ಮೇರೆಗೆ ಇದರ ಕಾಲವು ಸುಮಾರು ಕ್ರಿ. ಶ. ೫೯೮ ಆಗುತ್ತದೆ. ಈ ತಾಮ್ರಪಟದ ಮೇಲಿಂದ ನೋಡಿದರೆ ಬ್ರಾಹ್ಮಣರು ತಮ್ಮನ್ನು 'ಕನ್ನಡಿಗರು' ಎಂದು ಬಹಳ ಪ್ರಾಚೀನಕಾಲದಿಂದಲೇ ಕರೆದುಕೊಳ್ಳಲಾರಂಭಿಸಿದರೆಂದು ನಿರ್ಧರಿಸಬಹುದಾಗಿತ್ತು. ಆದರೆ, ಹಿಂದೆ ಹೇಳಿದ (ಸಮಸ್ತ ಕರ್ಣಾಟಕ ಭೂವರ್ಗ ಭರ್ತಾರಂ, ಎಂಬ) ಕದಂಬರ ಶಾಸನದಂತೆ ಇದೂ ಟೊಳ್ಳು (Spurious) ಎಂದು ಶಾಸನ ಇಲಾಖೆಯವರೇ ನಿರ್ಧರಿಸಿದ್ದಾರೆ.![೩೩] ಕ್ರಿ. ಶ. ೬೦೮ರಲ್ಲಿ ಇಲ್ಲದಿದ್ದರೂ ಅದರ ಮುಂದಿ ೨೦೦-೩೦೦ ವರುಷಗಳಲ್ಲಿ (ಈ ಕೃತ್ರಿಮಶಾಸನವು ಬರೆಯಲ್ಪಟ್ಟ ಕಾಲದಲ್ಲಂತು) ಬ್ರಾಹ್ಮಣರಲ್ಲಿ ಕನ್ನಡರೆಂಬ ಒಂದು ವರ್ಗವು ಸಿದ್ಧವಾಗಿತ್ತೆಂಬುದು ನಿಶ್ಚಿತ.

ಕರ್ಣಾಟರಲ್ಲಿ ಹೊಯ್ಸಳರೆಂಬ ಒಂದು ಪಂಗಡವಿದೆ. ಈ ವರ್ಗದವರಿಗೆ ಹೊಯ್ಸಳರ ಕಾಲದಲ್ಲಿಯೇ ಈ ಹೆಸರು ಪ್ರಾಪ್ತವಾಗಿರಲಿಕ್ಕೆಬೇಕೆಂಬುದು ಸೂರ್ಯಪ್ರಕಾಶದಷ್ಟು ಸ್ಪಷ್ಟವಾಗಿದೆ. ಹೊಯ್ಸಳ ಕರ್ಣಾಟರು ಮುಖ್ಯವಾಗಿ ಮೈಸೂರು ಸಂಸ್ಥಾನದಲ್ಲಿಯೆ ಈಗಲೂ ಇರುವರು. ಈ ನಾಡಿನ ಊರು ಊರಿಗೆ ಇದ್ದ ಆ ಕಾಲದ ಸಾಮಾನ್ಯ ಬಂಟ (ವೀರ)ರು ಕೂಡ ತಮಗೆ 'ಕಂನಡಿಗ ಮೊನೆಯಾಳು' ಗಳು ಎಂದು ಹೇಳಿ ಕೊಳ್ಳುತ್ತಿದ್ದುದನ್ನು ಕಾಣಬಹುದು. ಕ್ರಿ. ಶ. ೧೨೦೦, ೧೨೨೪, ೧೨೪೨, ೧೨೫೭ ಈ ಬೇರೆ ಬೇರೆ ಅವಧಿಯ ಬೇರೆ ಬೇರೆ ಶಾಸನಗಳಲ್ಲಿ 'ಕಂನಡಿಗಮೊನೆಯಾಳು'ಗಳ ಉಲ್ಲೇಖಗಳು ಕಾಣಿಸಿಕೊಳ್ಳುತ್ತವೆ.[೩೪] 'ಶ್ರೇಷ್ಠರು ಆಚರಿಸಿದುದನ್ನೆ ಇತರೇ ಜನರು ಅನುಸರಿಸುತ್ತಿರುತ್ತಾರೆ' ಎಂಬ ಗಾದೆಯ ಸತ್ಯತೆಯನ್ನು ಇಲ್ಲಿ ಮನಗಾಣಬಹುದು. ಮಂತ್ರಿಗಳು, ದಂಣಾಯಕರು, ಪಂಡಿತರು ತಮಗೆ ಕನ್ನಡಕುಲ ತಿಲಕರೆಂದುಕೊಂಡರು; ಪಾಮರರೂ ಜನಸಾಮಾನ್ಯರೂ ಅದನ್ನೆ ನುಡಿಯಲಾರಂಭಿಸಿದರು. ಇಂತು ಹೊಯ್ಸಳರ ಕಾಲದ ಮೈಸೂರು ಸೀಮೆಯ ವಾತಾವರಣದಲ್ಲಿ 'ಕನ್ನಡ', 'ಕನ್ನಡ'ವೆಂಬ ಘನಗರ್ಜನೆಯು ತುಂಬಿಕೊಂಡುದೆ ಕೇಳಬರುತ್ತಲಿದೆ. ಇದಕ್ಕೂ ಮೊದಲು ಇಷ್ಟು ಅರ್ಭಟೆಯಿಂದ ಕಿವಿಗೆ ಬೀಳದೆ ಇದ್ದ 'ಕನ್ನಡ', 'ಕನ್ನಡ' ಎಂಬ ಸೊಲ್ಲು ಈಗ ೧೨-೧೩ನೆಯ ಶತಮಾನದಲ್ಲಿ ವಿಶೇಷ ತೀವ್ರಸ್ವರೂಪದಿಂದ ಕೇಳಬರಲಾರಂಭಿಸಿ ದುದಕ್ಕೆ ಕಾರಣವೇನು? ಹೊಯ್ಸಳರ ಕಾಲಕ್ಕೆ ಇಂತಹ ಆದಾವ ವಿಶೇಷ ಬದಲಾವಣೆಗಳಾದುದರಿಂದ ಜನರಲ್ಲಿ 'ತಾವು ಕನ್ನಡಿಗರು' ಎಂಬ ಅಭಿಮಾನವು ಇಷ್ಟೊಂದು ಸ್ಫುರಣಗೊಂಡಿತು?

ಕಾರಣವಿಲ್ಲದೆ ಕಾರ್ಯವಿಲ್ಲ. ಹೊಯ್ಸಳರ ಕಾಲದಲ್ಲಿ ಆವುದೊ ಒಂದು ಹೊಸಗಾಳಿಯು ಬೀಸಿದುದರಿಂದಲೆ ಇಲ್ಲಿಯ ಜನಗಳಲ್ಲಿ ಅಲ್ಲಿಯ ವರೆಗೆ ಸೂಕ್ಷ್ಮರೂಪದಲ್ಲಿದ್ದ ಕನ್ನಡ ಅಭಿಮಾನದ ಕಿಡಿಯು ಪುಟಗೊಂಡು ಹೊತ್ತಿ ಬೆಳಗಲಾರಂಭಿಸಿತೆಂಬುದು ನಿಶ್ಚಿತ. ಹಾಗಾದರೆ ಆ ಗಾಳಿಯು ಆವುದು? ತಮಿಳರ ಗಾಳಿಯೆ? ಅಲ್ಲ. ಏಕೆಂದರೆ, ಹೊಯ್ಸಳರ ಕಾಲಕ್ಕೆ ಚೋಳರಾಜ್ಯವು ತೀರ ಇಳಿತರಕ್ಕೆ ಬಂದಿತ್ತು. ಹೊಯ್ಸಳರೇ ತಮಿಳರ ನಾಡಿನಲ್ಲಿ ನಿಂತು, ಅಲ್ಲಿ ಒಂದು ರಾಜಧಾನಿಯನ್ನು ಸ್ಥಾಪಿಸಿ ಆಳುತ್ತಿದ್ದರು; ಚೋಳರಾಜಪ್ರತಿಷ್ಠಾಪನಾಚಾರ್ಯರೆಂದು ಹೊಯ್ಸಳರಲ್ಲಿ ಕೆಲವು ಅರಸರಿಗೆ ಬಿರುದುಗಳು ಮತ್ತೆ! ಆದುದರಿಂದ ತಮಿಳರ ಆಕ್ರಮಣದ ಮೂಲಕ ಇಲ್ಲಿಯ ಜನಗಳಲ್ಲಿ ಕನ್ನಡದ ಅಭಿಮಾನವು ಚೇತರಿಸಿಕೊಂಡಿತೆಂಬ ಮಾತಿಗೆ ಅವಕಾಶವೆ ಇಲ್ಲ.

ಹಾಗಾದರೆ ಇನ್ನಾರು? ಆ ಕಾಲದ ಶಾಸನಗಳು ಏನು ಹೇಳುತ್ತವೆ? ಕ್ರಿ. ಶ. ೧೨೨೫ರ ಶಾಸನ; ಸೊರಬ ತಾಲ್ಲೂಕಿನದು. ಅದರಲ್ಲಿ ಹೀಗಿದೆ: 'ಆರಿಯ ನಾಯಕರ್ ಮುನಿದು.....ತುರುವಂ ಕೊಳುವಲ್ಲಿ (ಎದುರಿಸಿ) ಮಲ್ಲಿಶೆಟ್ಟಿ ಮಡಿದ'.[೩೫] ಇನ್ನೊಂದು ಶಾಸನ; ಕಾಲ ೧೩೦೪; "ವೀರಬಲ್ಲಾಳ ದೇವರಸರ್ ವಡುಕ್ಕು ಆರಿಯರ್ ಮೇಲ್ ಎಡುತ್ತುವಿಟ್ಟು."[೩೬] ಇದರ ಭಾಷೆ ತಮಿಳು. ಅರಿಯರನ್ನು ತಮಿಳಸಾಹಿತ್ಯದಲ್ಲಿ ವಡುಕರೆಂದು ಹೇಳುವ ವಾಡಿಕೆಯುಂಟು. ಈ ಕಾಲದ ಶಾಸನಗಳನ್ನು ನೋಡಿದರೆ ಹೊಯ್ಸಳರ ನಾಡಿನಲ್ಲಿ 'ಆರಿಯರ' ಪುಂಡಾಟಿಕೆಯು ಮಿತಿಮೀರಿ ನಡೆದಂತೆ ಕಂಡುಬರುತ್ತದೆ. ದಾವಣಗೆರೆ ತಾಲ್ಲೂಕಿನ ಒಂದು ಶಾಸನ; "ಬಿನ್ನಲಗೆರೆಯ ದನವಕೊಂಡ

ಹೋಹಳಿ (ಊರಿನ) ಆರೆಯರೊಡನೆ ಕಾದಿ ಮಡಿದನು.[೩೭] ೧೨೪೨ ಇನ್ನೊಂದು ಬೇರೆ ಸ್ಥಳದ ಶಾಸನ: "ಅರಿಯರ ದಳುವಾಯಿ ಕುಚರಸನು ಸೆರೆಸುರಿಗೊಂಡು ಹೋಹಲ್ಲಿ ಹಡಪದ ಮಲ್ಲಯ್ಯನು ಒದಗಿ ಸ್ವರ್ಗವ ಸೂರೆಗೊಂಡನು." (ಕ್ರಿ. ಶ. ೧೨೮೫).[೩೮]

ಆದುದರಿಂದ, ಆ ಕಾಲದಲ್ಲಿ ಕನ್ನಡಿಗರ ಸ್ವಾಭಿಮಾನ ಜಾಗೃತಿಗೆ ಆರಿಯರ ಧಾಳಿಗಳೆ ಮುಖ್ಯಕಾರಣವೆಂದು ನಿರ್ಧರಿಸಬಹುದಾಗಿದೆ. ಈ ಆರಿಯರ ಹೊಯ್ಸಳರ ಕಾಲದ (ಎಂದರೆ ೧೧ನೆಯ ಶತಮಾನದ) ಮೊದಲು ಇರಲಿಲ್ಲವೆ? ಈಗ ಭೋಂಕನೆ ಎಲ್ಲಿಂದ ಬಂದರು? ಎಂಬ ಪ್ರಶ್ನೆಯು ತಲೆದೋರುವುದು. ಆದರೆ, ಈ ಪ್ರಶ್ನೆಗೆ ತಿರುಗಿ ಒಂದು ಹೀಗೆ ಪ್ರಶ್ನೆ ಕೇಳಬಹುದು: ಇವರು ಮೊದಲಿನಿಂದಲೂ ಇದ್ದುದಾದರೆ ಆಗಿನ ಇವರ ಪುಂಡಾಟಿಕೆ ಧಾಳಿಗಳ ಉಲ್ಲೇಖಗಳೇಕೆ ಇಲ್ಲ? ಆರಿಯರೆಂದು ಮರಾಠರಿಗೆ ಹೆಸರು. 'ಮರಾಠ' ಎಂಬುದು ಈಗಣ ರೂಢಿ. ಆದರೆ, ಜ್ಞಾನೇಶ್ವರಿ ಮತ್ತು ಅದಕ್ಕೂ ಪ್ರಾಚೀನ ಪ್ರಾಕೃತ ಗ್ರಂಥಗಳನ್ನು ನೋಡಿದರೆ ಮರಾಠರ ನಿಜವಾದ ಹೆಸರು 'ಮರಹಟ್ಟರು' ಎಂದು ಕಂಡುಬರುವುದು. ಮರಹಟ್ಟರ ಭಾಷೆಯೆ ಮರಹಾಟಿ ಅಥವಾ ಮರ್ಹಾಟಿ. ಈ ಮರ್ಹಾಟಿ ಭಾಷೆಯು ೧೦ನೆಯ ಶತಮಾನದಿಂದ ಮುಂದೆ ತಲೆಯೆತ್ತಲಾರಂಭಿಸಿತೆಂದು ಮಹಾರಾಷ್ಟ್ರದೇಶದ ಸಂಶೋಧಕರೇ ಹೇಳುತ್ತಲಿದ್ದಾರೆ.[೩೯]

ಶ್ರೀ ವಿಶ್ವನಾಥ ಕಾಶೀನಾಥ ರಾಜವಾಡೆಯವರು ಮಹಾರಾಷ್ಟ್ರದ ಇತಿಹಾಸ ಸಂಶೋಧನೆಗಾಗಿ ತಮ್ಮ ಬಾಳನ್ನೆ ಮೀಸಲಾಗಿರಿಸಿದವರು. ಅತುಲ ತ್ಯಾಗಿಗಳು. ಮರ್ಹಾಟದೇಶ ಮತ್ತು ಭಾಷೆಗಳನ್ನು ಕುರಿತು ಇವರಲ್ಲಿದ್ದ ಉತ್ಕಟ ಅಭಿಮಾನವನ್ನು ಮೀರಿಸಿದವರು ಸಿಕ್ಕುವುದು ದುರ್ಲಭ. 'ಇತಿಹಾಸಾಚಾರ್ಯ'ರೆಂದು ಮಹಾರಾಷ್ಟ್ರದಲ್ಲಿ ಇವರ ಖ್ಯಾತಿ. ಇಂತಹರು ಮರಾಠರ ಆರಂಭದ ಸ್ಥಿತಿಯ ಚಿತ್ರವನ್ನು ತಮ್ಮ ಸಂಶೋಧನೆಯಲ್ಲಿ ಸಂಪೂರ್ಣವಾಗಿ ಕಂಡುಕೊಂಡ ಬಳಿಕ, ಅವರ ಎದೆಯ ಕಳವಳದಿಂದ ಹೊರಟ ಉದ್ಗಾರಗಳು ವಿಚಾರಾರ್ಹವಾಗಿವೆ. 'ರಾಧಾಮಾಧವವಿಲಾಸ ಚಂಪೂ' ಎಂಬ ಗ್ರಂಥಕ್ಕೆ ಅವರು ಬರೆದ ವಿಸ್ತಾರವಾದ ಮುನ್ನುಡಿಯು ಬಹಳ ಪ್ರಸಿದ್ಧಿಯನ್ನು ಪಡೆದಿದ್ದು ಅನೇಕ ದೃಷ್ಟಿಯಿಂದ ಓದಲರ್ಹವಾಗಿದೆ. ಸುಮಾರು ೧೨೦೦ಕ್ಕೆ ಮೊದಲು ಮರಾಠರು ಎಲ್ಲಿದ್ದರು? ಎಂಬುದೆ ಅವರ ಹಿರಿದಾದ ಕೊರೆ-ಮುಖ್ಯ ಪ್ರಶ್ನೆ. ಎಷ್ಟು ಪಾತಾಳಗರುಡ ಹಾಕಿ ಹುಡುಕಿದರೂ ಮರಾಠರ ಪೂರ್ವಚರಿತ್ರೆಯು ಒಳ್ಳೆಯ ಸ್ಥಿತಿಯಲ್ಲಿದ್ದುದು ಎಲ್ಲಿಯೂ ಕಾಣಬರದ್ದರಿಂದ ಇತಿಹಾಸಾಚಾರ್ಯ ರಾಜವಾಡೆಯವರು ತೀರ ನಿರಾಶರಾದುದನ್ನು ಅಲ್ಲಿ ಕಾಣಬಹುದು. ೧೨-೧೩ನೆಯ ಶತಮಾನದ ವರೆಗೆ ಮರಾಠರು ಹೆರವರ ತೊತ್ತಾಗಿ, 'ಎಂದುದನೆ ಎಂದು ಬಾಳಿದರು;' ಹಾಯ್ ಮಹಾರಾಷ್ಟ್ರವೇ! ಎಂಬೀ ಬಗೆಯಾಗಿ ನಿಡಿದಾಗಿ ಉಸುರುಗರೆದಿರುವರು.

ನುಡಿಯ ಮೇಲಿಂದ ನಾಡಿನ ಸ್ಥಿತಿಯನ್ನೂ ನಾಡಿನ ಮೇಲಿಂದ ನುಡಿಯ ಸ್ಥಿತಿಯನ್ನೂ ಸರಿಯಾಗಿ ಅರಿತುಕೊಳ್ಳಬಹುದಾಗಿದೆ. ಅಷ್ಟು ಅವು ಒಂದಕ್ಕೊಂದು ಹೊಂದಿಕೊಂಡಿವೆ. ನಾಡು ಮತ್ತು ಆ ನಾಡಿನ ನುಡಿ ಇವುಗಳಲ್ಲಿ ಒಂದು ಏರಿಕೆಯಲ್ಲಿದ್ದಾಗ ಇನ್ನೊಂದು ಇಳಿಕೆಯಲ್ಲಿರುವುದು ಅಸಂಭವವು, ಇತಿಹಾಸದಲ್ಲಿ ಇವುಗಳ ವ್ಯತ್ಕ್ರಮಸ್ಥಿತಿಯ ಉದಾಹರಣಗಳು ಈವರೆಗೂ ಬೆಳಕಿಗೆ ಬಂದಿಲ್ಲ. ಮರಾಠಿಭಾಷೆಯು ತಲೆಯೆತ್ತಿ ಮುಂದೆ ಬರಲಾರಂಭಿಸಿದ್ದುದು ೧೨-೧೩ನೆಯ ಶತಮಾನಗಳಲ್ಲಿ, ಎಂದು ಆ ಭಾಷೆಯ ಅಭಿಮಾನಿಗಳೇ ಒಪ್ಪಿಕೊಳ್ಳುತ್ತಲಿದ್ದಾರೆ. ಆದುದರಿಂದ ೧೨-೧೩ನೆಯ ಶತಮಾನವೇ ಮರಾಠರ ಉದಯಕಾಲವೆಂದು ನಿಶ್ಚಿತವಾಗಿ ಹೇಳಬಹುದಾಗಿದೆ. ಹೊಯ್ಸಳರ ಕಾಲಕ್ಕೆ ಹೊಸ ಪರಿಸ್ಥಿತಿಯು ನಿರ್ಮಾಣವಾಯಿತು. ಸಾತವಾಹನರು, ಚಲುಕ್ಯರು (ಬಾದಾಮಿ), ಮತ್ತು ರಾಷ್ಟ್ರಕೂಟರ ಕಾಲಕ್ಕೆ ಇಲ್ಲದೆ ಇದ್ದ ಹೊಸ ತೊಡಕುಗಳು ತಲೆದೋರಿದುವು. ಮರಾಠಿಯಂತೆ ತೆಲುಗುಭಾಷೆಯೂ ಚಿಗಿತು ಕಣ್ಣಿಗೆ ಬೀಳಲಾರಂಭಿಸಿದುದು ಈ ಸುಮಾರಿಗೆ. ಕ್ರಿ. ಶ. ೧೨-೧೩ನೆಯ ಶತಮಾನದ ವರೆಗೆ ಮರಾಠಿ ಅಥವಾ ತೆಲುಗು ನುಡಿಗಳು ಇನ್ನೂ ಬಾಲ್ಯಾವಸ್ಥೆಯಲ್ಲಿದ್ದುದರಿಂದ ಅವು ಇದಕ್ಕೂ ಹಿಂದಿನ ಕಾಲದಲ್ಲಿ ಕನ್ನಡವನ್ನು ಸರಿಗಟ್ಟಿ ನಿಲ್ಲುವ ಮಾತೇ ಇದ್ದಿಲ್ಲ. ಆಗ ದಕ್ಷಿಣಾಪಥದಲ್ಲಿ (ಎಂದರೆ

ವಿಂಧ್ಯ-ನೀಲಗಿರಿಗಳ ನಡುವಣ ನಾಡಿನಲ್ಲಿ) ಕನ್ನಡವೇ ಪ್ರಮುಖ ಜನಸಾಮಾನ್ಯರ ಮುಖ್ಯ ಭಾಷೆಯಾಗಿದ್ದಿತು. ಸಂಸ್ಕೃತ ಅಥವಾ ಪ್ರಾಕೃತಗಳು ಮೇಲಿನ ವರ್ಗದ ಜನರ ತಲೆಯ ಮೇಲೆ ಕುಳಿತುಕೊಂಡಿದ್ದರೂ ಜನಸಾಮಾನ್ಯರ ಮೇಲೆ ಅದರ ವಿಶೇಷ ಪರಿಣಾಮವಾಗಿರಲಿಲ್ಲ. ಆದುದರಿಂದ ೧೨-೧೩ನೆಯ ಶತಕದಲ್ಲಿ ಮರಾಠಿ ಮತ್ತು ತೆಲುಗುಗಳು ತಲೆಯೆತ್ತಿದಾಗ ಕನ್ನಡಕ್ಕೆ ಬಂದಂತಹ ಪ್ರತ್ಯಕ್ಷವಾದ ಗಂಡಾಂತರವು ಅದಕ್ಕೂ ಮೊದಲು ಉಂಟಾಗಿರಲಿಲ್ಲ.

ಚಲುಕ್ಯರು ಮತ್ತು ರಾಷ್ಟ್ರಕೂಟರ ಕಾಲಕ್ಕೆ ಕನ್ನಡಿಗರ ಕಡು ಹಗೆಗಳೆಂದರೆ ತಮಿಳರು. ನಮ್ಮಲ್ಲಿ ಪ್ರಚಾರದಲ್ಲಿರುವ ತಮಿಳ (ತಿಗುಳ)ರ ವಿಷಯಕ ಗಾದೆಯ ಮಾತುಗಳ ಮೇಲಿಂದ ಹಿಂದಕ್ಕೆ ಇವೆರಡೂ ಜನಾಂಗಗಳಿದ್ದ ಮನಃಸ್ಥಿತಿಯ ಕೆಲವೊಂದು ಕಲ್ಪನೆಯಾದರೂ ಉಂಟಾಗದೆ ಇರದು. ಕನ್ನಡಿಗರಲ್ಲಿ ಇಂತಹ ವೈಷಮ್ಯವು ತೆಲುಗರ ಬಗೆಗೆ ಅಷ್ಟು ಕಂಡುಬರುವುದಿಲ್ಲ. ಮರಾಠರ ವಿಷಯಕ್ಕಂತೂ ಅನೇಕ ದಿನಗಳ ವರೆಗೆ ಕೇವಲ ಆತ್ಮೀಯ ಭಾವವಿದ್ದುದೇ ಕಾಣಬರುತ್ತದೆ. 'ಕನ್ನಡ ಕಸ್ತೂರಿ', ಎಂಬ ನಾಣ್ಣುಡಿಯು ಸ್ವಭಾಷಾಭಿಮಾನವನ್ನು ವ್ಯಕ್ತಪಡಿಸುತ್ತಲಿದೆ; 'ಅರವು ಅಧ್ವಾನ' ಎಂಬುದು ತಮಿಳರ ವಿಷಯದಲ್ಲಿರುವ ಅನಾದರವನ್ನು ಸೂಚಿಸುವುದು; 'ಅರೆ ಅರಸು;' ತೆಲುಗು ತೇಟ (ಜೇನು; ಸವಿ); ಎಂಬ ಈ ಗಾದೆಗಳು ಕನ್ನಡಿಗರಿಗೆ ಮರಾಠಿ ಮತ್ತು ತೆಲುಗಿನ ವಿಷಯಕ್ಕಿರುವ ಪಕ್ಷಪಾತವನ್ನೇ ಹೊರಗೆಡಹುವುದಿಲ್ಲವೆ?

ಚಲುಕ್ಯರು ಮತ್ತು ರಾಷ್ಟ್ರಕೂಟರ ಕಾಲದ ಸ್ಥಿತಿಯೂ ಹಾಗೆ ಇತ್ತು. ತಮಿಳರು ಕಾವೇರಿಯ ಉತ್ತರಕ್ಕೆ ತಲೆಯೆತ್ತದಂತೆ ಅವರನ್ನು ಬಗ್ಗುಬಡೆಯುವುದೇ ತಮ್ಮ ಹಿರಿಗುರಿಯೆಂದು ಈ ರಾಜರ ನಂಬುಗೆಯಾಗಿತ್ತು. ತೆಲುಗಿನಿಂದ-ಅದರಲ್ಲಿಯೂ ಮರಾಠಿಯಿಂದ ಅವರು ಎಂದೂ ವಿರೋಧವನ್ನು ನಿರೀಕ್ಷಿಸಿರಲಿಲ್ಲ. ಆದುದರಿಂದ ಹೊಯ್ಸಳರ ಕಾಲಕ್ಕೆ ಥಕ್ಕನೆ ಉಂಟಾದ ಅನಪೇಕ್ಷಿತ ಗಂಡಾಂತರವಿದು. ಆದಕಾರಣ ಚಲುಕ್ಯರು ಮತ್ತು ರಾಷ್ಟ್ರಕೂಟರ ಕಾಲಕ್ಕೆ ಇದ್ದ ತಮಿಳರ ಕುತ್ತಿಗಿಂತ ಹೊಯ್ಸಳರ ಕಾಲದಿಂದ ಉಂಟಾದ ಮರಾಠಿ ಮತ್ತು ತೆಲುಗರ ತೊಡಕಿನ ಸ್ವರೂಪವು ತೀರ ಭಿನ್ನವಾಗಿದೆ. ಕನ್ನಡಿಗರು ತಮಿಳರನ್ನು ತಮ್ಮವರೆಂದು ಎಂದೂ ಭಾವಿಸಿರಲಿಲ್ಲ.[೪೦] ಆದುದರಿಂದ, ಅವರನ್ನು ಎದುರಿಸುವುದು ಅಷ್ಟು ಕಠಿಣವಾಗಲಿಲ್ಲ. ಆದರೆ, ಯಾರನ್ನು ಎದುರಾಳಿಗಳೆಂದು ಭಾವಿಸದೆ, ತಮ್ಮ ಊಳಿಗದವರು, ತಮ್ಮವರು ಎಂದು ಎಣಿಸಿ ಕನ್ನಡಿಗರು ಯಾರಿಗೆ ಮನೆಯಲ್ಲಿ ಬರಮಾಡಿಕೊಂಡರೊ, ಯಾರೊಡನೆ ಬೆರೆತುಕೊಂಡರೊ, ಕೂಡಿ ಬೆಳೆದರೊ ಅವರಿಂದ ಆದ ಆಘಾತವು ಕನ್ನಡಕ್ಕೆ ಮರ್ಮಾಘಾತವೇ ಆಯ್ತು; ಅದನ್ನು ತಡೆದುಕೊಳ್ಳುವುದಕ್ಕೆ ಕನ್ನಡಿಗರು ಇನ್ನೂ ಸಮರ್ಥರಾಗಿಲ್ಲ.

ತೆಲುಗು ಕೊನರಿಕೊಬ್ಬಿದುದು ಕನ್ನಡಿಗರ ಆಶ್ರಯದಿಂದಲೆ ಎಂಬುದನ್ನು ಕೇಳಿ ಸೋಜಿಗಗೊಳ್ಳಲು ಕಾರಣವಿಲ್ಲ. ಪೂರ್ವಚಲುಕ್ಯರ ರಾಜಮಂದಿರದಲ್ಲಿ ತೆಲುಗಿನ ಆದಿಕವಿಗಳು ಪೋಷಿತರಾದರು. ಈ ಚಲುಕ್ಯಮನೆತನದ ಮೂಲ ಸಂಸ್ಥಾಪಕನು ತಿರುಳ್ಗನ್ನಡದ ಬಾದಾಮಿಯವನು. ಎರಡನೆಯ ಪುಲಿಕೇಶಿಯ ತಮ್ಮ; ವಿಷ್ಣುವರ್ಧನನು. ಇದು ಕೆಲರಿಗೆ ದೂರಾನ್ವಯವೆನಿಸಿದರೆ, ಇನ್ನೊಂದು ಸಂಗತಿಯು ಹೀಗಿದೆ: ತೆಲುಗಿನ ಆದಿಕವಿಯೆನಿಸಿದ ನನ್ನೆಯಭಟ್ಟನಿಗೆ (೧೦೪೦) ತೆಲುಗಿನಲ್ಲಿ ಕಾವ್ಯಬರೆಯಲು ಪ್ರೋತ್ಸಾಹಿಸಿದವನೂ, ಆತನು ಬರೆದುದನ್ನು ತಿದ್ದಿ ಕೊಟ್ಟವನೂ ಯಾರು? ನಾರಾಯಣಭಟ್ಟನೆಂಬ ಒಬ್ಬ ಕನ್ನಡ ಕವಿಯು![೪೧] ಮುಂದೆ ತೆಲುಗು ಸಾಹಿತ್ಯವು ಪ್ರವರ್ಧಮಾನಸ್ಥಿತಿಗೆ ಬಂದುದು ಯಾವಾಗ? ಕರ್ಣಾಟಸಿಂಹಾಸನಾಧೀಶರೂ, ಕನ್ನಡರಾಜ್ಯರಮಾರಮಣರೂ ಆದ ವಿಜಯನಗರದ ನರಪತಿ ಕೃಷ್ಣದೇವರಾಯನೆ ಮೊದಲಾದ ಮಹಾರಾಯರ ಎಣೆಯಿಲ್ಲವೆ ನೆರವು ದೊರೆತಾಗ ಪ್ರಸ್ತುತ, ವಿಜಯನಗರದ ಉದಾಹರಣವು ಅನಾವಶ್ಯಕವಾಗಿದ್ದರೂ ತೆಲುಗಿನ ಕನ್ನಡಿಗರಲ್ಲಿ ಅಷ್ಟು ಪರಕೀಯ ಭಾವವು ತೀವ್ರವಾಗಿದ್ದಿಲ್ಲವೆಂಬ ಮಾತಿನ ನಿದರ್ಶನಕ್ಕಾಗಿ ಹೇಳಿದ್ದಾಯಿತು; ಅಷ್ಟೆ.

ತೆಲುಗುಭಾಷೆಯನ್ನು ಅನೇಕ ಕನ್ನಡಿಗರು ಒಲವಿನಿಂದ ಕಲಿತ ಕಾರಣವೇನಿರಬಹುದು? ಇಂದು ಆ ಕಾರಣಗಳು ಸ್ಪಷ್ಟವಾಗಿ ಗೊತ್ತಾಗುವುದು ಕಠಿಣವಾಗಿದೆ. ಆದರೂ ಆ ಕಾಲದ ಅನೇಕಾನೇಕ ಪರಿವರ್ತನಗಳ

ಹಿಂದಣ ಮನೋಭೂಮಿಕೆಯನ್ನು ವಿಂಗಡಿಸಿ ನೋಡಿದಲ್ಲಿ ಇದರ ಕಾರ್ಯಕಾರಣ ಭಾವವನ್ನು ಕಂಡುಹಿಡಿಯುವುದು ಅಷ್ಟು ಗಡುಚಾಗಿಲ್ಲ. ತೆಲುಗರಲ್ಲಿ ಅತುಲ ಬುದ್ಧಿವಂತರೂ ವಿದ್ಯಾವಂತರೂ ಎಂದು ಹೆಸರುಗೊಂಡಿರುವ ಸಿ. ಆರ್. ರೆಡ್ಡಿಯವರು ಈ ವಿಷಯಕ್ಕೆ ಹೇಳಿರುವ ಮಾತುಗಳು ಬಹಳ ಹುರುಳುಳ್ಳವುಗಳಾಗಿವೆ.[೪೨] ವೆಂಗಿ ನಾಡಿನಲ್ಲಿ ಕನ್ನಡ ಜೈನಭಾರತಗಳನ್ನು ಓದಿ ವಿಪರೀತ ಪರಿಣಾಮವಾಗಿತ್ತು. ಜನಸಾಮಾನ್ಯರ ಮನಸ್ಸನ್ನು ಜೈನಧರ್ಮದತ್ತಣಿಂದ ತಿರುಗಿಸಿ ವೈದಿಕಮಾರ್ಗದ ಕಡೆಗೆ ಎಳೆದುಕೊಳ್ಳಲು ನನ್ನೆಯಭಟ್ಟನು ಗೆಳೆಯನಾದ ನಾರಾಯಣಭಟ್ಟನ ಪ್ರೇರಣೆಯಿಂದ ತೆಲುಗು ಭಾರತವನ್ನು ರಚಿಸಿದನು, ಎಂದು ಶ್ರೀಮಾನ್ ರೆಡ್ಡಿಯವರು ಹೇಳುತ್ತಾರೆ. ಕನ್ನಡಕವಿಯಾದ ನಾರಾಯಣಭಟ್ಟನಂತಹನು ತೆಲುಗಭಾಷೆಯನ್ನು ಏಕೆ ಪ್ರೋತ್ಸಾಹಿಸಿರಬೇಕೆಂಬುದರ ಮೇಲೆ ಶ್ರೀಮಾನ್ ರೆಡ್ಡಿಯವರ ಮಾತಿನಿಂದ ಚೆನ್ನಾಗಿಯೆ ಬೆಳಕು ಬೀಳುತ್ತದೆ. ಕನ್ನಡಭಾಷೆಯಲ್ಲಿ ಅವೈದಿಕಮಾರ್ಗಾವಲಂಬಿಗಳ ಸಾಹಿತ್ಯವೇ ಹೆಚ್ಚು. ವೈದಿಕಧರ್ಮದ ಅಭಿಮಾನಿಗಳೂ ವೈದಿಕಧರ್ಮದ ಅಭಿವೃದ್ಧಿಯಾಗ ಬೇಕೆನ್ನುವವರೂ ಕನ್ನಡದ ಕಡೆಗೆ ಅಷ್ಟೊಂದು ಆತ್ಮೀಯ ಭಾವದಿಂದ ನೋಡದೆ ಇರುವುದು ಸ್ವಾಭಾವಿಕವಾಗಿದೆ. ಅಂತು ಕನ್ನಡಿಗರಲ್ಲಿ ತೆಲುಗುಭಾಷೆಗೆ ಹೇಗೆ ಪ್ರವೇಶವು ದೊರೆತಿರಬೇಕೆಂಬುದು ಇದರಿಂದ ಕೆಲಮಟ್ಟಿ ಗಾದರೂ ಸ್ಪಷ್ಟವಾಗುತ್ತಲಿದೆ; ಇಂತಹ ಏನೊಂದು ಕಾರಣದಿಂದಲೇ ಕನ್ನಡಿಗರು ತೆಲುಗನ್ನು ತಿರಸ್ಕಾರಬುದ್ಧಿಯಿಂದ ನೋಡದೆ 'ತೆಲುಗುತೇಟ' ಎಂಬ ಗಾದೆಯೂ ತಲೆದೋರಿರಬೇಕು.

ತೆಲುಗಿಗಿಂತಲೂ ಮರಾಠಿಯ ಬೇರುಗಳು ಕನ್ನಡದಲ್ಲಿ ಬಹಳ ಆಳದ ವರೆಗೆ ಹೋಗಿವೆ. ಕನ್ನಡಿಗರು ಮರಾಠಿಗೆ 'ಆರಿಯ' ಮಾತು ಅಥವಾ 'ಆರೇ' ಮಾತು ಎಂದು ಕರೆಯುವುದು ವಾಡಿಕೆ. ತಮಿಳು ಪ್ರಾಚೀನ ಸಾಹಿತ್ಯದಲ್ಲಿಯೂ 'ಆರಿಯರ್' ಎಂದೇ ಉಲ್ಲೇಖಗಳು ದೊರೆಯುತ್ತವೆ. ಆರಿಯ (ಆರೆ) ಎಂಬುದು 'ಆರ್ಯ' ಶಬ್ದದ ತದ್ಭವವು. ಮರಾಠಿಯು ಆರ್ಯರ ಮಾತು, ಅರಿಯ (ಆರೇ) ಮಾತು, ಎಂದೆನ್ನುವುದರಿಂದಲೆ ಈ ಭಾಷೆಯ ವಿಷಯದಲ್ಲಿ ಕನ್ನಡಿಗರಿಗಿದ್ದ ಗೌರವವು ವ್ಯಕ್ತವಾಗುತ್ತಲಿದೆ; ಸಂಸ್ಕೃತ-ಪ್ರಾಕೃತಗಳ ಸಾಲಿನಲ್ಲಿಯೇ ಮರಾಠಿ (ಆರೆ) ಮಾತಿಗೂ ಸ್ಥಾನವು ದೊರೆತಿದ್ದಿತು. ಆದುದರಿಂದ ಆರಿಯ ಮಾತು ಬರುವುದು ಒಂದು ಭೂಷಣವೆಂಬ ಭಾವನೆಯೆ ನಮ್ಮ ಜನಗಳಲ್ಲಿ ಹಲವು ಕಾಲದಿಂದಲೂ ಮನೆಮಾಡಿಕೊಂಡಿದ್ದಿತೆಂದು ಹೇಳಬಹುದಾಗಿದೆ. ಆರಿಯ ಮಾತಾಡವವನು ಆರಿಯ, ಎಂಬ ವಿಚಾರವು ದೃಢವಾಗಿದ್ದ ಆ ಕಾಲದಲ್ಲಿ ಆರಿಯ ಮಾತು ಬರುತ್ತಲಿದ್ದ ಅನೇಕಾನೇಕ ಕನ್ನಡಿಗರು ಆರಿಯರಾಗಿ ಎಣಿಸಲ್ಪಟ್ಟಿರುವುದು ಸಹಜ.[೪೩] ಆರಿಯ ಮತ್ತು ಕನ್ನಡಗಳ ತೊಡಕಿನ ಸಂಬಂಧಸೂತ್ರಗಳ ಸರಿಯಾದ ತಿಳುವಳಿಕೆಯು ಇಲ್ಲದಿರುವ ಅನೇಕರಿಗೆ, ಪ್ರಾಚೀನಕಾಲದ ಕೆಲವೊಂದು ಐತಿಹಾಸಿಕ ಘಟನೆಗಳ ಅರ್ಥವೆ ಆಗದೆ ಅನರ್ಥ ಮಾಡಿದ್ದಾರೆ! ವಡುಕರು ಮತ್ತು ಆರಿಯರ ಅದಲುಬದಲು ತಮಿಳು ಇತಿಹಾಸಕಾರರಿಗೆ; ಕ್ರಿ. ಶ. ೧೯೦ರ ಸುಮಾರಿಗೆ ತಮಿಳ ರಾಜರು ಆರಿಯರೊಡನೆ ವರ್ಣನೆಗಳಿವೆ[೪೪] ಆರಿಯ ಮಾತು ಮತ್ತು ಆರಿಯ ಜನಗಳು ಕ್ರಿ. ಶ. ೧೦ನೆಯ ಶತಮಾನದಿಂದ ಮುಂದೆ ಸ್ವತಂತ್ರ ರೀತಿಯಿಂದ ತಲೆಯೆತ್ತಿದರೆಂದು ಮಹಾರಾಷ್ಟ್ರ ವಿದ್ವಾಂಸರೆ ಒಪ್ಪಿಕೊಳ್ಳುತ್ತಿರುವಾಗ ಕ್ರಿ. ಶ. ಆರಂಭದ ಶತಮಾನದಲ್ಲಿ ತಮಿಳರೊಡನೆ ಕಾದಲು ಎಲ್ಲಿಯ ಆರಿಯರು ಬರಬೇಕು? ಕ್ರಿ. ಶ. ದ ೧೦ನೆಯ ಶತಮಾನದಿಂದ ಮುಂದೆ ದಕ್ಷಿಣಾಪಥದಲ್ಲಿ ಕನ್ನಡ (ಕಾನಡಿಮಂಡಳ) ಮತ್ತು ಮರಾಠಿ (ಮರಾಠಿಮಂಡಳ) ಎಂಬ ಎರಡು ಸ್ಪಷ್ಟವಾದ ಪಂಗಡಗಳು ಆದುವೆಂದೂ ಅದಕ್ಕೂ ಮೊದಲು ಇವೆರಡೂ ಜನಗಳು ಕೂಡಿಯೆ ಇದ್ದರೆಂದೂ ಸಾಮಾನ್ಯವಾಗಿ ನಿಶ್ಚಿತವಾಗಿದೆ. ಶ್ರೀ ಭಾಗವತ ಮತ್ತು ಶ್ರೀ ಪಾಂಗಾರಕರರೆಂಬ ಮಹಾರಾಷ್ಟ್ರ ವಿದ್ವಾಂಸರು ಇದೇ ಸಿದ್ಧಾಂತವನ್ನು ೨೦-೩೦ ವರ್ಷಗಳ ಹಿಂದೆಯೇ ಪ್ರಕಟಿಸಿದ್ದಾರೆ.[೪೫] ಆದುದರಿಂದ ವಡುಕರನ್ನೇ ಆರಿಯರೆಂದು ತಮಿಳರು ಆ ಕಾಲಕ್ಕೆ ಭಾವಿಸಿರಬೇಕು.

ಮಹಾರಾಷ್ಟ್ರರಿಗೆ ಉಂಟಾಗಿರುವ ದಿಗಿಲು ಇನ್ನೊಂದು! ಮರಾಠಿ ಭಾಷೆಯಲ್ಲಿ ಪ್ರಾಚೀನಕಾಲದಲ್ಲಿ ಬರೆಯಲ್ಪಟ್ಟ ಮೊಟ್ಟಮೊದಲನೆಯ ವಾಕ್ಯವು ದೊರೆಯುವುದು ಎಲ್ಲಿ? ಕರ್ಣಾಟದ ಹೃದಯಾಂತರಾಳದಲ್ಲಿ-ಮೈಸೂರ

ಸೀಮೆಯಲ್ಲಿ! ಶ್ರವಣಬೆಳುಗೊಳದ ಗೊಮ್ಮಟೇಶ್ವರನ ಪ್ರಾಕಾರದಲ್ಲಿ! 'ಚಾವುಂಡರಾಯೇ ಕರವಿಯಲೆ,' ಎಂಬುದೇ ಆ ಮಹಾವಾಕ್ಯ. "ಕ್ರಿ. ಶ. ೧೧ನೆಯ ಶತಮಾನದಲ್ಲಿ ಈ ಮರಾಠಿವಾಕ್ಯವುಳ್ಳ ಶಾಸನವು ಬರೆಯಲ್ಪಟ್ಟಿರುವುದರಿಂದ ಆ ಸುಮಾರಿಗೆ ಶ್ರವಣಬೆಳಗೊಳದ ಸುತ್ತಲಿನ ಸೀಮೆಯಲ್ಲಿ ಆರಿಯ ಮಾತಿನವರು ಸಾಕಷ್ಟಿರಬೇಕೆಂಬುದು ನಿಶ್ಚಿತ. ಆದುದರಿಂದ, ಶ್ರವಣಬೆಳುಗೊಳದ ವರೆಗೂ ಮಹಾರಾಷ್ಟ್ರದೇಶವು ಹಬ್ಬಿಕೊಂಡಿದ್ದಿತು;" ಎಂದು ಒಂದು ಪ್ರತಿಪಾದನೆ![೪೬] ಅವರ ಈ ಅಭಿಪ್ರಾಯಕ್ಕೆ ಪುಷ್ಟಿಯನ್ನೀವ ಇನ್ನೂ ಒಂದು ಬಲವಾದ ಆಧಾರವು ಅವರ ಗಮನಕ್ಕೆ ಬಂದಿಲ್ಲವೆಂದು ತೋರುತ್ತದೆ. ಮಹಾರಾಷ್ಟ್ರದವರಿಗೆ ಈ ಆಧಾರವು ದೊರೆತರೆ ಕರ್ಣಾಟದ ದುರ್ದೈವಕ್ಕೆ ಕೊನೆಮೊದಲು ಉಳಿಯಲಿಕ್ಕಿಲ್ಲ! 'ಮೈಸೂರ' ಎಂಬ ಹೆಸರೇ ಅಚ್ಚಆರಿಯ ಮಾತಿನದಲ್ಲವೆ? 'ಮಹಿಷ' ಎಂಬ ಸಂಸ್ಕೃತಪದವು 'ಮೈಸ' ಎಂದಾಗುವುದು ಆರಿಯ ಮಾತಿನಲ್ಲಿಯೇ. ಆದಕಾರಣ ಮೈಸೂರ ವರೆಗೂ ಮರಾಠಿ ಹಬ್ಬಿದ್ದಿತೆಂದು ಸಿದ್ಧವಾಗುವುದಿಲ್ಲವೆ? ಎಂದ ಬಳಿಕ ಇನ್ನೆಲ್ಲಿಯ ಕರ್ಣಾಟಕ? ಮರಾಠಿಯ ಮೊಟ್ಟ ಮೊದಲನೆಯ ವಾಕ್ಯವು ಶ್ರವಣಬೆಳುಗೊಳದಲ್ಲಿ (ಮೈಸೂರ); ಹಾಗೂ ಮರಾಠಿ ಮೊದಲನೆಯ ಪದ್ಯವು ಕಲ್ಯಾಣದ ಚಲುಕ್ಯರ ಚಕ್ರವರ್ತಿ ಭೂಲೋಕಮಲ್ಲನ ಮಾನಸೋಲ್ಲಾಸದಲ್ಲಿ! ಆದುದರಿಂದ, ಕರ್ಣಾಟವೇ ಮರಾಠಿಯ ಜನ್ಮಭೂಮಿ, ಎಂಬುದು ಸತ್ಯ. ಅತ ಏವ ಮೈಸೂರವರೆಗೆಲ್ಲವೂ ಮಹಾರಾಷ್ಟ್ರವೇ; ಸುಮ್ಮನೆ ಜನಗಳು ಇನ್ನೂ ಕನ್ನಡ ಮಾತನಾಡುತ್ತಿರುವಂತೆ ಕೇಳಿಸುವುದು, ಅಷ್ಟೆ.

ಆ ಕನ್ನಡವನ್ನೂ ಸ್ವಲ್ಪ ಪೃಥಕ್ಕರಿಸಿ ನೋಡಿದರೆ ಅದರಲ್ಲಿ ಕಂಡುಬರುವುದಾದರೂ ಏನು? ಆರೇ; ಆರೇ ಆರೇ. ಬೇಕಾದರೆ ಪ್ರಾಕೃತ ಎನ್ನಿ ಅದಕ್ಕೆ! ಹಳಗನ್ನಡ ಕವಿಗಳಿಗೆ 'ಪರಿಮಳ', 'ಕಮಳ', 'ಕಾಳ' (ಕಾಲ), 'ತಾಳ' ಎಂದು ಹೇಳುವ ಚಟವೆ ಅಂಟಿಕೊಂಡಿದ್ದಿತು. ಪಂಪನ ದ್ರೋಣಾಚಾರ್ಯರು 'ಅರೇ, ಹೋಯ......' ಎಂದು ಅರ್ಜುನನ್ನು ಹೊಗಳುತ್ತಾರೆ! (೨೬೦). ಹರಿಹರನು ಶೈವವೀರ; ಕೆಚ್ಚ ಕನ್ನಡಿಗ; ಕಣ್ಣಪ್ಪನ ರಗಳೆಯಲ್ಲಿ 'ಬೈಲ' ಎಂದು ಎತ್ತಿಗೆ ಹೇಳುತ್ತಾನೆ. ಅವನ ಶಿಷ್ಯ ರಾಘವಾಂಕನು 'ಕೆಂಟಳಿಸು' (ಕಂಟಾಳಣೇ), 'ಗಾಣ' (ಗಾನ) ಶಬ್ದಗಳನ್ನು ಬಳಸುತ್ತಾನೆ. ಹೊಯ್ಸಳರ ಒಡ್ಡೋಲಗದಲ್ಲಿದ್ದ ಜನ್ನನು (೧೨೦೯) 'ಅನಂತನಾಥ ಪುರಾಣ'ದ ಒಬ್ಬ ಪ್ರತಿಹಾರಿಯ ಬಾಯಲ್ಲಿ 'ಊಠಿ, ಉಠಿ ಮಾಗಾ ಬೈಸ ಜಾ ತೂ ಹಳೂ.....' ಎಂಬ ಮಾತುಗಳನ್ನು ಹಾಕಿದ್ದಾನೆ! ಇದರಿಂದ ಹೊಯ್ಸಳರ ಒಡ್ಡೋಲಗದ ಪ್ರತಿಹಾರಿಗಳು ಈ ಬಗೆಯ ಮಾತುಗಳಿಂದಲೆ ಯಾವಾಗಲೂ ಉಗ್ಘಡಿಸುತ್ತಿದ್ದರೆಂದು ಊಹಿಸಬಹುದೆ? ಕುಮಾರವ್ಯಾಸನು ಇಂದು ಕನ್ನಡಿಗರ ಅಚ್ಚುಮೆಚ್ಚಿನ ಕವಿ. ಕನ್ನಡದ ದೇಸಿನುಡಿಗಳಿಗೆ ಕುಮಾರವ್ಯಾಸನ ಭಾರತವು ಆಗರ. ಆದರೆ, ಇವನು ಸೂರೆಮಾಡಿದಷ್ಟು ಪ್ರಾಕೃತ ಶಬ್ದಗಳು ಬೇರೊಬ್ಬರಲ್ಲಿ ದೊರೆಯುವುದು ದುರ್ಲಭ. ಕುಮಾರವ್ಯಾಸನು ಬ್ರಾಹ್ಮಣ. ಅದರಿಂದ ಆತನ ಭಾಷೆಯಲ್ಲಿ ತಿಳಿಗನ್ನಡದೊಡನೆ ಪ್ರಾಕೃತ (ಆರಿಯ) ಮಾತುಗಳೂ ಬೆರೆತುಕೊಂಡಿದ್ದರೆ ಅದರಲ್ಲಿ ವಿಶೇಷವೇನೂ ಇಲ್ಲವೆನ್ನಬಹುದು. ಹಾಗಾದರೆ ಕನಕದಾಸನನ್ನು ನೋಡಿ! ಅವನು 'ಸೋಳ', 'ಬತ್ತೀಸ', 'ತೆತ್ತೀಸ', 'ಚೌಸಷ್ಟಿ' ಎಂದು ಮುಂತಾಗಿ ಆರೆಮಾತಿನಿಂದಲೆ ಅಂಕಿಗಳನ್ನೂ ಹೇಳುತ್ತಾನೆ! 'ಟೋಪಿ', 'ಬಿಡಿಯ' (ಭಿಡೇ), 'ಮೋರ', 'ಮಂಜರ', ಎಂದು ಮುಂತಾದ ಚೊಕ್ಕ ಮರಾಠಿ ಶಬ್ದಗಳನ್ನು ಬೇಕಾದಂತೆ ಬಳಿಸಿದ್ದಾನೆ. ಉಳಿದ ದಾಸರ ಪದಗಳಲ್ಲಿಯೂ ಇಂತಹ ಮಾತುಗಳು ಅಲ್ಲಿ ಇಲ್ಲಿ ಕಾಣಿಸಿಕೊಳ್ಳದೆ ಇಲ್ಲ. ಜಗನ್ನಾಥರಾಯರು ಹರಿಕಥಾಮೃತ ಸಾರದಲ್ಲಿ ಕನ್ನಡಕ್ಕೆ 'ಪ್ರಾಕೃತ' ಭಾಷೆಯೆಂದಿರುವರು.[೪೭]

ಆದುದರಿಂದ, ಕನ್ನಡಭಾಷೆಯೆಂದರೆ ಅದು ಮರಾಠಿಯೇ, ಎಂದು ಹೇಳುವುದು ಎಷ್ಟು ಸಮಂಜಸವೋ, ಅಷ್ಟೇ ಶ್ರವಣಬೆಳಗೊಳ-ಮೈಸೂರ ವರೆಗೂ ಮಹಾರಾಷ್ಟ್ರವಿದ್ದಿತೆಂಬುವುದೂ ಸಮಂಜಸವಾಗಿದೆ. ಆರಿಯ ಮತ್ತು ಕನ್ನಡಗಳ ಸಂಬಂಧ-ಸೂತ್ರಗಳ ತೊಡಕು ತಿಳಿಯದೆ ಇದ್ದರೆ ಈ ಬಗೆಯ ವಿಚಾರದ ಗೊಂದಲು ಆಗತಕ್ಕುದೇ ಸರಿ. ಈ ಬಗೆಯ ಭ್ರಾಂತಿಗೆ ಮುಖ್ಯಕಾರಣವೆಂದರೆ ಕನ್ನಡದ ಮೊದಲಿಗರು ಆ ಕಾರಣಕ್ಕೆ ಮೈಗೊಟ್ಟುದು. ವೇದಕಾಲದಿಂದಲೂ ಈ ಕ್ರಿಯೆಯು ನಡೆಯುತ್ತ ಬಂದಿದೆ. ತಿಳಿದಾಗಲಿ ತಿಳಿಯದೆಯಾಗಲಿ

ಕನ್ನಡದ ನಾಡು ಮತ್ತು ನುಡಿಗಳಿಗೆ ಆರ್ಯಸಂಸ್ಕಾರವನ್ನೀವ ಕಾರ್ಯವು ಅನಂತಕಾಲದಿಂದ ಅವ್ಯಾಹತವಾಗಿ ಸಾಗಿದ್ದುದು ಕಂಡುಬರುತ್ತದೆ. ಇದರ ಮನವರಿಕೆಗಾಗಿ ಕನ್ನಡ ಸಾಹಿತ್ಯದೊಳಗಿನ ಮಾದರಿಯ ಒಂದೆರಡು ದೃಷ್ಟಾಂತಗಳನ್ನು ನೆನಪಿಗೆ ತಂದುಕೊಂಡರೂ ಸಾಕು. ಆಂಡಯ್ಯನು (೧೨೩೫) ಅಚ್ಚಗನ್ನಡದಲ್ಲಿ ಬರೆವ ವೀಳ್ಯವನ್ನೆತ್ತಿ ಸಂಸ್ಕೃತೋದ್ಭವ ಶಬ್ದಗಳಿಂದ (ಪ್ರಾಕೃತಭಾಷೆಯ ಪದಗಳನ್ನು ಉಪಯೋಗಿಸಿ) ಕಾವ್ಯವನ್ನು ರಚಿಸಿ ತನಗೆ ತಿಳಿಯದೆಯೆ ಆತನು ಕನ್ನಡಕ್ಕೆ ಆರ್ಯಭಾಷೆಯ ಒಪ್ಪಕೊಟ್ಟನು! ಪ್ರೌಢವಾದ ಕನ್ನಡದಲ್ಲಿ ಬರೆವ ಹಂಬಲದ ರುದ್ರಭಟ್ಟ ಮತ್ತು ಷಡಕ್ಷರಿಗಳ ಕಾವ್ಯಗಳಲ್ಲಿ ಕನ್ನಡಕ್ಕಿಂತ ಸಂಸ್ಕೃತದ ಹೊಳಪೆ ಎಲ್ಲೆಲ್ಲಿಯೂ ಕಣ್ಣುಕುಕ್ಕಿಸುತ್ತಲಿದೆ! ಆದುದರಿಂದಲೆ, ಕನ್ನಡಿಗರಿಗೆ ಆರಿಯರೆಂದು ಹೆರವರು ಭ್ರಮೆಗೊಂಡಿರಬೇಕು. ಮತ್ತು ದಕ್ಷಿಣಾಪಥ (ಬೃಹತ್ ಕರ್ನಾಟ)ದ ಕ್ರಮಕ್ರಮವಾದ ಆರ್ಯೀಕರಣವು ನಡೆದುದೂ ಸುಳ್ಳಲ್ಲ. ದಕ್ಷಿಣಾಪಥವು ತಮ್ಮ ವಸತಿಗೆ ತೀರ ಅಯೋಗ್ಯವಾದದ್ದೆಂದು ಆರ್ಯರು ನೆರೆಬಿದ್ದರೆಂದು ವೇದ ಮತ್ತು ಸ್ಮೃತಿಗಳಿಂದ ನಿಶ್ಚಿತವಾಗಿ ಗೊತ್ತಾಗುತ್ತದೆ.[೪೮] ದಕ್ಷಿಣಾಪಥದವರು ಮ್ಲೇಚ್ಛರೆಂದೂ ಮನುವು ಸೂಚಿಸಿದ್ದಾನೆ (೧.೨೩). ದಕ್ಷಿಣದ ಜನಗಳ ಗುಣಸ್ವಭಾವಗಳನ್ನು ಕುರಿತು ಔತ್ತರೇಯರ ಕಲ್ಪನೆಯು ಏನಿದೆಯೆಂಬುದು ಮಹಾಭಾರತದಲ್ಲಿ ಬಂದ ಒಂದು ಉಲ್ಲೇಖದಿಂದ ಚೆನ್ನಾಗಿ ಗೊತ್ತಾಗುವಂತಿದೆ.

ಸಂಕೀರ್ಣಾಚಾರ ಧರ್ಮಾಃ, ಪಶುಧರ್ಮಾಃ, ಪಾಪಾಃ, ಮ್ಲೇಚ್ಛಾಃ (೮೪ನೆಯ ಅಧ್ಯಾಯ), ಇಂತಹ ಜನಗಳ ದೇಶವಿದು! ವಿಂಧ್ಯದಿಂದ ದಕ್ಷಿಣದ ದೇಶವೆಲ್ಲವೂ, 'ಅನಾರ್ಯಭೂಮಿ', 'ಅಯಜ್ಞೀಯಭೂಮಿ', 'ಮ್ಲೇಚ್ಛಭೂಮಿ' ಎಂದು ಪ್ರಾಚೀನ ಆರ್ಯರ ಗ್ರಹಿಕೆಯಾಗಿದ್ದಿತು. ಆದುದರಿಂದ ಇಂತಹ ಈ ನಾಡಿಗೆ ಬಹಿಷ್ಕೃತರಲ್ಲದೆ ಬೇರೆ ಯಾರೂ ಅಡಿಯಿಡಲಾಗ ದೆಂಬ ಸಂಪ್ರದಾಯವುಂಟಾಗಿದ್ದಿತು.[೪೯]

ವಿಂಧ್ಯವು ಆರ್ಯಾವರ್ತದ ದಕ್ಷಿಣ ಮರ್ಯಾದೆಯೆಂದು ಮನುವಿನ ಕಾಲದಲ್ಲಿ ಎಣಿಸಲ್ಪಡುತ್ತಿದ್ದು ಪುರಾಣಕಾಲದಲ್ಲಿ "ಗೋದಾವರ್ಯಾಃ ದಕ್ಷಿಣೇ ತೀರೇ" ಎಂದು ಹೇಳುವುದಕ್ಕೆ ಆರಂಭವಾಯಿತು.

> ಗೋದಾವರೀ ಭೀಮರಥೀ ಕೃಷ್ಣಾ ವೈಣ್ಯಥ ಮಂಜುಲಾ।
> ತುಂಗಭದ್ರಾಸು ಪ್ರಯೋಗಾ ಕಾವೇರೀ ಚ ತಥಾಪಗಾ।
> ದಕ್ಷಿಣಾಪಥ ನದ್ಯಸ್ತು ಸಹ್ಯಪಾದಾದ್ವಿನಿಸ್ಸೃತಾಃ॥

ವಾಯು ಪುರಾಣಂ ೪೫, ೧೦೪.

ಇದರಲ್ಲಿ ನರ್ಮದಾ, ತಾಪಿಗಳ ಹೆಸರೇ ಇಲ್ಲ! ಗೋದಾವರಿಯೆ ದಕ್ಷಿಣಾಪಥದ ಉತ್ತರಮರ್ಯಾದೆ ಯೆಂಬುದು ವಾಯುಪುರಾಣದ ಶ್ಲೋಕಗಳಿಂದ ವ್ಯಕ್ತವಾಗುತ್ತದೆ. ಎಂದರೆ; ಗೋದಾವರಿಯ ವರೆಗಣ ನಾಡು ಆರ್ಯಾವರ್ತದಲ್ಲಿ ಹೊಸದಾಗಿ ಸೇರಿಕೊಂಡಂತಾಯಿತು. ನೃಪತುಂಗನು (ಕ್ರಿ. ಶ. ೮೧೫) ಕನ್ನಡದ ಉತ್ತರಸೀಮೆಯು ಗೋದಾವರಿಯೆಂದು ಹೇಳಿದುದು ಈ ದೃಷ್ಟಿಯಿಂದ ವಿಚಾರಣೀಯವಾಗಿದೆ. ದೇವಗಿರಿ ಯಾದವರ ಕಾಲದ ವರೆಗೂ (ಮುಂದೆ ೪೫೦ ವರುಷಗಳ ವರೆಗೆ) ಗೋದಾವರಿಯ ಉತ್ತರದಲ್ಲಿ ಕನ್ನಡವು ಜೀವಂತವಾಗಿದ್ದಿತೆಂದು ಯಾದವ ಮನೆತನದ ಶಾಸನಗಳು, ಆ ರಾಜರ ಹೆಸರುಗಳು ಇವುಗಳ ಮೇಲಿಂದ ಸಿದ್ಧವಾಗುತ್ತಲಿದೆ.[೫೦] ಇದಕ್ಕೆ ಮರಾಠಿಭಾಷೆಯ ಜನ್ಮೇತಿಹಾಸದ ಬೆಂಬಲವೂ ಇದೆ.[೫೧] ಗೋದಾವರಿಯು ಕನ್ನಡದ ಉತ್ತರಮರ್ಯಾದೆ ಎಂದು ಹೇಳಿದೊಡನೆ ಗೋಡೆ ಹಾಕಿದಂತೆ ಗೋದೆಯ ಆಚೆಗೆ ಕನ್ನಡದ ಸುದ್ದಿಯೇ ಇಲ್ಲದಿರುವುದು ಸಾಧ್ಯವಿಲ್ಲ. ಯಾವುದೇ ಭಾಷೆಯು, ಇಲ್ಲಿಂದ ಇಲ್ಲಿಗೆ ಎಂದು ಹೇಳುವಾಗ ಸ್ಥಿರವಾದ ಒಂದು ಗೆರೆಯನ್ನು ಎಳೆಯಲಿಕ್ಕಾಗುವುದಿಲ್ಲ. ಜ್ಞಾನೇಶ್ವರಿ, ಮಹಾನುಭಾವರ ಗ್ರಂಥಗಳು ಗೋದಾವರಿಯ ಉತ್ತರದ ನಾಡಿನವರಿಂದ ರಚಿತವಾದುವುಗಳು. ಅವುಗಳಲ್ಲಿ ಇರುವ ಕನ್ನಡಮಾತುಗಳ ವೈಪುಲ್ಯವನ್ನು ನೋಡಿದರೆ ಯಾದವರ ಕಾಲಕ್ಕೆ ದೇವಗಿರಿಯ ಸುತ್ತಲು ಕನ್ನಡವು ಜೀವಂತವಾಗಿದ್ದಿತೆಂದು ನಿಃಸಂಶಯವಾಗಿ ಕಂಡುಬರುವುದು.

ಯಾದವರ ಕಾಲಕ್ಕೆ ೧೩ನೆಯ ಶತಮಾನದಲ್ಲಿ ಗೋದೆಯ ಉತ್ತರಕ್ಕೆ ಕನ್ನಡವು ಜೀವಂತವಾಗಿದ್ದಿತೆಂದ ಬಳಿಕ ನೃಪತುಂಗನ (೮೧೫) ಕಾಲಕ್ಕಂತೂ ಅದು ಉತ್ತಮಸ್ಥಿತಿಯಲ್ಲಿಯೆ ಇರಲಿಕ್ಕೆ ಸಾಕು. ಆದರು, ನೃಪತುಂಗನು ಗೋದಾವರಿಯಿಂದ ದಕ್ಷಿಣಕ್ಕೆ ಕರ್ಣಾಟವು ಆರಂಭವಾಗುತ್ತದೆ ಎಂದು ಏಕೆ ಹೇಳಿರಬಹುದು?

ಕನ್ನಡವು ಮ್ಲೇಚ್ಛಭಾಷೆಯೆಂದು ಹಿಂದಿನವರ ನಂಬುಗೆ. ಶೂದ್ರಕನ ಮೃಚ್ಛಕಟಿಕ ನಾಟಕದಲ್ಲಿ ಈ ವಿಷಯದ ಸ್ಪಷ್ಟವಾದ ಉಲ್ಲೇಖವಿದೆ.[೫೨] ಗೋದಾವರಿಯವರೆಗೆ ಆರ್ಯಾವರ್ತವೆಂಬ ರೂಢಿಯು ದೃಢವಾಗಿ ಬಿಟ್ಟುದರಿಂದ ಗೋದಾವರಿಯ ದಕ್ಷಿಣದಿಂದ ಮ್ಲೇಚ್ಛ[೫೩] ಭಾಷೆಯ (ಕನ್ನಡದ) ನಾಡು ಆರಂಭವಾಗುತ್ತದೆಂದು ನೃಪತುಂಗನು ಸಂಪ್ರದಾಯಶರಣನಾಗಿ ಹೀಗೆ ಹೇಳಿರಲಿಕ್ಕಿಲ್ಲವಷ್ಟೆ? ಸಂಪ್ರದಾಯಶರಣನಾಗಿಯೆ ನೃಪತುಂಗನು ಹೀಗೆ ಹೇಳಿರಬೇಕು; ಆ ಕಾಲಕ್ಕೆ ಗೋದೆಯ ಉತ್ತರಕ್ಕೂ ಕನ್ನಡವಿದ್ದಿತೆಂದು ಊಹಿಸಿದುದು ಕೆಲರಿಗೆ ವಿಚಿತ್ರವೆನಿಸಬಹುದು. ಆದರೆ, ಆರ್ಯಾವರ್ತದ ದಕ್ಷಿಣಮೇರೆಯು ಕ್ರಮಕ್ರಮವಾಗಿ ಹೇಗೆ ಮುಂದೆ ಮುಂದೆ ಸರಿಯುತ್ತ ಹೋಯಿತೆಂಬುದನ್ನು ನೋಡಿದರೆ ಮೇಲಣ ಊಹೆಯ ಬಗ್ಗೆ ಸೋಜಿಗವೆನಿಸುವ ಕಾರಣವಿಲ್ಲ.

ಭಾರತೀಯ ಭೂಘಟನೆಯೆಂಬ ಒಂದು ಸಂಸ್ಕೃತ ಗ್ರಂಥದಲ್ಲಿ ಹಿಂದೂದೇಶದ ಭೂಮಿಯನ್ನು ಸಾತ್ವಿಕ, ರಾಜಸ ಮತ್ತು ತಾಮಸ ಎಂದು ವರ್ಗೀಕರಿಸಿ ಹೇಳಿದ್ದಾಗಿದೆ.[೫೪]

ಹಿಮವತ್ ವಿಂಧ್ಯಯೋರ್ಮಧ್ಯಂ ಸಾತ್ವಿಕಂ ಭೂತಲಂ ಸ್ಮೃತಂ।
ನಾಗರಸ್ತು ಸ್ಮೃತೋದೇಶೋ ಹಿಮವತ್ ವಿಂಧ್ಯ ಮಧ್ಯಗಃ॥
ವಿಂಧ್ಯ ಶೈಲಾದಿ ಕೃಷ್ಣಾಂತಂ ರಾಜಸಂ ಪರಿಕೀರ್ತಿತಂ।
....
ತುಂಗ ಕೃಷ್ಣಾದಿ ಕನ್ಯಾಂತಂ ತಾಮಸಂ ಭೂತಲಂ ಸ್ಮೃತಂ॥
....
ಕೃಷ್ಣಾಯಾ ದಕ್ಷಿಣೋಭಾಗೇ ತಾಮಸಃ ಪರಿಕೀರ್ತಿತಃ।

ಈ ಶ್ಲೋಕಗಳ ಮೇಲಿಂದ ಕಂಡುಬರುವ ಕೆಲವು ಮಹತ್ವದ ಸಂಗತಿಗಳೆಂದರೆ:

೧. ಮೂಲ ಆರ್ಯಾವರ್ತವು ಹಿಮಾಲಯ ವಿಂಧ್ಯಗಳ ನಡುವಿನದು ಮತ್ತು ಅದು ಸಾತ್ವಿಕವೂ ಸುಸಂಸ್ಕೃತವೂ ಆದ ದೇಶ.
೨. ವಿಂಧ್ಯದಿಂದ ಕೃಷ್ಣೆಯ ವರೆಗಿನ ಪ್ರದೇಶವು ರಾಜಸಿಕ.
೩. ಕೃಷ್ಣೆಯಿಂದ ಕೆಳಗಣ ನಾಡು ತಾಮಸಿಕ!

ಈ ವರ್ಗೀಕರಣದಲ್ಲಿ ಆ ಲೇಖಕನ ಪಕ್ಷಪಾತಬುದ್ಧಿಯು ಚೆನ್ನಾಗಿಯೆ ವ್ಯಕ್ತವಾಗುತ್ತಲಿದೆ. ಗೋದೆಯ ವರೆಗೆ ಇದ್ದ ದಕ್ಷಿಣಮೇರೆಯು ಈಗ ಕೃಷ್ಣೆಗೆ ಬಂದು ನಿಂತಿದೆ. ವಿಂಧ್ಯದಿಂದ ದಕ್ಷಿಣದ ಈ ಹೊಸನಾಡು (ಆರಿಯರ ನಾಡು), ಗೌಣ ಆರ್ಯಾವರ್ತವಾಗಿರುವುದರಿಂದ ಇದು ಸಾತ್ವಿಕಕೋಟಿಯಲ್ಲಿ ಎಣಿಸಲ್ಪಟ್ಟಿಲ್ಲ! ರಾಜಸವರ್ಗದಲ್ಲಿ ಇದರ ಎಣಿಕೆಯಾಗಿದೆ. ಕೃಷ್ಣೆಯಿಂದ ದಕ್ಷಿಣಕ್ಕೆ ಕನ್ನಡ, ದ್ರಾವಿಡ ಮೊದಲಾದ ಮ್ಲೇಚ್ಛಭಾಷೆಗಳ ದೇಶಗಳು; ಆದುದರಿಂದ ಅದು ತಾಮಸ-ಅಧಮ ಭೂಮಿ!

ಕ್ರಿ. ಶ. ೧೨೦೦-೧೩೦೦ನೆಯ ಸುಮಾರಿಗೆ ಆಗಿಹೋದ ಹರದತ್ತನೆಂಬವನು ಆಪಸ್ತಂಭ ಧರ್ಮಸೂತ್ರಗಳಿಗೆ ಟೀಕೆ ಬರೆದಿದ್ದು ಅದರ ಒಂದು ಸೂತ್ರದ (೨, ೭, ೭ ೧೭) ಟೀಕೆಯಲ್ಲಿ ಆತನು ಶರಾವತಿಯ ಉತ್ತರದಿಕ್ಕಿನವರಲ್ಲ ಉದೀಚ್ಯರು ಎಂದು ಹೇಳಿದ್ದಾನೆ.[೫೫]

ಲೋಕೋಯಂ ಭಾರತಂ ವರ್ಷಂ ಶರಾವತ್ಯಸ್ತುಯೋವಧೇಃ।

ಈ ಉಲ್ಲೇಖದಿಂದ ಕ್ರಿ. ಶ. ೧೩೦೦ರ ಸುಮಾರಿಗೆ ಆರ್ಯಾವರ್ತದ ದಕ್ಷಿಣ ಮೇರೆಯು ಗೇರುಸೊಪ್ಪೆಯ

ವರೆಗೂ ಬಂದು ನಿಲುಕಿದುದನ್ನು ಕಾಣಬಹುದು. ಈ ಸಂಗತಿಗಳಿಂದ ಕರ್ಣಾಟದ ಉತ್ತರಮರ್ಯಾದೆಯು ಕ್ರಮಕ್ರಮವಾಗಿ ಹೇಗೆ ಕುಗ್ಗುತ್ತ ನಡೆದಿತ್ತೆಂಬುದು ಮಾತ್ರ ಸ್ಪಷ್ಟವಾಗುತ್ತದೆ. ಆದುದರಿಂದಲೆ, ಡಾ. ಭಂಡಾರಕರ ರಾಮಕೃಷ್ಣಪಂತರಂತಹ ಆಧುನಿಕ ವಿದ್ವಾಂಸರೂ ತುಂಗಾನದಿಯ ವರೆಗೆ ಮಹಾರಾಷ್ಟ್ರವು ಹಬ್ಬಿಕೊಂಡಿತ್ತೆಂದು ಹೇಳಿದರು.[೫೬] ಸಿ. ವಿ. ವೈದ್ಯ, ಪಾಂಗಾವಕರ ಮೊದಲಾದ ಹಿರಿಯ ಸಾಹಿತಿಗಳೂ ಹಬ್ಬಿಕೊಂಡಿದೆ ಎನ್ನುತ್ತಾರೆ! ಇವರು ಹರದತ್ತನ ಮಾತನ್ನೇ ನಿಜವೆಂದು ನಂಬಿ ತುಂಗಾತೀರದ ವರೆಗೆ ಮಹಾರಾಷ್ಟ್ರ, ಮೈಸೂರ ವರೆಗೆ ಮಹಾರಾಷ್ಟ್ರ ಎಂದು ಕನವರಿಸುತ್ತಲಿದ್ದಾರೆ.[೫೭] ಆದರೆ, ಇಲ್ಲಿಯ ಕಂನಡವು ಇನ್ನೂ ಅಳಿಯದೆ ಉಳಿದೇ ಇದೆ! ಇದರ ಮೇಲಿಂದ ನೋಡಿದರೂ ನೃಪತುಂಗನ ಕಾಲಕ್ಕೆ ಗೋದೆಯ ದಕ್ಷಿಣ ತಡಿಯ ವರೆಗೆ ಇದ್ದ ಕನ್ನಡವು ಉತ್ತರದ ಭಾಗಕ್ಕೂ ಇರಲೇಇಲ್ಲವೆಂದು ಎದೆತಟ್ಟಿ ಹೇಳುವುದು ಸರಿಯಾಗಲಾರದು.

ಆ ಹಳೆಮಾತು ಏನೆ ಇರಲಿ, ಹೊಯ್ಸಳರ ಕಾಲಕ್ಕೆ (ಹರದತ್ತನ ಅಭಿಪ್ರಾಯದ ಮೇಲಿಂದ) ಶರಾವತಿಯ ವರೆಗಣ ಪ್ರದೇಶವು ಆರಿಯರ ವರ್ಚಸ್ಸಿನಲ್ಲಂತು ಸಿಕ್ಕಿದ್ದಿತೆಂಬುದು ಸಿದ್ಧ. ಹೊಯ್ಸಳರ ಓಲಗದಲ್ಲಿ ಕನ್ನಡ ಅಭಿಮಾನದ ಹೊಸಸ್ಫೂರ್ತಿಯು ಮೈದೋರದಿದ್ದರೆ ಇನ್ನು ಸ್ವಲ್ಪ ಅವಧಿಯಲ್ಲಿ ಕರ್ಣಾಟವು ನಿಜವಾಗಿಯೂ ಹೇಳಹೆಸರಿಲ್ಲದಂತಾಗುತ್ತಿದ್ದಿತೆಂಬುದಕ್ಕೆ ಸಂದೇಹವಿಲ್ಲ. ಬೇಂದ್ರೆ ದತ್ತರಾಯರ ಅಭಿಪ್ರಾಯದಂತೆ ಆರಿಯ ಭಾಷೆಯ ಅಭ್ಯಾಸವೂ ಹೊಯ್ಸಳರ ವಿದ್ಯಾಲಯದಲ್ಲಿ ನಡೆಯುತ್ತಿದ್ದು, ಕನ್ನಡಿಗರು ಈಗ ಬೇಗನೆ ಎಚ್ಚರಿಯದಿದ್ದರೆ ಕನ್ನಡವು ಮಣ್ಣುಗೂಡುತ್ತಿದ್ದಿತೆಂಬ ಮಾತನ್ನು ತಮ್ಮ ಒಂದು ಪ್ರಬಂಧದಲ್ಲಿ ವ್ಯಕ್ತಪಡಿಸಿದ್ದಾರೆ.[೫೮] ಆದುದರಿಂದ, ಮರಾಠಿಯ ನಿಜಸ್ವರೂಪವು ಬೇಗನೆ ಗೊತ್ತಾಗಿ ಎಚ್ಚೆತ್ತು ಕನ್ನಡವನ್ನು ಈ ಕುತ್ತಿನೊಳಗಿಂದ ಪಾರುಮಾಡಿದ ಸಂಪೂರ್ಣ ಶ್ರೇಯಸ್ಸು ಹೊಯ್ಸಳರಿಗೆ ಸಲ್ಲುತ್ತದೆ.

ದೇವಗಿರಿಯ ಯಾದವರಲ್ಲಿ ಕೊನೆಯ ನಾಲ್ಕೈದು ರಾಜರು ಮರಾಠಿಯ ಪಕ್ಷಕಟ್ಟಿ, ಕರ್ಣಾಟದ ಆರಿಯರನ್ನು ಪುಂಡಾಟಿಕೆಗೆ ಹುರಿದುಂಬಿಸದಿದ್ದರೆ, ಅಥವಾ ಕರ್ಣಾಟದ ಆರಿಯರು ದೇವಗಿರಿ ಯಾದವರ ಬೆಂಬಲದ ನಂಬುಗೆಯಿಂದ ಕನ್ನಡಿಗರ ಮೇಲೆ ಕೈಮಾಡದಿದ್ದರೆ, ಹೊಯ್ಸಳರಲ್ಲಾದರೂ ಕನ್ನಡಿಗರನ್ನು ಕಟ್ಟಿಕೊಳ್ಳಬೇಕು, ಎಂಬ ಬುದ್ಧಿಯು ಬೇಗನೆ ಒಡಮೂಡುತ್ತಿದ್ದಿತೊ ಇಲ್ಲವೊ ಸಂದೇಹಾಸ್ಪದವೆ ಆಗಿದೆ. ಏಕೆಂದರೆ, ಈವರೆಗೆ ಆರಿಯ ಮಾತು (ಪ್ರಾಕೃತವು) ಕನ್ನಡಕ್ಕೆ ಬೇಕಾದವನಂತೆ, ಆಪ್ತನಂತೆ, ಹಿತಕರ್ತನಂತೆ ಕೂಡಿಕೊಂಡು ಬಂದಿದೆ. ಪ್ರತ್ಯಕ್ಷ ವಿರೋಧಿಯಾಗಿ ನಿಂತು ಎಲ್ಲಿಯೂ ಹೋರಾಡಿದಂತಿಲ್ಲ. ಈ ಮೊದಲು ಆರಿಯರು ಬಹಿರಂಗವಾಗಿ ಕನ್ನಡಿಗರ ಎದುರಾಳಿಗಳಂತೆ ನಡೆದುಕೊಂಡ ಉದಾಹರಣಗಳು ಸಿಕ್ಕುವುದು ದುರ್ಲಭ. ಮಾವುತರಾಗಿ,[೫೯] ಸವಾರರಾಗಿ, ಶಿಕ್ಷಕರಾಗಿ, ಪ್ರತಿಹಾರಿಗಳಾಗಿ ಕನ್ನಡ ರಾಜರ ಓಲಗದಲ್ಲಿ ಪ್ರಾಕೃತ(ಆರಿಯ) ಮಾತಿನ ಜನಗಳು ಬಗೆಬಗೆಯ ಕೆಲಸಗಳನ್ನು ಕೈಗೊಂಡಿದ್ದ ಉದಾಹರಣಗಳು ಸಿಕ್ಕುತ್ತವೆ. 'ಪಂಡಿತರೂ', 'ವಿವಿಧಕಳಾಮಂಡಿತರೂ' ಆಗಬೇಕೆನ್ನುವವರಿಗೆ ಸಂಸ್ಕೃತದಂತೆ ಆ ಕಾಲದಲ್ಲಿ ಪ್ರಾಕೃತವನ್ನು ಚೆನ್ನಾಗಿ ಅಭ್ಯಾಸಮಾಡಲೇಬೇಕಾಗುತ್ತಿತ್ತು. ಜೈನರ ವಿದ್ಯಾಪೀಠಗಳಲ್ಲಂತೂ ಅವರ ಪ್ರಾಕೃತದ ಅಧ್ಯಯನವು ಅತ್ಯಂತ ಆವಶ್ಯಕವಾದ ಅಂಗವೇ ಆಗಿದ್ದಿತು. ಶ್ರವಣಬೆಳುಗೊಳ ಮೊದಲಾದ ವಿದ್ಯಾಲಯಗಳಲ್ಲಿ ಪ್ರಾಕೃತಭಾಷೆಯ ಅಧ್ಯಾಪನದ ಕಾರ್ಯವು ಅಖಂಡವಾಗಿ ಎಷ್ಟೊ ಶತಮಾನಗಳಿಂದ-ತಲೆತಲಾಂತರಗಳಿಂದ ನಡೆಯುತ್ತಿತ್ತು. ಆರಿಯ (ಮರಾಠಿ) ಮಾತು ಪ್ರಾಕೃತದ ಮರಿ. ಕನ್ನಡಕವಿಗಳೂ, ಸುಸಂಸ್ಕೃತ ಜನರೂ ಒಂದಿಲ್ಲೊಂದು ಪ್ರಾಕೃತವನ್ನು ಓದಿದವರಾಗಿರುತ್ತಿದ್ದರು. ಆದುದರಿಂದಲೆ, ಅವರ ಕನ್ನಡಭಾಷೆಯಲ್ಲಿ ಪ್ರಾಕೃತ (ಯಾವುದಕ್ಕೆ ಇಂದು ಮರಾಠಿ ಎನ್ನಬಹುದೊ ಅಂತಹ) ಪದಗಳು ಅಲ್ಲಲ್ಲಿ ಕಾಣಸಿಕೊಳ್ಳುತ್ತಿದ್ದುವು. ಅಂತಹ ಉಚಿತ ಪದಗಳನ್ನು ಅಲ್ಲಲ್ಲಿ ಉಪಯೋಗಿಸುವುದು ಆಗಿನ ಕವಿಗಳ ಪ್ರೌಢಿಮೆಯಾಗಿತ್ತು.

ಇನ್ನು ಒಂದು ಬಗೆಯಿಂದ ಪ್ರಾಚೀನಕಾಲದಿಂದಲೂ ಪ್ರಾಕೃತಭಾಷೆಯು ಕನ್ನಡದ ಜೀವಜೀವಾಳ ದೊಡನೆ ಬೆರೆತುಕೊಳ್ಳಲಾರಂಭಿಸಿದ್ದಿತು. ಯಾವನೆ ರಾಜನಾಗಲಿ ತನ್ನ ಮಗಳನ್ನು ಶ್ರೇಷ್ಠ ರಾಜಾಧಿರಾಜನಿಗೆ

ಕೊಡಬೇಕೆಂಬ ಹಂಬಲವುಳ್ಳವನಾಗಿರುವುದು ಸಹಜ. ಅದರಂತೆ, ತನಗೆ ತನ್ನ ಸಮಾನ ಯೋಗ್ಯತೆಯ ಅಥವಾ ಅದಕ್ಕಿಂತಲೂ ಹೆಚ್ಚಿನ ಸ್ಥಾನಮಾನವುಳ್ಳ ರಾಜರಿಂದ ಹೆಣ್ಣನ್ನು ದೊರಕಿಸಬೇಕೆಂಬ ಅಪೇಕ್ಷೆಯಿರುವುದೂ ಸ್ವಾಭಾವಿಕ. ಚಲುಕ್ಯರೂ, ರಾಷ್ಟ್ರಕೂಟರೂ ದಕ್ಷಿಣಾಪಥದ ಸಾಮ್ರಾಟರಾಗಿರುವಾಗ ಹಿಂದೂದೇಶದ ಬೇರೆಬೇರೆ ಭಾಗಗಳ ರಾಜರು ತಮ್ಮ ಹೆಣ್ಣುಮಕ್ಕಳನ್ನು ಅವರಿಗೆ ಕೊಟ್ಟು ಕೃತಾರ್ಥರಾಗಬೇಕೆಂದು ಹಾತೊರೆಯುತ್ತಿದ್ದರೆ ಸೋಜಿಗ ವೇನು? ಕರ್ಣಾಟರಾಜರ ಕನ್ಯೆಯರನ್ನು ಹೊರನಾಡಿನ ಅರಸರು ಮದುವೆಯಾದ ಉದಾಹರಣಗಳು ಹೇರಳ ವಾಗಿವೆ. ವಾಕಾಟಕ ನರೇಂದ್ರಸೇನನು ಅರಸನಾದೊಡನೆ ಕುಂತಲರಾಜಕುಮಾರಿಯನ್ನು ಮದುವೆಯಾದನು. ಕರ್ಣಾಟದ (ಕುಂತಲ) ಸಾತವಾಹನ ಎರಡನೆಯ ಪುಲಿಮಾಯಿಯು ಔತ್ತರೇಯ ಶಕವಂಶದ ರಾಜಕನ್ಯೆಯ ಕೈಹಿಡಿದನು. ರಾಷ್ಟ್ರ ಕೂಟರು ಉತ್ತರಹಿಂದುಸ್ಥಾನದ ಚೇದಿಮನೆತನದ ಹೆಣ್ಣುಮಗಳನ್ನು ಮದುವೆಯಾದ ಬಹಳ ಉದಾಹರಣ ಗಳಿವೆ. ಕಲ್ಯಾಣ ಚಲುಕ್ಯಮನೆತನವನ್ನು ಸ್ಥಾಪಿಸಿದ ತೈಲಪನ ತಾಯಿ ಬೊಂಥಾದೇವಿಯು ಚೇದಿವಂಶದವಳು; ಔತ್ತರೇಯಳು. ಧೋಲಕಾ (ಗುಜರಾತ)ದ ವಿಶಾಲಮಲ್ಲದೇವನು ಕರ್ಣಾಟ ರಾಜಕುಮಾರಿಯನ್ನು ವರಿಸಿದನು. ಇಂತಹ ಉದಾಹರಣೆಗಳಿಗೆ ಅಳತೆ ಕಟ್ಟು ಇಲ್ಲ. ಇಂತು ತಮ್ಮ ಹೆಣ್ಣುಮಕ್ಕಳನ್ನು ಪ್ರಾಕೃತಭಾಷೆಯ ಉತ್ತರಾಪಥದ ರಾಜರಿಗೆ ಕೊಡಬೇಕಾಗುತ್ತಿದ್ದುದರಿಂದಲೂ ಉತ್ತರದ ಹೆಣ್ಣುಮಕ್ಕಳನ್ನು ಮದುವೆಯಾಗುತ್ತ ಇದ್ದದರಿಂದಲೂ ಕರ್ಣಾಟದ ಪ್ರಖ್ಯಾತ ರಾಜರ ಮನೆಗಳಲ್ಲಿ ಪ್ರಾಕೃತಕ್ಕೆ ಇಂಬು ದೊರೆತಿದ್ದಿತು ಎಂಬುದು ನಿಃಸಂಶಯ.

ಔತ್ತರೇಯರಾದ ಹೆಣ್ಣುಮಕ್ಕಳು ಕರ್ಣಾಟದ ಸಾತವಾಹನ, ಚಲುಕ್ಯ, ರಾಷ್ಟ್ರಕೂಟಾದಿ ಸಾಮ್ರಾಟರೊಡನೆ ಮದುವೆಯಾಗಿ ಈ ನಾಡಿಗೆ ಬಂದ ಬಳಿಕ ಕನ್ನಡವನ್ನು ಕೇಳಿಕೇಳಿ ಕಲಿಯುತ್ತಿರಬಹುದು; ಆದರೆ, ಪ್ರಾಕೃತಭಾಷೆಯನ್ನು ಬಿಟ್ಟುಬಿಡುತ್ತಿದ್ದರೆಂದು ಹೇಳಲಿಕ್ಕಾಗುವುದಿಲ್ಲ. ಒಮ್ಮೆಲೆ ಯಾವ ಭಾಷೆಯು ಬಿಟ್ಟುಹೋಗುತ್ತಲೂ ಇರುವುದಿಲ್ಲ.

> 'ಶ್ರೂಯತೇ ಚ ಕುಂತಲೇಷು ಸಾತವಾಹನೋ ನಾಮ ರಾಜಾ ತೇನ
> ಪ್ರಾಕೃತಭಾಷಾತ್ಮಕಮಂತಃಪುರ ಏವ ವರ್ತಿತೋ ನಿಯಮಃ'

ಎಂದು ರಾಜಶೇಖರನು ಹೇಳಿದ್ದುದುಂಟು.

ಪ್ರಾಕೃತದಷ್ಟು ಮರ್ಯಾದೆ ಕನ್ನಡಕ್ಕೆ ಅಂದು ಎಂದಾದರೂ ಇದ್ದಿತೆ? ಎಂಬುದೇ ಸಂದೇಹ. ಸಂಸ್ಕೃತವು ಗೀರ್ವಾಣವಾಣಿ, ದೇವಭಾಷೆ. ಅದರ ಮೇಲ್ಮೆ ಮತ್ತಿನ್ನಾವ ಭಾಷೆಗೂ ಇಲ್ಲ-ಇದ್ದಿಲ್ಲ. ಒಂದು ಕಾಲಕ್ಕೆ 'ಪ್ರಾಕೃತಂ ಮ್ಲೇಚ್ಛಭಾಷಿತಂ' (ಗರುಡಪುರಾಣಂ) ಎಂಬ ಶ್ರದ್ಧೆಯಿದ್ದರೂ ಸಂಸ್ಕೃತವನ್ನು ಕಲಿಯುವುದು ಸಾಮಾನ್ಯರಿಗೆ ಅಸಾಧ್ಯವೂ ಅನಾವಶ್ಯಕವೂ ಆದ ಆದಹಾಗೆ ಪ್ರಾಕೃತವು ಸಂಸ್ಕೃತವನ್ನು ಹಿಂದಿಕ್ಕಿ ಆ ಸ್ಥಾನವನ್ನು ತಾನೇ ಆಕ್ರಮಿಸಿತು. 'ಅಮೃತಂ ಪ್ರಾಕೃತಂ ಕಾವ್ಯಂ[೬೦] ಎಂದು ಹೊಗಳಿಕೆಗೆ ಆರಂಭವಾಯ್ತು (ಕ್ರಿ. ಶ. ೧ನೆಯ ಶತಮಾನ). "ಪರುಷಃ ಸಂಸ್ಕೃತಬಂಧಃ ಪ್ರಾಕೃತ ಬಂಧಸ್ತು ಭವತಿ ಸುಕುಮಾರಃ"[೬೧] ಎಂದು ಮೆಚ್ಚಿ ಮೈಮರೆತು ಆಡಿದ ಮಾತುಗಳು ಹೊರಬೀಳಲಾರಂಭವಾಯಿತು (ಕ್ರಿ. ಶ. ೧೦ನೆಯ ಶತಮಾನ). ಇದೇ ಕಾಲಕ್ಕೆ 'ಇದಂ ವಾಚೋ ವಿಶಂತಿ ಇತಶ್ಚ ನಿರ್ಯಾಂತಿ ವಾಚಃ' ಎಂದರೆ ಪ್ರಾಕೃತವೇ ಎಲ್ಲ ಭಾಷೆಗಳ ತಾಯಿ ಎಂಬ ಪ್ರತಿ ಪಾದನೆಗೂ ಆರಂಭವಾಯ್ತು! ಸಂಸ್ಕೃತ ಮತ್ತು ಪ್ರಾಕೃತಗಳೆರಡೂ ಕನ್ನಡದ ತಾಯಿಗಳಾದುವು.

೧೨-೧೩ನೆಯ ಶತಮಾನದ ಸುಮಾರಿಗೆ ಪ್ರಾಕೃತವು, ತನ್ನ ಮಕ್ಕಳಾದ ಬಂಗಾಲಿ, ಗುಜರಾತಿ, ಮರಾಠಿ ಮೊದಲಾದ ದೇಶಭಾಷೆಗಳಿಗೆ ಇಂಬುಗೊಟ್ಟು ತಾನು ಕಣ್ಮರೆಯಾಯಿತು. ಈ ಸಂಧಿಯಲ್ಲಿ ಪ್ರಾಕೃತದ ಮಾನಮರ್ಯಾದೆಗಳಿಗೆ ಹಕ್ಕುದಾರನಂತೆ ಕರ್ಣಾಟದಲ್ಲಿ ಮರಾಠಿಯೂ ಮುಂದೆ ಬಂದಿತು.[೬೨] ಇದುವೆ ಆರಿಯ (ಆರ್ಯರ) ಭಾಷೆ, ಎಂದು ಕನ್ನಡಿಗರೂ ಅದನ್ನು ಸ್ವೀಕರಿಸುವುದಕ್ಕೆ ಮನಸ್ಸು ಮಾಡಿದರು; ಹಲರು ಸ್ವೀಕರಿಸಿದರು. ಇನ್ನು ಉಳಿದವರೂ ಸ್ವೀಕರಿಸುತ್ತಿದ್ದರು. ಆದರೆ........ ಆದರೆ, ಮರಾಠಿಯು ಯಾದವರ ಬೆಂಬಲದಲ್ಲಿ ರಾಜಕೀಯ ರಣಾಂಗಣಕ್ಕೆ ಇಳಿದುದರಿಂದ ಅದಕ್ಕೆ ಹೊಯ್ಸಳರ ಕನ್ನಡದ ಖಡ್ಗಗಳು ಅಡ್ಡಗಟ್ಟಿ ತಡೆದು ಹಿಡಿದುವು; ಹಿಮ್ಮೆಟ್ಟಿಸಿದುವು. ಸಂಸ್ಕೃತದ ಮತ್ತು ಪ್ರಾಕೃತಗಳಂತೆ ಅದರ ಮರಿಯೆನಿಸುವ ಮರಾಠಿಯೂ

ಧರ್ಮ ಮತ್ತು ಸಾಹಿತ್ಯದ ಮುಖಾಂತರವಾಗಿ ಎಷ್ಟು ಕನ್ನಡಿಗರನ್ನು ತನ್ನ ಕೈವಶಮಾಡಿಕೊಂಡಿತೊ;[೬೩] ಅಷ್ಟು ರಾಜಕೀಯ ರಂಗಕ್ಕಿಳಿದು ಕರ್ನಾಟದಲ್ಲಿ ಹಾನಿಗೆ ಈಡಾಯಿತು. ಪ್ರತಿಕ್ರಿಯೆಗೆ ಕಾರಣವಾಯಿತು. ಪ್ರತಿಸ್ಪರ್ಧಿಗಳಾದ ದೇವಗಿರಿ ಯಾದವರು 'ಮರಾಠಿ' ಎಂದು ಪಕ್ಷವನ್ನು ಕಟ್ಟಿದೊಡನೆ ಹಳೆಬೀಡಿನ ಹೊಯ್ಸಳರು 'ಕನ್ನಡ' ಎಂದು ಪ್ರತಿಭಟಿಸಲೇಬೇಕಾಯಿತು. 'ಕನ್ನಡಿಗರು' ಎಂಬ ಹೊಸ ಹುಮ್ಮಸವು ಈ ನಾಡಿನಲ್ಲಿ ತಲೆದೋರಿತು.

'ತಾವು ಕನ್ನಡಿಗರು' ಎಂಬ ಹುಮ್ಮಸವೇನೊ ತಲೆದೋರಿತು; ನಿಜ. ಆದರೆ, ಆರಿಯರನ್ನು ಕನ್ನಡಿಗರಿಂದ ಬೇರ್ಪಡಿಸಿ ದೂರ ಸರಿಸಿಬಿಡುವಂತೆ ಇವೆರಡೂ ಜನಾಂಗಗಳು ಈ ಮೊದಲು ಎಂದೂ ಬಿಡಿಬಿಡಿಯಾಗಿ ಬಾಳಿಲ್ಲ. ಬಿಡಿಬಿಡಿಯಾಗಿ ಬೆಳೆದಿಲ್ಲ. ಅವಳಿಮಕ್ಕಳಂತೆ ಇವೆರಡರ ಹುಟ್ಟು ಮತ್ತು ಹಬ್ಬುಗೆಯಿದೆ. ಇವರಿಬ್ಬರಲ್ಲಿ ಯಾರು ಪ್ರಬಲರಾಗುತ್ತಾರೊ ಅವರನ್ನು ಮತ್ತೊಬ್ಬರು ಅನುಸರಿಸಬೇಕಾಗುತ್ತಿದ್ದ ಪರಿಸ್ಥಿತಿಯು ಆಗ ಇದ್ದಿತು. ಮೈಸೂರ ಹತ್ತಿರದ ಶಾಸನಕ್ಕೆ ಸಾಕ್ಷಿ ಹಾಕಿದ ಒಬ್ಬ ಸೇನಬೋವನು ತಾನು 'ಕನ್ನಡಿಗ'ನೆಂದು ಬರೆದುಕೊಂಡುದಕ್ಕೆ ಕಾರಣವೇನು? ಆರಿಯರಾದ ಸೇನಬೋವರೂ ಕೆಲರು ಇದ್ದರೆಂದು ಆತನು ಹಾಗೆ ತನ್ನನ್ನು ಕನ್ನಡಿಗನೆಂದು ಪ್ರತ್ಯೇಕಿಸಿಕೊಂಡಿರಬಹುದೆ? ೧೨-೧೩ನೆಯ ಶತಮಾನದಲ್ಲಿ ಹೊಯ್ಸಳರ ರಾಜ್ಯದಲ್ಲಿ ಸಾಧಾರಣವಾಗಿ ಊರೂರಿಗೆ ಆರಿಯರ ವಸತಿ ಇದ್ದಿತೆಂಬಂತೆ ತೋರುತ್ತದೆ. ಸೊರಬ ತಾಲ್ಲೂಕಿನಲ್ಲಿ 'ಆರಿಯ ಸಂಕಣ್ಣನು ಕೋಟಿನಾಥದೇವರಿಗೆ ಕೊಟ್ಟ ದತ್ತಿ'ಯ ಉಲ್ಲೇಖವಿದೆ (೧೨೮೦).[೬೪] ಇದರಂತೆ ಇನ್ನೊಂದೆಡೆಗೆ ಬೆಂಗಳೂರಿನ ಭಾಗದಲ್ಲಿ (ದೇವನಹಳ್ಳಿ) 'ಆರಿಯ ವಣಿಕರು'ಗಳಿದ್ದುದು ಗೋಚರವಾಗುತ್ತದೆ (೧೨೭೫)[೬೫] ರಾಣೆಬೆನ್ನೂರಿನಲ್ಲಿ ಕ್ರಿ. ಶ. ೧೨೫೨ರ ಒಂದು ಶಾಸನವು ದೊರೆತಿದ್ದು ಅದು ಆರಿಯ ಮಾತಿನಲ್ಲಿದೆ![೬೬] ದೇವಗಿರಿ ಯಾದವರ ಎಲ್ಲ ಶಾಸನಗಳು ಮುಖ್ಯವಾಗಿ ಕನ್ನಡದಲ್ಲಿಯೆ ಇದ್ದು ಅಪವಾದವಾಗಿ ೪-೬ ಮಾತ್ರ ಆರಿಯ ಮಾತಿನಲ್ಲಿವೆ. ಅಂತಹವುಗಳಲ್ಲಿ ಇದೊಂದು. ಆದರೆ, ಅದು ರಾಣೆಬೆನ್ನೂರಿನಲ್ಲಿದ್ದುದು ವಿಚಾರಾರ್ಹವಾಗಿದೆ. ನಮ್ಮಲ್ಲಿ ಆರೆಕುರಹಟ್ಟಿ, ಆರೆಮಲ್ಲಾಪುರ ಎಂಬೀ ಬಗೆಯ ಆರಿಯರ ಹೆಸರಿನ ಊರುಗಳಿದ್ದು ಇವು ಎಷ್ಟು ಪ್ರಾಚೀನವೊ ಹೇಳಲಿಕ್ಕಾಗುವುದಿಲ್ಲ. ಆದರೂ ಈ ಮೊದಲೆ ಒಂದೆಡೆಗೆ ಹೇಳಿರುವಂತೆ: ಆರಿಯ ಮಾತಿನ ಜನಗಳು ಅರಮನೆಯ ಊಳಿಗದವರಾಗಿ ಕರ್ನಾಟ ರಾಜರ ರಾಜಧಾನಿಗಳಲ್ಲಿ, ದೊಡ್ಡ ದೊಡ್ಡ ಪಟ್ಟಣಗಳಲ್ಲಿ ನೆಲೆಸಿದ್ದರೆಂಬುದಕ್ಕೆ ಸಂದೇಹವೆ ಇಲ್ಲ.

ಕನ್ನಡ ಶಾಸನಗಳಲ್ಲಿ 'ಆರಿಯ'ರೆಂದು ಉಲ್ಲೇಖಿತರಾದ ಜನರಲ್ಲಿ ಬ್ರಾಹ್ಮಣರ ಸಮಾವೇಶವಾಗುವುದಿಲ್ಲ. ಆರಿಯರೆಂದರೆ ಮರಾಠರು. ಈ ಕಾಲಕ್ಕೆ 'ಆರಿಯ' ಮತ್ತು 'ಆರ್ಯ' ಇವೆರಡೂ ಭಿನ್ನಾರ್ಥದ ಶಬ್ದಗಳಾಗಿದ್ದುವು. ಮುಂದೆ, ಶಿವಾಜಿಯ ಕಾಲದಲ್ಲಿ ಸಹ ಬ್ರಾಹ್ಮಣರು ತಮಗೆ ಮರಾಠರೆಂದುಕೊಳ್ಳಲು ಸಿದ್ಧರಿದ್ದಿಲ್ಲವೆಂಬುದಾಗಿ ಸರ್ ಜದುನಾಥ ಸರಕಾರರು 'ಶಿವಾಜಿಯ ಚರಿತ್ರೆ'ಯಲ್ಲಿ ತೋರಿಸಿದ್ದಾರೆ. ಈ ಆರಿಯರು ಕನ್ನಡದ ಮೂಲಜನಾಂಗಕ್ಕೆ ತೀರ ಹತ್ತುಗೆಯವರೆಂದು ಬೇರೆಬೇರೆ ದಿಕ್ಕಿನಿಂದ ವಿಚಾರಿಸುತ್ತಿರುವಾಗಲೂ ಅನುಭವಕ್ಕೆ ಬರುತ್ತಲಿದೆ. ಸ್ವಂತ ಆರಿಯರಿಗೂ ಈ ಮಾತು ಒಪ್ಪಿಗೆ ಇಲ್ಲದೆ ಇಲ್ಲ. ನಾಮದಾರ ಭಾಸ್ಕರರಾವ ಜಾಧವ, ಎಂ. ಎ., ಎಲ್. ಎಲ್.ಬಿ. ಅವರು ಸ್ವತಃ ಆರಿಯರು; ಆರಿಯರ ಇಂದಿನ ನಾಯಕರು. ಅವರು ತಮ್ಮ ಒಂದು ಪುಸ್ತಕದಲ್ಲಿ ಮರಾಠರು ಆರ್ಯ-ದ್ರಾವಿಡ ಮಿಶ್ರವಂಶದವರು' ಎಂದು ಸ್ಪಷ್ಟವಾಗಿ ಪ್ರತಿಪಾದಿಸಿದ್ದಾರೆ.[೬೭] ನಾಮದಾರ ಜಾಧವರು ಆರಿಯರಲ್ಲಿ ಇರುವುದೆಂದು ಹೇಳುವ 'ದ್ರಾವಿಡ' ಅಂಶವು ಕನ್ನಡಿಗರದೆಂದು ಸಿದ್ಧಪಡಿಸುವ ಆವಶ್ಯಕತೆಯಿಲ್ಲ. ಏಕೆಂದರೆ: ಆರಿಯರಲ್ಲಿ ಕರ್ನಾಟವು ಹತ್ತಿರವಿರವಷ್ಟು ತಮಿಳನಾಡು ಇಲ್ಲ. ಆದುದರಿಂದ ವಂಶಮಿಶ್ರಣವು ಕನ್ನಡಿಗರೊಡನೆ ಆಗಿರುವುದೆಂಬುದು ಸ್ಪಷ್ಟವಾಗಿದೆ. ಇದರಿಂದ ಆರಿಯರೆಂಬವರು ಕನ್ನಡದ ಸಂಬಂಧಿಗಳೆಂಬುದು ನಿಶ್ಚಿತ.

ಆರಿಯರಾಗಲಿ, ಆರಿಯ ಮಾತಾಗಲಿ ಕನ್ನಡದಿಂದ ದೂರದಲ್ಲಿ ಎಲ್ಲಿಯೊ ಬೇರೆ ಪ್ರದೇಶದಲ್ಲಿ ಹುಟ್ಟಿ, ಬೆಳೆದು ಆಮೇಲೆ ಕರ್ನಾಟದ ಮೇಲೆ ಆಕ್ರಮಣಕ್ಕೆ ಆರಂಭವಾಯಿತೆಂದು ಈ ವರೆಗೆ ಬಹುತರ ಎಲ್ಲ ವಿದ್ವಾಂಸರ

ಗ್ರಹಿಕೆಯಿದ್ದಂತೆ ತೋರುತ್ತದೆ. ಆದರೆ, ಇದು ತಪ್ಪು. ಯದುಗಳು ಎಂದರೆ ಜಾಧವರು; ಮರಾಠರು ಅವರ ಪೀಳಿಗೆ ಎಂದು ಆರಿಯರು ಹೇಳಿಕೊಳ್ಳುವರು. ಕರ್ಣಾಟದ ಗಂಗರೇ[೧೮] ಮೊದಲಾದ ಅರಸರು ತಾವು ತುರುವಸುವಿನ ಸಂತತಿಯವರೆಂದು ಹೇಳಿದ್ದು ಇತಿಹಾಸದಿಂದ ಗೊತ್ತಾಗುತ್ತದೆ. ಆದರೆ, ಈ ಯದು ಮತ್ತು ತುರುವಸುಗಳ ತಂಡಗಳು ವೇದಕಾಲದಿಂದ ಸಂಮಿಶ್ರಗುಂಪುಗಳಾಗಿ ಬೆರೆತುಕೊಂಡಿದ್ದುದು ಕಂಡುಬರುತ್ತದೆ.[೧೯] ಆರಿಯ (ಮರಾಠಿ) ಭಾಷೆಯು ಆರ್ಯಭಾಷಾವರ್ಗಕ್ಕೆ ಸೇರಿದುದೆಂಬುದು ನಿಜ. ಆದರೆ, ಅದರ ಬುಡಕಟ್ಟು 'ದ್ರಾವಿಡ'ವಾಗಿದೆ ಎಂದು ನ್ಯಾಯಮೂರ್ತಿ ರಾನಡೆಯವರು ಹೇಳುತ್ತಾರೆ. ಇಲ್ಲಿ 'ದ್ರಾವಿಡ' ಎಂದರೆ 'ಕನ್ನಡ'ವೆಂದೇ ಅರ್ಥ; ಈ ಮಾತನ್ನು ಹಿಂದೆ ವಿವರಿಸಲಾಗಿದೆ. ಆರಿಯರ ಜನಾಂಗ, ಭಾಷೆ, ನಡೆವಳಿ, ಧರ್ಮ, ದೇವದೇವತೆಗಳು ಎಂಬಿವೇ ಮೊದಲಾದ ಒಂದೊಂದು ಸಂಗತಿಯನ್ನು ತಕ್ಕೊಂಡು ತುಲನಾತ್ಮಕ ವಿಚಾರದಿಂದ ವಿಮರ್ಶಿಸಿದರೆ ಮರಾಠಿ ಸಂಸ್ಕೃತಿಯು ಕನ್ನಡಕ್ಕೆ ಎಷ್ಟೊಂದು ಋಣಿಯಾಗಿದೆ, ಎಂಬ ಮಾತು ಇನ್ನೂ ಹೆಚ್ಚು ಬೆಳಕಿಗೆ ಬರುವಂತಿದೆ.* ಕನ್ನಡದಲ್ಲಿ ಪ್ರಾಕೃತ (ಆರಿಯ)ವು ಸೇರಿಕೊಂಡಿರುವಂತೆ, ಆರಿಯ ಭಾಷೆಯಲ್ಲಿ ಕನ್ನಡವು ಇಷ್ಟೊಂದು ಸೇರಿಕೊಂಡಿರುವುದೆಂಬ ಮಾತು ಕೂಡ ನಮ್ಮ ಮೇಲಣ ಸಿದ್ಧಾಂತವನ್ನೇ ಪುಷ್ಟೀಕರಿಸುತ್ತದೆ. ಈ ಸಿದ್ಧಾಂತದಿಂದಲ್ಲದೆ ಬೇರೆ ಯಾವ ವಿವರಣೆಗಳಿಂದಲೂ ಕನ್ನಡ-ಮರಾಠಿಗಳ ಈ ವಿಚಿತ್ರ ಸಮಸ್ಯೆಗೆ ಸಮಾಧಾನಕರವಾದ ಉತ್ತರವೆ ದೊರೆಯುವುದಿಲ್ಲ. ಆರಿಯರಿಗೆ ೧೨-೧೩ನೆಯ ಶತಮಾನದ ವರೆಗೂ ಸ್ವತಂತ್ರವಾಗಿ ತಮ್ಮ ಕಾಲಮೇಲೆ ನಿಲ್ಲುವಂತಹ ಸ್ಥಿತಿಯೆ ಬಂದಿರಲಿಲ್ಲ. ದೇವಗಿರಿಯ ಯಾದವರು ಹಳೆಬೀಡಿನ ಹೊಯ್ಸಳರನ್ನು ಎದುರಿಸುವುದಕ್ಕಾಗಿ ಆರಿಯರ ಪಕ್ಷವನ್ನೆತ್ತಿದರು. ಆಗ ಕನ್ನಡಿಗರೂ ಎಚ್ಚೆತ್ತರು. ಆದುದರಿಂದಲೆ, ಹಿಂದಿನ ಶಿಲಾಶಾಸನ, ತಾಮ್ರಪಟಗಳಲ್ಲಿ ಎಂದೂ ಕಾಣಿಸಿಕೊಳ್ಳದೆ ಇರುವಷ್ಟು ದಿವ್ಯವಾಗಿಯೂ ಭವ್ಯವಾಗಿಯೂ ಕನ್ನಡದ ಅಭಿಮಾನಜ್ಯೋತಿಯು ಹನ್ನೆರಡನೆಯ ಶತಮಾನದಿಂದ ಮುಂದಿನ ಕಾಲದಲ್ಲಿ ಪ್ರತಿ ಶತಮಾನಕ್ಕೂ ಹೆಚ್ಚು ಹೆಚ್ಚಿನ ಉಜ್ವಲ ಸ್ವರೂಪದಲ್ಲಿ ಪ್ರಜ್ವಲಿಸಲಾರಂಭಿಸಿದುದು ಕಣ್ಣಿಗೆ ಬೀಳುತ್ತದೆ.

ಹೊಯ್ಸಳರ ಕಾಲದಲ್ಲಿ 'ಕನ್ನಡಿಗ' ಎಂಬ ಅಭಿಮಾನವು ಚೇತರಿಸಿತು. ಆ ರಾಜ್ಯವು ನಾಶವಾದ ಬಳಿಕ ಒಬ್ಬ 'ಕನ್ನಡಕುಲ' ರನ್ನನೇ ಕರ್ಣಾಟ-ಸಿಂಹಾಸನ ಸ್ಥಾಪನೆಗೆ ಕಾರಣನಾದನೆಂದು ಒಂದು ಪರಂಪರೆಯು ಹೇಳುತ್ತದೆ. ವಿದ್ಯಾರಣ್ಯರು (ಮಾಧವಾಚಾರ್ಯರು) ಕೆಲರ ಅಭಿಪ್ರಾಯದಂತೆ ವಿಜಯನಗರದ ಸಿಂಹಾಸನವನ್ನು ಸ್ಥಾಪಿಸಲಿ, ಸ್ಥಾಪಿಸಿದಿರಲಿ; ಭಾಷ್ಯಬರೆದು ಜಗತ್ತಿಗೆ ವೇದಗಳ ಬೆಳಕನ್ನು ದೊರಕಿಸಿಕೊಟ್ಟವರೂ, ಹಿಂದೂ ಸಂಸ್ಕೃತಿಯ ಸಂರಕ್ಷಕರೂ ಎಂದು ಜಗದ್ವಿಖ್ಯಾತರಾದವರು, ಅಖಿಲ ಭರತಖಂಡದ ಹಿಂದೂಜನಾಂಗಕ್ಕೆ ವಂದ್ಯರಾದವರೂ ಆದ ಸಾಯಣ, ಮಾಧವ ಬಂಧುಗಳು ತಾವು 'ಕನ್ನಡಕುಲ'ದವರೆಂದು ಹೇಳಿಕೊಳ್ಳುತ್ತಿದ್ದುದು ಅವರ ಅಳಿಯ ಲಕ್ಷ್ಮೀಧರಾಮಾತ್ಯನ 'ಸುಮಧುರ' ಶಾಸನದಿಂದ ಗೊತ್ತಾಗುತ್ತದೆ. ವಿಜಯನಗರದ ರಾಜರು ಕೂಡ ಹೊಯ್ಸಳರಿಗಿಂತಲೂ ಒಂದಡಿ ಮುಂದಿಟ್ಟು ತಮ್ಮ ಪ್ರಶಸ್ತಿ, ಬಿರುದಾವಳಿಗಳಲ್ಲಿ ಕರ್ಣಾಟದ ಹೆಸರನ್ನು ನಿಃಸಂದಿಗ್ಧ ರೀತಿಯಲ್ಲಿ ಸೇರಿಸಿಕೊಂಡಿದ್ದಾರೆ. ವಿಜಯನಗರದ ರಾಜಪೀಠದ ಹೆಸರೇ ಕರ್ಣಾಟ ಸಿಂಹಾಸನವೆಂದು. ಎರಡನೆಯ ಹರಿಹರನು ತನಗೆ 'ಕರ್ಣಾಟ ವಿದ್ಯಾವಿಲಾಸ'ನೆಂದುಕೊಂಡಿದ್ದಾನೆ.[೨೦] ಕೃಷ್ಣದೇವನು 'ಕರ್ಣಾಟರಾಜ್ಯರಮಾರಮಣ'ನೆಂದು ಖ್ಯಾತಿ. ವಿಜಯನಗರದ ಕಾಲದಲ್ಲಿ 'ಕರ್ಣಾಟ' ಎಂಬ ಮಾತು ಇಲ್ಲದ ಶಾಸನಗಳೆ ಕಡಿಮೆ, ಎಂದರೂ ಸಲ್ಲುವುದು.

ಇಂತು ತೊಳಗಿ ಬೆಳಗಲಾರಂಭಿಸಿದ್ದ ಕನ್ನಡದ ಅಭಿಮಾನಜ್ಯೋತಿಯು ತಾಳೀಕೋಟೆ (ರಕ್ಕಸತಂಗಡಿ)ಯ ಕ್ರಿ. ಶ. ೧೯೬೫ ಕಾಳೆಗದ ಬಿರುಗಾಳಿಗೆ ಸಂಪೂರ್ಣ ನಂದಿಹೋಯಿತೆಂದು ಹೇಳಬಹುದಾಗಿದೆ ೧೬ನೆಯ

---

* ಕನ್ನಡ ಸಾಂಸ್ಕೃತಿಕ ಪ್ರಪಂಚಕ್ಕೆ ಮರಾಠಿ ಸಂಸ್ಕೃತಿಯು ಎಷ್ಟು ಬಗೆಯಲ್ಲಿ ಭಾಗಿಯಾಗಿದೆ ಎಂಬ ಅಂಶವನ್ನು ಕುರಿತು ಹಲವು ಬಗೆಗಳಲ್ಲಿ ಬರೆಯಬೇಕೆಂದು ಅವರು ಹಂಬಲಿಸಿದ್ದರು. ಅದರ ಒಂದು ರೂಪ ಮಹಾರಾಷ್ಟ್ರದ ಮೂಲ ಗ್ರಂಥದಲ್ಲಿದೆ ಇನ್ನೊಂದು ರೂಪ ಅವರು ಮರ್ಹಾಟಿಯಲ್ಲಿ ಬರೆದಿರುವ (೧೯೫೮) ಗ್ರಂಥದಲ್ಲಿದೆ. (ಸಂ).

ಶತಮಾನದಲ್ಲಿ ನಂದಿದ ಈ ಜ್ಯೋತಿಯು ಸಣ್ಣಕುಡಿಯೊಂದು ೧೭ನೆಯ ಶತಕದಲ್ಲಿ ಮೈಸೂರ ಚಿಕದೇವರಾಜರ ಪುಣ್ಯದಿಂದ ಮತ್ತೆ ಸ್ವಲ್ಪ ಹೊತ್ತಿಕೊಂಡಂತಾಗಿದ್ದಿತು. ಆದರೆ ೧೮ನೆಯ ಶತಮಾನದಲ್ಲಿ ಹೈದರ ಟಿಪ್ಪುಗಳ ಸುಳಿಗಾಳಿಯಿಂದ ಅದೂ ಆರಿತು. ಟಿಪ್ಪುವಿನ ಸಂತತಿಯೇ ಮೈಸೂರಿನಲ್ಲಿ ಈವರೆಗೆ ಆಳಿದ್ದುದಾಗಿದ್ದರೆ ಕನ್ನಡವು ರುಂಡವಿಲ್ಲದ ದೇಹದಂತಾಗುತ್ತಿದ್ದಿತೆಂಬಲ್ಲಿ ಸಂದೇಹವಿಲ್ಲ. ಟಿಪ್ಪುವಿನ ವಂಶಸ್ಥರ ಕೈಯೊಳಗಿನ ಮೈಸೂರು ಎಂದರೆ ನಿಜಾಂ ಕರ್ಣಾಟದ ಇನ್ನೊಂದು ಅಣ್ಣ ಅಥವಾ ತಮ್ಮನಾಗುತ್ತಿದ್ದಿತೆಂಬಲ್ಲಿ ಸಂದೇಹವಿಲ್ಲ. ಆದರೆ, ಕರ್ಣಾಟವು ಈ ಕುತ್ತಿನೊಳಗಿಂದಲೂ ದೇವರ ದಯದಿಂದ ಪಾರಾಯಿತು. ಮೈಸೂರು ಒಡೆಯರೆ ಮತ್ತೆ ಕರ್ಣಾಟಸಿಂಹಾಸನಾಧೀಶರಾದರು. ಕನ್ನಡಕ್ಕೆ ಮತ್ತೆ ಉತ್ತೇಜನವು ದೊರೆಯಲಾರಂಭಿಸಿತು. ಕನ್ನಡದ ಜೀವ ಜ್ಯೋತಿಯು ಪುನಃ ಚೇತರಿಸಿತು. ಮೈಸೂರಸ್ವಾಭಿಮಾನವೂ ಚಿಗುರಿತು. ಮೈಸೂರೇ ಕರ್ಣಾಟವೆಂಬ(ಂತೆ) ಭಾವನೆಯು ತಲೆದೋರಿತು; ಇದುವೆ ಕೆಲರ ನಂಬುಗೆಯೂ ಆಯಿತು.

ಉತ್ತರಕರ್ಣಾಟವ ತರುಣರಲ್ಲಿ ಇಂದು ಹೊರಹೊಮ್ಮುತ್ತಿರುವ ಕನ್ನಡದ ಅಭಿಮಾನ ಆವೇಶಗಳು ಹಿಂದೆ ಹೊಯ್ಸಳರ ಕಾಲದಿಂದಲೇ ಕಾಣಿಸಿಕೊಂಡಿದ್ದರೆ ಕರ್ಣಾಟಕ್ಕೆ ಈಗಳಿನಂತಹ ಕ್ಷೀಣದೆಸೆಯು ಎಂದೂ ಪ್ರಾಪ್ತವಾಗುತ್ತಿರಲಿಲ್ಲ. ನೃಪತುಂಗನ ಹೇಳಿಕೆಯಂತೆ ಕರ್ಣಾಟದ ಉತ್ತರಮೇರೆಯು ಗೋದಾವರಿ. ಆದರೆ, ಕಾಲಕ್ರಮದಲ್ಲಿ ಇದು ಹೇಗೆ ದಕ್ಷಿಣಕ್ಕೆ ಸರಿಯುತ್ತ ಬಂದಿತೆಂಬುದು ನಮ್ಮ ನಾಡಿನ ಆಯಾಕಾಲದ ಪ್ರಮುಖರಾದ ರಾಜರ ರಾಜಧಾನಿಗಳು ಬದಲಾದ ಕ್ರಮವನ್ನು ನಿರೀಕ್ಷಿಸಿದರೆ ತಾನೆ ಗೊತ್ತಾಗುವಂತಿದೆ. ಸಾತವಾಹನರ ರಾಜಧಾನಿಯು ಗೋದಾತೀರದ ಪೈಠಣವಾಗಿದ್ದರೆ ಹಿರಿಯ ಚಲುಕ್ಯರು ಬಾದಾಮಿಗೆ ಬಂದರು; ಬಳಿಕ ರಾಷ್ಟ್ರಕೂಟರು ಮತ್ತು ಕಿರಿಯ ಚಲುಕ್ಯರ ಕಾಲದಲ್ಲಿ ಉತ್ತರಮೇರೆಯು ಹಾಗೆ ಸ್ಪಷ್ಟವಾಗಿ ಕುಗ್ಗಿತೆಂದು ಹೇಳಲಿಕ್ಕೆ ಆಗದಿದ್ದರೂ ಮುಂದೆ ಹೊಯ್ಸಳರ ಆಳಿಕೆಯಲ್ಲಿ ತುಂಗಾತೀರವೇ (ಒಮ್ಮೆ ವೀರಬಲ್ಲಾಳನ ಕಾಲಕ್ಕೆ ಕೆಲದಿನ ಕೃಷ್ಣಾ) ಸ್ಥಿರವಾಗಿ ಉತ್ತರದ ಸೀಮಾರೇಷೆ ಆಯ್ತು! ಇದರ ಮೇಲಿಂದ ೭ರಿಂದ ೧೨ನೆಯ ಶತಮಾನದ ಮಧ್ಯದಲ್ಲಿ ಮೆಲ್ಲಮೆಲ್ಲನೆ 'ತಿರುಳ್ಗನ್ನಡ'ರ (ನಾಡಿನ) ಕನ್ನಡತನವು ಹೇಗೆ ಹುರುಳಿಲ್ಲದುದಾಗುತ್ತ ನಡೆದು ಇದ್ದಿತೆಂಬ ಕಲ್ಪನೆಯು ಬಾರದೆ ಇರದು. ವಿಜಯನಗರದವರ ಕಾಲದಲ್ಲಿಯೂ ಉತ್ತರಕರ್ಣಾಟದ ಪರಿಸ್ಥಿತಿಯು ಅಷ್ಟೊಂದು ಬದಲಾಗಲಿಲ್ಲ. ತುಂಗಾತೀರದ ವಿಜಯನಗರವೆ, ಕನ್ನಡದ ಗಂಡುಮೆಟ್ಟು ಆಗಿದ್ದಿತು. ತಾಳೀಕೋಟೆಯ (ರಕ್ಕಸತಂಗಡಿ) ಕಾಳಗದ ಬಳಿಕ, ಪೇಶ್ವೆಯರ ಆಳಿಕೆಯ ಹೊತ್ತಿಗೆ ಉತ್ತರಕರ್ಣಾಟವೆಲ್ಲವೂ 'ಮರಾಠವಾಡಾ' ದಕ್ಷಿಣಮಹಾರಾಷ್ಟ್ರವಾಗಿ ಪರಿಣಮಿಸಿತು!

ಇದಕ್ಕೆ ಸೋಜಿಗಬಡುವ ಕಾರಣವಿಲ್ಲ. ಡಾ. ಗ್ರಿಯರಸನ್ ಇವರು ಇಡಿ ಹಿಂದುಸ್ಥಾನದ ಭಾಷೆಗಳ ಸ್ಥಿತಿಗತಿಗಳನ್ನು ಕುರಿತು ಅಭ್ಯಾಸಮಾಡಿ ಅದರಲ್ಲಿ ಬಂದ ಅನುಭವದ ಒಂದು ಸಂಗತಿಯನ್ನು 'Linguistic Survey of India' ಎಂಬ ಮಹಾಗ್ರಂಥದ ಸಂಪುಟಗಳಲ್ಲಿ ಬಹಳ ಸ್ಪಷ್ಟವಾಗಿ ವಿವರಿಸಿದ್ದಾರೆ. ಅವರ ಅಭಿಪ್ರಾಯದಂತೆ ಆವುದೆ ಒಂದು ಆರ್ಯಭಾಷೆ ಮತ್ತು ದ್ರಾವಿಡವೇ ಮೊದಲಾದ ಒಂದು ಆರ್ಯೇತರ ಭಾಷೆ ಹೀಗೆ ಇವೆರಡರ ಸಂಬಂಧವುಂಟಾದಾಗ ಆರ್ಯಭಾಷೆಯು ಅನಾರ್ಯಭಾಷೆಯನ್ನು ಹಿಮ್ಮೆಟ್ಟಿಸಿ ಆ ಸ್ಥಳವನ್ನು ತಾನೇ ಆಕ್ರಮಿಸಿಬಿಡುತ್ತದೆ. ಏಕೆಂದರೆ, ಆರ್ಯವರ್ಗದ ಭಾಷೆಯನ್ನು ಆಡುವುದರಲ್ಲಿ ಗೌರವವುಂಟೆಂದು ಭಾವಿಸಿದ ಆರ್ಯೇತರ ಭಾಷೆಯ ಜನಗಳು ತಮ್ಮ ಮಾತಿನಲ್ಲಿ ಆ ಆರ್ಯಭಾಷೆಯ ಶಬ್ದಗಳನ್ನೆ ಹೆಚ್ಚು ಹೆಚ್ಚು ಬಳಸುತ್ತ ಕೊನೆಗೆ ತಮ್ಮ ಭಾಷೆಯನ್ನೆ ಅವರು ಮರೆತುಬಿಡುವರು. ಡಾ. ಗ್ರಿಯರಸನ್ ಇವರು ಬರೆದ ಈ ಅನುಭವದ ಮಾತುಗಳಿಂದ 'ಗೋದಾವರಿವಂ ಇರ್ದ ಕನ್ನಡ'ವು ಕೃಷ್ಣೆ-ತುಂಗಭದ್ರೆಗಳ ವರೆಗೂ ಹೇಗೆ ನೂಕಲ್ಪಟ್ಟಿರಬಹುದೆಂಬ ಸಂಗತಿಯು ಚೆನ್ನಾಗಿ ಗೊತ್ತಾಗುತ್ತದೆ.

ಆದರು, ಕೃಷ್ಣೆಯ ವರೆಗಿನ ಉತ್ತರಕರ್ಣಾಟವು ಅಲ್ಪಸ್ವಲ್ಪ ಎಚ್ಚೆತ್ತುದು ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ! ಕ್ರಿ. ಶ. ೧೮೯೦ರಲ್ಲಿ ಸ್ಥಾಪಿತವಾದ 'ಕರ್ಣಾಟಕ ವಿದ್ಯಾವರ್ಧಕಸಂಘ'ವೆ ಆ ಎಚ್ಚೆತ್ತ

ಕರ್ಣಾಟವು ಕಾರ್ಯರಂಗಕ್ಕಿಳಿದ ಮೊದಲನೆಯ ಕುರುಹು. ಈ ಕಾಲದಲ್ಲಿ ಉತ್ತರಕರ್ಣಾಟವು ಹೇಗೆ ಮತ್ತು ಏಕೆ ಎಚ್ಚೆತ್ತಿತೆಂಬ ವಿವರಣೆಯು ಒಂದು ಸ್ವತಂತ್ರ ಪ್ರಬಂಧವಾಗುವಂತಿದೆ. ಅಂತು, ಉತ್ತರಕರ್ಣಾಟವು ಎಚ್ಚೆತ್ತಿತು. ಎಚ್ಚೆತ್ತಬಳಿಕ ಕೆಲದಿನ ಎರಡು ಕರ್ಣಾಟಗಳು ಇನ್ನು ಕೆಲದಿನ ಮೂರು ಕರ್ಣಾಟಗಳು, ನಾಲ್ಕು ಕರ್ಣಾಟಗಳು ಹೀಗೆ ಧಾರವಾಡ, ಮೈಸೂರು, ಮಂಗಳೂರು, ಕೊಡಗು..... ನೆರೆಯವರ ಅರಿವು ಇಲ್ಲದೆ ಬೇರೆಬೇರೆಯಾಗಿದ್ದು, ತಮ್ಮತಮ್ಮ ಬೆಡಗು ಬಿಂಕಗಳಲ್ಲಿಯೆ ಮೈಮರೆತುದು ಗಮನಕ್ಕೆ ಬಂತು! ೧೯೧೪ರಲ್ಲಿ ಅಖಂಡ ಕರ್ಣಾಟದ ಕಲ್ಪನೆಯೆ ಮೆಯ್ವೆತ್ತು ಕರ್ಣಾಟ ಸಾಹಿತ್ಯಪರಿಷತ್ತು ಆಯಿತು. ಇನ್ನು ಮುಂದೆ, ಕನ್ನಡವು ಭಾರತೀದೇವಿಯ ಗುಡಿಯೊಳಗಿನ ಎಂದೂ ನಂದದ ಒಂದು ನಂದಾದೀಪವಾಗಿ ಜಗತ್ತಿನಲ್ಲಿ ಈ ನಾಡಿನ ಹೆಸರು ಬೆಳಕಿಗೆ ಬರ ಬೇಕಾಗಿದ್ದರೆ ಕರ್ಣಾಟವು ಸ್ವತಂತ್ರಪ್ರಾಂತವಾಗುವುದೊಂದೇ ಉಪಾಯ, ಎಂಬ ಮನವರಿಕೆಯಾಗಿ 'ಕರ್ಣಾಟ ಏಕೀಕರಣ'ದ ಚಳವಳಿಯೂ ಬೇಗನೆ ಆರಂಭವಾಯಿತು. 'ಕನ್ನಡಿಗ'ರೆಂಬ ಅಭಿಮಾನವು ಕರ್ಣಾಟದ ಎಲ್ಲ ಭಾಗಗಳಲ್ಲಿಯೂ ಮೊಳೆತು, ಬೆಳೆಯಲಾರಂಭಿಸಿತು.

ಈಗ ಸಹ ಕರ್ಣಾಟದಲ್ಲಿ ಈ ಬಗೆಯ ಜಾಗ್ರತಿಗೆ ಮುಖ್ಯವಾದ ಕಾರಣ: ತೆಲುಗು, ಮರಾಠಿಗಳ ವಿಶೇಷವಾದ ಆಕ್ರಮಣವೇ. ಕನ್ನಡಕ್ಕಾದ ಒಳಬೇನೆಯು ೧೨ನೆಯ ಶತಮಾನದಲ್ಲಿ ಸ್ಪಷ್ಟವಾಗಿ ಹೊರಗೆ ಕಾಣಿಸಿಕೊಂಡಿತು. ಆದರೆ, ಆ ಬೇನೆಯ ಸರಿಯಾದ ಪರೀಕ್ಷೆಯಾಗಿ ಅದಕ್ಕೆ ಹೊತ್ತು ಹೊತ್ತಿಗೆ ಔಷಧೋಪಚಾರಗಳು ಒದಗಲಿಲ್ಲ. ಬೇನೆಯು ಮಾಣದೆ ಈ ವರೆಗೆ ಹಾಗೆ ಉಳಿದುಕೊಂಡು, ಕೆಲಮಟ್ಟಿಗೆ ಬೆಳೆದುಕೊಂಡು ಬಿಟ್ಟಿದೆ. ಆದರೂ ಕರ್ಣಾಟವನ್ನು ಈ ಮೊದಲಿನ ೩-೪ ಕುತ್ತುಗಳೊಳಗಿಂದ ಬದುಕಿ ಉಳಿಸಿದ ದೇವರು ಈ ಬಿಕ್ಕಟ್ಟಿನೊಳಗಿಂದಲೂ ಪಾರುಮಾಡುವನೆಂಬ ದೃಢಶ್ರದ್ಧೆಯಿಂದಲೂ ಸ್ವಾಭಿಮಾನದಿಂದಲೂ ಕನ್ನಡಿಗರು ಪ್ರಾಂತೀ ಕರಣಕ್ಕಾಗಿ ಹೆಣಗುತ್ತಲಿದ್ದಾರೆ.

ನಾಡಿನಲ್ಲಿ ತನ್ನತನದ ಅರಿವು ಉಂಟಾದುದರಿಂದ ಕನ್ನಡಿಗನಿಗೆ ತನ್ನ ನಿಜಸ್ಥಿತಿಯನ್ನು ಅರಿತುಕೊಳ್ಳುವ ಕುತೂಹಲವು ತಲೆದೋರಿತು. 'ಕನ್ನಡದ ಕತೆ' ಏನೆಂಬ ವಿಚಾರ ವಿಮರ್ಶೆಗಳು ನಡೆದುವು. 'ಕರ್ಣಾಟ'ವೊ 'ಕರ್ನಾಟ'ವೊ ಎಂಬ ಅರೆದಾಟಕ್ಕೆ ಆರಂಭವಾಯಿತು. ಈ 'ನ'-'ಣ'ಗಳ ವಾಗ್ವಾದವೇ ಬೇಡ; ನಮ್ಮ ನಾಡು 'ಕನ್ನಡ', ನಾವು 'ಕನ್ನಡಿಗರು'; ಎಂಬ ನಿರ್ಣಯಕ್ಕೂ ಬಂದುದಾಯಿತು. ಆದರೆ, 'ಕನ್ನಡ' ಎಂಬುವರ ಗುಟ್ಟು ಮಾತ್ರ ಇನ್ನೂ ಗೊತ್ತಾಗಲಿಲ್ಲ!

ಟಿಪ್ಪಣಿ

೧. ವೈದ್ಯ ಚಿ. ವಿ. : ***ಶ್ರೀಮನ್ಮಹಾಭಾರತ,*** ಉಪಸಂಹಾರ ಪು. ೬೩, ೬೭, ೭೩; ಲೋಕಮಾನ್ಯ ತಿಲಕರ ಅಭಿಪ್ರಾಯ ಗೀತಾರಹಸ್ಯ ಪರಿಶಿಷ್ಟದಲ್ಲಿ, ಕ್ರಿಸ್ತಪೂರ್ವ ೩೨೦-೨೦೦

೨. ***Reports of Mysore Archaeological Department,*** 1908

೩. ***Bombay Gazetteers***, Vo.. XIII p.403, 407, 409, Mysore Gazetteers

೪. ಪೂರ್ವೋಕ್ತ ಸಭಾ. ೭೬-೯೮. ಭೀಷ್ಮ. ೯-೫೯

೫. ***Kadamba Kula*** p.5 ಕಬ. ಪು. II ೩

೬. ಈ ನಾಟಕದ ರಚನಾಕಾಲವನ್ನು ಕುರಿತು ತುಂಬ ಭಿನ್ನಾಭಿಪ್ರಾಯಗಳಿವೆ. ಕ್ರಿಸ್ತಶಕಕ್ಕೆ ಮೊದಲು ೧ನೆಯ ಶತಮಾನದಿಂದ ಕ್ರಿ. ಶ. ದ ೫೫೦ರ ವರೆಗೆ ಬೇರೆ ಬೇರೆ ಕಾಲಗಳನ್ನು ಬೇರೆ ಬೇರೆ ವಿದ್ವಾಂಸರು ಹೇಳುತ್ತಲಿದ್ದಾರೆ. ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳು 'ಸಂಸ್ಕೃತ ನಾಟಕ' ಎಂಬ ಗ್ರಂಥದಲ್ಲಿ ಹಲವು ಮತಗಳನ್ನು ಹೇಳಿ ಕ್ರಿ. ಶ. ೪೦೦, ಎಂದು ತಮ್ಮ ಮಧ್ಯಮ

ಮಾರ್ಗವೊಂದನ್ನು ಸೂಚಿಸಿದ್ದಾರೆ. ಆದರೆ, ಕ್ರಿ. ಶ.೨ನೆಯ ಶತಮಾನ ಎಂಬ ಪಕ್ಷವೇ ಬಲವಾಗಿದೆ. ಆದರೂ ಕ್ರಿ. ಶ. ೪ನೆಯ ಶತಮಾನವೆಂದರೂ ಮೇಲಣ ವಿಚಾರಸರಣಿಗೆ ಬಾಧೆ ಬರುವುದಿಲ್ಲ.

೭. ಗೋವಿಂದ ಪೈ., *ಉದಯಭಾರತ* ೧೯೨೮

೮. ಸಂಪುಟ ೨೯೮, *ಜಯಕರ್ನಾಟಕ*

೯. ***BORI.1922***

೧೦. ಬಲ್ದುರು (ಸಂ.), ಬಿಲ್ಹಣನ (೧೧ನೆಯ ಶತಮಾನ) ***ವಿಕ್ರಮಾಂಕದೇವಚರಿತದ*** ಮುನ್ನುಡಿಯಲ್ಲಿ : Kuntala and Karnat are used as synonyms p. 27, note 7.ಡಾ. ಬಿ. ಸಿ. ಲಾ "Kunta occupies a region almost conterminous with the Kanarese Districts" -BORI, XVII, P. 324

೧೧. Epigraphia Indica, XXIII, ಪುಟ ೧೪

೧೨. ಕ. ದ. ೧೯೩೮, ಪುಟ ೫೨. ಶ್ರೀ ಪಂಚಮುಖಿಯವರ ಲೇಖನವು KHJ ದಲ್ಲಿ ಬೇಗನೆ ಬರಲಿದೆ. ಪಶ್ಚಿಮ ಚಲುಕ್ಯರಿಗೆ ಸಾಮಾನ್ಯವಾಗಿ ಕುಂತಲರೆಂದೂ ಅವರು ಆಳುವ ನಾಡಿಗೆ ಕುಂತಲದೇಶವೆಂದೂ ಹೆಸರಿದ್ದುದು ಶಾಸನಗಳಿಂದ ಗೊತ್ತಾಗುತ್ತದೆ. (EI. IV p. 88, V p. 9, XII. p. 145) ಅಲ್ಲದೆ ತಮಿಳಮಹಾಕೋಶ (Lexicon) ದಲ್ಲಿ ತಮಿಳು ಸಾಹಿತ್ಯದ ಉಲ್ಲೇಖಗಳಿಂದ 'ಕುಂತಳರ್' ಎಂದರೆ ಚಲುಕ್ಯರು ಎಂದು ಕೊಟ್ಟಿರುವರು. ಕುಂತಲನಾಡನ್ನು ಆಳುವವರು ಕುಂತಲರೆಂದು ವಿಖ್ಯಾತರೂ ಆದ ಚಲುಕ್ಯರ ದಂಡಿಗೆ 'ಕುಂತಲಬಲಂ' ಎಂಬ ಹೆಸರು ಇರಬೇಕಾಗಿದ್ದಿತಲ್ಲವೆ? ಆದರೆ ಅದು 'ಕರ್ಣಾಟಕಬಲಂ' ಎಂಬ ಹೆಸರಿನಿಂದ ಪ್ರಖ್ಯಾತವಾಗಿದ್ದುದನ್ನು ನೋಡಿದರೆ, ಆ ಪ್ರಾಚೀನಕಾಲದಲ್ಲಿ ಕುಂತಲ ಮತ್ತು ಕರ್ಣಾಟಗಳೆರಡೂ ಸಮಾನಾರ್ಥಕ ಶಬ್ದಗಳಾಗಿದ್ದುವೆಂದೇ ಸಿದ್ಧವಾಗುವುದಿಲ್ಲವೆ?

೧೩. ***Assam Research Society Journal,*** Oct. 1934

೧೪. ಮಹಾರಾಷ್ಟ್ರ ಮೂಲ, ಪುಟ ೮-೧೦ ಕರ್ಣಾಟದ ವೀರಕ್ಷತ್ರಿಯರು, ಪುಟ ೧೩೩;

೧೫. ***Children's Pali Dictionary***

೧೬. Althekar, ***Rashtrakutas and their Times,*** p. 21-22

೧೭. ರಟ್ಟಾಖ್ಯಾ ಕರ್ಣಾಟೀ ಚಟುತೀಕ್ಷ್ಣಾ....(ಅಸೀತ್)

೧೮. ಪೂರ್ವೋಕ್ತ, ***Rashtrakutas and their Times,*** Pp. 17-18, ೧೯. EI. IX p. 3

೨೦. ನರಸಿಂಹಾಚಾರ್ಯ ರಾ., ಕನ್ನಡ ಕವಿಚರಿತೆ ಪುಟ.೪೧. ಈ ಮೂರನೆಯ ಕೃಷ್ಣನನ್ನು ಆದಿಪಂಪನು 'ವಿಕ್ರಮಾರ್ಜುನವಿಜಯ'ದಲ್ಲಿ ಶ್ರೀಕೃಷ್ಣನಿಗೆ ಹೋಲಿಸಿ ವರ್ಣಿಸಿದುದನ್ನು 'ನಾಡೋಜಪಂಪ' ಎಂಬ ಗ್ರಂಥದಲ್ಲಿ ಪಂಡಿತ ಮುಳಿಯ ತಿಮ್ಮಪ್ಪಯ್ಯನವರು ಸಿದ್ಧಮಾಡಿದ್ದಾರೆ. ಪಂಪನು ಹೀಗೆ ಆ ಸಾಮ್ರಾಟನನ್ನು ಶ್ರೀಕೃಷ್ಣನಿಗೆ ಹೋಲಿಸಿದ್ದುದರಲ್ಲಿ ಈ ಕನ್ನಡ ಮಹಾಕವಿಯ ಹೃದಯದಲ್ಲಿ ಆ ರಾಷ್ಟ್ರಕೂಟರಾಜನ ವಿಷಯಕ್ಕೆ ಎಷ್ಟೊಂದು ಆದರ-ಪ್ರೀತಿಯಿದ್ದಿತೆಂಬುದು ಚೆನ್ನಾಗಿ ವ್ಯಕ್ತವಾಗುತ್ತದೆ.

೨೧. EI. XIX., p. 287, ೨೨. Rashtrakutas and their Times pp. 17. 18

೨೩. Epigraphia Carnatica, VI.Kd. 162

೨೪. EC. IX, Ht. 12, i.

೨೫. EC. IX, Introduction, p. 12

೨೬. ಶಬ್ದಮಣಿದರ್ಪಣಂ ಸೂತ್ರ ೧೯೭: 'ಮೂಲದ ನರನಂ ಪೇಳ್ವಲ್ಲಿ......ಇಗ ಪ್ರತ್ಯಯಂ'।

೨೭. ***Tamil Lexicon*** see ಕನ್ನಡರ್

೨೮. ಆದರೂ ಇವರ ಅಭಿಮಾನವು ಇದೇ ಸುಮಾರಿಗೆ ಹೊರನಾಡಿನಲ್ಲಿ (ಬಂಗಾಲ, ಮಿಥಿಲೆಗಳಲ್ಲಿ) ಹೋಗಿ ನೆಲೆಸಿ, ರಾಜ್ಯವನ್ನು ಸ್ಥಾಪಿಸಿದ (೧೦೭೦-೧೧೧೯) ಬಲ್ಲಾಳಸೇನ ಮತ್ತು ನಾನ್ಯದೇವ ಇವರ ಕರ್ಣಾಟದ ಹಿರಿದಾದ ಹೆಮ್ಮೆಗೆ ಸರಿದೊರೆಯಾಗಲಾರದು. ಇವರು ತಾವು 'ಕರ್ಣಾಟ ಕ್ಷತ್ರಿಯ ಕುಲಶಿರೋಮಣಿ', 'ಕರ್ಣಾಟ ಕುಲಭೂಷಣ'ರು ಎಂದು ಹೇಳಿ ತಮ್ಮ ಶಾಸನಗಳಲ್ಲಿ ತೋರ್ಪಡಿಸಿದ ಹುಮ್ಮಸವು ಹೊಚ್ಚ ಹೊಸತು. ಎಷ್ಟೊಂದು ಅಭಿಮಾನವು ಸ್ಫುರಿಸುವುದಕ್ಕೆ ಪರಪ್ರಾಂತವೆ ಕಾರಣವಿರಬೇಕಲ್ಲವೆ? ಇವರ ಬಗ್ಗೆ ಹೆಚ್ಚಿನ ಸಂಗತಿಗಳಿಗಾಗಿ Indian Historical Report. Sept. 31, p. 455. ನೋಡಬಹುದು

೨೯. EC. III. Sr. 119, ೩೦. EC. IV, Hs.137, ೩೧. EC. V, Hn. 72, ೩೨. ಅದೇ. ೭೬

೩೩. South Indian Epigraphy, 1934, p. 30, ೩೪. EC. IV, Kr. 7, 8, 9, 48, ೩೫. EC. VIII, Sb. 174, ೩೬. EC. IX, Bn. 53

೩೭. EC. XI. Dg. 125, ೩೮. EC. XII, Pg. 48

೩೯. ವಿ. ಲ. ಭಾವೆ: ಶಾಲಿವಾಹನ ಒಂಬತ್ತು ಅಥವಾ ಹತ್ತನೆಯ ಶತಮಾನದ ವರೆಗೆ ಕೇವಲ ಮರಾಠಿಯಲ್ಲಿಯೇ ಬರೆದ ಒಂದು ಲೇಖವೂ ನಮಗೆ ಉಪಲಬ್ಧವಿಲ್ಲ - ***ಮರಾಠಿ ಸಾಹಿತ್ಯ ಪತ್ರಿಕಾ*** ೧೧
ಪಾಂಗಾರಕರ: ಶಕೆ ೧೨೧೨ರ ವರೆಗೆ ಬೆಳೆದ ಬಳಿಕ ಪ್ರೌಢಸ್ಥಿತಿಯು ಪ್ರಾಪ್ತವಾಗಿ ಜ್ಞಾನೇಶ್ವರಿಯಂತಹ ಸರ್ವಾಂಗಸುಂದರವಾದ ಗ್ರಂಥವು ನಿರ್ಮಾಣವಾಯಿತು. ಮಹಾರಾಷ್ಟ್ರ ವಾಙ್ಮಯಾಚಾ ಇತಿಹಾಸ ಪು. ೩೪೮
ಜೋಶಿ ರಾ. ಭಿ. : ವ್ಯವಸ್ಥಿತ ಗ್ರಂಥರಚನೆಗೆ ಆರಂಭವಾದುದು ೧೩ನೆಯ ಶತಕದಲ್ಲಿ -ಮಭಾಫ. ಪು. ೬೬
ಕುಲಕರ್ಣಿ ಕೃ. ಪಾ. : ಆದರಣೀಯ ಗ್ರಂಥರಚನಾಕಾಲವು ಕ್ರಿ. ಶ. ೧೨೯೦ -ಮಭಾ. ಪು. ೧೪೦

೪೦. ತಮಿಳರು ಕನ್ನಡಿಗರನ್ನು ತಮ್ಮವರೆಂದು ಎಂದೂ ಎಣಿಸಿರಲಿಲ್ಲ. ವಡುಕರು (ಕನ್ನಡಿಗರು) ಕಳ್ಳರು, ಸುಲಿಗೆಗಾರರೆಂದು ತಮಿಳಿನ ಪ್ರಾಚೀನ ಸಾಹಿತ್ಯದಲ್ಲಿ ವರ್ಣನೆಗಳಿವೆ. SCSI. p. 24-25, 34-35 etc.

೪೧. ಪೂರ್ವೋಕ್ತ, ***Telugu Literature*** p. 44; ***ಕವಿಚರಿತೆ*** ಭಾಗ I, ಪುಟ ೭೪; ***ಕ.ಸಾ.ಪ.*** VII, ಪುಟ ೧೭೭-೧೭೯

೪೨. Reddy. C.R., Fore word P. 4

೪೩. ಕುರುಬರು, ಗೌಳಿಗಳು, ಕಮ್ಮಾರರು, ಕುಂಬಾರರು, ವೈಶ್ಯರು, ಬಣಜಿಗರು, ಬ್ರಾಹ್ಮಣರು ಮೊದಲಾದವರಲ್ಲಿ ಒಂದೇ ಕುಲದವರಾಗಿದ್ದರೂ 'ಆರೇ', 'ತೆಲುಗು' ಮತ್ತು 'ಕನ್ನಡ' ಎಂಬ ಪಂಗಡಗಳಾಗಿದ್ದುದು ಕಂಡಬರುವುದಕ್ಕೆ ಇದೇ ಕಾರಣ.

೪೪. Historical Inscriptions in South India. p. 15

೪೫. ಗ್ರಂಥಮಾಲಾ : ***ಮರಾಠೀ ಭಾಷೇಚೀ ಸ್ಥಿತಿ*** ಪು. ೭.

೪೬. ಇದರೊಡನೆ 'ಸಹ್ಯಾದ್ರಿ' (೧೯೩೬ ನವೆಂಬರ ಮತ್ತು ೧೯೩೮ ಮಾರ್ಚ) ಮಾಸಪತ್ರಿಕೆಯಲ್ಲಿ ಬಂದ 'ಮರಾಠೀಚಾ ದಕ್ಷಿಣೇತೀಲ ಪ್ರಸಾರ' ಎಂಬ ಲೇಖನಗಳನ್ನು ಓದಿ ಅದರ ಒಲವನ್ನೂ ತಿಳಿದುಕೊಳ್ಳಬೇಕು

೪೭. ಪ್ರಾಕೃತತೋಕ್ತಿಗಳೆಂದು ಬರಿದೆ ಮ-। ಹಾಕೃತಘ್ನರು ಜರಿವರಲ್ಲದೆ
ಸ್ವೀಕೃತವ ಮಾಡದಲೆ ಬಿಡುವರೆ ಸುಜನರಾದವರು।
ಶ್ರೀಕೃತಿಪತಿಯಮಲಗುಣಗಳು। ಈ ಕೃತಿಯೊಳುಂಟಾದ ಬಳಿಕ।
ಪ್ರಾಕೃತವೆ ಸಂಸ್ಕೃತದ ಸಡಗರವೇನು ಸುಗುಣರಿಗೆ॥ ೩೩.೫

೪೮. ***ಋಗ್ವೇದ ಸಂಹಿತೆ*** X.61. 8; ಮನುಸ್ಮೃತಿ. ೧. ೨೨-೨೪

೪೯. ನ ಮ್ಲೇಚ್ಛವಿಷಯೇ ಶ್ರಾದ್ಧಂ ಕುರ್ಯಾತ್, ನ ಗಚ್ಛೇತ್ ತಂ ವಿಷಯಂ। - ಸ್ಮೃತಿಚಂದ್ರಿಕಾ

೫೦. ಪೂರ್ವೋಕ್ತ, ಕವಿಚರಿತೆ. ಪುಟ ೮೭-೯೦

೫೧. ಮಹಾರಾಷ್ಟ್ರ ಮೂಲ. ಪುಟ ೩೧-೩೪. ಮತ್ತು ಮಹಾಭಾರತ. ಪುಟ ೧೮೯

೫೨. ಶೂದ್ರಕ, ಮೃಚ್ಛಕಟಿಕ ನಿರ್ಣಯಸಾಗರ ಪ್ರತಿ, ೧೯೧೬. ಪುಟ ೨೨೫; ಅಲ್ಲದೆ ಶಾರದಾತನಯನು (೧೩ನೆಯ ಶತಮಾನ) ಇದೇ ಅಭಿಪ್ರಾಯದವನಿದ್ದಾನೆ: 'ದ್ರಮಿಡಾಃ ಕನ್ನಡಾಂಧ್ರಾಶ್ಚ...ಏತಾಭಾಷಾ ಸರ್ವತ್ರ ಮ್ಲೇಚ್ಛಭಾಷೇತ್ಯುದಾಹೃತಾಃ।'

೫೩. ಮ್ಲೇಚ್ಛದೇಶವೆಂಬ ಕಾರಣದಿಂದಲೆ ವಾಯು, ಮತ್ಸ್ಯ ಮೊದಲಾದ ಕೆಲವು ಪುರಾಣಗಳಲ್ಲಿ 'ಕರ್ಣಾಟ'ದ ಸ್ಪಷ್ಟವಾದ ಉಲ್ಲೇಖವು ಬಂದಿಲ್ಲವೆಂದು ಊಹಿಸಲು ಅವಕಾಶವಿದೆ. 'ಕರ್ಣಾಟ' ರಾಕ್ಷಸನು ಈ ನಾಡಿನ ಸಂಸ್ಥಾಪಕನೆಂದು ಸ್ಕಂಧಪುರಾಣವು ಹೇಳುತ್ತದೆ. ಕನ್ನಡವು ಜೈನಾದಿ ಅವೈದಿಕರ ಭಾಷೆಯೆಂದೂ, ಮ್ಲೇಚ್ಛಭಾಷೆಯೆಂದೂ ಕೊನೆಯ ವರೆಗೆ ಹಾಗೆಯೆ ಉಳಿಯಿತು. ಆದರೆ, ತೆಲುಗ ಬ್ರಾಹ್ಮಣರು ಮ್ಲೇಚ್ಛವೆಂಬ ಅಪವಾದದಿಂದ ತಮ್ಮ ಭಾಷೆಯನ್ನುಳಿಸಿಕೊಳ್ಳಲು ಅದು ಕಣ್ವಋಷಿಯಿಂದ ಸಿದ್ಧವಾದ ಭಾಷೆಯೆಂದು ಕಥೆನಿರ್ಮಿಸಿದರು. ತಮಿಳು ಬ್ರಾಹ್ಮಣರು ಅಗಸ್ತ್ಯನಿಗೆ ಸಂಬಂಧ ಜೋಡಿಸಿದರು. ಆದರೆ, ಮ್ಲೇಚ್ಛವೆನಿಸಿದ ಕನ್ನಡದಲ್ಲಿ ಬರೆಯಲು ವೈದಿಕರಿಗೆ-ಬ್ರಾಹ್ಮಣರಿಗೆ ಬಹಳ ದಿನಗಳ ವರೆಗೆ ಧೈರ್ಯವಾಗಲಿಲ್ಲ! ಇಂತಹ ವೈದಿಕ ಅಭಿಮಾನಿಗಳ ಪೂರ್ವಜರೇ ಬರೆದ ಪುರಾಣಗಳಲ್ಲಿ ಈ ನಾಡಿನ ಉಲ್ಲೇಖವು ಸ್ಪಷ್ಟವಾಗದಿರುವುದು ಸಹಜ.

೫೪. ***ಮಹಾರಾಷ್ಟ್ರ ಸಾಹಿತ್ಯಪತ್ರಿಕಾ*** ಸಂಪುಟ ೧೧, ಪು ೮೫

೫೫. History of Dharmashastra. p. 315, ಮತ್ತು ಮರಾಠಿ ಸಾಹಿತ್ಯ ಪತ್ರಿಕಾ ಸಂಪುಟ II ಪುಟ ೮೫

೫೬. EI. Vol. V, p. 186

೫೭. ***ಮಹಾರಾಷ್ಟ್ರದ ಮೂಲ***ದ ೧ನೆಯ ನೆರೆಯೋಲೆಯಲ್ಲಿ (Appendix) ಮಹಾರಾಷ್ಟ್ರದ ಹುಟ್ಟುಗೆಯ ಕ್ರಮವನ್ನು ತೋರಿಸಲಾಗಿದೆ.

೫೮. ***ಮಹಾರಾಷ್ಟ್ರ ಸಾಹಿತ್ಯ ಪತ್ರಿಕಾ*** ೧೯೩೫, ಜನವರಿ ಸಂಚಿಕೆ

೫೯. ಆನೆಗೆ 'ಯೇ, ಯೇ'; 'ದೇ, ದೇ'; 'ಘೇ, ಘೇ'; ಈ ಮಾತುಗಳನ್ನು ಹೇಳಬೇಕು; ಬರುವುದಕ್ಕೂ, ಕೊಡುವುದಕ್ಕೂ,

ತಕ್ಕೊಳ್ಳುವುದಕ್ಕೂ ಕಲಿಸಬೇಕು ಎಂದು ಕಲ್ಯಾಣ ಚಲುಕ್ಯಚಕ್ರವರ್ತಿ ಭೂಲೋಕಮಲ್ಲನೆ ಹೇಳುತ್ತಾನೆ! ನೋಡಿ : ***ಅಭಿಲಷಿತಾರ್ಥ ಚಿಂತಾಮಣಿ***, ಪುಟ. ೬೯

೬೦. ಸಾತವಾಹನ ಹಾಲರಾಜ, ***ಗಾಥಾಸಪ್ತಶತಿ*** ನೋಡಿ

೬೧. ರಾಜಶೇಖರ ***ಕಾವ್ಯಮೀಮಾಂಸಾ***

೬೨. ಮಾಝಾ ಮರ್‍ಹಾಟೀಚಾ ಬೋಲ ಕೌತುಕೇ।
ಪರೀ ಅಮೃತಾತೇ ಹೀ ಪೈಜಾಜಿಂಕೇ॥ -***ಜ್ಞಾನೇಶ್ವರಿ*** (೧೨೯೬ ಕ್ರಿ. ಶ.)

೬೩. ೧೨-೧೩ನೆಯ ಶತಮಾನದಲ್ಲಿ ಆರಿಯರು ದೇವಗಿರಿ ಯಾದವರ ಬೆಂಬಲದಿಂದ ಏರಿ ಬರುತ್ತಲೆ ಕನ್ನಡಿಗರಿಗೆ ಹೊಯ್ಸಳರು ಕೈವಾರಿಗಳಾದರು. ಇದೇ ಬಗೆಯ ದೃಶ್ಯವು ೧೭ನೆಯ ಶತಮಾನದ ಇಲ್ಲಿಯ ರಾಜತಂತ್ರದಲ್ಲಿಯೂ ಗೋಚರವಾಗುತ್ತದೆ. ಶಿವಾಜಿಯ ಆರಿಯ ವೀರರನ್ನು ತಡೆಯಲು ಚಿಕದೇವರಾಯರ ಕನ್ನಡ ಗಂಡುಗಲಿಗಳು ಆವೇಶದಿಂದ ಮುಂದೆ ಬಂದರು. ಇದರಿಂದ ಮರಾಠಿಯ ಪ್ರಗತಿಯಾಗದೆ ಕನ್ನಡದ ಅಭಿಮಾನವೆ ಹೆಚ್ಚಾಯಿತು. ಚಿಕ್ಕದೇವರಾಯರ ಕಾಲದ ಕನ್ನಡದ ಅಭಿಮಾನವೂ ಮರಾಠರ ಮೇಲಣ ಸಿಡುಕೂ 'ಅಪ್ರತಿಮ ವೀರಚರಿತೆ'ಯಲ್ಲಿ ಸಾಹಿತ್ಯರೂಪವನ್ನು ತಾಳಿ ನಿಂತಿದೆ!
ಆದರೆ, ಧಾರ್ಮಿಕ ಸ್ವರೂಪದಲ್ಲಿ ಬಂದ ಆರಿಯ ಮಾತು ಕನ್ನಡಿಗರ ಮನಸ್ಸನ್ನೇ ಸೂರೆಗೆಯ್ದು ಅವರನ್ನು ತನ್ನ 'ದಾಸ'ರನ್ನಾಗಿ ಮಾಡಿಕೊಂಡಿತು. ಇದಕ್ಕೆ ರಾಮದಾಸರ ಪಂಥವೇ ಸಾಕ್ಷಿ. ಹಂಪಿಯ ವರೆಗೆ ರಾಮದಾಸರ ಮಠಗಳಿದ್ದುವು. ಈ ಪಂಥಕ್ಕೆ ಸೇರಿದವರು 'ದಾಸಬೋಧ', 'ಮನಾಚೇ ಶ್ಲೋಕ'ಗಳನ್ನು ಪಠನಮಾಡಲೇಬೇಕು. ಇದು ೧೭ನೆಯ ಶತಮಾನದ ಮಾತು. ಆದರೆ, ೧೫ನೆಯ ಶತಮಾನದಲ್ಲಿಯೇ ದತ್ತಪಂಥದ ಪುರಸ್ಕರ್ತರಾದ ಶ್ರೀಪಾದ ಶ್ರೀವಲ್ಲಭರು ಕೃಷ್ಣಾತೀರದ ಕರ್ಣಾಟರನ್ನೆಲ್ಲ ಸುಮಾರಾಗಿ ತಮ್ಮ ಪಂಥಕ್ಕೆ ಸೆಳೆದುಕೊಂಡಿದ್ದರು. ವಿಜಾಪುರದ ಆದಿಲ್‌ಶಹನು ಸಹ ಇವರಿಗೆ ತಲೆವಾಗಿ ನಡೆದುಕೊಳ್ಳುತ್ತಿದ್ದನು. ಚಿಕ್ಕಮಗಳೂರು (ಬಾಬಾಬುಡನಗಿರಿ) ವರೆಗೂ ದತ್ತಪರಂಪರೆಯ ಕ್ಷೇತ್ರವು ವ್ಯಾಪಿಸಿದ್ದಿತು. 'ಶ್ರೀಗುರುಚರಿತ್ರ' ಎಂಬ ಮರಾಠಿ ಗ್ರಂಥದ ಪಾರಾಯಣವು ಈ ಪಂಥದ ವೈಶಿಷ್ಟ್ಯ. ಜ್ಞಾನೇಶ್ವರರಿಂದ ಸ್ಥಾಪಿತವಾದ (ಕ್ರಿ. ಶ. ೧೨೯೮) ವಿಠಲಭಕ್ತಿಗೆ ಕರ್ಣಾಟದಲ್ಲಿ ಇನ್ನೂ ಹೆಚ್ಚು ಜನಗಳು ಮರುಳಾಗಿದ್ದಾರೆ. 'ಕ್ಷೇತ್ರ ಕಾನಡೇ', 'ದೇವ ಕಾನಡಾ', 'ಕಾನಡಾ ಹೋ ವಿಠ್ಠಲ ಕಾನಡಾ' ಎಂದು ಘನಗರ್ಜನೆಯು ಅಖಂಡವಾಗಿ ನಡೆಯುತ್ತಿದ್ದರೂ ಪಂಡರಿಯ ವಿಠ್ಠಲನು ಆರಿಯರ ಭಕ್ತಿಗೆ ಮನಸೋತು ಮರಾಠರ ಅಧಿದೈವತನಾಗಿದ್ದಾನೆ! ಈ ವಿಠ್ಠಲಭಕ್ತನು ಕರ್ಣಾಟದ ಯಾವ ಮೂಲೆಯಲ್ಲಿಯೇ ಇರಲಿ 'ಜ್ಞಾನದೇವ-ತುಕಾರಾಮ'ರ ನಿತ್ಯಭಜನೆ ಮಾಡಲೇಬೇಕು. ನಾಲ್ಕೆಂಟಾದರೂ ಮರಾಠಿ ಅಭಂಗಗಳು ಬರಲೇಬೇಕು.
ವಿಠ್ಠಲಭಕ್ತಿಯು ನಮ್ಮ ನಾಡಿನ ಹರಿದಾಸರ ವೈಶಿಷ್ಟ್ಯ. ಆದರೆ, ಆರಿಯರು 'ಕಾನಡಾ ವಿಟ್ಠಲ' ನಮ್ಮ ತಮ್ಮವನನ್ನಾಗಿ ಮಾಡಿಕೊಂಡ ಬಳಿಕ ನಮ್ಮ ಹರಿದಾಸರ ವಿಠ್ಠಲನ ಕ್ಷೇತ್ರವು ಭೀಮಾತೀರದಿಂದ ತುಂಗೆಯ ದಂಡೆಗೆ ಬಂದಿತು. ವಾದಿರಾಜರ ತೀರ್ಥ (ಯಾತ್ರಾ) ಪ್ರಬಂಧದಲ್ಲಿ ಈ ಮಾತು ಸ್ಪಷ್ಟವಾಗಿದೆ. ವಿಜಯನಗರದಲ್ಲಿ ವಿಜಯವಿಠ್ಠಲನ ಗುಡಿಯು ಸಿದ್ಧವಾಯಿತು. ಶ್ರೀಮಾನ್ ಪಂಡಿತ ವೆಂಕಟರಾಯರು ಪ್ರಕಟಿಸಿದ 'ವಿಜಯನಗರದ ಸ್ಮಾರಕ ಸಂಚಿಕೆ'ಯಲ್ಲಿ ಇವನ್ನು ಕುರಿತು ಇದೇ ಲೇಖಕನು ಬರೆದ ಲೇಖ ನೋಡಿ. ಇಂತು ಭೀಮಾ, ಕೃಷ್ಣಾ ತಟಾಕದಿಂದ ಕರ್ಣಾಟವು ತುಂಗಾತೀರದ ಕಡೆಗೆ ಹೊರಟುದು ಕಣ್ಣಿಗೆ ಬೀಳುತ್ತದೆ!

೬೪. EC. VIII, Sb. 275, ೬೫. EC. IX, Dv. 63, ೬೬. ***South Indian Inscriptions*** No.117; 1934

೬೭. ಮರಾಠೀ ವ ತ್ಯಾಂಚೀ ಭಾಷಾ; ೧೯೩೨ : ಮತ್ತು ರಾಜವಾಡೆಯವರ ಜ್ಞಾನೇಶ್ವರಿಯ ಮುನ್ನುಡಿ, ಪುಟ ೨; ಹಾಗೂ ವಿವಿ. ೧೯೨೭

೬೮. IA. XIII, p. 275, ೬೯. Mac-donell. A. A., Vedic Index, Vol. I see yadu

೭೦. EC. VI, Kp. 345 III Me. 121

ಕನ್ನಡದ ಹುಟ್ಟು

'ಕನ್ನಡಿಗ' ಎಂಬ ಪದದ ಅರ್ಥವು ಸ್ಪಷ್ಟವಿದೆ. ಆದರೆ, 'ಕನ್ನಡ' ಎಂದರೇನು? ಓ! ಕ-ನ್ನ-ಡ ಎಂದರೆ ಏನು, ಇದೇ ತಿಳಿಯದಾಗಿ ಇದರ ಅರೆದಾಟವು ಕಳೆದ ಎಷ್ಟೋ ವರುಷಗಳಿಂದ ನಡೆದೇ ನಡೆದಿದೆ; ಇನ್ನೂ ನೆಲೆ ಇಲ್ಲ. ಕನ್ನಡಿಗರಿಗೆ 'ಕನ್ನಡ' ಎಂದರೇನು, ಎಂಬುದರ ಅರಿವೂ ಉಳಿದಿರಬಾರದೆ? ಸಾವಿರಾರು ವರುಷಗಳಿಂದ ಕನ್ನಡಿಗರು ತಮ್ಮ ಸಂಸ್ಕೃತಿ-ಪರಂಪರೆಗಳನ್ನು ದುರ್ಲಕ್ಷಿಸುತ್ತ ಬಂದುದರ ಪರಿಣಾಮವಿದು. ಕನ್ನಡವು ಮೆಲ್ಲಮೆಲ್ಲನೆ ಕಣ್ಮರೆಯಾಗುತ್ತ ನಡೆದಿರುವದೇಕೆ ಮತ್ತೆ? ಆರಿಯರಿಗೂ ಕನ್ನಡರಿಗೂ ಸಾವಿರಾರು ವರುಷಗಳ ನಿಕಟಸಂಬಂಧ. ಆರಿಯ ಮಾತನಲ್ಲಿ 'ಕನ್ನಡ' ಎಂಬುದಕ್ಕೆ ಒಂದು ವಿಶಿಷ್ಟ ಅರ್ಥವಿದೆ. ಅದು ಒಂದು ಪಡೆನುಡಿ (idiom). ಆ ಅರ್ಥವಾದರೂ ಸರಿಯಿರಬಹುದೆ? ಜ್ಞಾನೇಶ್ವರರು (೧೨೯೬) 'ಕನ್ನಡ' ಎಂಬ ಪದವನ್ನು ಹೀಗೆ ಉಪಯೋಗಿಸಿದ್ದಾರೆ:

ಹೇ ಪರಿಸತಾಂ ಜರೀ ಕಾನಡೇ।
ತರಿ ಜಾಣ ಪಾಂ ಪಾರ್ಥ ಉಫಡೇ।

ಜ್ಞಾನೇಶ್ವರಿ, ೬. ೧. ೨೦

ಇಲ್ಲಿ 'ಕನ್ನಡ' ಶಬ್ದಕ್ಕೆ 'ತಿಳಿಯದುದು' 'ಅಗಮ್ಯ' ಎಂಬ ಅರ್ಥ ಉಂಟು. ಆದುದರಿಂದಲೆ, ಕನ್ನಡಿಗರಿಗೆ 'ಕನ್ನಡ'ದ ಅರ್ಥವು ಅಗಮ್ಯವಾಗಿ ತಿಳಿಯದಾಗಿರಬಹುದೆ? ಆದರೆ, ಇಂಗ್ಲಿಷಿನಲ್ಲಿಯೂ ಗ್ರೀಕ್ ಮತ್ತು ಲ್ಯಾಟಿನ್ (ಭಾಷೆ) ಎಂಬ ಪದಗಳಿಗೆ ತಿಳಿಯದುದೆಂಬ ಅರ್ಥವುಂಟು. "It is Greek (and Latin) to me" (ನನಗೆ ಇದರ ಅರ್ಥವಾಗುವುದಿಲ್ಲ); ಇಂಗ್ಲಿಷಿನಲ್ಲಿ 'ಗ್ರೀಕ್-ಲ್ಯಾಟಿನ್' ಎಂಬ ಮಾತಿಗಾಗಲಿ ಆರೆಯಲ್ಲಿ 'ಕನ್ನಡ' ಎಂಬುದಕ್ಕೆ ಆಗಲೀ 'ತಿಳಿಯದ ಮಾತು' ಎಂಬ ಅರ್ಥವು ವಿಶೇಷ ಪರಿಸ್ಥಿತಿಯಲ್ಲಿ ಬಂದು ಅಂಟಿಕೊಂಡುದೇ ಹೊರತು ಅದು ಮೂಲಾರ್ಥವಲ್ಲ. ಅದು ಆಲಂಕಾರಿಕ ಅರ್ಥ. ಸಾಮಾನ್ಯ ಇಂಗ್ಲೀಷ ಮನುಷ್ಯನಿಗೆ ಗ್ರೀಕ್-ಲ್ಯಾಟಿನ್‌ಗಳೂ ತಿಳಿಯವು. ಸಾಮಾನ್ಯ ಆರಿಯರಿಗೂ ಮೆಲ್ಲಮೆಲ್ಲನೆ ಕನ್ನಡವು ಅರಿಯದ ಭಾಷೆಯಾಯಿತು. ಅದರಿಂದ, ಈ ಪದಗಳಿಗೆ 'ತಿಳಿಯದ್ದು', 'ಅರ್ಥವಾಗದ್ದು' ಎಂಬ ಅರ್ಥವು ಅಂಟಿಕೊಂಡು ಅದೊಂದು ಪಡೆಮಾತಾಗಿ (idiom) ಪರಿಣಮಿಸಿತು.

ಹಾಗಾದರೆ, 'ಕನ್ನಡ' ಎಂದರೇನು? 'ಕನ್ನಡ' ಎಂದರೆ ಅದೊಂದು ಭಾಷೆ. ಬಂಗಾಳಿ, ಗುಜರಾಥಿ, ಹಿಂದಿ, ತಮಿಳು ಮೊದಲಾದವುಗಳಂತೆ. ಈ ಅರ್ಥವು ಬಳಕೆಯ ಮಾತಿನಲ್ಲಿ ಅಡಿಗಡಿಗೆ ಅನುಭವಕ್ಕೆ ಬರುತ್ತಿದ್ದು

'ಕನ್ನಡ' ಎಂದರೇನು ಎಂದು ಕೇಳುವುದು ಅದಾವ ಜಾಣತನ? ಎಂದೆನ್ನಬಹುದು ಕೆಲರು. ನಿಜ. ನಾಡಿನ ಹೆಸರು 'ಕರ್ಣಾ(ರ್ನಾ)ಟ', ಮತ್ತು ನುಡಿ 'ಕನ್ನಡ' ಎಂದು ಹೇಳುವ ವಾಡಿಕೆಯುಂಟು. ಕರ್ಣಾಟಕ್ಕೆ 'ಕನ್ನಡ-ನಾಡು' ಎಂತಲೂ ಕರೆವ ಪರಿಪಾಠವು ಈಗ ಕಂಡುಬರುತ್ತಲಿದೆ. 'ಕನ್ನಡ-ನಾಡು' ಎಂದರೇನು? ಕನ್ನಡವನ್ನು (ಭಾಷೆಯನ್ನು) ಆಡುವ ನಾಡು ಎಂದು ತಾನೆ ಇದರ ಅರ್ಥ? ಕವಿರಾಜಮಾರ್ಗ (ಕ್ರಿ. ಶ. ೮೧೫) ಮೊದಲಾದ ಪುರಾತನ ಗ್ರಂಥಗಳಲ್ಲಿ 'ಕನ್ನಡ'ವೆಂದೇ ಈ ನಾಡಿಗೆ ಹೆಸರಿಸಿದ್ದಾರೆ. ಅಂತೂ ನಮ್ಮ ಇಂದಿನ ರೂಢಾರ್ಥದ ಮೇಲಿಂದ ವಿಚಾರಿಸಿದರೆ ನೃಪತುಂಗನ ಕಾಲದಲ್ಲಿಯೂ ಈ ನಾಡಿಗೆ 'ಕನ್ನಡ'ವೆಂಬ ಹೆಸರು ಇಲ್ಲಿ ನಡೆಯುತ್ತಲಿದ್ದ 'ಕನ್ನಡ' ಭಾಷೆಯಿಂದಲೆ ಬಂದಿತೆಂದು ಹೇಳಬೇಕಾಗುತ್ತದೆ.

ಆದರೆ, ದುರ್ದೈವದ ಸಂಗತಿ: ಭಾಷೆಯ ಮೇಲಿಂದ ಹೆಸರುಗೊಂಡ ಒಂದು ದೇಶವೂ ಭೂಮಂಡಲದಲ್ಲಿ ದೊರೆಯುವುದಿಲ್ಲ! ಜನಾಂಗ ಅಥವಾ ದೇಶದಿಂದ ಭಾಷೆಗೆ ಹೆಸರುಂಟಾದುದನ್ನು ಕಾಣಬಹುದೇ ವಿನಾ ಇದರ ವಿಪರೀತವಾದುದನ್ನು ಎಲ್ಲಿಯೂ ಕಾಣಲು ಸಿಕ್ಕುವುದಿಲ್ಲ. ಆದುದರಿಂದ, ಕನ್ನಡದ ಮಟ್ಟಿಗೇ ಇದು ತಿರುವು ಮುರುವಾಗಿ ನುಡಿಯಿಂದ ನಾಡಿಗೆ ಹೆಸರು ಬಂದಿತೆಂದು ಬಗೆವ ಕಾರಣವೇನು? ಆದಕಾರಣ ಗತಾನುಗತಿಕತ್ವದಿಂದ, (ಎಂದರೆ ಬ್ಯಾಂಬ್ಯಾ ಪದ್ಧತಿಯಿಂದ) ರೂಢಿಯಿಂದ ಬಂದಿರುವ ಅರ್ಥವು ತಪ್ಪು ಎನ್ನಲಿಕ್ಕಾಗದಿದ್ದರೂ ಏಕೆಂದರೆ (ರೂಢಿಯೆ ಭಾಷೆಗೆ ಮೂಲ) ಅದು ಪರಮ ಅರ್ಥವಲ್ಲ. 'ಕನ್ನಡ' ಎಂಬುದಕ್ಕೆ ಮೊದಲಿನ ಅರ್ಥವು-ಪರಮ ಅರ್ಥವು ಭಾಷೆಯೆಂದು ಇರಲಾರದು; ಜನಾಂಗ ಅಥವಾ ದೇಶವೆಂಬ ಎರಡರಲ್ಲಿ ಯಾವುದಾದರೂ ಒಂದು ಇರಬೇಕಾಯಿತು.

'ಕನ್ನಡರು' ಅಥವಾ 'ಕನ್ನಡಿಗ'ರು ಎಂಬಲ್ಲಿ 'ಕನ್ನಡ' ಇದು ಜನಾಂಗದ ಹೆಸರೆಂದು ಗ್ರಹಿಸಬೇಕೆ? ಇದಕ್ಕೆ ವಿದ್ವಾಂಸರ ಒಪ್ಪಿಗೆ ಇಲ್ಲ. ಒಂದು ಅರಗಳಿಗೆ ಇದು ಜನಾಂಗದ ಹೆಸರೆಂದು ಗ್ರಹಿಸಿದರೂ 'ಕನ್ನಡ'ಕ್ಕೇನು ಅರ್ಥ? ಈ ಹೆಸರೇಕೆ ಬಂದಿತು. ಈ ಜನಾಂಗಕ್ಕೆ? ಮಾತು ಕಟ್ಟಾಯಿತು. ಇದಕ್ಕೆ ಜನಾಂಗವಾಚಕ ಅರ್ಥವನ್ನು ಹೇಳುವ ಸಂಶೋಧಕರು ಯಾರೂ ಮುಂದೆ ಬಂದು ಮಾತು ಬೆಳೆಯಿಸಿಲ್ಲ. ಅಲ್ಲದೆ, ಹಿಂದಿನ ಗ್ರಂಥಗಳನ್ನು ಸ್ವಲ್ಪ ಪರಿಶೀಲಿಸಿದರೆ ಕನ್ನಡವು ಮುಖ್ಯವಾಗಿ ದೇಶವಾಚಕವಾಗಿರುವುದೆ ಕಂಡುಬರುತ್ತದೆ. (ನಟ+ಕರ್ಣರೆಂಬ ಜನಾಂಗದಿಂದ ಕರ್ಣಾಟ (ಕನ್ನಡ) ವೆಂಬ ಹೆಸರು ಬಂದಿತೆಂದು ಒಂದು ವಿಚಾರವಿದ್ದು ಅದರ ವಿವೇಚನವು ಮುಂದೆ ಬರತಕ್ಕುದಿದೆ.)

ನೃಪತುಂಗನ (೮೧೫) ಕವಿರಾಜಮಾರ್ಗದಲ್ಲಿ 'ಕನ್ನಡ' ಎಂಬುದನ್ನು ನುಡಿ ಎಂಬ ಅರ್ಥದಲ್ಲಿ ಉಪಯೋಗಿಸಿರುವಂತೆ ನಾಡು ಎಂಬರ್ಥದಲ್ಲಿಯೂ ಪ್ರಯೋಗಿಸಿದ್ದುದನ್ನು ಕಾಣಬಹುದು. "ಕಾವೇರಿಯಿಂದಂ ಆ ಗೋದಾವರಿಯ ವರಂ ಇರ್ದ ನಾಡು ಅದು ಆ ಕನ್ನಡದೋಳ್ ಭಾವಿಸಿದ ಜನಪದಂ;" "ಪುಲಿಗೆರೆ, ಕಿಸುವೊಳಲ್, ಒಕುಂದ, ಕೊಪಣನಗರದ, ಈ ನಾಡು ಕನ್ನಡದ ತಿರುಳ್" ಎಂಬಲ್ಲಿ ಕನ್ನಡಕ್ಕೆ ದೇಶವೆಂದಲ್ಲದೆ ಬೇರೆ ಅರ್ಥವೆ ಸಾಧ್ಯವಿಲ್ಲ. ಆಂಡಯ್ಯ (ಕ್ರಿ. ಶ. ೧೨೩೫)ನು 'ಮೆಲ್ಲೆಲರಿಂ ಪೂತ ಕೊಳಂಗಳಿಂ........ಕನ್ನಡಂ ಎನಿಪ್ಪ ಆ ನಾಡು ಚೆಲ್ವಾಯ್ತು;' ಎಂಬಲ್ಲಿ ಕನ್ನಡದ ಅರ್ಥವು ನಾಡು ಎಂದು ಅಹುದೊ ಅಲ್ಲವೊ ಎಂಬ ಬಗೆಗೆ ಸಂದೇಹಕ್ಕೆ ಇಂಬೇ ಇಲ್ಲ. ತಮಿಳಿನ ಬೃಹತ್‌ಕೋಶದಲ್ಲಿ[೧] ಕನ್ನಡಂ ಎಂಬುದಕ್ಕೆ ದೇಶವೆಂದು ಅರ್ಥವನ್ನು ಕೊಟ್ಟಿದ್ದಾರೆ. ನನ್ನೂಲ್ ಎಂಬ ತಮಿಳು ವ್ಯಾಕರಣಕ್ಕೆ ೧೩ನೇ ಶತಮಾನದಲ್ಲಿ ಮಲ್ಲಿನಾಥರು ಬರೆದ ಟೀಕೆಯಲ್ಲಿ 'ಕನ್ನಡಂ' ಎಂಬ ಶಬ್ದವು ಬಂದಿದ್ದು,'ಕನ್ನಡಂ' ಎಂದರೆ ಭರತಖಂಡದ,[೫೬] ದೇಶಗಳಲ್ಲಿ ಒಂದು ದೇಶವೆಂದೂ ೧೮ ಭಾಷೆಗಳಲ್ಲಿ ಒಂದು ಭಾಷೆಯೆಂದೂ ಹೇಳಿದ್ದಾಗಿದೆ. ಇಷ್ಟು ಸುತ್ತುಮಾತುಗಳೇತಕ್ಕೆ? ಈಗ ದಿನದ ಬಳಕೆ ಮಾತಿನಲ್ಲಿರುವ 'ಕನ್ನಡಿಗ' ಎಂಬುದರ ಅರ್ಥವಾದರೂ ಏನು? 'ಮೂಲಧ ನರನಂ ಪೇಳ್ವಲ್ಲಿ ಇಗ ಪ್ರತ್ಯಯಂ' ಎಂದು ಕೇಶಿರಾಜನು (೧೨೯೬) ಹೇಳುತ್ತಾನೆ. ಕೇಶಿರಾಜನ ಅಭಿಪ್ರಾಯದಂತೆ ಕನ್ನಡಿಗರು ಎಂದರೆ ಕನ್ನಡದ ಮೂಲಿಗರು-ಮೊದಲಿಗರು; ಕನ್ನಡದ ಮೂಲಜನಾಂಗ.

ಆದರೆ, ಕನ್ನಡದ ಮೂಲಜನಾಂಗವು ಇಂತಹುದೆ ಎಂದು ಪ್ರತ್ಯೇಕವಾಗಿ ಉಳಿದಿಲ್ಲ; ಉಳಿಯುವುದು ಸಾಧ್ಯವೂ ಇಲ್ಲ. ಆದುದರಿಂದ ಭಟ್ಟಾಕಲಂಕನು (೧೬೦೦) ಕೇಶಿರಾಜನಿಂದಲೂ ಸ್ವಲ್ಪ ಹೆಚ್ಚು ಸೂಕ್ಷ್ಮ ವಿಚಾರವನ್ನು ಮಾಡಿ ಕರ್ಣಾಟಕ ಶಬ್ದಾನುಶಾಸನದಲ್ಲಿ ವಿವರವಾಗಿ ಕೊಟ್ಟಿದ್ದಾನೆ. ಅದು:

ಸೂತ್ರಂ।। ಭವಜಾತಯೋಃ ।। ४೧೯।।

ವೃತ್ತಿಃ ।। ತತ್ರೇತಿ ಸಪ್ತಮೀ ಸಮರ್ಥಾತ್ ಭವ ಇತ್ಯರ್ಥೇ ಜಾತ ಇತ್ಯರ್ಥೇ
ಚ ಇಗ ಪ್ರತ್ಯಯೋ ಭವತಿ

ವ್ಯಾಖ್ಯಾ।। ಅತ್ರ ಭವ ಜಾತಯೋಃ ಇತಿ ಸ್ವರೂಪ ನಿರ್ದೇಶಃ ಕಿಮರ್ಥ ನಿರ್ದೇಶೋ ವಾ? ನಾದ್ಯಃ ನಹಿ ಅನಯೋಃ ಇಗ ಪ್ರತ್ಯಯಃ ಕುತ್ರಾಪ್ಯ ಶ್ರವಣಾತ್, ನ ದ್ವಿತೀಯಃ, ಪದಾರ್ಥ ಭೇದಾ ಭಾವೇನ ದ್ವನ್ದ್ವಾ, ಪ್ರಾಪ್ತಿ ಪ್ರಸಂಗಾತ್-ಇತಿ ಚೇನ್ನ. ಅರ್ಥ ಭೇದಸ್ಯ ಸತ್ವಾತ್, ನಹಿ ತತ್ರ ಭವಃ, ತತ್ರ ಜಾತ ಇತಿ ಚ ಪರ್ಯಾಯಃ, ಭವನಂ ಹಿ ಸತ್ತಾ ಚಿರಸ್ಥಿತಿಃ. ಸಾಚ ಅನ್ಯತ್ರ ಉತ್ಪನ್ನಸ್ಯಾಪಿ ಘಟತೇ; ನ ತತ್ರೋತ್ಪನ್ನಸ್ಯೈವೇತಿ. ಜನನಂ ಹಿ ಪ್ರಾದುರ್ಭಾವಃ ತತ್ರೈವೋತ್ಪತ್ತಿಃ ಇತಿ ಅಸ್ತಿ ಏವ ಅರ್ಥ ಭೇದೇತಿ ನ ಇತಿ ನ ದ್ವಂದ್ವಾನುಪಪತ್ತಿಃ ಇತಿ ಆಹ--ಕರಹಡಿಗಂ, ಕರಹಡೋ ದೇಶವಿಶೇಷಃ..............

ಅಂತು, ಕೇಶಿರಾಜ ಮತ್ತು ಭಟ್ಟಾಕಲಂಕದೇವ ಇವರಿಬ್ಬರ ಅಭಿಪ್ರಾಯವನ್ನು ನೋಡಿದರೂ 'ಕನ್ನಡ' ಎಂಬುದು ದೇಶವಾಚಕವೆಂಬ ಮಾತೇ ಸಿದ್ಧವಾಗುತ್ತದೆ. ಕನ್ನಡದಲ್ಲಿ ಹುಟ್ಟಿದವರೂ, ಕನ್ನಡಿಗರು; ಕನ್ನಡದಲ್ಲಿ ಬಂದು ನೆಲೆಸಿ ಬೆಳೆದವರೂ ಕನ್ನಡಿಗರೇ ಎಂದು ಭಟ್ಟಾಕಲಂಕನು ಹೇಳುತ್ತಾನೆ. ಆದುದರಿಂದ, ಯಾವ ಬಗೆಯಿಂದ ವಿಚಾರಿಸಿದರೂ 'ಕನ್ನಡಿಗ' ಎಂಬ ಹೆಸರು ಅವರಾಡುವ ಮಾತಿನಿಂದ ಬಂದುದಲ್ಲ; ಆತನು ನೆಲೆಸಿದ ನಾಡಿನಿಂದ, ಎಂಬುದು ಸ್ಪಷ್ಟವಾಗುತ್ತದೆ. ಆದಕಾರಣ 'ಕನ್ನಡ' ಎಂದರೆ ಭಾಷೆಯಲ್ಲ; ದೇಶ.

ಹೊರಗಣ ಪ್ರಮಾಣಗಳೇತಕ್ಕೆ? ಪ್ರತ್ಯಕ್ಷ 'ಕನ್ನಡ' ಎಂಬ ಪದವನ್ನು ಬಿಡಿಸಿ ನೋಡಿದರೂ ಇದೇ ಅರ್ಥವೆ ಒಳಗೆ ಹುದುಗಿಕೊಂಡಿರುವುದು ಅನುಭವಕ್ಕೆ ಬರುತ್ತದೆ. 'ಕನ್ನಡ' ಎಂಬುದೊಂದು ಕೂಡು-ನುಡಿ (ಸಾಮಾಸಿಕಪದ); ಅಖಂಡ ಶಬ್ದವಲ್ಲ, ಎಂದು ಬಹುತರ ಎಲ್ಲ ವಿದ್ವಾಂಸರೂ ಈಗ ಒಪ್ಪಿಕೊಂಡುದಾಗಿದೆ. 'ಕನ್ನಡ' ಎಂಬ ಪದದಲ್ಲಿ ಬೆರೆತುಕೊಂಡಿರುವ ಶಬ್ದಗಳು ಎರಡು, ಎಂಬ ವಿಷಯದಲ್ಲಿಯೂ ಭಿನ್ನಾಭಿಪ್ರಾಯಗಳಿಲ್ಲ. ಪೂರ್ವಪದವು ಆವುದೆಂಬ ಬಗೆಗೆ ತೀವ್ರವಾದ ಮತಭೇದಗಳಿದ್ದರೂ ಉತ್ತರಪದವು 'ನಡ' ಎಂದು ಸಾಮಾನ್ಯವಾಗಿ ಎಲ್ಲರು ಒಪ್ಪುವರು. 'ನಡ' ಎಂಬುದು, ನಾಡು (ದೇಶ) ಎಂಬ ಪದದ ಒಂದೂ ರೂಪವೆಂದು ಕೀರ್ತಿಶೇಷರಾದ ಶ್ರೀ ಆರ್. ನರಸಿಂಹಾಚಾರ್ಯರು ಊಹಿಸಿದ್ದು,[೨] ಅದಕ್ಕೆ ಹಲವು ವಿದ್ವಾಂಸರ ಮನ್ನಣೆಯೂ ದೊರೆತಿದೆ. ಪ್ರೊ. ಚೆನ್ನಕೇಶವ ಅಯ್ಯಂಗಾರ್ಯರು ತಿಳಿಸಿದ ಮೇರೆಗೆ 'ನಡ' ಎಂಬುದನ್ನು ನಾಡು ಎಂಬ ಪದದ ಸ್ಥಳದಲ್ಲಿ ಉಪಯೋಗಿಸಿದ ಒಂದೆರಡು ಉದಾಹರಣಗಳೂ ಉಂಟು. "ತಮಿಳುಭಾಷಾಪ್ರಪಂಚದಲ್ಲಿ ಉದ್ದಾಮ ಪಂಡಿತರಾದ ಮಹಾ ಮಹೋಪಾಧ್ಯಾಯ ಡಾ. ವಿ. ಸ್ವಾಮಿನಾಥ ಅಯ್ಯರರು ೧೯೨೭ರಲ್ಲಿ 'ಶಿಲಪ್ಪದಿಗಾರಂ' ಗ್ರಂಥವನ್ನು ಪರಿಶೋಧಿಸಿ ಪ್ರಕಟಿಸಿದ್ದು ಅದರ ಶಬ್ದಕೋಶದಲ್ಲಿ 'ಕರುನಾಡರ್' ಎಂಬ ಪದದೊಂದಿಗೆ 'ಕರುನಡರ್' ಎಂಬುದನ್ನೂ ಕೊಟ್ಟಿದ್ದಾರೆ." ಇದೇ ಮೇರೆಗೆ "ವಿಲ್ಲಿಪುತ್ತೂರ್ ಭಾರತದ ಪೀಠಿಕಾಸಂಧಿಯಲ್ಲಿ (೧೪ನೆಯ ಶತಮಾನದ ಗ್ರಂಥ) 'ಕರುನಡಂ' ಎಂಬ ಪ್ರಯೋಗವಿದೆ."

ಆದುದರಿಂದ, 'ಕನ್ನಡ'ದೊಳಗಿನ ಕೊನೆಯ 'ನಡ' ಎಂಬುದು ನಾಡು ಎಂಬುದರ ಒಂದು ರೂಪವೆಂಬುದು ನಿಶ್ಚಿತ. 'ಕನ್ನಡ' ಶಬ್ದವು ಮೂಲದಲ್ಲಿ ದೇಶವಾಚಕ. ಕನ್ನಡವೆಂದರೆ ಭಾಷೆ ಎಂಬ ಅರ್ಥವು ಮುಂದೆ ಕಾಲಾಂತರದಲ್ಲಿ ಲಕ್ಷಣಾರ್ಥದಿಂದ ಬಂದಿತು. 'ನಡ' ಎಂಬುದು 'ನಾಡು' ಶಬ್ದದ ಪರ್ಯಾಯವಾಗಿದ್ದರೆ ಕನ್ನಡ ಎಂಬ ಪದದಂತೆ 'ಕನ್ನಾಡು' ಎಂಬ ರೂಪವೂ ಒಂದಿಲ್ಲೊಂದು ಕಾಲದಲ್ಲಿ ಆದರೂ ಬಳಕೆಯಲ್ಲಿರಬೇಕಷ್ಟ? 'ಕನ್ನಾಡ' ಅಥವಾ 'ಕನ್ನಾಡು' ಎಂಬೀ ಬಗೆಯ ಪ್ರಯೋಗಗಳು ಪ್ರಾಚೀನಸಾಹಿತ್ಯ, ಶಾಸನಾದಿಗಳಲ್ಲಿ ಎಲ್ಲಿಯಾದರೂ

ಕಾಣಸಿಕೊಳ್ಳುವುವೆ? ಈ ಬಗೆಯ ಪ್ರಯೋಗಗಳು ಇಲ್ಲದೆ ಇಲ್ಲ. ತಂಜಾವೂರಿನ ಬಾಣರಾಜರ ಚರಿತೆಯಲ್ಲಿ 'ಕನ್ನಾಡರ್' ಎಂಬ ಪದವಿದೆ (೧೪ನೆಯ ಶತಮಾನ). 'ವೀರಚೋಳಿಯಂ' ಎಂಬ ತಮಿಳು ವ್ಯಾಕರಣದ ಅಲಂಕಾರಪಟಲದ ಟೀಕೆಯಲ್ಲಿ ಈ ಪದವನ್ನು ಉಪಯೋಗಿಸಿದ್ದುಂಟು (೧೧ನೆಯ ಶತಮಾನ).

'ಕನ್ನಾಡು' ಎಂಬ ರೂಪವು ತಮಿಳದೇಶದಲ್ಲಿ ಹೆಚ್ಚು ಪ್ರಚಾರದಲ್ಲಿದ್ದಂತೆ ತೋರುತ್ತದೆ. ಕರ್ಣಾಟದ ಸೀಮೆಯಲ್ಲಿ ದೊರೆತ ಎರಡು ಶಾಸನಗಳಲ್ಲಿ (ಕ್ರಿ. ಶ. ೧೦೭೧) 'ಕನ್ನಾಡಕ' ಪಂಡಿತರ ಉಲ್ಲೇಖವು ದೊರೆತಿದೆ.[೩] ಆದರೆ ಇವೂ ತಮಿಳುಭಾಷೆಯೊಳಗಿನವೇ! ಇದಕ್ಕೂ ಹಿಂದಿನ ಕಾಲದ ಒಂದು ಶಾಸನ ಕ್ರಿ. ಶ. ೬೩೪ರ ಸುಮಾರಿನದು. ಗಂಗ ಭೂವಿಕ್ರಮನೆಂಬ ಕನ್ನಡ ರಾಜನ ಕಾಲದ್ದು. 'ಅಸ್ಯ ಸೀಮಾ ಕನ್ನಾಟಕೇ ಪ್ರವಕ್ಷ್ಯಾಮಿ' ಎಂಬ ಮಾತು ಅದರಲ್ಲಿದೆ. ಸಂಸ್ಕೃತಭಾಷೆಯಲ್ಲಿಯೇ ಸಂಪೂರ್ಣವಾಗಿ ಶಾಸನಗಳನ್ನು ಬರೆದು, ದಾನಕೊಟ್ಟ ಸೀಮೆಯ ಮೇರೆ ಮೊದಲಾದವುಗಳನ್ನು ಹೇಳುವಾಗ ದೇಶಭಾಷೆಯನ್ನು ಉಪಯೋಗಿಸುವ ಕೆಲವೊಂದು ಪರಿಪಾಠವುಂಟು. ಅದನ್ನೆ ಈ ಶಾಸನದಲ್ಲಿಯೂ ಕಾಣಬಹುದು. ಸ್ಥಳ-ನಾಮಗಳನ್ನು ಬರೆವಾಗ ಕೆಚ್ಚ ಕನ್ನಡದ ಭೂಮಿಸೀಮೆಗಳ ಹೆಸರುಗಳನ್ನು ಸಂಸ್ಕೃತದಲ್ಲಿ ಇದ್ದಕ್ಕಿದ್ದಂತೆ ಹೇಳುವುದು ಹಲವು ಬಾರಿ ವಿಚಿತ್ರವೆನಿಸುವುದೆಂದು ಅವುಗಳನ್ನು ಸಂಸ್ಕೃತಕ್ಕೆ ಮಾರ್ಪಡಿಸಿಕೊಂಡು ಉದಾಹರಣಗಳು ಅದೆಷ್ಟೋ ಸಿಕ್ಕುವುವು. 'ಹಲಸಿಗೆ' ಎಂಬ ಊರು 'ಪಲಾಶಿಕಾ' ಎಂದು ಕದಂಬರ ಶಾಸನಗಳಲ್ಲಿ ಮಾರ್ಪಟ್ಟಿರುವುದನ್ನು ಕಾಣಬಹುದು. ಹಲಸಿಗೆ ಮಲೆನಾಡಿನ ಊರು. ಹಲಸು ಹೆಚ್ಚು ಇರಬಹುದು. ಆದರೆ, ಸಂಸ್ಕೃತದ 'ಪಲಾಶಿಕಾ' ಎಂಬ ಹೆಸರೆ ಏಕೆ ಮೊದಲಿನದಾಗಿರಲಿಕ್ಕಿಲ್ಲ? ಎಂದರೆ ಕರ್ಣಾಟಕದ ಹಳ್ಳಿಗಳ ಹೆಸರುಗಳು (ಮೂಲದಲ್ಲಿ ಕನ್ನಡಿಗರಿಂದಲೆ ಆಗಿದ್ದರೆ) ಹೆಚ್ಚಾಗಿ ಕನ್ನಡ ನುಡಿ ಆಗಿರುವುದು ಸ್ವಾಭಾವಿಕ. ಈ ನಾಡಿನ ಹಳ್ಳಿಪಳ್ಳಿಗಳ ಹೆಸರುಗಳು ಕನ್ನಡದಲ್ಲಿರುವುದು ಎಷ್ಟು ಸಹಜ-ಸ್ವಾಭಾವಿಕವೋ ಅಷ್ಟು ಸಂಸ್ಕೃತದಿಂದ ಇರುವುದು ಸಂಭವನೀಯವಾಗಿಲ್ಲ. ಹಲಸಿಗೆಯು 'ಪಲಾಶಿಕಾ' ಎಂದು ಅಲ್ಪಸ್ವಲ್ಪ ಮಾರ್ಪಟ್ಟಿದೆ; ಆದರೆ, 'ಮುಳುಬಾಗಿಲು' ಸಂಸ್ಕೃತದಲ್ಲಿ ಕಂಟಕಾನನಪಟ್ಟಣವಾಯಿತು! ಕನ್ನಡದ ಊರುಕೇರಿಗಳ ಹೆಸರುಗಳನ್ನು ಹೀಗೆ ಎಳೆದಾಡಿ ಸಂಸ್ಕೃತಕ್ಕೆ ತಿರುಗಿಸಿಕೊಂಡು ಬರೆಯುವುದಕ್ಕಿಂತಲೂ ಮೂಲ ಕನ್ನಡದಲ್ಲಿಯೇ ಬರೆಯುವುದು ಲೇಸೆಂದು ಹಲವರು (ಶಾಸನವು ಸಂಸ್ಕೃತದಲ್ಲಿದ್ದರೂ ಭೂಮಿ ಸೀಮೆಗಳ ಹೆಸರನ್ನು ಕನ್ನಡದಲ್ಲಿ ಬರೆವ) ಈ ಪದ್ಧತಿಯನ್ನು ಸ್ವೀಕರಿಸಿರುವಂತೆ ಕಂಡುಬರುತ್ತದೆ. ಗಂಗ ಭೂವಿಕ್ರಮನ ಶಾಸನದಲ್ಲಿ ಇದೆ ಪದ್ಧತಿಯಿದೆ. ಈ ಶಾಸನವು ಸಂಸ್ಕೃತ ಭಾಷೆಯಲ್ಲಿದ್ದರೂ ದೇಶದ ಹೆಸರನ್ನು 'ಕರ್ಣಾಟಕ' ಎಂದು ಬರೆಯದೆ 'ಕನ್ನಾಟಕ' ಎಂಬುದಾಗಿ ಹೇಳಿರುವ ಕಾರಣವೇನು? 'ಕನ್ನಾಡು' ಎಂದು ಪ್ರಾಚೀಲಕಾಲದಿಂದ ರೂಢವಾಗಿದ್ದ ದೇಶೀಯ ನಾಮವನ್ನು 'ಕನ್ನಾಟಕ' ಎಂದು ಸಂಸ್ಕೃತಕ್ಕೆ ಒಗ್ಗಿಸಿಕೊಂಡಿರಬಹುದೆ? ಏಕೆಂದರೆ ದೇಶಭಾಷೆಯೊಳಗಿನ ಪ್ರಾದೇಶಿಕ ಹೆಸರುಗಳನ್ನು ಈ ಬಗೆಯಾಗಿ ಸಂಸ್ಕೃತೀಕರಿಸಿಕೊಳ್ಳುವ ಪರಿಪಾಠವು ಆ ಕಾಲದಲ್ಲಿದ್ದುದು ನಿಶ್ಚಿತವಾಗಿ ಗೊತ್ತಾಗಿದೆ. ಅಲ್ಲದೆ, 'ಕನ್ನಾಡ' ಎಂಬ ರೂಪವು ತಮಿಳು ಶಾಸನ, ಸಾಹಿತ್ಯಗಳಲ್ಲಿ ಹಲವೆಡೆಗೆ ಗೋಚರವಾಗುತ್ತದೆ. ಪ್ರಾಕೃತ ಗ್ರಂಥದಲ್ಲಿಯೂ 'ಕನ್ನಾಡ' ಎಂಬ ಪ್ರಯೋಗವು ದೊರೆಯುತ್ತದೆ; ಅದರಂತೆ 'ಕಣ್ಣಾಡ' ಎಂಬ ಪ್ರಯೋಗಗಳುಂಟು. (ಇದರ ವಿಶೇಷ ವಿಚಾರವು ಮುಂದೆ ಬಂದಿದೆ.)

'ಪುನ್ನಾಡು' ಎಂಬ ಹೆಸರಿನ ಒಂದು ಪ್ರಾಚೀನ ದೇಶವಿತ್ತು. ಆ 'ಪುನ್ನಾಡು' ಎಂಬ ಹೆಸರು 'ಪುನ್ನಾಡ, ಪುಣ್ಣಡ, ಪುನ್ನಡ, ಪುನ್ನಾಟ' ಎಂದು ಮುಂತಾಗಿ ಬದಲಾವಣೆಗಳನ್ನು ಹೊಂದಿದುದನ್ನು ಶ್ರೀ ರಾಜರತ್ನಂ ಹಲವು ಆಧಾರಗಳಿಂದ ಸಿದ್ಧಪಡಿಸಿದ್ದಾರೆ.[೪] ಇದೇ ಮೇರೆಗೆ 'ಕನ್ನಾಡು' ಎಂಬ ಹೆಸರು ಕ್ರಮವಾಗಿ ಮಾರ್ಪಟ್ಟು 'ಕನ್ನಡ' ಎಂಬ ಇಂದಿನ ರೂಪವನ್ನು ತಾಳಿತೆಂದು ಹೇಳಬಹುದಾಗಿದೆ. ನೃಪತುಂಗನ ಕಾಲದಲ್ಲಿ (೮೧೫) ಕನ್ನಡಶಬ್ದದ ಮೂಲಾರ್ಥವನ್ನು ಜನಗಳು ಇನ್ನೂ ಮರೆತಿದ್ದಿಲ್ಲ. ಕನ್ನಡವು ದೇಶವಾಚಕ ಶಬ್ದ; ನಾಡು ಅರ್ಥದ ಪದವನ್ನು ಅದು ಒಳಗೊಂಡಿದೆ ಎಂಬ ಅರಿವು ಆ ಕಾಲದಲ್ಲಿ ಇತ್ತು. ಈಗ ಈ ವಿಷಯಕ್ಕೆ ಕಗ್ಗತ್ತಲೆ! ಈಗಿನಂತಹ ಪರಿಸ್ಥಿತಿಯೆ ಆಗ ನೃಪತುಂಗನ ಕಾಲದಲ್ಲಿಯೂ ಇದ್ದರೆ "ಕನ್ನಡದ ತಿರುಳ್" ಎಂಬೀ ಬಗೆಯ

ಮಾತಿನ ಅರ್ಥವೆ ಆಗುವ ಸಂಭವವಿದ್ದಿಲ್ಲ. ಹಾಗಿದ್ದಲ್ಲಿ ನೃಪತುಂಗನಿಗೆ 'ಕನ್ನಡನಾಡು', 'ಕನ್ನಡನಾಡಿನ ತಿರುಳ್, ಅಥವಾ ಕರ್ಣಾಟ ದೇಶ, ಕರ್ಣಾಟದ ದೇಶದ ತಿರುಳ್' ಎಂಬೀ ರೀತಿಯಲ್ಲಿ ವರ್ಣಿಸಿ ಹೇಳಬೇಕಾಗುತ್ತಿತ್ತು!

ನೃಪತುಂಗನ ಕಾಲದಲ್ಲಿ 'ಕನ್ನಡ' ಪದವು ನಾಡು ಎಂಬ ಅರ್ಥವನ್ನೆ ನಿಶ್ಚಿತವಾಗಿ ವ್ಯಕ್ತಪಡಿಸುತ್ತಿದ್ದುದರಿಂದ ಅಗಿನವರಿಗೆ 'ಕನ್ನಡ'ದ ಮುಂದೆ ನಾಡು ಎಂಬ ಪದವನ್ನು ಮತ್ತೆ ಸೇರಿಸುವ ಆವಶ್ಯಕತೆಯು ತೋರಲಿಲ್ಲ. 'ಕನ್ನಡ-ನಾಡು' ಎಂದು ಹೇಳುವುದೂ 'ಚಾತುರ್ಮಾಸ್ಯ-ನಾಲ್ಕು ತಿಂಗಳು' ಎನ್ನುವುದೂ ಒಂದೆ! ಒಂದು ಶಬ್ದದ ಮೂಲಾರ್ಥದ ಮರೆವು ಹೆಚ್ಚಾದಂತೆ ಈ ಬಗೆಯ ದ್ವಿರುಕ್ತಿದೋಷದ ಪದಗಳು ತಲೆದೋರುತ್ತವೆ. ನೃಪತುಂಗನ ಕಾಲದಲ್ಲಿ 'ಕನ್ನಡ'ವು ನಾಡು-ಕನ್ನಾಡು ಎಂಬ ಮಾತಿನ ಸಂಪೂರ್ಣ ಎಚ್ಚರವಿದ್ದುದರಿಂದಲೆ, ಅವನು ಈಗಿನವರಂತೆ ತನ್ನ ಗ್ರಂಥದಲ್ಲಿ 'ಕನ್ನಡ-ನಾಡು' ಎಂಬೀ ಬಗೆಯ ಪ್ರಯೋಗವನ್ನು ಮಾಡಲಿಲ್ಲ. 'ಕನ್ನಡ-ನಾಡು' ಎಂಬಲ್ಲಿ ಆಡಿದ್ದನ್ನೇ ಆಡುವ ಮರುಳುತನವು ಬಯಲಿಗೆ ಬರುತ್ತಲಿದೆ. ಆಕಳ ಗೋಮೂತ್ರ, ಛಪ್ಪನ್ನೈವತ್ತಾರು, ಸಹ್ಯಾದ್ರಿಪರ್ವತ ಎಂಬೀ ಬಗೆಯ ಮಾತುಗಳೆಲ್ಲವೂ ಇದೇ ತೆರನಾದ ಉದಾಹರಣಗಳಾಗಿವೆ.

ಇಂದಿನವರಂತೆ ನೃಪತುಂಗನು (೮೧೫) 'ಕನ್ನಡ-ನಾಡು' ಎಂಬೀ ಬಗೆಯ ಶಬ್ದಪ್ರಯೋಗವನ್ನು ಮಾಡದೆ ದೇಶವೆಂಬ ಅರ್ಥದಲ್ಲಿ ಕೇವಲ 'ಕನ್ನಡ' ಎಂದು ಮಾತ್ರ ಹೇಳಿದ್ದಾನೆ. ಕನ್ನಡವೆಂದರೆ ನಾಡು ಎಂಬ ಅರಿವು ೧೩ನೆಯ ಶತಮಾನದವರೆಗಂತು ಉಳಿದಿತ್ತೆಂದು ಊಹಿಸಬಹುದಾಗಿದೆ. ಆಂಡಯ್ಯನು (೧೨೩೫) 'ಕನ್ನಡಂ ಎನಿಪ್ಪ ಆ ನಾಡು ಚೆಲ್ವಾಯ್ತು' ಎಂದು ಹೇಳುತ್ತಾನೆ. ಆದರೆ, ೧೭ನೆಯ ಶತಮಾನದ ಹೊತ್ತಿಗೆ ಇದರ ಅರೆಮರೆವಿಗೆ ಆರಂಭವಾಗಿ ಬಿಟ್ಟಿದ್ದಿತು. ಚಿಕ್ಕುಪಾಧ್ಯಾಯನು (೧೬೭೨) 'ಕನ್ನಡದ ನಾಡು ವಿರಾಜಿಪುದೆಂತು ಬಣ್ಣಿಪೆಂ' ಎಂಬಲ್ಲಿ ಷಷ್ಠೀ ವಿಭಕ್ತಿಯನ್ನು ಉಪಯೋಗಿಸಿರುವುದರಿಂದ ಈತನಿಗೂ ಮೂಲಾರ್ಥದ ನೆನಪು ಮಸಕುಮಸಕಾಗಿ ಇನ್ನೂ ಉಳಿದಿದ್ದಿತೇನೊ ಎಂಬ ಸಂಶಯವು ಉಂಟಾಗುವ ಹಾಗಿದೆ. ೧೩ನೆಯ ಶತಮಾನದ ಹಳೆಗನ್ನಡದ 'ಕನ್ನಡಂ ಎನಿಪ್ಪ ನಾಡು' ಎಂಬುದೆ ೧೭ನೆಯ ಶತಮಾನದ ನಡುಗನ್ನಡದಲ್ಲಿ 'ಕನ್ನಡದ ನಾಡು ಎಂಬುದಾಗಿ ಬಳಕೆಯಲ್ಲಿ ಬಂದಿರಬಹುದೆ'? ೧೭ನೆಯ ಶತಮಾನದಲ್ಲಿ ಬಳಕೆಯಲ್ಲಿದ್ದ 'ಕನ್ನಡದ ನಾಡು' ಎಂಬುದೂ ಹೋಗಿ ಇಂದು 'ಕನ್ನಡ-ನಾಡು' ಎಂದು ಹೇಳುವ ರೂಢಿಯು ಬಲವತ್ತರವಾಗಿದ್ದು, ಇದು 'ಕನ್ನಡ'ದ ಮೂಲಾರ್ಥವನ್ನು ಸಂಪೂರ್ಣ ಮರೆತುಬಿಟ್ಟುದರ ಕುರುಹಾಗಿದೆ. ಈ ಬಗೆಯಾಗಿ ಮರೆವು ಹೆಚ್ಚಾಗಿ ನುಡಿ ಎಂಬ ಅರ್ಥವೇ ಪ್ರಮುಖವಾಯಿತು. ದೇಶ ಅರ್ಥದಲ್ಲಿ ಕರ್ಣಾಟ ಎಂಬ ಪದವು ಕನ್ನಡದ ಸ್ಥಾನವನ್ನು ಆಕ್ರಮಿಸಿತು.

ಒಟ್ಟಿನಲ್ಲಿ ಹೇಳಬೇಕಾಗಿದ್ದರೆ, 'ಕನ್ನಡ' ಎಂಬುದಕ್ಕೆ, ಮೊದಲು ದೇಶವೆಂಬ ಅರ್ಥವೆ ಹೊರತು ಭಾಷೆ ಅಥವಾ ಜನಾಂಗ ಎಂದಲ್ಲ. 'ಕನ್ನಡ' ಎಂಬುದಕ್ಕೆ ನುಡಿ ಮತ್ತು ಜನ ಎಂಬ ಅರ್ಥಗಳು ಅಂಟಿಕೊಂಡುದು ಮುಂದೆ ಕಾಲಾಂತರದಲ್ಲಿ; ರೂಢಿಯಿಂದ. 'ಕನ್ನಡ'ವು ಮೂಲದಲ್ಲಿ ದೇಶವಾಚಕ, ಎಂಬ ಮಾತನ್ನು ಸಾಧಾರಣವಾಗಿ ಎಲ್ಲ ವಿದ್ವಾಂಸರು ಒಪ್ಪುವರು. ಆದರೂ ಅದರ ಹುಟ್ಟಿನ ಬಗೆಗೆ ಮಾತ್ರ ಇನ್ನೂ ಒಮ್ಮತವಾಗಿಲ್ಲ. ಎಷ್ಟು ಜನ ವಿಚಾರಿಗಳೊ ಅಷ್ಟು ಅಭಿಪ್ರಾಯಗಳು, ಎಂದು ಹೇಳಿದರೆ ಸ್ವಲ್ಪ ಅತಿಶಯೋಕ್ತಿಯಾಗಬಹುದು. ಕನ್ನಡ ಶಬ್ದವು ಹೇಗೆ ಬಳಕೆಯಲ್ಲಿ ಬಂದಿರಬೇಕೆಂಬ ವಿಚಾರದಲ್ಲಿ ಹಲವು ಬಗೆಯ ಅಭಿಪ್ರಾಯಗಳು ಮುಂದೆ ಬಂದಿವೆ. ಅವೆಲ್ಲವುಗಳನ್ನು ಪರ್ಯಾಲೋಚಿಸಿ ಕೆಳಗೆ ಕಾಣಿಸಿದಂತೆ ವಿಂಗಡಿಸಿ ಹೇಳಬಹುದು.

೧. 'ಕನ್ನಡ'ವೆಂಬುದು ಮೂಲ ಶಬ್ದವಲ್ಲ. 'ಕರ್ಣಾಟ'ದಿಂದ 'ಕನ್ನಡ'ವಾಗಿದೆ. 'ಕರ್ಣಾಟ'ವು ಸಂಸ್ಕೃತ ಶಬ್ದ.

೨. ಕರ್ನಾಡು (ಕರ್+ನಾಡು) ಎಂಬುದು ಮೂಲರೂಪ. ಕರ್ನಾಡು--ಕರ್ನಾಟ (ಕನ್ನಾಡ, ಕನ್ನಡ)-ಮುಂದೆ ಸಂಸ್ಕೃತದಲ್ಲಿ ಕರ್ಣಾಟ (ಕ)ವಾಯಿತು. ಆದರೆ, ಮೂಲಪದವು ಅಚ್ಚಗನ್ನಡ; 'ಕರ್ನಾಡು' ಎಂಬುದು.

೩. 'ಕರ್ನಾಡು' ಎಂಬುದು ಮೂಲ ಶಬ್ದ; ನಿಜ; ಆದರೆ ಅದನ್ನು ಬಿಡಿಸುವುದು 'ಕರ್+ನಾಡು' ಎಂದಲ್ಲ; 'ಕರು+ನಾಡು' ಎಂದು. 'ಕರು' ಎಂದರೆ ಎತ್ತರ ಎಂಬರ್ಥ. ಕರುನಾಡು (ಕರ್ನಾಡು, ಕರ್ಣಾಟ) ಎಂದರೆ ಎತ್ತರದ ಸೀಮೆ; ತಪ್ಪಲುಪ್ರದೇಶ.

೪. ಕರ್ನಾಡು ಮೊದಲಿನ ರೂಪ, ಸರಿ. ಆದರೆ ಅದರ ವಿಗ್ರಹವು ಕರಂ+ನಾಡು; ಎಂದೂ ಕರು+ನಾಡು ಅಥವಾ ಕಡು+ನಾಡು ಎಂದೂ ಆಗಬಹುದು. ಆದರೆ ಕರಂ, ಕಡು, ಕರು ಇವೆಲ್ಲವುಗಳಿಗೂ ವಿಸ್ತೀರ್ಣ, ದೊಡ್ಡ, ಮಹಾ ಎಂದರ್ಥ. ಆದುದರಿಂದ, ಕರ್ಣಾಟ=ಮಹಾರಾಷ್ಟ್ರ.

೫. ಕನ್ನಡ (ಕನ್ನಾಡು) ಎಂಬುದೇ ಮೂಲಶಬ್ದ. ಅವರಲ್ಲಿ ಕಮ್ಮಿತ್ತು-ನಾಡು ಎಂಬ ಎರಡು ಪದಗಳು ಒಂದುಗೂಡಿವೆ. ಸಂಸ್ಕೃತ ಭಾಷೆಯಲ್ಲಿ ಕನ್ನಡವು ಕರ್ಣಾಟವಾಯ್ತು.

೬. ಕನ್ನಡವೆಂಬುದೇ ಮೊದಲಿನದಾದರೂ ಅದರಲ್ಲಿ ಹುದುಗಿಕೊಂಡು ಇರುವ ಪದಗಳ್ನ ಕನ್+ಅಳ್=ಕನ್+ಅಡ್=ಕನ್ನಡ.

೭. ಇದೆಲ್ಲ ಸುಳ್ಳು, ಕರ್ನಾಟಕವು ಮೂಲರೂಪ. ಕರ್+ನಾಟ್+ಅಕ ಎಂಬ ಮೂರು ಪದಗಳಿಂದಾದ ಶಬ್ದವಿದು. 'ಕರ್ನಾಟಕ' ಎಂಬ ಪದವು ಅಚ್ಚಕನ್ನಡ; 'ಕರ್ನಾಟಕ' ಎಂಬ ಕನ್ನಡ ಶಬ್ದವೆ ಸಂಸ್ಕೃತದಲ್ಲಿ ಕರ್ಣಾಟಕ ಎಂದು ಆಯಿತು. ಬಳಿಕ ಕರ್ಣಾಟ(ಕ)ದ ತದ್ಭವವಾಗಿ ಕನ್ನಡವೆಂದಾಗಿರಬೇಕು.

ಇಂತಿವು ಕನ್ನಡದ ಹುಟ್ಟನ್ನು ಹೇಳಲು ಯತ್ನಿಸುವ ಏಳು ಬಣಗಳು. ಇವುಗಳ ಯುಕ್ತಾಯುಕ್ತತೆಯನ್ನು ಅರೆದು, ಒರೆದು ನೋಡುವ ಮೊದಲು ಒಂದು ಮಾತನ್ನು ಅರಿಕೆಮಾಡಿಕೊಳ್ಳುವುದು ಅವಶ್ಯವಾಗಿದೆ. ಪರಿಶ್ರಮ ಬಟ್ಟು ಕನ್ನಡದ ಹುಟ್ಟನ್ನು ಕಂಡು ಹಿಡಿಯಲು ಹವಣಿಸಿ, ಈ ವಿಷಯದಲ್ಲಿ ಎಷ್ಟೊ ಹೊಸ ವಿಚಾರಗಳನ್ನು ಬೆಳಕಿಗೆ ತಂದ ಮೇಲಣ ಎಲ್ಲ ಹಿರಿಯ ವಿದ್ವಾಂಸರೂ ಸಂಶೋಧಕರೂ ನನಗೆ ವಂದ್ಯರಾಗಿದ್ದಾರೆ. ಅವರ ದನಿಯಲ್ಲಿ ದನಿಗೂಡಿಸಿ ನುಡಿವ ಸಂದರ್ಭಗಳು ದೊರೆತಾಗಲೆಲ್ಲ ನನಗಾಗುವ ಹಿಗ್ಗು ಹೇಳಲಾಸಲ್ಲ; ಅವರಿಂದ ನನ್ನ ಅಭಿಪ್ರಾಯವು ಬೇರೆಯೆಂದು ಹೇಳುವಾಗ-ಸತ್ಯವೆಂದು ನನಗೆ ಹೊಳೆದ, ತಿಳಿದ ಸಂಗತಿಗಳು ಹಾಗೆ ಮಾಡಲು ಒತ್ತಾಯಪಡಿಸುತ್ತಿರುವಾಗಲೂ ಮನಸಿಗೆ ಸೊಗಸದು. ಆದರೂ ಇದು ಅನಿವಾರ್ಯ ಕಾರ್ಯ. ಶಾಂತವಾದ ವಿಚಾರ ವಿಮರ್ಶೆಗಳ ತರುವಾಯ ಸರಿಯೆಂದು ಎನಿಸಿದುದನ್ನು ಹಿರಿಯರ ಗೌರವವನ್ನು ಕಾಯುವುದಕ್ಕಾಗಿ ಎಂಬ ಗ್ರಹಿಕೆಯಿಂದ ಆಡದೆ ಇದ್ದರೆ, ಅದರಿಂದ ಹಿರಿಯರಿಗೆ, ಹಿರಿಯ ಸತ್ಯಕ್ಕೆ ಅನ್ಯಾಯ ಮಾಡಿದಂತೆ ಆಗುವುದು; ಹೊಸ ಸಂಗತಿಗಳು ಮುಂದೆ ಬಂದರೆ ಬಲ್ಲಿದರಾದ ಹಿರಿಯರಿಗೆ ಸಂತೋಷವೇ ಅಲ್ಲದೆ ಅಸಮಾಧಾನಕ್ಕೆ ಕಾರಣವಿಲ್ಲ ಎಂಬ ನಂಬುಗೆಯಿಂದ ಈ ಚರ್ಚೆಯಲ್ಲಿ ಬಾಯಿಹಾಕುವ ಸಾಹಸ ಮಾಡಿದ್ದೇನೆ.

ಈ ಮೊದಲನೆಯ ಪಂಥದಲ್ಲಿಯೆ ಮತ್ತೆ ಕೆಲವು ಒಳಪಂಗಡಗಳಿವೆ. ಇವರಲ್ಲಿ ಒಂದು ಪಕ್ಷದವರು ಪ್ರತಿಪಾದಿಸುವುದೇನೆಂದರೆ : ಈ ಭಾಷೆಗೆ ಮೂಲವು ಸಂಸ್ಕೃತ. 'ಕನ್ನಡ' ಎಂಬುದು ತದ್ಭವವಾಗಿರುವುದರಿಂದ, ಇದಕ್ಕೆ ಮೂಲವಾದ 'ಕರ್ಣಾಟ' ಶಬ್ದವು ಸಂಸ್ಕೃತವೇ ಆಗಿರಬೇಕು.[೫] ಈ ಪಕ್ಷದ ಮೂಲ ಗ್ರಹಿಕೆಯೆ ತಪ್ಪಿದೆ. ಕನ್ನಡವು ದ್ರಾವಿಡಭಾಷಾ ವರ್ಗಕ್ಕೆ ಸಂಬಂಧಪಟ್ಟುದೆಂದು, ಈಗ ತುಲನಾತ್ಮಕ ಭಾಷಾಶಾಸ್ತ್ರಜ್ಞರೆಲ್ಲರೂ ಬಹುತರವಾಗಿ ಒಪ್ಪಿಕೊಂಡಿದ್ದಾರೆ. ಆದುದರಿಂದ, ಕನ್ನಡಕ್ಕೆ ಸಂಸ್ಕೃತವು ಮೂಲವೆಂಬ ಗ್ರಹಿಕೆಯೇ ನಿರಾಧಾರವಾದುದು. ಆದಕಾರಣ 'ಕರ್ಣಾಟ'ದ ತದ್ಭವವಾಗಿ ಕನ್ನಡವು ಹುಟ್ಟಿತೆಂಬ ಊಹೆಯು ಬಲವಿಲ್ಲದ್ದಾಯಿತು. (ಕ್ರಿ. ಶ. ೧೨೯೬), ಭಟ್ಟಾಕಲಂಕನೂ (೧೬೦೦) ಕರ್ಣಾಟವು ಮೂಲವೆಂದು ತಿಳಿದು ಅದರ ತದ್ಭವವೇ ಕನ್ನಡವಾಯಿತೆಂದು ಹೇಳಿದ್ದುದು ನಿಜ.[೬] ಆದರೆ, ತುಲನಾತ್ಮಕ ಭಾಷಾಶಾಸ್ತ್ರವು ಈಗಿನಷ್ಟು ಆ ಕಾಲದಲ್ಲಿ ಬೆಳವಣಿಗೆಯನ್ನು ಹೊಂದಿರಲಿಲ್ಲ. ಕೇಶಿರಾಜನ ಶಬ್ದಮಣಿದರ್ಪಣವಾಗಲಿ, ಭಟ್ಟಾಕಲಂಕನ ಶಬ್ದಾನುಶಾಸನವಾಗಲಿ ಸಂಸ್ಕೃತದ ಮಾದರಿಯಲ್ಲಿ ಬರೆಯಲ್ಪಟ್ಟಿದ್ದು, ಅವು ತಮಿಳು, ತೆಲುಗು, ತುಳು ಮೊದಲಾದ ಭಾಷೆಗಳೊಡನೆ ತೂಗಿ, ಅಳೆದು ರಚಿಸಲ್ಪಟ್ಟ ಕನ್ನಡ ವ್ಯಾಕರಣ ಗ್ರಂಥಗಳಲ್ಲ. ಆದುದರಿಂದ, ಕೇಶಿರಾಜ, ಭಟ್ಟಾಕಲಂಕಾದಿಗಳ ಮಾತನ್ನು ಸತ್ಯಸಿದ್ಧಾಂತವೆಂದು ತಲೆಯ ಮೇಲಿಟ್ಟುಕೊಳ್ಳುವ ಮೊದಲು, ಈ ವಿಷಯವನ್ನು ಆಧುನಿಕ ತುಲನಾತ್ಮಕ ವಿಚಾರಪದ್ಧತಿಯಿಂದಲೂ ಚೆನ್ನಾಗಿ ವಿಮರ್ಶಿಸಿ ನೋಡುವುದು ಕರ್ತವ್ಯವಾಗಿದೆ.

ಕನ್ನಡವು ಕರ್ಣಾಟದ ತದ್ಭವವೆಂದು ನಿರ್ಧರಿಸಲು ಒಂದು ದೊಡ್ಡ ಅನುಕೂಲತೆಯಿದೆ. ಗ್ರಂಥಸ್ಥ ಪ್ರಮಾಣಗಳನ್ನು ನೋಡಿದರೆ ಸಂಸ್ಕೃತ ಸಾಹಿತ್ಯವೆ ಅತಿ ಪ್ರಾಚೀನಕಾಲದಿಂದಲೂ ದೊರೆಯುತ್ತಿರುವುದರಿಂದ 'ಕರ್ಣಾಟ' ವೆಂಬುದೇ ಕನ್ನಡಕ್ಕಿಂತ ಮೊದಲಿನದೆಂದು ಹೇಳಬೇಕಾಗುತ್ತದೆ. ಕ್ರಿ. ಶ. ಮೊದಲು ೩ನೆಯ ಶತಮಾನದ ಸುಮಾರಿಗೆ ಈಗಿನ ರೂಪದಲ್ಲಿ ರಚಿಸಲ್ಪಟ್ಟಿತೆಂದು ಹೇಳುವ ಮಹಾಭಾರತದಲ್ಲಿ ಕರ್ಣಾಟ(ಕ) ಎಂಬ ಪದವು ಸಿಕ್ಕುತ್ತದೆಂಬುದನ್ನು ಈ ಮೊದಲೆ ಸೂಚಿಸಿದ್ದಾಗಿದೆ (ಪುಟ ೭). ಆದರೆ 'ಕನ್ನಡ'ವೆಂಬುದು ದೊರೆಯುವುದು ಕ್ರಿ.ಶ. ೯ನೆಯ ಶತಮಾನದ ಕವಿರಾಜಮಾರ್ಗದಲ್ಲಿ!

ಇದು ನಿಜ. ಆದರೆ, ಕನ್ನಡ ಮತ್ತು ಸಂಸ್ಕೃತಗಳ ವಯಸ್ಸಿನ ಹಿರಿ-ಕಿರಿತನವನ್ನು ಕೇವಲ ಉಪಲಬ್ಧ ಗ್ರಂಥಗಳ ಆಧಾರದಿಂದಲೇ ನಿರ್ಣಯಿಸಲಿಕ್ಕೆ ಆಗುವುದಿಲ್ಲ. ಸಂಸ್ಕೃತದವರು ಸಾಹಿತ್ಯದೃಷ್ಟಿಯಿಂದ ಹಿರಿಯರಾಗಿದ್ದರೂ ಹಿಂದೂದೇಶದಲ್ಲಿ ವಯೋಮಾನದಿಂದ ಕನ್ನಡದ ಮೊದಲಿಗರು ಹಿರಿಯರು ಆಗಿದ್ದಾರೆ; ದ್ರಾವಿಡರು ಆರ್ಯ ಪೂರ್ವಜನಾಂಗ, ಎಂಬುದು ಈಗ ಸಾಮಾನ್ಯವಾಗಿ ಸರ್ವಮಾನ್ಯವಾದ ಸಂಗತಿಯಾಗಿದೆ.

ಆರ್ಯರ ಪ್ರಾಚೀನತಮಗ್ರಂಥಗಳೆನಿಸಿದ ವೇದ, ಉಪನಿಷತ್ತುಗಳಲ್ಲಿರುವ ಎಷ್ಟೊ ಶಬ್ದಗಳು ದ್ರಾವಿಡ ಭಾಷಾವರ್ಗದುವೆಂದು ಸಂಶೋಧಕರು ನಿರ್ಧರಿಸಿದ್ದಾರೆ.[೭] ಮೂಲ ದ್ರಾವಿಡದ ಶೆನ್ (ಶ್ಚಂದ್ರ) ಎಂಬುದು ಚೆನ್ (ಚಂದ್ರ) ಎಂದು ಉಚ್ಚಾರದಲ್ಲಿ ಬದಲಾವಣೆಯಾದ ಋಗ್ವೇದಕಾಲದಲ್ಲಿಯೆ ಕನ್ನಡ ನುಡಿಯು ತಲೆದೋರಲಾರಂಭಿಸಿತು. ಛಾಂದೋಗ್ಯ (೧.೧೦.೧)ದಲ್ಲಿ ಬಂದ 'ಮಟಚಿ' ಎಂಬ ಶಬ್ದವು ಕನ್ನಡದಲ್ಲಿ ಈಗಲೂ ಬಳಕೆಯಲ್ಲಿರುವ ಮಿಡಿಚಿಯೆಂಬ ಶಬ್ದವೆ ಎಂದು ಡಾ. ಜಾಕೋಬಿ, ಡಾ. ಪಾಠಕ ಮೊದಲಾದವರು ಗೊತ್ತುಪಡಿಸಿದ್ದಾರೆ. ಡಾ. ದೇವದತ್ತ ಭಂಡಾರಕರರು ಇದನ್ನು ಕುರಿತು ಹೇಳುವುದೇನೆಂದರೆ:

> Matachi is a Sanskritised from of the well-known *Canarese* word 'midiche which is explained by Kittel's Dictionary as 'a grass-hopper, a locust' and which is used in this sense to this day in the Dharwar District. Scholars are unanimous on the point that Chhandogya Upanishad is one of the earliest of the Upanishads. Nobody doubts that this Upanishad was put together in the North of India, 'specially in the Punjab, and that Sanskrit language in which it is composed represents the current speech of the day. And yet we find in it a term which is a *genuinely Dravidian* word.[೮]

ಅಲ್ಲದೆ ಇನ್ನೂ ಒಂದು ಮಾತು ವಿಚಾರಣೀಯವಾಗಿದೆ. ಕನ್ನಡವನ್ನು ಆಡುವ ಜನಾಂಗವು ಹಿಂದೂದೇಶಕ್ಕೆ ಹೊಸತಾಗಿ ಕ್ರಿ. ಶ. ಕ್ಕೆ ಮೊದಲು ೩-೪ನೆಯ ಶತಮಾನದ ಸುಮಾರಿಗೆ (ಮಾರ್ಪಟ್ಟ-ಮಹಾಭಾರತದ ರಚನಾ ಕಾಲದಲ್ಲಿ) ಬಂದು ನೆಲೆಸಿತೆಂದು ಇತಿಹಾಸವು ಹೇಳುವುದಿಲ್ಲ. ಒಂದರಗಳಿಗೆ ಆಗ ತಾನೆ ಈ ದೇಶಕ್ಕೆ ಬಂದ ಜನಾಂಗವಿದೆಂದು ಗ್ರಹಿಸಿದರೂ ಈ ಜನಾಂಗಕ್ಕೆ ತನ್ನ ಭಾಷೆಯೊಳಗಿನದೆ ಆದ ಯಾವುದಾದರೂ ಒಂದು ಹೆಸರು ಇರಬೇಕಲ್ಲವೆ? ಶಕ, ಯವನ, ಪಾರಸಿಕ ಮೊದಲಾದ ಹೆಸರುಗಳಂತೆ ಈ ಸಂಸ್ಕೃತೇತರ ಭಾಷೆಯ ಜನಾಂಗದ ಸ್ವಭಾಷೆಯೊಳಗಿನ ಮೂಲ ಹೆಸರಾವುದು? ಈ ಜನಾಂಗಕ್ಕೆ, ಇವರ ನಾಡಿಗೆ ಇರಬಹುದಾದ ಹೆಸರು ಈ ವರ್ಗದವರ ಭಾಷೆಗೆ ಸಂಬಂಧಪಟ್ಟುದೇ ಇರುವುದು ಹೆಚ್ಚು ಸಂಭವನೀಯವೂ ಸಮಂಜಸವೂ ಆಗಿಲ್ಲವೆ?

ಮಹಾಭಾರತವು ಈಗಿನ ರೂಪದಲ್ಲಿ ಕ್ರಿ.ಶ.ಕ್ಕೆ ಮೊದಲು ೩ನೆಯ ಶತಮಾನದಲ್ಲಿ ಮಾರ್ಪಟ್ಟಿತೆಂದೂ ಅದಕ್ಕೂ ಮೊದಲು ಅದು ಇಷ್ಟು ದೊಡ್ಡದಾಗಿರಲಿಲ್ಲವೆಂದೂ ಹಲವರು ಊಹಿಸಿದ್ದಾರೆ.[೯] ಈಗಿನ ಮಹಾಭಾರತ

ದಲ್ಲಿ ಕರ್ಣಾಟದ ಹೆಸರು ಇರುವುದರಿಂದ ಈನಾಡು ಕ್ರಿ.ಶ. ಕ್ಕೆ ಮೊದಲು ೩೦೦ ವರುಷಗಳಿಂದಲೂ ತಲೆಯೆತ್ತಿ ಬಾಳುತ್ತಿದ್ದಿತೆಂದು ನಿಶ್ಚಿತವಾಗಿ ಅರಿತುಕೊಳ್ಳಬಹುದಾಗಿದೆ; ಅದಕ್ಕೂ ಮೊದಲಿನ ಭಾರತದ ಪ್ರತಿಯಲ್ಲಿ ಕರ್ಣಾಟದ ಹೆಸರು ಇರುವ ಸಂಭವವು ಹೆಚ್ಚಾಗಿದೆ, ಎಂಬ ಈ ವಿಚಾರವು ಹಿಂದೊಮ್ಮೆ ಬಂದಿದೆ. ಆದುದರಿಂದ, ಭಾರತದ ಆಗಿನ ಘಟನೆಗಳಲ್ಲಿ ಕನ್ನಡರೂ ಅಂಶಭಾಗಿಗಳಾಗಿರಲಿಕ್ಕೆ ಸಾಕು. ಅದೇನೆ ಇರಲಿ; ಕ್ರಿ.ಶ. ಕ್ಕೆ ಮೊದಲು ೩೦೦ರಲ್ಲಿ ಸಿದ್ಧವಾದ ಮಹಾಭಾರತದ ಪ್ರತಿಯಲ್ಲಿ ಕರ್ಣಾಟದ ಉಲ್ಲೇಖವಿರುವುದರಿಂದ ಕನಿಷ್ಠ ಆ ಕಾಲದಲ್ಲಂತೂ ಈ ನಾಡು ಇದ್ದೇ ಇರಬೇಕಷ್ಟೆ? ನಾಡು ಇದ್ದಬಳಿಕ ನಡೆ (ಜನ)ಯಿರಬೇಕು; ಆದಕಾರಣ ನುಡಿಯಿರಲೇಬೇಕು. ಕನ್ನಡ ಸಾಹಿತ್ಯವು ಕ್ರಿ.ಶ.೪-೫ನೆಯ ಶತಮಾನದಿಂದ ಮುಂದೆ ದೊರೆಯುತ್ತಲಿದ್ದರೂ ಕ್ರಿ.ಶ. ಮೊದಲು ೩೦೦ ವರುಷಗಳಿಂದ ನಾಡು ಕಟ್ಟಿಕೊಂಡು ನೆಲೆಸಿದ್ದ (ಏಕೆಂದರೆ ಮಹಾಭಾರತದಲ್ಲಿ ಉಳಿದ ಹಲವು ನಾಡುಗಳಂತೆ ಕರ್ಣಾಟದ ಉಲ್ಲೇಖವೂ ಇರುವುದರಿಂದ) ಈ ಜನಗಳ ದೇಶಕ್ಕೂ ಭಾಷೆಗೂ ಅವರದೇ ಆದ ಒಂದು ಹೆಸರು ಇದ್ದಿಲ್ಲವೆಂದು ಊಹಿಸುವುದೆಂದರೆ ಸ್ವಲ್ಪ ಅಸಮಂಜಸವಾಗುವ ಹಾಗಿದೆ.

ಹಿಂದೂದೇಶದಲ್ಲಿ ಆರ್ಯರ ಮೊದಲು ಬೇರೂರಿದ್ದ ಜನಾಂಗಗಳು ಎರಡು. ೧. ಕೋಲರಕುಲ (Austra Asiatic) ಮತ್ತು ೨. ದ್ರಾವಿಡ ಕುಲ (ಇವರೆ ಹಾಲುಮತದವರು). ಇವರಲ್ಲಿ ಕೋಲರ ನಂತರ ದ್ರಾವಿಡರು ಬಂದರೆಂದು ಬಲ್ಲಿದರ ಅಭಿಪ್ರಾಯ. ಕೋಲರ ಪಂಗಡಗಳು ನೆಲಸಿದ ನಾಡುಗಳು ಮುಖ್ಯವಾಗಿ ಹಿಂದೂದೇಶದ ಪೂರ್ವದಿಕ್ಕಿಗಿವೆ. ದ್ರಾವಿಡವರ್ಗದವರ ದೇಶಗಳು ವಿಂಧ್ಯದಿಂದ ದಕ್ಷಿಣಕ್ಕೆ ಉಳಿದಿವೆ.

ಪ್ರೊ. ಲೆವಿ ಎಂಬ ಸಂಶೋಧಕರ ಅಭಿಪ್ರಾಯದ ಮೇರೆಗೆ ಹಿಂದೂದೇಶದ ಪೂರ್ವದಿಕ್ಕಿನ ಹಲವು ದೇಶಗಳ ಹೆಸರುಗಳು ಕೋಲರ ಭಾಷಾವರ್ಗಕ್ಕೆ ಸೇರಿದವುಗಳೆ ಆಗಿವೆ. ತಮ್ಮ ಒಂದು ಮನನೀಯ ಪ್ರಬಂಧದಲ್ಲಿ ಅವರು ಇದನ್ನು ಸಿದ್ಧಪಡಿಸಿದ್ದಾರೆ.[೧೦] ಕೋಸಲ-ತೋಸಲ, ಅಂಗ-ವಂಗ, ಕಲಿಂಗ-ತ್ರಿಲಿಂಗ, ಉತ್ಕಲ-ಮೇಕಲ, ಪುಲಿಂದ-ಕುಲಿಂದ ಇವುಗಳು-ಸಂಸ್ಕೃತ ಭಾಷೆಯ ಪದಗಳಲ್ಲ. ಕೋಲರ ಪಂಗಡದವರು ನೆಲೆಸಿದ್ದ ಆ ನಾಡಿಗೆ ಆ ಕೋಲರ ವರ್ಗದ ಭಾಷೆಯೊಳಗಿಂದಲೆ ಬಂದ ಭಾಷೆಯ ಹೆಸರುಗಳೆಂಬ ಮಾತನ್ನು ಅನೇಕಾನೇಕ ಪ್ರಮಾಣಗಳನ್ನು ಕೊಟ್ಟು ಮನವರಿಕೆಯಾಗುವಂತೆ ವಿವರಿಸಿದ್ದಾರೆ. ಕೋಲರ ಪಂಗಡದ ನೆಲೆವೀಡು ಗಳಿಗೆ ಅವರ ಭಾಷೆಯೊಳಗಿಂದಲೆ ಹೆಸರು ಬಂದಿರುವಂತೆ ದ್ರಾವಿಡವರ್ಗದ ಜನಾಂಗಗಳು ಬೇರೂರಿ ಕೊಂಡಿರುವ ನಾಡುಗಳಿಗೂ ಅವರ ಭಾಷೆಯೊಳಗಿನ ಹೆಸರುಗಳು ಬಂದಿವೆಯೆಂದು ಊಹಿಸಲು ತುಂಬ ಇಂಬಿದೆ. ಆದುದರಿಂದಲೆ, ಆರ್ಯಾವರ್ತದ ಹೊರಗಿನ-ದ್ರಾವಿಡ ದೇಶದೊಳಗಿನ ಲಾಟ, ಮರಹಟ್ಟ, ಕನ್ನಡ, ಆಂಧ್ರ (ತೆಲುಗು ಆಂಧ್ರದಿಂದ ಬೇರೆ), ತಮಿಳು, ಮಲೆಯಾಳ ಮತ್ತು ಕೊಂಕಣ ಈ ನಾಡುಗಳ ಹೆಸರುಗಳು ಸಂಸ್ಕೃತದಿಂದ ಬಂದಿರದೆ ದ್ರಾವಿಡ ಭಾಷಾವರ್ಗಕ್ಕೆ ಸಂಬಂಧಪಟ್ಟವುಗಳೇ ಆಗಿರಬೇಕೆಂದು ಸಹಜವಾಗಿ ಊಹಿಸಬಹುದಾಗಿದೆ. ಈ ನಾಡುಗಳ ಹೆಸರುಗಳನ್ನು ವ್ಯುತ್ಪತ್ತಿಶಾಸ್ತ್ರದ ದೃಷ್ಟಿಯಿಂದ ಪರೀಕ್ಷಿಸಿ ನೋಡಿದರೆ ಅವುಗಳು ಸಂಸ್ಕೃತದವು ಅಲ್ಲವೆಂದೇ ಸಿದ್ಧವಾಗುತ್ತಲಿದೆ. ಏಕೆಂದರೆ, ಸಂಸ್ಕೃತಭಾಷೆಯಿಂದ ಈ ದೇಶ-ನಾಮಗಳಿಗೆ ಸಮರ್ಪಕವಾಗಿ ಅರ್ಥವೆ ಆಗುವುದಿಲ್ಲ. ಅಲ್ಲದೆ, ಈ ನಾಡುಗಳ ಮೂಲನಿವಾಸಿಗಳು, ಅವರ ಸಂಸ್ಕೃತಿಗಳ ಐತಿಹ್ಯವು ಇದರ ಬೆಂಬಲಕ್ಕಿದೆ.

ಕನ್ನಡ (ಕನ್ನಾಡು) ಶಬ್ದಕ್ಕಿರುವ ಅರ್ಥವು ಅಸಂಬದ್ಧವಾಗಿಲ್ಲ. ಇದು ಒಂದು ದೇಶವೆಂಬ ಅರ್ಥವನ್ನು ಹೇಳುವುದು. ಆದರೆ, ಸಂಸ್ಕೃತವೆಂದು ಹೇಳುವ 'ಕರ್ಣಾಟ(ಕ)'ವೆಂಬ ಶಬ್ದಕ್ಕೆ ಹಿಂದಿನವರು ಮಾಡಿದ ಅರ್ಥಗಳು ಎಷ್ಟು ಅಸಂಬದ್ಧವಾದುವುಗಳೂ ಅಸಮಂಜಸವೆನಿಸುವಂತಹವುಗಳೂ ಆಗಿವೆಯೆಂಬುದನ್ನು ಕೆಳಗಿನ ಅವತರಣಿಕೆಗಳಿಂದ ಅರಿತುಕೊಳ್ಳಬಹುದು.

i. "ಕರ್ಣೇಷು ಅಟತಿ, ಪ್ರಭೂತ ಯಶಸ್ವಿನ ಏತದ್ದೇಶಸ್ಥ ರಾಜ್ಞಃ
ಗುಣಾದಿ ಕೀರ್ತನೇನ ಸರ್ವೇಷಾಂ ಕರ್ಣೇಷು ಭ್ರಮತೀತಿ-
ಕರ್ಣ+ಅಟ್+ಅಚ್ - ಸ್ವನಾಮ ಖ್ಯಾತ ದೇಶವಿಶೇಷಃ
(ಇತಿ ಶಬ್ದರತ್ನಾವಲೀ)

ii. 'ಕೇಶವವರ್ಣಿ (೧೩೫೯) ಎಂಬ ಜೈನ ಪಂಡಿತರು ಭೇದನಾರ್ಥಕ
ವಾದ ಕರ್ಣ ಧಾತುವಿನಿಂದ ಹುಟ್ಟಿತೆಂದು ಭಾವಿಸಿ ದಿವ್ಯಭಾಷೆ
(?ಸಂಸ್ಕೃತಭಾಷೆ) ಯಿಂದ ಬೇರೆಯಾಗಿ ವ್ಯವಹಾರದಲ್ಲಿರುವ
ಭಾಷೆಯಾದ ಕಾರಣ ಇದಕ್ಕೆ 'ಕರ್ಣಾಟ' ಎಂಬ ಹೆಸರು
ಬಂದಿತೆಂದು ಹೇಳುತ್ತಾನೆ.'[೧೧]

iii. 'ವಿಶ್ವಗುಣಾದರ್ಶ ಚಂಪೂ' ಎಂಬ ಸಂಸ್ಕೃತಗ್ರಂಥವನ್ನು
ಬರೆದ ವೆಂಕಟಾಧ್ವರಿಯು (ಸು. ೧೭೦೦?) ಮೊದಲು
ಹೇಳಿದ 'ಶಬ್ದರತ್ನಾವಲಿ'ಯೊಳಗಿನ ಅಭಿಪ್ರಾಯದಂತೆಯೆ
ತಾನೂ ಅರ್ಥಮಾಡಿದ್ದಾನೆ.
**ಕರ್ಣಾಟ ದೇಶೋಯಃ ಪೂರ್ವಂ ಕರ್ಣದೇಶಮಭೂಯತ್।
ಸ ಏಷ ಸಾಂಪ್ರತಂ ಪಶ್ಯ ಚಕ್ಷುಷೋ ಭೂಷಣಾಯತೇ ॥ ೨೨೩**
'ಈ ನಾಡಿನ ಹೆಸರು ಕರ್ಣಗಳಲ್ಲಿ ಅಟನ ಮಾಡುವುದರಿಂದ
(ಎಂದರೆ ಎಲ್ಲ ಕಿವಿಗಳಲ್ಲಿ ಬಿದ್ದು ಪ್ರಸಿದ್ಧವಾದುದರಿಂದ) ಇದಕ್ಕೆ
ಕರ್ಣಾಟವೆಂಬ ಹೆಸರು ಉಂಟಾಯಿತೆಂದು ಹೇಳುತ್ತಾನೆ.'

ಎಂದು ವಿವರಿಸಿ ಕೊನೆಗೆ ಶ್ರೀಮಾನ್ ಆರ್. ನರಸಿಂಹಾಚಾರ್ಯರು "ಈ ಎರಡು ವ್ಯುತ್ಪತ್ತಿಗಳೂ ಕವಿಕಲ್ಪನೆ" ಎಂಬುದಾಗಿ ಅಪ್ಪಣೆ ಕೊಡಿಸಿದ್ದಾರೆ.[೧೨] 'ಕರ್ಣಾಟ' ಎಂದು ಕರ್ಣಗಳಲ್ಲಿ ಅಟನ ಮಾಡಲಾರಂಭಿಸಿದ ಬಳಿಕ ಎಂದರೆ ಸುಪ್ರಸಿದ್ಧವಾದ ಮೇಲೆ, ಹೆಸರು ಬಂದಿತೆಂದು ಹೇಳುವುದಾದರೆ ಈ ನಾಡು ಸುಪ್ರಸಿದ್ಧವಾಗುವ ಮೊದಲು ಇದ್ದ ಹೆಸರಾವುದು? ಇದಕ್ಕಿಂತಲೂ ಕೇಶವವರ್ಣಿಯ ನಿರುಕ್ತವೆ ಬೇಕು; ಅವನು ಒಂದು ಧಾತುವಿನಿಂದ ಈ ಶಬ್ದವು ಹುಟ್ಟಿತೆಂದು ಹೇಳಲು ಹವಣಿಸಿದ್ದಾನೆ. ಆದರೆ, ನಾಡುಗಳಿಗೆ ಅತಿ ಪುರಾತನಕಾಲದಿಂದಲೂ ಹೆಸರುಗಳು ಬರುವ ಬಗೆಯನ್ನು ನಿರೀಕ್ಷಿಸಿದರೆ ಈ ವ್ಯುತ್ಪತ್ತಿಗಳು ಅಸಮರ್ಪಕವೆಂದು ಹೇಳದೆ ಗತಿಯಿಲ್ಲ.

ಮಹಾಭಾರತಾದಿ ಪುರಾಣಗ್ರಂಥಗಳನ್ನು ತುಂಬ ವ್ಯಾಸಂಗಮಾಡಿದ ಒಬ್ಬ ಪಂಡಿತರು ಒಮ್ಮೆ ಇದೇ ಬಗೆಯ ಇನ್ನೊಂದು ಊಹೆಯನ್ನು ಉಸುರಿದರು:

iv ಕರ್ಣನ ಅಟನದ ಪ್ರದೇಶವಿದು. ಆದುದರಿಂದ ಇದಕ್ಕೆ ಕರ್ಣಾಟ
ಎಂಬ ಹೆಸರು. ಕರ್ಣನು ವನವಿಹಾರಕ್ಕಾಗಿ, ಆಟ-ಬೇಟೆಗಳಿಗಾಗಿ
ಈ ಕಾಡಿಗೆ (?ನಾಡಿಗೆ) ಬರುತ್ತಿದ್ದನಂತೆ'.

ಬಹಳ ಸೊಗಸಾದ ಕಲ್ಪನೆ! ಈ ಸಂದರ್ಭದಲ್ಲಿ ಶ್ರೀರಂಗರ ಒಂದು ನಗೆಬರೆಹವು ನೆನಪಿಗೆ ಬರುತ್ತದೆ. ಕಪಿಗಳ ನಾಡು; ಆದುದರಿಂದ ಇದು ಕರ್ಣಾಟ; 'ಹನುಮನುದಿಸಿದ ನಾಡು' ಎಂಬ ಸುಪ್ರಸಿದ್ಧವಾದ ಹಾಡಿನ ಮಾತೆ ಇದಕ್ಕೆ ಆಧಾರ, ಎಂದು ಮುಂತಾಗಿ ಅವರು 'ಮಂಗನ ಮಲ್ಲಿನಾಥ ತನದ' ರೀತಿಯಲ್ಲಿ ಬರೆದುದುಂಟು. 'ಕರ್ಣನ (ಅಟನದ) ನಾಡು'ಎಂಬುದು 'ಕಪಿಗಳ ನಾಡು' ಎನ್ನುವ ಸಾಲಿಗೆ ನಿಲ್ಲುವಂತಹ ವ್ಯುತ್ಪತ್ತಿಯೆ ಆಗಿರುವುದರಿಂದ ಅದರ ಹೆಚ್ಚಿನ ವಿಚಾರವಂತೂ ಇರಲಿ, ಉಲ್ಲೇಖಿಸಿದುದು ಕೂಡ ಸರಿಯಾಗಿಲ್ಲವೆಂದು ಆಕ್ಷೇಪಿಸಬಹುದಾಗಿದೆ.

> ಸ್ಕಂಧಪುರಾಣದಲ್ಲಿ ಇನ್ನೊಂದು ಬಗೆಯಾದ ವಿಚಾರವು ಬಂದಿದ್ದು ಅದು ಮೇಲು ತೋರಿಕೆಯಲ್ಲಿ ಇದೀಗ ಉಲ್ಲೇಖಿಸಿದ ನಾಲ್ಕನೆಯ ಜಾತಿ ಮಾತೆಂದು ಎನಿಸುವಂತಿದೆ. ಸ್ಕಂಧಪುರಾಣಕಾರನ ಅಭಿಪ್ರಾಯದಂತೆ ಈ ನಾಡಿಗೆ 'ಕರ್ಣಾಟ' ವೆಂದು ಹೆಸರು ಬರಲು ಕಾರಣವೇನೆಂದರೆ: ಈ ನಾಡಿನಲ್ಲಿ ಒಬ್ಬ ಬಲಿಷ್ಠನಾದ ರಾಕ್ಷಸನಿದ್ದು ಆತನು ಬ್ರಾಹ್ಮಣರಿಗೆ ಮೇಲಿಂದ ಮೇಲೆ ಪೀಡಿಸುತ್ತಿದ್ದನು. ಆತನಿಗೆ ಹೆಣ್ಣಿನ ಹುಚ್ಚು ಬಹಳ. ಬ್ರಾಹ್ಮಣರು ಆತನ ಕಾಟವನ್ನು ತಾಳಲಾರದೆ ಶ್ರೀದೇವಿಗೆ ಮೊರೆಹೊಕ್ಕರು; ದೇವಿಯು ಭಕ್ತರ ಪ್ರಾರ್ಥನೆಗಳಿಗೆ ಪ್ರಸನ್ನಳಾಗಿ ಆ ರಕ್ಕಸನನ್ನು ಶಿಕ್ಷಿಸುವುದಕ್ಕಾಗಿ ಆತನನ್ನು ಬೆನ್ನಟ್ಟಿದಳು. ಅವನು ಧರ್ಮಾರಣ್ಯಕ್ಕೆ ಓಡಿಹೋಗಿ ಅಡಗಿದನು.

ಎಂದು ಮುಂತಾಗಿ ಇದೊಂದು ದೊಡ್ಡ ಕತೆಯ ಇದೆ.[೧೩]

ಪುರಾಣಗಳು ಹುರುಳಿಲ್ಲದ ಹರಟೆಗಳಲ್ಲದಿದ್ದರೂ ಆದ ಸಂಗತಿಗಳನ್ನು ಇದ್ದಕಿದ್ದಂತೆಯೆ ವರ್ಣಿಸುವ ಐತಿಹಾಸಿಕ ಗ್ರಂಥಗಳಂತು ಅಲ್ಲವೆ ಅಲ್ಲ. ಪುರಾಣಗಳಲ್ಲಿ ಐತಿಹಾಸಿಕ ಸತ್ಯಾಂಶಗಳು ಅನೇಕ ರೀತಿಯ ಸಾಂಕೇತಿಕ ಪರಿಭಾಷೆಯಲ್ಲಿ ಹುದುಗಿಕೊಂಡಿವೆ. ಆದುದರಿಂದ, ಪುರಾಣಗಳು ಇಂದಿನ ಅರ್ಥದಲ್ಲಿ ಇತಿಹಾಸಗಳಲ್ಲ; ಅಥವಾ ಕೆಲವರು ಒಮ್ಮೆಲೆ ಆಡಿಬಿಡುವಂತೆ ಹುಚ್ಚುಮಾತುಗಳ ಪೆಚ್ಚುಕಥೆಗಳೂ ಅಲ್ಲ. ಪುರಾಣದ ವಿಚಿತ್ರವೆನಿಸುವ ಎಷ್ಟೊ ಕಥೆಗಳನ್ನು ವಿಚಾರ ವಿಮರ್ಶೆಗಳ ಒರೆಗಲ್ಲಿನ ಮೇಲೆ ಉಜ್ಜಿನೋಡಿದರೆ ಅವುಗಳಲ್ಲಿ ಎಷ್ಟೋ ಹುರುಳು ಉಂಟೆಂಬ ಅನುಭವವು ಬಾರದೆ ಇರದು. 'ಕರ್ಣಾಟ'ಎಂಬ ರಕ್ಕಸನಿಂದ ಈ ನಾಡಿಗೆ ಹೆಸರು ಬಂದಿತೆಂದು ಸ್ಕಂಧಪುರಾಣವು ಹೇಳುತ್ತದೆ. ಸ್ಕಂಧಪುರಾಣದ ಈ ಕತೆಯಿಂದ ಕರ್ಣಾಟಕ್ಕೆ ಈ ಹೆಸರು ಏಕೆ ಬಂದಿತೆಂಬುದು ಏನೂ ಗೊತ್ತಾಗದೆ ಕರ್ಣಾಟದ (ಜನರ) ವಿಷಯಕ್ಕೆ ಆ ಪೌರಾಣಿಕರ ಭಾವನೆಯೇನಿತ್ತು, ಎಂಬುದು ಚೆನ್ನಾಗಿ ಹೊರಬರುತ್ತದೆ.'ಹೀನಚಾರಾಃ', 'ಮ್ಲೇಚ್ಛಾಃ' ಎಂದು ಮುಂತಾಗಿ ಈ ನಾಡಿಗರನ್ನು, ಔತ್ತರೇಯರು ಅಥವಾ ವೈದಿಕ ಧರ್ಮಾಭಿಮಾನಿಗಳು ತಿರಸ್ಕರಿಸಿ ಮಾತನಾಡುತ್ತಿದ್ದುದನ್ನು ಹಿಂದಿನ ಅಧ್ಯಾಯದಲ್ಲಿ (ಪುಟ ೨೯-೩೨) ವಿವರಿಸಿದ್ದಾಗಿದೆ; ಸ್ಕಂಧಪುರಾಣದಲ್ಲಿ ಬಂದ ಕರ್ಣಾಟ-ರಾಕ್ಷಸನ ಕಥೆಯು ಈ ಪರಂಪರೆಗೆ ಸುಸಂಗತವಾಗಿಯೆ ಇದೆ. ಸ್ಕಂಧಪುರಾಣವು 'ಕರ್ಣಾಟ ರಕ್ಕಸ'ನೆಂದು ಒಬ್ಬನ ಕಥೆಯನ್ನು ಹೇಳುತ್ತದೆ. ಇಲ್ಲಿ ಈ ನಾಡನ್ನೆ ಒಬ್ಬ ರಕ್ಕಸನಿಗೆ ಹೋಲಿಸಿರಬೇಕೆಂದು ಕಾಣುತ್ತದೆ. ಇಲ್ಲದಿದ್ದರ ನಾಡಿಗೆ ಅಥವಾ ನುಡಿಗೆ ಒಂದು ವ್ಯಕ್ತಿಯಿಂದ ಎಂದಾದರೂ ಹೆಸರು ಬಂದುದು ಉಂಟೆ? ಪೌರಾಣಿಕ ಕೆಲವು ಕತೆಗಳೇನೋ ಉಂಟು. ಆದರೆ, ಐತಿಹಾಸಿಕ ಆಧಾರಗಳು ಸ್ಪಷ್ಟವಾಗಿ ಇಲ್ಲ. ಒಂದು ಮಹಾವ್ಯಕ್ತಿಯಿಂದ ಒಂದು ಮನೆತನಕ್ಕೆ ಹೆಸರು ಬರುವುದು. ಒಂದು ಹೆಸರಾದ ಮನೆತನವು ಹಲವು ದಿನಗಳ ವರೆಗೆ ಒಂದೆಡೆಯಲ್ಲಿ ಆಳಿದರೆ ಆ ನಾಡಿಗೆ ಆ ಮನೆತನದ ಹೆಸರೆ ಕೆಲ ದಿನಗಳ ವರೆಗೆ ನಡೆದುದನ್ನು ಇತಿಹಾಸದಲ್ಲಿ ಕಾಣಬಹುದು; 'ಗಂಗವಾಡಿ', 'ರಟ್ಟಪಾಡಿ', 'ಕದಂಬದೇಶ', 'ಹೊಯ್ಸಳದೇಶ', ಇವೆ ಮೊದಲಾದವು ಇದಕ್ಕೆ ದೃಷ್ಟಾಂತ. ಆದರೆ, ಇವುಗಳಲ್ಲಿ ಆವುದೊಂದು ಹೆಚ್ಚು ದಿನ ಆಳಿಬಾಳಿಲ್ಲ; ಅಥವಾ ಬದುಕಿಲ್ಲ. ಒಂದು ವೇಳೆ, ಸ್ಕಂಧಪುರಾಣವು ಹೇಳುವಂತೆ ಈ ನಾಡಿಗೆ 'ಕರ್ಣಾಟ' ರಕ್ಕಸನಿಂದಲೆ ಹೆಸರು ಬಂದಿತೆಂದು ನಂಬಲು ಅಡ್ಡಿಯಿದ್ದಿಲ್ಲ. ವ್ಯಕ್ತಿಯಿಂದ ನಾಡಿಗೆ ಹೆಸರು ಬರಬೇಕಾಗಿದ್ದರೂ ಆ ವ್ಯಕ್ತಿಯು ಸುಪ್ರಸಿದ್ಧ-ಕುಪ್ರಸಿದ್ಧ ಅಂತೂ ಪ್ರಸಿದ್ಧವಾಗಿರಬೇಕಲ್ಲವೆ? ಕರ್ಣಾಟ ರಕ್ಕಸನು ಬಹಳ ಪೀಡಾಕರನಾಗಿದ್ದನೆಂದು ಸ್ಕಂಧಪುರಾಣವು ಹೇಳುತ್ತದೆ. ಆದರು ಅವನು ನೀಚಕೃತಿಗಳಲ್ಲಿ, ಕಾಟದಲ್ಲಿ ರಾವಣ- ಜರಾಸಂಧಾದಿಗಳನ್ನು ಮೀರಿಸಿದಂತೆ ತೋರಲಿಲ್ಲ. ಹಾಗಿದ್ದರೆ 'ರಾವಣ-ವಧ' 'ಜರಾಸಂಧ-ಸಂಹಾರ' ಗಳಂತೆ 'ಕರ್ನಾಟ-ರಾಕ್ಷಸ-ವಿಧ್ವಂಸನ' ಎಂಬ ಒಂದು ಮಹಾಕಾವ್ಯವು ಸಿದ್ಧವಾಗದೆ ಎಂದೂ ಇರುತ್ತಿರಲಿಲ್ಲ. ದೇವಾಧಿದೇವತೆಗಳನ್ನೂ ಮೆಟ್ಟಿ ನಿಂತ ರಾವಣಾದಿಗಳು ಆಳಿದ ನಾಡಿಗೆ ಅವರ ಹೆಸರು ಬರಲಿಲ್ಲ. ಅವರಿಂದ ಅಲ್ಪನಾದ

'ಕರ್ಣಾಟ-ರಕ್ಕಸ'ನಿಂದ ಅವನ ನಾಡಿಗೆ ಹೆಸರಾಯಿತೆಂಬುದು ಸಯುಕ್ತಿಕವಾದೀತೆ? 'ಕರ್ಣಾಟ-ರಕ್ಕಸನು' ಆಗಿ ಹೋದ ಕತೆಯನ್ನು ಸ್ಕಂಧಪುರಾಣವೊಂದೆ ಹೇಳುತ್ತದೆ. ಬೇರೆ ಪುರಾಣಗಳಲ್ಲಿ ಇದಕ್ಕೆ ಎಲ್ಲಿಯೂ ಆಧಾರಗಳು ದೊರೆತಿಲ್ಲ. ಆದುದರಿಂದ, ರಾವಣಾದಿಗಳಂತೆ ಇದೊಂದು ಐತಿಹಾಸಿಕ ವ್ಯಕ್ತಿಯೆಂದು ಗ್ರಹಿಸಲಿಕ್ಕಾಗದು. 'ಕರ್ಣಾಟರು ರಕ್ಕಸರಾಗಿದ್ದರು ಅಥವಾ ರಕ್ಕಸರಂತಹರಿದ್ದರು' ಎಂಬೀ ತೆರನಾಗಿ ಹೇಳದೆ, ಆ ಪೌರಾಣಿಕರು 'ಕರ್ಣಾಟನೆಂಬ ಒಬ್ಬ ರಕ್ಕರಸನಿದ್ದನೆಂ'ದು ಹೇಳಿದಂತೆ ತೋರುತ್ತದೆ.

ನಮ್ಮ ನಾಡಿನ ಹಿಂದಿನ ಸಾಹಿತ್ಯದಲ್ಲಿ 'ರಾಕ್ಷಸರ' ವರ್ಣನೆ, ಕತೆಗಳು ಹೇರಳವಾಗಿವೆ. ಆದರೆ, ಅಲ್ಲಿ 'ರಾಕ್ಷಸ' ಎಂದರೆ ಹಗೆ, ವೈರಿ, ಎಂದು ಮಾತಿನ ಅರ್ಥ.ಇದನ್ನು ಕುರಿತು ಅಭ್ಯಾಸಿಗಳಾದ ಹಲವು ವಿದ್ವಾಂಸರು ಸ್ಪಷ್ಟವಾಗಿ ತಮ್ಮ ಅಭಿಪ್ರಾಯವನ್ನು ಹೇಳಿಬಿಟ್ಟಿದ್ದಾರೆ[೧೪] ಆದುದರಿಂದ ಸ್ಕಂಧಪುರಾಣದ ಉಲ್ಲೇಖದ ಮೇಲಿಂದ ಪೌರಾಣಿಕರಿಗೆ ಕರ್ಣಾಟದ ಮೊದಲಿಗರ ವಿಷಯಕ್ಕೆ ತಿರಸ್ಕಾರವು ಇಲ್ಲವೆ ಶತ್ರುಭಾವವು ಇದ್ದಿತೆಂದು ಮಾತ್ರ ವ್ಯಕ್ತವಾಗುವುದು. ಹೊರತು ಈ ಹೆಸರಿನ ಒಬ್ಬನೆ ರಕ್ಕಸನಿದ್ದನೆಂದು ಹೇಳುವುದು ಅರ್ಥವಿಹೀನ. 'ಲಂಕೆಯಲ್ಲಿರುವವರೆಲ್ಲ ರಾವಣರೇ', ಎಂಬುದೊಂದು ಗಾದೆ. ಈ ಗಾದೆಯಲ್ಲಿ 'ರಾವಣ' ಎಂಬುದು ಲಂಕೆಯ ಎಲ್ಲ ಜನಗಳ ಪ್ರಾತಿನಿಧಿಕ ಹೆಸರು.ಅದರಂತೆ ಈ ನಾಡಿನೊಳಗಿನ ಎಲ್ಲ ರಕ್ಕಸರ ಪ್ರತಿನಿಧಿಯೆಂದು 'ಕರ್ಣಾಟ ರಕ್ಕಸ' ಎಂಬ ಒಂದೇ ವ್ಯಕ್ತಿಯನ್ನು ಸ್ಕಂಧಪುರಾಣಕರ್ತನು ನಿರ್ಮಿಸಿರಬೇಕೆಂದು ತೋರುತ್ತದೆ. ಆದುದರಿಂದ ಸ್ಕಂಧಪುರಾಣದಲ್ಲಿ 'ಕರ್ಣಾಟ' ಎಂಬುದು ಒಂದು ವ್ಯಕ್ತಿಯ ಹೆಸರಾಗಿರದೆ ಇಲ್ಲಿಯ ಮೂಲಜನಾಂಗವೆ ಆ ತೆರನಾಗಿ ಉಲ್ಲೇಖಿತವಾಗಿದೆ.

vi ಏಕೆಂದರೆ ಸಂಸ್ಕೃತದಲ್ಲಿ 'ಆಂಧ್ರಾಃ' 'ಅಂಗಾಃ', 'ಕರ್ಣಾಟಾಃ' ಎಂಬೀ ಬಗೆಯಾಗಿ ಹೇಳುವ ರೂಢಿ ಉಂಟು. ನಾಡುಗಳಿಗೆ ಅಲ್ಲಿಯ ಜನಾಂಗದಿಂದ ಆಯಾ ಹೆಸರುಗಳು ಬಂದುವೆಂಬ ಭಾವನೆಯೆ ಇದಕ್ಕೆ ಕಾರಣ ವಿರಬೇಕೆಂದು ತೋರುತ್ತದೆ. ಮಹಾಭಾರತಾದಿ ಎಲ್ಲ ಸಂಸ್ಕೃತ ಗ್ರಂಥಗಳೊಳಗಣ ಉಲ್ಲೇಖಗಳು 'ಕರ್ಣಾಟಾಃ' ಎಂದು ಜನಾಂಗವಾಚಕಗಳೇ ಆಗಿವೆ. ಈ ವಿಚಾರವು ಮಾನ್ಯ ಸಂಶೋಧಕರಾದ ಶ್ರೀಮಾನ್ ಮಂ. ಗೋವಿಂದ ಪೈಗಳಿಗೆ ಸಲ್ಪ ಮಸಕುಮಸಕಾಗಿ ಒಮ್ಮೆ ಹೊಳೆದುಹೋಗಿದೆ.[೧೫] ಆದರೆ ಅವರು ಈ ವಿಚಾರವನ್ನು ಮುಂದೆ ವಿಸ್ತರಿಸದೆ ಇನ್ನೊಂದು ದಿಕ್ಕಿನಲ್ಲಿ ಹೊರಟರು. ಮಹಾರಾಷ್ಟ್ರದ ಇತಿಹಾಸಾಚಾರ್ಯ ಶ್ರೀಮಾನ್ ರಾಜವಾಡೆಯವರು, ಜನಾಂಗವಾಚಕವಾಗಿ ಅರ್ಥ ಮಾಡುವ ಪ್ರಾಚೀನ ಪರಂಪರೆಯ ಅನುಸಂಧಾನದಲ್ಲಿ ಕರ್ಣಾಟಕ್ಕೆ ಮನುಸ್ಮೃತಿಯ ಆಧಾರದಿಂದ ಹೊಸ ನಿರುಕ್ತವನ್ನು ಹೇಳಿದರು.

ಶ್ರೀ ರಾಜವಾಡೆಯವರ ಈ ಊಹೆಯನ್ನು 'ಕರ್ಣಾಟದ ವೀರಕ್ಷತ್ರಿಯರು' ಎಂಬ ಪುಸ್ತಕದಲ್ಲಿ ಉಲ್ಲೇಖಿಸಲಾಗಿದೆ. ಶ್ರೀಮಾನ್ ಪಂಡಿತ ಶ್ರೀರಂಗ ಭೀಮಾಚಾರ್ಯರು 'ಕರ್ಣಾಟ' ಶಬ್ದವೇ ಸಾಧು, ಎಂದು ಪ್ರತಿಪಾದಿಸುವಾಗ ಈ ವ್ಯುತ್ಪತ್ತಿಯನ್ನೇ ಆಧಾರವಾಗಿ ಇಟ್ಟುಕೊಂಡಿದ್ದಾರೆ. ಪ್ರಾಚೀನ ಹಿಂದೂಸಮಾಜ ಶಾಸ್ತ್ರಜ್ಞನಾದ ಮನುವು ಹಲವು ಜಾತಿ, ಕುಲಗಳ ವಿಷಯಕ್ಕೆ ತಾನು ಅರಿತ ಪರಂಪರಾಗತವಾದ ಐತಿಹ್ಯವನ್ನು ಬರೆದಿಟ್ಟಿದ್ದಾನೆ. ಅದು 'ಸ್ಮೃತಿ' (ನೆನಪು); ತಲೆತಲಾಂತರಗಳಿಂದ-ನೆನಪಿನಿಂದ ಹೇಳುತ್ತ ಬಂದುದನ್ನು ನೆನಪಿನಿಂದ

ಬರೆದಿಟ್ಟುದರಲ್ಲಿ ಕೆಲವೊಂದು ತಪ್ಪುತಡೆಗಳು ಉಳಿದಿರುವ ಸಂಭವವು ಇಲ್ಲದಿಲ್ಲ. ಹಲವು ದಿನಗಳ ಹಿಂದಿನ ಮಸುಮಸಕಾದ ನೆನಪಿನ ಸಂಗತಿಯನ್ನು ಬರೆದಿಟ್ಟುದರ ಸ್ಪಷ್ಟವಾದ ಅರ್ಥವು ಈಗ ಗೊತ್ತಾ ಗುತ್ತಿರಲಿಕ್ಕಿಲ್ಲ. ಆದರೂ ಸಂಪೂರ್ಣ ನೆನಪು ಆಗಲೊಲ್ಲದೆಂದು ಇದ್ದ ಸ್ವಲ್ಪ ಸ್ಮೃತಿಯನ್ನು ದುರ್ಲಕ್ಷಿಸುವುದು ಜಾಣ್ಮೆಯೆನಿಸದು. ಆದಕಾರಣ, ಮನುವು ಹೇಳುವುದನ್ನು ಎಣಿಕೆಯಲ್ಲಿ ಹಿಡಿಯದೆ ಮುಂದೆ ಸಾಗುವುದು ಸರಿಯಲ್ಲ. ಮನುವು ಹೇಳುವುದೇನೆಂದರೆ:

ಝಲ್ಲೋ ಮಲ್ಲಶ್ಚ ರಾಜನ್ಯಾತ್ ವ್ರಾತ್ಯಾನ್ನಿಚ್ಛಿವಿರೇವ ಚ।
ನಟಶ್ಚ ಕರಣಶ್ಚೈವ ಖಸೋ ದ್ರವಿಡದ ಏವ ಚ ॥ ೧೦.೨೨॥

ಮನುವು ತನ್ನ ಕಾಲದ ವ್ರಾತ್ಯಕ್ಷತ್ರಿಯರ ಪಂಗಡಗಳನ್ನು ವಿವರಿಸುತ್ತ ಅವರಲ್ಲಿ ಕರಣರು ಮತ್ತು ನಟರು ಎಂಬ ಎರಡು ಬಗೆಗಳು ಇದ್ದುದನ್ನು ಹೇಳುತ್ತಾನೆ. ಶ್ರೀ ರಾಜವಾಡೆಯವರ ಅಭಿಪ್ರಾಯದಂತೆ ಕರಣರು ಮತ್ತು ನಟರು ಸೇರಿ ಒಂದೇ ಜನಾಂಗವಾಗಿ ಅದುವೆ ಕರ್ಣಾಟವಾಯಿತು. 'ಕರ್ಣಾಟಾಃ' ಎಂದರೆ ಜನಾಂಗ; ಕರಣ ಮತ್ತು ನಟರ ಸಂಮಿಶ್ರ ಪಂಗಡ; ಎಂದು ಶ್ರೀ ರಾಜವಾಡೆಯವರ ಊಹೆ.

ಆವುದೊಂದು ಮಾತನ್ನು ಬೇರೆ ಬೇರೆ ಪ್ರಮಾಣಗಳ ಆಧಾರದಿಂದ ವಿಮರ್ಶಿಸಿ ಸತ್ಯಾಸತ್ಯತೆಗಳನ್ನು ನಿರ್ಧರಿಸದೆ ಒಮ್ಮೆಲೆ ಸ್ವೀಕರಿಸುವುದು ಅಥವಾ ತಿರಸ್ಕರಿಸುವುದು ಅವಿಚಾರ. 'ಕರ್ಣಾಟ'ವೇ ಮೂಲಶಬ್ದ; ಮತ್ತು ಅದು ಸಂಸ್ಕೃತ; ಎಂದು ಪ್ರತಿಪಾದಿಸುವ ಪಂಥದಲ್ಲಿರುವ ಆರು ಒಳಪಂಗಡಗಳಲ್ಲಿ ಮೊದಲಿನ ನಾಲ್ಕು ಬಗೆಗಳು ತೀರ ಹುರುಳಿಲ್ಲದುವೆಂದು ಕಾರಣ ಸಹಿತವಾಗಿ ಈ ಮೊದಲೆ ಹೇಳಿದ್ದಾಗಿದೆ. ಐದನೆಯದು ಅಕ್ಷರಶಃ- ನಿಜವಲ್ಲದಿದ್ದರೂ ಅದರಲ್ಲಿ ಸತ್ಯಾಂಶವು ಇಲ್ಲದೆ ಇಲ್ಲವೆಂಬುದನ್ನೂ ಕಂಡುದಾಯ್ತು. ಈ ಐದು ಪ್ರಕಾರಗಳಿಗಿಂತಲೂ ಆರನೆಯ ಮಾತು ಬಹಳ ಹುರುಳುಳ್ಳುದಾಗಿದೆಯೆಂದು ಒಪ್ಪಿಕೊಳ್ಳದೆ ಗತಿಯಿಲ್ಲ. ಏಕೆಂದರೆ, ಈ ಬಗೆಯಾಗಿ ಎರಡು ಜನಾಂಗಗಳ ಬೆರಕೆಯಾಗುವುದು ಅಸಂಭವನೀಯವಾಗಿಲ್ಲ. ಕರಣರು ಮತ್ತು ನಟರು ಒಂದುಗೂಡಿ ಕರ್ಣಾಟರಾಗಿರುವ ಸಂಭವವು ಇಲ್ಲದಿಲ್ಲ. ಆದರೆ, ಕರಣರು ಮತ್ತು ನಟರು ಯಾರು? ಯಾವ ಬಗೆಯವರು? ಆರ್ಯರೊ? ದ್ರಾವಿಡರೊ? ಎಲ್ಲಿ ನೆಲೆಸಿದವರು? ಎಂದು ಇದ್ದರು? ಈ ಸಂಗತಿಗಳು ಇನ್ನೂ ಕಗ್ಗತ್ತಲೆಯಲ್ಲಿದ್ದು ಇವನ್ನು ಯಾರೂ ಬೆಳಕಿಗೆ ತಂದಿಲ್ಲ. ಕರಣ ಮತ್ತು ನಟ ಎಂಬ ಹೆಸರಿನ ಜನಾಂಗಗಳ ಹಿಂದಕ್ಕೆ ವಾಸಿಸುತ್ತಿದ್ದುವೆಂಬುದನ್ನು ಇನ್ನು ಬೇರೆಬೇರೆ ಗ್ರಂಥಸ್ಥಪ್ರಮಾಣಗಳನ್ನು ತೋರಿಸದೆ ಇದ್ದರೆ ಮನುಸ್ಮೃತಿಯ ವಚನವು ನಂಬುಗೆಗೆ ಅಷ್ಟು ಅರ್ಹವಾಗಲಾರದು.

'ನಟ'ರು ಎಂಬ ಜನಾಂಗವು ಇದ್ದಿತೆಂದು ಮನುವಿನ ಹೊರತು ಇನ್ನೂ ಕೆಲರು ಹೇಳುತ್ತಾರೆ. ಮನುವು ನಟರನ್ನು ವ್ರಾತ್ಯಕ್ಷತ್ರಿಯರಲ್ಲಿ ಎಣಿಸಿದ್ದಾನೆ. ವ್ರಾತ್ಯರು ಎಂದರೆ ಆಚಾರಹೀನರು. ವ್ರಾತ್ಯಕ್ಷತ್ರಿಯರು ಎಂದರೆ ಅನಾಚಾರಿಗಳಾದ ಕ್ಷತ್ರಿಯರೆಂದು ಅರ್ಥವಾಗುವುದು. ನಟರು ಆಚಾರಹೀನರೆಂದು ಸೂಚಿಸಿದರೂ ಮನುವಿನ ಅಭಿಪ್ರಾಯದಂತೆ ಅವರು ಕ್ಷತ್ರಿಯರು. ಆದರೆ, ಯಮ ಮತ್ತು ಪಿತಾಮಹರು ಇವರನ್ನು ಇನ್ನೂ ತೀರ ಹೀನರನ್ನಾಗಿ ಪರಿಗಣಿಸಿದ್ದಾರೆ.[೧೬]

ರಜಕಶ್ಚರ್ಮಕಾರಶ್ಚ ನಟೋ ಬುರುಡ ಏವ ಚ।
ಕೈವರ್ತಮೇವ ಭಿಲ್ಲಾಶ್ಚ ಸಪ್ತೈತೇ ಅಂತ್ಯಜಾಃ ಸ್ಮೃತಾಃ।

ಪಿತಾಮಹನು ಇವೇ ಹೆಸರುಗಳನ್ನು ಹೇಳಿ ಇವರನ್ನು ಮ್ಲೇಚ್ಛರೆಂದು ಕರೆದಿದ್ದಾನೆ!

'ನಟ'ರಂತೆ 'ಕರಣ'ರ ಉಲ್ಲೇಖಗಳು ಹೆಚ್ಚು ಇಲ್ಲ. ಆದರೂ ಮತ್ಸ್ಯಪುರಾಣದಲ್ಲಿ ದೊರೆವ ಒಂದು ಆಧಾರವು ಅತ್ಯಂತ ಮಹತ್ವದ್ದಾಗಿದೆ. ತುರ್ವಸುವಿನ ವಂಶಜರಿಂದಾದ ದಕ್ಷಿಣದ ಜನಾಂಗ-ದೇಶಗಳನ್ನು ಹೇಳುವಾಗ ಈ ಉಲ್ಲೇಖವು ಬಂದಿದೆ.[೧೭]

ತುರ್ವಸೋಸ್ತು ಸುತೋ ಗರ್ಭೋ ಗೋಭಾನುಸ್ತಸ್ಯ ಚಾತ್ಮಜಃ।
ಗೋಭಾನೋಸ್ತು ಸುತೋ ವೀರಃ ತ್ರಿಸಾರಿಃ ಅಪರಾಜಿತಃ॥

ಈ ಬಗೆಯಾಗಿ ವಂಶವೃಕ್ಷವನ್ನು ವಿವರಿಸುತ್ತ ಮುಂದೆ ಈ ಪುರಾಣವು ಹೇಳುವುದೇನೆಂದರೆ:

ಪಾಂಡ್ಯಶ್ಚ ಕೇರಲಶ್ಚೈವ ಚೋಲಃ ಕರ್ಣಸ್ತಥೈವ ಚ।
ತೇಷಾಂ ಜನಪದಾಃ ಸ್ಥಿತಾಃ ಪಾಂಡ್ಯಾಃ ಚೋಲಾಃ ಸಕೇರಲಾಃ ॥ ೪೮.೫॥

ಮನುವು 'ಕರಣ' ಎಂದು ಹೇಳುವನು. ಮತ್ಸ್ಯಪುರಾಣದಲ್ಲಿ 'ಕರ್ಣ' ಎಂದಿದೆ. ಇವೆರಡೂ ಹೆಸರುಗಳು ಒಂದೆ? ಬೇರೆಯೆ? ಮನುಸ್ಮೃತಿಯಲ್ಲಿ ಕರಣ ಮತ್ತು ನಟ ಎಂಬ ಎರಡು ಹೆಸರುಗಳು (ನಟಕರಣರೆಂದು) ಹತ್ತಿರ ಬಂದಿದ್ದು ವಿಚಾರಾರ್ಹವಾಗಿದೆ. ಕರಣರು ಮತ್ತು ನಟರು ಸೇರಿ ಒಂದಾದ ಜನಾಂಗದ ಹೆಸರು 'ಕರಣನಟ' ಎಂದಾಗುವುದು. ಇದು ಕರಣಾಟ-ಕರ್ಣಾಟ-ಕರ್ನಾಟ ಎಂದು ಈಗಿನ ರೂಪವನ್ನು ತಾಳಿರಬಹುದೆಂದು ಹೊಂದಿಸಿ ಹೇಳಬಹುದಾಗಿದೆ. ಆದರೆ, ಮತ್ಸ್ಯಪುರಾಣದಲ್ಲಿ 'ಕರ್ಣ' ಎಂದೇ ಜನಾಂಗದ ಹೆಸರು ಹೇಳಿರುವುದರಿಂದ ಕರ್ಣ+ನಟ ಸೇರಿ ಕರ್ಣಾಟವಾಯ್ತೆನ್ನಬಹುದು. ಕರ್ಣರನ್ನು ಮತ್ಸ್ಯಪುರಾಣವು ಪಾಂಡ್ಯ, ಚೋಳ, ಕೇರಳರೊಡನೆ ಹೇಳುತ್ತಿದೆ. ಕರ್ಣರು ಯಾರಿರಬಹುದೆಂದು ನಿರ್ಧರಿಸಲು ಬಹಳ ಮಹತ್ವದ ಆಧಾರವಾಗಿದೆ. ಪಾಂಡ್ಯ, ಚೋಳ, ಕೇರಳರ ಹತ್ತಿರದ ಕರ್ಣರೆಂದರೆ ಕರ್ಣಾಟರೇ ಅಲ್ಲದೆ, ಬೇರಿನ್ನಾರೂ ಆಗಿರಲಾರರು. ಆದುದರಿಂದ, ಮನುಸ್ಮೃತಿಯ ಕರಣ ಮತ್ತು ಮತ್ಸ್ಯಪುರಾಣದ ಕರ್ಣ ಇವರೆಡು ಶಬ್ದಗಳನ್ನು ಬರೆವುದರಲ್ಲಿ ಸ್ವಲ್ಪ ವ್ಯತ್ಯಾಸವಿದೆಯಲ್ಲದೆ ಅರ್ಥದಲ್ಲಿ ಭೇದವಿಲ್ಲ.

ಇಂತಿವೆಲ್ಲ ಉಲ್ಲೇಖಗಳು ದೊರೆಯುತ್ತಿರುವಾಗ ಕರ್ಣ ಮತ್ತು ನಟ ಇವೆರಡು ಜನಾಂಗಗಳು ಹಿಂದಿನ ಕಾಲದಲ್ಲಿ ಇರಲೆ ಇಲ್ಲವೆಂದು ಹೇಳುವುದಕ್ಕೆ ಇನ್ನು ಮೇಲೆ ಬಾಯಿ ಬಾರದು. ಕರ್ಣ ಮತ್ತು ನಟರ ಸೇರುವೆಯಿಂದ ಕರ್ಣಾಟವೆಂದು ಈ ನಾಡಿನ ಹೆಸರಾಯಿತೆಂಬುದೆ ನಿಜವಿದ್ದರೆ 'ಕರ್ಣಾಟ' ವೆಂಬುದೆ ಮೂಲ ಶಬ್ದವಾಯಿತು. ಆದರೆ, ಕರ್ಣರು ಮತ್ತು ನಟರು ಯಾವ ಜನಾಂಗ? ಇವು ಸಂಸ್ಕೃತ ಹೆಸರುಗಳೊ? ಕರ್ಣ ಮತ್ತು ನಟ ಎಂಬಿವು ಸಂಸ್ಕೃತಭಾಷೆಗೆ ಸಂಬಂಧಪಟ್ಟ ಶಬ್ದಗಳೆಂದು ಸಿದ್ಧವಾದರೆ ಕರ್ಣಾಟವು ಮೂಲತಃ ಸಂಸ್ಕೃತ ಪದವೆಂದು ಒಪ್ಪಿಕೊಳ್ಳಲೇಬೇಕಾಗುವುದು. ಕರಣ ಅಥವಾ ಕರ್ಣ ಮತ್ತು ನಟ ಈ ಶಬ್ದಗಳು ಸಂಸ್ಕೃತ ಭಾಷೆಯವೆಂದು ಮೋರೆಯ ಮೇಲಿಂದ ಹೇಳಬಹುದು. ಆದರೆ, ಕರಣವು ಕರ್ಣವಾಗುವುದು; ನಟವು ನಾಟವಾಗುವುದು. ಇವುಗಳಲ್ಲಿ ಕರಣ ಎಂಬುದರ ಅರ್ಥವು ನಿಜವೋ? ಕರ್ಣ ಎಂಬುದು ನಿಜವೊ? ಎರಡೂ ಒಂದೇ ಅಂತು ಅಲ್ಲ. ಇವು ಕರಣ-ಕರ್ಣ, ನಟ-ನಾಟ ಎಂಬೀ ಬಗೆಯಾಗಿ ಮೋರೆ ಬದಲಿಸುವ ಕಾರಣವೇನು? ಆದುದರಿಂದ, ಒಮ್ಮೆಲೆ ಮೋರೆಯ ಮೇಲಿಂದಲೆ ಬೆಲೆಕಟ್ಟಿದರೆ ಲೆಕ್ಕತಪ್ಪುವ ಸಂಭವವಿದೆ. 'ಕರಣ' ಎಂದರೇನು? ಇವರು ಕೈಯವರು-ಗೆಯ್ಮೆಯವರು, ಕಾಯಕದವರು ಎಂದು ಅರ್ಥವೆ? ಇಲ್ಲವೆ 'ಕರ್ಣ' ಎಂದರೇನು? ಕಿವಿಗಳಿದ್ದವರೆಂಬ ಭಾವವೊ? ಕಿವಿಗಳು ಯಾರಿಗೆ ಇಲ್ಲ? 'ಮಹಾನಾಸಾಃ', 'ದೀರ್ಘಕೇಶಾಃ', ಎಂದು ಮುಂತಾಗಿ ನಗೆಬರುವಂತಹ ಎಷ್ಟೊ ಬಗೆಯ ನಾಡಿಗರ ಹೆಸರುಗಳನ್ನು ಬೃಹತ್‌ಸಂಹಿತೆ ಮೊದಲಾದ ಗ್ರಂಥಗಳಲ್ಲಿ ಕಾಣಬಹುದು. 'ಕರ್ಣ'ರ ಹೆಸರೂ ಇದೇ ಬಗೆಯದು. 'ದೀರ್ಘಕೇಶಾಃ', ಕೇಶಗಳು ದೀರ್ಘವಾಗಿದ್ದವರು; 'ಮಹಾನಾಸಾಃ' ಹಿರಿಮೂಗಿನವರು. ಅದರಂತೆ ಕರ್ಣರೆಂದು ಏಕೆ ಹೆಸರು? ಈ ಜನಗಳ ಕಿವಿಗಳು ದೊಡ್ಡವು ಅಥವಾ ಸ್ವಲ್ಪ ಉದ್ದವಾಗಿದ್ದುವೆಂಬರ್ಥವೊ? 'ನಟರು' ಎಂದರೇನು? ನಟರು ಎಂದರೆ ಕುಣಿವವರೆಂದು ಗ್ರಹಿಸಬೇಕೆ? 'ಕರ್-ನಾಟಕರು' ಎಂದು ವಿಗ್ರಹಿಸಿದರೆ 'ನಟ' ಶಬ್ದದ ಅರ್ಥವು ಇನ್ನಷ್ಟು ಪುಷ್ಟಿಗೊಳ್ಳುತ್ತದೆ! ಸರಿ, ನಾಟ್ಯಸೃಷ್ಟಿಯ ಜನಕರು ಕರ್-ನಾಟಕರೇ. ಏಕೆಂದರೆ 'ನಟರು' ಇವರ ಮೊದಲಿಗರು!

ಈ ತೆರನಾಗಿ ಕರಣ ಅಥವಾ ಕರ್ಣ ಹಾಗೂ ನಟ ಶಬ್ದಗಳಿಗೆ ಸಂಸ್ಕೃತದಿಂದ ಹೊರಡುವ ಅರ್ಥವು ನಗೆಬರಹಗಳಲ್ಲಿ ಮಾತ್ರ ಒಪ್ಪುವಂತಹದಾಗಿದೆ. ಇತಿಹಾಸಶಾಸ್ತ್ರಕ್ಕೆ ಅಸಮ್ಮತವಾದ ಅರ್ಥವಿದು. ಕರಣ (ಕರ್ಣ) ಮತ್ತು ನಟ (ನಾಟ) ಶಬ್ದಗಳಿಗೆ ಸಂಸ್ಕೃತದಿಂದ ಸಮರ್ಪಕವಾಗಿ ಅರ್ಥವಾಗುವುದಿಲ್ಲವಾದುದರಿಂದಲೂ,

ಇವೆರಡೂ ಶಬ್ದಗಳ ರೂಪಗಳು (ಕರಣ-ಕರ್ಣ; ನಟ-ನಾಟ) ಅನಿಶ್ಚಿತವಾಗಿರುವುದರಿಂದಲೂ ಇವು ಮೂಲತಃ ಸಂಸ್ಕೃತಭಾಷೆಯ ಪದಗಳಾಗಿರದೆ ಬೇರೆ ಇನ್ನಾವುದಾದರೂ ಭಾಷೆಗೆ ಸಂಬಂಧಪಟ್ಟವುಗಳಾಗಿರುವ ಸಂಭವವಿದೆ. ಕರಣ-ನಟರನ್ನು ವ್ರಾತ್ಯರೆಂದು ಮನುವು ಹೇಳುತ್ತಾನೆ. ಹೀನರು, ಮ್ಲೇಚ್ಛರೆಂದು ಇನ್ನುಳಿದವರು, ಅಭಿಪ್ರಾಯ ಪಡುತ್ತಾರೆ. ಇದರ ಮೇಲಿಂದ, ಇವೆರಡೂ ಜನಾಂಗಗಳು ಆರ್ಯಪಂಗಡಕ್ಕೆ ಸೇರಿದುವುಗಳಲ್ಲವೆಂದು ನಿರ್ಧರಿಸ ಬಹುದಾಗಿದೆ. ಆರ್ಯಪಂಗಡದ ಹೊರಗಿನ ಜನಗಳ ಹೆಸರುಗಳು ಆರ್ಯಭಾಷೆಯವು ಆಗಿರದಿರುವ ಸಂಭವವೇ ಹೆಚ್ಚಾಗಿದೆ. ಈ ಕಾರಣದಿಂದಲೆ ಕರಣ (ಕರ್ಣ) ಮತ್ತು ನಟ ಈ ಪದಗಳಿಗೆ ಸಂಸ್ಕೃತದಿಂದ ಸಮಾಧಾನಕರವಾದ ಅರ್ಥವು ಹೊರಡಲೊಲ್ಲದಾಗಿದೆ.

ಕರ್ನಾಟದ ಜನಾಂಗದ ಈ ಹೆಸರುಗಳು ಕನ್ನಡನುಡಿಗೆ ಸಂಬಂಧಪಟ್ಟುವುಗಳಾಗಿರುವುದೇ ಹೆಚ್ಚು ಸಂಭವನೀಯವಾಗಿಲ್ಲವೆ? ಈ ದೃಷ್ಟಿಯಿಂದ ಇವು ಕನ್ನಡದ ಪದಗಳಾಗಿದ್ದು, ಸಂಸ್ಕೃತಕ್ಕೆ ಮಾರ್ಪಡುವಾಗ ಕರಣ (ಕರ್ಣ) ಮತ್ತು ನಟ ಎಂಬ ರೂಪವನ್ನು ತಾಳಿರಬೇಕು. ಮನುಸ್ಮೃತಿ, ಮತ್ಸ್ಯಪುರಾಣಾದಿಗಳ ಹೇಳಿಕೆ ಯಂತೆ ಈ ನಾಡಿನ ಮೂಲಜನಾಂಗವು ಕರ್ಣ (ಕರಣ) ಮತ್ತು ನಟ ಇವರೆ ಆಗಿರಬಹುದು. ಆದರೆ, ಕರ್ಣ (ಕರಣ) ಮತ್ತು ನಟ ಎಂಬ ಈ ಹೆಸರುಗಳು ಮಾತ್ರ ಸಂಸ್ಕೃಭಾಷೆಯವಾಗಿರುವ ಸಂಭವವಿಲ್ಲ. ಆದುದರಿಂದ, ಕರ್ನಾಟದ ವ್ಯುತ್ಪತ್ತಿಯ ವಿಷಯಕವಾಗಿರುವ ಮನು-ಮತ್ಸ್ಯಪುರಾಣಗಳ ಅಮೋಘವಾದ ಪ್ರಾಚೀನ ಪರಂಪರೆಯು ತುಂಬ ಹುರುಳುಳ್ಳದು ಆಗಿದ್ದರೂ 'ಕರ್ನಾಟ'ವೆಂಬ ಪದವು ಮೂಲತಃ ಸಂಸ್ಕೃತ ವೆಂದು ನಮ್ಮವರು ಹಲಕೆಲರು ಗ್ರಹಿಸಿದ್ದುದಕ್ಕೆ ಏನೂ ಆಧಾರವಿಲ್ಲ. ಈ ಗ್ರಹಿಕೆಯು ಅರ್ವಾಚೀನಕಾಲದಲ್ಲಿ ತಲೆದೋರಿರಬೇಕು. ಕರ್ಣ (ಕರಣ) ಮತ್ತು ನಟ ಇವು ಮೊದಲು ಸಂಸ್ಕೃತ ಶಬ್ದಗಳಲ್ಲವಾಗಿದ್ದರೆ, ಕನ್ನಡದ ಯಾವ ಪದಗಳು ಮಾರ್ಪಟ್ಟು ಸಂಸ್ಕೃತದಲ್ಲಿ ಕರ್ಣ (ಕರಣ) ಮತ್ತು ನಟ ಎಂದಾದುವು? ಹಾಗಾದರೆ ಆ ಮೂಲ ಕನ್ನಡ ಶಬ್ದಗಳು ಆವುವು?

ಟಿಪ್ಪಣಿ

೧. ***Tamil Lexicon,*** (Mardras University Publication)
೨. ನರಸಿಂಹಾಚಾರ್ಯ ರಾ., ***ಕನ್ನಡ ಕವಿಚರಿತೆ*** ಸಂಪುಟ III ಮುನ್ನುಡಿ
೩. EC. X. Kl. 106 (d); & 108
೪. ***ಕರ್ಣಾಟಕ ಸಾಹಿತ್ಯ ಪರಿಷತ್ ಪತ್ರಿಕೆ,*** XXIII, ಪುಟ ೧೭೦; ೧೮೪-೧೮೫
೫. ಕರ್ಣಾಟಕ-ಕರ್ನಾಟಕ ಈ ರೂಪಗಳಲ್ಲಿ ಯಾವುದು ಸಾಧು, ಪೂರ್ವೋಕ್ತ, ಪುಟ ೧೩
೬. ***ಶಬ್ದಮಣಿದರ್ಪಣಂ*** ಮತ್ತು ***ಶಬ್ದಾನುಶಾಸನ***ಗಳಲ್ಲಿ ತದ್ಭವ ಪ್ರಕರಣ ನೋಡಿ
೭. Dr. Chatterjee S. K., Prof. Levi, Bloch etc.
೮. Devadatta Bhandarakar ***Charmichael Lectures***, 1918 pp-26-27
೯. Prof. Sylvain Levi, BCV. p. 99; ಚಿ. ವಿ. ವೈದ್ಯ ಮಭಾಉ; ಟಿಳಕ ಗೀತಾರಹಸ್ಯ
೧೦. Pre-Aryan and Pre-Dravidian, pp. 63-126
೧೧. ಅದೇ, ***ಕವಿಚರಿತೆ,*** ಸಂಪುಟ III, ಮುನ್ನುಡಿ
೧೨. ಪೂರ್ವೋಕ್ತ, ಮುನ್ನುಡಿ
೧೩. ***ಜಯಕರ್ನಾಟಕ*** ಪುಟ ೧೦೬
೧೪. ***Vedic Index*** II. p. 516, AIHT. p. 291.
೧೫. ***ಪ್ರಬುದ್ಧಕರ್ನಾಟಕ,*** ೧೯೩೦
೧೬. Kane P. V., ***History of Dharmashastra***, Vol. I, p. 228; 232
೧೭. Karmarkar A. P.

ಕನ್ನಡದ ಹುಟ್ಟು

(ಆಧುನಿಕರ ವಿಚಾರ ಸರಣಿ)

ಹಿಂದಿನ ಅಧ್ಯಾಯದಲ್ಲಿ ಕನ್ನಡದ ಹುಟ್ಟನ್ನು ಕುರಿತು ಇರುವ ಪ್ರಾಚೀನ ಪರಂಪರೆಯನ್ನು ವಿಮರ್ಶಿಸಿದ್ದಾಯಿತು. ಅದರಂತೆ, ಆಧುನಿಕ ಕಾಲದಲ್ಲಿ 'ಕನ್ನಡ' ಎಂಬ ಪದದ ಅರ್ಥವನ್ನು ಅರಿತುಕೊಳ್ಳಲು ಆದ ಪ್ರಯತ್ನಗಳ ವಿಚಾರ ಅವಶ್ಯವಾಗಿದೆ. ಆಧುನಿಕರ ವಿಚಾರಸರಣಿಯಲ್ಲಿ ಕೆಲವೊಂದು ಹೋಲಿಕೆಯಿದೆ. ಇವರಲ್ಲಿ ಕನ್ನಡ ಅಥವಾ ಕರ್ಣಾಟ ಶಬ್ದದ ಅರ್ಥದ ಬಗೆಗೆ ತುಂಬ ಭಿನ್ನಾಭಿಪ್ರಾಯಗಳು ಇರುವುವಾದರೂ, ಈ ನಾಡಿನ ಅಥವಾ ನುಡಿಯ ಹೆಸರುಗಳಲ್ಲಿ ಆವುದೊಂದು ಸಂಸ್ಕೃತವಲ್ಲ; ಅಚ್ಚಕನ್ನಡದಿಂದ ಹುಟ್ಟಿದ ಪದಗಳಿವು, ಎಂದು ಒಂದೆ ಕೊರಲಿನಿಂದ ಎಲ್ಲರೂ ಹೇಳುವರು. ಇನ್ನೊಂದು ದೃಷ್ಟಿಯಿಂದ ವಿಭಾಗಿಸಿದರೆ ಆಧುನಿಕರಲ್ಲಿ ಎರಡು ಪಂಗಡಗಳನ್ನು ಮಾಡಬಹುದು. ಕರ್ಣಾ(ರ್ನಾ)ಟ ಮತ್ತು ಕನ್ನಡ ಇವೆರಡೂ ಕನ್ನಡಭಾಷೆಯ ಪದಗಳೇ ಆಗಿದ್ದರೂ, ಕರ್ಣಾ(ರ್ನಾ)ಟವೇ ಮೂಲಶಬ್ದ, ಆದರಿಂದ ಕನ್ನಡ ಎಂಬ ಪದವು ಆಯ್ತೆಂಬವರ ಪಕ್ಷವೊಂದು; ಕನ್ನಡ ಎಂಬುದೇ ಮೊದಲು ಅದರ ಸಂಸ್ಕೃತೀಕರಣವಾಗಿ ಕರ್ಣಾಟವಾಯ್ತೆಂಬವರ ಪಕ್ಷವು ಇನ್ನೊಂದು. ಇನ್ನು ಇವೆಲ್ಲ ಪಕ್ಷೋಪಕ್ಷಗಳನ್ನು ಹಿಂದಿನ ಅಧ್ಯಾಯದಲ್ಲಿ ಹೇಳಿದ ಅನುಕ್ರಮದಲ್ಲಿಯೆ ವಿವರಿಸುವುದು ಲೇಸು.

ಕರ್ಣಾಟ-ಕನ್ನಡದ ನಿರುಕ್ತವನ್ನು ಕಂಡುಹಿಡಿಯಲು ಹವಣಿಸಿ ತಮ್ಮ ಪಂಥಕ್ಕೆ ವಿಶೇಷ ಪ್ರಸಿದ್ಧಿಯನ್ನು ಕೊಟ್ಟವರು ಡಾ. ಕಾಲ್ಡವೆಲ್ಲರು. ಇವರಿಗೆ ಆಧುನಿಕ ಪಂಥದ ತಲೆಯಾಳುಗಳೆಂದರೂ ಸಲ್ಲುವುದು. ಆದರೂ ಡಾ. ಕಾಲ್ಡವೆಲ್ಲರು, ತಾವು ಈ ವಿಚಾರವನ್ನು ಡಾ. ಗುಂಡರ್ಟರಿಂದ ಎತ್ತಿಕೊಂಡಿರುವುದಾಗಿ ಹೇಳಿದ್ದಾರೆ. ಅವರು ಕರ್ಣಾಟಕ ಇದರ-ಶಬ್ದ-ಸಿದ್ಧಿ ಕ್ರಮವನ್ನು ಕುರಿತು ಬರೆದಿರುವುದೇನೆಂದರೆ:[1]

> Karnataka is regarded as a Sanskrit word by native pandits, but I agree with Dr. Gundert in preferring to derive it from the Dravidian words as ಕರ್ black, ನಾಡು country - that is, the black country-a term very suitable to designate the 'black cotton soil' as it is called of the plateau of the Southern Deccan.

ಅದೇ ಗ್ರಂಥದಲ್ಲಿ ಮುಂದೆ ಮತ್ತೆ ಅವರು ಅಭಿಪ್ರಾಯ ಪಡುವುದೇನೆಂದರೆ:

> The word *Karnataka* was further *corrupted* by the Canarese people themselves into *Kannada* from which the language is styled by the English "Canares".

ಆರ್ಯಾವರ್ತದಿಂದ ಹೊರಗಿರುವ, ದಕ್ಷಿಣಾಪಥದ ಈ ನಾಡಿನ ಹೆಸರು ಸಂಸ್ಕೃತವಾಗಿರದೆ ದ್ರಾವಿಡಭಾಷೆಗೆ ಸಂಬಂಧಪಟ್ಟುದು ಇರುವ ಸಂಭವವೇ ಹೆಚ್ಚು, ಎಂಬ ಈ ವಿಚಾರಸರಣಿಯೇ ಡಾ. ಕಾಲ್ಡವೆಲ್ಲ (ಗುಂಡರ್ಟ)ರ ಹೊಸ ನಿರುಕ್ತಕ್ಕೆ ಮೂಲಕಾರಣವಾಗಿದೆ. ಆದುದರಿಂದ, ಇವರು ಕರ್ನಾಟ, ಮತ್ತು ಕನ್ನಡ ಎಂಬುವು ಸಂಸ್ಕೃತ ಜನ್ಯವಲ್ಲವೆಂದು ಪ್ರತಿಪಾದಿಸಿದ್ದು ಸಹಜ.ಇನ್ನು 'ಕನ್ನಡ' ಎಂಬುದಕ್ಕೆ ಅವರಿಗೆ ಒಮ್ಮೆಲೆ ಅರ್ಥವು ಹೊಳೆದಂತೆ ತೋರಲಿಲ್ಲ. ಕರ್ನಾಟ ಶಬ್ದದಲ್ಲಿಯೇ ಏನೊ ಒಂದು ಅರ್ಥವಿದ್ದಂತೆ ತೋರಿ, ಕರ್+ನಾಡು ಎಂದು ಅದನ್ನು ಬಿಡಿಸಬೇಕು. ಮುಖ್ಯವಾಗಿ ಕರಿಯ ನೆಲದ ನಾಡಿದು. ಹತ್ತಿಯ ಬೆಳೆಗಾಗಿ ಹೆಸರಾದುದು. ಆದುದರಿಂದ ಇಲ್ಲಿಯ ಕರಿಯ ನೆಲದಿಂದ ಈ ನಾಡಿಗೆ ಕರ್‌ನಾಡು-ಕರ್‌ನಾಟವೆಂದು ಹೆಸರು ಬಂದಿರಬೇಕೆಂದು ಡಾ. ಕಾಲ್ಡವೆಲ್ಲರು ಪ್ರತಿಪಾದಿಸಿದ್ದಾರೆ.

ಆದರೆ, ಕರ್ನಾಟದಲ್ಲಿ ಬರಿ ಕರಿನೆಲವೆ ಇಲ್ಲ. ಕೆಂಪುನೆಲವಿದೆ, ಕೆಂಪುಕರಿಯ ಸಂಮಿಶ್ರಣ್ದ 'ಮಸಾರಿ' ಭೂಮಿಯಿದೆ. ಕರಿಯ ನೆಲದ ಬಯಲು ಸೀಮೆಯಂತೆ ಕೆಂಪುನೆಲದ ಮಲೆನಾಡು ಹುಲುಸಾದ ಬೆಳಗೆ ಹೆಸರಾಗಿದೆ. ಈ ನಮ್ಮ ನಾಡಿನ ಜನಗಳಿಗೆ ಅನ್ನ-ನೀರು ಕೊಡುವುದಕ್ಕೆ ಬಯಲುಸೀಮೆಯು ಕೆಲಸಾರೆ ತಪ್ಪಬಹುದು. ಆದರೆ ಮಲೆನಾಡು ಎಂದೂ ಈ ಹೊಣೆಯನ್ನು ತಪ್ಪಿಸಿಕೊಂಡಿಲ್ಲ. ಆದುದರಿಂದ, ಕರ್ನಾಟದಲ್ಲಿ ಎರೆನಾಡಿನ ಕರಿನೆಲಕ್ಕಿಂತಲೂ ಮಲೆನಾಡಿನ ಕೆಂಪು ನೆಲವೇ ಸ್ವಲ್ಪವೂ ಕಡಿಮೆ ಮಹತ್ವದ್ದೆಂದು ಎಣಿಸಲ್ಪಟ್ಟಿಲ್ಲ. ಕರ್ನಾಟದ ಕವಿಪುಂಗವರಿಗೆ ಸ್ಫೂರ್ತಿಯನ್ನು ಕೊಟ್ಟ ನಾಡಾವುದು? ಕರಿಯ ಮಣ್ಣಿನ ಭೂಮಿಗೆ 'ಬೆಳೆವೊಲಸೀಮೆ' ಎಂಬುದು ಹೆಸರು; ಆದರೆ ಕನ್ನಡಸಾಹಿತ್ಯದಲ್ಲಿ ಮಲೆನಾಡಿಗಿರುವ ಇಂಬು ಅದಕ್ಕಿಲ್ಲ. ಕೆಂಪುನೆಲದ ನಾಡನ್ನು 'ಪಲವುಂ ನಾಲಗೆಯುಳ್ಳವಂ ಬಗೆವೊಡೆ ಎಂದುಂ ಬಣ್ಣಿಸಲ್ಕಾರನ್' ಎಂದು ಆಂಡಯ್ಯನ ಹೊಗಳಿಕೆ. 'ಮರಿದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದುನಂದನದೊಳ್ ಬನವಾಸಿದೇಶದೊಳ್' ಎಂದು ಆದಿಪಂಪನ ಪ್ರಾರ್ಥನೆ ದೇವದೇವನಲ್ಲಿ. ನಮ್ಮ ನಾಡಿನ ಈ ಪರಂಪರೆಯನ್ನು ಮತ್ತು ಸಂಪೂರ್ಣ ನಿಜಸ್ಥಿತಿಯನ್ನೂ ಅರಿಯದ ಡಾ. ಕಾಲ್ಡವೆಲ್ಲರು ಕರ್ನಾಟದಲ್ಲಿ ಕರಿಯ ನೆಲದ ಸೀಮೆಯೆ ಹೆಚ್ಚು ಮಹತ್ವವೆಂದು ಅರ್ಥಮಾಡುವಲ್ಲಿ 'ಕರ್-ನಾಟ' ದೊಳಗಿನ ಕರ್ ಶಬ್ದದಿಂದ ದೊರೆವ ಸೂಚನೆಗೆ ಮೋಹಗೊಂಡು ಮೋಸಹೋಗಿದ್ದಾರೆ. 'ಕನ್ನಡ' ಎಂಬ ಪದವು ಮೂಲಾರ್ಥದಲ್ಲಿ ಇನ್ನೂ ಜೀವಂತವಾಗಿದ್ದುದು ಕೆಂಪುನೆಲದ ನಾಡಿನಲ್ಲಿಯೇ. 'ಕನ್ನಡ' (ಜಿಲ್ಲೆ) ಎಂದು ಕರೆಯಿಸಿಕೊಳ್ಳುವ ಭಾಗ್ಯವು ಈ ಸೀಮೆಗೇ ಇದೆ. ಈ ನಾಡಿಗೆ ಭೂಗುಣದಿಂದಲೆ ಹೆಸರು ಬಂದಿತೆನ್ನುವುದಾದರೆ ಕರಿಮಣ್ಣಿನ ಎರೆನಾಡಿಗಿಂತಲೂ ಕೆಂಪುಮಣ್ಣಿನ ಮಲೆನಾಡಿಗೆ-ಕನ್ನಡ ಜಿಲ್ಲೆಗೆ -ಹಾಗೆ ತನ್ನ ಹಕ್ಕುಹೇಳುವ ಅಧಿಕಾರವು ಹೆಚ್ಚು ಇದೆ.

ಕರ್+ನಾಡು ಎಂಬ ವ್ಯುತ್ಪತ್ತಿಯು ಕನ್ನಡ ಜಿಲ್ಲೆಯ ಸುಪ್ರಸಿದ್ಧ ವಿದ್ವಾಂಸರಾದ ಕೈ. ವಾ.ಹತ್ತಂಗಡಿ ನಾರಾಯಣರಾಯರು ಎಂ. ಎ; ಎಲ್. ಎಲ್. ಬಿ.ಇವರ ಮನಸಿಗೆ ಬರಲಿಲ್ಲ. ವಾಗ್ಭೂಷಣ ಮಾಸಪತ್ರಿಕೆಯಲ್ಲಿ ಪ್ರಕಟವಾದ 'ಕನ್ನಡದ ಕಥೆ' ಎಂಬ ಪ್ರಬಂಧದಲ್ಲಿ ಅವರು ಬರೆದಿರುವುದೇನೆಂದರೆ:

> "ಕರ್ನಾಟದೇಶವು ಸಮುದ್ರದ ಮಟ್ಟಕ್ಕಿಂತ ೧೫೦೦ ಅಡಿಯಷ್ಟಾದರೂ ಎತ್ತರವಾಗಿ ಘಟ್ಟದ ಮೇಲೆ ಇತ್ತು; ಆದ್ದರಿಂದ ಉಪ್ಪರಿಗೆಯ ಮನೆಗೆ ಕರುಮಾಡ ಎನ್ನುವಂತೆ ದೇಶೀಯರು ತಮ್ಮ ನಾಡಿಗೆ: 'ಕರುನಾಡು' ಎನ್ನುವಂತೆ ದೇಶೀಯರು ತಮ್ಮ ನಾಡಿಗೆ : 'ಕರುನಾಡು' ಎಂದು ನಾಮಕರಣವನ್ನು ಮಾಡಿ, ಇದು ದ್ರಾವಿಡ 'ಕನ್ನಡ' ಎಂಬಂತೆಯೂ ಸಂಸ್ಕೃತದಲ್ಲಿ ಕರ್ನಾಟ ಎಂಬುದಾಗಿಯೂ ಪರಿವರ್ತಿಸಿರಬಹುದು. ಇದಕ್ಕೆ ಕರಿನೆಲದ ನಾಡು (ಕರ್+ನಾಡು) ಎಂಬ ಅರ್ಥವನ್ನು ಪ್ರತೀಚ್ಯರು ಸೂಚಿಸಿದ್ದಾರೆ"[೨]

ಕರ್+ನಾಡು ಎನ್ನುವುದರಲ್ಲಿರುವ ಕೆಲವು ಕೊರತೆಗಳನ್ನು ಕರುನಾಡು ಪಕ್ಷದವರು ಎತ್ತಿಹೇಳಿದ್ದಾರೆ. ಇವರ ಅಭಿಪ್ರಾಯದಂತೆ ಕನ್ನಡಿಗರು ತಮ್ಮ ನಾಡಿಗೆ ತಾವೆ 'ಕರಿದು' ಎಂದುಕೊಳ್ಳಲಾರರು, ಎಂಬುದು ಮೊದಲನೆಯ ಕುಂದು. ಆದರೆ, ದ್ರಾವಿಡಭಾಷೆಯಲ್ಲಿ ಕರಿದಕ್ಕೆ ಕೆಲರು ಭಾವಿಸಿರುವಷ್ಟು ಅಪಾರ್ಥವಿಲ್ಲ. ಕರಿದರ ಬಗ್ಗೆ ಆರ್ಯರಿಗೆ ಮಾತ್ರ ಸಂಪೂರ್ಣ ತಿರಸ್ಕಾರ. ಆರ್ಯರ ಮತ್ತು ದ್ರಾವಿಡರ ವಿಚಾರದ ರೀತಿಗಳಲ್ಲಿ ಕೆಲವೊಂದು ಹೆಚ್ಚುಕಡಿಮೆಯಿರುವುದನ್ನು ಕಾಣಬಹುದು. ಆರ್ಯರಿಗೆ ಗೌರ (ಬಿಳಿ) ವರ್ಣವು ಪ್ರಿಯಕರ. ದ್ರಾವಿಡರಿಗೆ ಶೆನ್-ಚೆನ್ (ಚೆಲುವ ಚೆಂದ್ರಾಮ),ಕೆನ್-ಕೆಂಪು ಬಹಳ ಮೆಚ್ಚಿಕೆ. ಆರ್ಯರ ಕಲ್ಪನಾಸರಣಿಯಲ್ಲಿ ಉತ್ತರದಿಕ್ಕು ಶುಭ. 'ದಕ್ಷಿಣಕ್ಕೆ ಹೋಗು ಎಂದರೆ ಶಾಪ. ನಿನಗೆ ಉತ್ತರೋತ್ತರವಾಗಲಿ ಎಂದೇ ಹರಕೆ. ಹಳೆಯ ತಮಿಳ ಕಾವ್ಯದಲ್ಲಿ 'ಉತ್ತರಕ್ಕೆ ಹೋದನು' ಎಂದರೆ ಸಾಯುವುದಕ್ಕೆ ಹೋದನೆಂದು ಅರ್ಥವಿರುವುದೆಂದು ಪ್ರೊ. ಪಿ. ಟಿ. ಶ್ರೀನಿವಾಸ ಅಯ್ಯಂಗಾರರು ಹೇಳುತ್ತಾರೆ.[೩] ಕರಿದು, ಅಷ್ಟು ಅಶುಭಸೂಚಕವಾಗಿದ್ದರೆ ಕರಿಯವ್ವ, ಕಾಳವ್ವ, ಮೊದಲಾದುವುಗಳಿಗೆ ದೇವತ್ವವು ಪ್ರಾಪ್ತವಾಗುತ್ತಿದ್ದಿಲ್ಲ. ಕಾರಿಕಾಲಮ್ಮ, ಕರಿಕಾಲ ಚೋಳನೆಂಬ ಹೆಸರುಗಳನ್ನು ಮಹಾಜನರು ಎಂದೂ ಇಟ್ಟುಕೊಳ್ಳುತ್ತಿದ್ದಿಲ್ಲ. ಕರಿಯಪ್ಪ, ಕಾಳಮ್ಮ ಎಂಬ ಹೆಸರುಗಳು ಈಗಲೂ ಇವೆ. ಕರಿಯಪ್ಪನೆಂದರೆ ಬಹಳ 'ದೇಸಿ'ಯಾಯ್ತು. 'ಕೃಷ್ಣ'ನೆಂದರೆ ಅದುವೆ ಮಾನ್ಯಮಾರ್ಗ ಆಗುವುದು! ಯಾದವರ ಕರಿಯಪ್ಪನು ಕೃಷ್ಣನೆನಿಸಿ ತನ್ನ ಹೆಸರಿಗೆ ಸಂಸ್ಕೃತದಲ್ಲಿಯೂ (ಕರಿದಕ್ಕಲ್ಲದಿದ್ದರೂ 'ಕೃಷ್ಣ' ಎಂಬುದಕ್ಕೆ) ಮರ್ಯಾದೆಯನ್ನು ತಂದನು!

ಆದಕಾರಣ, ಕರಿದು ಎಂಬುದು ಅಶುಭವಾಗಿರುವುದರಿಂದ ಈ ಪ್ರದೇಶಕ್ಕೆ ಕರಿದು ನಾಡೆಂಬ ಹೆಸರು ಬಂದಿರಿಲಿಕ್ಕಿಲ್ಲವೆಂದು ಪ್ರತಿಪಾದಿಸುವುದು ಸರಿಯಾಗಲಾರದು. ಆದರೆ, ಈ ಸಂಬಂಧದಲ್ಲಿ ಎತ್ತಿದ ಇನ್ನೊಂದು ಆಕ್ಷೇಪಣೆಯು ವಿಚಾರಣೀಯವಾಗಿದೆ. ಕರ್ಣಾಟದಲ್ಲಿ ಒಳನಾಡುಗಳನ್ನು ಹೇಳುವಾಗ ಬಯಲುಸೀಮೆ, ಮಲೆನಾಡು ಎಂಬಂತೆ ಕರಿದುನಾಡು ಅಥವಾ ಕರ್ನಾಡು ಎಂದು ಹೇಳುವುದನ್ನು ಎಲ್ಲಿಯೂ ಕೇಳಿಲ್ಲ; ಕಂಡಿಲ್ಲ. ಅಥವಾ ಈ ಬಗೆಯ ಹಳೆಯ ಹೆಸರಿನ ಊರುಗಳೂ ದೊರೆತಿಲ್ಲ. ಕಾರ್ನಾಡು ಎಂಬ ಹೆಸರಿನ ಒಂದು ಊರು ಕೆಂಪುಮಣ್ಣಿನ ಕನ್ನಡಜಿಲ್ಲೆಯಲ್ಲಿದೆ! 'ಕರಿಯ ಭೂಮಿಯ ಸೀಮೆಗೆ ಎರೆನಾಡೆಂದು ಹೇಳುವರು, ಕರಿಯನಾಡೆಂದಲ್ಲ.' ಇದು ನಿಜ. ಶ್ರೀಮಾನ್ ಹ. ನಾರಾಯಣರಾಯರು ಎತ್ತಿದ ಈ ಆಕ್ಷೇಪಣೆಯು ವಿಚಾರಾರ್ಹವಾಗಿದೆ.

ಆದರೆ, ಕರಿದು ನಾಡು ಎಂಬ ವ್ಯುತ್ಪತ್ತಿಯು ಸುಳ್ಳಾದರೆ 'ಕರುನಾಡು' ನಿಜವೆಂದು ಸಿದ್ಧವಾಗಲಿಲ್ಲ. ನಾರಾಯಣರಾಯರು ತಮ್ಮ ಪಕ್ಷವನ್ನು ಸಮರ್ಥಿಸಿ ಬರೆವಾಗ 'ದೇಶೀಯರು' ತಮ್ಮ ನಾಡಿಗೆ ಕರುನಾಡು ಎಂಬ ನಾಮಕರಣವನ್ನು ಮಾಡಿರಬೇಕೆಂದಿದ್ದಾರೆ. ದೇಶೀಯರು ಎಂದರೆ ಇಲ್ಲಿ ಕನ್ನಡರೆಂದೇ ಅರ್ಥವು ನಿಶ್ಚಿತವಿದೆ. ಆದರೆ, ದುರ್ದೈವದಿಂದ 'ಕರುನಾಡು' ಎಂಬ ಪದ್ಯವು ಕನ್ನಡ ಸಾಹಿತ್ಯದಲ್ಲಿಯೇ ದೊರೆಯುವುದಿಲ್ಲ! ಹಿಂದಕ್ಕೆ ನಮ್ಮ ನಾಡಿಗೆ 'ಕರುನಾಡು' ಎಂದು ಹೇಳಿದವರು ತಮಿಳರು. ತಮಿಳ ಶಾಸನ ಸಾಹಿತ್ಯಗಳಲ್ಲಿ 'ಕರುನಾಡು' ಎಂಬ ಪದವು ಹಲವೆಡೆಗೆ ಬಂದಿದೆ.[೪] ಕನ್ನಡದಲ್ಲಿ ಒಂದೆಡೆಯಲ್ಲಿಯೂ ಇಲ್ಲ. ಡಾ. ಹಟ್ಟಿ ಕೃಷ್ಣರು ಈ ಮಾತನ್ನು ಸ್ಪಷ್ಟವಾಗಿ ಹೀಗೆ ಹೇಳಿದ್ದಾರೆ.

> Tamil tradition appears to spell the word as 'ಕರುನಾಡ' ......No instance has been found of the use of this form by Kannada people themselves.[೫]

ಈ ನಾಡಿನ ಅಚ್ಚಹೆಸರೆಂದು ಹೇಳುವ 'ಕರುನಾಡ' ಎಂಬ ಪದವು ಈ ನಾಡಿನ ಜನರಿಗೇ ಅಪರಿಚಿತವಾಗಿರಬೇಕೆ? ಅರ್ವಾಚೀನರು ಈ ಹೆಸರನ್ನು ಮರೆತಿರುವರೆಂದು ಬಾಯಿಕಟ್ಟಬಹುದು. ಆದರೆ, ನಮ್ಮ ಪ್ರಾಚೀನ ಸಾಹಿತ್ಯದಲ್ಲಿಯೂ ಇದು ಕಾಣದಿರುವುದಕ್ಕೆ ಕಾರಣವೇನು? ಅಲ್ಲದೆ ತಮಿಳರ ಹೊರತು ಕರುನಾಡಿಗರೆಂದು

ಕನ್ನಡಿಗರನ್ನು ಕರೆದವರು ನೆರೆಹೊರೆಯ ನಾಡಿನಲ್ಲಿ ಬೇರೆ ಯಾರೂ ಇಲ್ಲ. ಸಂಸ್ಕೃತ ಅಥವಾ ಪ್ರಾಕೃತ ಸಾಹಿತ್ಯದಲ್ಲಿಯೂ ಈ ಬಗೆಯ ಪ್ರಯೋಗಗಳು ಇದ್ದುದು ಬೆಳಕಿಗೆ ಬಂದಿಲ್ಲ ಆದುದರಿಂದ 'ಕರುನಾಡ' ಎಂಬ ಪದವು ಕೇವಲ ತಮಿಳರ ಪ್ರಯೋಗವೆಂದೇ ನಿಶ್ಚಿತವಾಗುತ್ತದೆ. ತಮಿಳಿನಲ್ಲಿಯೆ ಈ ಬಗೆಯ ಶಬ್ದವು ಕಾಣಸಿಕೊಳ್ಳಲಿಕ್ಕೆ ಕಾರಣವೇನು? ತಮಿಳಿನಲ್ಲಿರುವ 'ಕರುನಾಡ' ಶಬ್ದದ ನಿಜಸ್ವರೂಪವು ತಿಳಿಯಬೇಕಾಗಿದ್ದರೆ ಆ ಭಾಷೆಯ ಉಚ್ಚಾರ ಮತ್ತು ಲಿಪಿಗಳ ವೈಶಿಷ್ಟ್ಯಗಳನ್ನು ಮೊದಲು ಅರಿತುಕೊಳ್ಳಬೇಕು.

ತಮಿಳಿನ ವರ್ಗೀಯ ವ್ಯಂಜನಗಳಲ್ಲಿ ಮೊದಲ ಮತ್ತು ಕೊನೆಯವೆರಡೆ ಅಕ್ಷರಗಳುಂಟು. ವರ್ಗದ ಮೊದಲಕ್ಷರವು ಶಬ್ದದ ನಡುವೆ ಬಂದಾಗ (ಅದು ದ್ವಿತ್ವವಾಗಿಲ್ಲದಿದ್ದರೆ) ಮೂರನೆಯ ಅಕ್ಷರದಂತೆ ಉಚ್ಚರಿಸುವುದು ಅವರ ರೂಢಿ. 'ದಾತ' ಶಬ್ದವನ್ನು ತಮಿಳಿನಲ್ಲಿ 'ತಾತ' ಎಂದೇ ಬರೆಯಬೇಕಾಗುವುದು. ಏಕೆಂದರೆ ಅವರಲ್ಲಿ ಮೂರನೆಯ ವರ್ಗೀಯ ವ್ಯಂಜನಕ್ಕೆ ಬರೆಹದ ಗುರುತು ಇಲ್ಲ. ಬರೆಯುವುದು ತಾತವಾಗಿದ್ದರೂ 'ತಾದ' ಎಂದು ಓದಬೇಕಾಗುವುದು, ಏಕೆಂದರೆ ಶಬ್ದದ ನಡುವೆ ಬರುವ ವರ್ಗದ ಮೊದಲನೆಯ ಅಕ್ಷರವನ್ನು ಮೂರನೆಯ ಅಕ್ಷರದಂತೆ ಉಚ್ಚರಿಸುವುದು ಅವರ ರೂಢಿ. ಇಂತಹ ವಿಚಿತ್ರ ಪರಿಸ್ಥಿತಿಯಿರುವುದರಿಂದ ಸಂಸ್ಕೃತ ಮೊದಲಾದ ಪರಭಾಷೆಗಳಿಂದ ತಮಿಳಿನಲ್ಲಿ ಸೇರಿದ ಶಬ್ದಗಳ ಮೂಲಸ್ವರೂಪವೆ ಬದಲಾಗಿ ಅವು ಮೂಲ ತಮಿಳುನುಡಿಗಳೆಂಬ ಭ್ರಾಂತಿಯುಂಟಾದ ಉದಾಹರಣಗಳಿಗೆ ಕೊರತೆಯಿಲ್ಲ. ಆ ಶಬ್ದಗಳಿಗೆ ತಮಿಳಿನಿಂದಲೂ ಅರ್ಥವಾಗುತ್ತಿದ್ದರಂತೂ ಮಾತೆ ಮುಗಿಯಿತು! ಈಗ 'ಕರುನಾಡ' ಶಬ್ದದ ಹಣೆಬರೆಹವು ಹೀಗೆಯೆ ಆಗಿದೆ. ಸಂಸ್ಕೃತ ನಾಟ ಶಬ್ದವನ್ನು ತಮಿಳಿನಲ್ಲಿ 'ನಾಟ' ಎಂದೇ ಬರೆದರೂ ಉಚ್ಚರಿಸುವುದು 'ನಾಡ' ಎಂದು. ಈ ಬಗೆಯಾಗಿ ಕರ್ಣಾಟದೊಳಗಿನ ನಾಟವು ತಮಿಳಿನಲ್ಲಿ ನಾಡವಾಗಿರಲಿಕ್ಕೆ ಸಾಕು.

ಸಂಸ್ಕೃತದೊಳಗಿನ ಸಂಯುಕ್ತಾಕ್ಷರಗಳನ್ನು ಉಚ್ಚರಿಸಲು ಸುಲಭವಾಗಬೇಕೆಂದು ಅವನ್ನು ಬಿಡಿಸಿಹೇಳುವ ಪರಿಪಾಠವು ತಮಿಳಿನ ಬಳಗದ ಎಲ್ಲ ಭಾಷೆಗಳಲ್ಲಿಯೂ ಉಂಟು. ಅದರಲ್ಲಿಯೂ ತಮಿಳಿನಲ್ಲಿ ವಿಶೇಷ. 'ಕರ್ಣಿಕಾ' ಶಬ್ದದ ತದ್ಭವವು ತಮಿಳಿನಲ್ಲಿ ಕರುಣಿಕೈ (ಗೈ) ಆಗಿದ್ದುದನ್ನುಕಾಣಬಹುದು. 'ಗರ್ಭ'ದಿಂದ 'ಕರು' ಆಗಿದೆ. ಕರ್ತಾ ಶಬ್ದವು ಕರುತ್ತಾ ಎಂದು ರೂಪುಗೊಂಡಿದೆ.[೬] ಇದೇ ಮೇರೆಗೆ ತಮಿಳಿನಲ್ಲಿ ಒತ್ತಕ್ಷರವನ್ನು ಉಚ್ಚರಿಸಲಿಕ್ಕಾಗದೆ 'ಕರ್ಣಾಟ' (ಕರ್=ಕರು, ನಾಟ=ನಾಡ) ಕರುನಾಡ(ಟ) ಎಂಬುದಾಗಿ ಅದು ಪರಿಣಮಿಸಿದ್ದರೆ ಸೋಜಿಗವೇನು?

ಆದುದರಿಂದ, 'ಕರುನಾಡು'' ಎಂಬುದು ತಮಿಳುಭಾಷೆಯೊಳಗಿನ ಶಬ್ದವೆಂಬುದು ನಿಜವಿದ್ದರೂ ತಮಿಳಭಾಷೆಯ ಮೂಲಶಬ್ದವಲ್ಲ; ಅದು ಸಂಸ್ಕೃತ ತದ್ಭವ. ಕರ್+ನಾಡು ಎಂಬುದನ್ನು ಖಂಡಿಸಿ 'ಕರುನಾಡು' ಎಂಬ ವ್ಯುತ್ಪತ್ತಿಯನ್ನು ಮುಂದೆ ತಂದ ಶ್ರೀಮಾನ್ ಹತ್ತಂಗಡಿ ನಾರಾಯಣರಾಯರಿಗೆ ಅವರ ನಿರುಕ್ತದಲ್ಲಿ ಅವರಿಗೇ ಸಂಪೂರ್ಣ ನಂಬುಗೆಯಿಲ್ಲ. ಇದು ಸಂಸ್ಕೃತದಿಂದ ಕೆಟ್ಟು ತಮಿಳಿನಲ್ಲಿ ಬಂದ ಪದವಾಗಿರಬೇಕೆಂದು ತಾವೆ ಮನಬಿಚ್ಚಿ, ಸಂಶೋಧಕನಿಗೆ ಒಪ್ಪುವ ಸರಳಮನಸಿನಿಂದ ಯಾವ ಎಡೆತಡೆಗಳನ್ನೊಡ್ಡದೆ ಒಪ್ಪಿಕೊಂಡಿದ್ದಾರೆ.

> The Tamil word (ಕರುನಾಡಗನ್) may, however be a corruption of the Sanskrit name.[೭]

ಈ ಬಗೆಯಾಗಿ 'ಕರುನಾಡ'ನ್ನು ಎತ್ತಿಹಿಡಿದವರೆ ಅದರ ಕೈಬಿಟ್ಟಿದ್ದಾರೆ. ಇಂತಹ ಸಂದಿಗ್ಧಸ್ಥಿತಿಯಲ್ಲಿ ಮೇಲೆ ಹೇಳಿದ ಎಲ್ಲ ಕಾರಣಗಳ ಸಲುವಾಗಿಯೂ 'ಕರುನಾಡು' (ತಪ್ಪಲಸೀಮೆ)ಎಂಬ ಪಕ್ಷವು ಬಹಳ ದುರ್ಬಲವಾಗಿದೆಯೆಂದು ಹೇಳದೆ ಗತಿಯಿಲ್ಲ.

ಇನ್ನು ಕರಂ+ನಾಡು ಎಂಬ ಪಕ್ಷ. ಈ ಪಕ್ಷದ ಪ್ರಮುಖ ನೇತಾರರು ಮಾನ್ ಶ್ರೀ ಎಂ. ಗೋವಿಂದ ಪೈಗಳವರು. ಇವರು ೧೯೩೦ರ ಪ್ರಬುದ್ಧಕರ್ಣಾಟಕದ ಒಂದು ಲೇಖನದಲ್ಲಿ ಈ ಮಾತನ್ನು ಸ್ವಲ್ಪ ಸೂಚಿಸಿದ್ದರು. ಆದರೆ, ಕರ್ಣಾಟ-ಕರ್ನಾಟ ವಾದದ ಪ್ರಸಂಗದಲ್ಲಿ ತಮ್ಮ ವಿಚಾರಗಳನ್ನೆಲ್ಲ ಸಂಪೂರ್ಣವಾಗಿ

ವಿಚಾರಿಸಿ ಅನೇಕ ಆಧಾರಗಳೊಡನೆ ಬಹಳ ಪ್ರೌಢವಾದ ಲೇಖನವನ್ನು ಪ್ರಕಟಿಸಿದ್ದಾರೆ.[೮] ಶ್ರೀ ರಾ. ಹ. ದೇಶಪಾಂಡೆಯವರು ತಾವು ಬರೆದ ಕರ್ನಾಟಕ ಸಾಮ್ರಾಜ್ಯವೆಂಬ ಗ್ರಂಥದಲ್ಲಿ ಮೂರು ಮಹಾರಾಷ್ಟ್ರಗಳನ್ನು ಕುರಿತು ಅಡಿಟಿಪ್ಪಣಿ ಬರೆಯುವಾಗ ಕರು=ಮಹಾ, ನಾಡು=ರಾಷ್ಟ್ರ; ಕರುನಾಡು-ಕರ್ನಾಟವೆಂದರೆ ಮಹಾರಾಷ್ಟ್ರ ವೆಂಬ ಮಾತನ್ನು ಕಾಣಿಸಿದ್ದಾರೆ (೧೯೨೭).[೯] ಮತ್ತು ಮಿ. ಎ. ಮಾಸ್ತರ, I.C. S. ಇವರು ೧೯೨೮ರಲ್ಲಿ ಒಂದು ಲೇಖನವನ್ನು ಬರೆದು ಇದೇ ಮಾತನ್ನೇ ಇನ್ನೊಂದಿಷ್ಟು ಸ್ಪಷ್ಟೀಕರಿಸಿರುವರು.

> Karu means not only tall but great, and it seems highly probable that the Prakrit-speaking inhabitants of the north of Deccan high lands simply translated the word into Maharshtra (ಮಹಾರಾಷ್ಟ್ರ) or Maratha (ಮರಾಠ) to designate the area from which they came.[೧೦]

ಶ್ರೀ ಎಂ. ಗೋವಿಂದ ಪೈಗಳ ಅಭ್ಯಾಸವು ಅಗಾಧವಾದುದು.ಅವರ ಅಧ್ಯಯನವು ಎಷ್ಟೊಂದು ವಿಶಾಲವಾದದ್ದಿರುವುದೆಂಬುದಕ್ಕೆ ಅವರ ಬರೆಹಗಳೇ ಸಾಕ್ಷಿ. ಮೊದಲಿನ ಇಬ್ಬರ ಲೇಖನಗಳು ಬರಿ ಟಿಪ್ಪಣಿಗಳಾಗಿದ್ದು, ಶ್ರೀ ಪೈಗಳವರ ಈ ಬರೆಹವು ಬಹಳ ವಿಸ್ತೃತವಾಗಿದೆ. ಪ್ರಾಚೀನ ಕಾಲದಲ್ಲಿ ಮಹಾರಾಷ್ಟ್ರಕ್ಕೆ ಕರ್ನಾಟದಿಂದ ಭಿನ್ನವಾದ ಸ್ವತಂತ್ರ ಅಸ್ತಿತ್ವವೇ ಇದ್ದಿಲ್ಲವೆಂಬ ಮಾತು ಶ್ರೀ ಪೈಗಳ ಈ ಲೇಖನದಲ್ಲಿ ಬಹಳ ಚೆನ್ನಾಗಿ ಹೊರಬಂದಿದೆ. ಇದನ್ನು ಮೂಲದಲ್ಲಿ ಓದುವುದರಲ್ಲಿಯೆ ಸ್ವಾರಸ್ಯವಿದೆ. ಶ್ರೀ ಪೈಗಳವರು ಕರ್ನಾಟ ಶಬ್ದದ ನಿಷ್ಪತ್ತಿಯನ್ನು ಕುರಿತು ಹೇಳಿದ ಮುಖ್ಯಾಂಶಗಳೇನಂದರೆ:

> ಕರಂ, ಕರು, ಕಡು ಎಂಬಿವೆಲ್ಲವೂ ದೊಡ್ಡ, ವಿಸ್ತೀರ್ಣ, ಮಹಾ ಎಂಬ ಅರ್ಥದ ಪದಗಳು. ಆದುದರಿಂದ ಕರುನಾಡು ಎಂದರೆ ಮಹಾರಾಷ್ಟ್ರವೆಂದರ್ಥ. ಕರು+ ನಾಡು=ಕರ್+ನಾಡು=ಕರ್ನಾಡು ಕರ್ನಾಡು (ದೊಡ್ಡದೇಶ) ಎಂಬ ಕನ್ನಡದ ಸಮಾಸಪದವೆ ಸಂಸ್ಕೃತದಲ್ಲಿ ಕರ್ಣಾಟ ಎಂದು ಆಗಿರಬೇಕು. ಕರ್ಣಾಟದ ನಿಷ್ಪತ್ತಿಯನ್ನು ಸೋಸುವಲ್ಲಿ ಕರ್ಣಾಟಕವೂ ಮಹಾರಾಷ್ಟ್ರವೂ ಏಕಾರ್ಥಕ ಭಿನ್ನನಾಮಗಳೆಂಬ ಊಹೆಗೆ ಸಾಕಷ್ಟು ಬಲವಿದೆ. ತಾರಾತಂತ್ರ ಎಂಬ ಗ್ರಂಥದಲ್ಲಿ ಮಹಾರಾಷ್ಟ್ರದೇಶದ ಹೆಸರು ಕರ್ಣಾಟ ಎಂದೂ, ಕರ್ಣಾಟವೂ ಮಹಾರಾಷ್ಟ್ರವೂ ಒಂದೇ ದೇಶವೆಂದೂ ಹೇಳಿದೆ. ಪುಲಿಕೇಶಿಯ ಮೂಲರಾಜ್ಯವು ಕನ್ನಡನಾಡೇ ಆಗಿದ್ದು, ಆತನ ರಾಜಧಾನಿಯಾದ ವಾತಾಪಿ (ಬಾದಾಮಿ) ಅಚ್ಚಕನ್ನಡ ನಾಡಿ ನಲ್ಲಿಯೇ ಇದ್ದು, ಆತನು ಈ ಮೇಲೆ ಕಂಡಿರುವಂತೆ ಕರ್ಣಾಟಕ ಚಕ್ರವರ್ತಿಯೆ ಆಗಿದ್ದರೂ ಆತನ ಶಾಸನದಲ್ಲಿ ತಾನು ಮೂರು ಮಹಾರಾಷ್ಟ್ರಗಳ ಒಡೆಯನೆಂದು ಹೇಳಿದೆ. ಆತನ ಆಳಿಕೆಯಲ್ಲಿ ಸಂಚರಿಸಿದ ಇತ್ಸಿಂಗನು ಆತನನ್ನು ಮಹಾರಾಷ್ಟ್ರದ ಅರಸನೆಂದಿರುವನು. ಇವೆಲ್ಲ ಕಾರಣಗಳಿಂದ ಮಹಾರಾಷ್ಟ್ರವೂ ಕರ್ಣಾಟಕವೂ ಒಂದೇ ರಾಜ್ಯದ ಭಿನ್ನನಾಮಗಳೇ ಸರಿ, ಎಂದು ಸಿದ್ಧವಾಗುತ್ತದೆ. ಆದುದರಿಂದ ಕರ್ಣಾಟ=ಕರುನಾಡು (ಮಹಾರಾಷ್ಟ್ರ) ಎಂಬುದು ನಿಶ್ಚಿತ.

ಶ್ರೀಮಾನ್ ಪೈಗಳವರ ಸುಂದರವಾದ ಈ ವಿಚಾರಸರಣಿಯು ಬಹಳ ಮೋಹಕವಾಗಿದೆ; ಒಪ್ಪಿಕೊಂಡು ಬಿಡಬೇಕೆಂದೂ ಮನಸಾಗುತ್ತದೆ. ಆದರೆ, ಶ್ರೀಮಾನ್ ಹ. ನಾರಾಯಣರಾಯರ 'ಕರುನಾಡು' (ಎತ್ತರದ ದೇಶ) ಎಂಬ ನಿರುಕ್ತವನ್ನು ಕುರಿತು ಹೇಳಿದ ಆಕ್ಷೇಪಣೆಗಳ ಇಲ್ಲಿಯೂ ಎದ್ದು ನಿಲ್ಲುತ್ತಲಿವೆ. ಕರುನಾಡು ಎಂಬ ಪದವು ಕೇವಲ ತಮಿಳರದು. ತಮಿಳರ ಹೊರಗೆ ಯಾರ ಬಾಯಿಯಲ್ಲಿಯೂ ಈ ಮಾತಿಗೆ ಎಡೆಯಿಲ್ಲ! ತೆಲುಗು,

ಮರಾಠಿ, ತುಳು, ಕೊಡಗು ಭಾಷೆಗಳಲ್ಲಿ ಒಂದರಲ್ಲಿಯೂ ಕರುನಾಡ ಈ ಪದವು ಕೇಳಲಿಕ್ಕೆ ಸಿಕ್ಕುವುದಿಲ್ಲ. ಸುಮಾರು ೧೫೦೦ ವರುಷಗಳ ಕನ್ನಡ ಸಾಹಿತ್ಯದಲ್ಲಿ ಎಲ್ಲಿ ಒಂದೆಡೆಗಾದರೂ 'ಕರುನಾಡು'ಬಂದಿದ್ದರೆ ಆಣೆ! ಇದರಿಂದ ಕನ್ನಡದ ನಾಮಕರಣ ವಿಧಿಯು ಕೇವಲ ತಮಿಳರಿಂದಲೇ ಆಯ್ತೆಂದು ಊಹಿಸಬೇಕಾಗುತ್ತದೆ. ಪ್ರಾಚೀನ ಕಾಲದಲ್ಲಿ ಆ ಹೆಸರೆ ಕೆಲಕಾಲದವರೆಗಾದರೂ ಬಳಕೆಯಲ್ಲಿದ್ದು ಮುಂದೆ ಕಾಲಕ್ರಮದಿಂದ ಕರುನಾಡು-ಕರ್ನಾಡು-ಕರ್ಣಾಟವೆಂದಾಗಿರಬೇಕಷ್ಟೆ? ಕೆಲಕಾಲದ ವರೆಗೆ ಸಾರ್ವತ್ರಿಕ ಪ್ರಚಾರದಲ್ಲಿದ್ದ (?) 'ಕರುನಾಡ' ಎಂಬ ಪದವು ಉಳಿದ ನೆರೆಹೊರೆಯ ಒಂದಾದರೂ ಭಾಷೆಯಲ್ಲಿ ಒಂದೆಡೆಗಾದರೂ ಕಾಣಿಸಿಕೊಳ್ಳಬೇಕಾಗಿದ್ದಿತಲ್ಲವೆ?

ಇನ್ನೊಂದು ವಿಚಾರ. ತಮಿಳಿನಲ್ಲಿ ನಮ್ಮ ನಾಡಿಗೆ ಇರುವ ಹೆಸರುಗಳನ್ನು ಸ್ವಲ್ಪ ಹೊಂದಿಸಿ, ಹೋಲಿಸಿ ನೋಡುವಂತಿದೆ. ಕರುನಾಡು, ಎಂಬ ಪದದಂತೆ ಕನ್ನಾಡು ಮತ್ತು ಕನ್ನಡ ಇವುಗಳೂ ತಮಿಳಿನಲ್ಲಿವೆ. ಕನ್ನಾಡು-ಮತ್ತು ಕನ್ನಡ ಇವೆರಡೂ ಒಂದೇ ಎಂಬ ವಿಚಾರವು ಹಿಂದೆ ಬಂದಿದೆ. ಕನ್ನಡ (ಕನ್ನಾಡು) ಇದರ ಪರಂಪರೆಯು ನಮ್ಮ ಸಾಹಿತ್ಯದಲ್ಲಿಯೂ ಇದೆ; ತೆಲುಗು, ತುಳು, ಆರೆ ಮೊದಲಾದ ಭಾಷೆಗಳಲ್ಲಿಯೂ ಈ ಶಬ್ದವುಂಟು. ಶಾರದಾತನಯನು (೧೩ನೆಯ ಶತಮಾನ) ಸಂಸ್ಕೃತದ ಶ್ಲೋಕದಲ್ಲಿ ಕೂಡ 'ಕನ್ನಡ', ಎಂಬುದನ್ನು ಪ್ರಯೋಗಿಸಿದ್ದಾನೆ. ಆದರೆ ಕರುನಾಡು ಎಂಬ ಪ್ರಯೋಗವು ಮಾತ್ರ ತಮಿಳಿನ ಹೊರಗೆ ಬೇರೆ ಭಾಷೆಗಳಲ್ಲಿ ಎಲ್ಲಿಯೂ ಇಲ್ಲ. 'ಕರುನಾಡ' ಎಂಬುದು ಕನ್ನಡ ಅಥವಾ ಕನ್ನಾಡ ಇದಕ್ಕೆ ಅಷ್ಟು ಹತ್ತಿರದ್ದಲ್ಲ. ಈ ಮೊದಲು ವಿವರಿಸಿದಂತೆ-ಆದೇಕೆ? ಶ್ರೀ ಹ. ನಾರಾಯಣರಾಯರೆ ಒಪ್ಪಿಕೊಂಡಿರುವಂತೆ ಕರುನಾಡು, ಇದು ಕರ್ಣಾಟ ಇದರ ತಮಿಳ ರೂಪವು. ಆದುದರಿಂದ, ಕನ್ನಾಡ, ಕನ್ನಡಗಳಂತೆ ಕರ್ಣಾಟ, ಕರುನಾಡ ಇವೆರಡೂ ಒಂದು.

ತಮಿಳಿನಲ್ಲಿ ಈ ಬಗೆಯ ಎರಡೆರಡು ರೂಪಗಳು ಬಳಕೆಯಲ್ಲಿದ್ದುದರ ಬೇರೆ ಉದಾಹರಣಗಳೂ ಉಂಟು. ಪ್ರತ್ಯಕ್ಷ 'ತಮಿಳ' ಶಬ್ದವೇ ಇದಕ್ಕೆ ಸಾಕ್ಷಿಯಾಗಿದೆ. 'ತಮಿಳ' ಶಬ್ದವು ದಮಿಳ-ದ್ರಮಿಡ-ದ್ರವಿಡ ಎಂದು ರೂಪಾಂತರಗಳನ್ನು ಹೊಂದುತ್ತ ಕೊನೆಯ ರೂಪದಲ್ಲಿ ಸಂಸ್ಕೃತಸಾಹಿತ್ಯದಲ್ಲಿ ಕಾಣಿಸಿಕೊಳ್ಳುತ್ತಿದೆಯೆಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ. ತಮಿಳ ಎಂಬುದು ಮೂಲಪದ; ದ್ರವಿಡ ಎಂಬುದು ಸಂಸ್ಕೃತ. 'ತಮಿಳ' ಎಂಬ ಮೂಲ ಹೆಸರು ಇರುವಾಗಲೂ ಸಂಸ್ಕೃತದ 'ದ್ರವಿಡ' ಎಂಬುದು ತಮಿಳೀಕರಣವನ್ನು ಹೊಂದಿ ಮತ್ತೆ ಆ ಭಾಷೆಯಲ್ಲಿ 'ತಿರಮಿಡ' ಎಂಬ ರೂಪದಿಂದ ಸೇರಿಕೊಂಡುದು ಕಂಡುಬರುತ್ತದೆ! ಜುಲೆಸ್ ಬ್ಲೊಕ್ ಎಂಬ ಸಂಶೋಧಕರು 'ತಿರಮಿಡ'ವು ಹೇಗೆ ಆಯ್ತೆಂಬುದನ್ನು ಕುರಿತು ಬರೆದ ಟಿಪ್ಪಣಿಯಿಂದ[೧೧] ಕನ್ನಡ (ಕನ್ನಾಡು)ಎಂಬ ಮೂಲಪದವು ಇರುವಾಗಲು 'ಕರುನಾಡು' ಎಂಬುದು ಹೇಗೆ ತಲೆದೋರಿರಬೇಕೆಂಬುದರ ಕಾರಣಮೀಮಾಂಸೆಯು ಚೆನ್ನಾಗಿ ಗೊತ್ತಾಗುವಂತಿದೆ. ಶ್ರೀಮಾನ್ ಗೋವಿಂದ ಪೈಗಳು ಅತ್ಯಂತ ಪರಿಶ್ರಮದಿಂದ ಹಲವು ಬಗೆಯ ಸಾಧನ ಸಂಪತ್ತುಗಳನ್ನು ಸಂಗ್ರಹಿಸಿ ಒಂದು ಸುಂದರವಾದ ವಿಚಾರಮಂದಿರವನ್ನು 'ಕರುನಾಡು' ಈ ಅಡಿಗಲ್ಲಿನ ಮೇಲೆ ನಿಲ್ಲಿಸಿದರು. ಆದರೆ, 'ಕರುನಾಡು' ಎಂಬುದೆ ವಿಕೃತವಾದ ಪದವಾಗಿದ್ದುದರಿಂದ ಶ್ರೀಮಾನ್ ಪೈಗಳವರ ಲೇಖನದ ಮೂಲಾಧಾರವೆ ಸಡಿಲಿದಂತಾಗಿದೆ. ಕರ್ಣಾಟ ಮತ್ತು ಮಹಾರಾಷ್ಟ್ರಗಳು ಪ್ರಾಚೀನಕಾಲದಲ್ಲಿ ಅಭಿನ್ನವಾಗಿದ್ದುದು ನಿಜ. ಇದರ ವಿವರಣೆಯು ೨ನೆಯ ಅಧ್ಯಾಯದಲ್ಲಿಯೂ ಕೊನೆಯ ಅಧ್ಯಾಯದಲ್ಲಿಯೂ ಬಂದಿದೆ. ಆದರೆ, ಅದರ ಮೂಲಕವಾಗಿ ಮಹಾರಾಷ್ಟ್ರ ಶಬ್ದವು ಕರ್ಣಾಟ ಎಂಬರ್ಥದ ಒಂದು ಶಬ್ದದ ಭಾಷಾಂತರವೇ ಆಗಿರಬೇಕೆಂದು ತರ್ಕಿಸುವುದು ಹೇಗೆ ತಾನೆ ಸರಿಯಾದೀತು?

ಕೀರ್ತಿಶೇಷರಾದ ಶ್ರೀಮಾನ್ ಆರ್. ನರಸಿಂಹಾಚಾರ್ಯರ ಪಂಥವು ಕಾಲಾನುಕ್ರಮದಲ್ಲಿ ಐದನೆಯದಾಗಿದೆ. ಕವಿಚರಿತೆಯ ಮೂರನೆಯ ಭಾಗದ ಮುನ್ನುಡಿಯಲ್ಲಿಯೂ ಇಂಗ್ಲೀಷಿನಲ್ಲಿ ಬರೆದ ಕನ್ನಡಭಾಷೆಯ ಇತಿಹಾಸವೆಂಬ ಗ್ರಂಥದಲ್ಲಿಯೂ ಶ್ರೀ ಆಚಾರ್ಯರು ತಮ್ಮ ವಿಚಾರಗಳನ್ನು ಬಿಡಿಸಿಹೇಳಿದ್ದಾರೆ. ಇವರ ಅಭಿಪ್ರಾಯದಂತೆ 'ಕನ್ನಡ'ವೇ ಮೂಲಶಬ್ದ, ಅದರಿಂದ ಕರ್ಣಾಟವೆಂದು ಸಂಸ್ಕೃತದಲ್ಲಿ ರೂಪಾಂತರವಾಯಿತು.

"ಕನ್ನಡಿಗರು ತಮ್ಮ ಭಾಷೆಯನ್ನು ಕರಿಯ ನಾಡಿನ ಭಾಷೆ ಎಂದು ಕರೆದಿರಲಾರರು. ತಮಿಳರೂ, ತೆಲುಗರೂ, ತಮ್ಮತಮ್ಮ ಭಾಷೆಗಳ ಹೆಸರುಗಳನ್ನು ಮಾಧುರ್ಯ ವಾಚಿಯಾದ ಪದಗಳಿಂದ (ತಮಿಳ್, ತೇನೆ) ಹುಟ್ಟಿದುವೆಂದು ಹೇಳುತ್ತಾರೆ. ಕನ್ನಡಿಗರೂ ತಮ್ಮ ಭಾಷೆಯ ಹೆಸರು ಒಂದು ಸುಗುಣವಾಚಿಯಾದ ಶಬ್ದ ದಿಂದ ಹುಟ್ಟಿತೆಂದು ಭಾವಿಸಿದರೆ, ಆಕ್ಷೇಪಣೆಗೆ ಕಾರಣವಿಲ್ಲ. ಈ ಶಬ್ದವು ಪರಿಮಳವಾಚಿಯಾದ ಕಮ್ಮಿತು ಎಂಬುದು. ಕಮ್ಮಿತು+ನಾಡು ಎಂಬ ಪದಗಳು ಸೇರಿ ಕನ್ನಾಡು ಎಂದು ಆಗಿದೆ. ಕನ್ನಾಡು ಎಂಬುದು ಕನ್ನಡು ಎಂಬುದಾಗಿ ಕೊನೆಗೆ ಕನ್ನಡ ಎಂಬ ರೂಪವನ್ನು ಹೊಂದಿತು. ಅಂತು ಕನ್ನಡ ಎಂಬ ಪದಕ್ಕೆ ಪರಿಮಳ ವಿಶಿಷ್ಟವಾದ ದೇಶದ ಭಾಷೆಯೆಂದು ಅರ್ಥವಾಗುವುದು. ಕನ್ನಡ (ದೇಶ)ವು ಗಂಧದ ಮರದ ಕಾಡುಗಳಿಗೂ ಪದ್ಮಾಕರಗಳಿಗೂ ಪ್ರಸಿದ್ಧಿಯನ್ನು ಪಡೆದಿರುವು ದರಿಂದ ಈ ವಿಶೇಷಣವು ಅದಕ್ಕೆ ಅನುರೂಪವಾದುದು ಎಂಬುದರಲ್ಲಿ ಸಂಶಯವಿಲ್ಲ."[೧೨]

ಶ್ರೀಮಾನ್ ಆಚಾರ್ಯರು ತಮ್ಮ ಅಭಿಪ್ರಾಯಕ್ಕೆ ಪೋಷಕವೆಂದು ಶ್ರೀ ಆರ್. ತಾತಾಚಾರ್ಯ, ಎಂ. ಎ. ಇವರು ಬರೆದ ಉದ್ದಾಯನಚರಿತೆಯೊಳಗಿನ ಒಂದು ಪದ್ಯವನ್ನೇ ಉದಹರಿಸಿದ್ದಾರೆ.

ಕಮ್ಮಿತಾದುದು ನಾಡುನಡೆಯಿಂ । ಕಮ್ಮಿತಾದುದು ನಾಡುನುಡಿಯಿಂ।
ಕಮ್ಮಿತಾದುದು ಚಂದನೋರ್ವೀರುರುದಿನೀ ನಾಡು॥
ಕಮ್ಮಿತಾದುದು ಕಮ್ಮಯಿಸುವಾ। ಕಮ್ಮರಲ್ಗಳಿನಿತು ಕಂಪಿಂ।
ಕಮ್ಮಿತಲ್ಲದೆ ಕರ್ಪು ಕನ್ನಡಕೆಂತು ಸಮನಿಸಿತು?॥

ಕರ್ರನೆಯ ನಾಡು ಎನ್ನುವುದಕ್ಕಿಂತ ಕಮ್ಮನೆಯ ನಾಡು ನಮ್ಮದು ಎಂದರೆ ಪ್ರತಿಯೊಬ್ಬ ಕನ್ನಡಿಗನೂ ಅಭಿಮಾನಪಡತಕ್ಕ ಮಾತೇ ಸರಿ. ಆದರೆ, ನಮ್ಮ ಅಭಿಮಾನಕ್ಕೆ ಪೋಷಕವಾದ ಸಂಗತಿಗಳೆಲ್ಲ ಸತ್ಯವಾದುವುಗಳೇ ಇರುವವೆಂಬ ನಿಶ್ಚಿತವಿಲ್ಲ. ತಮ್ಮ ನಾಡು, ತಮ್ಮ ನುಡಿಗಳಲ್ಲಿ ಅಭಿಮಾನ ಪ್ರೀತಿಗಳು ಹೆಚ್ಚುವುದಕ್ಕಾಗಿ ಕೆಲವೊಂದು ಕಾಲದಲ್ಲಿ ಈ ಬಗೆಯ ಅರ್ಥವನ್ನು ಮಾಡಬಹುದು; ಹಾಡುಗಳನ್ನು ಕಟ್ಟಬಹುದು. ಆದರೆ, ಶಾಸ್ತ್ರೀಯ ದೃಷ್ಟಿಯಿಂದ ವಿವೇಚಿಸುವಾಗ, ಸತ್ಯವನ್ನು ಅರಿತುಕೊಳ್ಳಲು ಹವಣಿಸುತ್ತಿರುವಾಗ ಈ ಬಗೆಯ ಅಭಿಮಾನ ಆವೇಶಗಳಿಗೆ ಸ್ವಲ್ಪವೂ ಎಡೆಯನ್ನು ಕೊಡಲಾಗದು. "ತಮಿಳರೂ ತೆಲುಗರೂ ತಂತಮ್ಮ ಭಾಷೆಯ ಹೆಸರುಗಳನ್ನು ಮಾಧುರ್ಯವಾಚಿ ಪದಗಳಿಂದ ಹುಟ್ಟಿದುವೆಂದು ಹೇಳುವರು; ಹಾಗೆ ಕನ್ನಡಿಗರೂ ಹೇಳಿದರೆ ಆಕ್ಷೇಪಣೆಗೆ ಕಾರಣವಿಲ್ಲ." ಎಂದು ಶ್ರೀಮಾನ್ ಆಚಾರ್ಯರು ಹೇಳುವರು. ಆದರೆ, ಈ ತರ್ಕಪದ್ಧತಿಯೆ ಸದೋಷವಾಗಿದೆ. ತಮಿಳರೂ ತೆಲುಗರೂ ತಮ್ಮ ಭಾಷೆಗಳು ಜೇನಿನಿಂದ ಹುಟ್ಟಿದವು, ಅಮೃತದಿಂದಾದುವು ಎಂದು ಮುಂತಾಗಿ ಹೇಳಿದರೆ ನಾವೂ ಅದರಂತೆಯೆ ಏಕೆ ಹೇಳಬೇಕು? ಅವರು ಹಾಗೆ ಹೇಳುವುದು ಸರಿಯಾದುದು, ಶಾಸ್ತ್ರೀಯವಾದುದು ಎಂದು ಯಾರು ಹೇಳುವರು? ತಮಿಳರೂ ತೆಲುಗರೂ ತಮ್ಮ ಭಾಷೆಗಳು ಮಾಧುರ್ಯವಾಚಿ ಪದಗಳಿಂದ ಹುಟ್ಟಿದುವೆಂದು ಹೇಳುವುದೇ ಮೊದಲು ತಪ್ಪು ಆಗಿದ್ದರೆ ? ನಾವೂ ಅದೇ ಬಗೆಯ ತಪ್ಪನ್ನು ಏಕೆ ಮಾಡಬೇಕು?

'ತೆಲುಗು' ಎಂಬ ಪದವು ಮೂಲದಲ್ಲಿ ದೇಶವಾಚಕವೊ ಭಾಷಾವಾಚಕವೊ? ಆರ್. ನರಸಿಂಹಾಚಾರ್ಯರ ಮೇಲಣ ಅವತರಣಿಕೆಯಿಂದ ಎಷ್ಟೋ ತೆಲುಗರು 'ತೆಲುಗು' ಈ ಶಬ್ದವು ಭಾಷಾವಾಚಕವೆಂದು ನಂಬಿದಂತೆ ತೋರುತ್ತದೆ! ಮೊದಲು ಭಾಷಾವಾಚಕವಾಗಿದ್ದರೆ, ಈ ತೆಲುಗುಭಾಷೆಯನ್ನು ಆಡುವವರ ನಾಡು ಎಂದು ಆ ನಾಡಿಗೀ ಹೆಸರು ಬಂದಿತೆಂದು ಊಹಿಸಬೇಕಾಗುತ್ತದೆ. ಆದರೆ, ಇದು ಜಗತ್ತಿನ ಐತಿಹಾಸಿಕ ಕ್ರಮಕ್ಕೆ ವಿಪರೀತವಾದ ಮಾತು. ಭಾಷೆಯಿಂದ ಯಾವ ದೇಶಕ್ಕೂ ಹೆಸರು ಬಂದಿಲ್ಲ. ಮೂಲದಲ್ಲಿ ತೆಲುಗು ಎಂಬುದು

ಭಾಷಾವಾಚಕವಾದ ಪದವೇ ಅಲ್ಲ. ಆದುದರಿಂದ ತೆಲುಗು ಎಂದರೆ (ತೇನ್=ಜೇನ್) ಜೇನಿನಂತಹ ನುಡಿ ಎಂದು ಅರ್ಥಮಾಡುವುದು ವಿಪರೀತ; ಬಾದಾರಾಯಣಸಂಬಂಧ. ಬೇಕಾದರೆ ಜೇನಿನಂತಹ ನಾಡು ಎನ್ನಬಹುದು. ಆದರೆ, ಹಾಗೆ ಹೇಳುವುದಕ್ಕೂ ನಾಲಗೆಯು ಏಳದು. ಏಕೆಂದರೆ,ಅನೇಕ ತೆಲುಗು ವಿದ್ವಾಂಸರೆ ತ್ರಿ(ಕ)ಲಿಂಗ ಎಂಬುದರಿಂದ ತೆಲುಗು ಶಬ್ದವು ಸಿದ್ಧವಾದುದನ್ನು ಹೇಳುತ್ತಾರೆ. ಪ್ರೊ. ಲೆವಿಯವರ ಅಭಿಪ್ರಾಯದಂತೆ ಕಲಿಂಗವು ತ್ರಿಕಲಿಂಗವಾಗಿ, ಅದುವೆ ಮುಂದೆ ತ್ರಿ(ಕ)ಲಿಂಗ-ತಿಲಿಂಗ-ತೆಲಂಗ-ತೆಲುಗು ಆಯ್ತು.[೧೩]

ತೆಲುಗರು, ತಮ್ಮ ನುಡಿಯ ಹುಟ್ಟಿಗೆ ಕಣ್ವಋಷಿಯೆ ಕಾರಣನೆಂದು ಹಲವು ಬಾರಿ ಹೆಮ್ಮೆಯಿಂದ ಹೇಳಿಕೊಳ್ಳುವರು. ತಮಿಳರು ಅಗಸ್ತ್ಯನಿಂದ ತಮ್ಮ ಭಾಷೆ ಹುಟ್ಟಿತೆನ್ನುವರು. ಋಷಿಯ ಅಮೃತವಾಣಿಯಾದ್ದರಿಂದ ಪರಮಪವಿತ್ರವೆಂದೂ ಹೇಳುವರು. ಇದೀಗ ಇನ್ನೊಂದು ತೊಡಕು. ಒಮ್ಮೆ ತಮ್ಮ ನುಡಿಗಳು ತೆಲುಗು, ತಮಿಳ್ ಎಂಬ ಮಾಧುರ್ಯವಾಚಿ ಪದಗಳಿಂದ ಆದುವು ಎನ್ನುವರು; ಇನ್ನೊಮ್ಮೆ ಋಷಿಗಳೇ ತಮ್ಮ ಭಾಷೆಗೆ ಕಾರಣರು ಎನ್ನುವರು! ಎರಡು ಮಾತಿನ ಹೇಳಿಕೆಯನ್ನು ನಂಬುವುದು ಹೇಗೆ? ಒಂದೇ ಕಾಲಕ್ಕೆ ಎರಡೂ ನಿಜವಾಗಿರಲಾರವು. ಒಂದು ನಿಜವಿದ್ದರೆ ಒಂದು ಸುಳ್ಳಾಯ್ತು. ಆವುದು ನಿಜ? ಆವುದು ಸುಳ್ಳು?

ಆಧುನಿಕ ಶಾಸ್ತ್ರೀಯ ದೃಷ್ಟಿಯಿಂದ ವಿಚಾರಿಸಿದರೆ ಎರಡೂ ತೊದಳು; ಎರಡೂ ಅಶಾಸ್ತ್ರೀಯ. ಒಬ್ಬನಿಂದಲೇ ಒಂದು ಭಾಷೆಯು ರಚಿಸಲ್ಪಡುವುದೇ ಸಾಧ್ಯವಿಲ್ಲ. ತೆಲುಗು, ತಮಿಳು ಎರಡೂ ಮೂಲದಲ್ಲಿ ಭಾಷಾ ವಾಚಕಗಳಲ್ಲ. ಆರ್. ನರಸಿಂಹಾಚಾರ್ಯರು, ತೆಲುಗು, ತಮಿಳಿನ ಅಭಿಮಾನಿಗಳು ಹೇಳುವ ವ್ಯುತ್ಪತ್ತಿಯನ್ನು ನೆರೆನಂಬಿ ಅವುಗಳ ಜಾಡುಹಿಡಿದು ನಡೆದುದರಿಂದ ಇವರ ನಿರುಕ್ತವು ಕೂಡ ಅಭಿಮಾನಯುಕ್ತ ವಾಗಿದ್ದರೂ ದಾರಿತಪ್ಪಿದೆ.

'ಕನ್ನಡ' ಎಂಬ ಪದವನ್ನೆ ಮೂಲಶಬ್ದವನ್ನಾಗಿ ಇಟ್ಟುಕೊಂಡು ಇನ್ನೊಂದು ಬಗೆಯಿಂದ ನಿರುಕ್ತ ಹೇಳಿದ ಒಂದು ಲೇಖನವು ನನ್ನ ಗೆಳೆಯರಾದ ಶ್ರೀಮಾನ್ ಬೇಂದ್ರೆ ಮತ್ತು ಬೆಟ್ಟಗೆರೆಯವರಿಂದ ಬರೆಯಲ್ಪಟ್ಟಿತ್ತು.[೧೪] ಕರ್ಣಾಟ ಎಂಬುದು ಮೂಲಶಬ್ದವಾಗಿರದೆ, ಕನ್ನಡವೆ ಕರ್ಣಾಟದ ಆಡಿನುಡಿಯಾಗಿರಬೇಕು ಎಂಬುದನ್ನು ಒಂದು ಹೊಸಬಗೆಯಿಂದ ವಿವರಿಸಿದ್ದಾರೆ.

> "ಸಂಸ್ಕೃತಪದಭೂಯಿಷ್ಠವಾದ ಕವಿರಾಜಮಾರ್ಗದಲ್ಲಿ ನೃಪತುಂಗನು 'ಕಾವೇರಿಯಿಂದಂ ಆ ಗೋದಾವರಿವರಂ ಇರ್ದ ನಾಡು ಅದು ಕನ್ನಡದೊಳ್ ಭಾವಿಸಿದ ಜನಪದಂ' ಎಂದೂ 'ನಡುವಣ ನಾಡೆ ಕನ್ನಡದತಿರುಳ್' ಎಂದೂ ಮಾತ್ರ ಹೇಳಿರುವನು. ಕರ್ಣಾಟದ ಹೆಸರನ್ನೇ ಎತ್ತಿಲ್ಲ. ಆಂಡಯ್ಯನು ಕನ್ನಡ ಮೆನಿಪ್ಪಾನಾಡನೆ ಬಣ್ಣಿಸುವನು. ಸಂಗೀತಶಾಸ್ತ್ರಜ್ಞರು ಒಂದೊಂದು ರಾಗಕ್ಕೆ ಒಂದೊಂದು ದೇಶದ ಹೆಸರನ್ನು ಕೊಟ್ಟಿದಾರೆ. ನಮ್ಮ ದೇಶದ ಹೆಸರನ್ನಿಡುವಾಗ 'ಕನ್ನಡ ರಾಗ' ಎಂದರೆ ಹೊರತು 'ಕರ್ಣಾಟ ರಾಗ' ಎನಲಿಲ್ಲ. ಎಲ್ಲೂರು (ಸುಪ್ರಸಿದ್ಧ ಶಿಲ್ಪಕಲೆಯ ಎಲೋರಾ) ಇರುವ ಪ್ರದೇಶಕ್ಕೆ ಕನ್ನಡ ಎಂಬ ಹೆಸರು ಇದುವರೆಗೆ ಉಳಿದುಕೊಂಡು ಬಂದಿದೆ. ಈ ಎಲ್ಲ ಮಾತುಗಳನ್ನೂ ವಿಚಾರಮಾಡಿ ನೋಡಿದಲ್ಲಿ ನಮ್ಮ ನಾಡಿಗೆ ತೀರ ಮೊದಲು 'ಕನ್ನಡ'ವೆಂದೇ ಹೆಸರಿದ್ದಿತೆಂದು ಊಹಿಸ ಬಹುದು."

ನಿಜವಾಗಿಯೂ ಈ ವಿಚಾರವು ಮನನೀಯವಾಗಿದೆ. ಆದರೆ, ಈ ಲೇಖನದಲ್ಲಿ 'ಕನ್ನಡ' ಶಬ್ದಕ್ಕೆ ಹೇಳಿದ ನಿರುಕ್ತವು ಮಾತ್ರ ಯಾರಿಗೂ ಸಮ್ಮತವಾಗುವಂತಿಲ್ಲ. ಅದನ್ನು ಬರೆದ ನನ್ನ ಗೆಳೆಯರು ಇಂದು ಅದೇ ಅಭಿಪ್ರಾಯದವರಾಗಿದ್ದಾರೆಂದು ಹೇಳಲಿಕ್ಕಾಗದು. ಆದರೂ ಆ ವಿಚಾರಸರಣಿಯಲ್ಲಿ ನಮ್ಮ ನಾಡಿನ ಇಂದಿನ ಹಿರಿಕವಿಗಳ ಪ್ರತಿಭೆಯ ವಿಲಾಸವು ಅಡಕವಾಗಿರುವುದರಿಂದ ಅದು ಓದುಗರ ಮನಸ್ಸನ್ನು ಸೆಳೆಯದೆ

ಇರಲಾರದು. ಅಲ್ಲದೆ 'ಕನ್ನಡ'ದ ಗುಟ್ಟನ್ನು ತಿಳಿದುಕೊಳ್ಳಲು ಪರಿಶ್ರಮಬಟ್ಟು ಮಾಡಿದ ಎಲ್ಲ ವಿಚಾರಗಳೂ ಉಲ್ಲೇಖನೀಯವೆಂದು ನನ್ನ ಅಭಿಪ್ರಾಯ. ಈ ಲೇಖನದಲ್ಲಿ ಕನ್ನಡದ ನಿರುಕ್ತವನ್ನು ಕುರಿತು ನನ್ನ ಗೆಳೆಯರು ಬರೆಯುವುದೇನೆಂದರೆ :

> " 'ಕನ್' ಎಂದರೆ 'ಕಾಣು' ಅಥವಾ 'ಒಡಮೂಡು' ಎಂಬ ಮೂಲಧಾತುವಿನಿಂದ ಕನ್ನಡವು ಹುಟ್ಟಿದೆಯೆಂದು ನಮ್ಮ ಅಭಿಪ್ರಾಯ. ಕನ್+ಅಳ್=ಕನ್ನಳ್, ಕನ್ನಡ್, ಕನ್ನಡ ಎಂಬುದಾಗಿ ಇದರ ರೂಪಸಿದ್ಧಿ. ಕನ್-ಅಳ್ ಎಂದರೆ ಒಡಮೂಡು ವುದನ್ನು ಉಳ್ಳುದು ಎಂದರ್ಥ. ಮನೋಭಾವಗಳನ್ನು ಮಂದಿಗೆ ಒಡಮೂಡಿಸಿ ತೋರಿಸುವುದೇ ಭಾಷೆಯ ಕೆಲಸ. ಈ ಮಾತನ್ನು ಮನಗಂಡವರಾದ ನಮ್ಮ ಮೊದಲಿಗರು ತಮ್ಮ ಭಾಷೆಗೆ ಅರ್ಥವತ್ತಾದ ಹೆಸರನ್ನು ಇಟ್ಟಿರುವರು. ರೂಪವನ್ನು ಒಡಮೂಡಿಸುವುದು ಕನ್ನಡಿ. ಭಾವಗಳನ್ನು ಒಡಮೂಡಿಸುವುದು ಕನ್ನಡ. ನಮ್ಮ ಮೊದಲಿನ ಕಾವ್ಯಗಳಲ್ಲಿ ಸಿಕ್ಕುತ್ತಿರುವ 'ಕನ್ನಡಿಸು' ಎಂಬ ಧಾತುವಿನ ಅರ್ಥವನ್ನು ಬಗೆದೆಂದು ನೋಡಿದರೂ ಕನ್ನಡ ವ್ಯುತ್ಪತ್ತಿಯ ಮೇಲೆ ಬೆಳಕು ಬೀಳದಿರದು.... ಭಾಷೆಯೆಂದರೆ ತಮ್ಮ ಭಾವಗಳನ್ನು ಒಡಮೂಡಿಸುವ 'ಕನ್ನಡಿ' ಎಂಬ ಭಾವನೆಯೆ ನಮ್ಮ ಮೊದಲಿಗರದು."

ನಿಜವಾಗಿ ಹೀಗೆ ನಮ್ಮ ಭಾವನೆಯೇ ಆಗುವ ಸಂಭವವು ಉಂಟು. ಆದರೆ ಈ ಭಾವನೆಯು, ನುಡಿಗೆ ಹೆಸರು ಬಂದ ತೀರ ಆರಂಭಕಾಲದಲ್ಲಿಯೆ ಇದ್ದಿತೆಂದು ಬಗೆಯಲಿಕ್ಕಾದೀತೆ? ಬುದ್ಧಿ ಬಲಿತ ಮೇಲೆ, ಭಾವಗಳು ಚಿಗುರಿದ ಬಳಿಕ ಒಂದೊಂದು ನುಡಿಗೂ ಅಂದದ, ಚೆಂದದ, ಬೆಡಗಿನ, ಬಿನ್ನಾಣದ ಬಗೆಬಗೆಯ ಅರ್ಥಗಳು ತಲೆದೋರಬಹುದು. ಆದರೆ, ಮೊಟ್ಟಮೊದಲಲ್ಲಿಯೆ ಈ ಬಗೆಯ ಕಲ್ಪನೆಯಿದ್ದಿತೆಂದು ಎಣಿಸಲಿಕ್ಕಾಗುವುದಿಲ್ಲ. ಇನಿತೊಂದು ಕಾವ್ಯಮಯ ಭಾವವು ಮೊದಲಿನಿಂದಲೆ 'ಕನ್ನಡ' ಎಂಬ ಶಬ್ದದಲ್ಲಿ ಅಡಗಿದೆಯೆಂದು ಗ್ರಹಿಸಿದರೂ ಈ ವ್ಯುತ್ಪತ್ತಿಯನ್ನು ಒಪ್ಪಿಕೊಳ್ಳಲು ಇನ್ನೊಂದು ಮಾತು ಅಡ್ಡಬರುತ್ತದೆ. 'ಕನ್ನಡ' ಎಂಬುದು ನುಡಿಯ ಹೆಸರಾದರೆ, ನುಡಿಯಿಂದ ನಾಡಿಗೆ ಹೆಸರು ಬಂದಿತೆಂಬ ಅಪಸಿದ್ಧಾಂತವು ನಮ್ಮ ತಲೆಯ ಮೇಲೆ ಕುಳ್ಳಿರುವುದು! ಕನ್ +ಅಳ್=ಕನ್ನಡ ಎಂಬಲ್ಲಿ ಮೊದಲು 'ಳ'ಕಾರವಿದ್ದುದು ಮುಂದೆ ಡಕಾರವಾಯ್ತೆಂದಂತಾಗುತ್ತದೆ. ಆದರೆ ಡಕಾರವು ಳಕಾರವಾದ ಉದಾಹರಣಗಳಿವೆಯೆ ಹೊರತು ಳಕಾರವು ತಿರುಗಿ ಡಕಾರವಾದಂತೆ ಇಲ್ಲ. ಆದುದರಿಂದ ಕನ್ +ಅಳ್ ಎಂಬ ವಿಗ್ರಹರೂಪವೇ ತಪ್ಪು.

ಕನ್ನಡದ ಈ ವ್ಯುತ್ಪತ್ತಿಯ ವಿವರಣೆಯು ಬಹಳ ಸರಸವಾಗಿ ಇರುವುದರಿಂದ ಮೇಲಣ ಅಡ್ಡಿಗಳನ್ನೂ ಕಡೆಗಣಿಸಿ ಅದನ್ನು ಒಪ್ಪಿಕೊಳ್ಳಬೇಕು ಎಂದರೆ ಇನ್ನೂ ಒಂದು ತೊಂದರೆ! ಶಾಸನಾದಿಗಳಲ್ಲಿ ಕನ್ನಡ, ಕನ್ನಾಡುಗಳಂತೆ ಕನ್ನಳ್ ಎಂಬ ರೂಪವು ಒಂದೆಡೆಯಲ್ಲಿಯೂ ಕಣ್ಣಿಗೆ ಬೀಳುವುದಿಲ್ಲ. ಕರುನಾಡು ಎಂದು ತಮಿಳಿನಲ್ಲಾದರೂ ಉಂಟು. ಆದರೆ, ಇದಕ್ಕೆ ಯಾವ ಭಾಷೆಯಲ್ಲಿಯೂ ಅಸ್ತಿತ್ವವಿಲ್ಲ. ಆದುದರಿಂದ ಕನ್ನಡ ಎಂಬುದು 'ಕನ್ನಳ್' ಎಂಬ ಪದದಿಂದ ಆಯ್ತೆಂದು ಗ್ರಹಿಸುವುದಕ್ಕಾಗುವುದಿಲ್ಲ.

ಇಂತೀ ಬಗೆಯಾಗಿ ಈ ವರೆಗೆ ಮುಂದೆ ಬಂದ ಯಾವ ವ್ಯುತ್ಪತ್ತಿಯೂ ಸಮರ್ಪಕವಾಗಿಲ್ಲ. ಅಭಿಮಾನಿಯಾದ ಕನ್ನಡಿಗನಿಗೆ ತನ್ನ 'ಕನ್ನಡ'ದ ನೆಲೆಯೆ ತನಗೆ ಗೊತ್ತಿಲ್ಲವೆನಿಸಿದರೆ ಹೇಗೆ ತಾನೆ ಅವನ ಮನಸ್ಸಿಗೆ ಸಮಾಧಾನ ವೆನಿಸಬೇಕು? ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು ಸಾಹಿತ್ಯಕ್ಷೇತ್ರದಲ್ಲಿ ಇಂದು ಕೆಚ್ಚ ಕನ್ನಡಿಗರ ಏಕಮೇವಾ ದ್ವಿತೀಯ ಮುಂದಾಳುಗಳು; ಕನ್ನಡದ ಏಳ್ಗೆಗಾಗಿ ತನು-ಮನ-ಧನಗಳನ್ನು ಮೀಸಲಾಗಿರಿಸಿದವರು; ವಿದ್ವಾಂಸರು; ವಾಗ್ಮಿಗಳು. ಕನ್ನಡಪೀಠದ ಇಂದಿನ ಶ್ರೀಗಳು.ಇವರು ಸ್ವಲ್ಪ ದಿನಗಳ ಹಿಂದೆ 'ಕನ್ನಡದ ಬಿಡುಗಡೆ' ಎಂಬ ಒಂದು ಸುಪ್ರಸಿದ್ಧವಾದ ಉಪನ್ಯಾಸಮಾಡಿ ಕನ್ನಡದ ಹುಟ್ಟಿನ ಬಗೆಯನ್ನು ವಿವರಿಸಿ ಹೇಳಿದರು. ಶ್ರೀಗಳವರ

ಮಾತಿನಲ್ಲಿ ಯಾವಾಗಲೂ ಒಂದು ಬಗೆಯ ತೇಜಸ್ಸು, ಓಜಸ್ಸು ತುಂಬಿ ಹೊರಹೊಮ್ಮುತ್ತಿರುವುದರಿಂದ ಅವರು ಆಡುವ ಪ್ರತಿಯೊಂದು ಶಬ್ದವೂ ಪರಿಣಾಮಕಾರಿಯಾಗಿರುತ್ತದೆ. 'ಕನ್ನಡದ ಬಿಡುಗುಡೆ' ಎಂಬ ಉಪನ್ಯಾಸವು ಕರ್ಣಾಟದ ಸಾಹಿತ್ಯಲೋಕದಲ್ಲಿ ವಿಚಾರದ ಒಂದು ದೊಡ್ಡ ಆಂದೋಲನವನ್ನು ಉಂಟು ಮಾಡಿತು. ಅನುಕೂಲ ಪ್ರತಿಕೂಲ ಮಾತಿನ ಮಲ್ಲಗಾಳೆಗವು ಆರಂಭವಾಯಿತು. ಶ್ರೀಯವರು ಕನ್ನಡ ಶಬ್ದದ ನಿರುಕ್ತವನ್ನು ಕುರಿತು ಅಪ್ಪಣೆ ಕೊಡಿಸಿದರು. ಆದರೆ ಕರ್ಣಾಟವೊ ಕರ್ನಾಟವೊ ಎಂಬುದು ವಾಗ್ಯುದ್ಧದ ಮುಖ್ಯ ವಿಷಯವಾಯ್ತು!

ಶ್ರೀಯವರು 'ಕನ್ನಡ ಬಿಡುಗಡೆ'ಯ ಉಪನ್ಯಾಸದ ತರುವಾಯ ಆರಂಭವಾದ ದಂತ್ಯ-ಮೂರ್ಧನ್ಯ (ನ-ಣ)ಗಳ ಕಾದಾಟದ ರಭಸದಲ್ಲಿ ಕೆಲರಿಗೆ ಈ ವಾದದ ಮುಖ್ಯ ಪ್ರಶ್ನೆಯೇ ಮರೆತುಹೋದಂತಾಗಿದೆ. ನಕಾರವೊ ಣಕಾರವೊ ಎಂಬುದು ಈ ವಾದದ ಮುಖ್ಯ ವಿಷಯವಲ್ಲ. ಕನ್ನಡ-ಕರ್ಣಾಟ ಶಬ್ದಗಳ ನಿರುಕ್ತವು ನಿಶ್ಚಿತವಾದರೆ ಶುದ್ಧರೂಪವು ಕರ್ಣಾಟವೊ ಕರ್ನಾಟವೊ ಎಂಬ ತೊಡಕು ತನ್ನತಾನೆ ಬಿಟ್ಟುಹೋಗುವುದು. ಈ ಶಬ್ದ-ಸಿದ್ಧಿ- ಕ್ರಮದ ಬಗೆಗೆ ಭಿನ್ನಾಭಿಪ್ರಾಯಗಳಿರುವವರೆಗೆ ನಕಾರ ಣಕಾರಗಳ ಪಾಠಾಂತರವು ತಪ್ಪಿದ್ದಲ್ಲ. ಇಂದಿನ ನ-ಣಗಳಂತಹ ವಾದವು ಈಗ ತಾನೆ ತಲೆದೋರಿದೆಯೆಂದು ಕೆಲರ ಗ್ರಹಿಕೆಯಾಗಿರಬಹುದು. ಆದರೆ ಇದೇ ಬಗೆಯ ಇನ್ನೊಂದು ವಾದವು ಮುನ್ನೂರು ವರುಷಗಳ ಮೊದಲು ಒಮ್ಮೆ ತಲೆಯೆತ್ತಿದಂತಿದೆ.

ಕನ್ನಡಕ್ಕೆ ಸಂಸ್ಕೃತದವರು ಕರ್ಣಾಟವೆಂದಂತೆ, ಪೋರ್ತುಗೀಸರೂ ಇಂಗ್ಲೀಷರೂ Canara, Carnate ಎಂದು ಮುಂತಾಗಿ ಹೆಸರಿಸಿದರು. ಇವರಲ್ಲಿಯೆ ಮುಂದೆ Canara ಸರಿಯೊ Kanara ಸಾಧುವೊ ಎಂಬ ಎಣಿಕೆಗೆ ಆರಂಭವಾಯಿತು. ಕನ್ನಡಭಾಷೆಯ ಹೆಸರನ್ನು ಕ್ರಿ. ಶ. ೧೫೧೬ರಲ್ಲಿ Canari, ೧೫೨೦ರಲ್ಲಿ Canarim, ೧೫೫೨ರಲ್ಲಿ Canarij, ೧೬೧೫ರಲ್ಲಿ Canarin, ೧೬೫೪ರಲ್ಲಿ Cannary ಎಂದೂ ನಡುನಡುವೆ ಎಷ್ಟೋ ಬಾರಿ Carnatic, Carnate, Karnat ಎಂದು ಮುಂತಾಗಿಯೂ ಬರೆಯುತ್ತಿದ್ದುದು ಕಂಡುಬರುತ್ತಿದೆ. ಇದರಲ್ಲಿ ೧೫೫೨ರಲ್ಲಿ ಮೊಳೆತುಕೊಂಡು Canarij ಎಂಬುದೆ ನಿನ್ನೆಮೊನ್ನೆಯ ವರೆಗೆ Canarese ಇಲ್ಲವೆ Kanarese ಎಂಬ ರೂಪದಲ್ಲಿ ವ್ಯವಹರಿಸುತ್ತಲಿತ್ತು. ಕ್ರಿ. ಶ. ೧೬೧೪ರಲ್ಲಿ ಬಂದ ಕೌಟೋ (Couto) ಎಂಬ ಯುರೋಪೀಯ ಪ್ರವಾಸಿಕನೊಬ್ಬನು ಕನ್ನಡ ಶಬ್ದದ ವಿಚಿತ್ರ ರೂಪಗಳನ್ನು ನೋಡಿ ಅಸಹ್ಯವಾಗಿ, ಟೀಕಿಸಿದ್ದಾನೆ. ಟೀಕಿಸಿ ಕೊನೆಗೆ ತನಗೆ ಸರಿದೋರಿದ ಒಂದು 'ಶುದ್ಧ' (?) ರೂಪವನ್ನೇ ಉಪಯೋಗಿಸಬೇಕೆಂದು ಅಪ್ಪಣೆ ಕೊಡಿಸಿದ್ದಾನೆ! ಅವನು ಬರೆಯವುದೇನೆಂದರೆ :

> "Its proper name 'Charanathaca' which from corruption to corruption has come to be called Canara."[೧೫]

ಈ ಕೌಟೋ ಮಹಾಶಯನ ಹೇಳಿಕೆಯಂತೆ ಬರೆವ ರೂಢಿಯು ಹೆಚ್ಚಿ, ಕರ್ಣಾ(ರ್ನಾ)ಟಕವು "ಚರ್ನಾಥಕ" ವಾಗಿ ಅಥವಾ ಖರ-ನಾಟಕವಾಗಿ ಪರಿಣಮಿಸಲಿಲ್ಲ; ನಮ್ಮೆಲ್ಲರ ಭಾಗ್ಯ!

ವ್ಯುತ್ಪತ್ತಿಯನ್ನು ನಿಶ್ಚಿತವಾಗಿ ಕಂಡುಹಿಡಿಯದೆ ಒಂದು ಶಬ್ದವನ್ನು ಹೀಗೆಯೇ ಬರೆಯಬೇಕು, ಹೀಗೆ ಬರೆಯಕೂಡದು ಎಂದು ಆಗ್ರಹಮಾಡುವುದು ಅಯೋಗ್ಯ. ಒಂದು ವೇಳೆ ಹೀಗೆ ಒತ್ತಾಯಪಡಿಸಿದರೆ ಕೌಟೋ ಮಹಾಶಯನಂತೆ ನಗೆಗೀಡಾಗುವ ಪ್ರಸಂಗವು ಬಾರದೆ ಇರದು. ಕಾರಣಗಳನ್ನು ಹೇಳಿ ಮನಗಾಣಿಸಿಕೊಡದೆ ಕರ್ಣಾಟವೆಂದೇ ಬರೆಯಬೇಕೆನ್ನುವುದು ಕೇವಲ ಹಠವಾದವಾದೀತು. ಣಕಾರವನ್ನು ಕೇಶಿರಾಜನು ಬರೆದಿರುವನು; ಭಟ್ಟಾಕಲಂಕನು ಬರೆದಿರುವನು. ಆದುದರಿಂದ ನಾವೂ ಬರೆಯಲೇಬೇಕು ಎನ್ನುವುದು ಬುದ್ಧಿಗೆ ಸಮಾಧಾನವನ್ನೀವ ದಾರಿಯಲ್ಲ. ಇಂದಿನ ಪೀಳಿಗೆಯು ಣಕಾರವೇ ಏಕೆ, ಎಂಬುದನ್ನು ತಿಳಿದುಕೊಳ್ಳಲು ಹಂಬಲಿಸುತ್ತಿದೆ. ಇದು ಹೀಗೆಯೆ ಏಕೆ, ಎಂದು ಪಶ್ನೆ ಮಾಡುವುದು ಆಧುನಿಕಯುಗದ ಸ್ವಭಾವವೆ ಆಗಿದೆ. ಅದು ನಕಾರ ಣಕಾರ ವಾದದಲ್ಲಿಯೂ ಗೋಚರವಾಗುತ್ತದೆ. ಆದುದರಿಂದ ಣಕಾರ ಪಕ್ಷದ ಪುರಾಣಮತವಾದಿಗಳು ಒಮ್ಮೆಲೆ

ಸಿಡಿದು ನುಡಿವ ಕಾರಣವಿಲ್ಲ. ಕಡುನುಡಿಗಳನ್ನು ಇಲ್ಲವೆ ಕಿಡಿನುಡಿಗಳನ್ನು ಆಡದೆ, ಈ ಶಬ್ದದ ಮೂಲದಲ್ಲಿ ನಕಾರವಿದೆಯೆ ಣಕಾರವಿದೆಯೆ ಎಂಬುದನ್ನು ನಿರ್ಧರಿಸುವುದೆ ಮೇಲಾದ ಹಾದಿ.

ಮಾನ್ಯ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರ ಅಭಿಪ್ರಾಯದಂತೆ 'ಕರ್ನಾಟಕ' ಎಂಬುದೇ ಮೂಲಶಬ್ದ. ಅದರಲ್ಲಿ ಕರ್+ನಾಟ್+ಅಕಂ ಎಂಬ ಮೂರು ಪದಗಳಿವೆ. ನಾಡು ಎಂಬರ್ಥದ ನಾಟ್ ಶಬ್ದದಲ್ಲಿ ನ ಕಾರವು ಇರುವುದರಿಂದ ಕರ್ಣಾಟಕ ಎಂದು ಬರೆವ ಕಾರಣವಿಲ್ಲ. ನಕಾರಯುಕ್ತವಾಗಿ ಬರೆವುದೆ ಸಾಧು; ಎಂದು ಮಾನ್ಯ ಶ್ರೀಗಳವರು ಅಪ್ಪಣೆಕೊಡಿಸಿದರು. ರಕಾರದ ಮುಂದಿನ ನಕಾರವು ಣಕಾರವಾಗುವುದು ಸಂಸ್ಕೃತದಲ್ಲಿ ರೂಢಿಯಿದ್ದುದು ನಿಜ; ಆದರೆ, ನಕಾರವು ಣಕಾರವಾಗದೆ ಇದ್ದ ಉದಾಹರಣೆಗಳೂ ಉಂಟು, ಎಂದು ಶ್ರೀಮಾನ್ ತೀ. ನಂ. ಶ್ರೀಕಂಠಯ್ಯನವರು ಶಿಕ್ಷಾಶಾಸ್ತ್ರದ ವಿವೇಚನೆ ಮಾಡಿ ನಕಾರದ ಪಕ್ಷವನ್ನು ಎತ್ತಿ ಹಿಡಿದರು.[೧೬] ಶ್ರೀರಾಜರತ್ನರಂ ಶಾಸನಾದಿಗಳಿಂದ ಪರಿಶ್ರಮಪೂರ್ವಕವಾಗಿ ಸಂಗ್ರಹಿಸಿದ ಅನೇಕಾನೇಕ ಅವತರಣಿಕೆಗಳನ್ನು ಕೊಟ್ಟು ಣಕಾರದಂತೆ ನಕಾರಯುಕ್ತವಾಗಿ ಬರೆವ ರೂಢಿಯೂ ಇದ್ದಿತೆಂಬುದನ್ನು ಸಿದ್ಧಪಡಿಸಿದ್ದಾರೆ.[೧೭]

ನ-ಣ ಕಾರಗಳ ವಾದವು ಹಾಗಿರಲಿ; ಮಾನ್ಯ ಶ್ರೀಯವರು ಪ್ರತಿಪಾದಿಸಿರುವ ನಿರುಕ್ತವು ಸರಿಯಾಗಿದೆಯೆ? ಎಂಬುದೇ ಮೊದಲ ಪ್ರಶ್ನೆ. 'ಕಾಲ್ಡವೆಲ್ಲರ ವಿಚಾರಗಳ ಪ್ರತಿಧ್ವನಿಯೆ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರ ನಿರುಕ್ತ......' ಎಂದು ಅವರ ಎದುರಾಳಿಗಳ ಆಕ್ಷೇಪಣೆ. ಆದರೆ, ತಮಗೆ ಸತ್ಯವೆನಿಸಿದುದನ್ನು ಎತ್ತಿಹೇಳಿದರೂ ಕೊರತೆಯೇನು? ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರಿಗೆ ಕನ್ನಡದ ಹಲವು ಬಗೆಯ ಹೊಣೆಗಾರಿಕೆಯ ಕೆಲಸಗಳನ್ನು ನಿರ್ವಹಿಸುವುದಕ್ಕೆ ವೇಳೆಯೆ ಸಾಲದೆ ಹೋಗುವುದು. ಕೇವಲ ಕನ್ನಡದ ನಿರುಕ್ತವನ್ನೇ ವಿಚಾರಿಸುತ್ತ ಕುಳ್ಳಿರಲು ಅವರಿಗೆ ಬಿಡುವು ಎಲ್ಲಿ? ಧೀಮಂತರೂ ಪ್ರತಿಭಾಶಾಲಿಗಳೂ ಆದ ಮಾನ್ಯ ಶ್ರೀಯವರಿಗೆ ಸರಿಯಾದ ವ್ಯುತ್ಪತ್ತಿಯನ್ನು ಕಂಡುಹಿಡಿಯುವುದು ಆಗದ ಮಾತಲ್ಲ. ಆದರೆ, ಅವರ ವಿವಿಧ ಕಾರ್ಯಕಲಾಪಗಳಲ್ಲಿ ಇದಕ್ಕೆ ವೇಳೆ ದೊರೆಯುವುದೆ ಅಸಾಧ್ಯವಾಗಿರಬೇಕು. ಇದ್ದುದರಲ್ಲಿ ಕಾಲ್ಡವೆಲ್ಲರ ನಿರುಕ್ತವೆ ಅವರಿಗೆ ಒಪ್ಪಿಗೆಯಾಗಿ ಅದನ್ನೆ ಎತ್ತಿ ಹಿಡಿದಿರಬೇಕು.

ಕಾಲ್ಡವೆಲ್ಲರು ಕರ್+ನಾಡು ಎಂಬುದರೊಡನೆ ಇನ್ನೊಂದೆಡೆಗೆ ಕರ್+ನಾಟ್+ಅಕಂ ಎಂಬ ವ್ಯುತ್ಪತ್ತಿಯನ್ನು ಹೇಳಿಬಿಟ್ಟಿದ್ದಾರೆ.

> "Karnataka, Kar-nat-agam (ಕರ್+ನಾಟ್+ಅಗಂ), interior of the black country, from Kar (black), nat (ನಾಡು), (Country), & agam (interior)- the black cotton soil of the Dekkan."
>
> (p. 577)

ಮಾನ್ಯ ಶ್ರೀಯವರು ಕರ್+ನಾಡು ಎಂಬುದನ್ನು ಕಡೆಗಣಿಸಿ, ಕರ್ +ನಾಟ+ಅಕಂ ಎಂಬ ಇನ್ನೊಂದು ನಿರುಕ್ತವನ್ನು ಎತ್ತಿಹಿಡಿದ ಕಾರಣವೇನೊ ತಿಳಿಯದು.

ಶ್ರೀಯವರು ಕರ್+ನಾಟ್+ಅಕಂ ಎಂಬುದಕ್ಕೆ ಕರಿಯ+ನಾಡಿನ+ಪ್ರದೇಶ ಎಂದು ಅರ್ಥಹೇಳುವರು. ನಾಟ್ ಮತ್ತು ಅಕಂ ಎಂಬುವು ದ್ರಾವಿಡ ಭಾಷೆಗಳಲ್ಲಿ ಸುಮಾರು ಒಂದೇ ಅರ್ಥದ ಪದಗಳೆಂದು ಶ್ರೀಯವರೆ ಒಪ್ಪಿದ್ದಾರೆ. ಒಂದೇ ಕಾಲಕ್ಕೆ ನಾಟ್ ಮತ್ತು ಅಕಂ ಎನ್ನುವುದರಿಂದ ದ್ವಿರುಕ್ತಿದೋಷಕ್ಕೆ ಒಳಗಾಗಬೇಕಾಗುವುದು. 'ಕರ್ಣಾಟಕ' ಎಂಬುದು ಮೂಲಶಬ್ದವೆಂದು ಸ್ವೀಕರಿಸಿರುವುದರಿಂದ ಪುನರುಕ್ತಿದೋಷದ ತಪ್ಪಿನ ಕೈಯಲ್ಲಿ ಸಿಕ್ಕಿ ಬೀಳಬೇಕಾಗುವುದು. 'ಕರ್ನಾಟ' ಎಂಬುದು ಮೂಲ ಶಬ್ದವೆಂದರೆ ಈ ಕೊರತೆಯು ದೂರವಾಗುವುದು.

ಎಲ್ಲ ಭಾಷೆಗಳಲ್ಲಿ 'ಹಿಂದುಸ್ತಾನ ದೇಶ' 'ಕೂಡಲಸಂಗಮ,' 'ಕುಡುವೊಕ್ಕಲಿಗ' ಎಂಬೀ ಬಗೆಯ ಒಂದೇ ಅರ್ಥದ ಎರಡು ಶಬ್ದಗಳಿಂದಾದ ಮಾತುಗಳು ಎಷ್ಟೋ ಇರುವುದುಂಟು. ಆದರೆ, ಇವು ಮೂಲ ಶಬ್ದಗಳಾಗಿರಲಾರವು. ಶಬ್ದಗಳು ಆರಂಭದಲ್ಲಿಯೆ ಒಂದೇ ಅರ್ಥದ ಎರಡು ನುಡಿಗಳು ಕೂಡಿ ಆಗುತ್ತಿರುವುದಿಲ್ಲ.

ಆರಂಭಕ್ಕೆ ಒಂದು ಅರ್ಥದ ಒಂದೇ ಪದ. ಮುಂದೆ ಅದೇ ಅರ್ಥದ ಇನ್ನೊಂದು ಪದವು ಈ ಶಬ್ದದ ಹತ್ತಿರದಲ್ಲಿ (ಸ್ವಭಾಷೆಯ ಶಬ್ದವಾಗಲಿ, ಪರಭಾಷೆಯ ಶಬ್ದವಾಗಲಿ) ಹೆಚ್ಚಾಗಿ ಬಳಕೆಯಲ್ಲಿ ಬರಲಾರಂಭಿಸಿತೆಂದರೆ, ಮೊದಲಿನ ಪದದ ಅರ್ಥದ ಸ್ಪಷ್ಟೀಕರಣಕ್ಕಾಗಿ ಅದೇ ಅರ್ಥದ ಬೇರೊಂದು ಶಬ್ದವು ಅದರೊಡನೆ ಸೇರಿ ಕೊಳ್ಳುವುದು ವಾಡಿಕೆ. ಸಹ್ಯಾದ್ರಿಪರ್ವತ ಎಂಬಲ್ಲಿ ಅದ್ರಿ ಶಬ್ದಕ್ಕಿರುವ ಅರ್ಥದ ಮರೆವು ಉಂಟಾಗದೆ ಪರ್ವತ ಎಂಬುದನ್ನು ಅದರ ಎದುರಿಗೆ ಇಡುವುದಕ್ಕೆ ಮನಸ್ಸು ಬಾರದು. ಕನ್ನಡ (ಕನ್ನಾಡು) ಇದರೊಳಗಿನ 'ನಾಡು' ಎಂಬ ಉತ್ತರಪದದ ನೆನಪಿರುವ ವರೆಗೂ ಅದಕ್ಕೆ ದೇಶವೆಂಬ ಅರ್ಥವೂ ರೂಢಿಯಲ್ಲಿತ್ತು. ಆದರೆ, ಅದು ಮರೆತುಹೋಗುತ್ತಲೆ ಕನ್ನಡನಾಡು ಎಂಬ ದ್ವಿರುಕ್ತಿದೋಷವನ್ನು ಎಗ್ಗಿಲ್ಲದೆ ಮಾಡಲಾರಂಭಿಸಿದೆವು. ಒಟ್ಟಿನಲ್ಲಿ ಹೇಳಬೇಕಾದುದೇನೆಂದರೆ: ಶಬ್ದಗಳು ಆರಂಭದಲ್ಲಿಯೇ ಒಂದೇ ಅರ್ಥದ ಎರಡು ಪದಗಳಿಂದ ಕೂಡಿ ಆಗಿರುವ ಸಂಭವವಿಲ್ಲ. ಆದಕಾರಣ ನಾಟ್+ಅಕಂ ಎಂಬುದು ಮುಂಚಿನಿಂದಲೇ ಇರುವುದು ಸಾಧ್ಯವಿಲ್ಲ. ಆದುದರಿಂದ ಕರ್ನಾಟಕ ಎಂಬುದು ಮೂಲಶಬ್ದವಲ್ಲ; ಅದು ಕರ್ನಾಟವೆಂದು ಬಗೆಯುವುದೇ ಲೇಸು.

ಶ್ರೀಮಾನ್ ಗೋವಿಂದ ಪೈಗಳು ಇನ್ನೊಂದು ದೃಷ್ಟಿಯಿಂದ ಇದೇ ನಿರ್ಣಯಕ್ಕೆ ಬಂದಿದ್ದು 'ಅಂತಿಮ ಕಕಾರವು ಕನ್ನಡ ಇಲ್ಲವೆ ದ್ರವಿಡ ಪ್ರತ್ಯಯವೆ ಅಲ್ಲ' ಎಂದು ತೋರಿಸಿದ್ದಾರೆ.[೧೮] ಶ್ರೀ ರಾಜರತ್ನಂ 'ಕರ್+ನಾಟ್+ಅಕಂ' ಎಂಬುದನ್ನು ಒಪ್ಪಲು ಆಧಾರ ಸಾಲದು; ಕರ್ನಾಟವೆ ಸರಿ ಎಂದಿರುವರು.[೧೯]

ಶ್ರೀಯವರ ವ್ಯುತ್ಪತ್ತಿಯೂ ಈ ಪ್ರಕರಣದ ಆರಂಭದಲ್ಲಿ ವಿವೇಚಿಸಿದ 'ಕರ್+ನಾಡು' ಎಂಬ ವರ್ಗದಲ್ಲಿಯೆ ಬಂದಿತು! ಸಂಸ್ಕೃತಸಾಹಿತ್ಯದಲ್ಲಿ ಕರ್ಣಾಟ ಮತ್ತು ಕರ್ಣಾಟಕ ಎಂಬ ಎರಡೂ ಬಗೆಯ ಪ್ರಯೋಗಗಳಿವೆ. 'ಕರ್ಣಾಟ'ವೆಂಬ ಪದವು ಸಂಸ್ಕೃತಭಾಷೆಯ ಸೊತ್ತು ಆದಬಳಿಕ ಅದರ ಮುಂದೆ ಸ್ವಾರ್ಥಪ್ರತ್ಯಯವಾದ ಕಕಾರವು ಸೇರಿಕೊಂಡಿತು. ಕರ್ಣಾಟವೆಂಬುದೆ ಮೂಲಶಬ್ದ. ಬಾಲ-ಬಾಲಕ, ಪುತ್ರ-ಪುತ್ರಕ ಎಂದು ಮುಂತಾದ ಕಡೆಗಳಲ್ಲಿ ಗೋಚರವಾಗುವ 'ಕ' ಪ್ರತ್ಯಯವೆ ಕರ್ಣಾಟದ ಮುಂದೆಯೂ ಸೇರಿಕೊಂಡಿದೆಯೆಂದು ಊಹಿಸಬಹುದಾಗಿದೆ. ಇನ್ನು, ಕರ್ನಾಟ(ಕ)ವು ಮೂಲಪದವೊ? ಕರ್ನಾಡು ಮೂಲಪದವೊ ಎಂಬುದನ್ನು ವಿಚಾರಿಸಿದರೆ ಎರಡನೆಯದೆ ಯುಕ್ತವೆಂದು ಶ್ರೀಯವರ ದೃಷ್ಟಿಯಿಂದಲೆ ಹೇಳಬಹುದಾಗಿದೆ. ಶ್ರೀ ರಾಜರತ್ನಂ ಅವರು 'ಕರ್ನಾಡು' ಎಂಬುದನ್ನೇ ಅನುಮೋದಿಸಿದ್ದಾರೆ.[೨೦] ಕರ್+ನಾಟ ಇದರಲ್ಲಿ ಕೊನೆಯ ನಾಟ ಶಬ್ದವು 'ನಾಡು' ಎಂಬುದರ ಒಂದು ರೂಪವೆಂದು ಹೇಳಬೇಕಾಗುತ್ತದೆ. 'ನಾಡು' ಶಬ್ದವು 'ನಾಟ್' ಎಂಬುದಾಗಿ ಕನ್ನಡದಲ್ಲಿ ಎಂದೂ ವ್ಯವಹಾರ್ಯರೂಪವಾಗಿ ಇದ್ದಿಲ್ಲ. ಬೇಡು, ಓಡು ಮೊದಲಾದವುಗಳ ಕೊನೆಯ ಡಕಾರವು ಟಕಾರವಾಗಿರುವುದು. ಬೇಡು ಶಬ್ದದಿಂದ ಬೇಟ ಹೊರತು ಬೇಟದಿಂದ ಬೇಡು ಅಲ್ಲ. ಅದರಂತೆ ನಡು (ನಾಡು) ಶಬ್ದದ ಒಂದು ರೂಪವು ನಾಟವೆಂದಾಗಿರಲಿಕ್ಕೆ ಸಾಕು. ಆದಕಾರಣ ಕರ್ನಾಟವೆಂಬ ಪದಕ್ಕೆ ಕರ್ನಾಡು ಎಂಬುದೇ ಮೂಲವೆಂದು ಒಪ್ಪಿಕೊಳ್ಳಬೇಕಾಗುತ್ತದೆ.

ಕಾಲ್ಡವೆಲ್ಲ ಸಾಹೇಬರ ಕರ್+ನಾಡು ಎಂಬ ವ್ಯುತ್ಪತ್ತಿಯು ಹೇಗೆ ಅಸಮರ್ಪಕವಾಗಿದೆಯೆಂಬುದನ್ನು ಹಿಂದೆಯೆ ವಿವರಿಸಿದೆ. ಆ ಮಾತುಗಳನ್ನೆ ಇಲ್ಲಿ ಮತ್ತೆ ವಿಸ್ತಾರದಿಂದ ಹೇಳುವುದು ಅನಾವಶ್ಯ. ಇದರ ಮೇಲಣ ಆಕ್ಷೇಪಣೆಗಳ ಸಾರಾಂಶವೇನೆಂದರೆ :

> ೧. "ಕರಿದು+ನಾಡು ಎಂದು ಸಮಾಸ ಮಾಡಿದರೆ ಕರಿಯ ಭೂಮಿಯಲ್ಲದಿರುವ ನಮ್ಮ ಮೈಸೂರು ಪ್ರಾಂತ್ಯವೆಲ್ಲವೂ ಕರ್ಣಾಟವಲ್ಲದೆ ಹೋಗಬೇಕಾಗುವುದು" ಎಂದು ಶ್ರೀ ಬಿ. ಎಸ್. ವೆಂಕಟರಾಮಯ್ಯ ಎಂ. ಎ. ಇವರಿಗೆ ಹೆದರಿಕೆ. ಮೈಸೂರೇ ಏಕೆ ಕನ್ನಡ ಜಿಲ್ಲೆ ಸಂಪೂರ್ಣ, ಧಾರವಾಡ, ಬೆಳಗಾವಿ ಜಿಲ್ಲೆಗಳ ಅರ್ಧಭಾಗವೂ ಕರಿನಾಡಲ್ಲ.

೨. ಕರುನಾಡು ತಮಿಳಿನಲ್ಲಾದರೂ ಸಿಕ್ಕುವುದು; ಕರ್ನಾಡು ಎಂಬುದಕ್ಕೆ ಎಲ್ಲಿಯೂ ಆಧಾರವಿಲ್ಲ.

ಎರಡರಿಂದ ಏಳರ ವರೆಗಿನ ಆಧುನಿಕರ ವ್ಯುತ್ಪತ್ತಿಗಳಲ್ಲಿ ಇನ್ನೂ ಒಂದು ದೊಡ್ಡ ಕೊರತೆಯುಂಟು. ಇವುಗಳಲ್ಲಿ ಯಾವುದಕ್ಕೂ ಕರ್ಣಾಟದ ಪ್ರಾಚೀನ ಸಾಂಸ್ಕೃತಿಕ ಪರಂಪರೆ, ಇತಿಹಾಸಗಳ ಬೆಂಬಲವಿಲ್ಲ. ಸ್ಮೃತಿ ಮತ್ತು ಪುರಾಣಗಳಲ್ಲಿ ಬಂದಿರುವ ಉಲ್ಲೇಖಗಳನ್ನು ಕೇವಲ ದುರ್ಲಕ್ಷಿಸಿದರೆ ನಡೆಯದು. ಅವನ್ನು ಎಣಿಕೆಯಲ್ಲಿ ಹಿಡಿದು ಬೆಲೆ ಕಟ್ಟಲೆಬೇಕು. ಅರ್ಥವಿಹೀನವಾಗಿದ್ದರೆ ಅವನ್ನು ಹಾಗೆ ಸಿದ್ಧಪಡಿಸಬೇಕು. ಆದರೆ, ೩ರಿಂದ ೭ರ ವರೆಗಿನ ವ್ಯುತ್ಪತ್ತಿಗಳಲ್ಲಿ ಪ್ರಾಚೀನ ಪರಂಪರೆಯ ವಿಚಾರವನ್ನೆ ಬಿಟ್ಟುಬಿಟ್ಟಿರುವುದರಿಂದ ಅವುಗಳ ಬೆಲೆ ಕಡಮೆಯಾಗಿದೆ. ಆದರು ಆಧುನಿಕರ ವಿಚಾರ ವಿಮರ್ಶೆಗಳಿಂದ ಒಂದು ಲಾಭವು ಆಗಿದೆ. ಕಾಲ್ಡವೆಲ್ಲ ಪ್ರಭೃತಿಗಳ ಕನ್ನಡದ ನಿರುಕ್ತದಲ್ಲಿ ಏನೂ ಹುರುಳಿಲ್ಲವೆಂದು ಸಿದ್ಧವಾದರೂ ಅವರು ಹೊಸ ನಿರುಕ್ತವನ್ನು ಕಂಡುಹಿಡಿಯುವುದಕ್ಕೆ ಯಾವ ಮುಖ್ಯ ವಿಚಾರಸರಣಿಯಿಂದ ಪ್ರವೃತ್ತರಾದರೊ ಅದು ಅಮೋಘವಾಗಿದೆ. ಆರ್ಯಾವರ್ತದ ಹೊರಗೆ ದಕ್ಷಿಣಾಪಥದಲ್ಲಿರುವ ಮತ್ತು ದ್ರಾವಿಡವರ್ಗಕ್ಕೆ ಸೇರಿದ ಈ ನಾಡಿನ ಹೆಸರು ಸಂಸ್ಕೃತಭಾಷೆಗೆ ಸಂಬಂಧಪಟ್ಟುದು ಇರಲಾರದು ಎಂಬ ಒಂದು ದೃಢವಿಶ್ವಾಸವು ಈ ಎಲ್ಲ ಆಧುನಿಕರ ವ್ಯುತ್ಪತ್ತಿಗಳಲ್ಲಿಯೂ ಗೋಚರವಾಗುತ್ತದೆ. ಮತ್ತು ಅವರ ಈ ವಿಚಾರಕ್ಕೆ ಹೊಸ ಹೊಸ ಆಧಾರಗಳು ದೊರೆತು ಪುಷ್ಟಿ ದೊರೆಯುತ್ತಲಿದೆ.

ಜಗತ್ತಿನಲ್ಲಿ ಬೇರೆ ಬೇರೆ ನಾಡುಗಳಿಗೆ ಹೆಸರುಗಳು ಬಂದಿರುವ ಬಗೆಯನ್ನು ಸ್ವಲ್ಪ ಆಳವಾಗಿ ನೋಡಿದರೆ ೨ರಿಂದ ೭ರ ವರೆಗಿನ ವ್ಯುತ್ಪತ್ತಿಗಳಲ್ಲಿ ಆವುದೊಂದೂ ತಲೆಯೆತ್ತುತ್ತಿರಲಿಲ್ಲ. ಜಗತ್ತಿನಲ್ಲಿ ದೇಶಕ್ಕೆ ಅಥವಾ ಭಾಷೆಗೆ ಹೆಸರುಗಳು ಬಂದಿರುವುದರಲ್ಲಿ ಕಾಲಾನುಕ್ರಮದಲ್ಲಿ ಸ್ಥೂಲವಾಗಿ ಎರಡು ವಿಭಾಗಗಳನ್ನು ಮಾಡಬಹುದು:

೧. ಬಂದ ಹೆಸರುಗಳು; ೨. ಇಟ್ಟ ಹೆಸರುಗಳು. ಮೊದಲನೆಯ ವರ್ಗದವು ಮಾನವನು ಸಂಪೂರ್ಣವಾಗಿ ಸ್ವಯಂಪ್ರಜ್ಞ (Self conscious) ನಾಗುವ ಮೊದಲು ಬಂದುವು; ಎರಡನೆಯ ವರ್ಗದವು ಮಾನವನು ಇದರ ಮುಂದಿನ ತರಗತಿಯಲ್ಲಿದ್ದಾಗ-ತನ್ನ ನಾಡು, ನುಡಿಗಳ ಬಗ್ಗೆ ಚೆನ್ನಾಗಿ ಅರಿವು ಉಳ್ಳವನಾದಾಗ ಇಟ್ಟವು. ತಾರತಮ್ಯದಿಂದ ಹೇಳಬೇಕಾದರೆ ಇವುಗಳಲ್ಲಿ ಮೊದಲನೆಯವು ಪ್ರಾಚೀನ; ಎರಡನೆಯವು ಅರ್ವಾಚೀನ. ಜಗತ್ತಿನಲ್ಲಿ ಪ್ರಾಚೀನವೆನಿಸುವ ದೇಶಗಳಿಗೆ ಇರುವ ಹೆಸರುಗಳೆಲ್ಲ ಅಲ್ಲಿಯ ಮೂಲಜನಾಂಗಗಳಿಂದಲೇ ಬಂದವುಗಳಾಗಿವೆ. ಕರ್ಣಾಟವು (ಕನ್ನಡವು) ಇದೂ ಒಂದು ಪ್ರಾಚೀನ ದೇಶವಾಗಿದ್ದರೆ ಪ್ರಾಚೀನವಾಗಿದೆಯೆಂದು ಮಹಾಭಾರತದ ಉಲ್ಲೇಖದಿಂದಲೂ, ಬೇರೆ ಪ್ರಮಾಣಗಳಿಂದಲೂ ಸಿದ್ಧಸಂಗತಿ-ಈ ದೇಶದ ಹೆಸರಾದರೂ ಇಲ್ಲಿಯ ಮೂಲಜನಾಂಗದಿಂದಲೇ ಬಂದಿರಬೇಕೆಂಬುದು ಸಿದ್ಧ. ಗುಜರಾತ ಮೊದಲಾದ ಕೆಲವು ಅರ್ವಾಚೀನ ದೇಶಗಳಿಗೆ ಜನಾಂಗದಿಂದ ಹೆಸರು ಬಂದುದುಂಟು. ಭೂಮಿಯ ಗುಣ ಮೊದಲಾದವುಗಳಿಂದ ಕಲ್ಪಿಸಿ ಇಟ್ಟ ವಿಶಿಷ್ಟಾರ್ಥಕ (ಗೌರವಾರ್ಥಕವೂ ಇದರಲ್ಲಿಯೆ ಸೇರುವುದು) ಹೆಸರುಗಳು ಎರಡನೆಯ ತರಗತಿಯವು. ಈ ಬಗೆಯ ಹೆಸರಿನ ಪ್ರಾಚೀನದೇಶಗಳು ಸಿಕ್ಕುವುದಿಲ್ಲ. ಕೇರಳ ಎಂಬುದು ಪ್ರಾಚೀನವಿರುವಂತೆ ಮಲೆಯಾಳವಲ್ಲ.

ಆರಂಭಕಾಲದಲ್ಲಿ, ಆಹಾರಕ್ಕಾಗಿ ತಂಡಗಟ್ಟಿಕೊಂಡು ಅಲೆಯುತ್ತಿದ್ದ ಜನಾಂಗಗಳು ಕುಟಂಬಿಗಳಾಗಿ-ಒಕ್ಕಲತನವನ್ನು ಕೆಯ್ಕೊಂಡು ಒಂದೊಂದೆಡೆಯಲ್ಲಿ ನೆಲೆಸಿದ ಬಳಿಕ ನಾಡುಗಳು ತಲೆದೋರಿದುವು ಎಂದು ಇತಿಹಾಸವು ಹೇಳುತ್ತದೆ. ಆದುದರಿಂದ, ನಾಡುಗಳಿಗೆ ಮೊಟ್ಟಮೊದಲು ಜನಾಂಗಗಳಿಂದಲೇ ಹೆಸರು ಬಂದುದು. ಈ ದೃಷ್ಟಿಯಿಂದ ವಿಚಾರಿಸಿದರೆ ಕನ್ನಾಡು ಅಥವಾ ಕನ್ನಡ ಇದರೊಳಗಿನ ಉತ್ತರಪದವಾದ ನಾಡು (ನಡ) ಎಂಬುದನ್ನು ಬೇರ್ಪಡಿಸಿದ ಬಳಿಕ ಉಳಿವ 'ಕನ್' ಎಂಬ ಪದವು ಜನಾಂಗವಾಚಕಶಬ್ದವೆಂದು ನಿರ್ಧರಿಸ ಬೇಕಾಗುವುದು. ಪ್ರಾಕೃತಭಾಷೆಯಲ್ಲಿ ಕಾಣಸಿಕೊಳ್ಳುವ 'ಕಣ್ಣಾಡ' ಎಂಬುದರೊಳಗಣ ಪೂರ್ವಪದವು 'ಕಣ್' ಎಂದಾಗುವುದು. ಹಿಂದಿನ ಅಧ್ಯಾಯದ ಕೊನೆಯಲ್ಲಿ ನಿಶ್ಚಿತವಾಗಿ ನಮಗೆ ಕಂಡುಬಂದಿರುವ ನಮ್ಮ ನಾಡಿನ

ಕರಣ ಅಥವಾ ಕರ್ಣ ಎಂಬ ಜನಾಂಗವೂ ಪ್ರಸ್ತುತ 'ಕನ್ನಡ' 'ಕರ್ಣಾಡ' ಶಬ್ದಗಳಿಂದ ಸೂಚಿತವಾಗುವ ಕ ಅಥವಾ ಕಣ್ ಎಂಬ ಜನಾಂಗವೂ ಅಭಿನ್ನವಾದುವುಗಳೆಂದು ಸಿದ್ಧಪಡಿಸುವ ಆವಶ್ಯಕವಿಲ್ಲ. ಇದು ಕರ್ಣಾಟ ಮೂಲಜನಾಂಗವೆಂಬ ಮಾತು ಸ್ಪಷ್ಟವಿದೆ.

ಕನ್ನಡ ಎಂದರೆ ಕನ್ನರ (ಕನ್ ಎಂಬ ಜನಾಂಗದ) ನಾಡು ಎಂದು ಅರ್ಥ ಮಾಡುವುದು ಯೋಗ್ಯವೆಂ ತೋರುತ್ತದೆ. ಈ ಅರ್ಥಕ್ಕೆ ಕರ್ಣಾಟದ ಪ್ರಾಚೀನ ಪರಂಪರೆಯ ವಿರೋಧವಿಲ್ಲ. ಬೆಂಬಲವೇ ಇದೆ. 'ಕರ್ಣಾ ಎಂದರೂ ಜನಾಂಗವೆಂದೇ ಅರ್ಥವುಂಟೆಂದು ಸ್ಮೃತಿ ಮತ್ತು ಪುರಾಣಗಳ ಆಧಾರಗಳಿಂದ ಹಿಂದಿನ ಅಧ್ಯಾಯ ಕೊನೆಯಲ್ಲಿ ವಿಶದಪಡಿಸಿದ್ದಾಗಿದೆ. ಕರ್ಣಾಟ ಮತ್ತು ಕನ್ನಡ ಎಂಬ ಎರಡೂ ಪದಗಳ ಅರ್ಥವು ಒಂ ಬಗೆಯಾಗಿದ್ದು ಪರಸ್ಪರ ಪೋಷಕವಾಗಿರುವುದರಿಂದ ಈ ಶಬ್ದಗಳಿಗೆ ಜನಾಂಗ ವಾಚಕವಾದ ವ್ಯುತ್ಪತ್ತಿಯೆ ಸಮರ್ಪಕವಾದುದೆಂದು ಧೈರ್ಯವಾಗಿ ಹೇಳಬಹುದಾಗಿದೆ.

ಟಿಪ್ಪಣಿ

೧. Cald well; A comparative Grammar of Dravidian Language pp. 30, 31

೨. Bombay Branch of Royal Asiatic society journal LXXIII P. 491

೩. The suicide of a king who was wounded in the back by cutting his throat on the battle field *technically* called in old Tamil poety, *'Being in the north with the sword'*; the phrase ' being in th north' means the giving up of one's own life by either turning to the north and killing oneself going to a northeran place dying their by starvation. - ***History of Tamils*** pp. 336.-37

೪. See ***Tamil Lexicon***

೫. ಕರ್ಣಾ-ಕರ್ನಾ. ಪುಟ ೪೫

೬. ಪೂರ್ವೋಕ್ತ Tamil Lexicon ನೋಡಿ

೭. Indian Antiquary, 1923,; p. 17

೮. ಕಂಠೀರವ ದಸರಾ ಸಂಚಿಕೆ (೧೯೩೮)

೯. ಕರ್ನಾಟಕ ಸಾಮ್ರಾಜ್ಯ I, ಪುಟ ೨೪೦

೧೦. IA. L. VII, p. 175

೧೧. ...."Tamil was adopted into Sanskrit in early times as Dravida, which occurs, for example in the Mahabharata, in the atharvaveda parishishta and in the Code of manu, not only has the word thus transliterated survived to us in Sanskrit literature, it even imposed itself onTamil men of letters who retransliterated it into their own characters as "Tiramida". Indian Antiqua 1919 P. 194

೧೨. ನರಸಿಂಹಾಚಾರ್ಯ ರಾ. ***ಕವಿಚರಿತೆ*** ಮುನ್ನುಡಿ ಪುಟ ೬

೧೩. Pre-Aryan and Pre-Dravidian In Indian. pp. 74-81

೧೪. ***ಜಯಕರ್ನಾಟಕ*** X ಪುಟ ೫೫೩-೫೫೫

೧೫. Indian Antiquary VII, pp 174-176 ಮತ್ತು JBHS.ಇದರಲ್ಲಿ ಡಾ. ಸಾಲೆತ್ತೂರ ಭಾಸ್ಕರರಾಯರ Carnate

೧೬. ***ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ,*** ೧೯೩೮ ಪುಟ ೧೫೯-೧೬೨

೧೭. ***ಅದೇ,*** ಪುಟ ೧೬೩-೧೮೬

೧೮. ***ಕನಕದಾಸರು*** ೧೯೩೭, ಪುಟ. ೬೧

೧೯. ***ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ*** ೧೯೩೮ ಪುಟ : ೧೬೭

೨೦. ಪೂರ್ವೋಕ್ತ ಪುಟ : ೧೬೭

ಕಣ್ಣರೂ ನಾಟರೂ

ಮನುಸ್ಮೃತಿಯಲ್ಲಿ 'ನಟಶ್ಚ ಕರಣಶ್ಚೈವ' ಎಂದು ಹೇಳಿದೆ. ಆದರೆ ಯಮ, ಪಿತಾಮಹಾದಿಗಳ ಗ್ರಂಥಗಳಲ್ಲಿ "ನಟ" ಎಂಬ ಒಂದೇ ಹೆಸರು ಬಂದಿದೆ. ಮತ್ಸ್ಯಪುರಾಣದಲ್ಲಿ 'ಕರ್ಣ' ಎಂಬ ಒಂದೇ ಜನಾಂಗದ ಉಲ್ಲೇಖ ಉಂಟು. ಆದುದರಿಂದ, ಮನುವು ಹೇಳಿದ ನಟ ಮತ್ತು ಕರಣರು ಒಂದೇ ಜನಾಂಗವೆಂದು ತೋರುತ್ತದೆ. ಕುಲ್ಲೂಕಭಟ್ಟನ ಟೀಕೆಯೊಳಗಿನ ಒಲವನ್ನು ನೋಡಿದರೂ ಇದೇ ಮಾತು ಬಲಪಡುತ್ತದೆ. "ಝಲ್ಲಮಲ್ಲ..... ನಟಕರಣ.....ದ್ರವಿಡಾಖ್ಯಾ.....ಏತಾನಿ ಅಪಿ ಏಕಸ್ಯ ಏವ ನಾಮಾನಿ" ಈ ಮೇರೆಗೆ ನಟ ಮತ್ತು ಕರಣರು ಒಂದೇ. ಆದುದರಿಂದಲೇ ಕೆಲರು ಕರ್ಣ ಅಥವಾ ಕಣ್ (ನ್) ಎಂದೂ ಕೆಲರು ಬರಿ ನಟ(ನಾಟ)ರೆಂದೂ ಹೇಳಿ ಈ ಜನಾಂಗದ ಉಲ್ಲೇಖ ಮಾಡಿದ್ದಾರೆ. ಕುಲ್ಲೂಕಭಟ್ಟನ ವಿವರಣೆಯಿಂದ ಕರಣ(ನಟ)ರೂ ದ್ರವಿಡರೂ ಒಂದೇ ಪಂಗಡದ ಜನಾಂಗದವರೆಂಬುದು ಚೆನ್ನಾಗಿ ಸಿದ್ಧವಾಗುತ್ತಿದೆ. ಆಧುನಿಕ ಸಂಶೋಧಕರು ಹೇಳುವ ದ್ರಾವಿಡ ವರ್ಗದ ಜನಾಂಗಗಳು ಇವು. ಕುಲ್ಲೂಕನು ಪಾಶ್ಚಿಮಾತ್ಯರ ಅನುಕರಣ ಮಾಡಿರುವನೆಂದು ಆರೋಪ ಮಾಡಲು ಬರುವಂತಿಲ್ಲ. ಆದರು ಆತನು ಆಧುನಿಕರಂತೆಯೆ ವರ್ಗೀಕರಣ ಮಾಡಿದ್ದಾನೆ! ಕುಲ್ಲೂಕಭಟ್ಟನು ಕ್ರಿ. ಶ. ೧೨-೧೩ನೆಯ ಶತಮಾನದವನು. ಕರಣ (ನಟ)ರು ದ್ರಾವಿಡ ವರ್ಗದವರೆಂದು ಇವನು ವಿಂಗಡಿಸಿದ್ದುದು ವಿಚಾರಣೀಯವಾಗಿದೆ.

ಕರಣರು ಮತ್ತು ನಟರು ಒಂದೇ ಅರ್ಥದ ಎರಡು ಶಬ್ದಗಳು. ಇವೆರಡೂ ಭಿನ್ನ ಜನಾಂಗಗಳಲ್ಲ. ಒಂದೇ ನಾಡಿನವು. ಒಂದೇ ಜನಾಂಗ. ಇದು ಎರಡು ಬೇರೆಬೇರೆ ಜನಾಂಗಗಳೇ ಆಗಿದ್ದರೆ ಮತ್ಸ್ಯಪುರಾಣ ಅಥವಾ ಬೇರೆ ಸ್ಮೃತಿಗಳಲ್ಲಿ ಕರ್ಣ ಅಥವಾ ನಟ ಎಂಬ ಒಂದೇ ಹೆಸರನ್ನೇ ಉಲ್ಲೇಖಿಸಿ ಸುಮ್ಮನಿರುವುದು ಶಕ್ಯವಿಲ್ಲ. ಆದುದರಿಂದ, ಶ್ರೀ ರಾಜವಾಡೆಯವರು ಕರಣ ಮತ್ತು ನಟ ಎಂಬ ಎರಡು ಜನಾಂಗಗಳ ಸೇರುವೆಯಿಂದ ಕರ್ಣಾಟವಾಯಿತೆಂದು ಹೇಳಿದ್ದುದರಲ್ಲಿ ಸ್ವಲ್ಪ ಕೊರತೆಯಿದೆ. ಈ ನಾಡಿಗೆ ಕರ್ಣಾಟವೆಂದು ಹೆಸರು ಬಂದುದು ಒಂದೇ ಜನಾಂಗದಿಂದ. ಆ ಜನಾಂಗವೆ ಕರಣ (ಕಣ್) ಅಥವಾ ನಟ (ನಾಟ).

ನಟ ಅಥವಾ ನಾಟ ಎಂದರೇನು? ಇದು ಸಂಸ್ಕೃತವೆಂದು ಭಾವಿಸಿ ಅರ್ಥಮಾಡಹೋದರೆ ಅನರ್ಥವಾಗುವುದು. ಮನುಸ್ಮೃತಿ ಮೊದಲಾದ ಕಡೆಗಳಲ್ಲಿ ಬಂದಿದ್ದರೂ ಇದು ಸಂಸ್ಕೃತ ಶಬ್ದವೇ ಅಲ್ಲ, ಎಂಬುದನ್ನು ಮೂರನೆಯ ಅಧ್ಯಾಯದ ಕೊನೆಗೆ ತೋರಿಸಿದ್ದಾಗಿದೆ. ನಾಟ್ಟರ್ People of a country; ನಾಟ್ಟರು ಎಂದು ತಮಿಳಿನ ಉಚ್ಚಾರ. ನಾಟರು ಇಲ್ಲವೆ ನಾಡವರು ಎಂದು ಕನ್ನಡದಲ್ಲಿ ಹೇಳುವ ರೂಢಿ. ಇವೆಲ್ಲ ಒಂದೇ **ತೂಕ**. ತಮಗೆ ನಾಟರು ಎಂದು ಹೇಳಿಕೊಳ್ಳುವ ಜನಗಳ ಸಂಖ್ಯೆ ದಿನದಿನಕ್ಕೂ ಕಡಿಮೆ ಯಾಗುತ್ತಲಿದ್ದು ಈ ಶಬ್ದವು ಸಂದಿಗ್ಧಾರ್ಥವುಳ್ಳದ್ದಾಗುತ್ತಿದ್ದುದನ್ನು 'ಸೆನ್ಸಸ್ ಸುಪರಿಂಟೆಂಡೆಂಟ'ರು ಬರೆಯುತ್ತಾರೆ.

> Nattan a vague term meaning people of the country, reported by some to be a main caste and by some others a subcaste of Vellalas. Nearly all those who returned the name came from Salem and were cultivators.[೨]

ಸೇಲಂ ಜಿಲ್ಲೆಯ ಕನ್ನಡ ಒಕ್ಕಲಿಗರಿಗೆ ನಾಟ್ಟರೆಂಬ ವಾಡಿಕೆಯಿದೆ. ಆದುದರಿಂದ, ನಾಟರೆಂಬ ತಮಿಳರಿರುವಂತೆ ಕನ್ನಡರೂ ಉಂಟೆಂಬಲ್ಲಿ ಸಂದೇಹವಿಲ್ಲ. ಕನ್ನಡ ನಾಟರೇ ನಾಡವರು. ನಾಡವರು ಎಂ ಈ ನಾಡಿನ ಮೂಲನಿವಾಸಿ; ಒಕ್ಕಲುಮಕ್ಕಳೆಂಬ ಅರ್ಥ.[೩] ಕರ್ಣಾಟದ ನಾಟರು (ಮನುಸ್ಮೃತಿಯ ನ ಇಲ್ಲಿಯ ಮೂಲನಿವಾಸಿಗಳು; ನಾಡವರು; ಎಂದರೆ ಈ ನಾಡಿಗೆ ಯಾರಿಂದ ಹೆಸರು ಬಂದಿತೊ ಆ ಅಥವಾ ಕಣ್ ಜನರು. ಕರ್ಣ ಮತ್ತು ನಾಟ ಎಂಬಿವು ಒಂದೇ ಅರ್ಥದ ಎರಡು ಶಬ್ದಗಳು. 'ಕರ್ಣಾ ಎಂಬುದು ಮೂಲಶಬ್ದವೆಂದು ಗ್ರಹಿಸಿದರೆ ಈ ಶಬ್ದಸಿದ್ಧಿಯಲ್ಲಿ ದ್ವಿರುಕ್ತಿದೋಷವನ್ನು ಸ್ವೀಕರಿಸಬೇಕಾಗು ಕರ್ಣಾಟ ಎಂಬ ಶಬ್ದದಲ್ಲಿ ಕರ್ಣ ಮತ್ತು ನಾಟ ಎಂಬ ಒಂದೇ ಅರ್ಥದ ಎರಡು ಹೆಸರುಗಳು ಅನಾವಶ್ಯಕ ಬರುವುವು. ಇದು ಸರಿಯಾಗಿ ಕಾಣುವುದಿಲ್ಲ. ಆದುದರಿಂದ, ಕರ್ಣಾಟವೆಂಬುದು ಮೂಲಪದವಾಗಿರಲಾ ಕನ್ನಾಡ ಎಂಬುದರ ಸಂಸ್ಕೃತೀಕರಣವಾಗಿ ಕರ್ಣಾಟ ಆಗಿರಬೇಕು. ಏಕೆಂದರೆ, ಕನ್ನಡನಾಡು ಎಂಬ ಸಮಂಜಸ ಅರ್ಥವು ಕನ್ನಾಡು (ಕನ್ನಡ) ಎಂಬ ಪದದಲ್ಲಿದೆ. ಕನ್ನಾಡು-ಕನ್ನಾಟ-ಕರ್ಣಾಟ ಈ ಕ್ರಮದಿಂದ ಅದು ಸಂ ದಲ್ಲಿ ಸೇರಿಕೊಂಡಿದೆ. ಕರ್ಣಾಟದಲ್ಲಿರುವ ದ್ವಿರುಕ್ತಿದೋಷವು ಕನ್ನಾಡ (ಕನ್ನಡ)ದಲ್ಲಿ ಸ್ವಲ್ಪವೂ ಇಲ್ಲ.

ನಾಟರೆಂದರೆ ನಾಡವರು. ಕಾರವಾರ-ಮಂಗಳೂರು ಸೀಮೆಯಲ್ಲಿ ನಾಡವರೇ ಪ್ರಮುಖ ಜನ ದಕ್ಷಿಣಕನ್ನಡ ಜಿಲ್ಲೆಯ ಜಾತಿ ಜನಾಂಗಗಳನ್ನು ವಿವರಿಸುವ ಗ್ರಂಥದಲ್ಲಿ ಬರೆದಿರುವುದೇನೆಂದರೆ :

> They are the chief land owning and cultivating class.....with the exception of the Billavas the most numerous caste in the district.[೪]

ಈ ಸೀಮೆಗೆ ಕನ್ನಡ (ಜಿಲ್ಲೆ) ಎಂದು ಹೆಸರು. ಕನ್ನಡ ಎಂದರೆ ಕನ್ನಡ ನಾಡು. ಇಲ್ಲಿಯ ಪ್ರ ಜನಾಂಗವಂತು ನಾಡವರು. ಆದುದರಿಂದ, ನಾಡವರೇ ಕನ್ನರು ಅಥವಾ ಕಣ್ಣರೆಂಬ ಮಾತು ಇನ್ನೂ ಒ ಬಗೆಯಿಂದ ನಿದರ್ಶನಕ್ಕೆ ಬಂದಂತಾಯಿತು. ಆದುದರಿಂದ, ಮನುವು ಹೇಳಿದ ಕರಣರು ಮತ್ತು ನಾ ಒಂದೇ ಎಂದು ಕುಲ್ಲೂಕಭಟ್ಟನು ಹೇಳಿದುದು ಸಂಪೂರ್ಣ ಸತ್ಯ, ಮನುವು ಹೇಳುವ ಕರಣರೂ, ಮತ್ಸ್ಯಪುರಾ ಕರ್ಣರೂ, ಇನ್ನು ಕೆಲವು ಸ್ಮೃತಿ ಪ್ರಬಂಧಗಳಲ್ಲಿ ಬರುವ ನಟ (ನಾಟ)ರೂ ನಮ್ಮ ಇಂದಿನ ನಾ ಪೂರ್ವಿಕರೇ ಎಂದು ನಿಃಸಂದೇಹವಾಗಿ ಹೇಳಬಹುದಾಗಿದೆ. 'ನಾಡವ'ರು ಈಗ 'ಕನ್ನಡ' ಜಿಲ್ಲೆಯಲ್ಲಿ ಉಳಿದಿರುವರು. ಕನ್ನಡ ಜಿಲ್ಲೆ ಮತ್ತು 'ನಾಡವ'ರು! ಸೀಮೆ ಮತ್ತು ಜನಗಳ ಹೆಸರಿನ ಈ ಪರಸ್ಪರ ನಿಕಟಸಂಬಂ ಅತ್ಯಂತ ವಿಚಾರಾರ್ಹವಾಗಿದೆ. ನೃಪತುಂಗನ ಕವಿರಾಜಮಾರ್ಗದಲ್ಲಿ 'ನಾಡವ'ರನ್ನು ಬಾಯಾರೆ ಹೊಗಳಿದುದು ಈ ಪ್ರಾಚೀನ ಗ್ರಂಥದಲ್ಲಿ ಎರಡು ಕಡೆಗಳಲ್ಲಿ ನಾಡವರ ವರ್ಣನೆಗಳು ಬಂದಿವೆ. ಅವೆರಡರಲ್ಲಿ ಮೊದಲನೆಂ ಸಾಮಾನ್ಯವಾಗಿ ಈ ದೇಶದಲ್ಲಿ ವಾಸಿಸಿದ ಎಲ್ಲ ಜನಗಳನ್ನು ಕುರಿತು ಮಾಡಿದ ವರ್ಣನೆಯೆಂಬ ಭಾಸವಾಗುವ

ಪದನರಿದು ನುಡಿಯಲುಂ ನುಡಿ।
ದುದನಾರಯಲುಂ ಆರ್ಪರಾ ನಾಡವರ್ಗಳ್।
ಚದುರರ್ ನಿಜದಿಂ ಕುರಿತೋ
ದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್॥

ಎಂಬ ಈ ವರ್ಣನೆಯಲ್ಲಿ ಮಾಡುವ ಮೊದಲು 'ಕಾವೇರಿಯಿಂದ ಗೋದಾವರಿ ವರಂ ಇರ್ದ ನ ಅದು ಆ 'ಕನ್ನಡ' ಎಂದು ಹೇಳಿ ಬಳಿಕ ನಾಡವರ ವರ್ಣನೆಯನ್ನು ಆರಂಭಿಸದ್ದಾನೆ. ಆದುದರಿಂದ

ನಾಡವರು ಆ ಕಾಲಕ್ಕೆ ಈ ನಾಡಿನಲ್ಲಿ ನೆಲೆಸಿದ್ದ ಎಲ್ಲ ಜನಸಾಮಾನ್ಯರಲ್ಲ. 'ನಾಡವರು' ಎಂಬ ಒಂದು ವಿಶಿಷ್ಟ ವರ್ಗವೇ ಆಗಿರಬೇಕು.

ನೃಪತುಂಗನ ಕಾಲದ ಮನೋಭೂಮಿಕೆಯನ್ನು (Psychology) ಸ್ವಲ್ಪ ನಿರೀಕ್ಷಿಸಿದರೂ ಈ ಮಾತೇ ನೆಲೆಗೊಳ್ಳುವುದು. ೮-೯ನೆಯ ಶತಮಾನದಲ್ಲಿ ಇಂದಿನಂತಹ ದೇಶಾಭಿಮಾನದ ಕಲ್ಪನೆಗಳೆ ತಲೆದೋರಿದ್ದಿಲ್ಲ. ಒಂದು ನಾಡು ಮತ್ತು ಆ ನಾಡಿನ ಜನಸಾಮಾನ್ಯರು ಇವರನ್ನೆಲ್ಲ ಅಚ್ಚುಮೆಚ್ಚಿನಿಂದ ಕಾಣುವುದು, ಅದಕ್ಕಾಗಿ ಬೇಕಾದ ತ್ಯಾಗಕ್ಕೆ ಸಿದ್ಧರಾಗುವುದು ; ಇವೆಲ್ಲ ಇಂದಿನ ವಿಚಾರಗಳು. ಜಗತ್ತಿನಲ್ಲಿಯೆ ಈ ಬಗೆಯ ದೇಶಾಭಿಮಾನವು ವಿಶೇಷ ಊರ್ಜಿತ ಸ್ಥಿತಿಗೆ ಬಂದುದು ಅರ್ವಾಚೀನಕಾಲದಲ್ಲಿ. ಕರ್ಣಾಟದಲ್ಲಿ ತಾವು 'ಕನ್ನಡಿಗರು' ಎಂಬ ಅಭಿಮಾನವು ಮೊಳೆತುಕೊಳ್ಳಲು ಎಷ್ಟೊಂದು ದೀರ್ಘ ಕಾಲಾವಧಿಯು ಬೇಕಾಯಿತು ಎಂಬುದನ್ನು ಎರಡನೆಯ ಅಧ್ಯಾಯದಲ್ಲಿ ವಿವರಿಸಿದ್ದಾಗಿದೆ. ಆದುದರಿಂದ, ದೇಶಾಭಿಮಾನದ ಇಂದಿನ ವಿಚಾರಗಳನ್ನು ಒಯ್ದು ಹಿಂದಿನ ಕಾಲದ ಮಾತುಗಳ ಮೇಲೆ ಅಂಟಿಸುವುದು ಅಯುಕ್ತ. ನಾಡವರು ಬಹಳ ರಸಿಕರೆಂದು ನೃಪತುಂಗನು ವರ್ಣಿಸಿದ್ದುದು ಒಂದು ವಿಶಿಷ್ಟವರ್ಗವನ್ನಲ್ಲದೆ, ಆ ಕಾಲದ ಇಡಿ ಕರ್ಣಾಟರನ್ನಲ್ಲ. ನೃಪತುಂಗನು ಆ ಬಗೆಯಾಗಿ ನಾಡವರನ್ನು ವರ್ಣಿಸಿದುದಕ್ಕೆ ಒಂದು ಕಾರಣವೂ ಉಂಟು. ಅದು ಒಂದು ಬಗೆಯ ಆತ್ಮಪ್ರಶಂಸೆಯಾಗಿದೆ. ಆತ್ಮ ಪೌರುಷವನ್ನು ಹೇಳಿಕೊಳ್ಳುವುದು ಕನ್ನಡಿಗರ ವೈಶಿಷ್ಟ್ಯವಾಗಿದೆ. ನೃಪತುಂಗನು ಇದಕ್ಕೆ ಅಪವಾದವಲ್ಲ. ನೃಪತುಂಗನು ರಾಷ್ಟ್ರಕೂಟ ವಂಶದವನು. ರಾಷ್ಟ್ರಿಕರು-ರಾಷ್ಟ್ರಕೂಟರು ಈ ನಾಡಿನ ಮೊದಲಿಗರು (Indigenous tribe) ಎಂದು ವಿನ್ಸೆಂಟಸ್ಮಿತ್‌ನ ಅಭಿಪ್ರಾಯ.[೫] ರಠಿಕನೆಂದರೆ Native ನೆಂದು ಪಾಲೀಕೋಶವು ಹೇಳುತ್ತದೆ. ರಾಷ್ಟ್ರಿಕ ಎಂದರೆ ರಾಷ್ಟ್ರದವ; ಕನ್ನಡದಲ್ಲಿ ಹೇಳುವುದಾದರೆ ಇವನೇ ನಾಡವ. ಗೌಡನೆಂದೂ ಹಲವರು ಅರ್ಥಮಾಡುವರು. ಮೈಸೂರು ಸೀಮೆಯಲ್ಲಿ ನಾಡವರಿಗೆ ಗೌಡರು ಅಥವಾ ನಾಡಗೌಡರು ಎನ್ನುವ ವಾಡಿಕೆಯಿದ್ದುದು ಅಲ್ಲಿಯ 'ಜಾತಿಜನಾಂಗ'ಗಳ ಇತಿಹಾಸಗ್ರಂಥದಿಂದಲೆ ಗೊತ್ತಾಗುತ್ತದೆ.[೬] ನಾಟ್ಟಮ್- Chiefship of a district ಎಂದು ತಮಿಳಕೋಶವು ಹೇಳುತ್ತದೆ. ಆದುದರಿಂದ, ಕವಿರಾಜಮಾರ್ಗದೊಳಗಿನ ನಾಡವರ ವರ್ಣನೆಯೆಂದರೆ ಅದು ನೃಪತುಂಗನ ಕಾಲದ-ರಾಷ್ಟ್ರಕೂಟ ಜನಾಂಗದ ವರ್ಣನೆಯೇ ಆಗಿದೆ. ನಾಡವರೆಂದರೆ, (ಆಧುನಿಕ ಕವಿಯ ಭಾಷೆಯಲ್ಲಿ ಹೇಳಬಹುದಾದರೆ:) 'ಭೂಮಿತಾಯಿಯ ಚೊಚ್ಚಿಲ ಮಕ್ಕಳು'-ಇವರೆ ಈ ನಾಡಮೊದಲಿಗರು. ಮೂಲ ಒಕ್ಕಲುಮಕ್ಕಳು. ರಾಷ್ಟ್ರಕೂಟರು ಎಂದರೆ ಒಕ್ಕಲತನದವರೆಂಬ ಅರ್ಥವೇ ಉಂಟೆಂದು ಶಾಸನ ಇಲಾಖೆಯ ಮುಖ್ಯಾಧಿಕಾರಿಗಳಾಗಿದ್ದ ಶ್ರೀಮಾನ್ ಹೊಸಕೊಪ್ಪ ಕೃಷ್ಣರಾಯರು ನಿರ್ಧರಿಸಿದ್ದಾರೆ. 'ರಾಷ್ಟ್ರಕೂಟ ಪ್ರಮುಖಾನ್ ಕುಟುಂಬಿನಃ' ಎಂದು ಶಾಸನಗಳಲ್ಲಿ ಬರುವ ವಾಕ್ಯಾರ್ಥವನ್ನು ವಿವರಿಸುವಾಗ ಅವರು ಬರೆದಿರುವುದು ಏನೆಂದರೆ:

> The familiar phrase 'ರಾಷ್ಟ್ರಕೂಟ ಪ್ರಮುಖಾನ್ ಕುಟುಂಬಿನಃ' which occurs in copper plate inscriptions shows also that the Rashtrakutas were 'ಕುಟುಂಬಿಗಳು' i.e. cultivators who enjoyed a higher social status than others of their community.[೭]

ರಾಷ್ಟ್ರಕೂಟರ ಶಾಸನಗಳ ಮೇಲೆ ರಾಜಚಿಹ್ನವೆಂದು ಹಲವೆಡೆಗಳಲ್ಲಿ ನೇಗಿಲು ಇದ್ದುದು ಬೆಳಕಿಗೆ ಬಂದಿದೆ.[೮] ಆದುದರಿಂದ, ರಾಷ್ಟ್ರಕೂಟರು-ನಾಡಗೌಡರು, ಒಕ್ಕಲುಮಕ್ಕಳೆಂಬ ಬಗ್ಗೆ ಸಂದೇಹವೆ ಇಲ್ಲ. ರಾಷ್ಟ್ರ ಕೂಟರು ಯದುವಂಶಿಗಳೆಂದೂ ಒಂದು ಪರಂಪರೆಯಿದೆ. ಅದು ಸುಳ್ಳೆಂದೂ ಹಲವು ವಿದ್ವಾಂಸರ ಅಭಿಪ್ರಾಯ ವುಂಟು. ಆದರೆ, ಇಲ್ಲಿ ಈ ಪ್ರಾಚೀನ ಪರಂಪರೆಯು ಇನ್ನೊಂದು ಪ್ರಾಚೀನ ಪರಂಪರೆಯೊಡನೆ ಎಷ್ಟೊಂದು ಸಹಜಮನೋಹರ ರೀತಿಯಿಂದ ಹೊಂದಿಕೊಳ್ಳುವುದೆಂಬುದನ್ನು ನೋಡಿದರೆ ಸೋಜಿಗವಾಗುವುದು. ಯದುಗಳು

ಗೋವಳರು; ಗೌಳರು-ಗೌಡರು. ರಾಷ್ಟ್ರಕೂಟರು ಗೌಡರು, ನಾಡಗೌಡರು.[೯] ಇದು ಮಹತ್ತ್ವದ್ದಲ್ಲ. ಮಹತ್ತ್ವ ಸಂಗತಿ ಇನ್ನೊಂದು ಬೇರೆ ಇದೆ. ಗಂಗವಂಶಕ್ಕೂ ರಾಷ್ಟ್ರಕೂಟರಾಜರಿಗೂ ನಿಕಟವಾದ ಸಂಬಂಧವಿದ್ದುದು ಸ್ಪಷ್ಟವಿದೆ. ರಾಷ್ಟ್ರಕೂಟರು ತಾವು ಸಾಮ್ರಾಟರಾಗಿದ್ದರೂ ತಮಗಿಂತಲೂ ಕಿರಿಯ ಅರಸರಾದ ಗಂಗ ವಂಶಕ್ಕೆ ತಮ್ಮ ಹೆಣ್ಣುಮಕ್ಕಳನ್ನು ಮದುವೆ ಮಾಡಿಕೊಟ್ಟಿದ್ದಾರೆ. ಆದುದರಿಂದ, ಗಂಗರಾಜರ ಕುಲವು ರಾಷ್ಟ್ರಕೂಟ ಕುಲಕ್ಕಿಂತಲೂ ಕಡಿಮೆ ಎಂದೂ ಇರಲಾರದು. ರಾಷ್ಟ್ರಕೂಟರು ತಮಗೆ ಯದುವಂಶಿಗಳೆಂದುಕೊಳ್ಳುತ್ತಿದ್ದ ಗಂಗರು ತಾವು ತುರ್ವಸುವಿನ ಸಂತತಿಯವರೆಂದು ಹೇಳುತ್ತಿದ್ದುದು ಶಾಸನಗಳಿಂದಲೇ ಗೊತ್ತಾಗಿದೆ. ಇಲ್ಲಿ ಮ ಋಗ್ವೇದಕಾಲದ ಯದು-ತುರ್ವಸುಗಳು ಕೂಟದ ಉಲ್ಲೇಖಗಳು ನೆನಪಿಗೆ ಬಾರದೆ ಇರುವುದಿಲ್ಲ! ಎಂದ ಋಗ್ವೇದಕಾಲದಿಂದ ಕಂಡುಬರುವ ಈ ಯದು-ತುರ್ವಸುಗಳ ನಿಕಟವಾದ ಸಂಬಂಧವು ಗಂಗ-ರಾಷ್ಟ್ರಕೂಟ ಕಾಲದ ವರೆಗೂ ಅವ್ಯಾಹತವಾಗಿ ನಡೆದು ಬಂದುದು ಬಹಳ ಮಹತ್ತ್ವದ ಸಂಗತಿಯಾಗಿದೆ. ಗಂಗರು ತುರ್ವಸುವಿ ಸಂತತಿ. ಕರ್ನಾಟದ ಮೊದಲಿಗರಾದ ಕರ್ಣರು ತುರ್ವಸುವಿನ ಪೀಳಿಗೆಯವರೆಂದು ಮತ್ಸ್ಯಪುರಾಣವು ಹೇಳುತ್ತದೆ ಆದುದರಿಂದ; ಗಂಗರು 'ಕರ್ಣ' ಎಂದರೆ ಕಣ್ ಜನಾಂಗವೆಂಬುದು ಸಿದ್ಧ. ಕಣ್ (ಕನ್) ಜನಾಂಗವೇ ನಾಡವರು ಆದುದರಿಂದ ಗಂಗರೂ ರಾಷ್ಟ್ರಕೂಟರೂ ನಾಡವರು.

ರಾಷ್ಟ್ರಕೂಟರೂ ಗಂಗರೂ ಶೌರ್ಯದಲ್ಲಿ ಮಿಗಿಲಾದವರು. ಕರ್ನಾಟರು ಜನ್ಮತಃ ಕಡುಗಲಿಗಳೆಂದ ಪರಪ್ರಾಂತೀಯರೂ ಹೊಗಳಿದ್ದಾರೆ. ನಮ್ಮ ನಾಡವರಿಗೆ ಬಂಟರೆಂದು ಇರುವ ಹೆಸರಿನ ಔಚಿತ್ಯವು ಇರುವಾ ಗೊತ್ತಾಗುವುದು. ಬಂಟರೆಂದು ಹೆಸರಾದ ನಾಡವರ ಗುಣ-ಸ್ವಭಾವಗಳನ್ನು ಸೂಕ್ಷ್ಮ ನಿರೀಕ್ಷಕನಾದ ಇಂಗ್ಲಿಷ ಅಧಿಕಾರಿಯೊಬ್ಬನು ಹೀಗೆ ವರ್ಣಿಸಿದ್ದಾನೆ:

> They still retain their manly independence of character, their strong well developed physique and they still carry their heads with the same haughty toss as their fore- fathers did in the stirring fighting days, when, as an old proverb had it 'the slain rested in the yard of the slayer', and when every warrior constantly carried his sword and shield. Both men and women of the Bant community are among the comliest of Asiatic races.......[೧೦]

ಇದು ಆಧುನಿಕ ವಿಮರ್ಶಕ ಗೃಹಸ್ಥನು ತಾನು ಕಣ್ಣಾರೆ ಕಂಡು ಮಾಡಿದ ನಾಡವರ ವರ್ಣನೆ ಕವಿರಾಜಮಾರ್ಗದಲ್ಲಿ ಬಂದಿರುವ ಇನ್ನೊಂದು (೨.೨೮) ವರ್ಣನೆಯೊಡನೆ ಹೋಲಿಸಿ, ಮನನ ಮಾಡುವಂತಿದೆ

ಸುಭಟರ್ಕಳ್ ಕವಿಗಳ್ ಸು।
ಪ್ರಭುಗಳ್ ಚೆಲ್ವರ್ಕಳಭಿಜನರ್ಕಳ್ ಗುಣಿಗಳ್॥
ಅಭಿಮಾನಿಗಳತ್ಯುಗ್ರರ್
ಗಭೀರಚಿತ್ತರ್ ವಿವೇಕಿಗಳ್ ನಾಡವರ್ಗಳ್॥

೧೧೦೦ ವರುಷಗಳ ಹಿಂದಿನ ನಾಡವರ ವರ್ಣನೆಯಿದು! ಎಷ್ಟು ಸಾಮ್ಯ! ಕವಿರಾಜಮಾರ್ಗ ವರ್ಣನೆಯನ್ನೋದಿ ಅದನ್ನೇ ಇಂಗ್ಲೀಷಿನಲ್ಲಿ ಭಾಷಾಂತರಿಸಿದಂತಿದೆ! ಅಂದಿನ ಗುಣಗಳು ಇಂದಿಗೂ ಅಚ್ಚಳಿಯ ಉಳಿದಿವೆ. ಇವರು ಬಂಟರು-ಸು-ಭಟರ್ಕಳ್, ಅಭಿಮಾನಿಗಳ್, ಅತ್ಯುಗ್ರರ್, ಗಭೀರಚಿತ್ತರ್; ಚೆಲ್ವರ್ಕಳ್ ಅಭಿಜನರ್ಕಳ್, ಗುಣಿಗಳ್, ವಿವೇಕಿಗಳ್; ಇವರು ಒಬ್ಬರಿಗೆ ತಲೆವಾಗಿ, ಜೀಯೆಂದು ಎಂದೂ ಬಾಳಿದವರಲ್ಲ

ಆದುದರಿಂದಲೆ ಸುಪ್ರಭುಗಳ್. ಆಳಿ ಗೊತ್ತು ಇವರಿಗೆ; ಆಳಾಗಿ ಬಾಳಿದವರಲ್ಲ. 'ಸಾರಿಯುಂ ಕೀರಿಯುಂ' ಬಾಳುವವರು; 'ಎಂದುದನೆ ಎಂದು' ಬದುಕಿಕೊಂಡಿರುವವರಲ್ಲ. ಯಕ್ಷಗಾನ, ಸಂಗೀತದ ಪ್ರೀತಿ ಇಂದಿನ ನಾಡವರಿಗೂ ವಿಶೇಷ. ಆದುದರಿಂದ, ಇವರಿಗೆ-ಅಭಿಜನರರ್ಕಳ್, ಗುಣಿಗಳ್, ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್ ಎಂದು ನೃಪತುಂಗನು ಅಂದು ವರ್ಣಿಸಿದುದು ಇಂದಿಗೂ ಸಮರ್ಪಕವಾಗಿದೆ!

ಇಂತಿದು ಕನ್ನಡದ ಮೂಲಜನಾಂಗ. ಕರ್ಣಾಟರು ವೀರರು ಧೀರರೆಂದು ಹೆಸರು ಬಂದುದು ಈ ಜನಾಂಗದಿಂದ. ಈ ಜನಾಂಗವೆ ಈ ನಾಡಿನ ಜೀವಜೀವಾಳ. ಇಂದು ಈ ಜನಾಂಗವು ಮಲೆನಾಡಿನಲ್ಲಿ ಮಾತ್ರ ಕಣ್ಣಿಗೆ ಬೀಳುವುದಾದರೂ ಪ್ರಾಚೀನಕಾಲದಲ್ಲಿ ಇವರ ಅನೇಕ ಗುಂಪುಗಳು ಸಮಗ್ರ ಕರ್ಣಾಟದಲ್ಲಿ ಹಬ್ಬಿಕೊಂಡಿದ್ದುವೆನ್ನಲು ಸಾಕಷ್ಟು ಆಧಾರಗಳಿವೆ. ಅದು ಏನೇ ಇದ್ದರೂ ನಾಡವರು ಈಗ ಇಷ್ಟೊಂದು ಅಲ್ಪಸಂಖ್ಯಾಕರಾಗಿರುವುದಕ್ಕೆ ಹಲವು ಕಾರಣಗಳಿವೆ. ಹೊರಗಣಿಂದ ಈ ನಾಡಿನಲ್ಲಿ ನೆಲಸಲು ಬಂದ ಜನಗಳಲ್ಲಿ ಇವರ ಬಹುಭಾಗವು ಬೆರೆತುಕೊಂಡಿರುವ ಸಂಭವವು ಉಂಟಲ್ಲದೆ ಇದಕ್ಕೆ ಇನ್ನೂ ಎರಡು ಬೇರೆ ಕಾರಣಗಳಿವೆ. ಅತಿ ಪ್ರಾಚೀನಕಾಲದಿಂದಲೂ ಇವರು 'ವೀರ' ಪೂಜಕರು; ವೀರ (ರುದ್ರ) ನ ಉಪಾಸಕರು. ಆದರೆ, ಮುಂದೆ ಮಹಾವೀರನ ಅನುಯಾಯಿಗಳಾದವರು ಹಲರು; ಇದಕ್ಕೆ ಗಂಗರ ಅರಸು ಮನೆತನವೇ ಸಾಕ್ಷಿ. ಲಿಂಗಧಾರಣೆಯ ಹೊಸ ಪಂಥಕ್ಕೆ ಸೇರಿದವರು ಹಲರು; ರಡ್ಡಿ, ಕುಡುಒಕ್ಕಲಿಗ, ಗೌಡರು ಮೊದಲಾದ ಒಳಬಣಗಳು ಆ ಧರ್ಮದಲ್ಲಿ ಈಗಲೂ ಉಳಿದುಕೊಂಡಿದುದೆ ಇದಕ್ಕೆ ದೃಷ್ಟಾಂತ. ಶ್ರೀವೈಷ್ಣವ ಮತ್ತು ಹರಿದಾಸ ಪಂಥದ ದೀಕ್ಷೆ ಹೊಂದಿದವರೂ ಉಂಟು. ಆದರು, ಜೈನ ಮತ್ತು ಲಿಂಗವಂತ ಇವೆರಡು ಪ್ರಸಾರಕ ಧರ್ಮಗಳ ಮಹಾ ಪ್ರವಾಹದಲ್ಲಿ ಸಿಲುಕಿ ತಮ್ಮ ಮೂಲಕುಲಗೋತ್ರಗಳನ್ನು ಸಂಪೂರ್ಣ ಮರೆತುಬಿಟ್ಟವರೇ ಬಹಳ. ಮೂಲನಾಡವರಲ್ಲಿ ಒಂದೊಂದು ಕಾಲಪರಿಸ್ಥಿತಿಗೆ ಅನುಸಾರವಾಗಿ ಹಲವರು ಹಲವು ಬಗೆಯ ವೃತ್ತಿಗಳನ್ನು ಸ್ವೀಕರಿಸಿ ಜೀವನವ್ಯಾಪಾರವನ್ನು ಸಾಗಿಸಬೇಕಾಗಿರುವುದು ಸಹಜ. ಹಾಗೆ ದೇಶ-ಕಾಲ-ಉದ್ಯೋಗ ಭೇದದಿಂದ ಇವರಲ್ಲಿ ಒಳಪಂಗಡಗಳು ಹೆಚ್ಚುಹೆಚ್ಚಾಗುತ್ತ ಹೋಗಿ ಕೊನೆಗೆ ತಾವು ಒಬ್ಬರಿಂದ ಒಬ್ಬರು ತೀರ ಬೇರೆ ಎನ್ನುವಂತಹ ಭಾವನೆ ಯವರಾಗಿರುವುದೂ ಸ್ವಾಭಾವಿಕವಾಗಿದೆ. ನಾಡವರು, ಬಂಟರು, ಒಕ್ಕಲರು, ಕುಡುವರು, ರಡ್ಡಿಗಳು, ಗಂಗಡಿಕಾರರು, ಗೌಡರು, ಕ್ಷತ್ರಿಯರು, ಬ್ರಹ್ಮಕ್ಷತ್ರಿಯರು, ಎಂಬೀ ಬಗೆಯ ಭೇದಾಭೇದಗಳು ಬೆಳೆದುದುಂಟು. ಆದರೆ, ಮೊದಲಲ್ಲಿ ಇವೆಲ್ಲ ಜನಗಳು ಒಂದೇ ಬುಡಕಟ್ಟಿನವರೆಂದು ಸ್ವಲ್ಪ ಸೂಕ್ಷ್ಮ ನಿರೀಕ್ಷಣೆಯಿಂದ ಕಂಡುಕೊಳ್ಳಬಹುದಾಗಿದೆ. ಇಂತೀ ಬಗೆಯ ಆವುದೆ ಕಾರಣವಿರಲಿ, ಕರ್ನಾಟದ ಬಹು ಭಾಗದೊಳಗಿನ ನಾಡವರ ಗುರುತು ಸಿಕ್ಕುವುದು ಇಂದು ಸಾಧ್ಯವಿಲ್ಲ. ಆದರೂ ಸುದೈವದಿಂದ ಕನ್ನಡದ 'ಮೂಲಿಗ'ರು ಕನ್ನಡ ಜಿಲ್ಲೆಯಲ್ಲಿ ಕೆಲಮಟ್ಟಿಗಾದರೂ ಉಳಿದುಕೊಂಡಿದ್ದಾರೆ. ಕನ್ನಡದ ಮೂಲಜನಾಂಗದ ಗುಣ-ಸ್ವಭಾವ, ರೂಪ ಆಕಾರಗಳು ಬಹಳ ಮಟ್ಟಿಗೆ ಇವರಲ್ಲಿ ಈಗಲೂ ಜೀವಂತವಾಗಿರುವುದನ್ನು ಕಾಣಬಹುದು. ಅರ್ವಾಚೀನಕಾಲದಲ್ಲಿ ಜೈನಧರ್ಮವು ಹಿಂದೆ ಬಿದ್ದು ಲಿಂಗವಂತರ ಪ್ರಾಬಲ್ಯವೇ ಹೆಚ್ಚಾಯ್ತು. ಕನ್ನಡದ ಮೂಲಜನಾಂಗದ ಬಹುಭಾಗವು ಈ ಮತಾನುಯಾಯಿ ಗಳಲ್ಲಿ ಅಡಕವಾಗಿದೆ. ಆದುದರಿಂದ ಕನ್ನಡದ ನಾಡವರ ಸ್ವಭಾವ ವೈಶಿಷ್ಟ್ಯವು ಲಿಂಗವಂತರಲ್ಲಿಯೂ ಉಂಟೆಂದು ಬೇರೆ ಹೇಳುವ ಕಾರಣವಿಲ್ಲ.

ನಾಟರು-ನಾಡವರು ಎಂಬ ಜನಗಳು ಈಗಲೂ ಉಂಟು. ಪ್ರಾಚೀನ ಕಾಲದಲ್ಲಿಯೂ ಇದ್ದುದನ್ನು ಸ್ಮೃತಿಗ್ರಂಥಗಳಿಂದಲೂ ಕನ್ನಡ ಸಾಹಿತ್ಯದಿಂದಲೂ ಕಂಡುಕೊಂಡುದಾಯಿತು. ಇವರೇ ಕನ್ನಡದ ಮೊದಲಿಗರು. ಆದುದರಿಂದ ಕನ್ ಎಂಬ ಜನಾಂಗವೆಂದರೆ ಇದೇ, ಎಂದು ಊಹಿಸಲು ಅವಕಾಶವುಂಟೆಂಬುದನ್ನು ಅರಿತು ಕೊಂಡುದೂ ಆಯ್ತು. ಆದರೆ ಕನ್ ಜನಾಂಗದ ಅಸ್ತಿತ್ವವನ್ನು ನಿಶ್ಚಿತವಾಗಿ ತಿಳಿಸುವ ಇದಕ್ಕೂ ಹೆಚ್ಚಿನ ಪ್ರಾಚೀನ ಅವಶೇಷಗಳು ಏನೂ ಇಲ್ಲವೆ? ಕನ್ನರೆಂಬ ಜನಾಂಗವು ಈ ನಾಡಿನಲ್ಲಿ ಬಾಳಿ ಬದುಕಿದುದಕ್ಕೆ ಇದಕ್ಕೂ ಬಲವಾದ ಪ್ರಮಣಗಳು ದೊರೆಯದೆ ಇದ್ದರೆ ಈ ಬರಿ ಊಹೆಯನ್ನು ಹೇಗೆ ತಾನೆ ನಂಬುವುದು?

ಫಾದರ ಹೆರಾಸರು ಮೊಹೆಂಜೋದಾರೊದಲ್ಲಿ ದೊರೆತ ಪ್ರಾಚೀನತಮ ಶಾಸನಗಳನ್ನು ಬಹಳ ಪರಿಶ್ರಮಪಟ್ಟು ಓದಿ, ಅವನ್ನು ಕುರಿತು ಹಲವು ಲೇಖನಗಳನ್ನು ಪ್ರಕಟಿಸಿದ್ದಾರೆ. 'ಕರ್ಣಾಟಕ ಮತ್ತು ಮೊಹೆಂಜೋದಾರೊ' ಎಂಬ ಒಂದು ಲೇಖನದಲ್ಲಿ ಅವರು ಬರೆಯುವುದೇನೆಂದರೆ :

> The fact that the ancient people of Mohenjo Daro were Proto-Dravidians-a fact hinted at by Sir John Marshall and confirmed by the interpretation of all the inscriptions by the present writer is already a link between all the Dravidian countries, including therefore Karnataka, and Mohenjo Daro. But the connection between Karnataka and Mohenjo Daro is still more explicit than this general inter-relation. The people of Karnatak are apparently referred to in one of the seal inscriptions of Mohenjo Daro as one of the ancient tribes of the land. The sign used to mention them is *a symobol to donote an eye*. The main (similar) sign is also found in the Sumerian tablets of Jemdet Nasar.....thus it means 'eye'. Therefore in the Proto-Dravidian language of Mohenjo Daro it will read Kan, 'eye' or to 'see'....therefore it will read Kannan *'one who sees'*.......thus the complete sign will read Kananir, 'people who have eyes' this evidently refers to a tribe, to a number of people called so. The ancient word Kannadigas by which the people of modern Karanataka are mentioned, seems to be a Sanskrit modification of Kananir.[೧೧]

ಫಾದರ ಹೆರಾಸರ ಈ ಸಂಶೋಧನೆಯಲ್ಲಿ ಸತ್ಯಾಂಶವಿದೆಯೆಂದು ಸಿದ್ಧವಾದರೆ ಕನ್ನಡಿಗರ ಪ್ರಾಚೀನ ಇತಿಹಾಸ ಭವ್ಯತೆಯು ಇನ್ನೂ ಹೆಚ್ಚುವುದು. ವೇದಕಾಲದಿಂದಲೂ ಕನ್ನಡಿಗರು ಪ್ರಬಲರಾಗಿದ್ದರು. ಇವರ ನಡೆನುಡಿಗಳ ಕುರುಹುಗಳು ವೈದಿಕ ಸಾಹಿತ್ಯದಲ್ಲಿ ಅಲ್ಲಲ್ಲಿ ಕಾಣಬರುವುದೆಂಬುದನ್ನು 'ಕರ್ಣಾಟದ ವೀರಕ್ಷತ್ರಿಯರು' ಎಂಬ ಪುಸ್ತಕದಲ್ಲಿ (೧೯೩೬) ನಾನು ಬರೆದ ಸಂಗತಿಗಳು ಚೆನ್ನಾಗಿಯೆ ದೃಢಪಡುತ್ತವೆ. ಪ್ರಸ್ತುತ, ಹೆರಾಸರು ೧೯೩೭ರಲ್ಲಿ ಪ್ರಕಟಿಸಿದ ಈ ಲೇಖನದಲ್ಲಿ, ಹಿಂದಕ್ಕೆ 'ಕಣ್' ಎಂಬ ಜನಾಂಗವು ಇದ್ದಿತೆಂದೂ ಈ ಜನಾಂಗವನ್ನು ಮೊಹೆಂಜೊದಾರೊದ ಚಿತ್ರಲಿಪಿಯಲ್ಲಿ ಕಣ್ಣಿನ ಗುರುತಿನಿಂದ ಉಲ್ಲೇಖಿಸಿರುವರೆಂದೂ ಪ್ರತಿಪಾದಿಸಿದ್ದಾರೆ.

ಫಾದರ ಹೆರಾಸರು ಓದಿದ ಮೊಹೆಂಜೋದಾರೋದ ಶಾಸನಗಳ ಚಿತ್ರಲಿಪಿಯ ಅರ್ಥದ ಬಗೆಗೆ ಮತಮತಾಂತರಗಳು ವಿಪರೀತವಾಗಿವೆ. ಆದುದರಿಂದ ಅವರು ಓದಿದುದನ್ನು ಈಗಲೆ ಪ್ರಮಾಣವೆಂದು ಎಣಿಸಲಿಕ್ಕಾಗದು. ಆದರೂ ಹೆರಾಸರ ಈ ಊಹೆಗೆ ಮನುಸ್ಮೃತಿ ಮತ್ತು ಮತ್ಸ್ಯಪುರಾಣಗಳ ಬೆಂಬಲವು ದೊರೆಯುತ್ತಿರುವುದರಿಂದ ಅವರ ಓದು ಸರಿಯಿದ್ದರೂ ಇರಬಹುದು, ಎನ್ನಲು ಅವಕಾಶವಿದೆ.

ಪ್ರಸ್ತುತ, ನಮ್ಮ ಈ ಜನಾಂಗದ ಹೆಸರನ್ನು ಬರೆವುದರಲ್ಲಿ ಮೂಲದೊಳಗೇ ಎರಡು ಬಗೆಗಳಿದ್ದಂತೆ ಕಾಣುತ್ತಿದೆ. 'ಕನ್ನಡ' ಶಬ್ದವನ್ನು ಬಿಡಿಸಿ ನೋಡಿದರೆ ಕನ್ನಡರು ಎಂಬಲ್ಲಿ ನಕಾರವಿದ್ದುದು ಗೋಚರವಾಗುತ್ತದೆ.

ಸಂಸ್ಕೃತಸಾಹಿತ್ಯದಲ್ಲಿ 'ಕರಣ' ಮತ್ತು ಎಂಬಲ್ಲಿ ಣಕಾರವಿರುವುದು. ಫಾದರ ಹೆರಾಸರು 'ಕಣ್ಣು' ಎಂಬ ಸಂಕೇತದ ಚಿಹ್ನವು ಮೊಹೇಂಜೋದಾರೊದ ಶಾಸನಗಳಲ್ಲಿ ಉಂಟು, ಎನ್ನುವರು; ಆದುದರಿಂದ, ಅವರು ಣಕಾರ ಪಕ್ಷಕ್ಕೆ ಸೇರಿದಂತಾಯಿತು. ಆದರೆ, ಆಂಧ್ರದಲ್ಲಿ ಕಣ್ಣಿಗೆ 'ಕನ್ನು' ಎಂಬ ರೂಢಿಯುಂಟು. ಆಂಧ್ರ ಕರ್ಣಾಟರು ಮೊದಲು ಒಂದೇ ಪಂಗಡದವರಾದುದರಿಂದ ಫಾದರ ಹೆರಾಸರು ಹೇಳುವ ಜನಾಂಗದ ಹೆಸರನ್ನು ಕನ್ನರೆಂದು ಹೇಳಲೂಬಹುದು. ಆದರೆ, ಕನ್ನಡದಲ್ಲಿ ಕಣ್ಣು ಎಂದೇ ಹೇಳುವುದಿಲ್ಲವೆ? ನ, ಣಗಳ ನಿರ್ಣಯ ಮಾಡಬೇಕೆನ್ನುವಾಗ ಪ್ರಾಕೃತದಲ್ಲಿ ಬಂದ ಕೆಲವು ಉಲ್ಲೇಖನಗಳನ್ನು ದುರ್ಲಕ್ಷಿಸಿ ನಡೆಯಲಾರದು.

೧. ಶ್ರೀಮಾನ್ ಗೋವಿಂದ ಪೈಗಳು ಭವಿಸ್ಸಯತ್ತಕಹೆಯಲ್ಲಿ 'ಕನಾಡ' ಎಂದು ಉಲ್ಲೇಖವಿರುವುದನ್ನು ಕಂಡುಹಿಡಿದಿರುವರು.

ಕೊಲ್ಹಾಪುರದ ಪ್ರೊ. ಎ. ಎನ್. ಉಪಾಧ್ಯೆಯವರು ಸಂಗ್ರಹಿಸಿರುವ ಉಲ್ಲೇಖಗಳಲ್ಲೆಲ್ಲ ಣಕಾರವೆ ಕಂಡುಬರುತ್ತದೆ.

೨. ಗೊಲ್ಲ, ಮಧ್ಯ, ಮಗಧ ಮೊದಲಾದ ಬೇರೆ ಬೇರೆ ದೇಶಗಳ ಪ್ರಾಕೃತಗಳನ್ನು ಹೇಳುವಾಗ ಲಾಡ, ಕಣ್ಣಾಡ, ಮರಹಟ್ಟಗಳ ಹೆಸರು ಬಂದಿವೆ.

೩. ಉದ್ಯೋತನ ಸೂರಿಯು (ಕ್ರಿ. ಶ. ೭೭೮) ಕನ್ನಡಿಗರ ಗುಣ-ಸ್ವಭಾವಗಳನ್ನು ನಿರೂಪಿಸುವಾಗ 'ಕಣ್ಣಾಡ' ಎಂಬ ಪದವನ್ನು ಪ್ರಯೋಗಿಸಿದ್ದಾನೆ. ಈತನ ಕಣ್ಣಾಡರ ವರ್ಣನೆಯನ್ನು ಹಿಂದೆ ಬಂದ ನಮ್ಮ ನಾಡವರ ವರ್ಣನೆಯೊಡನೆ ತೂಗಿ ನೋಡುವಂತಿದೆ.

> ಅಕ್ಕಡದಪ್ಪೆ ಪಿ ಅ ಮೋಹಣೇ ಏ (ಪ) ಯರೊದ್ದೇ ಪಯಂ ಗವಿತ್ತಿಯ।
> 'ಆದಿ ಪೊಂಡಿ ಮ (ನ) ರೇ' ಭಣಿರೇ ಪೆಚ್ಛ ಇ ಕಣ್ಣಾಡ ಏ ಅಣ್ಣೇ॥
> (ಉತ್ಕಟದರ್ಪಾನ್ ಪ್ರಿಯಮೋಹನಾನ್ ಪದ ರೌದ್ರಾನ್ ಪತಂಗ ವೃತ್ತಿಂಶ್ಚ।
> 'ಆದ್ರಿ ಪೊಂಡಿಮನರೇ' ಭಣತಃ ಪ್ರೇಕ್ಷತೇ ಕರ್ಣಾಟಕೀಯಾನನ್ಯಾನ್॥)

೪. ಕನ್ನಡ ನಾಡವರು ಕಡುಗಲಿಗಳೂ ತುಂಬ ಚೆಲುವರೂ ಎಂದು ನೃಪತುಂಗ (೮೧೫) ಮೊದಲಿ ನಿಂದಲೂ (ಉದ್ಯೋತಸೂರಿ, ಕ್ರಿ. ಶ. ೭೭೮) ಖ್ಯಾತಿ. ೧೦ನೆಯ ಶತಮಾನದ ರಾಜಶೇಖರನೂ ಇದೇ ಬಗೆಯಾಗಿ ಬಣ್ಣಿಸಿದ್ದಾನೆ. ಕರ್ಣಾಟ ಸುಂದರಿಯರ ಭೃಂಗ ಕುಂತಲಗಳ ವರ್ಣನೆಯ ಕಾಲಕ್ಕೆ 'ಕಣ್ಣಾಡ' ಶಬ್ದವು ಬಂದಿದೆ.

> ಕಣ್ಣಾಡೀಣಂ ಕುಣಂತಾ ಕುರಲತರಲಣಂ
> (ಕರ್ಣಾಟೀ ಚಿಕುರಾಣಾಂ ತಾಂಡವ ಕರೋ ವಾಯುಃ)

ಆದುದರಿಂದ, ಸಂಸ್ಕೃತ ಮತ್ತು ಪ್ರಾಕೃತಗಳ ಒಲವನ್ನು ನೋಡಿದರೆ 'ಕಣ್ಣಡ' ಎಂದು ಈ ನಾಡಿನ ಹೆಸರು ಬರೆಯಬೇಕೆನಿಸುವುದು. ಏಕೆಂದರೆ, ಈ ನಾಡಿನ ಮೂಲಜನಾಂಗಕ್ಕೆ ಕರ್ಣ್ಣ(ಣ)ರೆಂದು ಹೆಸರಿದ್ದಂತೆ ಆ ಸಾಹಿತ್ಯದೊಳಗಿನ ವಿಶೇಷ ಉಲ್ಲೇಖಗಳಿಂದ ಸಿದ್ಧವಾಗುತ್ತದೆ. ಆದರೆ, ಈ ನಾಡಿನ ಹೆಸರನ್ನು 'ಕಣ್ಣಡ' ಎಂಬುದಾಗಿ ಬರೆದುದನ್ನು ಇನ್ನೂ ಯಾರೂ ಕಂಡಿಲ್ಲ! ೧೨೦೦ ವರುಷಗಳ ಕಾಲಾವಧಿಯಲ್ಲಿ ಆದ ಒಂದು ಶಾಸನ ಅಥವಾ ಒಂದು ತಾಳೆಗರಿಯ ಬರೆವಣಿಗೆಯಲ್ಲಿ ಅಪ್ಪಿತಪ್ಪಿ ಸಹ 'ಕಣ್ಣಡ' ಎಂಬ ರೂಪವು ಕಣ್ಣಿಗೆ ಬೀಳುವುದಿಲ್ಲ. ಎಲ್ಲಿ ನೋಡಿದಲ್ಲಿ 'ಕನ್ನಡ' ಎಂಬ ಪದವೇ.

ಆದರು, ಕನ್ನಡದಲ್ಲಿಯೂ ಈ ಜನಾಂಗಕ್ಕೆ ಸಂಬಂಧಪಟ್ಟ ಇನ್ನೊಂದು ವಿಷಯದಲ್ಲಿ ನ-ಣಕಾರಗಳ ಅನಿಶ್ಚಿತತೆಯು ಇದ್ದೇ ಇದೆ! ಈ ನಾಡಿನ ಮೊದಲಿಗರ ಹೆಸರಿನ ನಿಶ್ಚಿತವಾದ ಕುರುಹುಗಳೆಂದರೆ ಇವರ ಹೆಸರಿನ ಊರುಗಳು. ಉದಾಹರಣೆ ಕನ್ನಂಬಾಡಿ. ಈ ಶಬ್ದದೊಳಗಿನ ಕೊನೆಯ 'ಬಾಡಿ' ಎಂಬುದು 'ಪಾಡಿ' (ವಾಡಿ) ಊರು ಎಂಬರ್ಥದ ಮಾತು. ಪಾಡಿ ಎಂದರೆ ನಿಜವಾಗಿ ಪಟ್ಟಿ-ಹಟ್ಟಿ; ತುರುಕಾರರ ಊರು; ಗೋವಳ

ಬೀಡು. ಹಟ್ಟಿಗಳ ವಿಚಾರದಲ್ಲಿಯೂ, ಈ ನಾಡಿನ ಮೊದಲಿಗರು ಹಟ್ಟಿಕಾರರು-ತುರು (=ಪಶು)ಗಳನ್ನು ಸಾಕಿಕೊಂಡು ಬದುಕು ಮಾಡುತ್ತಿದ್ದರೆಂಬ ವಿಚಾರದಲ್ಲಿಯೂ ಕರ್ಣಾಟದ ವೀರಕ್ಷತ್ರಿಯರು ಅಥವಾ ಹಟ್ಟಿಕಾರರು ಎಂಬ ಪುಸ್ತಕದಲ್ಲಿ ವಿಸ್ತಾರದಿಂದ ಹಲವು ಆಧಾರಗಳೊಂದಿಗೆ ವಿವೇಚಿಸಿದ್ದಾಗಿದೆ. ಈ ನಾಡಿನ ಮೊದಲಿಗರು ಗೋವಳರಾಗಿದ್ದರು; ಈ ಜನಾಂಗದ ಹೆಸರು ಕನ್ನ ಅಥವಾ ಕಣ್ಣರು ಎಂದು ಇದ್ದುದೂ ಕಂಡುಬರುತ್ತಲಿದೆ. ಆದುದರಿಂದ, ಕನ್ನ(ಂ)ಪಾಡಿ ಎಂಬುದು ಕನ್ನರ ಊರು ಆಗಿರುವ ಸಂಭವವಿಲ್ಲವೆ? ಇದನ್ನೇ ಕಣ್ಣಂಬಾಡಿ ಎಂದೂ ಕೆಲವು ಬಾರಿ ಹೇಳುವುದುಂಟೆಂದು ತೋರುತ್ತದೆ. "ಕನ್ನಂಬಾಡಿಯ ಸ್ಥಳಪುರಾಣದಲ್ಲಿ ಈ ಊರಿಗೆ 'ಕಣ್ವಪುರ' ಎಂಬ ಹೆಸರಿದ್ದುದು ಕಂಡುಬರುತ್ತದೆ.ಈ ಊರಲ್ಲಿ ಕಾವೇರಿಯ ದಂಡೆಯ ಮೇಲೆ ಒಂದು ಶಿವಾಲಯವಿದ್ದು ಅದಕ್ಕೆ 'ಕಣ್ಣೇಶ್ವರ' ಎಂಬ ಹೆಸರಿದ್ದುದೂ ಗೊತ್ತಾಗುತ್ತದೆ" ಎಂದು ಡಾ. ಹ. ಕೃಷ್ಣರ ಟಿಪ್ಪಣಿಯಲ್ಲಿದೆ. ಆದರೆ, ಈ ಊರಿಗೆ ಈಗ ಬಳಕೆಯಲ್ಲಿರುವ ಹೆಸರು ಕನ್ನಂಬಾಡಿ ಎಂದೆ! ಕಣ್ವಪುರವು-ಕಣ್ಣಪುರ ಅಥವಾ 'ಕಣ್ಣೂರ' ಆಗಬಹುದು ಕನ್ನಂಬಾಡಿ ಆಗುವ ಕಾರಣವೇನು? ಸ್ಥಳಪುರಾಣಗಳು ಊರ ಹೆಸರುಗಳನ್ನು ಅನುಕೂಲತೆಯಂತೆ ಬದಲಿಸಿಕೊಂಡು ಬರೆವ ಸಂಪ್ರದಾಯವಿದ್ದುದು ಸುಪ್ರಸಿದ್ಧವಿದೆ. ಅದೇ ಮೇರೆಗೆ ಕನ್ನಂಬಾಡಿಯು ಕಣ್ವಪುರವಾಗಿರಬೇಕು. ಶಾಸನದ ಉಲ್ಲೇಖಗಳಿಂದ ಈ ಮಾತು ದೃಢವಾಗುತ್ತದೆ. ಕ್ರಿ. ಶ. ೧೧೧೪ ಮತ್ತು ೧೧೧೮ರ ಶಾಸನಗಳಲ್ಲಿ ಕನ್ನೇಶ್ವರ ಎಂದು ಈ ಶಿವಾಲಯದ ಹೆಸರಿನ ಉಲ್ಲೇಖವಿದೆ.

ಕರ್ಣಾಟದಲ್ಲಿ ಒಂದು ತುದಿಯಿಂದ ಇನ್ನೊಂದು ತುದಿಯ ವರೆಗೆ ಕನ್ನೂರು ಅಥವಾ ಕಣ್ಣೂರು ಎಂಬ ಹೆಸರಿನ ಊರುಗಳು ಅಲ್ಲಲ್ಲಿಗೆ ನೆಲೆಸಿದ್ದುದು ಗೋಚರವಾಗುತ್ತದೆ. ಇವೆಲ್ಲವುಗಳೂ ಕಣ್ವಪುರಗಳೆಂದು ಹೇಳುವುದು ಸಯುಕ್ತಿಕವಾದೀತೆ? ಸಾಮಾನ್ಯವಾಗಿ ಕನ್ನೂರೂ (ಕಣ್ಣೂರು) ಗಳೆಲ್ಲವೂ ಪ್ರಾಚೀನ ಪಟ್ಟಣಗಳಾಗಿವೆ. ಮೈಸೂರು ಸಂಸ್ಥಾನದಲ್ಲಿ ಕನ್ನೂರು ಎಂಬ ಊರಿನ ಹೆಸರು ಶಾಸನಗಳಲ್ಲಿ ಹಲವು ಬಾರಿ ಕಾಣಿಸಿಕೊಳ್ಳುತ್ತದೆ.[೧೨] ಉತ್ತರ ಕರ್ಣಾಟದಲ್ಲಿ ವಿಜಾಪುರ ಜಿಲ್ಲೆಯಲ್ಲಿ ಕನ್ನೂರು ಇದ್ದು ಅದನ್ನು ಕಣ್ಣೂರೆಂದೂ ಹೇಳುವ ಯಾದವರ ಕಾಲದ ಶಾಸನಗಳಿವೆ.[೧೩] ಧಾರವಾಡ ಜಿಲ್ಲೆಯಲ್ಲಿ ಕನ್ನವಳ್ಳಿಯಿದೆ. ಇಲ್ಲಿಯೂ ಶಾಸನಗಳಿವೆ. ಕನ್ನೇಶ್ವರ ಎಂಬ ಊರು ಉಂಟು. ತೈಲಪನ ಕಾಲದ (೯೨೬) ಶಿಲಾಲೇಖವಿದೆ. ಕನ್ನಡ ಜಿಲ್ಲೆಯಲ್ಲಿ (ಉತ್ತರ ದಕ್ಷಿಣ ಎರಡು) ಈ ನಾಡಿನ ಪ್ರಾಚೀನ ಸಂಸ್ಕೃತಿಯ ಅನೇಕಾನೇಕ ಅವಶೇಷಗಳು ಇನ್ನೂ ಬಹಳಮಟ್ಟಿಗೆ ಪೂರ್ವಸ್ಥಿತಿಯಲ್ಲಿಯೆ ಉಳಿದುಕೊಂಡಿದ್ದು ಅವು ಅಭ್ಯಸನೀಯವಾಗಿವೆ. ಕನ್ನಂಬಾಡಿ, ಕನ್ನೂರು, ಕನ್ನವಳ್ಳಿ ಮೊದಲಾದ ಊರುಗಳ ಹೆಸರುಗಳು ತನ್ನ ಅಥವಾ ಕಣ್ಣರ ಪ್ರಾಚೀನ ಅಸ್ತಿತ್ವದ ಸಾಕ್ಷಿಯನ್ನು ಹೇಳುತ್ತವೆಂದರೆ ಕೆಲರಿಗೆ ಸಂದೇಹ ವುಂಟಾಗಬಹುದು. ಆದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಒಂದು ಹಳ್ಳಿಯ. ಹೆಸರು ಈ ಸಂದೇಹವನ್ನು ಉಳಿಯಗೊಡುವುದಿಲ್ಲ. ಏಕೆಂದರೆ, ಆ ಸ್ಥಳದ ಹೆಸರು ಕಣ್ವರಪಾಡಿ ಎಂಬುದಾಗಿದೆ. ಆದುದರಿಂದ, ಈ ಕಣ್ಣರಪಾಡಿಯಂತೆ ಉಳಿದುವುಗಳನ್ನೂ ಕನ್ನರಪಳ್ಳಿ, ಕಣ್ಮರ ಊರು, ಕನ್ನರಪಾಡಿ(ಬಾಡಿ), ಕಣ್ಣರಬೀಡು (ಕಣ್ಣವೀಡು) ಎಂದೇ ಬಿಡಿಸಿ ಅರ್ಥಮಾಡಲು ಏನು ಅಡ್ಡಿ?

ಇವೆಲ್ಲ ಊರ ಹೆಸರುಗಳಾದುವು. ಆದರೆ, ಇದಕ್ಕೂ ವಿಸ್ತೀರ್ಣವಾದ ಪ್ರದೇಶಕ್ಕೆ-ದೇಶವಿಭಾಗಕ್ಕೆ ಅಥವಾ ದೇಶಕ್ಕೆ ಇದೇ ಬಗೆಯಾಗಿ ಕನ್ನ ಅಥವಾ ಕಣ್ಣ ಎಂಬ ಹೆಸರಿದ್ದುದು ಶಾಸನಗಳಿಂದ ನಿಶ್ಚಿತವಾಗಿ ಗೊತ್ತಾಗುತ್ತಿರುವುದರಿಂದ ಈ ಜನಾಂಗದ ಅಸ್ತಿತ್ವದ ವಿಷಯಕ್ಕೆ ಸಂದೇಹಪಟ್ಟುಕೊಳ್ಳಲು ಅವಕಾಶವೆ ಇಲ್ಲ. ಸುಮಾರು ಕ್ರಿ. ಶ. ೮೨೦ನೆಯ ವರುಷದ ಶಾಸನವು, ನೃಪತುಂಗದೇವನ ಕಾಲದ್ದು.[೧೪] 'ಸಾಮಿ ಶರ್ಬರಸ ಕೊಟ್ಟೋರ್' ಎಂಬಲ್ಲಿ ಪೂರ್ವದ ಹಳೆಗನ್ನಡ ಕ್ರಿಯಾಪದ ಪ್ರಯೋಗವಿದೆ. ಈ ಹಳೆಯ ಶಾಸನದಲ್ಲಿ ಕೆಲವು ನಾಡುಗಳನ್ನು ಹೇಳಿದೆ. ಗಂಗವಾಡ, ಬಳೆಯವಾಡ ಇವುಗಳೊಡನೆ ಕನ್ನವಾಡ ಎಂಬುದೂ ಬಂದಿದೆ! ಇದನ್ನು ಕುರಿತು ಬರೆದ ಟಿಪ್ಪಣಿಯಲ್ಲಿ ಡಾ. ಹಟ್ಟಿಯ ಕೃಷ್ಣರು ಇದು ಕನ್ನ ಎಂಬ ದೇಶ Kanna Vada or Kanna country ಎಂದು ಹೇಳಿರುವರು. ಅಲ್ಲದೆ, ಮೊದಲನೆಯ ಚಲುಕ್ಯ ವಿಕ್ರಮನ ಕಾಲದ (೬೨೦) ಒಂದು ಶಾಸನದಲ್ಲಿಯೂ ಇದೇ ಬಗೆಯಾದ ಒಂದು ಹೆಸರು ಬಂದಿರುವುದಾಗಿ ಅಪ್ಪಣೆ ಕೊಡಿಸಿದ್ದಾರೆ.

ಡಾ. ಎನ್. ವೆಂಕಟರಮಣಯ್ಯನವರು ತಮ್ಮ ಒಂದು ಲೇಖನದಲ್ಲಿ, ಶಾಸನಗಳಲ್ಲಿ ಬಂದ 'ಕನ್ನಾಡು' ಎಂಬ ಎರಡು ಉಲ್ಲೇಖಗಳನ್ನು ಕೊಟ್ಟಿದ್ದಾರೆ. ಕ್ರಿ. ಶ. ೧೩೧೮ರ ಯೆಲ್ಲನೂರ ಶಾಸನ. ಅದರಲ್ಲಿ ಮಹಾಶ್ವೇರ ರಡ್ಡಿಯು ಕನ್ನಾಡನಾಳುತ್ತಿದ್ದನೆಂದಿದೆ. ೧೫೧೩ರ ಶ್ರೀಶೈಲ ಶಾಸನ. ವಿಜಯನಗರದ ಮಲ್ಲಿಕಾರ್ಜುನನ ಕಾಲದ್ದು. ಅದರಲ್ಲಿ ಕಮ್ಮನಾಡು, ಕನ್ನಾಡುಗಳ ಹೆಸರಿದೆ. ಡಾ. ಎನ್. ವೆಂಕಟರಮಣಯ್ಯನವರು ಬಾದಾಮಿಯ 'ರಣರಸಿಕ' ವಿಕ್ರಮನ ಶಾಸನವನ್ನು ಉಲ್ಲೇಖಿಸಿದ್ದಾರೆ. ಅದರಲ್ಲಿಯ 'ಕಣ್ಣವಿಷಯ'ವೆಂಬ ಹೆಸರಿನ ಮೇಲಿಂದಲೆ ಒಂದು ಸಿದ್ಧಾಂತ ಮಾಡಿದ್ದಾರೆ. ಅದೇನೆಂದರೆ:

> It has already been pointed out that in ancient times a small district lying at the foot of the Shrishaila hill was called ಕಣ್ಣ ವಿಷಯ, ಕನ್ನಾಡು and. ಕರ್ಣಾಟ ಸೀಮಾ Now, Mr. Narasimhacharya correctly derives the word Karnata from Kannada, though he is not able to establish its identity. I believe that the country, ಕನ್ನಾಡು from which the ಕನ್ನಡ language is said to have obtained its name, is identical with ಕನ್ನಾಡು (ಕಣ್ಣವಿಷಯ ಕರ್ಣಾಟ ಸೀಮಾ) that lay at the foot of the Shrishaila hill. The Canarese people appear to have obtained the name of their country and language from this small district.[೧೫]

ಡಾ. ಎನ್. ವೆಂಕಟರಮಣಯ್ಯನವರ ಅಭಿಪ್ರಾಯದಂತೆ ಶ್ರೀಶೈಲದ ಸುತ್ತಲಿನ ಸ್ವಲ್ಪಪ್ರದೇಶಕ್ಕೆ ಪ್ರಾಚೀನಕಾಲದಲ್ಲಿ ಕನ್ನ ಅಥವಾ ಕಣ್ಣವೆಂಬ ಹೆಸರಿತ್ತು; ಈ ಸಣ್ಣ ಪ್ರದೇಶದ 'ಕನ್ನನಾಡು' ಎಂಬ ಹೆಸರೆ ಇಡಿ ಕರ್ನಾಟಕಕ್ಕೂ ಅನ್ವಯಿಸಿತು.

ಈ ಉಲ್ಲೇಖಗಳಿಂದ ಸ್ಥಳವಾಚಕ ಹೆಸರುಗಳಲ್ಲಿ ಕನ್ನ ಮತ್ತು ಕಣ್ಣ ಎಂಬ ಎರಡೂ ಪರಂಪರೆಗಳು ಪ್ರಾಚೀನಕಾಲದಿಂದಲೂ ಸಾಗಿಬಂದಿವೆಯೆಂಬ ಮಾತು ಸ್ಪಷ್ಟವಾಗುತ್ತದೆ. ಮೇಲ್ಕಾಣಿಸಿದ ಬೇರೆ ಬೇರೆ ಕಾಲದ ಬೇರೆಬೇರೆ ಉಲ್ಲೇಖಗಳಿಂದ ಕನ್ನ 'ಅಥವಾ 'ಕಣ್ಣ' ಎಂಬ ಪೂರ್ವಪದವು ಪಾಡಿ (ಬಾಡಿ), ವೀಡು, ಊರು, ವಾಡ, ವಿಷಯ, ನಾಡು ಎಂಬೀ ಬಗೆಯ ಒಂದಿಲ್ಲೊಂದು ಉತ್ತರಪದದೊಡನೆ ಕೂಡಿಕೊಂಡು ಪ್ರದೇಶವಾಚಕ ಅರ್ಥವನ್ನು ಸೂಚಿಸುತ್ತಿದ್ದುದರ ಮನವರಿಕೆಯಾಗದೆ ಇರದು. ಇಷ್ಟೆಲ್ಲ ಬೇರೆ ಬೇರೆ ಉದಾಹರಣಗಳು ದೊರೆತಿರುವುದರಿಂದ 'ಕನ್ನಡ' ಈ ಶಬ್ದದೊಳಗಿನ ಪೂರ್ವಪದದ ವಿಷಯಕ್ಕೂ ಇನ್ನುಮೇಲೆ ಮತಭೇದಕ್ಕೆ ಆಸ್ಪದವೇ ಉಳಿಯುವುದಿಲ್ಲ. ಉತ್ತರಪದದ ಬಗ್ಗೆ ಮತಭೇದಗಳೆಲ್ಲ ಮುಗಿದು ಮೊದಲೆ ಒಮ್ಮತವು ಆಗಿಬಿಟ್ಟಿದೆ. ಆದುದರಿಂದ, ಕನ್ನ+ನಡ ಎಂದು, ಕನ್ನಡ ಶಬ್ದವನ್ನು ಬಿಡಿಸಿ ಹೇಳಲು ಇನ್ನು ಮೇಲೆ ಯಾರ ನಾಲಗೆಯೂ ತಡವರಿಸುವ ಕಾರಣವಿಲ್ಲ.

'ಕನ್ನ' ಅಥವಾ ಕಣ್ಣ ಎಂಬುದು ಹಿಂದಕ್ಕೆ ಶ್ರೀಶೈಲದ ಸುತ್ತಲಿನ ಭಾಗದ ಹೆಸರು. ಮುಂದೆ ಕಾಲಾಂತರದಲ್ಲಿ ಇಡಿ ನಾಡಿಗೆಲ್ಲ ಆ ಹೆಸರೆ ಪ್ರಾಪ್ತವಾಯಿತೆಂದು ಡಾ. ಎನ್. ವೆಂಕಟರಮಣಯ್ಯನವರು ಊಹಿಸುತ್ತಾರೆ. ಆದರೆ ಹೀಗೆ ಊಹಿಸಬೇಕಾದರೆ, ಈ ಊಹೆಯು ಬಲಪಡಬೇಕಾದರೆ ಡಾ. ಎನ್. ವೆಂಕಟರಮಣಯ್ಯನವರು ಇನ್ನೊಂದೆರಡು ಸಂಗತಿಗಳನ್ನು ಸಿದ್ಧಮಾಡಿ ತೋರಿಸಬೇಕಾಗುವುದು. ೧. ಕನ್ನ (ಕಣ್ಣ) ಎಂದು ಈ ನಾಡಿಗೆ ಅಥವಾ ನಾಡಿನ ವಿಶಿಷ್ಟ ಭಾಗಕ್ಕೆ ಹೆಸರುಬಂದ ಕಾರಣವೇನು? ಕನ್ನ ಅಥವಾ ಕಣ್ಣ ಶಬ್ದದ ಅರ್ಥವೇನು? ಇದನ್ನು ಇವರು ಹೇಳುವುದನ್ನೇ ಮರೆತಿರುವರು. ೨. ಪ್ರಾಚೀನ ಕಾಲಕ್ಕೆ ಶ್ರೀಶೈಲದ ಸುತ್ತಲಿನ ಭಾಗವೇ ಕರ್ನಾಟದ ಮುಖ್ಯ ಕೇಂದ್ರವಾಗಿತ್ತು. ಅಲ್ಲಿಯ ಜನಗಳು ಈ ನಾಡಿನ ಬೇರೆ ಬೇರೆ ಭಾಗಗಳಲ್ಲಿ ಹೋಗಿ, ಗೆದ್ದು

ಅಥವಾ ಬೇರೆ ತೆರನಾಗಿ ಅಲ್ಲಿ ತಮ್ಮ ವರ್ಚಸ್ಸನ್ನು ಸ್ಥಾಪಿಸಿದರು. ಅದರಿಂದ, ಇಡೀ ನಾಡಿಗೆ ಕನ್ನಾಡು-ಕನ್ನಡ ಎಂಬ ಹೆಸರು ಉಂಟಾಯ್ತು, ಎಂದು ಎನ್. ವೆಂಕಟರಮಣಯ್ಯನವರು ಸ್ಥಿರಪಡಿಸುವ ವರೆಗೆ ಅವರ ಊಹೆಯಲ್ಲಿ ಹುರುಳಿಲ್ಲವೆಂದು ಹೇಳಬೇಕಾಗುತ್ತದೆ. ಕನ್ನ ಅಥವಾ ಕಣ್ಣ ಎಂಬ ಹೆಸರಿನ ಸ್ಥಳಗಳು ಇಡಿ ಕರ್ನಾಟದ ಬೇರೆ ಬೇರೆ ಭಾಗಗಳಲ್ಲಿ ಕಾಣಸಿಕೊಳ್ಳುತ್ತಿರುವುದರಿಂದ ಶ್ರೀಯುತರ ಮೇಲಣ ತರ್ಕವು ಅರ್ಥವಿಹೀನವಾಗಿದೆ.

ಇನ್ನು ಕನ್ನ ಅಥವಾ ಕಣ್ಣವೆಂಬುದು ಜನಾಂಗವಾಚಕ, ಎಂಬುದು ಮನು ಮತ್ತು ಮತ್ಸ್ಯಪುರಾಣಗಳ ಆಧಾರದಿಂದ ಈ ಮೊದಲೆ ನಿಶ್ಚಿತವಾಗಿದೆ. ಹಾಗಾದರೆ ಈ ಜನಾಂಗಕ್ಕಾದರೂ ಕನ್ನ ಅಥವಾ ಕಣ್ಣ ಎಂಬ ಹೆಸರು ಏಕೆ ಬಂದಿತು? ಕನ್ನ ಅಥವಾ ಕಣ್ಣ ಎಂದರೇನು ಅರ್ಥ! ಈ ಮಾತಿನ ನಿರ್ಣಯವಾಗುವುದಕ್ಕೆ ಅಥವಾ ಣ ಕಾರಗಳ ಚರ್ಚೆಯು ಸ್ವಲ್ಪ ಸಹಾಯಕವಾಗಿರುವುದರಿಂದ ಮೂಲಶಬ್ದವು ಕನ್ ಎಂದಿದೆಯೆ? ಕಣ್ ಎಂದಿದೆಯೆ? ಎಂಬುದನ್ನು ನಿರ್ಧರಿಸುವುದು ಆವಶ್ಯಕ. ನ-ಣಗಳ ಬಗ್ಗೆ ಸುಮ್ಮನೆ ವಾದ ಬೆಳೆಸುವುದು ವ್ಯರ್ಥವೆಂದು ನನ್ನ ಎಷ್ಟೋ ಮಿತ್ರರಂತೆ ನಾನೂ ಹೇಳಬಲ್ಲೆ. ಆದರೆ, ಈ ನ-ಣಗಳ ಮೂಲದಲ್ಲಿಯೆ ಅರ್ಥವು ಅಡಗಿದ್ದರೆ ಅದನ್ನು ಹುಡುಕುವುದು ವ್ಯರ್ಥವೆ?

ಕೆಲರು ಭಾವಿಸಿರುವಂತೆ ನ-ಣಗಳ ತೊಡಕು ಇಂದು-ನಿನ್ನೆಯದಲ್ಲ; ಬಹಳ ಹಳೆಯದು. ಸಂಸ್ಕೃತದವರಿಂದಲೆ ಣಕಾರವು ರೂಢವಾಯ್ತೆಂಬ ಗ್ರಹಿಕೆಯು ಸಂಪೂರ್ಣ ಸತ್ಯವಲ್ಲ. ಈ ನ-ಣಗಳು ಎರಡೂ ತಮ್ಮ ಹಕ್ಕನ್ನು ಹೇಳುವುದಕ್ಕೆ ಕಾರಣವೇನಿರಬಹುದು? ನ ಮತ್ತು ಣ ಗಳೆರಡೂ ಅಲ್ಲಿ ಇರದಿರುವ ಸಂಭವವು ಇಲ್ಲದಿಲ್ಲ. ಅಥವಾ ನ ಮತ್ತು ಣಗಳೆರಡಕ್ಕೂ ತಮ್ಮ ಹಕ್ಕನ್ನು ಹೇಳಲು ಅವಕಾಶವಿರುವ ಬೇರೊಂದು ಅಕ್ಷರವು ಮೊದಲು ಆ ಸ್ಥಳದಲ್ಲಿರಬೇಕು. ಹಾಗಾದರೆ ಆ ಅಕ್ಷರವು ಆವುದು? ತಮಿಳಿನ ನೆರವಿನಿಂದ ಇದನ್ನು ಗೊತ್ತುಪಡಿಸ ಬಹುದಾಗಿದೆ. ತಮಿಳಿನಲ್ಲಿ ನ ಮತ್ತು ಣ ಗಳ ಹೊರತು ಇನ್ನೂ ಒಂದು ಅನುನಾಸಿಕಾಕ್ಷರವುಂಟು. ಅವರು ಅದನ್ನು ன ಹೀಗೆ ಬರೆದು ತೋರಿಸುವರು. ಇದನ್ನು ಈಗ ಹೇಗೆ ಉಚ್ಚರಿಸುವರೆಂದು ಕೇಳಲು ಉಭಯ ಭಾಷಾವಿಶಾರದರಾದ ಪ್ರೊ. ಚೆನ್ನಕೇಶವ ಅಯ್ಯಂಗಾರ್ಯರು ನಕಾರದಂತೆ ಎಂದು ತಿಳಿಸಿದರು. ಸ್ಪಷ್ಟವಾಗಿ ಅಲ್ಲದಿದ್ದರೂ ன ದ ಒಲವು ಣ ಕಾರದ ಕಡೆಗೂ ಕೆಲಮಟ್ಟಿಗೆ ಇರಬೇಕೆಂದು ಸಂದೇಹ. ನನಗೆ ಇನ್ನೂ ಇದೇ ಸಂದೇಹ: ಉಚ್ಚಾರದಲ್ಲಿ ಹೆಚ್ಚು ಕಡಿಮೆಯೆ ಇಲ್ಲದಿದ್ದರೆ ನ-ಣಗಳಿರುವಾಗ ಮತ್ತೆ ன ಕಾರದ ಆವಶ್ಯಕ ವೇನು? ನ ಮತ್ತು ಣ ಕಾರಗಳಿಂದ ತೋರಿಸಲು ಆಗದ ಆವುದೊ ಒಂದು ವಿಶಿಷ್ಟ ಉಚ್ಚಾರವನ್ನು ಸೂಚಿಸುವುದಕ್ಕಾಗಿಯೆ ன ಕಾರವು ತಲೆದೋರಿರ ಬೇಕಲ್ಲವೆ? ಹಳಗನ್ನಡದ ಱ ಮತ್ತು ೞ ಎಂಬ ಹೆಚ್ಚಿನ ಅಕ್ಷರಗಳು ಆಗ ಏಕೆ ರೂಢಿಯಲ್ಲಿದ್ದುವು? ಈಗ ಏಕೆ ಮೂಲೆಗುಂಪಾದುವು? ರ ಮತ್ತು ಳ ಕಾರಗಳಲ್ಲದೆ ಇನ್ನೂ ಒಂದು ಬಗೆಯ ಱ ಮತ್ತು ೞ ಗಳ ಉಚ್ಚಾರಗಳು ಬಳಕೆಯಲ್ಲಿದ್ದುದರಿಂದಲೆ ಅವು ಆಗ ಜೀವಂತವಾಗಿದ್ದುವು. ಇಂದು ಆ ಉಚ್ಚಾರಗಳು ಮರೆತು ಹೋದುವು; ೞ, ಱಕಾರಗಳು ಕಣ್ಮರೆಯಾದುವು. ಇದರಂತೆ ಇಂದು ನ, ಣ ಮತ್ತು ன ಕಾರಗಳಲ್ಲಿದ್ದ ಸೂಕ್ಷ್ಮ ಉಚ್ಚಾರ ಭೇದವು ಮರೆತುಹೋಗಿರಬೇಕು.

ತಮಿಳಿನಲ್ಲಿ ಕನ್ನಡ ಎಂದು ಬರೆವುದಾದರೆ ತವರ್ಗದ ನಕಾರವನ್ನು ಉಪಯೋಗಿಸುವುದಿಲ್ಲ. ಈ ಅವರ್ಗೀಯ ಕಾರವನ್ನು ಬಳಸುವರು. ಕ ಡ ಎಂದುಬರೆಯುವರು ன் (ಗನೆಯದು ಅಕಾರ ಸೇರದಿರುವ ವ್ಯಂಜನ). ನ ಕಾರ ಣ ಕಾರಗಳ ನಡುವಿನದೊಂದು ಉಚ್ಚಾರವು ಈ ಅಕ್ಷರಕ್ಕಿರಬೇಕೆಂದು ತೋರುತ್ತದೆ. ಹಾಗಿಲ್ಲದಿದ್ದರೆ ಈ ನ ಣ ಕಾರಗಳ ಸಂದಿಗ್ಧತೆಗೆ ಕಾರಣವೆ ಇದ್ದಿಲ್ಲ. ಇದನ್ನು ಕನ್ನಡದಲ್ಲಿ ಹೇಗೆ ಬರೆದು ತೋರಿಸುವುದು? ಕಂನಡ ಎಂದರೆ ಈ ತೊಡಕು ಸ್ವಲ್ಪಮಟ್ಟಿಗಾದರೂ ಬಗೆಹರಿವಂತಿದೆ. ಕನ್ನಡಭಾಷೆಯಲ್ಲಿ ಶಬ್ದಗಳ ಕೊನೆಯ ಕೆಲವು ಅಕ್ಷರಗಳಿಗೆ ಒಮ್ಮೊಮ್ಮೆ ಆದೇಶವಾಗಿ ಬಿಂದುವು ಬರುವುದುಂಟು. ಈ ಬಿಂದುವಿನ ಉಚ್ಚಾರವನ್ನು ಆಯಾ ಸ್ಥಳಗಳಲ್ಲಿ ಹೇಗೆ ಮಾಡಬೇಕೆಂಬುದನ್ನು ರೂಢಿಯ ಬಲದಿಂದ ಅರಿತುಕೊಳ್ಳಬೇಕಾಗುತ್ತದೆ. ಅದಕ್ಕೆ ನಿಶ್ಚಿತವಾದ

ಕಟ್ಟುಕಟ್ಟಳೆಗಳಿಲ್ಲ. ಉದಾ: ಕಿಸು-ಕೆಂ; ಕೆಂನೆ; ಕೆಂಡ; ಕೆಂಪು; ಕೆಂಚ; ಮುಂತಾದುವು. ಕಂನಾಡು ಇಲ್ಲಿ ಬಿಂದುವಿನ ಮುಂದೆ ತವರ್ಗದ ಅಕ್ಷರವಿರುವುದರಿಂದ ಬಿಂದುವು ಆ ವರ್ಗದ ಅನುನಾಸಿಕಾಕ್ಷರವಾಗಿ ಪರಿಣಮಿಸುವುದೆ ಹೆಚ್ಚು ಸ್ವಾಭಾವಿಕ. ಇದರಂತೆ ಕನ್ನಾಡು-ಕನ್ನಡವಾದುದು ಸರಿಯೇ. ಆದರೆ, ಕೆಲರು ಕಣ್ನಾಡು ಎಂದೂ ಉಚ್ಚರಿಸಿದರೆ ಬಾಯಿ ಹಿಡಿಯಲಿಕ್ಕಾಗುವುದಿಲ್ಲ. ನಾಡ+ನುಡಿ, ನಾಣ್ನುಡಿ=ನಾಳ್ನುಡಿ, ನಾಣ್ಣುಡಿ ಆಗುವಂತೆ ಕಣ್ನಾಡು ಮುಂದೆ ಕಣ್ಣಾಡು, ಕಣ್ಣವೂರು ಎಂಬೀ ಬಗೆಯ ಪ್ರಯೋಗಗಳಾದುವು. ಅಥವಾ ಣ ಕಾರದ ಪರಂಪರೆಗೆ ಇನ್ನೂ ಒಂದು ಕಾರಣವಿರಬಹುದು. ಅದರ ವಿಚಾರವು ಮುಂದಿನ ಅಧ್ಯಾಯದಲ್ಲಿ ಬರುವುದು.

ಕಾರದ ಉಚ್ಚಾರವು ಕನ್ನಡದ ಬಿಂದುವಿನಂತೆಯೆ ಇರಬೇಕೆನ್ನುವುದಕ್ಕೆ ಇನ್ನೊಂದು ಕಾರಣವುಂಟು. ಬಿಂದುವನ್ನು ನ್, ಙ್ ಗಳಂತೆ ಮ್ ಎಂದೂ ಉಚ್ಚರಿಸಬಹುದು. ಕನ್ನಾಡಿನಂತೆ ಕಮ್ಮನಾಡೂ ಇದೆ. ಕನ್ನ ಅಥವಾ ಕಣ್ಣ ಹೆಸರಿನ ಜನಾಂಗವಿದ್ದಂತೆ 'ಕಮ್ಮ' ಎಂಬ ಪಂಗಡವೂ ಉಂಟು. ಕನ್ನರು ಕನ್ನಡದ ಜೀವಾಳ; ಕಮ್ಮರು ಆಂಧ್ರಪ್ರದೇಶ ಪ್ರಾಣ. ಕಮ್ಮರೂ ದ್ರಾವಿಡ ವರ್ಗಕ್ಕೆ ಸೇರಿದವರೆಂದು ಆಧುನಿಕ ತಜ್ಞರ ಅಭಿಪ್ರಾಯವಿದೆ. ಇವರನ್ನು ಕುರಿತು ಮಿ. ಫ್ರಾನ್ಸಿಸರು ೧೯೦೧ರ ಜನಗಣನೆಯ ವರದಿಯಲ್ಲಿ ಬರೆಯುವುದು ಏನೆಂದರೆ:

> The Kammas, Kapus or Reddis, Velamas, and Telagus-all four of these castes closely resemble one another in appearance & customs and seem to have *branched off* from one and the same Dravidian stock. *Originally soliders* by profession, they are now mainly agriculturists and traders and some of them in the north are Zamindars.[೧೨]

ಈ ವರ್ಣನೆಯನ್ನೋದುವಾಗ 'ಬಂಟ'-ನಾಡವರ ನೆನಪಾಗದೆ ಇರದು. ನಾಡವರೂ ದ್ರಾವಿಡವರ್ಗಕ್ಕೆ ಸೇರಿದವರೆಂದು ಬಲ್ಲಿದರ ಅಭಿಮತ. ಆದ್ದರಿಂದ, ಮೂಲ ಈ ಕನ್ ಅಥವಾ ಕಂ ಎಂಬ ಜನಾಂಗವೆಲ್ಲವೂ ಒಂದು. ಕನ್ನ ಅಥವಾ ಕಣ್ಣ ಎಂಬಂತೆ ಕಮ್ಮ ಎಂಬುದೂ ಇದೇ ಜನಾಂಗ. ನಿಜಗುಣ ಶಿವಯೋಗಿಗಳು ಕನ್ನಡ ಮತ್ತು ಕಮ್ಮ ಎಂದು ಎರಡು ಕುಲಗಳ ಹೆಸರನ್ನು ಹೇಳಿದ್ದಾರೆ.

ತಮಿಳಿನಲ್ಲಿಯ ன் (ಅವರ್ಗೀಯ ನಕಾರವು) ಶಬ್ದದ ಆದಿಯಲ್ಲಿ ಬರುವುದಿಲ್ಲ. ಆದುದರಿಂದ ಕನ್ನಡದೊಳಗಿನ ಬಿಂದುವಿನಂತೆಯೆ ತಮಿಳ ನಕಾರದ ಉಚ್ಚಾರವೂ ಇರಬೇಕೆಂದೆನಿಸುತ್ತದೆ. ಏಕೆಂದರೆ, ಬಿಂದುವು ಶಬ್ದದ ಆರಂಭದಲ್ಲಿ ಬರುವುದೇ ಸಾಧ್ಯವಿಲ್ಲ. ಇನ್ನೂ ಒಂದು ವಿಶೇಷ: ಹಲವೆಡೆಗಳಲ್ಲಿ ತಮಿಳಿನಲ್ಲಿಯೂ ಶಬ್ದಗಳ ಕೊನೆಯ 'ನ್' ಎಂಬುದು ಯಾವುದೊಂದು ಅಕ್ಷರಕ್ಕೆ ಆದೇಶವಾಗಿ ಬರುವುದುಂಟು. ಆದುದರಿಂದ, ಕಂನಡ-ಕಂನಾಡು ಇದರೊಳಗಿನ ಪೂರ್ವಪದವಾದ ಕಂ-ಕನ್ನ ಎಂಬ ಜನಾಂಗವಾಚಕ ಶಬ್ದದ ಕೊನೆಯ ಅಕ್ಷರವು ಯಾವುದಾದರೂ ಒಂದು ಅಕ್ಷರಕ್ಕೆ ಆದೇಶವಾಗಿ ಬಂದಿರಬಹುದೆ? ಯಾವ ಅಕ್ಷರದ ಸ್ಥಳದಲ್ಲಿ (ಂ)ನ್ ಇದು ಬಂದಿರಬಹುದೆಂಬುದನ್ನು ಕಂಡುಹಿಡಿಯಲು ಸಾಧ್ಯವಾದರೆ ಕನ್ನ(ಣ್ಣ) ಎಂಬ ಈ ಜನಾಂಗವಾಚಕ ಶಬ್ದದ ನಿಜವಾದ ಅರ್ಥವು ಬೇಗನೆ ಗೊತ್ತಾಗಿ ಆಮೇಲೆ ಈ ಜನಾಂಗದ ಆಗಿನ ಸ್ಥಿತಿಗಳನ್ನು ಅರಿತುಕೊಳ್ಳಲು ಸುಲಭವಾಗಬಹುದು.

ಟಿಪ್ಪಣಿ

೧. ***Tamil Lexicon***

೨. ***Castes and Tribes of Southern India,*** Vol. V. P. 249

೩. Ibid, p. 134; & CTM. IV., p. 410

೪. Ibid, Vol. I P. 149

೫. ***Early History of India,*** p. 430

೬. ***Castes and Tribes of Mysore***, Vol. IV, pp. 397-401

೭. ***Ephigraphia Indica,*** Vol. XI, p. 342-343

೮. ***Maharastra, Gazetteer,*** Vol. II, part I, p. 156 PRK. p. 15-16

೯. ***Altekar; Reshtrakutas and their Times,*** P. III

೧೦. ***Castes and Tribes of South India,*** Vol. I P. 149

೧೧. ***Karnataka Historical Review*** 1937, Vol IV PP. 1.2.

೧೨. ***Ephigraphia Carnatica***, Index, Vol. XIII

೧೩. ***South Indian Ephigraphy,*** 1934, No. 154

೧೪. ***Mysore Archaeological Reports,*** 1929. p. 209-10

೧೫. ***Andhra Historical Society Journal*** Vol. X, p. 95

೧೬. Tamil Lexicon

೧೭. ***Castes and Tribes of South Indian,*** Vol. III P. 94

ಕನ್ನ(ಣ್ಣ)ರ ಪೂರ್ವಪೀಠಿಕೆ

ಹಿಂದಿನ ಪ್ರಕರಣದ ಕೊನೆಯಲ್ಲಿ ಸೂಚಿಸಿದ ಮೇರೆಗೆ ಕನ್ ಅಥವಾ ಕಂ ಈ ಶಬ್ದದ ಕೊನೆ ನ್ ಇಲ್ಲವೆ 'ಂ'ವು ಯಾವ ಅಕ್ಷರದ ಬದಲು ಬಂದಿರಬಹುದು? ಎಂಬುದೊಂದು ಸಮಸ್ಯೆಯಾಗಿದೆ. ಕನ್ನ ಅಥವಾ ಕಣ್ಣ ಹೆಸರಿನ ಊರುಗಳಿವೆ; ಸೀಮೆಗೂ ಹೆಸರಿದೆ; ಈ ಹೆಸರಿನ ಶಿವಾಲಯಗಳಿವೆ. ಕಣ್ಣಪ್ಪ, ಕನ್ನಮಾತ್ಯ ಎಂದು ಮುಂತಾಗಿ ಜನಗಳ ಹೆಸರುಗಳಿವೆ; ಜನಾಂಗದ ಹೆಸರಿದೆ. ಇದೆಲ್ಲವೂ ಬರಿ ಅಹುದು ಬಹುದಿನ ಹಾರಿಕೆಯ ಮಾತಲ್ಲ. ಸ್ಮೃತಿ, ಪುರಾಣಗಳು, ಇತಿಹಾಸ ಮತ್ತು ಶಾಸನಾದಿಗಳಿಂದ ಸಂಪೂರ್ಣವಾಗಿ ಸಿದ್ಧವಾದ ಸಂಗತಿ. ಇಷ್ಟೊಂದು ಬಗೆಬಗೆಯಾಗಿ ವ್ಯವಹಾರದಲ್ಲಿದ್ದ ಕನ್ನ(ಣ್ಣ) ಶಬ್ದಕ್ಕೆ ಅರ್ಥವೇ ಇದ್ದಿಲ್ಲವೆಂದು ಭಾವಿಸುವುದು ಸರಿಯಾದೀತೆ? 'ಕಣ್ಣರ್' ಜನಾಂಗವನ್ನು ಮೊಹೆಂಜೊದಾರೊದ ಅತಿಪ್ರಾಚೀನ ಶಾಸನಗಳಲ್ಲಿ ಕಣ್ಣಿನ ಚಿತ್ರದಿಂದ ಸೂಚಿಸಿರುವರೆಂದು ಫಾದರ ಹೆರಾಸರ ಅಭಿಪ್ರಾಯವಿದೆ. ಹಾಗಾದರೆ ಈ ಹೆಸರಿನ ಮೇಲಿಂದ ಈ ಜನಾಂಗಕ್ಕೆ ಕಣ್ಣುಗಳಿದ್ದುವೆಂದು ಅರ್ಥವೊ? ಇದು ಕೇವಲ ಅಪಾರ್ಥ. ಈ ಜನಾಂಗದ ಹೆಸರು ಕನ್ನ ಎಂದು ಇದ್ದುದರಿಂದ ಕಣ್ಣಿನ ಚಿತ್ರದಿಂದ ಇವರನ್ನು ಉಲ್ಲೇಖಿಸಿರಬೇಕಲ್ಲದೆ ಇವರಿಗೆ ಮಾತ್ರ ಕಣ್ಣುಗಳಿದ್ದುವೆಂದು ಅದರಿಂದ ಅರ್ಥ ಮಾಡಲಾಗದು. ಮೂಗಪ್ಪ ಎಂದು ತೊಟ್ಟಿಲಲ್ಲಿಟ್ಟ ಹೆಸರಿನ ಒಬ್ಬ ಮನುಷ್ಯನ ಮೂಗು ದೊಡ್ಡದಿಲ್ಲದಿದ್ದರೂ ಆತನನ್ನು ಚಿತ್ರಲಿಪಿಯಿಂದ ಬರೆದು ತೋರಿಸಬೇಕಾದರೆ ವಿಶಿಷ್ಟ ಮೂಗಿನ ವ್ಯಕ್ತಿಯನ್ನೇ ಮಾಡಬೇಕಾಗಬಹುದು. ಅದರಂತೆಯೆ, ಈ ಕನ್ ಜನಾಂಗದ ಮೊಹೆಂಜೊದಾರೊದ ಉಲ್ಲೇಖವು ಇರಬೇಕು. ಆದುದರಿಂದ, ಕನ್ನ ಅಥವಾ ಕಣ್ಣ ಎಂಬುದಕ್ಕೆ ಕಣ್ಣು ಎಂದು ಅರ್ಥವಿದ್ದಿತೆಂದು ಗ್ರಹಿಸಲಿಕ್ಕಾಗುವುದಿಲ್ಲ.

ಹಾಗಾದರೆ, ಈ ಹೆಸರಿನ ಅರ್ಥವೇನು? ಕನ್ನರು ಅಥವಾ ಕಮ್ಮರು ಎಂಬ ಹೆಸರಿನಿಂದ ಕೊನೆಯ ಅಕ್ಷರವು (ನ್, ಮ್) ಅನುಸ್ವಾರವಿರಬೇಕೆಂದಿಷ್ಟೇ ಗೊತ್ತಾಗುವುದು. ಇದು ಯಾವ ಅಕ್ಷರಕ್ಕಾದ ಅನುಸ್ವಾರಾದೇಶವೆಂಬುದನ್ನು ನಿರ್ಧರಿಸಲು ಅವಕಾಶವಿಲ್ಲ. ಆದರೆ 'ಕಣ್ಣರು' ಎಂದು ಹೇಳುವ ಪರಂಪರೆಯನ್ನು ಸ್ವಲ್ಪ ವಿಚಾರಿಸಿದರೆ ಣಕಾರದಲ್ಲಿ ಏನಾದರೂ ಔಚಿತ್ಯವಿರಬೇಕೆಂದು ತೋರುತ್ತದೆ. ಹಲವು ಕನ್ನಡಶಬ್ದಗಳಲ್ಲಿ ಆದೇಶವಾಗಿ ಬಂದ ಕೊನೆಯ ಣ ಕಾರವು ಳ ಕಾರದ ಸ್ಥಾನವನ್ನು ಆಕ್ರಮಿಸಿರುವುದು ಗೋಚರವಾಗುತ್ತದೆ. ಇಂದಿನ 'ನೊಣ' ಎಂಬ ಶಬ್ದವನ್ನು ಹಿಂದಕ್ಕೆ ನೊಳ ಎಂಬುದಾಗಿ ಬರೆಯುತ್ತಿದ್ದರು. ಒಮ್ಮೆ 'ಕುಳಿ' ಎಂದಿದ್ದುದು ಈಗ ಕುಣಿ ಆಗಿದೆ; ಅದರಂತೆ ಕಳ=ಕಣ. ಇಂತಹ ಹಲವು ಉದಾಹರಣಗಳುಂಟು. 'ಕೊಳ್ಳು' ಎಂಬ ಶಬ್ದದೊಳಗಿನ ಕೊನೆಯ ಳ ಕಾರವು ಅನುಸ್ವಾರವಾಗಿ 'ಕೊಂ' ಎಂದು ಆಗುತ್ತದೆ. ಕೊಣ್, ಕೊಮ್ ಅಥವಾ ಕೊನ್ ಎಂದು ಆ ಅನುಸ್ವಾರದ ಉಚ್ಚಾರವು ಆಗಬಲ್ಲುದು. ಇದರಂತೆಯೆ, ಬೆಳ್: ಬೆಳ್=ಬೆಂ=ಬೆನ್=ಬೆಣ್=ಬೆಮ್. ಈ

ದೃಷ್ಟಾಂತಗಳ ಮೇಲಿಂದ ಕನ(ಣ್ಣ)ರು ಎಂಬ ಜನಾಂಗದ ಹೆಸರು ಪ್ರಾಚೀನಕಾಲದಲ್ಲಿ ಕಳ್ಳರು ಎಂಬುದಾಗಿದ್ದಿತೆಂದು ಊಹಿಸಬಹುದೇ?

ದಕ್ಷಿಣ ಹಿಂದುಸ್ತಾನದಲ್ಲಿ ಅತಿ ಪ್ರಾಚೀನಕಾಲದಿಂದಲೂ ಕಳ್ಳರ್ ಎಂಬ ಹೆಸರಿನ ಜನಾಂಗವು ಇದ್ದಿತೆಂಬುದನ್ನು ನಿರಾಕರಿಸುವವರೇ ಇಲ್ಲ. ತಮಿಳರ ಪ್ರಾಚೀನ ಸಾಹಿತ್ಯದಲ್ಲಿ ಈ ಜನಾಂಗದ ಉಲ್ಲೇಖಗಳು ಹೇರಳವಾಗಿವೆ. ಆದರೆ, ಈ ಜನಾಂಗದ ಬಗ್ಗೆ ಸರಿಯಾದ ತಿಳುವಳಿಕೆಯಿದ್ದವರು ಸಿಕ್ಕುವುದೆ ಪರಮ ದುರ್ಲಭ. ಇವರನ್ನು ತಪ್ಪಾಗಿ ಎಣಿಸದಿದ್ದವರೆ ವಿರಳ. 'ಕಳ್ಳ' ಎಂಬ ಹೆಸರಿನಿಂದ ಭ್ರಾಂತಿಗೊಳ್ಳದವರೇ ಸ್ವಲ್ಪ. ಕಳ್ಳರು ಎಂದರೆ ಕನ್ನ ಹಾಕುವವರು ಎಂದು ಸಾಮಾನ್ಯವಾಗಿ ಅರ್ಥಮಾಡುವವರು ಬಹಳ. ನೆಲ್ಸನನಿಗೆ ಈ ಅರ್ಥವು ಸಮ್ಮತವಿಲ್ಲ; ಆದರೆ ಒಪ್ಪರ್‌ವನಿಗೆ ಒಪ್ಪಿಗೆಯಿದೆ.[೧] ಡಾ. ಕೃಷ್ಣಸ್ವಾಮಿ ಅಯ್ಯಂಗಾರ್ಯರು 'ಕಳ' ಶಬ್ದದ ಅರ್ಥವನ್ನು ಮಾಡಲು ಪ್ರಯತ್ನಿಸಿಲ್ಲವಾದರೂ ಈ ಜನಾಂಗವು ಕಳವು ಸುಲಿಗೆಯ ಕೆಲಸಗಳನ್ನು ಕೈಕೊಂಡು ಬಾಳುವೆ ಮಾಡುತ್ತಿದ್ದಿತೆಂಬಂತೆಯೆ ವಿವರಣೆ ಮಾಡಿದ್ದಾರೆ. ಆದರು ಪ್ರೊ. ವ್ಹಿ. ಆರ್. ರಾಮಚಂದ್ರದೀಕ್ಷಿತರು, ಶ್ರೀ ಶ್ರೀನಿವಾಸ ಅಯ್ಯರರು, ಪ್ರೊ. ಪಿ.ಟಿ. ಶ್ರೀನಿವಾಸ ಅಯ್ಯಂಗಾರರುಗಳಿಗೆ ಇದು ಒಪ್ಪಿಗೆ ಇಲ್ಲ.[೨] ಇವರಲ್ಲಿ ಕೊನೆಯವರು ಬರೆದ ತಮಿಳರ ಇತಿಹಾಸವೆಂಬ ಗ್ರಂಥದಲ್ಲಿ 'ಕಳ್' ಶಬ್ದಕ್ಕೆ ಹೊಸ ಅರ್ಥವನ್ನು ಹಚ್ಚಲು ಹವಣಿಸಿದ್ದಾರೆ.[೩] ಪ್ರೊ. ಪಿ.ಟಿ. ಶ್ರೀನಿವಾಸ ಅಯ್ಯಂಗಾರರ ಅಭಿಪ್ರಾಯದಂತೆ 'ಕಳ್' ಎಂದರೆ ಶಕ್ತಿ, ಬಲ, ಪರಾಕ್ರಮ. ಕಳ್ಳರು ಎಂದರೆ ಬಲಿಷ್ಠರು, ಮೂಲದಲ್ಲಿ ಇದು ಒಳ್ಳೆಯ ಅರ್ಥದ ಶಬ್ದವಿದ್ದು, ಬಲಿಷ್ಠರು ಸ್ವಾಭಾವಿಕವಾಗಿ ಪುಂಡಾಟಿಕೆ, ಹೋರಾಟಗಳಲ್ಲಿ ಆಸಕ್ತರಾಗುವುದರಿಂದ ಮುಂದೆ ಕಳ್ಳ ಎಂಬ ಶಬ್ದಕ್ಕೆ ಅಪಾರ್ಥವು ಬಂದಿರಬೇಕು.

'ಕಳ್ಳರ್' ಎಂಬ ಕುಲದ ಜನಗಳು ಈಗ ಸಿಕ್ಕುವುದು ದುಸ್ತರ. ಹಿಂದಿನ ಕೆಲವು ಜನಗಣನೆಯಲ್ಲಿ ಈ ಹೆಸರಿನ ಜನಗಳ ಕೆಲವೊಂದು ಪಂಗಡಗಳು ಉಲ್ಲೇಖಿತವಾಗಿವೆ. ಇವರು ಈಗ ತೀರ ಹೀನಸ್ಥಿತಿಯಲ್ಲಿರುವ ಜನಗಳು. ಜಗತ್ತು ಬದಲಾದರೂ ಪೂರ್ವಸ್ಥಿತಿಗೆ ಅಂಟಿಕೊಂಡಿರಬೇಕೆಂಬ ಪ್ರವೃತ್ತಿಯಿಂದ ಇವರ ಪ್ರಗತಿಯಾಗದೆ ಪರಾಗತಿಯೆ ನಡೆದಿದೆ. ತಮಿಳ ಹಳೆಯ ಸಾಹಿತ್ಯದಲ್ಲಿ ಈ ಜನಾಂಗದ ಸ್ಥಿತಿಗತಿಗಳನ್ನು ಆಗಿನ ಉಲ್ಲೇಖಗಳಿಂದಲೆ ಅರಿತುಕೊಳ್ಳುವುದು ಲೇಸು. ಈ ಜನಾಂಗದ ಹೆಸರು 'ಕಳವರ್' ಅಥವಾ 'ಕಳ್ಳರ್' ಎಂದಿದೆ. 'ಕಳ್ಳರ್' ಶಬ್ದದ ಮೇಲುತೋರಿಕೆಯ ರೂಢಾರ್ಥವೊಂದರಿಂದಲೆ ಇವರು ಕನ್ನಗಾರರೆಂದು ನಿರ್ಧರಿಸುವುದು ಯೋಗ್ಯವಾಗಲಾರದು. ಪುರಾತನಕಾಲದ 'ಕಳ್ಳ'ರಿಗೆ ಕನ್ನದವರೆನ್ನಬೇಕಾದರೆ ಅವರ ಜೋಡಿಯ 'ಚೋರ(ಚೋಳ)'ರು ಏನಾಗಬೇಕು? ಕಳ್ಳರು, ಪಾಂಡ್ಯ ಮೊದಲಾದ ರಾಜರೊಡನೆ ಹೋರಾಡಿ ಕೆಲವೊಂದು ನಾಡಿನ ಒಡೆಯರಾಗಿ ಆಳಿದುದು ವೇಳ್ವಿಕುಡಿ ಶಾಸನದಿಂದ ಗೊತ್ತಾಗುತ್ತದೆ. ಕಳ್ಳರ್ ಎಂಬ ಹೆಸರಿನಿಂದಲೆ ರಾಜರಾಗಿ, ಸಾಮಂತರಾಗಿ ಇದ್ದ ಈ ಜನಾಂಗವದರು 'ಕನ್ನಗಾರ'ರೆಂದು ಭಾವಿಸುವುದು ಅನ್ಯಾಯ; ಅಪಾರ್ಥ. ಕಳ್ಳರು ನೆರೆಹೊರೆಯ ನಾಡಿನ ಅರಸರ ತುರುಗನ್ನು ದೋಚಿಕೊಂಡು ಒಯ್ಯುತ್ತಿದ್ದರೆಂದು ಪ್ರಾಚೀನ ತಮಿಳು ಸಾಹಿತ್ಯದಲ್ಲಿ ವರ್ಣನೆಗಳಿವೆ.[೪] ಆದರೆ, ಎದುರಾಳಿಗಳು ಕಾಳೆಗದಪಚಾರಿಕೆ-ಆಹ್ವಾನವೆಂದು ಒಬ್ಬರೊಬ್ಬರ ಆವುಗಳನ್ನು ಅಟ್ಟಿಕೊಂಡು ಬರುವುದು ಪ್ರಾಚೀನಕಾಲದ ಒಂದು ರೂಢಿಯೆ ಆಗಿದ್ದಿತು. ಮಹಾಭಾರತದಲ್ಲಿಯೆ ಇದಕ್ಕೆ ದೃಷ್ಟಾಂತಗಳಿವೆ. ಕಳವರಾದರೂ ಇದನ್ನೆ ಮಾಡುತ್ತಿದ್ದರೆಂದು ಪ್ರೊ. ಪಿ. ಟಿ. ಶ್ರೀನಿವಾಸ ಅಯ್ಯಂಗಾರ್ಯರ ಅಭಿಪ್ರಾಯ.

Cattle was lifted..... as a challenge to the Raja of the country.[೫]

'ಕಳ್ಳರ್' ಎಂಬ ಈ ರಾಜರು(ಜನಾಂಗದವರು) ಮಾತ್ರ ಏಕೆ ತುಡುಗುರು? ಕನ್ನದವರು? ಹಾಗೆ ನೋಡಿದರೆ ಎಲ್ಲ ರಾಜರೂ ಈ ಉದ್ಯೋಗದವರೇ. ತುಡುಗರು ಕೆಲವರನ್ನು ಕೂಡಿಕೊಂಡು ಮಾಡುವ ಕಾಯಕವನ್ನೆ ರಾಜರೆಂಬವರು ಹಲವರನ್ನು ಕಟ್ಟಿಕೊಂಡು ಜರುಗಿಸುವರು. ಪರರ (ಭೂಮಿ-ಸೀಮೆಗಳನ್ನು) ಆಕ್ರಮಣ ಮಾಡುವುದಕ್ಕೇ ಪರಾಕ್ರಮವೆಂಬ ಹೆಸರಲ್ಲವೆ? ಆಗ ಇದೊಂದು ಪ್ರಶಂಸನೀಯವಾದ ಗುಣವೇ

ಆಗಿದ್ದಿತು. ಅದೇಕೆ? ಇಂದಿಗೂ ಪರಾಕ್ರಮಿಯಲ್ಲದ ರಾಜನು ರಾಜನೇ ಅಲ್ಲ. ಕಳ್ಳರೂ (ಮರವರೂ) ರಾಜರಾಗಿದ್ದರು. ಇವರು ಪಾಂಡ್ಯರು ಚೋಳರು ಮೊದಲಾದ ರಾಜರ ಸಮಕಾಲೀನರು. ಪಿ. ಟಿ. ಶ್ರೀನಿವಾಸ ಅಯ್ಯಂಗಾರ್ಯರಿಗೆ ಕಳ್ಳ ಶಬ್ದದ ಅಪಾರ್ಥವು ಮಾನ್ಯವಿಲ್ಲ. ಅವರು ಈ ಶಬ್ದಕ್ಕೆ ಬಲ, ಶಕ್ತಿ ಎಂಬ ಅರ್ಥವನ್ನು ಮಾಡುತ್ತಾರೆ. ಆದರೆ, ಸುವಿಮರ್ಶೆ ಮಾಡಿದರೆ ಈ ಅರ್ಥವು ಸರಿಹೋಗುವುದಿಲ್ಲ. ೧. ಕಳವರು ಮಾತ್ರ ಬಲಶಾಲಿಗಳೊ? ಚೋಳ ಪಾಂಡ್ಯಾದಿ ಉಳಿದ ರಾಜರೂ ಬಲಿಷ್ಠರಾಗಿದ್ದರು. ಕಳವರಿಗಿಂತಲೂ ಹೆಚ್ಚಿನ ರಾಜ್ಯವಾಳಿದರು. ಪಿ. ಟಿ. ಶ್ರೀಯವರ ಅರ್ಥವು ಸಮಾಜವಿಕಾಸ ಕ್ರಮದರ್ಶಕವಾಗಿಲ್ಲ.

ನಮ್ಮ ನಾಡಿನ ಸಮಾಜ ವಿಕಾಸಕ್ರಮದ ರೀತಿಯನ್ನು ಬಲ್ಲವರು, ಕಳ್ಳಶಬ್ದಕ್ಕೆ ಅತಿ ಪ್ರಾಚೀನ ಅರ್ಥವು ಬೇರೆ ಏನಾದರೂ ಇರಬೇಕೆಂದು ಊಹಿಸಬಹುದಾಗಿದೆ. ಕಳ್ಳರು ಪುರಾತನ ಜನಾಂಗ. ದ್ರಾವಿಡವರ್ಗದ ಜನಾಂಗ. ದ್ರಾವಿಡರು ಆರ್ಯರಿಗಿಂತಲೂ ಮೊದಲಿನಿಂದ ಹಿಂದೂದೇಶದಲ್ಲಿ ನೆಲೆಸಿದ್ದರೆಂದು ಇತಿಹಾಸವು ಹೇಳುತ್ತದೆ. ಮಾನವ ಕುಟುಂಬದ ವಿಕಾಸಕ್ರಮವನ್ನು ನಿರೀಕ್ಷಿಸಿದರೆ ಅದು ಕೆಲವೊಂದು ಮೆಟ್ಟುಮೆಟ್ಟಿನಿಂದ ಇಂದಿನ ವರೆಗೆ ಬೆಳೆದು ಬಂದುದು ಅನುಭವಕ್ಕೆ ಬರುತ್ತದೆ. ಕಳ್ಳ ಶಬ್ದವು ಈ ಜನಾಂಗದ ಪ್ರಾಥಮಿಕ ಸ್ಥಿತಿದರ್ಶಕವಾಗಿದೆಯೆಂದು ನನ್ನ ಅಭಿಪ್ರಾಯ. ಬೇಟೆಗಾರಿಕೆಯ ಮುಂದಡಿಯೆ ದನಗಾರಿಕೆ. ದನಗಾರಿಕೆಯಲ್ಲಿ ಹಟ್ಟಿಗಳನ್ನು ಕಟ್ಟಿಕೊಂಡು ಇರಲಾರಂಭಿಸಿದ ಬಳಿಕ ಮಾನವನು ಒಕ್ಕಲನಾದನು, ಕುಡವನಾದನು. ಇವನೇ ಕುಟುಂಬಿ. ನಾಡವನಾಗಿ ರಾಷ್ಟ್ರಿಕನಾಗಿ ಅರಸುತನದ ಪಟ್ಟವನ್ನೇರಿದನು. ನಮ್ಮ ನಾಡಿನ ಮೊದಲಿಗನು ಗೌಳ. ಗೌಳನು ಗೌಡನಾಗಿ, ನಾಡಿಗೊಡೆಯನಾಗಿ, ವೀರಕ್ಷತ್ರಿಯ ಪದವಿಗೇರಿದುದರ ಸಂಪೂರ್ಣ ವಿವೇಚನೆಯು 'ಕರ್ಣಾಟದ ವೀರಕ್ಷತ್ರಿಯರು' ಎಂಬ ಪುಸ್ತಕದಲ್ಲಿ ಬಂದಿದೆ. ಈ ಪುಸ್ತಕದ ಕೊನೆಯಲ್ಲಿ ಕೊಟ್ಟಿರುವ 'ವಂಶವೃಕ್ಷ'ದ ೨ನೆಯ ಪರಿಶಿಷ್ಟದಲ್ಲಿ 'ಹಾಲು-ಮತ'ದವರಾದ ದ್ರಾವಿಡ ಜನಾಂಗದ ಪೀಳಿಗೆಯ ಹಬ್ಬುಗೆಯನ್ನು ವಿವರಿಸಿದ್ದುಂಟು. ದ್ರಾವಿಡ ಜನಾಂಗವು ಮೊದಲು ಗೋವಳರ ಉದ್ಯೋಗವನ್ನೆ ಕೈಗೊಂಡಿದ್ದಿತೆಂದು ಎಲ್ಲರೂ ಒಪ್ಪತಕ್ಕ ಸಂಗತಿಯಾಗಿದೆ. 'ಗೋವಳರು' ಎಂಬುದು ಸಂಸ್ಕೃತಜನ್ಯ; 'ಕಳ್ಳರು' ಎಂಬುದು ಇದೇ ಅರ್ಥದ (ಅಚ್ಚ ಇದೇ ಜನಾಂಗ) ಶಬ್ದ. 'ಕಳ್' ಎಂದರೆ ಹಾಲು. ಅತಿ ಪ್ರಾಚೀನ ಕಾಲದಲ್ಲಿ ರೂಢವಿದ್ದ ಈ ಅರ್ಥವು ಇಂದು ಬಹುತರವಾಗಿ ಕಣ್ಮರೆಯಾಗಿದ್ದರೂ ಅಲ್ಲಿ ಇಲ್ಲಿ ನುಸುಳಿಕೊಂಡು ಇನ್ನೂ ಒಂದೆರಡು ಕಡೆಗಳಲ್ಲಿ ಉಳಿದಿವೆ. 'ಕಳ್ಳಿ' (Milk hedge) ಎಂಬುದು ಒಂದು ವಿಶಿಷ್ಟ ಗಿಡ. ಕಳ್ ಎಂದರೆ ಹಾಲು. ಕಳ್ಳನ್ನು ಉಳ್ಳುದು ಕಳ್ಳಿ. ಕಳ್ಳಿ ಎಂದರೆ ಹಾಲಿನ ಗಿಡ, ಎಂಬರ್ಥ. 'ಕಳ್ಳು' ಎಂದು ಹೆಂಡಕ್ಕೂ ಹೆಸರಿದೆ. ಏಕೆ? ಅದೂ ಬಿಳಿರಸ-ಹಾಲು. ಇದಕ್ಕೇ 'ಹಾಲಾ' ಎಂದೂ ಹೆಸರಿದೆ. ಆದುದರಿಂದಲೇ ಕಳ್=ಹಾಲು ಎಂಬುದು ನಿಃಸಂಶಯ. ಹಿಂಡುವ ಗೋವಿಗೆ 'ಕಳ್ಳ-ಪಶು' ಎಂದು ತಮಿಳಿನಲ್ಲುಂಟು.[೬] ಆದಕಾರಣ ಕಳ್ ಎಂದರೆ ಹಾಲು; ಕಳ್ಳನು ಎಂದರೆ ಹಾಲಿನವ, ಗೌಳಿ. ಕುರು(ಂ)ಬರಲ್ಲಿ ಒಂದು ಶಾಖೆಗೆ ಹಾಲುಮತದವರೆಂದು ಹೆಸರಿದ್ದುದು ಸುಪ್ರಸಿದ್ಧವಿದೆ. ಕುರು(ಂ)ಬರು 'ಕಳ್ಳ'ರ ಪಂಗಡದರವೆಂದು ಈ ಜಾತಿಯ ಜನಾಂಗದ ವರ್ಣನೆಯಲ್ಲಿ ಥರ್ಸಟನ್‌ರು ಹೇಳಿದ್ದಾರೆ.[೭] ಇಂತೀ ಬಗೆಯಾಗಿ ಕಳ್ಳರು ಹಾಲುಮತದ-ಗೋವಳರಕುಲದವರೆಂದು ನಿಶ್ಚಿತವಾಗುತ್ತದೆ.

ಸರಿ. ಕಣ್ಣರು ಎಂಬ ಪದದ ಮೂಲವು ಕಳ್ಳರು ಎಂಬುದಾಗಿರಬೇಕೆಂಬ ಊಹೆಗೆ ಇನ್ನೂ ಬೇರೆ ಆಧಾರಗಳೂ ಉಂಟು. ಳ ಕಾರವು ಣ ಕಾರ ಅಥವಾ ಅನುಸ್ವಾರವಾಗುವುದುಂಟು. ಆದುದರಿಂದ, ಕಣ್ ಅಥವಾ ಕಂ ಎಂಬ ಶಬ್ದವು ಕಳ್ಳ ಇದರಿಂದಲೇ ಆಗಿರಬೇಕು, ಎಂದು ಕೇವಲ ಭಾಷಾ-ಶಾಸ್ತ್ರದ ನಿಯಮದ ಮೇಲೆಯೇ ಕೈಯೂರಿ ಕುಳ್ಳಿರಬೇಕಾದ ಕಾರಣವಿಲ್ಲ. ನಾಟ (ನಾಡವ)ರೂ ಕಣ್ಣರೂ ಒಂದೇ ಜನಾಂಗ ಎಂಬ ಮಾತು ಹಿಂದೆ ಬಂದಿದೆ. ನಾಟರಲ್ಲಿ ಕಳ್ಳರೆಂಬ ಪಂಗಡವುಂಟೆಂದು ಥರ್ಸ್ಟನ್‌ರು ಹೇಳುತ್ತಾರೆ. ನಾಟ್ಟರ್- The title of certain castes as ಕಳ್ಳರ್ etc. ಎಂದು ತಮಿಳು ಮಹಾಕೋಶದಲ್ಲಿ ಉಕ್ತವಾಗಿದೆ.[೮] ಆದುದರಿಂದ, ಕಳ್ಳರ್ ಎಂಬವರು ಕಣ್ಣರ ಪೂರ್ವಿಕರೆಂಬ ಮಾತು ನಿಶ್ಚಿತ. ಬಳ್ಳಾರಿ ಜಿಲ್ಲೆಯೊಳಗಿನ ಕಪ್ಪಗಲ್ಲಿನ ಅತಿ ಪುರಾತನ

ಅವಶೇಷಗಳನ್ನು ಕುರಿತು ಬರೆಯುವಾಗ ಗೌಳಿಗರೇ ಈ ನಾಡಿನ ಮೊದಲಿಗರೆಂಬ ಪ್ರಾಚೀನ ಪರಂಪರೆಯನ್ನು ಉಲ್ಲೇಖಿಸಿ ಪ್ರೊ. ಪಂಚಾನನ ಮಿತ್ರರು ಬರೆದಿದ್ದಾರೆ.[೯] ಗೌಳರೆಂದು ಸುವಿಖ್ಯಾತರಾಗಿದ್ದ (ಯದು) ತುರುವಸುಗಳ ಸಂತತಿಯವರೇ ಈ ನಾಡಿನ ಮೊದಲಿಗರು ಎಂದು ಮತ್ಸ್ಯಪುರಾಣವು ಹೇಳುತ್ತದೆ. ತುರುಕಾರ ವಂಶದ ದೇಸಾಯಿಗಳನ್ನು ಬೆಳಗಾಂವಿ ಜಿಲ್ಲೆಯಲ್ಲಿ ಈಗಲೂ ಕಾಣಬಹುದು. ಶಿವಾಜಿ ಮಹಾರಾಜನಿಗೆ ಎದುರಿಸಿದ ಬೆಳವಡಿಯ ಮಲ್ಲವ್ವನು ತುರುಕಾರ ಪಂಗಡದವಳೆಂದು ಐತಿಹ್ಯವಿದೆ.[೧೦] ಸಮಗ್ರ ಕರ್ನಾಟದಲ್ಲಿ ಜಿಲ್ಲೆಜಿಲ್ಲೆಗೂ ಹೇರಳವಾಗಿ ಸಿಕ್ಕುತ್ತಲಿರುವ ವೀರಗಲ್ಲುಗಳು ಹಿಂದಿನ ಕಾಲದ ತುರುಕಾರರ ಅಸ್ತಿತ್ವಕ್ಕೆ ಸಾಕ್ಷಿಯಾಗಿದೆ.

ಈಗಣ ತಿಳುವಳಿಕೆಯಂತೆ ಕಳ್ಳರು ತಮಿಳರು. ಈಗ ಕಳ್ಳರ ಅವಶೇಷಗಳು ಸಿಕ್ಕುವುದು ತಮಿಳುನಾಡಿನಲ್ಲಿಯೇ. ಆದುದರಿಂದ, ಕಳ್ಳರು ಕನ್ನಡಿಗರ ಮೊದಲಿಗರಿಗೆ ಹೇಗೆ ಸಂಬಂಧಪಡುವರು? ಎಂಬ ಒಂದು ಶಂಕೆಯುಂಟಾಗ ಬಹುದು. ಆದರೆ, ಈ ಸಂಶಯದಲ್ಲಿ ಹುರಳಿಲ್ಲ. ಕನ್ನಡಿಗರೂ ತಮಿಳರೂ ಅತಿ ಪ್ರಾಚೀನ ಕಾಲದಲ್ಲಿ ಒಂದೇ ಪೀಳಿಗೆಯವರೆಂಬ ಮಾತು ಆಧುನಿಕ ಸಂಶೋಧಕರಿಗೆಲ್ಲ ಮಾನ್ಯವಿದೆ. ಇವರೆಲ್ಲ 'ದ್ರಾವಿಡ' ವರ್ಗಕ್ಕೆ ಸೇರಿದವರು, ಎಂದು ಸ್ಥೂಲವಾಗಿ ಹೇಳುವುದೇ ಈ ವರೆಗೆ ನಡೆದಿದ್ದಿತು. ದ್ರಾವಿಡರ ಇಂತಹ ಶಾಖೆಗಳು ಪರಸ್ಪರ ಹತ್ತುಗೆಯುಳ್ಳವು. ಕನ್ನಡರು ಈ ಶಾಖೆಯವರು, ತಮಿಳರು ಈ ಶಾಖೆಯವರು, ಇಲ್ಲಿ ಇವೆರಡೂ ಶಾಖೆಗಳು ಒಂದಕ್ಕೊಂದು ಕೂಡುವುವು. ಇವರೆಲ್ಲರೂ ಮೂಲದಲ್ಲಿ ಒಂದು ಎಂಬ ಮಾತನ್ನು ಇನ್ನೂ ಚೆನ್ನಾಗಿ ಸಿದ್ಧಪಡಿಸಿದವರಾರೂ ಇಲ್ಲ. ತಮಿಳ ಮತ್ತು ಕನ್ನಡರು ಒಂದೇ ವೃಕ್ಷದ ಎರಡು ಶಾಖೆಗಳೆಂಬುದು, ಕನ್ನಡ ಮತ್ತು ತಮಿಳು ಭಾಷೆಗಳ ತುಲನಾತ್ಮಕ ಅಭ್ಯಾಸದ ಬಲದಿಂದಲೇ ಕೇವಲ ಊಹಿಸಿದ ಸಿದ್ಧಾಂತವಾಗಿತ್ತು. ಜಾತಿಜನಾಂಗಗಳ ಅಭ್ಯಾಸದಿಂದ ಕನ್ನಡಿಗರ ಈ ಶಾಖೆಯೂ ತಮಿಳರ ಈ ಶಾಖೆಯೂ ಒಂದುಕ್ಕೊಂದು ಹೊಂದಿಕೊಳ್ಳುವುದರಿಂದ ಇವರೆಲ್ಲ ಒಂದು ಎಂಬ ಮಾತು ಇನ್ನೂ ಬೆಳಕಿಗೆ ಬರಬೇಕಾಗಿ ಇದ್ದಿತು: ಕೀರ್ತಿಶೇಷರಾದ ರಾ. ನರಸಿಂಹಾಚಾರ್ಯರು ಕನ್ನಡ ಭಾಷಾಚರಿತ್ರೆಯಲ್ಲಿ ಬರೆಯುವುದೇನೆಂದರೆ:

> Now, the forms ಸಂದಾನ್, ಬಂದಾನ್, ನೋಂಪಿ etc.......are identical or nearly so with the forms used in Tamil. It may be stated that as we go farther back to the early period of Kannada literature we shall find the forms approximate more and more to the Tamil ones.[೧೧]

ಇಷ್ಟೊಂದು ತಮಿಳಕ್ಕೆ ಸಮೀಪದ-ತಮಿಳದ ಇನ್ನೊಂದು ರೂಪವೆ ಎನಿಸುವ ಭಾಷೆಯನ್ನಾಡುವ ಕನ್ನಡದ ಮೊದಲಿಗರು ತಮಿಳರ ತೀರ ಹತ್ತಿರದವರೇ ಆಗಿರಬೇಕಲ್ಲವೆ? ಕಣ್ಣರು ಕನ್ನಡದ ಮೊದಲಿಗರು. ಕನ್ನ (ಣ್ಣ)ರೇ ಕಳ್ಳರು. ಕಳ್ಳರು ತಮಿಳರಲ್ಲಿಯೂ ಉಂಟೆಂದು ಇಂದಿನ ಅವಶೇಷಗಳಿಂದ ಗೊತ್ತಾಗುತ್ತದೆ. ಆದುದರಿಂದ, ತಮಿಳರಿಗೂ ಕನ್ನಡಿಗರಿಗೂ ಸಾಮಾನ್ಯರಾಗಿದ್ದ ಸಮಾನ ಭಾಷೆಯ ಪ್ರಾಚೀನ ಜನಾಂಗವೆಂದರೆ ಈಗ ಇಲ್ಲಿ ವ್ಯಕ್ತರಾಗಿರುವ ಕಳ್ಳರೇ ಎಂದು ನಿರ್ಧರಿಸಬಹುದಾಗಿದೆ. Region inhabited by Kallas in and around Madura district is called 'ಕಳ್ಳನಾಡು' ಎಂದು ತಮಿಳುನಾಡಿನ ಐತಿಹ್ಯದಲ್ಲುಂಟು.[೧೨] ಇವರ ಒಂದು ಶಾಖೆಯಾದ ಕನ್ನರು ನೆಲೆಸಿದ ನಾಡೇ ಕನ್ನಾಡು-ಕನ್ನಡ. ಇನ್ನೊಂದು ತಮಿಳು, ಕಮ್ಮರು. ಅವರ ಬೇರೂರಿದ್ದ ಭಾಗವೇ ಕಮ್ಮನಾಡು. ತಮಿಳು, ಕನ್ನಡ ಮತ್ತು ಆಂಧ್ರ ಭಾಷೆಗಳು ಒಂದೇ ಶಾಖೆಯವೆಂದು ಕಾಲ್ಡವೆಲ್ಲ ಪ್ರಭೃತಿಗಳು ಆಳವಾದ ಅಭ್ಯಾಸದಿಂದ ಸಿದ್ಧಪಡಿಸಿ ಮೂಲದಲ್ಲಿ ಇವೆಲ್ಲ ಜನಾಂಗಗಳ ಒಂದೇ ಪಂಗಡಕ್ಕೆ ಸೇರಿದುವಾಗಿರಬೇಕೆಂದು ತರ್ಕಿಸಿದ್ದರು. ಈಗ ಆ ತರ್ಕವು ಜಾತಿಜನಾಂಗಗಳ ಅಭ್ಯಾಸದ ಬಲದಿಂದ ಸುಪ್ರತಿಷ್ಠಿತವಾಯ್ತು; ಅದೊಂದು ಸತ್ಯಸಿದ್ಧಾಂತವೆಂದು ನೆಲೆಗೊಂಡಿತು.

'ಕಳವ'ರ ರೀತಿನೀತಿಗಳು, ಅವರ ಕುಲದ ಕಥೆ-ಪರಂಪರೆಗಳು ಇವನ್ನೆಲ್ಲ ನಿರೀಕ್ಷಿಸಿದರೆ ಈ ಜನಾಂಗವು ಅತಿ ಪುರಾತನಕಾಲದ್ದೆಂದು ಕಂಡುಬರುತ್ತದೆ. ಮೂಲ ದ್ರಾವಿಡರೆಲ್ಲ ಕಳವರ ಕುಲದವರು ಎಂದರೆ 'ಹಾಲುಮತ'ದವರೇ. ಆದರು ಅನೇಕ ಕಾರಣಾಂತರಗಳಿಂದ ಅವರಲ್ಲಿ ಹಲವು ಬಗೆಗಳಾಗಲಾರಂಭಿಸಿದುದು ಗೋಚರವಾಗುತ್ತದೆ. ಕಳ್ಳನು ಉಳ್ಳವನಾಗುತ್ತಲೆ ಮರವನಾಗುತ್ತಾನೆ, ಎಂಬರ್ಥದ ಒಂದು ಗಾದೆಯ ಮಾತು ತಮಿಳಿನಲ್ಲಿದೆ.[೧೩] ಮರವರಿಂದಲೂ ಮೇಲ್ತರಗತಿಯವರು ಅಹಮುಡಿಯರ್, ಅಂತೆ. ಗೆಳೆಯ ಶಬ್ದದ ಇನ್ನೊಂದು ರೂಪವೆ ಗೆಣೆಯ. ಆದರೆ, ರೂಢಿಯಿಂದ ಇವೆರಡರ ಅರ್ಥದಲ್ಲಿ ಎಷ್ಟೊಂದು ವ್ಯತ್ಯಾಸ! ಳ-ಣಕಾರಗಳ ಪಲ್ಲಟದೊಡನೆ ಅರ್ಥದಲ್ಲಿಯೂ ಕೆಲವೊಂದು ಅಂತರವು ತಲೆದೋರಲಾರಂಭಿಸುವುದು. ಕನ್ನರು ಮತ್ತು ಕಮ್ಮರಲ್ಲಿ ನಾಡುಗಳ ಭೇದದಿಂದ ನಡೆನುಡಿಗಳಲ್ಲಿಯೂ ವಿಪರೀತ ವ್ಯತ್ಯಾಸಗಳು ಬೆಳೆದು ಬಂದುದು ಅನುಭವಕ್ಕೆ ಬರುತ್ತಲಿದೆ. 'ಕಂ' ಎಂಬುವು ಮೊದಲಿಗೆ ಒಂದೇ ಜನಾಂಗವಾದರೂ, ಮುಂದಿನ ಬೆಳವಣಿಗೆಯಲ್ಲಿ ಇವೆರಡೂ ಶಾಖೆಗಳು ತೀರ ಸ್ವತಂತ್ರವಾದುದವನ್ನು ನ್ (ಕನ್ನ) ಮತ್ತು ಮ್(ಕಮ್ಮ)ಗಳು ತೋರಿಸುತ್ತವೆಯೆಂದು ಹೇಳಬಹುದು. ಇದೇ ಮೇರೆಗೆ ಕಳ್ಳರಲ್ಲಿ ಕೆಲವೊಂದು ಪಂಗಡದವರು 'ಕನ್ನ(ಣ್ಣ)ರಾದ ಬಳಿಕ ಕಳ್ಳರಿಂದ ಇವರು ಬೇರೆಯಾಗಿ ಬೆಳೆಯುಲಾರಂಭಿಸಿದರೆಂದು ಊಹಿಸಲು ಏನೂ ಅಡ್ಡಿ ತೋರುವುದಿಲ್ಲ.

ದ್ರಾವಿಡವರ್ಗದೊಳಗಿನ ತೀರ ಪ್ರಾಥಮಿಕ ಅವಸ್ಥೆಯ ಅತ್ಯಂತ ಪ್ರಾಚೀನ ಶಾಖೆಯೆಂದರೆ ಕಳವರು. ಕಳವರೊಳಗಿಂದ ಕಾಲಪರಿಸ್ಥಿತಿಗಳು ಬದಲಾದಂತೆ ಮಾರ್ಪಾಟುಗಳನ್ನು ಹೊಂದುತ್ತ-ಹೊಸಹೊಸ ಸಂಸ್ಕಾರಗಳಿಗೆ ಒಳಗಾಗುತ್ತ ಮುಂದೆ ನಡೆದವರು ಮುಂದೆಯೇ ಹೋದರು. ಕಳವರು ಮಾತ್ರ ತೀರ ಪುರಾತನ ಪರಂಪರಾಪ್ರಿಯರಾಗಿ ಇನ್ನೂ ಎಂದಿನಂತೆ ಹಾಗೆಯೆ ಇದ್ದುಬಿಟ್ಟಿದ್ದಾರೆ! ಸಾಧಾರಣವಾಗಿ ಕಳವರು ಮತ್ತು ಮರವರು ಒಂದೇ. ದಕ್ಷಿಣಕ್ಕೆ ಅಡಿಯಿಟ್ಟ ದ್ರಾವಿಡರ ಪ್ರಥಮಶಾಖೆಯಲ್ಲಿ ಇವರುಂಟು, ಎಂದು ತಜ್ಞರ ಅಭಿಪ್ರಾಯವಿದೆ.

> The Maravars must have been one of the first of the Dravidian tribes that penitrated to the south of peninsula, and like Kallars, they have been but little affected by Brahamanic influence.[೧೪]

ಇಂದು ಕಳವರನ್ನು ತಮಿಳರಲ್ಲಿ ಎಣಿಸಬಹುದಾಗಿದ್ದರೂ ಪುರಾತನ ತಮಿಳ ಸಾಹಿತ್ಯದೊಳಗಣ ವರ್ಣನೆಗಳನ್ನು ನೋಡಿದರೆ ಈ ಜನಗಳ ಬಗ್ಗೆ ಚೋಳ ಪಾಂಡ್ಯರಲ್ಲಿ ಆತ್ಮೀಯ ಭಾವವು ಇದ್ದಂತೆ ತೋರುವುದಿಲ್ಲ.[೧೫] ಕಳ್ಳ ವಡುಕರ ಭಾಷೆ ಬೇರೆ, ರೀತಿ ಬೇರೆ ಎಂದು ತಮಿಳು ಕವಿಗಳು ವರ್ಣಿಸಿದ್ದುಂಟು.[೧೬] ಆದುದರಿಂದ, ಕಳವರೊಳಗಿನ ಈ ವಡುಕರು ತಮಿಳರಿಂದ ಭಿನ್ನರಾಗುತ್ತಲಿದ್ದ ಕನ್ನ ಮತ್ತು ಕಮ್ಮರೇ ಆಗಿರಬೇಕೆಂದಲ್ಲಿ ಸಂದೇಹವಿಲ್ಲ. ಕ್ರಿ. ಶ. ೬-೭-ನೆಯ ಶತಮಾನದಿಂದ 'ಕಳಭ್ರ'ರೆಂಬ ರಾಜರು ಕಾಣಿಸಿಕೊಳ್ಳುವರು. ಇವರು 'ಕನ್ನಡಿಗರೆ' ಆಗಿರಬೇಕೆಂದು ಹಿಂದುಸ್ತಾನ ಸರಕಾರದ ಶಾಸನ ಇಲಾಖೆಯ ವರಿಷ್ಠ ಅಧಿಕಾರಿಗಳಾಗಿದ್ದ ರಾ. ಸಾ. ವೆಂಕಟಯ್ಯನವರ ಅಭಿಪ್ರಾಯವಿದೆ. ಕಳವರೇ ಕಳಭ್ರರೆಂಬ ಹೆಸರಿನಿಂದ ಮುಂದೆ ಪ್ರಖ್ಯಾತಿಗೆ ಬಂದರೆಂದು ಸಾಮಾನ್ಯವಾಗಿ ಎಲ್ಲ ಸಂಶೋಧಕರೂ ಒಪ್ಪಿಕೊಂಡಿದ್ದಾರೆ. ಪ್ರೊ. ಪಿ. ಟಿ. ಶ್ರೀನಿವಾಸ ಅಯ್ಯಂಗಾರ್ಯರು ಇದನ್ನು ಕುರಿತು ಬರೆಯುವುದೇನೆಂದರೆ:

> Dr. S.Krishnaswamy Iyangar has given his support to the theory that the Kalabhars were Kallar of old Tamil poetry. Kallar has as alternative form Kalavar and Kallavr.[೧೭]

ಕಳವರು, ಕಳ್ವರು ಅಥವಾ ಕಳ್ಳರು ಎಂದು ಸ್ವಲ್ಪ ವ್ಯತ್ಯಾಸದಿಂದ ಕರೆಯಲ್ಪಡುತ್ತಿದ್ದ ಜನಾಂಗಕ್ಕೆ ಸಂಬಂಧ ಪಟ್ಟವರೇ ಕಳಭ್ರರು, ಎಂಬ ಬಗ್ಗೆ ಭಿನ್ನಾಭಿಪ್ರಾಯಗಳಿಲ್ಲವಾದರೂ ಕಳಭ್ರರು ತಮಿಳರೇ ಆಗಿರಬೇಕೆಂದು ಕೆಲವರ ಅಭಿಪ್ರಾಯಗಳಿವೆ. ಆದರೆ, ಕಳವರ ವಿಷಯಕ್ಕಿರುವ ತಮಿಳು ಸಾಹಿತ್ಯದ ಪ್ರಾಚೀನ ಉಲ್ಲೇಖಗಳಿಂದ ಅವರು ತಮಿಳರಿಂದ ಸ್ವಲ್ಪ ಭಿನ್ನರಾದವರಾಗಿಬೇಕೆಂಬ ಭಾವನೆ ದೃಢವಾಗುವಂತಿದೆ. ಆದುದರಿಂದ, ವೆಂಕಯ್ಯನವರು ಇನ್ನೂ ಬೇರೆ ಪ್ರಮಾಣಗಳ ಮೇಲಿಂದ ಕಳಭ್ರರು ಕನ್ನಡಿಗರಿಗೆ ಸಂಬಂಧ ಪಟ್ಟವರಾಗಿರಬೇಕೆಂದು ಮಾಡಿದ ನಿರ್ಣಯವು ಸರಿಯಾದುದೆಂದು ತೋರುತ್ತದೆ.

ಕರ್ಣಾಟದ ಇತಿಹಾಸದಲ್ಲಿ ಒಂದು ಕಾಲಕ್ಕೆ ಕಣ್ಣ ಅಥವಾ ಕನ್ನ ಎಂಬ ಹೆಸರು, ಮತ್ತು ಈ ಹೆಸರಿನ ಶಿವಾಲಯಗಳು ವಿಶೇಷವಾಗಿ ಪ್ರಚಾರದಲ್ಲಿದ್ದುವೆಂದು ಕಂಡುಬರುತ್ತದೆ. ಕ್ರಿ. ಶ. ೯೬೫ರ ಒಂದು ಶಾಸನದಲ್ಲಿ ಆಡನೂರ ಕನ್ನೇಶ್ವರದೇವರಿಗೆ ದತ್ತಿಬಿಟ್ಟ ಉಲ್ಲೇಖವುಂಟು.[೧೮] ದೇವಗಿರಿ ಯಾವದರ ಕಾಲದಲ್ಲಿ ಕನ್ನಿಸೆಟ್ಟಿಯು ಕನ್ನೇಶ್ವರ ಗುಡಿಯನ್ನು ಕಟ್ಟಿಸಿದ್ದಾನೆ.[೧೯] ೧೦೮೪ನೆಯ ಇಸವಿಯ ಒಂದು ನೆಟ್ಟಕಲ್ಲಿನಲ್ಲಿ, ಕಣ್ಣಾಮಾತ್ಯನು ತಾನು 'ಕನ್ನೇಶ್ವರದೇವರ ಪದಸರಸಿಜ ಶಿಲೀಮುಖನ್' ಎಂದು ಹೇಳಿಕೊಂಡಿದ್ದಾನೆ.[೨೦] ಈ ಬಗೆಯ ಕನ್ನೇಶ್ವರದೇವರ ಮತ್ತು ಆ ಕನ್ನೇಶ್ವರನ ಭಕ್ತರಾದ 'ಕನ್ನ' ಎಂಬ ಜನಗಳ ಹೆಸರಿನ ಉಲ್ಲೇಖಗಳಿರುವ ಇನ್ನೂ ಹಲವು ಶಾಸನಗಳಿವೆ. ಇಲ್ಲಿ ಮಾದರಿಗಾಗಿ ಕೆಲವನ್ನು ಮಾತ್ರ ಹೇಳಿದೆ.[೨೧] ಕನ್ನೇಶ್ವರ ಅಥವಾ ಕಣ್ಣೇಶ್ವರ ಎಂದರೇನು? ಇದು ಶಿವನ ಹೆಸರು ಎಂಬ ಬಗ್ಗೆ ಯಾರೂ ಸಂದೇಹ ಪಡಲಾರರೆಂದು ತೋರುತ್ತದೆ. ಆದರೆ, ಶಿವನಿಗೆ ಈ ಹೆಸರು ಏಕೆ? ಮತ್ತು ಹೇಗೆ? ಎಂಬುದನ್ನು ಕುರಿತು ಕೂಲಂಕಷವಾದ ವಿಚಾರವು ಇನ್ನೂ ಆಗಬೇಕಾಗಿದೆ. ಮೈಸೂರ ಶಾಸನ ಇಲಾಖೆಯವರ ದೃಷ್ಟಿಯಿಂದ ಇದರ ವಿವರಣೆಯು ಹೀಗಿದೆ; ಡಾ. ಎಂ. ಎಚ್. ಕೃಷ್ಣರು ಬರೆಯುವುದೇನೆಂದರೆ:

> Herewith I am sending a note prepared in this office.
> Kannesvara is derived from Kanna and Isvara, the former being derived from Krishna. So, Kannesvara means Krishnesvara and this word is similar to Ramesvara, Vishnu-Isvara. It refers to Siva or his Linga set up by or for the merit of a person bearing some name which may be Vaishnava. The god is Siva though the name of the man may not be Saiva.

ಕಣ್ಣ+ಈಶ್ವರ ಎಂಬಲ್ಲಿ 'ಕಣ್ಣ' ಶಬ್ದವು ಕೃಷ್ಣ ಎಂಬುದರ ತದ್ಭವವೆಂದು ಗ್ರಹಿಸಿದ್ದಾರೆ. ಇಲ್ಲಿಯೆ ಎಲ್ಲವೂ ತಪ್ಪಿದೆ. ಸಂಸ್ಕೃತ ಮತ್ತು ಪ್ರಾಕೃತ ಭಾಷಾವಿಶಾರದರು ಕೃಷ್ಣ ಶಬ್ದದಿಂದ ಕಣ್ಣವು ಹುಟ್ಟಿತೆಂದು ಒಪ್ಪಿಸಿಕೊಳ್ಳಲು ಅಷ್ಟು ಸಿದ್ಧರಿಲ್ಲ. ಕಡಬದ ತಾಮ್ರಪಟಗಳನ್ನು ವಿಮರ್ಶಿಸಿ ಅವುಗಳನ್ನು ಕುರಿತು ಬರೆವಾಗ ಡಾ.ಎಚ್. ಲುಡರ್ಸ ಎಂಬ ವಿದ್ವಾಂಸರಿಗೆ 'ಕಣ್ನೇಶ್ವರ' ಶಬ್ದದ ಬಗ್ಗೆ ವಿಚಾರಿಸಬೇಕಾಗಿದೆ. ಅಕಾಲವರ್ಷ ಎಂಬ ರಾಷ್ಟ್ರಕೂಟರಾಜನು ತನ್ನ ಹೆಸರಿನಲ್ಲಿ ಕಣ್ನೇಶ್ವರ ದೇವಾಲಯವನ್ನು ಸ್ಥಾಪಿಸಿದ ಸಂಗತಿಯು ಅಲ್ಲಿ ಬಂದಿದೆ. ಕಣ್ಣ(ಕಣ್ನ) ಶಬ್ದವು ಕೃಷ್ಣ ಇದರ ತದ್ಭವವೆಂಬ ರೂಢಕಲ್ಪನೆಯನ್ನು ವಿರೋಧಿಸಿ ಡಾ. ಲುಡರ್ಸರು ಬರೆಯುವುದೇನೆಂದರೆ:

> As the combination of a dental & lingual 'n' in the interior of a word is absolutely impossible, this must be a mistake for either ಕಣ್ಣೇಶ್ವರ or, ಕನ್ನೇಶ್ವರ and the name of the kind would, therefore, be either ಕನ್ನ or. ಕಣ್ಣ. As far as I know, neither of these forms can

be considered as derived from Samskrit ಕೃಷ್ಣ the common Prakrit form being ಕಣ್ಹ and the Kanarese equivalent ಕನ್ನರ wheareas both ಕನ್ನ and ಕಣ್ಣ represent the Samskrit ಕರ್ಣ [೨೨]

ಪ್ರಾಕೃತ ಭಾಷಾಕೋವಿದರಾಗಿರುವ ಪ್ರೊ. ಉಪಾಧ್ಯೆಯವರು ಈ ತದ್ಭವವನ್ನು ಕುರಿತು ಹೀಗೆ ಬರೆದಿದ್ದಾರೆ:

The normal Prakrit form of ಕೃಷ್ಣ would be ಕಣ್ಹ.

ಆದುದರಿಂದ ಕಣ್ಣೇಶ್ವರ ಅಥವಾ ಕನ್ನೇಶ್ವರ ಎಂಬ ಹೆಸರಿನಲ್ಲಿರುವ ಕಣ್ಣ ಮತ್ತು ಕನ್ನ ಇವುಗಳ ಸಂಬಂಧವನ್ನು ಕೃಷ್ಣ ಶಬ್ದದೊಡನೆ ಜೋಡಿಸುವುದು ಸರಿಯಲ್ಲವೆಂದು ಸ್ಪಷ್ಟವಾಗುತ್ತದೆ. ಕಣ್ಣ (ಕನ್ನ) ಶಬ್ದದ ಮೂಲವನ್ನು ಸಂಸ್ಕೃತದಲ್ಲಿ ಹುಡುಕುವುದೇ ಆದರೆ, ಡಾ. ಲುಡರ್ಸರು ಹೇಳುವಂತೆ 'ಕರ್ಣ' ಎಂಬಲ್ಲಿ ಅದನ್ನು ಕಾಣಬಹುದು. ಹೀಗೆ 'ಕರ್ಣ' ಎಂಬ ಮಾತಿಗೆ ಬರುತ್ತಲೆ, ಈ ಸಂದರ್ಭದಲ್ಲಿ ತುರುವಸುವಿನ ಪೀಳಿಗೆಯಲ್ಲಿ ಮತ್ಸ್ಯಪುರಾಣವು ಹೇಳುವ 'ಕರ್ಣ' ಎಂಬ ಜನಾಂಗದ ಹೆಸರಿನ ನೆನಪು ಆಗದೆ ಇರದು. ಆದುದರಿಂದ, ಕಣ್ಣೇಶ್ವರ=ಕರ್ಣೇಶ್ವರ ಕರ್ಣೇಶ್ವರನು ಎಂದರೆ 'ಕರ್ಣ' ಎಂಬ ಜನಾಂಗದ ಈಶ್ವರನು, ಅಧಿದೇವತೆಯು, ಆತನೇ ಶಿವನು, ಎಂಬೀ ಬಗೆಯ ವಿಚಾರಗಳಿಗೆ ಇನ್ನಿಷ್ಟು ಬಲಬರುವುದು ಅನಿವಾರ್ಯವಾಗಿದೆ.

ಊರುಗಳಿಗೆ, ನಾಡಿಗೆ, ಜನಗಳಿಗೆ ಮತ್ತು ದೇವರಿಗೆ ಇರುವ ಕಣ್ಣ (ಕನ್ನ) ಎಂಬ ಹೆಸರಿನ ಸಂಬಂಧವು, ಸಂಸ್ಕೃತಕ್ಕೆ ಹೋದರೆ 'ಕರ್ಣ' ಎಂಬ ಪದದ ಕಡೆಗೇ ಇರುವುದೆಂಬುದು ಅನುಭವಕ್ಕೆ ಬರುವುದು. ಇವೆಲ್ಲವೂ ಕರ್ಣಾಟಕ್ಕೆ ಸಂಬಂಧಿಸಿದ ಮಾತುಗಳೆಂಬುದರ ವಿವರಣೆಯನ್ನು ಈ ಮೊದಲೆ ಮಾಡಿದ್ದಾಗಿದೆ. ಕಣ್ಣ ಇದರ ಸಂಸ್ಕೃತ ರೂಪವು 'ಕರ್ಣ' ಎಂದಾಗಿರುವಂತೆ, ಇದರ ಅತಿ ಪ್ರಾಚೀನ ದ್ರಾವಿಡ ರೂಪವು ಕಳ್ಳ ಎಂಬುದಾಗಿದೆ ಯೆಂಬ ಸಂಗತಿಯು ಹಿಂದೆ ಬಂದಿದೆ. ಕಳ್ಳರು ಮತ್ತು ಮರವರುಗಳಲ್ಲಿ ತಲೆತಲಾಂತರಗಳಿಂದ ಬಂದ ಅವರ ಕುಲದ ಜನ್ಮಕಥೆಗಳು ಈ ಜನಾಂಗದ ಪ್ರಾಚೀನತೆಯನ್ನೆ ಸೂಚಿಸುತ್ತವೆ.[೨೩] ರಾಮಾಯಣಕಾಲದಲ್ಲಿದ್ದವರೆಂದೂ ರಾಮನಿಗೆ ನೆರವಾದವರೆಂದೂ ಮರವರ ದಂತಕಥೆಗಳು ಹೇಳುತ್ತವೆ. ಕಳವರ ಪರಂಪರೆಯು ಇದಕ್ಕೂ ಪ್ರಾಚೀನ ಕಾಲಕ್ಕೆ ಒಯ್ಯುತ್ತವೆ. ವೇದಕಾಲದ ವಾತಾವರಣವು ಅದರಲ್ಲಿದೆ.

> ಅಹಲ್ಯೆಯ ಚೆಲುವಿಕೆಗೆ ಮನಸೋತ ಇಂದ್ರನು ಅವಳನ್ನು ಮದುವೆಯಾಗ ಬೇಕೆಂದು ಹಾರೈಸಿದನು. ಆದರೆ, ಗೌತಮನು ಅವಳನ್ನು ವರಿಸಿದನು, ಗೌತಮನು ಇಲ್ಲವಾದಾಗ ಇಂದ್ರನು ಅಹಲ್ಯೆಯೊಡನೆ ಇಟ್ಟ ಸಂಬಂಧದಿಂದ ಮೂವರು ಮಕ್ಕಳಾಗಿದ್ದರಂತೆ. ಗೌತಮನು ಆಶ್ರಮಕ್ಕೆ ಬಂದಾಗ ಒಮ್ಮೆ ಈ ಮೂವರಲ್ಲಿ ಒಬ್ಬನು ಗೌತಮ ಋಷಿಯ ಎದುರಿಗೆ ಬರಲು ಅಂಜಿ ಕದದ ಹಿಂದೆ ಅಡಗಿದನು. ಆದುದರಿಂದ ಈತನಿಗೆ 'ಕಳ್ಳ'ನೆಂದು ಹೆಸರಾಯಿತು. ಈತನ ಸಂತತಿಯೆ ಕಳವರು; ಕಳ್ಳರು. ಇನ್ನೊಬ್ಬನನ್ನು ಆ ಋಷಿಯನ್ನು ಕಂಡು ಮರವನ್ನೇರಿದನು. ಇವನೆ 'ಮರವ'ನು ಈತನ ಪೀಳಿಗೆಗೆ ಮರವರೆಂಬ ಹೆಸರು. ಮೂರನೆಯವನು ಎದೆಗೊಟ್ಟು ಗೌತನಮನ ಎದುರು ಬಂದು ನಿಂತನಂತೆ. ಇವನು ಅಭಿಮಾನಿ ಅಹಮುಡಿಯ ಎಂದು ಈತನಿಗೂ, ಈತನ ವಂಶಕ್ಕೂ ಹೆಸರಾಯ್ತು.

ಇದೇ ಬಗೆಯ ಇನ್ನೂ ಒಂದು ಕತೆಯುಂಟು. ಸ್ವಲ್ಪ ಹೆಚ್ಚು ಕಡಿಮೆ ಇದ್ದರೂ ಮುಖ್ಯಾಂಶಗಳೆಲ್ಲ ಎರಡರಲ್ಲೂ ಒಂದೇ. ಇಂತು ಕಳವರು ಮತ್ತು ಮರವರ ಪೂರ್ವ ಪರಂಪರೆಯ ಕಥೆಗಳಿಂದ ಇವರ ಸಂಬಂಧವು ಇಂದ್ರನ ವರೆಗೆ ಹೋಗಿ ಮುಟ್ಟುತ್ತಲಿದೆ. ಅಥವಾ ಇನ್ನೊಂದೆಡೆಯಲ್ಲಿ ವಿವರಿಸಿದಂತೆ ನೋಡಿದರೂ

ಯದು-ತುರುವಸುಗಳ ಉಲ್ಲೇಖಗಳಿಂದ ಋಗ್ವೇದ ಕಾಲದಲ್ಲಿ ಈ ಜನಾಂಗದ ಕುರುಹಗಳು ಸಿಕ್ಕುತ್ತವೆ. ಭಾರತದೊಳಗಿನ ಯಾಯಿತಿಯ (ಯುದತುರುವಸುಗಳ ತಂದೆ) ಕತೆಯನ್ನು ಈ ಸಂದರ್ಭದಲ್ಲಿ ನೆನೆದುಕೊಳ್ಳಬೇಕು. ಶುಕ್ರಾಚಾರ್ಯನ ಮಗಳು ದೇವಯಾನಿಯನ್ನು ಯಯಾತಿಯು ಮದುವೆಯಾದನು. ಇದು ಪ್ರತಿಲೋಮವಿವಾಹ. ಅಹಲ್ಯೆಯ ಕಥೆಯೆ ಆಗಲಿ, ದೇವಯಾನಿಯ ಕಥೆಯೆ ಆಗಲಿ ಕರ್ಣಾಟದ ಮೊದಲಿಗರ ವಿಚಾರದಲ್ಲಿ ಒಂದು ಮಾತನ್ನು ಸ್ಪಷ್ಟೀಕರಿಸುತ್ತಲಿದೆ. ಕರ್ಣಾಟದ ಉಗಮದಲ್ಲಿಯೆ ಆರ್ಯ-ದ್ರಾವಿಡಗಳ 'ಕೂಡಲ-ಸಂಗಮ' ವಾಗಿರುವುದು ಈ ಕಥೆಗಳಿಂದ ಹೊರಬರುತ್ತದೆ. ಕನ್ನಡ ನುಡಿಯೂ ಈ ಮಾತಿಗೆ ಸಾಕ್ಷಿಯಾಗಿದೆ. ಕನ್ನಡ ನುಡಿಯಲ್ಲಿ ಒಂದುಗೂಡಿ-ಏಕಜೀವವಾಗಿರುವ ದ್ರಾವಿಡ ಮತ್ತು ಸಂಸ್ಕೃತ ಶಬ್ದಗಳನ್ನು ಸಂಪೂರ್ಣ ಬೇರ್ಪಡಿಸುವುದಕ್ಕೆ ಅಸಾಧ್ಯವಾಗಿದ್ದುದರ ಕಾರಣವೇನು? ಆರ್ಯ-ದ್ರಾವಿಡರ ಸಮ್ಮಿಲನಕ್ಕೆ ಋಗ್ವೇದಕಾಲದಲ್ಲಿಯೇ ಆರಂಭವಾಗಿದ್ದಿತೆಂದು ಪ್ರಿಲಸ್ಕಿ ಮೊದಲಾದ ವಿದ್ವಾಂಸರು ಊಹಿಸುತ್ತಿದ್ದುದು ವಿಚಾರಣೀಯವಾಗಿದೆ. ವೇದ, ಉಪನಿಷತ್ತು, ಬ್ರಾಹ್ಮಣಗಳಲ್ಲಿ ಎಷ್ಟೋ ದ್ರಾವಿಡ ಶಬ್ದಗಳು ಸಿಕ್ಕುತ್ತವೆಂದು ವಿದ್ವಾಂಸರು ಕಂಡುಹಿಡಿದಿರುವುದು ಮೇಲಣ ಮಾತಿಗೆ ಪೋಷಕವಾಗಿದೆ. ಕಳವರ-ಕಣ್ಣರ ಆರ್ಯೀಕರಣಕ್ಕೆ ಅತಿ ಪ್ರಾಚೀನಕಾಲದಲ್ಲಿಯೇ ಆರಂಭವಾಗಿ ಮೂಲದ್ರಾವಿಡವರ್ಗದಲ್ಲಿ ಕವಲು ಒಡೆದುವೆಂದು ಹೇಳಬಹುದಾಗಿದೆ. ಇವರೇ ಕಣ್ಣರಾಗಿಬೇಕು. ಕಳವರು ಮೂಲದ್ರಾವಿಡರು; ಕಣ್ಣರು ಆರ್ಯದ್ರಾವಿಡರು. ಈ ಬಗೆಯಾದ ಆರ್ಯದ್ರಾವಿಡರ ಮಿಶ್ರಣದ ಫಲವೆ ಕರ್ಣಾಟ ಮತ್ತು ಕರ್ಣ್ನಾಟ ಸಂಸ್ಕೃತಿ.

ತೀರ ಪ್ರಾಥಮಿಕ ಸ್ಥಿತಿಯಲ್ಲಿರುವ ಜನಗಳಷ್ಟು ಪರಂಪರಾಪ್ರೀತಿಯು-ಹಳೆಯದೆಲ್ಲವೂ ಹೊನ್ನು ಎಂಬ ಭಾವದಿಂದ ಪುರಾಣ ಪದ್ಧತಿಗಳಿಗೇ ಅಂಟಿಕೊಂಡಿರುವ ಸ್ವಭಾವವು ಸುಧಾರಣೆಯ ಮೇಲಣಮಟ್ಟದಲ್ಲಿ ಇದ್ದವರೊಳಗೆ ಇರುವುದಿಲ್ಲ. ಸಂಪ್ರದಾಯ ಶರಣನಾಗಿರುವುದು ಸಾಮಾನ್ಯವಾಗಿ ಮನುಷ್ಯ ಸ್ವಭಾವವೇ ಆಗಿದ್ದರೂ ಈ ಗುಣವು ಕೆಲವು ಜನಗಳಲ್ಲಿ ಹೆಚ್ಚು ಇನ್ನು ಕೆಲವು ಜನಗಳಲ್ಲಿ ಕಡಿಮೆ ಪ್ರಮಾಣದಲ್ಲಿರುವುದು ಕಂಡುಬರುತ್ತದೆ. ಆರ್ಯರು ಕಾಲಮಾನಕ್ಕನುಸರಿಸಿ ಬದಲಾಗುತ್ತ ಮುಂದೆ ನಡೆವ ಜನಾಂಗದವರಾದುದರಿಂದ ಇವರು ತೀರ ಆರಂಭದಲ್ಲಿ ಅದಾವ ಸ್ಥಿತಿಯಲ್ಲಿದ್ದರೆಂಬುದನ್ನು ಬರಿ ಊಹಿಸಬಹುದಾಗಿದೆಯೆ ಹೊರತು ಅವರ ಪ್ರಾಥಮಿಕ ಸ್ಥಿತಿಯ ಅವಶೇಷಗಳನ್ನು ಈಗ ಪ್ರತ್ಯಕ್ಷ ನೋಡಲಿಕ್ಕೆ ಸಿಕ್ಕುವುದಿಲ್ಲ. ಆದರೆ, ದ್ರಾವಿಡರಲ್ಲಿ ಇಂತಹ ಕೆಲವು ತಂಡಗಳು ಇನ್ನೂ ಉಳಿದಿರುವುದನ್ನು ಕಾಣಬಹುದಾಗಿದೆ. ಏಕೆಂದರೆ, ಆರ್ಯರಿಗಿಂತಲೂ ಇವರು ಬದಲಾವಣೆಗೆ ಹೆಚ್ಚು ಬೇಸರಪಟ್ಟುಕೊಳ್ಳುವ ಜನಾಂಗ. ಕಳವರು ಮತ್ತು ಮರವರೆ ಇದಕ್ಕೆ ನಿದರ್ಶನ.

ಕಳವರು ಗೋವಳರು; ತುರುಕಾರರು. ದನವೇ ಇವರ ಧನ. 'ಪರಾಕ್ರಮ'ವು ಒಂದು ಆದರ್ಶಗುಣವಾಗಿದ್ದ ಅತಿಪುರಾತನ ಕಾಲದಲ್ಲಿ ಪರರನ್ನು ಆಕ್ರಮಿಸಿ ಅವರ(ಗೋ)ಧನವನ್ನು ಗೆದ್ದುಕೊಂಡು ಬರುವುದರಲ್ಲಿ ಆ ಕಾಲದ ಜನಗಳಿಗೆ ಹೆಮ್ಮೆಯೆನಿಸುತ್ತಲಿತ್ತು. ಇಂದ್ರನು ೯೯ ಪುರಗಳನ್ನು ನಾಶಮಾಡಿ ದಸ್ಯುಗಳ ಧನಕನಕಾದಿ ವಸ್ತುಗಳನ್ನು ಸೂರೆಗೆಯ್ದನೆಂದು ವೇದಗಳು ಹೊಗಳುತ್ತವೆ. ಕಳವರಿಗೂ 'ಧನ' ಸಂಪಾದನೆಯ ಹಂಬಲವು ಕಡಿಮೆ ಇದ್ದಿಲ್ಲ. ದಸ್ಯುಗಳೂ ಪಣಿಗಳೂ ಆರ್ಯರ ಗೋಧನವನ್ನು ಹರಣ ಮಾಡುತ್ತಿದ್ದುದರ ವರ್ಣನೆಗಳು ಅದೇ ವೇದದಲ್ಲಿದೆ. ದನವೇ ಧನವೆಂದು ಅತಿ ಪುರಾತನಕಾಲದಲ್ಲಿ ನೆರೆನಂಬಿದ್ದ ಕಳವರು ಮತ್ತು ಮರುವರು ಇಂದಿನ ಬದಲಾದ ಪರಿಸ್ಥಿತಿಯೊಳಗೂ ಅದೇ ಬಗೆಯ ಭಾವನೆಯುಳ್ಳವರಾಗಿದ್ದರೆಂದು ಅವರ ಇಂದಿನ ಕೃತಿಗಳ ಮೇಲಿಂದ ವ್ಯಕ್ತವಾಗುತ್ತಲಿದೆ. ದನಗಳನ್ನು ದೋಚಿಕೊಂಡಯ್ವಲ್ಲಿ ಕಳವರ ಮತ್ತು ಮರವರ ನೈಪುಣ್ಯವು ಆಶ್ಚರ್ಯಕರವಾಗಿದೆ ಎಂದು ಥರ್ಸಟನ್‌ರು ಸಂಗ್ರಹಿಸಿರುವ ಬೇರೆಬೇರೆ ಕಾಲದ ವರ್ಣನೆಗಳಿಂದ ಗೊತ್ತಾಗುತ್ತದೆ.

> Cattle-theft is now the most popular calling among them (Kallars).
> They are clever at handling animals.
>
> (Vol. II, p. 67)

> (Marayaras)Most expert cattle-lifters in the presidency.
>
> (Vol. V. p. 28)

ಇವರ ಪುರಾಣಪ್ರಿಯತೆಯನ್ನು ಕಂಡು ಕೌತುಕಪಡುವಂತಹ ಇನ್ನೂ ಒಂದು ಸಂಗತಿಯಿದೆ. ಈ ಜನಗಳು ದನಗಳನ್ನು ದೋಚಿಕೊಂಡು ಬರಲು ಹೆರವರ ಮನೆಹೊಕ್ಕಾಗ ಆ ಮನೆಯವರ ಮೈಮೇಲಣ ಮುತ್ತುರತ್ನಗಳಿಗೆ ಆಸೆಪಟ್ಟುಕೊಳ್ಳದೆ ಕೇವಲ ದನಗಳನ್ನೇ ಓಡಿಸಿಕೊಂಡೊಯ್ಯುವರಂತೆ! ಈ ಲೇಖಕರಿಗೆ ದೊರೆತ ಇನ್ನೂ ಹೆಚ್ಚಿನ ಸಂಗತಿಗಳನ್ನು ಕುರಿತು ಅವರು ಬರೆಯುವುದೇನೆಂದರೆ:

> I gather the following additional information "the Kallars are largely guilty of cattle thefts. In many cases they return the cattle on receiving tappukooli. (Vol III, p.69)

ಅತಿ ಪುರಾತನ ತಮಿಳ ಸಾಹಿತ್ಯದಲ್ಲಿ ಬರುವ ಕಳವರ (ವಡುಕರ) ವರ್ಣನೆಗಳಲ್ಲಿಯೂ ದನಗಳನ್ನು ದೋಚಿಕೊಂಡು ಹೋಗುವ ಅವರ ಸ್ವಭಾವವೇ ಎದ್ದುಕಾಣುತ್ತದೆ.

> The chief function of (Tamil) kings was to protect the land from cattle-lifters. The cattle was lifted either by predatory chieftains, the heads of the Maravar or Kallar clans, or by neighbouring Rajas (as a challenge to the Raja of the country).

ವೇದಕಾಲದಲ್ಲಿ ಕೆಲವೊಂದು ದನಗಳ್ಳರಿದ್ದುದು ಕಂಡಬರುತ್ತದೆ.[೨೪] ಇವರಿಗೆ ಸ್ತೇನ, ಸ್ತಾಯು, ತಸ್ಕರ ಎಂದು ಹೆಸರುಗಳಿವೆ. 'ಹಟ್ಟಿಯನ್ನು ಹೊಕ್ಕ ಸ್ತೇನ' (X.೭೯.೧೦) 'ದನಗಳನ್ನು ತೃಪ್ತಮಾಡಿದ ಸ್ತಾಯು'; (VII.೮೫.೯) 'ಪಶುಗಳನ್ನು ಅಡಿಗಿಸಿಟ್ಟ ಕಳ್ಳ' (I ೬೫.೧) ಎಂದು ಮುಂತಾಗಿರುವ ಉಲ್ಲೇಖಗಳೆ ಇದಕೆ ಸಾಕ್ಷಿ. ಸ್ತೇನ, ತಸ್ಕರರು ದಾರಿ ಹೊಡೆಯುಪ ದಂದುಗವನ್ನೂ ಮಾಡುತಿದ್ದುದರ ವರ್ಣನೆಗಳು ಋಗ್ವೇದದಲ್ಲಿವೆ: ಆದರೆ, ಅಥರ್ವವೇದದಲ್ಲಿ ಈ ಹೆಸರಿನವರು ದನಗಳನ್ನು ದೋಚಿಕೊಂಡು ಹೋಗುವವರೆಂದೇ ಸ್ಪಷ್ಟವಾಗಿದೆ.[೨೫]

ಈ ಸ್ತೇನರುಗಳು ಯಾರು ಇರಬಹುದು? ಆರ್ಯೇತರ ಪಂಗಡದವರಾಗಿರುವ ಸಂಭವವೆ ಹೆಚ್ಚಾಗಿಲ್ಲವೆ? ಹಾಗಾದರೆ ವೇದಕಾಲದಲ್ಲಿದ್ದ ಆರ್ಯೇತರ ಪಂಗಡಗಳು ಎರಡೇ: ದ್ರಾವಿಡರು ಮತ್ತು ಕೋಲರು. ವಾಜಸನೀಯ ಸಂಹಿತೆಯಲ್ಲಿ 'ಮಲಿಮ್ಲು' ಎಂಬ ಹೆಸರಿನ ಕೆಲವು ಕನ್ನಗಾರರನ್ನು ಹೇಳಿದ್ದು ಇವರು ಸ್ತೇನರಿಂದ ಭಿನ್ನರೆಂದು ಸೂಚಿಸಿದ್ದಾಗಿದೆ. 'ಮಲಿಮ್ಲು'ಗಳು ಮನೆಗೆ ಕನ್ನವಿಕ್ಕುವ, ತುಡುಗು ಮಾಡುವ ಜನಗಳು. ಆದರೆ ಸ್ತೇನರು ಇದಕ್ಕೂ ಹೆಚ್ಚಿನವರು; ಅರಣ್ಯದಲ್ಲಿ ಮುತ್ತಿ ಹೊಡೆಯುವವರು; ಎಂದು ಆ ಸಂಹಿತೆಯಿಂದ ಅರಿತುಕೊಳ್ಳಬಹುದಾಗಿದೆ.[೨೬] 'ಮಲಿಮ್ಲು' ಎಂಬ ಹೆಸರು ಕೋಲಜನಾಂಗಕ್ಕೆ ಸಂಬಂಧಿಸಿದುದಾಗಿರಬೇಕೆಂದು ಹೇಳ ಬಹುದಾಗಿದೆ. ಇದು ಸಂಸ್ಕೃತ ಅಥವಾ ದ್ರಾವಿಡಭಾಷೆಗೆ ಸಂಬಂಧಿಸಿದ ಶಬ್ದವೇ ಅಲ್ಲ. ಇವೆರಡೂ ಭಾಷೆಗಳಿಂದ ಇದಕ್ಕೆ ಅರ್ಥವಾಗುವುದಿಲ್ಲ. 'ಸ್ತೇನ'ರು ಆರ್ಯಪಂಗಡದವರಾಗಿರುವ ಸಂಭವವಿಲ್ಲ. ಸ್ತೇನರು ಮತ್ತು ತಸ್ಕರರುಗಳು, ಇನ್ನುಳಿದ ಕಡೆಯ ಉಲ್ಲೇಖಗಳನ್ನು ವಿಚಾರಿಸಿದರೆ ಇವರು ಆರ್ಯೇತರ ಪಂಗಡಕ್ಕೆ ಸಂಬಂಧಿಸಿದವರಾಗಿರ ಬೇಕೆಂಬ ಊಹೆಯು ಬಲಪಡುತ್ತದೆ.

ಯಜುರ್ವೇದದ ರುದ್ರಾಧ್ಯಾಯದೊಳಗಿನ ಹಲವು ವರ್ಣನೆಗಳು ಈ ದೃಷ್ಟಿಯಿಂದ ಅತ್ಯಂತ ಮಹತ್ವ ದುವುಗಳಾಗಿವೆ. ರುದ್ರನೆ ಒಮ್ಮೆ ದೇವಲೋಕದಲ್ಲಿ ಕಳವು ಮಾಡಿದನೆಂಬ ಒಂದು ಕಥೆಯನ್ನು ಸಾಯಣರು ಹೇಳುತ್ತಾರೆ. ಆದುದರಿಂದ, ಪ್ರತ್ಯಕ್ಷ ರುದ್ರನು ಕಳ್ಳನಾದ. ಇವನ ಅನುಯಾಯಿಗಳೆಲ್ಲರೂ ಇದೇ ಬಗೆಯವರೇ. ನಮ್ಮ ಈ ಭಾಗದ ಮಾಧ್ವರಲ್ಲಿ ಬಳಕೆಯಲ್ಲಿರುವ ಒಂದು ಪಡೆನುಡಿಯು (idiom) ಅನಾದಿಕಾಲದ ಈ

ಪರಂಪರೆಯನ್ನು ಇಂದಿನ ಕಾಲದವರೆಗೆ ತಂದುಹಚ್ಚುವುದು: 'ಹುಡುಗನು ರುದ್ರ ಓದುತ್ತಲಿದ್ದಾನೆ' ಎಂದರೆ ಕಳುವು ಮಾಡುವ ಅಭ್ಯಾಸದಲ್ಲಿದ್ದಾನೆ ಎಂಬುದು ಆ ಪಡೆನುಡಿಯಲ್ಲಿರುವ ವಿಶೇಷಾರ್ಥ!

ರುದ್ರ-ಶಿವನು ಆರ್ಯರ ದೇವತೆಯೇ ಅಲ್ಲವೆಂದೂ ಆತನು ದ್ರಾವಿಡರ ದೇವತೆಯೆಂದೂ 'ಶಿವರಹಸ್ಯ'ದಲ್ಲಿ ಸ್ವಲ್ಪ ವಿಸ್ತಾರದಿಂದ ಈ ಮೊದಲೆ ವಿವೇಚಿಸಿದ್ದಾಗಿದೆ. ಆದುದರಿಂದ, ಇಲ್ಲಿ ಮತ್ತೆ ಆಡಿದ್ದೇ ಆಡುವುದು ಬೇಡ. ರುದ್ರಾಧ್ಯಾಯದಲ್ಲಿ ಸ್ತೇನ, ತಸ್ಕರ, ಸ್ತಾಯುಗಳ ಹೆಸರು ಬರುವುವು. ಆದರೆ ಇವರ ವ್ಯವಸಾಯ ಬಂಧುಗಳಾದ 'ಮಲ್ಲಿಮ್ಲು'ಗಳ ಉಲ್ಲೇಖವಿಲ್ಲ! ಶಿವನಿಗೆ 'ಸ್ತೇನಾನಾಂ ಪತಯೇ ನಮಃ', 'ಸ್ತಾಯೂನಾಂ ಪತಯೇ ನಮಃ' ಎಂದು ಹೇಳಿದ್ದುಂಟು. ಆದರೆ 'ಮಲ್ಲಿಮ್ಲೂನಾಂ ಪತಯೇ ನಮಃ' ಎಂದು ಒಂದೆಡೆಯಲ್ಲಿಯೂ ಇಲ್ಲ. ಶಿಶ್ನ-'ಲಿಂಗ'ಪೂಜೆಯು ಮಲ್ಲಿಮ್ಮುಗಳ (ಕೋಲರ) ವರ್ಗದವರದು. ವೇದಕಾಲದಲ್ಲಿ ಶಿವ (ರುದ್ರ) ಮತ್ತು 'ಲಿಂಗ' ಇವೆರಡೂ ಒಂದೇ ಎಂದು ತಿಳಿಯಲ್ಪಡುತ್ತಿದ್ದಿಲ್ಲ. ಆದುದರಿಂದಲೆ, ಶಿವ(ರುದ್ರ)ನ ಅನುಯಾಯಿಗಳ ಸಾಲಿನಲ್ಲಿ ಮಲಿಮ್ಲುಗಳ ಉಲ್ಲೇಖವಿಲ್ಲ.

ಶಿವನು ಪ್ರಸನ್ನನಾಗಬೇಕೆಂದು ರುದ್ರಾಧ್ಯಾಯದ ಮಂತ್ರಗಳಿಂದ ಮಹಾ ಅಭಿಷೇಕಗಳನ್ನು ಮಾಡುವುದುಂಟು.ಈ ಮಂತ್ರಗಳು ಸಂಸ್ಕೃತದಲ್ಲಿವೆ. ಮಂತ್ರಗಳ ಅರ್ಥದ ಕಡೆಗೆ ಮನಸ್ಸುಗೊಟ್ಟು ಅವುಗಳನ್ನು ಹೇಳುವ ಪದ್ಧತಿಯು ನಮ್ಮಲ್ಲಿ ಉಳಿದೇ ಇಲ್ಲ! ಆ ಅರ್ಥವು ತಿಳಿದಿದ್ದರೆ ನಮ್ಮ ಆಚಾರ ವಿಚಾರಗಳಲ್ಲಿ -ಕುಲ ಧರ್ಮ, ಕುಲಾಚಾರಗಳಲ್ಲಿ ಇದಕ್ಕಿಂತಲೂ ಎಷ್ಟೋ ಹೆಚ್ಚು ಜೀವಂತತನವನ್ನು ಕಾಣಬಹುದಾಗಿತ್ತು. ನಾವು ಬಾಯಿಂದ ಹೇಳುವ ಮಂತ್ರವೇನು? ಮಾಡುವ ಕೃತಿಯೇನು? ಇವು ಪರಸ್ಪರ ಸುಸುಂಬದ್ಧವಾಗಿವೆಯೆ? ಅಸಂಬದ್ಧವಾಗಿವೆಯೆ? ಇದಾವುದರ ಅರಿವು ಇದ್ದರಲ್ಲವೆ ಮುಂದಿನ ವಿಚಾರ! ಈವಾಗ ರುದ್ರಾಭಿಷೇಕದ ಕಾಲಕ್ಕೆ ನಾವು ಹೇಳುವ ಮಂತ್ರಗಳೇನು?

> 'ನಮಃ ಕಕುಭಾಯ ನಿಷಂಗಿಣೇ ಸ್ತೇನಾನಾಂ ಪತಯೇ ನಮಃ ,'ನಮೋ ನಿಷಂಗಿಮ
> ಇಷುಧಿಮತೇ ತಸ್ಕರಾಣಾಂ ಪತಯೇನಮಃ'; 'ನಮೋ ವಂಚೇತ ಪರಿವಂಚತೇ
> ಸ್ತಾಯೂನಾಂ ಪತಯೇ ನಮಃ"; 'ನಮೋ ನಿಚೇರವೇ ಪರಿಚರಾಯ್ಯಾರಣ್ಯಾನಾಂ
> ಪತೇಯ ನಮಃ';, 'ನಮಃ ಸೃಕಾವಿಭ್ಯೋ ಜಿಘಾಣಸದ್ಭ್ಯೋ ಮುಷ್ಣತಾಂ ಪತಯೇ
> ನಮಃ'; 'ನಮ ಉಷ್ಣೀಷಿಣೇ ಗಿರಿಚರಾಯ ಕುಲುಂಚಾನಾಂ ಪತಯೇ ನಮಃ';

ಇಂತೀ ಬಗೆಯಾಗಿ ರುದ್ರಾಧ್ಯಾಯದಲ್ಲಿ ಬಗೆಬಗೆಯ ಕನ್ನಗಾರರ ಮತ್ತು ತುಡುಗರ ಉಲ್ಲೇಖಗಳಿವೆ. ಇವರೆಲ್ಲರೂ ಆರ್ಯ-ವಿರೋಧಿಗಳು. ಆರ್ಯರನ್ನು ನಾನಾತರದಿಂದ ಪೀಡಿಸುತ್ತಿದ್ದವರು, ಎಂದು ಹೇಳಬಹುದಾಗಿದೆಯೆ ಹೊರತು, ಸುಮ್ಮನೆ ತುಡುಗು ಹೊಡೆದಾಟಗಳನ್ನು ಕೈಕೊಂಡಿರುವ ಜನಗಳೆಂದು ಅರ್ಥ ಮಾಡುವುದು ಅಷ್ಟು ಸಮರ್ಪಕವಾಗಿ ತೋರುವುದಿಲ್ಲ. ತುಡುಗರ ದೇವರು ನೀನು, ಎಂದು ಶಿವನಿಗೆ ಹೇಳಿದರೆ ಶಿವನೂ ಒಬ್ಬ ಹಿರಿತುಡುಗನೆಂದಂತಾಗಲಿಲ್ಲವೆ?

ಇನ್ನೂ ಸ್ವಲ್ಪ ಬೇರೆ ದೃಷ್ಟಿಯಿಂದ ಇದನ್ನು ಪರ್ಯಾಲೋಚಿಸುವುದು ಅವಶ್ಯವಿದೆ. ಇನ್ನು ಮುಂದೆ ಮುಸಲ್ಮಾನರ ದೇವರನ್ನು ಹಿಂದೂ ಜನರು ಸ್ವೀಕರಿಸಿದರೆಂದು ಗ್ರಹಿಸಿ. ಆಗ ಆ ದೇವನನ್ನು ಕವಿಯು ಹೇಗೆ ವರ್ಣಿಸಬಹುದು? 'ಎಲ್ಲೆ ಚೆಂಡಿಕೆ ಇಲ್ಲದ (ವಿಶಿಖಾಸಃ) ದೇವನಿಗೆ ನಮಸ್ಕಾರ; ತುಂಡುಜನಗಳ ದೇವನಿಗೆ (ಪುಷ್ಪಾನಾಂ ಪತಯೇ) ನಮಸ್ಕಾರ; ಹಿಂಸೆಗೆ ಹೇಸದವರ ದೇವರೆ....... ಎಂಬೀ ಬಗೆಯಾಗಿಯೆ ಹೊಗಳಬೇಕಾದೀತಲ್ಲವೆ? ರುದ್ರ-ಶಿವನ ನಿಜಸ್ಥಿಯೂ ಹಾಗೆಯೆ ಇದೆ. ಇವನು ಪತಿತರ ದೇವರೆಂದು, ವ್ರಾತ್ಯರ ದೇವರೆಂದು ಅಥರ್ವವೇದವು ಹೇಳುತ್ತದೆ. ಕರಣ (ನಟ)ರು ವ್ರಾತ್ಯರೆಂದು ಮನುವು ಹೇಳುತ್ತಾನೆ. ಕರಣರೇ-ಕಣ್ಣರು-ಕಳ್ಳರು ಎಂಬ ಮಾತು ಸಿದ್ಧವಿದೆ. ಆದುದರಿಂದ ಶಿವನು 'ಕಳ್ಳರ ದೇವರು' ಎಂಬುದು ನಿಜ. ಈ ಅರ್ಥದಿಂದ. ಶಿವನು 'ಸ್ತೇನಾನಾಂ ಪತಿ'

ಎಂಬುದು. ಆದರೆ ಸ್ತೇನರು ಎಂಬುದು ಕೇವಲ ಉದ್ಯೋಗವಾಚಿಯಲ್ಲ. ಆಗ ಈ ಉದ್ಯೋಗವನ್ನು ಮಾಡುತ್ತಲಿರ ಬಹುದು. ಆದರು ಆ ಉದ್ಯೋಗದಿಂದಲೆ ಅವರಿಗೆ ಈ ಹೆಸರು ಬಂದುದಲ್ಲ ಕಳವರು ಮೂಲದಲ್ಲಿ ಗೋವಳರು; ಕರ್ಣರು-ಕಣ್ಣರೇ ಕಳ್ಳರೆಂಬುದು ನಿಜವಿದ್ದರೆ; ಈ ಜನಗಳು ಹಟ್ಟಿಕಾರ-ದನಗಾರರಾಗಿದ್ದರೆಂಬುದು ನಿಶ್ಚಿತ. 'ಕರ್ಣ' ಎಂಬ ಹೆಸರಿನ ಪ್ರಾಥಮಿಕ ಅವಸ್ಥೆಯೊಳಗಿನ ಒಂದು ಜಾತಿಯಿದ್ದು, ಅವರು ಈಗಲೂ ಗೋವಳರಾಗಿಯೇ ಇರುವರು. Karna, a subdivision of Gollas ಎಂದು ಥರ್ಸಟನ್‌ರ ಗ್ರಂಥದಿಂದ ಗೊತ್ತಾಗುತ್ತದೆ.[೨೭]

ಹಗೆಗಳನ್ನು ಮನಬಂದಂತೆ ತೆಗಳುವುದು ಮನುಷ್ಯಸ್ವಭಾವ. ಹೆರವರ ಮೇಲೆ ತಾನು ಏರಿ ಹೋದರೆ ಅದು ಪರಾಕ್ರಮ; ಚೈತ್ರಯಾತ್ರೆ; ಹೆರವರು ಏರಿಬಂದರೆ ಪರಪೀಡೆ; ಸುಲಿಗೆ. ಮುಸಲ್ಮಾನ ಇತಿಹಾಸಕಾರರು ಶಿವಾಜಿಗೆ ಕಳವು ಸುಲಿಗೆಗಾರನೆಂದಂತೆ ತಮಗೆ ಬೇಕು, ಆದವರು 'ಗೆದ್ದು' ತಂದರೆಂಬುವುದು; ಆಗದವರು ಒಯ್ದರೆ 'ಅಪಹರಿಸಿದರು' 'ಕದ್ದರು' ಎಂಬುವುದು. ಆದುದರಿಂದ, ಎದುರಾಳಿಗಳನ್ನು ವರ್ಣಿಸಿದ್ದುದನ್ನು ಓದುವಾಗ ಸ್ವಲ್ಪ ಎಚ್ಚರವಿರುವುದು ಲೇಸು. ಇದರಿಂದ ಕಳವರು ಬಹಳ ಒಳ್ಳೆಯವರೆಂದು ಹೇಳುವ ಉದ್ದೇಶ ವುಂಟೆಂದು ಭಾವಿಸಲಾಗದು. ನಿಜಸ್ಥಿತಿಯ ಅರಿವು ಉಂಟಾಗಬೇಕೆಂಬುದು ಹಿರಿಗುರಿ. ಕಳವರು ತುಂಟರೂ, ಹೊಡೆದಾಟಕ್ಕೆ ಸಿದ್ಧರೂ ಆಗಿದ್ದರೆಂಬುದು ಸುಳ್ಳಲ್ಲ. ಇನ್ನೂ ಒಂದು ವಿಶೇಷ. ಕಳವರು (ಮರವರು, ವಡುಕರು) ಇವರನ್ನು ಪ್ರಾಚೀನ ತಮಿಳರೂ ಆತ್ಮೀಯತೆಯಿಂದ ನೋಡಲಿಲ್ಲ. ಆರ್ಯರಂತು ಹಾಗೆ ಭಾವಿಸುವುದು ಸಾಧ್ಯವೆ ಇಲ್ಲ. ಪ್ರಾಚೀನ ತಮಿಳು ಸಾಹಿತ್ಯದಲ್ಲಿರುವಂತೆ ರುದ್ರಾಧ್ಯಾಯದಲ್ಲಿಯು ಕಳವರನ್ನು ಹೀಯಾಳಿಸಿದ್ದುದುಂಟು. ಆದರೆ, ಇವೆರಡೂ ವರ್ಣನೆಗಳಲ್ಲಿರುವ ಸಾಮ್ಯವು ಸೋಜಿಗವನ್ನುಂಟುಮಾಡುವಂತಿದೆ! ಪ್ರಾಚೀನ ತಮಿಳು ಸಾಹಿತ್ಯದೊಳಗಿನ ಕಳವರ ಉಲ್ಲೇಖಗಳೊಡನೆ ಥರ್ಸಟನ್ ಸಾಹೇಬರು ಸಂಗ್ರಹಿಸಿದ ಆಧುನಿಕಕಾಲದ ವರ್ಣನೆಗಳನ್ನೂ ಸೇರಿಸಿ ಅವನ್ನು ರುದ್ರಾಧ್ಯಾಯಗಳೊಳಗಣ ಸ್ತೇನ, ತಸ್ಕರಾದಿಗಳ ರೀತಿ. ನೀತಿಗಳೊಡನೆ ಹೋಲಿಸಿದರೆ ಸಾಕು; ಆ ಕಳವರೂ ಈ ಸ್ತೇನರೂ ಅಭಿನ್ನರೆಂದು ಸಿದ್ಧಪಡಿಸುವುದಕ್ಕೆ ಬೇರೆ ಶ್ರಮ ವಹಿಸುವ ಕಾರಣವೇ ಇಲ್ಲ.

ಪುರಾತನ ತಮಿಳು ಸಾಹಿತ್ಯೋದಧಿಯನ್ನು ಕಡೆದು ಅದರಲ್ಲಿ ಬಂದ ಉಲ್ಲೇಖಗಳ ಸಾರವನ್ನು ಕೃಷ್ಣಸ್ವಾಮಿ ಅಯ್ಯಂಗಾರರು ಹೀಗೆ ಹೇಳಿದ್ದಾರೆ.

> The general trend of all this discription is to make them a class of hunters. Their chief occupation was cattle-raiding and they are always said to be accompanied by cruel dogs. Entering into their territory language changed.
>
> They were habitually resident in forests and lived by way-laying travellers. They worshipped 'Nadukal' (stones planted in honour of warrsiors that fell in battle), and offered sacrifices to them. These are again referred to as un-educated and with raised bows, & entering their country, language changed. The forest ways infested by these Mallavar, says Mamulanar.[೨೮]

ಈ ಜನಗಳೆಲ್ಲ ದನಗಾರರು-ಗೋವಳರು ಆಗಿದ್ದರೆಂದು ಇವೇ ಗ್ರಂಥಗಳಿಂದ ಹೊರಬರುತ್ತದೆ.

> We have pointed out already that the whole border land of the Tamils beyond this was occupied by a race of people known to

> them by the generic name Vadukar whose profession was cattle raiding. That this region was divided among a number of petty chieftains is also known....they are also classed as cow-herds (Idaiyar).[೨೯]

ಈ ಜನಗಳು ಗೋವಳರೆಂಬುದಕ್ಕೆ ಇನ್ನೂ ಎರಡು ಪ್ರಮಾಣಗಳನ್ನು ಕೊಡಬಹುದು. ಮದರಾಸ ಇಲಾಖೆಯಲ್ಲಿ ಅರ್ಕಾಟ ಮೊದಲಾದ ಕಡೆಗೆ 'ಕನ್ನಡಿಯರ್' ಎಂಬ ಜನಗಳಿದ್ದು ದನಗಾರರಾಗಿದ್ದಾರೆ. They are known as Goulis ಎಂದು ಆ ಭಾಗದ ಜಾತಿ ಜನಾಂಗಗಳನ್ನು ವಿವರಿಸುವ ಗ್ರಂಥದಿಂದ ಗೊತ್ತಾಗುತ್ತದೆ.[೩೦] ಇವು ತೆಂಕಣದ ಅವಶೇಷಗಳು. ಉತ್ತರದಲ್ಲಿಯೂ ಇದೇ ಬಗೆಯ ಕುರುಹುಗಳು ದೊರೆಯುತ್ತಲಿದ್ದುದನ್ನು 'ಕಣ್ಮರೆಯಾದ ಕನ್ನಡ'ದಲ್ಲಿ ವಿವರಿಸಲಾಗಿದೆ. ನಾಸೀಕ, ಅಹಮ್ಮದನಗರ, ಖಾನದೇಶ ಜಿಲ್ಲೆಗಳಲ್ಲಿ ಕನ್ನಡ ಗೌಳಿಗಳಿದ್ದಾರೆ. ಇವರನ್ನು ಕುರಿತು ಖಾನದೇಶದ ಗ್ಯಾಝಿಟಿಯರಿನಲ್ಲಿ ಕನ್ನಡ ಗೋವಳರನ್ನು ಕುರಿತು ಬರೆದಿರುವುದು ಏನೆಂದರೆ :[೩೧]

> 'Kannadas are a peculier race of drovers who some times visit the western forests of Khandesh, ...They appear to be descended from Dravidian immigrants but (*to out misfortune*) no tradition to the effect and special language. More civilized and respectable than most wandering herdsmen they differ little from Maratha-hasuband-men, and in parts of Nasik they have taken entirely to agriculture. They have a peculiar breed of black & white cattle. Hatkar (ಹಟಕಾರ=ದನಗಳು) which though not large are much prized for their strength and spirit...... take good care of their cattle.

ತಮಿಳು ನಾಡಿನ ಉತ್ತರಸೀಮೆಯವರು-ಎಂದರೆ ವಡುಕರು ಗೋವಳರೆಂದು ಡಾ. ಕೃಷ್ಣಸ್ವಾಮಿಯವರು ವಿವರಿಸಿರುವ ತಮಿಳರ ಪ್ರಾಚೀನ ಕಾವ್ಯಗಳಿಂದಲೇ ಸಿದ್ಧವಾಗುತ್ತಲಿದೆ. ಕನ್ನಡಿಗರು ತಮಿಳರ ಉತ್ತರನಾಡಿನವರು, ಕನ್ನಡಿಯರು ಗೌಳಗಳೆಂದು ತಮಿಳ ಸೀಮೆಯಲ್ಲಿಯೂ 'ಕಾನಗೌಡರು' ಗೌಳಿಗಳೆಂದು ಮಹಾರಾಷ್ಟ್ರ ದೇಶದಲ್ಲಿಯೂ ಪ್ರತೀತಿಯುಂಟು. ಆಯಾ ಸೀಮೆಗಳಲ್ಲಿ ಈಗಲೂ ಅಲೆವ ಹಲವು ತಂಡಗಳೇ ಇದಕ್ಕೆ ದೃಷ್ಟಾಂತ. ಈ ಹಟ್ಟಿಕಾರ-ದನಗಾರರಾದ ಗೋವಳರು ಇವರೇ 'ಕಳವರು' 'ಕುರುನಿಲಮ್ಮನ್ನೆಯ'ರಾಗಿದ್ದರೆಂದೂ ಪುರಾತನ ತಮಿಳು ಕಾವ್ಯಗಳಿಂದಲೆ ಗೊತ್ತಾಗುತ್ತದೆ. 'ಕಾನಡಾಗೌಳಿ' ಗಳ ವಿಚಾರವಾಗಿ ಬರೆಯುತ್ತ ಖಾನದೇಶ ಗ್ಯಾಝಿಟಿಯರಿನ ಲೇಖಕರು 'ಈ ನಾಡಿನಲ್ಲಿ ಪುರಾತನ ಕಾಲದಲ್ಲಿ ಗೋವಳರು ರಾಜ್ಯವಾಳಿದರು' ಎಂಬ ಪ್ರಾಚೀನ ಪರಂಪರಾಗತ ಒಂದು ಸಂಗತಿಯನ್ನು ಉಲ್ಲೇಖಿಸಿದ್ದಾರೆ. ತಮಿಳರು ತಮ್ಮ ಎದುರಾಳಿಗಳನ್ನು 'ಕುರುನಿಲಮನ್ನೆಯರು' ಎಂದರೆ ಸಣ್ಣಪುಟ್ಟ ಸಾಮಂತ ರಾಜರು ಎಂದು ಕೀಳು ಬಗೆದು ವರ್ಣಿಸಿರುವ ಸಂಭವವೂ ಉಂಟು. ಹಾಗೆ ಕೀಳುಬಗೆದಿಲ್ಲವೆಂದು ಭಾವಿಸಿದರೂ ಈ ವಡುಕರು ಸಣ್ಣಪುಟ್ಟ ರಾಜರಾಗಿದ್ದರೆಂಬುದನ್ನಂತೂ ಅಲ್ಲಗಳೆಯಲಿ ಕ್ಕಾಗುವುದಿಲ್ಲವಷ್ಟೆ. ಈ ವಡುಕರನ್ನೇ ಅರಣ್ಯವಾಸಿಗಳು, ದಾರಿಹೊಡೆಯುವವರು, ದನಗಳ್ಳರು ಎಂದು ವರ್ಣಿಸಿದವರೂ ತಮಿಳು ಕವಿಗಳೇ!

ಪ್ರೊ. ವ್ಹಿ. ಆರ್. ದೀಕ್ಷಿತರು ಬರೆದ ಗ್ರಂಥದಲ್ಲಿ ಈ ಜನಾಂಗದ ವರ್ಣನೆಯಲ್ಲಿ ಇನ್ನೂ ಒಂದೆರಡು ಮಾತುಗಳು ಹೆಚ್ಚಿಗಿವೆ:

> The Marawars wore mustaches & beards and were brave & fierce-looking, being endowed with good physical strength, their profession was high-way robbery. Their weapons were simple, constituting of bows and arrows.
> Vadukar, Maravar are described in this body of (Tamil) Literature as still in the savage stage of frontier tribes living as marauders. They are located in the region immediately to the north of the Tamil frontier.[೩೨]

ಇವೆಲ್ಲ ವರ್ಣನೆಗಳಿಂದ ಈ ಜನಗಳು ಕನ್ನಡಿಗರೆಂಬ ಬಗ್ಗೆ ಸಂದೇಹವಿಲ್ಲ. ಉಗ್ರರೂ, ಕಾಡಿನಲ್ಲಿರುವವರೂ, ಪುಷ್ಟವಾದ ಮೈಕಟ್ಟಿನವರೂ, ಬಿಲ್ಲವಿದ್ಯೆಯಲ್ಲಿ ಬಲ್ಲಿದರೂ, ಕ್ರೂರನಾಯಿಗಳನ್ನು ಸಾಕಿದವರೂ ದನಗಳನ್ನು ಓಡಿಸಿಕೊಂಡು ಒಯ್ವಲ್ಲಿ ನಿಪುಣರೂ, ಗಡ್ಡಮೀಸೆಗಳನ್ನು ಬಿಟ್ಟವರೂ ಆಗಿದ್ದರೆಂದು ಕಂಡುಬರುತ್ತದೆ. ಆದರೆ, ಕಳವರು ಕ್ರೂರರೂ, ಕೊಲೆಸುಲಿಗೆಗಳೇ ಮುಖ್ಯವಾದ ಹೋರೆಯಾಗಿರುವವರೂ ಎಂಬೀ ಬಗೆಯಾಗಿ ಅವರನ್ನು ಚಿತ್ರಿಸಿದುದಕ್ಕೆ ಮಾತ್ರ ಕೇವಲ ಹಗೆತನವೇ ಕಾರಣವೆಂದು ಹೇಳಬೇಕಾಗುತ್ತದೆ. ತಮಿಳು ಕವಿಗಳ ಮೇಲಣ ವರ್ಣನೆಗಳಿಂದ ಕನ್ನಡದ ಮೊದಲಿಗರು ತೀರ ಹೀನಸಂಸ್ಕೃತಿಯವರಾಗಿದ್ದರೆಂಬ ಭಾಸವಾಗುವಂತಿದೆ. ಆದರೆ, ವಸ್ತುಸ್ಥಿತಿಯು ಹಾಗಿಲ್ಲ. ಯಾವ ನದಿಯ ಉಗಮವಾಗಲಿ ಅಷ್ಟೇ ರಮಣೀಯವಾದುದು. ಋಷಿಯ ಕುಲ, ನದಿಯ ಮೂಲ ನೋಡಬಾರದೆಂಬ ಗಾದೆಯಲ್ಲಿ ಒಂದು ಬಗೆಯ ತಥ್ಯಾಂಶವಿದೆ. ಪ್ರಾಥಮಿಕ ಸ್ಥಿತಿಯು ಪರಿಪೂರ್ಣವಾಗಿರಲಾರದು. ಕಳವರಿಗೆ; ಮರವರಿಗೆ ಮೂಗುಮುರಿಯುವ ತಮಿಳರಾದರೂ ಆಗ ಬಹಳ ಉಚ್ಚ ರೀತಿನೀತಿಗಳುಳ್ಳವರಾಗಿದ್ದರೆಂಬ ಹಾಗಿಲ್ಲ. ಪ್ರೊ. ದೀಕ್ಷಿತರ ಗ್ರಂಥದಲ್ಲಿಯ ಒಂದು ಅವತರಣಿಕೆಯಿಂದ ಈ ಮಾತು ಸ್ಪಷ್ಟವಾಗುವಂತಿದೆ.

> It could not be said that their ethical standard rose to any higher level. Mr. M. Shrinivasa Ayyangar remarks that the ancient Tamils were a ferocious race of hunters and soldiers like the ancient Assyrians and Babylonians making war for pleasure of slaying, flunderping and devastating. In support of this statment he quotes chapter and verse from that great classic work 'Silappadigaram'. Possesed of such characteristics, it could not but be that most of their wars were aggressive in character. .....Even the Chola kings at a much later period (tenth and eleventh centuries A. D.) entered into aggressive warfares......not only were their wars were aggressive but also their treatment of the vanquished was far from humane.[೩೩]

ಇನ್ನು ವೇದದಲ್ಲಿ ಬಂದ ಸ್ತೇನರ ವರ್ಣನೆಗಳನ್ನು ನೋಡಿ: ರುದ್ರನ ಅನುಯಾಯಿಗಳು ರುದ್ರಿಯರು. ರುದ್ರಿಯರಲ್ಲಿ ಸ್ತೇನ, ತಸ್ಕರ, ಸ್ತಾಯು ಮೊದಲಾದವರುಂಟೆಂಬ ಸಂಗತಿಯು ಈಗಾಗಲೆ ಪ್ರಸ್ತಾಪಿತವಾಗಿದೆ. 'ಅರಣ್ಯರು' ಎಂದೂ (ಅರಣ್ಯಾನಾಂ ಪತಿ=ಶಿವ) ಈ ಜನಗಳನ್ನು ಹೇಳಿದ್ದುಂಟು. 'ಮಾರ್ಗೇ ಗಂ ತ್ವನ್ ದ್ರವ್ಯಾಪಹಾರೇಣ ಬಾಧಿತುಂ ನಿರಂತರಂ ಅರಣ್ಯೇ ವರ್ತಮಾನಾಃ ಚೋರಾಃ ಅರಣ್ಯಾಃ' ಎಂದು ಸಾಯಣರು

ಭಾಷ್ಯಮಾಡುತ್ತಾರೆ. ಭಟ್ಟ ಭಾಸ್ಕರನು ತನ್ನ ಟೀಕೆಯಲ್ಲಿ ಇವರಿಗೆ ದಸ್ಯುಗಳೆಂದೇ ನಿರ್ಧರಿಸಿದ್ದಾನೆ! 'ಅರಣ್ಯವಾಸಿನಃ ದಸ್ಯವಃ', ಎಂದು ಈತನ ಅಭಿಪ್ರಾಯ. 'ಶ್ವಭ್ಯಃ ಶ್ವಪತಿಭ್ಯಃ' 'ಶ್ವನಿಭ್ಯಃ' ಎಂದೂ ರುದ್ರಿಯರ ವರ್ಣನೆಯುಂಟು. 'ಶ್ವನಿಭ್ಯಃ, ಶುನಾಂಗಲೇಷು ಬದ್ಧಾನಾಂ ಪಾಶಾನಾಂ ಧಾರಕಾಃ' ಎಂದು ಸಾಯಣರ ಅರ್ಥ; ಶುನಾಂ ನೇತೃಭ್ಯಃ' ಎಂದು ಭಟ್ಟಭಾಸ್ಕರ ಹೇಳುತ್ತಾನೆ. ಇನ್ನು ಇವರ ಶಸ್ತ್ರಾಸ್ತ್ರಗಳ ವಿಚಾರ; 'ಕಕುಭಯ ನಿಷಂಗಿಣೇ ಸ್ತೇನಾನಾಂ ಪತಯೇ' 'ನಿಷಂಗಿಣ ಇಷು ಧೀಮತೇ ತಸ್ಕರಾಣಾಂ ಪತಯೇ', 'ಸೃಕಾವಿಭ್ಯೋ', 'ಇಷುಮದ್ಭ್ಯೋ ಧನ್ವಾವಿಭ್ಯಃ' 'ಆತನ್ವಾನೇಭ್ಯಃ' 'ಪ್ರತಿದಧಾನೇಭ್ಯಃ', 'ಆರ್ಯಚ್ಛದ್ಭ್ಯೋ ವಿಸ್ಮಜದ್ಭ್ಯಃ' ಇಂತಿವೆಲ್ಲವುಗಳಿಂದ ಈ ರುದ್ರಿಯರು ಬಿಲ್ಲು, ಬಾಣಗಳಿಂದಲೂ ಬೀಸಿ ಒಗೆಯುವ ಒಂದು ಬಗೆಯ ಆಯುಧ (ಸೃಕಾವಿಭ್ಯಃ) ದಿಂದಲೂ ಯಾವಾಗಲೂ ಸನ್ನದ್ಧರಾಗಿರುತ್ತಿದ್ದರೆಂದು ವ್ಯಕ್ತವಾಗುತ್ತದೆ. ಕಳವರನ್ನು ಕುರಿತು ಥರ್ಸಟನ್ನರು ಬರೆದುದೇನೆಂದರೆ:

> These people are said to be in general a brave people, expert in the use of the lance, and throwing the carved stic.

ಬಿಲ್ಲು ಬರ್ಚಿಗಳನ್ನು ಉಪಯೋಗಿಸುವುದರಲ್ಲಿ ಕರ್ಣಾಟರು ಬಹಳ ಪ್ರಖ್ಯಾತರೆಂದು ಇತಿಹಾಸದಿಂದ ಗೊತ್ತಾಗುತ್ತದೆ. ಆದರೆ, ಬೀಸಿ ಒಗೆವ ಮೇಲೆ ಉಲ್ಲೇಖಿಸಿದ ಆಯುಧವು ಕಳವರಲ್ಲಿ ಮಾತ್ರ ಉಳಿದಿರುವಂತೆ ತೋರುತ್ತದೆ. ಇದು ಒಂದು ವಿಶೇಷಪ್ರಕಾರದ ಆಯುಧವಾಗಿದೆಯೆಂದು ಥರ್ಸಟನ್ನರು ಹೇಳುತ್ತಾರೆ. ರುದ್ರಾಧ್ಯಾಯದಲ್ಲಿ ವರ್ಣಿತವಾದ 'ಸೃಕ್' ಎಂಬ ಆಯುಧವೆ ಇದೋ, ವಿಚಾರಿಸತಕ್ಕ ವಿಷಯವಾಗಿದೆ.

ಕಳವರಲ್ಲಿ ರೂಢವಾಗಿದ್ದ ಇನ್ನೊಂದು ನಡೆವಳಿಯನ್ನು ಥರ್ಸಟನ್ನರು ಹೇಳುತ್ತಾರೆ. ಕಳವರಲ್ಲಿ ಹಲ. ಕೆಲವರು, ಪಟ್ಟಣದ ನಾಗರಿಕರ ಮನೆಗಳಲ್ಲಿ ಕೆಲಸಕ್ಕೆ ನಿಲ್ಲುವುದುಂಟು. ಊರೊಳಗಿನ ದನಗಳು ಕಳವಾಗಿ ಹೋದ ಬಳಿಕ ಅವುಗಳನ್ನು ಓಡಿಸಿಕೊಂಡು ಹೋದ ಸ್ಥಳಗಳು ಓಡಿಸಕೊಂಡೊಯ್ದವರು ಇವೆಲ್ಲ ಸಂಗತಿಗಳು ಊರ ಸಭ್ಯಗೃಹಸ್ಥರಲ್ಲಿ ಕೆಲಸಕ್ಕೆ ನಿಂತ ಕಳವರಿಗೆ ಗೊತ್ತಿರುವುದುಂಟು. ಅವರು, ದನವೊಯ್ದ ಕಳವರಿಗೆ ಸುಂಕದ ಹಣವನ್ನು ಆ ದನಗಳ ಒಡೆಯನಿಂದ ಸಲ್ಲಿಸಿ, ಅವನ್ನು ತಿರುಗಿಕೊಡಿಸುವ ಸಂಪ್ರದಾಯವು ಉಂಟಂತೆ. ಕಳವ ಜನಾಂಗದವರು ಈ ಬಗೆಯ ಸುಂಕವನ್ನು ಸಂಪಾದಿಸುವುದು ತಮ್ಮ ಹಕ್ಕಿನ ಬಾಬ್ತು ಎಂದು ಪ್ರಾಚೀನಕಾಲದಿಂದ ತಿಳಿದಿರಬೇಕೆಂದು ತೋರುತ್ತದೆ. ಈ ಹಕ್ಕಿನ ಬಾಬ್ತು ದೊರೆಯದಾಗುತ್ತಲೆ ದನಗಳನ್ನು ದೋಚಿಸಿಕೊಂಡೊಯ್ವ ರೂಢಿಯಿರಬೇಕು. ಮುಂದೆ ಮರಾಠರ ಕಾಲದ 'ಚೌಥಾಯಿ', 'ಸರದೇಶಮುಖಿ'ಯ ಕಪ್ಪಕಾಣಿಕೆಯ ಉಗಮವು ಈ ಪ್ರಾಚೀನ ರೂಢಿಯಲ್ಲಿ ಅಡಗಿದೆಯೆಂದು ತೋರುತ್ತದೆ. ಅದಂತಿರಲಿ, ಥರ್ಸಟನ್ನರ ವಿವರಣೆಯಿಂದ ಕಳವರು ದೋಚಿಕೊಂಡೊಯ್ದ ದನಗಳ ಜಾಡು ಹಿಡಿದು ಅವನ್ನು ದೊರಕಿಸಿಕೊಡುವಂತಹರು ಊರೂರಿಗೆ ಇರುತ್ತಿದ್ದರೆಂಬ ಮಾತು ಸ್ಪಷ್ಟವಿದೆ. ಋಗ್ವೇದದ ಎರಡು ಋಚೆ (೫೪.೧,೨) ಗಳಲ್ಲಿರುವ ವರ್ಣನೆಗಳಿಂದ ವೇದಕಾಲದಲ್ಲಿಯೂ ಇದೇ ಬಗೆಯ ಒಂದು ನಡೆವಳಿ ಇದ್ದಿತೆಂದು ಗೊತ್ತಾಗುತ್ತದೆ! ಒಬ್ಬ ವೈದಿಕ ಋಷಿಯು ಪೂಷನ್ ದೇವರನ್ನು ಕುರಿತು ಪ್ರಾರ್ಥಿಸುತ್ತಾನೆ:

ಸುಪೂಷನ್ವಿದುಷಾನಯಯೋ ಅಂಜಸಾನುಶಾಸತಿ। ಯ ಏವೇದಮಿತಿ ಬ್ರವೇತ್ ॥ ೧॥

ಎಲೈ ಪೂಷನ್, ಯಾವನು ಪ್ರಾಮಾಣಿಕತನದಿಂದ ಆವು (ದನ), ಇಲ್ಲವೆ ಎಂದು ಹೇಳುವನೊ ಆ ತಿಳಿದವನ ಸಂಗತಿಯನ್ನು ಕೊಡು.

ಸಮುಪೂಷ್ಣಾಗಮೇಮಹಿಯೋ ಗೃಹಾ ಅಭಿಶಾಸತಿ। ಇಮ ಏವೇತಿ ಚ ಬ್ರವೇತ್ ॥ ೨॥

ಪೂಷನ್ನನ ದಯೆಯಿಂದ ಆದಾವನು ನಮಗೆ (ಕಳೆದುಹೋದ ದನಗಳಿರುವ) ಮನೆಗಳನ್ನು ತೋರಿಸುವನೊ ಮತ್ತು ಇವೇ ಆವು, ಎಂದು ಹೇಳುವನೊ ಅಂತಹನ ಸಂಗತಿಯು ದೊರೆಯಲಿ.

ಈ ಸೂಕ್ತದೊಳಗಿನ ಮಂತ್ರಗಳನ್ನು ಪಠಿಸಿದರೆ ಈಗಲೂ ಕಳೆದ ಧನವು ಸಿಕ್ಕುವುದೆಂದು ಭಾವಿಕರ ನಂಬುಗೆಯುಂಟು. ಹಿಂದಕ್ಕೆ ಕಳೆದ ದನಗಳನ್ನು ದೊರಕಿಸುವುದಕ್ಕಾಗಿ ಮಾಡಿದ ಪೂಷನ್ನನ ಪ್ರಾರ್ಥನೆಯಿದು.

ಇಂತಿವೆಲ್ಲ ಸಂದರ್ಭಗಳನ್ನು ಒಂದರೊಂದರೊಡನೆ ಜೋಡಿಸಿ, ಹೋಲಿಸಿ ವಿಮರ್ಶಿಸಿದರೆ ಸ್ತೇನರೆಂಬವರು ಪ್ರಾಚೀನ ದ್ರಾವಿಡಶಾಖೆಯ ಒಂದು ಜನಾಂಗವೆಂಬ ಮಾತು ಬಲಗೊಳ್ಳುತ್ತದೆ. ತಮಿಳುಸ್ಸಾಹಿತ್ಯದಲ್ಲಿ ಉಲ್ಲೇಖಿತರಾಗಿರಬೇಕೆಂದು ಊಹಿಸಲು ಸಾಕಷ್ಟು ಆಧಾರಗಳಿವೆ. ಆ ಆಧಾರಗಳನ್ನು ಸಾರಾಂಶರೂಪದಿಂದ ಹೀಗೆ ಹೇಳಬಹುದು:

೧. ಕಳವರೆಂಬವರು ದ್ರಾವಿಡಶಾಖೆಯ ಅತಿ ಪ್ರಾಚೀನ ಜನಾಂಗ.

೨. ವೇದಗಳಲ್ಲಿ ಉಲ್ಲೇಖಿತರಾದ ಸ್ತೇನ-ತಸ್ಕರರ ವರ್ಣನೆಗಳಿಗೂ ಪುರಾತನ ತಮಿಳು ಸಾಹಿತ್ಯದೊಳಗಿನ ವರ್ಣನೆಗಳಿಗೂ ತುಂಬ ಹೋಲಿಕೆಯಿದೆ. ಈಗ ಅವಶಿಷ್ಟವಾದ ಕಳ್ಳರ ಜಾತಿಯ ನಡೆವಳಿಯಲ್ಲಿ ಪುರಾತನ ಕಳ್ಳರ ಇರುವಿಕೆಯನ್ನು ನೆನಪಿಗೆ ತಂದುಕೊಡುವ ಅನೇಕ ಸಂಗತಿಗಳಿವೆ.

೩. ವೇದದಲ್ಲಿ ವರ್ಣಿತರಾದ ಸ್ತೇನ-ತಸ್ಕರರು ಆರ್ಯೇತರ ಪಂಗಡದವರೇ ಆಗಿರಬೇಕು. ಅದರಲ್ಲಿಯೂ ದ್ರಾವಿಡರೇ ಇವರೆಂದೂ ಅರಿತಕೊಳ್ಳಬಹುದಾಗಿದೆ.

೪. ವೈದಿಕ ಸಾಹಿತ್ಯದಲ್ಲಿ ದ್ರಾವಿಡರ ಅಂಶವುಂಟೆಂದು ಸಂಶೋಧಕರು ನಿಶ್ಚಿತವಾಗಿ ಹಲವು ಸಂಗತಿಗಳನ್ನು ಕಂಡುಹಿಡಿದಿರುವರು.

೫. ಶಿವನಿಗೆ 'ಸ್ತೇನಾನಾಂ ಪತಿ' ಎಂದು ಹೆಸರುಂಟು. ಸ್ತೇನರು ಕಳವರೆಂದು ನಿರ್ಧರಿಸಿದರೇನೇ 'ಕಣ್ಣೇಶ್ವರ' ಎಂಬ ಶಿವವಾಚಕವಾಗಿರುವ ಪ್ರಾಚೀನ ಶಬ್ದದ ಔಚಿತ್ಯದ ಸೊಗಸು ಅನುಭವಕ್ಕೆ ಬರುತ್ತದೆ.

ಕರ್ಣಾಟದಲ್ಲಿ ಸುಮಾರಾಗಿ ಹಳ್ಳಿಹಳ್ಳಿಗೂ ಒಂದೊಂದು ಶಿವಾಲಯ ಉಂಟು. ಅಥವಾ ಒಂದಿಲ್ಲೊಂದು ಹೆಸರಿನ ಶಿವನ ಗುಡಿಯಿಲ್ಲದ ಊರೇ ದೊರೆಯದು. ಅದರೊಳಗೂ ಪುರಾತನ ಗುಡಿಯಿದ್ದರೆ ಕಲ್ಲೇಶ್ವರ, ಕಲ್ಮೇಶ್ವರ, ಕಲ್ಲಿನಾಥ ಎಂಬೀ ಬಗೆಯ ಹೆಸರಿನ ದೇಗುಲಗಳೆ ಹೆಚ್ಚು. 'ಮೂಲಸ್ಥಾನ ಕಲ್ಲೇಶ್ವರ'ನ ಉಲ್ಲೇಖವಿರುವ ಹಲವು ಶಾಸನಗಳು ದೊರೆತಿವೆ; ದೊರೆಯುತ್ತಲಿವೆ. ಆದರೆ 'ಕಲ್ಲ' ಎಂಬ ಈ ಪದದ ಅರ್ಥವನ್ನು ಇನ್ನೂ ಯಾರೂ ನಿರ್ಧರಿಸಿಲ್ಲ. ಶಿವನ ಈ ಸ್ವರೂಪದಲ್ಲಿ ನಮ್ಮ ನಾಡಿನ ಜನಗಳಿಗೆ ತುಂಬ ಪ್ರೀತಿಯೆಂದು ಕಾಣುತ್ತದೆ. ಕಣ್ಣಪ್ಪ, ಕನ್ನಯ್ಯ ಎಂಬೀ ಬಗೆಯ ಹೆಸರುಗಳು ಈಗ ಹಿಂದೆ ಬಿದ್ದಿರುವುದಾದರೂ ಕಲ್ಲಪ್ಪ, ಕಲ್ಲಯ್ಯ ಎಂಬುವುಗಳಿಗೆ ಕೊರತೆಯಿಲ್ಲ. ಕಲ್ಲೇಶ್ವರ ಎಂಬಲ್ಲಿ ಪೂರ್ವಪದಕ್ಕೆ ಶಿಲೆ ಎಂಬ ಅರ್ಥವನ್ನು ಮಾಡಬಹುದಾಗಿದೆ. ಕಣ್ಣೇಶ್ವರದ ಪೂರ್ವರೂಪವು 'ಕಳ್ಳೇಶ್ವರ' ಎಂದಿರಬೇಕಾಗಿತ್ತು. ಆದರೆ, ಕಳ್ಳೇಶ್ವರ ಎಂಬ ಹೆಸರಿನ ದೇವಾಲಯಗಳು ಎಲ್ಲಿಯೂ ಇದ್ದಂತಿಲ್ಲ. ಕಳ್ಳ ಶಬ್ದಕ್ಕೆ ಅಂಟಿಕೊಂಡ ಅಪಾರ್ಥದ ಮೂಲಕವಾಗಿಯೊ ಏನೊ 'ಕಳ್ಳೇಶ್ವರ' ಎಂಬ ಹೆಸರು ಕೇಳಬರುವುದಿಲ್ಲ. ರುದ್ರಾಧ್ಯಾಯವು ಸಂಸ್ಕೃತದಲ್ಲಿರುವುದರಿಂದ, ಜನಗಳು ಅರ್ಥವನ್ನು ಅರಿತುಕೊಂಡು ಮಂತ್ರಗಳನ್ನು ಪಠಿಸುವ ಗೋಜಿಗೆ ಹೋಗುವುದಿಲ್ಲವಾದುದರಿಂದ, ಅಥವಾ ವೇದ ಪದಕ್ರಮವನ್ನು ಬದಲಿಸುವುದು ಪಾಪಕರ್ಮವೆಂಬ ಶ್ರದ್ಧೆಯಿದ್ದುದರಿಂದ 'ಸ್ತೇನಾನಾಂ ಪತಿ' ಎಂಬೀ ಮೊದಲಾದ ಹೆಸರುಗಳು ಇದ್ದಕಿದ್ದಂತೆಯೆ ಉಳಿದುಕೊಂಡಿರಬೇಕು. ಅದಾವ ಕಾರಣವೆ ಇರಲಿ, ಕನ್ನಡದಲ್ಲಿ ರುದ್ರಕ್ಕೆ ಕಳ್ಳತನದ ಅರ್ಥವು (ಮಾಧ್ವರಲ್ಲಿ) ಉಳಿದುಕೊಂಡು ಬಂದಿರುವುದಾದರೂ ಕಳ್ಳೇಶ್ವರನೆಂಬ ಹೆಸರು ಮಾತ್ರ ಎಲ್ಲಿಯೂ ಸಿಕ್ಕುವುದಿಲ್ಲೆಂಬುದು ನಿಜವು. ಮದರಾಸು ಇಲಾಖೆಯ ಶಾಸನಗಳ ಸಂಗ್ರಹವು ಮೂರು ಸಂಪುಟಗಳಲ್ಲಿ ಪ್ರಕಟವಾಗಿದ್ದು ಅದರ ಮೇಲಿಂದ ಬಳ್ಳಾರಿ ಜಿಲ್ಲೆಯ ಕೆಲವೆಡೆಗಳಲ್ಲಿ 'ಕಳ್ಳೇಶ್ವರ' ಎಂಬೀ ಬಗೆಯ ಹೆಸರಿದ್ದುದು ಗೋಚರವಾಗುತ್ತದೆ.[೩೪] ಕೊನೆಯ ಸೂಚಿಯಲ್ಲಿ ಕಳ್ಳೇಶ್ವರ ಎಂದುಕೊಟ್ಟಿರುವ ಎಡೆಗಳಲ್ಲಿ ಒಳಗೆ ಕೆಲವು ಸ್ಥಳದಲ್ಲಿ ಕಲ್ಲೇಶ್ವರ ಮತ್ತು ಕೆಲವು ಸ್ಥಳದಲ್ಲಿ ಕಳ್ಳೇಶ್ವರ ಎಂದುಂಟು. ಆದುದರಿಂದ, ಈ ವಿಷಯದಲ್ಲಿ ಸಂದೇಹವುಂಟಾಗಿ ಮದರಾಸ ಶಾಸನ ಇಲಾಖೆಯಲ್ಲಿ ಅಧಿಕಾರಿಗಳಾಗಿರುವ ನನ್ನ ಸ್ನೇಹಿತರಾದ ಶ್ರೀ ಪಂಚಮುಖಿಯವರನ್ನು ವಿಚಾರಿಸಲು ಅವರು ಮೂಲ ಪ್ರತಿಗಳಲ್ಲಿ 'ಕಳ್ಳೇಶ್ವರ' ಎಂಬುದು ಇಲ್ಲವೆಂದು ತಿಳಿಸಿದರು. ಮತ್ತು ಪೂರ್ವಪದಕ್ಕೆ ಕಲ್ಲು (ಶಿಲೆ) ಎಂಬ ಅರ್ಥವೆ ಇರಬೇಕೆಂದು

ಅವರ ಮತವಿದೆ. ಹಾಗಾದರೆ ರುದ್ರಾಧ್ಯಾಯದೊಳಗಿನ 'ಸ್ತೇನಾನಾಂ ಪತಿ' ಎಂಬ ಹೆಸರಿನ ಪರಂಪರೆಯು ನಡುವೆ ಎಲ್ಲಿ ಅಡಗಿತು? ಶಿವನಿಗೆ 'ಶಿಲಾರೂಪಿ' ನೀನು ಎಂಬೀ ಬಗೆಯ ಹೆಸರುಗಳು ತೀರ ವಿರಳ. 'ಕಳ್ಳೇಶ್ವರ' ಎಂಬೀ ಬಗೆಯ ಸಂಸ್ಕೃತ ಹೆಸರುಗಳು ಮಾತ್ರ ಬೇಕಾದಷ್ಟಿವೆ.

ಜನಗಳಿಂದ ದೇವರಿಗೆ ಹೆಸರು ಬರುವುದು. ಮುಸಲ್ಮಾನರ ದೇವರು, ಹಿಂದುಗಳ ದೇವರು, ಪಠಾಣರ ದೇವರು ಎಂಬಂತೆ ಕಳ್ಳರ ದೇವನು ಈತನು. ಹೀಗೆ ಹೇಳುವಲ್ಲಿ, ನಿಜವಾಗಿ ನಿಂದೆಯ ಭಾವನೆಗೆ ಎಳ್ಳಷ್ಟೂ ಅವಕಾಶವಿಲ್ಲ. ಆದುದರಿಂದ, 'ಸ್ತೇನಾನಾಂ ಪತಿಃ' ಎಂಬೀ ಬಗೆಯ ರುದ್ರಾಧ್ಯಾಯದೊಳಗಿನ ಉಲ್ಲೇಖಗಳು ಹೀನಾರ್ಥದಿಂದ ಕೂಡಿದುವೆಂದು ಬಗೆವ ಕಾರಣವಿಲ್ಲ. 'ಸ್ತೇನ' ಎಂಬುದು ಒಂದು ಜಾತಿಯನ್ನು ಹೇಳುವ ಶಬ್ದವು ರುದ್ರಧ್ಯಾಯದಲ್ಲಿ ಕುಂಬಾರ (ಕುಲಾಲ), ಕಮ್ಮಾರ (ಕರ್ಮಾರ), ಪಾಂಚಾಳ (ರಥಕಾರ ಮತ್ತು ತಕ್ಷ), ಬಿಲ್ಲವ, ಬೇಡ (ನಿಷಾದ) ಈ ಮೊದಲಾದ ಜಾತಿಗಳಂತೆ ಸ್ತೇನ-ತಸ್ಕರ ಎಂಬುದೂ ಒಂದು ಜಾತಿಯಾಗಿರಬೇಕು. ಬಡಿಗತನ, ಕಮ್ಮಾರಿಕೆ, ಕುಂಬಾರಿಕೆಗಳಂತೆ ತುಡುಗುತನವು ಒಂದು ಉದ್ಯೋಗವಾಗಿರಲಾರದು. ಲೋಕವ್ಯವಹಾರಕ್ಕನುಸರಿಸಿ ನೆರೆಹೊರೆಯ ಇನ್ನುಳಿದ ಜಾತಿಯವರಂತೆ ಹೊಟ್ಟೆಹೊರಕೊಳ್ಳುವ ಒಂದು ಮುಖ್ಯ ಉದ್ಯೋಗವು ಬೇರೆ ಇದ್ದು ಅದರೊಡನೆ ತುಡುಗು-ದಾಳಿ-ಪುಂಡು-ಬಂಡು-ಕಾಳಗ ಮೊದಲಾದುವನ್ನು ಹೊತ್ತುಬಂದಂತೆ ಮಾಡುತ್ತಿರಬಹುದು. ಇಲ್ಲಿ ಶಿವನಿಗೆ 'ತುಡುಗರ ಒಡೆಯ'ನೆಂದು ನಿಜವಾಗಿ ಹೇಳುವ ಉದ್ದೇಶವು ಇರುವ ಸಂಭವವಿಲ್ಲ. ಹಾಗೆ ಹೇಳಿದರೆ ಶಿವನ ಸ್ತೋತ್ರವು ಅದು ಆಗುವ ಸಂಭವವಿಲ್ಲ. ಆದುದರಿಂದ 'ಸ್ತೇನ' ಎಂಬುದು ಒಂದು ವಿಶಿಷ್ಟ ಜಾತಿಯಿರಬೇಕು. 'ಸ್ತೇರು', 'ರಥಕಾರರು' ಮೊದಲಾದವರೆಲ್ಲ ಈ ಭೂಲೋಕದ ಮೇಲಣ ಜನಗಳೇ ಎಂಬುದು ಇದೇ ವೇದದೊಳಗಿನ ಇನ್ನೊಂದು ಮಂತ್ರದಿಂದ ಗೊತ್ತಾಗುತ್ತದೆ.

> ನಮೋ ರುದ್ರೇಭ್ಯೋ ಯ ಯೇ ಪೃಥಿವ್ಯಾಂ ಯೇಽ ಂತರಿಕ್ಷೇ
> ಯೇ ದಿವಿ ಯೇಷಾಂ। ಅನ್ನಂ ವಾತೋ ವರ್ಷಮಿಷವಃ
> ತೇಭ್ಯೋ.....ನಮಸ್ತೇನೋ ಮೃಡಯಂತು॥

ಅಂತರಿಕ್ಷ ಮತ್ತು ದೇವಲೋಕದೊಳಗಿನ ರುದ್ರಿಯರೊಡನೆ ಭೂಲೋಕದೊಳಗಿನ ರುದ್ರಭಕ್ತರಿಗೂ ಈ ವೈದಿಕ ಋಷಿಯು ತಲೆವಾಗಿ ಬೇಡಿಕೊಂಡಿದ್ದಾನೆ! ಹಾಗಾದರೆ ಭೂಲೋಕದಲ್ಲಿ ವಾಸಿಸುವಂತಹ 'ಯೇ ರುದ್ರಾಃ ಪೃಥಿವ್ಯಾಂ ವರ್ತಂತೇ' 'ರುದ್ರಿಯರು ಯಾರು? ಈ ಮಂತ್ರದ ಮೇಲಣಭಾಷ್ಯದಲ್ಲಿಯೂ 'ಚೋರರೂ, ಹಿಂಸಕರೂ ಆದ ಶಿವಭಕ್ತರು' ಎಂದೇ ಸಾಯಣರು ವಿವರಿಸುತ್ತಾರೆ. ವೇದಕಾಲದಲ್ಲಿ ಆರ್ಯರಿಗೆ ಪ್ರಬಲರಾದ ಹಿಂಸಕರಾದವರು ದ್ರಾವಿಡವರ್ಗದ ಜನಗಳು, ಎಂದು ಆಧುನಿಕ ಸಂಶೋಧಕರೆಲ್ಲ ಒಪ್ಪಿಕೊಳ್ಳುತ್ತಾರೆ. ದ್ರಾವಿಡರು ಸಾಮಾನ್ಯವಾಗಿ ರುದ್ರ-ಶಿವನ ಉಪಾಸಕರೆಂಬ ಮಾತು ನಿಜವಿದ್ದರೆ ವೈದಿಕ ಋಷಿಯು ಮೇಲಣ ಮಂತ್ರದಲ್ಲಿ ಕೈಮುಗಿದು ಬೇಡಿಕೊಂಡು ಭೂಲೋಕದೊಳಗಿನ ಪ್ರಬಲ ರುದ್ರಿಯರೆಂದರೆ ದ್ರಾವಿಡವರ್ಗದವರೇ ಎಂದು ಬೇರೆ ಸಿದ್ಧಪಡಿಸುವ ಆವಶ್ಯಕತೆಯಿಲ್ಲ.

ರುದ್ರನ ಪರಮ ವೀರಭಕ್ತರೆಂದೇ ಇವರಿಗೆ ರುದ್ರರು, ರುದ್ರಿಯರು ಎಂಬ ಹೆಸರು ಬಂದಿದೆ. ರುದ್ರನಿಂದ ಆತನ ಭಕ್ತರಿಗೆ ಹೆಸರು ಬಂದಿರುವಂತೆ ಭಕ್ತರಿಂದಲೂ ದೇವರಿಗೆ ಹೆಸರು ಪ್ರಾಪ್ತವಾಗಿದ್ದರೆ ಅದರಲ್ಲೇನೂ ವಿಶೇಷವಿಲ್ಲ. ಆದುದರಿಂದ, ಕಳವರ ದೇವರು ಕಲ್ಲೇಶ್ವರನಾಗಿರುವುದು ಸಂಭವನೀಯವಾಗಿದೆ. ಸಂಸ್ಕೃತದಲ್ಲಿ ಶಿವನಿಗೆ ಗಿರೀಶನೆಂದು ಹೆಸರಿದೆ. ಕನ್ನಡದ ಮಲ್ಲಯ್ಯ, ಗುಡ್ಡಪ್ಪ, ಮುರಗಪ್ಪನೆಂಬುದು ಆ ಪರಂಪರೆಯ ಹೆಸರು. 'ಕಲ್ಲೇಶ್ವರ' ಎಂಬೀ ಹೆಸರಿನ ಶಿವಾಲಯಗಳು ಕರ್ನಾಟ (ದ್ರಾವಿಡ) ದೇಶದ ಹೊರಗೆ ಎಲ್ಲಿಯೂ ಇದ್ದಂತೆ ತೋರುವುದಿಲ್ಲ. 'ಕಲ್ಲು' (Stone) ಎಂಬುದೆ ಪೂರ್ವಪದವಾಗಿದ್ದರೆ 'ಕಲ್ಲು' ಈ ಅರ್ಥದ ಸಂಸ್ಕೃತ ಶಬ್ದದೊಡನೆ ಕೂಡಿಕೊಂಡಿರುವ ಹೆಸರಿನ ಶಿವಾಲಯಗಳು ಎಲ್ಲಿಯಾದರೂ ಇರಬೇಕಾಗಿದ್ದಿತಲ್ಲವೆ? ಕಲ್ಲೇಶ್ವರ ಎಂಬ ಹೆಸರಿನ ಗುಡಿಗಳು ಕರ್ನಾಟದಲ್ಲಿ ಹೇರಳವಾಗಿವೆ. ಕಲಿದೇವರು ಮತ್ತು ಕಲ್ಲೇಶ್ವರ ಭಿನ್ನವಲ್ಲ. 'ಕಲಿದೇವ' ಎಂದು ಉಲ್ಲೇಖವಿರುವ ಶಾಸನವಿರುವ ಗುಡಿಗೆ 'ಕಲ್ಲೇಶ್ವರನ ದೇವಾಲಯ' ಎಂದು ಈಗ ಹೆಸರುಂಟು.[೩೫]

ಇನ್ನೊಂದೆಡೆಯಲ್ಲಿ 'ಕಲ್ಲೇಶ್ವರನ ದೇವಾಲಯದ ಬಾಗಿಲಿನ ದಕ್ಷಿಣದ ಕಡೆ ನಟ್ಟಿರುವ ಕಲ್ಲುಂಟು'. ಈ ಕಲ್ಬರೆಹದಲ್ಲಿ ಈ ಗುಡಿಯು 'ಕಂನ್ನೇಶ್ವರ'ನದೆಂದು ಸ್ಪಷ್ಟವಿದೆ.[೩೬] ಇಂತಹ ಇನ್ನೂ ಒಂದು ಉದಾಹರಣವುಂಟು: ಕನ್ನವಳ್ಳಿಯಲ್ಲಿ ಮುಖ್ಯ ಗುಡಿ-ಮೂಲಸ್ಥಾನ ಕಲ್ಲೇಶ್ವರನದು![೩೭] ಆದುದರಿಂದ, ಕ[illegible] ಈಶ್ವರನೇ ಕಲ್ಲೇಶ್ವರ (ಕಂ ಈಶ್ವರ)- ಸ್ತೇನಾನಾಂ ಪತಿ ಎಂಬಿವು ಈ ನಾಡಿನ ಮೊದಲಿಗರಾದ [illegible] ರ ಪೂರ್ವಪೀಠಿಕೆಯನ್ನು ಸೂಚಿಸುತ್ತಿರಬಹುದೆ?

ಟಿಪ್ಪಣಿ

೧. ***Castes and Tribes of South India*** Vol. II, p. 60
೨. ***Studies in Tamil Literature and History*** p. 252
೩. Ibid, pp. 8; 190
೪. History of Tamils, pp. 190-191, SCS.p, 25
೫. Ibid p. 190
೬. Tamil Lexicon
೭. ***Castes and Tribes of South India***. Vol. V p. 249
೮. Tamil Lexicon
೯. ***Indian Antiquary***, 1919, p. 64
೧೦. ***ತುರುಕಾರಿ ಪಂಚಮರ ಇತಿಹಾಸ,*** ಪುಟ ೬
೧೧. ***History of Kannada Language***. p. 131.
೧೨. ***Tamil Lexicon***
೧೩. ***Castes and Tribes of South India***, III, p. 63
೧೪. Ibid. V, p. 22
೧೫. ***Studies in Tamil Literature and History***, pp. 228, 229; SCS. 24, 25 & HT. 190 etc.
೧೬. ***Some Contributions of South India to Indian Culture***, p.
೧೭. ***History of Tamils***, p. 536
೧೮. ***Ephigraphia Carnatica***, Vol. XI, HR. 30,33
೧೯. ***Mysore Archaeological Report***, 1933-34, p. 181;
೨೦. EC. VIII, Sa, 103, 21, EC. XI, Dg. 94; 97; 103; Volume V. Kr. 35; XII. Introduction p. 4; Gd. 61; MAR. 1928, P. 8 etc.
೨೧. ***Epigraphia Indica***, Vol, P. 336
೨೨. ***Castes and Tribes of South India,*** Vol. III, p. 62-63; & Vol. V. p. 25
೨೩. ***Vedic Index***, Vo. I, pp. 302; 304
೨೪. The Atharvaveda refers to the Stena and the Taskar as cattle and horse thieves. -***Vedic Index***. Vol. II. P. 30
೨೫. Ibid. Vol. II, p. 302
೨೬. ***Castes and Tribes of South India***, Vol. II, p. 215
೨೭. ***Some Contributions of South India to Indian Culture***, pp. 24, 25, 26
೨೮. Ibid p. 159-160
೨೯. ***Castes and Tribes of South India*** Vol. III, p. 200

೩೦. ***Khan. Gazett*** p.106

೩೧. ***Studies in Tamil Literature and History***

೩೨. Ibid, p. 251-252

೩೩. ***Inscriptions of Madras Presidency***, By, 75, 108, 182, 197, 213, 231, 238

೩೪. ***Ephigraphia Carnatica***. Vol. XI, Dg. 74, 70

೩೫. Ibid, 103

೩೬. ***Annual Report on South Indian Epigraphy,*** 1933, No. 135

ಕನ್ನರ ನಾಡು

ಕನ್ನ(ಣ್ಣ)ರು ಎಂದರೆ ಕಳ್ಳರು, ಇವರು ಗೋವಳರು. ಇದು ಪ್ರಾಚೀನ ಜನಾಂಗ, ರುದ್ರ-ಶಿವನು ಇವರ ಕುಲದೈವತ. ರುದ್ರ(ಶಿವ)ನೇ ವೀರ-ಬೀರದೇವ. ಬೀರದೇವನ ವೀರಭಕ್ತರು ಇವರು. ಇವರ ವೀರ ಶಿವಭಕ್ತಿಯಿಂದಲೆ, ಕನ್ನ(ಣ್ಣ)ರ ದೇವರಿಗೆ ಕನ್ನೇ(ಣ್ಣೇ)ಶ್ವರ ಎಂಬ ಹೆಸರು; 'ಸ್ತೇನಾನಾಂ ಪತಿ' ಎಂದು ಮುಂತಾಗಿ ರುದ್ರಾಧ್ಯಾಯದಲ್ಲಿ ಬಂದಿರುವ ರುದ್ರನ 'ಕಳ್ಳ' ಅನುಯಾಯಿಗಳು ದ್ರಾವಿಡ ಕಳವರೆ ಆಗಿರಬೇಕು; ರುದ್ರನೂ ದ್ರಾವಿಡರ ದೇವತೆ; ಇವೆ ಮೊದಲಾದ ಸಂಗತಿಗಳು ಹಿಂದಿನ ಪ್ರಕರಣದಲ್ಲಿ ಬಂದಿವೆ. ಇನ್ನು ಈ ಕನ್ನ ಜನಾಂಗವು ಮೊದಲು ಕಾಲೂರಿ ನಿಂತ ನಾಡಾವುದು ಎಂಬುದೆ ಈಗ ವಿಚಾರಿಸತಕ್ಕ ವಿಷಯವಾಗಿದೆ.

ದ್ರಾವಿಡರು ಹಿಂದೂದೇಶದವರು; ದಕ್ಷಿಣಹಿಂದುಸ್ಥಾನವೇ ಅವರ ತವರುಮನೆ, ಎಂದು ಒಂದು ಪಂಗಡ. ಆರ್ಯರಂತೆ ದ್ರಾವಿಡರೂ ಹೊರನಾಡಿನಿಂದ ಬಂದವರೆಂದು ಇನ್ನೊಂದು ಪಂಗಡ. ಈ ಎರಡನೆಯ ಪಂಗಡದಲ್ಲಿ ಮತ್ತೆ ಎರಡು ಬಣಗಳು. ಆರ್ಯರಂತೆ ದ್ರಾವಿಡರು ಉತ್ತರದಿಂದ ದಕ್ಷಿಣದೇಶಕ್ಕೆ ಬಂದರು, ಎಂಬುವವರು ಕೆಲರು; ಸಮುದ್ರಮಾರ್ಗವಾಗಿ ದಕ್ಷಿಣದಿಂದಲೆ ಹಿಂದೂದೇಶವನ್ನು ಹೊಕ್ಕರೆಂದು ಹೇಳುವವರು ಕೆಲರು. ಪ್ರಸ್ತುತ ಇದಾವ ಚರ್ಚೆಯೂ ನಮ್ಮ ಗುರಿಯಾಗಿಲ್ಲ. ಮೂಲದ್ರಾವಿಡರ ಒಂದು ಶಾಖೆಯಾದ ಕನ್ನರು ಬೇರೂರಿದ ನಾಡಾವುದು? ಎಂಬುದೆ ಇಲ್ಲಿ ವಿವೇಚಿಸತಕ್ಕ ಮುಖ್ಯ ವಿಷಯವಾಗಿದೆ.

ಇದನ್ನು ಅರಿತುಕೊಳ್ಳಲು ಹವಣಿಸುವಾಗ ಅಡ್ಡಬರುವ ಒಂದೆರಡು ಸಂಗತಿಗಳಿವೆ. ಈ ವಿಷಯದಲ್ಲಿ ನಮ್ಮ ತಿಳುವಳಿಕೆಯನ್ನು ಸರಿಯಾಗಿ ತಿದ್ದಿಕೊಳ್ಳದೆ ಇದ್ದರೆ ಮುಂದಿನ ವಿವೇಚನದ ಅರ್ಥವೆ ಆಗಲಿಕ್ಕಿಲ್ಲ. ದ್ರಾವಿಡರು ಹಿಂದೂದೇಶಕ್ಕೆ ಹೊರಗಿನಿಂದ ಬಂದವರಾಗಲಿ ಅಥವಾ ಮೂಲ ಇಲ್ಲಿಯವರೆ ಆಗಿರಲಿ, ಒಂದು ಸಂಗತಿಯು ಮಾತ್ರ ನಿಶ್ಚಿತ. ಅವರು ಮೆಲ್ಲಮೆಲ್ಲನೆ ಉತ್ತರದಿಂದ ದಕ್ಷಿಣಕ್ಕೆ ಸರಿಯುತ್ತ, ಸಂಕೋಚ ಹೊಂದುತ್ತ ನಡೆದುದು ಇತಿಹಾಸದಿಂದ ಅನುಭವಕ್ಕೆ ಬರುತ್ತಿದೆ. ಬಲೂಚಿಸ್ಥಾನದ ಹತ್ತರಿನ ಬ್ರಾಹುಯೀ ಭಾಷೆಯು ದ್ರಾವಿಡವರ್ಗಕ್ಕೆ ಹತ್ತರಿನದೆಂದು ಬಲ್ಲಿದರು ನಿರ್ಧರಿಸಿದ್ದಾರೆ. ಸಿಂಧಿಭಾಷೆಯಲ್ಲಿರುವ ದ್ರಾವಿಡ ಅಂಶಗಳನ್ನು ಕುರಿತು ಲೇಖನಗಳು ಪ್ರಕಟವಾಗಿವೆ. ರೆವರಂಡ ಶರ್ಟ ಎಂಬುವರು ತಮ್ಮ ಲೇಖನದಲ್ಲಿ ಕೊನೆಗೆ ಬರೆಯುವುದೇನೆಂದರೆ:

> I believe they (all these things) point to the fact that the Indus Valley was a home to some part of the Dravidian race, before the Aryan immigration.[೧]

ವೇದದಲ್ಲಿ ಸಿಕ್ಕುವ ಹಲವು ಶಬ್ದಗಳ ಆಧಾರದಿಂದ ಪಂಜಾಬಿನಲ್ಲಿ ಆರ್ಯರು ಬರುವ ಮೊದಲು ದ್ರಾವಿಡರೇ ನೆಲೆಸಿದ್ದರೆಂದು ಸಂಶೋಧಕರ ಅಭಿಪ್ರಾಯವಿದೆ.[೨] ಹಾಗಾದರೆ ಒಂದು ಕಾಲದಲ್ಲಿ ಪಂಜಾಬಿನ ವರೆಗೆ ವ್ಯಾಪಿಸಿದ್ದ ದ್ರಾವಿಡರು ಈಗ ಕೇವಲ ದಕ್ಷಿಣಭಾರತದಲ್ಲಿ ಮಾತ್ರ ಕಾಣಸಿಕೊಳ್ಳುತ್ತಿರುವುದರ ಅರ್ಥವೇನು? ಉತ್ತರಭಾರತದೊಳಗಣ ಹಲವು ದ್ರಾವಿಡರು, ಆರ್ಯರು ಬಂದಬಳಿಕ ನುಗ್ಗಾಟಕ್ಕೆ ಆರಂಭವಾಗಿ, ದಕ್ಷಿಣಕ್ಕೆ ಸರಿದಿರಬೇಕು; ಇನ್ನು ಹಲವರು ಆರ್ಯರಲ್ಲಿಯೆ ಬೆರೆತುಕೊಂಡಿರಬೇಕಲ್ಲವೆ? ಕನ್ನಡ ಮತ್ತು ತಮಿಳು ಜನಗಳಾದ ವೆಳ್ಳರು, ರಡ್ಡಿಗಳು, ಗಂಗಡಿಕಾರರು, ಮೊದಲಾದ ಜಾತಿಯವರಲ್ಲಿ, ತಾವು ಉತ್ತರದಿಂದ ಹರಿದುಬಂದವರೆಂಬ ಪರಂಪರೆಯಿದ್ದುದು ಕಂಡುಬರುತ್ತದೆ.[೩]

ಕನ್ನರು ದ್ರಾವಿಡರ ಒಂದು ಶಾಖೆ, ಎಂಬುದು ನಿಶ್ಚಿತವಿದ್ದರೆ, ಒಂದಿಲ್ಲೊಂದು ಹೆಸರಿನಿಂದ ಈ ಜನಾಂಗವು ವೇದಗಳಲ್ಲಿ ಕಾಣಸಿಕೊಂಡುದು ನಿಜವಿದ್ದರೆ; ಇವರ ಕೆಲವೊಂದು ನೆಲವೀಡಿನ ಕುರುಹುಗಳು ಮೊದಲು ಉತ್ತರದಲ್ಲಿಯೂ ಇರಬೇಕಾಗಿದ್ದಿತಲ್ಲವೆ? ಅವು ಆವುವು? ವಿಂಧ್ಯ-ಹಿಮಾಲಯ ನಡುವಣ ನಾಡು ಆರ್ಯಾವರ್ತ ವೆಂದು ಖ್ಯಾತಿ. ಆ ಪ್ರದೇಶದಲ್ಲಿ ಸಾವಿರಾರು ವರುಷಗಳಿಂದ ಆರ್ಯರ ವರ್ಚಸ್ಸು ವಿಶೇಷವಾಗಿದ್ದುದರಿಂದ ಅಲ್ಲಿಯ ನಾಡು, ಬೀಡುಗಳ ಉಲ್ಲೇಖಗಳು ಸಿಕ್ಕುವುದು ಅಸಾಧ್ಯ. ಆದರೆ, ಬಹಳ ಕಾಲದ ವರೆಗೆ ಆರ್ಯರ ವರ್ಚಸ್ಸು ವಿಶೇಷವಾಗಿಲ್ಲದ, ಆರ್ಯಾವರ್ತದ ಹೊರಗಣ ಕೆಲವು ನಾಡುಗಳಲ್ಲಿ (ಈಗ ಅಲ್ಲಿ ದ್ರಾವಿಡರ ಯಾವ ಶಾಖೆಯೂ ತಲೆಯೆತ್ತಿಬಾಳುವುದು ಕಂಡುಬರುವುದಿಲ್ಲವಾದರು) ಪೂರ್ವಕಾಲದ ದ್ರಾವಿಡರ ಹಲವು ಬಗೆಯ ಕುರುಹುಗಳನ್ನು ಕಂಡುಹಿಡಿಯುವುದು ಕಷ್ಟವಾಗಿಲ್ಲ. ಬಂಗಾಳದ ಸಂಶೋಧಕರು ಈ ವಿಷಯದಲ್ಲಿ ಬಹಳ ಮುಂದುವರೆದಿದ್ದಾರೆ. ಬಂಗಾಳದಲ್ಲಿ, ಊರುಗಳ ಹೆಸರುಗಳಲ್ಲಿ ಇರುವ ದ್ರಾವಿಡ ಅಂಶಗಳನ್ನು ವಿಂಗಡಿಸಿ ತೋರಿಸಲು ಹಲವರು ಯತ್ನಯಿಸಿದ್ದಾರೆ,[೪] ಯಶಸ್ವಿಗಳಾಗಿದ್ದಾರೆ. ಅಲ್ಲಿಯ ವಿದ್ವಾಂಸರಿಗೆ ತಮ್ಮ ನಾಡು, ನಡೆ, ನುಡಿಗಳಲ್ಲಿ ದ್ರಾವಿಡ ಅಂಶವಿದೆಯೆಂದು ಒಪ್ಪಿಕೊಳ್ಳಲು ಸಂಕೋಚವೆನಿಸುವುದಿಲ್ಲ. ಬಂಗಾಳವನ್ನಾಳಿದ ಸೇನರೆಂಬ ಅರಸರು ಕರ್ಣಾಟ-ಕ್ಷತ್ರಿಯರು ಎಂಬ ಮಾತನ್ನು ಸಪ್ರಮಾಣವಾಗಿ ಸಿದ್ಧಪಡಿಸಿ ಬೆಳಕಿಗೆ ತಂದವರು ಒಬ್ಬ ಬಂಗಾಳಿ ವಿದ್ವಾಂಸರು.[೫]

ಬಂಗಾಳದಷ್ಟು ದೂರಿನ ನಾಡಿನಲ್ಲಿ ಪ್ರಾಚೀನ ಕರ್ಣಾಟದ ಅಂಶಗಳಿವೆಯೆಂಬುದು ಸಿದ್ಧವಾಗುತ್ತಿದ್ದು, ಕರ್ಣಾಟಕ್ಕೆ ಹೊಂದಿಕೊಂಡಿರುವ ಮಹಾರಾಷ್ಟ್ರದಲ್ಲಿ ಮಾತ್ರ ಕನ್ನಡದ ಗಾಳಿಯೂ ಕೂಡ ಸೋಂಕಿಲ್ಲವೆಂಬಂತೆ ಅಲ್ಲಿಯ ಸಂಶೋಧಕರು ಈ ವಿಷಯವನ್ನು ಸಂಪೂರ್ಣವಾಗಿ ದುರ್ಲಕ್ಷಿಸುತ್ತಿರುವುದು-ಅಲ್ಲಗಳೆಯುತ್ತಿರುವುದು ಸೋಜಿಗವನ್ನುಂಟುಮಾಡುವ ಹಾಗಿದೆ! ಸ್ವಲ್ಪ ಹೆಚ್ಚುಕಡಿಮೆ ಪ್ರಮಾಣದಿಂದ ಗುಜರಾತಿನ ವಿಚಾರವೂ ಹೀಗೆಯೆ ಇದೆ. ತಮ್ಮ ನಾಡು. ನುಡಿಗಳಲ್ಲಿ ಕನ್ನಡದ ಅಂಗವಿದೆ, ಎಂದು ಒಪ್ಪಿಕೊಂಡರೆ ಕನ್ನಡಿಗರು ಈಗ ತಮ್ಮಲ್ಲಿ ಬಂದು, ಎಲ್ಲಿ ಹಕ್ಕು ಸಾಧಿಸುವರೊ ಎಂಬ ಹೆದರಿಕೆಯು ಈ ಜನಗಳಿಗೆ ಇದ್ದಂತೆ ತೋರುತ್ತದೆ. ತಮ್ಮದು, ಕೇವಲ ಆರ್ಯಸಂಸ್ಕೃತಿ ಎಂಬೀ ಬಗೆಯ ಹೆಮ್ಮೆಯ ಧ್ವನಿಯೆ ಈ ನಾಡುಗಳ ಸಂಶೋಧಕರಲ್ಲಿ ಹೆಚ್ಚಾಗಿ ಕೇಳಬರುತ್ತದೆ. ಬಂಗಾಲಿ ಸಂಶೋಧಕರು ಮತ್ತು ಮರಾಠಿ-ಗುಜರಾತಿ ಸಂಶೋಧಕರ ಮನೋರಚನೆಯಲ್ಲಿ ಈ ಬಗೆಯ ವ್ಯತ್ಯಾಸವು ಕಂಡುಬರುತ್ತದೆ. ಇದರ ಮನವರಿಕೆಗಾಗಿ ಡಾ. ಸುನೀತಿಕುಮಾರ ಚಟರ್ಜಿಯವರು ಬರೆದ ಬಂಗಾಳಿ ಭಾಷೆಯ ಇತಿಹಾಸದ ರೀತಿಯನ್ನು ನೋಡಬಹುದು ಮತ್ತು ಮಹಾರಾಷ್ಟ್ರದ ಡಾ. ಭಂಡಾರಕರ, ಶ್ರೀ ಭಾವೆ ಪ್ರಭೃತಿಗಳೂ ಗುಜರಾತಿನ ಶ್ರೀ ಮುನಶಿಯವರೂ ಬರೆದ ಅವರವರ ನಾಡು ನುಡಿಗಳ ಚರಿತೆಗಳನ್ನು ಓದಬಹುದು. ಡಾ. ಚಟರ್ಜಿಯವರು ತಮ್ಮ ಗ್ರಂಥದಲ್ಲಿ ದ್ರಾವಿಡ ಅಂಶವನ್ನು ವಿವರಿಸುವುದಕ್ಕೆ ೧೦-೧೨ ಪುಟಗಳನ್ನು ಮೀಸಲಿಟ್ಟಿರುವರು. ಆದರೆ, ಮರಾಠಿ ಮತ್ತು ಗುಜರಾತಿ ಭಾಷೆಗಳ ಚರಿತೆಗಳಲ್ಲಿ ಒಂದು ಅರ್ಧ ಪುಟವನ್ನಾದರೂ ಇದಕ್ಕೆ ಕೊಟ್ಟಿದ್ದರೆ, ಮತ್ತೆ ಅವರ ನಿಷ್ಪಕ್ಷಪಾತ ಬುದ್ಧಿಯ ಪ್ರದರ್ಶನವಾಗಬಹುದಾಗಿತ್ತು.

ಹೆರವರಿಗೆ ಹೆಸರಿಡುವುದರಲ್ಲೇನು ಹುರುಡಿದೆ? ಕರ್ಣಾಟದ ಸಂಶೋಧಕರಲ್ಲಿಯೇ ಕೆಲವರಿಗೆ, ನೃಪತುಂಗನ ಮಾತಿನಲ್ಲಿಯೆ ನಂಬುಗೆಯಿಲ್ಲ! 'ಕಾವೇರಿಯಿಂದಂ ಆ ಗೋದಾವರಿ ವರಂ ಇರ್ದ ನಾಡು ಅದು ಕನ್ನಡ' ಎಂದು ಕವಿರಾಜಮಾರ್ಗದಲ್ಲಿರುವ ಉಲ್ಲೇಖವು ಮನೋರಾಜ್ಯವಂತೆ! ಕಾಲ್ಪನಿಕವಂತೆ! ವಿಂಧ್ಯದ ದಕ್ಷಿಣಕ್ಕೆ ಮ್ಲೇಚ್ಛ ಭೂಮಿಯೆಂದು ಮನು ಮೊದಲಾದವರೇ ಹೇಳುತ್ತಿರುವಾಗ; ದಕ್ಷಿಣಾಪಥದಲ್ಲಿ ಆರ್ಯರ ಅಥವಾ ಆರಿಯರ ನಾಡು ಎಲ್ಲಿಂದ ಬರಬೇಕು? ಉತ್ತರಕ್ಕೆ ಗೋದಾವರಿಯ ವರೆಗೇ ಏಕೆ ನರ್ಮದೆಯ (ವಿಂಧ್ಯದ)ವರೆಗೂ ಕನ್ನಡರ ಮೊದಲಿಗರು ನೆಲೆಸಿದ್ದರೆಂದು ಸಹಜವಾಗಿ ಅರಿತುಕೊಳ್ಳಬಹುದಾಗಿದೆ. ಪ್ರಾಚೀನ ಕಾಲದಲ್ಲಿ ದ್ರಾವಿಡಜನಾಂಗವು ಪಂಜಾಬಿನ ತನಕ ವ್ಯಾಪಿಸಿಕೊಂಡಿದ್ದಿತೆಂಬುದು ಒಪ್ಪಿಗೆಯಿದ್ದರೆ ಈ ದ್ರಾವಿಡರ ಒಂದು ಶಾಖೆಯವರಾದ ಕನ್ನಡರು ಗೋದೆಯ ವರೆಗೆ-ನರ್ಮದೆಯ ವರೆಗೂ ಒಂದು ಕಾಲದಲ್ಲಿ ನೆಲೆಸಿದ್ದರೆಂದರೆ ಅದರಲ್ಲಿ ಅಪನಂಬಿಗೆಯಾಗುವುದಕ್ಕೆ ಕಾರಣವೇನು? ಗೋದೆಯ ವರೆಗೆ ಕರ್ಣಾಟವಿದ್ದಿತೆಂದು ಹೇಳಿದವರಾರು? ಆ ಕಾಲಕ್ಕೆ ಪ್ರತ್ಯಕ್ಷವಾಗಿ ಈ ನಾಡನ್ನೆಲ್ಲ ಆಳುತ್ತಿದ್ದ ಸಾಮ್ರಾಟನಾದ ನೃಪತುಂಗನು! ತಾನು ಕಣ್ಣಾರೆ ಕಂಡುದನ್ನು ಒಬ್ಬನು ಹೇಳುತ್ತಿರುವಾಗ (ಬೇರೆ ಬಲವಾದ ಯಾವ ಕಾರಣಗಳನ್ನೂ ಹೇಳದೆ) ಅದನು ಅಲ್ಲಗಳೆಯಲು ಹೊರಟವರ ಎದೆಗಾರಿಕೆಯೆ ಮಿಗಿಲು! ಪ್ರೊ. ಕೃ. ಪಾ. ಕುಲಕರ್ಣಿಯವರಂತಹ ಮಹಾರಾಷ್ಟ್ರದ ವಿದ್ವಾಂಸರಿಗೆ ನೃಪತುಂಗನು ಹೇಳಿದ ಕನ್ನಡದ ವಿಸ್ತಾರವು ಮಾನ್ಯವಿದ್ದುದು ಅವರು ಬರೆದ 'ಮರಾಠಿ ಭಾಷಾ, ಉಗಮದ ವಿಕಾಸ' ಎಂಬ ಗ್ರಂಥದಿಂದ ವ್ಯಕ್ತವಾಗುತ್ತದೆ. ಆದರೆ, ನಮ್ಮಲ್ಲಿಯ ಪಂಡಿತರಿಗೆ ಕೆಲವರಿಗೆ ಇದರ ಬಗೆಗೆ ಸಂದೇಹ!

ಈ ಬಗೆಯ ಸಂದೇಹವೃತ್ತಿಗೆ ಕಾರಣವೇನು? ಕನ್ನಡದ ಇಂದಿನ ಹೀನಸ್ಥಿತಿ; ಅದರಿಂದುಂಟಾಗಿರುವ ಅವಿಶ್ವಾಸ, ಅಧೈರ್ಯ. ಆದರೆ, ಇದಕ್ಕೆ ಪ್ರತಿಯಾಗಿ ಹೀಗೆ ಹೇಳಬಹುದು: 'ಕನ್ನಡವು ಅಷ್ಟು ಇತ್ತು, ಇಷ್ಟು ಇತ್ತು' ಎಂಬುವುದೂ ಪ್ರಾಂತಾಭಿಮಾನದಿಂದ ತಲೆತಿರುಗಿದವರ ಮಾತು; ಸರಿ. ಡಾ. ಸ್ಟೆನ್ ಕೊನೊ (Sten Konow) ಮೊದಲಾದ ಪರದೇಶದ ವಿದ್ವಾಂಸರೇನು ಈ ಪ್ರಾಂತಾಭಿಮಾನದಿಂದ ತಲೆಕೆಟ್ಟವರಲ್ಲವಷ್ಟೆ? ಡಾ. ಕೊನೊ ಇವರ ಅಭಿಪ್ರಾಯದ ಮೇರೆಗೆ ಮಹಾರಾಷ್ಟ್ರ ಮತ್ತು ಗುಜರಾತಿನ ಮೂಲನಿವಾಸಿಗಳು 'ದ್ರಾವಿಡ' ವರ್ಗಕ್ಕೆ ಸೇರಿದವರಾಗಿದ್ದಾರೆ!

> The substratum over which Gujarati and Marathi have spread was Dravidian.

ಡಾ. ಸ್ಟೆನ್‌ಕೊನೊ ಅವರ ಅಭಿಪ್ರಾಯವು ಡಾ. ಗ್ರಿಯರಸನ್ನರಿಗೆ ಮಾನ್ಯವಿದೆ. ಹಲವು ಶತಮಾನಗಳಿಂದ ನಡೆದು ಬಂದ ಒಂದು ಪ್ರಾಚೀನ ಪರಂಪರೆಯಂತೆ ಗುಜರಾತ ಮತ್ತು ಮಹಾರಾಷ್ಟ್ರಗಳು 'ಪಂಚದ್ರಾವಿಡ'ದಲ್ಲಿ ಒಳಗೊಳ್ಳುತ್ತವೆ. ಆದರೆ, 'ದ್ರಾವಿಡರು' ಎಂಬುದು ಸ್ಥೂಲಮಾತು ಆಯಿತು. ಹಾಗಾದರೆ ಈ 'ದ್ರಾವಿಡರು' ಎಂದರೆ ಯಾರು? ಮರಾಠಿ ಮತ್ತು ಗುಜರಾತಿ ಭಾಷೆಗಳಲ್ಲಿ, ಕನ್ನಡದ ಅಂಶವು ಉಂಟೆಂಬುದನ್ನು ಮಿ. ಎ. ಮಾಸ್ಟರ, I. C. S. ಇವರು ಒಂದು ವಿಸ್ತಾರವಾದ ಲೇಖನವನ್ನು ಬರೆದು ಹಲವು ಉದಾಹರಣಗಳೊಂದಿಗೆ ತಮ್ಮ ಅಭಿಪ್ರಾಯವನ್ನು ಮಂಡಿಸಿದ್ದಾರೆ.[೬] ಗುಜರಾತ ಮತ್ತು ಮರಾಠಿ ದೇಶದ ಹತ್ತರಿನ ದ್ರಾವಿಡರೆಂದರೆ ಕನ್ನಡಿಗರೇ. ಐತಿಹಾಸಿಕ ದೃಷ್ಟಿಯಿಂದ ವಿಚಾರಿಸಿದರೂ ಗುಜರಾತ ಮತ್ತು ಮಹಾರಾಷ್ಟ್ರಗಳೊಂದಿಗೆ ದ್ರಾವಿಡವರ್ಗದಲ್ಲಿ ಕನ್ನಡಿಗರಷ್ಟು ಬೇರಿನ್ನಾವ ಶಾಖೆಯವರ ಸಂಬಂಧವೂ ಬಂದಿಲ್ಲ. ಆದುದರಿಂದ, ಗುಜರಾತಿ ಹಾಗೂ ಮರಾಠಿಯಲ್ಲಿರುವುದೆಂದು ಹೇಳುವ 'ದ್ರಾವಿಡ' ಅಂಶವು ಕನ್ನಡವೇ ಎಂದು ಎದೆತಟ್ಟಿ ಹೇಳಬಹುದಾಗಿದೆ. ಇಲ್ಲಿ ಅಹುದು ಬಹುದಿನ ಶಂಕೆಗೆ ಎಳ್ಳಷ್ಟು ಅವಕಾಶವಿಲ್ಲ.

ಡಾ. ಸ್ಟೆನ್ ಕೊನೊ ಪ್ರಭೃತಿಗಳು ಕಂಡುಹಿಡಿದಿರುವಂತೆ ಈಗ ಗುಜರಾತಿ ಮತ್ತು ಮರಾಠಿ ಭಾಷೆಗಳು ಹಬ್ಬಿಕೊಂಡಿರುವ ನಾಡಿನ ಮೂಲನಿವಾಸಿಗಳು ದ್ರಾವಿಡವರ್ಗದವರು-ಎಂದರೆ ಕನ್ನಡ ಶಾಖೆಗೆ ಸಂಬಂಧಪಟ್ಟವರೇ

ಇರಬೇಕು ಎಂಬುದು ನಿಜವಿದ್ದ ಬಳಿಕ ಕನ್ನಡದ ವ್ಯಾಪ್ತಿಯು ಅಲ್ಲಿಯ ವರೆಗೂ ಇದ್ದಿತೆಂದೆ ಅದರ ಅರ್ಥವಲ್ಲವೆ? ಇದನ್ನು, ಬರಿ ಡಾ. ಕೊನೊ ಪ್ರಭೃತಿಗಳು ಹೇಳುವರೆಂದೇ ನಂಬಬೇಕೊ? ಅಥವಾ ಬೇರೆ ವಿಶ್ವಸನೀಯ ಪ್ರಮಾಣಗಳುಂಟೊ? ಇದನ್ನು ಸಿದ್ಧಮಾಡಿ ತೋರಿಸಲು ಹಲವು ಪ್ರಮಾಣಗಳೂ ಉಂಟು. ರಾಜಕೀಯ ಇತಿಹಾಸ, ಸಂಸ್ಕೃತಿ, ಮೂಲಜನಾಂಗಗಳು, ಭಾಷೆ ಇವುಗಳಲ್ಲಿ ಮಾದರಿಗಾಗಿ ಒಂದೆರಡು ಸಂಗತಿಗಳನ್ನಷ್ಟೆ ಎತ್ತಿಕೊಂಡು ವಿಚಾರಿಸಬಹುದಾಗಿದೆ.

ಮೊದಲು ಗುಜರಾತ ಮತ್ತು ಮಹಾರಾಷ್ಟ್ರ ಎಂಬ ದೇಶ-ನಾಮಗಳನ್ನೆ ವಿಮರ್ಶಿಸಬಹುದು. ಇವರೆಡು ನಾಡಿನ ಮೂಲಜನಾಂಗವು 'ದ್ರಾವಿಡ' ಪಂಗಡಕ್ಕೆ ಸೇರಿದ್ದು-ಕನ್ನಡಕ್ಕೆ ಸಂಬಂಧಪಟ್ಟದ್ದು, ಎಂದು ಹೇಳುವುದಾದರೆ ಈ ನಾಡುಗಳಿಗೆ, 'ಗುಜರಾತ' ಮತ್ತು 'ಮಹಾರಾಷ್ಟ್ರ' ಎಂಬ ಹೆಸರುಗಳು ಏಕೆ? ಎಂದು ಕೇಳಬಹುದು. ಸಂದೇಹವು ಬಹಳ ಸಮರ್ಪಕವಾಗಿದೆ. ಗುಜರಾತ ಮತ್ತು ಮಹಾರಾಷ್ಟ್ರ ಎಂಬ ಎರಡೂ ಹೆಸರುಗಳು, ತಾರತಮ್ಯದಿಂದ ಮಾತಾನಾಡುವುದಾದರೆ, ಅರ್ವಾಚೀನ. ಈ ನಾಡುಗಳಿಗೆ ಇರುವ ಹಳೆಯ ಹೆಸರುಗಳು ಬೇರೆ ಇವೆ. 'ಗುರ್ಜರ' ಎಂಬ ಹೊರಗಿನ ಜನಾಂಗವು ಪಂಜಾಬಿನತ್ತಣಿಂದ ದಕ್ಷಿಣಕ್ಕೆ ಸಾಗುತ್ತ ಸಾಗುತ್ತ ಬಂದು ಇಲ್ಲಿ ನೆಲೆಸಿದ ಬಳಿಕ ಈ ನಾಡಿಗೆ ಗುರ್ಜರದೇಶವೆಂಬ ಹೆಸರಾಯಿತು. ಬೇರಬೇರೆ ಕಾಲದಲ್ಲಿ ಲಾಟದೇಶ, ನಾಗದೇಶ, ಅನೂಪದೇಶ ಎಂದು ಮುಂತಾಗಿ ಹಲವು ಮೊದಲಿನ ಹೆಸರುಗಳಿದ್ದುದು ಕಂಡುಬರುತ್ತದೆ, ಎಂದು ಶ್ರೀಮಾನ್ ಮುನಶಿಯವರೆ ಬರೆದಿರುತ್ತಾರೆ.[೭]

ಮಹಾರಾಷ್ಟ್ರವು ಮೊದಲು ಈಗಿನಷ್ಟು ವಿಸ್ತೃತವಾಗಿರಲಿಲ್ಲವೆಂದೂ, ವರ್ಹಾಟವೆ ಪ್ರಥಮ ಮಹಾರಾಷ್ಟ್ರ ವೆಂದೂ ಆ ನಾಡಿನ ವಿದ್ವಾಂಸರೆ ಹೇಳುತ್ತಿದ್ದಾರೆ. ಮಹಾರಾಷ್ಟ್ರ ಶಬ್ದವು ಹೇಗೆ ಹುಟ್ಟಿತೆಂಬ ಬಗ್ಗೆ ಆ ನಾಡಿನ ವಿದ್ವಾಂಸರಿಗೆ ದಿಗಿಲು. ಇದೆಲ್ಲವನ್ನೂ ಕುರಿತು ತುಂಬ ಅರೆದಾಟವು ನಡೆದಿದೆ.

ಈಗಣ ಕರ್ಣಾಟ-ಮಹಾರಾಷ್ಟ್ರಗಳ ಸಂಲಗ್ನಪ್ರಾಂತಕ್ಕೆ ಒಂದು ಕಾಲದಲ್ಲಿ 'ಕುಂತಲ' ಎಂಬ ಹೆಸರಿದ್ದಂತೆ ಕಂಡುಬರುತ್ತದೆ. ಕುಂತಲವು ಆರ್ಯಾವರ್ತದ ಹೊರಗಣ ನಾಡು. ಇಲ್ಲಿಯ ಮೂಲನಿವಾಸಿಗಳಿಗೆ ಗಡ್ಡ, ಮೀಸೆ, ಜಡೆಗಳ ಮೇಲೆ ವಿಶೇಷ ಪ್ರೀತಿಯೆಂದು ಇವರಿಗೆ ಕೂಂದಲ (ಕುಂತಲ)ರು ಎಂಬ ಹೆಸರು ಬಂದಿತೇನೋ ತಿಳಿಯದು. ಈ ಬಗೆಯಾಗಿ ಊಹಿಸುವುದಕ್ಕಂತು ಸಾಕಷ್ಟು ಆಧಾರಗಳಿವೆ. ಮಧ್ಯಕಾಲದಲ್ಲಿ ಕರ್ಣಾಟಕ್ಕೇ ಕುಂತಲವೆಂದು ಹೇಳುವ ರೂಢಿಯಿದ್ದಿತೆಂದು ಶಾಸನಗಳಿಂದ ನಿಶ್ಚಿತವಾಗಿ ಗೊತ್ತಾಗುತ್ತದೆ. ಆದುದರಿಂದ, ಡಾ. ಬಿ. ಸಿ. ಲಾ. ಡಾ. ಬುಲ್ಹರ ಮೊದಲಾದವರು ಕುಂತಲ=ಕರ್ಣಾಟವೆಂದು ಅರ್ಥಮಾಡಿದ್ದುಂಟು. ಆದರೆ ರಾಜಶೇಖರನ ಕರ್ಪೂರ ಮಂಜರಿಯಲ್ಲಿ ವಿದರ್ಭವೂ ಕುಂತಲದೇಶವೆಂದು ವರ್ಣಿಸಿದ್ದುಂಟು. ಒಂದು ಕಾಲದಲ್ಲಿ ತುಂಗಭದ್ರೆಯಿಂದ ವಿದರ್ಭದ ವರೆಗೆ ಕುಂತಲದೇಶವೆಂದು ತಿಳಿಯಲ್ಪಡುತ್ತಿದ್ದಿತೆಂದು ಪ್ರಾಚೀನ ಭಾರತದ ಭೌಗೋಲಿಕ ಸ್ಥಳಗಳನ್ನು ದೇಶಗಳನ್ನು ವಿವರಿಸುವಾಗ ಡಾ. ನಂದೋಲಾಲರು ಹೇಳುತ್ತಾರೆ. ಮೊದಲಿನ ರೂಢಿಯು ಹಿಂದೆಬಿದ್ದು ಕೊನೆಗೆ ಕರ್ಣಾಟಕಕ್ಕೇ ಕುಂತಲವೆಂದು ಕರೆವ ವಾಡಿಕೆಯು ಮಾತ್ರ ಜೀವಂತವಾಗಿ ಉಳಿಯುವುದಕ್ಕೆ ಕಾರಣವೇನಿರಬಹುದು? ಕುಂತಲರೆಂದರೆ ಕನ್ನಡರು. ಎಂದಿನ ವರೆಗೆ ಕನ್ನಡರು ವಿದರ್ಭದ ವರೆಗೂ ಹಬ್ಬಿಕೊಂಡಿದ್ದರೊ ಅಲ್ಲಿಯ ವರೆಗೆ ವಿದರ್ಭವು ಕುಂತಲದೇಶವೇ ಆಗಿದ್ದಿತು. ಕನ್ನಡರ ಉತ್ತರದ ಮೇರೆಯು ದಕ್ಷಿಣಕ್ಕೆ ಸರಿದಂತೆ ಕುಂತಲವೂ ಕಿರಿದು ಕಿರಿದಾಗಲಾರಂಭಿಸಿದ್ದುದು ಗೋಚರವಾಗುತ್ತದೆ. ಶಕ್ತಿಸಂಗಮ ತಂತ್ರದಲ್ಲಿ 'ದ್ವಾರಾಕಾಂತಂ ಕುಂತಲಾ ಭಿದೋ ದೇಶಃ' ಎಂದು ಹೇಳಿದೆ.[೮] ಇದರಿಂದಲೂ ಗುಜರಾತ, ಮಹಾರಾಷ್ಟ್ರ ಮತ್ತು ಕರ್ಣಾಟಗಳು ಕೂಡಿ ಒಮ್ಮೆ ಒಂದೇ ಜನಾಂಗದ ನಾಡಾಗಿದ್ದಿತೆಂಬ ಮಾತು ನಿದರ್ಶನಕ್ಕೆ ಬರುತ್ತಲಿದೆ. ಮರಾಠ ಮತ್ತು ಗುಜರಾತಗಳ ಮೂಲಜನಗಳು (Substratum) ದ್ರಾವಿಡರೆಂದು ಡಾ. ಸ್ಟೆನ್‌ಕೊನೊ ಅವರು ಹೇಳುವ ಮಾತಿಗೇ ಇನ್ನೊಂದು ದಿಕ್ಕಿನಿಂದ ಬಂದಂತಾಯಿತು! ಈ ಪ್ರದೇಶದಲ್ಲಿ ಹಬ್ಬಿಕೊಂಡಿದ್ದ ದ್ರಾವಿಡರ ಶಾಖೆಯು ಆವುದೆಂಬುದೂ ಈಗ ನಿಶ್ಚಿತವಾಗಿ ಗೊತ್ತಾಗುವಂತಿದೆ. ದ್ರಾವಿಡರ ಈ ಶಾಖೆಯೆ ಕುಂತಲರು. ಈ ಕುಂತಲರಿಂದಲೆ ದ್ವಾರಕೆಯ ವರೆಗಣ ನಾಡಿಗೂ ಕುಂತಲದೇಶವೆಂಬ ಹೆಸರು ಬಂದಿರಬೇಕೆಂಬುದು ಸ್ಪಷ್ಟವಿದೆ.

ಗುಜರಾತ ಎಂಬ ಹೆಸರು ಅರ್ವಾಚೀನ. ಪ್ರಾಚೀನ ಶಾಸನಗಳಲ್ಲಿ 'ಲಾಟ'ವೆಂಬುದೆ ಪ್ರಾಮುಖ್ಯವಾಗಿ ಬಳಕೆಯಲ್ಲಿತ್ತು. ಮಹಾರಾಷ್ಟ್ರವೆಂಬ ಶಬ್ದವು ಎಷ್ಟೋ ಪ್ರಾಚೀನವಿದ್ದರೂ ಶಾಸನಾದಿಗಳಲ್ಲಿ ಅದರ ಉಲ್ಲೇಖವು ಕಡಿಮೆ. ಕರ್ಣಾಟ ಮಹಾರಾಷ್ಟ್ರಗಳನ್ನು ನಾಲ್ಕುನೂರು ವರ್ಷಗಳ ವರೆಗೆ ಅಖಂಡವಾಗಿ ಆಳಿದ ಚಲುಕ್ಯರು ರಾಷ್ಟ್ರಕೂಟರಲ್ಲಿ (೨ನೆಯ ಪುಲಿಕೇಶಿಯನ್ನುಳಿದು) ಯಾರೂ ಮಹಾರಾಷ್ಟ್ರದ ಹೆಸರನ್ನೇ ಎತ್ತಿಲ್ಲ! ಒಂದು ಶಾಸನದಲ್ಲಿಯೂ ಮಹಾರಾಷ್ಟ್ರದ ಉಲ್ಲೇಖವಿಲ್ಲ! ಚಲುಕ್ಯರು ಕುಂತಲಾಧಿಪತಿಗಳೆನಿಸಿದರು. ಇವರು ಆಳಿದ ನಾಡು ಕುಂತಲವಾಯ್ತು. ರಾಷ್ಟ್ರಕೂಟರು ಆಳುವಾಗ ಅದೇ ನಾಡಿಗೆ 'ರಟ್ಟಪಾಡಿ' ಎಂಬ ಹೆಸರು ಬಂದಿತು. ಇದನ್ನೆ ತಮಿಳು ಶಾಸನಗಳಲ್ಲಿ 'ಇಲಟ್ಟ' ಅಥವಾ 'ಇರಟ ಪಾಡಿ' ಎಂದು ಕರೆದುದು ಉಂಟು. ಹಿಂದಿನ ಶಾಸನವೊಂದರಲ್ಲಿ 'ಬೃಹತ್ ಕರ್ಣಾಟ' ಎಂಬ ಮಾತು ಒಂದೆಡೆಗೆ ಕಾಣಿಸಿಕೊಳ್ಳುತ್ತದೆ.[೯] ಕರ್ಣಾಟ ಮತ್ತು ಮಹಾರಾಷ್ಟ್ರರ ಸೇರಿದ ನಾಡಿಗೆಲ್ಲ 'ಬೃಹತ್ ಕರ್ಣಾಟವೆಂದಂತೆ ಕಾಣುತ್ತದೆ. ಪ್ರಾಚೀನ ರಾಜರು ತಾವು ಆಳಿದ ಅಥವಾ ಗೆದ್ದುಕೊಂಡ ನಾಡುಗಳ ನಾಮಾವಳಿಗಳನ್ನು ಹೇಳುವಾಗ ಮಹಾರಾಷ್ಟ್ರದ ಹೆಸರೇ ಲೋಪವಾಗಿರುತ್ತದೆ. ಸುತ್ತಲಿನ ಎಲ್ಲ ನಾಡುಗಳ ಹೆಸರುಗಳು ಬಂದು ಒಂದು ಮಹಾರಾಷ್ಟ್ರವೆ ಉಳಿದುಬಿಟ್ಟಿರುವುದಕ್ಕೆ ಕಾರಣವೇನು? ಕಾರಣಗಳು ಎರಡು: ಮರೆತುಹೋಗಿರಬೇಕು; ಅಥವಾ ಆವುದೊಂದು ದೇಶದಲ್ಲಿ ಅದು ಒಳಗೊಳ್ಳುತ್ತಿದ್ದುದರಿಂದ ಮಹಾರಾಷ್ಟ್ರದ ಹೆಸರನ್ನು ಸ್ವತಂತ್ರವಾಗಿ ಹೇಳುವ ಅವಶ್ಯವಿಲ್ಲದಿರಬೇಕು. ಸುತ್ತಲಿನ ಎಲ್ಲ ನಾಡುಗಳ ಹೆಸರುಗಳಿದ್ದು ಮಹಾರಾಷ್ಟ್ರವನ್ನು ಒಂದೇ ಮರೆತರೆಂದು ಹೇಳುವುದು ಅಸಮರ್ಪಕ. ಹಿಂದಿನ ಶಾಸನಗಳಲ್ಲಿ 'ಲಾಟ-ಕರ್ಣಾಟ' ಎಂಬುವುಗಳ ಜೋಡಿಯು ಹಲವೆಡೆಗಳಲ್ಲಿ ಕಾಣಿಸಿಕೊಳ್ಳುತ್ತದೆ. ಲಾಟವೆಂದು ಹೇಳಿದೊಡನೆ ಕರ್ಣಾಟವು ಬರುವ ಕಾರಣವಿದ್ದಿ ಲ್ಲ. ನಡುವೆ ಮಹಾರಾಷ್ಟ್ರದೇಶವಿದೆ. ಆದರೂ ಲಾಟ-ಕರ್ಣಾಟಗಳು ಎಡೆಬಿಡದೆ ಕೂಡಿಕೊಂಡಿರಲು ಕಾರಣವೇನು?

> ಜಿತ್ವಾ ಚೋಳ ಕಳಿಂಗ ಸೇವುಣ ಬೃಹತ್ ಕರ್ಣಾಟಲಾಟಾಧಿಪಾನ್ ॥
> ಲಾಟ ಕರ್ಣ್ಣಾಟ ಕರಹಾಟ ಕಲಿಂಗ ಕೊಂಗ ವಂಗ ವೆಂಗಿ......[೧೦]
> ಜಿತ್ವಾ ವಂಗ ತಿಲಂಗ ಗೂರ್ಜರ ಲಸತ್ ಕರ್ಣಾಟ ಗೌಡಾಧಿಪಾನ್ ॥
> ಕರ್ಣಾಟಲಾಟೋದ್ಭಟಕ್ಷೋಣೀ ಪಾಲ ವಿಡಂಬನಃ[೧೧]

ಇವೆ ಮೊದಲಾದ ಉಲ್ಲೇಖಗಳಲ್ಲಿ ಮರಾಠ ದೇಶದ ಹೆಸರೆ ಕಾಣಬರುವುದಿಲ್ಲ. ತೀರ ಇಲ್ಲವೇ ಇಲ್ಲವೆನ್ನಲೂ ಬರುವಂತಿಲ್ಲ. 'ಭೋಜ ಮರಾಟಲಾಟ ಕಟಕಾನ್' ಎಂಬಲ್ಲಿ ಲಾಟದ ಹತ್ತಿರ ಮಹಾರಾಷ್ಟ್ರದ ಹೆಸರುಂಟು. ಹಾಗಾದರೆ ಅನೇಕ ಶಾಸನಗಳಲ್ಲಿ ಲಾಟ-ಕರ್ಣಾಟದ ಜೋಡಿಯನ್ನು ಹೇಳುವಾಗ ಮಹಾರಾಷ್ಟ್ರವು ಎಲ್ಲಿ ಹೋಯ್ತು? ಅದು ಕರ್ಣಾಟದ ಹೊಟ್ಟೆಯಲ್ಲಿಯೆ ಅಡಗಿದ್ದಿತೆಂಬುದು ಸ್ಪಷ್ಟವಿದೆ. ಹಿಂದಕ್ಕೆ 'ಬೃಹತ್ ಕರ್ಣಾ'ವು ವರ್ಹಾಟದವರೆಗೂ ವ್ಯಾಪಿಸಿದ್ದುದರಿಂದ ಮಹಾರಾಷ್ಟ್ರವು ಕರ್ಣಾಟದೊಳಗೆ ಹುದುಗಿಕೊಂಡಿದ್ದಿತೆಂಬುದು ಮೇಲೆಯೆ ಕಾಣುವಂತಿದೆ. ಆದುದರಿಂದಲೆ, ತಾರಾತಂತ್ರಕಾರನು ಕರ್ಣಾಟವೆಂದರೆ ಮಹಾರಾಷ್ಟ್ರವೆಂದು ಹೇಳಿದ್ದಾನೆ. ಗುಣಾಢ್ಯನ ಬೃಹತ್ಕಥೆಯಲ್ಲಿ ದಕ್ಷಿಣದೇಶದ ಅನೇಕಾನೇಕ ಕಥೆಗಳು, ಪರಂಪರೆಗಳ ಸಂಗ್ರಹಿಸಲ್ಪಟ್ಟಿವೆ. ಪೈಠಣದ ಸುತ್ತಣ ನಾಡಿನ ಕಥೆಗಳು ಅದರಲ್ಲಿ ಅಡಕವಾಗಿವೆ. ಆದುದರಿಂದ, ಬೃಹತ್ಕಥೆಯೊಳಗಿನ ಈ ಭಾಗದ ವಿಷಯಕ ಉಲ್ಲೇಖಗಳು ಹೆಚ್ಚು ವಿಶ್ವಸನೀಯವಾದುವುಗಳೆಂದು ಹೇಳಬಹುದಾಗಿದೆ. ಶೂದ್ರಕನೆಂಬ ರಾಜನು ವೀರವರನೆಂಬ ತನ್ನ ಸೇವಕನಿಗೆ ಕರ್ಣಾಟ-ಲಾಟಯುಕ್ತವಾದ ರಾಜ್ಯವನ್ನು ಒಪ್ಪಿಸಿದನೆಂದು ಬೃಹತ್ಕಥೆಯಲ್ಲಿ ಒಂದು ಕಥೆಯಿದೆ (೧೨.೧೧.೧೦೯). (ಲಾಟದೇಶೇ ತತೋ ರಾಜ್ಯಂ ಸ ಕರ್ಣಾಟಯುತೇ ನೃಪಃ) ಬೃಹತ್‌ಕಥೆಯು ಕ್ರಿಸ್ತಶಕದ ಆರಂಭಕಾಲದ ಪರಂಪರೆಯನ್ನು ಸೂಚಿಸುವ ಪ್ರಾಚೀನ ಗ್ರಂಥ. ಈ ಬಗೆಯಾಗಿ ಕುಂತಲದ ಪ್ರಾಚೀನ ಪರಂಪರೆಯೂ ಲಾಟ-ಕರ್ಣಾಟಗಳ ನಿಕಟ ಸಂಬಂಧದ ಬೃಹತ್ಕಥೆ, ಶಿಲಾಶಾಸನಾದಿಗಳೊಳಗಿನ ಸ್ಪಷ್ಟವಾದ ಉಲ್ಲೇಖಗಳೂ ಸಂಪೂರ್ಣವಾಗಿ ಒಂದಕ್ಕೊಂದು ಪೋಷಕವಾಗಿವೆ. ಸ್ಟೆನ್‌ಕೊನೊ ಪ್ರಭೃತಿ ಆಧುನಿಕ ಸಂಶೋಧಕರ

ಅಭಿಪ್ರಾಯವೂ ಮೇಲ್ಕಾಣಿಸಿರುವಂತೆ ಇದಕ್ಕೆ ಬೆಂಬಲವನ್ನು ಕೊಡುತ್ತಿದೆ. ಆದುದರಿಂದ (ಕರ್ಣಾಟವು ಇಂದು ಎಷ್ಟೇ ಸೊರಗಿ ಕೊರಗಿರುವುದಾದರೂ) ಪ್ರಾಚೀನ ಕಾಲದಲ್ಲಿ ಮಹಾರಾಷ್ಟ್ರಕ್ಕೆ ಕರ್ಣಾಟದ ಹೊರಗೆ ಸ್ವತಂತ್ರವಾದ ಅಸ್ತಿತ್ವವೇ ಇದ್ದಿಲ್ಲ. ಕನ್ನಡದ ಒಡಲಲ್ಲಿಯೆ ಮೊದಲು ಅದರ ಸಮಾವೇಶವಾಗುತ್ತಲಿದ್ದಿತೆಂಬುದು ನಿಃಸಂದಿಗ್ಧವಾಗಿ ಸಿದ್ಧವಾಗುತ್ತದೆ.

ಈಗಣ ಗುಜರಾತದ ದಕ್ಷಿಣಭಾಗವು ಸುಮಾರಾಗಿ ಲಾಟವೆಂದು ಎಣಿಸಲ್ಪಡುತ್ತಲಿತ್ತು. ಮಹಿ ಮತ್ತು ತಾಪಿ ಹೊಳೆಗಳ ನಡುವಣ ಸೀಮೆಯು ಲಾಟ ಎಂದು ಬುಲ್ಹರ.[೧೨] ಹಲ್ಟನ ಅಭಿಪ್ರಾಯವೂ ಸಾಮಾನ್ಯವಾಗಿ ಹೀಗೆಯೆ ಇದೆ.[೧೩] ಲಾಟ ದೇಶವು ಖಾನದೇಶದವರೆಗೂ ಇದ್ದಿತೆಂದು ಪ್ರಾಚೀನ ಹಿಂದೂ ದೇಶದ ಪಟ್ಟಣ, ದೇಶಗಳನ್ನು ವಿವರಿಸುವ ಒಂದು ಕೋಶವು ಹೇಳುತ್ತದೆ. ಲಾಟದ ಸೀಮೆಗೆ ಹೊಂದಿಯೆ ಕರ್ಣಾಟವಿದ್ದಿತೆಂಬ ಪ್ರಾಚೀನ ಪರಂಪರೆಯನ್ನು ನೆನೆದುಕೊಂಡರೆ ಕನ್ನಡದ ಉತ್ತರ ಮೇರೆಯು ತಾಪಿನದಿಯೆಂದಂತಾಗುವುದು. ಖಾನದೇಶವು ಕರ್ಣಾಟದಲ್ಲಿಯೆ ಅಡಕವಾಗುವುದು. ದ್ವಾರಕೆಯ ವರೆಗೆ ಕುಂತಲದೇಶವಿದ್ದಿತೆಂಬ ಪರಂಪರೆಯ ಬೆಳಕಿನಲ್ಲಿ ವಿಚಾರಿಸಿದರೆ, ಕರ್ಣಾಟ-ಲಾಟಗಳ ಜೋಡು ಉಲ್ಲೇಖಗಳ ರೀತಿಯನ್ನು ನೋಡಿದರೆ ಪೂರ್ವಕಾಲದಲ್ಲಿ ಲಾಟದೇಶವೂ ಕನ್ನಡಿಗರಿಗೆ ಸಂಬಂಧಪಟ್ಟುದೇ ಆಗಿರಬೇಕೆಂಬ ವಿಚಾರವು ಬಲಪಡುತ್ತದೆ. 'ಲಾಟ' ಎಂಬ ಹೆಸರು ಕೂಡ ಈ ಮಾತಿಗೆ ಬೆಂಬಲವನ್ನು ಕೊಡುವಂತೆ ತೋರುತ್ತದೆ. ಪಂಡಿತ ಭಗವಾನಲಾಲ ಇಂದ್ರಾಜಿಯವರ ಅಭಿಪ್ರಾಯದಂತೆ, ಅಲ್ಲಿ ನೆಲೆಸಿದ ಒಂದು ಜನಾಂಗದಿಂದ ಆ ನಾಡಿಗೆ 'ಲಾಟ' ಎಂಬ ಹೆಸರು ಬಂದಿದೆ.[೧೪] ಫ್ಲೀಟರಿಗೂ ಸುಮಾರಾಗಿ ಈ ಅಭಿಪ್ರಾಯವು ಮಾನ್ಯವಿದೆಯೆಂದು ಅವರು ಲಟ್ಟಲೂರಿನ ವಿಷಯಕ್ಕೆ ಚರ್ಚಿಸುವಾಗ ಕಂಡುಬರತ್ತದೆ.

> Name of Lat country was determined from the name of some
> local tribe, perhaps the Lattas.

ಹಾಗಾದರೆ ಲಾಟ ಎಂಬ ಹೆಸರು ಬರಲು ಕಾರಣವಾದ 'ಲಾಟ' ಜನಾಂಗವು ಆವುದಿರಬಹುದು? 'ಲಾಟರು' ಡಾ. ಸ್ಟೆನ್ ಕೋನೊ ಅವರು ಗುಜರಾತಿನ ಮೂಲಿಗರೆಂದು ಹೇಳುವ ದ್ರಾವಿಡಶಾಖೆಗೆ ಸಂಬಂಧಿಸಿದ ಜನಗಳೇ ಆಗಿರಬಹುದೆ? ತಮಿಳನಾಡಿನ ಚೋಳವಂಶದ ರಾಜರಿಗೆ ಲಾಟರಾಜರೆಂಬ ಒಂದು ಬಿರುದು ಇದ್ದುದು ಶಾಸನಗಳಿಂದ ಕಂಡುಬರುತ್ತದೆ. 'ಲಾಟ ರಾಜ' ವೀರ ಚೋಳ ಎಂಬ ಮಾತು ಆಗಾಗ ಕಾಣಿಸಿಕೊಳ್ಳುವುದು. ಇದರಿಂದ ಈ ಚೋಳವಂಶದವರು ಲಾಟ ದೇಶದಿಂದ ಬಂದಿರಬಹುದೆಂದು (ನನ್ನ ಊಹೆಯಲ್ಲ ಮತ್ತೆ!) ರಾವಸಾಹೇಬ ವಿ. ವೆಂಕಯ್ಯನವರು, ಸರಕಾರಿ ಶಾಸನ ಇಲಾಖೆಯ ಮುಖ್ಯಾಧಿಕಾರಿಗಳು ಬರೆಯುತ್ತಾರೆ.

> The expression 'Lat Raj' which is applied to Veer Chola and to
> his ancestors suggests that these chiefs may have immigrated
> from Lata (Gujarat)[೧೫]

ಆದುದರಿಂದ 'ಲಾಟ' ಎಂಬ ಜನಾಂಗವು ದ್ರಾವಿಡ ಕುಲದ್ದೆಂದು ಊಹಿಸಲ ಅಡ್ಡಿ ತೋರುವುದಿಲ್ಲ. ಇನ್ನು 'ಲಾಟ' ಇದರ ಅರ್ಥವೇನಿರಬಹುದೆಂಬ ವಿಚಾರ. ಲಾಟ ಇದರ ಮೂಲರೂಪವು 'ಲಟ್ಟ' ಎಂದಿರುವ ಸಂಭವವು ಇಲ್ಲದಿಲ್ಲ. ರಾಷ್ಟ್ರಕೂಟರ ಶಾಸನಗಳಲ್ಲಿ ಅಡಿಗಡಿಗೆ ಬರುವ ಲಟ್ಟಲೂರು ಈಗಿನ ಲಾತೂರೆಂದು ಹಲವು ವಿದ್ವಾಂಸರು ಊಹಿಸಿದ್ದಾರೆ. 'ರಟ್ಟ' ಎಂಬ ಪದವು ಅಪಭ್ರಷ್ಟವಾಗಿ ಲಟ್ಟ-ಲಾಟ ಎಂದಾಗಿರಬಹುದೆಂದು ತೋರುತ್ತದೆ. ಸುವಿಖ್ಯಾತ ವಿದ್ವಾಂಸರಾದ ಶ್ರೀ ಕೆ. ಪಿ. ಜಯಸ್ವಾಲರು ಹಸ್ತಿಗುಂಫೆಯ ಪ್ರಾಚೀನ ಶಾಸನದ ವಿಮರ್ಶೆಯನ್ನು ಮಾಡುವಾಗ ರಠಿಕ ಶಬ್ದದ ಮೇಲೆ ಒಂದು ಟಿಪ್ಪಣಿಯನ್ನು ಬರೆದಿರುವರು. ರಠಿಕ ಎಂಬ ಪದವು ಬೇರೆಬೇರೆ ಶಾಸನಾದಿಗಳಲ್ಲಿ ಬೇರೆಬೇರೆ ತೆರನಾಗಿ ಬರೆಯಲ್ಪಟ್ಟಿದೆ. ಗಿರಿನಾರ ಶಾಸನದಲ್ಲಿ ರಿಷ್ಟಿಕ, ಅಶೋಕನ ರಾಯಸಗಳಲ್ಲಿ ರಠಿಕ, ರಠಕ, ಧೌಲಿ ಶಿಲಾಲೇಖದಲ್ಲಿ ಲಠಿಕ ಎಂದುಂಟು.[೧೬] (ಬಂಗಾಳದಲ್ಲಿ

ಒಂದು ಪ್ರಾಚೀನ 'ಲಾಟ' ದೇಶವಿತ್ತು. ಅದರ ಹೆಸರಿನಲ್ಲಿ ಆಗಿರುವ ಬದಲಾವಣೆಗಳನ್ನು ಈ ಸಂದರ್ಭದಲ್ಲಿ ವಿಚಾರಿಸಬಹುದು. ಲಾಡ, ರಾಡ, ರಾಢ ಎಂದು ಮುಂತಾಗಿ ಅದರಲ್ಲಿ ವೈವಿಧ್ಯಗಳಾಗಿವೆ.) ರಠಿಕರೆ ರಟ್ಟರೆಂದು ಡಾ. ಅಳತೇಕರ ಮೊದಲಾದ ವಿದ್ವಾಂಸರು ಒಪ್ಪುತ್ತಾರೆ.[೧೭] ಆದುದರಿಂದ ಲಾಟದೇಶದ ಮೂಲನಿವಾಸಿಗಳು ರಠಿಕ-ರಟ್ಟರೆಂದೂ ಅವರು ಮೂಲದಲ್ಲಿ ದ್ರಾವಿಡಪಂಗಡದವರೆಂದು ನಿರ್ಧರಿಸಬಹುದಾಗಿದೆ. ರಟ್ಟರೇ ರಾಷ್ಟ್ರಕೂಟರು ಎಂಬ ಬಗೆಗೆ ಯಾರೂ ಸಂದೇಹಪಟ್ಟುಕೊಳ್ಳುವ ಕಾರಣವಿಲ್ಲ. ಏಕೆಂದರೆ, ರಾಷ್ಟ್ರಕೂಟರೇ ತಮ್ಮ ಶಾಸನಗಳಲ್ಲಿ 'ರಟ್ಟವಂಶೋದ್ಭವಃ' ಎಂದು ತಾವೇ ಹೇಳಿಕೊಂಡಿದ್ದಾರೆ.[೧೮] ವಿನ್ಸೆಂಟ ಸ್ಮಿತ್‌ನು 'The indigenous tribes'ಎಂದು ರಾಷ್ಟ್ರಕೂಟರ ವಿಷಯಕ್ಕೆ ಹೇಳುತ್ತಾನೆ.[೧೯] ಆದಕಾರಣ ಲಾಟದೇಶವು ರಾಷ್ಟ್ರಕೂಟರ ಮೂಲಸ್ಥಾನವೆನ್ನಲು ಅಡ್ಡಿಯಿಲ್ಲ. 'ಲಾಟ'ರು ಎಂದರೆ ರಾಠರು-ರಟ್ಟರು; ರಾಷಕೂಟರು. ಇವರೇ ಲಾಟದೇಶದ 'ಕುಟುಂಬಿ'ಗಳು (ರಾಷ್ಟ್ರಕೂಟರು, ತಮಗೆ ಕುಟುಂಬಿಗಳು ಎಂದುಕೊಂಡ ವಿಚಾರವು ಹಿಂದೆ ಬಂದಿದೆ). 'ಕೃಷೀವಳು, ಕರ್ಷಕಂ ಕುಟುಂಬಿಯೆನಿಕ್ಕುಂ' ಎಂದು ಅಭಿಧಾನವಸ್ತುಕೋಶದಲ್ಲಿ ನಾಗವರ್ಮನು ಹೇಳಿದ್ದಾನೆ. ಕನ್ನಡದ ಇಂದಿನ ಕುಡುವರು (ಒಕ್ಕಲರು), ಮಹಾರಾಷ್ಟ್ರದ ಕುಳುಂಬಿಗಳು[೨೦] ಮತ್ತು ಗುರ್ಜರದೇಶದ ಕುಣಬಿಗಳು ಅಂದಿನ ರಟ್ಟರ ಪೀಳಿಗೆಯವರೆಂದೆ ಹೇಳಬಹುದು. 'ಕುಣಬಿ ಮಾಜೂನ ಮರಾಠಾ ಹೋತೋ' (ಕುಳುಂಬಿ-ಕುಟುಂಬಿಯು ಮಲೆತು ಎಂದರೆ ಬಲಿಷ್ಠನಾಗಿ ಅವನೇ ಮರಾಠನೆಂದೆನಿಸಿಕೊಳ್ಳುತ್ತಾನೆ.) ಇದೊಂದು ಮರಾಠಿಯೊಳಗಿನ ಗಾದೆಯ ಮಾತು. ಈ ಗಾದೆಯಿಂದ ಮರಾಠರಲ್ಲಿ ಕುಟುಂಬಿಗಳು (ರಠಿಕರು) ಉಂಟೆಂದು ಸ್ಪಷ್ಟವಿದೆ. ಆದರೆ, ಕಾಲಪ್ರವಾಹದಲ್ಲಿ ಹರಿಯುತ್ತ ಹೋಗಿ, ಪರಿಸ್ಥಿತಿಗೆ ಅನುಸರಿಸಿ ವೇಷ-ಭಾಷೆಗಳಲ್ಲಿ ಬದಲಾವಣೆಗಳಾಗಿ ಒಬ್ಬರಿಗೊಬ್ಬರು ಗುರುತು ಮರೆತಿದ್ದಾರೆ. ಹತ್ತುಗೆ ಹೊಂದಿಕೆಗಳು ಇಲ್ಲದಂತೆ ಆಗಿವೆ. ಆದರು ಮೂಲದಲ್ಲಿ ಇದು ಒಂದೇ ಜನಾಂಗ. ಮಹಾರಾಷ್ಟ್ರ ಮತ್ತು ಗುಜರಾತಿನಲ್ಲಿಯ (ಸ್ಟೆನ್‌ಕೊನೊ ಅವರು ಹೇಳುವ) 'Dravidian substrata' ಎಂದರೆ ಇದೇ. ಮರಾಠಿ ಮತ್ತು ಗುಜರಾತಿ ಭಾಷೆಯೊಳಗಣ 'ದ್ರಾವಿಡ' ಅಂಶಕ್ಕೆ ಕಾರಣೀ ಭೂತರಾಗಿರುವವರು ಇವರೇ.

ಪ್ರಾಚೀನತಮ ಉಲ್ಲೇಖಗಳಲ್ಲಿ ರಾಷ್ಟ್ರಿಕರೊಡನೆ ಭೋಜಕರ ಹೆಸರು ಬಂದೇ ಬರುವುದುಂಟು. (ಈವಾಗ ಋಗ್ವೇದದೊಳಗಿನ ಯದು-ತುರ್ವಸುಗಳ ಜೋಡಿಯ ನೆನೆಪಾಗದೆ ಇರದು.) ಅಶೋಕನ ೫ ಮತ್ತು ೧೩ನೆಯ ಶಾಸನಗಳಲ್ಲಿ ಇದನ್ನು ಕಾಣಬಹುದು. ರಾಷ್ಟ್ರಿಕ ಮತ್ತು ಭೋಜಕರ ಜೋಡು ಹೆಸರುಗಳ ಮೇಲಿಂದ ಅವೆರಡೂ ಸಮಾಜಗಳು ಕೂಡಿ ಬೆಳೆದುವು, ಹತ್ತಿರ ಹತ್ತಿರಿನವು ಎಂದು ಅರಿತುಕೊಳ್ಳಬಹುದಾಗಿದೆ. ಭೋಜಕರು ವಿದರ್ಭವನ್ನಾಳಿದರೆಂದು ಐತರೇಯ ಬ್ರಾಹ್ಮಣ, ಭಾರತ, ಪುರಾಣಾದಿಗಳಲ್ಲಿ ಸ್ಪಷ್ಟವಾದ ಉಲ್ಲೇಖಗಳಿವೆ.[೨೧] ಭೋಜಕರು ಯದುವಂಶಕ್ಕೆ ಸಂಬಂಧಪಟ್ಟವರೆಂದು ಪುರಾಣಗಳಿಂದ ತಿಳಿಯುತ್ತದೆ. ಇವರು ವರಾಡದಲ್ಲಿ ಆಳುತ್ತಿದ್ದರು. ಭೋಜರಿಗೆ ಸಮೀಪದಲ್ಲಿಯೆ ರಾಷ್ಟ್ರಿಕರು; ಆದಕಾರಣ ವರಾಡದ ನೆರೆಯ ಲಾಟವು ರಾಷ್ಟ್ರಿಕರ ನಾಡೆಂದು ಇನ್ನೂ ಒಂದು ಬಗೆಯಿಂದ ಕಂಡುಬಂದಿತು. ಡಾ. ವಿಮಲಚರಣ ಲಾ ಇವರು ಇವರನ್ನು ಕುರಿತು ಬರೆಯುವುದೇನೆಂದರೆ :

> The Rashtrikas who were almost associated with the Bhojas must have occupied the adjoining tracts, and it may be assumed that they were located in the very region where the present Marathas have their habitat.[೨೨]

ವಾಲ್ಮೀಕಿ ರಾಮಾಯಣದಲ್ಲಿ 'ವಿದರ್ಭಾನ್ ಋಷಿಕಾನ್ ಚೈವ' ಎಂದಿದೆ. ಇಲ್ಲಿ ವಿದರ್ಭರು ಎಂದರೆ ಭೋಜಕರಾಯಿತು. ಋಷಿಕರೆಂದರೆ ರಾಷ್ಟ್ರಿಕರೆಂದು ಹೇಳಬಹುದು. 'ರಿಷ್ಟಿಕ' ಎಂದೂ ಇವರಿಗೆ ಕರೆದುದುಂಟು. ಅಂತು ರಾಮಾಯಣದಲ್ಲಿ ಕರ್ನಾಟದ ಸ್ಪಷ್ಟವಾದ ಹೆಸರಿಲ್ಲದಿದ್ದರೂ ರಿಷ್ಟಿಕ (ಋಷಿಕ)ರ ರೂಪದಲ್ಲಿ 'ಲಾಟ-ಕರ್ನಾಟ'ಗಳ ಸಂಯುಕ್ತ ಉಲ್ಲೇಖವು ಬಂದಂತಾಯಿತು.

ಇವರೆಲ್ಲ ಮೂಲದಲ್ಲಿ ಆರ್ಯೇತರ ಜನಾಂಗವೆಂಬುದು ಮಹಾಭಾರತ (೧.೮೫; ೩೫.೩೩) ಮತ್ತು ಮತ್ಸ್ಯಪುರಾಣದ (೩೪.೩೦) ಶ್ಲೋಕಗಳಿಂದ ಚೆನ್ನಾಗಿ ವ್ಯಕ್ತವಾಗುತ್ತಿದೆ. ಇವರಿಗೆಲ್ಲ ಮ್ಲೇಚ್ಛರು, ಹೀನರು ಎಂದು ಹೇಳಿದ್ದಾಗಿದೆ. ದಕ್ಷಿಣದಂತೆ ಗುಜರಾತಿಗೆ ಬರಿ ಹೋಗಿಬಂದರೂ ಬ್ರಾಹ್ಮಣನು ಪ್ರಾಯಶ್ಚಿತ್ತವನ್ನು ತಕ್ಕೊಳ್ಳಬೇಕೆಂದು ವಿಷ್ಣುಪುರಾಣದಲ್ಲಿದೆ. 'ದಾಸಾಃ ಯದು ತುರ್ವಶಶ್ಚ' ಎಂದು ಋಗ್ವೇದ (೬೨.೧೦)ದಲ್ಲಿ ಹೇಳಿರುವುದನ್ನು ನೆನೆದರೆ ಯದು-ತುರ್ವಸುಗಳ ಸಂಬಂಧಿಗಳೇ ಆದ ರಾಷ್ಟ್ರಿಕ-ಭೋಜಕರೂ ದಾಸರು ಎಂದರೆ ದ್ರಾವಿಡವರ್ಗದವರೆಂಬುದು ನಿಶ್ಚಿತವಾಗಿ ಗೊತ್ತಾಗುತ್ತದೆ.

ಧಾರವಾಡ, ಬೆಳಗಾಂವಿ ಜಿಲ್ಲೆಯಲ್ಲಿ 'ಲಾಡ' ಎಂಬ ಅಡ್ಡಹೆಸರಿನವರು ಉಂಟು. ಲಾಡರು ಲಾಟದೇಶದವರೆಂದು ತಿಳುವಳಿಕೆಯಿದೆ. ಲಾಟ ಎಂಬುದರ ಕೊನೆಯ ಟಕಾರವು ಡಕಾರದಿಂದ ಬಂದಿರುವ ಸಂಭವವೆ ಹೆಚ್ಚಾಗಿದೆ. ಏಕೆಂದರೆ ಪ್ರಾಚೀನ ಶಾಸನಗಳಲ್ಲಿ 'ಲಾಳ' ಎಂಬ ಪ್ರಯೋಗವು ಹಲವೆಡೆಗೆ ಕಾಣಿಸಿಕೊಳ್ಳುತ್ತಿದ್ದು ಈ ಳಕಾರವು ಡಕಾರದ ಒಂದು ರೂಪವೆಂಬುದು ನಿಶ್ಚಿತವಿದೆ. 'ಜನ್ಮ' ಎಂಬ ಶಬ್ದವು ಹೆಣ್ಣುಮಕ್ಕಳ ಬಾಯಲ್ಲಿ ಜಲ್ಮ ಎಂಬ ರೂಪವನ್ನು ಹೊಂದುವುದು. 'ನೋಟೀಸು' ಲೋಟೀಸ ಎಂದು ಉಚ್ಚರಿಸಿದ್ದು ಕೇಳಲು ಸಿಕ್ಕುತ್ತದೆ. ಹೀಗೆ ನಕಾರವು ಲಕಾರವಾಗಿ ಪರಿಣಮಿಸುವುದನ್ನು ನೋಡಿದರೆ ಲಾಟ ಎಂಬುದು ಮೊದಲು 'ನಾಟ' ಎಂಬ ಹೆಸರಿನ ದೇಶವಾಗಿರಬೇಕೆಂದು ತೋರುತ್ತದೆ. ನಾಟ ಎಂಬುದು ನಾಡು ಶಬ್ದದ ಒಂದು ರೂಪವೆಂದು ಪುನ್ನಾಟ, ಕನ್ನಾಟಗಳ ಉದಾಹರಣದಿಂದ ನಿಶ್ಚಿತವಾಗಿದೆ. ಆದುದರಿಂದ 'ಲಾಟ' ಎಂದರೆ 'ನಾಡು' ಎಂದ ಹಾಗಾಯ್ತು. ನಾಡು, ಬೀಡು, ಪಟ್ಟಿ (ಹಟ್ಟಿ) ಎಂಬುವು ಪ್ರಾದೇಶಿಕ ಶಬ್ದಗಳು. ಲಾಟವೆಂಬುದು 'ನಾಡು' ಆಯ್ತು. ಇದಕ್ಕೆ ಹೊಂದಿಕೊಂಡಿರುವುದೇ 'ಹಾಟ(ಕ)' ದೇಶವು. ನಾಸಿಕದ ತ್ರ್ಯಂಬಕೇಶ್ವರನು ಹಾಟಕೇಶ್ವರನೆಂದು ಪ್ರಸಿದ್ಧಿಯಿದೆ.* (ಮರ) ಹಟ್ಟವು ಎಂದರೆ ವರಾಡವು ಇಲ್ಲಿಯೇ. ನಾಡು ಮತ್ತು ಹಟ್ಟಿ ಎಂಬ ಎರಡೂ ಹೆಸರುಗಳು ದ್ರಾವಿಡ ವರ್ಗದುವು. ಆದುದರಿಂದ, ಇವೆರಡೂ ಪ್ರದೇಶಗಳ ಮೊದಲಿಗರು ದ್ರಾವಿಡ ಪಂಗಡದವರೇ ಇರಬೇಕೆಂದು ತಾನೆ ಸಿದ್ಧವಾಗುತ್ತಲಿದೆ.

ಸಂಗೀತದಲ್ಲಿ ಅನೇಕ ರಾಗಗಳಿಗೆ ಒಂದೊಂದು ದೇಶದ ಹೆಸರಿದೆ. ತಿಲಂಗ, ಕನ್ನಡ, ವರಾಳಿ (ವರಾಡ), ಅರಬಿ ಮೊದಲಾದವು ಇದಕ್ಕೆ ದೃಷ್ಟಾಂತ. ಇದರಂತೆ 'ನಾಟ' ಎಂಬುದೊಂದು ರಾಗವುಂಟು. 'ಲಾಟ', 'ರಾಟ' ಅಥವಾ 'ರಾಠ' ಈ ಬಗೆಯ ಹೆಸರು ರಾಗಮಾಲಿಕೆಯಲ್ಲಿ ಎಲ್ಲಿಯೂ ಕೇಳಬರುವುದಿಲ್ಲ. 'ನಾಟ' ಎಂಬ ರಾಗದ ಹೆಸರಿನ ಮೇಲಿಂದ ಅದು ಆವುದೊಂದು ದೇಶದ ಮೇಲಿಂದ ಬಂದ ಹೆಸರಾಗಿರಬೇಕೆಂಬುದರಲ್ಲಿ ಸಂದೇಹವಿಲ್ಲ. ಹಾಗಾದರೆ ಈ ದೇಶವು ಆವುದು? ಲಾಟವೇ ನಾಟವಾಗಿರುವ ಸಂಭವವು ಹೆಚ್ಚಾಗಿದೆ. ನಾಟ ಎಂಬುದು ನಾಡು ಶಬ್ದದಿಂದಾದ ಒಂದು ರೂಪವೆಂಬುದು ಕಂಡಿತ. 'ನಾಡು' (ನಾಟ) ಎಂಬ ಈ ದೇಶದ ಮೂಲನಿವಾಸಿಗಳೇ ನಾಟರು, ನಾಡವರು. 'ನಾಟಃ ಕರ್ಣಾಟದೇಶೇ' ಎಂದು ಶಬ್ದರತ್ನಾಕರವು ಹೇಳುತ್ತದೆ.[೨೩] ನಟರು (ನಾಟರು), ವ್ರಾತ್ಯರು, ಪತಿತರೆಂದು ಸ್ಮೃತಿಗಳಲ್ಲಿ ಹೇಳಿದೆ. ಆದುದರಿಂದಲೆ, ನಟರ ನಾಡಿಗೆ-ಲಾಟ, ಸೌರಾಷ್ಟ್ರದೇಶಗಳಿಗೆ ಬಂದ ಬ್ರಾಹ್ಮಣನು ಪ್ರಾಯಶ್ಚಿತ್ತವನ್ನು ಪಡೆಯಬೇಕಾಗುತ್ತಿರಬೇಕಲ್ಲವೆ? ನಟ (ನಾಟ)ರೇ ನಾಡವರು-ರಾಷ್ಟ್ರಿಕರು ಎಂಬ ವಿಚಾರವು ಹಿಂದೆ ಬಂದುಹೋಗಿದೆ (ಪು. ೯೨-೯೮). ಕನ್ನಡ ನಾಟರು-ಎಂದರೆ ನಾಡವರು (ರಾಷ್ಟ್ರಿಕರು) ಸೌರಾಷ್ಟ್ರದ ವರೆಗೆ ಇದ್ದುದರಿಂದಲೆ ಒಮ್ಮೆ ದ್ವಾರಕೆಯ ವರೆಗಣ ನಾಡು ಕುಂತಲವೆಂದು ಎಣಿಸಲ್ಪಡುತ್ತಿತ್ತು.

ಈ ತೆರನಾಗಿ ನಾಟ (ಲಾಟ)-ಕರ್ಣಾಟಗಳ ಅಖಂಡ ಸಂಬಂಧವುಂಟೆಂಬ ಸಂಗತಿಯು ಬೇರೆ ಬೇರೆ ದೃಷ್ಟಿಗಳಿಂದ, ಎಂತು ವಿಮರ್ಶಿಸಿದರೂ ದೃಢವಾಗುತ್ತಲೆ ಇದೆ. ಜೈನ ಮತ್ತು ವೀರಶೈವ ಪರಂಪರೆಗಳೂ

---

* ಕರ್ಣಾಟದ ವೀರಕ್ಷತ್ರಿಯರು ೪ ಮತ್ತು ೫ನೆಯ ನೆಲೆಗಳಲ್ಲಿ ಈ ವಿಚಾರಗಳು ವಿಸ್ತೃತವಾಗಿ ಚರ್ಚೆಗೆ ಒಳಗಾಗಿವೆ. ಆ ಭಾಗಗಳನ್ನು ಆಸಕ್ತರು ಗಮನಿಸಬಹುದು (ಸಂ.)

ರಾಜಕೀಯ ಸಂಬಂಧಗಳೂ ನಾಟ-ಕರ್ಣಾಟಗಳ (ಒಂದು ಕಾಲಕ್ಕಿದ್ದ) ಅಭಿನ್ನ ಸ್ಥಿತಿಯನ್ನೇ ಬೆಳಕಿಗೆ ತರುತ್ತಲಿವೆ. ಮಹಾ ವೀರನ ಧರ್ಮವು ಲಾಟ-ಕರ್ಣಾಟಗಳಲ್ಲಿಯೇ ಏಕೆ ಇಷ್ಟು ಊರ್ಜಿತ ಸ್ಥಿತಿಗೆ ಬಂದಿರಬೇಕೆಂಬುದೊಂದು ವಿಚಾರಾರ್ಹವಾದ ವಿಷಯ. ಮಹಾವೀರನು ನಾಟ (ನಾಡವ) ರಲ್ಲಿ ಅವತರಿಸಿದ ಒಬ್ಬ ಬಂಟನೋ ತಿಳಿಯದು. ಬೌದ್ಧಗ್ರಂಥಗಳಲ್ಲಿ ಮಹಾವೀರನಿಗೆ 'ನಾಟ-ಪುತ್ತ' ಎಂದು ಹೇಳಿದ್ದುದರ ವಿಶೇಷವೇನೊ ಇನ್ನೂ ಬೆಳಕಿಗೆ ಬರಬೇಕಾಗಿದೆ. ಇದನ್ನು ಕುರಿತು, ಡಾಕ್ಟರ ವಿಂಟರೆನಿಟ್ಜರೂ ಇದನ್ನು ಬಿಡಿಸಿ ಹೇಳಿಲ್ಲ.[೨೪]

Budhist texts frequently mention Nigantha Nattaputta.

ಇದರಲ್ಲಿ ನಿಗಂಥ ಎಂದರೆ ಬಂಧಮುಕ್ತ ಎಂದರ್ಥವಾಯ್ತು. ಆದರೆ ಮಹಾವೀರನು 'ನಾಟಪುತ್ತ'ನು ಹೇಗೆ ಎಂಬುದು ಗೊತ್ತಾಗುವುದಿಲ್ಲ. ಇರಲಿ, ಲಾಟ-ಕರ್ಣಾಟದಲ್ಲಿ ಹಿಂದಕ್ಕೆ ಜೈನಧರ್ಮವು ವಿಶೇಷ ಪ್ರಚಾರದಲ್ಲಿದ್ದಿತು. ಲಾಟ-ಕರ್ಣಾಟಗಳು ನಾಟರ ಆಗರ. ರಾಷ್ಟ್ರಕೂಟ ರಾಜರು, ವಿಶೇಷವಾಗಿ ಗಂಗರು ಜೈನಧರ್ಮಕ್ಕೆ ಬಹಳ ಪ್ರೋತ್ಸಾಹವನ್ನು ಕೊಟ್ಟರು. ಲಾಟ-ಕರ್ಣಾಟಗಳ ಸಂಬಂಧಗಳು ಈಗ ಕಡಿದು ಹೋಗಿದ್ದರೂ ಶ್ರವಣಬೆಳಗೊಳ, ಮೂಡುಬಿದಿರೆ, ಕಾರ್ಕಳ ಮೊದಲಾದ ಸ್ಥಳಗಳು ಗುಜರಾತಿನ ಸಾವಿರಾರು ಜೈನರನ್ನು ಈಗಲೂ ಆಕರ್ಷಿಸುತ್ತಲಿವೆ. ಕನ್ನಡ ವೀರಶೈವರ ಮಹಾಪುರುಷರಲ್ಲಿ ೧೨ನೆಯ ಶತಮಾನದ 'ಉದ್ಭಟದೇವ'ನೆಂಬ ಘೂರ್ಜರಾಧಿಪತಿಯ ಹೆಸರು ಇರಲು ಕಾರಣವೇನು? ಸೌರಾಷ್ಟ್ರದ ಸೋಮನಾಥನು ದಕ್ಷಿಣಕ್ಕೆ ಬಂದು, ಅದೂ ಕರ್ಣಾಟದಲ್ಲಿಯೇ ಪುಲಿಗೆರೆ, ಸೋಮನಾಥಪುರಗಳಲ್ಲಿ ನೆಲೆಸಿದನು. ಏಕೆ?[೨೫]

ಲಾಟದೇಶದಲ್ಲಿದ್ದ ಪ್ರಾಚೀನ ಬ್ರಾಹ್ಮಣರ ಕೆಲವು ಹೆಸರುಗಳು ನೆನಪು ಇಡುವಂತಿವೆ. ಉದಾಹರಣಾರ್ಥವಾಗಿ 'ರಾಣಪಭಟ್ಟ ಸುತಾಯ ಪ್ರಭಾಕರ ಭಟ್ಟಾಯ'; 'ಶ್ರೀವೆನ್ನಪಭಟ್ಟ ಸುತಾಯ ಸಿದ್ಧಪಭಟ್ಟಾಯ'; 'ಮಹಾದೇವಯ್ಯ ಸುತಾಯ ನಾಗಮಾರ್ಯಾಯ'. ಜಯಸಿಂಹನು ತನ್ನ ಅಣ್ಣ ಮೊದಲನೆಯ ವಿಕ್ರಮಾದಿತ್ಯನಿಂದ ಗುಜರಾತ ಪಡೆದನು. ಈತನ (ಜಯಸಿಂಹನ) ೨ನೆಯ ಮಗನ ಹೆಸರು 'ಮಂಗಲರಸರಾಜ!' ಇನ್ನು ಊರ ಹೆಸರುಗಳು: ಬಾರಡ ಪಲ್ಲಿಕಾ (ಬಾರಡೋಲಿ), ಕುಂಡೀರವಳ್ಳಿಕಾ ಈ ಊರುಗಳ ಹೆಸರಿನ ಕೊನೆಗೆ ಪಲ್ಲಿಕಾ ಎಂದರೆ 'ಪಳ್ಳಿ' (ಹಳ್ಳಿ) ಎಂಬ ಕನ್ನಡ ಮಾತು! ೨ನೆಯ ಧ್ರುವನ ಬಡೋದೆಯ ತಾಮ್ರಪಟದಲ್ಲಿ 'ಪೂಸಿಲಾವಳ್ಳಿ' (ತ) ಸಿಲಾವಳ್ಳಿ, ವಿನ್‌ಹುಚವಳ್ಳಿ ಎಂಬೀ ಬಗೆಯ ಹೆಸರಿನ ಹಳ್ಳಿಗಳಿವೆ! ಶಾಸನದ ಕೊನೆಗೆ ಧ್ರುವರಾಜನ ಒಪ್ಪ (ಸಹಿ) ಕನ್ನಡದಲ್ಲಿ ಇದೆ. ಲಾಟದೇಶದಲ್ಲಿ ಸಂಪೂರ್ಣವಾಗಿ ಕನ್ನಡ ವಾತಾವರಣವು ಸುಮಾರು ಹನ್ನೆರಡನೆಯ ಶತಮಾನದ ವರೆಗೂ ಇದ್ದುದು ಅನುಭವಕ್ಕೆ ಬರುತ್ತದೆ.

ರಾಷ್ಟ್ರಿಕ-ಭೋಜಕರು ಒಂದು ಜನಾಂಗದಂತೆ ನಡೆದವರು; ನಾಟ-ಹಾಟಗಳಲ್ಲಿ ಕೂಡಿ ಬೆಳೆದವರು. ಆದುದರಿಂದ, ನಾಗಪೂರ ವರ್ಹಾಟಗಳಲ್ಲಿ ಪ್ರಾಚೀನಕಾಲದಲ್ಲಿ ರಾಷ್ಟ್ರಿಕರು-ರಾಷ್ಟ್ರಕೂಟರು ಆಳಿದರೆಂದು ಶಾಸನಗಳಿಂದ ಕಂಡುಬಂದರೆ ಆಶ್ಚರ್ಯಪಡುವ ಕಾರಣವಿಲ್ಲ. ಕರ್ಣಾಟದ ಉತ್ತರದ ಮೇರೆಯು ದಕ್ಷಿಣಕ್ಕೆ ಸರಿದಂತೆ ಉತ್ತರದ ಕನ್ನಡಿಗರೂ ದಕ್ಷಿಣಕ್ಕೆ ಬಂದುದು ಅನುಭವಕ್ಕೆ ಬಾರದೆ ಇರದು. ಆದರೆ, ಈ ವಿಷಯದಲ್ಲಿ, ಕನ್ನಡಿಗರ ಈ ಚಲನವಲನಗಳ ಸರಿಯಾದ ಕಲ್ಪನೆಯು ಇಲ್ಲದ ಡಾ. ಆಳತೇಕರರು ಸ್ವಲ್ಪ ದಿಗಿಲುಗೊಂಡಿದ್ದಾರೆ. 'ಮಳಖೇಡಿನ ರಾಷ್ಟ್ರಕೂಟರ ಪೂರ್ವಜರು ವರ್ಹಾಟದಲ್ಲಿ ಆಳಿದರೆಂದು ಶಾಸನಗಳು ಹೇಳುತ್ತವೆ. ಒಂದು ಕಾಲದಲ್ಲಿ ವರ್ಹಾಟವೇ ರಾಷ್ಟ್ರಕೂಟರ ತವರ್ಮನೆಯಿದ್ದಂತೆ ಕಂಡುಬರುತ್ತದೆ. ರಾಷ್ಟ್ರಕೂಟರಂತು ಕನ್ನಡಿಗರು. ಆದರೆ, ವರ್ಹಾಟದಲ್ಲಿ ಕನ್ನಡಿಗರು ಎಲ್ಲಿಂದ ಬರಬೇಕು?' ಎಂಬೀ ಬಗೆಯ ಸಂದೇಹಕ್ಕೆ ಒಳಗಾಗಿ ಡಾ. ಆಳತೇಕರರು ಪೇಚಾಡುತ್ತಿರುವುದು ಗೋಚರವಾಗುತ್ತಿದೆ.

> We have shown already how the main line, that was later established at Malkhed, has to be connected with the Rashtrakuta family ruling at Elichpur (Berar)....... If the home of the Malkhed Rashtrakutas were in Maharashtra it is difficult to explain how

> they could be using the script of Kamataka as their mother script.....but if the family had originally belonged to Maharashtra, its members deputed to rule over southern Gujarat (ಲಾಟ) could not be seen using for their sign-manual a script that was current neither in S. Gujarat, nor in Maharashtra but in Karnatak.
> If we assume with Fleet and Vaidya that the home of the Malkhed Rashtrakutas was either in Maharashtra or somewhere in central India, we cannot explain how they were using the Canarese script.[೨೬]

ಡಾ. ಅಳತೇಕರರು ಈ ತೊಡಕಿನೊಳಗಿಂದ ಪಾರಾಗಲು ಒಂದು ಯುಕ್ತಿಯನ್ನು ಹೇಳುತ್ತಾರೆ. ಕರ್ಣಾಟದ ರಾಷ್ಟ್ರಕೂಟರು ವರ್ಹಾಟಕ್ಕೆ ಬಂದು ಆಳಿ ಅಲ್ಲಿ ತಮ್ಮ ಒಂದು ಶಾಖೆಯನ್ನು ಸ್ಥಾಪಿಸಿರಬೇಕು, ಎಂಬುದೇ ಡಾ. ಅಳತೇಕರರು ಮೇಲಣ ಶಂಕೆಗೆ ಹೇಳುವ ಸಮಾಧಾನ.

> This family may have later migrated to Elichpur or some other place near by in Berar .... and the immigration is quite possible.

ಆದರೆ, ಡಾ. ಅಳತೇಕರರು ಹೇಳಿದ ಈ ಸಮಾಧಾನವು ಬಹಳ ಅಸಮಾಧಾನಕರವಾಗಿದೆ. ಗ್ರಿಯರಸನ್ನರ ಅನುಭವವು ತೀರ ಭಿನ್ನವಾಗಿದೆ. ರಾಷ್ಟ್ರಕೂಟರು ಕನ್ನಡಿಗರು (ದ್ರಾವಿಡ ಪಂಗಡದವರು) ಎಂಬ ಬಗ್ಗೆ ಡಾಕ್ಟರ ಅಳತೇಕರರಿಗೆ ಸಂದೇಹವೆ ಇಲ್ಲವೆಂಬುದು ಅವರ ಗ್ರಂಥದಿಂದಲೆ ಗೊತ್ತಾಗುತ್ತದೆ. ಕನ್ನಡಿಗರು (ಡಾ. ಗ್ರಿಯರಸನ್ನರು ಹೇಳುವಂತೆ ದ್ರಾವಿಡರು) ಐತಿಹಾಸಿಕ ಕಾಲದಲ್ಲಿ ಉತ್ತರದ ನಾಡುಗಳಿಗೆ ಹೋಗಿ ಅಲ್ಲಿ ಒಕ್ಕಲಾಗಿ ತಮ್ಮ ತನವನ್ನು ಕಾಯ್ದುಕೊಂಡುದು ಕಂಡುಬರುವುದೇ ಇಲ್ಲ. ಉತ್ತರಕ್ಕೆ ಹೋದ ಕನ್ನಡಿಗರು ಅಲ್ಲಿಯ ಜನಾಂಗಗಳಲ್ಲಿ ಒಂದುಗೂಡಿ ಅಲ್ಲಿಯ ಭಾಷೆಗಳನ್ನೇ ಸ್ವೀಕರಿಸಿದ್ದುದು ಐತಿಹಾಸಿಕ ಆಧಾರಗಳಿಂದ ಸಿದ್ಧವಾದ ಸಂಗತಿ. ಈಗಲೂ ಇದೇ ಸ್ಥಿತಿಯಿದೆ. ಮಹಾರಾಷ್ಟ್ರ, ಗುಜರಾತಗಳ ಕಡೆಗೆ ಹೋದ ಕನ್ನಡಿಗರು ಕನ್ನಡವನ್ನು ಮರೆತುಬಿಡುವುದರಲ್ಲಿಯೇ ಇಂದು ಹೆಮ್ಮೆಬಡುತ್ತಾರೆ. ಬಂಗಾಳದಲ್ಲಿ ಆಳಿದ ಸೇನರಾಜರು ತಾವು 'ಕರ್ಣಾಟ ಕ್ಷತ್ರಿಯರ'ರೆಂದು ನೆನಪಿಟ್ಟುಕೊಂಡುದು ನಿಜ; ಆದರೆ ಕನ್ನಡವನ್ನು ನೆನಪಿಟ್ಟಂತೆ ಇಲ್ಲ. ಲಕ್ಷ್ಮಣಸೇನನು ತನಗೆ 'ರಾಯೇ' ಲಕ್ಷ್ಮಣ ಸೇನನೆಂದುಕೊಂಡಿದ್ದಾರೆ.[೨೭] 'ರಾಯೇ' (ರಾಜೇ) ಎಂದು ಬರೆವುದು ಮಹಾರಾಷ್ಟ್ರ ಪದ್ಧತಿ. ಡಾ. ಗ್ರಿಯರಸನ್ನರು Linguistic Survey of India ಎಂಬ ಗ್ರಂಥದ ಮುನ್ನುಡಿಯಲ್ಲಿ ಹೇಳಿರುವಂತೆ ಉತ್ತರದಲ್ಲಿ ಎಲ್ಲಿಯಾದರೂ ಕನ್ನಡ ಮೊದಲಾದ ದ್ರಾವಿಡ ವರ್ಗದ ಭಾಷೆಯನ್ನಾಡುವವರ ಪಂಗಡಗಳು ಇದ್ದರೆ, ಅವರು ದಕ್ಷಿಣದಿಂದ ಅಲ್ಲಿ ಒಕ್ಕಲಾಗಲು ಬಂದವರೆಂದು ಭಾವಿಸುವುದಕ್ಕಿಂತಲೂ, ಪೂರ್ವಕಾಲದಲ್ಲಿ ಆ ಭಾಗದಲ್ಲಿದ್ದ ದ್ರಾವಿಡ ವರ್ಗದ ಅವಶೇಷಗಳೆಂದು ಗ್ರಹಿಸುವುದೇ ಲೇಸು. ಬ್ರಾಹುಯೀ ಭಾಷೆಯ ಉದಾಹರಣವು ಸಾಕು.

ಆದುದರಿಂದ, ಡಾ. ಅಳತೇಕರರು ಹೇಳುವಂತೆ ರಾಷ್ಟ್ರಕೂಟರು ವರ್ಹಾಡಕ್ಕೆ ಹೊರಗಿನವರಲ್ಲ. ಲಾಟ-ವರ್ಹಾಟದಿಂದ ನೀಲಗಿರಿಯ ವರೆಗಣ ನಾಡಿನಲ್ಲಿ ಹಬ್ಬಿಕೊಂಡು ಈ ನಾಡವರೆ ರಾಷ್ಟ್ರಿಕರು-ರಾಷ್ಟ್ರಕೂಟರು. ಆರ್ಯರ ವರ್ಚಸ್ಸಿನಲ್ಲಿ ಸಿಕ್ಕು ಲಾಟ-ವರ್ಹಾಟಗಳಲ್ಲಿ ಕನ್ನಡವು ಈಗ ಹೇಳಲು ಹೆಸರಿಲ್ಲದಂತಾಗಿದ್ದರೂ ಒಂದು ಕಾಲಕ್ಕೆ ಅದು ಕನ್ನಡರ ನೆಲೆವೀಡಾಗಿದ್ದಿತು ಎಂಬುದು ಸುಳ್ಳಲ್ಲ. ಡಾ. ಅಳತೇಕರರಿಗೆ ಈ ನಿಜಸ್ಥಿತಿಯ ಕಲ್ಪನೆಯಿಲ್ಲದುದರಿಂದ ಇವರು 'ಕನ್ನಡ ಮನೆಮಾತಾಗಿರುವ ರಾಷ್ಟ್ರಕೂಟರು ವರ್ಹಾಟದಲ್ಲಿ ಹೇಗೆ?' ಎಂದು ಗೊಂದಲದಲ್ಲಿ ಬಿದ್ದರುವರು! ಲಾಟದೇಶದಲ್ಲಿದ್ದ ರಾಷ್ಟ್ರಕೂಟರು (ಚಲುಕ್ಯರೂ) ಹೊರನಾಡಿಗೆ (ಹೊರನಾಡಿನಿಂದ)

ಬಂದು ನೆಲೆಸಿದುವರಲ್ಲ. ಲಾಟ-ವರ್ಹಾಟಗಳ ಈ ಜನಗಳ ಬೀಡು. ಈ ವಿಷಯದಲ್ಲಿ ಡಾ. ಫ್ಲೀಟರ ಅಭಿಪ್ರಾಯವೇ ಸರಿ. ದಕ್ಷಿಣದಿಂದ ಉತ್ತರದಲ್ಲಿ ಬಂದು ನಿಂತು ತಮ್ಮ ಭಾಷೆ, ಲಿಪಿ, ಸಂಸ್ಕೃತಿಗಳ ಬಗ್ಗೆ ಹಟತೊಟ್ಟು ಅದಕ್ಕೇ ಅಂಟಿಕೊಂಡು ಅದನ್ನೇ ಬಳಕೆಯಲ್ಲಿ ತಂದ ಕನ್ನಡಿಗರ ಒಂದು ಉದಾಹರಣವೂ ಹಳೆಯ ಇತಿಹಾಸದಲ್ಲಿ ದೊರೆಯುವುದು ಅಸಾಧ್ಯ. ಬೇರೆಬೇರೆ ದೃಷ್ಟಿಯಿಂದ ಮೇಲೆ ಸಿದ್ಧಪಡಿಸಿರುವಂತೆ ಲಾಟ-ವರಾಟಗಳು ಮೂಲಕನ್ನಡಿಗರಿಗೆ ಸಂಬಂಧಪಟ್ಟುವುಗಳಿದ್ದುದರಿಂದಲೆ, ಅಲ್ಲಿಯ ರಾಷ್ಟ್ರಕೂಟಾದಿಗಳು ಅಲ್ಪ. ಸ್ವಲ್ಪಾದರೂ ಕನ್ನಡಕ್ಕೆ ಸಂಬಂಧಪಟ್ಟವರಂತೆ ನಡೆದುಕೊಂಡಿದ್ದಾರೆಂದು ಭಾವಿಸುವುದೇ ಹೆಚ್ಚು ಯುಕ್ತಿಯುಕ್ತವಾಗಿದೆ. ಏಕೆಂದರೆ ಹೊರಗಿನಿಂದ ಹೋಗಿ ನೆಲೆಸಿ ತಮ್ಮ ಕನ್ನಡವನ್ನು ಪ್ರಯತ್ನಪೂರ್ವಕವಾಗಿ ಕಾಯ್ದುಕೊಂಡ-ಒಂದೂ ಉದಾಹರಣ ವಿಲ್ಲ. ಬಂಗಾಳಕ್ಕೆ ಗುಜರಾತಿನಿಂದ ಅನೇಕ (ನಾಗರ) ಬ್ರಾಹ್ಮಣರು ಹೋಗಿ ನೆಲೆಸಿದರೆಂದು ಡಾ. ದೇವದತ್ತ ಭಂಡಾರಕರರು ವಿಶದಪಡಿಸಿದ್ದಾರೆ. ಇವರೆಲ್ಲ ಲಾಟದಿಂದ ಹೋದವರು. ಬಂಗಾಳದಲ್ಲಿಯೂ 'ಲಾಟ', 'ರಾಢ' ಎಂಬ ಹೆಸರು ತಲೆದೋರಲು ಇವರೇ ಕಾರಣರೊ ತಿಳಿಯದು.

> It is difficult to avoid the conlcusion that the Nagar (Lat) Brahmins were settled in Bengal and Orissa. In fact these Brahmins were not the only caste from Lat that were settled in Bengal about that time (900 A. D.).

ಶ್ರೀ ಜೋಗೇಂದ್ರಚಂದ್ರ ಘೋಷರ ಅಭಿಪ್ರಾಯದಂತೆ ಬಂಗಾಳದಲ್ಲಿ ೧೧ನೆಯ ಶತಕದಲ್ಲಿ ಕನ್ನಡಿಗರ ಕೊರತೆ ಇದ್ದಿಲ್ಲ. There was no dearth of them. ಬಂಗಾಳದಲ್ಲಿ ಕರ್ಣಾಟ ಕ್ಷತ್ರಿಯರಂತೆ ಕನ್ನಡ ಬ್ರಾಹ್ಮಣರೂ ಇದ್ದರೆಂದು ಬರೆದಿದ್ದಾರೆ.[೨೮]

ಪಾಲರೆಂಬ ರಾಜರು ಬಂಗಾಳಿನಲ್ಲಿ ಆಳಿದರು. ಈ ರಾಜರಲ್ಲಿ ಧರ್ಮಪಾಲನನ್ನು ಬಿಟ್ಟರೆ ಉಳಿದ ಪ್ರತಿಯೊಬ್ಬ ರಾಜನ ಕಾಲದಲ್ಲಿಯೂ 'ಲಾಟ-ಕರ್ಣಾಟ' ದಿಂದ ಜನಗಳು ಬಂದು ಬಂಗಾಳದಲ್ಲಿ ನೆಲೆಸಿದ ಉಲ್ಲೇಖಗಳಿವೆ.[೨೯] ಆದರೆ, ಇವರಲ್ಲಿ ಯಾರೂ ಕನ್ನಡಲಿಪಿಯನ್ನು ಇಟ್ಟುಕೊಂಡಿಲ್ಲ.

ಬಂಗಾಳದಲ್ಲಿ ಸೇನರೆಂಬ ಕರ್ಣಾಟ ಕ್ಷತ್ರಿಯರು ಆಳಿದಂತೆ ಮಿಥಿಲೆಯಲ್ಲಿ ನಾನ್ಯದೇವನೆಂಬ ರಾಜನು ಕರ್ಣಾಟದವನು ಆಳಿದನು. ಈತನು ತಾನು ಕರ್ಣಾಟಕುಲಭೂಷಣನೆಂದುಕೊಂಡಿದ್ದಾನೆ. ಒಂದು ಶಾಖೆ ನೇಪಾಳಿನಲ್ಲಿಯೂ ಆಳಿತು. ಬಾದಾಮಿ ಎರಡನೆಯ ಪುಲಿಕೇಶಿಯ ತಮ್ಮನಾದ ವಿಷ್ಣುವರ್ಧನನು ಚೊಕ್ಕಕನ್ನಡದಲ್ಲಿ ಹುಟ್ಟಿ ಬೆಳೆದವನು. ರಾಜಮಹೇಂದ್ರ (ಆಂಧ್ರ)ದಲ್ಲಿ ಹೋಗಿ ಅಣ್ಣನ ಪುಣ್ಯದಿಂದ ಅರಸನಾದನು. ಈ ಚಲುಕ್ಯ ಮನೆತನವೆ ತೆಲಗು ಸಾಹಿತ್ಯಕ್ಕೆ ಉತ್ತೇಜನ ಕೊಟ್ಟಿತು. ಚಲುಕ್ಯರ ಇನ್ನೊಂದು ಶಾಖೆ ಗುಜರಾತಿನಲ್ಲಿ (ಲಾಟ) ಆಳಿತು, ಗುಜರಾತಿ ಭಾಷೆಗೆ ಪೋಷಿಸಿದವರೇ ಇವರು! ಕರ್ಣಾಟದಿಂದ ಕನ್ನಡ ಸಾಹಿತಿಗಳನ್ನು ಒಯ್ದು ಪೋಣೆಸಿದವರಾರೂ ಇಲ್ಲ. ಆದರೆ, ಇವರಲ್ಲಿ ಯಾರೂ ಕನ್ನಡಭಾಷೆ, ಲಿಪಿಗಳನ್ನು ಅಲ್ಲಿ ಜೀವಂತವಾಗಿ ಇರಿಸಲಿಕ್ಕೆ ಹವಣಿಸಿದ್ದುದೂ ಕಂಡುಬರುವುದಿಲ್ಲ. ಬಂಗಾಳಿನಲ್ಲಿ ೧೧ನೆಯ ಶತಮಾನದ ಸುಮಾರಿಗೆ ತುಂಬ ಜನಗಳು ಕರ್ಣಾಟದಿಂದ ಹೋಗಿ ಬೇರೂರಿ ಇದ್ದುದು ನಿಶ್ಚಿತವಾಗಿ ಗೊತ್ತಾಗುತ್ತದೆ. ಒಬ್ಬ ಬಂಗಾಳಿ ಸಂಶೋಧಕರೇ ಬರೆಯುವುದೇನೆಂದರೆ:

> The Karnatakas had gained a *prominent footing* in the eastern part of northern India towards the close of the eleventh century.[೩೦]

ಒಳ್ಳೆ ಪ್ರತಿಷ್ಠಿತ ಸ್ಥಾನವು ಸಿಕ್ಕಿದರೂ ಬಂಗಾಳ, ಮಿಥಿಲಾ, ನೇಪಾಳ ಮೊದಲಾದ ಯಾವನಲ್ಲಿಯೂ ತಮ್ಮ ಲಿಪಿ, ಅಥವಾ ತಮ್ಮ ಭಾಷೆಯ ನೆನೆಪಿಡದ ಕನ್ನಡಿಗರು ಲಾಟದಲ್ಲಿ ಮಾತ್ರ ಮರೆಯಲಿಲ್ಲವೆಂದರೆ ಸರಿಕಾಣುವುದೆ? ಆದುದರಿಂದ ಇಲ್ಲಿ ಡಾ. ಗ್ರಿಯರಸನ್ನರು ಹಲವು ವರುಷಗಳ ಸೂಕ್ಷ್ಮವಾದ ನಿರೀಕ್ಷಣ,

ತುಲನಾತ್ಮಕ ವಿಚಾರ ವಿಮರ್ಶೆಗಳ ತರುವಾಯದಲ್ಲಿ ಕಂಡುಹಿಡಿದ ಸಾಮಾನ್ಯ ನಿಯಮವೆ ಸರಿಯೆಂದು ಹೇಳಬೇಕಾಗುತ್ತದೆ. ದಕ್ಷಿಣದಿಂದ ಉತ್ತರಕ್ಕೆ ಹೋಗಿ ನೆಲೆಸಿದ ದ್ರಾವಿಡವರ್ಗದ ಜನಗಳು ತಮ್ಮ ಭಾಷೆಗೆ ಅಂಟಿಕೊಂಡು ನಿಲ್ಲುವುದಿಲ್ಲ. ಹಾಗೆ ಅಂಟಿದ್ದುದು ಕಂಡರೆ ಅದು ಅವರ ನಾಡಾಗಿದೆಯೆಂದು ಊಹಿಸಲು ಅಡ್ಡಿಯಿಲ್ಲ. ಈ ಮೊದಲು ಹೇಳಿದ ಕಾರಣಗಳಿಗಲ್ಲದೆ ಈ ಕಾರಣದಿಂದಲೂ ಲಾಟವು ಕನ್ನಡ ನಾಟರ-ನಾಡವರ ಸೀಮೆ ಎಂದು ಕಂಡುಬರುತ್ತಿದೆ.

ಡಾ. ಅಳತೇಕರರು ಬಡೋದೆ, ಗ್ವಾಲೇರಗಳ ಸಂಸ್ಥಾನಿಕರ ಹೋಲಿಕೆಯನ್ನು ಹೇಳಿ, ಇವರು ಹೇಗೆ ಮಹಾರಾಷ್ಟ್ರರಿಂದ ಹೊರಗೆ ಗುಜರಾತ, ಹಿಂದೀ ಪ್ರದೇಶಗಳಲ್ಲಿದ್ದರೂ ಮರಾಠಿಗೆ ಅಂಟಿಕೊಂಡಿರುವರೋ ಹಾಗೆಯೆ ರಾಷ್ಟ್ರಕೂಟರ ಲಾಟದಲ್ಲಿ ಕನ್ನಡಲಿಪಿಗೆ ಪ್ರಾಶಸ್ತ್ಯವನ್ನು ಕೊಟ್ಟಿರಬೇಕೆಂದು ತರ್ಕಿಸಲು ಹವಣಿಸಿದ್ದಾರೆ. ಆದರೆ, ಡಾ. ಅಳತೇಕರರಿಗೆ ಆರ್ಯ ಭಾಷಾವರ್ಗ ಮತ್ತು ದ್ರಾವಿಡಭಾಷಾವರ್ಗದ ಪ್ರಸರಣ-ಆಕುಂಚನಗಳ ಗುಟ್ಟು ಗೊತ್ತಿಲ್ಲದೆ ಇರುವುದರಿಂದ ಅವರು ಈ ಬಗೆಯ ತಪ್ಪು ತರ್ಕಸರಣಿಯ ಕೈಯಲ್ಲಿ ಸಿಕ್ಕುಬಿದ್ದಿರುವರು. ಮರಾಠನು ಹಿಂದೂದೇಶದ ಯಾವ ಮೂಲೆಯಲ್ಲಿಯೆ ಇರಲಿ, ತನ್ನ ನುಡಿಯನ್ನು ಬಿಡಲಾರ. ಗುಜರಾತಿ, ಹಿಂದಿಯ ಸ್ಥಿತಿಯೂ ಹೀಗೆಯೆ ಇದೆ. ನಮ್ಮಲ್ಲಿ ಪ್ರಾಂತಾಭಿಮಾನವು ಮಿತಿಮೀರಿದೆ ಎನ್ನುವ ಈ ಕಾಲದಲ್ಲಿಯೂ ಹಿಂದೀಭಾಷೆಗೆ ಇರುವ ಮರ್ಯಾದೆ, ಮಹತ್ತ್ವವು ಕನ್ನಡಕ್ಕಿಲ್ಲ! ನೃಪತುಂಗನು ಹೇಳುವ 'ಗೋದಾವರಿಯ ವರಂ' ಇದ್ದ ಕನ್ನಡವು ಕುಗ್ಗಿ ಕಿರಿದಾಗಲು ಕಾರಣವೇನು? ನಿಜಸ್ಥಿತಿಯು ಹೀಗಿರುವಾಗ ಲಾಟದಲ್ಲಿ ರಾಷ್ಟ್ರಕೂಟರು ಅಭಿಮಾನದಿಂದ ಕನ್ನಡ (ಲಿಪಿ) ಉಳಿಸಿದ್ದರೆಂದು ತರ್ಕಿಸುವುದು ಸ್ವಲ್ಪ ವಿಚಿತ್ರವೇ ಸರಿ. ತಿರುಳ್ಗನ್ನಡದ ಸೀಮೆಯಲ್ಲಿಯೇ ಯಾವ ಕನ್ನಡಿಗರಿಗೆ ತಮ್ಮ ಕನ್ನಡತನದ ಅರಿವು ಇದ್ದಿಲ್ಲವೊ (ಇದಕ್ಕಾಗಿ ೨ನೆಯ ಪ್ರಕರಣ ನೋಡಿ) ಅವರು ಲಾಟದಲ್ಲಿ ಕನ್ನಡ (ಲಿಪಿ) ಉಳಿಸಿದರೆಂದರೆ ಅಷ್ಟು ಸರಿದೋರುವುದಿಲ್ಲ. ಉತ್ತರದಲ್ಲಿ ಎಲ್ಲಿಯಾದರೂ ಕನ್ನಡವು ಉಳಿದಿದ್ದರೆ ಅದು ತನ್ನ ತಾನೆ, ಸ್ವಾಭಾವಿಕವಾಗಿ, ಅಬುದ್ಧಿ ಪುರಸ್ಸರವಾಗಿ ಉಳಿದಿದೆಯೆ ಹೊರತು ಪ್ರಯತ್ನದಿಂದಲ್ಲ.

ಆದುದರಿಂದ ಲಾಟ-ವರಾಟಗಳಲ್ಲಿ ಕನ್ನಡವೇ ಮನೆಮಾತಾಗಿರುವ ರಾಷ್ಟ್ರಿರಕರು-ರಾಷ್ಟ್ರಕೂಟರು ಹೇಗೆ ಬಂದರೆಂದು ಸಂದೇಹದಲ್ಲಿ ಬೀಳುವ ಕಾರಣವಿಲ್ಲ. ಫ್ಲೀಟರು ಕಂಡುಹಿಡಿದಿರುವಂತೆ ಆ ನಾಡು ಈ ಜನಾಂಗದ ಮೂಲಸ್ಥಾನವೇ ಸರಿ. ವರ್ಹಾಟದಲ್ಲಿಯೂ ಅದರ ಸುತ್ತಣ ಸೀಮೆಯಲ್ಲಿಯೂ ಕಾಣುವ ಅನೇಕಾನೇಕ ಅವಶೇಷಗಳನ್ನು ವಿಚಾರಿಸಿದರೆ ಮೇಲಣ ನಿರ್ಣಯವು ಅನಿವಾರ್ಯವೆಂದು ಮನವರಿಕೆಯಾಗದೆ ಇರಲಾರದು. ಶ್ರೀಯುತ ಎನ್. ಕೆ. ದತ್ತರ ಅಭಿಪ್ರಾಯ ಹೀಗಿದೆ.

> ".....instead of the name Scytho-Dravidian given by Risley we may call the Marathi type Irano-Dravidian"[೩೧]

ನಾಮದಾರ ಭಾಸ್ಕರರಾವ ಜಾಧವರಾಯರ ಮತದಂತೆ ಮರಾಠರು ಆರ್ಯ-ದ್ರಾವಿಡರು. ಶ್ರೀ ದತ್ತರು ಇರಾಣರೆಂದು ಹೇಳುವ ಜನಗಳು ಆರ್ಯವರ್ಗಕ್ಕೆ ಸೇರಿದವರೇ. ಆದುದರಿಂದ ಶ್ರೀ ದತ್ತ ಹಾಗೂ ಜಾಧವರಲ್ಲಿ ಭಿನ್ನಾಭಿಪ್ರಾಯಗಳಿಲ್ಲ. ಇನ್ನು ವಿಚಾರಿಸತಕ್ಕ ಒಂದು ಮುಖ್ಯಾಂಶವೆಂದರೆ: ಶ್ರೀ ದತ್ತ ಮತ್ತು ಜಾಧವರು ಆರಿಯರಲ್ಲಿ ಸೇರಿಕೊಂಡಿರುವರೆಂದು ಹೇಳುವ 'ದ್ರಾವಿಡ'ರು ಯಾರು? ಇವರು ಕನ್ನಡಿಗರೇ ಎಂದು ಹಿಂದೆ ಹೇಳಿದೆ.* ಆದರೆ, ಕನ್ನಡಿಗರಲ್ಲಿಯ ಯಾವ ಮುಖ್ಯ ಪಂಗಡವು ಮರಾಠ ಮತ್ತು ಗುಜರಾತಗಳಲ್ಲಿ

---

* ಕರ್ಣಾಟದ ವೀರಕ್ಷತ್ರಿಯರ ಗ್ರಂಥದಲ್ಲಿ ಕಳವರೂ-ಮರವರೂ ಒಂದು ಎಂಬ ದೃಷ್ಟಿಯಿಂದ ಕರ್ಣಾಟ-ಮರ್ಹಾಟಗಳ ಅಭಿನ್ನತೆಯನ್ನು ಶಂಬಾ ಅವರು ಮೊದಲು ತೋರಿಸಿದರು. ಆ ಗ್ರಂಥದ ನಾಲ್ಕು ಮತ್ತು ಐದು ಅಧ್ಯಾಯಗಳನ್ನು ಗಮನಿಸಬೇಕು (ಸಂ).

ಅರಗಿ ಕರಗಿ ಹೋಯಿತೆಂಬ ಸಮಸ್ಯೆಯೂ ರಾಷ್ಟ್ರಿಕರಿಂದ (ಎಂದರೆ ಕುಡುವ-ಕುಣಬಿ ಕಣಬಿಗಳಿಂದ) ಬಗೆಹರಿದಂತಾಯ್ತು.

ವರ್ಹಾಟದಲ್ಲಿ ದೇಶಮುಖರು, ಪಾಟೀಲ (ಗೌಡರು) ಪ್ರಮುಖರಾಗಿ ಇದ್ದಾರೆಂದು ಬೇರೆ ಹೇಳುವ ಕಾರಣವಿಲ್ಲ. ದೇಶಮುಖರು ಕುಣಬಿಗಳೆಂದು ರಸೆಲ್ಲರು ಬರೆಯುತ್ತಾರೆ.[೩೨] ಕುಣಬಿಯೆ ಕುಡುವೊಕ್ಕಲಿಗನು; ಎಂದರೆ ಕುಟುಂಬಿ; ರಾಷ್ಟ್ರಕೂಟರೆಂದರೆ ಕುಟುಂಬಿಗಳೆಂಬ ಮಾತನ್ನು ರಾ. ಬ. ಹೊಸಕೋಟಿ ಕೃಷ್ಣರಾಯರು ಸ್ಪಷ್ಟಪಡಿಸಿದ್ದಾರೆ. ಆದುದರಿಂದ, ದೇಶಮುಖರೂ ಪಾಟೀಲರೂ ಕುಣಬಿಗಳಾಗಿರುವ ವರ್ಹಾಟವು ರಾಷ್ಟ್ರಿಕರ-ರಾಷ್ಟ್ರಕೂಟರ ನೆಲೆವೀಡಾಗಿದ್ದಿತೆಂಬುದು ಸ್ಪಷ್ಟವಿದೆ.

ವರ್ಹಾಟ-ನಾಗಪೂರ ಕಡೆಯ ಆರಿಯ ಹೆಣ್ಣುಮಕ್ಕಳು 'ಮೀ ಜಾತೋ' ಎನ್ನುವುದುಂಟು. ಕಾರಣವೇನು? ಎಂದು ಶ್ರೀ ವಾಮನರಾವ ದೇಶಪಾಂಡೆ ಎಂಬ ಒಬ್ಬ ಮರಾಠಿ ಗೃಹಸ್ಥರು ತಮ್ಮ ಒಂದು ಕೊರೆಯನ್ನು ಕೇಳಿದ್ದರು.[೩೩] ಇದು ಸಂಸ್ಕೃತದ ಪರಿಣಾಮ; ಸಂಸ್ಕೃತದಲ್ಲಿ 'ಅಹಂ ಗಚ್ಛಾಮಿ' ಎಂದು ಹೇಳುವರು. ಆರಿಯರ ಹೆಣ್ಣುಮಕ್ಕಳು 'ಮೀ ಜಾತೋ' ಎನ್ನುವರು, ಎಂದು ಆ ಕೊರೆಗೆ ಇನ್ನೊಬ್ಬರ ಉತ್ತರವು ಪ್ರಕಟವಾಯ್ತು. ಆದರೆ, ಇನ್ನು ಕೆಲರಿಗೆ ಈ ಉತ್ತರದಿಂದ ಸಮಾಧಾನವಾಗದೆ ಮತ್ತೆ ಪ್ರಶ್ನೋತ್ತರಗಳಿಗೆ ಆರಂಭವಾಯ್ತು. 'ಮೀ ಜಾತೋ' ಎಂಬುದು ಸಂಸ್ಕೃತದಿಂದ ಆರೆಯ ಮಾತಿನಲ್ಲಿ ಬಂದ ರೂಢಿಯೆ ಆಗಿದ್ದರೆ, ಇದು ಮಹಾರಾಷ್ಟ್ರ ಬ್ರಾಹ್ಮಣ ಸ್ತ್ರೀಯರಲ್ಲಿ ಮುಖ್ಯವಾಗಿ ಇರಬೇಕಾಗಿತ್ತು. ಸಂಸ್ಕೃತದ ಪರಂಪರೆಯು ಬ್ರಾಹ್ಮಣರಲ್ಲಿ ಇರುವಷ್ಟು ಆರಿಯರಲ್ಲಿ ಇಲ್ಲ. ಆದರು, ಬಾಹ್ಮಣ ಹೆಣ್ಣುಮಕ್ಕಳು 'ಮೀ ಜಾತೇ' ಎನ್ನುವರು; ಸಂಸ್ಕೃತದ ಗಾಳಿಯೂ ಸೋಂಕದ ಆರಿಯ ಸ್ತ್ರೀಯರು 'ಮೀ ಜಾತೋ' ಎನ್ನವರು! ಇದೇನು ವಿಚಿತ್ರ! ಎಂಬ ಆಕ್ಷೇಪಣೆಗೆ ಸಂಸ್ಕೃತ ಪಕ್ಷಪಾತಿಗಳು ಉತ್ತರವನ್ನು ಕೊಡಲಾರದೆ ತಣ್ಣಗಾದರು! ಇದು 'ದ್ರಾವಿಡ' ಭಾಷೆಯ ಪರಿಣಾಮವೆಂಬುದು ನಿಶ್ಚಿತವಾಯ್ತು. ದ್ರಾವಿಡ ಭಾಷೆಗಳಲ್ಲಿ ಉತ್ತಮಪುರುಷದ 'ನಾನು ಹೋಗುತ್ತೇನೆ' ಎಂದು ಕ್ರಿಯಾಪದವು ಪುಲ್ಲಿಂಗ, ಸ್ತ್ರೀಲಿಂಗಗಳಲ್ಲಿ ಒಂದೇ ತೆರನಾಗಿದೆ. ಆದರೆ, ಬ್ರಾಹ್ಮಣರ ಆರಿಯ ಮಾತಿನಲ್ಲಿ 'ಮೀ ಜಾತೊ'; ಮತ್ತು 'ಮೀಜಾತೇ' ಎಂದು ಎರಡು ಬಗೆಯಾಗಿದೆ! ಆರಿಯ ಹೆಣ್ಣುಮಕ್ಕಳು ಮಾತ್ರ 'ಮೀ ಜಾತೋ' ಎಂದು ಹೇಳುವ ಕಾರಣವೇನು? ಗಂಡಸರಿಗಿಂತಲೂ ಹೆಂಗಸರಲ್ಲಿ ಪುರಾಣಪ್ರಿಯತೆ ಹೆಚ್ಚು. ಅವರಲ್ಲಿರುವ ಈ ಬಗೆಯ ಪರಂಪರಾಪ್ರೀತಿಯೆ ಜಗತ್ತಿನ ಬೇರೆ ಬೇರೆ ಸಂಸ್ಕೃತಿಗಳಲ್ಲಿ ಒಮ್ಮೆಲೆ ವಿಶೇಷಪ್ರಕಾರದ ವ್ಯತ್ಯಾಸಗಳು ಆಗದಿರುವುದಕ್ಕೆ ಮುಖ್ಯ ಕಾರಣ, ಎಂದು ಮಾನವ ಸಮಾಜದ ಮದುವೆಯ ಇತಿಹಾಸವನ್ನು (History of Human Marriage) ಬರೆದ ವೆಸ್ಟರ್‌ಮಾರ್ಕನು ವಿಶದಪಡಿಸಿದ್ದಾನೆ. ಆರಿಯ ಹೆಣ್ಣುಮಕ್ಕಳಲ್ಲಿ ದೃಢಮೂಲವಾಗಿರುವ 'ಮೀ ಜಾತೋ' ಎಂಬ ಈ ಮಾತಿನ ಕಾರಣವನ್ನು ಹೀಗೆ ಹೇಳುವರು: ಅವರು ಮೊದಲು ದ್ರಾವಿಡಪಂಗಡದಿಂದ ಬಂದವರು. ಆರೇ ಮಾತನ್ನು ಕಲಿತರೂ ಮೊದಲಿನ ಮಾತಿನ ರೀತಿಯನ್ನು ಬಿಟ್ಟುಕೊಡಲು ಆಗಲಿಲ್ಲ. ಮರಾಠನು ಆರ್ಯ-ದ್ರಾವಿಡರ ಮಿಶ್ರಣದಿಂದ ಆದವರೆಂದು ದೇಹಲಕ್ಷಣಗಳಿಂದ ನಿರ್ಧರಿಸಿರುವವರಿಗೆ, ಅವರ ಹೆಣ್ಣುಮಕ್ಕಳಲ್ಲಿ ಬೇರೂರಿರುವ 'ಮೀ ಜಾತೋ' ಎಂಬೀ ಬಗೆಯ ಮಾತಿನ ರೀತಿಗಳು ಇನ್ನೂ ಹೆಚ್ಚಿನ ಆಧಾರವನ್ನು ಪೂರೈಸಿಕೊಡುತ್ತಲಿವೆ.

ಸಾಂಗಲಿ, ಮಿರಜೆಯ ಆರಿಯ ಹೆಣ್ಣುಮಕ್ಕಳ ಬಾಯಲ್ಲಿ 'ಮೀ ಜಾತೊ' ಎಂಬೀ ಬಗೆಯ ಮಾತು ಇದ್ದರೆ ಸೋಜಿಗಪಡಬೇಕಾದ ಕಾರಣವಿದ್ದಿಲ್ಲ. ಆದರೆ, ಸಾಂಗಲಿ ಮಿರಜೆಯಲ್ಲಂತೂ ಸರಿಯೆ; ಖಾನದೇಶ-ವರ್ಹಾಡಗಳಲ್ಲಿಯೂ ಇದೇ ರೀತಿ ಇರುವುದಕ್ಕೆ ಕಾರಣವೇನು? ಖಾನದೇಶ ವರ್ಹಾಡಗಳಲ್ಲಿಯೂ ದ್ರಾವಿಡ ಮಿಶ್ರಣವುಂಟೆಂದು ಒಪ್ಪಿಕೊಳ್ಳಲೇಬೇಕಲ್ಲವೆ? 'ಮೀ ಜಾತೋ' ಎಂಬ ಒಂದು ಮಾತಿನಿಂದಲೇ ದ್ರಾವಿಡ ಮಿಶ್ರಣದ ಸಿದ್ಧಾಂತವು ಸ್ಥಾಪಿತವಾಗುತ್ತಿದೆಯೆಂದಲ್ಲ. ಇಂತಹ ಇನ್ನೂ ಹಲವು ಸಂಗತಿಗಳಿವೆ. ಅವೆಲ್ಲವುಗಳ

ವಿಸ್ತಾರವು ಇಲ್ಲಿ ಅಪ್ರಸುತ* ಆರಿಯ ಭಾಷೆ, ಸಂಸ್ಕೃತಿಗಳ ಅಭ್ಯಾಸವು ಈ ವಿಷಯಕ್ಕೆ ಸಾಕಷ್ಟು ಆಧಾರಗಳನ್ನು ಒದಗಿಸಿಕೊಡಬಲ್ಲುದಾಗಿದೆ. ಇದರಿಂದ ಒಂದು ಸಂಗತಿಯು ನಿಶ್ಚಿತವಾಗಿ ಗೊತ್ತಾಗುತ್ತದೆ: ಖಾನದೇಶ ವರ್ಹಾಟಗಳಲ್ಲಿ ಮೊದಲು ದ್ರಾವಿಡರು ತಲೆಯೆತ್ತಿಕೊಂಡಿದ್ದರು. ಅವರು ಆರ್ಯರ ಮಹಾಪ್ರವಾಹದಲ್ಲಿ ಕರಗಿಹೋದರೂ ಅದರ ಪರಿಣಾಮವು ಮರಾಠಿ ನಡೆನುಡಿ, ಜನಾಂಗಗಳಲ್ಲಿ ಚೆನ್ನಾಗಿಯೆ ಉಳಿದುಕೊಂಡಿದೆ. ಇದನ್ನೇ ನ್ಯಾಯಮೂರ್ತಿ ರಾನಡೆವರು

'The mixture of the two elements is best illustrated by the peculiarities of Marathi Language' ಎಂಬಲ್ಲಿ ಒಪ್ಪಿಕೊಂಡಿದ್ದಾರೆ.

ಖಾನದೇಶ ವರ್ಹಾಡಗಳ ಕಡೆಗೆ ಉಳಿದುಕೊಂಡಿರುವ ಕನ್ನಡ (ಸಂಶೋಧಕರು ಹೇಳುವ ದ್ರಾವಿಡ) ದ ಪ್ರಾಚೀನ ಕುರಹುಗಳ ಬಹುಭಾಗದ ವಿಚಾರವು 'ಕಣ್ಮರೆಯಾದ ಕನ್ನಡ'ದಲ್ಲಿ ಬಂದಿದೆ. ಅದರೊಳಗಣ ಸ್ವಲ್ಪ ಭಾಗವನ್ನು ಹೊಸತಾಗಿ ಸಂಗ್ರಹಿಸಿದ ಹೆಚ್ಚಿನ ಸಂಗತಿಗಳೊಡನೆ ಇಲ್ಲಿ ಕೊಟ್ಟರೆ ಅಪ್ರಸ್ತುತವಾಗಲಾರದು.

> 'ನರ್ಮದಾ ಗೋದಾವರಿಗಳ ನಡುವಣ ನಾಡಿನಲ್ಲಿ ಒಂದಾನೊಂದು ಕಾಲಕ್ಕೆ ಕರ್ಣಾಟವು ಇದ್ದುದೇ ನಿಜವಾಗಿದ್ದರೆ ಅಲ್ಲಿ ಕೆಲವಾದರೂ ಕನ್ನಡ ಜನಾಂಗಗಳು ಇರಲೇಬೇಕಷ್ಟೆ? ಬೇರೆ ಬೇರೆ ಪರಕೀಯ ಜನಾಂಗಗಳ ಆಘಾತಕ್ಕೆ ಈ ಭಾಗದೊಳಗಿನ ಎಷ್ಟೋ ತಂಡಗಳು ಈ ನಾಡಿನಿಂದ ಗುಳೆಕಟ್ಟಿಕೊಂಡು ಬೇರೆಡೆಗೆ ಹೋಗಿರಬಹುದು. ಆದರೆ, ಮೊದಲು ನೆಲೆಸಿದ್ದವರಲ್ಲಿ ತೀರ ಒಬ್ಬನೂ ಉಳಿಯದಂತೆ ಎಲ್ಲರೂ ತಮ್ಮ ಬಾಳು ಬದುಕುಗಳನ್ನೆಲ್ಲ ಕಿತ್ತುಕೊಂಡು ಹೋಗಿರುವುದಂತೂ ಅಸಂಭವ. ಆದುದರಿಂದ, ಇಲ್ಲಿ ಅಲ್ಪಸ್ವಲ್ಪ ಪ್ರಮಾಣದಲ್ಲಾದರೂ ಇನ್ನೂ ಕನ್ನಡದ ಕುರುಹುಗಳು ಉಳಿದಿರಬೇಕಲ್ಲವೆ? ಈ ಅವಶೇಷಗಳು ಏನಾದರೂ ಉಂಟೆ? ಇಂತಹ ಕೆಲವೊಂದು ಪ್ರತ್ಯಕ್ಷ ಪ್ರಮಾಣಗಳ ಬೆಂಬಲವಿಲ್ಲದೆ ಊಹೆಯು ಗ್ರಾಹ್ಯವೆನಿಸಲಾರದು'.

ಸ್ವಲ್ಪ ಕಣ್ತೆರದು ನೋಡಿದರೆ ಇಂತಹ ಪ್ರಮಾಣಗಳಿಗೆ ಕೊರತೆಯಿಲ್ಲ. 'ಹಳಬ'ರಂತಹ ಸಂದಿಗ್ಧ ಸ್ಥಿತಿಯೊಳಗಿನ ಜನಗಳನ್ನು ಲೆಕ್ಕಕ್ಕೆ ಹಿಡಿವ ಕಾರಣವಿಲ್ಲ. ಈ ಜನಾಂಗದ 'ಹಳಬ' ಎಂಬ ಹೆಸರಿನ ಹೊರತು ಇವರು ಕನ್ನಡಕ್ಕೆ ಸಂಬಂಧಪಟ್ಟವರೆಂಬುದಕ್ಕೆ ಸ್ಪಷ್ಟವಾದ ಹೆಚ್ಚಿನ ಆಧಾರಗಳೇನೂ ಇಲ್ಲ. ಆದರು, ಒಂದೆರಡು ಸಂಗತಿಗಳು ವಿಚಾರಾರ್ಹವಾಗಿವೆ. ಹಳಬರೆಂಬವರು ಬೆಳಗಾಂವಿ ಜಿಲ್ಹೆಯಲ್ಲಿಯೂ ಹಳಪೈಕರು ಉತ್ತರಕನ್ನಡದಲ್ಲಿಯೂ ಉಂಟು. ಬೆಳಗಾಂವಿ ಜಿಲ್ಹೆಯಲ್ಲಿ ಓಲೆಕಾರರು ಹಳಬರೇ. ವರ್ಹಾಟ, ಮಧ್ಯಪ್ರಾಂತದ ಜಾತಿ ಜನಾಂಗಗಳನ್ನು ಹೇಳುವಾಗ ರಸೆಲ್ಲನು Halaba a village watchman ಎಂದಿದ್ದಾನೆ. ಇವರಿಗೆ ಕೊತವಾಲವೆಂಬ ಹೆಸರು ಈಗ ಬಂದಿದೆ.[೩೪] ಹಳಬನು ಎಂದಿರುವನು! 'oldest resident in the country' ಇದು ಕನ್ನಡ 'ಹಳಬ' ಶಬ್ದದ ಭಾಷಾಂತರವೇ ಅಲ್ಲವೊ? ವರ್ಹಾಟದ ನೆರೆಯಲ್ಲಿರುವ ಹಳಬರು ಆರ್ಯವರ್ಗದವರಲ್ಲವೆಂದು ಎಲ್ಲರೂ ಒಪ್ಪುವರು. ಇವರ ಭಾಷೆ ಯಾವುದೆ ಒಂದು ವರ್ಗಕ್ಕೆ ಸೇರಿದುದೆಂದು ಹೇಳಲಿಕ್ಕಾಗುವುದಿಲ್ಲವೆಂದು ಡಾ. ಸ್ಟೆನ್‌ಕೊನೊ ಅವರು ಅಭಿಪ್ರಾಯಪಟ್ಟಿದ್ದಾರೆ. 'It is a corrupt mixture of several languages : both Aryan and Dravidian.'[೩೫]

ತಮ್ಮ ಹಳೆಯ ಪರಂಪರೆಯನ್ನು ಒಂದಿಷ್ಟು ನೆನಪಿಡದ ಹಳಬರನ್ನು ಬಿಟ್ಟರೂ ಈ ಭಾಗದಲ್ಲಿರುವ 'ಕುರುಬ' ಜನಾಂಗವನ್ನು ಕಡೆಗಣಿಸಿ ನಡೆಯಲಾರದು. ಬಿಹಾರ, ಒರಿಸ್ಸಾ, ಛೋಟಾನಾಗಪೂರಗಳ ಕಡೆಗೆ

* ಈ ವಿಷಯವಾಗಿ 'ಮಹಾರಾಷ್ಟ್ರದ ಮೂಲ' ಹಾಗೂ 'ಮರ್ಹಾಟ ಸಂಸ್ಕೃತಿ' ಕೆಲವು ಸಮಸ್ಯೆಗಳು ಪುಸ್ತಕಗಳಲ್ಲಿ ಇನ್ನೊಂದು ಬಗೆಯಲ್ಲಿ ಪ್ರಾಥಮಿಕ ಚರ್ಚೆಯು ಆಗಿದೆ. (ಸಂ).

'ಕುರ್ಖ' ಎಂಬ ಹೆಸರಿನ ಜನಗಳುಂಟು. 'ಕುರ್ಖ' ಎಂದರೆ ಕುರುಬರೆಂದು ನಾವು ಕೇವಲ ಶಬ್ದಸಾಮ್ಯದಿಂದ ಊಹಿಸಿರುವೆವೆಂದು ಆಕ್ಷೇಪಿಸಬಹುದು. ಇವರಿಗೆ ಓರಾಓನರೆಂದೂ ಒಂದು ಹೆಸರಿದೆ 'ಕಿಸಾನ'ರೆಂದು ಇತ್ತೀಚಿಗೆ ಕರೆವ ವಾಡಿಕೆಯಿದೆ. ಓರಾಓನ (oraon) ಮತ್ತು ಕಿಸಾನ ಇವೆರಡರ ಅರ್ಥ ಹೊಲದ ಆಳು, ಕೃಷಿಕ. ಆದರೆ, 'ಕುರ್ಖ' ಎಂದರೆ ಕುರುಬನೇ ಎಂದು ಹಲವು ಆಧಾರಗಳಿಂದ ಸಿದ್ಧಪಡಿಸಬಹುದು. The Oraons are identical with Dhangars (ಧನಗರ=ಕರುಬ) ರಸೆಲ್ಲನು ಇದಕ್ಕೂ ಸ್ಪಷ್ಟವಾಗಿ ಹೇಳುತ್ತಾನೆ. Dhanagar an alternative name for the tribe (Kurkh) [೩೬] ಇವರಿಗೆ 'ಕುರ್ಖ-ಧನಗರ' ಎಂದು ಕರೆವ ರೂಢಿಯುಂಟಂತೆ ಇಲ್ಲಿ 'ಕೂಡಲ-ಸಂಗಮ'ದಂತೆ ದ್ವಿರುಕ್ತಿಯು ಮನನೀಯವಾಗಿದೆ.

ಬಿಹಾರ, ಛೋಟಾನಾಗಪುರಗಳಷ್ಟು ದೂರಿನ ನಾಡಿನಲ್ಲಿ ಕುರುಬರೆಲ್ಲಿ ಎಂದು ಶಂಕಿಸಬಹುದು. ಇವರು ತಾವು ಕರ್ನಾಟದಿಂದ ಬಂದವರೆಂದು (have come from Carnatic) ಹೇಳುತ್ತಾರೆ. ಇವರ ಭಾಷೆ ಕನ್ನಡಕ್ಕೆ ಸಮೀಪಿಸಿದ್ದೆಂದು ಡಾ. ಗ್ರಿಯರಸನ್ನರು ಕಂಡುಹಿಡಿದಿರುವರು.[೩೭] ಇವರು ಒಂದು ಕಾಲಕ್ಕೆ ಕೆಚ್ಚ ಕನ್ನಡಿಗರೆಂಬ ಬಗೆಗೆ ಸೆನ್‌ಸಸ್ ರಿಪೋರ್ಟಿನವರೂ ಡಾಕ್ಟರ್ ರಸೆಲ್ ಮೊದಲಾದವರೂ ಒಪ್ಪುವರು. ಈ ಜನಗಳು ಅಲ್ಪಸ್ವಲ್ಪ ಇಲ್ಲ. ಜನಸಂಖ್ಯೆ ಐದು ಲಕ್ಷಕ್ಕೆ ಮೀರಿದೆ! ಕರ್ನಾಟದ ಇಷ್ಟೊಂದು ಭಾಗವು ಕಣ್ಮರೆಯಾದಂತಾಗಲಿಲ್ಲವೆ? ಕೊರಬು ಎಂಬುವರ ಬಗ್ಗೆ ಮಹಾರಾಷ್ಟ್ರ ಶಬ್ದಕೋಶದಲ್ಲಿ ಹೀಗೆ ಹೇಳಿದೆ:

> 'ಗಾವಾಂತೀಲ ಏಕ ಬಲೂತೇದಾರ; ಹೀ ಧನಗರ ಜಾತ ಆಹೇ. ಕೊರಬೂಚಿ ಕಾಮೇ
> ಪುಷ್ಕಳ ಅಹೇತ. ಪೈಕೀ (? ಕಾಮದಾರ) ಪ್ರಮಾಶಾಚಿ ಬರದಾಸ್ತ ಠೇವಣೇ, ತ್ಯಾಚೀ
> ಓಝೀ ವಾಹಣೇ, ರಯತೇ ಪಾಸೂನ ಸರಕಾರ ದೇಣೇ ಘೇಣೇ ವಸೂಲ ಕರಣೇ.

ಈ ಶಬ್ದವು ಕನ್ನಡ ಕುರುಬ ಅಥವಾ ಕುರುಂಬ ಎಂಬುದರಿಂದಲೇ ಬಂದುದೆಂದು ಆ ಕೋಶಕಾರರೇ ಹೇಳಿದ್ದಾರೆ. ಆದುದರಿಂದ, ಈ ವರ್ಣನೆಯು ಕುರುಬನದೇ ಎಂದು ನಿಶ್ಚಿತವಾಗಿ ಹೇಳಬಹುದಾಗಿದೆ. ಮೇಲಣ ವರ್ಣನೆಯಿಂದ ವರ್ಹಾಟದೊಳಗಿನ 'ಕೊರಬ'ನು ಕರ್ನಾಟದೊಳಗಿನ ಕುರುಬ ಜಾತಿಯ ಓಲೆಕಾರ ಅಥವಾ ಹಳಬನೇ ಅಹುದೆಂದು ಗ್ರಾಮಾಧಿಕಾರಿಗಳ ಕುಲ, ಕೆಲಸಗಳನ್ನು ಬಲ್ಲವರಿಗೆ ಬೇರೆ ಹೇಳುವ ಕಾರಣವೇ ಇಲ್ಲ.

ವರಾಟದ ಗೌಡ, ನಾಡಗೌಡ (ದೇಶಮುಖ)ರು ಕುಡುವರು ('ಕುಳುಂಬಿ'ಗಳು) ಎಂದರೇ ಒಕ್ಕಲರು. ಈ ಭಾಗದ ಓಲೆಕಾರರು 'ಕುರುಬರು'; 'ಹಳಬರು'; ಈ ಮೂರೂ ಅಚ್ಚಕನ್ನಡದ ಪದಗಳು. ಇಷ್ಟಾದರೂ ವರ್ಹಾಟದ ಕನ್ನಡತನದ ಬಗ್ಗೆ ಸಂದೇಹಪಟ್ಟುಕೊಳ್ಳುವವರಿರಬಹುದು; ಹಾಗಾದರೆ ಇನ್ನೂ ಕೆಲವು ಜಾತಿಗಳನ್ನು ನೋಡಿ: 'ಒಕ್ಕಲಿಗ' ಎಂದೇ ಹೆಸರು ಹೇಳಿ ಇವರ ಬಗ್ಗೆ ರಸೆಲ್ಲನು ಬರೆಯುವುದು ಏನೆಂದರೆ:

> A Canarese caste of cultivators of which a few representatives
> were returned from Nagapur [೩೮]

ಹಳಬರಾಯ್ತು, ಕೊರಬುಗಳಾಯ್ತು, ಕುಳುಂಬಿಗಳಾಯ್ತು, ಅಥವಾ ಒಕ್ಕಲಿಗರಾಯ್ತು ಇವರಿಗೆ ಕನ್ನಡಿಗರೆನ್ನಬಹುದೆಂದು ಎನಿಸುತ್ತದೆ. ಆದರೆ, ಇವರಲ್ಲಿ ಕನ್ನಡ ಮಾತು ಏಕೆ ಉಳಿದಿಲ್ಲ? ಕುರ್ಖರಲ್ಲಿ ಕನ್ನಡ ಮಾತಿನ ಅವಶೇಷಗಳೇನೊ ಅಲ್ಪಸ್ವಲ್ಪ ಉಳಿದುದನ್ನು ಸಂಶೋಧಕರು ಹೇಳುತ್ತಾರೆ. ಆದರು, ಈ ನಾಡು ಕನ್ನಡಕ್ಕೆ ಸಂಬಂಧಪಟ್ಟಿದ್ದೇ ನಿಜವಿದ್ದರೆ ಕನ್ನಡನುಡಿಯು ಇನ್ನೂ ಹೆಚ್ಚು ಜೀವಂತ ಸ್ವರೂಪದಲ್ಲಿ ಇಲ್ಲಿ ಇರಬೇಕಾಗಿದ್ದಿತಲ್ಲವೆ? ನಿಜ. ಈ ಪ್ರಶ್ನೆಗೆ ಒಂದೇ ಉತ್ತರ: ಕನ್ನಡಿಗರಿಗೆ ಕನ್ನಡದ ವಿಷಯದಲ್ಲಿ ಉಂಟಾಗಿದ್ದ ಅನಾದರವೇ ಇದೆಲ್ಲಕ್ಕೂ ಮೂಲ ಕಾರಣ. ಆರ್ಯೀಕರಣಕ್ಕೆ ಮೈಗೊಟ್ಟು, ಮನಗೊಟ್ಟು ಕನ್ನಡವನ್ನು ಕಡೆಗಣಿಸಿ, ಕೊನೆಗಾಲದಲ್ಲಿ ಕರ್ನಾಟಸ್ಥರಿಗೆ-ಅಥವಾ ಹೊಯ್ಸಳ ಕರ್ನಾಟರಿಗೆ ಕನ್ನಡದ ಎಚ್ಚರವುಂಟಾಯ್ತು. ಅಲ್ಲಿಯ ವರೆಗೂ ಕನ್ನಡವು ಸವೆದು ನವೆದು, ಕರಗಿ, ಕೊರಗಿ ಕಣ್ಮರೆಯಾಗುವ ಹೊತ್ತು ಬಂದಿದ್ದಿತು. 'ತಿರುಳ್ಗನ್ನಡ'ವೇ

ಹುರುಳಿಲ್ಲದಾಗಿ ಬಿಟ್ಟ ಕಾಲದಲ್ಲಿ ಲಾಟ-ವರ್ಹ್ಹಾಟಗಳಲ್ಲಿ ಕನ್ನಡವು ಹೇಳಹೆಸರಿಲ್ಲದಂತಾಗಿದ್ದರೆ ಸೋಜಿಗ ವೇನು? ಅಲ್ಲಿ ಈಗ ಉಳಿದಿರುವ ಪ್ರಾಚೀನ ಕೆಲವು ಕುರುಹುಗಳಿಂದ ಮೊದಲಿನ ಕನ್ನಡದ ಸ್ಥಿತಿಗತಿಗಳನ್ನು ಕಲ್ಪಿಸಿಕೊಳ್ಳಬೇಕಾಗಿದೆ.

ಇಂತಹ ವಿಪರೀತ ಪರಿಸ್ಥಿತಿಯಲ್ಲಿಯೂ ಕನ್ನಡವು ಇನ್ನೂ ಜೀವಂತ ಭಾಷೆಯಾಗಿರುವ-ಮನೆಮಾತು ಕನ್ನಡವೇ ಆಗಿರುವ ಕೆಲವು ಜಾತಿಗಳು ವರ್ಹಾಡದಲ್ಲುಂಟು! ಇಂತಹರಿಗೆಲ್ಲ 'ಹೊರಗಣಿಂದ ಬಂದು ನೆಲಸಿದವರು' ಎಂದು ಹೇಳಿ ಕೆಲರು ಒಂದು ಮಾತಿನಲ್ಲಿ ಎಲ್ಲ ಕೆಲಸ ಬಗೆಹರಿಸುವರು. ಸುಮ್ಮನೆ ಹೆಚ್ಚಿನ ವಿಚಾರ ವಿಮರ್ಶೆಗಳಲ್ಲಿ ತಲೆಹಾಕಿ ಯಾರು ಶ್ರಮವಹಿಸಬೇಕು! ವರ್ಹಾಟದಲ್ಲಿ ಕನ್ನಡವೇ ಮನೆಮಾತು ಇರುವ ಕುರುಂಬರಿದ್ದಾರೆ; ಹೊಲೆಯರಿದ್ದಾರೆ.

ಕುರುಂಬರು

(ಚಂದಾದಲ್ಲಿ)

ಕ್ರಿ. ಶ. ೧೮೯೧	೨೩.೨೦
ಕ್ರಿ. ಶ. ೧೯೦೧	೨೧೫೧

ಹೊಲೆಯರು

(ಶಿವಣಿ, ನಾಗಪೂರ, ಭಂಡಾರಾ, ಬಾಲಘಟ್ಟಗಳಲ್ಲಿ)

ಕ್ರಿ.ಶ. ೧೮೯೧	೩೬೧೪
ಕ್ರಿ.ಶ. ೧೯೦೧	೩೪೬೪

ಕುರುಬರೆಂದು ಈಗ ಹೇಳುವ ಜನಕ್ಕೇ ಹಿಂದಿನ ಕಾಲದಲ್ಲಿ ಕುರುಂಬರು ಎಂಬ ಹೆಸರು ಇತ್ತು. ೧೩ನೆಯ ಶತಮಾನದಲ್ಲಿ ವ್ಯಾಕರಣ ಬರೆದ ಕೇಶಿರಾಜನು ಕನ್ನಡದಲ್ಲಿ ಕೆಲವು ನಿತ್ಯಬಿಂದುಗಳುಳ್ಳ ಶಬ್ದಗಳೆಂದೂ ಕೆಲವು ವಿಕಲ್ಪಬಿಂದುಗಳುಳ್ಳ ಶಬ್ದಗಳೆಂದೂ ಎರಡು ವರ್ಗಗಳನ್ನು ಕಲ್ಪಿಸಿದ್ದಾರೆ.[೩೯] ಕದಂಪು, ಕದಪು; ಕಯಂಕೆ, ಕರುಕೆ; ಕಣಂಜು, ಕಣಜು: ಮುಸುಂಕು, ಮುಸುಕು; ಎಂಬಿವೇ ಮೊದಲಾದುವು ವಿಕಲ್ಪಬಿಂದುಗಳು ಉದಾಹರಣಗಳು. ನಿತ್ಯಬಿಂದುಗಳೆಂದು ಕೇಶಿರಾಜನು ಹೇಳಿದ ತುರುಂಬು, ಕುಸುಂಬೆ, ತೋಂಟ, ಕುರುಂಬ ಇವೆ ಮೊದಲಾದುವುಗಳೆ ತಮ್ಮ ಬಿಂದುವನ್ನು ಸಂಪೂರ್ಣವಾಗಿ ಕಳೆದುಕೊಂಡಿರುವಾಗ ವಿಕಲ್ಪವಾಗಿದ್ದುವುಗಳ ಮಾತು ಏತಕ್ಕೆ? ಇಂದಿನ ಕನ್ನಡಿಗರು ಬಿಂದುವನ್ನು ಬಿಟ್ಟಿರುವರಾದರೂ ಹಳಬರು ಹಾಗೆ ಮಾಡಿಲ್ಲ; ಕೇಶಿರಾಜನ ಮಾತು ಮೀರಿಲ್ಲ. ವರ್ಹಾಡ ಮತ್ತು ನೀಲಗಿರಿಯಲ್ಲಿರುವವರು 'ಕುರುಂಬ' ಎಂಬ ಹೆಸರನ್ನೇ ಈ ವರೆಗೆ ಉಳಿಸಿಕೊಂಡು ಬಂದಿದ್ದಾರೆ. ಇವರೆ ಕರ್ಣಾಟದ 'ಹಳಬ'ರು ಮೊದಲಿಗರು; ಮೂಲಿಗರು. ಕನ್ನಡದ ಮೊದಲಿನ ಸ್ಥಿತಿಯ ಅನೇಕಾನೇಕ ಅವಶೇಷಗಳು (ಈಗಿನ ಕನ್ನಾಡು ಮತ್ತು ನುಡಿಗಳ ಪೂರ್ವಸ್ಥಿತಿ ದರ್ಶಕವಾಗಿ) ವರ್ಹಾಟ (ದೇಶ) ಮತ್ತು (ಮರ್ಹಟ್ಟ) ಭಾಷೆಗಳಲ್ಲಿ ಸಿಕ್ಕುತ್ತಿರುವುದು ಏನನ್ನು ಸೂಚಿಸುವುದು[೪೦] ವರ್ಹಾಟವು ಕನ್ನಡದ ಅಂಗವಾಗಿದ್ದಿತೆಂದೆ ಅಲ್ಲವೆ? ಕುರುಂಬ ಶಬ್ದವು ೧೩ನೆಯ ಶತಮಾನದ ಮುಂದಿನ ಕಾಲದಲ್ಲಿ ಬಿಂದುವನ್ನು ಕಳೆದುಕೊಂಡು 'ಕುರುಬ' ಎಂಬೀ ತೆರನಾಗಿ ಬಳಕೆಯಲ್ಲಿ ಉಳಿದಿದೆ. ಆದುದರಿಂದ, ನೀಲಗಿರಿ ಮತ್ತು ವರ್ಹಾಟದಲ್ಲಿರುವ ಕುರು(ಂ)ಬರು ಆ ಭಾಗದಲ್ಲಿ ೧೩ನೆಯ ಶತಮಾನಕ್ಕೆ ಮೊದಲಿನಿಂದಲೆ ಇದ್ದವರು, (ಬೇಕಾದರೆ ಹೋದವರು ಎನ್ನಿ) ಎಂದು ಊಹಿಸಲು ಅಡ್ಡಿಯೇನು? ೧೩ನೆಯ ಶತಮಾನದ ತರುವಾಯ ಆ ನಾಡಿಗೆ ಈ ಜನಗಳು ಹೋಗಿದ್ದರೆ ಕುರುಂಬ ಎಂಬ ಹೆಸರು ಅವರಿಗೆ ಇರುವ ಸಂಭವವೇ ಇಲ್ಲ. ಕುರುಬ ಎಂದೇ ಅವರ ಹೆಸರು ಇರಬೇಕಾಗಿತ್ತು.

೧೩ನೆಯ ಶತಮಾನದ ಮೊದಲಾದರೂ ಕನ್ನಡ ಕುರು(ಂ)ಬರು ವರ್ಹಾಟದ ಕಡೆಗೆ ಹೋಗಲು ಕಾರಣ ವೇನು? ಕರ್ಣಾಟದಲ್ಲಿ ಹುಲ್ಲಿನ ಅಡವಿಗಳು ಇದ್ದಿಲ್ಲವೆಂದೊ? ಎತ್ತ ಕರ್ಣಾಟ! ಎತ್ತ ವರ್ಹಾಟ ಆಗಲಿ;

ಕುರು(ಂ)ಬರು ಅಲೆವ ತಂಡದವರು. ಹೋಗಿರಬಹುದೆನ್ನುವ. ಆದರೆ, (ನಾಗಪುರದ ಕಡೆಗೆ ಇರುವ ಅಥವಾ ಇದ್ದರೆಂದು ರಸೆಲ್ಲರು ಹೇಳುವ) ಕನ್ನಡ ಒಕ್ಕಲಿಗರು ಹೇಗೆ ಇಲ್ಲಿ? ಒಕ್ಕಲಿಗರು ಚರವೃತ್ತಿಯವರಲ್ಲ. ಒಕ್ಕಲಿಗರನ್ನೂ ಬಿಡಬಹುದು. 'ಹೊಲೆಯ'ರು (ಮಹಾರ ಅಲ್ಲ) ವರ್ಹಾಟಕ್ಕೆ ಬಂದುದೇಕೆ? ಸಾಮಾನ್ಯವಾಗಿ ಆವುದೊಂದು ಸ್ಥಳದ ಭಾಷೆ ಆವುದೆಂದು ನಿರ್ಧರಿಸುವಾಗ ಅಲ್ಲಿಯ ಹರಿಜನರ ಭಾಷೆ ಯಾವುದೆಂದು ನೋಡಬೇಕೆಂದು ಬಲ್ಲವರು ಹೇಳುವುದುಂಟು. ವರ್ಹಾಟದಲ್ಲಿ ಮನೆಮಾತು ಕನ್ನಡವೇ ಇರುವ ಹೊಲೆಯರು ಏಕೆ? ವರ್ಹಾಟದಲ್ಲಿ ಹೊಲೆಯರು ಇರುವ ಕೆಲವು ಊರುಗಳಲ್ಲಿ ಶೇವುಣ ಎಂಬುದೂ ಒಂದಿದೆ. ಈ ಶೇವುಣವು ದೇವಗಿರಿ ಯಾದವರ ಮೂಲಸ್ಥಾನ. ದೇವಗಿರಿಯ ಯಾದವರಲ್ಲಿ ಕೊನೆಯ ೨-೩ ರಾಜರನ್ನು ಬಿಟ್ಟು ಉಳಿದವರೆಲ್ಲ ಕನ್ನಡವನ್ನೇ ಓಲಗದ ಭಾಷೆಯಾಗಿ ಸ್ವೀಕರಿಸಿದ್ದರೆಂಬುದು ಇತಿಹಾಸದಿಂದ ಕಂಡುಬರುತ್ತದೆ.

ಗ್ರಿಯರಸನ್‌ರು ಈ ಜನಗಳ ಕನ್ನಡ ಭಾಷೆಯನ್ನು ಕುರಿತು ಬರೆಯುವಾಗ ಹೇಳುವುದೇನೆಂದರೆ :

> Kurumvar a wild pastoral tribe in Chanda who speak a dialect of Kanarese... this dialect is as specimens clearly show a form of Kanarese.
>
> The Golari-Holiya is a dialect of Kanarese and is especially closely related to the form which that langauage assumes in Bijapur.[೪೧]

ಇದು ವಿಜಾಪುರದ ಕನ್ನಡಕ್ಕೆ ಬಹಳ ಸಮೀಪಿಸಿದ್ದೆಂದು ಹೇಳಿರುವದಲ್ಲದೆ, ಳ ನೀಲಗಿರಿಯಲ್ಲಿರುವ ಬಡಗರು ಮತ್ತು ತೋಡರ ಮಾತಿನಲ್ಲಿರುವಂತೆ ಹಳಗನ್ನಡದ ಹಲವು ರೂಪಗಳೂ ಉಂಟೆಂದು ಅಭಿಪ್ರಾಯಪಟ್ಟಿದ್ದಾರೆ. (It has preserved old forms like the dialect of Badagas.) ಒಂದು ಕಾಲಕ್ಕೆ ಕನ್ನಡದ ಅಂಗವೆ ಆಗಿದ್ದ ಈ ನಾಡಿನಲ್ಲಿ ಕನ್ನಡ ಹೆಸರಿನ ಹಳ್ಳಿಪಳ್ಳಿಗಳು ಇರಬೇಕಲ್ಲವೆ? ಗೋದಾತೀರದಲ್ಲಿ ಮುಧೋಳ ಎಂಬ ಒಂದೂರಿದೆ. ಮುಧೋಳವೆಂಬುದರ ಪೂರ್ವರೂಪ 'ಮುದುವೊಳಲು'; ಇದನ್ನು ಜಂಬುಕಂಡಿಯ ಹತ್ತರಿನ ಮುಧೋಳ (ಮುದುವೊಳಲ) ಆಧಾರದಿಂದ ನಿರ್ಧರಿಸಬಹುದಾಗಿದೆ. ಶ್ರೀ ರಾಜಪುರೋಹಿತರು ಪುಣೆಯ ಕೇಸರಿಪತ್ರಿಕೆಯಲ್ಲಿ ಬರೆದ ಒಂದು ಲೇಖನದಲ್ಲಿ ಉದ್ಧರಿಸಿರುವ ಒಂದು ಮಾತು ಬಹಳ ಮಹತ್ವದ್ದಿದೆ. 'ವಿದ್ಯಾಲಯಂ ಇತಿ ಪ್ರಸಿದ್ಧಂ ತದ್ದೇಶವಾಸಿನಃ ಬಿಜ್ಜಳ ಬೀಡುಃ ಇತಿ ವದಂತಿ'. ವಿದ್ಯಾಲಯವೆಂಬ ಪಟ್ಟಣಕ್ಕೆ ಆ ನಾಡಿನವರು ಬಿಜ್ಜಳಬೀಡು ಎಂದು ಕರೆವರಂತೆ! ಬೀಡು ಎಂಬುದು ಕನ್ನಡ ಶಬ್ದ. ಬೀಡು ಎಂದು ಊರಿಗೆ ಕನ್ನಡದ ನಾಮಕರಣಮಾಡುವ ಆ ನಾಡಿಗರ ಭಾಷೆಯು ಆವುದಿರಬಹುದು? ಕನ್ನಡದಿಂದ ಬೇರೆಯಿರುವ ಸಂಭವವೇ ಇಲ್ಲ. ಇಷ್ಟೆಲ್ಲ ಏಕೆ? ಪ್ರತ್ಯಕ್ಷ 'ಕನ್ನಡ' ಎಂಬ ಊರೇ ಅಲ್ಲಿದೆ. ಔರಂಗಾಬಾದ್ ಜಿಲ್ಲೆಯಲ್ಲಿ ಕನ್ನಡ ಎಂಬ ಹೆಸರಿನ ಊರಿದ್ದು ಅದೇ ಹೆಸರಿನ ತಾಲ್ಲೂಕೂ ಉಂಟು. ತಾಲ್ಲೂಕಿನ ಹೆಸರು 'ಕನ್ನಡ' ಎಂದು ಇರುವಂತೆ ಈ ಪ್ರದೇಶದ ಸುತ್ತಣ ನಾಡಿಗೆಲ್ಲ ಒಂದಾನೊಂದು ಕಾಲದಲ್ಲಿ 'ಕನ್ನಡ' ಎಂದೇ ಹೆಸರಿದ್ದಿತೆಂದು ಊಹಿಸಲೂ ಒಂದು ಬಲವಾದ ಕಾರಣವಿದೆ.

ಲಾಟ-ಕರ್ಣಾಟಗಳು ಸಂಯುಕ್ತರಾಜ್ಯವಾಗಿದ್ದುವೆಂಬ ಬೃಹತ್‌ಕಥೆಯೊಳಗಿನ ಉಲ್ಲೇಖವು ಸರಿಯಿದ್ದರೆ, ಲಾಟ-ಕರ್ಣಾಟಗಳನ್ನು ಕೂಡಿಯೆ ಹೇಳುವ ಶಾಸನಗಳ ಪ್ರಾಚೀನ ಪರಂಪರೆಯಲ್ಲಿ ಏನಾದರೂ ಅರ್ಥವಿದ್ದರೆ, ನಾಟ(ಲಾಟ)ವು 'ಕರ್ಣಾಟ ದೇಶೇ' ಎಂದು ಶಬ್ದರತ್ನಾಕರದಲ್ಲಿರುವ ಮಾತು ಸುಳ್ಳಿರದಿದ್ದರೆ, ಅಥವಾ ನಾಟವೂ ಕರ್ಣಾಟವೂ ಒಂದು ಎಂದು ಶ್ರೀ ಆಪ್ಟೆ ಪ್ರಭೃತಿ ಕೋಶಕಾರರು ಯಾವ ಆಧಾರಗಳ ಮೇಲೆ ಅವಲಂಬಿಸಿ ಹೇಳುವರೊ ಅವು ವಿಶ್ವಸನೀಯವೆಂದರೆ ಈ 'ಕನ್ನಡ' ತಾಲ್ಲೂಕಿನ ಸುತ್ತಣ ಇನ್ನೂ ವಿಸ್ತೃತವಾದ ಪ್ರದೇಶವೆಲ್ಲವೂ ಪುರಾತನ ಕಾಲದಲ್ಲಿ ಕನ್ನಡ ಎಂಬ ದೇಶವಾಗಿ ಇರುವ ಸಂಭವವು ಇಲ್ಲದಿಲ್ಲ. ಈ ಪರಂಪರೆಯ ಅರಿವು ಇಲ್ಲದ ಹಲವರು ವರ್ಹಾಟ ಖಾನದೇಶಗಳ ಕಡೆಗೆ ಇರುವ ಕುರುಂಬರೆ ಮೊದಲಾದ ಕನ್ನಡಿಗರು ಹೊರಗಣೆಂದ

ಅಲ್ಲಿ ಬಂದರೆಂದು ಊಹಿಸುವರು-ಹಟಹಿಡಿವರು! ಆದರೆ, ಮರಾಠಿ, ಗುಜರಾತಿ ಭಾಷೆ ಹಾಗೂ ಸಂಸ್ಕೃತಿಗಳ ತುಲನಾತ್ಮಕ ಅಭ್ಯಾಸಿಗಳು ಈ ನಾಡುಗಳಲ್ಲಿ ಮೊದಲು ದ್ರಾವಿಡರು ವಾಸವಾಗಿದ್ದರೆಂದು ಎದೆತಟ್ಟಿ ಹೇಳುವರು. ಮನುಷ್ಯನ ಮುಖಲಕ್ಷಣ, ಕಣ್ಣುಕೂದಲುಗಳ ಬಣ್ಣ-ಆಕಾರಗಳಿಂದ ಜನಾಂಗಗಳ ಕುಲಗೋತ್ರಗಳನ್ನು ನಿರ್ಧರಿಸುವ ಮಾನವ-ವಂಶಶಾಸ್ತ್ರರು ಈ ಮಾತಿಗೆ ಬೆಂಬಲವನ್ನೀಯುವರು. ಇವೆಲ್ಲ 'ದ್ರಾವಿಡ','ದ್ರಾವಿಡ' ಎಂಬ ಹೆಸರಿನಿಂದ ನಡೆದ ಸ್ಥೂಲವ್ಯಾಪಾರವೇ ಆಯಿತು. ಈ ಆರಿಯರಲ್ಲಿ, ಗುರ್ಜರರಲ್ಲಿ ಬೆರೆತುಕೊಂಡು ಇರುವ, ಕರಗಿಹೋಗಿರುವ 'ದ್ರಾವಿಡ'ರು ಇಂತಹ ಇಂತಹರೆಂದು ಬೆರಳಿಟ್ಟು ತೋರಿಸುವವರಾರೂ ಇಲ್ಲ.

ಆದರೆ, ವರ್ಹಾಡದ ಕನ್ನಡ ಒಕ್ಕಲಿಗರು, ಕುರು(ಂ)ಬರು ಮೊದಲಾದ ಪಂಗಡಗಳು ಅಲ್ಲಿಯ ಪುರಾತನ ದ್ರಾವಿಡ ಶಾಖೆಯ ಅವಶೇಷಗಳಾಗಿ ನಮ್ಮ ಕಣ್ಣಿಗೆ ಬೀಳುತ್ತಿರುವಾಗ ಅವರಿಗೆಲ್ಲ ಹೊರಗಣಿಂದ ಇಲ್ಲಿ ಬಂದವರೆಂದು ಹೇಳುವುದು ಮಾತ್ರ ಬಹಳ ವಿಚಿತ್ರವಾಗಿದೆ! ಕನ್ನಡ ತಾಲ್ಲೂಕಿನ ನೆರೆಹೊರೆಯಲ್ಲಿ ಕನ್ನಡ ಎಂಬ ಹೆಸರಿನ ಗೋವಳರು ಉಂಟೆಂದು ಆ ಭಾಗದ ಗ್ಯಾಝಿಟಿಯರುಗಳಿಂದ ಕಂಡುಬಂದಿದೆ. ಆದರೆ, ಇವರು ಈ ಭಾಗಕ್ಕೆ ಹೊರನಾಡಿನಿಂದ ಬಂದು ನೆಲೆಸಿದರೆಂಬುದು ಸಾಧಿಸುವ ವಿಪರೀತ ಪ್ರಯತ್ನವು ಕಂಡುಬರುತ್ತಲಿದೆ! ಸೀಮೆಯ ಹೆಸರು 'ಕನ್ನಡ'; ಅಲ್ಲಿಯ ಕೆಲವು ಗೋವಳ ತಂಡಗಳ ಹೆಸರೂ 'ಕನ್ನಡ'. ಆದುದರಿಂದ ಈ ಕನ್ನಡ ಗೋವಳರು ಇದೇ ಸೀಮೆಯ ಮೊದಲಿಗರು ಎಂದು ನಿರ್ಧರಿಸಲು ಆತಂಕವೇನು? ಖಾನದೇಶ ಗ್ಯಾಝಿಟಿಯರಿನಲ್ಲಿ ಬಂದ ಕನ್ನಡ ಗೋವಳರ ವರ್ಣನೆಯು ಹಿಂದೆ ಬಂದಿದೆ. ಅಹಮ್ಮದನಗರ ಭಾಗದಲ್ಲಿಯೂ ಇವರುಂಟಂತೆ! ನಾಸೀಕ ಜಿಲ್ಲೆಯಲ್ಲೂ ಸಾಕಷ್ಟು ಇದ್ದಾರೆ! ನಾಸೀಕ ಜಿಲ್ಲೆಯ ಗ್ಯಾಝಿಟಿಯರಿನಲ್ಲಿ ಇವರನ್ನು ಕುರಿತು ಬರೆದಿರುವುದು ಏನೆಂದರೆ:

> The cattle breeding tribes the Kanadas....who formed a fair proportion of the people....mainly depend on their herds and flocks...the Kanadas were remarkably well off. Some Kanada hamlets with not more that three or four houses had as many as 500 cattle and 500 goats. (p. 232)

ವೀರಗಲ್ಲುಗಳು ಕನ್ನಡರ ವೈಶಿಷ್ಟ್ಯವೆಂದು ಪುರಾತನ ತಮಿಳ ಸಾಹಿತ್ಯದಿಂದಲೆ ವ್ಯಕ್ತವಾಗುತ್ತದೆ. ವಡುಕರು ನಟ್ಟುಕಲ್ಲುಗಳನ್ನು ಪೂಜಿಸುವವರೆಂದು ತಮಿಳು ಕಾವ್ಯಗಳಿಂದ ಗೊತ್ತಾಗುತ್ತದೆ. ಕರ್ಣಾಟದಲ್ಲಿ ವೀರಗಲ್ಲುಗಳಿಲ್ಲದ ಭಾಗವೇ ಇಲ್ಲ. ಮಹಾರಾಷ್ಟ್ರದವರಿಗೆ ವೀರಗಲ್ಲುಗಳು ಅಪರಿಚಿತ, ಏಕೆಂದರೆ: ಮರಾಠಿ ಭಾಷೆಯಲ್ಲಿ 'ವೀರಗಲ್ಲು' ಎಂಬುದಕ್ಕೆ ಸಮಾನಾರ್ಥಕ ಶಬ್ದವೇ ಇಲ್ಲ! ಆದರೂ ಮಹಾರಾಷ್ಟ್ರದೇಶದಲ್ಲಿ ವೀರಗಲ್ಲುಗಳ ಕೊರತೆಯಿಲ್ಲ! ನಾಸಿಕ ಗ್ಯಾಝಿಟಿಯರಿನಲ್ಲಿ ಆ ಜಿಲ್ಲೆಯೊಳಗಿನ ವೀರಗಲ್ಲುಗಳಿರುವ ಸ್ಥಳಗಳನ್ನು ಕೊಟ್ಟಿದೆ.

> 'Memorial' stones are found all over the district and are specially near the Sahydries.
>
> Shivar has a remarkable group of memorial stones. (p. 647)
>
> One group of unusually large stones occur at Chousale.
>
> Some times rude inscriptions are carved under figures!

ಶಿವರ, ಚೌಸಾಲೆ ಎಂಬಲ್ಲಿ ಈ ಕಲ್ಲುಗಳು ವಿಶೇಷವಾಗಿವೆಯಂತೆ. ಇವುಗಳಲ್ಲಿ ಕೆಲವುಗಳ ಮೇಲೆ ಅಕ್ಷರಗಳನ್ನೂ ಕೊರೆದುದುಂಟೆಂದು ಸಾಹೇಬರು ಹೇಳುತ್ತಾರೆ. ಆದರೆ, ಅದು ಯಾವ ಭಾಷೆಯೆಂಬುದರ ಬಗ್ಗೆ ಮಾತ್ರ ಮೌನ! ಈ ವೀರಗಲ್ಲುಗಳು ಯಾವ ಜನಾಂಗದ ಸೊತ್ತು, ಎಂಬುದನ್ನು ಕಂಡಹಿಡಿಯಲು ಶ್ರಮಪಡ ಬೇಕಾಗಿಲ್ಲ. "ಯಾ ದಗಡನಾ ವೀರ ಗಡಳ ಮ್ಹಣತಾತ" ಎಂದು ಮಹಾರಾಷ್ಟ್ರ ಸಂಶೋಧಕರು ಹೇಳುವ

'ವೀರ ಗಕಳ' ಎಂಬ ಮಾತಿನಿಂದಲೆ ಇವು ಆರಿಯವಲ್ಲ, ಎಂಬುದು ಸ್ಪಷ್ಟವಾಗುತ್ತದೆ. ನಾಸೀಕ ಗ್ಯಾಝಿಟಿಯರಿನಲ್ಲಿ ಈ ಕಲ್ಲುಗಳನ್ನು ಪೂಜಿಸುವವರು 'ಕುಣಬಿ', 'ಕೋಳಿ' (ಅಂಬಿಗರು) ಮೊದಲಾದ ಜಾತಿಯವರೆಂದು ಹೇಳಿದ್ದಾರೆ! ಮರಾಠರು ಆರ್ಯ-ದ್ರಾವಿಡ ಸಂತತಿಯೆಂದು ಮೇಲೆ ವಿವರಿಸಿದೆಯಷ್ಟೇ. ಕನ್ನಡಿಗರ ವೀರಗಲ್ಲಿನ ಅಲ್ಪಸ್ವಲ್ಪ ಅನುಕರಣವು ಆರಿಯರಲ್ಲಿಯೂ ಆರಂಭವಾಗಿದ್ದುದು ಕಂಡುಬರುತ್ತದೆ. ಆದರೆ, ಆರ್ಯಜನಾಂಗದಲ್ಲಿ (ಹಿಂದೂದೇಶದಲ್ಲಿ ಅಥವಾ ಹಿಂದೂದೇಶದ ಹೊರಗೆ) ಯಾವ ಶಾಖೆಯವರೂ ಈ ಬಗೆಯ ವೀರಗಲ್ಲುಗಳನ್ನು ನಡಿಸಿ ಪೂಜಿಸುವ ರೂಢಿಯಲ್ಲಿದೆ? ಆದ್ದುದರಿಂದ ಆರಿಯರು ಇದನ್ನು ಕನ್ನಡಿಗರಿಂದಲೇ ಎತ್ತಿಕೊಂಡ ನಡತೆಯೆಂದು ಹೇಳಬಹುದಾಗಿದೆ. ಮತ್ತೂ ಒಂದು ಮಾತೆಂದರೆ ಕನ್ನಡಿಗರ ವೀರಗಲ್ಲಿನ ಒಂದು ವಿಶಿಷ್ಟ ಪಡಿಯಚ್ಚು ಇದೆ. ಕರ್ಣಾಟದ ದಕ್ಷಿಣ ತುದಿಯಲ್ಲಿ ಸಿಕ್ಕುವ ವಿಶಿಷ್ಟ ಪ್ರಕಾರದ ವೀರಗಲ್ಲಿನಂತಹ ನಟ್ಟುಕಲ್ಲುಗಳೇ ಉತ್ತರದಲ್ಲಿ ನಾಸೀಕ ಮೊದಲಾದ ಕಡೆಗೆ ಸಿಕ್ಕುತ್ತಿವೆ. ಈ ವರೆಗೆ ಬೆಳಕಿಗೆ ಬಂದಿರುವ ಸಾವಿರಾರು ವೀರಗಲ್ಲುಗಳಲ್ಲಿ ಆರೆ ಲಿಪಿಯವು ಎಷ್ಟು ಹುಡುಕಿದರೂ ಹತ್ತು-ಹದಿನೈದಿಗಿಂತ ಹೆಚ್ಚು ದೊರೆತಿಲ್ಲ!

ಇಂತಿವೆಲ್ಲ ಕಾರಣಗಳಿಂದ ಈ ವೀರಗಲ್ಲುಗಳ ಸಂಪ್ರದಾಯವು ಕನ್ನಡಿಗರದೇ ಆದ ಒಂದು ವೈಶಿಷ್ಟ್ಯವೆಂದು ಹೇಳಲು ಅಡ್ಡಿಯಿಲ್ಲ. ಹಾಗಾದರೆ ನಾಸೀಕ ಖಾನದೇಶಗಳ ಕಡೆಗಿರುವ ಈ ವೀರಗಲ್ಲುಗಳು ಯಾರವು? ಖಾನದೇಶದ ಹತ್ತರದಲ್ಲಿರುವ ಈ ವೀರಗಲ್ಲುಗಳಿಗೆ ಆ ಭಾಗದಲ್ಲಿಯೇ ಇರುವ ಕನ್ನಡ ಕುಣಬಿಗಳು (ಒಕ್ಕಲರು), ಗೋವಳರು ಮತ್ತು ಕುರುಬರು ಇವರೇ ಕಾರಣರೆಂದೆನ್ನಬಹುದೆ? ಔರಂಗಾಬಾದ ಜಿಲ್ಲೆಯ ಒಂದು ತಾಲ್ಲೂಕಿನ ಸೀಮಾ ವಿಭಾಗಕ್ಕೂ 'ಕನ್ನಡ' ಎಂಬ ಹೆಸರು ಬರಲು ಈ ಭಾಗದಲ್ಲಿದ್ದ ಪ್ರಾಚೀನ 'ಕನ್ನಡ' ಗೋವಳರೇ ಕಾರಣರಾಗಿರಬಹುದೇ? ಆದುದರಿಂದಲೇ ಈ ಪ್ರದೇಶವು ಒಂದು ಕಾಲಕ್ಕೆ 'ಕನ್ನಡ'ವಾಗಿದ್ದಿತೆಂದು ನಿರ್ಧರಿಸಬಹುದೆ?

ಈ ಸೀಮೆಗೆ ಇರುವ ಖಾನದೇಶವೆಂಬ ಪುರಾತನದ ಹೆಸರು, ಇದು ಮೊದಲು ಕನ್ನಡದ ಸೀಮೆಯೆ ಆಗಿದ್ದಿತು, ಎಂದೆನ್ನಲು ಒತ್ತಾಯಪಡಿಸುತ್ತಲಿದೆ. ಮುಂಬೈ ಇಲಾಖೆಯಲ್ಲಿ 'ಖಾನದೇಶ' ಎಂಬುದು ಒಂದು ಜಿಲ್ಲೆ, ಎಂಬ ಕಲ್ಪನೆಯಿದ್ದರೂ ಅದು ಜಿಲ್ಲೆಗಿಂತ ದೊಡ್ಡಸೀಮೆ. ಆದುದರಿಂದಲೆ, ಇದು 'ದೇಶ'; ಇದನ್ನು ಇಬ್ಭಾಗಮಾಡಿ ಪೂರ್ವಖಾನದೇಶ, ದಕ್ಷಿಣ ಖಾನದೇಶ ಎಂಬ ಎರಡು ಜಿಲ್ಲೆಗಳನ್ನು ಮಾಡಿದ್ದುಂಟು. ತುಂಡರಿಸಿ ದಕ್ಷಿಣ ಕನ್ನಡ, ಉತ್ತರ ಕನ್ನಡ, ಎಂದು ವಿಭಾಗಿಸಿದಂತೆ. ಹಲವು ಮಾತುಗಳಲ್ಲಿ ಕನ್ನಡ ಜಿಲ್ಲೆ ಮತ್ತು ಖಾನ ದೇಶಗಳಲ್ಲಿ ಸಾಮ್ಯವಿದೆ. ಈ ಸೀಮೆಗಳಿಗೆ ಬಂದಿರುವ ವಿಶೇಷ ಪ್ರಕಾರದ ಹೆಸರುಗಳಿಗೆ ಕಾರಣವೇನು? ಎಂಬುದು ವಿಚಾರಾರ್ಹವಾಗಿದೆ. ಸಾಮಾನ್ಯವಾಗಿ ಜಿಲ್ಲೆಗಳಿಗೆ ಹೆಸರು ಕೊಟ್ಟುದ್ದು ಅವುಗಳ ಮುಖ್ಯ ಸ್ಥಳಗಳಿಂದ. ಧಾರವಾಡ, ನಗರ, ಪುಣೆ ಮುಂತಾದವುಗಳೆ ಇದಕ್ಕೆ ನಿದರ್ಶನ. ಈ ದೃಷ್ಟಿಯಿಂದ ವಿಚಾರಿಸಿದರೆ ಪೂರ್ವ ಮತ್ತು ಪಶ್ಚಿಮ ಖಾನದೇಶಗಳಿಗೆ ಜಳಗಾಂವ, ಧುಳೆ ಎಂಬ ಹೆಸರುಗಳು ಇರಬೇಕಾಗಿತ್ತು, ಅಥವಾ ಕೃಷ್ಣಾ, ಗೋದಾವರಿ ಜಿಲ್ಲೆಗಳಂತೆ ನದಿಯ ಮೇಲಿಂದಲೂ ಕೆಲವು ಜಿಲ್ಲೆಗಳಿಗೆ ಹೆಸರು ಬಂದುದುಂಟು. ಆದರೆ, ಖಾನ ಎಂಬ ಹೆಸರಿನ ನದಿಯೂ ಇಲ್ಲಿ ಇಲ್ಲ!

ಹಾಗಾದರೆ ಖಾನದೇಶವೆಂದರೇನು? ಖಾನರ ದೇಶವೆಂದು ಅರ್ಥಮಾಡಬೇಕೆ? ಖಾನರು ಅಲ್ಪಸಂಖ್ಯಾಕರು. ೧೦೦ಕ್ಕೆ ೭ರಷ್ಟೂ ಇಲ್ಲವಂತೆ! ಖಾನರ ದೇಶವಲ್ಲದಿದ್ದರೂ ಖಾನರು ಆಳಿದ ದೇಶ! ಆದುದರಿಂದ, ಈ ಹೆಸರು, ಎಂದು ಕೆಲರ ತರ್ಕ! ಖಾನದೇಶದ ಗ್ಯಾಝಿಟಿಯರಿನಲ್ಲಿ ಇದರ ಅಲ್ಪಸ್ವಲ್ಪ ಚರ್ಚೆಯನ್ನು ಮಾಡಿದ್ದುಂಟು. ಆಬುಲ್ ಫಜಲನು ಐನೆ ಅಕಬರಿಯಲ್ಲಿ ಇದೆ ಬಗೆಯಾದ ವ್ಯುತ್ಪತ್ತಿಯನ್ನು ಹೇಳಿದ್ದಾನೆ. ಆದರೆ 'ಖಾನ' ಎಂಬ ಹೆಸರು ಮುಸಲ್ಮಾನರು ಈ ಪ್ರಾಂತಕ್ಕೆ ಬರುವ ಮೊದಲಿನಿಂದಲೇ ಇದ್ದಿತೆಂದು ಫೆರಿಸ್ತನು ಹೇಳುತ್ತಾನೆ. ಅಬುಲ್ ಫಜಲನು ದಿಲ್ಲಿಯಲ್ಲಿ ಕುಳಿತು ಈ ನಾಡಿನ ವಿಚಾರವಾಗಿ ಬರೆದವನು. ಫೆರಿಸ್ತನು ಅಹಮ್ಮನಗರದ ನಿಜಾಮಶಹರ ಓಲಗದಲ್ಲಿ ಇತಿಹಾಸ ಲೇಖಕನಾಗಿದ್ದವನು. ಖಾನದೇಶ ಪ್ರಾಂತದ ನೆರೆಯಲ್ಲಿ-ಖಾನದೇಶದಲ್ಲಿಯೆ ಇದ್ದವನಾದ್ದರಿಂದ ಅಬುಲ್ ಫಜಲನಿಗಿಂತ ಈತನಿಗೆ ಇಲ್ಲಿಯ ಇತಿಹಾಸ-ಪರಂಪರೆಗಳ ಹೆಚ್ಚು ಪರಿಚಯವು ಇರುವುದು ಸ್ವಾಭಾವಿಕ.

ಇತ್ತೀಚಿನ ಸಂಶೋಧಕರಿಗೂ ಅಬಲ್ ಫಜಲನ ಅಭಿಪ್ರಾಯವು ಮಾನ್ಯವಿಲ್ಲ. ಆದರೆ ನಿಜವಾದ ವ್ಯುತ್ಪತ್ತಿಯು ಏನೆಂಬುದೂ ಅವರಿಗೆ ತಿಳಿದಿಲ್ಲ. ಕರ್ನಲ್ ಸಾಯಿಕ್ ಎಂಬವಗೆ 'ಖಾನ' ಎಂಬುದು ಮೂಲಶಬ್ದವೆನಿಸುವುದಿಲ್ಲ. ಕರ್ನಲ್ ಸಾಹೇಬರಿಗೆ ಇದು ಇಕ್ಕಟ್ಟಾದ ಕಣಿವೆಯ ನಾಡು ಎನಿಸಿ. ಅವರು ಖಿಂಡ-ಖಂಡ (ಕಂಡಿ) ಗಳಿರುವ ನಾಡು; ಆದುದರಿಂದ ಖಾನದೇಶವೆಂದು ಹೇಳುವರು. ಆದರೆ, ಅಮ್ಮಳನೇರಿಯ ಸಬ್‌ಜಡ್ಜರಾಗಿದ್ದ ಶ್ರೀ ಮರಾಠೆಯವರು ಅಲ್ಲಿಯ ಜಾನಪದ ಸಾಹಿತ್ಯವನ್ನು ಸಂಗ್ರಹಿಸಿ ಅದರ ಆಧಾರದ ಮೇಲಿಂದ ಇದು 'ಖಂಡ'ರ ದೇಶವಾಗಿರಬೇಕೆಂದು ಊಹಿಸುತ್ತಾರೆ. ಈ ಖಂಡರು ಮಹಾಭಾರತಕಾಲದ ಖಾಂಡವರೆ ಆಗಿರಬೇಕೆಂದೂ ಕೃಷ್ಣನ ನೆರವಿನಿಂದ ಅರ್ಜುನನು ಸುಟ್ಟ ಖಾಂಡವ ವನವು ಇಲ್ಲಿಯೆ ಇದ್ದಿತೆಂದೂ ಅವರ ಅಭಿಪ್ರಾಯ. ವಿಲ್ಸನ್ ಸಾಹೇಬರೂ ಸುಮಾರಾಗಿ ಇದೇ ಮತದವರಾಗಿದ್ದಾರೆ. ಸಿಂಕ್ಲೆಅರ ಎಂಬವನು ಇದು ಕನ್ಹದೇಶ ಎಂದು ಅರ್ಥಮಾಡುವನು. ಕನ್ಹ ಎಂಬುದೇ ಮುಂದೆ ಖಾನ ಎಂದಾಗಿರಬೇಕೆಂದು ಈತನ ವಿಚಾರ.

ಸರಿ. ನಮ್ಮ ಅಭಿಪ್ರಾಯದಂತೆ ಶ್ರೀಮರಾಠೆ, ಮಿ. ವಿಲ್ಸನ್ ಮತ್ತು ಸಿಂಕ್ಲೆಅರರ ಸತ್ಯದ ಬಹಳ ಸಮೀಪದಲ್ಲಿ ಸುಳಿದಾಡುತ್ತಲಿದ್ದಾರೆ. ಆದರೆ, ಸರಿಯಾದ ಸಂಗತಿಯು ಇನ್ನೂ ಅವರ ಗಮನಕ್ಕೆ ಬಂದಿಲ್ಲ. ಖಾಂಡವ ವನವ ಉತ್ತರಾಪಥದಲ್ಲಿ ಇಂದ್ರಪ್ರಸ್ಥಕ್ಕೆ ಸಮೀಪದಲ್ಲಿ ಇರಬೇಕೆಂದು ತೋರುತ್ತದೆ. ನಿಜವಾಗಿ ದ್ವಾರಕೆ ಅಥವಾ ಮಥುರಾ ವೃಂದಾವನದ ಸುತ್ತಣ ನಾಡಿಗೆ ಕನ್ಹ (ಕೃಷ್ಣ)ನ ದೇಶವೆಂದು ಹೆಸರಿರಬೇಕಾಗಿದ್ದಿತು. ಆದುದರಿಂದ ಪ್ರಸ್ತುತ ಈ ಪ್ರದೇಶವು 'ಕನ್ಹ'ನ ದೇಶವಲ್ಲ; ಕನ್ನರದೇಶವೆಂಬುದೇ ನಿಜ. 'ಕನ್ಹ' ಎಂಬ ಜನಾಂಗವು ಪೂರ್ವಕಾಲದಲ್ಲಿ ದಕ್ಷಿಣಾಪಥದಲ್ಲಿ ವ್ಯಾಪಿಸಿಕೊಂಡಿದ್ದುದನ್ನು ಹಿಂದಿನ ಅಧ್ಯಾಯಗಳಲ್ಲಿ ವಿವರಿಸಲಾಗಿದೆ. ಶ್ರೀಶೈಲ ಹತ್ತರಿನದು ಕಣ್ಣ(ನ್ನ) ವಿಷಯವಾಯ್ತು; ಸೊಲ್ಲಾಪುರದ ನೆರೆಹೊರೆಯ ಸೀಮೆಯು ಕನ್ನವಾಡವಾಯ್ತು; ಇನ್ನೂ ಎಷ್ಟೋ ಭಾಗವು ಕನ್ನನಾಡು ಎಂದಾಯ್ತು; ಆದುದರಿಂದ ಇದೀಗ ವರ್‍ಹಾಟದ ಹತ್ತರಿನ ಈ ಸೀಮೆಯು ಕನ್ನಡದೇಶವೇ ಆಗಿರಬೇಕೆಂಬುದು ನಿಶ್ಚಿತ. ಈ ಪ್ರಾಚೀನ ಕನ್ನದೇಶದ ಇಂದಿನ ಅವಶೇಷವೇ ಮೇಲೆ ಹೇಳಿದ 'ಕನ್ನಡ' ತಾಲ್ಲೂಕು. ಖಾನದೇಶದ ವರೆಗೂ ಲಾಟದೇಶವಿದ್ದಿತೆಂದು ಪ್ರಾಚೀನ ಉಲ್ಲೇಖಗಳಿಂದ ಸಿದ್ಧವಾಗಿದೆ. ಲಾಟ-ಖಾನದೇಶಗಳ ಈ ಜೋಡಿಯೆ ಪ್ರಾಚೀನ 'ಲಾಟ-ಕರ್ಣಾಟ'ಗಳ ಸಂಯುಕ್ತ ಹೆಸರಿಗೆ ಮೂಲ ಕಾರಣವಾಗಿರಬೇಕು.

ಮರಾಠಿ ಭಾಷೆಯಲ್ಲಿರುವ ಕನ್ನಡ ಧಾತುಗಳು* ಮತ್ತು ಮೂಲ ಮರಾಟಜನಾಂಗದಲ್ಲಿರುವ ಕನ್ನಡ ರಕ್ತ ಸಂಬಂಧದ ಸಮಸ್ಯೆಯ ಸರಿಯಾದ ಅರ್ಥವಾಗಬೇಕಾಗಿದ್ದರೆ ಮೂಲ ಮಹಾರಾಷ್ಟ್ರದ ಎಂದರೆ ವರ್‍ಹಾಟದ ನೆರೆಯಲ್ಲಿಯೆ ಕರ್ಣಾಟವೂ ಇರಲೇಬೇಕು. ಅದುವೆ ಈ ಕನ್ನದೇಶ-ಖಾನದೇಶ. ನಾಸಿಕ, ನಗರ ಮತ್ತು ಖಾನದೇಶಗಳಲ್ಲಿರುವ ಕನ್ನಡ ಗೋವಳರ, ಹಾಗು ವರ್‍ಹಾಟದಲ್ಲಿ ಮತ್ತು ಅದರ ನೆರೆಯಲ್ಲಿರುವ ಕನ್ನಡ ಕುರುಬರೇ ಮೊದಲಾದ ಕೆಚ್ಚ ಕನ್ನಡಿಗರ ಆಗು-ಹೋಗುಗಳನ್ನು ವಿಚಾರಿಸಿದರೂ ಈ ಜನಗಳ ಮೊದಲಿನ ನೆಲೆವೀಡು ಇಲ್ಲಿಯೆ ಕೆಲಬಲ್ಲದಲ್ಲಿ ಎಲ್ಲಿಯಾದರೂ ಇರಲೇಬೇಕೆಂಬುದೂ ಸ್ಪಷ್ಟ. ಗುಜರಾತಿಗೆ ಅಂಟಿಕೊಂಡೇ ಎಲ್ಲಿಯಾದರೂ ಕನ್ನಡರ ಸೀಮೆಯು ಇಲ್ಲದೆಯೆ ಗುಜರಾತಿ ಭಾಷೆಯಲ್ಲಿ ಕನ್ನಡ ಮಾತಿನ ಪಡಿನೆಳಲು ಕಾಣುತ್ತಿದೆಯೆಂದು ಮಿ. ಮಾಸ್ತರ, I. C.S. ಮೊದಲಾದವರು ಹೇಳುವುದೂ, ಗುಜರಾತಿನ Substrata ದ್ರಾವಿಡವಾಗಿದ್ದಿತೆಂದು ಡಾ. ಸ್ಟೆನ್‌ಕೊನೆ ಮೊದಲಾದವರು ಪ್ರತಿಪಾದಿಸುವುದೂ ಅರ್ಥವಿಹೀನ.

ಇಂತಿವೆಲ್ಲ ಕಾರಣಗಳಿಂದ ಇಂದಿನ ಖಾನದೇಶವೆ ಮುಂಚಿನ ಕನ್ನದೇಶ. ಕನ್ನರ ದೇಶ, ಎಂಬುದು ನಿಃಸಂದಿಗ್ಧ. ಇಂತದು ವಿಂಧ್ಯದಿಂದ ನೀಲಗಿರಿಯ ವರೆಗೆ ಹಬ್ಬಿದ್ದ ಪುರಾತನ ಕಾಲದ ಕನ್ನಾಡು. ಇದುವೆ ಕನ್ನರ ನೆಲೆವೀಡು!

---

* ಈ ವಿಷಯದ ವಿಸ್ತೃತ ವಿವರಗಳನ್ನು ತಿಳಿಯುವವರು ಮಹಾರಾಷ್ಟ್ರದ ಮೂಲ ಹಾಗೂ 'ಮರ್‍ಹಾಟೀ ಸಂಸ್ಕೃತಿ: ಕಾಂಹಿ ಸಮಸ್ಯಾ' ಪುಸ್ತಕಗಳನ್ನು ಗಮನಿಸಬೇಕು (ಸಂ.)

ಟಿಪ್ಪಣಿ

೧. ***Indian Antiguary,*** Vol. VII. p. 295

೨. ***Charmichael Lectures,*** 1918. p. 27

೩. ***Castes and Tribes of South India***. III p. 226: II, 273; VII, 262 etc.

೪. Chatterjee S. K. : ***Origin and Development of Bengali Language Appendix*** A and B., B. C. Mujumdar: 'ಬಂಗಾಳಿ ಸಾಹಿತ್ಯ ಪತ್ರಿಕಾ' XX, quoted in CL. by Dr. D. R. Bhandarkar; K. Pp. Goswami : IHQ. '39, pp. 137-143, etc.

೫. Romeshchandra Mujumadar, M.A., PH. D. Indian Historical Quarterly. Sept. '31, p. 455

೬. "Some parallelisms in Indo-Aryan and Dravidian with special reference to Marathi,Gujarati and Kanarese". - JBRAS Vols. V and VIII

೭. ***Gujarat and its Literature***, p. 2.

೮. ತಾರಾನಾಥ ತರ್ಕವಾಚಸ್ಪತಿ ವಾಚಸ್ಪತ್ಯಕೋಶ. ನೋಡಿ

೯. ***Epigraphia Indica***. III, p. 87

೧೦. Ibid, IV. p. 261

೧೧. Ibid XII. p.24

೧೨. ***Indian Antequary***, XV, p. 198

೧೩. Ibid, XII, p.181

೧೪. ***Bombay. Gazett.*** Vol :I, part I, p. 7

೧೫. ***Epigraphia Indica***, IV. p. 138

೧೬. Ibid, XX,p. 84

೧೭. ***Alterkar Rashtrakutas and their times***. p. 26

೧೮. IA. XII. p. 218. EI. V; pp. 192.

೧೯. ***Early History of India.*** p. 430

೨೦. 'ಕುಣಬಿ, ಕುಳುಂಬಿ-ಶೇತಕರಿ' ಎಂದು ಮಹಾರಾಷ್ಟ್ರ ಶಬ್ದಕೋಶವು ಹೇಳುತ್ತದೆ.

೨೧. ***Indian Culture.*** Jan.'35. & IHT. p. 280

೨೨. Ibid. 1935, pp. 390-I

೨೩. Apte. V. S.: ***Samskrit English Dictionary*** a name of the Karnat country

೨೪. Winternitz; ***History of Indian Literature***, Vol. II, p. 424

೨೫. Cf. 'ದಕ್ಷಿಣ ಸೌರಾಷ್ಟ್ರಮೆನಿಪ ಶ್ರೀಮತ್ ಸ್ವಯಂಭೂ ಸೋಮನಾಥದೇವರು ; ಹೊಯ್ಸಳಕಾಲದ (೧೨೧೮) ಶಾಸನ. ಕುಂದವಾಡಿನ ಸೋಮನಾಥನೀತ! -EC. XI, Dg.105

೨೬. ***Rashtrakutas and their Times***. p. 21

೨೭. ***Early History of India,*** p. 430

೨೮. ***Indian Culture***, 1935: pp. 354-356

೨೯. ***Indian Antiquary***, 1932; p. 47

೩೦. ***Indian Historical Quarterly***, Dec. 31,p. 682

೩೧. Dutt. N. K; ***Aryanisation of India***. p. 37

೩೨. Castes and Tribes of Central Provinces, p. 358; Cf. 'ಕುಣಬಿ ವ್ಯಕ್ತೀಸ ಆದರಾನೇ ಸನ್ಮಾನಾನೆ ಸಂಬೋಧಣ್ಯಾಚೀ ಸಂಜ್ಞಾ, 'ಪಾಟೀಲ' - ಮರಾಠಿ ಶಬ್ದಕೋಶ

೩೩. ವಿವಿಧ ಜ್ಞಾನವಿಸ್ತಾರ ೧೯೨೭, 'ವರ್ಹಾಡಿ, ಮರಾಠಿ'

೩೪. ***Castes and Tribes of Central Provinces***, Vol. I, p. 379

೩೫. ***Linguistic Sarvey of India,*** Vol. I, part I, p. 144 and IA. Vol. XXXII, p. 92

೩೬. ***Castes and Tribes of Central Provinces***, Vol. I, p. 69; 359

೩೭. ***Linguistic Survey of India***, Vol .IV, p. 444

೩೮. ***Castes and Tribes of Central Provinces***. Vol. I, p. 417

೩೯. *ಶಬ್ದ ಮಣಿದರ್ಪಣಂ*(ಕರ್ನಾಟಕ ಸಾಹಿತ್ಯ ಪರಿಷತ್ ಪ್ರಕಟಣೆ) ಪುಟ ೨೯

೪೦. ಇದರ ಇನ್ನೂ ಹೆಚ್ಚಿನ ವಿವರಣೆಯು 'ಕನ್ನಡವು ಮರಾಠಿಗೆ ಇತ್ತ ಸಾಂಸ್ಕೃತಿಕ ಋಣ' ಎಂಬ ಪ್ರಬಂಧದಲ್ಲಿ ಬರಲಿದೆ. (ಆದರೆ, ಈ ಪ್ರಬಂಧವು ಪ್ರಕಟವಾಗಲಿಲ್ಲ. ೧೯೩೭ರಲ್ಲಿ ಪ್ರಕಟವಾದ 'ಕನ್ನಡ ನುಡಿಯ ಹುಟ್ಟು ಅಥವಾ ನಿರುಕ್ತ' ಪುಸ್ತಕದ 'ಬಿನ್ನಹ'ದ ಭಾಗದಲ್ಲೂ ಈ ಉಲ್ಲೇಖವು ಬಂದಿದೆ. ಸಂ)

೪೧. ***Linguistic Survey of India,*** Vol. IV. p. 386,395, etc.

ಎಡೆಗಳು ಹೇಳುವ
ಕಂನಾಡ ಕತೆ

ಅರಿಕೆ

ಪಲವುಂ ನಾಲಗೆಯುಳ್ಳವಂ ಬಗೆವೊಡೆಂದುಂ ಬಣ್ಣಿಸಲ್ಕಾರನಾ
ನೆಲನಂ ಮತ್ತಿನ ಮಾನಿಸರ್ ಪೋಗಳಲೇನಂ ಬಲ್ಲರ್?

-ಆಂಡಯ್ಯ

ಆಂಡಯ್ಯ ಕವಿಯು ಹೇಳಿರುವಂತೆ ಸಾವಿರನಾಲಗೆಯ ಆದಿಶೇಷನಿಗೂ ಅಸಾಧ್ಯವಾದುದನ್ನು ಒಂದು ನಾಲಗೆಯೂ ಸರಿಯಾಗಿ ಇಲ್ಲದ ನನ್ನಂತಹನು ಸಾಧಿಸಲು ಹಂಬಲಿಸುವುದು ಹುಚ್ಚು ಸಾಹಸವೆ ಸರಿ. **'ಕೊಡದೊಳಗೆಷ್ಟು ನಿಲ್ವುದು ಸಮುದ್ರ ಜಲಂ? ಕನ್ನಡಿಯೊಳಗೆಷ್ಟು ತೋರ್ಪುದ ವರಕಾಂಚನಾದ್ರಿ?'** ಎಂದು ರತ್ನಾಕರವರ್ಣಿಯು ಇನ್ನೊಂದು ಪ್ರಸಂಗದಲ್ಲಿ ಆಡಿದ ಮಾತುಗಳೂ ಇಲ್ಲಿ ಸರಿಹೋಗುತ್ತವೆ. ಇದೆಲ್ಲವೂ ನಿಜವಿದ್ದರೂ ಜಲಧಿಯ ನೀರು ಅನಂತವೆಂದು ಕೊಡದೊಳಗೆ ತುಂಬಿಕೊಳ್ಳುವುದನ್ನು ಯಾರೂ ಬಿಟ್ಟಿಲ್ಲ; ಹಿಮವತ್ಪರ್ವತವು ಅಗಮ್ಯ ಮತ್ತು ಅಸಾಧ್ಯವಾದರೂ ಅದನ್ನು ಚಿತ್ರಫಲಕದಲ್ಲಿ ಚಿತ್ರಿಸ ಬೇಕೆಂಬ ಕುತೂಹಲ ಕಡಿಮೆಯಾಗಿಲ್ಲ; ಅನೇಕ ದೃಷ್ಟಿಯಿಂದ ಅಸಂಪೂರ್ಣವೆನಿಸಿದರೂ ಭೂಪಟಗಳನ್ನು ಬರೆಯುವುದು, ಭೂವರ್ಣನೆಗಳನ್ನು ಪ್ರಕಟಿಸುವುದು ನಿಂತಿಲ್ಲ.

'ಇದು ಸಾವಿರನಾಲಗೆಯ ಅನಂತನಿಗೇ ಅಸಾಧ್ಯ. ಆದಕಾರಣ ನೆಲದ ಬಣ್ಣನೆಗೆ ಸುಮ್ಮನೆ ಯಾರೂ ಬಾಯಿಹಾಕಬಾರದು', ಎಂದು ಆಂಡಯ್ಯನ ಅಭಿಪ್ರಾಯವಾದರೂ ಇದ್ದಿಲ್ಲ. ಹಾಗೆ ಆತನ ಅಭಿಪ್ರಾಯವೆ ಇದ್ದುದಾಗಿದ್ದರೆ, 'ಕಬ್ಬಿಗರಕಾವ'ದಲ್ಲಿ ಕಂನಾಡ ಬಣ್ಣನೆಗೆ ಏಕೆ ತೊಡಗುತ್ತಿದ್ದನು? ಪ್ರಯತ್ನ ಮಾಡುವುದು, ಪ್ರತಿಯೊಬ್ಬರ ಕರ್ತವ್ಯವೇ ಆಗಿದೆ. ಪ್ರತಿಯೊಬ್ಬರೂ ತಮ್ಮ ಅಳವಿಗನುಸರಿಸಿ ಪ್ರಯತ್ನ ಮಾಡಲೇಬೇಕು. ಮಾಡದೆ ಇದ್ದರೆ ಅದುವೆ ಅಧರ್ಮ. ಆದರೆ, ತಾನು ಮಾಡಿದ್ದುದು ಒಂದು 'ಪ್ರಯತ್ನ'ಎಂಬ ಅರಿವು ಮಾತ್ರ ಸದಾ ಜಾಗ್ರತವಾಗಿರಬೇಕು. ಆದ ಕೆಲಸದ ಸಂಭ್ರಮದಲ್ಲಿ 'ಪ್ರಯತ್ನ'ವನ್ನು ಪರಿಪೂರ್ಣವೆಂದು ಬಗೆಯುವುದು ತಪ್ಪು. ಮುಂದಿನ ಎಲ್ಲ ಅನರ್ಥಪರಂಪರೆಗಳ ಉಗಮಸ್ಥಾನವೇ ಇದು.

ನನ್ನದು ಇದೊಂದು ಪ್ರಯತ್ನ. ಈ ಅಲ್ಪಪ್ರಯತ್ನವೆ ಕೈಗೂಡಬೇಕಾದರೆ ಅದೆಷ್ಟು ಜನರ ನೆರವು ಪಡೆಯಬೇಕಾಯಿತು! ಶ್ರೀಯುತರಾದ ಕಪಟರಾಳ ಕೃಷ್ಣರಾಯರು, ಪಾಂ. ಭಿ. ದೇಸಾಯರು, ಎಂ. ವಾಸುದೇವರಾಯರು, ಹೆಗ್ಗಡೆ ಬಂಧುಗಳು, ಡಾ. ಆ. ನೇ. ಉಪಾಧ್ಯೆ, ಪ್ರೊ. ಕುಂದಣಗಾರ, ಧೋ. ರಾ. ದೇಶಪಾಂಡೆ, ಪ್ರೊ. ಸಿ. ಡಿ. ದೇಶಪಾಂಡೆ, ಬೀ Chi, ನೆರಂಗರು, ಮುಳಗುಂದ ಕಾಶೀನಾಥ ಶಾಸ್ತ್ರಿಗಳು, ಪಂ. ಕೇಶವಶರ್ಮಾ, ಎನ್. ಜಿ. ನಾಯಕ, ಪ್ರಯಾಗ (ರಾವಸಾಹೇಬ) ಪ್ರೊ. ಎಂ. ಮರಿಯಪ್ಪಭಟ್ಟ, ಪ್ರೊ. ಪುರಾಣಿಕ ಪದ್ಮನಾಭರಾವ,

ಎ. ಎಂ. ಅಣ್ಣಿಗೇರಿ, ಆರ್. ವ್ಹಿ. ಕುಲಕರ್ಣಿ, ಚುಳಕಿ, ಮೊದಲಾದವರು ಎಡೆಗಳ ಪಟ್ಟಿಯನ್ನು ಪೂರಯಿಸಿ, ವಿಚಾರವಿನಿಮಯಕ್ಕೆ ನೆರವಾಗಿ, ಹೊಸ ಸೂಚನೆಗಳನ್ನು ಕೊಟ್ಟು ಬಗೆಬಗೆಯಾಗಿ ಸಹಾಯವನ್ನು ಕೊಟ್ಟಿದ್ದಾರೆ. ಥಿಟೆ, ಕುಲಕರ್ಣಿಯವರು ಆರಂಭದಲ್ಲಿ ಬರೆವ ಕೆಲಸವನ್ನು ಸ್ವಲ್ಪ ಹಗುರು ಮಾಡಿದರು. ಶ್ರೀ ಕುಲಕರ್ಣಿ ಶೇಷಗಿರಿರಾಯರು ಸಕಾಲದಲ್ಲಿ ಮುದ್ರಿಸಿಕೊಟ್ಟರು.

ಆರೋಗ್ಯವು ಪೂರ್ಣ ಕೆಡುವ ಮೊದಲೆ ಕೈಯಲ್ಲಿರುವ ಅರ್ಧಮರ್ಧ ಕೆಲಸಗಳನ್ನು ಮುಗಿಸಿಕೊಳ್ಳಬೇಕೆಂಬ ಎಣಿಕೆಯಿಂದ ಹ್ಯಾಸ್ಕೂಲಿನ ಕೆಲಸವನ್ನೂ ಬಿಟ್ಟುದಾಯ್ತು. ಅಂತೂ ಈ ಪುಸ್ತಕದ ಕರಡೂ ಸಿದ್ಧವಾಯಿತು. ಆದರೆ, ಬೇಗ ಅಚ್ಚಾಗುವ ಲಕ್ಷಣವಿದ್ದಿಲ್ಲ. ಇದನ್ನರಿತ ಕಂನಾಡ ಅಭಿಮಾನಿಗಳಾದ ಶ್ರೀ ಮೆಳ್ಳಿಗಟ್ಟಿ ಮಧ್ವರಾಯರು ೨೫೦ ರೂ. ಗಳ ಧನಸಹಾಯವನ್ನಿತ್ತು ನನ್ನ ಕೆಲಸವನ್ನು ಮುಂದುವರಿಸ ಹೇಳಿದರು. ಈ ಪುಸ್ತಕದಲ್ಲಿ ಕಂನಾಡು-ಮರ್‍ಹಾಟಗಳ ಪ್ರಾಚೀನ ಸಾಂಸ್ಕೃತಿಕ ಸಂಬಂಧಗಳ ಸಂಶೋಧನೆಯು ಅಡಕವಾಗಿರುವುದರಿಂದ ಸಾಂಗಲಿ ಸಂಸ್ಥಾನದ ಲೋಕಪ್ರಿಯ ಮಂತ್ರಿಗಳು ೨೦೦ರೂ. ಗಳ ಕೊಡುಗೆಯನ್ನು ಅನುಗ್ರಹಿಸಿ ಪ್ರೋತ್ಸಾಹಿಸಿದರು. ಇಂತಿವರ ನೆರವಿನಿಂದ ಪ್ರಕಟನೆಗಾಗಿ ಮಾಡಬೇಕಾದ ಸಾಲದ ಭಾರವು ಅರ್ಧದಷ್ಟಾದರೂ ಕಡಿಮೆಯಾದುದಕ್ಕಾಗಿ ಅವರಿಗೆ ನನ್ನ ಕೃತಜ್ಞತೆಯ ವಂದನೆಗಳು.

ಊರ ಹೆಸರಿನಂತಹ ಕ್ಷುಲ್ಲಕವಾಗಿ ತೋರುವ ವಿಷಯದಲ್ಲಿ ಇಷ್ಟೊಂದು ಸಾಂಸ್ಕೃತಿಕ ಸಂಗತಿಗಳು ಹುದುಗಿಕೊಂಡಿವೆಯೆಂಬ ಕಲ್ಪನೆಯೆ ಮೊದಲು ನನಗೆ ಇರಲಿಲ್ಲ. ನಮ್ಮ ನಾಡಿನ ಎಡೆಗಳ ಹೆಸರಿನ ಅಭ್ಯಾಸಕ್ಕೊಂದು ವಿಶೇಷ ಮಹತ್ವವುಂಟೆಂದು ಇದನ್ನು ಬರೆವಾಗ ನನ್ನ ಮನವರಿಕೆಯಾಗಿದೆ. ಭಾರತದ ಸಾಂಸ್ಕೃತಿಕ ಇತಿಹಾಸದೊಳಗಿನ ಕೆಲವೊಂದು ಸಮಸ್ಯೆಗಳು ಈವರೆಗೆ ಸಂದಿಗ್ಧವಾಗಿ ಹಾಗೆಯೆ ಉಳಿದುಕೊಂಡಿವೆ. ನಮ್ಮನಾಡಿನ ಎಡೆಗಳ ಹೆಸರಿನಲ್ಲಿ ಆ ಸಮಸ್ಯೆಗಳನ್ನು ಬಿಡಿಸಿ ಬಗೆಹರಿಸುವ ಸಾಮರ್ಥ್ಯವಿದೆ. ಮಹಾರಾಷ್ಟ್ರ, ಗುಜರಾತ, ಬಂಗಾಲ, ಪಂಜಾಬಗಳ ವರೆಗೂ ಇದ್ದ ಕಂನಾಡ ಮೊದಲಿಗರ ಪ್ರಾಚೀನ ಸಂಬಂಧದ ಮೇಲೂ ಈ ಅಭ್ಯಾಸದಿಂದ ಹೊಸ ಬೆಳಕು ದೊರೆವಂತಿದೆ.

ಎಡೆಗಳ ಹೆಸರಿನ ಹಿನ್ನೆಲೆಯಲ್ಲಿ ನಮ್ಮ ನಾಡಿಗರ ರೂಢಿ, ಸಂಪ್ರದಾಯ ಮತ್ತು ಪೂರ್ವಪರಂಪರೆಗಳನ್ನು ಮಾನವಸಮಾಜವಿಕಾಸಶಾಸ್ತ್ರದ ಬೆಂಬಲದಿಂದ ಹೊಂದಿಸಿ ಹೇಳುವುದೆ ಈ ಲೇಖನದ ಗುರಿಯಾಗಿದೆ. ಇದಕ್ಕೆ ಆಧಾರವಾಗಿ ಇನ್ನುಳಿದ ಸಾಧನಗಳನ್ನೂ ಉಪಯೋಗಿಸಿಕೊಂಡಿದೆ. ಶಾಸನ, ಭಾಷಾಶಾಸ್ತ್ರ, ಸಾಹಿತ್ಯದ ಆಧಾರಗಳನ್ನು ನನ್ನ ಕೈಗೆ ನಿಲುಕಿದಷ್ಟು ಬಳಸಿಕೊಂಡಿದ್ದೇನೆ. ಇವಕ್ಕೇ ಪ್ರಥಮಸ್ಥಾನವನ್ನು ಕೊಟ್ಟು ಪರಂಪರೆಗಳನ್ನು ಅಲ್ಲಗಳೆವುದಕ್ಕೆ ಮನಸ್ಸುಮಾಡಿಲ್ಲ. ಏಕೆಂದರೆ ಸಂಪ್ರದಾಯ, ಪೂರ್ವಪರಂಪರೆಗಳು ಪ್ರತ್ಯಕ್ಷಜೀವನದ ಭಾಗವಾಗಿದ್ದು, ಶಾಸನಾದಿಗಳು ಅದರ ನೆಳಲು. ಆದುದರಿಂದ, ಅವುಗಳಿಗೆ ನನ್ನ ತಿಳುವಳಿಕೆಯಂತೆ ಗೌಣಸ್ಥಾನವಲ್ಲದೆ ಪ್ರಥಮಸ್ಥಾನವು ದೊರೆಯಲಾರದು. ಎಲ್ಲಿ ಪರಂಪರೆಗಳು, ಪೂರ್ವ ಸಂಪ್ರದಾಯಗಳೇ ನಷ್ಟವಾಗಿವೆಯೊ ಅಲ್ಲಿ ಶಾಸನಾದಿ ಲಿಖಿತ ಆಧಾರದಿಂದಲೆ ಸಂಶೋಧನೆಗೆ ಮೊದಲು ಮಾಡಬೇಕಾಗುತ್ತದೆ. ಇಜಿಪ್ತ, ಅಸ್ಸೀರಿಯಾ, ಬಾಬಿಲೋನಿಯಾಗಳ ಸಂಸ್ಕೃತಿಯ ಪರಂಪರೆಗಳನ್ನು ಕಾಯ್ದುಕೊಂಡು ಬಂದ ಒಂದು ಪಿಳ್ಳೆಯೂ ಈಗ ದೊರೆಯುವುದಿಲ್ಲವಾದುದರಿಂದ ಅಲ್ಲಿ ಲಿಖಿತ ಆಧಾರಗಳ ಹೊರತು ಬೇರೆ ಗತಿಯೇ ಇಲ್ಲ. ಆದರೆ, ಕಂನಾಡಿನಂತಹ ಜೀವಂತ ಪರಂಪರೆಗಳನ್ನು ಶಕ್ಯವಿದ್ದಷ್ಟೂ ಈ ವರೆಗೆ ಕಾಯ್ದುಕೊಂಡು ಬಂದಿರುವ ನಾಡಿನ ಆಗುಹೋಗುಗಳನ್ನು ಬರೆವಾಗ ಬರಿ ಕಲ್ಬರೆಹಗಳನ್ನೆ ಅವಲಂಬಿಸಿದರೆ ಆ ಇತಿಹಾಸವು ಅಪೂರ್ಣವಾಗುವುದೆಂಬ ಹೆದರಿಕೆ ನನಗೆ.

ನಮ್ಮ ಪೂರ್ವಿಕರು ಹಿಂದಿನ ಪರಂಪರೆಗಳನ್ನು ಅದೆಷ್ಟು ಜತನದಿಂದ ಕಾಯ್ದುಕೊಂಡು ಬಂದಿರುವರೆಂಬುದನ್ನು ಗಮನಿಸಿದರೆ ಅವುಗಳು ನಮ್ಮ ಸಂಸ್ಕೃತಿ ಸಂಶೋಧನೆಯಲ್ಲಿ ವಿಶ್ವಾಸಾರ್ಹವಾದ ಆಧಾರಗಳು ಅರ್ಹವಾಗಿವೆಯೆಂದು ಒಪ್ಪಿಕೊಳ್ಳಲೇ ಬೇಕಾಗುವುದು. ಕುಲ, ಗೋತ್ರ, ಸೂತ್ರಗಳ ನೆನಹು ಕೆಲವು ವರ್ಗಗಳಲ್ಲಿ

ತಲೆ ತಲಾಂತರಗಳಿಂದ ಅವಿಚ್ಛಿನ್ನವಾಗಿ ಉಳಿದುಕೊಂಡು ಬಂದಿದೆ. ಶಾಸನಗಳ ಆಧಾರಗಳು ದೊರೆಯುವುದಿಲ್ಲವೆಂದು ಅವು ತ್ಯಾಜ್ಯವಾಗಲಾರವು. ಜೀವನದ ಅಲ್ಪಾಂಶವು ಮಾತ್ರ ಸಾಹಿತ್ಯ, ಶಾಸನಗಳಲ್ಲಿ ಪ್ರತಿಬಿಂಬಿತವಾಗುತ್ತಿರುತ್ತದೆ. ಬಳಕೆಯಲ್ಲಿರುವ ಮಾತುಗಳಲ್ಲಿ ಕೆಲವೊಂದು ಪ್ರೌಢ, ಗಂಭೀರ, ಶಿಷ್ಟವೆನಿಸಿದ ವಿಶಿಷ್ಟ ಪದಪ್ರಯೋಗಗಳೇ ಬರೆವಣಿಗೆಯಲ್ಲಿ ಬರುತ್ತಿರುತ್ತವೆ. ನೆಲದಿಂದ ಮೇಲಕ್ಕೆ ಇರುವ ಸಂಗತಿಗಳನ್ನು ಮಾತ್ರ ನಮ್ಮ ಕಾವ್ಯ. ಸಾಹಿತ್ಯಗಳಲ್ಲಿ ವರ್ಣಿಸಿದ್ದುಂಟು. ನೆಲದ ಮೇಲಿನ ಎಂದರೆ ವಾಸ್ತವ ಸಂಗತಿಗಳನ್ನು ಕಡೆಗಣಿಸಿದ್ದಾಗಿದೆ. ಅಲ್ಲದೆ, ಲಿಖಿತ ಆಧಾರಗಳಲ್ಲಿ ಪಾಂಡಿತ್ಯದ ಮೆರುಗು ಕೂಡಿ ಮೂಲರೂಪವು ಎಷ್ಟೋಬಾರಿ ತಿಳಿಯದಾಗುತ್ತದೆ. ಆದಕಾರಣ, ಜನಜೀವನದ ಅಭ್ಯಾಸಮಾಡಿದವರು ಕೇವಲ ಲಿಖಿತ ಆಧಾರಗಳನ್ನೇ ಅವಲಂಬಿಸುವುದು ತಪ್ಪು ಎಂಬ ನಿರ್ಣಯಕ್ಕೆ ಬಂದಿದ್ದಾರೆ. ತುಲನಾತ್ಮಕ ಭಾಷಾಶಾಸ್ತ್ರದಲ್ಲಿಯೂ ಇದೇ ಮಾತು ಅನುಭವಕ್ಕೆ ಬಂದಿದೆ. ಕೇವಲ ಸುಶಿಕ್ಷಿತರ ಉಚ್ಚಾರಗಳನ್ನು ಲೆಕ್ಕಕ್ಕೆ ಹಿಡಿದು ಭಾಷೆಯೊಳಗಿನ ಪದಗಳ ಮೂಲಸ್ವರೂಪದ ನೆಲೆ ತಿಳಿಯುವುದಲ್ಲ. ಜಾನಪದರ ಉಚ್ಚಾರಗಳನ್ನು ಎಣಿಕೆಯಲ್ಲಿ ತಕ್ಕೊಳ್ಳಲೇಬೇಕು ಎಂಬ ಸಿದ್ಧಾಂತಕ್ಕೆ ಬಂದಿದ್ದಾರೆ.

ಸಾಂಸ್ಕೃತಿಕ ಇತಿಹಾಸದಲ್ಲಿ ಪರಂಪರೆಗಳ ಅಭ್ಯಾಸಕ್ಕೆ ಒಂದು ಮಹತ್ವದ ಸ್ಥಾನವಿದೆ. ಈ ಪರಂಪರೆಗಳು ಥಕ್ಕನೆ ತಲೆದೋರುವುದಿಲ್ಲ. ಅಥವಾ ಒಮ್ಮೆಲೆ ಮಾಯವಾಗುವುದಿಲ್ಲ. ಹೊಸ ರೂಢಿ-ಸಂಪ್ರದಾಯಗಳು ಬಂದರೂ ಮೊದಲಿನದರೊಡನೆ ಅವು ಬೆರೆತುಕೊಳ್ಳುವುವು. ಎಲ್ಲ ರೂಢಿಗಳನ್ನು ಅಷ್ಟೇ ಪುರಾತನವೆಂದು ಗ್ರಹಿಸುವುದು ತಪ್ಪಾಗಿದೆ. ಅವುಗಳಲ್ಲಿ ಯಾವುವು ಪ್ರಾಚೀನ, ಯಾವುವು ಅರ್ವಾಚೀನಗಳೆಂಬುದನ್ನು ನಿರ್ಣಯಿಸಲು ಸಾಹಿತ್ಯ ಶಾಸನಾದಿಗಳ ನೆರವು ಅತ್ಯಗತ್ಯವಾಗಿದೆ. ಈ ಸಂಪ್ರದಾಯಗಳು ಎಂದು ಬಂದುವು. ಹೇಗೆ ಬಂದುವು; ಮತ್ತು ಕಾಲಕ್ರಮದಲ್ಲಿ ಅವು ಎಂದು, ಏಕೆ, ಹೇಗೆ ಬದಲಾದುವು? ಎಂದು ಮುಂತಾದ ಸಂಗತಿಗಳನ್ನು ಸೂಕ್ಷ್ಮವಾಗಿ ವಿಮರ್ಶಿಸಿ ವಿಚಾರಿಸಲೇಬೇಕು. ಕೆಲವೆಡೆಗೆ ಈ ಪೂರ್ವ ಪರಂಪರೆಗಳು ತೀರ ಕ್ಷೀಣವಾಗಿವೆ; ಅಸ್ಪಷ್ಟವಾಗಿವೆ; ಹಲವೆಡೆಗೆ ಇವುಗಳಲ್ಲಿ ಅತಿಶಯೋಕ್ತಿ, ಅಸಂಬದ್ಧತೆಗಳು ಸೇರಿಕೊಂಡಿವೆ. ಇಂಥಲ್ಲಿ ನಿರ್ದಾಕ್ಷಿಣ್ಯವಾದ ವಿಮರ್ಶೆಯಿಂದ ಸತ್ಯವನ್ನು ಕಂಡುಕೊಳ್ಳುವ ಪ್ರಯತ್ನಗಳು ನಡೆಯಬೇಕಾಗಿದೆ. ಇದಕ್ಕಾಗಿ ಮಾನವನ ಮನೋಧರ್ಮಗಳ ಅಭ್ಯಾಸವೂ ಶಾಸನಾದಿಗಳಷ್ಟೇ ಮಹತ್ವದ್ದಾಗಿದೆ.

ನಮ್ಮ ನಾಡಿಗರ ನಡೆವಳಿಯಲ್ಲಿ ಸೂಕ್ಷ್ಮವಾಗಿ, ಗಹನವಾಗಿ, ದೃಢವಾಗಿ ಹಾಸು-ಹೊಕ್ಕಾಗಿರುವ ಎಷ್ಟೋ ಅಂಶಗಳು ವೇದಕಾಲದಷ್ಟು ಪುರಾತನದವೆಂದು ಕಂಡು ಬರುತ್ತದೆ. ಬ್ರಾಹ್ಮಣರ ಯಜ್ಞವಿಧಿ, ಗೋತ್ರ ಪ್ರವರಾದಿಗಳು ಇದಕ್ಕೆ ನಿದರ್ಶನ. ವೀರಶೈವರ ೬೩ ಪುರಾತನರ ಪರಂಪರೆಗೆ ಋಗ್ವೇದದೊಳಗಿನ 'ತ್ರಿಷಷ್ಟಿಸ್ತ್ವಾಮರುತಃ' ಎಂಬ ರುದ್ರನ ೬೩ ಪರಿವಾರಗಣದ ವರ್ಣನೆಯ ಮಂತ್ರವು ಆಧಾರವಾಗಿದೆ. ಇದರ ವಿವರಣೆ ಶಿವರಹಸ್ಯದಲ್ಲಿ ಬಂದಿದೆ. ವೀರಶೈವರಿಗೂ ತಮ್ಮ ಈ ಪರಂಪರೆಯ ಮೂಲವು ಋಙ್ಮಂತ್ರದಲ್ಲಿದೆಯೆಂಬ ನೆನಹು ಉಳಿದಿರಲಿಕ್ಕಿಲ್ಲ. ಗೋತ್ರ-ಸೂತ್ರಾದಿ ಇಂತಹ ಜೀವಂತ ಪರಂಪರೆಗಳಿಗೆ ಶಿಲಾಶಾಸನಾದಿ ಆಧಾರಗಳು ಇಲ್ಲವೆಂದು ಅವನ್ನು ಸುಳ್ಳೆಂದು ತಿರಸ್ಕರಿಸಲಿಕ್ಕಾದೀತೆ?

ಒಂದೊಂದು ಪರಂಪರೆಯೂ ನಮಗೆ ಅದೆಷ್ಟೋ ಹಿಂದಿನ ಕಾಲದ ವರೆಗೆ ಒಯ್ಯುತ್ತದೆ. ಹನುಮ ಮತ್ತು ಮಾರುತಿ ಇವೆರಡು ಹೆಸರುಗಳನ್ನೆ ನೋಡಿ. ಇವೆರಡೂ ಪುರಾತನ ಒಂದೇ ವ್ಯಕ್ತಿಯ ಹೆಸರಾದರೂ ಇವುಗಳ ಹಿಂದಿರುವ ವಾತಾವರಣವು ಎರಡು ಭಿನ್ನ ಸಂಸ್ಕೃತಿಗಳ ಸೂಚಕವಾಗಿದೆ. ಒಂದು ಕಂನಾಡ ವೈಶಿಷ್ಟ್ಯ. ಇನ್ನೊಂದು ಮಹಾರಾಷ್ಟ್ರದ ವಿಶೇಷ. 'ಮಾರುತಿ' ಎಂಬ ಹೆಸರು ಕಂನಾಡದವರಲ್ಲಿ ದೊರೆಯುವುದನ್ನು ನಾನರಿಯೆ; ಹನುಮನೆಂಬುದು ಮರ್‍ಹಾಟದಲ್ಲಿ ಅಪರೂಪ! ಶ್ರೀರಾಮದಾಸರಿಂದ ಮಾರುತಿಯ ಉಪಾಸನೆಯು ಮಹಾರಾಷ್ಟ್ರದಲ್ಲಿ ಬಹಳ ಪ್ರಚಾರದಲ್ಲಿ ಬಂದಿತು. ಅದಕ್ಕೂ ಮೊದಲಿನಿಂದಲೂ ಮರ್‍ಹಾಟದಲ್ಲಿ ಊರೂರಿಗೂ ಹನುಮನ ದೇಗಲುಗಳಿದ್ದುವು. ಆದರೂ ಹನುಮನ ಹೆಸರಿನ ಊರುಗಳು ಕಂನಾಡಿನಲ್ಲಿ ದೊರೆವಂತೆ ಮಹಾರಾಷ್ಟ್ರದಲ್ಲಿ

ಇಲ್ಲ. ಖಾನದೇಶವು (ಎರಂಡೋಲ ಮತ್ತು ಪಾರೋಳಾ ತಾಲೂಕಿನಲ್ಲಿ) ಮಾತ್ರ ಇದಕ್ಕೆ ಸ್ವಲ್ಪ ಅಪವಾದ. ಅಲ್ಲಿ 'ಹನುಮಂತ ಖೇಡೇ' ಎಂಬುವುಂಟು. ಅದರ ಕಾರಣವನ್ನು ಈ ಮುಂದೆ ವಿವರಿಸಿದೆ (ಪು. ೧೫೮)

ವೇದಗಳಲ್ಲಿ-ಮರುತರ ಹೆಸರು ಬರುವುದು. ಆದಕಾರಣ ಮರುತ್‌ಪುತ್ರನೆ ಮಾರುತಿಯೆಂಬುದು ವೈದಿಕ ಪರಂಪರೆಯ ಹೆಸರು. ಮರುತರಿಗೆ ರುದ್ರಪುತ್ರರೆಂದು ಋಗ್ವೇದದಲ್ಲಿ ಒಂದೆಡೆಗೆ ಹೇಳಿದೆ (ಶಿವರಹಸ್ಯದಲ್ಲಿ ಈ ವಿಚಾರ ಬಂದಿದೆ.) ರುದ್ರ-ಶಿವನು ಕೆಂಪು ಆದ ಕಾರಣ ರುದ್ರಪುತ್ರ ಮಾರುತಿಯೂ ಕೆಂಪು; ಮಹಾರಾಷ್ಟ್ರದಲ್ಲಿ ಮಾರುತಿಗೆ ಸಿಂಧೂರ ಬಳಿಯುವ ವಾಡಿಕೆಯುಂಟು. ಹೀಗಿದು, ತಲೆತಲಾಂತರಗಳಿಂದ ನಡೆದು ಬಂದುದಾಗಿದೆ. ಇದರಲ್ಲಿ ಮೂಲಭೂತ ವೈದಿಕ ವಿಚಾರವು (ಕೆಂಪು ಎಂಬುದು) ಅಡಕವಾಗಿರುವುದು. ರಾಮ-ಕೃಷ್ಣಾದಿ ಮಹಾವ್ಯಕ್ತಿಗಳ ಹೆಸರನ್ನು ಇಟ್ಟುಕೊಳ್ಳುತ್ತಿದ್ದರೂ ಆರ್ಯಾಭಿಮಾನಿಗಳಾದ ಮಹಾರಾಷ್ಟ್ರದ ಬ್ರಾಹ್ಮಣರಲ್ಲಿ ಹನುಮ, ಗರುಡಾದಿ ಪರಿವಾರದ 'ದಾಸರ' ನಾಮಾಭಿದಾನಗಳನ್ನು ಧರಿಸುವ ವಾಡಿಕೆಯಿಲ್ಲ. ಹನುಮಂತನೆಂದು ಬ್ರಾಹ್ಮಣನ ಹೆಸರಿದ್ದರೆ ಆತನು ಕಂನಾಡಿನವನು ಕಂನಾಡ ಪ್ರಭಾವಕ್ಕೆ ಒಳಗಾದವನೆಂದೇ ನಿಶ್ಚಿತವಾಗಿ ಗೊತ್ತಾಗುತ್ತದೆ. ಮಾರುತಿ ಎಂಬುದು ಆರ್ಯಪರಂಪರೆಯ ಹೆಸರಾದರೂ ಈ ಹೆಸರಿನ ಮಹಾರಾಷ್ಟ್ರ ಬ್ರಾಹ್ಮಣನು ದೊರೆಯದೆ ಇರುವುದು ವಿಚಾರಾರ್ಹವಾಗಿದೆ.

ಹೀಗೆ ಈ ರೂಢಿ-ಸಂಪ್ರದಾಯಗಳ ಹಿಂದೆ ತುಂಬ ಸಾಂಸ್ಕೃತಿಕ ಅರ್ಥವು ಇಡಿಗಿದೆ. ಕಲ್ಬರೆಹಗಳ ಆಧಾರಗಳು ಇಲ್ಲವೆಂದು ಇವೆಲ್ಲವನ್ನು ಲೆಕ್ಕಿಸಲಾಗದೆ?

ಪಾರ-ಹಾರವನ್ನು ಕುರಿತು ನನ್ನ ಮಿತ್ರರಾದ ದೊಡ್ಡಬೆಲೆ ನರಸಿಂಹಾಚಾರ್ಯರು ಕಂನುಡಿಯಲ್ಲಿ (೨೬-೯-೪೭) ಒಂದು ಬೆಲೆಯುಳ್ಳ ಟಿಪ್ಪಣಿಯನ್ನು ಪ್ರಕಟಿಸಿ ನನಗೆ ನೆರವಾಗಿದ್ದಾರೆ. ಅಗ್ರ+ಹಾರ ಎಂಬುದಕ್ಕೆ ಈಗ ಕೋಶಗಳಲ್ಲಿ ಹೇಳಿದ ಅರ್ಥವು ಅಸಮರ್ಪಕವಾಗಿದೆಯೆಂಬ ನನ್ನ ಅಭಿಪ್ರಾಯಕ್ಕೆ ಅವರ ಬೆಂಬಲವೂ ದೊರೆತಿದೆ. ಅಗ್ರ ಎಂದರೆ ಬ್ರಾಹ್ಮಣ. ಹಾರವೆಂದರೆ ಸ್ಥಳ, ಊರು; ಎಂಬ ನನ್ನ ವಿಚಾರವೇ ಅವರ ಸಂಶೋಧನೆಯಲ್ಲಿಯೂ ದೃಢವಾಗಿ ಸ್ಥಾಪಿತವಾದುದು ಸಂತೋಷದ ಸಂಗತಿ. 'ಹಾರ' ಶಬ್ದದ ನಿರುಕ್ತದ ಬಗೆಗೆ ಮಾತ್ರ ಭಿನ್ನಾಭಿಪ್ರಾಯವು ಉಳಿದಿದೆ. 'ಆಹಾರ' ಎಂಬುದು ಪ್ರಾಚೀನತಮ ರೂಪವೆಂದು ಶಾಸನಗಳಿಂದ ಗೊತ್ತಾಗುತ್ತದೆ. ಹಾರವು ಆಹಾರದ ಸವೆದರೂಪ; ಎಂದು ಶ್ರೀಯುತರ ಅಭಿಪ್ರಾಯವಿದೆ. ಈ ಕಾರಣದಿಂದ ಪಾಡು-ಪಾಡ-ಪಾರ ಇದರಿಂದ ಬಳಿಕ ಹಾರವಾಯ್ತೆಂಬುದು ಅವರಿಗೆ ಸಮ್ಮತವಿಲ್ಲ.

ಆಹಾರವೆಂಬುದಕ್ಕೆ ಸಂಸ್ಕೃತ ಭಾಷೆಯಿಂದ ಸ್ಥಳವಾಚಕವಾದ ಅರ್ಥವೂ ಹೇಗೆ ನಿಷ್ಪನ್ನವಾಯಿತೆಂಬುದನ್ನು ಅವರು ಹೇಳಿಲ್ಲ. ಪಾರ>ಹಾರದ ಗ್ರಾಮ ನಾಮಗಳಿರುವಂತೆ 'ಆಹಾರ'ದ ಹೆಸರಿನ ಪರಂಪರೆಯು ಎಲ್ಲಿಯಾದರೂ ಯಾವುದೇ ಬಗೆಯಿಂದ ಉಳಿದುಕೊಂಡಿದೆಯೇ? ಎಂಬುದನ್ನೂ ವಿವರಿಸಲಿಲ್ಲ. ಆದರೆ, ನನ್ನ ವಿಚಾರದಂತೆ ಆಹಾರವೆಂಬುದು ಮೂಲಪದವಲ್ಲ. ಅಲ್ಲಿ ಆ ಎಂಬುದು ಉಪಸರ್ಗವಾಗಿ ಸಂಸ್ಕೃತದಲ್ಲಿ ಸೇರಿರಬೇಕು. ನಾಲ್ಕನೆಯ ಶತಮಾನದಷ್ಟು ಹಿಂದೆ ಪಕಾರಕ್ಕೆ ಹಕಾರವಾಗಿದ್ದಿತೆ? ಎಂಬ ಸಂದೇಹವು ಮಹತ್ವದ್ದಾಗಿದೆ. ಅದಕ್ಕೆ ಆಗಿರಲು ಸಾಕೆಂದು ನನ್ನ ಅಭಿಪ್ರಾಯ. ಕಾಲಿದಾಸನು ಮೇಘದೂತದಲ್ಲಿ 'ಹಾಲಾ' ಶಬ್ದ ಬಳಸಿದ್ದಾನೆ. ಪಾಲು-ಹಾಲು; ಹಾಲು ಇದುವೆ ಹಾಲಾ ಎಂಬ ರೂಪದಲ್ಲಿ ಸಂಸ್ಕೃತದಲ್ಲಿ ನುಸುಳಿಕೊಂಡಿದೆ. ಕಾಲಿದಾಸನ ಕಾಲದಲ್ಲಿ ಹಕಾರವು ಬಳಕೆಯಲ್ಲಿರಬೇಕಾದರೆ ಇದಕ್ಕೂ ಮೊದಲು ೧೫೦-೨೦೦ ವರುಷ ಇದು ರೂಢಿಯಲ್ಲಿ ಬಂದಿರಬೇಕಾಗುತ್ತದೆ. ಉತ್ತರದಲ್ಲಿ ಪಾರ, ಹಾರ, ಎರಡೂ ಬಗೆಯ ರೂಪಗಳು ಊರುಗಳು ಈಗಲೂ ಇವೆ. ಪಾಡಗಾವ, ಪಾರಗಾವಗಳು ನಮ್ಮಲ್ಲಿವೆ. ಡಾ. ಚಟರ್ಜಿಯವರೇ ಉತ್ತರದಲ್ಲಿ 'ದ್ರಾವಿಡ' ಭಾಷೆಯ ಊರುಗಳುಂಟೆಂದು ಸಿದ್ಧಪಡಿಸಿರುವಾಗ ನನ್ನ ಮಿತ್ರರಿಗೆ ಮಾತ್ರ ಆ ವಿಚಾರದಲ್ಲಿ ಇನ್ನೂ ಸಂದೇಹ!

ಈ ಬಗೆಯ ಗ್ರಂಥಗಳಲ್ಲಿ ಕೆಲವೊಂದು ಕೊರತೆಗಳು ಉಳಿಯುವುದು ತಪ್ಪಿದ್ದಲ್ಲ. ಊರ ಹೆಸರಿನ ವಿಚಾರದಲ್ಲಿ ಈ ಮಾತು ಇನ್ನೂ ನಿಜ. ಧಾರವಾಡದಲ್ಲಿ ಗ್ರಂಥಸಂಗ್ರಹಾಲಯಗಳ ಅನುಕೂಲತೆ ಕಡಿಮೆ. ಹೋದಾಗ ಪುಸ್ತಕಗಳು ಸಿಕ್ಕುವುದೊಂದು ಮಹಾಪ್ರಯಾಸದ ಕೆಲಸ. ಇಂಥದರಲ್ಲಿ ಒಂದು ಗ್ರಂಥಾಲಯದ ಲಾಭ ಪಡೆಯಲು ಶಕ್ಯವಾಗಲೆ ಇಲ್ಲ. ಒಮ್ಮೆ ಮಾಡಿಕೊಂಡ ಟಿಪ್ಪಣಿ, ಸರಿಯೆ ಎಂದು ಇನ್ನೊಮ್ಮೆ

ನೋಡುವುದಕ್ಕೂ ಆಗದೆ ಹೋಯಿತು. ಶಾಸನಾದಿಗಳ ಆಧಾರಗಳನ್ನು ನನಗೆ ತೃಪ್ತಿಯಾಗುವಂತೆ ಸಂಗ್ರಹಿಸಿಕೊಳ್ಳಲು ಸಮರ್ಥನಾಗಲಿಲ್ಲ. ಈ ಕಾರಣಗಳಿಂದುಂಟಾದ ಇದರಲ್ಲಿಯ ಕುಂದುಕೊರತೆಗಳು ಮುಂದಿನ ಆವೃತ್ತಿಗಳಲ್ಲಿ ತಿದ್ದಲ್ಪಡಬೇಕು. ಬಲ್ಲಿದರು ತಿದ್ದುಪಡೆಗಳನ್ನೂ ಸೂಚನೆಗಳನ್ನೂ ಕಾಗದ ಬರೆದು ತಿಳಿಸಿ ನನಗೆ ಪುನರ್ವಿಚಾರಕ್ಕೆ ನೆರವಾಗುವ ಉಪಕಾರಮಾಡಬೇಕಾಗಿ ಬೇಡುತ್ತೇನೆ.

ವೈ. ಶ್ರೀ ಮುದವೀಡು ಕೃಷ್ಣರಾಯರು ಬದುಕಿರುವಾಗಲೆ ಇದು ಪ್ರಕಟವಾಗಬೇಕೆಂದು ಬಹಳ ಹಂಬಲಿಸಿದೆ: ಏಕೆಂದರೆ, ಇದರಲ್ಲಿ ಅವರಿಗೆ ತುಂಬ ಆಸ್ಥೆಯಿತ್ತು. ಬೆಳಗಾವಿಯ ಕನ್ನಾಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷಪದದಿಂದ ಮಾಡಿದ ಭಾಷಣದಲ್ಲಿ ಅವರು ನನ್ನ ಸಂಶೋಧನವನ್ನು ಎತ್ತಿ ಹೇಳಿ ನನ್ನನ್ನು ಹರಸಿದ್ದರು. ತಾನು ಹೆಮ್ಮೆಪಟ್ಟುಕೊಳ್ಳುವ ತಾಯ್ನಾಡ ಹೆಸರಿನ ಅರ್ಥವೇನೆಂಬುದೂ ತನಗೆ ಗೊತ್ತಿಲ್ಲವೆಂದು ಲೋಕಕ್ಕೆ ಪ್ರದರ್ಶಿಸಿಕೊಳ್ಳುವ 'ಕನ್ನಡ-ನಾಡು' ಎಂಬುವ ಅರ್ಥವಿಹೀನ ದ್ವಿರುಕ್ತಿ ದೋಷವನ್ನು ತಾನು ಇನ್ನು ಮಾಡಲಾರೆನೆಂದು ಹೇಳಿ, ಇತ್ತೀಚೆಗೆ ತಮ್ಮ ಲೇಖನ, ಉಪನ್ಯಾಸಾದಿಗಳಲ್ಲಿ 'ಕಂನಾಡು' ಎಂಬ ಪ್ರಯೋಗವನ್ನೇ ಬಳಸುತ್ತಿದ್ದರು. ನೀವು ಕಂನಾಡು ಎಂದು ಉಪಯೋಗಿಸುವುದು ಏಕೆ, ಎಂದು ಕೇಳಿದವರಿಗೆ ಮರಾಠಿಗರು 'ಕಂನುಡಿ' ಎಂದೂ ಇಂಗ್ರೇಜಿಯಲ್ಲಿ Canarese ಎಂದೂ ಬರೆಯುತ್ತಿದ್ದುದು ಸರಿಯಲ್ಲವೆಂದು ಆಕ್ಷೇಪಿಸಿದ ನಾವೂ ಅದರ ಅಶುದ್ಧರೂಪವನ್ನೇ ಬಳಸುವುದು ಯಾವ ನ್ಯಾಯವೆಂದು ಅವರು ಉತ್ತರವನ್ನಿತ್ತುದುಂಟು. ಕಂನಾಡಿನ ಜನಗಳ ರೂಢಿ ಸಂಪ್ರದಾಯಗಳನ್ನು ಚೆನ್ನಾಗಿ ಅರಿತ ಅವರಿಂದ ನನ್ನ ಈ ಬರೆವಣಿಗೆಗೆ ಬಹಳ ಸಹಾಯವಾಗ ಬಹುದಾಗಿತ್ತು. ಅದಕ್ಕೆ ಎರವಾದುದಕ್ಕಾಗಿ ದುಃಖಿಸಬೇಕಾಗಿದೆ.

ಬೆಳಗಾವಿಯ ರಾಷ್ಟ್ರೀಯ ಮಹಾಸಭೆಯ ಕಾಲದಲ್ಲಿ (೧೯೨೪) ಕರ್ನಾಟಕ ಏಕೀಕರಣ ಪರಿಷತ್ತಿನ ಸ್ಥಾಪನೆಮಾಡಿ, ಒಂದು ಮಹಾಸಭೆಯನ್ನು ನೆರೆಯಿಸುವ ಆವಶ್ಯಕತೆಯನ್ನು ಕುರಿತು ಅಂದಿನ ಮುಂದಾಳು ಗಳಾದ ಶ್ರೀ ಕಡಪಾ ಪ್ರಭೃತಿಗಳೊಡನೆ ಚರ್ಚಿಸಿ, ಶ್ರೀಮಂಗಳವೀಡು ಶ್ರೀನಿವಾಸರೂ ನಾನೂ ಅದರ ಕಾರ್ಯದರ್ಶಿಗಳಾದೆವು. ಆ ಸಮಯದಲ್ಲಿ ನನ್ನೆದುರು ಕೆಲವು ಪ್ರಶ್ನೆಗಳು ಬಂದು ನಿಂತವು. ತುಳುನಾಡು, ಕೊಡಗು, ಬನವಾಸಿ, ಮೈಸೂರು, ನಿಜಾಂಕರ್ಣಾಟ, ಉತ್ತರಕರ್ಣಾಟ ಎಂದು ಮುಂತಾಗಿ ಈಗ ಬೇರೆ ಬೇರೆಯಾಗಿರುವ ಈ ಭಾಗಗಳ ಜನಗಳ ಪೂರ್ವಪರಂಪರೆಗಳೇನು? ಅವು, ಇವರೆಲ್ಲ ಒಂದುಗೂಡಲು ಅನುಕೂಲವಾಗಿವೆಯೆ? ಈ ನಾಡಿನ ಮೊದಲಿಗರು ಯಾರು? ಇವೆಲ್ಲ ಭಾಗಗಳು ಕರ್ಣಾಟದ ಅಂಗಗಳೇ ಎಂಬುದು ನಿಜವೆ? ಇವೆಲ್ಲವುಗಳಲ್ಲಿ ಅಂತರಿಕವಾಗಿರುವ ಹೋಲಿಕೆ, ಹೊಂದಿಕೆಗಳೇನು? ಇವರ ಸಂಸ್ಕೃತಿಯ ಪಡಿಮಾತಾವುದು? ಇವೇ ಮೊದಲಾದ ಸಂಗತಿಗಳು ತಿಳಿದರೆ ಏಕೀಕರಣದ ಕಾರ್ಯವು ಹೆಚ್ಚು ಸುಗಮವು ಸುದೃಢವೂ ಆಗಲು ಅನುಕೂಲವಾಗುವುದು: ಎಂಬ ವಿಚಾರವು ಹೊಳೆದು ಹೋಯಿತು. ನನ್ನ ಆ ಪ್ರಶ್ನೆಗಳಿಗೆ ದೊರೆತ ಉತ್ತರಗಳೇ ಪ್ರಸ್ತುತ ಪುಸ್ತಕ. ಕಂನಾಡ ಒಕ್ಕೂಟಕ್ಕಾಗಿ ಹುಮ್ಮಸದಿಂದ ಅಣಿಯಾದ ನನ್ನ ಹಿರಿಯಕಿರಿಯ ಬಂಧುಗಳೊಡನೆ ಈ ಕೆಲಸಕ್ಕಾಗಿ ಸಲ್ಲಿಸಿದ ನನ್ನ ಅಲ್ಪ ಕಾಣಿಕೆಯಿದು.

ನಮ್ಮ ನಾಡಿನ ಅರಸುಮನೆತನಗಳ ಇತಿಹಾಸವನ್ನು ಬರೆವ ಪ್ರಯತ್ನಗಳು ನಡೆದಿವೆ. ಜನದ ಕತೆಯನ್ನು ಹೇಳುವುದಕ್ಕೆ ತೊಡಗಿದವರು ಇನ್ನೂ ಯಾರೂ ಇಲ್ಲ. ವಿಷಯ ವಿಸ್ತಾರವು ಅನಂತವಾಗಿದೆ. ಅನಾದಿಕಾಲದ ಕತೆ ಬೇರೆ. ಸಾವಿರಾರು ಪುಟಗಳಲ್ಲಿ ಹೇಳಬೇಕಾದ ವಿಷಯವನ್ನು ತೀರ ಸಂಕ್ಷೇಪದಿಂದ ಇಲ್ಲಿ ಸೂಚಿಸಿದೆ. ಕಾಗದ ಪರಿಮಿತಿಯ ಕಟ್ಟಳೆಯ ಮೂಲಕ ಎಷ್ಟೋ ವಿಷಯಗಳನ್ನು ಬದಿಗಿರಿಸಬೇಕಾಯಿತು. ಭವ್ಯವಾದ ಒಂದು ಮಹಾಚಿತ್ರದ ಇದು ಸ್ಥೂಲ ಬಾಹ್ಯರೇಷೆ: ಹೊಳಹು (Out line) ಮಾತ್ರ. ಹಲವು ಬಲ್ಲಿದರ ನೆರವಿನಿಂದಲ್ಲದೆ ಇದರ ಸಂಪೂರ್ಣ ಚಿತ್ರವು ಸಿದ್ಧವಾಗಲಾರದು.

ಹಟ್ಟಿಯ ಹಬ್ಬ **ಶಂ. ಬಾ. ಜೋಶಿ**

ಶಾತವಾಹನ ಶಕ ೧೮೬೯

ಮುನ್ನುಡಿ

‘ಅತಿ ಪರಿಚಯಾತ್ ಅವಜ್ಞಾ’ ಎಂಬುದು ಹೆಸರುಗಳ ವಿಷಯಕ್ಕಂತೂ ತೀರ ಸರಿ. ಅವು ಸಜೀವ ಪ್ರಾಣಿಗಳ ಹೆಸರಿರಲಿ. ಅಥವಾ ನಿರ್ಜೀವ ವಸ್ತುಗಳ ಹೆಸರಿರಲಿ; ಕಣ್ಣಿಗೆ ಕಾಂಬ, ಮಾತು ಮಾತಿಗೆ ಕಿವಿಗೆ ಬೀಳುವ ಸಂಗತಿಗಳೊಳಗಣ ಹೊಸತನವು ಬೇಗನೆ ಮಾಸಿಹೋಗುವುದು. ಅದರೊಳಗಣ ಮೂಲಾರ್ಥ, ಸೂಕ್ಷ್ಮಾರ್ಥಗಳ ಸೊಗಸು ದಿನದ ಬಳಕೆಯಿಂದ ಮಸುಳಿಸಿ ಬಳಿಕ ಮನಸಿಗೆ ಆಗಬೇಕಾದ ಆನಂದ ಮತ್ತು ಬೋಧೆಗೆ ಎರವಾಗಬೇಕಾಗುತ್ತದೆ. ರೂಢಿಯಿಂದ ಬರುವ ಮೂಢತೆ, ಬಳಕೆಯಿಂದ ಬರುವ ಬಧಿರತೆಯು ಇದು. ಇದು ಬಂದು ಮುಸುಕುವುದು ನಿಶ್ಚಿತವಿದ್ದರೂ ಇದು ಬಂದು ಮುಸುಕಹತ್ತಿದೆ, ಮುಸುಕಿದೆ ಎಂಬ ಅರಿವು ಮಾತ್ರ ಮಾನವನಿಗೆ ಉಳಿಯುವುದಿಲ್ಲವೆಂಬುದು ಇದರೊಳಗಣ ಸೋಜಿಗದ ಸಂಗತಿಯಾಗಿದೆ! ರೂಢಿ-ಸಂಪ್ರದಾಯಗಳು ಅರ್ಥವಿಹೀನವಾಗಿ ಅವು ನಿರ್ಜೀವಯಾಂತ್ರಿಕ ಕೃತಿಗಳಾಗುವುದು ಹೀಗೆಯೇ. ಆದುದರಿಂದಲೆ, ಕೇವಲ ರೂಢಿ-ಸಂಪ್ರದಾಯಗಳ ಪ್ರಾಬಲ್ಯವು ಹೆಚ್ಚಿದಂತೆ ಸಮಾಜದಲ್ಲಿ ಅರಿವುಗೇಡಿತನವೂ ಅದರೊಂದಿಗೆ ಬಳಿಕ ತಿಳಿಗೇಡಿತನವೂ ಒಂದರ ಹಿಂದೊಂದು ಬಂದು ಸೇರಿಕೊಳ್ಳುವುವು.

ಈ ಬಗೆಯ ತಿಳಿಗೇಡಿತನವು ಸಮಾಜವನ್ನು ಕವಿಯದಂತೆ, ದಿನದ ರೂಢಿ-ಸಂಪ್ರದಾಯಗಳಿಂದ ಮನಸು ಮರವಟ್ಟು ಬಧಿರವಾಗದಂತೆ, ಅವುಗಳೊಳಗಿನ ಅರ್ಥ ಮತ್ತು ಔಚಿತ್ಯಗಳ ವಿಚಾರ-ವಿಮರ್ಶೆಗಳನ್ನು ಕಾಲಕಾಲಕ್ಕೆ ನಡೆಸುವುದು ತಿಳಿದವರ ಕರ್ತವ್ಯವೆ ಆಗಿದೆ. ಈ ಬಗೆಯ ವಿಚಾರ-ಚರ್ಚೆಗಳಿಗೆ ಅವಕಾಶ ಮತ್ತು ಪ್ರೋತ್ಸಾಹವನ್ನು ಕೊಡದ ಸಮಾಜವು ತನ್ನ ಚೈತನ್ಯಶಕ್ತಿಯನ್ನು ತಾನೇ ಕುಂದಿಸಿಕೊಳ್ಳುವುದು. ಆದರೆ ಈ ಬಗೆಯ ವಿಚಾರ-ವಿಮರ್ಶೆಯ ಕೆಲಸವು ಎಣಿಸಿದಷ್ಟು ಸುಲಭವಲ್ಲ. ನಮ್ಮ ಊರುಗಳ ಹೆಸರಿನ ಮಟ್ಟಿಗಂತೂ ಅವುಗಳಲ್ಲಿ ಏನಾದರೂ ಹುರುಳಿದೆಯೆ ಎನ್ನುವಷ್ಟು ಹಲವೆಡೆಗಳಲ್ಲಿ ಅವು ಅರ್ಥಹೀನವಾಗಿವೆ; ವಿಕೃತಿಯನ್ನು ಹೊಂದಿವೆ; ಇಲ್ಲವೆ ಮೂಲಾರ್ಥವು ತಿಳಿಯದಷ್ಟು ಮಾರ್ಪಟ್ಟಿವೆ. ಕೋಲಾರ ಅಥವಾ ಕೊಲ್ಲಾರ, ಹುಬ್ಬಳ್ಳಿ, ಕಂನಡ ಎಂಬುವನ್ನೆ ಇಲ್ಲಿ ನಿದರ್ಶನಕ್ಕಾಗಿ ಎತ್ತಿಕೊಳ್ಳಬಹುದು.

ಈ ಬಗೆಯ ಮಾರ್ಪಾಟಿಗೆ ಇನ್ನೂ ಕೆಲವು ಕಾರಣಗಳಿವೆ. ಸುಮಾರು ನೂರಿನ್ನೂರು ವರುಷಗಳಲ್ಲಿ ಜನಗಳ ಸೊಲ್ಲಿನ ರೀತಿಗಳಲ್ಲಿ ಕೆಲವೊಂದು ಬದಲಾವಣೆಗಳು ಆಗುವುದುಂಟು. ಈ ಬಗೆಯ ಬದಲಾವಣೆಗೆ

ಹಲವು ಬಾರಿ ಬೇರೆ ಭಾಷೆಯ ಉಚ್ಚಾರದ ಪ್ರಭಾವವೇ ಮುಖ್ಯವಾದ ಕಾರಣವಾಗಿರುತ್ತದೆ. ಒಂದು ಕಾಲಕ್ಕೆ ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳ ಪರಿಣಾಮದಿಂದ ಕಂನುಡಿಯ ಉಚ್ಚಾರದ ವೈಶಿಷ್ಟ್ಯವು ನಷ್ಟವಾಯಿತು. ಬಳಿಕ ಅರ್ವಾಚೀನ ಕಾಲದಲ್ಲಿ ಮರ್‍ಹಾಟಿ, ಮುಸಲ್ಮಾನಿಗಳ ಪರಿಣಾಮವೂ ಆಗದೆ ಇರಲಿಲ್ಲ. ಇತ್ತೀಚೆಗೆ ಇಂಗ್ರೇಜಿಯ ಪರಿಣಾಮದಿಂದ ಇನ್ನೂ ಹೆಚ್ಚಿನ ವಿಕೃತಿಯು ತಲೆದೋರಿದೆ. ಇನ್ನು ಮೇಲೆ ಹಿಂದೀ ಭಾಷೆಯ ಆಘಾತಕ್ಕೆ ನಮ್ಮ ನುಡಿಯು ಮೈಯೊಡ್ಡಬೇಕಾಗಿದೆ. ಊರು ಮತ್ತು ಪುರಗಳಲ್ಲಿ ಹೋಲಿಕೆಯು ಹೆಚ್ಚಿರುವುದರಿಂದ ಪುರದಿಂದ ಊರು ಬಂದಿತೆಂದೂ ಇಲ್ಲವೆ ಊರಿನಿಂದ ಪುರವೆಂಬ ಪದವಾಯಿತೆಂದೂ ವಾದಕ್ಕೆ ಇಂಬುದೊರೆತಿದೆ. ಊರು ಎಂಬರ್ಥದ 'ವಾಡಿ'ಯು ಪ್ರಾಕೃತ, ಮರಾಟಿ ಎಂದು ಹಲವರ ಸಾಮಾನ್ಯ ಗ್ರಹಿಕೆಯಾಗಿದೆ. ಮುನ್ನವಳ್ಳಿಯು ಮನೋಳಿಯಾಗುವುದು, ಮುದುವೊಳಲು ಮುಧೋಳವೆಂದು ಮಾರ್ಪಡುವುದು. ಕನ್ನಪುರವು ಖಾನಾಪುರವೆಂದು ರೂಪತಾಳುವುದು. ಬೆಂಗಳೂರು ಬ್ಯಾಂಗಲೋರ್ ಎಂದು ಕೇಳಬರುವುದು. 'ಹಿಂಡೂ' (ಹಿಂದೂ ಪತ್ರಿಕೆಗೆ ಮದರಾಸು, ಮೈಸೂರು ಸೀಮೆಗಳಲ್ಲಿ ಹಿಂಡೂ ಎಂಬುದೇ ಸುಶಿಕ್ಷಿತರೆನಿಸುವವರಲ್ಲಿ ವಾಡಿಕೆ!), ಕ್ಯಾನರಾ, ಕ್ಯಾಲಕಟಾ ಎಂಬೀ ಬಗೆಯಾದ ಸೊಲ್ಲಿನ ರೀತಿಯೇ ಈಗ ಶಿಷ್ಟ ಸಂಪ್ರದಾಯವಾದಂತಾಗಿದೆ. ಇದರಿಂದ ಹಲವು ಊರುಗಳ ನಿಜವಾದ ಹೆಸರೇನು? ಅದರ ಸರಿಯಾದ ಉಚ್ಚಾರವೇನೆಂಬುದೂ ತಿಳಿಯುವುದು ಕಷ್ಟವಾಗಿದೆ.

ಎಡೆಗಳ ಹೆಸರಿನ ಅಭ್ಯಾಸದಲ್ಲಿ ಇರುವ ತೊಂದರೆಗಳು ಇಷ್ಟಕ್ಕೆ ತೀರಲಿಲ್ಲ. ಎಷ್ಟೋ ಊರ ಹೆಸರುಗಳು ಈಗ ಹೇಳಹೆಸರಿಲ್ಲದಂತಾಗಿ ಅವುಗಳ ಉಲ್ಲೇಖಗಳು ಕೂಡ ಸಿಕ್ಕುವುದು ದುರ್ಲಭವಾಗಿದೆ. ಅವನ್ನು ಪ್ರಾಚೀನ ಸಾಹಿತ್ಯ, ಶಾಸನಾದಿಗಳ ಅಭ್ಯಾಸಿಗಳು ಕಂಡುಹಿಡಿದು ಎತ್ತಿಹೇಳಬೇಕು. ಕೆಲವೆಡೆಗಳಲ್ಲಿ ಮೊದಲಿನ ಹೆಸರುಗಳು ಹಿಂದೆ ಬಿದ್ದು ಹೊಸ ಹೆಸರುಗಳು ಬಳಕೆಯಲ್ಲಿ ಬಂದಿವೆ. ಇತಿಹಾಸ ಬಲ್ಲವರಿಗಲ್ಲದೆ ಕಿಸೂವೊಳಲ ಹೆಸರು ಬಾದಾಮಿ, ಪಟ್ಟದಕಲ್ಲಿನ ಊರವರಿಗೂ ಸಾಮಾನ್ಯವಾಗಿ ಗೊತ್ತಿರುವುದಿಲ್ಲ. ಪ್ರಾಚೀನ ಪುಲಿಗೆರೆಯು ಇಂದು ಲಕ್ಷ್ಮೇಶ್ವರವಾಗಿದೆ. ನಿಜಾಂ ರಾಜ್ಯದಲ್ಲಿ ಮುಸಲ್ಮಾನೀ ನಾಮಾಂತರಗಳ ಕೋಲಾಹಲವೆ ನಡೆದಿದೆ. ನಿಜಾಮರ ನೆಲೆವೀಡು ಭಾಗ್ಯನಗರ-ಭಾಗಾನಗರವು ಹೈದರಾಬಾದು ಆದುದು ಈ ತೆರನಾಗಿಯೇ.

ದೇಶೀಯ ಹೆಸರುಗಳನ್ನು ಸಂಸ್ಕೃತಕ್ಕೆ ತಿರುಗಿಸಿಕೊಳ್ಳುವ ರೂಢಿಯು ಒಂದು ಕಾಲಕ್ಕೆ ವಿಶೇಷವಾಗಿದ್ದಿತು. ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಹೆಸರುಗಳನ್ನು ತಕ್ಕೊಳ್ಳುವ ಎರಡು ಬಗೆಗಳಿವೆ; ದೇಶೀಯ ಹೆಸರನ್ನು ಸಂಸ್ಕೃತದಂತೆ ಕಾಣುವ ಹಾಗೆ - ಸಂಸ್ಕೃತ ಭಾಷೆಯಿಂದ ಅರ್ಥವಾಗುವ ಹಾಗೆ ಅಲ್ಪಸ್ವಲ್ಪ ಮಾರ್ಪಡಿಸಿಕೊಳ್ಳುವುದು ಒಂದು ರೀತಿ. ಮುಂಡರಗಿ ಎಂಬುದರಿಂದ ಅರ್ಥಬೋಧವಾಗುವುದಿಲ್ಲ; ಅಲ್ಲದೆ ಮುಂಡರಗಿ ಎಂಬುದು ಅದು ತೀರ ದೇಸಿಗರ ಮಾತು. ಪ್ರೌಢಿಮೆ, ಗಾಂಭೀರ್ಯವು ಅದರಲ್ಲಿ ಎನಿಸದೆ, ಅದನ್ನು ಶ್ರೇಷ್ಠರ ಭಾಷೆಯಲ್ಲಿ ಹೇಳಬೇಕೆಂಬ ಚಪಲವು ತಲೆಯೆತ್ತುವುದು ಸಹಜ. ಆದಕಾರಣ ಮುನ್ನವಳ್ಳಿ ಮುನಿಪಲ್ಲಿಯೆನಿಸುವುದು; ಪೊಳಲಿ ಪುಳಿನ ಕ್ಷೇತ್ರವೆಂಬ ಹೆಸರು ತಾಳುವುದು; ಮುಂಡರಗಿಯು ಮೃಡನಗಿರಿಯಾಗುವುದು. ೪೦-೫೦ ವರುಷಗಳ ಹಿಂದೆ ಮುಂಬೈಯಲ್ಲಿ 'ಠಾಕರೆ' ಎಂಬ ಅಡ್ಡಹೆಸರಿನವರು ತಮ್ಮ ದೊಡ್ಡ ವ್ಯಾಪಾರದ ಅಂಗಡಿಗೆ 'ಥ್ಯಾಕರೆ ಎಂಡ್ ಕಂಪನಿ' ಎಂಬ ನಾಮಕರಣ ಮಾಡಿದ್ದರು.

ಊರ ಹೆಸರನ್ನು ಭಾಷಾಂತರಿಸಿಕೊಳ್ಳುವುದು ಇನ್ನೊಂದು ರೀತಿಯಾಗಿದೆ. ಬಿದಿರೆ ತೀರ ದೇಶಿಗರ ಭಾಷೆಯ ಹೆಸರು. ಅದು ಶಾಸನಗಳಲ್ಲಿ ವೇಣುಪುರವೆಂದೂ ವಂಶಪುರವೆಂದೂ ಬಂದುದುಂಟು. ಬೇವೂರು ಕಾಂತಿ ಪಟ್ಟಣವಾಯಿತು. ಈ ಬಗೆಯ ಭಾಷಾಂತರಗಳು ತಪ್ಪಾಗಿರುವುದೂ ಉಂಟು. ಬೇವೂರು ಇದು, ಹುಣಸಿಕಟ್ಟಿ, ಜಾಲಿಹಾಳ ಮೊದಲಾದುವುಗಳಂತೆ ಗಿಡದಿಂದ ಬಂದ ಹೆಸರೆಂಬುದು ಆ ಭಾಷಾಂತರಕಾರರಿಗೆ ಗೊತ್ತಿದ್ದಿಲ್ಲವೆಂದು ತೋರುತ್ತದೆ. ಕಾಯು ಎಂಬರ್ಥದ ಬೇ ಧಾತುವು ಆ ಹೆಸರಿನಲ್ಲಿ ಉಂಟೆಂದು ಗ್ರಹಿಸಿ ಬೇವ+ಊರು=ಬೇವೂರು ಎಂದರೆ ಕಾಂತಿಪುರ, ಕಾಂತಿಪಟ್ಟಣವೆಂದು ಭಾಷಾಂತರಿಸಿಕೊಂಡಿದ್ದಾರೆ. ಮೂಡಲಬಾಗಿಲು ಮುಳಬಾಗಿಲವಾಗಿದೆ. ಇದನ್ನರಿಯದೆ ಮುಳಬಾಗಿಲನ್ನು ಮುಳ್ಳಬಾಗಿಲೆಂದು ಶುದ್ಧೀಕರಿಸಿ

ಬಳಿಕ ಕಂಟಕಾನನ ಪಟ್ಟಣವೆಂದು ಭಾಷಾಂತರಿಸಿದ್ದು ಕಂಡುಬರುವುದು. ಇದರಂತೆ ಧಾರವಾಡವು ಒಂದು ಸಂಸ್ಕೃತ ಕವಿತೆಯಲ್ಲಿ ತಂತುಪುರವಾಗಿ ಇಂಬುಗೊಂಡಿದೆ. ಆನೆಗೊಂದಿಯು ಹಸ್ತಿನಾಪುರವಾದುದೂ ಉಂಟು. ಇಂತೀ ಬಗೆಯ ಮಾರ್ಪಾಟಗಳಲ್ಲಿ ಗೌರವ, ಪ್ರತಿಷ್ಠೆ, ಮಾನ್ಯತೆಯ ಭಾವನೆಯೆ ಮುಖ್ಯವಾಗಿ ಹುದುಗಿ ಕೊಂಡಿರುತ್ತದೆ.

ಎಡೆಗಳ ಹೆಸರು ಎಂದು, ಹೇಗೆ, ಏಕೆ ಬಂದುವು? ಎಂಬೆಲ್ಲದರ ನೆನಹು ಅಂದಿನಿಂದ ಇಂದಿನ ವರೆಗೂ ಉಳಿದಿರುವುದನ್ನು ಸ್ವಲ್ಪ ಸ್ಥಳಗಳಲ್ಲಿ ಮಾತ್ರ ಕಾಣಲು ಸಿಕ್ಕುತ್ತದೆ. ಇಲ್ಲವೆಂದರೂ ವಿಶೇಷ ತಪ್ಪಲ್ಲ; ಅಷ್ಟು ಕಡಿಮೆ ಇವೆ. ಕೆಲವೆಡೆಗಳಲ್ಲಿ ಆ ಊರ ಹೆಸರಿನ ಬಗೆಗೆ ಒಂದಕ್ಕಿಂತ ಹೆಚ್ಚು ಕತೆಗಳು, ಕಾರಣಗಳು ಇದ್ದುದು ಕಂಡುಬರುತ್ತದೆ. ಹಲವು ಹಳೆಯ ಹೆಸರುಗಳು ಮಾರ್ಪಟ್ಟು ಇಂದಿನ ರೂಪಗಳಾಗಿವೆ. ಆದಕಾರಣ, ಇಂದಿನ ಹೆಸರಿನ ಮೇಲೆಯೆ ಊಹೆಗಳನ್ನು ಕಟ್ಟುವುದು ಸರಿಯಾಗಲಾರದು. ಕುರುತ್ತಕುಂಟೆ-ಕುರ್ತಕೋಟಿ; ಸರಟಪುರ-ಸೊರಟೂರು; ಅಯ್ಯಾ ಹೊಳೆ-ಐಹೊಳೆ; ಪೊಂಬುಳ್ಚ-ಹೊಂಬಳ; ಧಮ್ಮಪುರ-ಡಂಬಳ; ಮುಗುಂದ-ಮುಗದ ಮುಂತಾದುವು ಇದಕ್ಕೆ ಉದಾಹರಣ.

ಆದುದರಿಂದ, ಈ ಅಭ್ಯಾಸದಲ್ಲಿ ಕೆಲವೊಂದು ಎಡೆಗಳ ಹೆಸರಿನ ಇತ್ಯರ್ಥವು ಒಮ್ಮೆಲೆ ನಿಶ್ಚಿತವಾಗಿ ಗೊತ್ತಾಗುವುದು ಕಠಿನ. ಅದಕ್ಕಾಗಿ ಈ ವಿಷಯವನ್ನು ಕುರಿತು ಚರ್ಚೆ, ವಿಮರ್ಶೆಗಳು ನಡೆಯಬೇಕಾದುದು ಅವಶ್ಯ. ಇದಕ್ಕಾಗಿ ಒಂದೊಂದು ಭಾಗದ ಜಿಲ್ಹೆ ಜಿಲ್ಹೆಗಳಲ್ಲಿ, ತಾಲ್ಲೂಕು, ತಾಲ್ಲೂಕುಗಳಲ್ಲಿ-ಅಥವಾ ಹಿಂದಿನ ಕಾಲದ ಒಂದೊಂದು ನಾಡಿನ ವಿಭಾಗಗಳ ರೀತಿಯಲ್ಲಿ-ಅಲ್ಲಲ್ಲಿ ಸ್ಥಳೀಯ ಸಂಸ್ಥೆಗಳು ಹೊರಟು, ಅವುಗಳು ತಮ್ಮ ಸಮೀಪದ ಎಡೆಗಳೆಲ್ಲವುಗಳ ಹೆಸರಿನ ಸಂಗ್ರಹಮಾಡಿ, ಅವುಗಳ ವಿಷಯಕ್ಕಿರುವ ಕತೆ, ವೃತ್ತಾಂತಗಳನ್ನೆಲ್ಲ ಕಲೆಹಾಕುವುದಕ್ಕೆ ಅಣಿಯಾದರೆ ಮಾತ್ರ ಈ ಕೆಲಸವು ಇನ್ನೂ ಹೆಚ್ಚು ಸಮರ್ಪಕವಾಗಿ ಜರುಗಬಹುದಾಗಿದೆ. ಅಲ್ಲಿಯವರಿಗೆ ತಮ್ಮ ನೆರೆಹೊರೆಯ ಎಡೆಗಳೆಲ್ಲವುಗಳ ಹಳೆಯ ಹಾಗೂ ಹೊಸ ಹೆಸರುಗಳು ಸರಿಯಾಗಿ ಗೊತ್ತಾಗಬಲ್ಲುವು. ದೂರಿನವರಿಗೆ ಇದು ಅಷ್ಟು ಸಾಧ್ಯವಿಲ್ಲ.

ಆದರೆ, ನಮ್ಮ ನಾಡಿನಲ್ಲಿ ಈ ವಿಷಯದಲ್ಲಿ ಒಲವು ಇದ್ದವರೆ ಸ್ವಲ್ಪ. ಕರ್ಣಾಟವು ಹಲವು ತುಂಡಾಗಿ ಸಿಡಿದು ಹೋಗಿರುವುದರಿಂದ ಅಲ್ಲಲ್ಲಿಯ ಎಡೆಗಳ ಹೆಸರಿನ ಪಟ್ಟಿಯು ದೊರೆಯುವುದೂ ಮಹಾ ಪ್ರಯಾಸದ ಕೆಲಸವಾಗಿದೆ. ಆ ಪಟ್ಟಿಗಳು ಇಂಗ್ರೇಜಿಯಲ್ಲಿರುವುದೇ ಹೆಚ್ಚು. ಇದರಿಂದ ಆವೂರ ನಿಜವಾದ ಹೆಸರು ತಿಳಿಯಲು ಇನ್ನೂ ತೊಂದರೆ! ಕೊಲ್ಲಾಪುರ, ಸೊನ್ನಲಾಪುರದತ್ತ ಮರ್ಹಾಟಿ ಗಾಳಿ ತಗುಲಿ ಆದ ಪಲ್ಲಟ! ಆಂಧ್ರ ಮತ್ತು ತಮಿಳರ ಸೀಮೆಗಳತ್ತ ನಮ್ಮ ಊರುಗಳ ಹೆಸರುಗಳು ತೆಲುಗು ತಮಿಳ ರೂಪಗಳನ್ನು ತಾಳಿದುದೂ ಕಂಡುಬರುವುದು. ಹಲವೆಡೆಗಳಲ್ಲಿ ಈ ರೂಪಾಂತರಗಳನ್ನು ಗುರುತಿಸುವುದೂ ಅಸಾಧ್ಯವಾಗುತ್ತದೆ.

ಇಂತಿವೆಲ್ಲ ತೊಂದರೆಗಳನ್ನು ನೆನಸಿದರೆ ಈ ಕೆಲಸವು ತುಂಬಾ ದುಃಸಾಧ್ಯವೆಂದು ಹೇಳಬೇಕಾಗುವುದು. ಅಲ್ಲದೆ ಊರುಗಳ ಪಟ್ಟಿಯನ್ನು ಓದುವಂತಹ ಜುಗುಪ್ಸೆಯನ್ನುಂಟುಮಾಡುವ ನೀರಸವಾದ ಕೆಲಸವು ಬೇರೊಂದಿರಲಿಕ್ಕಿಲ್ಲ. ಒಮ್ಮೆ ಓದಿ ಉಂಟಾದ ಓಕರಿಕೆ, ತಲೆನೋವನ್ನು ಕಳೆದುಕೊಂಡು ಕೆಲಕಾಲದ ನಂತರ ಮತ್ತೊಮ್ಮೆ ಆ ನಾಮಾವಳಿಯನ್ನು ಕೈಯಲ್ಲಿ ಹಿಡಿಯಲಿಕ್ಕೂ ಮನಸ್ಸು ಬಾರದು. ನನ್ನಂತಹ ಆರೋಗ್ಯವಂತರಿಗೆ ಈ ಕೆಲಸ ಇನ್ನೂ ಕಷ್ಟ. ವ್ಯಕ್ತಿಗೆ ನಷ್ಟವಾದರೂ ನಾಡಿಗೆ ಹಿತವಿದ್ದರೆ, ಓಕರಿಕೆ ಬಂದರೂ ಅದನ್ನು ತಡೆದುಕೊಂಡು ಕೆಲಸವನ್ನು ಮುಂದುವರಿಸಲೇಬೇಕಲ್ಲವೇ? ಕೋಡಗಗೆಮ್ಮಿನಂತಹ ಕೆಲವೊಂದು ಬೇನೆಗೆ ಉಪಾಯವೆಂದು ಊರ ಹೆಸರುಗಳ ಚೀಟಿಯನ್ನು ಕಟ್ಟುವ ಹಳೆಯ ಸಂಪ್ರದಾಯವೊಂದಿದೆ. ಅದರಲ್ಲಿ ಯಾವ ಕಾರ್ಯ-ಕಾರಣ ಭಾವವು ಉಂಟೋ ನಾನರಿಯೆ. ಆದರೆ ಸಮ್ಯಗ್ ದೃಷ್ಟಿಯಿಂದ ಮಾಡಿದ ಗ್ರಾಮನಾಮಗಳ ಅಭ್ಯಾಸವು ಮಾತ್ರ ನಾಡಿನ ವಿಷಯದಲ್ಲಿರುವ ಅಜ್ಞಾನದ ವ್ಯಾಧಿಗೆ ಒಂದು ಒಳ್ಳೆಯ ಔಷಧಿ ಎಂಬುದನ್ನು ನಾನಿಲ್ಲಿ

ಮನಗಂಡು ಹೇಳಬಲ್ಲೆ. ಆದರೆ, ಆ ಗುಣವು ನನ್ನ ಈ ಚೀಟಿಯಲ್ಲಿಯೂ ಉಂಟೇ ಎಂಬುದನ್ನು ಓದುಗರಾದ ಬಲ್ಲವರು ತಮ್ಮ ಅನುಭವದಿಂದ ಹೇಳಬೇಕಲ್ಲದೆ ನಾನಲ್ಲ.

ಸ್ಥಳಗಳ ಹೆಸರಿನಂತಹ ಸಾಮಾನ್ಯ ವಿಷಯ ಆದರೆ ಅದರಲ್ಲಿ ಎಷ್ಟೊಂದು ಮಹತ್ವದ ಅಪೂರ್ವವಾದ ಸಂಗತಿಗಳು ಹುಗಿದುಕೊಂಡಿವೆ! ಅದೆಷ್ಟು ಅಜ್ಞಾತ ವಿಷಯಗಳು ಬೆಳಕಿಗೆ ಬರಲಿವೆ! ಸೂಕ್ಷ್ಮವಾಗಿ ವಿಮರ್ಶಿಸಿದಷ್ಟೂ ಹಿಂದೆ ಆಗಿಹೋದ ಅನೇಕ ಪ್ರಾಚೀನ ಐತಿಹಾಸಿಕ ಘಟನೆಗಳಿಗೆ ಶಾಸನಾದಿಗಳಲ್ಲಿ ದೊರೆಯದ ಆಧಾರಗಳು ಎಡೆಗಳ ಹೆಸರಿನಲ್ಲಿ ಸಿಕ್ಕುತ್ತಿವೆ. ಇತಿಹಾಸವು ಯಾರ ಹೆಸರನ್ನು ಕಡೆಗಣಿಸಿ ತೀರ ಸಾಮಾನ್ಯರೆಂದು ಅವರನ್ನು ಉಲ್ಲೇಖಿಸುವದಿಲ್ಲವೋ ಅಂತಹ ಅನೇಕಾನೇಕ ಅರಸರು ನಾಯಕರು ಗೌಡರು ಗೌಡತಿಯರು ಕುರುಬರು ಗೊಲ್ಲರು ಮೊದಲಾದವರು ತಮ್ಮ ಹೆಸರಿನ ಹಟ್ಟಿ-ಊರುಗಳನ್ನು ಕಟ್ಟಿಕೊಂಡು ತಮ್ಮ ಮಟ್ಟಿಗೆ ಅಜರಾಮರ ರಾಗಿದ್ದಾರೆ. ಪುರಾಣಗಳಿಗೆ ಪೂರಕವಾಗಿ ಪೋಷಕವಾಗಿ ಇರುವ ಹಲವು ಕತೆಗಳಿಗೆ ಆಧಾರವಾದ ಅನೇಕ ಯಾತ್ರೆ ತೀರ್ಥ ಗ್ರಾಮಗಳ ಹೆಸರುಗಳಿವೆ. ನಮ್ಮ ನಾಡಿನಲ್ಲಿ ಬಂದು ಹೋದ ಹಲವು ಧರ್ಮ-ಸಂಸ್ಕೃತಿಗಳ ಮಹಾಪ್ರವಾಹದ ಕುರುಹುಗಳನ್ನು ತೋರುವ ಎಡೆಗಳಿವೆ.

ಇತಿಹಾಸ-ಪುರಾಣ-ಧರ್ಮ-ಸಂಸ್ಕೃತಿಗಳಷ್ಟೇ ಅಲ್ಲ, ಊರ ಹೆಸರುಗಳಿಂದ ಜನರ ನೆಚ್ಚಿಗೆ-ಮೆಚ್ಚಿಗೆ ಆಗುಹೋಗುಗಳಂತೆ ನೆಲದ ಪಾಡೂ ತಿಳಿದುಬರುತ್ತದೆ. ಮಳೆ ಬೆಳೆ, ಭೂಮಿಯ ಗುಣ, ಬಣ್ಣ, ಅಲ್ಲಿಯ ಪ್ರಾಣಿ, ವನಸ್ಪತಿಗಳು, ಖನಿಜಗಳು, ಕಾಡು, ಮೇಡು, ಹೊಳೆ, ಕೆರೆ, ಕಟ್ಟೆ, ಕುಂಟೆ ಮೊದಲಾದವುಗಳ ಇರುವನ್ನು ಊರ ಹೆಸರುಗಳಿಂದ ಅರಿತುಕೊಳ್ಳಬಹುದಾಗಿದೆ.

ವ್ಯಾಕರಣ, ಭಾಷಾ-ಶಾಸ್ತ್ರದಲ್ಲಿ ತಜ್ಞರು ಯಾವ ಸಂಗತಿಗಳನ್ನು ವಿಶೇಷವಾಗಿ ಗಮನಿಸಿಲ್ಲವೋ ಅಂತಹ ಹಲವು ಮಾತುಗಳು ಊರ ಹೆಸರಿನ ಅಭ್ಯಾಸದಲ್ಲಿ ಚೆನ್ನಾಗಿ ಎದ್ದು ತೋರುತ್ತವೆ. ನಮ್ಮ ನಾಡಿನ ಸೊಲ್ಲಿನ ರೀತಿಯನ್ನೂ ಅದರಲ್ಲಾದ ಮಾರ್ಪಾಟನ್ನೂ ತಿಳಿಯಲು ಎಡೆಗಳ ಹೆಸರಿನ ಹೊರ್ತು ಇಂದು ಬೇರೆ ನಿಶ್ಚಿತವಾದ ಆಧಾರವೇ ದೊರೆಯುವುದಿಲ್ಲ. ಈ ದೃಷ್ಟಿಯಿಂದಂತೂ ಈ ಹೆಸರುಗಳು ಅಭ್ಯಾಸಕ್ಕೆ ಅತ್ಯಂತ ಮಹತ್ವದುವುಗಳಾಗಿವೆ.

ಊರುಗಳು ಶಿಲಾಶಾಸನಾದಿಗಳಿಗಿಂತಲೂ ಸಾವಿರಾರು ವರುಷ ಮೊದಲು ಎಂಬಲ್ಲಿ ಸಂದೇಹವೇ ಇಲ್ಲ. ಆದುದರಿಂದ ಲಿಖಿತ ಆಧಾರಗಳಿಂದ ಗೊತ್ತಾಗದ ಹಲವು ಸಂಗತಿಗಳಿಗಾಗಿ ಊರುಗಳ ಹೆಸರಿನ ನೆರವನ್ನು ಕೋರದೆ ಗತಿಯಿಲ್ಲ. ಕಲ್ಬರೆಹ, ತಾಮ್ರ ಪಟಗಳಂತೆ ಎಡೆಯ ಹೆಸರುಗಳೂ ನಮ್ಮ ನಾಡಿನ ಇರುವನ್ನು ತೋರುವ ಮಹತ್ವದ ಸಾಧನವಾಗಿವೆ, ಎಂಬುದನ್ನು ಇಲ್ಲಿ ಮನಗಾಣಬಹುದಾಗಿದೆ.

ಎಡೆಗಳ ಹೆಸರುಗಳು

ಹೊಳೆ-ಹಳ್ಳ, ಗುಡ್ಡ-ಬೆಟ್ಟ, ನಾಡು-ಬೀಡು ಮೊದಲಾದ ಯಾವ ಹೆಸರೆ ಇರಲಿ, ಅದು ಸಾಧಾರಣವಾಗಿ ಎರಡು ಶಬ್ದಗಳಿಂದಾದ ಒಂದು ಕೂಡು-ನುಡಿಯಿರುವುದುಂಟು. ಅದರಲ್ಲಿ ಮೊದಲನೆಯದು ಒಂದು ವಿಶಿಷ್ಟಾರ್ಥವನ್ನೂ ಎರಡನೆಯದು ಆ ವರ್ಗದ ಸಾಮಾನ್ಯಾರ್ಥವನ್ನೂ ಸೂಚಿಸುತ್ತದೆ. ಉದಾ : ಪೆರ್ದೊರೆ ಅಥವಾ ಕೃಷ್ಣಾನದಿ; ಶ್ರೀಶೈಲ; ವಿಜಯಾಪುರ ಮುಂ. ಇವುಗಳಲ್ಲಿ ಮೊದಲನೆಯದು ಅಂಕಿತನಾಮ; ಎರಡನೆಯದು ಸಾಮಾನ್ಯನಾಮ ಅಥವಾ ರೂಢನಾಮವಾಗಿರುತ್ತದೆ.

ಆದರೆ, ಕೆಲವೆಡೆಗಳಲ್ಲಿ ಈ ಕೂಡುನುಡಿಯೊಳಗಿನ ಎರಡನೆಯ ಪದವು ಸ್ಪಷ್ಟವಿರುವುದಿಲ್ಲ; ಕೊನೆಗೆ ಗೆ ಅಥವಾ ಲು ಇಂತಹ ಯಾವುದೊಂದು ಪೂರಕ ಪ್ರತ್ಯಯವು ಮಾತ್ರ ಅಂಟಿಕೊಂಡಿರುತ್ತದೆ. ಉದಾ: ಕೂಡಲ; ಕೂಡಲಿಗೆ; ನೇಸರಿಗೆ; ಮತ್ತೆ ಇನ್ನು ಕೆಲವೆಡೆಗೆ ಈ ಕೊನೆಯ ಪ್ರತ್ಯಯವೂ ಇರುವುದಿಲ್ಲ. ಕೇವಲ ಅಂಕಿತನಾಮವೊಂದೇ ಇದ್ದು ಅದರ ಎರಡನೆಯ ಭಾಗವು ಅವ್ಯಕ್ತವಾಗಿದ್ದರೂ ಅದು ಜನಗಳಿಗೆ ಹೊಳೆಯುತ್ತಿರುತ್ತದೆ. ಉದಾ: ಬಾದಾಮಿ (ಪಟ್ಟಣ); ಹಟ್ಟಿ (ಊರು); ಹಿಮಾಲಯ (ಪರ್ವತ); ತುಂಗಾ (ನದಿ); ಮುಂ. ಊರು, ದೇಶ, ಪರ್ವತ ಎಂಬರ್ಥದ ಕೊನೆಯ ಸಾಮಾನ್ಯನಾಮವು (ಹೆಸರಿನಲ್ಲಿ) ಇರುವಾಗಲೂ, ಹಲವುಸಾರೆ ರೂಢಿ ಮೂಢತೆಯಿಂದ ಬಂದ ಮಬ್ಬಿನಲ್ಲಿ, ಆ ಹೆಸರಿನ ಮುಂದೆ ಇನ್ನೂ ಒಂದು ಅದೇ ಅರ್ಥದ ಹೆಚ್ಚಿನ ಶಬ್ದವನ್ನು ಸೇರಿಸುವುದುಂಟು. ಈ ಅರಿವುಗೇಡಿತನವನ್ನು ತಿದ್ದಿಕೊಳ್ಳಬೇಕೆನ್ನುವ ಬದಲು ಅದನ್ನು ಉಳಿಸಿಕೊಂಬುವ ಪ್ರಯತ್ನಗಳಿಂದ ವಿಚಾರಶುದ್ಧಿಗೆ ಅಡ್ಡಿಯುಂಟಾಗುವುದು. ಉದಾ: ಭರಮಪಳ್ಳಿಯಾಬಾದ; ಕಂನಡ (ನಾಡು) ದೇಶ; ಸಹ್ಯಾದ್ರಿಪರ್ವತ; ಮುಂ. ಇದು ತಪ್ಪು.

ನದಿಗಳನ್ನು ಹೇಳುವಲ್ಲಿ ಬಹುತರ ಅಂಕಿತನಾಮವೊಂದೇ ಸಾಕಾಗುತ್ತದೆ. ಉದಾ: ಗಂಗಾ, ತುಂಗಾ, ಕಾವೇರಿ ಮುಂ. ಇದರಂತೆ ಬೇರೆ ಕೆಲವು ಸಾಮಾನ್ಯ ನಾಮಗಳು ತಮ್ಮ ವೈಶಿಷ್ಟ್ಯದಿಂದ ಅಂಕಿತನಾಮದಂತೆ ಆದುದುಂಟು. ಉದಾ: 'ಗಿರಿ' ಎಂದರೆ ತಿರುಪತಿ; 'ಪರ್ವತ' ಎಂದರೆ ಶ್ರೀಶೈಲ; ನಿವಾಸಸ್ಥಾನವೆಂಬರ್ಥದ ಸಾಮಾನ್ಯ ನಾಮಗಳೂ ಹೀಗೆ. ಅಂಕಿತನಾಮಗಳಂತೆ ರೂಢವಾಗಿವೆ. ಉದಾ : ಊರ್ (ಊರು); ಹಟ್ಟಿ; ಪಟ್ಟಣ, (ಪಾಟಣ; ಪಾಟಣಾ); ವಾಡಿ, ನಗರ; ಖೇಡ; ಮುಂ. ಆದರೆ ಇವುಗಳ ಮಹತ್ವವು ಕಡಿಮೆಯಾಗಿಯೊ ಅಥವಾ ಇವು ಅಂಕಿತನಾಮಗಳಾದುದರಿಂದ ಇವುಗಳ ಎದುರು ಸಾಮಾನ್ಯನಾಮದ ಆವಶ್ಯಕತೆಯುಂಟಾಗಿಯೊ ಇವುಗಳೆದುರು ಗ್ರಾಮವಾಚಕ ಇನ್ನೊಂದು ಪದವು ಸೇರಿಕೊಂಡುದು ಹಲವೆಡೆಗೆ ಕಂಡುಬರುತ್ತದೆ. ಉದಾ : ಹಳ್ಳಿಹಾಳ (ಹಳ್ಯಾಳ); ಹಳ್ಳೂರು; ಹಳ್ಳಿ ಕೇರಿ-ಪಟ್ಟಿಹಾಳ; ನಗರೂರು; ಪಟ್ಟಣಕುಡಿ ಅಥವಾ ಪಟ್ಟಣಕೋಡಿ; ಹಳ್ಳಿಖೇಡಾ; ಖೇಡಗಾವ; ಹೊಳಲುಗುಂದಿ; ಬಾಳಂಬೀಡು; ಪಾಡೆಗಾವ; ಪಾಟಗಾವ; ನಾಡಗಾವ; ಮುಂ.

ಹೆಸರಿನ ಎರಡೂ ಪದಗಳ ಅರ್ಥವು ಹಲವೆಡೆಗಳಲ್ಲಿ ಸುಸ್ಪಷ್ಟವಾಗಿರುವುದಾದರೂ ಎಷ್ಟೋ ಕಡೆಗಳಲ್ಲಿ ಅವುಗಳಿಂದ ಇಂದು ಅರ್ಥವು ಸರಿಯಾಗಿ ತಿಳಿಯದಂತಾಗಿರುವುದೂ ಸುಳ್ಳಲ್ಲ. ಪ್ರಾಚೀನಕಾಲದ ಆ ಪದಪ್ರಯೋಗಕ್ಕೆ ಇದ್ದ ಅರ್ಥದಲ್ಲಿ ಆದ ಬದಲಾವಣೆಯು ಇದಕ್ಕೆ ಒಂದು ಕಾರಣ. ಪಾಡಿ, ವಾಡಿ, ವಾಟಗಳ ವಿಚಾರದಲ್ಲಿ ಮುಂದಿನ ಪ್ರಕರಣದಲ್ಲಿ ಮಾಡಿದ ವಿವರಣೆಯಿಂದ ಈ ಮಾತಿನ ಸ್ಪಷ್ಟೀಕರಣವಾಗುವುದು. ಕಾಲಾಂತರದಿಂದ ಶಬ್ದರೂಪದಲ್ಲಾದ ವ್ಯತ್ಯಾಸಗಳು ಇನ್ನೊಂದು ಕಾರಣ ಕುಡಿಯು ಗುಡಿ, ಕೋಡಿ, ಗೋಡಿಯವರೆಗೆ ಬದಲಾಗಿದೆ. ಇನ್ನು ಕೆಲವೆಡೆಗೆ ಕೋಡವಾಗಿ ಖೋಡ ಎಂದೂ ಕೇಳಬರುವುದು. ಪಳ್ಳಿಯು ವಳ್ಳಿಯಾಗಿ ಮುಂದೆ ಒಳಿ, ಳಿ, ಲಿ, ಳೆ, ಯವರೆಗೆ ಪಲ್ಲಟವಾಗಿದೆ. ಕುನ್ ಅಥವಾ ಕುನ್‌ರವು ಗುಂಡ, ಗುಂಡಿ, ಕೊಂಡ, ಗೊಂಡ, ಗೊಂಡಿ, ಗೊಂದಿ, ಕುಂದ ಗುಂದ ಕುಂದಿ, ಗುಂದಿ ಎಂದು ಮುಂತಾದ ರೂಪತಾಳಿದೆ.

ಎಡೆಗಳ ಹೆಸರಿನ ಎರಡೂ ಭಾಗಗಳು ನಮ್ಮ ಜನಗಳ ಸಾಂಸ್ಕೃತಿಕ ಇತಿಹಾಸವನ್ನು ತಿಳಿಸಲು ಅತ್ಯಂತ ಉಪಯುಕ್ತವಾಗಿವೆ. ಆದರೆ, ಎಡೆಗಳ ಹೆಸರುಗಳಿಂದ ಯಾವುದೊಂದು ಊಹೆಯನ್ನು ಮಾಡುವ ಮೊದಲು ಅದರ ನಿಜ ಸ್ವರೂಪದ ಬಗೆಗೆ ಎಷ್ಟು ಎಚ್ಚರಪಟ್ಟರೂ ಕಡಿಮೆಯೇ. ಮೂಲದಲ್ಲಿಯೆ ತಪ್ಪಿದರೆ ಮುಂದಿನ ವಿಚಾರಮಂದಿರವೆಲ್ಲ ನೆಲಸಮವಾಗುವುದು. Badami ಎಂದು ಇಂಗ್ರೇಜಿ ಅಕ್ಷರದಿಂದ ಬರೆದ ಹೆಸರನ್ನು 'ಬ್ಯಾಡಮಿ'ನ ಎಂದು ಬಗೆದು ಅದು ಬ್ಯಾಡ (ಬೇಡ)ರ ಊರೆಂದು ಹೇಳುವ ಮೋಹವುಂಟಾಗುವಂತಿದೆ. 'ಬಾದಾಮಿ' ಎಂದರೆ 'ಬಾಡ' ಎಂಬ ಗ್ರಾಮವಾಚಕ ಪದಕ್ಕೆ ಗೆ, ಲುಗಳಂತೆ ಮಿ ಎಂಬ ಪ್ರತ್ಯಯ ತಗುಲಿದೆಯೆಂದು ಭಾವಿಸುವ ಸಂಭವವಿದೆ. 'ಬಾದಾಮಿ' ಎಂದು ಈಗ ವಾಡಿಕೆಯಲ್ಲಿರುವ ಹೆಸರು ಸರಿಯಾಗಿ ತಿಳಿದರೂ ಇಷ್ಟರಿಂದಲೆ ಕೆಲಸವು ತೀರಲಿಲ್ಲ. ಇಲ್ಲಿ ಒಂದು ಕಾಲಕ್ಕೆ ಬಾದಾಮಿಯ ಗಿಡಗಳಿದ್ದು ಅದರ ಕಾಯಿಗಳಿಗಾಗಿ ಪ್ರಸಿದ್ಧವಾಗಿದ್ದಿತೆಂದು ಕಲ್ಪಿಸಿ ತಾನೊಂದು ಅದ್ಭುತ ಶೋಧಮಾಡಿದ ಸಮಾಧಾನ ಹಚ್ಚಿಕೊಂಬ ಹೆದರಿಕೆಯಿದೆ. Bijapur ಇದು ನಿಜವಾದ ಹೆಸರೆಂದೇ ಗ್ರಹಿಸಿ ಒಬ್ಬ ಪಂಡಿತರು, ಬೀಜಪೂರ ಗಣಪತಿಯ ಕ್ಷೇತ್ರವೆಂದು ಇದಕ್ಕೆ ಬಿಜಾಪೂರವೆಂಬ ಹೆಸರಾಯಿತೆಂದು ಅದರ ಮೇಲೆ ಒಂದು ಕವಿತೆಯನ್ನೂ ಕಟ್ಟಿದ್ದಾರೆ. ಬೀಜಪೂರವೆಂಬುದು ಇಂಗ್ರೇಜಿ ಉಚ್ಚಾರದ ಪರಿಣಾಮ. ಅದರ ನಿಜವಾದ ಹೆಸರು ವಿಜಯಾಪುರವೆಂದು ಶಾಸನಗಳ ಉಲ್ಲೇಖಗಳಿಂದ ನಿಶ್ಚಿತವಾಗಿ ತಿಳಿಯುತ್ತದೆ. ಅದರಂತೆ ಬಾದಾಮಿಯೆಂಬುದು ಇಂದಿನ ಉಚ್ಚಾರ. 'ವಾತಾಪಿ' ಎಂಬುದು ಅದರ ಮೂಲ ರೂಪ. ಇದು ತಿಳಿದ ಬಳಿಕ ಅದರ ಕತೆಯೆಲ್ಲವೂ ಚೆನ್ನಾಗಿ ಹೊರಬರುವುದು.

ಕೆಲ ಹೆಸರುಗಳು ಹೊರ ತೋರಿಕೆಯಲ್ಲಿ ಬಹಳ ಗಂಭೀರವಾಗಿದ್ದರೂ ಅವುಗಳ ಆರಂಭವು ಒಂದು ಬಗೆಯ ತೀರ ನಗೆಮಾತಿನಲ್ಲಿರುತ್ತದೆ; ಧಾರವಾಡದೊಳಗಿನ 'ಗೋಪಾಳಪುರ'ವೆಂಬ ಹೊಸ ಒಕ್ಕಲು ಇದೇ ಬಗೆಯದಾಗಿದೆ. ಸರಕಾರಿ ನಿಯೋಗದಲ್ಲಿ ಹಲವು ಬಗೆಯ ಕಾಯಕಗಳಿಂದ ದುಡ್ಡು ದೊರಕಿಸಿ ಸಿರಿವಂತರಾದವರು ಕೆಲರು ಆ ಭಾಗದಲ್ಲಿ ಮೊದಲು ಮನೆಕಟ್ಟಿದರು. ಸರಕಾರಿ ಕೆಲಸದಲ್ಲಿ ತಮ್ಮ ಸಂಬಳವಿಲ್ಲದೆ ಇನ್ನೂ ಹೆಚ್ಚಿನ ಸಂಪಾದನೆ ಮಾಡುವುದಕ್ಕೆ 'ಗೋಪಾಳ ಹೊಡೆಯೋದು' ಎಂದು ಹೇಳುವ ಸಂಪ್ರದಾಯವಿದೆ. ಪುರಂದರದಾಸರ 'ಗೋಪಾಳ ಬುಟ್ಟಿ ಹಿಡಸಿದಳಯ್ಯಾ' ಎಂಬ ಹಾಡಿನೊಳಗಿನ ಈ ಮಾತು ಪಡೆನುಡಿಯಾಗಿ ವಿಚಿತ್ರ ವಿಶೇಷಾರ್ಥವನ್ನು ಪಡೆದಿದೆ. ಆ ವಿಶೇಷಾರ್ಥದಲ್ಲಿಯೆ ಈ ಎಡೆಗೆ ಗೋಪಾಳಪುರವೆಂಬ ಹೆಸರಾಗಿದೆ.

ಕೆಲವೆಡೆಗಳಲ್ಲಿ ಆ ಹೆಸರು ಬಂದ ಬಗೆಗೆ ಒಂದಕ್ಕಿಂತ ಹೆಚ್ಚು ಕತೆ ಅಥವಾ ಕಾರಣಗಳು ಮುಂದೆ ಬಂದಿರುತ್ತವೆ, ಅವುಗಳಲ್ಲಿ ಯಾವುದು ಸರಿಯೆಂಬುದನ್ನು ಬೇರೆ ಬೇರೆ ಸಂಗತಿಗಳೊಡನೆ ತೂಗಿ ನೋಡಿ ನಿರ್ಧರಿಸಬೇಕಾಗುತ್ತದೆ. ಉದಾಹರಣಾರ್ಥವಾಗಿ ಮೈಸೂರ ಸಂಸ್ಥಾನದೊಳಗಿನ ಕೋಲಾರ ಎಂಬ ಊರಿನ ವಿಚಾರವನ್ನೆ ತಕ್ಕೊಳ್ಳಬಹುದು. ಕೋಲಾರವೆಂಬ ಹೆಸರು ಏಕೆ ಬಂದಿತೆಂಬುದನ್ನು ಕುರಿತು ಮೈಸೂರ ಗ್ಯಾಝಿಟಿಯರಿನಲ್ಲಿ ಕೆಲವು ಊಹೆಗಳನ್ನು ಕೊಟ್ಟಿದೆ. ೧. ಪರಶುರಾಮನು ತನ್ನ ತಂದೆಯನ್ನು ಕೊಂದ ಕಾರ್ತವೀರ್ಯನ ಸೇಡು ತೀರಿಸಿ ಆತನಿಂದ ತನ್ನ ಸುರಭಿಯನ್ನು (ಆವು) ಮರಳಿ ಪಡೆದ ಕೋಲಾಹಲ-ಗೆಲವು ಇಲ್ಲಿ ಆಯಿತು.

ಆ ಕೋಲಾಹಲದ ಸ್ಮಾರಕವೆ ಈ ಊರ ಹೆಸರಿನಲ್ಲಿದೆ. ೨. ಕ್ರಿ. ಶ. ದ ೨ನೆಯ ಶತಮಾನದಿಂದ ಸುಮಾರು ೧೦೦೦ ವರುಷಗಳ ವರೆಗೆ ಆಳಿದ ಗಂಗರಾಜರಿಗೆ 'ಕುವಳಾಲ ಪುರವರಾಧೀಶ'ರೆಂಬ ಬಿರುದು ಇದ್ದಿತು. ಈ ಗಂಗ ವಂಶದಲ್ಲಿ ಕೋಲಾಹಲನೆಂಬ ಒಬ್ಬ ರಾಜನಾದನು. ಆತನು ಕಟ್ಟಿದ ಪಟ್ಟಣವೆಂದು ಈ ಹೆಸರು. ೩. ಉತ್ತಮ ಚೋಳನ ಕಾಲದಲ್ಲಿ 'ಕೋಲ'ನೆಂಬ ದನಗಾರನಿದ್ದನಂತೆ; ಕೋಲನು ನೇಗಿಲು ಹೊಡೆವಾಗ ಆತನಿಗೆ ಒಂದು ಹೊನ್ನ ಕೊಪ್ಪರಿಗೆ ದೊರೆತಿತು. ಕೋಲನು, ಹಲಕ್ಕೆ ಎಂದರೆ ನೇಗಿಲಿಗೆ ಎಲ್ಲಿ ಕೊಪ್ಪರಿಗೆ ಹೊನ್ನು ದೊರೆತಿತೊ ಆ ಎಡೆಯಲ್ಲಿಯೆ ಒಂದು ಊರು ಕಟ್ಟಿದನು. ಆ ಕಾರಣದಿಂದ ಇದು ಕೋಲಾಹಲ; ೪. ಚೋಳನ ಕನಸಿನಲ್ಲಿ ರೇಣುಕೆಯು ಕೋಲಾಹಲಮ್ಮನ ರೂಪದಿಂದ ಕಾಣಿಸಿಕೊಂಡಳು...... ಆತನು ಇಲ್ಲಿ ಕೋಲಾಹಲಮ್ಮನ ಗುಡಿಕಟ್ಟಿಸಿ ಊರ ನೆಲಸಿದನು. ಈ ದೇವಿಯ ಮೂಲಕ ಈ ಊರಿಗೆ ಕೋಲಾರವೆಂಬ ಹೆಸರಾಯಿತು. ಈ ಗುಡಿಯಲ್ಲಿ ಚೇಳಿಗೆ ಒಂದು ವಿಶೇಷ ಸ್ಥಾನವಿದೆ. ಇಲ್ಲಿ ಚೇಳು ಕಾಣಿಸಿಕೊಳ್ಳುವುವಂತೆ.

ಕೋಲಾರವೆಂಬುದು ಮೈಸೂರ ಸಂಸ್ಥಾನದಲ್ಲಿ ಒಂದೇ ಇಲ್ಲ. ಈ ಹೆಸರಿಗೆ ಸ್ವಲ್ಪ ಹೆಚ್ಚುಕಡಿಮೆ ಹೋಲಿಕೆ ಯಿರುವ ಇನ್ನೂ ಕೆಲವು ಊರುಗಳು ಕಂನಾಡ ಎಲ್ಲ ಭಾಗಗಳಲ್ಲಿಯೂ ಇವೆ. ವಿಜಯಾಪುರ ಜಿಲ್ಲೆಯಲ್ಲಿ ಒಂದು ಕೋಲ್ಹಾರವೆಂಬ ಊರೂ ಇದೆ. ಸಂಸ್ಥಾನ ಕೊಲ್ಲಾಪುರ ಅಥವಾ ಕೊಲ್ಹಾಪುರವೆಂಬುದಂತೂ ಸುಪ್ರಸಿದ್ಧ. ದಕ್ಷಿಣ ಕಂನಡ ಜಿಲ್ಲೆಯಲ್ಲಿ ಒಂದು ಕೊಲ್ಲೂರು ಗ್ರಾಮವಿದೆ. ನಿಜಾಂ ಇಲಾಖೆಯ ಬೀದರ ಜಿಲ್ಲೆಯಲ್ಲೂ ಒಂದು ಕೊಲ್ಲೂರುಂಟು. ಅಲ್ಲದೆ ಇನ್ನೂ ಎಷ್ಟೊ ಇವೆ. ಕೋಲಾರಿನಲ್ಲಿ ಕೋಲಾಹಲಮ್ಮನು ರೇಣುಕೆಯೆಂಬ ಹೆಸರಿನಲ್ಲೂ ಪ್ರಸಿದ್ಧಳಿದ್ದಾಳೆ. ಕೊಲ್ಲಾಪುರದ ದೇವಿಗೆ ಅಂಬಾಭವಾನಿ ಅಥವಾ ಮಹಾಲಕ್ಷ್ಮಿಯೆಂಬ ಹೆಸರುಗಳು ವಾಡಿಕೆಯಲ್ಲಿವೆ. ದ. ಕಂನಡಿನ ಕೊಲ್ಲೂರು ದೇವಿಗೆ ಮೂಕಾಂಬೆಯೆನ್ನುವರು. ಕೊಲ್ಲ ಅಥವಾ ಕೋಲವೆಂಬ (ಊರು ಪುರ, ಹಾರ, ಆರ) ಸ್ಥಳಗಳು ದೇವಿಯ ಕ್ಷೇತ್ರಗಳೆಂದು ಸುವಿಖ್ಯಾತವಾಗಿದ್ದುದು ಮನನೀಯವಾಗಿದೆ. ಆದರೆ ಮೈಸೂರಿನ ಕೋಲಾರದ ಸ್ಥಳಪುರಾಣದ ಕತೆಗಳೆಲ್ಲವೂ ಉಳಿದ ಕೋಲಗ್ರಾಮಗಳಿಗೆ ಸರಿಹೋಗುವುದಿಲ್ಲ.

ಕೋಲಾದೇವಿಯಿಂದ ಈ ಹೆಸರು ಬಂದಿತೆನ್ನಲು ಎಡೆಯಿಲ್ಲ; ಏಕೆಂದರೆ ಒಂದೊಂದು ಸ್ಥಳದ ದೇವಿಯ ಹೆಸರು ಒಂದೊಂದು ತೆರನಾಗಿದೆ. ಪರಶುರಾಮನು ಕಾರ್ತವೀರ್ಯನನ್ನು ಒಂದು ಸ್ಥಳದಲ್ಲಿಯೆ ಕೊಲ್ಲುವುದು ಸಾಧ್ಯವಿದೆ. ನಾಲ್ಕಾರು ಕಡೆಗಳಲ್ಲಿ ಒಬ್ಬನನ್ನು ಕೊಂದನೆಂದು ಹೇಳುವುದು ಅಸಂಬದ್ಧ. ಪರಶುರಾಮನು ಇಪ್ಪತ್ತೊಂದು ಬಾರಿ ಕ್ಷತ್ರಿಯರನ್ನೆಲ್ಲ ಹೇಳ ಹೆಸರಿಲ್ಲದಂತೆ ಮಾಡಿದನೆಂಬಂತೆ! ಇನ್ನು ಚೋಳರಾಜನ ಕನಸಿನಲ್ಲಿ ದೇವಿಯು ಬಂದ ವಿಚಾರ. ಇದು ಮೈಸೂರ ಕೋಲಾರಕ್ಕೆ ಏನೊ ಸರಿಯೆನಿಸಬಹುದು. ಆದರೆ, ಉಳಿದ ಕೋಲಗ್ರಾಮಗಳಿಗೆ? ಚೋಳರ ರಾಜ್ಯವು ಕೋಲಾರ (ಮೈಸೂರ) ವರೆಗೆ ಒಮ್ಮೆ ಇದ್ದಿತಾದರೂ ಕೊಲ್ಲಾಪುರ, ಕೊಲ್ಲೂರುಗಳು ಚೋಳರಾಜ್ಯದಲ್ಲಿದ್ದುದಕ್ಕೆ ಐತಿಹಾಸಿಕ ಆಧಾರವಿಲ್ಲ. ಇನ್ನುಳಿದುದು ಕೋಲನೆಂಬ ಒಬ್ಬ ದನಗಾರನ ಕತೆ. ದನಗಾರನಂತಹ ಒಂದು ಸಾಮಾನ್ಯವ್ಯಕ್ತಿಯು ಕಂನಾಡ ಮೂಲಮೂಲೆಗೂ ಅಲೆದು ಅಲ್ಲಲ್ಲಿ ತನ್ನ ಹೆಸರಿನ ಊರುಗಳನ್ನು ಕಟ್ಟಿದನೆಂದು ಗ್ರಹಿಸುವುದಕ್ಕೆ ಯಾವ ವಿಚಾರವಂತರೂ ಒಪ್ಪಲಾರರು, ಅಲ್ಲದೆ ಇಂತಹ ವ್ಯಕ್ತಿಯು ಇದ್ದುದೇ ನಿಜವಿದ್ದರೆ ಆ ಹೆಸರು, ಇತಿಹಾಸ ಅಥವಾ ದಂತಕಥೆಗಳಲ್ಲಿ ಎಲ್ಲಿಯೂ ಅಡಕವಾಗದೆ ಹೋಗಿರುವ ಸಂಭವವು ಕಡಿಮೆ.

ಹಾಗಾದರೆ ಕೋಲಾರ (ಮೈಸೂರ) ವಿಷಯಕ್ಕಿರುವ ಮೇಲಣ ಎಲ್ಲ ಕತೆಗಳು ಸುಳ್ಳೆ? ಸಂಸ್ಕೃತಿಯ ಅಭ್ಯಾಸಿಗೆ, ಇಂತಹ ಯಾವ ಮಾತನ್ನೂ ಸುಳ್ಳೆಂದು ಒಮ್ಮೆಲೆ ತಿರಸ್ಕರಿಸಿ ನಡೆಯದು. ಏಕೆಂದರೆ ಕಾರಣವಿಲ್ಲದೆ ಯಾವ ಮಾತೂ ಬಳಕೆಯಲ್ಲಿ ಬರುವುದಿಲ್ಲ. ಪ್ರತಿಯೊಂದು ಸಂಗತಿಯನ್ನೂ ಕಾರ್ಯಕಾರಣ ಸಂಬಂಧದೊಡನೆ ಇತಿಹಾಸದ ಹಿನ್ನೆಲೆಯಲ್ಲಿ ಅರಿತುಕೊಳ್ಳುವುದು ಜ್ಞಾನಜಿಜ್ಞಾಸುವಿನ ಕರ್ತವ್ಯವಾಗಿದೆ.

ಮೇಲಣ ನಾಲ್ಕು ಕಾರಣಗಳನ್ನು ಕುರಿತು ಇತಿಹಾಸದ ಬೆಳಕಿನಲ್ಲಿ ವಿಚಾರಿಸುತ್ತಿರಲು ಚಂದ್ರವಳ್ಳಿ ಅಥವಾ ಮೊಹೆಂಜೋದಾರುವಿನ ಅಗೆತದ ನೆನಪಾಗುತ್ತದೆ. ಅಲ್ಲಿ ಅಗೆತದಲ್ಲಿ ಒಂದರೊಳಗೊಂದು ಮೂರು ನಾಲ್ಕು

ಊರುಗಳು ಕಾಣಿಸಿಕೊಳ್ಳುವಂತೆ ಇಲ್ಲಿಯೂ ಸಾಂಸ್ಕೃತಿಕ ಮೂರು ನಾಲ್ಕು ಪದರುಗಳು ಒಂದರೊಳಗೊಂದು ಸೇರಿಕೊಂಡುದು ಕಂಡು ಬರುತ್ತಲಿದೆ. ಆ ಇತಿಹಾಸದ ಹಿನ್ನೆಲೆಯ ಸ್ಪಷ್ಟತೆಯು ಇಲ್ಲದ್ದರಿಂದ ಅವೆಲ್ಲ ಕತೆಗಳು ಒಂದರೊಳಗೊಂದು ಬೆರೆತುಕೊಂಡು ಇಂದು ವಿಚಾರದ ಗೊಂದಲಕ್ಕೆ ಇಂಬುದೊರೆತಿದೆ.

ಗ್ಯಾಝೆಟಿಯರಿನಂತಹ ಗ್ರಾಮನಾಮಗಳ ಅಭ್ಯಾಸದ ಕೆಲವು ಪ್ರಯತ್ನಗಳು ಅಲ್ಪಸ್ವಲ್ಪ ಈವರೆಗೆ ಆಗಿವೆ. ಆದರೆ, ಅವೆಲ್ಲ ಬಿಡಿಬಿಡಿಯಾದ ಪ್ರಯತ್ನ. ಒಂದು ಭಾಗದವರು ಇನ್ನೊಂದು ಭಾಗವನ್ನೂ ಗಮನದಲ್ಲಿ ಇಟ್ಟುಕೊಂಡು ಆಗಬೇಕಾದ ಅಭ್ಯಾಸವು ಅಲ್ಲಿ ಕಾಣಬರುವುದಿಲ್ಲ. ಸಾಮಾನ್ಯವಾಗಿ ಅಲ್ಲಿ ಒಂದೊಂದೇ ಊರನ್ನು ಬಿಡಿಬಿಡಿಯಾಗಿ ವಿಚಾರಿಸಿ ಬರೆದಂತಿದೆ. ನಮ್ಮ ನಾಡನ್ನು ಇಡಿಯಾಗಿ ಕಣ್ಣೆದುರಿಗಿಟ್ಟುಕೊಂಡು ಎಡೆಗಳ ಹೆಸರಿನ ಅಭ್ಯಸಮಾಡುವುದು ಅವಶ್ಯವಿದೆ. ಈ ದೃಷ್ಟಿಯಿಂದ ನಡೆದ ಪ್ರಯತ್ನವು ಇದೇ ಮೊದಲನೆಯದೆಂದು ಹೇಳಬಹುದು. ಈ ಬಗೆಯ ಇಡಿಯ ನೋಟದಿಂದ ಈ ಮೊದಲು ಗಮನಕ್ಕೆ ಬಾರದೆ ಹೋಗುತ್ತಿದ್ದ ಹಲವು ಅಪೂರ್ವವಾದ ಹೊಸಮಾತುಗಳು ಬೆಳಕಿಗೆ ಬರಲಿವೆ.

ಎಡೆಗಳ ಹೆಸರಿನ ಎರಡು ಪದಗಳಿಂದಲೂ ಸಾಂಸ್ಕೃತಿಕ ಮಹತ್ವದ ಹಲವು ಮಾತುಗಳು ತಿಳಿದುಬರುತ್ತವೆ. ಅವುಗಳ ಹೆಚ್ಚಿನ ವಿಚಾರ ವಿಮರ್ಶೆಗಳಿಗೆ ಅನುಕೂಲವಾಗುವಂತೆ ಕೆಲವೊಂದು ಗುಂಪುಗಳನ್ನು ಮಾಡಿ ಅವನ್ನಿಲ್ಲಿ ಕೊಟ್ಟಿದೆ. ಶಕ್ಯವಿದ್ದಷ್ಟೂ ಇಂತಹ ಸಂಪೂರ್ಣ ಪಟ್ಟಿಯೊಂದನ್ನು ಸಿದ್ಧಪಡಿಸುವುದು ಅವಶ್ಯಕವಿದ್ದರೂ ಅದು ಆರ್ಥಿಕ ದೃಷ್ಟಿಯಿಂದ ನನ್ನ ಅಳವು ಮೀರಿದ್ದು. ಈ ಅಲ್ಪಭಾರವನ್ನೇ ಇನ್ನೊಬ್ಬರ ನೆರವಿಲ್ಲದೆ ಎತ್ತಲಿಕ್ಕಾಗದೆ ಇದ್ದಾಗ ಆ ಹೆಬ್ಬೊತ್ತಿಗೆಯ ಮಾತೇಕೆ? ಇಲ್ಲಿ ಕೊಟ್ಟ ಪಟ್ಟಿ ಕೇವಲ ಸೂಚನಾಮಾತ್ರವಾಗಿದೆಯಲ್ಲದೆ ಸಂಪೂರ್ಣವಾದುದಲ್ಲ.

ಎಡೆಗಳ ಹೆಸರಿನ ಮೊದಲನೆಯ ಪದದಿಂದ ಮಾಡಿದ ವರ್ಗೀಕರಣದಲ್ಲಿ ಈ ಮೊದಲೆ ವಿವರಿಸಿದ ಕಾರಣಗಳಿಗಾಗಿ, ನನಗೆ ತಿಳಿಯದೆಯೆ ಕೆಲವು ತಪ್ಪುಗಳು ಅಲ್ಲಿ ಇಲ್ಲಿ ನುಸುಳಿಕೊಂಡಿರಲಿಕ್ಕೆ ಸಾಕು. (ನನಗೆ ಆ ತಪ್ಪು ತಿಳಿದ ಹಾಗೆ ಅದನ್ನು ತಿದ್ದಿಕೊಳ್ಳುವೆನು.) ಆದರೆ, ಅದರಿಂದ ಕೆಳಗಣ ವರ್ಗೀಕರಣಕ್ಕೆ ಯಾವ ಬಾಧಕವೂ ಇಲ್ಲ. ಈ ಗುಂಪುಗಳಲ್ಲಿ ಒಂದೆರಡು ಹೆಸರುಗಳು ತಪ್ಪಿ ಸೇರಿರಬಹುದು; ಆದರೆ ಅದರೊಂದಿಗೆ ಸೇರತಕ್ಕ ಹಲವು ಹೆಸರುಗಳನ್ನು ವಿಸ್ತಾರ ಭಯದಿಂದಲೂ ಇನ್ನೂ ಹೆಚ್ಚಿನ ವಿವರಗಳು ದೊರೆಯದ್ದರಿಂದಲೂ ಬಿಡಬೇಕಾಗಿರುವುದನ್ನೂ ಮರೆಯಲಾಗದು.

ಈ ಹೆಸರುಗಳ ಟಿಪ್ಪಣಿ ಮಾಡುವಾಗ ಮೊದಲು ಇಷ್ಟು ವಿಸ್ತಾರವಾದ ವಿಷಯಗಳುಳ್ಳದಾಗಿ ಇದು ಬೆಳೆದೀತೆಂಬ ಎಣಿಕೆಯಿರಲಿಲ್ಲ. ಬಹುತರವಾಗಿ ಒಂದೊಂದು ಹೆಸರಿನ ಊರು ಸುಮಾರಾಗಿ ನಾಲ್ಕಾರು ಕಡೆಗಳಲ್ಲೂ ಕಂಡುಬಂದುದರಿಂದ, ಇಷ್ಟು ಎಲ್ಲರೂ ಬಲ್ಲ ಊರು ಬರುವ ಜಿಲ್ಹೆ, ತಾಲ್ಲೂಕು ಎತಕ್ಕೆ ಗುರುತಿಸಿಕೊಳ್ಳಬೇಕೆಂದೆನಿಸಿ ಹಾಗೆಯೆ ಕೆಲಸಕ್ಕೆ ಆರಂಭವಾಯಿತು. ಆದರೆ ಮುಂದೆ ಇದನ್ನು ಬರೆದುಕೊಂಡಿದ್ದರೆ ಚೆನ್ನಾಗಿತ್ತು, ಎಂದು ಕಂಡುಬಂದಿತು. ಆದರೆ ಮತ್ತೊಮ್ಮೆ ಊರ ನಾಮಾವಳಿಯನ್ನು ತಿರುವಿಹಾಕುವಷ್ಟು ತಾಳ್ಮೆ ಈ ದೇಹದಲ್ಲಿ ಇರಲಿಲ್ಲ. ಅದರಿಂದ ಈ ಕೊರತೆ ಅನಿವಾರ್ಯವಾಗಿ ಹಾಗೆಯೆ ಉಳಿದಿತು.

ಪ್ರಾಥಮಿಕ ಮಟ್ಟದಲ್ಲಿ ಬಂದ ಹೆಸರುಗಳಲ್ಲಿರುವ ಸಹಜತೆಯು ಮುಂದಿನ ಪಾಡಿನಲ್ಲಿ ಉಳಿಯುವುದು ಸಾಧ್ಯವಿಲ್ಲ. ಮಾನವನಲ್ಲಿ ಪುನರಾಲೋಚನೆ-ವಿಮರ್ಶನಾಶಕ್ತಿಯು ತಲೆದೋರಿದಂತೆ, ವ್ಯಾಪಾರ ವ್ಯವಹಾರ, ರಾಜ್ಯತಂತ್ರ, ಧರ್ಮ ಮೊದಲಾದವುಗಳಿಗೆ ಜೀವನದಲ್ಲಿ ಮಹತ್ವವು ಬಂದಂತೆ ಮಾನವನ ಮೊದಲಿನ ಸಹಜವೃತ್ತಿಯ ಬದುಕಿನಲ್ಲಿ ವಿಚಾರ, ಆಲೋಚನೆಗಳು ಹೆಚ್ಚಿನ ಸ್ಥಾನವನ್ನು ಆಕ್ರಮಿಸಿದುವು. ಎಡೆಗಳಿಗೆ ಬಂದ ಹೆಸರುಗಳಲ್ಲಿಯೂ ಇದರ ಪರಿಣಾಮವು ಕಾಣಿಸಿಕೊಳ್ಳದೆ ಇಲ್ಲ. ನೆಲದ ಗುಣ, ಬಣ್ಣ ಮೊದಲಾದುವುಗಳ ನಿರೀಕ್ಷಣ, ವಿಮರ್ಶೆಯನ್ನು ಸೂಚಿಸುವ ಹೆಸರುಗಳು ಈ ಮುಂದಿನ ಮಟ್ಟದುವು ಆಗಿವೆ. ಸಹಜ ವೃತ್ತಿಯಿಂದ ವಿಚಾರಪರತೆಯ ಕಡೆಗೆ ಒಲಿದ ಹಾಗೆಲ್ಲ ಮುಂದಿನ ಕಾಲದಲ್ಲಿ ತಲೆಯೆತ್ತಿದ ಹೆಸರುಗಳಿವು. ಇತಿಹಾಸ,

ಪುರಾಣಾದಿಗಳ ನೆನಹನ್ನು ಕೊಡುವಂತಹವೂ ಇದೇ ಬಗೆಯಾಗಿವೆ. ಲೋಕದಲ್ಲಿ ಎಲ್ಲೆಡೆಗಳಲ್ಲಿ ಅವುಗಳಿಗೆ ಹೆಸರು ದೊರೆಕೊಂಡುದು ಇದೇ ತೆರನಾಗಿ.

ಎಲ್ಲ ಭಾಗದವರೂ ಒಂದೆಡೆಗೆ ಕಲ್ತು ಇಟ್ಟ ಹೆಸರುಗಳಲ್ಲವಾದರೂ ಅವುಗಳಲ್ಲಿರುವ ಹೋಲಿಕೆಯು ಕೌತುಕಾಸ್ಪದವಾಗಿವೆ. ಕೆಲವೊಂದು ಸ್ವಲ್ಪ ವೈಶಿಷ್ಟ್ಯವು ಒಂದೊಂದು ಭಾಗದಲ್ಲಿದ್ದುದು ಬೇರೆ ಮಾತು. ಆದರೆ ಒಟ್ಟಿನ ರೀತಿಯು ಒಂದೇ ಬಗೆಯದಾಗಿದ್ದುದು ಸೋಜಿಗದ ಸಂಗತಿ. ಇಲ್ಲಿಯ ವರ್ಗೀಕರಣದಲ್ಲಿ ಒಳಗೊಳ್ಳದೆ ಉಳಿದಿರುವ ಊರುಗಳ ಸಂಖ್ಯೆ ಅಸಂಖ್ಯವಾಗಿದೆ. ಇನ್ನೂ ಪರಿಶ್ರಮಪಟ್ಟು ಅವುಗಳಲ್ಲಿರುವ ಒಂದು ಕಟ್ಟನ್ನು ಕಂಡುಕೊಳ್ಳಬಹುದಾಗಿದೆ. ಒಂದೊಂದು ಗುಂಪಿನಲ್ಲಿರುವ ಹೆಸರುಗಳೆಲ್ಲ ಒಂದೇಕಾಲಕ್ಕೆ ಮುಂದೆ ಬಂದುವೆಂದು ಭಾವಿಸಲಾಗದು. ಅವುಗಳಲ್ಲಿ ಎಷ್ಟೋ ಶತಮಾನಗಳ ಅಂತರವು ಇರಲಿಕ್ಕೆ ಸಾಕು. ಆದರೂ ಅವು ಆ ಒಂದು ಪರಂಪರೆಯು ಹೇಗೆ ಅವಿಚ್ಛಿನ್ನವಾಗಿ ನಡೆದು ಬಂದಿತೆಂಬುದನ್ನು ಸೂಚಿಸುತ್ತವೆ.

ನಿಶ್ಚಿತ ಆಧಾರಗಳು ದೊರೆಯುವುದು ಸಾಧ್ಯವಿಲ್ಲದ್ದರಿಂದ ಈ ವರ್ಗೀಕರಣದಲ್ಲಿ ಕೆಲವೊಂದು ತಪ್ಪುಗಳು ಆಗಿದ್ದುದನ್ನು ಒಪ್ಪಲೇಬೇಕು. ಪ್ರಾಣಿಗಳಿಂದ ಬಂದ ಹೆಸರುಗಳಲ್ಲಿ 'ನಾಗ' ರಿಂದ ಬಂದವುಗಳನ್ನು ಹಾವಿನ ಹೆಸರಿನ ಗುಂಪಿನಲ್ಲಿ ಸೇರಿಸಿಲ್ಲ. ಏಕೆಂದರೆ 'ನಾಗರು' ಎಂಬ ಒಂದು ಜನವು ಈ ನಾಡಿನಲ್ಲಿ ಒಂದು ಕಾಲಕ್ಕೆ ನೆಲಸಿದ್ದಿತು. 'ನಾಗನೂರು' ಮೊದಲಾದುವು ಈ ಬಗೆಯವು; ಹಾವಿನಿಂದ ಬಂದುವಲ್ಲವೆಂದು ನನ್ನ ಗ್ರಹಿಕೆ. ಆದರೆ, ಕೆಲವೆಡೆಗೆ ಪ್ರೌಢ ಗಂಭೀರ ಹೆಸರೆಂದು ಭಾವಿಸಿದ್ದಲ್ಲಿ, ಹಾವಿಗೆ ನಾಗವೆಂದು ಹೇಳಿ ಒಂದು ಹಾವನೂರು ನಾಗನೂರಾಗಿದ್ದರೂ ಇರಬಹುದು. ಅಥವಾ ಹಾವಿನ ವಿಶಿಷ್ಟ ಜಾತಿಯನ್ನು-ನಾಗವನ್ನು ನೆನೆದು ಆ ಹೆಸರು ಕೆಲವೆಡೆಗೆ ಬಂದಿದ್ದರೂ ಬಂದಿರಬಹುದು.

ಹುಲಿಯ ಹೆಸರಿನ ಊರುಗಳೆಲ್ಲ ಹುಲಿಯ ಮೂಲಕವಾಗಿಯೆ ಬಂದಿರಬಹುದಾದರೂ ಪುಲಿಮಾಯಿ ಪುಲಿಕೇಶಿಗಳಂತಹ ಮಹಾಪುರುಷರ ನೆನಹೆಂದು ಯಾವುದಾದರೂ (ಪುಲಿ) ಗೆರೆ, ಊರುಗಳು ತಲೆಯೆತ್ತಿರುವುದೂ ಅಸಂಭವವಲ್ಲ.

ದೇವತೆಗಳ ಹೆಸರಿನಲ್ಲಿ ವ್ಯಕ್ತಿಗಳಿಂದ ಬಂದ ಹೆಸರುಗಳು ಸೇರಿಕೊಂಡಿರುವ ಸಂಭವವಂತೂ ಬಹಳ. ಆದರು ವ್ಯಕ್ತಿಗಳಿಗೆ ಇಟ್ಟ ಹೆಸರು ಮೊದಲು ಯಾವುದೊಂದು ದೇವತೆಯದೇ ಆಗಿರುತ್ತದೆಂಬುದನ್ನು ಮರೆಯಲಾಗದು. ನಮ್ಮ ನಾಡಿನವರಿಗೆ ಮೆಚ್ಚಿನ ದೇವತೆಗಳು ಯಾವುವು ಎಂಬುದನ್ನು ಆ ಗುಂಪು ಸೂಚಿಸುತ್ತದೆಂಬಲ್ಲಿ ಸಂದೇಹವಿಲ್ಲ.

ಒಂದೊಂದು ಊರನ್ನು ಹಿಡಿದು ಅಲ್ಲಿಯ ಓಣಿ-ಕೇರಿಗಳ ಹೆಸರು ಗುಡಿ, ಮನೆ, ಮಠಗಳ ವಿಶಿಷ್ಟ ಹೆಸರು ನೆರೆಯ ಕೆರೆ, ಬೆಟ್ಟ ಬಯಲುಗಳ ಹೆಸರು ಮೊದಲಾದುವನ್ನೆಲ್ಲ ಕಲೆಹಾಕಿ ಒಂದೊಂದು ತಾಲ್ಲೂಕಿನ ಅಥವಾ ನಾಡವಿಭಾಗದ ಪಟ್ಟಿಗಳು ಅಚ್ಚಾದಲ್ಲಿ ನಮ್ಮ ಜನಗಳ ಸಾಂಸ್ಕೃತಿಕ ಸೂಕ್ಷ್ಮ ಅಭ್ಯಾಸಕ್ಕೆ ಬಹಳ ಸಹಾಯವಾಗತಕ್ಕದ್ದಿದೆ. ನಮ್ಮ ನಾಡಿನಲ್ಲಿ ನೆಲೆಸಿದ, ನೆಲೆಸಿರುವ, ಬಂದು ನೆಲೆಸುತ್ತಿರುವ ಬೇರೆ ಬೇರೆ ಜನಗಳ ಎಣಿಕೆಯೆಲ್ಲವೂ ಈ ಬಗೆಯ ಸ್ಥೂಲನಾಮಗಳಿಂದಲೆ ಆಗುವುದು ಸಾಧ್ಯ. ಊರಲ್ಲಿ ಕೆಲವು ಕೇರಿಗಳಿಗೆ ಆಯಾ ಭಾಗದಲ್ಲಿ ನೆಲೆಸಿದ ಜನಗಳ ಮೇಲಿಂದ ಹೆಸರುಗಳು ಬಂದಿರುತ್ತವೆ. ಆ ಹೆಸರುಗಳಿಂದ ನಮ್ಮ ನಾಡಿನಲ್ಲಿ ಎಷ್ಟು ಬಗೆಯ ಜನಗಳುಂಟೆಂಬ ನಿಶ್ಚಿತ ಕಲ್ಪನೆಯುಂಟಾಗುವುದು. ಊರ ರಚನಾಕ್ರಮವು ತಿಳಿದರೆ ಇನ್ನೂ ಎಷ್ಟೋ ಸಂಗತಿಗಳ ಮೇಲೆ ನಿಶ್ಚಿತ ಬೆಳಕು ದೊರೆಯುವುದಿದೆ.

ಈ ಬಗೆಯ ಪಟ್ಟಿಗಳು ಪ್ರಕಟವಾದಲ್ಲಿ ನಮ್ಮ ನಾಡಿನಲ್ಲಿ ದೇವದೇವತೆಗಳು ಎಷ್ಟು ಬಗೆಯ ರೂಪಗಳಲ್ಲಿ ಪೂಜೆಗೊಳ್ಳುತ್ತಲಿವೆಯೆಂಬ ಮಾತೂ ಸ್ಪಷ್ಟವಾಗುವುದು. ಮತ್ತು ಕಾಲಕಾಲಕ್ಕೆ ನಾವು ಹಳೆಯ ದೇವತೆಗಳನ್ನು ಬಿಟ್ಟು ಹೊಸ ದೇವತೆಗಳನ್ನು ಹೇಗೆ ಬರಮಾಡಿಕೊಂಡಿರುವೆವೆಂಬುದೂ ತಿಳಿಯುವುದು.

ಆ ಮಾನದಿಂದ ನನ್ನ ಈ ಪರಿಮಿತಿಯಲ್ಲಿ ಬಂದಿರುವ ಅಂಶಗಳು ಬಹಳ ಸ್ವಲ್ಪ. ಅವುಗಳ ಆಧಾರದಿಂದಲೆ ನನಗೆ ನಿಲುಕಿದಷ್ಟು ಮಾತುಗಳನ್ನು ಮುಂದೆ ಕಾಣಿಸಿದ್ದೇನೆ.

ಎಡೆಗಳ ಹೆಸರಿನ ಮೊದಲ ಭಾಗದಿಂದ ಸೂಚಿತವಾಗುವ ಕೆಲವು ಗುಂಪುಗಳು

೧. ಪ್ರಾಣಿಗಳಿಂದ ಬಂದುವು

ಆವಿನಹಳ್ಳಿ, ಚಿಕ್ಕಆವಳ್ಳಿ; ಹಿರೇಆವಳ್ಳಿ; ಆವಿನಮಡು; ಆಕಳವಾಡಿ; ತುರುವೆಕೆರೆ, ತುರವನೂರು; ತುರುಕಾರಶೀಗಿಹಳ್ಳಿ; ಗೋಪಾಡಿ (ದ.ಕ.), ಗೋವನಕೊಪ್ಪ, ಗೋಹಳ್ಳಿ, ಗೋಗೇರಿ, ಗೋಗಿ, ಗೋಕಾಳ, ಗೋಕಾಗೆ (ಗೋಕಾಕ), ಗೋಗಟೆ (ಗೋಕಟ್ಟೆ? ಕೊಲ್ಲಾಪುರ), ಗೋಕುಲ, ಗೋವರ್ಧನಗಿರಿ (ಮೈ.), ಗೋವಿನದಿನ್ನಿ, ಗೋಕರ್ಣ; ಗೋಪರಾಷ್ಟ್ರ (=ತುಳುನಾಡು), ಗೋವೆ; ಗೌಳದಿನ್ನಿ, ಗೌಳಗೇರಿ; ಗೌಹಟ್ಟಿ (ಆಸಾಮ); ಗೌಳದೇಶ (ಬಂಗಾಳ); ಘೋಸ (ಷ) ಬಾಳ (ವಿ);

ಎತ್ತಿನಕೊಪ್ಪ, ಎತ್ನೂರು, ಎತ್ತನಗುಡ್ಡ; ಎತ್ನಟ್ಟಿ; ನಂದ್ಯಾಲ (ನಂದಿಹಾಳ); ನಂದಿಗ್ರಾಮ, ನಂದಿಗಲ್ಲು; ನಂದೂರಬಾರ; ಬಸಾಪುರ, ಬಸವಾಪಟ್ಟಣ; ಬೈಲಹೊಂಗಲ, ಬೈಲವಾಡ, ಬೈಲೋಬನಹಾಳ (ನಿಜಾಂ); ದನಗಾರಹಟ್ಟಿ (ಬ); ದನಗೂರು (ಮೈ.) ಜತ್ತಿ, ಜತ್ತವಾಡಿ, ಮತ್ತು ಜತ್ತಗಾವ (ಎತ್ತು?):

ಎಮ್ಮಿಗನೂರ; ಎಮ್ಮಿಗುಡ್ಡ; ಎಮ್ಮೆಹಟ್ಟಿ; ಎಮ್ಮೆಗೊಂಡ (ಕೊಲ್ಲಾಪೂರ); ಎಮ್ಮೆದೊಡ್ಡಿ, ಎಮ್ಮರಪಳ್ಳಿ. ಮಹಿಷಪುರ; ಮಸವಡ; ಮಹಿಸವಾಡಗಿ; ಮಹಿಸಾಳ; ಮಣಕವಾಡ; ಜಮ್ಮೆಹಾಳ (ಧಾ); ಮೈಸವಳ್ಳಿ (ಮೈ);

ಕೊಣ್ಣೂರು (ಕೋಣನೂರು?), ಕೋಣನತಂಬಿಗೆ; ಕೋಣನಕೆರೆ; ಕೋಣನಕುರಿಕೆ;

ಕುರಿಗ್ರಾಮ; ಕುರಿಹಟ್ಟಿ; ಕುರಿಯಾಳ; ಕುರಿಗೋವನಕೊಪ್ಪ; ಕುರುಬರಹಟ್ಟಿ; ಕುರಿಗುಡ್ಡ; ಕುರಿಗುಪ್ಪ; ಕುರಿಘಟ್ಟ;

ಗೋಪನಹಳ್ಳಿ, ಗೋಪನಕೊಪ್ಪ; ಗೊಲ್ಲಹಳ್ಳಿ.

ಯಾದವಾಡ; ಯಾದಗಿರಿ; ಯದುಗಿರಿ; ಯಾದಗಿ; ಯಾದಗೊಪ್ಪ.

ತುರುವನೂರು; ತರುಕೆವಾಡಿ; ತುರುಕನದೋಡಿ; ತುರುಕಬಾಮನ ಹಳ್ಳಿ.

ಕುರುಬಗಟ್ಟಿ; ಕುರುಬರಹಾಳ; ಧನಗರವಾಡಿ; ದನಗಾರಹಟ್ಟಿ (ಬ.);

(ತುರುಕಾರ ಶಬ್ದವನ್ನು ತುರುಕವೆಂದು ಭ್ರಮಿಸಿದ್ದು ಹಲವೆಡೆಗೆ ಕಂಡುಬಂದಿದೆ. ಬೈಲಹೊಂಗಲ ತಾಲ್ಲೂಕಿನಲ್ಲಿ ತುರುಕಾರರೆಂಬ ಪಂಗಡದ ವೀರಶೈವರಿದ್ದಾರೆ; ಈ ಮನೆತನದ ದೇಸಾಯರೂ ಉಂಟು. ಬೆಳವಡಿ ಮಲ್ಲಮ್ಮನು ಈ ಪಂಗಡದವಳಂತೆ. ಈ ತುರುಕಾರರನ್ನು ತುರುಕರಿಗೆ ಸಂಬಂಧ ಜೋಡಿಸಿ ಅವರನ್ನು ಕಡಿಮೆಯವರೆಂದು ವಾದಿಸುವ ಭ್ರಾಂತರು ಕೆಲವರಿದ್ದಾರೆ. ಇವರಿಗೆ ಉತ್ತರವೆಂದು ಹೂಲೀಮಠದ ಸ್ವಾಮಿಗಳು ಒಂದು ಪ್ರಕಟನೆ ಹೊರಡಿಸಿದ್ದಾರೆ. ಈ ಜನ ತುರುಕರಲ್ಲ; 'ತುರುಕಾರಿ' ಎಂದರೆ ತುರುಕರ ವೈರಿಗಳೆಂದು ಅರ್ಥ ಹೇಳಿದ್ದಾರೆ! ಇವರು ತುರುಕಾರರು ಎಂದರೆ ಹಟ್ಟಿಕಾರ ಗೋಪಾಲರು ಎಂಬುದು ನಿಜಸ್ಥಿತಿ. ಈಗ ನಮ್ಮ ನಾಡಿನಲ್ಲಿ ಇರುವ ತುರುಕೇವಾಡಿ ಮೊದಲಾದ 'ತುರುಕ' ಪದವನ್ನೊಳಗೊಂಡ ಊರುಗಳು ತುರುಕಾರರಿಗೆ ಸಂಬಂಧಪಟ್ಟವುಗಳೇ ಇರಬಹುದೆಂದು ನನ್ನ ಊಹೆ.)

ಆಡೂರು; ಆಡಾಪುರ; ಆಡಟ್ಟಿ (ಕೊಲ್ಹಾಪೂರ); ಶೇಳೋಲಿ; ಆಡೊಳ್ಳಿ; ಟಗರಳ್ಳಿ; ಹೋತನಹಳ್ಳಿ;

ಉಣ್ಣಿಭಾವಿ; ಚಿಕ್ಕಾಡಪುರ; ತಿಗಣೇಬಿದರಿ;

ನಾಯಿಗಾವ; ನಾಯಂಪಳ್ಳಿ; ಕುನ್ನೂರು;

ಜಂಬುಕಂಡಿ; ಜಂಬಿಗೆ; ನರಿಕೊಂಬು; ನರಿಗುಂದ; ನರಿಯಣ; ನರೇಗಲ್ಲು; ನರೇವಾಡಿ ; ಬಳ್ಳೂರು;

ತೋಳಮಟ್ಟಿ;

ಕರಡೀಗುಡ್ಡ; ಕರಡಿ; ಕರಡಿಕೊಪ್ಪ;

ಬೆಕ್ಕೋಡ; ಬ್ಯಾಕೋಡ; ಮಾಂಜರಿ;

ಕಿರುಬನಕಲ್ಲು; ಹೊನಗನಹಾಳ; ಹುಲಿಗೆರೆ (ಪುಲಿಗೆರೆ); ಹುಲಿಯದುರ್ಗ; ಹುಲಿಕಲ್ಲ; ಹುಲಿಹಾಳ; (ಹುಲ್ಯಾಳ); ಹುಲಿಗೊಳ: ವಾಘವಡೆ (ಬೆ); ಚಿರಚನಕಲ್ಲು (ವಿ);

ಹಂದೂರು; ಹಂದಿಗನೂರು; ಹಂದಾಡಿ; ಹಂದೇವಾಡಿ (ಕೊಲ್ಲಾಪೂರ); ಹಂದ್ಲಿ; ಹಂದಿಗೋಳ; ಡುಕರವಾಡಿ (ಬೆ);

ಸಿಂಗನಳ್ಳಿ; ಸಿಂಗನಮಕ್ಕಿ; ಸಿಂಗನಮಲ್ಲ; ಸಿಂಗಿನಕೊಪ್ಪ;

ಆನೆಕಂಡಿ; ಆನೆಗೊಂದಿ; ಹೊಳೆಆನೆವೇರಿ; ಆನವಟ್ಟಿ; ಆನಗೊಳ್ಳ (ಬೆ); ಗಜಪತಿ; ಗಜನೂರು; ಗಜೇಂದ್ರಗಡ; ಮಸಳೆ; ನೆಗಳೂರು; ಮೀನ್ಗೆರೆ (ಬ);

ಕುದರಗಿ; ಕುದುರೆಗುಂಡು; ಕುದುರೆಕಣಿವೆ; ಕುದುರೆ ಮುಖ; ಕರೆಗುದುರೆ; ಘೋಡಗೇರಿ; ಘೋಡನದಿ; ಕತ್ತೇಬೆನ್ನೂರು;

ಹರಿ.ಾಪುರ; ಹುಲ್ಲೂರು (ಹುಲ್ಲೆ+ಊರು?); ಹರಿಣಗೀನದಿ; (ಕೊಡಗು);

ನವಿಲೂರು; ನವಿಲುಗುಂದ; ನವಲಿ; ಮಯೂರಕಂಡಿ; ಮೋರಖಿಂಡ (ನಿಜಾಂ); ನೌಲಕುರಕೆ; ನವಲಗಟ್ಟಿ; ಮೋರೆ; ಗಿಳಿಯೋರು; ಗುಬ್ಬಿ; ಗುಬ್ಬಿವಾಡ; ಗುಬ್ಬಿಗೋಡು; ಬೆಳವಡಿ; ಬೆಳವಗಿ; ಇಣಚಿಗಲ್ಲ (ವಿ.); ಗೂಗಿಹಾಳ; ಬಕಪುರ; ಕೊಕ್ರಾಡಿ (ದ. ಕ.); ಕಾಗೆನೆಲ್ಲಿ (ಕಾಗಿನೆಲೆ); ಕಾಗೆವಾಡ; ಕಾಗೀಹಾಳ (ಬೆ.); ಕಾಕನೂರು (ವಿ); ಕೋಳಿಯೂರು (ದ. ಕ.); ಕೋಳೂರು; ಕೋಳಿವಾಡ;

ಹಾವನೂರು; ಹಾವಿನಹಾಳ; ಹಾವೇರಿ; ಹಾವರಗಿ; ಹಾವಿನಹಳ್ಳಿ; ಪಾವುಗಡ; ಪಾಮೂರು; ಶೇಷಗಿರಿ; ಉರಗನಹಳ್ಳಿ (ಕಾ); ಮುಂಗಲಿ (ಸೊ.);

ಚೇಳೂರು; ಚೇಳಯ್ಯಾರು; ಚೇಳಮಟ್ಟಿ; ಚೋಳೀನಹಳ್ಳಿ; ವಿಂಚೂರು (ನಾಶಿಕ);

ಜಿಗಳಿ; ಜಿಗಳೂರು; ತೇರಣೆ; ತೇರವಾಡ; ನೊಣವಿನಕೆರೆ; ನೊಣಂಬವಾಡಿ; ತೊನಸೆ; ತೊನಸ್ಯಾಳ; ಗೆಲ್ಲು; ಗೆದ್ದಲಹಾಳ;

ಹಲ್ಲಿಕೊಪ್ಪ; ಉಡುಮರಡಿ (ಮೈ.); ಓತಿಹಾಳ; ಕ್ಯಾತನಳ್ಳಿ; ಕಾತರಾಳ; ಸರಟಪುರ (ಸೊರಟೂರು);

ಕೊ(ೇ)ಡಗಾನೂರು; ಮಂಗೆ; ಮಂಕಿ; ಮಂಗನಾಳ;

೨. ಗಿಡಗಂಟಗಳಿಂದ ಬಂದ ಹೆಸರುಗಳು

ತೇಗೂರು. ಮುತ್ತಲಗೇರಿ; ಮುಳುಮುತ್ತಲ; ಮತ್ತಿಕಟ್ಟಿ; ಆಲೂರು; ಆಲದಕಟ್ಟಿ; ಹುಣಸೇಕಟ್ಟಿ; (ಹಾಳ; ಊರು;) ಚಿಂಚವಾಡ; ಚಿಂಚಲಿ; ಚಿಂಚಣಿ; ಚಿಂಚೋಳಿ; ಪುಣಚ; ಅರಳೀಕಟ್ಟಿ; ಅತ್ತಿ; ಅತ್ತಿಕೊಳ್ಳ; ಉಂಬರವಾಡಿ; ಔದುಂಬರ; ಹಲಸಿಗಿ; ಹಲಸೂರು; ನೀರಲಕೇರಿ; ನೀರಲಕೊಪ್ಪ; ನೇರಲಗಿ; ನೇರ್ಲಿ; ನೇರಳೆ (ಮಹಾರಾ.); ಬೇಲೂರು (ಬಿಲ್ವಪುರ); ಬೆಲವಂತ್ರ; ಬೆಳವಡಿ; ಕವಠಕೊಪ್ಪ (ಖವಟಕೊಪ್ಪ); ಬಸರಕೋಡ; ಬಸರೀಕೊಪ್ಪ; ಬಸರೂರು; ಬೇವೂರು; ಬೇವಿನಕಟ್ಟಿ; ನಿಂಬರಗಿ; ನಿಂಬಗಾವ; ನಿಂಬ; ಜಾಲಿಹಾಳ; ಜಾಲಿಕೊಪ್ಪ; ಬಾಬಲಿಕಲ್ಲ (ನಿಜಾಂ); ಸುಹೊನ್ನೆ. ಮಾವಿನಕುರವೆ; ಮಾವನಕೆರೆ; ಅಮಟಿಬೆಟ್ಟ; ಅಮಟಿ ಅಂಬೋಲಿ; ಅಮಟೂರು; ಅಂಬಡಗಟ್ಟಿ; ಅಂಬೆಗಾಂವ; ಅಂಬೆವಾಡಿ; ಕೇರಕೊಪ್ಪ (ಕ್ಯಾರಕೊಪ್ಪ); ಕೇರಾಡಿ; ಕೇರವಾಡ; ಗೇರಸೊಪ್ಪೆ; ಬಿದಿರೆ; ಬಿದರಹಳ್ಳಿ; (ಮೂಡುಪಡು,) ಬಿದಿರೆ; ಬಿದರೂರು; ವೇಣೂರು; ಬೇಳಗಾಂವಿ; ಗಲಗಲಿ; ಸೀಗಿಹಳ್ಳಿ; ಹೂವಿನಶಿಗ್ಗಲಿ; ಗುಂಜಿ; ಗುಲಗಂಜೀಕೊಪ್ಪ; ಕವಳೆ; ಬೋರಗಾಂವ; ಬಾರಿಬಂಡಿ(ನಿಜಾಂ); ಬೋರಿ; ಬದ್ರಿ (ಕೊಲ್ಲಾಪೂರ); ಬೋರಿವಲಿ(ಬೋರಿವಳ್ಳಿ); ಬದ್ರಿ (ಭಾದ್ರಿ?) ಆರಿಕಾಡು (ದ. ಕ.); ನೆಲ್ಲೀಕೇರಿ; ನೆಲ್ಯಾಡಿ; ಕವಳಿಕಟ್ಟಿ; ಗೋಣೀಬೀಡು; ಚಳ್ಳಗೇರಿ; ಬನ್ನಿಗೋಳ; ಬನ್ನೂರು; ಬನ್ನಿಕೊಪ್ಪ; ಚಂದನಮಟ್ಟಿ; ಚಂದನ ಹೊಸೂರು; ಕಳ್ಳಿಗೆ; ಕಳ್ಳಿಹಾಳ; ತಡಸಿನಕೊಪ್ಪ; ತಡಸ; ಬಸಳೆಗುಂಡಿ; ಲಕ್ಕಿಗುಂಡಿ; ಸೂರಣಗಿ;

ತಾಳೀಕೋಟೆ; ತಾಳೀಪಾಡಿ; ತಾಳಗುಂದ; ತಾಳಗುಪ್ಪೆ; ತಾಳಗುಣೆ; ತಾಳಿಕೆರಿ; ತಾಳಗೋಡ; ತಾಳಗಡ್ಡೆ; ಈಚಲಕರಂಜಿ; ಇಚ್ಲಂಪಾಡಿ (ದ. ಕ.); ತಾಳಮಕ್ಕಿ; ತೆಂಗಿನಘಟ್ಟ; ತೆಂಗಿನಮುಡಿ; ಅಡಿಕೆಕುಳಿ; ಅಡಕೂರು, ಅಡಕೋಳಿ; ಶುಂಠೀಕೊಪ್ಪ; ಬಾಳೆ; ಬಾಳೆಹಳ್ಳಿ; ಬಾಳೆಹೊನ್ನೂರು; ಬಾಳೆಪುಣೆ; ಕಂಚಿ; ಕಂಚೀಕಾಯಿ;

ಅಕ್ಕಿಆಲೂರು; ಅಕ್ಕಿವಾಟ; ಅಕ್ಕಿಸಾಗರ; ನೆಲ್ಲೂರು; ಭತ್ತಗುಣಕಿ; ಕಡೇಶಾಲ್ಯ; ಸುಂಕಸಾಳೆ; ಶಾಲ್ಯ (ಶೇಲಂ);

ಕಬ್ಬೂರು; ಗೋದಿಹಾಳ; ಜೋಳದರಾಶಿ; (ಬ.); ಜೋಳದ ಹಾಳು; ಕರಜೋಳ; ನವಣೆಹಾಳ; (ಕೊ.); ಕಡ್ಲೆ; ಕಡಲಗೆ; ಕಡ್ಲೀಮಟ್ಟಿ; ಕಡಲೀಕೊಪ್ಪ; ಕಡಲೆಬಾಳು; ಕಳಲೆ (?); ತೊಗರೆ; ತೊಗರಳ್ಳಿ; ಹೆಸರೂರು; ಹುರಳೀಕುಪ್ಪಿ; ಹುರಳಿ; ಅವರಾದಿ; ಅವರಸೆ; ಅವರವಾಡ (ಔರವಾಡ); ಬೆಂಗಳೂರು; ಗವರವಾಡ; ಗವುರವಾಡ (ಗೌರವಾಡ); ಬದನವಾಳು; ಬದನೆಗೋಡು; ವಾಂಗಣೆ; ಅರಿಸಿನಗೇರಿ; ಅರಷಣಗಿ; ಎಳ್ಳೂರು; ಸಾಸಿವೆಹಳ್ಳಿ; ಸಾಸವಡ(ಪುಣೆ); ಜೀರಿಗೆಕೊಪ್ಪ; ಬೆಂಡೀಗೇರಿ; ಹತ್ತರಿಕಿ; ಹರಿವೆ; ತೊಂಡಿಕಟ್ಟಿ; ತೊಂಡಿಹಾಳ; ಹಾಗಲವಾಡಿ; ಕಾರಲೆ; ಮೆಣಸಿ; ಮೆಣಸಗಿ; ಮೆಣಸೂರು; ಕುಂಬಳೆ; ಕುಂಬಳಹಾಳ (ಕೊಲ್ಹಾಪೂರ); ಭೋಪಳಾಪುರ (ಧಾ. ಜಿ.) ಹಿರೇಕಾಯಿ; ಗೋಳೀಕೇರಿ; (ಕಾಡಿಗೆ) ಗರಗು; ಬಳ್ಳೊಳ್ಳಿ; ಚಿಕ್ಕಮೂಲಂಗಿ; ಹಿರೇಮೂಲಂಗಿ;

ನಾಗಸಂಪಿಗೆ; ಸಂಪಿಗೆ; ಸಂಪಖಂಡ; ಸಂಪಗಾವ; ಸಂಪಾಜೆ; ಅಂಕಲಿ; ಅಂಕಲಗಿ; ಅಂಕೋಲೆ;

ಕಣಗಿನಹಾಳ; ಕಣಗಲಿ; ಹಾತಕಣಗಲಿ; ಕೇದಿಗೆಕೊಪ್ಪ; ಚೆಗಚಿಕೊಪ್ಪ (ಧಾ.); ಸುರಗಿಹಾಳ; ಹೊನ್ನೆಕೊಂಬು; ತುಂಬ (ಬೆ.); ತುಂಬಿಗಿ; ತುಳಸಿಗೇರಿ; ತುಳಸಾಪುರ (ವಿ.); ತುಳಜಾಪೂರ (ನಿಜಾಂ);

ಮಲ್ಲಿಗೆಹಾಳ; ಮಲ್ಲಿಗೆವಾಡ; ಜಾಜೂರು; ಹೂವಿನೂರು; ಹೂನೂರು(ಹುನ್ನೂರು); ಹೂವಳ್ಳಿ (ಹುಬ್ಬಳ್ಳಿ); ಹೂ (ವಿನ) ಕೆರೆ (ಹುಕ್ಕೇರಿ); ಹೂವಿನಕೆರೆ (ದ. ಕ.); ಮುಗುಳಖೋಡ; ಮುಗಳೂರು; ಇಸಳೂರು; ಅರಳಗುಪ್ಪಿ; ಅರಳಹಟ್ಟಿ; ತಾವರಗೆರೆ; ತಾವರಗಟ್ಟಿ; ಅರಳಗುಂಡಿ (ಕೊಲ್ಲಾಪೂರ); ಪುಷ್ಪಗಿರಿ (ಕೊಡಗು); ತಾವರೆವಾಡಿ (ಕೊಲ್ಲಾಪೂರ); ಕಮಲಶಿಲೆ; ಕಮಲಾಪುರ; ಕಮಲದಿನ್ನಿ; ಕುಮದ್ವತಿ; ಸೂರೇಬಾನ (ಸೂರೇಫಾನ);

ನಂದನವನ; ವನಳ್ಳಿ ವನಶಿಗ್ಲಿ; ಬನಹಟ್ಟಿ;

ಹುಲ್ಲೂರು; ಹುಲಬೆಂಚಿ; ನಾಯನೆಗ್ಲಿ; ಮುಟ್ಟ (ಲ) ಮುರಿ: ತುರಮರಿ; ನಸುಗುನ್ನಿ; ಮುಳ್ಳೂರು; ಮುಗುಳಿ; ಮದಗುಣಕಿ; ಲೋಳಸರ; ನಾವಳ್ಳಿ; ಅಣಜೆ; ಅಣಜಬೈಲು; ಮೊಳೆಹಳ್ಳಿ; ಮುಳಿಯ (ದ. ಕ.) ಕರ್ಕಿ; ಹರಳಿ; ಕರಕಿಹಾಳ; ಮೆದೆಹಾಳ; ಮದಿಹಾಳ; ಪಂಜೆ; ಹುಲ್ಲಂಬಿ; ಅಂತರಗಂಗಿ; ಹಾವಸೆ; ಹಾವಸಭಾವಿ; ಹುಲಸೋಗಿ; ಇಂಗಳಿ, ಇಂಗಳಗಿ; ಇಂಗಳಹಳ್ಳಿ; ಇಂಗಳೇಶ್ವರ;

ಎಲವಿಗಿ; ಎಲಗ; ಎಲಿವಾಳ; ಎಲೆಮುನ್ನವಳ್ಳಿ; ಎಲೆಹಂಕ; ಎಲಗೂರು; ಎಲಬರಗೆ; ಕಣಕಿಕೊಪ್ಪ; ತೊಪ್ಪಲಗುಟ್ಟ; ಸೊಪ್ಪಿನ ಹೊಸಾಳ;

೩. ದೇಹದ ಅಂಗಾಂಗಗಳಿಂದ ಬಂದ ಹೆಸರು

ಉಗರೂರು; ಉಗುರುಗೊಳ್ಳ; ಉಗರಖೇಡ; ಬೆಳ್ಳುಬ್ಬಿ; ಕಣ್ಣೂರು(?); ನೈನಾಪುರ (ನಯನಾಪುರ); ಅಲಕಾಪುರ; ಅಲಕನೂರು; ಕುಂತಲ; ಕುಂಡಲ; ಕುಂತಲಪುರ; ತಲೆಮೊರಬ; ಮಂಡೆಹಾಳ; ಮಂಡೆಕೋಲು; ತಲೆವಾಯಿ (ಧಾ); ಹೆಡತಲೇ (ಮೈ.), ಪೆರುವಾಯಿ, ಬೆಳುವಾಯ್ (ದ. ಕ.), ಮೂಗೂರು, ನಾಸಿಕ, ಹುಲ್ಲೂರು (ವಿ.), ಹಲ್ಯಾಡಿ (ದ. ಕ.) ಕೈಯ್ಯೂರು, ಕೈರಂಗಳ, ಹಾತಕಣಗಲೆ, ಕಂಕಳೆ, ಕಾಲವಾಡ, ಮೊಳಕಾಲ್ಮುರು, ಬೆನ್ನೂರು, ಮೊಟೆಬೆನ್ನೂರು, ಹೊಟ್ಟೆಹೊಳಿ, ಹೊಟ್ಟಲಕೆರೆ; ಸೊಂಟಮುರು, ದಿಂಡವಾಡ, ಧಡೆದಕೊಪ್ಪ, ಮೈರೆ, ಮೈದೂರು.

ಕರುಡಿಕೇರಿ, ಕುಂಟೋಜಿ (?)

೪. ಬಳಗದವರಿಂದ ಬಂದ ಹೆಸರುಗಳು

ಅಬ್ಬಲೂರು, ಅಬ್ಬೆಹಾಳ; ಅಬ್ಬ(ಬ್ಬೆ)ಗರೆ, ಅಬ್ಬೊಳ್ಳಿ, ಅಬ್ಬಚ್ಚಿ, ತಾಯಿಗಡ, ಬಾಪನಪಳ್ಳಿ, ಬಾಪಿನಾಡು, ಬೊಪ್ಪನಹಳ್ಳಿ, ಬಾಪೂರ, ಕಕನೂರು, ತಮ್ಮನಹಟ್ಟಿ; ಅಣ್ಣೂರು, ಅಣ್ಣೀಗೆರೆ, ಅಕ್ಕದೇವನಹಳ್ಳಿ, ಅಕ್ಕೂರು, ಅಕ್ಕಾಜಿಹಳ್ಳಿ, ಅಕ್ಕಲವಾಡಿ, ಅಕ್ಕಲಕೋಟೆ, ಅಕ್ಕೋಳಿ, ಅಕ್ಕತಂಗಿಯರಹಾಳ, ತಂಗೀಹಳ್ಳಿ, (ಚಿಕ್ಕ) ಮಗಳೂರು, ಮಕ್ಕಳಗೇರಿ, ಮಕ್ಕಳ, ಮಗನೂರು, ಮದುಮಕ್ಕನಹಾಳ, ಗುಂಡನಹಳ್ಳಿ, ನಲ್ಲೂರು, ಮಾವನೂರು, ಮಲಗಂಡನಕೊಪ್ಪ, ಕಾಂತಾವರ (ದ. ಕ.), ಭಾಮಾಪುರ. ಸತೀಗ್ರಾಮ, ಮಾಸತಿ, ಕೆಳದಿ, ನೀರೆ (ದ. ಕ.);

ಮಾವನಕೊಪ್ಪ, ಅತ್ತೆಬೈಲು, ಕೂಸುಗಲ್ಲು, ಕೂಸನೂರು, ಬಾಲನಹಳ್ಳಿ, ಶಿಶಿವಿನಹಾಳ, ಕಂದಕೂರು, ಮಗನೂರು, ಅಜ್ಜಂಪುರ, ಅಜ್ಜಾವರ,

೫. ಮನೆಗಳಿಂದ

-ಇಲ್, -ಮನೆ, -ಕೋಣೆ, -ಗುಡಿ; ಕಂಬದೂರು, ಕಲಖಂಬ, ಜಂತ್ಲಿ (?), ಅಗಳಿ (ಮಡಗಶಿರಾ), ಚಿಲಕವಾಡ, ಕೊಂಡಿಕೊಪ್ಪ, ಬಾಗಲ, ಬಾಗಲವಾಡ, ಬಾಗಲಿ, ಬಾಗಲಕೋಟೆ, ಮಾಳಿಕೊಪ್ಪ ಮಳಗಿ (ನಿಜಾಂ), ಹಂಚಿನಾಳ, ಗುಡಿಸಲಕೊಪ್ಪ, ಹಂದ್ರಾಳ (ಬ.), ಭಾವಣೆ, ಬೀಡು, ಪಾಳ್ಯ, ವಾಡೆ, ಹುಡೆ, ಕೊತ್ತಳ, ಕೋಟೆ, ದುರ್ಗ.

೬. ದಿನಸುಗಳ ಹೆಸರುಗಳಿಂದ

ಅಂಬಲಿಕೊಪ್ಪ, ಗಂಜಿ, ಗಂಜೀಗಟ್ಟಿ, ಉಪ್ಪಿನಬೆಟಗೇರಿ, ಚಟ್ನಿಹಾಳ, ಸಕ್ಕರೆಪಟ್ಟಣ (ಮೈ), ಗುಳವಾಡಿ, ಬೆಲ್ಲಾಳ (ದ. ಕ.), ಬೆಲ್ಲಾ-ಹುಣಸಿ (ಬ.), ರೇವಡಿಹಾಳ, ತಿಳಗೂಳ (ವಿ.), ಕಡಬಿನಕಟ್ಟಿ, ಮಂಡಗಿಹಳ್ಳಿ, ಹಿಟ್ಟಿಹಳ್ಳಿ, ಹಾಲಾಡಿ, ಹಾಲಕೆರೆ, ಹಾಲಬಾವಿ, ಹಾಲೇರಿ (ಕೊಡಗು), ಪಾಲಾರ (ನದಿ), ಹಾಲಳ್ಳಿ, ಹಾಲಭಾವಿ, ದೂದೀಹಳ್ಳಿ, ದೂದಿಹಾಳ, ದೂಧಸಾಗರ, ಧೂಧನಿ, ಹಾಲವರ್ತಿ(ಮೈ), ಮೊಸರುಗುಪ್ಪಿ, ಮಜ್ಜಿಗೆಪುರ, ಬೆಣ್ಣೀಹಳ್ಳ, ಬೆಣ್ಣಿಹಾಳ, ಬೆಣ್ಣೂರು, ತುಪ್ಪಲಕಟ್ಟಿ, ತೆಲಗಿ, ತೈಲಗೆರೆ, ತೇಲಗಾವ, ಕಲ್ಯ, ಮದ್ಯ, ಇಡ್ಯ, ಶರೇವಾಡ (ಧಾ), ಇನ್ನ, ಈರ, ನಂಜಿನಗೂಡು (ಮೈ.), ಅಮೃತಪುರ (ಮೈ.),

೭. ಬಣ್ಣಗಳಿಂದ

ಕೆಂಪವಾಡ, ಕೆಂದೂರು (ಪುಣೆ ಜಿಲ್ಲಾ). ಕೆಮ್ಮನಗುಂಡಿ, ಕಿಸುಕಾಡು, ಕಿಸುವೊಳಲು, ಕಿಸುವಾಡ, ಕಿಸುಗುಂಡಿ (ಈಗ ತಾಂಮ್ರಗುಂಡಿ), ಚೆಂದೂರ, ಶೇಂದೂರ, ಶಿನ್‌ಧೂ, ಕಾವೇರಿ, ಚಂದ್ರಭಾಗಾ, ನೀಲವಾಡ, ನೀಲಗುಂದ, ನೀಲಾವರ, ನೀಲೇಶ್ವರ,ಹಳದೀಪುರ, ಹಳದಪೂರ, ಅರಸಿನಗೇರಿ (?), ಬೆಳ್ಳೂರು, ಬೆಳ್ಳಂಪಳ್ಳಿ, ಬೆಳ್ಳಟ್ಟಿ, ಬೆಳ್ಳಿ, ಕರಿಯೂರು, ಕರಿಕಟ್ಟಿ, ರಬ್ಬುಕವಿ,

೮. ಹರಳುಗಳಿಂದ

ಮಾಣಿಕನಗರ, ರತ್ನಪುರ, ವಜ್ರಳ್ಳಿ, ಹವಳಗೋಡು, ಹರಳೂರು, ಹವಳಖೋಡ (ವಿ.),

೯. ಬಂಗಾರದಿಂದ

ಚಿನ್ನಮುಳಗುಂದ, ಸೊನ್ನ, ಸೊನ್ನಲಿಗೆ, ಹೊನವಾಡ, ಹೊನ್ನಾಳಿ, ಹೊನ್ನಹೊಳೆ (ಸುವರ್ಣಾವತಿ), ಕನಕಾಪುರ, ಹೇಮರಗಿ, ಹೇಮವಾಡಿಗಿ, ಬಂಗಾರಗುಂಡ, ಹಾಟಕ (ಹಟ್ಟಿಯಲ್ಲಿ ಹುಟ್ಟಿದ್ದು).

೧೦. ಅಂಕೆಗಳಿಂದ

ಪುಂಜ, ಸೊನ್ನೆಹಳ್ಳಿ, ಒಂದೂರು (ಕೊಲ್ಹಾಪುರ), ಒರಳ್ಳಿ, ಒರಕಲ್‌ಗುಡ್ಡ, ಒರೂರು, ಒರ್ನಾಡಿ, ಒಕ್ಕುಂದ, ಎಕ್ಕುಂಡಿ, ಏಕಲಾಸಪುರ, ಏಕಲೂರು, ಏಕಸಂಬೆ, ಇಪ್ಪಡಿ, ಇಕ್ಕೇರಿ, ಎರಡ್ಡಳ್ಳಿ, ಜೋಡುಹಟ್ಟಿ,

ಮುಕ್ಕಲ್ಲು, ಮೂರುಗದ್ದೆ, ಮೂರುನಾಡು, ನಾಲ್ಕೂರು, ಪಾಡಿನಾಲ್ಕುನಾಡು, ಚಾರಮಾಡಿ, ಐತೂರು, ಐದಬಾವಿ, ಆರೂರು, ಏಳೂರು, ಸಾತಗಾವ, ಸಾತಮನೆ, ಸಪ್ತಸಾಗರ, ಸಪ್ತಾಪುರ, ಸತ್ತೂರ (ಸಪ್ತ ಊರು?), ಅಷ್ಟಾ (ಅಷ್ಟೆ), ಅಷ್ಟಗಿ, ಅಷ್ಟಗ್ರಾಮ, ಎಣ್ಮೂರು, ಎಣ್ಮಕಜ, ಹತ್ತರವಾಟ, ಹತ್ತಳ್ಳಿ, ಹತ್ತನೂರು, ದಶಪುರ, ಹನ್ನೊಂದುಗದ್ದೆ, ಇರವತ್ತೂರು, ಚಾಳಿಸಗಾಂವ ನಾಲವತ್ವಾಡ, ಐವತ್ತೊಕ್ಕಲು (ಕೊಡಗು), ಅರುವತ್ತೊಕ್ಕಲು, ಎಂಬತ್ತನಾಳ (ವಿ.), ಮುನ್ನೂರು (ದ. ಕ.), ಸಹಸ್ರಹಳ್ಳಿ, ಏಳುಸಾವಿರಸೀಮೆ, ಅಕೊಳ್ಳಿ, ಲಕ್ಕುಂಡಿ, ಕೋಟೂರು,

೧೧. ಗ್ರಹಾದಿಗಳಿಂದ

ನೇಸರಿಗೆ, ಭಾನಾಪುರ, ಹಿರೇಭಾಸ್ಕರ, ಭಾಸ್ಕರಪುರ, ಇಂದೂರು, ಚಂದ್ರವಳ್ಳಿ, ಸೋಮಾಪುರ, ಸೋಮನಕೊಪ್ಪ, ಮಂಗಳೂರು, ಮಂಗಳವಾಡ, ಮಂಗಳಗಟ್ಟಿ, ಬುಧಗಾಂವ, ಬುದನೂರು, ಗುರುಪುರ, ಶನಿವಾರ ಸಂತೆ, ಉಡುಪಿ, ತಾರಾಪುರ (ವಿಜಾ.), ಗಗನಚುಕ್ಕಿ, ಬಾರಚುಕ್ಕಿ, (ಜೋಗು, ಮೈ.),

(ಶುಕ್ರವಾರದ ಸ್ವತಂತ್ರ ಊರು ದೊರೆತಿಲ್ಲ. ಊರ ಓಣಿಗಳಲ್ಲಿ ಈ ಹೆಸರು ದೊರೆಯುತ್ತಿದ್ದು ಅದೂ ಅರ್ವಾಚೀನವೆಂದು ನನ್ನ ಮತ.)

೧೨. ಮಳೆ ಮಿಂಚು ಮುಂತಾದುವುಗಳಿಂದ

ಮುಗಿಲಕೊಪ್ಪ, ಕಾರಡಕ, ಕಾರಕಳ, ಕಾರ್‌ನಾಡ, ಆಣೆಕಲ್ (ಮೈ.) ಮಂಜುಗುಣಿ (ಕಾ.), ಮಂಜಿರಾಬಾದ (ಮೈ.), ಬಿಸಿಲುಕೊಪ್ಪ, ಬೇಗೂರು, ಬೇಸಗೆಗುಡ್ಡ, ಬೆಂಕಿಕೊಡ್ಲು, ಬೆಂಕಿಪುರ, ಬೆಂಕಿಕೊಪ್ಪ, ಉರವಕೊಂಡ, ಅನಲಗಾಲ, ಅನಲಗೋಡು, ಅಗ್ನಿಕುಂಡಲು, ದೀಪದಹಳ್ಳಿ, ಮಿಂಚಿನಾಳ (ವಿ.), ಮಿಂಚೇರಿ (ಬ.), ಸಿಡ್ಲಘಟ್ಟ, ಬೂದಿಹಾಳ, ಬೂದೀ ಕೋಟೆ,

ಸಂಜೆಗೋಡು, ಕಾವಳ (ದ. ಕ.), ಅಮಾಶೆಬೈಲು, ತಿಮಿರಿ (ದ. ಕ.), ವಸಂತಪುರ, ಶ್ರಾವಣಹಳ್ಳಿ,

೧೩. ದಿಕ್ಕುಗಳಿಂದ

ಮೂಡುಬಿಡಿರೆ, ಮೂಡಲಗಿ, ಉದಯಾವರ, ಉದಯಗಿರಿ, ಪಡುಬಿದಿರೆ, ಪಡುವಲಪಟ್ಟಣ, ಬಡಗಮಿಜಾರ, ತೆಂಕ-ಕಾರಂದೂರು (ದ. ಕ.),

ಮೇಗೂರು, ಮ್ಯಾಕಲಮರಡಿ, ಮ್ಯಾಗೇರಿ, ಮೇಲೂರು, ಕೆಳಗಲ್ಲು, ಕೆಳಗಿನಮನೆ, ಕೆಳಗಿನ ಇಡುಗಂಜಿ, ನಿಟ್ಟೂರು,............ಒಂಕಿಹಾಳ, (?) ಬಂಕಾಪುರ,

ಕಡೆಹಳ್ಳಿ, ಕಡಪಟ್ಟಿ, ಕಡಕೊಳ್ಳ, ಕಡೆಗಾವ (ಸಾತಾರಾ), ನಡುವಿನ ಹಳ್ಳಿ, ಅಂತರವಳ್ಳಿ, ಅಂತರಗಾವ, (ನಿ), ಕೆಲಗೆರೆ, ಎಡೂರು, ಎಡೆಹಳ್ಳಿ, ಬಲಗೋಡು, ಬಲಕುಂದಿ, ತಳಕಲ್ಲು, ತಳಕಾಡು, ತಲ್ಲೂರು,

೧೪. ನೆಲದಿಂದ

ಬೈಲಕೆರೆ, ಬೈಲೂರು, ಬೆಟ್ಟದಹಾಳ, ಬೆಟಸೂರು, ಬೆಟದೂರು, ಬೆಟ್ಟಗೆರೆ, ಕುಮಶಿ, ಕುಂಬೆ, ಚಿಕ್ಕುಂಬೆ, ಹಿರೆಕುಂಬೆ, ಆಗುಂಬೆ, ಕುಂದರಗಿ, ಕುಂದರನಾಡು, ಬೆಳುವೊಲ, ಮಲೆನಾಡು, ಕರ್ಲಕೊಪ್ಪ, ಎರೆಗಟ್ಟಿ, ಕಲ್ಲಹಳ್ಳಿ, ಗುಡದೂರು, ಮಣ್ಣೂರು, ಮಳಲವಾಡಿ, ಮರಳದಿನ್ನಿ (ನಿ.), ಮಳವಲಿ (ಮಹಾರಾಷ್ಟ್ರ), ಧೂಳಖೇಡ (ವಿ.), ಧೂಳಿಕೊಪ್ಪ, (ಧಾ.), ಕೆಸರಕೋಡಿ, ಕೆಸರಕೊಪ್ಪ (ವಿ.), ಹುದಲಿ (ಬೆ.), ಕೊಳಚಿ (ರಾಮದುರ್ಗ), ಗೊಬ್ಬರಗುಂಪಿ, ಜಲದುರ್ಗ (ನಿ.), ಜಲಗಡ್ಡೆ (ವಿ.), ಸವುಳಹಳ್ಳಿ (ನಿ.),

೧೫. ಬೇಸಾಯದಿಂದ

ನೇಗಿನಹಾಳ, (ಬೆ, ವಿ.), ಉತ್ತನಾಳ(ವಿ.), ಭಂಡಿವಾಡ (ಧಾ.), ಕೂಂಟೆ, ಕೂಂಟಿಗೆ, ಕೊಂಟೋಜಿ (?ಧಾ. ವಿ.),

೧೬. ಕಾಲದಿಂದ

ಹಳನಾಡ (ದ. ಕ.), ಹಳೆಬೀಡು, ಮುದೇನೂರು (ರಾ.), ಮುತ್ತಗಿ, ಮುದುವೊಳಲು (ಮುಧೋಳ), ಮುದುಗಲ್ಲು (ನಿ.), ಮುತ್ತೂರು (ದ. ಕ.), ಮುನವಳ್ಳಿ, ಪುತ್ತೂರು, ಹೊಸಹಟ್ಟಿ, ಹೊಸೂರು, ಹೊಸವಾಡ, ಹೊಸದುರ್ಗ, ಹೊಸಕೋಟೆ, ಹೊಸಾಳ (ದ. ಕ.),

೧೭. ಚಿಕ್ಕ, ಹಿರೆ, ಸಣ್ಣ, ದೊಡ್ಡ

ಚಿಕ್ಕಪಡಸಲಗಿ, ಹಿರೇಪಡಸಲಗಿ, ಚಿಕ್ಕೊಪ್ಪ, ಹಿರೇಕೊಪ್ಪ, ಚಿಕ್ಕಕೆರೆಯೂರು, ಹಿರೆಕೆರೆಯೂರು, ಪೆರೂರು, ಪೆರಿಯಾ (ದ. ಕ.), ಪೆರಿಯಾಪಟ್ಟಣ, ಹೇರೆ, ಹೇರವಾಡ,

ದೊಡ್ಡಬಳ್ಳಾಪುರ, ದೊಡ್ಡಬಿದಿರೆ, ದೊಡ್ಡೇರಿ, ದೊಡ್ಡಘಟ್ಟ, ದೊಡ್ಡಬೆಟ್ಟ (ನೀಲಗಿರಿ), ಬಂಬಲಗಿ, ಬಂಬಲವಾಡ (ಬೆ.),

೧೮. ಕೂಡಿಕೆಯಿಂದ

ಕೂಡಲ, ಕೂಡ್ಲ, ಕೂಡಲಿಗೆ, ಸಂಗಮ, ಸಂಗಮೇಶ್ವರ, ಸಂಗವಳ್ಳಿ, ಸಂಗಾಪೂರ, ತಿಸಂಗಿ (ಸಾಂ.), ಶ್ರೀಸಂಗಿ (ಶಿರಸಂಗಿ), ಗೊಳಸಂಗಿ, ಅಸಂಗಿ (ಜಂ.), ತಳಸಂಗಿ (ಸಾಂ.), ಅಹಿರಸಂಗ, ಸಂಗಳ, (ಸಾಂಗಳ=ಸಾಂಗಲಿ),

೧೯. ದೇವತಾದಿಗಳಿಂದ ಬಂದುವು

ರಾಮಾಯಣದಿಂದ

ರಾಮದುರ್ಗ, ರಾಮತೀರ್ಥ, ರಾಮನಾಳ, ರಾಮನಕೊಪ್ಪ, ರಾಮಗಿರಿ, ರಾಮಾಪುರ, ಮುಂ.

ಲಕ್ಷ್ಮಾಪುರ, ಲಕಮಾಪುರ, ಲಕಮನಹಳ್ಳಿ, ಲಕ್ಷ್ಮಣತೀರ್ಥ ಮುಂ.

ಭರತನಳ್ಳಿ, ಭರತೂರು, ಭತರನೂರ (ನಿಜಾಂ), ಜನಕನಭಾವಿ (ವಿ.), ಸೀತಿಮನೆ, ಸೀತಿಭಾವಿ, ಸೀತಿಬೆಟ್ಟ,

ಹನುಮಾಪುರ, ಹನುಮಸಾಗರ, ಹನುಮಂತಗಡ, ಹನುಮನಹಾಳ, ಆಂಜನೇರಿ, ಅಂಜನಿ (ಸಾಂ.)

ಪಂಪಾ (ಹಂಪೆ), ಅವನಿ (ಹಂಪೆಯಂತೆ ಇಲ್ಲಿ ರಾಮಾಯಣದ ಹಲವು ಕುರುಹುಗಳುಂಟು),

ಮಹಾಭಾರತದಿಂದ

ಕೃಷ್ಣಾಪುರ, ಯದುಗಿರಿ, ಕಂಸನಪಳ್ಳಿ, ರುಕ್ಮಾಪೂರ (ನಿಜಾಂ), ಕೊಂತಿಹಳ್ಳಿ, ಕುಂತಿದಿಬ್ಬ, ಪಾಂಡವಗಡ, ಧರ್ಮಾನದಿ, ಧರ್ಮಾವರಂ, ಧರ್ಮಾಪುರ, ಭೀಮನಹಳ್ಳಿ, ಭೀಮಗಡ;

ಅರ್ಜುನಗಿ, ಅರ್ಜುನವಾಡ, ಅರ್ಜುನಬೆಟ್ಟಹಳ್ಳಿ, ಪಾರ್ಥನಹಳ್ಳಿ, ಸಹದೇವಪುರ (ಸಾದಳಿ, ಮೈ.)

ಕರ್ಣಕುಪ್ಪೆ (ನಿಜಾಂ), ಬಭ್ರುವಾಡೆ (ಉ. ಕ.), ವಿದುರೂರು (ಗೋರಿಬಿದನೂರು), ವಿದುರಾಶ್ವತ್ಥ, ಏಕಛತ್ರ (ಬೋಧನ, ನಿ.), ವಿರಾಟನಗರ (ಹಾನಗಲ್ಲು),

ಪುರಾಣದಿಂದ

ಹರೀಂದ್ರಾಳ (ವಿಜಾಪುರ); ವರುಣ (ಮೈ); ಅಮರಗೊಳ, ಅಮರಾಪುರ; ಅಮರಾವತಿ; ಅಲಕಾಪುರ; ದೇವನದೊಡ್ಡಿ, ದೇವಲಾಪುರ, ದೇವರಗುಡ್ಡ; ದೇವಗಿರಿ; ದೇವನೂರು; ದೇವಸ್ಯಮೂಡೂರು; ದೇವಸ್ಯಪಡೂರು (ದ. ಕ.),

ಸುರಪುರ; ಸುರಗಿರಿ (ನಿಜಗಲ್ಲಬೆಟ್ಟ); ಬಜ್ರೆ (ವಜ್ರ, ದ. ಕ.) ವಜ್ರೇಶ್ವರಿ, ವಜ್ರಚೌಂಡೆ (ಸಾಂ.):

ಬೊಮ್ಮ ಅಥವಾ ಬಮ್ಮ-ಹಳ್ಳಿ; ಪುರ; ಕಟ್ಟೆ; ಗಿರಿ ಮುಂ.

ಶಿವಾಪುರ, ಶಿವನೇರಿ (ಮಹಾರಾಷ್ಟ್ರ), ಶಿವಳ್ಳಿ; ಮಹಾದೇವನಕಟ್ಟೆ; ಮಹಾಬಲೇಶ್ವರ; ಮಂಜೇಶ್ವರ; ಮಂಜುನಾಥ; ಧವಳಗಿ (ವಿ.); ಧವಳೇಶ್ವರ (ಧವಲ); ಡೋಳೇಶ್ವರ (ಧಾ.); ಗಿರಿಶನಕೊಪ್ಪ (ಧಾ.);

ರುದ್ರಾಪುರ, ರುದ್ರಪಟ್ಟಣ, ಪಶುಪತಿಹಾಳ, ಶಂಭುನಾಥಪುರ (ಮೈ.), ಆರೆಶಂಕರ (ವಿ.), ಮುರುಗನಹಳ್ಳಿ, (ನಿಜಾಂ), ಸೋಮನಾಥಪುರ, ತ್ರಿಯಂಬಕಪುರ, (ಮೈ.), ವಿರೂಪಾಕ್ಷಪುರ, (ಸಾಲೆಂ), ಬೈರನಹಟ್ಟಿ, ಬೈರಿಕೊಪ್ಪ, ಬೈರದೇವರಕೊಪ್ಪ, ಲಿಂಗದಹಳ್ಳಿ, ಲಿಂಗಾಪುರ, ಲಿಂಗನಾಳ, ಲಿಂಗಸೂಗೂರು, ಹರಲಾಪುರ;

ಮೈಲಾರ, ಮೂಲಸ್ಥಾನದೇವರು, ಮೂಲಸ್ಥಾನಕಲ್ಲೇಶ್ವರ, ಕಲ್ಲಿನಾಥ, ಕಲ್ಮೇಶ್ವರ, ಕಲಿದೇವ ಎಂದು ಮುಂತಾದ ಹೆಸರಿನ ದೇವಸ್ಥಾನಗಳು ನಮ್ಮ ನಾಡಿನಲ್ಲಿ ಎಲ್ಲೆಲ್ಲೂ ಇವೆ. ಒಂದಿಲ್ಲ ಒಂದು ಹೆಸರಿನಲ್ಲಿ ಶಿವನಿಲ್ಲದ ಊರು ಸಿಕ್ಕುವುದೆ ದುರ್ಲಭ.

ನಂದೇಶ್ವರ, ನಂದಿದುರ್ಗ, ಬಸಾಪೂರ.........,

ಕೇಶವಾಪುರ, ನಾರಾಯಣಪೇಟೆ, ನಾರಾಯಣದೇವರ ಕೆರೆ, ಮಾಧವಪುರ, ಗೋವಿಂದಪುರ, ಹೊಳೆನರಸೀಪುರ, ವಾಸುದೇವಪಳ್ಳಿ, (ಮೈ.) ವಾಮನಪಳ್ಳಿ, (ನಿಜಾಂ), ಅಚ್ಯುತಪುರ, ಹರಿಪುರ, ಕೃಷ್ಣಾಪುರ, ಕೃಷ್ಣಗಿರಿ, ಜನ್ನಾಥಪುರ, (ನಿಜಾಂ), ದಾಮೋದರಹಳ್ಳಿ, (ಸಾಲೆಂ), ರಂಗಾಪುರ, ಶ್ರೀರಂಗಪಟ್ಟಣ, ತಿಮ್ಮಾಪುರ, ವೆಂಕಟಾಪುರ, ತಿರುಪತಿ, ಅನಂತಪುರ, ಹರಿಹರ, ಹರಹರಪಳ್ಳಿ, (ನಿಜಾಂ), ಶಂಕರನಾರಾಯಣ, ಗರುಡಾಚಲ, ಗರುಡಗಿರಿ, ಗರುಡನಪಾಳ್ಯ.

ದೇವಿಗಾವ (ನಿಜಾಂ), ದೇವಿಹೊಸೂರು, ದೇವೀಪುರ, ಗೌರೀಪುರ, ಭಗವತಿ, ಗಿರಿಜಾಪುರ (ನಿಜಾಂ), ಉಮಾಪುರ, (ನಿಜಾಂ), ಬನಶಂಕರಿ (ವಿ.), ಶಂಕರಿಕೊಪ್ಪ (ಕಾ), ಮಾರಿಹಾಳ, ಮಾರಿಹಳ್ಳಿ, ಮಾರಿಕಣಿವೆ, ಮಸಣಿಹಳ್ಳಿ, (ಮೈ.), ಕಳಕಾಪುರ (ಕಾಳಿಕಾಪುರ?); ಕವಠೆಮಹಾಂಕಾಳ (ಸಾಂ), ಶಿರೂರು, ಶಿರಕೊಳ್ಳ, ಶಿರೋಳ, ಶಿರಹಟ್ಟಿ, ಶಿರಟಿ (ಕೊ.), ಶಿರಗುಪ್ಪಿ, ಶಿರಪೂರ, ಶಿರಾಳೆ, ಶಿರೋಳಿ, ಶಿರಾಳಕೊಪ್ಪ, ಸಿರಿಯೂರು, ಶಿರಿವಾಗಿಲು (ದ.ಕ.), ಶಿರಿಯಾರ (ದ. ಕ.) ಶಿರಿಯ, ಶಿರ್ವ (ದ.ಕ.), ತಿರುಮಲೆ, ತಿರ್ಲಾಪುರ (ತಿರುಲಾಪುರ, ಧಾ.), ಲಕ್ಷ್ಮೀಕೊಪ್ಪ, ಲಕ್ಷ್ಮೀಸಾಗರ, ಬೊಮ್ಮರಸೀಕೊಪ್ಪ, ಬೊಮ್ಮರಸಿಪುರ, ಸರಸ್ವತಿಪುರ (ಕಾ.),

ಎಲ್ಲಮ್ಮನಗುಡ್ಡ (ಬೆ.), ಎಲ್ಲಾದೇವಿ (ನಿಜಾಂ), ಎಲ್ಲೂರ (ಎಲೋರಾ), ಯಲ್ಲಾಪುರ, ಗ್ರಾಮದೇವತಿಪುರ(ಮೈ.), ದೇಮಿನಕೊಪ್ಪ (ಬೆ.), ದ್ಯಾಮವ್ವನಹಳ್ಳಿ (ಮೈ.), ಚೌಂಡೇಶ್ವರ, ಚಾಮುಂಡಿಬೆಟ್ಟ, ಲಲಿತಾದ್ರಿಪುರ, ಚೌಡದಾನಪುರ, ಚೌಂಡಾಳ (ಕೊ.), ಅಮ್ಮಣಗಿ (ಬೆ.),

ಗಣೇಶವಾಡಿ, ಗಣಪತಿಹಳ್ಳಿ, ಬೆನಕನಕೊಂಡ, ಬೆನಕನಕಟ್ಟೆ, ಬೆನಕನಹಳ್ಳಿ, ಸ್ಕಂಧಗಿರಿ, ಸೋಂದ, ಸೊಂಡೂರು (?), ಸುಬ್ರಹ್ಮಣ್ಯ,

ಪರಶುಗಡ; ಪರಶುರಾಮತೀರ್ಥ; ಪರಸಾಪುರ;

ಜಕ್ಕಲಿ; ಜಕ್ಕಸಾಂದ್ರ; ಜಖಣಾಪೂರ; ಜಖಣಬಾವಿ; ಜಖೆವಾಡಿ; ಜಕಳಿ; ಜಖಬಾಳ (ಕೊಲ್ಲಾ); ಜಕನಾಳ; ಜಕನಹಳ್ಳಿ (ನಿಜಾಂ); ಜಕ್ಕೇರಾಳ (ವಿ.);

ಬೆಂತರ; ಬ್ಯಾತನಾಳ (ಬೇತನಾಳ) ಬ್ಯಾತಹಳ್ಳಿ (ಮೈ.), ಭೂತಪೂರ (ನಿಜಾಂ), ಭೂತನಾಳ (ವಿ.), ರಕ್ಕಸಗಿ, ರಾಕ್ಷಸಕೊಪ್ಪ, ರಾಕ್ಷಸಬಾದ ಹಳ್ಳಿ (ನಿಜಾಂ).

ಮಯಸಮುದ್ರ; ಮಯಸಾಂದ್ರ, ಬಳ್ಳಾರಿ, ಬಳಾರಿಹಳ್ಳ (ಬೆ.), ಗುಮ್ಮಗೋಳ, ಗುಮ್ಮನಹಳ್ಳಿ, ಗುಮ್ಮಾಪುರ, ಗುಮ್ಮಿಗಟ್ಟಿ, ಗುಮ್ಮನ ಹಾಳು (ಮೈ), ಯಮನೂರು (ಧಾ.), ಯಮಕ್ಕನಮರಡಿ (ಬೆ.), ಜವನಹಳ್ಳಿ, ಯಮಗೆ, ಯಮಗರ್ಣಿ (ಕೊ.), ಯಮಕೂರ (ನಿಜಾಂ), ಯಮನಾಪುರ (ಸಾಂ.), ಜಮನಾಳ (ಬೆ.),

ಸಾವೂರು, ಸಾವೆನಕೊಪ್ಪ, ಸಾವನದುರ್ಗ (ಮೈ.), ಕೊಲ್ಲಹಳ್ಳಿ (?), ನಿಧನವಾಡ (ಅನಂತಪೂರ)

ಕಾಮನಕೆರೆ, ಗಾಮನಗಟ್ಟಿ (ಕಾಮ?) ಕಾಮನಹಳ್ಳಿ (ನಿಜಾಂ), ಮಾರನಬಸದಿ, ಮಾರಡಿಗಿ, ಮದನಮಟ್ಟಿ (ಸಾಂ.), ಮದನಪಳ್ಳಿ (ನಿಜಾಂ), ಮದನಭಾವಿ (ಮಾದನ?),........ಸುರತಕಲ್ಲ (ದ. ಕ.), ಭೋಗನಗರ (ವಿ.), ಭೋಗಾನೂರು (ಧಾ.),

ಜೀವಾಪುರ, ಬಾಳಂಬೀಡು,............ಜವಾಡ, ಲೋಕಾಪುರ, ಲೋಕೂರು, ಜಗಾಪುರ, ದೇಶನೂರು, ನಾಡಹಳ್ಳಿ, ನಾಡಸೂರು (ಕೊಂ.), ನಾಡಗಾವ

೨೦. ಜನಗಳಿಂದ ಬಂದ ಹೆಸರುಗಳು

ಪುರಾತನ

ಕೋಲಾರ; ಕೊಲ್ಹಾರ; ಕೊಲ್ಲಾಪುರ; ಕೊಲ್ಲೂರು; ಕೋಳಟ್ಟಿ; (ಸಾಲೆಂ); ಮುಂತಾದುವು ಕೋಲೇರಿಯನ್ ಜನರ ಕರುಹುಗಳು.

ಬಿಲ್ಲವಾಡಿ (ಭಲವಡಿ); ಬಿಲ್ಲಾಡಿ (ದ. ಕ.); ಇವು ಬಿಲ್ಲವರ (ಭಿಲ್ಲರ) ನೆಲೆ ಹೇಳುವುವು;

ಮುಂಡರಗಿ; ಮುಂಡೇವಾಡಿ; ಮುಂಡಕೂರು; ಮುಂಡಗನೂರು ಮುಂತಾದುವು ಮುಂಡ ಜನರವು.

ಕಾತರಾಳ; ಕ್ಯಾತನಳ್ಳಿ; ಕ್ಯಾತಸಾಂದ್ರ; ಕಾತನಡೋಣಿ (ವಿ.); ಮುಂತಾದುವು (ಕಿಳ್ಳಿ) ಕೇತರ ನೆನಹನ್ನು ಕೊಡುವುವು.

ನಾಗರಗಾಳಿ; ನಾಗನೂರು; ನಾಗಪುರ; ನಾಗಲಾವಿ; ನಾಗರಾಳ; ನಾಗರಹಾಳ; ನಾಗರಖಂಡ; ಮುಂತಾದುವು ನಾಗರ ನೆಲೆಯನ್ನು ಹೇಳುವುವು.

ಟಕ್ಕಳಕಿ; ಟಾಕಳಿ; (ಟಕ್ಕರು?); ಬೇಡರಹಟ್ಟಿ;............ ಪಣೆಯಾಡಿ (ದ. ಕ.); ಹಣಬರಹಟ್ಟಿ (ಬೆ.); ಹಣಬನೂರು (ಬೆ.); ಪಣೆಯಾಲ (ದ.ಕ.); ಪಟ್ಟಿಗಳು=ಪಟ್ಟಿಲರು=ಹಟ್ಟಿಕಾರರು:

ಯಾದವಾಡ; ಯಾದಗಿರಿ; ಯಾದಗಿ; ಯಾದಗೊಪ್ಪ; ದನಗಾರ ಹಟ್ಟಿ; ತುರುಕೇವಾಡಿ; ತುರ್ವಗಲ್ಲು; (ಇದರೊಡನೆ ಗೊಲ್ಲ; ಗೌಳ; ಕುರುಬರ ಊರುಗಳನ್ನು ನೆನೆದುಕೊಳ್ಳಬೇಕು.)

ಅಲ್ಲದೆ ಕನ್ನ; ಕಣ್ಣರ ಊರು; ಏರಿ; ವಾಡಿ; ಪುರ; ಸಾಂದ್ರ; ವಾಡ; ಪೇಟೆ; ನಾಡು; ದೇಶ ಮುಂತಾದುವುಗಳು ಕರ್ನಾಡ ಮೊದಲಿಗರ ಎಡೆಗಳು.

ಮಲ್ಲಾಳ; ಮಲ್ಲೂರು; ಮಲ್ಲಾಪುರ; ಮಲಿಕಾಪೂರ; ಮೈಲಾರ; ಮಲ್ಹಾರ; ಮಲ್ಲಾಳ ಮುಂತಾದ ಮಲ್ಲಜನರ ಊರುಗಳು.

ಕಮ್ಮರಪಳ್ಳಿ; ಕಮ್ಮಗಾವ (ಖಾಮಗಾವ); ಕಮ್ಮನಾಡುಗಳು ಕಮ್ಮರವು.

ಅಹಿರಸಂಗ; ಅಹಿರವಾಡ; (ಆಭೀರಪಲ್ಲಿ); ಆಭೀರರ ಸುಳುವು ದೋರುವುವು.

ಐತಿಹಾಸಿಕ

ಸಾತವಾಹನಿಹರ; ಸಾತವಾಹನಿರಠ (ಬಳ್ಳಾರಿ ಜಿಲ್ಲೆ); ಸಾತನೂರು (ಬಳ್ಳಾರಿ ಜಿ.); ಗಂಗವಾಡಿ; ನೊಳಂಬವಾಡಿ; ನೊಣಬೂರು (ವೈ.); ಬಾಣಾವರ (?); ರಟ್ಟಪಾಡಿ; ರಟ್ಪಾಡಿ(ದ.ಕ.); ರಟ್ಟಿಹಳ್ಳಿ; ರಾಠೋಡಾ (ರಟ್ಟವಾಡಾ? ನಿಜಾಂ); ಲಾಟವಾಡಿ, ಲಾಟವಡೆ, ಲಾಟಗಾವ (ಕೊಲ್ಲಾ); ಲಾತೂರು (ಲಟ್ಟಲೂರು, ನಿಜಾಂ); ಲಾಟ; ಸೌರಾಷ್ಟ್ರ (ಗುಜರಾತ); ರಾಢ (ಬಂಗಾಳ); ಲಟ್ಟೇರಿ; ಲಾಡವಾಡಿ; ಲಾಡವರಂ (ತಮಿಳನಾಡು); ರಡ್ಡಿಹಳ್ಳಿ (ಶೇಲಂ);

ಚಳುಕಿ (ಚಲುಕ್ಯ? ಬೆಳಗಾಂವ ಜಿ.); ಸಿಂದಗಿ; ಸಿಂದೋಗಿ; ಸಿಂದೆಮುನ್ನವಳ್ಳಿ; ಸಿಂದಿಕುರುಬೆಟ್ಟ; ಸಿಂಧನೂರು; ಸಿಂದಘಟ್ಟ (ಮೈ.); ಸಿಂದವಾಡಿ; ಸಿಂದಯನಹಳ್ಳಿ; (ಸಾಲೆಂ); ಹೊಯಸಳಕಟ್ಟೆ (ಮೈ.); ಚೋಳಪುರ (ಮೈ.);

ಅರ್ವಾಚೀನ

ಮೊಗಲಾಯಿ (ನಿಜಾಂ); ಮರಾಠವಾಡಿ (ಬೈ.); ಮರ್ಹಾಟವಾಡಾ (ನಿಜಾಂ); ಆರೆಕುರಟ್ಟಿ; ಆರೆಮಲ್ಲಾಪುರ (ಧಾ.); ಆರೆಹಳ್ಳಿ (ಮೈ.); ಆರೆಶಂಕರ (ವಿ.); ಆರೆಕೊಪ್ಪ (ಕಾ; ಮೈ.);

ತೆಲುಗಬಾಳು; ಆಂಧ್ರಪಳ್ಳಿ (ಬ.); ತಿಗಳೂರು; ಕೊಂಗನೂರು (ಬೆ.); ಒಡ್ಡರಹಟ್ಟಿ;

ಇಸ್ಲಾಂಪೂರ; ಫ್ರೆಂಚರಾಕ್; ಫಿರಂಗಿಪೇಟೆ;

೨೧. ವ್ಯವಸಾಯ, ಉದ್ಯೋಗ, ಅಧಿಕಾರಗಳಿಂದ

ಅರಸನಹಾಳು (ಬ); ರಾಜನಾಳ (ವಿ.); ರಾಜೂರ; ರಾಜಮನೆ; ರಾಯಾಪೂರ; ರಾಯರಹೂಪಳ್ಳಿ (ಹುಬ್ಬಳ್ಳಿ); ರಾಜೋಳಿ (ನಿಜಾಂ);

ಅರಸಿಬೀದಿ (ವಿ); ಅರಸಿಕೆರೆ (ಮೈ.); ಪಟ್ಟದಕಲ್ಲು; ಶಹಾಪೂರ; ಪಾಚ್ಛಾಪೂರ; ಸುಲ್ತಾನಪೇಟ; ಬೇಗಂ ಪೇಟ;

ಸಾವಂತವಾಡಿ (ಸಾಮಂತ); ಗಾಝಿಪೂರ;

ಹೆಗ್ಗಡೆದೇವನಕೋಟೆ (ಮೈ.); ಹೆಗಡೆ; ಹೆಗಡಿಹಾಳ (ವಿ.); ವಝೀರಗಾವ (ನಿಜಾಂ);

ದಣ್ಣಾಯಕನಕೆರೆ (ಬ); ನಾಯಕವಾಡಿ; ನಾಯಕನೂರು; ನಾಯಕನಕೊಪ್ಪ; ಝುಂಜುರವಾಡ (ಬೆ.),

ಬಂಟವಾಳ, ವೀರಾಪುರ; ರಾಣಾಪುರ; ರಾಣೆಬೆನ್ನೂರು; ಬಹಾದ್ದೂರಬಂಡಿ; ಬಾದರದಿನ್ನಿ (ವಿ.); ದಳವಾಯ್‌ಹಳ್ಳಿ (ಸಾಲೆಂ); ದಂಡುಕಾರನಹಳ್ಳಿ (ಸಾಲೆಂ); ಮಾನ್ಯದಹಳ್ಳಿ (ಸಾಲೆಂ); ಒಡೇರಹಳ್ಳಿ; ಒಡೇರಕೊಪ್ಪ ಗೌಡನಹಟ್ಟಿ; ಗೌಡವಾಡ (ಸಾ.);

ಶೆಟ್ಟಿಹಳ್ಳಿ (ಸಾಂ.) ಶೆಟ್ಟಿಗಳಕೊಪ್ಪ (ಮೈ.); ಶೆಟ್ಟಿಹಳ್ಳಿ (ಸಾಲೆಂ); ಬಣಜರಹಳ್ಳಿ (ಸಾಲೆಂ);

ಸೂಳಿಭಾವಿ; ಮಂಗಸೂಳಿ (ಬೆ.); ಹಾದರಗೇರೆ; ಸೂಳಿಕೆರೆ; ಸೂಳಿಕುಂಟೆ; ಸುಳ್ಳ ಮತ್ತು ಸುಳ್ಯ (ಸೂಳ್ಯ?); ಪಾತ್ರಬೂದಿಹಾಳ (ಬ.); ಗಣಿಕೆಹಾಳು (ಬ.); ರಂಭಾಪುರ; ಅಪ್ಸರಗೊಂಡ (ಉ. ಕ.); ಗಂಧರ್ವಪುರ (ಬೆ.);

ಕಂಬಾರಗಣಿವೆ; ಕುಂಬಾರಹಳ್ಳಿ (ಶೇಲಂ); ಸೋನಾರಹಳ್ಳಿ (ಶೇಲಂ); ನಾವದಗಿ(ವಿ); ನಾವಲಗಟ್ಟಿ (ಬೆ.); ಅಗಸಬಾಳ (ವಿ.); ಅಗಸನಹಳ್ಳಿ; ಮಡಿವಾಳ (ಮೈ.); ಗಾಣಿಗಪುರ (ಸೊ.) ತೊಪ್ಪೊರ್ ಗಾಣಿಗರಹಳ್ಳಿ (ಸಾಲೆಂ); ಜಾಡಹಳ್ಳಿ; ಕಟಕನಹಳ್ಳಿ (ವಿ.); ಮೇದರಹಳ್ಳಿ; ಹೆ(ೇ)ಳವನಕಟ್ಟೆ;

ಡೊಂಬಸಾಂದ್ರ; ಡೋಮಗಾವ; ಡೊಂಬನಹಾಳ (ಧಾ); ದಾಸನೂರ; ದಾಸರಳ್ಳಿ; ದಾಸನಕೊಪ್ಪ; ದಾಸ್ತಿಕೊಪ್ಪ; ದಾಸನಕೊಡಿಗೆ (ಮೈ.); ಕಾತರಾಳ; ಕೋಡಂಗಿಹಳ್ಳಿ (ಶೇಲ್ಲಂ); ಕಬ್ಬೇರಹಟ್ಟಿ; ಉಪ್ಪಾರಹಳ್ಳಿ (ಸಾಲೆಂ); ಚಿಕ್ಕಪೂವತ್ತಿ (ಶೇಲಂ); ಬೋನಗಿತ್ತಿಹಳ್ಳಿ;

ಸಿದ್ಧಪುರ (ಸಿದ್ದಾಪುರಗಳು ಇನ್ನೂರಕ್ಕೆ ಮಿಕ್ಕಿವೆ); ಜೋಗಲದಿನ್ನಿ; ಜೋಗಿಮಡ್ಡಿ; ಯೋಗಿಮಲೆ (ಮೈ.); ಸಂನ್ಯಾಸಿಗುಡ್ಡ; ಜಂಗಮರಾಳ, ಜಂಗಮರಹಳ್ಳಿ; ಜಂಗಮವಾಡಿ; ಬಾಲಜಂಗಮನಹಳ್ಳಿ (ಸಾಲೆಂ); ಗಣಾಚಾರಿಪುರ (ಮೈ.); ಆಚಾರತಿಮ್ಮಾಪೂರ; ಆಚಾರನರಸಾಪೂರ; ಭಟ್ರಾಳ; ಭಟ್ಟರಮನೆ (ಕಾ.); ಭಟ್ಟರಹಳ್ಳಿ (ನಿ.); ಆಚಾರೂರು (ನಿಜಾಂ); ಆಚಾರಹಳ್ಳಿ (ಸಾಲೆಂ); ಹಾರೂಗೆರೆ; ಐಯಾಹೊಳೆ; ಐನಾಪುರ; ಐಯ್ಯವರಪಳ್ಳಿ (ನಿಜಾಂ); ಅರ್ಚರಪಳ್ಳಿ (ನಿಜಾಂ); ಸವಣೂರು (ಧಾ.; ನಿಜಾಂ); ಸವಣಗೆರೆ (ಧಾ); ಶ್ರವಣಬೆಳಗೊಳ; ಸವಣಹಳ್ಳಿ (ವಿ.);

ಗುರುಮಠಕಲ್ಲ; ಗುರ್ಲಾಪುರ; ಗುರ್ಲಕಟ್ಟಿ; ಗುರ್ಲಹೊಸೂರ; ಗುರುಪುರ (ದ. ಕ.); ಮಠವಳ್ಳಿ (ನಿಜಾಂ); ಗೊರವನಕೊಳ್ಳ; ಗೊರವನಕೊಪ್ಪ; ಗೊರಾಬಾಳ; ಓಜೇನಹಳ್ಳಿ; ಪೂಜಾರಿಹಳ್ಳಿ (ಬ); ಭಕ್ತರಹಳ್ಳಿ (ನಿ.); ಬೋಳುಬಗು ತನಹಳ್ಳಿ (ಸಾಲೆಂ);

ಅಗ್ರಹಾರ; ಅರಗ; ಅಗರಖೇಡ; ದಾನವಾಡ; ದತ್ತವಾಡ; ಕೊಟ್ಟೂರು; ಆಹೇರಿ (ವಿ.); ಪಂಡಿತರಹಾಳ (ಶೇಲಂ); ಪಂಡಿತನಹಳ್ಳಿ; ಪಂಡಿಯಾಳ (ನಿ.); ಬೋಧನಿ (ನಿ.); ಬಿಜ್ಜೂರು (ವಿ.); ಬಲ್ಲರವಾಡ (ಧಾ.); ತಿಳವಳ್ಳ (ಧಾ.);

ಧರ್ಮದಿಂದ

ಜಿನರಾಳ; ಜೈನಾಪೂರ; ಬಸದಿ; ಬಸ್ತವಾಡ; ಬಸದಿಕೊಪ್ಪ; ಬಸ್ತಿಪೂರ; ಹಿಂದಪೂರ; ಇಸ್ಲಾಂಪೂರ; ಮಸೂತಿ (ವಿ.);

ಧಮ್ಮವೊಳಲ್ (ಡಂಬಳ; ಧಾ.); ಧಮ್ಮಣಗಿ ಅಥವಾ ಥಮ್ಮಣಗಿ; ಮತ್ತು ಧಾಮಣೆ (ಬೆ.);

೨೨. ವ್ಯಕ್ತಿಗಳಿಂದ ಬಂದುವು

ಪುರಾತನ ಋಷಿ ಮುನಿಗಳಿಂದ

ಅಗಸ್ತ್ಯತೀರ್ಥ; ಗೌತಮಗಿರಿ (ಮೈ.); ಕಣ್ವನದಿ; ಕಣ್ವತೀರ್ಥ; ಕೌಂಡಿಣ್ಯ ನದಿ; ಮಾರ್ಕಂಡ ನದಿ; ದ್ರೋಣಾಚಲ; ಶೃಂಗಗಿರಿ (ಶ್ರಿಂಗೇರಿ); ದೂರ್ವಾಸಪುರ;

ರಾಜಕೀಯ ಮತ್ತು ಸಾಮಾಜಿಕ

ತೆರಕಣಾಂಬಿ (ತ್ರಿನೇತ್ರಕದಂಬ); ಶಿವರ (ಶಿವಮಾರ ಗಂಗ); ವಿಕ್ರಮಪುರ (ಅರಸಿಬೀದಿ); ಹರಪನಹಳ್ಳಿ; ಬುಕ್ಕರಾಯಪಟ್ಟಣ; ಕೃಷ್ಣರಾಜಸಾಗರ; ಚಾಮರಾಜಪೇಟೆ; ಔರಂಗಾಬಾದ; ಅಹಮ್ಮನಗರ; ಹೈದರಗಡ (ಕಾ.); ವೆಂಕಟಾದ್ರಿಹಳ್ಳಿ (ಶೇಲಂ);

ನಾಗಲಾವಿ (ವಿಜಯನಗರದ ನರಪತಿ ಕೃಷ್ಣರಾಯನ ಅರಸಿ); ಓಬಲಾಪುರ; ನೀಲವ್ವನಹಳ್ಳಿ; ಸಿದ್ಧವ್ವನಹಳ್ಳಿ; ದ್ಯಾಮವ್ವನಹಳ್ಳಿ; ಪಾಲವ್ವನಹಾಳ; ಮಲ್ಲಕ್ಕನಹಳ್ಳಿ;

ನಾಗಶೆಟ್ಟಿಕೊಪ್ಪ; ಹನಶೆಟ್ಟಿಕೊಪ್ಪ; ಗುಮ್ಮನಾಯಕನಪಾಳ್ಯ; ಚಿಕ್ಕದೋರನಬೆಟ್ಟ (ಸಾಲೆಂ); ಹೊನ್ನಪ್ಪಗೌಡನಹಳ್ಳಿ (ಸಾಲೆಂ); ಶಾಮಕವುಂಡನ ವಲಸೈ (ಶೇಲಂ); ಕಸುವರಡ್ಡೀ ಹಳ್ಳಿ (ಶೇಲಂ); ಯಲ್ಲೋಜಿ ಗುಡ್ಡ (ನಿ.); ಚಿಂತಾಮಣಿ (ಮೈ.); ಮಾಧವರಾಯಪಾಳ್ಯ (ಮೈ.) ಫ್ರೇಜರಪೇಟೆ; ಬೌರಿಂಗಪೇಟೆ;

ಧಾರ್ಮಿಕ

ವ್ಯಾಸಸಮುದ್ರ; ಶಂಕರಪುರ (ಮೈ.); ಸುರೇಶ್ವರ (?ಧಾ.); ಮದ್ವರಾಯಪುರ (ಕೊಯಿಮತ್ತೂರು); ಅಲ್ಲಂಪೂರ; ಬಸವಾಪಟ್ಟಣ; ಸಾಣಾಪುರ (ಬ.); ಸಾಯಣವರಂ (ತಮಿಳದೇಶ); ವಿದ್ಯಾನಗರ; (?); ಮಾಣಿಕನಗರ;

ಮಮದಾಪುರ (ಮಹಮ್ಮದ?); ರಸೂಲಪೂರ; ಪೈಗಂಬರಪುರ (ನಿಜಾಂ); ಬಾಬಾಬುಡ್ಡನಗಿರಿ;

ಪಾಪಘ್ನೀ (ನದಿ), ಅಘನಾಶನೀ (ನದಿ); ಮಲಾಪಹಾರಿ (ನದಿ); ತೀರ್ಥಹಳ್ಳಿ;

ಭದ್ರಾಪುರ; ಭದ್ರಾವತಿ; ಕಲ್ಯಾಣ; ಮಂಗಳಗಟ್ಟಿ; ಮಂಗಲಗಿ; ಮಂಗಳವಾಡ; ಮಂಗಳೂರು; ಮಂಗಳಾಪುರ (ನಿ.); ಮಂಗಲ (ನಿ.)

ಆನಂದಪುರ (ಮೈ.); ಆನಂದಗಲ್ಲು (ನಿ.); ಆನಂದವಾಡಿ (ನಿ.);

ಊರ ಹೆಸರಿನ ಕೊನೆಯ ಭಾಗದಿಂದ ಸೂಚಿತವಾಗುವ ಗುಂಪುಗಳು

ಇವುಗಳಲ್ಲಿ ಸಾಮಾನ್ಯವಾಗಿ ಎರಡು ದೊಡ್ಡ ಗುಂಪುಗಳನ್ನು ಮಾಡಬಹುದು : ೧. ಊರ (ವಸತಿಕ್ರಮ, ಸಾಂಸ್ಕೃತಿಕ ಹಿನ್ನೆಲೆಯನ್ನು ಸೂಚಿಸುವ) ಇತಿಹಾಸದರ್ಶಕ ಪದಗಳು; ೨. ಊರ ಭೌಗೋಲಿಕ ಸ್ಥಿತಿಗತಿಗಳನ್ನು ಹೇಳುವಂತಹ ಪದಗಳು;

ಮೊದಲನೆಯ ಬಗೆಯವು

೧. ಪಟ್ಟಿ, ಪಾಡಿ, ಹಟ್ಟಿ, ಹಾಳ; ಹಳ್ಳಿ; ಬಾಡು; ಬಾಳು; ವಾಡ; ವಾಡಿ;......ದೊಡ್ಡಿ;

೨. ಕುಡಿ, ಗುಡಿ, ಗೂಡು........ಗುಳಿ-ಗೂಳಿ.....

೩. ಇಲ್; ನೆಲೆ; ಕೋಣೆ; ಮನೆ; ಮಾಡ; ಮಳಿಗೆ; ಅಂಗಡಿ; ಬೀಡು;........ಖೇಡ;.........ಗ್ರಾಮ; ಗಾವ; ಗಾವಿ;............

೪. ಊರು; ನಟ್ಟ; ನಾಡು; ಪುರ; ವರ; ಪೇಟೆ; ಪಟ್ಟಣ; ಈಶ್ವರ.......

೫. ಕೋಟೆ; ಹುಡೆ (ಹುಡ್ಯ); ದುರ್ಗ; ಗಡ; ಬಾಯಿ; ಬಾಗಿಲ........

೬. ಪರಿಗೆ; ಹರವಿ; ಬಡ್ಡಿ; ಬಢಾವಣೆ...........

ಎರಡನೆಯ ಬಗೆಯವು

೧. ತಿಟ್ಟೆ; ಮಿಟ್ಟೆ, ದಿನ್ನೆ; ದಿಬ್ಬ; ಏರಿ; ಮರಡಿ; ಮಾಡ; ಮಾಳ; ಮಟ್ಟಿ;.....

೨. ಮಾಳ; ಮಲೆ; ಗುಡ್ಡ; ಬೆಟ್ಟ; ಗಿರಿ; ಪರ್ವತ;........ಪಹಾಡ..

೩. ಕಂಡಿ (ಖಂಡಿ; ಖಿಂಡಿ); ಕಣಿವೆ; ಘಟ್ಟ;

೪. ಬಂಡಿ; ಕಲ್ಲು; ಶಿಲೆ;........ಕೊಂಬು; ಕೋಡು;.........

೫. ಬಯಲು (ಬೈಲು); ಕಾಡು; ಕಳ; ಅಂಗಳ;........ಹಿತ್ತಿಲು;

೬. ಗುತ್ತ; ಕುಪ್ಪ; ಗುಪ್ಪ; ಕೊಪ್ಪ;.....ಕುಮರಿ; ಕುಂಬಿ; ಏರಿ; ಕುಂದ, ಗುಂದ, ಕೊಂಡ, ಗೊಂಡ, ಗೊಂಡಿ, ಗೊಂದಿ, ಕುಂದರ;

೭. ಪೊಲ; ಪೊಳಲು; ಹೊಲ; ಶೇತ; ಖೇಟ; ತೋಟ; ಗದ್ದೆ; ಮಕ್ಕಿ;

೮. ಏರಿ; ಒಡ್ಡು; ಕಟ್ಟೆ; ಕೆರೆ; ಕುಂಟೆ; ಗುಂಟೆ; ಕೊಳ; ಕೊಳ್ಳ; ಹೊಂಡ; ಬಾವಿ; ಕುಳಿ-ಗುಳಿ; ಗುಣಿ; ಡೋಣಿ; ಮಡು;

.....ಕೋಡಿ; ಹಳ್ಳ; ಹೊಳೆ; ತೊರೆ; ಸರೋವರ; ಸಮುದ್ರ; ಸಾಂದ್ರ; ಸಾಗರ....

ಇವಲ್ಲದೆ ಅಜೆ; ಅಂಜೆ; ಆಜೆ; ಉಂದ; ಉಂತೆ; ತೋಡು; ಓಡು; ಕುರಕಿ; ಮಂಗಲ; ಮೊಗರು ಮುಂತಾದವುಗಳೂ ಉಂಟು.

ಈ ಹೆಸರುಗಳಲ್ಲಿ ಪೂರ್ವಪದವು ಹಲವೆಡೆಗೆ ಸಂಸ್ಕೃತವಾಗಿದ್ದರೂ ಉತ್ತರಪದವು ಸಾಮಾನ್ಯವಾಗಿ ಕಂನುಡಿಯದೇ ಆಗಿರುತ್ತದೆ. ಪುರ, ಗ್ರಾಮ (ಗಾವ, ಗಾವಿ), ಅಗ್ರಹಾರ, ವರ, ಈಶ್ವರ, ಗಿರಿ, ದುರ್ಗ ಇಂತಹ ಕೆಲವನ್ನುಳಿದರೆ ಎಲ್ಲವೂ ದೇಶೀಯವೆ ಆಗಿವೆ. ನದಿ ಮತ್ತು ಪರ್ವತಗಳ ಹೆಸರುಗಳು ಮಾತ್ರ ಹೆಚ್ಚಾಗಿ ಸಂಸ್ಕೃತ ಭಾಷೆಯವೆ ಆಗಿವೆ.

ಜೇನಹುಟ್ಟಿನ ಕಟ್ಟಣದಲ್ಲಿ ಕಾಣಬರುವ ಅಂದ, ಅಚ್ಚುಕಟ್ಟುತನ, ಸುಸಂಬದ್ಧತೆಗಳನ್ನು ಕಂಡು ಯಾರು ಸೋಜಿಗಗೊಳ್ಳಲಿಕ್ಕಿಲ್ಲ? ಮನುಷ್ಯ ಪ್ರಾಣಿಗೆ ನಾಡೆ ಅದರ ಹುಟ್ಟಿ; ಅದರಲ್ಲಿ ಅದು ಪಾಡಿ, ಬೀಡು, ಮನೆಗಳನ್ನು ಕಟ್ಟಿ ನೆಲಸಿರುತ್ತದೆ. ಇದರ ಹುಟ್ಟಿಯ ಹೆಸರುಗಳಲ್ಲಿರುವ ಸೌಂದರ್ಯ, ಸುಸಂಬದ್ಧತೆ, ಮತ್ತು ಅರ್ಥದಲ್ಲಿರುವ ಮಾಧುರ್ಯವನ್ನು ಅನುಭವಿಸಲು ನಮ್ಮಿಂದ ನಾವು ಬೇರೆಯಾಗಿ-ತಟಸ್ಥವೃತ್ತಿಯನ್ನು ತಾಳಿ ನಿಡಿದಾಗಿ ನೋಡುವ ಆವಶ್ಯಕತೆಯಿದೆ.

ಆಂಡಯ್ಯ ಕವಿಯು ಹೀಗೆ ಸ್ವಲ್ಪ ನೋಡಿ ಹಿಗ್ಗಿ ಬೆರಗುವಟ್ಟಿದ್ದಾನೆ.

'ಇವು ಪಳ್ಳಿ,' ಇವು ಪಟ್ಟಣ, ಇವು ಕೆರೆ, ಇವು ಕಾಡು, ಇವು ಬನಂ...ಎಂದು ಪೇಳ್ವುದು ಅರಿದು;' ಕೊಳಂಗಳಿಂ, ಕೆರೆಗಳಿಂ, ಕಾಲೂರ್ಗಳಿಂ, ಕೆಯ್ಗಳಿಂ ಈ ನಾಡು ಕಡು ಚೆಲ್ವಾಯ್ತು' ಎಂದು ಸಂತಸಗೊಂಡು ಉಸಿರಿದ್ದಾನೆ. ನಾಡಿನ ನಗರರಚನೆ, ಸೃಷ್ಟಿಸೌಂದರ್ಯಾದಿಗಳನ್ನು ಕಂಡು ಉಂಟಾಗುವ ಹಿಗ್ಗಿನ ಸುಖವೊಂದು ಬಗೆ. ಈ ಹೆಸರುಗಳ ಹಿಂದೆ ಹುದುಗಿರುವ ಸಾಂಸ್ಕೃತಿಕ ಇತಿಹಾಸದ ಆಳವನ್ನು ಅರಿತುಕೊಳ್ಳುವಾಗ ಆಗುವ ಆನಂದದ ಸಂಸ್ಕಾರವು ಇನ್ನೊಂದು ಬಗೆ. ಮೊದನೆಯದು ಆಗಲೆ ಅನುಭವಿಸಲು ಸಿಕ್ಕುವುದು; ಎರಡನೆಯದು ಪರಿಶ್ರಮದಿಂದ ಸಾಧ್ಯವಾದರೂ ಮನಸಿನ ಹಲವು ತೊಡಕುಗಳನ್ನು ಬಿಡಿಸಿ ಜೀವನ ಸೌಖ್ಯಕ್ಕೆ ಕಾರಣವಾಗುವುದು.

ನಮ್ಮ ಪಾಡಿಯ ಪೂರ್ವ ಕತೆ

ಹಿಂದಿನ ಪ್ರಕರಣದಲ್ಲಿ ಊರು, ವಸತಿಸ್ಥಾನವೆಂಬರ್ಥವು ಬಂದಿರುವ ಹಲವು ಹೆಸರುಗಳನ್ನು ಬೇರೆ ಬೇರೆ ಗುಂಪುಗಳಲ್ಲಿ ವಿಂಗಡಿಸಿ ಕೊಟ್ಟಿದ್ದಾಗಿದೆ. ಅವೆಲ್ಲವುಗಳಲ್ಲಿ ತೀರ ಆರಂಭಕಾಲದ ವಸತಿಸ್ಥಾನವನ್ನು ಸೂಚಿಸುವ ಪದವು ಆವುದು? ಅದನ್ನು ನಿರ್ಧರಿಸಿ ಹೇಳುವುದಕ್ಕೆ ಆಧಾರಗಳೇನು?

ಇದನ್ನು ಕುರಿತು ಇನ್ನೂ ಗ್ರಂಥಗಳು ಪ್ರಕಟವಾಗಿಲ್ಲ; ಅಲ್ಲಿ ಇಲ್ಲಿ ಗ್ರಾಮನಾಮಗಳ ಕೆಲವೊಂದು ಅಭ್ಯಾಸವು ಆಗಿದ್ದರೂ ಇದನ್ನು ಯಾರೂ ನಿರ್ಧರಿಸಿ ಹೇಳಿದಂತಿಲ್ಲ. ಮದರಾಸು, ಮೈಸೂರು, ಮುಂಬೈ ವಿಶ್ವವಿದ್ಯಾನಿಲಯಗಳಲ್ಲಿ ಈ ಬಗೆಗೆ ಸಂಶೋಧನ ನಡೆಸಿ ಯಾರೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿಲ್ಲ; ಆಂಧ್ರ ಮತ್ತು ಉಸ್ಮಾನಿಯಾ ವಿಶ್ವವಿದ್ಯಾನಿಲಯದ ವಿಚಾರ ತಿಳಿದಿಲ್ಲ.

ಇದನ್ನು ತಿಳಿದುಕೊಳ್ಳಲು ಹಳೆಯ ಕೋಶಾದಿಗಳಿಗೆ ಮೊರೆಯಿಟ್ಟರೆ ಅವುಗಳಿಂದ ಯಾವ ಸಮಾಧಾನಕರವಾದ ಉತ್ತರವು ದೊರೆಯುತ್ತಿಲ್ಲ. ಕವಿಕಂಠಹಾರ, ಚತುರಾಸ್ಯನಿಘಂಟು ಮೊದಲಾದುವುಗಳಲ್ಲಿ ಗ್ರಾಮನಾಮಗಳ ಉಲ್ಲೇಖವು ಕೂಡ ಒಂದೆಡೆಯಲ್ಲಿಲ್ಲ. ನಾಗವರ್ಮನು ಅನುಸರಿಸಿದ್ದು ಮುಖ್ಯವಾಗಿ ಸಂಸ್ಕೃತ ಅಮರಕೋಶವನ್ನೇ. ಗ್ರಾಮ, ಸಂವಸಥ, ಖೇಟ ಎಂಬೀ ಬಗೆಯ ಹೆಸರುಗಳಲ್ಲದೆ ಅಚ್ಚ ಕಂನಾಡ ನೆಲೆವೀಡುಗಳ ಸುಳಿವೆ ಅಲ್ಲಿಲ್ಲ.

ನನಗೆ ಈ ಕಗ್ಗತ್ತಲೆಯಲ್ಲಿ ಮುಂದುವರಿಯಲು ನಮ್ಮ ನಾಡಿನ ಪೂರ್ವಪರಂಪರೆಗಳೆ ಒಂದು ದೊಡ್ಡ ಆಧಾರ. ಅಲ್ಲದೆ ಈ ದಿಕ್ಕಿನಲ್ಲಿ ಕೆಲವೊಂದು ನಿಶ್ಚಿತವಾದ ಹಾದಿಯನ್ನು ತೋರಿ ಬೆಳಕು ಕೊಡಲು ಇನ್ನೊಂದು ಮಹತ್ವದ ಸಾಧನವಿದೆ. ಮಾನವನೆಂಬ ಪ್ರಾಣಿಯ ಈ ಲೋಕದೊಳಗಿನ ಸಾಮಾಜಿಕ ವಿಕಾಸದ ಕ್ರಮವನ್ನು ಸಂಶೋಧಕರು ನಿಃಸಂದೇಹವಾದ ರೀತಿಯಲ್ಲಿ ಕಂಡುಹಿಡಿದಿದ್ದಾರೆ. ಜಗತ್ತಿನ ಯಾವ ಮೂಲೆಯಲ್ಲಾದರೂ ಸಾಮಾನ್ಯವಾಗಿ ಮಾನವ ಸಮಾಜವು ಬೆಳೆದು ಬಂದ ಬಗೆಯು ಒಂದೇ ತೆರನಾಗಿದೆ. ಆದುದರಿಂದ ಮಾನವ ಸಮಾಜದ ವಿಕಾಸಕ್ರಮದ ಇತಿಹಾಸವೂ ಇಲ್ಲಿ ಒಂದು ಅತ್ಯಂತ ಮಹತ್ವದ ಸಾಧನವಾಗಿದೆ.

ಗ್ರಾಮ, ಊರು, ಪುರ ಎಂಬಿವು ನನ್ನ ತಿಳುವಳಿಕೆಯಂತೆ ಅಷ್ಟು ಪುರಾತನವಲ್ಲ. ಗ್ರಾಮ ಮತ್ತು ಪುರ ಎಂಬವು ನಮ್ಮ ನಾಡಿನಲ್ಲಿ ಅಷ್ಟು ವಿಶೇಷವಾಗಿಲ್ಲ. ಅಲ್ಲದೆ ಹಳ್ಳಿಗರ ಬಾಯಿಗೆ ಸರಿಹೋಗುವ ಮಾತುಗಳೂ ಇವಲ್ಲ. ಆದುದರಿಂದ ಇವು ನಮ್ಮ ಮೂಲ ನಾಡವರೇ ಕಟ್ಟಿಕೊಂಡ ಊರುಗಳೆಂದು ಗ್ರಹಿಸಲಿಕ್ಕಾಗುವುದಿಲ್ಲ. 'ಊರು' ಎಂಬುದು ಈಗ ಜನಸಾಮಾನ್ಯರ ಬಾಯಲ್ಲಿರುವುದು ನಿಜ. ಆದರೆ 'ಊರು' ಎಂಬ ಮಾತು ಮಾನವನ ಪ್ರಾಥಮಿಕ ಬಿಡಾರದ ಸೂಚಕವಾಗಿಲ್ಲ. ಊರು, ನಾಡು, ನೆಲೆ ಇವೆಲ್ಲವೂ ಊರಿಕೊಂಡು, ನಟ್ಟುಕೊಂಡು ಸ್ಥಿರವಾಗಿ ನಿಂತಕಾಲದ ನೆಲೆವೀಡುಗಳೆಂದು ಆ ಶಬ್ದಗಳಿಂದಲೆ ಹೊರವಡುತ್ತದೆ.

ಮಾನವನು ಪ್ರಾಥಮಿಕ ಸ್ಥಿತಿಯಲ್ಲಿ ಆಹಾರ ಸಂಚಯಕ್ಕಾಗಿ ಅಲೆಯಬೇಕಾಗುತ್ತಿದ್ದಿತು. ಈ ಪ್ರಾಥಮಿಕ ಸ್ಥಿತಿಯಲ್ಲಿ ಎರಡು ಮೆಟ್ಟುಗಳಿವೆ. ಮೊದಲನೆಯದು ಬೇಟೆಗಾರಿಕೆ; ಎರಡನೆಯದು ದನಗಾರಿಕೆ. ಬೇಟೆಯಾಡಿ ಬದುಕುವುದು ತೀರ ಆರಂಭಕಾಲದ ಸ್ಥಿತಿ; ಬಳಿಕ ಮಾನವನಿಗೆ ತನ್ನ ಸುತ್ತಲಿನ ಪ್ರಾಣಿಗಳ ಪರಿಚಯವು ಹೆಚ್ಚಾದಂತೆ ಅವುಗಳಲ್ಲಿ ತನಗೆ ಉಪಯುಕ್ತವಾದುವುಗಳನ್ನು ಸಾಕಿಕೊಂಡಿರುವುದನ್ನು ಕಲಿತನು. ದನಗಳನ್ನು ಸಾಕಿಕೊಂಡು ಬದುಕುವಾಗಲೂ ಅವುಗಳ ಆಹಾರಕ್ಕಾಗಿ ಮಾನವನಿಗೆ ಅಲೆದಾಟವು ತಪ್ಪಿದ್ದಿಲ್ಲ. ಗುಡ್ಡ, ನದಿ, ಕೊಳ್ಳಗಳ ಗುಂಟ ಹುಲ್ಲು, ನೀರು ಇದ್ದ ಕಡೆಗೆ ಹುಡುಕುತ್ತ ಹೋಗಬೇಕಾಗುತ್ತಿತ್ತು.

ಆದಕಾರಣ ಆರಂಭದ ವಸತಿಸೂಚಕವಾದ ಹೆಸರು 'ಊರು' 'ನಾಡು', 'ನೆಲೆ'ಯಂತಹ ಊರಿಕೊಂಡು, ನಟ್ಟುಕೊಂಡು ನೆಲಸಿದಂತಹದು ಆಗಿರಲಾರದು. 'ಬೀಡು' ಎಂಬಲ್ಲಿ ತಾತ್ಪೂರ್ತಿಕ ವಸತಿಸ್ಥಾನವೆಂಬರ್ಥವುಂಟು. ಆದಕಾರಣ ಬೀಡು, ಬೀಡಿ, ಬೀಡ ಎಂಬೀ ಬಗೆಯ ಹೆಸರಿನ ಎಡೆಗಳೇ ಆರಂಭದ ವಸತಿಸ್ಥಾನಗಳಾಗಿರಬಹುದೆ? ಎಂಬ ಒಂದು ವಿಚಾರವು ಹೊಳೆಯುತ್ತದೆ. ಆದರೆ ಬೀಡಿನಲ್ಲಿ ದನಗಾರಿಕೆಯ ಅಥವಾ ಬೇಟೆಗಾರಿಕೆಯ ಅರ್ಥಸೂಚಕವಾದ ಏನೊಂದು ದನಿಯೂ ಕೇಳಬರುವುದಿಲ್ಲ.

'ಹಟ್ಟಿ' ಎಂಬಲ್ಲಿ ಈ ದನಿಯಿದೆ. ಹಟ್ಟಿ ಎಂದರೆ ಗುಡಿಸಲು; ಹಟ್ಟಿ ಎಂದು ದನಗಳ ಕೊಟ್ಟಿಗೆಗೂ ಹೆಸರು. ಜೀವಧನಂಗಳ 'ಹಟ್ಟಿ', ಗೋಸ್ಥಾನಕವೆಂದು ಕೋಶವು ಹೇಳುತ್ತದೆ. ಗೋಕುಲ, ವ್ರಜ, ಘೋಷ ಎಂಬ ಸಂಸ್ಕೃತ ಪದಗಳಿಗೆ ಇದು ಸಮಾನಾರ್ಥಕವಾಗಿದೆ. ಹಟ್ಟಿಯ ಮೇಲಣ ಕೆಲವು ಗಾದೆಗಳಿವೆ: ಹಟ್ಟಿಗೆ ಗತಿಯಿಲ್ಲದವನು ಮಠ ಕಟ್ಟುವನೆ? ಹಟ್ಟೀಲಿ ಹುಟ್ಟಿದ್ದಲ್ಲ; ಕ್ರಯಕ್ಕೆ ಕೊಂಡುದಲ್ಲ; ಪರಮಗತಿಯೆಂಬುದು ನೆರೆಮನೆಯ ಹಟ್ಟಿಯೆ? ಬಿಟ್ಟೀ ಆಳು ಆದರೆ ಹಟ್ಟಿ ಕಟ್ಟಬಾರದೆ? ಮಟ್ಟು ತಿಳಿದ ನಾಯಿ ಹಟ್ಟಿಯಲಿ ಇದ್ದೀತೆ? ಇಲ್ಲಿ ಮನೆಯೆಂಬಂತೆ ದನಗಳ ಹಕ್ಕಿ ಎಂಬ ಅರ್ಥವೂ ಧ್ವನಿತವಾಗುತ್ತದೆ.

ಈ ಕಾರಣಗಳಿಂದ 'ಹಟ್ಟಿ' ಎಂದರೆ ಜನ ಮತ್ತು ದನಗಳ ವಾಸಸ್ಥಾನ, ಬಿಡಾರ, ತುರಕಾರ-ದನಗಾರರ ನಿವಾಸವೆಂಬುದು ಸ್ಪಷ್ಟ. ತುರುಕಾರ ದನಗಾರರಿಗೇ ಹಟ್ಟಿಕಾರರೆಂದು ಇರುವ ಹೆಸರು ಇಲ್ಲಿ ಮನನೀಯವಾಗಿದೆ. ಆರಿಯ ಮಾತಿನಲ್ಲಿ ಹಟ್ಟಿಕಾರ ದನಗಾರರಿಗೇ 'ಹಟಗಾರ-ಧನಗರ'ರೆಂದು ಕರೆವ ವಾಡಿಕೆಯುಂಟು. 'ಧನಗರ' ಮತ್ತು 'ಹಟಗಾರ' ಇವೆರಡೂ ಪದಗಳ ವ್ಯುತ್ಪತ್ತಿಯು ಆರಿಯ ಮಾತಿನಿಂದ ಆಗುತ್ತಿಲ್ಲವೆಂದು ಶ್ರೀ ಶಂಕರರಾವ ಲಾಂಡೆ ಇಂದೂರ (ಹೋಳಕರ), ಇದೇ ಜಾತಿಯ ಗೃಹಸ್ಥರು ಪ್ರಕಟಿಸಿದ ತಮ್ಮ ಪ್ರಬಂಧದಲ್ಲಿ ಸ್ಪಷ್ಟವಾಗಿ ಒಪ್ಪಿಕೊಂಡಿದ್ದಾರೆ. ಇವೆರಡೂ ಶಬ್ದಗಳ ಮೂಲಾರ್ಥವನ್ನು ತಿಳಿಯಲು ಆರಿಯರಿಗೆ ಕಂನುಡಿಯ ನೆರವನ್ನು ಕೋರಲೇಬೇಕು. ಧನ ತದ್ಭವ ದನ; ಧನಗರರೆಂದರೆ ದನಗಾರರೆಂದು ಅರ್ಥ. ಕುರುಬರಿಗೆ ಆರಿಯರಲ್ಲಿ ದನಗಾರ ಅರ್ಥಾತ್ ಧನಗರರೆಂದು ಹೇಳುವರು. ಹಟಗಾರವೆಂಬುದು ಹಟ್ಟಿಕಾರ ಶಬ್ದದ ಮರ್‍ಹಾಟಿ ಉಚ್ಚಾರ. ವರ್‍ಹಾಟ, ಇಂದೂರಿನ ಕಡೆಯ ಹಲವು ಪಾಟೀಲರೂ, ದೇಶಮುಖರೂ, 'ಹಟಗಾರ'ರಾಗಿದ್ದಾರೆ. ಹಟಗಾರ-ಧನಗರ ಶಬ್ದವು ಪರಸ್ಪರ ಸ್ಪಷ್ಟೀಕರಣ ಮಾಡುವ ಜೋಡುನುಡಿ.

ಆದಕಾರಣ 'ಹಟ್ಟಿ' ಎಂಬ ನಿವಾಸಸ್ಥಾನವಾಚಕ ಶಬ್ದವು ದನಗಾರಿಕೆಯ ಬಾಳಿನ ದ್ಯೋತಕವಾಗಿದೆಯೆಂಬಲ್ಲಿ ಸಂದೇಹವಿಲ್ಲ. ಆದುದರಿಂದ ಹಟ್ಟಿಗಳೇ ನಮ್ಮ ನಾಡಿನ ಆರಂಭಕಾಲದ ವಸತಿಗಳೆಂದು ಊಹಿಸಬಹುದಾಗಿದೆ. 'ಪಕ್ಕಣ' ಎಂದರೆ ಬೇಡಪಳ್ಳಿ, ಎಂದು ಕೋಶಗಳಿಂದು ತಿಳಿದುಬಂದರೂ, ಈಗ ಪಕ್ಕಣ ಅಥವಾ ಹಕ್ಕಣಗಳು ಇದ್ದುದು ಎಲ್ಲಿಯೂ ಕಂಡುಬರುವುದಿಲ್ಲ. ಸಾಹಿತ್ಯ ಶಾಸನಾದಿಗಳಲ್ಲಿಯೂ ಅವುಗಳ ಉಲ್ಲೇಖವು ಸಿಕ್ಕುವುದಿಲ್ಲ. ಆದರೆ ಹಟ್ಟಿಗಳು ಮಾತ್ರ ಕಂನಾಡಿನ ತುಂಬ ಎಲ್ಲೆಲ್ಲಿಯೂ ಇವೆ.

ದನಗಾರಿಕೆಯ ಕಾಲದ ನಿವಾಸಗಳು ಉಳಿದಿರುವಂತೆ ಬೇಟೆಗಾರಿಕೆಯ ಮಟ್ಟವನ್ನು ಸೂಚಿಸುವ ಹೆಸರುಗಳು ನಮ್ಮ ನಾಡಿನಲ್ಲಿ ಸ್ಪಷ್ಟವಾಗಿ ದೊರೆಯುತ್ತಿಲ್ಲವೆಂದು ಹೇಳಬೇಕಾಗುತ್ತದೆ. ಅತಿಪುರಾತನ ಶಿಲಾಯುಗದ ಅವಶೇಷಗಳು ಸಿಕ್ಕುವುವಾದರೂ ಆ ವಸತಿಗಳ ಅಂದಿನ ಹೆಸರುಗಳೇನೆಂಬುದು ತಿಳಿಯುವುದು ಕಷ್ಟವಾಗಿದೆ.

ಕಂನುಡಿಯಲ್ಲಿ ಹಕಾರವೆ ಇಲ್ಲ. ಹಕಾರದ ಉಚ್ಚಾರವು ಅರ್ವಾಚೀನ. ಆದಕಾರಣ 'ಹಟ್ಟಿ' ಎಂಬ ಹೆಸರಾದರೂ ಅರ್ವಾಚೀನ; ಇದು ಪುರಾತನದ್ದೆಂಬುದು ಭ್ರಾಂತಿ, ಎಂದು ಕೆಲರು ಹೇಳಬಹುದಾಗಿದೆ; ನಿಜ. ಹಟ್ಟಿಗಳು 'ಹಟ್ಟಿ' ಎಂಬ ಇದೇ ಹೆಸರಿನಿಂದಲೇ ಎಂದಿನಿಂದಲೂ ಇದ್ದುವೆಂಬ ಅಭಿಪ್ರಾಯವಿಲ್ಲ. ಅಂದು ಅವು 'ಪಟ್ಟಿ' ಎಂದು ಕರೆಯಲ್ಪಡುತ್ತಿದ್ದುವು. 'ತುಪ್ಪಮಂ ಕೊಳಲೆಂದು ಪಲಂಬರ್ ಭೃತ್ಯರ್ ವೆರಸು ತುರುಪಟ್ಟಿಗೆ ಬಂದು' ಎಂಬ ವಚನವು ನಯಸೇನನ (ಕ್ರಿ.ಶ. ೧೧೧೨) ಧರ್ಮಾಮೃತದಲ್ಲಿ ದೊರೆಯುತ್ತದೆ. ಹಟ್ಟಿ ಶಬ್ದದ ಮೊದಲ ರೂಪವು ಪಟ್ಟಿ ಎಂದಿದೆ. ಸೇಲಂ ಮೊದಲಾದ ಕಡೆಗೆ 'ಕುರಂಬರ ಪಟ್ಟಿ' ಎಂಬ ಹೆಸರಿನ ಹಳ್ಳಿಗಳು ಉಂಟು. ಈ 'ಪಟ್ಟಿ'ಯೆ ನಮ್ಮಲ್ಲಿ ಹಟ್ಟಿಯಾಗಿ ಬಳಕೆಯಲ್ಲಿದೆ.

'ಪಟ್ಟಿ' ಎಂಬುದರಿಂದ ಅದರ ಮೂಲ ಧಾತ್ವರ್ಥವೂ ಚೆನ್ನಾಗಿ ತಿಳಿದುಬರುತ್ತದೆ. 'ಪಡು' ಧಾತುವಿನಿಂದ ಬಂದ ಮಾತಿದು. ಪಟ್ಟುಕೊಂಡಿರುವ ಎಡೆಯೆ ಪಟ್ಟಿ. ಪಟ್ಟಿ ಶಬ್ದಕ್ಕೆ ಕಿಟ್ಟೆಲ್ಲ ಕೋಶದಲ್ಲಿ ಹೀಗೆ ಅರ್ಥ ಹೇಳಿದೆ: A place of lying down; a pen or fold; an abode; a hamlet; ತುರುಕಾರರ ಪಟ್ಟಿ (ಗೋಷ್ಠ; ಆ ಭೀರ ಪಲ್ಲಿ); ತಮಿಳ ಕೋಶದಲ್ಲಿ ಹೇಳಿದ ಅರ್ಥಗಳಿವು: 1. Cow stall; sheep fold; 2. a measure of land as sufficient for a sheep fold; 3. hamlet, village; ಇದರಂತೆ 'ಪಟ್ಟು' ಎಂದರೂ ಪಟ್ಟಿ, ಹಟ್ಟಿ (ಮನೆ, ಹಳ್ಳಿ) ಎಂಬ ಅರ್ಥವಿದೆ, ತಮಿಳಿನಲ್ಲಿ.

ಪಟ್ಟಿ ಅಥವಾ ಹಟ್ಟಿ ಎಂಬಲ್ಲಿ ಊರು, ನಾಡು, ನೆಲೆಗಳಂತೆ ಸ್ಥಿರವಾದ ವಾಸಸ್ಥಾನವೆಂಬರ್ಥವು ಅಡಕವಾಗಿಲ್ಲ. ಪಟ್ಟುಕೊಂಡಿರುವ ಎಂದರೆ ಈಗ ಇದ್ದ ಅಥವಾ ಇರುವ ಎಡೆ, ಎಂದು ಮಾತ್ರ ಭಾವ. ಸ್ಥಿರವಾದ 'ಊರು' ಎಂಬರ್ಥವು ಇದಕ್ಕೆ ಕಾಲಾಂತರದಿಂದ ದೊರೆಕೊಂಡಿತು. ಮೂಲದಲ್ಲಿ ಈ ಅರ್ಥವಿಲ್ಲ. ಆದಕಾರಣ, ಪಟ್ಟಿಯು ನಮ್ಮ ನಾಡವರ ದನಗಾರಿಕೆಯ ಕಾಲದ ಬಿಡಾರವೆಂದು ನಿಶ್ಚಿತವಾಗುತ್ತದೆ.

ಆದರೆ, ಇಂದು ಎಲ್ಲೆಲ್ಲೂ ಕಾಣಿಸಿಕೊಳ್ಳುವ ಪಟ್ಟಿ, ಹಟ್ಟಿಗಳೆಲ್ಲವೂ ಅಂದಿನ, ಸಾವಿರಾರು ವರುಷಗಳ ಹಿಂದಣ ದನಗಾರಿಕೆಯ ಮಟ್ಟದಲ್ಲಿಯೆ ತಲೆದೋರಿದುವೆಂದು ಹೇಳಿದರೆ ಅದು ಅಸಂಬದ್ಧವೇ ಸರಿ. ಆದರೂ 'ಪಟ್ಟಿ' ಎಂಬುದು ಈ ನಾಡವರ ತೀರ ಆರಂಭಕಾಲದಲ್ಲಿ ದನಗಾರಿಕೆಯ ಮಟ್ಟದ ಬಿಡಾರವೆಂಬುದು ನಿಶ್ಚಿತ. ಪುರಾತನ ಇತಿಹಾಸ ಸಂಶೋಧನೆಗೆ ನುಡಿವಳಿಯು ಕೊಡುವ ನೆರವು ಇದಿಷ್ಟು. ಇದಕ್ಕೂ ಮುಂದಿನ ಕೆಲಸ ಪುರಾಣವಸ್ತು ಸಂಶೋಧನ ತಜ್ಞರದು. ಈಗಿರುವ ಪಟ್ಟಿ, ಹಟ್ಟಿಗಳಲ್ಲಿ ಪುರಾತನದುವು ಯಾವುವು? ಈಗ ಎಲ್ಲೆಲ್ಲಿವೆ? ಎಂಬುದನ್ನು ಅಗೆತದಿಂದ ಹಾಗೂ ಬೇರೆ ಪ್ರಮಾಣಗಳಿಂದ ಕಂಡುಹಿಡಿಯುವ ಕೆಲಸವು ಅವರದು.

ಇತ್ತೀಚೆಗೆ ಊರು ಎಂಬುದು ಹೆಚ್ಚು ಬಳಕೆಯಲ್ಲಿದ್ದರೂ ಹಿಂದಕ್ಕೆ ಅದು ಅಷ್ಟು ಪ್ರಚಾರದಲ್ಲಿ ಇದ್ದಿಲ್ಲ. ಪಾಂಡವರು ಅಜ್ಞಾತವಾಸದಿಂದ ಮರಳಿ ಬಂದ ಬಳಿಕ 'ಅಯ್ದು ಬಾಡಮಂ ಅವರ್ಗೀವುದು' ಎಂದು ಕೃಷ್ಣನು ಕೌರವನಿಗೆ ಹೇಳಿದ ಹಾಗೆ ಪಂಪನು ವರ್ಣಿಸಿದ್ದಾನೆ. ೧೦ನೆಯ ಶತಮಾನದಲ್ಲಿ ಊರು ಎಂಬರ್ಥದಲ್ಲಿ 'ಬಾಡ' ಶಬ್ದವು ಬಳಕೆಯಲ್ಲಿರಬೇಕು. 'ಬಾಡ' ವೆಂಬುದು ಪಟ್ಟಿಯ ಬಳಗಕ್ಕೆ ಸೇರಿದ ಪದವಾಗಿದೆ. ಪಟ್ಟಿಯು ಎಷ್ಟು ವಿವಿಧ ರೂಪತಾಳಿ ನಮ್ಮ ನಾಡಿನಲ್ಲಿ ನೆಲೆಸಿದೆಯೆಂಬುದನ್ನು ನಿರೀಕ್ಷಿಸಿದರೆ 'ಪಟ್ಟಿ'ಯ ವಿಸ್ತಾರದ ಬಗೆಗೆ ಸಂದೇಹವೆ ಉಳಿಯುವುದಿಲ್ಲ.

ಪಟ್ಟಿ <————————————————————> **ಹಟ್ಟಿ**

ಪಾಡು, ಪಾಡಿ; ಪಟ್ಟಿ, ಪಟ್ಟು; ಪಟ್ಟಣ, ಪಾಟಣ, ಪಾಟಣಾ; ಪಟ್ಟ, ಪಾಟಕ, ಪಟ್ವಾರ (ಪೇಠಾ);
ಪಾಡು- ಪಾಡಾ, ಪಾರಾ........... ಪಾರಾ-ಹಾರಾ, ಹಾರ, ಹರ........ಅರ
ಪಾಡು-ಆಡು; ಪಾಡಿ-ಆಡಿ
ಪಾಡು-ಬಾಡು, ಬಾಡ; ಬಾಳು, ಬಾಳ;
ಪಾಡು-ವಾಡು, ವಾಡ, ವಾಡಾ, ವಾಡೆ; ವಡ, ವಡಿಗೆ, ವಾಡ-ವಾಳ, ವಳ, ವಲ

ಪಟ್ಟಿ-ಪಾಟ, ಪಾಟಿ, ವಾಟ, ವಾಟಕ; ವಾಟಿ, ವಾಟಿಕಾ.........ವಠಾರ, ವಾಠಾರ;
ಪಟ್ಟಿ- ಪಾಟಿ, ಪ್ಯಾಟಿ ....ಪಾಟ, ಪಾಟಕ ....ಪೇಟ, ಪೇಟೆ; ಪೇಠ, ಪೇಠಾ, ಪಾಠಾರ (ಆರೇ),
ಪಟ್ಟಿ-ಹಟ್ಟಿ, ಪಟ್ಟ-ಹಟ್ಟ, ಪಾಟ-ಹಾಟ, ಪಾಟಕ-ಹಾಟಕ, ಪಾಡಿ-ಹಾಡಿ, ಪಾಡು-ಹಾಡು, ಹಾಡ;
ಪಾಡು-ಪಾಳು, ಹಾಳು, ಹಾಳ.......ಆಳ,.........ಆಲ.......
ಪಟ್ಟಿ-ಪಾಡಿ-ಪಳ್ಳಿ-ಪಾಳಿ (ಮರ್ಹಾಟಿ),.. ಪಾಳ್ಯ
ಪಟ್ಟಿ-ಪಾಡಿ-ಪಳ್ಳಿ...ಹಳ್ಳಿ, ಪಲ್ಲಿ, ಪಲ್ಯ,
ಪಳ್ಳಿ-ವಳ್ಳಿ.....ಓಳಿ, ಳಿ, ಲಿ.....

ಪಟ್ಟಿ, ಪಾಡಿ ಎಂಬುದರಲ್ಲಿ ಅಡಕವಾಗಿರುವ ಮಾನವನ ಪ್ರಾಥಮಿಕ ಸ್ಥಿತಿದರ್ಶಕವಾದ ಅರ್ಥವು ಗ್ರಾಮವಾಚಕಗಳಾದ ಬೇರೆ ಇನ್ನಾವ ಪದಗಳಲ್ಲಿಯೂ ಇಲ್ಲ. ಪಟ್ಟಿ, ಪಾಡಿ ಎಂದರೆ ಪಟ್ಟಿರುವ ಎಡೆ. ಪಡು ಎಂದರೆ ಅನುಭವಿಸು, ಇರು; ಜೀವನದ ಸಿಹಿ, ಕಹಿಗಳನ್ನು ಅನುಭವಿಸುವ, ಇರುವ ಇಕ್ಕೆ, ನಿವಾಸವೇ ಪಟ್ಟಿ, ಪಾಡಿ; ಪಾಡು ಎಂದರೆ ಜೀವನ, ಬದುಕು, ಇರುವು; ಪಾಡು ಇದುವೆ ನಮ್ಮ ಬಾಡು ಎಂದರೆ ಊರು, ಬದುಕು. ಪಾಡು=ಬಾಡು=ಬಾಳು ಎಲ್ಲವೂ ಮೂಲದಲ್ಲಿ ಒಂದೇ.

ಪಟಿ, ಪಾಡಿ ಎಂಬುದು ನಮ್ಮ ನಾಡವರು ಹಟ್ಟಿಕಾರರಾಗಿದ್ದ ಕಾಲದ ಬಾಳನ್ನು ಸೂಚಿಸುವುದು. 'ದಕ್ಷಿಣಾಪಥ' ಎಂಬುದು ಈ ನಾಡಿಗೆ ವೈದಿಕರ ಹೆಸರು. ಆದರೆ ಪಟ್ಟಿ ಅಥವಾ 'ಪಾಡಿ' ಎಂಬುದೇ ಈ ಭಾಗದ ನಿಜವಾದ ಪುರಾತನ ಹೆಸರೆಂದು ನನ್ನ ತಿಳುವಳಿಕೆ. 'ಕರ್ಣಾಟ'ವೆಂಬುದು ತೀರ ಅರ್ವಾಚೀನ ಕಾಲದಲ್ಲಿ ತಲೆದೋರಿದ ಪದ. ಕ್ರಿಸ್ತಾಬ್ದದ ೨-೩ನೆಯ ಶತಮಾನಕ್ಕೆ ಹಿಂದೆ ಈ ಹೆಸರು ಇನ್ನೂ ಖ್ಯಾತಿಯನ್ನು ಪಡೆದಿರಲಿಲ್ಲ. ಪಾಡಿಯು ದಕ್ಷಿಣಾಪಥದಲ್ಲಿ ಎಲ್ಲೆಡೆಗೂ ವ್ಯಾಪಿಸಿರುವುದು ಪಾಡಿಯ ಹೆಸರು ಒಂದಿಲ್ಲೊಂದು ಬಗೆಯಲ್ಲಿ ದೊರೆಯದೆ ಇರುವ ದೇಶ-ವಿಭಾಗವೆ ದಕ್ಷಿಣಾಪಥದಲ್ಲಿ ದೊರೆಯದು. ಪಟ್ಟಿ, ಪಾಡಿ, ವಾಡಿ, ಮುಂತಾದ ಈ ಮೊದಲು ವಿವರಿಸಿದ ಒಂದಿಲ್ಲೊಂದು ಎಡೆಯು ಎಲ್ಲೆಲ್ಲೂ ಇದ್ದೇ ಇದೆ. ವರಹಟ್ಟ (ವರಾಡ), ಮರಹಟ್ಟ (ಮರಾಡ), ಕರಹಟ್ಟ (ಕರಾಡ) ಗಳು, ದಕ್ಷಿಣಾಪಥವು ಹಟ್ಟಿಯಾಗಿದ್ದಿತೆಂಬುದನ್ನೆ ಸಿದ್ಧಪಡಿಸುತ್ತವೆ. ಸಪ್ತಾರ್ಧ ಲಕ್ಷ ರಟ್ಟಪಾಡಿಯ ಪ್ರಾಚೀನ ಉಲ್ಲೇಖವುಂಟು. ನರ್ಮದೆಯಿಂದ ಕಾವೇರಿಯ ವರೆಗಣ ನಾಡೆಲ್ಲವೂ ಇದರಲ್ಲಿ ಸುಮಾರಾಗಿ ಒಳಗೊಳ್ಳುತ್ತದೆ. ಮೈಸೂರಿನ ಭಾಗವು 'ಗಂಗವಾಡಿ' ಎಂಬ ಹೆಸರಿನಿಂದ ಪ್ರಸಿದ್ಧವಾಗಿದ್ದಿತು. ಪಾಡಿ ನಾಲ್ಕು ನಾಡೆಂದು ಕೊಡಗಿನಲ್ಲುಂಟು.

ಕಥಾಸರಿತ್‌ಸಾಗರದಲ್ಲಿ ನಾಸಿಕದ ತ್ರ್ಯಂಬಕೇಶ್ವರನಿಗೆ ಹಾಟಕೇಶ್ವರನೆಂಬ ಹೆಸರುಂಟು. ಇದರಂತೆ ದಕ್ಷಿಣದಲ್ಲಿ ಶ್ರೀಶೈಲದ ಮಲ್ಲೇಶ್ವರನಿಗೂ ಹಾಟಕೇಶ್ವರನೆಂಬ ಅಭಿಧಾನವಿದ್ದುದು ಬಸವ ಪುರಾಣದಿಂದ ತಿಳಿದುಬರುತ್ತದೆ. ಶ್ರೀಶೈಲದ ಮಲ್ಲಯ್ಯನು ಹಟ್ಟಿಕಾರ-ದನಗಾರರ ಆರಾಧ್ಯದೈವತವು. ಈಗಲೂ ಶಿವರಾತ್ರಿಗೆ ಅಲ್ಲಿ ನೆರೆಯುವ ಜಾತ್ರೆಯೆ ಇದಕ್ಕೆ ಸಾಕ್ಷಿ. ೧೧ನೆಯ ಶತಮಾನದ ವಿಜಾಪೂರ ಜಿಲ್ಹೆಯ ಒಂದು ಶಾಸನದಲ್ಲಿ ಆ ಭಾಗದಲ್ಲಿಯೂ ಒಂದು ಹಾಟಕೇಶ್ವರ ಕ್ಷೇತ್ರವಿದ್ದುದು ಹೇಳಿದೆ. ಹಾಟಕೇಶ್ವರನೆಂಬುದರ ಅರ್ಥವೇನು? ಹಾಟಕರ ಎಂದರೆ ಹಟ್ಟಿಕಾರರ ಈಶ್ವರನು, ಎಂದೇ ಅಲ್ಲವೆ? ಬಳ್ಳಾರಿ ಜಿಲ್ಹೆಯ ಹೊಸಪೇಟೆ ಮತ್ತು ರಾಯದುರ್ಗ ಭಾಗದಲ್ಲಿ ಪಟ್ಟನಾಡ ಎಲ್ಲಮ್ಮನ ಎರಡು ಹೆಸರಾದ ದೇವಸ್ಥಾನಗಳಿವೆ. ಹಾಟಕೇಶ್ವರ ಮತ್ತು ಪಟ್ಟನಾಡ ಎಲ್ಲಮ್ಮ ಈ ಕ್ಷೇತ್ರಗಳ ನಡುವಣ ನಾಡಿಗೆ ಪಟ್ಟನಾಡು, ಹಾಟಕ ಅಥವಾ ಹಟ್ಟಿ ಎಂಬ ಹೆಸರಿದ್ದಿತೆಂದೇ ಇನ್ನೊಂದು ರೀತಿಯಿಂದಲೂ ಸಿದ್ಧವಾಗುತ್ತದೆ.

ಪಾಡಿ ಅಥವಾ ಪಟ್ಟಿ ನಾಡವರಿಗೆ ಪಟ್ಟಿಗಳು, ಪಟ್ಟಿಕಾರರು ಅಥವಾ ಹಟ್ಟಿಕಾರರೆಂದು ಹೆಸರಿರುವುದು ಸ್ವಾಭಾವಿಕವಾಗಿದೆ. ಹಟ್ಟಿಕಾರರು, ತುರುಕಾರ-ದನಗಾರರೆಂದು ಹೇಳಿದರೆ ಹಟ್ಟಿ, ಪಟ್ಟಿ, ಪಾಡಿ ಶಬ್ದದ ಅರ್ಥವನ್ನೆ ಮತ್ತೆ ವಿಶದೀಕರಿಸಿದಂತಿದೆ. ಪಟ್ಟಿ (ವಾಡಿ) ಗಳೆಂದು ಜನಾಂಗವಿದ್ದುದಾಗಿ ವರಾಹಮಿಹಿರನು ಹೇಳುತ್ತಾನೆ.

ಪಟ್ಟಿ ಅಥವಾ ಪತ್ತಿ ಶಬ್ದಕ್ಕೆ ಒಂದು ಜನವೆಂಬರ್ಥವನ್ನು ಮೋನಿಯರ ವಿಲಿಯಂಸನು ಹೇಳಿದ್ದಾನೆ. ಉತ್ತರ ಕಂನಡದ ಗ್ಯಾಝಿಟಿಯರಿನಲ್ಲಿ, ಆ ಭಾಗದಲ್ಲಿ ಪಟ್ಟಿ (Padti) ಎಂಬ ಜನಗಳಿದ್ದು ಅವರು ಒಕ್ಕಲತನ ಮತ್ತು ದನಗಾರಿಕೆ ಮಾಡುತ್ತಿರುವುದಾಗಿ ವರ್ಣನೆಯಿದೆ. ಈ ಜನಗಳು ಹಟ್ಟಿಕಾರರೇ ಆಗಿರಬೇಕೆಂದು ನನ್ನ ಊಹೆ. ಪಾಟೀಲವೆಂದು ಈಗಲೂ ನಮ್ಮಲ್ಲಿ ಬಳಕೆಯಲ್ಲಿರುವ ಪದವು ಇದನ್ನೇ ಪುಷ್ಟೀಕರಿಸುತ್ತದೆ. ಪಾಟಿಲವೆಂಬುದರ ಮೂಲ ರೂಪವು ಪಟ್ಟಿಲವೆಂದು ಇರಬೇಕು. ಪಟ್ಟಿ ಇದುವೆ ಪಾಟಿ, ಪಾಟ ಎಂದೂ ರೂಪತಾಳುವುದನ್ನು ಈ ಮೊದಲಿನ ಪಟ್ಟಿ ಶಬ್ದದ ಬಳಗದ ವಿವರಣೆಯಲ್ಲಿ ಕಂಡುಕೊಳ್ಳಬಹುದು. ಪಟ್ಟಿ ಅಥವಾ ಪಾಟಿ ಇಲ್ಲವೆ ಪಾಟ ಶಬ್ದಕ್ಕೆ ಇಲ್ಲ ಎಂಬ ಪ್ರತ್ಯಯವು ಸೇರಿ ಪಟ್ಟಿಲ-ಪಾಟಿಲವೆಂಬ ರೂಪವು ಸಿದ್ಧವಾಗುತ್ತದೆ. "ಅದರೊಳ್ ಈತಂ ವರ್ತಿಪನೆಂಬಲ್ಲಿ ಇಲ ಪ್ರತ್ಯಯಂ ಅಕ್ಕುಂ" (ಶಮದ, ೨೦೫) ಎಂದು ಇಲ ಪ್ರತ್ಯಯದ ಅರ್ಥವನ್ನು ವ್ಯಾಕರಣದಲ್ಲಿ ಹೇಳಿದೆ. ಆದಕಾರಣ ಪಟ್ಟಿಲನು ಎಂದರೆ ಪಟ್ಟಿ (ಹಟ್ಟಿ)ಯಲ್ಲಿ ಇರತಕ್ಕವನು. ಆದಕಾರಣ ಹಟ್ಟಿಕಾರನೆಂಬುದು ಪಾಟಿಲ ಶಬ್ದದ ಪರ್ಯಾಯಪದವಾಯಿತು. ವರ್ಹಾಟದಲ್ಲಿ ಪಾಟೀಲರಲ್ಲಿ 'ಹಟಗಾರ'ರೆಂದು ಕೆಲವು ವರ್ಗದವರಿದ್ದುದಾಗಿ ಅಲ್ಲಿಯ ಗ್ಯಾಝಿಟಿಯರುಗಳಿಂದ ತಿಳಿದು ಬರುತ್ತದೆ. ಹಟ್ಟಿಕಾರ ಅಥವಾ ಹಟಗಾರರೆಂದರೆ ತುರುಕಾರರು, ಗೋವಳರೆಂದು ಅರ್ಥವು. ಗೋವಳಶಬ್ದವೇ ಗೌಳ-ಗೌಡವೆಂಬ ರೂಪತಾಳಿದುದನ್ನು ಸಿದ್ಧಪಡಿಸಬೇಕಾದ ಅವಶ್ಯವಿಲ್ಲ. ಈ ತೆರನಾಗಿ ಪಾಟಿಲ ಮತ್ತು ಗೌಡ ಎಂಬ ಶಬ್ದಗಳು ಮೂಲ ಒಂದೇ ಅರ್ಥದ ಮಾತುಗಳೆಂದು ಸಿದ್ಧವಾಗುತ್ತದೆ. ನಮ್ಮ ನಾಡಿನಲ್ಲೆಲ್ಲ ಗೌಡರಿಗೆ ಪಾಟಿಲರೆಂದೂ, ಪಾಟಿಲರಿಗೆ ಗೌಡರೆಂದೂ ಹೇಳುವ ನಡೆವಳಿಯೂ ನುಡಿವಳಿಯೂ ಎಂದಿನಿಂದಲೂ ನಡೆದುಬಂದಿದೆ.

ಕೇಶಿರಾಜನು, ಇಲ ಪ್ರತ್ಯಯಕ್ಕೆ 'ಅಲ್ಲಿ ಪಿರಿದುಂ ವರ್ತಿಪ' ನೆಂಬಲ್ಲಿ ಗಾವಿಲ ಎಂಬ ಒಂದೇ ಉದಾಹರಣವನ್ನು ಶಬ್ದ-ಮಣಿ-ದರ್ಪಣದಲ್ಲಿ ಕೊಟ್ಟಿದ್ದಾನೆ. ಪಟ್ಟಿಲ ಅಥವಾ ಪಾಟಿಲವೆಂಬುದನ್ನು ಅಲ್ಲಿ ಹೇಳಿಲ್ಲ. ಆದಕಾರಣ ಪಾಟಿಲ (ಪಟ್ಟಿಲ) ಶಬ್ದದ ವ್ಯುತ್ಪತ್ತಿಯನ್ನು ಒಪ್ಪಿಕೊಳ್ಳಲು ಬಲ್ಲಿದರಿಗೆ ಕೆಲರಿಗೆ ತುಂಬ ಇತಿಮಿತಿ! ಹಿಂದಿನ ಪುಸ್ತಕಗಳಲ್ಲಿ ಹೇಳದೆ ಇದ್ದುದನ್ನು ಇಂದಿನವರ ಮಾತಿನ ಮೇಲೆಯೆ ನಂಬಿ ಅಹುದೆಂದು ಸ್ವೀಕರಿಸುವುದು ಹೇಗೆ? ಹಟ್ಟಿಕಾರರು ಅಥವಾ ಕರ್ಣಾಟದ ವೀರ ಕ್ಷತ್ರಿಯರು ಎಂಬ ಪುಸ್ತಕದಲ್ಲಿ ೧೨ ವರುಷಗಳ ಹಿಂದೆಯೆ ಈ ವ್ಯುತ್ಪತ್ತಿಯನ್ನು ವಿವರಿಸಿದಾಗ 'ಇದಕ್ಕೆ ಬೇರೆ ಪ್ರಮಾಣಗಳು ಏನಾದರೂ ಉಂಟೆ?' ಎಂದು ಕೆಲವು ಮಿತ್ರರು ಕೇಳಿದ್ದರು. ಗಾವ (ಗ್ರಾಮ)ದಲ್ಲಿ ಇರುವನು ಎಂಬರ್ಥದಲ್ಲಿ 'ಗಾವಿಲ' ಹೇಗೆ ಆಗುವುದೊ ಹಾಗೆಯೆ ಪಟ್ಟಿಯಲ್ಲಿ ಇರುವವನು ಎಂಬರ್ಥದಲ್ಲಿ 'ಪಟ್ಟಿಲ (ಪಾಟಿಲ)' ಎಂದಾಗುವುದು ಎಂದು ಈವರೆಗೆ ನನ್ನ ಉತ್ತರವಿದ್ದಿತು. ಕಲಕತ್ತಾ ವಿಶ್ವವಿದ್ಯಾನಿಲಯದಲ್ಲಿ ಪ್ರಾಕೃತದ ಪ್ರಾಧ್ಯಾಪಕರಾದ ಪಂಡಿತ ಶೇಠರ 'ಪಾಇಅ-ಸದ್ದ-ಮಹಾಣ್ಣವೋ' ಎಂಬ ಪ್ರಾಕೃತ ಕೋಶವು ದೊರೆತ ಬಳಿಕ ಅದರಲ್ಲಿಯೂ ಇದೇ ಬಗೆಯಾಗಿ ಇದರ ನಿರುಕ್ತವನ್ನು ಹೇಳಿದ್ದಾಗಿದೆಯೆಂದು ಕಂಡುಬಂದಿತು. ಅದರಿಂದ ನನ್ನ ಮತವನ್ನು ಇನ್ನೂ ಹೆಚ್ಚು ದೃಢವಾಗಿ ಈಗ ಹೇಳಲು ಶಕ್ಯವಾಗಿದೆ. 'ಪಟ್ಟ ಇಲ್ಲ (ಪುಲ್ಲಿಂಗ, ದೇಶೀನಾಮ,) ಪಟೇಲ, ಗ್ರಾಮ ಮುಖ್ಯ, ಎಂದು ಅದರಲ್ಲಿ ಅರ್ಥ ಹೇಳಿದೆ. ಮತ್ತು 'ಜಂಬೂ ದ್ವೀಪ ಪ್ರಜ್ಞಪ್ತಿ' ಹಾಗೂ 'ಸುಪಾಸನಾಹ ಚರಿಅ' ಎಂಬ ಎರಡು ಗ್ರಂಥಗಳಲ್ಲಿ ಅದು ಬಂದಿರುವುದಾಗಿ ಆಧಾರವನ್ನೂ ಅಲ್ಲಿ ಕೊಟ್ಟಿದೆ.

ಕೆಲರಿಗೆ ಇನ್ನೊಂದು ಸಂದೇಹವುಂಟಾಗಬಹುದು. 'ಪಟ್ಟ ಇಲ್ಲ' ಅಥವಾ ಪಟ್ಟಿಲ-ಪಾಟಿಲವೆಂಬುದು ಗ್ರಾಮಾಧಿಕಾರಿಯೆಂಬರ್ಥದಲ್ಲಿದೆಯೆ ಹೊರತು ಗ್ರಾಮದಲ್ಲಿ ಇರುವವ ಎಂಬರ್ಥವನ್ನು ಅಲ್ಲಿ ಹೇಳಿಲ್ಲ. ಗೌಡ ಅಥವಾ ಪಟ್ಟಿಲವೆಂಬುದು ಈಗ ಹೆಚ್ಚಾಗಿ ಗ್ರಾಮಾಧಿಕಾರಿಯೆಂಬರ್ಥದಲ್ಲಿರುವುದೂ ನಿಜ. ಆದರೆ, ನಮ್ಮ ಹಳ್ಳಿಗರ ಪರಿಚಯವಿದ್ದವರಿಗೆ ಈ ಸಂದೇಹವು ಹೆಚ್ಚು ಹೊತ್ತು ಉಳಿಯಲಾರದು. ಏಕೆಂದರೆ ಅಲ್ಲಿ ಗೌಡ ಅಥವಾ ಪಾಟಿಲ ಎಂಬ ಒಂದು ವ್ಯಕ್ತಿಯಲ್ಲ, ಜನ ಇದ್ದುದೂ ಕಂಡುಬರುತ್ತದೆ. ಗೌಡ ಅಥವಾ ಪಾಟಿಲವೆಂಬುದು ಕೇವಲ ಅಧಿಕಾರವಾಚಕ ಪದವು ಮಾತ್ರವಲ್ಲ. ಗೋವೆಯ ಪ್ರಾಂತದಲ್ಲಿ 'ಗಾವಡಾ' ಎಂಬ ಒಕ್ಕಲರ

ಜಾತಿಯೆ ಇದೆ. ಕನ್ನಡ ಜಿಲ್ಹೆ, ಮೈಸೂರ ಸಂಸ್ಥಾನದಲ್ಲೂ ಗೌಡ ಜನ ಉಂಟು. ಮೂಲದಲ್ಲಿ ಇದು ಒಂದು ಜನವಾಚಕ ಪದವಿದ್ದು ಬಳಿಕ ಆ ಜನಗಳಲ್ಲಿಯೆ ಒಬ್ಬರು ಗ್ರಾಮಾಧಿಕಾರಿಗಳಾಗಿ ಇರುವ ರೂಢಿಯಿದ್ದುದರಿಂದ ಅದಕ್ಕೆ ಅಧಿಕಾರಿಯೆಂಬ ಅರ್ಥವು ಪ್ರಾಪ್ತವಾಗಿದೆ. ನಮ್ಮಲ್ಲಿ 'ಸಾಬರು' ಎಂದು ಮುಸಲ್ಮಾನರಿಗೆ ಹೇಳುವ ವಾಡಿಕೆ. ಒಂದು ಕಾಲಕ್ಕೆ ಇವರೇ ಮುಖ್ಯಾಧಿಕಾರಿಗಳಾಗಿರುತ್ತಿದ್ದುದರಿಂದ ಸಾಹೇಬವೆಂಬ ಪದವು ಹೆಚ್ಚಿನ ಅಧಿಕಾರಿ ಎಂಬ ವಿಶೇಷಾರ್ಥವನ್ನು ಹೊಂದಿತು. ಇಂದು ಸಾಬರಲ್ಲದವರು-ಎಂದರೆ ಭಿನ್ನ ಜಾತಿಯವರಾಗಿದ್ದರೂ ಅವರು ಸಾಹೇಬರಾಗಬಲ್ಲರು! ಪಾಟಿಲ ಅಥವಾ ಗೌಡ ಎಂಬುದೂ ಹೀಗೆಯೆ ಇದೆ.

ಈ ನಾಡ ಮೊದಲಿಗರಾದ 'ಪಟ್ಟಿ'ಗಳು ಯಾರು? ಎಂಬುದನ್ನು ನಿರ್ಧರಿಸಿಕೊಳ್ಳಲು ಬಹಳ ದೂರ ಹೋಗಬೇಕಾಗಿಲ್ಲ. ಬಹಳ ಶ್ರಮಪಡುವ ಅವಶ್ಯಕತೆಯಿಲ್ಲ. ಪಟ್ಟಿಯಲ್ಲಿ ಇರುವವರು ಪಟ್ಟಿಗಳು, ಇವರೆ ಪಟ್ಟಿಲರು, ಇವರೆ ಹಟ್ಟಿಕಾರ ಗೌಳರು. ನಮ್ಮ ನಾಡಿನ ಪೂರ್ವ ಪರಂಪರಾಗತ ಪಾಟಿಲ ಅಥವಾ ಗೌಡರ ಮನೆತನಗಳನ್ನು ವಿಚಾರಿಸಿದರೆ ಆ ಪುರಾತನ ಪೀಳಿಗೆಯು ಎಂದಿನಿಂದಲೂ ಅಖಂಡವಾಗಿ ಈ ವರೆಗೆ ನಡೆದುಬಂದುದನ್ನು ಮನಗಾಣಬಹುದು. ಇವರೊಳಗಿಂದಲೆ ನಮ್ಮ ಪುರಾತನ ಅರಸುಮನೆತನಗಳು ತಲೆಯೆತ್ತಿದುವು. ಗೌಳ-ಗೋಪನೆಂದು ರಾಜನಿಗೆ ಹೆಸರು. ಗೌಡರು, ನಾಡಗೌಡರೆ ರಾಷ್ಟ್ರಿಕರು, ರಾಷ್ಟ್ರಪತಿಗಳಾಗಿದ್ದುದನ್ನು ಇತಿಹಾಸವು ಹೇಳುತ್ತದೆ. ಗೌಡ ಅಥವಾ ಪಾಟಿಲರು ಇಂದು ಕೆಲರು ಬ್ರಾಹ್ಮಣರಿರಬಹುದು. ಆದರೆ ನಿಜವಾದ ಗೌಡ ಅಥವಾ ಪಟ್ಟಿಲರ ಮೂಲಮನೆತನಗಳು ಬ್ರಾಹ್ಮಣರಲ್ಲವೆಂಬುದನ್ನು ನಮ್ಮ ನಾಡಿನ ಪೂರ್ವಪರಂಪರೆಯನ್ನರಿತವರಿಗೆ ಬೇರೆ ಹೇಳಬೇಕಾಗಿಲ್ಲ. ಇವರು, ಈಗ ಜೈನ ವೀರಶೈವಾದಿ ಧರ್ಮಗಳ ಹೆಸರಿನಲ್ಲಿ ಅಥವಾ ದೇಶ ವಿಭಾಗಗಳಿಂದ ಸಂಬಂಧ ಸಂಪರ್ಕವು ತಪ್ಪಿ, ಒಬ್ಬರಿಂದೊಬ್ಬರು ಬೇರೆಯೆನಿಸುತ್ತಿರಬಹುದು. ಆದರೆ, ವಂಶಪರಂಪರಾಗತವಾದ ಪಟ್ಟಿಲ ಅಥವಾ ಗೌಡರ ಮನೆತನಗಳೆಲ್ಲ ಮೂಲದಲ್ಲಿ ಒಂದೆ ಬುಡಕಟ್ಟಿನವು; ಅಂದಿನ ಅವರೆ ನಮ್ಮ ಘಾಡಿಯ ಮೊದಲಿಗರು; ನಮ್ಮ ನಾಡಿನ ಮೂಲ ಜನ.

ಗೌಡ ಮತ್ತು ಪಟ್ಟಿಲ ಶಬ್ದಗಳು ನಮ್ಮ ನಾಡವರ ಪೂರ್ವಚರಿತೆಯನ್ನು ಹೇಳಲು ಸಿದ್ಧವಿದ್ದೂ ನಮ್ಮ ಸಂಶೋಧಕರು ಈ ವರೆಗೆ ಅತ್ತ ಕಿವಿಗೊಡದೆ ಇದ್ದುದು ಸೋಜಿಗ! ಕಲ್ಬರೆಹಗಳಲ್ಲಿ ಬರೆದುದಷ್ಟೆ ಇತಿಹಾಸವೆಂದು ನೆರೆ ನಂಬಿದ ವಿದ್ವಾಂಸರೂ ಪುಸ್ತಕಗಳಲ್ಲಿ ಬರೆದುದರ ಹೊರತಾಗಿ ಉಳಿದುದೆಲ್ಲ ಸುಳ್ಳು ಎಂಬ ಗ್ರಹಿಕೆಯ ಪಂಡಿತರೂ ಇನ್ನುಳಿದ ದಿಕ್ಕಿನಿಂದ ಬರುವ ಬೆಳಕಿಗೆ ಎರವಾಗುತ್ತಾರೆ. ಬೆಳಕು ಯಾವ ಬದಿಯಿಂದ ಬಂದರೂ ಅದು ಸ್ವಾಗತಾರ್ಹವೇ. ಬರೆದ ಸಂಗತಿಗಳ ಮೇಲೆ ಕೈಯೂರಿಕೊಂಡು ಕುಳಿತು ಜೀವನದಲ್ಲಿ ಕಾಣುವ, ಕೇಳಬರುವ ಪ್ರತ್ಯಕ್ಷ ವಿಷಯಗಳನ್ನು ಕಡೆಗಣಿಸುವುದು ವಿಚಾರಿಗಳಿಗೆ ಒಪ್ಪದ ಮಾತು. ಸತ್ಯವನ್ನು ಅರಿಯಲು ಪುಸ್ತಕ ಮತ್ತು ಪ್ರತ್ಯಕ್ಷ ಎರಡರ ಸಹಾಯವನ್ನು ಪಡೆಯಬೇಕು. ಇವುಗಳಲ್ಲಿ ಯಾವುದೊಂದನ್ನೇ ಆಧಾರವಾಗಿಟ್ಟುಕೊಳ್ಳುವುದರಿಂದ ಸತ್ಯಸಂಶೋಧನದಲ್ಲಿ ಪ್ರಗತಿಯಾಗದು. 'ಗೆರೆಸೊಪ್ಪೆಯ ಜೋಗದ ಜಲಪಾತವು ಪಂಪನ ಕಾಲದಲ್ಲಿಯೂ ಇದ್ದುದಾಗಿದ್ದರೆ, ಬನವಾಸಿ ದೇಶವನ್ನು ಬಣ್ಣಿಸಿದ ಆ ಮಹಾಕವಿಯು ಇಂತಹ ಅದ್ಭುತ ಸೌಂದರ್ಯವನ್ನು ಹೇಗೆ ತಾನೆ ಕಡೆಗಣಿಸಿ ತೀರ ಮರೆತು ಬಿಟ್ಟಾನು? ಪಂಪನಷ್ಟೆ ಅಲ್ಲ, ಕಂನಾಡ ಬೇರೆ ಯಾವ ಮಹಾಕವಿಯಾಗಲಿ ಇದನ್ನು ಉಲ್ಲೇಖಿಸಿಲ್ಲ. ಆದಕಾರಣ, ಆ ಕಾಲದಲ್ಲಿ ಈ ಜಲಪಾತವೇ ಇರಲಿಲ್ಲ. ಇದು ಇತ್ತೀಚೆಗೆ ಆಗಿದೆ ಎಂದು ಪುಸ್ತಕಗಳ ಕೈಯಲ್ಲಿಯೆ ತನ್ನ ವಿಚಾರ, ವ್ಯವಹಾರ-ಬುದ್ಧಿಗಳನ್ನೆಲ್ಲ ಒಪ್ಪಿಸಿದ ವಿದ್ವಾಂಸನು ಪ್ರತಿಪಾದಿಸಿದರೆ ನಾವು ಸೋಜಿಗಗೊಳ್ಳಬೇಕಾದುದಿಲ್ಲ. ಪಟ್ಟಿಲ ಶಬ್ದವು ನಮ್ಮ ಸಾಹಿತ್ಯ ಶಾಸನಾದಿಗಳಲ್ಲಿ ಎಲ್ಲಿಯೂ ಬಂದಿಲ್ಲ. ಆದಕಾರಣ ಇದು ನಮ್ಮ ಭಾಷೆಯ ಶಬ್ದವೇ ಅಲ್ಲ; ಮರ್‍ಹಾಟಿಯ ಮಾತು ಎಂದು ಭ್ರಾಂತಿ ಪಟ್ಟುಕೊಂಡವರು ಬೇಕಾದಷ್ಟು ಜನಗಳಿದ್ದಾರೆ. ಅತ್ತ ಮರ್‍ಹಾಟಿಗಳಿಗೂ ಈ ಮಾತಿನ ಅರ್ಥವು ತಿಳಿಯದೆ ಒದ್ದಾಡುತ್ತಲಿದ್ದಾರೆ! ಮಹಾರಾಷ್ಟ್ರ ಶಬ್ದಕೋಶವು ಪಾಟೀಲ ಶಬ್ದಕ್ಕೆ 'ಪಟ್ಟಕೀಲ' ಎಂದು ಏನೋ ಒಂದು ವ್ಯುತ್ಪತ್ತಿಯನ್ನು ಹೇಳಿದ್ದೇ

ಇದಕ್ಕೆ ಸಾಕ್ಷಿ. 'ಪಟ್ಟಕೀಲ' ವೆಂಬ ಸಂಸ್ಕೃತಪದದಿಂದ ಇದು ಬಂದಿತೆಂದು ಹೇಳುವುದಾದರೆ, ಮೊದಲು ಸಂಸ್ಕೃತ ಭಾಷೆಯಲ್ಲಾದರೂ ಇಂತಹ ಪದಪ್ರಯೋಗವಿದ್ದ ಉದಾಹರಣಗಳು ದೊರೆಯಬೇಕಲ್ಲವೆ?

ಗೌಡಶಬ್ದದ ವಿಚಾರದಲ್ಲೂ ಹೀಗೆಯೆ ದಿಗ್ಭ್ರಾಂತಿಯುಂಟಾಗಿದೆ. ನಮ್ಮ ಶಾಸನಗಳಲ್ಲಿ ಇದು ಕಾಣಿಸಿಕೊಂಬ ರೀತಿಯೇ ಬೇರೆ. ಗಾಮುಂಡ, ಗಾವುಂಡ ಎಂಬ ತೆರನಾದ ರೂಪಗಳು ಪ್ರಾಚೀನ ಶಾಸನಗಳಲ್ಲಿವೆ; ಗಾಮುಂಡ-ಗಾವುಂಡ-ಗವುಡ ಬಳಿಕ ಗೌಡ ಎಂದು ಈಗಿನ ರೂಪವೆಂಬುದಾಗಿ ಹಲವರ ಗ್ರಹಿಕೆಯಿದೆ. ಆದರೆ, ಇದೆಲ್ಲವೂ ಸರಿಯಾಗಿ ತಿರುವು ಮುರುವಾಗಿದೆಯೆಂದು ನನ್ನ ತಿಳುವಳಿಕೆ. ಮೂಲ ಉಚ್ಚಾರವೆ ಗೌಡವೆಂದಿದ್ದು ಶಾಸನಗಳನ್ನು ಬರೆದ ಕಾಲದ ಸುಮಾರಿಗೆ ಗೌಡ(ಳ)ರ ಆ ಪುರಾತನ ಪರಂಪರೆಯ ಅರ್ಥವು ಜನಗಳಲ್ಲಿ ಮರೆತು ಹೋಗಿದ್ದಿತು. ಗೌಡರು ಗ್ರಾಮಾಧಿಕಾರಿಗಳಾಗಿಯೂ ಇರುತ್ತಿದ್ದುದರಿಂದ ಗೌಡ ಶಬ್ದಕ್ಕೂ ಗ್ರಾಮಾಧಿಕಾರಕ್ಕೂ ತಳಕುಹಾಕಿದರು. ಗ್ರಾಮಾಧಿಕಾರಿಯೆಂಬ ಅರ್ಥವನ್ನೆ ಮುಖ್ಯವಾಗಿ ಕಣ್ಣೆದುರಿಗೆ ಇಟ್ಟುಕೊಂಡು 'ಗೌಡ' ಎಂಬ ರೂಢ ಶಬ್ದಕ್ಕೆ ನಿರುಕ್ತವನ್ನ ಹೇಳಹೋಗಿ, ಅದು ಗ್ರಾಮ ಶಬ್ದಕ್ಕೆ ಸಂಬಂದ ಪಟ್ಟಿರಲಿಕ್ಕೆಬೇಕೆಂಬ ತರ್ಕಸರಣಿಯ ಸುಳಿಯಲ್ಲಿ ಸಿಕ್ಕುಬಿದ್ದಿರಲಿಕ್ಕೆ ಬೇಕು. ಈ ದೃಷ್ಟಿಯಿಂದ ಗೌಡ? ಶಬ್ದವನ್ನು ಗ್ರಾಮಪದಕ್ಕೆ ಹತ್ತಿರ ಬರುವಂತೆ ತಿದ್ದಿಕೊಂಡರೆಂದು ಊಹಿಸಬೇಕಾಗುತ್ತದೆ. ಹೀಗಾಗಿ, ಮೂಲ ಗೌಡ ಶಬ್ದವು ಪ್ರೌಢರ ಶಾಸನಾದಿ ಲೇಖನಗಳಲ್ಲಿ ಕೆಲಕಾಲ ಗಾಮುಂಡ, ಗಾವುಂಡ, ಗವುಡ ಎಂಬ ರೂಪತಾಳಿದರೂ ಮತ್ತೆ ಜನರು ಬಳಕೆಯಲ್ಲಿ 'ಗೌಡ' ಎಂಬ ತನ್ನ ಮೊದಲಿನ ರೂಪದಲ್ಲಿಯೆ ಈಗಲೂ ಉಳಿದುಕೊಂಡಿದ್ದುದು ಕಂಡುಬರುತ್ತದೆ.

ಗೌಡವು ಗಾಮುಂಡವಾಗುವುದಕ್ಕೆ ಇನ್ನೂ ಒಂದು ಕಾರಣವಿರಬಹುದಾಗಿದೆ. ಗೌಳರ ಹಲವು ಪಂಗಡಗಳು ದನಗಾರಿಕೆಯಿಂದ ಕ್ರಮವಾಗಿ ಸಾಮಾಜಿಕ ಪ್ರಗತಿಪಥದಲ್ಲಿ ಮುಂದುವರಿದುವು. ಗ್ರಾಮಾಧಿಕಾರಿಗಳೂ, ಪ್ರಾಂತಾಧಿಕಾರಿಗಳೂ, ರಾಜ್ಯಾಧಿಕಾರಿಗಳೂ ಹಲವರಾದರು. ಅದರಿಂದ ಗೋವಳರಾದ ಗೌಡರಿಗೂ ಗ್ರಾಮಾಧಿಕಾರಿಗಳಾಗಿ ಸಾಮಾಜಿಕ ಮೇಲ್ಮಟ್ಟದಲ್ಲಿ ಹೋದ ಮನೆತನಗಳ ಗೌಡರಿಗೂ ಭೇದವನ್ನು ಸಷ್ಟಪಡಿಸುವ ಆವಶ್ಯಕತೆಯುಂಟಾಗಿರುವುದು ಸಹಜ. ಇಲ್ಲವಾದರೆ ಮಾತಿನಲ್ಲಿ ಗೌಡಪದವು ಸಂದಿಗ್ಧಾರ್ಥಕ್ಕೆ ಕಾರಣವಾಗುತ್ತದೆ. ಅರ್ಥವ್ಯತ್ಯಾಸಕ್ಕಾಗಿ ಒಂದೇ ಶಬ್ದವು ಎರಡೂ ರೂಪದಲ್ಲಿ ವ್ಯವಹರಿಸುವುದು ಎಲ್ಲ ಭಾಷೆಗಳಲ್ಲಿಯೂ ವಾಡಿಕೆಯಾಗಿದೆ. ಪಡೆ-ಹಡೆ; ಪುಡಿ-ಹುಡಿ; ಹಾಲು ಮತ್ತು ಹಾಲಾ ಮುಂತಾದುವು ಇದಕ್ಕೆ ನಿದರ್ಶನ.

ತಮ್ಮ ಪಾಂಡಿತ್ಯದ ಜೋರಿನಲ್ಲಿ ಸಹಜ ಶಬ್ದಗಳನ್ನು ತಿದ್ದಿ ಗ್ರಂಥಗಳಲ್ಲಿ ಬರೆದರೂ ಅವು ತಮ್ಮ ಮೂಲದಿಂದ ಕದಲದೆ ಇದ್ದುದನ್ನು ಇನ್ನೂ ಹಲವು ಉದಾಹರಣಗಳಲ್ಲಿ ಕಂಡುಕೊಳ್ಳಬಹುದಾಗಿದೆ. ಸಂಸ್ಕೃತದಂತೆ ಕಂನುಡಿಯಲ್ಲಿಯೂ ಪಂಚಮೀ ವಿಭಕ್ತಿಯನ್ನು ನಿರ್ಮಿಸಿಕೊಳ್ಳಬೇಕೆಂದು 'ಅತ್ತಣ್' ಎಂದು ಹೊಸದಾಗಿ ಸೇರಿಸಿಕೊಂಡುದು ಕೆಲಕಾಲ ಪ್ರೌಢಗ್ರಂಥಗಳಲ್ಲಿ ಮಾತ್ರ ಉಳಿದಿತು. ಜನರ ಬಳಕೆಯಲ್ಲಿ ಮತ್ತೆ ಮೊದಲಿನ 'ಇಂದ' ಎಂಬುದಷ್ಟೆ! ಪಾಂಡಿತ್ಯವು ಹಲವು ಬಾರಿ ಕೃತ್ರಿಮತೆಗೆ, ಅಸ್ವಾಭಾವಿಕತೆಗೆ ಕಾರಣವಾಗುತ್ತದೆ. ಹಲವು ಬಾರಿ ಪಾಂಡಿತ್ಯದ ತಿದ್ದುಪಾಡಿನಿಂದ ಮೂಲಾರ್ಥವೂ ಸಹಜತೆಯೂ ಮಾಸಿಹೋಗುತ್ತವೆ. ಆದಕಾರಣ ಭಾಷೆಯೊಳಗಿನ ಅನೇಕ ಶಬ್ದಗಳ ವ್ಯುತ್ಪತ್ತಿಯನ್ನು ಕಂಡುಹಿಡಿಯಲು, ಸಾಹಿತ್ಯದೊಳಗಿನ ಗ್ರಂಥಸ್ಥ ರೂಪಗಳಿಗಿಂತಲೂ ಲೋಕವ್ಯವಹಾರದೊಳಗಣ ವಾಡಿಕೆಯ ಮಾತುಗಳೇ ಇಂತಹ ಸಂದರ್ಭದಲ್ಲಿ ಹೆಚ್ಚು ಸಹಾಯಕವಾಗಿರುತ್ತದೆ. ಏಕೆಂದರೆ ಅವೇ ಮೂಲರೂಪಕ್ಕೆ ಹೆಚ್ಚು ಹತ್ತಿರ ಹತ್ತಿರದಲ್ಲಿರುತ್ತವೆ. 'ಪೇಟೆ' ಎಂಬ ಶಬ್ದದ ರೂಪ ಸಿದ್ಧಿಯನ್ನು ಪೇಠ, ಅಥವಾ ಪೇ(ಂ)ಠ, ಪೇಂಟೆ, ಪೇಟ, ಪೇಟಾ ಇವಾವ ಉಚ್ಚಾರಗಳಿಂದಲೂ ಕಂಡುಹಿಡಿಯುವುದು ಸಾಧ್ಯವಿಲ್ಲ. ಕಿಟ್ಟೆಲ್ಲರು ಇದು ಪರಭಾಷೆಯ ಪದವೆಂದು ಗ್ರಹಿಸಿದ್ದಾರೆ. ತಮಿಳಿನಲ್ಲಿ ಪೇಟ್ಟೈ ಎಂಬ ರೂಪವಿದೆ. ತಮಿಳು ಕೋಶಕಾರರು ಅದು ಆರಿಯ ಮಾತಿನಿಂದ ಬಂದಿತೆಂದು ಭ್ರಮಿಸಿದ್ದಾರೆ, ಪೇಟಕ ಪೇಠದಿಂದ ಪೇಟ್ಟೈ, ಪೇಟೆ ಎಂದು ಅವರ ಗ್ರಹಿಕೆ. ತೆಲುಗಿನಲ್ಲಿ ಪೇಂಟ ಎಂದು ರೂಪವಿದೆ. ಇದು ಮರ್ಹಾಟಿಯಂತೆ ಅನುಚ್ಚಾರಿತ ಅನುಸ್ವಾರವಿರಬೇಕು. ಮರಾಠಿ ಪೇಠ; ಸಿಂಧೀ ಪೇಠೋ; ಪೇಠಿ; ಗುಜರಾತಿ

ಪೇಠೂ; ಬಂಗಾಲಿ, ಪೈಠಾ; ನೇಪಾಳ ಪೈಠಾರಿ ಇತ್ಯಾದಿಯಾಗಿ ಉತ್ತರದ ಭಾಷೆಗಳಲ್ಲಿ ಇದು ರೂಪತಾಳಿದೆ. ಮರ್‍ಹಾಟಿ ಶಬ್ದಕೋಶಕಾರರು ಇದನ್ನು 'ಪೀಠ' ಎಂಬ ಸಂಸ್ಕೃತದಿಂದ ಬಂದುದಾಗಿ ಗ್ರಹಿಸಿದ್ದಾರೆ. ಸಬಕೀ ಬೋಲಿ ಎಂಬ ಹಿಂದೀ ಕೋಶಕಾರರು 'ಪ್ರವಿಷ್ಟ' ಎಂಬ ಸಂಸ್ಕೃತ ಪದದಿಂದ ನಿಷ್ಪನ್ನ ಶಬ್ದವೆಂದು ಸೂಚಿಸಿದ್ದಾರೆ.

ಹಳೆ ಮರ್‍ಹಾಟಿಯಲ್ಲಿ ಪೇಠ ಎಂಬ ಪ್ರಯೋಗವಿಲ್ಲ. ಜ್ಞಾನೇಶ್ವರಿ (೧೨೯೬ ಕ್ರಿ. ಶ) ಗ್ರಂಥದಲ್ಲಿ 'ಪೇಟಾ' ಎಂಬ ಪ್ರಯೋಗವು ಸಿಕ್ಕುವುದು. ಅಲ್ಲಿ ಪೇಟಾ, ಪೇಟೆಗೆ ಇರುವ ಅರ್ಥವು ಸಂತೆ ಎಂದೇ ಇದೆ. ಸಂತೆ-ಪೇಟೆ ಎಂಬ ಜೋಡು-ನುಡಿ ನಮ್ಮಲ್ಲುಂಟು. ಮರ್‍ಹಾಟಿಯಲ್ಲಿ ಹಾಟ ಎಂಬ ಒಂದು ಪದವು ಪೇಟೆ ಎಂಬರ್ಥದಲ್ಲುಂಟು; 'ಬಾಜರ-ಹಾಟ' 'ಹಾಟವಟ' ಎಂಬುವು ಸಂತೆ-ಪೇಟೆ ಎಂಬರ್ಥದ ಜೋಡುನುಡಿಗಳು ಮರ್‍ಹಾಟಿಯಲ್ಲಿ ಹಾಟ, ಹಟ್ಟ, ಹಟ್ಟಿ ಎಂಬುದನ್ನು ಪಾಟ, ಪಟ್ಟ, ಪಟ್ಟಿ, ಎಂಬೀ ರೀತಿಯಾಗಿ ಮೂಲಕ್ಕೆ ತಿರುಗಿಸಿಕೊಂಡರೆ ಇದರ ನಿಜ ಸ್ವರೂಪದ ಮೇಲೆ ಚೆನ್ನಾಗಿಯೆ ಬೆಳಕು ಬೀಳುವುದು. ಪಾಟ ಎಂಬುದೇ ಪೇಟ, ಪೇಟೆ ಎಂದು ಮುಂದೆ ಬಳಕೆಯಲ್ಲಿ ಬಂದಿತೆಂದು ನಿಶ್ಚಿತವಾಗುತ್ತದೆ. 'ಸಾಂತಿ-ಪಾಟಕ' ಎಂಬ ಒಂದು ಊರು ಬಂಗಾಲದಲ್ಲಿ ಉಂಟು. ಹಾಟಿ-ಪೇಟಾವೆಂಬ ಊರು ವಿಶಾಖಾಪಟ್ಟಣ ಜಿಲ್ಲೆಯಲ್ಲಿದೆ. 'ಹಾಟ-ವಟ' ಎಂಬ ಪ್ರಯೋಗವು ಮರ್‍ಹಾಟಿ ಆದಿಗ್ರಂಥಕಾರರಾದ ಮಹಾನುಭಾವರ ಲೇಖನದಲ್ಲಿ (೧೨ನೆಯ ಶತಮಾನ) ದೊರೆಯುತ್ತದೆ. ಇದರೊಳಗಣ 'ವಟ'ಯು ಪಟ್ಟಿಯ ಇನ್ನೊಂದು ರೂಪವಾಗಿದೆ, ಹಳೆಯ ಪ್ರಯೋಗಗಳ ಆಧಾರದಿಂದ ಇಷ್ಟೆಲ್ಲ ಸುತ್ತಾಡಿ ಮಾಡುವ ನಿರ್ಣಯವನ್ನು ಕಂನಾಡಿನ ಹಳ್ಳಿಗರ ಬಾಯಲ್ಲಿರುವ 'ಪ್ಯಾಟಿ' ಎಂಬ ಪ್ರಯೋಗವೂ ಸ್ಪಷ್ಟೀಕರಿಸುತ್ತದೆ. ಸುಸಂಸ್ಕೃತ ವಿದ್ವಾಂಸರ ತಿದ್ದಿದ ಪೇಟೆ ಎಂಬ ಮಾತಿಗಿಂತಲೂ ಹಳ್ಳಿಗರ ಪ್ಯಾಟಿಯೇ ಪಾಟಿಗೆ ಹತ್ತಿರದ್ದಾಗಿದೆ!

ವೇದದಲ್ಲಿ 'ವಂಕು' ಎಂಬ ಒಂದು ಪದವು ಬರುತ್ತದೆ. ಮುಂದಿನ ಕಾಲದ ಸಂಸ್ಕೃತದಲ್ಲಿ 'ವಕ್ರ' ಎಂಬ ಅದರ ಸುಸಂಸ್ಕೃತ ರೂಪವು ಎಲ್ಲೆಲ್ಲೂ ಪ್ರತಿಷ್ಠೆಯನ್ನು ಹೊಂದುವುದು. ಆದರೆ ಇಂದಿನ ಆರ್ಯಭಾಷಾ ವರ್ಗದಲ್ಲಿ ಅದು ಮತ್ತೆ 'ಬಾಂಕ' 'ವಾಂಕ' ಎಂದು 'ಒಂಕು' ಎಂಬುದಕ್ಕೆ ಹತ್ತಿರವೆ ಬಂದು ನಿಂತುದನ್ನು ಕಾಣಬಹುದು. ಇದು ಎಲ್ಲ ಶಬ್ದಗಳಿಗೂ ಸರಿಹೋಗುವ ನಿತ್ಯನಿಯಮವಾಗಿರದಿದ್ದರೂ ಎಷ್ಟೊ ಕಡೆಗಳಲ್ಲಿ ಮೂಲ ರೂಪವನ್ನು ಅರಿತುಕೊಳ್ಳಲು ಒಳ್ಳೆ ಸಹಾಯಕವಾಗಿದೆ. ಗೌಡ ಶಬ್ದದ ರೂಪಸಿದ್ಧಿಯು ಇದರಿಂದ ಸುಸ್ಪಷ್ಟ ವಾಗುವುದು. ಗಾಮುಂಡ, ಗಾವುಂಡಗಳಿಂದ ಅದರ ರೂಪಸಿದ್ಧಿಯು ಏನೊ ತಿಳಿಯದು.

ಗಾಮುಂಡವು ಯಾವ ಭಾಷೆಯ ಪದ? ಸಂಸ್ಕೃತವೆನ್ನಬೇಕೆ? ಸಂಸ್ಕೃತ ಕೋಶಗಳಲ್ಲಿಯೆ ಗಾಮುಂಡಕ್ಕೆ ಸಮೀಪದ ರೂಪಗಳೂ ಅವುಗಳಿಗೆ ಪ್ರಯೋಗಗಳೂ ಸಿಕ್ಕುವುದಿಲ್ಲ. ಗಾಮುಂಡ ಎಂಬುದನ್ನು ಯಾವುದೊಂದು ಶಬ್ದದ ತದ್ಭವವೆಂದು ಸಾಧಿಸುವ ಸಾಹಸವನ್ನು ಕೇಶಿರಾಜನೂ ಮಾಡಿದಂತಿಲ್ಲ. ಗಾಮುಂಡಕ್ಕೆ ಸಮೀಪದ ಸಂಸ್ಕೃತಪದವೆಂದು 'ಗ್ರಾಮಮುಂಡ' ಶಬ್ದವನ್ನು ಮೂಲವೆಂದು ಗ್ರಹಿಸಬೇಕಾಗಿ ಒಬ್ಬ ವಿದ್ವಾಂಸರು ಸೂಚಿಸಿದರು. ಆದರೆ ಈ ಶಬ್ದವು ಕೇವಲ ಕಾಲ್ಪನಿಕವೆಂದು ಹೇಳಬೇಕಾಗುತ್ತದೆ. ಏಕೆಂದರೆ ಇದು ಎಂದಾದರೂ ಬಳಕೆಯಲ್ಲಿ ಇರದೆ, ಇದರಿಂದ ಗಾಮುಂಡ ಪದವು ಹೊರಟಿತೆಂದು ಹೇಗೆ ತಿಳಿಯುವುದು? ಗ್ರಾಮಮುಂಡ ಎಂಬ ಪದವು ಬಳಕೆಯಲ್ಲಿದ್ದರೆ ಯಾವ ಸಂಸ್ಕೃತಕೋಶವೂ ಇದನ್ನು ಹೇಗೆ ಉಲ್ಲೇಖಿಸದೆ ಬಿಡುತ್ತಿತ್ತು ? ಪಟ್ಟಿಲ ಎಂಬುದರ ರೂಪಸಿದ್ಧಿಯು ಈಗ ನಿಶ್ಚತವಿದ್ದು ಪಟ್ಟಿಲರು ಎಂದರೆ ಹಟ್ಟಿಕಾರ ಗೋವಳರೆಂಬ ಅರ್ಥವೂ ಸ್ಪಷ್ಟವಾಗಿದೆ. ಪಟ್ಟಿಲರಿಗೇ ಗೌಡರೆಂದು ಹೇಳುವ ಅನೇಕ ಶತಮಾನಗಳ ವಾಡಿಕೆಯಂತೆ ಇವೆರಡೂ ಸಮಾನಾರ್ಥಕ ಪದಗಳಾಗಿವೆ. ಆದಕಾರಣ ಗೌಡರೆಂದರೆ ಗೌಳರು-ಗೋವಳರೆಂಬಲ್ಲಿ ಸಂದೇಹವಿಲ್ಲ.

ಇಂತಿದು ಗೋವಳರ ನಾಡು; ಪಟ್ಟಿಗಳ ದೇಶ. ಆದಕಾರಣ ಇಲ್ಲಿ ಎಲ್ಲೆಲ್ಲೂ ಪಟ್ಟಿಯ ವಿವಿಧ ಹೆಸರಿನ ಊರುಗಳಿರುವುದು ಸಹಜ. ಈ ಗೋ[illegible]-ಗೌಡರ ಪಟ್ಟಿ, ಹಟ್ಟಿಗಳಲ್ಲದೆ ಇವರು ಸಾಕಿದ ದನಗಳ ಹೆಸರಿನ

ಊರುಗಳೂ ಈ ನಾಡವರ ಒಂದು ವಿಶೇಷ. ನಂದಗಡ, ನಂದಗಾವಿ, ನಂದೀಹಳ್ಳಿ, ನಂದ್ಯಾಲ, ನಂದಿಗ್ರಾಮ ನಂದೂರಬಾರ ಮೊದಲಾದುವು ನಮ್ಮ ಪಟ್ಟಿಕಾರ ನಂದಗೋಪರ ತಲೆತಲಾಂತರಗಳ ಕುರುಹುಗಳಾಗಿವೆ. ಆವಿನ ಮಡುವು, ಗೋವನಕೊಪ್ಪ, ತರುವೆಕೆರೆ, ತುರುಕರುಹಳ್ಳಿ, ತುರ್ವಗಲ್ಲು, ಎತ್ತಿನಕೊಪ್ಪ, ಬೈಲವಾಡ; ಕುರಿಹಟ್ಟಿ, ಆಡೂರು, ಗೊಲ್ಲರಹಟ್ಟಿ, ಗೊಲ್ಲರದೊಡ್ಡಿ, ಕುರುಬಗಟ್ಟಿ ಎಂಬಿವೇ ಮೊದಲಾದುವೆಲ್ಲವೂ 'ಹಾಲುಮತದ' ಈ ತುರುಕಾರ-ದನಗಾರರ ಪೀಳಿಗೆಯವರ ನೆಲೆವೀಡನ್ನೆ ಸೂಚಿಸುತ್ತವೆ.

ಮಾನವನು ಬೇಟೆಗಾರಿಕೆಯಿಂದ ದನಗಾರಿಕೆಗೆ, ದನಗಾರಿಕೆಯಿಂದ ಒಕ್ಕಲುತನಕ್ಕೆ, ಒಕ್ಕಲತನದಿಂದ ವ್ಯಾಪಾರೋದ್ಯೋಗಕ್ಕೆ, ವ್ಯಾಪಾರೋದ್ಯೋಗದಿಂದ ರಾಜ್ಯವ್ಯವಹಾರಕ್ಕೆ ಅರ್ಹತೆಯನ್ನು ಪಡೆಯುತ್ತ ಕ್ರಮವಾಗಿ ತನ್ನ ವಿಕಾಸವನ್ನು ಮಾಡಿಕೊಂಡುದು ಕಂಡುಬರುತ್ತದೆ. ಮಾನವನ ವಿಕಾಸಕ್ರಮದ ಈ ಘಟ್ಟಗಳು-ದನಗಾರಿಕೆಯಿಂದ ಮುಂದಿನ ಮಟ್ಟಗಳು 'ಪಟ್ಟಿ' ಶಬ್ದವು ಅಳವಡಿಸಿಕೊಂಡಿರುವ ಅರ್ಥಗಳಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತವೆ. ಪಟ್ಟುಕೊಂಡಿರುವ ಎಡೆ ಪಟ್ಟಿ; ಹಟ್ಟಿ-ಗುಡಿಸಲು, ದನಗಳ ದೊಡ್ಡಿ ಎಂಬ ಇದರ ಮೂಲಾರ್ಥದಲ್ಲಿ ಪಟ್ಟಿಕಾರರ ಮೊದಲನೆಯ ಮಟ್ಟವು ಧ್ವನಿತವಾಗುತ್ತದೆ.

ದನಗಾರಿಕೆಯ ಮುಂದಿನ ಮಟ್ಟ ಒಕ್ಕಲತನ. ಒಕ್ಕಲತನದಲ್ಲಿ ಮಳೆನೀರಿನಿಂದ ಸಾಗು ಆಗುವ ಹೊಲಗಳು ಮೊದಲು ಅಲ್ಲ. ಹೊಯ್ನೀರಿನಿಂದ ಬೆಳೆವ ತೋಟಗಳು ಮೊದಲು. ತೋಟವೆಂಬುದು ಈಗ ರೂಢಶಬ್ದ ವಾಗಿದ್ದರೂ 'ತೋಟ-ಪಟ್ಟಿ' ಎಂಬ ಜೋಡು ನುಡಿಯಲ್ಲಿ 'ಪಟ್ಟಿಗೂ' ಒಂದು ಕಾಲಕ್ಕೆ ತೋಟವೆಂಬ ಅರ್ಥ ವಿದ್ದುದು ನಿದರ್ಶನಕ್ಕೆ ಬರುತ್ತದೆ. ಒಂದಕ್ಕಿಂತ ಹೆಚ್ಚು ಅರ್ಥಗಳಲ್ಲಿ ಒಂದು ಶಬ್ದವು ಬಳಕೆಯಲ್ಲಿದ್ದಾಗ, ಅರ್ಥಕ್ಕೆ ಸಂದೇಹವುಂಟಾಗಬಾರದೆಂದು ಸ್ಪಷ್ಟತೆಗಾಗಿ ಅದೇ ಅರ್ಥದ ಇನ್ನೊಂದು ಪದವನ್ನು ಅದರ ಬದಿಯಲ್ಲಿ ಸೇರಿಸಿ ಹೇಳುವ ವಾಡಿಕೆಯಿದೆ. ನೆರೆಹೊರೆ ಎಂಬಲ್ಲಿ 'ಹೊರೆ' ಶಬ್ದದ ಜೊತೆಗೆ ನೆರೆಯನ್ನು ಉಪಯೋಗಿಸಿದ್ದುದು ಇದೇ ಕಾರಣಕ್ಕಾಗಿ. ಇವೆರಡೂ ಒಂದೇ ಅರ್ಥದ ಶಬ್ದಗಳು. ಹಳೆಯ ಕಾವ್ಯಗಳಲ್ಲಿ 'ಹೊರೆ' ಶಬ್ದವನ್ನು ಸಮೀಪ, ನೆರೆ ಎಂಬರ್ಥದಲ್ಲಿ ಬಳಸಿದ್ದುಂಟು. ಹಾಗೆ 'ಪಟ್ಟಿ'ಗೂ ತೋಟ ಎಂಬ ಅರ್ಥವು ಇದ್ದ ಬಗೆಗೆ ಸಂದೇಹವೆ ಇಲ್ಲ. ಗದ್ದೆ ಎಂಬರ್ಥದಲ್ಲಿ ಪಟ್ಟಿ ಶಬ್ದವು ತಮಿಳಿನಲ್ಲುಂಟು. ಪಡಪ್ಪೈ ಎಂದರೆ ತೋಟ. ಸಂಸ್ಕೃತದಲ್ಲಿ ಸೇರಿರುವ ಪಟ್ಟಿ ಶಬ್ದದ ಇನ್ನೊಂದು ರೂಪವೂ ವಿಚಾರಾರ್ಹವಾಗಿದೆ. ವಾಟಿ, ವಾಟಿಕಾ ಎಂದರೆ ಸಂಸ್ಕೃತದಲ್ಲಿ ತೋಟವೆಂದರ್ಥ. ಪಟ್ಟಿ ಎಂದರೆ ಹೊಲವೆಂಬರ್ಥವೂ ಕಾಲಾಂತರದಲ್ಲಿ ಬಂದಿತು. ಪಟ್ಟಾದಾರ ಎಂದರೆ ಹೊಲದ ಒಡೆಯ, ಗೇಣಿ ಹಿಡಿದ ಒಕ್ಕಲಿಗ ಎಂದರ್ಥವಿದೆ.

ಪಟ್ಟಿಯಲ್ಲಿ ಒಕ್ಕಲುತನದ ಮಟ್ಟದಿಂದ ಮುಂದಿನ ವ್ಯಾಪಾರೋದ್ಯೋಗ, ರಾಜ್ಯವ್ಯವಹಾರದ ಕಾಲದ ಅರ್ಥವೂ ಲಾಕ್ಷಣಿಕವಾಗಿ ಮುಂದೆ ಬಂದುದುಂಟು. ಪಟ್ಟ, ಪಾಟ; ಪಟ್ಟಣ; ಹಟ್ಟ, ಹಾಟ, ಪೇಟೆ ಎಂಬಿವೆ. ಮೊದಲಾದ ಶಬ್ದಗಳು ಇದಕ್ಕೆ ದೃಷ್ಟಾಂತ. ಪ್ರತಿಷ್ಠಾನದ ರೂಪವೆಂದು ಹೇಳುವ ಪೈಠಣವು ಪಟ್ಟಣ, ಪೇಠ ಶಬ್ದಗಳಿಗೇ ಹೆಚ್ಚು ಸಮೀಪವಾಗಿದೆ. ಅದರ ನಿಜವಾದ ಹೆಸರು ಪಟ್ಟಣವೆಂದಿರಬೇಕೆಂದು ನನ್ನ ತಿಳುವಳಿಕೆ. ಸಂಸ್ಕೃತ, ಮರ್‍ಹಾಟಿ ಮೊದಲಾದ ಭಾಷೆಗಳಲ್ಲಿ ತಮ್ಮ ಅರ್ಥ ಸಾಮರ್ಥ್ಯದಿಂದ ಸ್ಥಾನವನ್ನು ದೊರಕಿಸಿದ ವಾಟ, ವಾಟಿ, ವಾಡಿ, ಪಟ್ಟ, ಹಟ್ಟ, ಹಾಟ, ಪಟ್ಟಣ ಮೊದಲಾದ ಶಬ್ದಗಳು ಆ ಕಾಲದ ಕಂನಾಡ ಹಟ್ಟಿಕಾರರ ಹಿರಿಮೆ, ಹೆಚ್ಚಳದ ದ್ಯೋತಕಗಳಾಗಿವೆ. ಇಂಗ್ರೇಜಿಯ Garden, town, market, city ಮೊದಲಾದ ಶಬ್ದಗಳು ನಮ್ಮಲ್ಲಿ ನುಸುಳಿಕೊಂಡು ನಮ್ಮ ಮಾತಿನಲ್ಲಿ ಇಂಬುಗೊಂಡುದು ಆ ಭಾಷೆಯ ಪ್ರಭಾವದ, ಆ ಜನಗಳ ಸಂಸ್ಕೃತಿಯ ಹೆಚ್ಚಳದ ಸೂಚಕವಾಗಿಲ್ಲವೆ? ಹಾಗೆಯೆ ಪಟ್ಟ, ಪಟ್ಟಣ, ವಾಟ, ವಾಟಿಕಾ, ಹಟ್ಟ ಮೊದಲಾದುವುಗಳು ಅಂದಿನ ಕಂನಾಡ ಪಟ್ಟಿಕಾರರು ಸಂಸ್ಕೃತದವರಿಗೆ ಕೊಟ್ಟ ತಮ್ಮ ಸಂಸ್ಕೃತಿಯ ವಿಶೇಷ ಕಾಣಿಕೆಯ ನಿಶ್ಚಿತ ಕುರುಹುಗಳಾಗಿವೆ. ಪಟ್ಟಿಗಳು ಕೊಟ್ಟ ಇನ್ನೂ ಒಂದು ಹೆಚ್ಚಿನ ಕಾಣಿಕೆ ಯುಂಟು. ಅದು 'ಪಟ್ಟ-ವಸ್ತ್ರ'. ಪಟ್ಟ ಎಂದರೆ ವಸ್ತ್ರವೆಂಬರ್ಥವು ಹೇಗೆ? ಕ್ಯಾಲಿಕೊ, ಹಾಲಂಡ, ಚೀನಾ(ಂಬರ)

ಮೊದಲಾದುವು ಗಳಂತೆ ಪಟ್ಟಿ ನಾಡಿನಲ್ಲಿ ಹುಟ್ಟಿದುದಾದಕಾರಣ ಪಟ್ಟವೆಂದು ವಸ್ತ್ರಕ್ಕೆ ಹೆಸರು. ಚೀನ+ಅಂಬರ ಎಂಬಂತೆ ಪಟ್ಟ+ವಸ್ತ್ರ: ದೇಶವಾಚಕ ಮೊದಲನೆಯ ಪದವು ಅಲ್ಲಿದೆ. ಪಟ್ಟಿಕಾರರು, ಹಟಗಾರರೆಂದು ನೇಕಾರರಿಗೆ ಹೆಸರಿರುವುದೂ ಇದೇ ಕಾರಣ. ವಸ್ತ್ರಕ್ಕೆ ಪಟ್ಟಜ ಎಂದೂ ಒಂದು ಹೆಸರಿದ್ದುದಾಗಿ ಮೋನಿಯರ ವಿಲಿಯಂಸರ ಕೋಶದಿಂದ ತಿಳಿಯುತ್ತದೆ. ಪಟ್ಟಜ ಎಂದರೆ ಪಟ್ಟಿಯಲ್ಲಿ ಜನಿಸಿದ್ದು ಎಂಬರ್ಥವು ಇಲ್ಲಿ ಸುಸ್ಪಷ್ಟವಾಗಿಯೆ ಇದೆ. ಅಲ್ಲದೆ, ಇನ್ನೂ ಒಂದು ಸಂಗತಿಯು ಇಲ್ಲಿ ವಿಚಾರಾರ್ಹವಾಗಿದೆ. ನೇಕಾರರಿಗೆ ಹಟಗಾರ ಅಥವಾ ಪಟ್ವೇಗಾರರೆಂದಿರುವ ಹೆಸರು ದಕ್ಷಿಣಾಪಥದಲ್ಲಿ ಮಾತ್ರ ಉಂಟು. ಉತ್ತರ ಹಿಂದುಸ್ತಾನದಲ್ಲಿ ಈ ಹೆಸರು ವಾಡಿಕೆಯಲ್ಲಿಲ್ಲ. ಹತ್ತಿಯ ಬೆಳೆಗೆ ಹಟ್ಟಿಯೇ ಎಂದಿನಿಂದಲೂ ಹೆಸರಾದ ನಾಡು. ವರಹಾಡದ ಹತ್ತಿ ಎಲ್ಲಕ್ಕೂ ಮಿಗಿಲು. ಹಾಟಕವೆಂದರೆ ಬಂಗಾರ; ಹಟ್ಟಿಯಲ್ಲಿ ಹುಟ್ಟಿದ್ದು ಹಾಟಕ. ನಿಜಾಂ ಇಲಾಖೆಯ ಹಟ್ಟಿಯಗಣಿಗಳು ಭಾರತದಲ್ಲಿಯೆ ಅತಿಪುರಾತನವೆಂದು ಡಾ. ಮಾರ್ಶಲ್ಲರು ಮೊಹೆಂಜೋದಾರೋದ ತಮ್ಮ ಗ್ರಂಥದಲ್ಲಿ ಕಾಣಿಸಿದ್ದಾರೆ. 'ಹಾಟಕ'ವೆಂಬುದೂ ಕಂನುಡಿಯು ಸಂಸ್ಕೃತಕ್ಕೆ-ಭಾರತಕ್ಕೆ ಸಲ್ಲಿಸಿದ ಒಂದು ಬೆಲೆಯುಳ್ಳ ಕಾಣಿಕೆ.

ಹಟ್ಟಿಕಾರ ಗೋಪನು ರಾಜನಾದನು. ಆತನ ಹಟ್ಟಿ ಮೊದಲು ಗುಡಿಸಲೆಂಬ ಅರ್ಥವುಳ್ಳದಾಗಿದ್ದರೂ ಅದು ಮುಂದೆ ಪ್ರೌಢಾರ್ಥವನ್ನು ಹೊಂದಿತು. 'ಹಟ್ಟ'ವು ಪೇಟೆಯೆಂಬರ್ಥಗೊಂಡಿತು. ಪಟ್ಟ, ಪಟ್ಟಣಗಳು ಮರ್ಯಾದೆಯ ಊರುಗಳಾದುವು. ಪಾಡಿ-ವಾಡಿಗಳು ವಿಸ್ತೀರ್ಣ ದೇಶವಾಚಕ ಪದಗಳಾದುವು. ಅದೇ ಅರ್ಥವು ಹಟ್ಟ, ಹಾಟ (ಕರಹಾಟ, ಮರಹಾಟ ಮುಂ.)ಗಳಿಗೂ ಪ್ರಾಪ್ತವಾಯಿತು. ವಾಡಿಯು 'ವಾಡಾ', 'ವಾಡೆ' ಎಂದರೆ ಮಹಮನೆ-ಅರಮನೆ ಎಂದೂ ಅರ್ಥವನ್ನು ಪಡೆದುಕೊಂಡಿತು. ಮಾನವನ ಸಾಮಾಜಿಕ ವಿಕಾಸಕ್ರಮದ ಹಿನ್ನೆಲೆಯಲ್ಲಿ ಶಬ್ದಗಳ ಅರ್ಥದ ವಿಕಾಸಕ್ರಮವು ಹೇಗೆ ಸೊಗಸಾಗಿ ತಿಳಿದುಬರುತ್ತದೆಂಬುದನ್ನು ಇಲ್ಲಿ ಚೆನ್ನಾಗಿ ಮನಗಾಣಬಹುದಾಗಿದೆ.

ಉತ್ತರದಲ್ಲಿ ಪಾಡಿಗಳು

ಪಟ್ಟಿ ಅಥವಾ ಪಾಡಿ ಎಂದರೆ ಪಟ್ಟುಕೊಂಡಿರುವ ಎಡೆ, ಮನೆ, ನೆಲೆ, ನಾಡು ಎಂಬರ್ಥವಿದ್ದುದನ್ನು ಹಿಂದಿನ ಪ್ರಕರಣದಲ್ಲಿ ಹೇಳಿದೆ. ಪಟ್ಟಿ ಅಥವಾ ಪಾಡಿಗಳಲ್ಲಿ ಇದ್ದವರು ಪಟ್ಟಿಗಳು; ಇವರಿಗೆ ಪಟ್ಟಿಲರೆಂಬ ಹೆಸರಿದ್ದ ವಿಚಾರವೂ ಈ ಮೊದಲೆ ಬಂದಿದೆ.

ಈ ಪಾಡಿಗಳು ಕಂನಾಡಿನಲ್ಲಂತೂ ಸರಿಯೆ; ಉತ್ತರದಲ್ಲೂ, ಪುರಾತನ ಕಾಲದಲ್ಲಿ ಇದ್ದುವೆಂದು ನನ್ನ ಕಂಡಿತದ ಮಾತು. ಆದರೆ ಇದನ್ನು ಇನ್ನುಳಿದವರಿಗೂ ಮನಗಾಣಿಸಿಕೊಡುವುದು ಹೇಗೆ? ಇಂದಿನ ಕಂನಾಡ ಪಾಡು ನೋಡಿದರೆ, ಉತ್ತರದಲ್ಲೂ ಪಾಡಿಗಳಿದ್ದರೆಂದು ನಂಬುವುದೆ ಸಾಧ್ಯವಿಲ್ಲ. ಕವಿರಾಜಮಾರ್ಗದಲ್ಲಿ ಹೇಳಿದ ಕಾವೇರಿಯಿಂದ ಗೋದೆಯವರೆಗೆ ಕಂನಾಡು ಇದ್ದಿತೆಂಬುದನ್ನೇ ಅತಿಶಯೋಕ್ತಿ, ಸುಳ್ಳು ಎಂದು ಬಗೆವ ಸಂಶೋಧಕ ವಿದ್ವಾಂಸರಿದ್ದಾರೆ. ಬಳಿಕ ನರ್ಮದೆಯ ವರೆಗೂ ಕಂನಾಡು ಇದ್ದಿತೆಂಬ ಮಾತು ಏತಕ್ಕೆ?

ಇದೀಗ ಬಲ್ಲಿದರ ಎದುರು ನಾನೊಂದು ಮಾತನ್ನು ತಲೆವಾಗಿ ಕೇಳಿಕೊಳ್ಳುತ್ತೇನೆ: ಪಟ್ಟಿ-ಹಟ್ಟಿ; ಪಾಡಿ-ವಾಡಿ.......ಎಂಬಿವು ಒಂದೇ ಬಳಗದ ಒಂದಕ್ಕೊಂದು ಹತ್ತಿ ಹೊಂದಿದ ನುಡಿಗಳೆಂಬುದು ಒಪ್ಪಿಗೆಯೆ? ಪಟ್ಟಿ, ಪಾಡಿ ಎಂಬುದು ಪಡು ಧಾತುವಿನಿಂದ ಬಂದ ನುಡಿಯೆಂಬುದು ನಿಜವೆ? ಹಾಗಿದ್ದರೆ ಈ ಪಟ್ಟಿ, ಪಾಡಿ, ವಾಡಿ, ಹಟ್ಟಿಗಳು ಎಲ್ಲಿಯವರೆಗೆ ಹಬ್ಬಿರುವುವೊ ಅಲ್ಲಿಯ ವರೆಗೆ ಈ ಪಾಡಿಗಳು ನೆಲಸಿದ್ದರು ಅಥವಾ ಕೊನೆಗೆ ಅವರ ವರ್ಚಸ್ಸು ಇದ್ದಿತೆಂಬ ಮಾತನ್ನಂತೂ ಅಲ್ಲಗಳೆಯಲಿಕ್ಕಾಗುವುದಿಲ್ಲವಷ್ಟೆ? ಈ ಪಟ್ಟಿ, ಪಾಡಿ, ವಾಡಿ, ಹಟ್ಟಿ, ಪಳ್ಳಿ ಎಂಬುವು ಕಂನುಡಿಗೆ ಸಂಬಂಧಪಟ್ಟ ಮಾತುಗಳೇ ಅಲ್ಲ; ಅವು ಸಂಸ್ಕೃತ ಭಾಷೆಯ ಪದಗಳು ಎಂದು ನಿಶ್ಚತವಾದರೆ ನನ್ನ ಮೇಲಣ ಅಭಿಪ್ರಾಯವು ತಪ್ಪು; ನನ್ನ ಕಂಡಿತವು ಕೇವಲ ಭ್ರಮೆ ಎಂದು ಸಿದ್ಧವಾಗುವುದು. ಆಗ ನಾನು ನನ್ನ ವಿಚಾರವನ್ನು ತಿದ್ದಿಕೊಳ್ಳಲೇಬೇಕು.

ಪಾಡಿಯೊಂದನ್ನು ಬಿಟ್ಟು ಉಳಿದ ಶಬ್ದಗಳು ಸ್ವಲ್ಪ ವ್ಯತ್ಯಾಸದಿಂದ ಸಂಸ್ಕೃತಕೋಶಗಳಲ್ಲಿ ದೊರೆಯುವುವಲ್ಲ? ಎಂದು ಕೆಲವು ವಿದ್ವಾಂಸರು ಕೇಳಬಹುದಾಗಿದೆ. ಪಟ್ಟಿ, ಪಟ್ಟ, ವಾಟ, ವಾಟಿಕಾ, ಹಟ್ಟ, ಪಲ್ಲಿ ಎಂಬುವು ಸಂಸ್ಕೃತ ಕೋಶಗಳಲ್ಲಿ ಕಾಣಿಸಿಕೊಳ್ಳುವುದು ನಿಜ. ಆದರೆ ಸಂಸ್ಕೃತಕೋಶದಲ್ಲಿ ಬಂದ ಮಾತ್ರಕ್ಕೆ ಅವು ಸಂಸ್ಕೃತ ಶಬ್ದವೆಂದು ನಿಶ್ಚಿತವಾಗಿ ಹೇಳಲಿಕ್ಕಾದೀತೆ? ಆಕ್ಸಫರ್ಡಕೋಶದಲ್ಲಿ ಧೋತಿ, ಬ್ಯಾಂಗಲ್, ಸಾರಿ, ಮಂಕಿ ಎಂಬೀ ಪದಗಳಿಗೂ ಇಂಬುದೊರೆತಿರುವುದರಿಂದ ಅವಕ್ಕೆ ಇಂಗ್ರೇಜೀ ಶಬ್ದಗಳೆಂದು ಹೇಳಬಹುದೆ? ಪಟ್ಟ, ಪಟ್ಟಿ, ವಾಡಿ, ಹಟ್ಟ, ಪಲ್ಲಿಗಳು ಸಂಸ್ಕೃತ ಕೋಶದಲ್ಲಿವೆ; ಆದುದರಿಂದ ಇವು ಸಂಸ್ಕೃತ ಭಾಷೆಯವೆಂದು

ಒಮ್ಮೆಲೆ ಹೇಳುವುದು ಸಯುಕ್ತಿಕವಾಗಲಾರದು. ಸಂಸ್ಕೃತ ವರ್ಗದ ಬೇರ ಭಾಷೆಗಳಲ್ಲಿಯೂ ಈ ಪದಗಳು ಬಳಕೆಯಲ್ಲಿವೆ, ಎಂದು ಸಿದ್ಧಪಡಿಸುವುದು ಅವಶ್ಯ. ಇಲ್ಲವಾದರೆ ಇವು ಸಂಸ್ಕೃತವೆಂಬ ಮಾತಿಗೆ ಬೆಲೆಯಿಲ್ಲ.

ಪಟ್ಟ, ಪಾಡಿ, ವಾಡಿ, ಪಳ್ಳಿ ಎಂಬಿವು ಕಂದಮಿಳ ವರ್ಗಕ್ಕೆ ಸೇರಿದ ನುಡಿಗಳೇ ಎಂದು ನನ್ನ ನಂಬುಗೆಯಾಗಿದೆ. ಏಕೆಂದರೆ ಇವು ಕಂನುಡಿಯಂತೆ ತುಳು, ಕೊಡಗು, ತಮಿಳು, ತೆಲುಗು, ಮಲೆಯಾಳ ಭಾಷೆಗಳಲ್ಲೂ ಉಂಟು. ನನ್ನ ಈ ನಂಬುಗೆಯು ದೃಢವಾಗುವುದಕ್ಕೆ ಇನ್ನೂ ಕೆಲವು ಹೆಚ್ಚಿನ ಕಾರಣಗಳೂ ಉಂಟು:

೧. ಪಟ್ಟಿ, ಪಾಡಿ, ವಾಡಿ, ಹಟ್ಟಿ ಎಂಬುವು ಒಂದೇ ಬಳಗದ ಹತ್ತಿ ಹೊಂದಿದ ನುಡಿಗಳೆಂಬುದು ಸ್ಪಷ್ಟವಿದೆ. ಇವುಗಳ ಶಬ್ದದೇಹದಲ್ಲಿ ಹೋಲಿಕೆಯಿದೆ; ಅಲ್ಲದೆ ಅರ್ಥವೂ ಒಂದೇ ಬಗೆಯದಾಗಿದೆ.

ಆದರೆ, ಇವು ಒಂದಕೊಂದು ಸಂಬಂಧಿಸಿದ ನುಡಿಗಳೆಂಬ ಕಲ್ಪನೆಯು ಕೂಡ ಸಂಸ್ಕೃತಕೋಶಕಾರರಿಗೆ ಇದ್ದುದು ಕಂಡುಬರುವುದಿಲ್ಲ. ಪಟ್ಟ, ಪಟ್ಟಿ, ವಾಟ (ವಾಟಿಕಾ), ಹಟ್ಟ ಇವೆಲ್ಲವೂ ಸ್ವತಂತ್ರವಾದ ಬೇರೆ ಬೇರೆ ಪದಗಳೆಂದು ಅವರು ಗ್ರಹಿಸಿದ್ದಾರೆ.

ಪಟ್ಟ ಮತ್ತು ಪಟ್ಟಿಗಳಿಗೆ ಸಂಸ್ಕೃತ ವ್ಯುತ್ಪತ್ತಿಯನ್ನು ಹೇಳಿದ ಕೋಶಗಳೂ ಕಡಿಮೆ. ಕಂನುಡಿಯ ಹಳೆಯ ವ್ಯಾಕರಣಕಾರರು ಪಟ್ಟವನ್ನು ತತ್ಸಮ ಪದವೆಂದು ಹೇಳಿರುವರು. ತತ್ಸಮಗಳೆಂದು ಬಗೆದ ಮಣಿ, ಮಂಚ ಮುಂತಾದ ಇಪ್ಪತ್ತನಾಲ್ಕು ಪದಗಳು ಪರಭಾಷೆಯಿಂದ ಸಂಸ್ಕೃತದಲ್ಲಿ ಸೇರಿರುವ ಸಂಭವವೆ ಹೆಚ್ಚಾಗಿದೆ.

ವಾಟ ಎಂಬುದಕ್ಕೆ ಆಪಟೆಯವರ ಕೋಶದಲ್ಲಿ ಅದು 'ವಟ್' ಎಂದರೆ ಸುತ್ತುಗಟ್ಟು ಎಂಬರ್ಥದ ಧಾತುವಿನಿಂದ ಬಂದಿರಬೇಕಾಗಿ ಸೂಚಿಸಿದ್ದಾರೆ. ಮೋನಿಯರ ವಿಲಿಯಂಸರು ವಟವೃಕ್ಷಕ್ಕೆ ಅದರ ಸಂಬಂಧವನ್ನು ಜೋಡಿಸುವರು! ವಾಟಿಕಾ: The site of a house; 2. An orchard, a garden; ವಾಟೀ: 1. The site of a house; 2. A house dwelling; 3. A court; an enclosure; 4. A garden ಎಂದು ಅರ್ಥವೂ ಅಲ್ಲಿದೆ,

ಹಟ್ಟ : ಎಂಬುದು ಹಟ್ ಎಂದರೆ ಹೊಳೆ, ತೊಳಗು ಎಂಬ ಧಾತುವಿನಿಂದ ಬಂದುದಾಗಿ ಹೇಳಿದ್ದಾರೆ. ಹಟ್ಟ: A market; a fair ಎಂದು ಅರ್ಥ ಕೊಟ್ಟಿದೆ.

ಪಲ್ಲಿ ಶಬ್ದವೂ ಸಂಸ್ಕೃತ ಕೋಶದಲ್ಲಿದೆ. ಆದರೆ ನಿರುಕ್ತವನ್ನು ಸೂಚಿಸಿಲ್ಲ. ಇದಕ್ಕೆ ಹಳ್ಳಿ, ಊರು ಎಂದು ಹೇಳಿದ್ದಲ್ಲದೆ, ಈ ಶಬ್ದಕ್ಕೆ ಹಲ್ಲಿ ಎಂಬ ಪ್ರಾಣಿವಾಚಕ ಅರ್ಥವಿರುವುದನ್ನು ಅಲ್ಲಿ ಕಾಣಿಸಲಾಗಿದೆ.

ಅರ್ಥಸಾಮ್ಯ ಮತ್ತು ರೂಪಸಾಮ್ಯದಿಂದ ಪಟ್ಟ, ಪಟ್ಟಿ, ಪಾಡಿ, ವಾಡಿ, ವಾಟ, ಹಟ್ಟ ಇವೆಲ್ಲವೂ ಒಂದೇ ಧಾತುವಿನಿಂದ ಹುಟ್ಟಿದುವೆಂಬುದು ಸ್ಪಷ್ಟವಿದೆ. ಆದರೆ ಸಂಸ್ಕೃತ ಕೋಶಕಾರರು ಇವನ್ನು ಭಿನ್ನ ಪದಗಳೆಂದು ಬಗೆದುದು ಸರಿಯಾಗಿಲ್ಲವೆಂದು ಹೇಳಬೇಕಾಗುತ್ತದೆ.

೨. ಪಟ್ಟವು ಹಟ್ಟ; ಪಟ್ಟಿಯು ಹಟ್ಟಿ; ಪಾಡಿಯು ವಾಡಿ, ಪಟ್ಟವು-ಪಾಟ ವಾಟವಾದುದನ್ನು, ಕಂನುಡಿಯೊಳಗಿನ ಶಬ್ದರೂಪಗಳು ಪಲ್ಲಟವಾಗುವ ಬಗೆಯನ್ನು ಅರಿತವರಿಗೆ ಮತ್ತೆ ತಿಳಿಸಿ ಹೇಳಬೇಕಾಗಿಲ್ಲ.

ಪಟ್ಟಿಯೆ ಹಟ್ಟಿಯಾಯಿತೆಂದು ಒಪ್ಪಿದರೆ ಹಟ್ಟವೆಂಬುದು ಸಂಸ್ಕೃತದಲ್ಲಿ ಕಂನುಡಿಯಿಂದಲೇ ಸೇರಿತೆಂಬುದನ್ನೂ ಒಪ್ಪಲೇಬೇಕು. ಏಕೆಂದರೆ ಪಕಾರಕ್ಕೆ ಹಕಾರವಾಗುವುದು ಕೇವಲ ಕಂನುಡಿಯ ಪಡೆಮಾತಾಗಿದೆ.

೩. ಮೋನಿಯರ್ ವಿಲಿಯಂಸ್‌ನ ಕೋಶದಲ್ಲಿ ಸಂಸ್ಕೃತ ಪದಗಳೊಡನೆ ಇಂಡೊ-ಜರ್ಮಾನಿಕ್ ಭಾಷಾ ವರ್ಗದ ಬೇರೆ ಅಂತಹ ಪದಗಳನ್ನೂ ಕೊಡುವ ವಾಡಿಕೆಯಿದೆ. ಆದರೂ ಅಲ್ಲಿ ಈ ಶಬ್ದಗಳೊಡನೆ ಅಂತಹ ಬೇರೆ ಹೋಲಿಕೆಯ ಯಾವ ಪದಗಳನ್ನೂ ಕೊಟ್ಟಿಲ್ಲ. ಅಲ್ಲಿ ಕೊಟ್ಟ ಅರ್ಥವು ಮೇಲಣ ಪದಗಳ ಅಭ್ಯಾಸಕ್ಕೆ ಉಪಯುಕ್ತವಿರುವುದರಿಂದ ಅದನ್ನಿಲ್ಲಿ ಎತ್ತಿ ಕೊಟ್ಟಿದ್ದೇನೆ.

ಪಟಕ, ಪಾಟಕ-The half of a village; cloth; a camp; encampment; L.

ಪಟಜ-A kind of cloth -ಮಹಾಭಾ

ಪಟ್ಟಾರ-A district.

ಪಟೀರ-A Field

ಪಟ್ಟಿ-Name of a people

ಪತ್ತಿ-ಗಣಕ: L.

ಪದ್ರ-A village; L.

ವಾಟ, ವಾಟೀ- ವಟವೃಕ್ಷಕ್ಕೆ ಸಂಬಂಧಿಸಿದ್ದು; ತೋಟ; ಮಹಾಭಾ. ಜಿಲ್ಲೆ; ದಶಕುಚ; A site of a house; L. A hut; L.

ಜನಗಳ ಹೆಸರು-ವರಾಹಮಿಹಿರ

ಹಟ್ಟ-A market, a fair, ಪಂಚತಂತ್ರ ವೇತಾಳಪಂಚವಿಂಶತಿ. L.

ಹಾಡಿ-ಗ್ರಾಮ-ಹಳ್ಳಿಯ ಹೆಸರು -ರಾಜತರಂಗಿಣೀ

ಪಲ್ಲಿ, ಪಲ್ಲೀ, A small village, (esp.) a settlement of wild tribes. L. A hut, A house, L. ಕಥಾಸರಿತ್.A house-lizard. L.

ಈ ಬಗೆಯಾಗಿ ಅರ್ಥಹೇಳಿ ಅವುಗಳ ಎದುರು L. ಎಂದು ಸಂಜ್ಞೆ ಹಾಕಲಾಗಿದೆ. ಅದು ಯಾವ ಆಧಾರ ಗ್ರಂಥದ ಹೆಸರಲ್ಲ. ಇವುಗಳಿಗೆ ಸಂಸ್ಕೃತವೆಂದು ಪರಿಗಣಿಸಲು ಆಧಾರ ಸಾಲದು ಎಂದು ಎಚ್ಚರಿಸಲು ಹಾಕಿದ ಚಿಹ್ನ ! L. ಇದರ ವಿವರಣೆಯನ್ನು ಅಲ್ಲಿ ಹೀಗೆ ಕೊಟ್ಟಿದೆ: L. -Lexicographers, (i.e.) a word or meaning which although given in native lexicons, has not yet been met with in any published text. ಎಂದರೆ ಇವು ಕೇವಲ ಕೋಶಕಾರರು ಹೇಳಿದ ಪದಗಳು. ಸಾಹಿತ್ಯದಲ್ಲಿ ದೊರೆಯುವುದಿಲ್ಲ.

ಮೇಲಣ ಶಬ್ದಗಳ ಸಾಲನ್ನು ವಿಮರ್ಶಿಸಿದರೆ ಅವೆಲ್ಲ ಪಟ್ಟಿ ಪಾಡಿ, ವಾಡಿ, ಹಟ್ಟಿ, ಎಂಬೀ ಮಾತುಗಳ ಬಳಗದುವೆಂದೇ ಕಂಡುಬರುತ್ತದೆ. ರಾಜತರಂಗಿಣಿ ಎಂಬ ಗ್ರಂಥವು ಕಾಶ್ಮೀರದೇಶದಲ್ಲಿ ಬರೆದುದು. ಅದರಲ್ಲಿ ಹಾಡಿ-ಗ್ರಾಮವೆಂಬ ಊರ ಉಲ್ಲೇಖವಿದೆ. ಆವೂರು ಎಲ್ಲಿಯದೆಂಬುದು ಸ್ಪಷ್ಟವಾಗಿಲ್ಲ. ಅದು ಎಲ್ಲಿಯದೆ ಇರಲಿ, 'ಹಾಡಿ-ಗ್ರಾಮ'ವೆಂಬ ಸಂಯುಕ್ತ ಶಬ್ದವು ಕೂಡಲ-ಸಂಗಮದಂತಹ ದ್ವಿರುಕ್ತಿಯಾಗಿದೆ, ಹಾಡಿ ಎಂದರೇ ಗ್ರಾಮ. ಹಾಡಿ ಎಂಬುದು 'ಪಾಡಿ'ಯ ಇನ್ನೊಂದು ರೂಪವೆಂದು ಸಿದ್ಧಪಡಿಸುವ ಆವಶ್ಯಕತೆಯಿಲ್ಲ.

ಪಾಡಿ-ಹಾಡಿಯು ಹೇಗೆ ರಾಜತರಂಗಿಣಿಯಲ್ಲಿ ಸ್ಥಾನವನ್ನು ಪಡೆದುಕೊಂಡಿತೊ, ಹಾಗೆಯೆ ಪಟ್ಟಿ, ಹಟ್ಟಿ, ಇವೆಲ್ಲವೂ ಸಂಸ್ಕೃತದಲ್ಲಿ ಸೇರಿಕೊಂಡುವೆಂದು ನಿಶ್ಚಿತವಾಗಿ ಕಂಡುಕೊಳ್ಳಬಹುದಾಗಿದೆ. ಸಂಸ್ಕೃತದಲ್ಲಿ ಈ ಪದಗಳು ಇರುವುದು ನಿಜ. ಆದರೆ ಅವು ಯಾವ ಮಟ್ಟದ ಸಂಸ್ಕೃತದಲ್ಲಿ, ಎಂಬುದನ್ನು ವಿಚಾರಿಸಿದರೂ ಅವುಗಳ ಮೂಲವೆಲ್ಲಿ? ಎಂಬ ಮಾತು ಸ್ಪಷ್ಟವಾಗುವ ಹಾಗಿದೆ. ಈ ಪದಗಳು ಹೆಚ್ಚಾಗಿ ಬಳಕೆಯಲ್ಲಿದ್ದುದು ಶಿಲಾಶಾಸನ ತಾಮ್ರಪಟಗಳ ಸಂಸ್ಕೃತ ಭಾಷೆಯಲ್ಲಿಯೇ. ಅವನ್ನುಳಿದರೆ ಆಮೇಲೆ ಪಂಚತಂತ್ರ, ವೇತಾಳ ಪಂಚವಿಂಶತಿ, ಕಥಾಸರಿತ್ ಸಾಗರಗಳಂತಹ ಜಾನಪದ ಕತೆಗಳ ಸಂಸ್ಕೃತದಲ್ಲಿ; ರಾಜತರಂಗಿಣಿಯೂ ಇತಿಹಾಸ, ಲೋಕಕಥೆಗೆ ಸಂಬಂಧಪಟ್ಟುದೆ. ದಶಕುಮಾರ ಚರಿತವೂ ಚರಿತ್ರಗ್ರಂಥವೆ ಆಗಿದೆ. ಆದಕಾರಣ ಈ ಪದಗಳು ಜಾನಪದದ ಭಾಷೆಯಿಂದಲೇ ಸಂಸ್ಕೃತದಲ್ಲಿ ನುಸುಳಿಕೊಂಡಿವೆಯೆಂದು ಹೇಳಬೇಕಾಗುತ್ತದೆ.

೪. ೧೨ನೆಯ ಶತಮಾನದಲ್ಲಿ ಆಗಿ ಹೋದ ಹೇಮಚಂದ್ರನು ತನ್ನ 'ದೇಶೀ ನಾಮ ಮಾಲಾ' ಎಂಬ ಗ್ರಂಥದಲ್ಲಿ 'ಹಟ್ಟಿ ಗೃಹಭೇದೇ', ಹಟ್ಟಿಯೆಂಬುದು ಮನೆಯ ಒಂದು ಬಗೆ, ಎಂಬುದಾಗಿ ಹೇಳಿದ್ದಾನೆ. ಆದುದರಿಂದ, ಹಟ್ಟ, ಹಟ್ಟಿಯೆಂಬುದಾಗಿ ಹೇಳಿದ್ದಾನೆ. ಆದುದರಿಂದ ಹಟ್ಟ ಅಥವಾ ಹಟ್ಟಿಯೆಂಬುದು ದೇಶೀಯ ಪದವೆಂದು ಹೇಮಚಂದ್ರನ ಅಭಿಪ್ರಾಯವಿದ್ದಂತಾಯಿತು. ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳೆರಡರಲ್ಲೂ ತಜ್ಞನಾದ ಹೇಮಚಂದ್ರನಿಗೆ ಹಟ್ಟಿಯು ಸಂಸ್ಕೃತ ಅಥವಾ ಪ್ರಾಕೃತಗಳಲ್ಲಿ ಯಾವುದಕ್ಕೂ ಹೊಂದಿಕೊಂಡುದಲ್ಲವೆಂದು ತೋರಿ ಆತನು ಅದನ್ನು ದೇಶೀಯ ಪದಗಳ ಪಟ್ಟಿಯಲ್ಲಿ ಸೇರಿಸಿದ್ದು ಸ್ಪಷ್ಟವಿದೆ.

ದೇಶೀ ನಾಮಗಳೆಂದರೇನು? ವಿಸ್ತಾರವಾದ ಭರತಖಂಡದ ನಾನಾ ದೇಶಗಳಲ್ಲಿ ಸಂಸ್ಕೃತ ಮತ್ತು ಪ್ರಾಕೃತಗಳು ಅಂದು ಹಬ್ಬಿದಾಗ, ಆಯಾಭಾಗದ ಮೂಲ ಭಾಷೆಗಳೊಳಗಣ ಅನೇಕ ಪದ-ಪ್ರಯೋಗಗಳು ಸಂಸ್ಕೃತ ಮತ್ತು ಪ್ರಾಕೃತಗಳಲ್ಲಿ ಸೇರಿಕೊಂಡುವು. ಇಂದು ಈ ಬಗೆಯಾಗಿ ಇಂಗ್ರೇಜಿಯಲ್ಲಿ ಹಲವು ಪ್ರಾಂತೀಯ ಶಬ್ದಗಳು ಸೇರಿಕೊಂಡಿದ್ದುದನ್ನು ನಾವು ನೋಡುತ್ತಿದ್ದೇವೆ. ಇಂತಹ ಪದಗಳಿಗೇ ದೇಶೀನಾಮಗಳೆಂದು ಹೇಳುವ ವಾಡಿಕೆಯಿದೆ. ಡಾ. ಸಿಲ್ವನ್ ಲೆವಿ, ಪ್ರಿಲಸ್ಕಿ ಮೊದಲಾದ ವಿದ್ವಾಂಸರು ಸಂಸ್ಕೃತದೊಳಗಿನ ಜೇಮನ, ತಂಬುಲ, ಬಾಲ, ಲಿಂಗ ಮೊದಲಾದ ಶಬ್ದಗಳು ಆರ್ಯ ಮತ್ತು ದ್ರಾವಿಡರಿಗಿಂತಲೂ ಮೊದಲು ಇಲ್ಲಿ ನೆಲೆಯಾಗಿದ್ದ ಆಸ್ಟ್ರೊ-ಏಶಿಯಾಟಿಕ್ ವರ್ಗದ ಜನಗಳ ಭಾಷೆಯಿಂದ ಬಂದುವೆಂದು ತೋರಿಸಿಕೊಟ್ಟಿದ್ದಾರೆ.

ಅದೇ ಮೇರೆಗೆ ಸಂಸ್ಕೃತದಲ್ಲಿ ಕಾಣಿಸಿಕೊಳ್ಳುವ ಪಟ್ಟ, ಪಟ್ಟಿ, ವಾಟ, ವಾಟಿಕಾ, ಹಟ್ಟ, ಪಲ್ಲಿ ಮೊದಲಾದ ಮಾತುಗಳು ದೇಶೀನಾಮಗಳೇ ಆಗಿವೆ. ಹೇಮಚಂದ್ರನು 'ಗ್ರಾಮೇ ಊರುಃ' ॥ ೧೪೩ ॥ ಎಂದು ಹೇಳಿದ್ದುದರ ಮೇಲಿಂದ 'ಊರು' ಎಂಬುದು ಸಹ ಪಟ್ಟಿ, ಹಟ್ಟಿ ಮೊದಲಾದ ಗ್ರಾಮವಾಚಕಗಳಂತೆ ಸಂಸ್ಕೃತ, ಪ್ರಾಕೃತಗಳಲ್ಲಿ ನುಸುಳಿಕೊಂಡಿದ್ದಿತೆಂದು ಸ್ಪಷ್ಟವಾಗಿ ಕಂಡುಬರುತ್ತದೆ!

ಸಂಸ್ಕೃತವು ದೇಶೀಯ ನಾಮಗಳನ್ನು ತನ್ನ ಒಡಲಲ್ಲಿ ಅರಗಿಸಿಕೊಂಡು ಬಿಟ್ಟಿರುವುದರಿಂದ ಅವನ್ನು ಬೇರ್ಪಡಿಸಿ ಸಂಸ್ಕೃತದಿಂದ ಭಿನ್ನವಾದುವೆಂದು ನಿರ್ಧರಿಸಿ ಹೇಳುವುದು ತುಂಬ ಪರಿಶ್ರಮದ ಕೆಲಸವಾಗಿದೆ. ಹೇಮಚಂದ್ರನಂತಹ ಉಭಯ ಭಾಷಾ ವಿಶಾರದನೇ ಇದು ತೀರ ಕಷ್ಟದ ಕೆಲಸವೆಂದು ಹೇಳುತ್ತಾನೆ. 'ದೇಶೀ ದುಃಖಸಂದರ್ಭಾ ಪ್ರಾಯಃ ಸಂದರ್ಭಿತಾऽಪಿ ದುರ್ಬೋಧಾ' ಎಂಬುದು ಹೇಮಚಂದ್ರನ ಅನುಭವದ ಉಕ್ತಿಯಾಗಿದೆ.

ಸಂಸ್ಕೃತ, ಪ್ರಾಕೃತಗಳಲ್ಲಿ ಸೇರಿದ ದೇಶೀನಾಮಗಳು 'ದುಃಖ ಸಂದರ್ಭ'ವಾಗಿವೆ, ಎಂದರೆ ಅವನ್ನು ಗುರುತಿಸುವುದೆ ಕಷ್ಟವಾಗಿದೆ. ಏಕೆಂದರೆ: ಸಂಸ್ಕೃತ ಪ್ರಾಕೃತಗಳಲ್ಲಿ ಅವು ತದ್ರೂಪವಾಗುತ್ತವೆ; ತತ್‌ರೂಪವನ್ನು ತಾಳುತ್ತವೆ. 'ಊರು' ಪುರವೆಂಬ ರೂಪತಾಳಿದ್ದರೆ ಅದನ್ನು ಗುರುತಿಸುವುದು ಹೇಗೆ ಸುಲಭಸಾಧ್ಯ? ಹಟ್ಟಿಯೆ ಹಟ್ಟವೆಂಬ ರೂಪತಾಳಿಲ್ಲವೆ? ಪಾಡಿಯು ವಾಡಿ, ವಾಟ, ವಾಟಿಕಾ ಎಂದಾಗಿಲ್ಲವೆ? ಅಲ್ಲದೆ ಸಂಸ್ಕೃತ ಭಾಷೆಯಲ್ಲಿ ಧಾತ್ವರ್ಥಗಳ ವಿಸ್ತಾರವು ಸರ್ವವ್ಯಾಪಿಯಾಗಿದೆ. ಬೇಕಾದ ಶಬ್ದವನ್ನೂ ಸಂಸ್ಕೃತಕ್ಕೆ ತಿರುಗಿಸಿ ಕೊಳ್ಳಬಹುದು; ಸಂಸ್ಕೃತ ಧಾತುಗಳಿಂದ ಸಾಧಿತವೆಂದು ಸಿದ್ಧಪಡಿಸಬಹುದು. ಮಾಕ್ಷಮುಲ್ಲರದಿಂದ ಮೋಕ್ಷಮುಲ್ಲರವಾಯಿತೊ, ಅಥವಾ ಮೋಕ್ಷ ಮುಲ್ಲರದಿಂದ ಮ್ಯಾಕ್ಸ ಮುಲ್ಲರವೆಂದು ಮಾರ್ಪಟ್ಟಿತೊ ಎಂಬುದೂ ಸಂದೇಹಾಸ್ಪದವಾಗುವ ಹಾಗಿದೆ. ಡಾಸಸ-ದೇವಸೇನ, ಅಂಡರ ಸನ್-ಇಂದ್ರಸೇನ ಮೊದಲಾದ ಹೆಸರುಗಳು ಹೀಗೆಯೆ ಪ್ರಚಾರದಲ್ಲಿ ಬಂದಿದೆ. ಇವಕ್ಕೆ ಐತಿಹಾಸಿಕ ಹಿನ್ನೆಲೆಯ ನಿಶ್ಚಿತವಾದ ಆಧಾರವು ಇಲ್ಲದಿದ್ದಲ್ಲಿ ಇವೂ ದುಃಖ ಸಂದರ್ಭವಾಗುತ್ತಿದ್ದುವು.

ಹೇಮಚಂದ್ರನ್ನು, ದೇಶೀಯ ಪದಗಳಿಗೆ ಸರಿಯಾದ ಅರ್ಥವೆ ಆಗುವುದಿಲ್ಲ; ಅದರಿಂದ ಅವು 'ದುರ್ಬೋಧ'ವಾಗಿರುತ್ತವೆಂದು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತಾನೆ. ಸಂಸ್ಕೃತ ಧಾತುಗಳನ್ನು ಎಳೆದಾಡಿ ಅರ್ಥ ಹಚ್ಚುವ ಇಲ್ಲದ ಪಾಂಡಿತ್ಯ ಪ್ರದರ್ಶನವನ್ನು ಮಾಡಬೇಕೆಂದಿದ್ದರೆ ಹೇಮಚಂದ್ರನಿಗೆ ಅದು ಅಸಾಧ್ಯವಿದ್ದಿಲ್ಲ. ಆದರೆ ಅವನು ಆ ಗೋಜಿಗೆ ಹೋಗಲಿಲ್ಲ. ಹಟ್ಟಿ-ಹಟ್ಟವು ದೇಶೀ ನಾಮವೆಂದು ಯಾವ ಸಂಕೋಚವಿಲ್ಲದೆ ಒಪ್ಪಿಕೊಂಡುಬಿಟ್ಟನು. ದೇಶೀಯ ಪದಗಳು ಸಂಸ್ಕೃತದಲ್ಲಿ ಸೇರಿವೆಯೆಂದು ಒಪ್ಪಿಕೊಳ್ಳಲು ಎಷ್ಟೊ ಪಂಡಿತರಿಗೂ ಆರ್ಯಾಭಿಮಾನಿಗಳಿಗೂ ಹೇಗೆ ಹೇಗೊ ಎನಿಸುವುದು. ಸಂಸ್ಕೃತದಂತಹ ಪರಿಪೂರ್ಣ ಭಾಷೆಗೆ ಪರಭಾಷೆಯ ಪದಗಳ ಆವಶ್ಯಕತೆಯೇನು? ಸಂಸ್ಕೃತವು ಶುದ್ಧಭಾಷೆ. ಗೀರ್ವಾಣವಾಣಿ. ದೇವತೆಗಳ ಈ ಭಾಷೆಯಲ್ಲಿ ಅನಾರ್ಯದ ಮಾತುಗಳು ಬೆರೆತಿವೆಯೆಂಬ ವಿಚಾರವೇ ಈ ಪಂಡಿತವರ್ಗಕ್ಕೆ ಅಸಹ್ಯವಾಗುತ್ತದೆ. ಇಂತಹರು ಸಂಸ್ಕೃತದಲ್ಲಿರುವ ಎಲ್ಲ ಪದಗಳೂ ಸಂಸ್ಕೃತ ಧಾತುಗಳಿಂದಲೇ ಬಂದುವೆಂದು ಸಾಧಿಸುತ್ತಾರೆ. ಇನ್ನೊಂದು

ಜನಾಂಗದ ಏನೂ ಸಂಪರ್ಕವಿಲ್ಲದೆ ಇರುವುದು ಎಲ್ಲಿಯ ವರೆಗೆ ಸಾಧ್ಯವಿಲ್ಲವೊ ಅಲ್ಲಿಯ ವೆರೆಗೆ ಪರಭಾಷೆಯ ಶಬ್ದಗಳು ಸೇರಿಕೊಳ್ಳದೆ ಇರುವ ಭಾಷೆಯೆ ಲೋಕದಲ್ಲಿ ದೊರೆಯಲಾರದು.

ಪಟ್ಟಿ, ಹಟ್ಟಿಗಳು ಕಂನುಡಿಗೆ ಸಂಬಂಧಪಟ್ಟ ಪದಗಳೆಂದು ಗ್ರಹಿಸಿದರೆ ಮುಂದೆ ಹಲವು ವಿಚಿತ್ರ ಸಂಗತಿಗಳಿಗೆ ತಲೆದೂಗುವ ಪ್ರಸಂಗಬರುವುದಲ್ಲ! ಎಂದು ಕೆಲರು ಗಾಬರಿಗೊಂಡು ಕೇಳಬಹುದಾಗಿದೆ. ಮರಹಟ್ಟ, ಕರಹಟ್ಟಗಳು ಕಂನಾಡವರ ನೆಲೆವೀಡೆಂದು ಹೇಳಬೇಕಾಗುವುದು! ಕರಹಟ್ಟ ಅಥವಾ ಕರ್ಹಾಡವು ಕರ್ಣಾಟದ ಗಡಿಯಲ್ಲಿರುವುದರಿಂದ ಕರಾಡವೂ ಒಮ್ಮೆ ಕರ್ಣಾಟದ ಅಂಗವಾಗಿದ್ದಿತೆನ್ನಬಹುದು. ಆದರೆ ವರ್ಹಾಟ್ಟ, ಮರ್ಹಾಟದ ಬಗೆಗೆ ಹೀಗೆ ಹೇಳುವುದು ಹೇಗೆ? 'ಕಣ್ಮರೆಯಾದ ಕಂನಡದ' ವಿಮರ್ಶೆಯನ್ನು ಬರೆವಾಗ ನನ್ನ ಒಬ್ಬ ವಿದ್ವಾಂಸರಾದ ಗೆಳೆಯರಿಗೂ ಈ ದಿಗಿಲಾದುದುಂಟು! ಮಹಾರಾಷ್ಟ್ರವೂ ಒಮ್ಮೆ ಕರ್ಣಾಟದ ಭಾಗವಾಗಿದ್ದಿತೆಂಬುದು ಪ್ರಾಂತಾಭಿಮಾನದ ಅತಿರೇಕದಿಂದ ತಲೆಕೆಟ್ಟು ಆಡಿದ ಮಾತೆಂದು ಅವರ ಗ್ರಹಿಕೆಯಾಗಿದ್ದಿತು! ವಾಸ್ತವ ಸಂಗತಿಗಳು ನನ್ನನ್ನು ಆ ನಿರ್ಣಯಕ್ಕೆ ಒತ್ತಾಯಪಡಿಸಿರುವವೆ ಹೊರತು, ಯಾವ ಪ್ರಾಂತಾಭಿಮಾನದ ಉಲ್ಬಣವೂ ನನ್ನನ್ನು ಕೆರಳಿಸಿಲ್ಲವೆಂದು ನಾನು ಹೇಳಬಲ್ಲೆ.

ಪಟ್ಟಿ, ಹಟ್ಟಿ ಎಂಬುದು ಕಂನುಡಿಯದಾಗಿದ್ದರೆ ಈ ಹೆಸರಿನ ಪ್ರದೇಶವೂ ಅವರದೇ ಆಗಿರಲಿಕ್ಕೆ ಬೇಕೆಂದು ಬೇರೆ ಹೇಳಬೇಕೆ? ಪಟ್ಟಿ, ಹಟ್ಟಿಗಳಷ್ಟೆ ಅಲ್ಲ; ಪಾಡಿಗಳೂ ಮಹಾರಾಷ್ಟ್ರದಲ್ಲಿವೆ. ಹಟ್ಟ ಮತ್ತು ಹಾಟ ಎಂಬುದಕ್ಕೆ ಆರಿಯ ಮಾತಿನಲ್ಲಿ ಇರುವ ಅರ್ಥಗಳಿವು:

ಹಟ್ಟ, ಹಾಟ : ಪೇಟೆ; ಸಂತೆ; ತಿರುಗುವ ಫೇಟೆ; ಜಾತ್ರೆ; ಹಾಟವಟಿ; ಹಟ್ಟವಟ; ಹಾಟ ಬಾಜಾರ ಎಂಬ ಜೋಡು ನುಡಿಗಳನ್ನೂ ಅಲ್ಲಿ ಹೇಳಿದ್ದಾರೆ;

ಹಟ್ಟಿ ೧. ಸಣ್ಣಸಂತೆ; ಜಾತೆ; ೨. ಒಂದೇ ಬಗೆಯ ವ್ಯವಸಾಯದ ಅಥವಾ ಜಾತಿಯ ಜನರ ಮನೆಗಳ ಎಡೆ; ೩. ಊರಿಂದ ಕಿರಿದು ಅಂತರದಲ್ಲಿರುವ ಭಿಲ್ಲ, ರಾಮೋಶಿ ಮೊದಲಾದವರ ಬಿಡಾರ; ೪. ಭಿಲ್ಲ, ರಾಮೋಶಿ, ಕೊರಚರ ಬೀಡು; ೫. ಇಂತಹರ ತಂಡ; ಟೋಳಿ.

ಪಟ್ಟಿ ಅಗಲಕಡಿಮೆ ಇದ್ದು ಉದ್ದವಾಗಿರುವ ನೆಲದ ತುಂಡು; ಹೊಲ; (ಅಲ್ಲದೆ ಇನ್ನೂ ಹಲವು ಬೇರೆ ಬಗೆಯ ಅರ್ಥಗಳೂ ಉಂಟು.)

ಪಾಡಾ, ಪಾಡಿ : ೧. ಒಕ್ಕಲತನದ ಅನುಕೂಲತೆಗಾಗಿ ಊರಿಂದ ಸ್ವಲ್ಪ ದೂರ ಹೊಲದ ಹತ್ತಿರಕಟ್ಟಿದ ಗುಡಿಸಲುಗಳ; 'ವಾಡಿ' ಸಣ್ಣ ಹಳ್ಳಿ; ೨. ಒಕ್ಕಲತನದವರ ಗುಡಿಸಲು; ೩. ಪಟ್ಟಣದೊಳಗಿನ ಪೇಟೆ, ದೊಡ್ಡ ಓಣಿ; ಎಂಬ ಅರ್ಥಗಳನ್ನು ಕೊಟ್ಟು ಇದು ಗುಜರಾತಿಯಲ್ಲಿ ಪಾಡೋ (ಹಳ್ಳಿ) ಬಂಗಾಳಿಯಲ್ಲಿ ಪಾಡಾ (ಪೇಟೆ); ಸಿಂಧಿಯಲ್ಲಿ ಪಾಡೋ (ವಸತಿ ಸ್ಥಾನ) ಎಂಬ ತೆರನಾಗಿ ಬಳಕೆಯಲ್ಲಿರುವುದಾಗಿ ಹೇಳಿದೆ.

ಸ್ಥಿತಿ, ಅವಸ್ಥೆ ಎಂಬರ್ಥದ ಪಡು ಧಾತುವಿನ ರೂಪಗಳಾದ ಪಾಡು ಎಂಬ ಶಬ್ದವೂ ಮರ್ಹಾಟಿಯಲ್ಲಿದೆ. ಪಕ್ವಸ್ಥಿತಿ-ಪಾಡು ಎಂಬುದನ್ನು ಏಕನಾಥನು ಉಪಯೋಗಿಸಿದ್ದಾನೆ. 'ಅಂಬಯಾ ಪಾಡೂ ಲಾಗಲಾ ಜಾಣ'. ಜ್ಞಾನೇಶ್ವರಿಯಲ್ಲಿಯೂ ಈ ಪದವಿದೆ. 'ಪಾಡ-ಪಂಚಾಯಿತ' ಎಂಬ ಪಡೆನುಡಿ ಇದ್ದು ಊರ ಪಂಚರು ಸೇರಿ ಮಾಡಿದ ಊರ ಸ್ಥಿತಿಯ ಚೌಕಶಿ ಎಂದು ಅದರ ಅರ್ಥ.

ಪಾಡಿಯನ್ನು ಊರು ಎಂಬರ್ಥದಲ್ಲಿ ಮರ್ಹಾಟಿಯ ಆದಿ ಗ್ರಂಥಕಾರರಾದ ಮಹಾನುಭಾವರು ಮತ್ತು ಜ್ಞಾನೇಶ್ವರರೂ ಬಳಸಿದ್ದಾರೆ; 'ಕೈವಲ್ಯಾಚೀ ಪಾಡಿ' (ಮಹಾನುಭಾವ); 'ಸ್ವದ್ವಾಸನೇಚಿಯಾ ಪಾಡಿ ಆಲಾ' (ಜ್ಞಾನೇ. ೭. ೧೨೬); ಕೈವಲ್ಯವೆಂಬ ಊರು, ಸದ್ವಾಸನೆಗಳೆಂಬ ಊರು ಎಂಬುದಾಗಿ ಇಲ್ಲಿ ಅರ್ಥವುಂಟು.

ಗೌಡನಿಗೆ ಪಾಡೇಮೋತ ಮತ್ತು ಪಾಟೀದಾರ ಎಂದು ಪರ್ಯಾಯ ನಾಮಗಳಿವೆ.

ಮರ್ಹಾಟಿಯಲ್ಲಿ ವಾಡಾ ಮತ್ತು ವಾಡೀ ಶಬ್ದಗಳಿಗೆ ಇರುವ ಅರ್ಥವು ಅಭ್ಯಸನೀಯವಾಗಿದೆ.

ವಾಡಾ : ೧. ಭವ್ಯಮಂದಿರ; ಪ್ರಾಸಾದ; ಅರಮನೆ; ೨. ಓಣಿ; ಕೇರಿ; ೩. ಹಳ್ಳಿಯ ಭಾಗ; ೪. ಆವಾರ; ೫. ದನ, ಕುರಿ, ಆಡುಗಳನ್ನು ಕಟ್ಟುವ ಎಡೆ (ಬಯಲು ಇಲ್ಲವೆ ಛಾವಣಿ ಇರುವಂತಹವು); ೬. ಕುರಿಗಳ ಮಂದೆ. ಇದರ ಪ್ರಯೋಗಗಳು ಮಹಾನುಭಾವರ ಕಾಲದಿಂದಲೂ (೧೨ನೆಯ ಶತಮಾನ) ದೊರೆಯುತ್ತವೆ.

ವಾಡಾಚಾರ, ಎಂದರೆ 'ವಾಡಿ'ಕೆ; ಪಾಡಿಯಲ್ಲಿ (ಊರಲ್ಲಿ) ರೂಢವಾಗಿರುವ ಸಂಪ್ರದಾಯಗಳು.

ವಾಡಿ : ೧. ತೋಟ; ೨. ದೊಡ್ಡ ಊರ ಹತ್ತಿರದ ಸಣ್ಣ ವಸತಿ; 'ವತನವಾಡಿ' ಎಂಬ ಜೋಡು ನುಡಿಯಿದೆ. ವಾಡ್ಯಾ ಎಂದರೆ ವಾಡಿಯ ವತನದಾರ;

(ಕೋಶಕಾರರು ಈ ಅರ್ಥವನ್ನು ವಿಕಾಸಕ್ರಮಕ್ಕನುಸರಿಸಿ ಪರಿವಿಡಿಯಿಂದ ಹೇಳಿದ್ದರೆ ಚೆನ್ನಾಗಿತ್ತು)

ಮೇಲಣ ವಿವರಣದಿಂದ ಆರಿಯ ಮಾತಿನಲ್ಲಿ ಹಟ್ಟಿ, ಹಾಟ, ಪಾಡು, ಪಾಡಾ, ಪಾಡಿ ಹಾಗೂ ವಾಡಾ ವಾಡಿ ಈವುಗಳಿಗೆ ಇರುವ ಅರ್ಥಗಳೆಲ್ಲವೂ ಒಂದಕೊಂದು ಸಂಬಂಧಪಟ್ಟವುಗಳೇ ಆಗಿವೆಯೆಂಬುದು ನಿದರ್ಶನಕ್ಕೆ ಬರುತ್ತದೆ. ಆದಕಾರಣ ಇವೆಲ್ಲವೂ ಪಟ್ಟಿ, ಪಾಡಿ ಎಂಬುದರ ಭಿನ್ನರೂಪಗಳೆಂದು ಹೇಳಬೇಕಾಗುತ್ತದೆ. ಇಲ್ಲಿ ಒಂದು ವಿಚಾರಾರ್ಹವಾದ ಮಾತಿದೆ. ಸಂಸ್ಕೃತ ಪ್ರಾಕೃತಗಳಲ್ಲಿ ಪಾಡಿ, ಪಾಡು ಇಲ್ಲ. ವಾಟ (ವಾಡಿ) ಹಟ್ಟ ಇದೆ. ಹಾಗಾದರೆ ಪಾಡಿಯಿಂದ ವಾಡಿ (ವಾಟ), ಹಟ್ಟಿ (ಹಟ್ಟ)ಗಳು ನಿಷ್ಪನ್ನವಾದುವೆಂದು ಬಗೆಯುವುದು ಸಮಂಜಸವೊ? ಅಥವಾ ಸಂಸ್ಕೃತ, ಪ್ರಾಕೃತ ವಾಟ-ವಾಟಿಗಳಿಂದ ಪಾಡಿ-ಪಾಡು ಎಂಬುದು ಬಂದಿತೆಂದು ಗ್ರಹಿಸುವುದು ಲೇಸೆ? ನನ್ನ ತಿಳುವಳಿಕೆಯಂತೆ ಮೊದಲನೆಯದೇ ಸರಿ. ಎರಡನೆಯದಕ್ಕೆ ಏನೂ ಆಧಾರವೇ ದೊರೆಯದು. ಏಕೆಂದರೆ ವಕಾರದಿಂದ ಪಕಾರವಾಗದು; ಪಕಾರವೆ ವಕಾರವಾಗಬಲ್ಲದು. ಆದಕಾರಣ ಯಾವ ನಾಡಿನ ಹೆಸರು ಮರಹಾಟ, ಯಾವ ನಾಡಿನಲ್ಲಿ ಹಟ್ಟಿ, ಹಾಟ, ಪಾಡಿ, ಪಾಡಾ ಎಂಬ ಊರುಗಳಿವೆ, ಅದು ಒಂದು ಕಾಲಕ್ಕೆ ಕಂನಾಡ ಹಟ್ಟಿಕಾರರ ನೆಲೆವೀಡಾಗಿದ್ದಿತೆಂದು ಹೇಳಲು ಮತ್ತೂ ಬೇರೆ ಪ್ರಮಾಣಗಳು ಬೇಕೆ?

ಮರಹಾಟ ಶಬ್ದವು ಮೂಲವಲ್ಲ. 'ಮಹಾರಾಷ್ಟ್ರ'ದ ತದ್ಭವ 'ಮರಹಾಟ'ವೆಂದು ಒಂದು ಆಕ್ಷೇಪಣೆಯು ತಲೆದೋರಬಹುದು. ಆದರೆ, ಇದರಲ್ಲಿ ಹುರುಳಿಲ್ಲ. ಕರ್ಣಾಟ ತದ್ಭವ ಕಂನಾಡು, ಕನ್ನಡ ಎಂಬೀ ಬಗೆಯ ಗತಾನುಗತಿಕರ ವಾದವಿದು. ಮೂಲ ಹೆಸರು ಅಲ್ಲಿಯ ದೇಶಭಾಷೆಯಿಂದ ಅರ್ಥವಾಗುವಂತಹದಾಗಿರುವುದು ಒಂದು ಸಾಮಾನ್ಯ ನಿಯಮವಾಗಿದೆ. ನರ್ಮದೆಯ ದಕ್ಷಿಣಕ್ಕೆ ಆರ್ಯರೇ ಇಲ್ಲದಿರುವಾಗ ಆರಿಯರ 'ಮಹಾರಾಷ್ಟ್ರ'ವೆಂಬ ಹೆಸರಾದರೂ ಎಲ್ಲಿಂದ ಬಂದೀತು? ಮರಹಾಟ ಅಥವಾ ಮರಹಟವೆಂಬುದರ ಸಂಸ್ಕೃತಕ್ಕೆ ಮಾರ್ಪಡಿಸಿಕೊಂಡ ರೂಪವೇ 'ಮಹಾರಾಷ್ಟ್ರ'ವೆಂಬುದಾಗಿದೆ. ಮುನ್ನವಳ್ಳಿಯು ಮುನಿವಲ್ಲಿಯಾದಂತೆ. ಏಕೆಂದರೆ ಮರಹಾಟಕ್ಕೆ ಸಮಾನಾರ್ಥಕವಾದ 'ಝಾಡಿಮಂಡಲ'ವೆಂಬ ಹೆಸರು ವರಹಾಟದ ಭಾಗದಲ್ಲಿ ಒಂದು ಕಾಲಕ್ಕೆ ರೂಢವಾಗಿದ್ದಿತೆಂದು ಬೆಳಕಿಗೆ ಬಂದಿದೆ. 'ಝಾಡಿ ಮಂಡಲ' ವೆಂಬುದು 'ಮರ-ಹಾಟ' ದ ಶುದ್ಧ ಭಾಷಾಂತರ. ಮೂಲ ಹೆಸರು ಮರಹಟ್ಟಿ ಎಂದಿದ್ದು ಆರಿಯರು ಅದನ್ನು ಝಾಡಿಮಂಡಲವೆಂದು ತಮಗೆ ಅರ್ಥವಾಗುವ ಹಾಗೆ ಭಾಷಾಂತರಿಸಿಕೊಂಡರು. ಆದರೆ ಪಂಡಿತರಿಗೆ ಈ ಹೆಸರು ಅಷ್ಟು ಪ್ರೌಢ ಗಂಭೀರವೆನಿಸದಿರುವುದು ಸಹಜ. ಆದಕಾರಣ ಅವರು ಮರಹಾಟವನ್ನು ಮಹಾರಾಷ್ಟ್ರವೆಂದು ಮಾರ್ಪಡಿಸಿ ಕೊಂಡರೆಂದು ಹೇಳಬಹುದಾಗಿದೆ.

ಆರ್ಯರು ದಕ್ಷಿಣಾಪಥಕ್ಕೆ ಬರುವ ಮೊದಲು ಇಂದಿನ ಗುಜರಾತ, ಮಹಾರಾಷ್ಟ್ರಗಳಲ್ಲಿ ಪಾಡಿಗಳೇ ನೆಲಸಿದ್ದರೆಂದು ಈ ಮೇಲಣ ಸಂಗತಿಗಳಿಂದ ಒಪ್ಪಬೇಕಾಗುತ್ತದೆ. ಮರಹಾಟದಂತೆ ಗುಜರಾತಿನಲ್ಲಿ ಪಾಡಿಗಳಿವೆ; ವಾಡಿಗಳಿವೆ. ಬಡೋದೆ ಸಂಸ್ಥಾನದೊಳಗಿನ 'ವಡನಗರ'ವೆಂಬುದು ನನ್ನ ತಿಳುವಳಿಕೆಯಂತೆ ವಾಡ-ನಗರ ವಾಗಿರಬೇಕು. ಇದು ಒಂದು ಹಳೆಯ ಊರು. ಇಲ್ಲಿ ಹಾಟಕೇಶ್ವರನ ಪುರಾತನ ದೇವಾಲಯವಿದೆ.[೧] ಹಾಟಕೇಶ್ವರನ ಮೂಲ ಆರಾಧಕರು ಹಟ್ಟಿಕಾರರೇ ಇರಬೇಕಷ್ಟೆ? ಪುರಾತನ ಕಾಲದಲ್ಲಿ ಇದೂ ಹಟ್ಟಿಕಾರರ ಎಂದರೆ ಪಟ್ಟಿ (ಪಾಡಿ)ಗಳ ನಾಡು ಆಗಿದ್ದಿತು. ಗುಜರಾತದ ಗ್ಯಾಝಿಟಿಯರಿನಲ್ಲಿ 'ಪಟೇಲಿಯಾ' ಎಂಬ ಒಂದು ಜನವಿದ್ದುದನ್ನು

ವರ್ಣಿಸಿದೆ. ಪಟೇಲರೆಂಬ ಮನೆತನದವರು ಸಾಮಾನ್ಯವಾಗಿ 'ಪಟೇಲಿಯಾ' ಬಗೆಯವರೇ ಆಗಿದ್ದಾರೆ. 'ಪಟೇಲ' ಎಂದರೆ ಕೇವಲ ಗ್ರಾಮಾಧಿಕಾರಿ ಎಂದು ಮಾತ್ರ ಅರ್ಥವಲ್ಲ. ಇದೊಂದು ಜನವಾಚಕ ಶಬ್ದ. ಪಟೇಲಿಯಾಗಳು ಒಕ್ಕಲತನ ಮಾಡುವ ಜನವೆಂದು ಆ ಗ್ಯಾಝಿಟಿಯರು ಹೇಳುತ್ತದೆ. ಈಗಿನ ಈ ಪಟೇಲಿಯಾಗಳ ಮೂಲ ಮನೆತನಗಳು ನಾನು ಹೇಳುವ ಪಟ್ಟಿ ಅಥವಾ ಪಾಡಿಗಳ ಬುಡಕಟ್ಟಿನವರೆಂದು ನನ್ನ ಮತ.

ಈ ಅಭಿಪ್ರಾಯವು ಕೆಲರಿಗೆ ವಿಪರೀತ ಸಾಹಸದ್ದೆನಿಸಬಹುದು. ಸಾಕಷ್ಟು ಆಧಾರಗಳಿಲ್ಲದೆ ಆಡುತ್ತಿರುವ ಮಾತು ಇದಲ್ಲ. ಗುಜರಾತಿ ಮತ್ತು ಮರ್‍ಹಾಟಿಗಳಿಗೂ ಕಂನುಡಿಗೂ ಇರುವ ಹಲವು ಬಗೆಯ ಸಾಮ್ಯವನ್ನು ಕುರಿತು ಮಿ. ಮಾಸ್ಟರ, I. C. S. ಇವರು ರಾಯಲ್ ಏಶಿಯಾಟಿಕ್ ಜರ್ನಲಿನಲ್ಲಿ ವಿಸ್ತೃತವಾದ ಲೇಖನಗಳನ್ನು ಬರೆದಿದ್ದಾರೆ. ಗುಜರಾತಿಯಲ್ಲಿರುವ ಪಾಡಿ, ಪಟ್ಟಿ ವಾಡಿ ಎಂಬ ಗ್ರಾಮನಾಮಗಳೂ, ಪಟೇಲಿಯಾ ಎಂಬ ಪಟ್ಟಿಲ ಜನಾಂಗವೂ ಇದ್ದುದಕ್ಕೆ ಏನು ಅರ್ಥ ಹೇಳುವುದು? ಮಹಾತ್ಮಾಜೀಯವರು ಉಪ್ಪಿನ ಸತ್ಯಾಗ್ರಹಕ್ಕಾಗಿ ಆರಿಸಿದ 'ದಾಂಡಿ' ಎಂಬ ಹಳ್ಳಿಯ ಹೆಸರೇನು ಹೇಳುವುದು? ಅದೊಂದು ಸಮುದ್ರದ ದಂಡೆಯ ಊರು ಅಲ್ಲವೆ? ದಂಡೆ-ದಾಂಡಿ.

ಮರಹಟ್ಟಿಯ ಬಗೆಗೆ ಇನ್ನೂ ಒಂದು ವಿಶೇಷ ವಿಚಾರಾರ್ಹವಾದ ಸಂಗತಿಯಿದೆ. ಆರಿಯ ಮಾತು ಮೊದಲು ವರ್‍ಹಾಡದಲ್ಲಿಯೇ ತಲೆಯೆತ್ತಿತೆಂದು ಮಹಾರಾಷ್ಟ್ರದ ಎಲ್ಲ ವಿದ್ವಾಂಸರೂ ಒಪ್ಪುತ್ತಾರೆ. ವರ್‍ಹಾಟದ ಭಾಷೆಯಲ್ಲಿ ಕಂನುಡಿ ಹಲವು ಪದಪ್ರಯೋಗಗಳು ಇದ್ದುದಕ್ಕೆ ಏನು ಸಮಾಧಾನ ಹೇಳುವುದು? ಕಂನುಡಿಯ ಧಾತುಗಳೇ ಆರಿಯ ಮಾತಿನಲ್ಲಿವೆ! ನಡು, ತುಂಬ, ಕೊರೆ, ಕುಟ್ಟು, ಒಪ್ಪು, ಉಗುಳು, ಅಡಕು, ಒಟ್ಟು, ಹರಡು, ಪಿಟೆ ಮೊದಲಾದುವಂತೂ ಸರಿಯೇ. ಅಲ್ಲದೆ ನಮ್ಮ ಹಳನುಡಿಯ ಪ್ರಯೋಗಗಳೂ ಆರಿಯ ಮಾತಿನಲ್ಲಿ ದೊರೆಯುತ್ತವೆ. ಸೇಂದು ಧಾತುವು ಶಬ್ದಮಣಿದರ್ಪಣದಲ್ಲಿ ಅನುಸ್ವಾರಸಹಿತವಾಗಿದೆ. ಇಂದು ನಮ್ಮಲ್ಲಿ ಅದರ ಉಚ್ಚಾರದಲ್ಲಿ ಅನುಸ್ವಾರವಿಲ್ಲ. ಸೇದು ಎಂದು ಮಾತ್ರ ಹೇಳುವುದುಂಟು. ಆದರೆ ಮರಾಹಟದಲ್ಲಿ 'ಸೇಂದಣೇ' ಎಂಬ ಪ್ರಯೋಗವೇ ಇದೆ! ಇಂತಹ ಇನ್ನೂ ಹಲವು ಪ್ರಯೋಗಗಳಿವೆ. ಅವುಗಳ ವಿಸ್ತಾರಕ್ಕೆ ಇಲ್ಲಿ ಇಂಬಿಲ್ಲ. ಮಹಾನುಭಾವರ ಸಾಹಿತ್ಯ ಮತ್ತು ಜ್ಞಾನೇಶ್ವರಿಯು ಇಂತಹ ಪ್ರಯೋಗಗಳ ಆಗರವಾಗಿದೆ. ಇದನ್ನೆ ಕುರಿತು ಬೇರೆ ಪ್ರಬಂಧ ಬರೆಯಲಿದ್ದೇನೆ.

ಸಾಮಾನ್ಯವಾಗಿ ನಾಮಗಳನ್ನು ಮಾತ್ರ ಪರಭಾಷೆಯಿಂದ ಸ್ವೀಕರಿಸುವುದು ವಾಡಿಕೆಯಾಗಿದೆ. ಸಂಸ್ಕೃತ ಮತ್ತು ಕಂನುಡಿಗಳ ಸಂಪರ್ಕವು ಬಂದು ಎರಡುಮೂರುಸಾವಿರ ವರುಷಗಳಿಗೆ ಮೀರಿದ್ದರೂ ಇವುಗಳಲ್ಲಿ ನಾಮಗಳ ವಿನಿಮಯವು ಕಂಡುಬರುವುದೆ ಹೊರತು ಧಾತುಗಳನ್ನು ಇದ್ದಕಿದ್ದಂತೆ (ಏನೂ ಪ್ರತ್ಯಯಾದಿಗಳನ್ನು ಸೇರಿಸದೆ) ಎತ್ತಿಕೊಂಡು ಬಳಸಿದ್ದು ಕಂಡುಬರುವುದಿಲ್ಲ. ಆದರೆ ಆರಿಯ ಮಾತಿನಲ್ಲಿ ಮಾತ್ರ ಈ ನೋಟವು ನೋಡಲು ಸಿಕ್ಕುತ್ತದೆ. ಇದಕ್ಕೆ ಕಾರಣವೇನು?

ಭಾಷೆಯು ಪ್ರೌಢಸ್ಥಿತಿಗೆ ಬರುವ ಮೊದಲು ಉಂಟಾದ ಸಂಪರ್ಕದಲ್ಲಿ ಮಾತ್ರ ಧಾತುಗಳನ್ನೂ ಪರಭಾಷೆಯಿಂದ ಎತ್ತಿಕೊಳ್ಳುವ ಸಂಭವವಿದೆ. ಇದನ್ನು ಎರಡು ಭಾಷೆಗಳನ್ನು ಆಡಬೇಕಾಗುವ ಚಿಕ್ಕಮಕ್ಕಳ ಮಾತಿನಲ್ಲಿ ಮನಗಾಣಬಹುದು.

ಆದಕಾರಣ ಕಂನುಡಿಯ ಧಾತುಗಳು ಆರಿಯ ಮಾತಿನ ಬಾಲ್ಯಾವಸ್ಥೆಯಲ್ಲಿಯೆ ಅದರಲ್ಲಿ ಸೇರಿರಲಿಕ್ಕೆ ಬೇಕು. ಆರಿಯ ಮಾತಿನ ಹುಟ್ಟುಮನೆ ವರಾಡ. ಆದುದರಿಂದ ಆರಿಯ ಮಾತಿನ ಜನ್ಮಕಾಲದಲ್ಲಿ ಅಲ್ಲಿ ಕಂನುಡಿಯು ಏಳ್ಗೆಯಲ್ಲಿರಬೇಕೆಂಬುದು ನಿಶ್ಚಿತ. ೧೦-೧೧ನೆಯ ಶತಮಾನದಲ್ಲಿ ಆರಿಯ ಮಾತಿಗೆ ಆರಂಭವಾಗಿದೆ. ಈ ಕಾಲವು ಕಂನಾಡವರು ವೈಭವ ಶಿಖರದಲ್ಲಿದ್ದ ಕಾಲ. ಗುಜರಾತ, ವರಾಡಗಳಲ್ಲಿ ಕಂನಾಡ ವೀರರು ಅರಸುಗೆಯ್ಯುತ್ತಿದ್ದರು. ಚಲುಕ್ಯರೂ ರಾಷ್ಟ್ರಕೂಟರ ಆ ಭಾಗದ ಪ್ರಭುಗಳಾಗಿದ್ದರು. ಸಂಸ್ಕೃತದ ಮತ್ತು ಪ್ರಾಕೃತದ ಪ್ರಭಾವಕ್ಕೆ ತಲೆವಾಗಿ ಆ ಭಾಗದಲ್ಲಿದ್ದ ಕಂನುಡಿಯು ನೆಲಕ್ಕೆ ಒರಗಿತು. ಪಟ್ಟಿಲರೂ, ಹಟ್ಟಿಕಾರರೂ, ಗುಜರಾತಿ-ಮರ್‍ಹಾಟಿಗಳ ಅಭಿನಿವೇಶದಿಂದ ಸಂಪೂರ್ಣವಾಗಿ ಹೊಸ ಪಂಗಡಗಳನ್ನು ಹೂಡಿದರು.

ಭಾಷೆ ಮತ್ತು ಸಂಸ್ಕೃತಿಗಳ ತುಲನಾತ್ಮಕ ಅಭ್ಯಾಸಿಗಳಿಗೆ ಗುಜರಾತ ಮಹಾರಾಷ್ಟ್ರಗಳ ಮೊದಲಿಗರು ಆರ್ಯರಾಗಿದ್ದಿಲ್ಲವೆಂಬುದು ಈ ಮೊದಲೆ ಸ್ಪಷ್ಟವಾಗಿ ಕಂಡುಬಂದಿದೆ. ಆದರೆ ಈ ಭಾಗದಲ್ಲಿ ನೆಲೆಸಿದ ಜನಗಳು ಯಾರೆಂಬುದನ್ನು ನಿಶ್ಚಿತವಾಗಿ ಹೇಳುವುದಕ್ಕೆ ಈ ವರೆಗೆ ಯಾವ ಸಂಶೋಧಕರೂ ಸಮರ್ಥರಾಗಿಲ್ಲ. ಪಟ್ಟಿ-ಪಾಡಿಗಳ ಈ ಪೂರ್ವವೃತ್ತಾಂತವು ಸಾಕಷ್ಟು ಬೆಳಕಿಗೆ ಬಾರದೆ ಇದ್ದುದೇ ಇದಕ್ಕೆ ಮುಖ್ಯ ಕಾರಣವು. ಆದುದರಿಂದ ಈ ವರೆಗೆ ಸಂಶೋಧಕರೆಲ್ಲ ಈ ನಾಡ ಮೊದಲಿಗರಿಗೆ 'ದ್ರಾವಿಡ'ರೆಂಬ ಸ್ಥೂಲ ಹೆಸರಿನಿಂದಲೇ ಕರೆಯುತ್ತ ಬಂದಿದ್ದಾರೆ.

The substratum over which Marathi and Gujarthi have spread, was Dravidian' ಎಂದು ಡಾ. ಸ್ಟೆನ್ ಕೊನೊ ಅವರು ಹೇಳುವರು. ಆದರೆ 'ದ್ರಾವಿಡ'ರೆಂಬುದು ಅತ್ಯಂತ ಸ್ಥೂಲಾರ್ಥವುಳ್ಳ ಹೆಸರು. ಸ್ಥೂಲಾರ್ಥವೆಂಬುದಕ್ಕಿಂತಲೂ ಅಪಾರ್ಥದಾಯಕವೆಂಬುದೇ ಸರಿ. ಡಾ. ವಿನ್‌ಸೆಂಟ ಸ್ಮಿತ್‌ನು ಇದು ತೀರ ಸಂದಿಗ್ಧಾರ್ಥವುಳ್ಳುದೂ, ಕೇವಲ ತಪ್ಪು ಕಲ್ಪನೆಯನ್ನು ಕೊಡುವುದೂ ಆಗಿದೆ. (most inappropriate and singularly misleading) ಎಂದಿದ್ದಾನೆ. ಏಕೆಂದರೆ 'ದ್ರಾವಿಡರು' ಎಂಬಲ್ಲಿ ಕಂನಾಡು, ತುಳು, ಕೊಡಗು, ತೆಲುಗು, ತಮಿಳ, ಮಲೆಯಾಳ ಮೊದಲಾದ ಈ ವರ್ಗದ ಎಲ್ಲ ಮೊದಲಿಗರೂ ಎಂದರ್ಥವನ್ನು ಪಾಶ್ಚಿಮಾತ್ಯರು ಕಲ್ಪಿಸಿಕೊಂಡಿದ್ದಾರೆ. ಆದರೆ ನಮ್ಮ ನಾಡಿನ ಪರಂಪರೆಯಲ್ಲಿ 'ದ್ರಾವಿಡ'ವೆಂದು ಕೇವಲ ತಮಿಳರಿಗೇ ಹೆಸರು. 'ದ್ರವಿಡ'ವೆಂಬ ಪದವೂ ತಮಿಳ ಎಂಬ ಶಬ್ದದಿಂದಲೇ ನಿಷ್ಪನ್ನವಾಗಿದೆ. ಆದಕಾರಣ ಮರಹಾಟ, ಗುಜರಾತುಗಳಲ್ಲಿ ದ್ರಾವಿಡರೆ ಮೊದಲು ನೆಲಸಿದ್ದರೆಂದು ಹೇಳುವಲ್ಲಿ ನಿಶ್ಚಿತವಾದ ಯಾವ ಅರ್ಥಬೋಧವೂ ಆಗುವುದಿಲ್ಲ.

ಇಲ್ಲಿ ಮೊದಲು ನೆಲಸಿದ ದ್ರಾವಿಡರು ಯಾರು? ತೆಲುಗರೆ? ತೆಲಗರ ಇತಿಹಾಸದಲ್ಲಿ ಅವರು ಈ ಭಾಗಕ್ಕೆ ಬಂದುದರ ಉಲ್ಲೇಖಗಳು ಇಲ್ಲ. ತಮಿಳರೊ? ಇದೂ ಅಸಂಭವ. ಏಕೆಂದರೆ, ಕಂನಾಡವರನ್ನು ಮೆಟ್ಟಿ ದಾಟಿ ಮರಹಾಟ-ಗುಜರಾತಗಳ ವರೆಗೆ ತಮಿಳರು ಹಬ್ಬಿದ್ದುದನ್ನು ಹೇಳುವ ಐತಿಹಾಸಿಕ ಘಟನೆಗಳಾಗಲಿ, ದಂತಕತೆಗಳಾಗಲಿ ನಮ್ಮ ಈ ಭಾಗದಲ್ಲಿ ಎಲ್ಲಿಯೂ ಪ್ರಚಾರದಲ್ಲಿಲ್ಲ. 'ಲಾಟ-ಕರ್ಣಾಟ'ಗಳ ಅನ್ಯೋನ್ಯ ನಿಕಟ ಸಂಬಂಧವಿದುದಕ್ಕೆ ಪ್ರಾಚೀನ ಇತಿಹಾಸದಲ್ಲಿ ಸಾಕಷ್ಟು ಆಧಾರಗಳಿವೆ. ಕುಂತಲ-ಕರ್ಣಾಟಗಳ ಐಕ್ಯ, ಅಭಿನ್ನತೆಗಳು ಸಂಶೋಧಕರನ್ನೂ ಬೆರಗುಗೊಳಿಸಿವೆ. ದ್ವಾರಕೆಯಿಂದ ಕುಂತಳವು ಆರಂಭವಾಗುವುದೆಂದು ಶಾಕ್ತ ಪರಂಪರೆಯಲ್ಲಿ ಹೇಳಿದೆ. ಅಲ್ಲದೆ ವರ್ಹಾಟವು ಕುಂತಳವೆಂದು ರಾಜಶೇಖರಾದಿ ಕವಿಗಳು ವರ್ಣಿಸಿದ್ದಾರೆ. ಉದಯ ಸುಂದರೀ ಕಥೆಯಲ್ಲಿ ಗೋದಾವರಿ ತಟಾಕದ ಪ್ರತಿಷ್ಠಾನ ನಗರವು ಕುಂತಲದಲ್ಲಿ ಎಂದು ವರ್ಣಿಸಿದೆ. ಬಿಲ್ಹಣನು 'ಕರ್ಣಾಟೇಂದು'ವೆಂದು ವರ್ಣಿಸಿದ ಚಲುಕ್ಯ ರಾಜರಿಗೆ ಕುಂತಲಾಧಿಪರೆಂಬ ಪ್ರಯಾಯ ನಾಮವೂ ಇದೆ. ಬುಲ್ಹರನು ಕುಂತಲ ಮತ್ತು ಕರ್ಣಾಟಗಳು ಒಂದು ಎಂದು ಹೇಳಿದ್ದಾನೆ. ಆದುದರಿಂದ ಲಾಟ ಮತ್ತು ಮರ್ಹಾಟಗಳಲ್ಲಿ ಆರ್ಯರ ಮೊದಲು ನೆಲಸಿದ್ದವರು, ಆರ್ಯರು ಬಂದ ಬಳಿಕ ಪ್ರಾಕೃತ ಭಾಷೆಯನ್ನು ಸ್ವೀಕರಿಸಿ ಲಾಡರೂ ಮರಾಟ (ಆರಿಯ)ರೂ ಆದ ಜನಗಳು ಕಂನಾಡ ಬಳಗದವರೆಂದೇ ಸಿದ್ಧವಾಗುತ್ತದೆ. ಅಲ್ಲದೆ ಮೇಲೆ ಉಲ್ಲೇಖಿಸಿದ ಆ ಭಾಷೆಗಳ ಮೇಲೆ ಕಾಣುವ ಕಂನುಡಿಯ ಪ್ರಭಾವವೂ ಇದಕ್ಕೆ ಬೆಂಬಲವನ್ನು ಕೊಡುತ್ತಲಿದೆ. ಆದಕಾರಣ ಪಾಡಿ, ವಾಡಿ ಹಟ್ಟಿಗಳನ್ನು ಕಟ್ಟಿ ನೆಲಸಿದ ಆ ಜನಗಳು ಕಂನಾಡ ಪಟ್ಟಿಗಳು-ಹಟ್ಟಿಕಾರರೆ ಆಗಿದ್ದರೆಂದು ಹೇಳಬೇಕಾಗುತ್ತದೆ. ನನ್ನ ಈ ಅಭಿಪ್ರಾಯಕ್ಕೆ ಡಾ. ಎ. ವೆಂಕಟಸುಬ್ಬಯ್ಯನವರು ಮತ್ತು ಶ್ರೀ ಗೋವಿಂದ ಪೈಗಳ ಬೆಂಬಲವು ದೊರೆತಿದೆ. ಡಾ. ವೆಂಕಟಸುಬ್ಬಯ್ಯನವರು ಕ. ಸಾ. ಪತ್ರಿಕೆಯ ಅಕ್ಟೋಬರ ೧೯೩೪ರ ಸಂಚಿಕೆಯಲ್ಲಿ 'ಕಣ್ಮರೆಯಾದ ಕಂನಡ'ದ ವಿಮರ್ಶೆಯನ್ನು ಮಾಡುವಾಗ ಬರೆದುದೇನೆಂದರೆ:

ನರ್ಮದಾ ಗೋದಾವರೀ ನದಿಗಳ ಮಧ್ಯದಲ್ಲಿರುವ ಪ್ರಾಂತವೇ ಪ್ರಾಚೀನ ಕರ್ಣಾಟವೆಂದು ಈ ಗ್ರಂಥಕರ್ತರು ಉದಹರಿಸುವ ಸಾಧನ ಸಾಮಗ್ರಿಯನ್ನು ಪರೀಕ್ಷಿಸಿ ನೋಡುವಲ್ಲಿ ಅವರ ಮೇಲ್ಕಂಡ ಸಿದ್ಧಾಂತವು ನ್ಯಾಯವಾದುದೆಂದು ನಮಗೂ ತೋರುವುದು.

ಆದುದರಿಂದ, ಪ್ರಾಚೀನ ಕಾಲದಲ್ಲಿ ಮರಹಟ್ಟೆಯು (ಎಂದರೆ ವರ್ಹಾಟವ್ಹಾ) ಕಂನಾಡವರ ನೆಲವೀಡೆಂಬಲ್ಲಿ ಸಂದೇಹವೆ ಇಲ್ಲ. ಪಟೇಲಿಯಾಗಳು ಎಂದರೆ ಪಟ್ಟಿಲರು ಯಾವ ನಾಡಿನ ಮೊದಲಿಗರೊ ಅದೂ ಅಂದು ಹಟ್ಟಿಕಾರ-ಕಂನಾಡವರ ಪ್ರದೇಶವೆ ಎಂಬುದು ಸಿದ್ಧವಾಗುತ್ತದೆ.

> Hatakar-Dhangars seem to have been of considerable importance in Berar

ಎಂದು ಎಂಥೋವೆನರು ಜಾತಿ ಜನಾಂಗಗಳೆಂಬ ಗ್ರಂಥದಲ್ಲಿ ಬರೆದಿದ್ದು ಇದನ್ನೆ ದೃಢಪಡಿಸುತ್ತದೆ.

ಟಿಪ್ಪಣಿ

೧. New Indian Antiquery Vol. II.

ಉತ್ತರಾಪಥದಲ್ಲಿ ಪಾಡಿಗಳು

ನರ್ಮದೆಯಿಂದ ಉತ್ತರಕ್ಕೆ ಆರ್ಯಾವರ್ತವೆಂದು ಮನುಸ್ಮೃತಿಯಲ್ಲಿ ಹೇಳಿದೆ. ಪ್ರಾಚೀನ ಕಾಲದಲ್ಲಿ ನರ್ಮದೆಯಿಂದ ದಕ್ಷಿಣದೇಶವು ಎಂದರೆ ದಕ್ಷಿಣಾಪಥವು ಆರ್ಯರ ನೆಲೆವೀಡಾಗಿದ್ದಿಲ್ಲ. ಬೌದ್ಧಾಯನ ಧರ್ಮಸೂತ್ರದಲ್ಲಿ ಸೌರಾಷ್ಟ್ರವನ್ನೂ ದಕ್ಷಿಣಾಪಥವನ್ನೂ ಕೂಡಿ ಹೇಳಿದೆ. (೧.೧೨.೧೩) ಲಾಟ-ಮರಹಾಟಗಳ ವರೆಗೂ ಪಾಡಿ-ವಾಡಿಗಳು ಇದ್ದುದು ಕಂಡುಬರುತ್ತದೆ. ಆದಕಾರಣ ಪಟ್ಟಿಗಳು ಅಥವಾ ಪಾಡಿಗಳೆಂಬ ಜನರೂ ಅಲ್ಲಿ ನೆಲೆಸಿದ್ದರೆಂದು ಹೇಳಿದರೆ ಸಮಂಜಸವೆಂದು ತೋರಬಹುದು. ಆದರೆ, ಉತ್ತರಾಪಥದಲ್ಲಿಯೂ ಪಾಡಿಗಳು ಇದ್ದವೆಂಬುದು ಮಾತ್ರ ವಿಚಿತ್ರವಲ್ಲವೆ? ಪಟ್ಟಿ ಅಥವಾ ಪಾಡಿಗಳು ಆರ್ಯೇತರರಾಗಿದ್ದಾದರೆ ಅವರ ನೆಲೆವೀಡು ಆರ್ಯಾವರ್ತದಲ್ಲಿಯೂ ಇದ್ದುವೆಂಬುದು ಹೇಗೆ ಸಾಧ್ಯ?

ವಿಚಿತ್ರವೆನಿಸಿದರೂ ವಾಸ್ತವ-ಸತ್ಯವಿದ್ದರೆ ಅದನ್ನು ಒಪ್ಪಿಕೊಳ್ಳಲೆಬೇಕಷ್ಟೆ? 'Our Basic Vocabulary'; 'ಸಬ ಕೀ ಬೋಲೀ' 'ಅರ್ಥಾತ್ ಭಾರತವರ್ಷ ಕೀ ಸಾಮಾನ್ಯ ಭಾಷಾ ಕೀ ಶಬ್ದಾವಲೀ' ಎಂಬ ಕೋಶವನ್ನು ಲಾಹೋರಿನ ವಿದ್ವನ್ಮಣಿ, ಆಚಾರ್ಯ ರಘುವೀರ M. A., Ph.D., D. Lit. ಎಂಬ ವಿದ್ವಾಂಸರು ಪ್ರಕಟಿಸಿದ್ದಾರೆ. ಅದರಲ್ಲಿ ಆರ್ಯ ಭಾಷಾವರ್ಗದ ಪ್ರಾಂತಭಾಷೆಗಳಲ್ಲೆಲ್ಲ ಬಳಕೆಯಲ್ಲಿರುವ ಸಾಮಾನ್ಯ ಪದಗಳನ್ನು ಸಂಗ್ರಹಿಸಿರುವರು. ಅದರಲ್ಲಿ ಗ್ರಾಮಾರ್ಥದಲ್ಲಿ ಕೆಳಗಣ ಶಬ್ದಗಳೂ ಬಂದಿವೆ. ವಾಟ, ವಾಡಿ; ಕಾಶ್ಮೀರ, ವಾರೂ; ಪಂಜಾಬ ಮತ್ತು ಸಿಂಧ ವಾಡಿ; ಬಂಗಾಲಿ, ಬಾಡಿ; ಗುಜರಾತ ಮತ್ತು ಮಹಾರಾಷ್ಟ್ರ ವಾಡಿ; ಇದರಂತೆ ಸಂಯುಕ್ತ ಪ್ರಾಂತ, ಆಸಾಮ, ಬಿಹಾರ, ಉತ್ಕಲಗಳಲ್ಲೂ ಇದು ಬಳಕೆಯಲ್ಲಿದೆ.

ಬಾಡಿ, ಬಾಡ: ಕಾಶ್ಮೀರ ವಾರ್; ವಾರೂ; ಬಂಗಾಲ, ಬಾಡ್; ಸಿಂಧ ವಾಡೋ; ನೇಪಾಳ ಬಾರ್; ಗುಜರಾತ, ಮಹಾರಾಷ್ಟ್ರಗಳಲ್ಲಿ ವಾಡಿ. ಕಾಶ್ಮೀರ; ಪಂಜಾಬ ನೇಪಾಳಗಳಲ್ಲಿ ಬಾಢಿ, ವಡ್ಢ, ಎಂದು ಮುಂತಾಗಿಯೂ ಉಂಟು. ಇದರಂತೆ ಪಾಡಿ ಎಂಬುದೂ ಹಲವು ಪ್ರಾಂತಗಳಲ್ಲಿ ಕಾಣಿಸಿಕೊಳ್ಳುತ್ತದೆ.

ಹಾಟ : ಕಾಶ್ಮೀರ, ಹಾಠ; ಪಂಜಾಬ-ಹಟ್; ನೇಪಾಳ, ಬಂಗಾಲ, ಗುಜರಾತ ಮಹಾರಾಷ್ಟ್ರಗಳಲ್ಲಿ ಹಾಟ; ಸಿಂಧಿ ಹಟು; ಇದರಂತೆ ಆಸಾಮ, ಉತ್ಕಲಗಳಲ್ಲಿ ಹಾಟ ಎಂದು ಉಂಟು.

ಪತ್ತನ (ಪಟ್ಟಣ); ಕಾಶ್ಮೀರ, ಪಟನ್; ಪಂಜಾಬ, ಪತ್ತಣ್; ನೇಪಾಳಿ, ಪಾಟನ್; ಸಿಂಧಿ, ಪತಣು; ಮರ್ಹಾಟ, ಪಾಟಣ; ಇದರಂತೆ ಲಹಂದಿ, ಉತ್ಕಲ, ಬಿಹಾರ ಬಂಗಾಲಗಳಲ್ಲಿ ಒಂದೊಂದು ಬಗೆಯಾಗಿದೆ. ಉತ್ತರ ದೇಶದಲ್ಲಿ ಪಂಜಾಬ ಮೊದಲಾದ ಕಡೆಗೆಲ್ಲ ಗೌಡ ಅಥವಾ ಪಟ್ಟಿಲರಿಗೆ ಪಟವಾರಿಗಳೆಂದು ಹೆಸರಿದೆ.

ಇಂತು ಉತ್ತರಾಪಥದಲ್ಲಿ ಎಲ್ಲೆಡೆಗೂ ವಾಡಿ, ಬಾಡಿ, ವಾಡ, ಬಾಡ, ಪೇಟ, ಹಾಟ, ಪಟ್ಟಣಗಳು ಎಂದರೆ ಪಟ್ಟಿ-ಹಟ್ಟಿಯ ವಿವಿಧ ರೂಪಗಳು ಅಲ್ಲಿ ಊರ ಹೆಸರಿನಲ್ಲಿ ಇರುವುದಂತೂ ನಿಶ್ಚಿತವಾಯಿತು. ಪಾಡಿ ಎಂಬುದು ಮಹಾರಾಷ್ಟ್ರ ಗುಜರಾತಗಳಲ್ಲಿ ಪಾಡಾ ಎಂಬ ರೂಪ ತಾಳಿರುವಂತೆ ಬಂಗಾಲ, ಬಿಹಾರಾದಿಗಳ ಕಡೆಗೆ ಪಾರಾ ಎಂದಾಗಿದೆ. ದತ್ತಪಾರಾ, ಉತ್ತರಪಾರಾ, ತೆಲ್ಲಪಾರಾ ಎಂಬೀ ಹೆಸರುಗಳು ಬಂಗಾಲ ಬಿಹಾರಗಳ ಊರುಗಳಿಗೆ ಇವೆ. ಆದುದರಿಂದ ಉತ್ತರಾಪಥದಲ್ಲಿ ಕಾಶ್ಮೀರ, ನೇಪಾಳದವರೆಗೂ ಪಟ್ಟಿ, ಪಾಡಿ, ಹಟ್ಟಿ (ಊರು) ಗಳು ಹಬ್ಬಿಕೊಂಡಿರುವುದರಲ್ಲಿ ಸಂದೇಹಕ್ಕೆ ಎಡೆಯು ಇಲ್ಲ.

ಮರ್‍ಹಾಟಿಯ ಕೋಶದಲ್ಲಿ ಪಾಡಿಯಂ ಪದ್ರಕ ಎಂಬ ಸಂಸ್ಕೃತ ಪದದಿಂದ ಬಂದಿತೆಂದು ಸೂಚಿಸಿದೆ. ಪದ್ರಕ-ಪಡ್ಡ ಅ (ಪ್ರಾಕೃತ), ಬಳಿಕ ಪಾಡಿ ಮರ್‍ಹಾಟಿ. ಆದರೆ ಪಡ್ಡ ಅ ಎಂಬ ಪದವೇ ಪ್ರಾಕೃತ ಕೋಶದಲ್ಲಿ ಇಲ್ಲ! ಅಲ್ಲದೆ ಪದ್ರಕದ ಎದುರು ಮೋನಿಯರ ಕೋಶದಲ್ಲಿ L. ಎಂದರೆ ಕೇವಲ ಕೋಶಕಾರರು ಸೂಚಿಸುವ ಶಬ್ದ ಎಂದು ಹೇಳಿದೆ. ಹಿಂದೀ ಕೋಶದಲ್ಲಿ ಪಾಡಿ ಶಬ್ದವು 'ಪಹನ' ಎಂಬುದರಿಂದ ಬಂದಿತೆಂಬುವರು. ಪಹನವು ಸಂಸ್ಕೃತ ಶಬ್ದವೇ ಎಂಬುದೇ ಸಂದೇಹಾಸ್ಪದ. ಯಾವ ಕೋಶದಲ್ಲೂ ದೊರೆಯುವುದಿಲ್ಲ! ಪಟ್ಟಿ, ಪಾಡಿ ಹಟ್ಟಿಗಳು ಪಡುಧಾತುವಿನ ಕಂದಮಿಳ ವರ್ಗದ ಪದಗಳಲ್ಲವೆಂದು ಸಿದ್ಧವಾಗುವವರೆಗೆ ಈ ಊರುಗಳು ಪುರಾತನ ಕಾಲದಲ್ಲಿ ಅಲ್ಲಿ ನೆಲಸಿದ್ದ ಪಟ್ಟಿಗಳ ಅಥವಾ ಹಟ್ಟಿಕಾರರ ಕುರುಹುಗಳೆಂದು ಹೇಳಲು ಯಾವ ಅಡ್ಡಿಯೂ ತೋರುವುದಿಲ್ಲ. ಪಾಶ್ಚಿಮಾತ್ಯ ಹಾಗೂ ಭಾರತೀಯ ಸಂಶೋಧಕರ ಬೆಂಬಲವೂ ಸ್ವಲ್ಪ ಬೇರೆ ಶಬ್ದಗಳಲ್ಲಿ ಈ ಮಾತಿಗೆ ದೊರೆತಿದೆ. ಪಟ್ಟಿ-ಹಟ್ಟಿ ಶಬ್ದದ ಸೂಕ್ಷ್ಮಾರ್ಥವು ತಿಳಿಯದೆ ಇದ್ದುದರಿಂದ ಅವರಿಗೆ ಇನ್ನೂ ಸರಿಯಾದ ಶಬ್ದದಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕಾಗಿಲ್ಲ. 'ಆರ್ಯರು ಭಾರತಕ್ಕೆ ಬರುವ ಮುನ್ನ ಈ ದೇಶದಲ್ಲಿ ದ್ರಾವಿಡರು ಎಂಬ ಜನಾಂಗವು ಪ್ರಬಲವಾಗಿ ನೆಲೆಸಿದ್ದಿತು,' ಎಂದು ಈಗ ವಾಡಿಕೆಯಾಗಿ ಹೇಳುವ ಸಂಪ್ರದಾಯವಾಗಿದೆ.

ಆದರೆ, ಈ ಮೊದಲು ಸೂಚಿಸಿದಂತೆ 'ದ್ರಾವಿಡ'ವೆಂಬುದು ಸಂದಿಗ್ಧಾರ್ಥದ ಸ್ಥೂಲ ಶಬ್ದವು. ಅಲ್ಲದೆ ಈ ಶಬ್ದವು ಸ್ಮೃತಿಗಳ ಮೊದಲು ಬಹಳ ಹಿಂದೆ ಬಳಕೆಯಲ್ಲಿದ್ದಿತೇ ಎಂಬುದೇ ಸಂದೇಹಾಸ್ಪದವಾಗಿದೆ. ಆರ್ಯರ ಮೊದಲು ಈ ನಾಡಿನಲ್ಲಿ ನೆಲೆಸಿದ್ದರೆಂದು ಹೇಳುವ ದ್ರಾವಿಡರ ಉಲ್ಲೇಖವು ವೇದಗಳಲ್ಲಂತೂ ಬರಲೇ ಬೇಕಲ್ಲವೆ? 'ದ್ರಾವಿಡ' ಶಬ್ದದ ಸುಳಿವು ವೇದಗಳಲ್ಲಿ ಎಲ್ಲಿಯೂ ಕಾಣುವುದಿಲ್ಲ. ಈ ಕಾರಣದಿಂದಲೂ 'ದ್ರಾವಿಡ'ವೆಂಬ ಸ್ಥೂಲಾರ್ಥದ ಅರ್ವಾಚೀನ ಶಬ್ದವನ್ನು ಬಳಸದೆ ಇರುವುದು ಉಚಿತವಾಗಿದೆ. ಆದರೆ 'ದ್ರಾವಿಡ' ವೆಂದು ಈಗ ರೂಢವಾದುದನ್ನು ಬಿಟ್ಟುಬಿಡಬೇಕಾದರೆ ಬೇರೊಂದು ಪದವು ಹೆಚ್ಚು ಸಮರ್ಪಕ ವೆಂದು ಸಿದ್ಧವಾಗಬೇಕಲ್ಲವೆ?

'ದ್ರಾವಿಡ' ಶಬ್ದವು ವೇದಗಳಲ್ಲಿ ದೊರೆಯುವುದಿಲ್ಲ; ಆದಕಾರಣ ದ್ರಾವಿಡರೆಂಬ ಜನ ಮೊದಲು ಇದ್ದಿತೆಂಬ ಮಾತನ್ನೆ ಒಪ್ಪದ ಒಂದು ಪಂಗಡವಿದೆ. ಆರ್ಯರು ಮೊದಲಿನಿಂದಲೂ ಭಾರತದಲ್ಲಿ ಇದ್ದವರು; ಅವರು ಹೊರಗಣಿಂದ ಬಂದವರಲ್ಲ, ಎಂದು ಈ ಪಂಥವರ ಅಭಿಪ್ರಾಯ. ಆರ್ಯರು ಹೊರಗಣಿಂದ ಇಲ್ಲಿ ಬಂದು ನೆಲೆಸಿದರು, ಎಂಬುದನ್ನು ಒಪ್ಪುವುದಕ್ಕೆ ಮನಸಿಗೆ ಏನೊ ಒಂದು ಬಗೆಯ ವಿಷಾದವು ಅಡ್ಡಬರುವುದು. ಸ್ವಾಭಿಮಾನಕ್ಕೆ ಸೂಕ್ಷ್ಮವಾದ ಪೆಟ್ಟು ಬೀಳುವುದು. ಆದಕಾರಣ, ನಾವು ಆರ್ಯರು ಎಂದಿನಿಂದಲೂ ಇಲ್ಲಿಯವರೇ ಎಂಬ ಪುರಾಣಪ್ರಿಯತೆಯ ವಾದವು ಸವಿಯೆನ್ನಿಸುವುದು, ನಿಜ. ಆದರೆ, ಸತ್ಯವನ್ನು ಒಪ್ಪಲು ಸ್ವಾಭಿಮಾನ, ಹೆಮ್ಮೆಗಳು ಅಡ್ಡಬರುತ್ತಿದ್ದರೆ ಅವನ್ನು ಬದಿಗೆ ಸರಿಸದೆ ಗತಿಯಿಲ್ಲ. ಇಂತಹ ಸ್ವಾಭಿಮಾನ, ದೇಶಾಭಿಮಾನ ಮೊದಲಾದ ಹೆಮ್ಮೆಗಳ ಜಂಜಾಟವೇ ಲೋಕದ ಇಂದಿನ ಕೋಲಾಹಲಕ್ಕೆ ಕಾರಣವಾಗಿದೆ. ಸತ್ಯವನ್ನು ಕಡೆಗಣಿಸುವುದರಿಂದ ಮಾನವನ ಏಳ್ಗೆಗೆ, ವಿಕಾಸಕ್ಕೆ ತಡೆಯುಂಟಾಗುವುದು.

ಪಟ್ಟಿ, ಹಟ್ಟಿಗಳೆಂಬ ಈ ಪದಗಳು ಸಂಸ್ಕೃತಕ್ಕೆ ಹೊರಗಿನವೆಂಬುದು ನಿಜವಿದ್ದರೆ, ಈ ಹೆಸರಿನ ಊರುಗಳನ್ನು ಕಟ್ಟಿಕೊಂಡು ನೆಲೆಸಿದ ಜನಗಳು ಆರ್ಯರಿಂದ ಭಿನ್ನರಾಗಿರಬೇಕೆಂಬುದು ಸ್ಪಷ್ಟವಿದೆ. ಆರ್ಯರಿಂದ

ಭಿನ್ನರೆಂದು ಒಪ್ಪಿಕೊಳ್ಳಬಹುದಾದರೂ ಇವರು ಆರ್ಯರಿಗಿಂತ ಮೊದಲಿನವರೆಂಬುದಕ್ಕೆ ಪ್ರಮಾಣವೇನು? ಆರ್ಯರಷ್ಟಾದರೂ ಪ್ರಾಚೀನರೆಂದು ಸಿದ್ಧವಾಗಲು ವೇದಗಳಲ್ಲಿ ಎಲ್ಲಿಯಾದರೂ ಇವರ ಸ್ಪಷ್ಟವಾದ ಉಲ್ಲೇಖವು ದೊರೆಯಬೇಡವೆ?

ಯಜುರ್ವೇದದಲ್ಲಿ ಪಟ್ಟಿಗಳೆಂಬ ಜನಗಳ ಹೆಸರು ಬಂದಿದೆ. ರುದ್ರಾಧ್ಯಾಯದಲ್ಲಿ ಶಿವನು ಅದೆಷ್ಟೊ ಬಗೆ ಬಗೆಯ ಪಂಗಡ, ಗುಂಪುಗಳ ಒಡೆಯನಾಗಿದ್ದುದರ, ಅವರಿಂದ ಪೂಜೆಗೊಳ್ಳುತ್ತಲಿರುವ ವರ್ಣನೆಯಿದೆ. ಅಂತಹ ಅನೇಕ ಪಂಗಡಗಳ ಹೆಸರುಗಳಲ್ಲಿ 'ಪತ್ತಿ'ಗಳ ಒಂದು ಉಲ್ಲೇಖವೂ ಉಂಟು.

ನಮ ಉಚ್ಚೈರ್ಘೋಷಾಯಾಽಽ ಕ್ರಂದಯತೇ
ಪತ್ತೀನಾಂ ಪತಯೇ ನಮಃ। ರುದ್ರಾಧ್ಯಾಯ ೨. ೧೨

ಇದನ್ನು ಕುರಿತು 'ಕರ್ಣಾಟದ ವೀರಕ್ಷತ್ರಿಯರು ಅಥವಾ ಹಟ್ಟಿಕಾರರು' ಎಂಬ ಪುಸ್ತಕದಲ್ಲಿ ಈ ಮೊದಲೆ ವಿವರಿಸಿದೆ. ಸಂಸ್ಕೃತದಲ್ಲಿ ಪಟ್ಟಣವು ಪತ್ತನವಾಗಿರುವಂತೆ ಪಟ್ಟಿಯೂ ಪತ್ತಿ ಎಂದು ಮಾರ್ಪಟ್ಟಿದ್ದುಂಟು. ಪತ್ತಿಃ ಅಥವಾ ಪಟ್ಟಿಃ ಎಂದು ಒಂದು ಜನಾಂಗದ ಹೆಸರಿದ್ದುದಾಗಿ ವರಾಹ ಮಿಹಿರಾದಿಗಳ ಉಲ್ಲೇಗಳಿಂದು ಕಂಡುಬರುತ್ತದೆ. ಮೋನಿಯರ ವಿಲಿಯಂಸನ ಕೋಶದಲ್ಲಿ ಪತ್ತಿಃ name of a people ಎಂದು ಹೇಳಿದೆ. ಶಿವನಿಗೆ ಹಾಟಕೇಶ್ವರನೆಂದಿರುವ ಹೆಸರಿನ ಔಚಿತ್ಯವು ಈ ಸಂದರ್ಭದಲ್ಲಿ ಚೆನ್ನಾಗಿಯೆ ಹೊರವಡುತ್ತದೆ. 'ಪತ್ತೀನಾಂ ಪತಿಃ' ಎಂದರೇ ಹಟ್ಟಿಕಾರರ ಈಶ್ವರ; ಹಾಟಕರ ಈಶ್ವರನು: ಅವನೇ ಹಾಟಕೇಶ್ವರನು. ರುದ್ರ-ಶಿವನಿಗೂ ಈ ಜನಗಳಿಗೂ ಇರುವ ನಿಕಟಸಂಬಂಧವನ್ನು ನೆನೆದರೆ ಇಂದಿನ ಈ ಹಟ್ಟಿಕಾರರೆ ಅಂದಿನ 'ಪತ್ತಿ'ಗಳು ಎಂದು ಹೇಳಬೇಕಾಗುವುದು. ಈ ಕಾರಣದಿಂದಲೆ ಇಂದು ಹಟ್ಟಿಕಾರ ರೆನಿಸುವ ಜನಗಳ ಮೊದಲಿಗರೆ, ಅಂದಿನ ಪತ್ತಿ ಅಥವಾ ಪಟ್ಟಿಗಳೆಂದು ನನ್ನ ನಂಬುಗೆಯಾಗಿದೆ. ಈ ಹಟ್ಟಿಕಾರ ಗೌಡ(ಳ)ರ ಅಥವಾ ಪತ್ತಿಗಳ ಉಲ್ಲೇಖವು ಋಗ್ವೇದದಲ್ಲಿ ಇನ್ನೂ ಒಂದು ತೆರನಾಗಿ ಬಂದಿದೆ. ಋಗ್ವೇದದಲ್ಲಿ ಇವರು ಯದು-ತುರ್ವಶರೆಂಬ ಹೆಸರಿನಲ್ಲಿ ವಿಖ್ಯಾತರಾಗಿದ್ದಾರೆ. ಯದು-ತುರ್ವಶರು ಗೋವಳರು, ಎಂದರೆ ಹಟ್ಟಿಕಾರರೆಂದು ವೇದದೊಳಗಿನ ವರ್ಣನೆಗಳಿಂದಲೂ ಮುಂದೆ ಮಹಾಭಾರತದ ಉಲ್ಲೇಖಗಳಿಂದೂ ನಿಶ್ಚಿತವಾಗಿ ಗೊತ್ತಾಗುತ್ತದೆ.

ಯದು-ತುರ್ವಶರೂ ಗೋವಳರು; ಪತ್ತಿಗಳೆಂಬ ಜನಗಳೂ ಗೋವಳರು; ಇರಬಹುದು. ಆದರೆ ಇವೆರಡೂ ಜನಗಳು ಒಂದೇ ಬಗೆಯವರೆಂಬುದು ಇಷ್ಟರಿಂದಲೇ ಸಿದ್ಧವಾಗುವುದಿಲ್ಲ. ಪತ್ತಿಗಳೆಂದು ಯಜುರ್ವೇದದಲ್ಲಿ ಉಲ್ಲೇಖಿತರಾದ ಜನಗಳು ಆರ್ಯರಾಗದೆ ಇರುವ ಸಂಭವವಿದೆ. ಏಕೆಂದರೆ ರುದ್ರಾಧ್ಯಯದಲ್ಲಿ ಪತ್ತಿಗಳೆಂ ಉಲ್ಲೇಖಿತರಾದ ಇನ್ನೂ ಬೇರೆ ಹಲವು ಪಂಗಡಗಳ ಹೆಸರುಗಳನ್ನು ನೋಡಿದರೆ ಅವು ಆರ್ಯರ ಗುಂಪಿ ಹೆಸರಿರುವ ಸಂಭವವಿಲ್ಲ. ಶಿವನ ಭಕ್ತಗಣದ ಈವರೆಗಣ ಪರಂಪರೆಯೂ ಈ ಮಾತಿಗೆ ಪುಷ್ಟಿಕರವಾಗಿದೆ (ಶಿವರಹಸ್ಯದಲ್ಲಿ ಹೆಚ್ಚಿನ ವಿವರಣೆ ಬಂದಿದೆ. ಆದುದರಿಂದ, ಅಲ್ಲಿಯ ಪತ್ತಿಗಳನ್ನು ಪಟ್ಟಿಕಾರ ಎಂದು ಹಟ್ಟಿಕಾರರು ಎಂದು ಒಪ್ಪಿಕೊಂಡರೂ ಋಗ್ವೇದದೊಳಗಿನ ಯದು-ತುರ್ವಶರನ್ನು ಆರ್ಯೇತರರೆಂದು ಗ್ರಹಿಸುವುದ ಆಧಾರಗಳೇನು? ಯಾದವರು ಆರ್ಯರೆಂದೇ ಈವರೆಗಿನ ಸಾಮಾನ್ಯವಾದ ತಿಳುವಳಿಕೆಯಾಗಿದೆ. ಆರ್ಯಪರಂಪರೆ ವೈದಿಕಮಾರ್ಗದ ಸಂರಕ್ಷಕನಾದ ಶ್ರೀಯುತ ಕೃಷ್ಣನು ಯಾದವ ವಂಶದವನು.

ಸಿದ್ಧಯೋಗಿಯಾದ ಶ್ರೀಮಾನ್ ಕೃಷ್ಣನೊಬ್ಬನು ಆ ವೈದಿಕ ಸಂಪ್ರದಾಯದ ಅಭಿಮಾನಿಯಾದರು ಅವನೊಬ್ಬನ ಮೇಲಿಂದ ಯಾದವರೆಲ್ಲರೂ ಆರ್ಯರೇ ಆಗಿದ್ದರೆಂದು ಊಹಿಸುವುದಕ್ಕಾಗುವುದಿಲ್ಲ. ಮಹಾಭಾರ ದೊಳಗಿನ ಶ್ರೀಕೃಷ್ಣನ ಪಂಗಡವೊಂದು ವೈದಿಕಮಾರ್ಗಕ್ಕೆ ಅನುಕೂಲವಾಗಿದ್ದರೂ ಯಾದವರ ಬಳಗದ ಇನ್ನ ದೊಡ್ಡ ಪಕ್ಷವೊಂದು ಅವನ ವಿಚಾರಕ್ಕೆ ಸಂಪೂರ್ಣವಾಗಿ ವಿರೋಧಿಯಾಗಿದ್ದಿತೆಂದು ಮಹಾಭಾರತದ ವರ್ಣ ಗಳಿಂದಲೇ ಗೊತ್ತಾಗುತ್ತದೆ. ಕಂಸ, ಜರಾಸಂಧ, ಶಿಶುಪಾಲಾದಿ ಬಲಾಢ್ಯರು ಯಾದವರಿಗೆ ಹತ್ತಿ ಹೊಂದಿದ-ಬಳಗ ಜನಗಳು. ಇವರೆಲ್ಲರೂ ರಾಕ್ಷಸರೆಂಬಂತೆ ಬಣ್ಣಿಸಿದ್ದಾಗಿದೆ.

ಡಾ. ಪ್ರಿಲಸ್ಕಿಯವರು ಮಿಥಿಕ್ ಸೊಸ್ಯಾಟಿ ಜರ್ನಲಿನ ಬೆಳ್ಳಿಹಬ್ಬದ ಸಂಚಿಕೆಯಲ್ಲಿ ಒಂದು ಮಹತ್ವದ ಲೇಖವನ್ನು ಬರೆದಿರುವರು. ಅದರಲ್ಲಿ ಯಾದವರೂ ಅಂಧಕ-ವೃಷ್ಣಿಗಳೂ ಆರ್ಯೇತರರಾದ 'ದ್ರಾವಿಡ' ಪಂಗಡಕ್ಕೆ ಸೇರಿದವರೆಂದು ಸಂಸ್ಕೃತ, ಪಾಲೀಗ್ರಂಥಗಳಿಂದ-ವೈದಿಕ ಬೌದ್ಧ ಪರಂಪರೆಗಳ ಆಧಾರದಿಂದಲೂ ತುಲನಾತ್ಮಕ ಭಾಷಾಶಾಸ್ತ್ರದ ಸಹಾಯದಿಂದಲೂ ಸಿದ್ಧಪಡಿಸಿರುವರು.

ಭಾರತದ ಯದು-ತುರ್ವಸುಗಳು ಋಗ್ವೇದದೊಳಗಿನ ಯದು-ತುರ್ವಶರ ಪೀಳಿಗೆಯೆಂದು ಎಲ್ಲರ ನಂಬುಗೆಯಾಗಿದೆ. ಆದಕಾರಣ ಋಗ್ವೇದದೊಳಗಿನ ಯದು-ತುರ್ವಶರೂ ಆರ್ಯೇತರರೇ ಎಂದು ಊಹಿಸಲು ಅಡ್ಡಿಯಿಲ್ಲ. ಆದರೆ ಋಗ್ವೇದದಲ್ಲಿಯೆ ಈ ಮಾತಿಗೆ ಏನಾದರೂ ಆಧಾರಗಳು ದೊರೆತರೆ ಅದು ಹೆಚ್ಚು ವಿಶ್ವಸನೀಯವಾಗುವುದು. ಋಗ್ವೇದದಲ್ಲಿ ಬಂದ ಯದು-ತುರ್ವಶರ ವರ್ಣನೆಗಳಲ್ಲಿ ಅವರು ಕೆಲವು ಬಾರಿ ಆರ್ಯರ ವಿರೋಧಿಗಳಾಗಿದ್ದುದೂ ಕಂಡುಬರುತ್ತದೆ. ಯದು-ತುರ್ವಶರನ್ನೂ ನಾಶಮಾಡಲು ಇಂದ್ರನನ್ನು ಪ್ರಾರ್ಥಿಸಿದ ವಸಿಷ್ಠರ ಸೂಕ್ತಗಳಿವೆ. ಇಂದ್ರನು ದಿವೋದಾಸನಿಗಾಗಿ ಒಂದೇ ದಿವಸ ಶಂಬರ, ಯದು ಮತ್ತು ತುರ್ವಶರನ್ನು ಗೆದ್ದು ಅವರ ಪುರಗಳನ್ನು ಒಡೆದನೆಂದು ವರ್ಣನೆಯಿದೆ.

ಇಂದ್ರನು ಯದು-ತುರ್ವಶರ ಪುರಗಳನ್ನು ನಾಶಮಾಡಿದನಂತೆ. ಹಗೆಗಳ ಪುರಗಳನ್ನು ವಿದಾರಣ ಮಾಡತಕ್ಕವನೆಂದು ಇಂದ್ರನಿಗೆ ಪುರಂದರನೆಂಬ ಹೆಸರಿದ್ದುದಾಗಿ ತಿಳಿದುಬರುತ್ತದೆ. ಪುರ ಎಂದರೆ ಪಟ್ಟಣಗಳನ್ನು ಕಟ್ಟಿಕೊಂಡು ಯದು-ತುರ್ವಶರು ಇಂದ್ರನಿಗೆ ಎಂದರೆ ಆರ್ಯರಿಗೆ ಪ್ರಬಲರಾಗಿ ವಿರೋಧಿಗಳಿದ್ದುದು ಮೇಲಣ ಸೂಕ್ತದಿಂದ ಕಂಡುಬರುತ್ತದೆ. ಪುರ ಎಂದರೆ ಊರು, ಪಟ್ಟಣಗಳನ್ನು ಕಟ್ಟಿಕೊಂಡು ನೆಲಸಿದ ಕೆಲವು ಜನ, ಆರ್ಯರನ್ನು ವಿರೋಧಿಸುತ್ತಿದ್ದರೆಂದು ಇದರ ಅರ್ಥವಾಗುತ್ತದೆ. ಯದು-ತುರ್ವಶರಿಗೆ 'ದಾಸ'ರೆಂದೂ ಒಂದು ಋಚೆಯಲ್ಲಿ (೧೦, ೬೨.೧೦) ಹೇಳಿದೆ. ಈ ಕಾರಣಗಳಿಂದಲೂ ಯದು-ತುರ್ವಶರು ಆರ್ಯೇತರೆಂದು ಹೇಳ ಬೇಕಾಗುತ್ತದೆ. ಶ್ರೀರಾಮಪ್ರಾಸದ ಚಂದಾ ಮತ್ತು ಪ್ರೊ. ಎನ್. ಕೆ. ದತ್ತ ಅವರು ಈ ವಿಷಯಕ್ಕೆ ಸ್ವತಂತ್ರವಾದ ಲೇಖನಗಳನ್ನು ಬರೆದಿದ್ದಾರೆ.

ನನ್ನಲ್ಲಿ ಇನ್ನೂ ಒಂದು ಹೆಚ್ಚಿನ ಆಧಾರವುಂಟೆಂದು ಬಲ್ಲಿದರ ಎದುರು ಅರಿಕೆ ಮಾಡಿಕೊಳ್ಳಬೇಕಾಗಿದೆ. ಯದು ಮತ್ತು ತುರ್ವಶರೆಂಬ ಎರಡು ಪಂಗಡಗಳು ಉಂಟಷ್ಟೇ. ಈ ಹೆಸರುಗಳ ಅರ್ಥವನ್ನು ತಿಳಿದುಕೊಳ್ಳುವ ಪ್ರಯತ್ನ ಪಟ್ಟರೆ ಇನ್ನೂ ಕೆಲವು ಹೊಸ ಮಾತುಗಳು ಬೆಳಕಿಗೆ ಬರಲಿವೆ. ಯದು-ತುರ್ವಶರಂತೆ ವೇದದಲ್ಲಿ ಉಲ್ಲೇಖಿತವಾದ ಬೇರೆ ಪಂಗಡಗಳ ಹೆಸರುಗಳೂ ಅರ್ಥಪೂರ್ಣವಾಗಿವೆ. ಅಜಾಃ, ಎಂದರೆ ಆಡಿನವರು; ಶಿಗ್ರುಃ ಎಂದರೆ ಕುದುರೆಯವರು; ಇವುಗಳಂತೆಯೆ ಯದು, ತುರ್ವಶರ ಹೆಸರಿಗೂ ಅರ್ಥವಿರಬೇಕೆಂದು ನನ್ನ ತಿಳುವಳಿಕೆ. ಯಾದಸ್, ಯಾದಃ ಎಂಬುದು ರಸಾರ್ಥಕ ಶಬ್ದವಾಗಿದೆ. ಆದುದರಿಂದ ಯದುಗಳು ಅಥವಾ ಯಾದವರು ಎಂದರೆ (ಗೋ)ರಸ ವ್ಯವಹಾರಿಗಳೆಂದು ಅರ್ಥವಾಗುತ್ತದೆ. ಯಾದವ-ಜಾಧವರೇ ಪ್ರಮುಖ ಜನಾಂಗವಾದ ಮರ್‍ಹಾಟರನ್ನು 'ಭಾಗ್ಯೇ ರಸ ವಿಕ್ರಯಿಣಃ' ಎಂದು ವರಾಹಮಿಹಿರನು ವರ್ಣಿಸಿದ್ದಾನೆ. (೧೦.೮).

ತುರ್ವಶರು ಯಾವದರ ಬಳಗದವರೇ ಎಂದು ವಿದ್ಯಾನಿಧಿ ಚಿತ್ರಾವಶಾಸ್ತ್ರಿ, ಮ್ಯಾಕಡೊನೆಲ್ಲ ಪ್ರಭೃತಿ ವೇದಾಭ್ಯಾಸಿಗಳ ಅಭಿಪ್ರಾಯವಿದೆ. ಈ ಜನವು ಗೋಪಾಲಕ ವೃತ್ತಿಯದು. ಆದುದರಿಂದ ಯಾದವರಂತೆ ತುರ್ವಶರೂ 'ರಸವಿಕ್ರಯಿ'ಗಳೆಂದು ಹೇಳಬಹುದಾಗಿದೆ. ತುರ್ವಶವೆಂಬುದು ನನ್ನ ಅಭಿಪ್ರಾಯದಂತೆ ಒಂದೇ ಶಬ್ದವಲ್ಲ. ತುರು+ವಶ ಎಂಬ ಎರಡು ಪದಗಳಿಂದಾದ ಕೂಡು-ನುಡಿಯಿದು. ಋಗ್ವೇದದಲ್ಲಿ 'ತರ್ವ' ಎಂದು ಮಾತ್ರ ಉಲ್ಲೇಖವಿದೆ (೧೦. ೬೨, ೧೦); 'ವಶಾ' ಎಂದರೆ ವೈದಿಕ ಸಾಹಿತ್ಯದಲ್ಲಿ ಗೋವುಗಳೆಂದು ಅರ್ಥವಿದೆ. 'ವಶ' ಎಂದು ಒಂದು ಜನದ ಹೆಸರು; ಋಗ್ವೇದದ ತುರ್ವಶರೇ ಭಾರತದಲ್ಲಿ ತುರ್ವಸುಗಳೆಂದು ಕರೆಯಲ್ಪಟ್ಟಿದ್ದಾರೆ. ವಸು ಎಂದರೆ ಸಂಪತ್ತು. ಆರಂಭಕಾಲದ ಮಾನವರ ಸಂಪತ್ತು ಅವರು ಸಾಕಿದ ಪಶುಗಳು, ಎಂಬುದು ಸರ್ವಸಮ್ಮತವಾದ ಸಾರ್ವತ್ರಿಕ ಸಿದ್ಧಾಂತವಾಗಿದೆ. ಆದುದರಿಂದ Cattle, Capital ಗಳಲ್ಲಿರುವ ಅನ್ಯೋನ್ಯ ಸಂಬಂಧವೇ ಪಶು ಮತ್ತು ವಸುಗಳಲ್ಲಿ, ಅದರಂತೆ ವಶಾ ಮತ್ತು ವಸುಗಳಲ್ಲಿ ಇದ್ದರೆ ಸೋಜಿಗವಿಲ್ಲ.

ಯಾವದರು ಗೋವಳರು; ವಶರು ಅವರ ಸಂಬಂಧಿಗಳೆಂದು ಗೋವಳರೆಂದು ಗೊತ್ತಾಗುವುದಲ್ಲದೆ ವಶಾ ಎಂದರೆ ಗೋವು ಎಂಬರ್ಥದ ಶಬ್ದದ ಮೂಲಕವಾಗಿಯೂ 'ಅಜ', 'ಶಿಗ್ರು'ಗಳಂತೆ 'ವಶರೂ' ಪಶುಪಾಲಕ ವೃತ್ತಿಯವರೆಂದು ಕಂಡುಬರುವುದು. 'ತುರ್ವಶ' ಶಬ್ದದೊಳಗಿನ 'ವಶವು' ಗೋಪಾಲನ ವೃತ್ತಿಯ ಸೂಚಕವಾಗಿರುವಂತೆ 'ತುರ್ವ' ಅಥವಾ 'ತುರು' ಎಂಬುದೂ ಅದೇ ಅರ್ಥವುಳ್ಳದ್ದಾಗಿರಲಿಕ್ಕಿಲ್ಲವೆ?

ತುರ್ವಶವೆಂಬುದು ಚಂದ್ರ-ಮಸ್ ಅಥವಾ ಕೂಡಲ-ಸಂಗಮ ಎಂಬಂತೆ ಒಂದೇ ಅರ್ಥದ ಎರಡು ಶಬ್ದಗಳಿಂದಾದ ಜೋಡುನುಡಿಯೆಂದು ನನ್ನ ತಿಳುವಳಿಕೆಯಾಗಿದೆ. ಇಲ್ಲಿ 'ತುರು' ಎಂದರೆ ವಶ; ವಶ ಎಂದರೆ ತುರು; ತುರು ಎಂದರೆ ಗೋವು ಎಂದು ಕಂದಮಿಳ ವರ್ಗದ ಭಾಷೆಯಲ್ಲಿ ಅರ್ಥವಿದೆ. ಈ ಕಾರಣದಿಂದಲೂ ತುರ್ವಶರೂ ಅವರ ಬಳಗದವರೇ ಆದ ಯಾದವರೂ ಆರ್ಯೇತರರೆಂದು ಸಿದ್ಧವಾಗುತ್ತದೆ.

ಯಜುರ್ವೇದದ ಪತ್ತಿಗಳು ಎಂದರೆ ಪಟ್ಟಿ-ಪಾಡಿಗಳು ಅಥವಾ ಹಟ್ಟಿಕಾರರು ಆರ್ಯೇತರರು; ಹಟ್ಟಿಕಾರರು ಗೋವಳರು; ಋಗ್ವೇದದ ಯದು-ತುರ್ವಶರೂ ಆರ್ಯೇತರರಾದ ಗೋವಳರು; ಆದಕಾರಣ ಯದು-ತುರ್ವಶರೆಂದರೂ ಒಂದೇ, ಪತ್ತಿ ಎಂದು ವರ್ಣಿಸಲ್ಪಟ್ಟ ಹಟ್ಟಿಕಾರರೆಂದರೂ ಒಂದೇ ಎಂದು ಸ್ಪಷ್ಟವಾಗುವುದು.

ಉತ್ತರ ಹಿಂದೂಸ್ತಾನದಲ್ಲಿ ಸಿಂಧ, ಪಂಜಾಬ, ಕಾಶ್ಮೀರ, ನೇಪಾಳ, ಆಸಾಮ, ಬಂಗಾಲ, ಬಿಹಾರ, ಉತ್ಕಲ, ಸಂಯುಕ್ತಪ್ರಾಂತ ಮೊದಲಾದ ಕಡೆಗಳಲ್ಲೆಲ್ಲ ಹಬ್ಬಿಕೊಂಡಿರುವ ಪಟ್ಟಿ, ಪತ್ತನ, ಪಾಡಿ, ವಾಡಿಗಳ ಮೂಲ ಕಾರಣರು ಯಾರಿರಬೇಕೆಂಬ ಮಾತಿನ ಮೇಲೆ ಹಟ್ಟಿಕಾರ ಯದು-ತುರ್ವಶರಿಂದ ಈಗ ಚೆನ್ನಾಗಿಯೆ ಬೆಳಕು ದೊರೆಯುತ್ತಲಿದೆ. ಈ ವರೆಗೆ ಸಂಶೋಧಕ ವಿದ್ವಾಂಸರು 'ದ್ರಾವಿಡ'ವೆಂದು ಬಳಸುತ್ತಿದ್ದ ಸಂದಿಗ್ಧಾರ್ಥದ ಪದಕ್ಕೆ ಪ್ರತಿಯಾಗಿ ನಿಶ್ಚಿತಾರ್ಥದ ಉಚಿತವಾದ ಪದವು ದೊರೆತಂತಾಯಿತು. ಇನ್ನಮೇಲೆ 'ದ್ರಾವಿಡ' ಎಂಬುದರ ಬದಲು ಪತ್ತಿಗಳು ಅಥವಾ ಯದು-ತುರ್ವಶರು ಎಂಬ ಪದವನ್ನು ಬಳಸುವುದು ಸಮರ್ಪಕವಾಗಿದೆ.

ಈ ಪತ್ತಿಗಳು ಅಥವಾ ಯದು-ತುರ್ವಶರು ದಕ್ಷಿಣ ದೇಶದ ಈಗಿನ ಯಾವ ಪ್ರಾಂತಕ್ಕೆ ಮುಖ್ಯವಾಗಿ ಹೆಚ್ಚು ಸಂಬಂಧಿಸಿದವರು? ಎಂಬುದು ಒಂದು ಮಹತ್ವದ ಪ್ರಶ್ನೆಯಾಗಿದೆ. ಏಕೆಂದರೆ ಪಟ್ಟಿ, ಪಾಡಿ ಎಂಬ ನುಡಿಯು ಕಂದಮಿಳ ವರ್ಗದ ಎಲ್ಲ ಭಾಷೆಯಲ್ಲಿಯೂ ಸುಮಾರಾಗಿ ದೊರೆಯುತ್ತದೆ. ಆತ ಕಾರಣ ಪಟ್ಟಿ-ಪಾಡಿಯ ಈ ಜನ ತೆಲುಗರೆ? ತಮಿಳರೆ? ಮಲೆಯಾಳಿಗಳೆ? ಕಂನಾಡವರೆ? ಇದನ್ನು ನಿರ್ಧರಿಸುವುದಕ್ಕೆ ಏನಾದರೂ ಪ್ರಮಾಣಗಳುಂಟೆ?

ಈ ವರೆಗೆ ಬೆಳಕಿಗೆ ಬಂದಿರುವ ಹಲವು ಸಂಗತಿಗಳ ಮೇಲಿಂದ ಇವರು ಕಂನಾಡವರ ಮೊದಲಿಗರಾಗಿರಬೇಕೆಂದು ನನ್ನ ಅಭಿಪ್ರಾಯವಾಗಿದೆ. ಅಂತಹ ಕೆಲವು ಸಂಗತಿಗಳನ್ನು ಬಲ್ಲಿರ ಅವಗಾಹನೆಗಾಗಿ ಕೆಳಗೆ ಸೂಚಿಸುತ್ತಲಿದ್ದೇನೆ.

೧. ವೈದಿಕ ಸಾಹಿತ್ಯದಲ್ಲಿ ಹಲವು 'ದ್ರಾವಿಡ' ವರ್ಗದ ಪದಗಳು ಕಾಣಿಸಿಕೊಳ್ಳುತ್ತವೆಂದೆ ಅನೇಕ ಸಂಶೋಧಕರು ಕಂಡುಹಿಡಿದಿದ್ದಾರೆ. ಅಣು, ಅರಣಿ, ಮರ್‌ಕಟ, ಅಟವಿ, ಅಲರ್ಕ, ಮಟಚಿ ಮುಂತಾದುವುಗಳ ವಿಷಯಕ್ಕೆ ಚರ್‌ಚೆಗಳು ಆಗಿವೆ. ಇವುಗಳಲ್ಲಿ 'ಮಟಚಿ' ಯನ್ನು ಕುರಿತು ಡಾ. ದೇವದತ್ತ ಭಂಡಾರಕರ, ಶ್ರೀ ಪಾಠಕ ಮೊದಲಾದ ವಿದ್ವಾಂಸರು ಲೇಖನಗಳನ್ನು ಬರೆದಿದ್ದಾರೆ. ಅದು ಸಂಸ್ಕೃತೇತರ ಭಾಷೆಯ ಪದವೆಂಬ ಬಗೆಗೆ ಭಿನ್ನಾಭಿಪ್ರಾಯವೆ ಇಲ್ಲ. 'ಮಟಚಿ'ಯು ಕಂನಾಡಿನಲ್ಲಿ ಮಿಡಚೆ ಎಂಬುದಾಗಿ ಈಗಲೂ ಬಳಕೆಯಲ್ಲಿದೆ. ತೆಲುಗು ತಮಿಳಗಳಲ್ಲಿ ಈ ರೂಪದಲ್ಲಿ ಈ ಪದವಿಲ್ಲ.

೨. ಬಲುಚಿಸ್ತಾನದ ಬದಿಯಲ್ಲಿ 'ಬ್ರಾಹೂಯೀ' ಎಂಬ ದ್ರಾವಿಡ ವರ್ಗದ ಒಂದು ಭಾಷೆಯು ಈಗಲೂ ಸ್ವಲ್ಪ ಉಳಿದುಕೊಂಡಿದೆ. ಈ ಭಾಷೆಯ ಮೊದಲಿಗರು ದಕ್ಷಿಣದಿಂದ ಇಲ್ಲಿ ಬಂದು ನೆಲಸಿದ್ದರೆಂಬುದಕ್ಕಿಂತಲೂ ಮೊದಲು ಇಲ್ಲಿಯೂ ಆ ಭಾಷೆ ಬಳಕೆಯಲ್ಲಿದ್ದಿತೆಂಬುದೇ ಸರಿ, ಎಂದು ಡಾ. ಗ್ರಿಯರಸನ್‌ರು 'ಲಿಂಗ್ವಿಸ್ಟಿಕ್ ಸರ್ವೆ ಆಫ್ ಇಂಡಿಯಾ' ಗ್ರಂಥದ ಮುನ್ನುಡಿಯ ಸಂಪುಟದಲ್ಲಿ ಸಕಾರಣವಾಗಿ ವಿವರಿಸಿದ್ದಾರೆ. ಇದು ಬಹಳ

ಪುರಾತನ ಕಾಲದಿಂದ ಇದ್ದ ಭಾಷೆಯ ಅವಶೇಷ. ಜುಲೇಸ್ ಬ್ಲೋಚ್ ಎಂಬ ಫ್ರಾನ್ಸದ ಸಂಶೋಧಕ ವಿದ್ವಾಂಸರ ಅಭಿಪ್ರಾಯದ ಮೇರೆಗೆ ಇದು ಕಂನುಡಿಗೆ ಹೆಚ್ಚು ಸಮೀಪವಾಗಿದೆ.[೧]

೩. ಭೌಗೋಲಿಕ ದೃಷ್ಟಿಯಿಂದ ನೋಡಿದಲ್ಲಿ ಉತ್ತರ ಭಾರತದೊಡನೆ ತಮಿಳರಿಗಿಂತಲೂ ತೆಲುಗು ಮತ್ತು ಕಂನಾಡವರ ಸಂಬಂಧವೇ ಹೆಚ್ಚು ಶಕ್ಯವೂ ಸಾಧ್ಯವೂ ಆಗಿದೆ.

ಇನ್ನು, ತೆಲುಗು ಮತ್ತು ಕಂನಾಡುಗಳಲ್ಲಿ, ಭಾಷೆ ಮತ್ತು ಐತಿಹಾಸಿಕ ಘಟನೆಗಳು ಉತ್ತರ ಹಿಂದೂಸ್ತಾನದಲ್ಲಿ ಕಂನಾಡವರ ಪ್ರಭಾವವೇ ವಿಶೇಷವಾಗಿದ್ದುದನ್ನು ಹೇಳುತ್ತವೆ.

i. ಭಾಷೆಯ ದೃಷ್ಟಿಯಿಂದ ತಮಿಳು ಮತ್ತು ಕಂನುಡಿಗಳು ಹತ್ತರ ಹತ್ತರಿನವು; ಮತ್ತು ಪ್ರಾಚೀನ. ಆಂಧ್ರವೆಂಬ ಜನವಾಚಕ ಶಬ್ದವು ಬ್ರಾಹ್ಮಣ ಗ್ರಂಥಗಳಲ್ಲಿ ದೊರೆಯುವುದು; ಇದನ್ನುಳಿದರೆ ತೆಲುಗರ ಭಾಷೆ ಮತ್ತು ಇತಿಹಾಸಗಳಲ್ಲಿ ಪುರಾತನದ ಕುರುಹುಗಳು ದೊರೆಯುವುದಿಲ್ಲ. ಇವರ ಸಾಹಿತ್ಯಕ್ಕೆ ಆರಂಭವು ೧೧ನೆಯ ಶತಮಾನದ ತರುವಾಯ.

ಕಂನುಡಿಯಲ್ಲಿ ತಮಿಳಿಗಿಂತಲೂ ಪ್ರಾಥಮಿಕ ಸ್ಥಿತಿದರ್ಶಕ ಶಬ್ದರೂಪಗಳು ಉಂಟೆಂದು ದಿವಂಗತ ಶ್ರೀಮಾನ್ ಬಿ.ಎಂ. ಶ್ರೀಕಂಠಯ್ಯನವರ ಅಭಿಪ್ರಾಯವಿದ್ದಿತು.

ii. ಸಾತವಾಹನರಿಗೆ ಆಂಧ್ರರೆಂಬುದು ತಪ್ಪು, ಎಂದು ಡಾ. ಸುಕಥನಕರರು ಒಂದು ಲೇಖನದಲ್ಲಿ ಪ್ರತಿಪಾದಿಸಿದ್ದಾರೆ. ಪುರಾಣಗಳ ಹೊರತು ಸಾತವಾಹನರಿಗೆ ಆಂಧ್ರರೆಂಬ ಬೇರ ಆಧಾರಗಳೆ ಇಲ್ಲ. ಸಾತವಾಹನಿ ರಠ, ಸಾತವಾಹನಿ ಹರವೆಂದು ಉಲ್ಲೇಖವಿರುವ ಶಾಸನಗಳು ಬಳ್ಳಾರಿ ಜಿಲ್ಲೆಯ ಹಿರೇಹಡಗಲಿ ಮತ್ತು ಮ್ಯಾಕಡೋಣಿ ತಾಲ್ಲೂಕುಗಳಲ್ಲಿ ದೊರೆತಿದ್ದು ಅದು ಕಂನಾಡ ಭಾಗವಾಗಿದೆ. ಸಾತವಾಹನರಲ್ಲಿ ಪುಲಿಮಾಯಿ, ಹಾಲ ಎಂಬ ಹೆಸರಿನ ರಾಜರಾದರು. ಪುಲಿಮಾಯಿಯಂತೆ ಪುಲಿಕೇಶಿ, ಪುಲಿಕಾಲ ಎಂಬೀಬಗೆಯ ಹೆಸರು ಕಂನಾಡಿನ ರಾಜರಿಗೇ ಇವೆ. 'ಹಾಲ'ವೆಂಬ ಹೆಸರಂತು ತೆಲುಗು ಇರುವುದು ಸಾಧ್ಯವಿಲ್ಲ. ಏಕೆಂದರೆ ತೆಲುಗಿನಲ್ಲಿ ಅದಕ್ಕೆ ಅಪಾರ್ಥವಿದೆ. ಹಾಲವೆಂಬುದಕ್ಕೆ ಮದ್ಯವೆಂಬ ಸಂಕುಚಿತಾರ್ಥವು ಮಾತ್ರ ತೆಲುಗಿನಲ್ಲಿದೆ.

iii. ಸ್ವತಃ ಶಾತವಾಹನರೇ ತಮ್ಮನ್ನು ಆಂಧ್ರರೆಂದು ಎಲ್ಲಿಯೂ ಹೇಳಿಕೊಂಡಿಲ್ಲ. ಗೌತಮೀ ಪುತ್ರ, ವಾಸಿಷ್ಠಿ ಪುತ್ರ - ಸಾತಕರ್ಣಿಗಳೆಂದು ಹೆಸರಿಸಿದ್ದಾರೆ. ಸಪ್ತಶತಿಯನ್ನು ಬರೆದ ಹಾಲನೆಂಬ ರಾಜನು ಕುಂತಲಾಧಿಪತಿಯೆಂದು ಭುವನಪಾಲನು ಸಪ್ತಶತಿಯ ತನ್ನ ಟೀಕೆಯಲ್ಲಿ ಹೇಳಿದ್ದಾನೆ (ಹಾಲ ಇತಿ ಶಾತ ವಾಹನಸ್ಯ ಕುಂತಲಾಧಿಪ ನೃಪಸ್ಯ ನಾಮ).

iv. ಕುಂತಲವು ಕಂನಾಡು. Karnataka is another name for Kuntaldesh ಎಂದು ನಂದೋಲಾಲ ಡೇಯವರು ಭಾರತವರ್ಷದ ಪ್ರಾಚೀನ ಸ್ಥಳಗಳನ್ನು ಕುರಿತು ಬರೆವಾಗ ಹೇಳಿದ್ದಾರೆ. ಆದಕಾರಣ ಕುಂತಲರೆಂದರೆ ಕಣ್ಣಾಡವರು; ಎಂದರೆ ಕಣ್ಣರೆಂದು ಅರ್ಥ. ತಮಿಳು ಪರಂಪರೆಯಲ್ಲಿ ಶಾತಕರ್ಣಿಗಳನ್ನು 'ನೂರುವರ್ ಕಣ್ಣರ್' ಎಂದು ಹೇಳಿದೆ.

ಆದಕಾರಣ ಸಾತವಾಹನರನ್ನು ಆಂಧ್ರರು, ಆಂಧ್ರಭೃತ್ಯರೆಂದು ಹೇಳುವುದು ತೀರ ವಿಪರೀತ. ಪುರಾಣಗಳು ಒಂದು ಕಡೆ; ನಾಣ್ಯ, ಶಾಸನ ಮತ್ತು ಸಾಹಿತ್ಯಗ್ರಂಥಗಳು ಇನ್ನೊಂದು ಕಡೆ. ಇವುಗಳಲ್ಲಿ ಶಾಸನಾದಿಗಳಿಗಿಂತ ಪುರಾಣಗಳು ವಿಶ್ವಾಸಾರ್ಹವೆಂಬುದು ಕೇವಲ ಅಶಾಸ್ತ್ರೀಯವಾಗಿದೆ. ಸಾತವಾಹರ ಮುಖ್ಯ ಶಾಖೆಯು ಗೋದಾತೀರದ ಪ್ರತಿಷ್ಠಾನದಲ್ಲಿ ಆಳಿತು.ಇವರ ಶಾಖೆಯು ಆಂಧ್ರದೇಶದಲ್ಲೂ ನೆಲೆಸಿತ್ತು. ಇಷ್ಟರಿಂದ ಸಾತವಾಹನರು ಆಂಧ್ರರೆಂಬುದು ಸರಿಯಲ್ಲ. ಬಾದಾಮಿಯ ಚಾಲುಕ್ಯರ ಒಂದು ಶಾಖೆಯು ಪುಲಿಕೇಶಿಯ ಎರಡನೇ ತಮ್ಮನಾದ ವಿಷ್ಣುವರ್ಧನನಿಂದ ತೆಲುಗು ನಾಡಿನಲ್ಲಿ ಬೇರೂರಿ ಅಲ್ಲಿ ರಾಜ್ಯವಾಳಿದ್ದುಂಟು. ಅದರಿಂದ ಚಾಲುಕ್ಯರೆಲ್ಲ ಆಂಧ್ರರೆಂದು ಹೇಳುವುದು ಯುಕ್ತವೆ?

ಪ್ರತಿಷ್ಠಾನದಲ್ಲಿ ಆಳಿದ ಕುಂತಲ ಸಾತಕರ್ಣಿಗಳ ಸಂಬಂಧವೇ ಉತ್ತರ ಭಾರತದೊಡನೆ ಹೆಚ್ಚಾಗಿ ಬಂದಿದೆ. ಶಾಲಿವಾಹನ ಶಕದ ಸಂಸ್ಥಾಪಕರೂ ಪ್ರತಿಷ್ಠಾನದ ಕುಂತಲ ಸಾತವಾಹನರೇ. ಗಂಗರು, ಚಲುಕ್ಯರು, ರಾಷ್ಟ್ರಕೂಟರುಗಳು ಕಂನಾಡವರು. ಇವರೆಲ್ಲರ ಸಂಬಂಧವು ಉತ್ತರ ಹಿಂದುಸ್ತಾನದೊಡನೆ ಬಂದಿದೆ. ತೆಲುಗರ ಇತಿಹಾಸದೊಳಗಿನ ಯಾವ ಯಾವ ಅರಸುಮನೆತನಗಳು ಉತ್ತರ ಹಿಂದೂ ದೇಶದಲ್ಲಿ ತಮ್ಮ ಪ್ರಭಾವವನ್ನು ಬೀರಿದುವೆಂಬುದು ಈವರೆಗೆ ಏನೂ ಬೆಳಕಿಗೆ ಬಂದಿಲ್ಲ.

೪. ಉತ್ತರದ ಒಂದೊಂದು ದೇಶದ ನಿಕಟ ಸಂಬಂಧವು ಕಂನಾಡಿನೊಡನೆ ಇರುವಷ್ಟು ತೆಲುಗು ದೇಶದೊಡನೆ ಇದ್ದುದು ಕಂಡುಬರುವುದಿಲ್ಲ.

i. ಅಶೋಕನ ಶಾಸನಗಳು ಕಂನಾಡಿನಲ್ಲಿಯೆ ಹೆಚ್ಚಿವೆ.

ii. ಸಿಂದಿಗೆ, ಸಿಂದೋಗಿ, ಸಿಂಧನೂರ, ಸಿಂಧೂರ, ಸಿಂದಘಟ್ಟ ಮೊದಲಾದ ಊರುಗಳೂ ಸಿಂದವಾಡಿ ಎಂಬ ದೇಶಭಾಗವೂ ಕಂನಾಡಿನ ವೈಶಿಷ್ಟ್ಯವಾಗಿದೆ. ಈ ಹೆಸರು ಸಿಂಧುದೇಶದೊಡನೆ ಇದ್ದ ಹತ್ತುಗೆಯನ್ನು ಹೇಳುತ್ತವೆ. ಸಿಂದರೆಂಬ ಹೆಸರಿನ ಅರಸು ಮನೆತನವೆ ಒಂದು ಆಗಿಹೋಯಿತು.

iii. ಚಿನಾಬ ಎಂಬ ನದಿಗೆ ಪ್ರಾಚೀನ ಕಾಲದಲ್ಲಿ ಚಂದ್ರಭಾಗಾ ಎಂಬ ಹೆಸರಿದ್ದಿತು. ಆ ಹೆಸರನ್ನೆ ಮತ್ತೆ ಭೀಮಾನದಿಗೆ ಪಂಡರಿಗೆ (ಪಂಢರಪುರ) ಹತ್ತಿರ ಇಟ್ಟುಕೊಂಡುದು, ದಕ್ಷಿಣಗಂಗಾ, ದಕ್ಷಿಣಕಾಶಿ ಎಂಬಂತೆ ಕಂನಾಡವರಿಗೆ ಮೊದಲಿನ ಆ ಚಂದ್ರಭಾಗೆ (ಚಿನಾಬ) ವಿಷಯಕ್ಕಿರುವ ಅಕ್ಕರೆಯನ್ನೇ ತೋರಿಸುತ್ತದೆ.

iv. ಶೈವಸಂಪ್ರದಾಯದ ಪರಂಪರೆಯಲ್ಲಿ ಕಾಶ್ಮೀರ ಮತ್ತು ಕಂನಾಡಿನಲ್ಲಿ ಹೋಲಿಕೆಯಿದೆ. ಬಿಲ್ಹಣನಂತಹ ಪಂಡಿತರು ಕಂನಾಡ ರಾಜರಲ್ಲಿ ಆಶ್ರಯಕ್ಕಾಗಿ ಬರುತ್ತಿದ್ದರು. ಸರಸ್ವತೀ ತೀರದ ಕಾಶ್ಮಿರೀ ಬ್ರಾಹ್ಮಣರೆಂದು ಖ್ಯಾತಿಯಿರುವ ಸಾರಸ್ವತರು ಮತ್ತು ಸಹವಾಸಿಗಳು ಇಲ್ಲಿ ಇಂದು ಕಂನಾಡವರೆ ಆಗಿದ್ದುದುಂಟು.

v. ನೇಪಾಳದಲ್ಲಿ ಕರ್ಣಾಟ ಕ್ಷತ್ರಿಯರ ಒಂದು ಮನೆತನವು ರಾಜ್ಯವಾಳಿದ್ದುದು ಆ ನಾಡಿನ ಇತಿಹಾಸದಲ್ಲಿಯೇ ಇದೆ.

vi. ಮಿಥಿಲೆ-ಬಿಹಾರದಲ್ಲಿ ಆಳಿದ ನಾನ್ಯದೇವನೆಂಬವನು ಭರತನ ನಾಟ್ಯಶಾಸ್ತ್ರಕ್ಕೆ ಟೀಕೆ ಬರೆದಿದ್ದು ಅದರಲ್ಲಿ ತಾನು ಕರ್ಣಾಟಕುಲದವನೆಂದು ಹೇಳಿದ್ದಾನೆ.

vii. ಬಂಗಾಳದ ಸೇನರಾಜರು ಕರ್ಣಾಟದ ಬ್ರಹ್ಮಕ್ಷತ್ರಿಯ ವರ್ಣದವರೆಂದು ಅವರ ಶಾಸನಾದಿಗಳಲ್ಲಿ ಹೇಳಿದ್ದು ಬೆಳಕಿಗೆ ಬಂದಿದೆ-ಗೌಡ (ಬಂಗಾಲ) ದೇಶದಿಂದ ಬಂದವರೆಂದು ಪರಂಪರೆಯು ಹೇಳುವ ಗೌಡ ಸಾರಸ್ವತರ ನೆಲೆವೀಡು ಕಂನಾಡು.

vii. ಉತ್ಕಲದ ಗಂಗರಾಜರೂ ಕಂನಾಡ ಗಂಗ ಅರಸರೂ ಮೂಲ ಒಂದೇ ಮನೆತನದವರು: ಗಂಗಾತೀರದಿಂದ ಹೊರಟವರೆಂದು ತಿಳಿದುಬರುತ್ತದೆ.

ix. ಇವೆಲ್ಲ ಹೆಚ್ಚಾಗಿ ಕ್ರಿಸ್ತಶಕದ ನಂತರ ಸಂಬಂಧಗಳೆಂಬುದು ನಿಜ. ಆದರೆ, ಕಂನಾಡ ಅರಸುಕುಲಗಳು ಹೇಳಿಕೊಳ್ಳುವ ತಮ್ಮ ಪೂರ್ವಪರಂಪರೆಯನ್ನು ಲಕ್ಷಿಸಿದರೆ ಈ ಸಂಬಂಧವು ಅತಿ ಪುರಾತನ ಕಾಲದವರೆಗೂ ನಿಶ್ಚಿತವಾಗಿ ಹೋಗಿ ಮುಟ್ಟುತ್ತದೆ. ಚಲುಕ್ಯರೂ ರಾಷ್ಟ್ರಕೂಟರೂ ತಾವು ಯದುವಂಶದವರು, ಭೋಜಕುಲದವರು ಎಂದು ಹೇಳಿದ್ದುಂಟು. ಗಂಗರು ತುರ್ವಸುವಿನ ಸಂತತಿಯೆಂದು ಇತಿಹಾಸವು ಹೇಳುತ್ತದೆ. ವಿಜಯನಗರದ ತುಳುವಂಶದ ಅರಸರು ತುರುವಂಶದವರೆಂದು ತಿಳಿದುಬರುತ್ತದೆ.

x. ಗೋವೆಯಲ್ಲಿ ಗೌಡರೆಂಬ ಒಂದು ಒಕ್ಕಲರ ಜಾತಿಯಿದ್ದು, ಬಂಗಾಳದತ್ತಣಿಂದ ಬಂದುದಾಗಿ ಅವರು ಹೇಳುವರೆಂದು ಮಹಾರಾಷ್ಟ್ರ ಶಬ್ದಕೋಶಕಾರರು ಬರೆಯುತ್ತಾರೆ. ಗೌಡ ಸಾರಸ್ವತರು ಮೊದಲು ನೆಲೆಯಾದುದೂ ಗೋವೆಯಲ್ಲಿಯೆ. ಗೋವೆಯೆಂದರೆ ಗೋಪರಾಷ್ಟ್ರ. ಗೌಡ (ಗೌಳ)ರು ಬಂದು ನೆಲೆಸಿದ ಪ್ರದೇಶಕ್ಕೆ ಗೋಪರಾಷ್ಟ್ರವೆಂಬ ಹೆಸರು ಪ್ರಾಪ್ತವಾಗುವುದು ಸಹಜವಾಗಿದೆ.

ಇದರಂತೆ 'ತುಳು' ನಾಡ ಹೆಸರಿನಲ್ಲಿಯೂ ತುಂಬ ಸ್ವಾರಸ್ಯವಿದೆ. ತುಳುನಾಡಿಗೂ ಗೋಪರಾಷ್ಟ್ರವೆಂಬ ಇನ್ನೊಂದು ಹೆಸರಿದೆ. ತುಳು ಮನೆತನದ ವಿಜಯನಗರದ ಅರಸರು 'ತುರ್ವಸು'ವಿನ ವಂಶಜರಂತೆ. ಎಂದರೆ ಗೋವಳರೆಂದು ಅರ್ಥ. ಆದುದರಿಂದ ತುಳುವರು ಎಂದರೆ ಗೋವಳರು; ಇದರಿಂದ ತುಳು ಶಬ್ದದ ಮೂಲವು 'ತುರು' ಎಂದಿರಬೇಕೆಂದು ನನ್ನ ಮತ. ತುಱು ಇದುವೆ ತುಳುವಾಗಿದೆ; ಇದರಿಂದ ತುಳುವರು ಎಂದರೆ ತುರುವರು ಕಂನಾಡ ಹಟ್ಟಿಕಾರರೇ ಆಗಿರುವರೆಂಬುದು ಸಿದ್ಧವಾಗುತ್ತದೆ. ಕಂನುಡಿಗೂ ತುಳುನುಡಿಗೂ ಇರುವ ನಿಕಟಸಂಬಂಧವು ಇದನ್ನೆ ದೃಢಪಡಿಸುತ್ತದೆ. ಗೋಪಾಡಿ ಮೊದಲಾದ ತುಳುನಾಡಿನಲ್ಲಿರುವ ಪಾಡಿಗಳು ಹಟ್ಟಿಗಳಂತೆ ತುರುಕಾರರ ಕುರುಹುಗಳೆ ಆಗಿವೆ.

ಇಂತಿವೆಲ್ಲ ಕಾರಣಗಳಿಗಾಗಿ ಉತ್ತರಾಪಥದಲ್ಲಿರುವ ಪಟ್ಟಿ, ಪಾಡಿ, ವಾಡಿ, ಹಟ್ಟಿಗಳಿಗೆ ಕಾರಣರಾದವರು ಕಂನಾಡ ಮೊದಲಿಗರೆಂದೇ ನನ್ನ ಗ್ರಹಿಕೆಯಾಗಿದೆ. ಮತ್ತು ವೇದಗಳಲ್ಲಿ ಕಾಣಸಿಕೊಳ್ಳುವ ಪತ್ತಿ (ಪಟ್ಟಿ)ಗಳೂ; ಯದು-ತುರ್ವಶರೂ ಆ ಮೊದಲಿಗರಾಗಿರಬೇಕೆಂದೂ ನನ್ನ ತಿಳುವಳಿಕೆಯಾಗಿದೆ.

೫. ಅಸ್ಸಾಮ್, ಬಂಗಾಳ ಮತ್ತು ಉತ್ಕಲಗಳ ಹೆಸರುಗಳು ಇನ್ನೂ ವಿಚಾರಾರ್ಹವಾಗಿವೆ. ಅಸ್ಸಾಮದಲ್ಲಿ ಗೌಹಟ್ಟಿ, ಸಿಲಹಟ್ಟಿಗಳುಂಟು. ಬಂಗಾಳದ ವಿಚಾರದಲ್ಲಿ ಇನ್ನೂ ಹೆಚ್ಚಿನ ಸಂಗತಿಗಳು ಗೊತ್ತಾಗಲು ಸಾಧ್ಯವಾಗಿದೆ. ಡಾ. ಸುನೀತಿಕುಮಾರ ಚತರ್ಜಿಯವರು ಬಂಗಾಲಿ ಗ್ರಾಮನಾಮಗಳ ಮೇಲಾಗಿರುವ 'ದ್ರಾವಿಡ'ದ ಪ್ರಭಾವವನ್ನು ಕುರಿತು ಲೇಖನಗಳನ್ನು ಬರೆದಿರುವರು. ರಮೇಶಚಂದ್ರ ಮುಜುಮದಾರರ 'ಬಂಗಾಲಾ ಭಾಷೆಯ ದ್ರಾವಿಡಿ ಉಪಾದಾನ' ಎಂಬ ಬರೆಹವೂ ಈ ವಿಷಯದ ಮೇಲಿದೆ. ಬಂಗಾಲದ ಊರುಗಳಲ್ಲಿ ಸಾಂತಿ, ಗಡ್ಡೆ, ಕುಂಬಿ, ಪೊಲ, ಊರು, ಹಟ್ಟಿ ಎಂಬುವು ದೊರೆಯುತ್ತವೆ. ಘೋಷ-ವಾಟಾ, ಸಾಂತಿ-ಪಾಟಕ ಎಂಬ ಕೂಡಲಸಂಗಮ ಜಾತಿಯ ಊರ ಹೆಸರುಗಳುಂಟು. ಪಾಟಕ ಎಂಬ ಪೇಟೆಯ ಮೊದಲ ರೂಪವನ್ನು ಕಂಡುಕೊಳ್ಳಬಹುದು. (ದತ್ತ, ಉತ್ತರ) ಪಾರಾಗಳಂತೆ 'ಊರಾ'ಗಳೂ ಬಂಗಾಲದಲ್ಲಿವೆ. ಬಂಕೂರಾ, ಹವೂರಾ, ಚಾಕೂರಾ ಮುಂತಾದವು ಇದಕ್ಕೆ ನಿದರ್ಶನ. ಬೀಡು ಎಂಬುದು ಭಿಟ್ಟಿ, ವಿಸ್ಸಿ, ಹಿಸ್ಸಿ ಎಂಬ ಬಗೆ ಬಗೆಯಾದ ರೂಪತಾಳಿದೆ. ಪೊಲವು 'ಪಲಾ' ಆಗಿದೆ. ಕಂಗೂಸಪಲಾ ಎಂಬ ಊರಹೆಸರಿನ ಅರ್ಥವು Bell-metal-field ಎಂದಿರುವು ದಂತೆ. ಜಯರಾತಿಪೊಲಾ, ಉಣ್ಯೆಪೊಲಾ ಎಂಬ ಎಡೆಗಳ ಹೆಸರಿನಲ್ಲಿ ಪೊಲ ಎಂಬುದೆ ಉಳಿದಿದೆ. 'ಚಂಪಾ' ಎಂಬ ಹೆಸರು ಚಂಪಾಹಟ್ಟಿ ಎಂದಿರಬೇಕಂತೆ.

> These are again some unmistakably Dravidian affinities in Bengali phonetics, morphology, syntax and vocabulary; but these agreements with Dravidian are not confined to Bengali alone, but are found in other North Indo-Aryan languages also. (Bengali Language : its Origin and Development; also read Kolerian and Dravidian place names.)

ಬಂಗಾಳಕ್ಕೆ ಆಂಧ್ರದೇಶವು ಸಮೀಪ. ಆದಕಾರಣ ಈ 'ದ್ರಾವಿಡ' ಪ್ರಭಾವಕ್ಕೆ ಕಾರಣರು ಆಂಧ್ರರೆಂದು ಊಹಿಸಲು ಆತಂಕವೇನು?

ಇದಕ್ಕೆ ಈ ಮೊದಲು ಹೇಳಿದ ಐತಿಹಾಸಿಕ ಘಟನೆಗಳ ಒಂದು ಕಾರಣವಂತೂ ಇದ್ದೇ ಇದೆ. ಆಂಧ್ರವು ಬಂಗಾಳಕ್ಕೆ ಹತ್ತಿರವಿದ್ದುದು ನಿಜವಿದ್ದರೂ ಬಂಗಾಳದಲ್ಲಿ ೧೨ನೆಯ ಶತಮಾನದ ವರೆಗೆ ಕರ್ಣಾಟದ ಪ್ರಭಾವವೇ ಇದ್ದುದು ಕಂಡುಬರುತ್ತದೆ. ಡಾ. ಬರುವಾ ಮತ್ತು ಡಾ. ಬಿ. ಸಿ. ಲಾ. ಇವರ ನೇತೃತ್ವದಲ್ಲಿ ಹೊರಡುವ Indian Culture ಎಂಬ ಸುಪ್ರಸಿದ್ಧ ಮಾಸಪತ್ರಿಕೆಯಲ್ಲಿ ಬಂಗಾಳದಲ್ಲಿದ್ದ ಕರ್ಣಾಟ ಜನರ ಪ್ರಭಾವವನ್ನು ಕುರಿತು ಕೆಲವು ಲೇಖನಗಳೂ ಬಂದಿವೆ. ಸೇನ-ಬಲ್ಲಾಳ ಮನೆತನದ ಕ್ಷತ್ರಿಯ ರಾಜರು ಮಾತ್ರವಲ್ಲ, ಬಂಗಾಳದಲ್ಲಿ

ಕರ್ನಾಟ ಬ್ರಾಹ್ಮಣರೂ ಬಹಳ ಪ್ರಮುಖರಾಗಿದ್ದುದನ್ನು ಸಾಧಾರವಾಗಿ ಬಂಗಾಳಿ ಲೇಖಕರೇ ವಿವರಿಸಿದ್ದಾರೆ. ಗೌರಾಂಗ ಪ್ರಭುವಿಗೆ ಆಧ್ಯಾತ್ಮಿಕ ಸ್ಫೂರ್ತಿ ದೊರೆತುದು ಕಂನಾಡ ಶ್ರೀ ಮಧ್ವಾಚಾರ್ಯರ ತತ್ವಜ್ಞಾನದಿಂದ. ಚೈತನ್ಯ-ಶಿಷ್ಯರಾದ ಜೀವಗೋಸಾವಿಯ ಮಠದ ಪೀಳಿಗೆಯಲ್ಲಿ ಅವನ ಪೂರ್ವಜರು ಕರ್ನಾಟರು ಇದ್ದುದನ್ನು ಆ ಪಂಥದ ಇತಿಹಾಸದಲ್ಲಿ ಹೇಳಿದೆ. ಇವರ ಪೂರ್ವಜನಾದ ವಿದ್ಧಿರಾಜನು ಕರ್ನಾಟನು. ಇವನ ಮೊಮ್ಮಗನು ನಯಹಟ್ಟಿಯಲ್ಲಿ ರಾಜ್ಯಮಾಡಿದನು.[೩]

ಅತ್ತ ಬಂಗಾಳದಲ್ಲಿ ಕರ್ನಾಟರಿದ್ದರೆ, ಇತ್ತ ಕರ್ನಾಟದಲ್ಲಿ ಗೌಡ (ಬಂಗಾಳ)ರು ಬಂದು ನೆಲೆಸಿದ್ದುಂಟು. ಬಂಗಾಳದಲ್ಲಿ ಗಂಗೂಳಿ ಮನೆತನವಿದ್ದರೆ ಕಂನಡ ಜಿಲ್ಹೆಯಲ್ಲಿ 'ಗಂಗಾಹೊಳೆ'ಯಿದೆ. ಗಂಗೊಳ್ಳಿ ಅಡ್ಡ ಹೆಸರಿನ ಗೌಡರಿದ್ದಾರೆ. ಕಂನಾಡ ಬ್ರಾಹ್ಮಣರಿಗೆ ಶಾಸನಗಳಲ್ಲಿ ಭಟ್ಟಾಚಾರಿ, ಭಟ್ಟೋಪಾಧ್ಯಾಯಗಳೆಂಬ ಹೆಸರು ಇದ್ದುದು ದೊರೆಯುತ್ತವೆ. ಆಂಧ್ರವು ಹತ್ತಿರವಿದ್ದರೂ ಕಂನಾಡ-ಬಂಗಾಲಗಳಂತಹ ಅನ್ಯೋನ್ಯ ಸಂಬಂಧವು ಆಗದೆ ಇದ್ದುದಕ್ಕೆ ಕಾರಣವೇನು? ೧೦ನೆಯ ಶತಮಾನದವರೆಗೆ ಇನ್ನೂ ತಲೆಯೆತ್ತಿ ತಮ್ಮ ಕಾಲಮೇಲೆ ತಾವು ನಿಲ್ಲಲು ಆಂಧ್ರರು ಸಮರ್ಥರಾಗಿದ್ದಿಲ್ಲವೆಂದು ಅವರ ಸಾಹಿತ್ಯ, ರಾಜಕೀಯ ಇತಿಹಾಸವೆ ಹೇಳುತ್ತಿದೆ. ಆದುದರಿಂದ ಬಂಗಾಳದಲ್ಲಿ ಕಾಣುವ 'ದ್ರಾವಿಡ' ಪ್ರಭಾವದ ಶ್ರೇಯಸ್ಸು ಕಂನಾಡವರಿಗೆ ಸಲ್ಲಬೇಕಾಗುತ್ತದೆ.

ಕಂನುಡಿಯಲ್ಲಿ ೧೧ನೆಯ ಶತಮಾನದಲ್ಲಿ ಕಾಣಬರುವ ವಕಾರವು ಬಕಾರವಾಗುವ, ಲಕಾರವು ಳಕಾರವಾಗುವ ವೈಶಿಷ್ಟ್ಯವು ಬಂಗಾಳ-ಕಂನಾಡಿನ ನಿಕಟಸಂಬಂಧದ ದ್ಯೋತಕವಾಗಿದೆ.

ತೆಲುಗಿನಲ್ಲಿ 'ಪಾಡು' ಶಬ್ದವು ಪಾಳು-ಹಾಳು ಎಂಬ ಸಂಕುಚಿತಾರ್ಥದಲ್ಲಿಯೆ ಹೆಚ್ಚಾಗಿ ಬಳಕೆಯಲ್ಲಿದೆ. 'ಪಾಡು' ಪಾಡು: ಎಂಬುದಕ್ಕೆ ತಮಿಳು ಕಂನುಡಿಗಳಂತೆ ಇರುವ, ಸಾಮಾನ್ಯ ಸ್ಥಿತಿ, ಎಂಬ ಅರ್ಥವು ಅಲ್ಲಿ ಇಲ್ಲ. Ruin, destruction, dilapidated condition, desolation; (at the end of the names of places) a village;

ಆದರೆ, ಇದು ಪಾಡು ಶಬ್ದದ ಇಳಿಗಾಲದ ಒಂದು ಅವಸ್ಥೆಯ ಸಂಕುಚಿತವಾದ ಅರ್ಥ. ಮೂಲದಲ್ಲಿ ಇದೇ ಅರ್ಥವಿಲ್ಲ. ರಟ್ಟ-ಪಾಡಿ, ಗಂಗವಾಡಿ ಮೊದಲಾದ ಕಡೆಯ ಪಾಡಿ, ವಾಡಿಯು ರಾಜವೈಭವಕಾಲದ ಅರ್ಥವುಳ್ಳುದು. ಈ ಪಾಡು ತೆಲುಗಿಗೆ ಅರಿದು. ಆ ವೈಭವದ ಪಾಡಿನಲ್ಲಿಯೇ ಪಾಟ-ಪೇಟೆ, ಪಟ್ಟಣಗಳು ತಲೆಯೆತ್ತಿದುವು.

ಪಟ್ಟಿ ಶಬ್ದವು ತಮಿಳಿನಲ್ಲೂ ಕಂನುಡಿಯಲ್ಲೂ ಇರುವ ಎಡೆ, ಇರುವ ಸ್ಥಳ, ಕೊಟ್ಟಿಗೆ ಎಂಬರ್ಥದಲ್ಲಿ ತೆಲುಗಿನಲ್ಲಿ ಇಲ್ಲ. ಪಟ್ಟಿಕಾರ, ಪಟ್ಟಿಲವೆಂಬ ಮಾತುಗಳು ತೆಲುಗಿಗಂತೂ ಸರಿಯೆ, ತಮಿಳಿನಲ್ಲೂ ಕಂನುಡಿಯ ಬಗೆಯಲ್ಲಿ ಬಳಕೆಯಲ್ಲಿಲ್ಲ. ಪಟ್ಟಿಯಿಂದಾದ 'ಹಟ್ಟಿ' ಎಂಬುದು ತಮಿಳಿನಲ್ಲಿ ಇರುವುದೇ ಸಾಧ್ಯವಿಲ್ಲ. ಏಕೆಂದರ ತಮಿಳಿಗೆ ಹಕಾರವೆ ಇಲ್ಲ. ಪಟ್ಟಿಕಾರ, ಪಟ್ಟಿಲರು-ಹಟ್ಟಿಕಾರರೆಂಬುದು ಕಂನಾಡವರ ವೈಶಿಷ್ಟ್ಯವೆಂದೇ ಹೇಳಬೇಕಾಗುತ್ತದೆ. ಪಟ್ಟಿಕಾರನೆಂಬುದಕ್ಕೆ A village servant ಎಂದು ತಮಿಳ ಮಹಾಕೋಶದಲ್ಲಿ ಕೊಟ್ಟಿದೆ ತುರುಕಾರ-ದನಗಾರರೆಂಬರ್ಥದಲ್ಲಿ ತಮಿಳಿನಲ್ಲಿ ಇಡೈಯನ ಎಂಬ ಮಾತು ರೂಢವಾಗಿದೆ. ಪಟ್ಟಿಕಾರ ಪಟ್ಟಿಲ ಅಥವಾ ಹಟ್ಟಿಕಾರವೆಂಬುದು ಕೇವಲ ಕಂನಾಡ ವಾಡಿಕೆ. ಸಂಸ್ಕೃತದಿಂದ 'ಹಟ್ಟ' ಎಂದರೆ ಪೇಟ ಎಂದು ಮಾತ್ರ ಅರ್ಥವು ತೆಲುಗಿನಲ್ಲಿದೆ. ಹಟ್ಟಿ, ತುರುಕಾರ ಹಟ್ಟಿ, ದನಗಾರ ಹಟ್ಟಿ ಎಂಬುದೆಲ್ಲವೂ ಕಂನಾಡಿ ಸೇರಿದ್ದು.

ಆದಕಾರಣ ಆಸಾಮದ ಗೌಹಟ್ಟಿಗೆ ಯಾರಾದರೂ ದ್ರಾವಿಡವರ್ಗೀಯರೆ ಕಾರಣರಿದ್ದರೆ ಅವರ ಕಂನಾಡವರೇ ಆಗಿರಬೇಕಲ್ಲದೆ ತೆಲುಗರಲ್ಲ; ಅಥವಾ ತಮಿಳರೂ ಅಲ್ಲ. ಇದೇ ಮೇರೆಗೆ ಬಂಗಾಳ ಚಂಪಾಹಟ್ಟಿಯ ವಿಚಾರವೂ ಉಂಟೆಂದು ಬೇರೆ ಹೇಳಬೇಕಾದುದಿಲ್ಲ.

ಆದರೆ, 'ದ್ರಾವಿಡ'ರು ಉತ್ತರದ-ಭಾಷೆಗಳ ಮೇಲೆ ತಮ್ಮ ಪ್ರಭಾವ ಬೀರಿರುವರೆಂದು ಆದ ಗ್ರಹಿಕೆಯ ಮೂಲಕ, ದ್ರಾವಿಡರೆಂದರೆ ತಮಿಳರೇ ಎಂದು ಪೂರ್ವಪರಂಪರೆಯಿರುವುದರಿಂದ ಅನೇಕ ವಿದ್ವಾಂಸರಿಗೆ ಉತ್ತರದಲ್ಲಿ ದ್ರಾವಿಡರು ಎಂದರೆ ತಮಿಳರೆಂದೇ ಭಾವನೆಯಾಗುತ್ತದೆ.

The languages which were replaced by Magadhi-Apabhramsh in Bengal were Dravidian, Kol and Monkhmer, Tibito-Burman ಎಂದು ಡಾ. ಸುನೀತಿ ಕುಮಾರರು ಬರೆಯುತ್ತಾರೆ.[೪] ಅವರು ತಮ್ಮ ಗ್ರಂಥದ ೬೮ನೆಯ ಪುಟದಲ್ಲಿ 'ತಾಮಲೂಕ' ಎಂಬ ಒಂದು ಊರಿನ ವಿಚಾರವಾಗಿ ಬರೆವಾಗ ಅದು ತಮಿಳರ ನೆಲೆವೀಡಾಗಿರಬೇಕೆಂದು ಊಹಿಸಿದ್ದಾರೆ. ಮ. ಮ. ಹರಪ್ರಸಾದ ಶಾಸ್ತ್ರಿಗಳಿಗೆ ಅಲ್ಲಿ ತಮಿಳರೇ ಕಂಡಿರುವರು. ದಶಕುಮಾರಚರಿತದೊಳಗಿನ ತಾಮ್ರಲಿಪ್ತಿ ಅಥವಾ ದಾಮಲಿಪ್ತ ಎಂಬ ಹೆಸರಿನ ಊರ ವಿಚಾರವಾಗಿ ಆದ ಚರ್ಚೆಯಲ್ಲಿ ಈ ಮಾತುಗಳು ಮುಂದೆ ಬಂದಿವೆ.

> This is Sanskritised form of same name like 'ದಾಮಲಿಪ್ತ'; and here we probably have a connection with the word ದಾಮಿಳ-ತಮಿಳ as Mahamahopadhyay Haraprasad Shastri has suggested (ದಾಮಲಿತ್ತ for a ದಮಿಳ ವಿಟ್ಟು Home of ದಮಿಳ people)

ಆದರೆ, ಮಹಾಮಹೋಪಾಧ್ಯಾಯ ಹರಪ್ರಸಾದ ಶಾಸ್ತ್ರಿಗಳ ಕಾಲದಲ್ಲಿ ಎಂದರೆ ಸುಮಾರು ೫೦ ವರುಷಗಳ ಹಿಂದೆ ಬಂಗಾಳದಲ್ಲಿ ಆಳಿದ ಸೇನಬಲ್ಲಾಳರು ಕರ್ಣಾಟ ಕ್ಷತ್ರಿಯರೆಂಬ ಸಂಗತಿಯು ಇನ್ನೂ ಬೆಳಕಿಗೆ ಬಂದಿರಲಿಲ್ಲ. ಪ್ರಾಚೀನ ಬಂಗಾಳದಲ್ಲಿ ಕಾಣಸಿಕೊಳ್ಳುವ ಕರ್ಣಾಟ ಬ್ರಾಹ್ಮಣಾದಿಗಳ ವರ್ಚಸ್ಸಿನ ಸಂಶೋಧನವೂ ಆಗಿದ್ದಿಲ್ಲ. ಈಗ ಇವೆಲ್ಲ ವಿಷಯಗಳು ನಿಃಸಂದಿಗ್ಧ ರೀತಿಯಲ್ಲಿ ಸಿದ್ಧವಾಗಿವೆ. ಡಾ. ರಮೇಶಚಂದ್ರ ಮುಜುಮದಾರರಂತಹರೆ ಸೇನ ಬಲ್ಲಾಳರು ಕರ್ಣಾಟರೆಂದು ಕಂಡುಹಿಡಿದಿರುವರು. ಆದಕಾರಣ ಡಾ.ಸುನೀತಿಕುಮಾರರು ಹೇಳುವ ಬಂಗಾಳದ ಭಾಷೆಯಲ್ಲಿ ಶಬ್ದರಚನೆ, ಶೈಲಿ, ಉಚ್ಚಾರದ ರೀತಿ ಮೊದಲಾದವುಗಳ ಮೇಲೂ ಊರ ಹೆಸರಿನ ಮೇಲೂ ಆಗಿರುವ 'ದ್ರಾವಿಡ'ವೆಂಬ ಪ್ರಭಾವಕ್ಕೆ ಕಂನಾಡವರೇ ಕಾರಣರೆಂದು ಈಗ ನಿಶ್ಚಿತವಾಗಿ ಹೇಳಲು ಸಾಧ್ಯವಾಗಿದೆ.

ಅಲ್ಲದೆ, ತಾಮಲೂಕ ಎಂಬ ಊರ ಹೆಸರಿನ ಕೊನೆಯ ಭಾಗವು ಒಕ್ಕಲು ಎಂಬ ಕಂನುಡಿಯ ಪದವಾಗಿರಬೇಕೆಂದು ಡಾ. ಬಾರ್ನೆಟರ ಅಭಿಪ್ರಾಯವಿದ್ದುದೂ ವಿಚಾರಾರ್ಹವಾಗಿದೆ.

> The modern name of this town is ತಾಮಲೂಕ (Tam(o) luk) :The affix suggests, according to Dr. L.D. Barnett, a connection with Kannad ಒಕ್ಕಲು house, home (of the ಉತ್ಕಲ for ಒರಿಸಾ probably also of Dravidian origin: Kannada ಒಕ್ಕಲ house -holder, farmer, ...); ಓಢ್ರ, ಅಥವಾ ಒಡಿಸಾ ಎಂಬುದು ಒಡ್ಡರು ಎಂಬ ಪದದಿಂದಲೂ ಬಂದಿರುವ ಸಂಭವವುಂಟೆಂದೂ ಅಲ್ಲಿ ಸೂಚಿಸಲ್ಪಟ್ಟಿದೆ.

ಒರಿಸ್ಸಾ ಅಥವಾ ಒಡಿಸ್ಸಾ ಎಂಬುದಕ್ಕಿಂತ ಉತ್ಕಲವೇ ಮೂಲ ಪದವಾಗಿದ್ದು ಅದು ಒಕ್ಕಲವೆಂಬ ಕಂನುಡಿಯಿಂದ ವಾಡಿಕೆಯಲ್ಲಿ ಬಂದಿರುವ ಸಂಭವವೆ ಹೆಚ್ಚಾಗಿದೆ. ಒಡ್ಡರೆಂಬ ಜನದ ಸಂಸ್ಕೃತಿಯ ಮಟ್ಟವನ್ನು ನೋಡಿದರೆ ಈ ಮಾತು ಸ್ಪಷ್ಟವಾಗುವುದು. ಯದು-ತುರ್ವಸುವಿನ ಬಳಗದವರಾದ ಕಂನಾಡ ಹಟ್ಟಿಕಾರ ಒಕ್ಕಲರು ರಾಜ್ಯ, ಸಾಮ್ರಾಜ್ಯಗಳನ್ನು ಕಟ್ಟಿ ಆಳಿದವರಾಗಿದ್ದಾರೆ. ಆದುದರಿಂದ ಒಂದು ಕಾಲಕ್ಕೆ ಈ ಹಟ್ಟಿಕಾರರು ಒಕ್ಕಲಾದ ನಾಡೆಂದು ಅದಕ್ಕೆ ಒಕ್ಕಲ-ಉತ್ಕಲವೆಂಬ ಹೆಸರಾಗಿರುವುದೆ ಹೆಚ್ಚು ಸುಸಂಗತವಾಗಿದೆ. ಈ ಉತ್ಕಲದಲ್ಲಿ ಕಿರುಕುಳ ಸ್ಥಿತಿಯಲ್ಲಿದ್ದ ಕೆಲವು ಜನಕ್ಕೆ ಒಡ್ಡರೆಂಬ ಸಂಜ್ಞೆ, ದೇಶದ ಮೇಲಿಂದ ಅವರಿಗೆ ಬಂದಿರುವುದು ಶಕ್ಯವಾಗಿದೆ. ಏಕೆಂದರೆ ಅವರಿಂದ ದೇಶಕ್ಕೆ ಹೆಸರು ಬರುವಂತಹ ಪ್ರಭಾವಶಾಲಿಗಳು ಅವರು ಇಂದಿಗೂ ಆಗಿಲ್ಲ.

ಒಡ್ಡರಿಂದ ಓಢ್ರವೆಂದು ದೇಶಕ್ಕೆ ಹೆಸರು ಬಂದಿದ್ದರೆ, ಅದು ತೆಲುಗು ಭಾಷೆಯಿಂದ ಬಂದುದೆನ್ನ ಬೇಕಾಗುವುದು. ಏಕೆಂದರೆ ಒಡ್ಡರು ತೆಲುಗು ಮಾತಿನವರು. ಆದರೆ, ಉತ್ಕಲದ ಊರುಗಳಲ್ಲಿರುವ ಗೋವುಡೊ ಗೋಠೂ, ಹಟ್ಟಿ-ಪಾಡೆಗಳಂತಹ ಹೆಸರುಗಳು, ಇಲ್ಲಿ ಒಕ್ಕಲಾದವರು ತೆಲುಗು 'ಒಡ್ಡರು, ಪ್ರಮುಖರೆನ್ನಲು ಅಡ್ಡಿಯನ್ನುಂಟು ಮಾಡುತ್ತವೆ. ಅಚ್ಚ ತೆಲುಗು ನಾಡಿನಲ್ಲಿ ಹಟ್ಟಿಗಳು ದೊರೆಯುವುದಿಲ್ಲ. ಅದರಂತೆ ಗೌಡ-ಗೌಳವೆಂಬ ಹೆಸರಿನ ಊರುಗಳೂ ಸಿಕ್ಕಲಾರವು. ಅಚ್ಚ ತೆಲುಗು ಜಿಲ್ಹೆಗಳಲ್ಲಿ ಗೊಲ್ಲ ಪಲ್ಲೆ, ಗೊಲ್ಲವಾನಿಗುಂಟ, ಗೊಲ್ಲವಾರಿ ಪಲ್ಲೆ ಎಂಬೀ ಬಗೆಯ ಹೆಸರುಗಳೆ ಹೊರತು ಗೌಡರ ಹಳ್ಳಿಗಳು ಇಲ್ಲ; ಹಟ್ಟಿಗಳ ಸುಳಿವಂತೂ ಇಲ್ಲವೇ ಇಲ್ಲ. ಉತ್ಕಲ ದೇಶದ ಪ್ರಭಾವವಿರುವ ಅಥವಾ ಉತ್ಕಲರು ತಮ್ಮ ನಾಡೆಂದು ಪ್ರತಿಪಾದಿಸುವ, ಆದರೆ, ಈಗ ಆಂಧ್ರದಲ್ಲಿ- ಮದರಾಸ್ ಇಲಾಖೆಯಲ್ಲಿ ಸೇರಿರುವ ಕೆಲವೊಂದು ಪ್ರದೇಶದಲ್ಲಿ ಮಾತ್ರ ಗೌಡ, ಹಟ್ಟಿ (ಊರುಗಳು) ದೊರೆಯುವುವು.

ಗ್ರಾಮಾಧಿಕಾರಿ ಗೌಡನೆಂಬರ್ಥದಲ್ಲಿ 'ರೆಡ್ಡಿ' ಶಬ್ದವು ತೆಲುಗುನಾಡಿನಲ್ಲಿ ವಾಡಿಕೆಯಾಗಿದೆ. ಕುರುಬ-ದನಗಾರರಿಗೆ ಗೌ(ಂ)ಡರೆಂಬ ಪ್ರತಿಶಬ್ದವಿದ್ದುದಾಗಿ ಕೋಶದಿಂದ ತಿಳಿಯುತ್ತದೆ. ಗೌ(ಂ)ಡನೆಂಬುದಕ್ಕೆ ಒಕ್ಕಲಿಗ, ರಯತ ಎಂದೂ ಅಲ್ಲಿ ಅರ್ಥವಿದೆ. ಆದರೂ ಗೌ(ಂ)ಡು ಶಬ್ದಕ್ಕೆ ಇವು ಗೌಣವಾದ ಅರ್ಥಗಳಿದ್ದು ಮದ್ಯ ಮಾರುವನೆಂಬುದೇ ತೆಲುಗಿನಲ್ಲಿ ಮುಖ್ಯವಾದ ಅರ್ಥವಾಗಿದೆ. ಒಕ್ಕಲಿಗ,ಹಟ್ಟಿಕಾರ-ತುರುಕಾರನೆಂಬರ್ಥದಲ್ಲಿ ಗೊಲ್ಲ ಶಬ್ದವೇ ವಾಡಿಕೆಯಲ್ಲಿದ್ದು ಆ ಹೆಸರಿನ ಹಳ್ಳಿಗಳೇ ಎಲ್ಲೆಲ್ಲೂ ತೆಲುಗು ನಾಡಿನಲ್ಲಿ ಕಾಣಲು ದೊರೆಯುತ್ತವೆ.

ಗೌ(ಂ)ಡು ಶಬ್ದಕ್ಕಿರುವ ಮದ್ಯವ್ಯವಸಾಯಿಯೆಂಬ ತೆಲುಗಿನಲ್ಲಿರುವ ಅರ್ಥವಿಶೇಷವು ಅಭ್ಯಸನೀಯವಾಗಿದೆ. ಗೌಡ ಮತ್ತು ಗೌ(ಂ)ಡ ಭಿನ್ನ ಶಬ್ದಗಳೆ? ಗೌ(ಂ)ಡ ಎಂಬಲ್ಲಿರುವ ಅರ್ಧ ಅನುನಾಸಿಕವು ದೇಶಭೇದದಿಂದ ಸೊಲ್ಲಿನಲ್ಲಿ ಸೇರಿಕೊಂಡಿರಬೇಕು. ವಿಕಲ್ಪ ಬಿಂದುಗಳ ಇಂತಹ ಉಚ್ಚಾರದ ಎಷ್ಟೋ ಶಬ್ದಗಳು ಭಾಷೆಯಲ್ಲಿರುತ್ತವೆ. ತೆಲುಗಿನಲ್ಲಿ ಪೇ(ಂ)ಟೆ ಎಂದೂ ಹೇಳುವುದುಂಟು. ಆದಕಾರಣ ಗೌಡ ಮತ್ತು ಗೌ(ಂ)ಡಗಳು ಭಿನ್ನವೆಂದು ಬಗೆವ ಕಾರಣವು ತೋರುವುದಿಲ್ಲ.

ತೆಲುಗಿನಲ್ಲಿ ದನಗಾರ, ಕುರುಬನೆಂಬ ಅರ್ಥವು ಅಮುಖ್ಯವಾಗಿದ್ದರೂ ಗೌ(ಂ)ಡು ಶಬ್ದಕ್ಕೆ ಅದು ಉಂಟು. ಆದುದರಿಂದ ಗೌಡನೆಂಬುದರ ಮೂಲರೂಪವು ಗೌಳವೆಂದಿರಬೇಕೆಂಬಲ್ಲಿ ಸಂದೇಹಕ್ಕೆ ಎಡೆಯಿಲ್ಲ. ಆದರೆ ಗೌಳ ಅಥವಾ ಗೌಡಕ್ಕೂ ಮದ್ಯದ ವ್ಯವಹಾರಕ್ಕೆ ಏನು ಸಂಬಂಧ? ಗೌಡ ಶಬ್ದಕ್ಕೆ ಸಾರಾಯಿ ಮಾರುವವನೆಂಬರ್ಥವು ದೊರೆಕೊಂಡ ಕಾರಣವೇನು? ಗೌಳ ಅಥವಾ ಗೌಡನೆಂದರೆ ಹಾಲು ಮಾರುವವನೆಂದರ್ಥವಿರಬೇಕು. ಆದರೆ ಗೌಡನು ಮದವ್ಯವಸಾಯಿ ಹೇಗೆ?

ಇದರ ಸ್ಪಷ್ಟೀಕರಣಕ್ಕಾಗಿ ಇದೇ ಬಗೆಯ ಬೇರೆ ಕೆಲವು ಉದಾಹರಣಗಳನ್ನು ಅರಿತುಕೊಳ್ಳುವುದು ಅವಶ್ಯ. ಕಳ್ ಎಂದರೆ ಹಾಲು, 'ಕಳ್ಳಿ' ಎಂದರೆ ಹಾಲಿನಗಿಡವೆಂಬರ್ಥ. ಕಳವರ್, ಕಳ್ಳರ್ ಎಂದರೆ ಗೋವಳರು, ಗೌಡರು; ಆದರಂತೆ ಮದ್ಯವ್ಯವಸಾಯಿಗಳೆಂದೂ ಅರ್ಥವುಂಟು. ಕಳ್ಳು ಎಂಬ ಪದಕ್ಕೆ ಮದ್ಯವೆಂಬರ್ಥವು ಪ್ರಾಪ್ತವಾಗಿದೆ. 'ಗೌಡ' ಶಬ್ದಕ್ಕೆ ಮಜ್ಜಿಗೆ ಎಂದೂ ಒಂದು ಅರ್ಥವಿರುವುದಾಗಿ ಕಾರಂತರ ಅರ್ಥಕೋಶದಲ್ಲಿ ಕೊಟ್ಟಿದೆ. 'ಹಾಲಾ' ಎಂದರೆ ಮದ್ಯವೆಂಬ ಅರ್ಥವೂ ಉಂಟು. ಇಡೈಯರ್ ಎಂದು ತಮಿಳಿನಲ್ಲಿ ಗೋವಳರಿಗೆ ಹೆಸರು. ಆದರೆ ಕಂನುಡಿಯಲ್ಲಿ ಈಳಿಗೆಯವರು (ಈಳಿಗರು) ಎಂದರೆ ಕಲಾಲರು-ಕಳವರು; ಮದ್ಯವ್ಯವಸಾಯಿಗಳು. ಇಡಾ-ಇರಾ, ಈರ್ ಎಂದರೆ ರಸ; ನೀರ್, ನೀರಾ, ಎಂಬಲ್ಲಿರುವ ಅರ್ಥವಿಶೇಷವೇ ಹಾಲು-ಹಾಲಾ, ಕಳ್-ಕಳ್ಳು ಎಂಬಲ್ಲೂ ಉಂಟು. ಕಂನುಡಿಯಲ್ಲಿ ಆಳ್-ಕಳ್, ಆಲ್-ಪಾಲ್, ಈರ್-ನೀರ್ ಎಂಬಿವು ರಸಾರ್ಥಕ ಶಬ್ದಗಳು. ಆ ರಸವು ಗೋವಿನದಾಯ್ತು; ಈಚಲದಾಯ್ತು; ಮೂಲದಲ್ಲಿ 'ರಸ'ವೆಂಬರ್ಥವು ಅಲ್ಲಿದೆ. ಆದುದರಿಂದ ಗೌಡರು, ಕಳವರು ಮತ್ತು ಇಡೈಯರು ಎಂದರೆ ರಸವ್ಯವಹಾರಿಗಳೆಂದೇ ಅದರ ಮೂಲಾರ್ಥವು. ಇನ್ನು ಇಲ್ಲಿ ಇನ್ನೊಂದು ಸಂಗತಿಯು ಗಮನಾರ್ಹವಾಗಿದೆ. ಕಳವರ್ ಎಂಬುದು ಅತಿ ಪ್ರಾಚೀನ ಶಬ್ದವಾಗಿದ್ದು ಅದು ಎಲ್ಲೆಡೆಗೂ ಹಿಂದೆ ಬಿದ್ದಿದ್ದು, ಅದರ ಪೂರ್ವಪರಂಪರೆಯೂ ಮರೆತುಹೋಗಿದೆ. ಆದರೆ ಇಡೈಯರ್ ಎಂಬುದು ತಮಿಳ ದೇಶದಲ್ಲಿ ಗೋವಳೆರೆಂಬರ್ಥದಲ್ಲಿ ಬಳಕೆಯಲ್ಲಿದೆ. ಇಡೈಯರ ಪಾಳಯಂ, ಇಡೈಯ್ಯಕೋಟೆ,

ಇಡೈಯನತ್ತಂ, ಇಡೈಕ್ಕುಲಂ ಎಂದು ಮುಂತಾದ ಹೆಸರಿನ ಎಡೆಗಳಿವೆ. ಆದರೆ ತಮಿಳಿನಲ್ಲಿ ಗೋವಳರೆಂದಿದ್ದ ಶಬ್ದವು ಕಂನಾಡಿನಲ್ಲಿ ಈಳಿಗರೆಂದು ಬೇರೆ ಅರ್ಥದಲ್ಲಿ ರೂಢವಾಗಿದೆ. ಕಂನಾಡಿನ ಗೌಳ (ಗೌಡ) ಶಬ್ದವು ತೆಲುಗು ದೇಶದಲ್ಲಿ ಹೀಗೆಯೆ ಭಿನ್ನಾರ್ಥತಾಳಿದೆ.

ನಮ್ಮ ಹಾಲು ಸಂಸ್ಕೃತದಲ್ಲಿ ಹಾಲಾ (ಮದ್ಯ) ಆಗಿದೆ. ಮಲ್ಲಿನಾಥನು ಮೇಘದೂತದ 'ಹಿತ್ವಾ ಹಾಲಾಂ' ಎಂಬುದಕ್ಕೆ ಬರೆದ ಟೀಕೆಯಲ್ಲಿ ಅದು ದೇಶೀಯನಾಮವೆಂದು ಹೇಳಿದ್ದಾನೆ. ತೆಲುಗಿನಲ್ಲಿ, ತಮಿಳಿನಲ್ಲಿ ಪಾಲಾ ಎಂಬ ರೂಪವು ಮಾತ್ರ ಉಂಟು. ಆದಕಾರಣ ಸಂಸ್ಕೃತದ ಹಾಲಾ ಶಬ್ದವು ಕಂನುಡಿಯ 'ಹಾಲು' ಎಂಬುದರಿಂದಲೇ ಬಂದಿರಬೇಕೆಂದು ಹೇಳಬೇಕಾಗುತ್ತದೆ. ಈ ಕಾರಣದಿಂದ, ಪಕಾರಕ್ಕೆ ಹಕಾರವಾದ ಕಂನುಡಿಯಲ್ಲಿ ದೊರೆವ ಲಿಖಿತ ಉದಾಹರಣವೆಂದರೆ 'ಹಾಲು' ಎಂಬುದೆ ಮೊದಲನೆಯದಾಗಿದೆ; ಮತ್ತು ಕಾಲಿದಾಸನ ಕಾಲದಷ್ಟು ಪ್ರಾಚೀನ ಎಂದರೆ ಕ್ರಿ.ಶ. ೫ನೆಯ ಶತಮಾನದ ಸುಮಾರಿಗೆ ಪಕಾರಕ್ಕೆ ಹಕಾರವಾಗುವ ಮಾರ್ಪಾಟಕ್ಕೆ ಮೊದಲಾಯಿತೆನ್ನಬೇಕಾಗುತ್ತದೆ. ಮುಂದೆ ೭-೮ ಶತಮಾನದವರೆಗೆ ಕಂನುಡಿಯ ಸಾಹಿತ್ಯದಲ್ಲಿ ಈ ಬಗೆಯ ಮಾರ್ಪಾಟಗಳಿಗೆ ಪ್ರೌಢರ ಮನ್ನಣೆ ದೊರೆಯದೆ ಹೋದರೂ ಸಂಸ್ಕೃತದಲ್ಲಿ ದೊರೆವ 'ಹಾಲಾ' ಎಂಬ ಪ್ರಯೋಗದಿಂದ ಬಾಯ್ಮಾತಿನಲ್ಲಿ, ಜನಸಾಮಾನ್ಯರ ಮಾತಿನಲ್ಲಿ ಇದು ಎಂದೋ ಆರಂಭವಾಯಿತೆಂದು ಕಂಡುಬರುತ್ತದೆ. ಬಳಕೆಯ ಮಾತು ಸಾಹಿತ್ಯದಲ್ಲಿ ಇಂಬುಗೊಳ್ಳಬೇಕಾದರೆ ಅದಕ್ಕೆ ಎಷ್ಟೋ ಶತಮಾನಗಳು ಹಿಡಿಯುವುದು ಒಂದು ಸಾರ್ವತ್ರಿಕ ನಿಯಮವೆ ಆಗಿದೆ. 'ಹಾಲಾ' ಶಬ್ದವು ಕಾಲಿದಾಸನ ಕಿವಿಗೆ ಬೀಳುವಷ್ಟು ಉತ್ತರ ಭಾರತದಲ್ಲಿ ಪ್ರಚಾರದಲ್ಲಿರಬೇಕಾದರೆ ಅಲ್ಲಿ ಕಂನಾಡ ಗೋವಳರ ಪ್ರಭಾವವು ಎಷ್ಟು ಹೆಚ್ಚಾಗಿದ್ದಿತೆಂಬುದೆ ಮತ್ತೆ ಸ್ಪಷ್ಟವಾಗುತ್ತದೆ.

ಒಂದು ಜನದಲ್ಲಿ ರೂಢವಿರುವ ಪದಪ್ರಯೋಗವು, ಇನ್ನೊಂದು ಜನದಲ್ಲಿ ಕೆಲವೊಂದು ಭಿನ್ನಾರ್ಥವನ್ನು ಪಡೆದರೆ ಅದರಲ್ಲಿ ಆ ಜನಗಳ ಪರಸ್ಪರ ಸಂಬಂಧದಲ್ಲಿರುವ ಮನಸ್ಥಿತಿಯೂ ಕೆಲಮಟ್ಟಿಗೆ ವ್ಯಕ್ತವಾಗುತ್ತಿರುತ್ತದೆ. ತೆಲುಗಿನಲ್ಲಿ 'ಪೆದ್ದ' ಎಂದರೆ ಪಂಡಿತ; ಕಂನುಡಿಯಲ್ಲಿ 'ಪೆದ್ದ'ನೆಂದರೆ ಹುಚ್ಚಗೌಡ, ಇಡೈಯ, ಹಾಲಾ ಮೊದಲಾದವುಗಳ ವಿಚಾರದಲ್ಲೂ ಇದೇ ಮಾತು ಸರಿಹೋಗುತ್ತದೆ. ಈ ಕಾರಣದಿಂದ, ಗೌ(ಂ)ಡವೆಂಬುದು ತೆಲುಗರಿಗೆ ಇಷ್ಟವಾದ ಸನ್ಮಾನಾರ್ಥಕ ಪದವಾಗದೆ ಇರುವುದಕ್ಕೆ ಅದು ಕಂನಾಡವರಲ್ಲಿ ವಿಶೇಷ ಬಳಕೆಯ ಪದವಾಗಿರಬೇಕೆಂದು ಹೇಳಬೇಕಾಗುತ್ತದೆ.

ಪಾಚೀನ ಕಾಲದಲ್ಲಿ ಬಂಗಾಳದ ಒಂದು ಪ್ರದೇಶಕ್ಕೆ ಗೌಡ ದೇಶವೆಂಬ ಹೆಸರಿತ್ತು. ಬಂಗಾಳದ ಭಾಗಕ್ಕೆ ಗೌಡವೆಂಬ ಹೆಸರು ಬರಲು ಕಾರಣರಾದ ಗೌಳರು ಯಾರಿರಬಹುದು? ಬಂಗಾಳದತ್ತ ಪಟ್ಟಿ, ಪಾಡಿ, ಪಾರಾ, ಪಾಟಕ, ಹಟ್ಟಿ, ಊರು, ಸಂತಿ, ಕಂಡಿ, ಗಡ್ಡಾ, ಪೊಲ ಎಂಬವೆ ಮೊದಲಾದ ಗ್ರಾಮನಾಮಗಳಿಗೆ ಕಾರಣರಾದ ಪಟ್ಟಿ (ಪತ್ತಿ)ಗಳು ಎಂದರೆ ಹಟ್ಟಿಕಾರ ಗೋವಳರಿಂದಲೇ ಆ ನಾಡಿಗೆ ಗೌಡವೆಂಬ ಹೆಸರು ಬಂದಿತೆಂದು ಊಹಿಸಿದರೆ ತಪ್ಪಾದೀತೆ? ಈ ಗೌಡರು ಮೇಲೆ ವಿವರಿಸಿದ ಕಾರಣಗಳಿಗಾಗಿ ತೆಲುಗರಿರುವುದಂತೂ ಸಾಧ್ಯವಿಲ್ಲ. ತಮಿಳಿನಲ್ಲಿ 'ಗೌಡ' ಶಬ್ದವೇ ಅಸಾಧ್ಯ; ಅಪರೂಪ. ಆದಕಾರಣ ಬಂಗಾಳಕ್ಕೆ ಗೌಡವೆಂಬ ಹೆಸರು ಕಂನಾಡ ಹಟ್ಟಿಕಾರರಿಂದಲೇ ಬಂದಿತೆಂದು ಹೇಳಬೇಕಾಗುವುದು.

ಟಿಪ್ಪಣಿ

೧. .. in Dravidian Brahui is connected with Canara, Kurkh; Malto: ಇನ್ನೊಂದೆಡೆಗೆ Canara-Kurkh-Brahui group; ***Pre-Aryan and Pre-Dravidan,*** p. 37; 58

೨. ***Journal of Royal Asiatic Society***, 1903; part III

೩. Ibid, 1903; part III

೪. ***Bengali Language Its Origins and Development,*** p. 284

ಕಂನಾಡಿನ ಬೇರೆ ಕೆಲವು ಜನಗಳು

ವೇದಕಾಲದ ಸುಮಾರಿಗೆ ಉತ್ತರ ಭಾರತದಲ್ಲಿ ಮಾತ್ರ ಜನಗಳು ಒಕ್ಕಲಾಗಿದ್ದರು; ದಕ್ಷಿಣಾಪಥದಲ್ಲಿ ನಾಗರಿಕತೆಯಿದ್ದಿಲ್ಲ; ಅದು ಕಾಡಿನಿಂದ ತುಂಬಿದ್ದಿತು. ದಂಡಕಾರಣ್ಯದಲ್ಲಿ ಅಲೆವ ಕಾಡಾಡಿಗಳನ್ನು ಬಿಟ್ಟರೆ ಇಲ್ಲಿ ಜನವಸತಿಯೆ ಇದ್ದಿಲ್ಲ; ಕೆಲವು ಜನಗಳು ಇದ್ದರೂ ದಕ್ಷಿಣೋತ್ತರ ಭಾರತಗಳಲ್ಲಿ ಬಳಕೆಯಿದ್ದಿಲ್ಲ; ಎಂಬೀ ಬಗೆಯ ಗ್ರಹಿಕೆಗಳು ನಮ್ಮಲ್ಲಿ ಹಲವರಲ್ಲಿ ದೃಢಮೂಲವಾಗಿವೆ. ಇದರಿಂದ ಪುರಾತನ ಭಾರತದ ನಿಜವಾದ ಐತಿಹಾಸಿಕ ಸ್ಥಿತಿಯು ಆಕಲನವಾಗಲು ಬಹಳ ಅಡ್ಡಿಯುಂಟಾಗಿದೆ.

ಪ್ರಾಗೈತಿಹಾಸಿಕ ಜನದ ಕೆಲವು ಕುರುಹುಗಳು

ಆದರೆ, ಬಳ್ಳಾರಿ ಜಿಲ್ಹೆಯ ಕಪ್ಪಗಲ್ಲಿನ ಹತ್ತಿರದ ಶಿಲಾಯುಗದ ಅವಶೇಷಗಳು ಅಲ್ಲಿ ಅತಿಪುರಾತನ ಕಾಲದ ಜನದ ನೆಲೆಯಿದ್ದುದಕ್ಕೆ ಸಾಕ್ಷಿಯಾಗಿವೆ. ಇಂತಹ ಅವಶೇಷಗಳು ಕಂನಾಡ ಉಳಿದ ಭಾಗದಲ್ಲಿಯೂ ಇದ್ದುದು ಆಯಾ ಜಿಲ್ಹೆಯ ಗ್ಯಾಝಿಟಿಯರುಗಳಿಂದ ತಿಳಿದುಬರುತ್ತದೆ. ಇಜಿಪ್ತಿನ ಮಾದರಿಯ ಅತಿಪುರಾತನ ಕಾಲದ ಗೋರಿಗಳು ಇಲ್ಲದ ಭಾಗಗಳೆ ಇಲ್ಲ. ವಿಜಾಪೂರ ಜಿಲ್ಹೆ ಹೆರಕಲ್ಲಿನ ಹತ್ತಿರ ನೆಲದ ಮೇಲ್ಭಾಗದಲ್ಲಿಯೆ ದೊರೆವ ಮಣ್ಣಿನ ಪಾತ್ರೆಗಳ ತುಂಡು, ಬಳೆಯ ಚೂರುಗಳು ಮೊಹೆಂಜೋದಾರೋದ ಅವಶೇಷಗಳ ನೆನೆಪನ್ನು ತಂದುಕೊಡುತ್ತವೆ. ಹಾಲಂಡಿನ ಕರ್ನ ಇನ್‌ಸ್ಟಿಟ್ಯೂಟದವರ ೧೯೩೪ನೆಯ ಇಸವಿಯ ವರದಿಯಲ್ಲಿ ಕೆಳಗಿನ ಸಂಗತಿಗಳು ಪ್ರಸಿದ್ಧವಾಗಿವೆ:

ಕೊಯಿಮತ್ತೂರು ಜಿಲ್ಹೆಯಲ್ಲಿ ಸೋಜಿಗವನ್ನುಂಟು ಮಾಡುವಂತಹ ನುಣ್ಣನೆಯ ಕರಿಕಲ್ಲು ದೊರೆತಿವೆ. ಇವು ಬಹಳ ಪುರಾತನದವಾಗಿರಬೇಕು. ಸಿಂಧ, ಬಲೂಚಿಸ್ತಾನದತ್ತ ಇಂತಹವು ಸಿಗುವುವು. ಮಾಸ್ಕಿ (ನಿಜಾಂ ಕಂನಾಡು) ಹತ್ತಿರ ತ್ರಿಕೋಣಾಕಾರದ ಕೆಲವು ಮಣಿಗಳು (lipis-lazuli) ಸಿಕ್ಕಿವೆ. ಇಂತಹವೇ ಮೊಹೆಂಜೋದಾರೋದಲ್ಲಿ ಮಾರ್ಶಲರ ಕಣ್ಣಿಗೂ ಬಿದ್ದಿವೆ. ಈ ಮಣಿಗಳು ಹಿಂದೂದೇಶದಲ್ಲಿ ಸಿಕ್ಕುವುದಿಲ್ಲ. ಬಲೂಚಿಸ್ತಾನದತ್ತಣಿಂದ ಬಂದಿರಬೇಕು.

ಕರ್ನ ಸಂಸ್ಥೆಯವರ ಈ ಅಭಿಪ್ರಾಯವನ್ನೆ ಪುಷ್ಟೀಕರಿಸುವಂತಹ ಬೇರೆ ಕೆಲವು ಸಂಗತಿಗಳು ಹಿಂದುಸ್ತಾನ ಸರಕಾರದ ಪುರಾಣವಸ್ತು ಸಂಶೋಧನ ಇಲಾಖೆಯವರ ನೋಟದಲ್ಲಿಯೂ ಬಂದಿವೆ. ಬೆಂಗಳೂರಿನ ಸಮೀಪದ ಹುತ್ತನಹಳ್ಳಿಯಲ್ಲಿ ಕೆಲವು ಅವಶೇಷಗಳು ದೊರೆತಿವೆ. ಇವು ಸಿಂಧದ ಅಗೆತದಲ್ಲಿ ದೊರೆತ ಪಾತ್ರೆಗಳಿಗೆ ಹೋಲುವಂತಹವಿವೆಯೆಂದೂ ಇವು ಲೋಹಯುಗದ ಆರಂಭದ ವಸ್ತುಗಳು (early iron age) ಆಗಿರಬೇಕೆಂದೂ ಆ ತಜ್ಞರು ನಿರ್ಧರಿಸಿದ್ದಾರೆ.[೧]

ಮಾಸ್ಕಿ, ಹೆರಕಲ್ಲು, ಬನವಾಸಿ, ಮೊದಲಾದ ಕಡೆಗಳ ಅಗೆತದಲ್ಲಿ ಪುರಾತನ ಪಟ್ಟಣಗಳು ಸಿಕ್ಕುವಲ್ಲಿ ಸಂದೇಹವೇ ಇಲ್ಲ. ಆದರೆ, ಭಾರತದಲ್ಲಿ ಎಲ್ಲರಿಂದಲೂ ಕಡೆಗಣಿಸಲ್ಪಟ್ಟ ಕಂನಾಡಿನಲ್ಲಿ ಪುರಾಣವಸ್ತು ಸಂಶೋಧನ ಇಲಾಖೆಯವರಾದರೂ ಈ ಕೆಲಸವನ್ನು ನಡೆಯಿಸುವುದು ಸಾಧ್ಯವೆ? ಆದರೂ, ಮೈಸೂರ ಸಂಸ್ಥಾನದಲ್ಲಿ ಡಾ ಹಟ್ಟಿಯ ಕೃಷ್ಣ ಅವರ ಪ್ರಯತ್ನದಿಂದ ಚಂದ್ರವಳ್ಳಿಯಲ್ಲಿ ಈ ಬಗೆಯ ಸ್ವಲ್ಪ ಕೆಲಸವಾಗಿದೆ. ಆ ಸ್ವಲ್ಪ ಪ್ರಯತ್ನದಲ್ಲಿಯೆ, ಒಂದರ ಕೆಳಗೊಂದು ಊರುಗಳು ಹುಗಿದು ಹೋದುದರ ನಿಶ್ಚಿತ ಕುರುಹುಗಳು ಕಂಡುಬಂದಿವೆ. ಕ್ರಿಸ್ತಾಬ್ದದ ಮುಂಚಿನ ಅವಶೇಷಗಳು ಈಗ ಹೊರಬರುತ್ತಲಿವೆ. ಈ ಕೆಲಸವು ಇನ್ನೂ ಮುಂದುವರೆದಲ್ಲಿ ಇನ್ನೂ ಪುರಾತನದ ನೋಟಗಳು ಕಣ್ಣಿಗೆ ಬೀಳಬಹುದೆಂದು ಬಲ್ಲಿದರ ಅಭಿಪ್ರಾಯವಾಗಿದೆ.

ಈಗ ಬೆಳಕಿಗೆ ಬಂದಿರುವ ಇಂತಹ ಕುರುಹುಗಳಿಂದ ಅತಿ ಪುರಾತನ ಕಾಲದಿಂದಲೂ ಉತ್ತರ ಭಾರತದಂತೆ ಈ ಭಾಗದಲ್ಲಿಯೂ ಜನಗಳು ಒಕ್ಕಲಾಗಿದ್ದರೆಂದು ನಿಃಸಂದಿಗ್ಧವಾಗಿ ಗೊತ್ತಾಗುತ್ತದೆ. ಅಲ್ಲದೆ ಸಿಂಧ-ಪಂಜಾಬಗಳಲ್ಲಿ ದೊರೆತ ಪುರಾತನ ವಸ್ತುಗಳ ಹೋಲಿಕೆಯ ಅವಶೇಷಗಳೇ ಇಲ್ಲಿಯೂ ಸಿಕ್ಕುತ್ತಿರುವುದನ್ನು ತಜ್ಞರೇ ಒಪ್ಪಿಕೊಂಡಿರುವರು. ಆದುದರಿಂದ, ಉತ್ತರ ಹಿಂದುಸ್ತಾನದ ಆ ಭಾಗದ ಜನದೊಡನೆ ಕಂನಾಡಿನ ಜನಗಳ ಸಂಪರ್ಕ, ಸಂಬಂಧಗಳು ಇದ್ದುವೆಂಬುದೂ ಈಗ ಸಿದ್ಧವಾದಂತೆಯೆ ಅಲ್ಲವೆ? ಕಂನಾಡಿನ ಎಡೆಗಳ ಹೆಸರುಗಳಿಂದಲೂ ಈ ಮಾತು ಇನ್ನಿಷ್ಟು ಮನದಟ್ಟಾಗುತ್ತದೆ.

ಕೋಲರೂ ಮುಂಡರೂ

ಭಾರತದಲ್ಲಿ ಆರ್ಯರು ಮತ್ತು ದ್ರಾವಿಡರಿಗಿಂತಲೂ ಮೊದಲು ಒಂದು ಜನ ಅಲ್ಲಿ-ಇಲ್ಲಿ ಹಬ್ಬಿ ಕೊಂಡಿದ್ದಿತು. ಅದು ಪೂರ್ವಭಾಗದಿಂದ ಎಂದರೆ ಟಿಬೇಟ, ಬ್ರಹ್ಮದೇಶ, ಬಂಗಾಳದತ್ತಣಿಂದ ಬಂದು ಉಳಿದ ಕಡೆಗೂ ಹಬ್ಬಿದ್ದಿತೆಂದು ಪಾಶ್ಚಿಮಾತ್ಯ ಸಂಶೋಧಕರು ನಿರ್ಣಯಿಸಿದ್ದಾರೆ. ಇದಕ್ಕೆ ಸಾಮಾನ್ಯವಾಗಿ ಎಲ್ಲ ವಿದ್ವಾಂಸರ ಒಪ್ಪಿಗೆಯೂ ದೊರೆತಿದೆ. ಪುರಾತನದ ಈ ಜನಗಳಲ್ಲಿ ಕೋಲರು ಮತ್ತು ಮುಂಡರ ಹೆಸರಿನ ಎಡೆಗಳು ಕಂನಾಡಿನಲ್ಲಿ ವಿಶೇಷವಾಗಿವೆ. ಆದರೆ, ಅವನ್ನು ಈ ವರೆಗೆ ಕೋಲ ಮತ್ತು ಮುಂಡರವೆಂದು ವಿವರಿಸಿ ಹೇಳಿದ್ದುದು ನನ್ನ ತಿಳುವಳಿಕೆಯಂತೆ ಇದೇ ಮೊದಲನೆಯ ಸಲ. ಕೊಲ್ಲೂರು, ಕೋಲಾರಗಳ ಸ್ಥಳಪುರಾಣ ಅಥವಾ ಗ್ಯಾಝಿಟಿಯರುಗಳ ಲೇಖಕರು ಸಹ ಇವು ಕೋಲವೆಂಬ ಜನಗಳ ಕುರುಹುಗಳೆಂದು ಬರೆದಿಲ್ಲ.

ಕೋಲರ ನೆನಹನ್ನು ಕೊಡುವ ಹಲವು ಎಡೆಗಳು ಕಂನಾಡಿನ ತುಂಬ ಇವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಕೊಟ್ಟಿದೆ.

ಕೊಲ್ಲ, ಕೊಲ್ಲಗಿರಿ, ಕೋಲಾರ, ಕೊಳ್ಳಹಾಳ ವಿಷಯ, ಕೊಲ್ಲೂರು, ಕೋಲ್ಹಾಪುರ, ಕೊಲ್ಲಹಣನಾಡು, ಕೊಲ್ಲಂ, ಕೊಳ್ಳೆಗಾಲ, ಕೊಲ್ಲಿ, ಕೊಲ್ಲಿಪಾಕೆ, ಕೊಲ್ಲಾಳಿ, ಮುಂ. ಇವುಗಳಲ್ಲಿ ಕೆಲವು ದೇವಿಯ ಸ್ಥಾನಗಳೆಂದು ಸುಪ್ರಸಿದ್ಧವಾಗಿವೆ. ಇದರಂತೆ ಮುಂಡರ ಹೆಸರಿನ ಸಂಬಂಧವುಳ್ಳ ಊರುಗಳಿವು: ಮುಂಡಕೂರು, ಮುಂಡರಗಿ, ಮುಂಡಗೋಡು, ಮುಂಡೇವಾಡಿ ಮುಂ. ಕೇವಲ ಪಾಶ್ಚಿಮಾತ್ಯ ವಿದ್ವಾಂಸರ ಹೇಳಿಕೆಯ ಮೇಲಿಂದಲೆ ಕೋಲ ಮತ್ತು ಮುಂಡರು ಪಾಚೀನ ಜನಗಳೆಂದು ನಂಬಬೇಕಾಗಿಲ್ಲ. ದುರ್ಗಾಸಪ್ತಶತಿ, ದೇವಿಪುರಾಣಗಳಲ್ಲಿ ಬಂದ ವರ್ಣನೆಗಳಿಂದಲೂ ಈ ಐತಿಹಾಸಿಕ ಅಂಶಗಳನ್ನು ಸಂಗ್ರಹಿಸಿ ತಿಳಿದುಕೊಳ್ಳಬಹುದಾಗಿದೆ.

ದುರ್ಗೆಗೆ ಚಾಮುಂಡಿ ಎಂದೂ ಹೆಸರಿದೆ. ಚಂಡ ಮತ್ತು ಮುಂಡ ಎಂಬ ರಕ್ಕಸರನ್ನು ಸಂಹರಿಸಿದ್ದರಿಂದ ಆ ದೇವಿಗೆ 'ಚಾಮುಂಡಿ' ಎಂಬ ಹೆಸರು ಬಂದಿತೆಂದು ಪುರಾಣ ಕತೆಯು ಹೇಳುತ್ತದೆ. ಚಂಡ ಅಥವಾ ಮುಂಡವೆಂಬುದು ಒಬ್ಬೊಬ್ಬ ರಕ್ಕಸನ ಹೆಸರಲ್ಲ. ಅದು ಜನವಾಚಕವಾಗಿರಬೇಕು. ಆ ಜನಗಳ ಪ್ರಾತಿನಿಧಿಕ ರೂಪದಲ್ಲಿ ರಕ್ಕಸನೆಂಬುದಾಗಿ ಪುರಾಣಗಳಲ್ಲಿ ವರ್ಣಿಸಿದ್ದಾಗಿದೆ. ಇದು ಪುರಾಣಗಳಲ್ಲಿ ಹಲವೆಡೆಗೆ ಕಂಡುಬರುವ

ಒಂದು ಸಾಮಾನ್ಯ ಸಂಕೇತ. 'ಕರ್ಣಾಟ ರಾಕ್ಷಸ'ವೆಂದು ಸ್ಕಂಧಪುರಾಣದಲ್ಲಿ ಬಂದ ವರ್ಣನೆಯೂ ಇದೇ ತರದ ಸಂಕೇತವಿದೆ. ಮಲ್ಲಾಸುರನ ಸಂಹಾರದ ಪುರಾಣಕತೆಯ ರೀತಿಯೂ ಇದೇ ಬಗೆಯದು. ಆದಕಾರಣ ದುರ್ಗೆಯು ಸಂಹರಿಸಿದ್ದು ಒಬ್ಬ ಚಂಡ ಅಥವಾ ಮುಂಡನನ್ನಲ್ಲ; ಚಂಡರೆಂಬ ಹೆಸರಿನ, ಮುಂಡರೆಂಬ ಹೆಸರಿನ ಜನಗಳನ್ನು. ಮುಂಡರೆಂಬ ಹೆಸರಿನ ಜನಗಳು ನಮ್ಮ ಭಾಗದಲ್ಲಿ ಈಗ ಇಲ್ಲವಾದರೂ ಬಂಗಾಳದ ಕಡೆಗೆ ಉಂಟು. ಚಂಡರು, ಈಗ ಚಾಂಡಾಲರೆಂಬ ಹೆಸರಿನ ಜನಗಳಾಗಿರಬೇಕು. ಕಂನಾಡಿನಲ್ಲಿ ವಿಶೇಷವಿಲ್ಲ. ಮಹಾರಾಷ್ಟ್ರದಲ್ಲೂ ವಿಶೇಷವಾಗಿ ಬಂಗಾಳದಲ್ಲೂ ಇದ್ದಾರೆ. ಚಾಮುಂಡಿ ಬೆಟ್ಟ, ಚಂಡಿಮುಂಡಿ ತೀರ್ಥ, ಚಂಡಿವಾಡಿ ವಿಷಯ, ಎಂಬ ಎಡೆಯ ಹೆಸರುಗಳು ಈ ಪುರಾತನ ಜನಗಳ ನೆನಹನ್ನು ಕೊಡುವುವು.

ದುರ್ಗಾಸಪ್ತಶತಿಯಲ್ಲಿ ಕೋಲರ ಉಲ್ಲೇಖವೂ ಬರುವುದು. ಕೋಲರು, ಮುಂಡರು, ಚಂಡರು ಕಂನಾಡಿನ ಆದಿವಾಸಿಗಳು. ಅವರ ಹೆಸರಿನ ಕುರುಹುಗಳು ಸಾವಿರಾರು ವರುಷಗಳಿಂದ ಉಳಿದು ಬಂದಿರುವುದು ಕೌತುಕ ಮತ್ತು ಆಶ್ಚರ್ಯವನ್ನುಂಟುಮಾಡುವುದು.

ಎಮ್ಮೆಗರು

ನಮ್ಮ ಹಟ್ಟಿಕಾರರು ತುರುಕಾರು; ತುರ್ವರು; ತುರ್ವಸುಗಳು ಇವರು. ಆದಕಾರಣ ಇವರು ಎಮ್ಮೆಗರು ಆಗಿರಲಾರರು. ಎಮ್ಮೆಗಳ ವಿಚಾರದಲ್ಲಿ ನಮ್ಮ ನಾಡವರಿಗೆ ಗೋವುಗಳಷ್ಟು ಅಕ್ಕರೆಯು ಕಾಣಬರುವುದಿಲ್ಲ. ಎಮ್ಮೆ ಕೋಣಗಳಿಗೆ ದೆವ್ವ, ರಕ್ಕಸಗಳೆಂದು ತಿರಸ್ಕಾರದಿಂದ ಹೇಳುವರು. ಆವು ಎತ್ತು ಪವಿತ್ರವೆಂದು ಭಾವಿಸುವರು. ಆದರೆ, ಇಂದು ಗೋವಳರು-ಗೌಳಿಗಳೆಂದು ಹೆಸರಿದ್ದರೂ ಅವರೆಲ್ಲ ಸಾಮಾನ್ಯವಾಗಿ ಎಮ್ಮೆಗರೇ ಆಗಿರುವರಾದರೂ ಇದು ಅವರ ಪೂರ್ವಪರಂಪರೆಗೆ ಹೊಂದಿಕೆಯಾದ ಮಾತಲ್ಲವೆಂದು ಅವರ ಜಾತಿವಾಚಕ? (ಗೌಳ) ಹೆಸರೇ ಹೇಳುತ್ತದೆ.

ಒಂದು ಕಾಲಕ್ಕೆ ಎಮ್ಮೆಗರು ತುರುಕಾರರ ಎದುರಾಳಿಗಳಾಗಿರಬೇಕು. ತುರುಕಾರರ-ಯದು-ತುರ್ವಸುಗಳ ಕುಲದೈವತವಾದ ಚಾಮುಂಡಿಗೆ 'ಮಹಿಷಾಸುರ ಮರ್ದಿನಿ' ಎಂದೂ ಪರ್ಯಾಯ ನಾಮವಿದೆ. ಇಲ್ಲಿ ಮಹಿಷಾಸುರನೆಂದರೆ ಮೇಲೆ ಸೂಚಿಸಿದಂತೆ ಮಹಿಷರೆಂದೇ ಅರ್ಥ. ಮಹಿಷಕರೆಂದು ಪುರಾಣಗಳಲ್ಲಿ ಸಂಸ್ಕೃತದಿಂದ ಹೇಳಿದ ಜನವೆ ಕಂನುಡಿಯಿಂದ ಎಮ್ಮೆಗರು. ಎಮ್ಮೆಗನೂರು, ಎಮ್ಮೆಸಂದಿ, ಮಹಿಷಪುರ, ಮ್ಹೈಸೂರು, ಮ್ಹೈಸವಾಡಿ, ಮ್ಹೈಸಾಳ, ಮ್ಹೈಸವಳ್ಳಿ ಮುಂತಾದುವು ಈ ಎಮ್ಮೆಗರ ಒಂದು ಕಾಲದ ಕುರಹುದೋರುವುವು ನರ್ಮದಾತೀರದ ಮಹಾಷ್ಮತೀ ನಗರವು ಮಹಿಷರ ಮೂಲ ನೆಲೆವೀಡಾಗಿರಬೇಕು.

ಕೋಲ-ಮುಂಡರನ್ನು ಸಂಹರಿಸಿದ ದೇವಿಯೆ ಮಹಿಷರನ್ನೂ ಸಂಹರಿಸುವಳು. ಆದುದರಿಂದ ಈ ಮಹಿಷರೂ ಕೋಲ-ಮುಂಡರ ಒಡನಾಡಿಗಳೆ ಆಗಿರುವ ಸಂಭವವಿದೆ. ಆರಿಯ (ಮರ್‍ಹಾಟ)ರಲ್ಲಿ ಮ್ಹಸೆ ಎಂಬ ಅಡ್ಡಹೆಸರಿನವರಿದ್ದಾರೆ. ಮಹಾರಾಷ್ಟ್ರದಲ್ಲಿ 'ಮ್ಹಸೋಬ'ನೆಂಬ ಒಂದು ಕಿರುಕುಳ ದೈವತದ ಪೂಜೆ ಸಾಮಾನ್ಯ ಜನದಲ್ಲಿದೆ. ಬೀದಿಯ ಒಂದು ಗುಂಡ-ಬಂಡಿಗೆ ಮ್ಹಸೋಬನೆಂದು ಸೇಂದೂರ ಎಣ್ಣೆಹೆಚ್ಚಿ ಪೂಜಿಸುವುದುಂಟು.

ಕಂನಾಡಿನಲ್ಲಿರುವ ಎಮ್ಮೆ ಮತ್ತು ಮ್ಹೈಸರ ಎಡೆಗಳಿಂದ ಇಲ್ಲಿ ಎಮ್ಮೆಗರ ಕುಲ ನೆಲೆಸಿದ್ದಿತೆಂಬಲ್ಲಿ ಸಂದೇಹವೆ ಇಲ್ಲ. 'ಎರುಮರ್ೈನಾಡಿ' ಉಲ್ಲೇಖವು ಶಾಸನಗಳಲ್ಲೂ ಇದೆ.[೨] ಹೊಯ್ಸಳ ವೀರಬಲ್ಲಾಳನ ಕಾಲದ ಶಾಸನವೊಂದರಲ್ಲಿ 'ಕುರುಕ್ಕಿನಾಡ ಮಾಳನ ಹಳ್ಳಿಯ ಎಮ್ಮೆಯರ ಕೊಲದ ಚಾಕಗಾವುಂಡನ ಮಗ ಹರದಗಾವುಂಡನ' ಉಲ್ಲೇಖವಿದೆ. ಇದರಂತೆ ಮೈಸೂರ ಸೀಮೆಯ ಕೋಡಿಹಾಳ ಶಾಸನದಲ್ಲಿ 'ಎರುಮೈರೆ ನಾಟ್ಟಿಲ್ ನಾಟ್ಟವರ'ನ್ನು ಕುರಿತು ಹೇಳಿದೆ. ಇದು ವಿಜಯನಗರ ಬುಕ್ಕರಾಯನ ಕಾಲದ್ದು (ಕ್ರಿ. ಶ. ೧೩೬೭).

ಬೇಡರೂ ಬಿಲ್ಲವರೂ ಅಂಬಿಗರೂ

ಇವರು ನಮ್ಮ ನಾಡಿನ ಆದಿನಿವಾಸಿಗಳು. 'ಕೋಲ'ವೆಂಬುದಕ್ಕೆ ಕಂನುಡಿಯಿಂದ ಅರ್ಥ ಮಾಡಿದರೆ ಬಿಲ್ಲವರೂ, ಅಂಬಿಗರೂ, ಕೋಲರೂ, ಹತ್ತುಗೆಯವರೆಂದು ಕಂಡುಬರುತ್ತದೆ. ಅಂಬು ಎಂದರೆ ಬಾಣ.

ಬೇಟೆಯಿಂದ ಜೀವನವನ್ನು ಸಾಗಿಸುತ್ತಿದ್ದ ಕಾಲದ ಹೆಸರುಗಳಿವು. ಬೇಡರೂ ಬಿಲ್ಲವರೂ ಅಂಬಿಗರೂ ಕೋಲರೂ ಧನುರ್ವಿದ್ಯೆಯ ಬಲದಿಂದ ಬದುಕು ನಡೆಸುತ್ತಿದ್ದರೆಂದು ಅವರ ಹೆಸರುಗಳು ಸಾರ್ಥವಾಗಿವೆ. ಇವರು ತುಂಬ ಕಟ್ಟಾಳುಗಳು. ಕಂನಾಡ ಪಡೆಯಲ್ಲಿ ಇವರಿಗೊಂದು ಮಹತ್ವದ ಸ್ಥಾನವಿದ್ದಿತು. ಕಂನಾಡ ರಾಜರಿಗೆ ಹಲವು ದಿಗ್ವಿಜಯಗಳಲ್ಲಿ ಗೆಲುವನ್ನು ತಂದುಕೊಟ್ಟ ಶ್ರೇಯಸ್ಸು ಇವರಿಗಿದೆ. ಬೇಡರು, ಬಿಲ್ಲರು, ಅಂಬಿಗರ ಹೆಸರುಗಳು ಶಾಸನಗಳಲ್ಲಿ ಬರುತ್ತವೆ.

ಇವರ ಹೆಸರಿನ ಬೀಡುಗಳೂ ಉಂಟು. ೧. ಬೇಡಗೆರೆ, ಬೇಡನ ಬಯಲು, ಬೇಡನಕಟ್ಟೆ, ಬೇಡರಬಂಕಿ (ಕಾಡು), ಬೇಡರಹಳ್ಳಿ, ಬೇಡರಪುರ, ಬೇಡರಿಗುಪ್ಪೆ, ಬೇಡಿಪಾಳ್ಯ. ೨. ಬಿಲ್ಲಾಡಿ, ಭಿಲವಡಿ, ಬಿಲ್ಲಟ್ಟಿ, ಬಿಲ್ಲ ಬೆಳಗುಂದ, ಬಿಲ್ಲಕೆರೆ, ಬಿಲ್ಲೂರು ಮುಂ. ೩. ಅಂಬಿನಾಡು ಎಂಬೊಂದೆ ಸ್ಥಳವು ಶಾಸನದಲ್ಲಿ ಸಿಕ್ಕುತ್ತದೆ.[೩] ಈ ಜನಗಳಲ್ಲಿ ಹಲವರು ರಾಜ್ಯಕಟ್ಟಿ ಅರಸುಗೈದುದೂ ಉಂಟು. ಪಾಳೆಯಗಾರ ನಾಯಕರು ಕೆಲವರಾದರು. ಸುರಪುರದ (ನಿಜಾಂ ಕಂ) ನಾಯಕರು ಇತಿಹಾಸ ಪ್ರಸಿದ್ಧರಾಗಿದ್ದಾರೆ.

ಕನ್ನದೇಶ (ಖಾನದೇಶ)ದಲ್ಲೂ, ಕಂನಡ ಜಿಲ್ಲೆಯ ದಕ್ಷಿಣ ಭಾಗದಲ್ಲೂ ಬಿಲ್ಲವರು ವಿಶೇಷವಾಗಿದ್ದಾರೆ. ಕನ್ನದೇಶದಲ್ಲಿ ಇವರಿಗೆ ಭಿಲ್ಲರೆಂದು ಹೆಸರು. ಕಂನಾಡ ಉಳಿದ ಭಾಗದಲ್ಲಿ ಬೇಡರ ಜನ ಇದೆ. ಮಹಾರಾಷ್ಟ್ರದಲ್ಲಿ ಬೇಡರ ಹೆಸರು ಬೇರಡ ಎಂದಾಗಿದೆ. ಬೇಡರ ಶಬ್ದದ ವ್ಯುತ್ಪತ್ತಿಯನ್ನು ಬೇ-ಡರ್ ಎಂದರೆ ಹೆದರಿಕೆ ಇಲ್ಲದವರು, ಅದಿರದ ಎದೆಯವರು ಎಂದು ಕೆಲರು ಹೇಳಿದ್ದಾರೆ! ಇದು ಈ ಜನಗಳ ವೀರವೃತ್ತಿಯ ಸಾಕ್ಷಿಯಾಗಿದೆ. ನಾಡಿನ ಇಳಿಗಾಲದಲ್ಲಿ ಈ ಜನಗಳ ಶೌರ್ಯ, ಧೈರ್ಯ, ಸಾಹಸಾದಿ ಗುಣಗಳಿಗೆ ಸರಿಯಾದ ಪ್ರೋತ್ಸಾಹನ ವಿಲ್ಲದ್ದರಿಂದ ಅವೆಲ್ಲ ಬೇರೆ ಹಾದಿ ಹಿಡಿದುದು ಕಂಡುಬರುತ್ತದೆ. ಹೋರಾಟದ ಹುಮ್ಮಸದ ಕೆಲಸಗಳಲ್ಲಿ ಹುಟ್ಟು ಪ್ರೀತಿಯಿದ್ದ ಈ ಜನಗಳು ಈಗ ಎಲ್ಲಿಯೊ ಕಿರುಗೆಲಸಗಳನ್ನು ಮಾಡಿ ಬಾಳಬೇಕಾಗಿದೆ. ಅಂಬಿಗರು ನದೀತೀರಗಳಲ್ಲಿ ನಾವಿಕರಾಗಿ ಜೀವಿಸುತ್ತಿದ್ದಾರೆ.

ಮುಂಬೈ ಕರಾವಳಿಯಲ್ಲಿ ಕೋಳಿಗಳೆಂಬ ಜನವಿದೆ. ಇವರು ನನ್ನ ತಿಳುವಳಿಕೆಯಂತೆ ಕೋಲ ಜನ. ಕೋಳ್ಪಡೆದು ಬಾಳುವ ಜನ. ಈ ವೃತ್ತಿಯಲ್ಲಿ ಈಗಲೂ ಹೆಸರಾಗಿದ್ದಾರೆ. ಅಂಬಿಗರಂತೆ ಮೀನ ಹಿಡಿಯುವುದು, ಹರಗೋಲು ಒಯ್ಯುವುದು ಈ ಕೆಲಸಗಳನ್ನೂ ಮಾಡುವರು. ಜಂಜೀರಾದ ಅರಸು ಕೋಳಿ ವಂಶದವನು. ಕಂನಾಡಿನೊಳಗೂ ಪ್ರಾಚೀನ ಕಾಲದ ಕೋಳೂರುಗಳ ಉಲ್ಲೇಖವು ಹಲವು ಕಡೆಗೆ ಸಿಕ್ಕುತ್ತದೆ. ಕೋಳೂರ ವಿಷಯ ಇದೆ.[೪] ಅಲ್ಲದೆ, ಕೋಳೂರ ಗ್ರಾಮ, ಕೋಳೂರ ನಾಡು, ಕೋಳರ ಪನ್ನೆರಡುಗಳ ಹೆಸರು ಮೈಸೂರು ಶಾಸನಗಳಲ್ಲಿ ಬರುತ್ತವೆ. ಉತ್ತರ ಕಂನಾಡಿನಲ್ಲಿ ಕೋಳೂರು ಕೋಳವಾಡಗಳು ಇವೆ. ಇವು ನಮ್ಮಲ್ಲಿಯೂ ಇದ್ದ ಕೋಲ ಅಥವಾ ಕೋಳರ ಕುರುಹುಗಳೆ ಆಗಿರಬಹುದೆ?

(ಕಿಳ್ಳೀ)ಕೇತರೂ, ದಾಸರೂ, ಡೊಂಬರೂ

ಕೇತರು ಅಥವಾ ಕಿಳ್ಳೀಕೇತರೆಂಬ ಒಂದು ಜನವಿದೆ. ಇವರು ಸೋಗು ಹಾಕುವುದರಲ್ಲಿ, ಬಹಳ ಪ್ರಸಿದ್ಧ. ಸೂತ್ರದ ಬೊಂಬೆಗಳನ್ನು ಕುಣಿಸುವ ಹಾಗೂ ಇರುಳಿನಲ್ಲಿ ತೆರೆಯ ಮೇಲೆ ಛಾಯಾಚಿತ್ರಗಳನ್ನು ಮೂಡಿಸಿ ಜನರಂಜನ ಮಾಡುವ ಕಲೆಯು ಇವರಿಗೆ ಸೇರಿದ್ದೆಂದು ತೋರುತ್ತದೆ. ಸೋಗುಹಾಕಿ ರೂಪ ಬದಲಾವಣೆಗಳನ್ನು ಮಾಡುವ ಇವರ ವಿದ್ಯೆಯಿಂದ ಬಹುರೂಪಿಗಳೆಂದು ಇವರಿಗೆ ಪರ್ಯಾಯ ನಾಮವಿದೆ. ಇವರ ಛಾಯಾಚಿತ್ರ, ಸೂತ್ರದ ಬೊಂಬೆಯಾಟಗಳ ವೈಶಿಷ್ಟ್ಯದ ಮೂಲಕ ಈ ಜನ ಜಾವಾ-ಸಮಾತ್ರಾಗಳತ್ತಣಿಂದ ಬಂದವರಾಗಿರ ಬೇಕೆಂದು ತೋರುತ್ತದೆ.

ದಾಸರೆಂಬ ಒಂದು ಪಂಗಡವು ಇವರಿಗೆ ಹತ್ತಿರದ್ದಿರಬಹುದು. ವೇಷಕಟ್ಟಿ ಆಡುವಲ್ಲಿ ಇವರೂ ಹೆಸರಾದವರು. ಇವರೊಡನೆಯ ಡೊಂಬರ ನೆನಪೂ ಆಗದೆ ಇರದು. ಪಂಪನು ಬಹುರೂಪಿಗಳೆಂದು ಡೊಂಬರಿಗೆ

ಹೇಳಿದ್ದಾನೆ. ಕೃಷ್ಣನಿಂದೆಯ ಕಾಲದಲ್ಲಿ ಶಿಶುಪಾಲನ ಬಾಯಲ್ಲಿ ಈ ಮಾತು ಬಂದಿದೆ. 'ಮೀನಾವೆ, ಪಂದೆ..... ಮೊದಲಾದ ವೇಷಗಳನ್ನು ಧರಿಸುವ ಡೊಂಬ ವಿದ್ಯೆಯಲ್ಲಿ ನೀನು ನಿಪುಣನು' ಎಂದು ಕೃಷ್ಣನಿಗೆ ಶಿಶುಪಾಲನು ಆಡಿದ್ದುಂಟು. ಡೊಂಬ ವಿದ್ದೆಗೆ ಡಾಂಭಿಕ ಅಥವಾ ಡಾಂಭಿಕತನವೆಂಬ ಹೆಸರು.

ನೇಕಾರ-ಜಾಡರಿಂದ ಅಂತಹ ಕ್ರಿಯೆಯನ್ನು ಮಾಡುವ ಒಂದು ಹುಳಕ್ಕೆ ಜಾಡ (ಹುಳು) ವೆಂಬ ಹೆಸರು ಬಂದಿರುವಂತೆ ಕಾಲಕಾಲಕ್ಕೆ ಬಣ್ಣಬದಲಿಸುವ ಓತಿ ಅಥವಾ ಸರಟಕ್ಕೆ ಕಾಟ, ಕಾತ, ಕ್ಯಾತ ಅಥವಾ ಕೇತವೆಂಬ ಪರ್ಯಾಯ ನಾಮವೊಂದುಂಟು. ಮಾನವನ ಉದ್ಯೋಗಾದಿಗಳ ಹೋಲಿಕೆಗಳಿಂದ ಪ್ರಾಣಿಗಳಿಗೆ ಬಂದ ಹೆಸರುಗಳು ಕೆಲವು ಉಂಟು. ಆದಕಾರಣ ಕಾತರಾಳ, ಕ್ಯಾತನ ಹಳ್ಳಿ ಮೊದಲಾದ ಊರುಗಳಲ್ಲಿ ಕಿಳ್ಳಿಕೇತರಿಂದ ಬಂದುವು ಯಾವುವು, ಓತಿಯಿಂದ ಬಂದುವು ಎಷ್ಟು ಎಂಬುದನ್ನು ನಿರ್ಧರಿಸುವ ಕೆಲಸವು ಇನ್ನೂ ಆಗಬೇಕಾಗಿದೆ. ಕಾತರು, ದಾಸರು, ಡೊಂಬರುಗಳಿಂದ ಬಂದ ಹೆಸರಿನ ಹಳ್ಳಿಗಳು ನಮ್ಮಲ್ಲಿ ಇರುವುದೇನೊ ನಿಶ್ಚಿತ. ಇವು ಕಂನಾಡ ಎಲ್ಲ ಭಾಗಗಳಲ್ಲೂ ಉಂಟು. ಡೊಂಬರಹಳ್ಳಿ; ಡೊಂಬರೂರುಗಳಂತೆ ದಾಸರಹಳ್ಳಿ, ದಾಸನೂರು, ದಾಸೇನ ಹಳ್ಳಿಗಳೆಲ್ಲ ಈ ಬಗೆಯ (ಡೊಂಬ) ದಾಸರವೇ ಎಂದು ಹೇಳುವುದು ಕಷ್ಟ. ಏಕೆಂದರೆ ದಾಸರೆಂದರೆ ಭಕ್ತರ ಕೆಲ ಹಳ್ಳಿಗಳು ಇರುವ ಸಂಭವವೂ ಇದೆ.

ಇದೆಲ್ಲವೂ ಸುಮಾರಾಗಿ ಆರ್ಯರಿಂದ ಮೊದಲು, ಇಷ್ಟೆ ಅಲ್ಲ, ಹಟ್ಟಿಕಾರರಿಂದಲೂ ಮೊದಲು ಈ ನಾಡಿನಲ್ಲಿ ಬಂದ ಜನವೆಂದು ತೋರುತ್ತದೆ. ಕೋಲ-ಮುಂಡರ ಸಂಹರಿಸಿ ಅಥವಾ ಅವರನ್ನು ತಳ್ಳಿ ತುರುಕಾರ-ಹಟ್ಟಿಕಾರರಿಗೆ ನೆಲಸಬೇಕಾದುದು ದೇವಿಯ ಪುರಾಣಗಳಿಂದ ತಿಳಿದುಬರುತ್ತದೆ. ಆದಕಾರಣ ಕೋಲ-ಮುಂಡರಿಗಿಂತಲೂ ಹಟ್ಟಿಕಾರರು ಹಿಂದುಗಡೆ ಇಲ್ಲಿ ನೆಲಸ ಬಂದವರೆಂದು ಹೇಳಬೇಕಾಗುತ್ತದೆ.

ಪಣಿಗಳೂ ಹಳಬರೂ

ಯದು-ತುರ್ವಶರಂತೆ ಋಗ್ವೇದದಲ್ಲಿ ಅಡಿಗಡಿಗೆ ಕಾಣಿಸಿಕೊಳ್ಳುವ ಜನ ಇನ್ನೊಂದಿದೆ. ಅವರು ಪಣಿಗಳು. ಪಣಿಗಳು ಸಂಪೂರ್ಣವಾಗಿ ಆರ್ಯ ವಿರೋಧಿಗಳೆಂದೇ ಆ ವರ್ಣನೆಗಳಿಂದ ಕಂಡುಬರುತ್ತದೆ. ಯದು-ತುರ್ವಶರು ಕೆಲಬಾರಿ ಆರ್ಯರ ಹಗೆಗಳಾಗಿ ಶಂಬರಾದಿಗಳೊಡನೆ ಇದ್ದ ವರ್ಣನೆಗಳು ದೊರೆಯುವಂತೆ, ಅವರು ಆರ್ಯರ ಗೆಳೆಯರಾಗಿಯೂ ಇದ್ದುದನ್ನು ಋಗ್ವೇದದಲ್ಲಿ ಕಾಣಬಹುದು. ಆದರೆ, ಪಣಿಗಳು ಮಾತ್ರ ಯಾವಾಗಲೂ ಆರ್ಯರ ತುರುಗಳನ್ನು ಓಡಿಸಿಕೊಂಡು ಹೋಗುವ ಕಾಯಕದವರಾಗಿದ್ದರು.

ಆ ಪಣಿಗಳ ನೆನೆಹು ಕೊಡುವ ಪಣಿಯಾಡಿ, ಪಣಿಯಾಲ, ಪಣಂಬೂರು ಎಂಬ ಊರುಗಳು ಕಂನಾಡಿನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿವೆಯೆಂದು ಹೇಳಿದರೆ ಹಲವರು ಸೋಜಿಗಗೊಳ್ಳಬಹುದಾಗಿದೆ! ಋಗ್ವೇದ ಕಾಲದಲ್ಲಿ ಆರ್ಯರು ಪಂಜಾಬದತ್ತ ವಾಸವಾಗಿದ್ದರು. ಅಲ್ಲಿ ಪಣಿಗಳೆಂಬ ಜನ ಅವರ ತುರುಗಳನ್ನು ದೋಚಿ ಕೊಂಡೊಯ್ಯುತ್ತಿದ್ದರೆಂದು ವರ್ಣನೆಗಳಿವೆ. ಆ ಪಂಜಾಬವೆತ್ತ? ಅಂದಿನ ಪಣಿಗಳ ಕುರುಹುದೋರುವ ಎಡೆಗಳೆಂದು ಹೇಳುವ ಇಂದಿನ ಪಣಿಯಾಲ ಮೊದಲಾದ ಊರುಗಳಿರುವ ಕಂನಾಡು ಎತ್ತ! ನಂಬುವುದಕ್ಕೂ ಅಸಾಧ್ಯವಾದ ಮಾತೆಂದು ಕೆಲರಿಗೆ ಎನಿಸಿದರೆ ತಪ್ಪಲ್ಲ.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕು; ಇದು ಪುರಾತನ ಕಂನಾಡ ತಿರುಳೆಂದು ಹೆಸರಾದ ಒಂಕುಂದದ ನಾಡು. ಇಲ್ಲಿ ಹಣಬರೆಂಬ ಜನವಿದೆ. ಹಣಬರ ಹಟ್ಟಿ ಎಂಬ ಊರು ಇದೆ. 'ಹಟ್ಟಿ' ಎನ್ನುವುದರಿಂದ ಇದು ಬಹಳ ಹಳೆಯ ಊರು ಇರುವ ಸಂಭವವಿದೆ. ಹಣಬರ ಹಟ್ಟಿ ಎಂಬುವುದರಿಂದ ಹಣಬರು ತುರುಗಳನ್ನು ಸಾಕಿಕೊಂಡಿದ್ದವರೆಂದೂ ಊಹಿಸಲು ಎಡೆಯಿದೆ. ಬೆಳಗಾವಿ ಜಿಲ್ಲೆಯಂತೆ ಕಂನಡ ಜಿಲ್ಲೆಯಲ್ಲೂ ಹಣಬರುಂಟು. ಇವರು ಕಲ್ಯಾಣದತ್ತಣಿಂದ ಬಂದರೆಂದು ಇವರಲ್ಲಿ ಒಂದು ಗ್ರಹಿಕೆಯುಂಟು. ಅಡವಿಯಲ್ಲಿದ್ದು ತುರುಕಾಯ್ದು, ಹಾಲು ಬೆಣ್ಣೆಮಾರಿ ಜೀವಿಸಬೇಕೆಂದೂ ಇದುವೆ ಇವರ ಜಾತಿಯ ಕಾಯಕವೆಂದೂ ಇದು ಈ ಜನದ ಜಾತಿಧರ್ಮದ

ಕಟ್ಟಳೆಯೆಂದೂ ನಂಬುಗೆಯಿದೆ.[೫] ಬೈಲಹೊಂಗಲ ತಾಲೂಕಿನಲ್ಲಿ ಇನ್ನೂ ಒಂದು ವಿಶೇಷವಿದೆ. ತುರುಕಾರರೆಂಬ ಜನವೂ ಅಲ್ಲಿ ವಿಶೇಷವಿದೆ. ಅಲ್ಲಿಯ ಸಮೀಪದ ದೇಸಾಯಿಗಳು ತುರುಕಾರ ಬಗೆಯವರು. ಯದು-ತುರುವರೂ ಪಣಿಗಳೂ ಪಂಜಾಬಿನಲ್ಲಿ ಋಗ್ವೇದ ಕಾಲದಲ್ಲಿ ಒಂದೆಡೆಗೆ ನೆಲೆಸಿದ್ದುದು ಋಗ್ವೇದದಲ್ಲಿ ಕಾಣುವುದು. ಬೈಲಹೊಂಗಲ ತಾಲೂಕಿನಲ್ಲಿ-ಪುರಾತನ ಒಂಕುದದ ನಾಡಿನಲ್ಲಿ ತುರುವರೂ ಹಣಬರೂ ಒಬ್ಬರೊಬ್ಬರ ನೆರೆಯಲ್ಲಿ ಬಾಳುತ್ತಿದ್ದಾರೆ. ಇಂದಿಗೂ! ಪಣೆಯಾಡಿ, ಪಣೆಯಾಲ, ಪಣಂಬೂರುಗಳಿರುವ ನಾಡಾದರೂ ಯಾರದು? ತುರು (ತುಳು) ವರದೇ: ತುಳುನಾಡು, ಕಂನಡ ಜಿಲ್ಲೆ ಎಂದರೆ ಗೋಪರ ರಾಷ್ಟ್ರ; ಗೋಪ-ರಾಷ್ಟ್ರ! ಇಂತಿದು ತರುವರ ಹಾಗೂ ಪಣಿಗಳ, ಹಣಬರ ಸಾಮೀಪ್ಯ ಸಂಬಂಧವು ವೇದಕಾಲದಲ್ಲಿ ಪಂಜಾಬಿನಲ್ಲಿ ಕಾಣಿಸಿಕೊಳ್ಳುತ್ತಿದ್ದುದನ್ನು ಕಂನಾಡಿನಲ್ಲಿ ಈಗಲೂ ಕಂಡುಕೊಂಡು ಮನಗಾಣಿಸಿಕೊಳ್ಳಬಹುದಾಗಿದೆ.

ಹಣಬರ ಹಟ್ಟಿ ಎಂಬುದು ಹಣಬರ ಊರಾಯ್ತು; ಹಣಬರೆಂಬ ಜನವಿದ್ದುದೂ ನಿಜ. ಅವರು ಅಡವಿಯಲ್ಲಿಯೆ ಇದ್ದು ಬಾಳಬೇಕೆಂಬ ಅವರ ಜಾತಿಯ ಕಟ್ಟಳೆಯೂ ಮಹತ್ವದ್ದಿರಬಹುದು. ಆದರೆ, ಪಣಿಗಳೇ ಹಣಬರೆಂದು ಬಗೆಯುವುದಕ್ಕೆ ಕೆಲರಿಗೆ ಸ್ವಲ್ಪ ಸಂಕೋಚವೆನಿಸುತ್ತಿದ್ದರೆ, ಪಣಿಗಳೆಂಬ ಹೆಸರಿನಲ್ಲಿಯೇ ನಮ್ಮ ನಾಡಿನಲ್ಲಿ ಕೆಲವು ಜನರುಂಟೆಂದು ಹೇಳಿದ ಮೇಲಾದರೂ ಇದರಲ್ಲಿ ನಂಬುಗೆದೋರಬಹುದೆ? ಕೊಡಗಿನ ಕಾಡಿನಲ್ಲಿ ಪಣಿಗಳೆಂಬ ಹೆಸರಿನ ಜನಗಳುಂಟು. Wild Tribes ಕಾಡಿನಲ್ಲಿರುವ ಜನಗಳೊಡನೆ ಕೊಡಗಿನ ಗ್ಯಾಝಿಟಿಯರಿನಲ್ಲಿ ಅವರನ್ನು ಕುರಿತು ನಾಲ್ಕು ಮಾತುಗಳು ಬಂದಿವೆ.

> They are distinguished as Mailas and Achalas. They are labourers along the Ghats from Tulu country. They have Hindu features, are of middle stature, and have black strait hair, which is wavy with women. Some dress like Coorgs, and some in the low country fashion. They have no idols but like the Tulus call upon their gods Guliga, Khorti and Kalurti when eating. Their diet is like coorgs, the Achala Paleyas personate demoniacs in honour of their Bhutas or demons. (p. 215)

ಈ ಪಣಿಗಳು ತಳುವರ ನಾಡಿಗೆ ಸಂಬಂಧವಿದ್ದವರೆಂದೂ ತುಳುವರಂತೆ ಕೆಲಕೆಲವು ನಡೆವಳಿಗಳಿದ್ದವರೆಂದೂ ಮೇಲಿನ ವರ್ಣನೆಯಿಂದ ಕಂಡುಬಾರದೆ ಇರದು. ಇದು ಮಹತ್ವದ ಸಂಗತಿಯಾಗಿದ್ದು ಅನಾದಿಕಾಲದಿಂದ ಇರುವ ತುರುವರ ಹಾಗೂ ಪಣಿಗಳ ಸಂಬಂಧದ ಸೂಚಕವಾಗಿದೆಯೆಂದು ಹೇಳಬೇಕಾಗುತ್ತದೆ.

ಇನ್ನು ಕಂನಾಡಿನಲ್ಲಿ ಇರುವ ಈ ಪಣಿಗಳು ವೇದಕಾಲದ ಆ ಪಣಿಗಳ ತಳಿಯೆಂದು ನಿರ್ಧರಿಸಲು ಕೊಡಗಿನ ಗ್ಯಾಝಿಟಿಯರು ತುಂಬ ಸಹಾಯಕವಾಗಿದೆ. ವೇದಶಾಸ್ತ್ರಜ್ಞರೂ ವೇದಕ್ಕೆ ಟೀಕೆ ಟಿಪ್ಪಣಿಗಳನ್ನು ಬರೆದವರೂ 'ಪಣಿ' ಶಬ್ದಾರ್ಥವನ್ನು ಹೇಳಲು ಇನ್ನೂ ಯಾರೂ ಸಮರ್ಥರಾಗಿಲ್ಲ. ಯದು-ತುರ್ವಸು, ಅಜಾಃ, ಶಿಗ್ರುಃ ಮೊದಲಾದವುಗಳಂತೆ 'ಪಣಿ' ಎಂಬುದೂ ಸಾರ್ಥಪದವಾಗಿರಬೇಕೆಂದು ನನ್ನ ನಂಬುಗೆ. ಆದರೆ, ಅದಕ್ಕೆ ಅರ್ಥವಾಗದೆ ಹಾಗೆಯೆ ಉಳಿದಿತ್ತು. ಪಣಿಗಳು ಇಂದಿನ ಬಣಂಜುಗಳ ಮೊದಲಿಗರಾಗಿರಬಹುದೆ? ಎಂಬ ಒಂದು ವಿಚಾರವು ಬಂದುಹೋಯ್ತು. ಆದರೆ, ಕೊಡಗಿನ ಗ್ಯಾಝಿಟಿಯರಿನಲ್ಲಿ ಪಣಿಗಳಿಗೆ ಇರುವ ಇನ್ನೂ ಒಂದು ಪರ್ಯಾಯ ನಾಮವನ್ನೂ, ಅವರ ಹೆಸರಿನ ಮುಂದೆಯೆ ಕಾಣಿಸಲಾಗಿದೆ. ಪಣಿಗಳು ಅಥವಾ ಪಳೆಯರೆಂದು ಅವರಿಗೆ ಹೆಸರಿದ್ದುದು ಆ ಗ್ಯಾಝಿಟಿಯರಿನಲ್ಲಿ ಕಾಣಿಸಿದೆ. ನಿಜವಾಗಿಯೂ ಇದು ಅತ್ಯಂತ ಮಹತ್ವದ ಉಲ್ಲೇಖವಾಗಿದೆ. ಪಳೆಯವೆಂಬುದು ವೇದಕಾಲದ ಜನಾಂಗದ ವಿಚಾರವಾಗಿ ತುಂಬ ಬೆಳಕನ್ನೀವ ಅಮೌಲಿಕವಾದ ಪರ್ಯಾಯಪದವಾಗಿದೆ.

ಪಣೆಗಳು ಎಂದರೆ ಪಳೆಯರು; ಪಳೆಯರು ಎಂದರೇನು? ಪಳೆಯರು ಎಂದರೆ ಹಳೆಯರು, ಪುರಾತನರು ಆರ್ಯರಿಗಿಂತಲೂ ಮುಂಚಿನ ಜನವಿದು ಎಂದರ್ಥ! ಪೌರ್ವಾತ್ಯ, ಪಾಶ್ಚಿಮಾತ್ಯ ಸಂಶೋಧಕರು ಆಜನ್ಮ ಕಷ್ಟಪಟ್ಟು ಕಂಡುಹಿಡಿದ ಸಿದ್ಧಾಂತವನ್ನು ಅವರು ಕಂನಾಡಿನ ಪೂರ್ವಪರಂಪರೆ ಹಾಗೂ ಕಂನುಡಿಯ ತಿರುಳು ತಿಳಿದುಕೊಳ್ಳಲು ಪ್ರಯತ್ನಿಸಿದ್ದರೆ ಸ್ವಲ್ಪ ಶ್ರಮದಲ್ಲಿಯೆ ಅವರಿಗೆ ಇನ್ನೂ ಒಂದು ಬಗೆಯಿಂದ ಆ ಸಿದ್ಧಾಂತಕ್ಕೆ ಪುಷ್ಟಿಯು ಇಲ್ಲಿ ದೊರೆಯುತ್ತಲಿದ್ದಿತು. ಕಂನಾಡಿನ ಪರಂಪರೆ ಮತ್ತು ಇತಿಹಾಸದ ಹಾಗೂ ಕಂನುಡಿಯ ತಿರುಳಿನ ಸಶಾಸ್ತ್ರೀಯವಾದ ಅಭ್ಯಾಸವು ನಡೆಯದೆ ಇದ್ದುದರಿಂದ-ಸಂಶೋಧಕರು ಈ ಕಂನಾಡನು ಈ ವರೆಗೆ ಎಣಿಕೆಗೆ ಹಿಡಿಯದೆ, ಬರಿ 'ದ್ರಾವಿಡ'ವೆಂದು ದ್ರಾವಿಡೀ ಪ್ರಾಣಾಯಾಮವನ್ನು ನಡೆಸಿದ್ದರಿಂದ, ಭಾರತದ ಸಾಂಸ್ಕೃತಿಕ ಇತಿಹಾಸದೊಳಗಿನ ಒಂದು ಮಹತ್ವದ ಅಧ್ಯಾಯವು ಈವರೆಗೆ ಕಗ್ಗತ್ತಲೆಯಲ್ಲಿಯೆ ಉಳಿದಿತು; ಕೆಲವೊಂದು ಬೆಳಕಿಗೆ ಲೋಕವು ಎರವಾಯ್ತು.

ಬೈಲಹೊಂಗಲ ತಾಲ್ಲೂಕಿನ ಹಳೆಯರೂ ಬಹಳ ಪ್ರಸಿದ್ಧರು. ಹಣಬರಂತೆ ಹಳಬರೆಂಬ ಜನವೂ ಅಲ್ಲಿದೆ. ೧೮೫೭ರ ಸ್ವಾತಂತ್ರ್ಯ ಯುದ್ಧದಲ್ಲಿ ಕಂನಾಡಿನ ಕ್ರಾಂತಿವೀರನೆಂದು ಖ್ಯಾತಿವೆತ್ತ ಸಂಗೊಳ್ಳಿ ರಾಯಣ್ಣನು ಬೈಲಹೊಂಗಲ ತಾಲೂಕಿನವನು, ಎಂದರೆ ಒಂಕುಂದ ನಾಡಿನವನು.

ಹಳಿಯ, ಹಳಬನೆಂಬ ಹೆಸರು ಅರ್ಥಪೂರ್ಣವಾಗಿದೆ. ಳಕಾರವು ಣಕಾರವಾಗುವ ವಾಡಿಕೆಯಿದೆ. ಹುಳಿ-ಹುಣೆ(ಸೆ); ನೊಳ-ನೊಣ; ಕುಳಿ-ಕುಣಿ; ಹಾಗೆ ಪಳಿ-ಪಣೆ ಎಂದಾಗಿರುವುದು ಸಹಜವಾಗಿದೆ. ಹಳಿಯ ಅಥವಾ ಪಳಿಯರು ಕೊಡಗಿನಲ್ಲಿದ್ದುದು ಅಲ್ಲಿಯ ಗ್ಯಾಝಿಟಿಯರಿನ ಮೇಲಿಂದ ಗೊತ್ತಾಗುತ್ತದೆ. ಕ್ರಿ. ಶ. ೧೮೭೮ ರಲ್ಲಿ ಪ್ರಕಟವಾದ ಆವೃತ್ತಿಯಲ್ಲಿ ಆಗ ಪಳಿಯರು ೩೧೮ ಗಂಡಸರೂ, ೩೧೪ ಹೆಂಗಸರೂ ಇದ್ದುದಾಗಿ ಕಾಣಿಸಿದೆ.

ಮೈಸೂರ ಸೀಮೆಯಲ್ಲಿ ಹಳಿಕಾರರೆಂದು ಈ ಜನಗಳಿಗೆ ಹೆಸರಿದ್ದುದು ಶಾಸನಗಳಿಂದ ತಿಳಿಯುತ್ತದೆ. 'ಸೀರೆ ನಾಡ ಹಳಿಕಾರ ನಾಯಕರು ಒಂದು ತುರುವಂ ಪರಿಯಿಸಲು......ಕಾದು, ಮುಗುಳ್ಚಿ ಸುರಲೋಕ ಪ್ರಾಪ್ತನಾದ'ವನ ಕುರಿತು ಹೊಯ್ಸಳ ವಿಷ್ಣುವರ್ಧನನ ಕಾಲದ ಕ್ರಿ. ಶ. ೧೧೧೪ರ ಸುಮಾರಿನದು, ಇದರಂತೆ 'ಬಯಲ ಹುಲಿ ಹಳಿಕಾರ ಲಕ್ಕಣ್ಣನಾಯಕರ ಮಕ್ಕಳು ಚಿಕ್ಕ ಅಲ್ಲಪನಾಯಕರು, ವೈಷ್ಣವರಾದ ಕೋನೇರಿ ಅಯ್ಯನವರಿಗೆ ಕೊಟ್ಟ ದತ್ತಿಯ' ಶಾಸನವಿದೆ. ಇದು ಕ್ರಿ. ಶ. ೧೪೭೧ರ ಸುಮಾರಿನದು. ಇದೇ ಮೇರೆಗೆ ವಿಜಯನಗರದ ಸಾಳ್ವ ನರಸಿಂಹನ ಕಾಲದ ಒಂದು ಶಾಸನದಲ್ಲಿ 'ಹಳಿಕಾರ ಲಚ್ಚಿನಾಯ್ಕರ ಮಕ್ಕಳು ಚಿಕ್ಕ ಅಲ್ಲಪ್ಪನಾಯ್ಕರು' ಕೊಟ್ಟ ದಾನದ ಉಲ್ಲೇಖವಿದೆ. ಈ ಹಳಿಕಾರರ ಹೆಸರಿನ ಮುಂದೆ 'ನಾಯಕರು' ಎಂದು ಇರುವ ಪದವಿಯು ಅವರ ಬಲ್ಲಾಳ್ತನದ ಸೂಚಕವಾಗಿದೆ. ಹಳಬರೂ ಹಳಕಾರರೂ ಗಂಡುಗಲಿಗಳೆಂದು ಎಂದಿನಿಂದಲೂ ಹೆಸರು ಪಡೆದವರು. ಕಂನಾಡ ಪಡೆಯಾಳುಗಳು ಇವರೇ.

ಕೊಡಗಿನಲ್ಲಿ ಪಳೆಯ (ಹಳೆಯ); ಮೈಸೂರಿನಲ್ಲಿ ಹಳಿಕಾರ ಎಂಬಂತೆ ಉತ್ತರ ಕಂನಾಡಿನಲ್ಲಿ ಹಳಬರೆಂಬ ಹೆಸರು ವಾಡಿಕೆಯಾಗಿದೆ. ಉತ್ತರ ಕಂನಡ ಜಿಲ್ಹೆಯಲ್ಲಿ ಹಳಪೈಕರೆಂಬ ಹೆಸರಿನ ಜನಗಳೂ ಈ ಹಳಕಾರ ಬಗೆಯವರೆಂದೇ ನನ್ನ ನಂಬುಗೆ. ಹಳಪೈಕರೂ 'ತುರುವಂ ಕೊಂಡೊಯ್ವ ಕಾಯಕ'ದಲ್ಲಿ ನಿಪುಣರೆಂದು ಹೆಸರಾಗಿದ್ದಾರೆ. ಇವರೂ ಒಳ್ಳೆಯ ದಂಡಾಳುಗಳೆಂದು ಪ್ರಶಂಸೆ ಹೊಂದಿದ್ದಾರೆ. ಋಗ್ವೇದ ಕಾಲದ ನಂತರ ಪಣಿಗಳ ಹೆಸರು ಕಾಣೆಯಾಗುತ್ತದೆ. ಇದಕ್ಕೆ ಏನು ಕಾರಣವೊ ತಿಳಿಯದು. ಹಿಂದೂದೇಶದ ಬೇರೆ ಯಾವ ಭಾಗದಲ್ಲೂ ಪಣೆಗಳೆಂಬ ಹೆಸರಿನ ಜನವಿದ್ದುದು ನನ್ನ ಓದಿನಲ್ಲಿ ಬಂದಿಲ್ಲ. ಪಣೆಗಳ ಕುರುಹುದೋರುವ ಪಣೆಯಾಲದಂತಹ ಹೆಸರಿನ ಎಡೆಗಳು ಇದ್ದುದೂ ಗೊತ್ತಾಗುವುದಿಲ್ಲ. ಇನ್ನೂ ಹೆಚ್ಚಿನ ಓದು ಅಭ್ಯಾಸ ವಿದ್ದವರು ಇದು ಕಂನಾಡ ಪಡೆಮಾತೊ ಎಂಬುದನ್ನು ನಿರ್ಧರಿಸಿ ಹೇಳಬೇಕಾಗಿ ಬಿನ್ನಹ. ಈಗ ನನ್ನ ಮಟ್ಟಿಗಂತೂ ಹಾಗೆ ತೋರುತ್ತಲಿದೆ.

ಹಳಬ ಅಥವಾ ಹಳಿಕಾರ ಇಲ್ಲವೆ ಹಳಿಯವೆಂಬ ಹೆಸರಂತೂ ಕಂನಾಡ ವೈಶಿಷ್ಟ್ಯವೆಂದೇ ಹೇಳಲು ಅಡ್ಡಿಯಿಲ್ಲ. ಈ ಹೆಸರಿನ ಜನ ನಮ್ಮ ನಾಡಿನಲ್ಲಿ ಹಳ್ಳಿಹಳ್ಳಿಗೂ ಇದ್ದಾರೆ. ಗ್ರಾಮ ಸಂರಕ್ಷಕ ಬಲವು ಎಂದಿನಿಂದಲೂ ಇವರದೇ. ಬಸ್ತರಾ ಮತ್ತು ಕನ್‌ಕೇರ ಎಂಬುವು ಮಧ್ಯಪ್ರಾಂತದಲ್ಲಿರುವ ಎರಡು ಸಂಸ್ಥಾನಗಳು. ಇವುಗಳಲ್ಲಿ 'ಹಳಬೀ' ಜನಗಳು ಪ್ರಾಮುಖ್ಯರಾಗಿದರೆಂದು ಅಲ್ಲಿಯ ಗ್ಯಾಝಿಟಿಯರು ಮತ್ತು ಜಾತಿ ಜನಾಂಗದ ವಿವರಣೆಯ ಪುಸ್ತಕಗಳಲ್ಲಿ ಹೇಳಿದ್ದಾಗಿದೆ. ಮಧ್ಯಪ್ರಾಂತದಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚುಜನ ಹಳಬರಿದ್ದಾರಂತೆ! ಆದರೆ, ಈ 'ಹಳಬ' ಶಬ್ದದ ಅರ್ಥವೇ ತಿಳಿಯದೆ ಹೋದುದರಿಂದ ಅವರ ವಿಚಾರವಾಗಿ ಹೆಚ್ಚಿಗೆ ಏನನ್ನೂ ಹೇಳುವುದಕ್ಕೆ ಆ ಲೇಖಕರಿಗೆ ಸಾಧ್ಯವಾಗಿಲ್ಲ. 'ಹಳಬ' ಶಬ್ದವೇ ತನ್ನ ಕತೆ ಹೇಳಲು ಸಿದ್ಧವಿದ್ದರೂ ಕಂನುಡಿಯ ನೆರವಿಲ್ಲದೆ ಅದು ಅವರಿಗೆ ತಿಳಿವ ಬಗೆ ಹೇಗೆ? ಹಳಬರೆಂಬ ಹೆಸರು ಕಾಲಸೂಚಕವಾಗಿದೆಯೇ ಹೊರತು, ಅದರಿಂದ ಜಾತಿಯು ತಿಳಿಯುವುದಿಲ್ಲ. ನಮ್ಮ ಭಾಗದ ಹಳಬರ ಕುಳಗಳನ್ನು ವಿಚಾರಿಸಿದಲ್ಲಿ ಅವರು ಕುರುಬ ಬಗೆಯವರಂದು ಕಂಡುಬಂದಿದೆ. ಈ ಕಾರಣದಿಂದ ಹಳಬರು ಕುರುವರ ಒಂದು ಪಂಗಡ. ಕುರುವರೆಂದರೆ ಇವರೂ ದನಗಾರರೇ. ಮಹಾರಾಷ್ಟ್ರದಲ್ಲಿ ದನಗಾರರಿಗೇ ಧನಗರ (ಕುರುಬ)ರೆಂದು ಹೆಸರಿದೆ.

ಮಹಾಭಾರತದ ಅಂಧಕ-ವೃಷ್ಣಿಗಳು ದನಗಾರರು.ಇವರು ಕುರುವಂಶಕ್ಕೆ ಸಂಬಂಧಿಸಿದವರೆಂಬ ಮಾತನ್ನು ನೆನೆಪಿಗೆ ತಂದುಕೊಂಡಲ್ಲಿ ಇವರೆಲ್ಲ 'ಕುರವಃ' ಎಂದರೇನು ಎಂಬುದು ಸ್ಪಷ್ಟವಾಗುತ್ತದೆ. ಸಂಸ್ಕೃತಭಾಷೆಯಿಂದ 'ಕುರುವಃ' ಇದರ ಗುಟ್ಟು ತಿಳಿಯುವುದಿಲ್ಲ. 'ಕುರುವಃ' ಎಂದರೆ ಇವರೆಲ್ಲ ಕುರುವರು-ಕುರಿಗಾರರೆಂದು ಅರ್ಥ. ಶಾತವಾಹನರು, ವಿಜಯನಗರದ ರಾಜರು ಮೊದಲಾದವರೆಲ್ಲ ಕುರುಂಬರಾಯರೆಂದೂ, ತಮ್ಮ ವಂಶಕ್ಕೆ ಸಂಬಂಧಪಟ್ಟವರೆಂದೂ ನಮ್ಮ ನಾಡಿನ ಕುರುಬರ ಜನಾಂಗದಲ್ಲಿ ತಲೆತಲಾಂತರಗಳಿಂದಲೂ ದೃಢವಾದ ನಂಬುಗೆಯಿದೆ. ಕೆಳದಿ ನೃಪವಿಜಯದಲ್ಲಿ ಹರಿಹರ-ಬುಕ್ಕರು ಕುರುಬರೆಂದು ಹೇಳಿದೆ. ವಿದ್ಯಾರಣ್ಯರ ಕಾಲಜ್ಞಾನದಲ್ಲಿ 'ಕುರುವಂಶ ಪ್ರಸೂತಿಜೌ' ಎಂದು ವರ್ಣಿಸಿದೆ. ಮೇಲಣ ಸಂಗತಿಗಳನ್ನು ಸರಿಹೊಂದಿಸಿ ನೋಡಿದಲ್ಲಿ ಕುರುಬರಲ್ಲಿರುವ ಪರಂಪರಾಗತವಾದ ಆ ನಂಬುಗೆಯು ಅರ್ಥವಿಹೀನವೆಂದು ಹೇಳುವುದಕ್ಕಾಗುವುದಿಲ್ಲ. ಯದು-ತುರ್ವರ ಸಂತತಿ, ಕುರುವಂಶ ಎಂಬೀ ಬಗೆಯ ಪ್ರೌಢಗಂಭೀರ ಪದಗಳ ಅರ್ಥವು ಕುರಿಗಾರ ಹಟ್ಟಿಕಾರ ಅಥವಾ ದನಗಾರರ ವಂಶದ, ಗೋಪರ ಕುಲವೆಂದಲ್ಲದೆ ಬೇರೆ ಆಗದು.

ಹಳಬರು, ಕುರುವರ ಅಥವಾ ಹಟ್ಟಿಕಾರರ ಹತ್ತುಗಡೆಯವರೆಂಬುದನ್ನು ತಿಳಿದುಕೊಂಡರೆ ವೇದಕಾಲದ ಮುಂದೆ ಈ ಜನಗಳು ಒಮ್ಮೆಲೆ ಮಾಯವಾದಂತೆ ಮುಂದಿನ ಸಾಹಿತ್ಯದಲ್ಲಿ ಎಲ್ಲಿಯೂ ಉಲ್ಲೇಖಗಳು ಬಾರದುದರ ಕಾರಣವು ಲಕ್ಷದಲ್ಲಿ ಬರುವುದು. ಕುರುಗಳು, ಯದು-ತುರ್ವರು ಅಂಧಕ-ವೃಷ್ಣಿಗಳೆಂಬ ಗುಂಪುಗಳಲ್ಲಿ ಹಳಬರು ಎಂದರೆ ಪಣಿಗಳೂ ಒಳಗೊಂಡಿರುವುದು ಶಕ್ಯವಿದೆ. ಹಳಬರೂ, ಹಣಬರೂ, ತುರುಕಾರರೂ ಬೆಳಗಾವಿ ಜಿಲ್ಹೆಯಲ್ಲಿ ಸಮೀಪ ಸಮೀಪದಲ್ಲಿದ್ದುದನ್ನು ಈ ಮೊದಲು ಸೂಚಿಸಿದೆ. ತುಳುನಾಡು-ಕಂನಡ ಜಿಲ್ಹೆಯಲ್ಲಿ ಎಂದರೆ ಗೋಪರಾಷ್ಟ್ರದಲ್ಲಿ ಪಣಿಗಳ ಹೆಸರಿನ ಎಡೆಗಳು ಉಳಿದಿರುವುದೂ ಪಣಿಗಳೆಂಬ ಹೆಸರಿನಲ್ಲಿಯೇ. ಈಗಲೂ ಸ್ವಲ್ಪವಾದರೂ ಜನ ದೊರೆಯುತ್ತಿರುವುದೂ ಅಲ್ಲಿಯೆ ಇನ್ನೊಂದೆಡೆಗೆ ಹಳಪೈಕರು ನೆಲೆಯಾಗಿರುವುದೂ ಕೇವಲ ಕಾಕತಾಳ ನ್ಯಾಯವೆನ್ನಬಹುದೆ?

ಮಧ್ಯಪ್ರಾಂತದಲ್ಲಿ ಹಳಬರ ಸಂಸ್ಥಾನಗಳು ಬಸ್ತರಾ ಮತ್ತು ಕನ್‌ಕೇರಗಳೆಂಬುವು ಉಂಟೆಂದು ಹೇಳಿತಷ್ಟೆ. ಅಲ್ಲಿಯ ಅವರ ಭಾಷೆಯ ಪಾಡನ್ನು ಕುರಿತು ಡಾ. ಗ್ರಿಯರಸನ್‌ರು ಬರೆಯುವುದೇನೆಂದರೆ :

> It (Halbi) was nobody's child for a long time..... it is a corrupt mixture of several languages; both Aryan and Dravidian.[೬]

ಹಳಬರ ಮೂಲಭಾಷೆ ಆರ್ಯವರ್ಗದ್ದಲ್ಲವಾದುದರಿಂದ ಅವರಿಗೆ ಪರಿಸ್ಥಿತಿಯ ಪ್ರವಾಹದಲ್ಲಿ ಯಾವ ಯಾವ ಜನಗಳೊಡನೆ ಕೂಡಬೇಕಾಯಿತೊ ಬೆರೆಯಬೇಕಾಯಿತೊ ಆ ಎಲ್ಲ ಭಾಷೆಗಳ ಮಿಶ್ರಣವೂ ಅವರ ನುಡಿಯಲ್ಲಿ ಆಗಿದ್ದರೆ ಸೋಜಿಗವೇನು? ಹಳಬವೆಂಬ ಹೆಸರು ಇವರು ತೆಲುಗು ಅಥವಾ ತಮಿಳ ನಾಡವರಲ್ಲವೆಂದು ನಿಶ್ಚಿತವಾಗಿ ಹೇಳುತ್ತದೆ. ಮಧ್ಯಪ್ರಾಂತದಲ್ಲಿ ಹಳಬರು ಹೇಗೆ? ಎಂಬ ಪ್ರಶ್ನೆ ದಿಗಿಲುಗೊಳಿಸುತ್ತದೆ. ಆದರೆ, ಅಲ್ಲಿಯ ಜಾತಿಜನಾಂಗದ ಸೂಕ್ಷ್ಮವಾದ ವಿಮರ್ಶೆಯಲ್ಲಿ ಆ ಭಾಗದಲ್ಲಿ ಹಳಬರು ಮಾತ್ರವಲ್ಲ, ಇವರೊಡನೆ, ಕುರುಬರೂ ಉಂಟೆಂಬುದು ನಿದರ್ಶನಕ್ಕೆ ಬರುತ್ತದೆ. ಮಧ್ಯಪ್ರಾಂತದ ಹಳ್ಳಿಯ ಆಳುಗಳನ್ನು (Village menials) ಹೇಳುವಾಗ ರಸೆಲ್ಲರು ವಿವರಿಸಿದ ಕೆಲವು ಜಾತಿಗಳು ಹೀಗಿವೆ:

> Halba-House-servant and farm servant; Kurumwars and Dhangars[2]
> Halbi-Synonym of Halba p. 366
> Kotwals-A sect of Halba (keeper of a castle or a village watchman) p. 379 oldest recident in the country; p. 380

ಮಹಾರಾಷ್ಟ್ರ ಶಬ್ದಕೋಶದಲ್ಲಿ ಗ್ರಾಮಸೇವಕರಾದ 'ಬಾರಾ ಬಲೂತೇದಾರ' ರನ್ನು ಕುರಿತು ಕೆಲವು ವಿವರಣೆ ದೊರೆಯುತ್ತದೆ. ಅದರಲ್ಲಿ 'ಕೊರಬು' ಎಂಬವರುಂಟಂತೆ. ಇವರೂ ಹಳ್ಳಿಯ ಆಳುಗಳು.

ಕೊರಬು : ಊರಗೊಳಗಿನ ಒಬ್ಬ 'ಬಲೂತೇದಾರ': ಇವನು ಧನಗರ ಜಾತಿಯವನು. ಕೊರಬುನ ಕೆಲಸುಗಳು ಹಲವು ಬಗೆಯವಿವೆ. ಅವುಗಳಲ್ಲಿ ಗ್ರಾಮಕ್ಕೆ ಬಂದ-ಪ್ರವಾಸಿ (ಅಧಿಕಾರಿ)ಗಳ ಸೇವೆಗೆಯ್ಯುವುದು. ಅವರ ಗಂಟುಮೂಟೆ ಹೊರುವುದು. ರೈತರಿಂದ ಹೊಲದ ತೆರಿಗೆ ವಸೂಲು ಮಾಡುವುದು ಮುಂ. ಇದು ದ್ರಾವಿಡ ಕುರಬ, 'ಕುಥುಂಬ' ದಿಂದ ನಿಷ್ಪನ್ನವಾದ ಶಬ್ದ. 'ಕೊರಬು' ಇದರಿಂದ ಕುರುಬಗಿರಿ ಎಂಬುದು ಸಾಧಿತರೂಪ, ಕುರುಬಗಿರಿಯೆಂದರೆ ಕೊರಬೂನ ಕೆಲಸ ಮತ್ತು ಅಧಿಕಾರ.

ಮಹಾರಾಷ್ಟ್ರದ ಹಳ್ಳಿಪಳ್ಳಿಗಳಲ್ಲಿ ರೂಢವಾಗಿರುವ ಗ್ರಾಮಪದ್ಧತಿಯನ್ನು ಮಹಾರಾಷ್ಟ್ರ ಶಬ್ದಕೋಶದಲ್ಲಿ ಕೊಟ್ಟಿದೆ. ಹಳ್ಳಿಯ ಆಯಗಾರರಲ್ಲಿ ಕೊರಬು ಇವನೂ ಒಬ್ಬನು. ಈ ಕೊರಬು ಅಥವಾ ಕುರುಬನ ಕೆಲಸವನ್ನು ಗಮನಿಸಿದರೆ ಹಳಬನೆಂಬ ಹೆಸರಿನವನು ನಮ್ಮ ಭಾಗದಲ್ಲಿ ಮಾಡುವ ಕೆಲಸಗಳು ಇವುಗಳಿಂದ ಭಿನ್ನವಿಲ್ಲ. ನಮ್ಮಲ್ಲಿ ಹಳಬರು ಕುರುವರಾಗಿರುವಂತೆ ಮಹಾರಾಷ್ಟ್ರದಲ್ಲಿ ಕೊರಬುಗಳು ಹಳಬರಾಗಿದ್ದಾರೆ.

ಇವೆಲ್ಲ ಸಂಗತಿಗಳಿಂದ ಮಧ್ಯಪ್ರಾಂತದಲ್ಲಿ ಹಳಬರೊಡನೆ ಕುರುವರೂ ಉಂಟೆಂಬುದು ಗೊತ್ತಾಗದೆ ಇರದು. ಅಲ್ಲದೆ, ಹಟ್ಟಿಕಾರರ ಬೀಡು ವರ್ಹಾಟ ಮಧ್ಯಪ್ರಾಂತ. ಮಧ್ಯಪ್ರಾಂತದ Tribes and Castes ಮೊದಲ ಸಂಪುಟ ಪುಟ. ೬೭ರಲ್ಲಿ ರಸೆಲ್ಲನು ಹಟಗಾರರನ್ನು ಕುರಿತು ಹೇಳಿದ್ದಾನೆ. ನಿಜಾಂ ರಾಜ್ಯದ ವರ್ಹಾಟದ ಕಡೆಯ ಭಾಗದಲ್ಲೂ ಈ ಜನಗಳಿದ್ದುದನ್ನು ಆ ಸಂಸ್ಥಾನದ ಜಾತಿಗಳ ವಿವರಣೆಯ ಪುಸ್ತಕದಲ್ಲಿ ಬಂದಿದೆ.

> Hatkar, Bargi-Dhangar a cultivating caste, they are immigrants and settled in the country in very early times.[೮]

ಇನ್ನೊಂದೆಡೆಗೆ ಇವರನ್ನು ಕುರಿತು ಹೀಗೆ ಬರೆದಿದೆ : Hatkars are all Bargi Dhangars or shepherds with spears ಹಿಂಗೋಲಿ, ವರ್ಹಾಟಗಳ ನಾಯಕರೆಲ್ಲ ಹಟ್ಟಿಕಾರರೇ ಇರುವರಂತೆ. ಇವರೆಲ್ಲ ಮೀಸೆಪ್ರಿಯರಂತೆ. ಪೈನಗಂಗೆಯ ಉತ್ತರಕ್ಕೂ ಇವರು ಉಂಟು.

In occupation the Halkars are cultivators and hold land tenures of different grades. They are Patels of villages, Deshmukhas, occupancy and non-occupancy rayats and landless day labourers. The men do not wear the sacred thread.

ಈ ಕಾರಣದಿಂದ ಮಧ್ಯಪ್ರಾಂತದಲ್ಲಿ ಲಕ್ಷಾವಧಿ ಹಳಬರಿದ್ದುದೂ, ಬಸ್ತರಾ ಕನ್‌ಕೇರ ಸಂಸ್ಥಾನಗಳಿದ್ದುದೂ ಸೋಜಿಗದ ಮಾತಲ್ಲ. ಹಟ್ಟಿಕಾರ-ದನಗಾರರೊಡನೆ ಹಳಬರೂ ಎಲ್ಲೆಡೆಗೆ ಇರುವುದನ್ನು ಈ ಮೇಲಣಾ ವಿವರಣೆಯಿಂದ ಮನಗಾಣಬಹುದಾಗಿದೆ.

ಆದುದರಿಂದ, ವೇದದ ಯದು-ತುರ್ವರು ಮತ್ತು ಪತ್ತಿಗಳೊಡನೆ ಪಣಿಗಳೂ ಇದ್ದುದರ ರಹಸ್ಯವು ಇಲ್ಲಿ ಸ್ಪಷ್ಟವಾಗುವುದು. ಕಂನಾಡ ಹಳೆಯ ಜನಗಳ ಅಭ್ಯಾಸದಿಂದ ಈ ಮಾತು ವಿಶದವಾಗುವುದು.

ಟಕ್ಕರು, ತಸ್ಕರರು? ತಕ್ಷಕರು?

ಟಾಕಳಿ (ಬೆಳಗಾವ ಜಿಲ್ಹೆ), ಟಕ್ಕಳಕಿಯಂತೂ ಹಲವು ಕಡೆಗೆ ಇದೆ. 'ಟಕ್ಕ' ಎಂಬ ಒಂದು ಪ್ರಾಚೀನ ಜನದ ಹೆಸರಿಗೆ ಈ ಊರ ಸಂಬಂಧವೇನಾದರೂ ಇರಬಹುದೊ ತಿಳಿಯದು. ಟಕ್ಕರು ಪಂಜಾಬದತ್ತಣಿನ ಜನ. ಈ ಹೆಸರಿನವರು ಅಲ್ಲಿ ಉಂಟಂತೆ. ರುದ್ರಾಧ್ಯಾಯದ 'ನಮೋ ನಿಷಂಗಿಣ ಇಷುಧಿಮತೇ ತಸ್ಕರಾಣಾಂ ಪತಯೇ ನಮಃ' ಎಂಬ ಮಂತ್ರದಲ್ಲಿ ಕೇಳಬರುವ 'ತಸ್ಕರ'ವೆಂಬ ಜನವೆ ಈ 'ಟಕ್ಕರ'ರಾಗಿರಬಹುದೆ? ಠಾಕರ, ಠಕ್ಕರ, ಥಕ್ಕರ ಎಂಬ ಅಡ್ಡಹೆಸರಿನಲ್ಲಿ ಆ ಪುರಾತನ ಜನದ ಹೆಸರಿನ ಹೋಲಿಕೆಯೇನೊ ಉಂಟು. ಇದನ್ನು ಕುರಿತು ಹೆಚ್ಚಿನ ವಿಮರ್ಶೆಯಾಗಬೇಕಾದುದು ಅವಶ್ಯ. ತಕ್ಷಕ ಶಬ್ದವೂ ಟಕ್ಕವೆಂಬ ರೂಪತಾಳ ಬಹುದಾಗಿದೆ. ತಕ್ಷಶಿಲಾ ಮೊದಲಾದುವು ತಕ್ಷಕರೆಂಬ ನಾಗರ ಅವಶೇಷಗಳಂತೆ. ಆ ಕುಲದವರು ಕಂನಾಡಿಗೆ ಬಂದಿದ್ದರೆ ಟಾಕಳಿ, ಟಕ್ಕಳಿಕೆಗಳು ಅವರ ಕುರುಹುಗಳಾಗಿರುವ ಸಂಭವವೂ ಉಂಟು.

ಈ ವರೆಗೆ ವಿವರಿಸಿದ ಜನಗಳೆಲ್ಲ ಅತಿಪುರಾತನ ಕಾಲದವರು; ವೇದಕಾಲದಷ್ಟು ಪ್ರಾಚೀನರು; ಅದಕ್ಕೂ ಹಿಂದಿನವರೆಂದೂ ಹೇಳಬಹುದಾದವರು. ಆ ಪಣಿಗಳಂತೂ ಹಟ್ಟಿಕಾರರ ಒಡನಾಡಿಗಳೇ; ಹತ್ತಿರದ ಬಳಗದವರೇ. ಆದರೆ, ಕೋಲ, ಮುಂಡ, ಚಂಡ ಮೊದಲಾದವರು ಹಟ್ಟಿಕಾರರಿಗಿಂತಲೂ ಮೊದಲಿನವರೆಂದು ಹೇಳುವುದಕ್ಕೆ ಇಂಬಿದೆ. ಇದರ ಮುಂದಿನಕಾಲದಲ್ಲಿ ನಾನಾ ಬಗೆಯ ತಂಡಗಳು ಭಾರತಕ್ಕೆ ನುಗ್ಗಿ ಬಂದುವು. ಅವುಗಳಲ್ಲಿ ಕಂನಾಡಿನ ವರೆಗೂ ಬಂದು ತಾಗಿದ ಕೆಲವನ್ನು ಇಲ್ಲಿ ಹೇಳಿದೆ.

ಹೈಹಯರು

ಕಾರ್ತವೀರ್ಯಾರ್ಜುನನು ಹೈಹಯವಂಶದವನೆಂದು ಹೇಳುವರು. ಮಾಹಿಷ್ಮತಿಯು ಕಾರ್ತವಿರ್ಯನ ರಾಜಧಾನಿ. ಪರಶುರಾಮನು ಈತನ ವಿರೋಧಿ. ಹೈಹಯರು ಭಾರತದ ಹೊರಗಿನ ಜನವೆಂದು ಸಂಶೋಧಕರ ಮತವಿದೆ. ಆದಕಾರಣ, ಈ ಪರಕೀಯ ದಾಳಿಗಾರರನ್ನು ಎದುರಿಸುವುದೇ ಪರಶುರಾಮನ ಹಿರಿಗುರಿಯಾಗಿದ್ದಿತೆಂದು ಹೇಳಬೇಕಾಗುತ್ತದೆ. ಈ ದೃಷ್ಟಿಯಿಂದ ಪರಶುರಾಮನ ಕಾರ್ಯ ದೇಶಾಭಿಮಾನ, ಧರ್ಮಾಭಿಮಾನಗಳ ಹಿನ್ನೆಲೆಯಲ್ಲಿ ಅತ್ಯಂತ ಪ್ರಶಂಸನೀಯವೆಂದು ಕಂಡುಬಾರದೆ ಇರದು. ಪರಕೀಯರ ದಾಳಿಗಳಿಂದ ತಮ್ಮನ್ನು ಕಾಪಾಡಿದುದಕ್ಕಾಗಿಯೆ ಭಾರತೀಯರು ಪರಶುರಾಮನನ್ನು ಪರಮಾತ್ಮನ ಅವತಾರವೆಂದು ಎಣಿಸಿದರು. ಆತನಿಗೆ ತಮ್ಮ ಕೃತಜ್ಞತೆಯನ್ನು ಸಲ್ಲಿಸಿದರು. ಪರಶುರಾಮನು ಹೈಹಯರನ್ನು ಇಪ್ಪತ್ತೊಂದು ಬಾರಿ ಸಮೂಲ ನಾಶಮಾಡಿದರೂ ಅವರ ಪೀಳಿಗೆ ಮತ್ತೆ ಉಳಿಯದೆ ಹೋಗಲಿಲ್ಲ.

ತ್ರಿಪುರಿಯ ಚೇದಿವಂಶದ ರಾಜರು ಹೈಹಯರೆಂದು ವಾಡಿಕೆಯಿದೆ. ಬಾದಾಮಿಯ ಮಂಗಳೀಶನು ಹೈಹಯ ವಂಶದ ಬುದ್ಧರಾಜನನ್ನು ಗೆದ್ದು ತಂದ ಸಂಪತ್ತಿನಿಂದ ಮಹಾಕೂಟದ ಹತ್ತಿರ ವಿಜಯಸ್ತಂಭವನ್ನು ನಿಲ್ಲಿಸಿದನು (ಕ್ರಿ.ಶ. ೫೯೭). ಚೇದಿಯರ ಮನೆತನದ ಕನ್ನೆಯರನ್ನು ಮಳಖೇಡಿನ ರಾಷ್ಟ್ರಕೂಟರು ಮದುವೆಯಾಗುತ್ತಿದ್ದರು. ಕಂನಾಡಿನಲ್ಲಿ ಹೈಹಯರು ಬಂದು ಕಂನಾಡವರೇ ಆಗಿಬಿಟ್ಟುದೂ ಉಂಟು. ಇಲ್ಲಿ ಆಳಿದ ಬಿಜ್ಜಳಾದಿ ಕಲಚೂರಿಗಳು ಹೈಹಯರು. ಕಾರ್ತವೀರ್ಯಾರ್ಜುನನ ವಂಶದವರೆಂದುಕೊಳ್ಳುವ ಕೆಲವು ಕ್ಷತ್ರಿಯರು ಈಗ ಈ ನಾಡಿನಲ್ಲಿದ್ದಾರೆ.

ನಾಗರು

ನಾಗರು ಕಂನಾಡಿನಲ್ಲಿ ಆಗಿಹೋದ ಬಗೆಗೆ ಸಂದೇಹಕ್ಕೆ ಎಡೆಯೆ ಇಲ್ಲ. ನಾಗರ ಹಳ್ಳಿ, ಕಟ್ಟೆ, ಬಾವಿ, ಊರು, ಪುರ, ಹಾಳ, ನಗರ ಮೊದಲಾದುವು ಇವರ ಕುರುಹುಗಳು. ಬನವಾಸಿ ದೇಶದ ಒಂದು ಭಾಗಕ್ಕೆ ನಾಗರಖಂಡವೆಂದು ಹೆಸರಿದ್ದಿತು.

ಕಂನಾಡಿಗೆ ಬಂದ ನಾಗರು ಎಲ್ಲಿಯವರು? ಎಂದು ಬಂದರು? ಎಂಬುದರ ವಿಚಾರವು ಇನ್ನೂ ಆಗಿಲ್ಲ. ಅಸ್ಸಾಮದಲ್ಲಿ ನಾಗರೆಂಬ ಕಾಡಾಡಿಗಳಿದ್ದಾರೆ. ಆದರೆ, ಕಂನಾಡು, ಗುಜರಾತ, ಮಹಾರಾಷ್ಟ್ರಗಳಲ್ಲಿ ಬಂದು ನೆಲೆಸಿದ ನಾಗರು ಅಸ್ಸಾಮದ ಕಾಡಿನವರೆಂದು ಹೇಳುವುದಕ್ಕೆ ಒಂದು ಸಂಗತಿಯು ಅಡ್ಡಬರುತ್ತದೆ. ಪಟ್ಟಿಗಳಿಂದ ಎಂದರೆ ಹಟ್ಟಿಕಾರರಿಂದ ಪಟ್ಟಣ, ಹಟ್ಟಿಗಳು, ತಲೆದೋರಿದಂತೆ ನಾಗರಿಂದ ನಗರಗಳು ಉಂಟಾದುವೆಂದು ಬಲ್ಲವರು ಹೇಳುತ್ತಾರೆ. ನಗರದಿಂದ ನಾಗರಿಕತೆಯೆಂಬ ಮಾತು ಬಳಕೆಯಲ್ಲಿ ಬಂದಿದೆ. ನಗರಗಳ ನಾಗರಿಕತೆಯು ಆರಂಭದಲ್ಲಿ ಇಂದಿನದಕ್ಕಿಂತ ಬೇರೆಯಿರಬಹುದು. ಆದರೆ, 'ನಾಗರಿಕನೆಂಬುದು ಹಳ್ಳಿಗರಿಗಿಂತ ಸುಸಂಸ್ಕೃತನೆಂದು ಅರ್ಥವನ್ನು ಸೂಚಿಸುವುದರಿಂದ ಈ ನಗರಗಳ ನಿರ್ಮಾಣಕ್ಕೆ ಕಾರಣರು ಅಸ್ಸಾಮದ ನಾಗರಾಗಿರಬಹುದೆಂಬುದು ಒಪ್ಪಿಗೆಯಾಗದು.

ಕಂನಾಡಿನಲ್ಲಿ ಆಳಿದ ಸಿಂದರು ನಾಗವಂಶದವರೆಂದು ನಿಶ್ಚಿತವಾಗಿ ತಿಳಿದಿದೆ. ಈ ಸಿಂದರ ನೆನಹು ದೋರುವ ಊರುಗಳು ವಿಜಾಪುರ, ಬೆಳಗಾವಿ, ಬಳ್ಳಾರಿ, ಮೈಸೂರು, ರಾಯಚೂರು ಮೊದಲಾದ ಕಂನಾಡಿನಲ್ಲಿ ಎಲ್ಲ ಭಾಗದಲ್ಲಿಯೂ ಇವೆ. ಸಿಂಧನೂರು, ಸಿಂದಿಗೆ, ಸಿಂದಘಟ್ಟ, ಸಿಂದೆ ಮುನವಳ್ಳಿ ಮುಂತಾದುವು ಇದಕ್ಕೆ ದೃಷ್ಟಾಂತ. ಬಾಗಿಲುಕೋಟೆ ತಾಲ್ಲೂಕಿನ ಭೈರನ ಮಟ್ಟಿಯ ಶಾಸನದಲ್ಲಿ ಪುಲಿಕಾಲಸಿಂದನೆಂಬ ಅರಸನ ವರ್ಣನೆಯಿದೆ. (ಕ್ರಿ. ಶ. ೯೯೦). ಪುಲಿಕಾಲ ಸಿಂದನು ನಾಗವಂಶದವನೆಂದೂ ಅವರ ಧ್ವಜದ ಮೇಲೆ ಹೆಡೆ ತೆಗೆದ ನಾಗರ ಚಿಹ್ನವಿದ್ದಿತೆಂದೂ ಆ ಶಾಸನದಿಂದ ಗೊತ್ತಾಗುತ್ತದೆ.[೯] ಸಿಂಧೂತೀರದಿಂದ ಬಂದವರಾದುದರಿಂದ ಇವರಿಗೆ ಸಿಂದರೆಂಬ ಹೆಸರು ಬಂದಿದೆ.

ಪ್ರಾಗೈತಿಹಾಸಿಕ ಕಾಲದ ಸಿಂಧದ ಅವಶೇಷಗಳಿಗೆ ಹೋಲುವ ಬಳೆಯ ಚೂರು, ಪಾತ್ರೆಗಳ ತುಂಡು, ಮತ್ತು ಹರಳು, ಮಣಿಗಳು ಕಂನಾಡಿನಲ್ಲಿ ದೊರೆಯುತ್ತಿರುವುದರಿಂದ ಸಿಂಧದೊಡನೆ ಕಂನಾಡ ಸಂಬಂಧವು ಆ ಕಾಲದಲ್ಲಿಯೂ ಇದ್ದಿತೆಂದು ಈ ಮೊದಲು ಒಮ್ಮೆ ಸೂಚಿಸಿದೆ. ಸಿಂಧ-ಬಲೂಚಿಸ್ತಾನದ ನೆರೆಯಲ್ಲಿರುವ ಬ್ರಾಹೂಯೀ ಭಾಷೆಯು ಕಂನುಡಿಗೆ ಹತ್ತಿರದ್ದೆಂಬ ಜೂಲ್ಸ್ ಬ್ಲಾಚ್ ಎಂಬ ಫ್ರೆಂಚ ವಿದ್ವಾಂಸನ ಅಭಿಪ್ರಾಯವೂ ಈ ಮಾತಿಗೆ ಬೆಂಬಲವನ್ನೀಯುತ್ತಿದೆ. ವೇದದೊಳಗಿನ ಪಕ್ತಿಗಳೂ ಯದು-ತುರ್ವರೂ ಕಂನಾಡವರೆಂಬ ವಿಚಾರವನ್ನು ಇದರೊಡನೆ ಲೆಕ್ಕಕ್ಕೆ ಹಿಡಿದರೆ ಸಿಂಧ-ಕಂನಾಡುಗಳಲ್ಲಿ ನಿಕಟ ವ್ಯವಹಾರವು ಎಂದಿನಿಂದಲೂ ಇದ್ದಿತೆಂದು ಕಂಡುಬರುವುದು.

ಸಿಂದರು, ಸಿಂಧೂ ತೀರದಿಂದ ಬಂದವರೆಂಬ ಮಾತು ಅವರ ಮನೆತನದ ಹೆಸರಿನಿಂದಲೆ ತಿಳಿದು ಬರುವುದಾದರೂ ಸಿಂಧು ತೀರದ ಯಾವ ನಾಡಿನಿಂದ ಎಂಬ ಮಾತು ಸಂದಿಗ್ಧವಾಗಿಯೆ ಉಳಿಯುತ್ತದೆ.

ಇವರು ಅಹಿಚ್ಛತ್ರದಿಂದ ಕಂನಾಡಿಗೆ ಬಂದಿರಬೇಕೆಂದು ಡಾ. ದೇವದತ್ತ ಭಂಡಾರಕರರ ಅಭಿಪ್ರಾಯ. ಇದು ಸರಿಯಿದ್ದರೂ ಇರಬಹುದು. ಆದರೆ, ಅಹಿಚ್ಛತ್ರದ ನಿಶ್ಚಿತ ಸ್ಥಾನವನ್ನು ಕುರಿತು ಭಿನ್ನಾಭಿಪ್ರಾಯಗಳಿದ್ದುದು ಕಂಡುಬರುತ್ತದೆ. ಆದರು, ಇದು ಸಿಂಧೂನದಿಯು ಹರಿವ ಹಿಮಾಲಯದ ಅಂಚಿನಲ್ಲಿರಬೇಕೆಂದು ಹೇಳಬೇಕಾಗುತ್ತದೆ.

ನಾಗರು ಕಂನಾಡಿನಲ್ಲಿ ಬಂದು ನೆಲೆಸಿದ ಬಳಿಕ ಇಲ್ಲಿಯ ಜನಗಳಲ್ಲಿ ಬೆರೆತು ಒಂದಾದರೆಂದು ತೋರುತ್ತದೆ. ನಾಗರ ಕನ್ನೆಯರು ತುಂಬ ಚೆಲುವೆಯರೆಂದು ಪೂರ್ವಕಾಲದಲ್ಲಿ ಖ್ಯಾತಿಯಿದ್ದಿತು. ಕದಂಬ ರಾಜರು ನಾಗಕನ್ನೆಯರನ್ನು ಮದುವೆಯಾದರು. ಸಿಂದರೊಡನೆ ಚಲುಕ್ಯರಾಜರ ಬೀಗತನವಿದ್ದುದು ತಿಳಿದುಬರುತ್ತದೆ. ಈಗ ಸಿಂದಗಿಯವರೆಂಬ ಕೆಲವು (ಸಿರಿವಂತರ) ಮನೆತನಗಳುಂಟು. ಅವರೆಲ್ಲ ಸಿಂದರ ಬಳಗವೆಂದೇ ನಿಶ್ಚಿತವಾಗಿ ಹೇಳಲಿಕ್ಕಾಗದೆ ಇದ್ದರೂ ಅವು ಐತಿಹಾಸಿಕ ಮಹತ್ವದ ಕುಳಗಳೆಂಬಲ್ಲಿ ಸಂದೇಹವಿಲ್ಲ. ಬನವಾಸಿ ನಾಡಿನಲ್ಲಿ ನಾಗರಖಂಡದ ಭಾಗಕ್ಕೆ ಹತ್ತಿ ಸುಮಾರಾಗಿ ಹೈವೆ ಅಥವಾ ಹೈಗವೆಂಬ ಹೆಸರುಂಟು. ಅಲ್ಲಿಯ ಬ್ರಾಹ್ಮಣರಿಗೆ ಹವಿಕರೆಂದು ಕರೆವ ವಾಡಿಕೆಯಿದೆ. ಇವರನ್ನು ಕದಂಬ ಮಯೂರಶರ್ಮನು ಅಹಿಚ್ಛತ್ರದಿಂದ ತಂದನೆಂದು ಒಂದು ಕತೆಯಿದೆ. ಅಹಿಚ್ಛತ್ರದಿಂದ ಬಂದು ನೆಲೆಸಿದ ಈ ಜನರಿರುವ ಪ್ರದೇಶವೆಂದೇ ಇದಕ್ಕೆ (ಅಹಿವೆ?=) ಹೈವೆ ಎಂದು ಹೆಸರು ಬಂದಿರಬಹುದೆ?

ಕಂನಾಡಿನಲ್ಲಿ ಹವ್ಯಕರದೊಂದೇ ಸ್ವತಂತ್ರ ಗುಂಪು ಇದ್ದಂತಿದೆ. ಇವರು ಅಹಿಚ್ಛತ್ರದಿಂದ ಬಂದುದನ್ನೂ ನಾಗರೂ ಅತ್ತಣವರೆ ಆಗಿರುವುದನ್ನೂ ನೋಡಿದರೆ ಗುಜರಾತಿನಲ್ಲಿರುವಂತೆ ಇವರೂ ನಾಗರ ಬ್ರಾಹ್ಮಣ ರಾಗಿರಬಹುದೆ? ಎಂಬ ಒಂದು ವಿಚಾರವು ತಲೆದೋರುತ್ತದೆ. ಆದರೆ, ನಾಗರ ಬ್ರಾಹ್ಮಣರ ಮತ್ತು ಹವ್ಯಕರ ಗೋತ್ರಸೂತ್ರಗಳ ವಿಚಾರವನ್ನೂ ಮಾಡಬೇಕಲ್ಲದೆ ಆಧುನಿಕ ಶಾಸ್ತ್ರೀಯ ಪದ್ಧತಿಯಿಂದ ರೂಪ ಆಕಾರಾದಿಗಳ ಅಳತೆ (Anthropometrical measurments) ಮಾಡಿದ್ದಲ್ಲದೆ ಯಾವ ಕೊನೆಯ ನಿರ್ಣಯವನ್ನೂ ಹೇಳಲಿಕ್ಕಾಗುವುದಿಲ್ಲ. ಮೈಸೂರ ಶಾಸನಗಳಲ್ಲಿ ಅಹಿಚ್ಛತ್ರಪುರ (ವಿಜಯಪುರ), ಅಹಿಚ್ಛತ್ರ ಅಗ್ರಹಾರ ಎಂಬ ಹೆಸರುಗಳು ಆಗಾಗ ಬಂದಿವೆ. ಆದುದರಿಂದ, ಅಲ್ಲಿಂದ ಕಂನಾಡಿಗೆ ಬ್ರಾಹ್ಮಣರೂ ಬೇರೆ ಜನಗಳೂ ಬಂದ ಬಗೆಗೆ ಸಂದೇಹವಿಲ್ಲ.

ಕ್ರಿಸ್ತಾಬ್ದದ ಮುಂಚೆ ೩೦೦ ವರುಷಗಳ ಸುಮಾರಿಗೆ ಅಭೀರರೆಂಬ ಜನಗಳು ವಾಯವ್ಯ ಕಣಿವೆಗಳಿಂದ ಭಾರತದಲ್ಲಿ ನುಗ್ಗಿದರು. ಗುಜರಾತ ಮಹಾರಾಷ್ಟ್ರಗಳಲ್ಲಿ ಇವರ ಅಸ್ತಿತ್ವವನ್ನು ಈಗಲೂ ಕಾಣಬಹುದು. ಖಾನದೇಶದಲ್ಲಿ ಅಹಿರಾಣಿ ಎಂಬ ಒಂದು ಸಮ್ಮಿಶ್ರಭಾಷೆಯೆ ಉಂಟಾಗಿದೆ. ಅದು ಮರ್ಹಾಟಿಯಲ್ಲ; ಗುಜರಾತಿಯೆಂದು ಹೇಳುವುದಕ್ಕಾಗುವುದಿಲ್ಲ. ಕಂನಾಡಿನಲ್ಲಿ ಬಂದು ಇವರು ತಮ್ಮ ಸ್ವತಂತ್ರ ಅಸ್ತಿತ್ವವನ್ನು ಬಹುತರವಾಗಿ ಕಳೆದುಕೊಂಡರು. ಅಹಿರಸಂಗ, ಅಹಿರವಾಡಗಳಂತಹ ಕೆಲವು ಎಡೆಗಳ ಹೆಸರುಗಳಿದ್ದು ಅವು ಆ ಜನಗಳ ನೆನೆಪನ್ನು ಈಗಲೂ ತಂದುಕೊಡುತ್ತವೆ. ಧಾರವಾಡದ ಸಮೀಪದಲ್ಲಿ ದಂಡಿನ ಗೌಳಿಗಳೆಂಬ ಹೆಸರಿನ ಆಹಿರ ಜನದ ಒಂದು ತಂಡವಿದೆ.

ಹಳೆಯ ಶಾಸಗನಳಲ್ಲಿ ಆಹಿರರ ಹೆಸರು ಕಂನಾಡಿನಲ್ಲೂ ಕೇಳಬರುತ್ತದೆ. ಚಲುಕ್ಯಾದಿ ರಾಜರು ಆಭಿರರ ಹಗೆಗಳಾಗಿದ್ದುದು ಅವರ ಬಿರುದಾವಳಿಗಳಿಂದ ತಿಳಿಯುತ್ತದೆ. 'ಆಭೀರಕುಲಗಹನ ದಾವಾನಲ' ಮೊದಲಾದ ಬಿರುದಾವಳಿಗಳನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು.[೧೦] ಹೀಗಿದ್ದರೂ ಈ ನಾಡಿನಲ್ಲಿ ಸಣ್ಣಪುಟ್ಟ ಮಾಂಡಲಿಕರಾಗಿ, ಮನ್ನೆಯರಾಗಿ ಆಳಿದ ಆಭೀರರೂ ಇಲ್ಲದಿಲ್ಲ. 'ಆಹಿರ ಜೈತುಗಂ ಹಿರಿಯ ಬಳ್ಳಿಗಾವೆಯ ನೆಲವೀಡಿನೊಳ್ ಇರ್ದು (ರಾಜ್ಯಮಂ) ಪಾಲಿಸುತಿರ್ದಂ' ಎಂದು (ಕ್ರಿ. ಶ. ೧೨೧೫) ಸೊರಬ ತಾಲೂಕಿನ ಒಂದು ಶಾಸನದಲ್ಲಿದೆ.

ಬ್ರಾಹ್ಮಣರ ಆಗಮನ

ಸಾಮಾನ್ಯವಾಗಿ ಬ್ರಾಹ್ಮಣರೆಲ್ಲ ದಕ್ಷಿಣಾಪಥಕ್ಕೆ ಹೊರಗಣಿಂದ ಬಂದವರೇ. ಈ ವರ್ಗದ ಪರಂಪರೆ ಮತ್ತು ನಡೆವಳಿಗಳಲ್ಲಿ ಆರ್ಯಾವರ್ತದ ವಿಷಯಕ್ಕೆ ಕಂಡುಬರುವ ಆದರ ಆತ್ಮೀಯತೆಗಳು ದಕ್ಷಿಣಾಪದದ ವಿಷಯಕ್ಕೆ ಇಲ್ಲ. ಆರ್ಯಾವರ್ತದಿಂದ ಗಡಿಪಾರು ಮಾಡಿದ ಬಹಿಷ್ಕೃತರು ದಕ್ಷಿಣಾಪಥಕ್ಕೆ ಬರುವುದು ಅಂದಿನ ವಾಡಿಕೆ. ಇದು ಅಯಜ್ಞೀಯ ಭೂಮಿಯೆಂದು ಗ್ರಹಿಕೆಯಿದ್ದಿತು. ಅದರಿಂದ, ಇದು ಅಪವಿತ್ರ. ಆರ್ಯರ ವಾಸಕ್ಕೆ ಅಯೋಗ್ಯವೆಂದೇ ಭಾವನೆ. ಕಾಶಿ, ಬಿಹಾರ, ಒರಿಸ್ಸಾ, ಬಂಗಾಲಗಳ ವಿಷಯಕ್ಕೂ ಇದೇ ಬಗೆಯ ತಿಳುವಳಿಕೆಯಿದ್ದಿತು. 'ಅಸೂರ್ಯಾಃ' ಪ್ರಾಚ್ಯಾಃ' ಆರ್ಯಾವರ್ತದಿಂದ ಹೊರಗೆ ಹೋಗಿ ಬಂದವರು ಶುದ್ಧ ರಾಗುವುದಕ್ಕೆ ಪ್ರಾಯಶ್ಚಿತ್ತ ಪಡೆಯಬೇಕೆಂಬ ನಿರ್ಬಂಧವಿದ್ದಿತು.[೧೧]

ಹೀಗೆಲ್ಲ ಭಾವನೆಗಳಿದ್ದರೂ ಅನೇಕ ಬ್ರಾಹ್ಮಣರು ಈ ಭಾಗಗಳಿಗೆ ಬಂದು ಆಶ್ರಮ ಕಟ್ಟಿಕೊಂಡು ನೆಲೆಸುತ್ತಿದ್ದರು. ರಾಮನು ವನವಾಸಕ್ಕಾಗಿ ಪಂಚವಟಿಗೆ ಬಂದಾಗ ಗೋದಾತೀರದಲ್ಲಿ ಹಲಕೆಲವು ಋಷಿಗಳ ಆಶ್ರಮಗಳಿದ್ದುವೆಂದು ವರ್ಣನೆಯಿದೆ. ವೈದಿಕ ಋಷಿ ಅಗಸ್ತ್ಯನೇ ಮೊದಲು ದಕ್ಷಿಣಕ್ಕೆ ಬಂದ ಬ್ರಾಹ್ಮಣನೆಂದು ಒಂದು ಆಖ್ಯಾಯಿಕೆಯುಂಟು. ಈತನು ವಿದರ್ಭಕನ್ಯೆ ಲೋಪಾಮುದ್ರೆಯನ್ನು ಮದುವೆಯಾದನು. ಆದರೆ, ಇನ್ನು ಕೆಲವು ವಿದ್ವಾಂಸರ ಅಭಿಪ್ರಾಯದಂತೆ ಕ್ರಿ. ಶ. ದ ೬೦೦ ವರುಷಗಳಿಗೆ ಮೊದಲು ದಕ್ಷಿಣಾಪಥವು ಆರ್ಯರಿಗೆ ತಿಳಿದಿರಲಿಲ್ಲ- ಎಂದು ಪಾಣಿನಿ ಮೊದಲಾದವರ ಗ್ರಂಥಗಳ ಆಧಾರದಿಂದ ಊಹಿಸುತ್ತಾರೆ.

ಅದೇನೇ ಇರಲಿ; ಮನಸ್ಸಿಲ್ಲದ ಮನಸ್ಸಿನವರಾಗಿ ಪರಿಸ್ಥಿತಿಯ ಒತ್ತಾಯದಿಂದ ಬ್ರಾಹ್ಮಣರು ದಕ್ಷಿಣಾಪಥಕ್ಕೆ ಬಂದುದು ನಿಜ. ಆರ್ಯಸಂಸ್ಕೃತಿಯ ಪ್ರಸಾರಕ್ಕೂ ಕೆಲರು ಬಂದಿರುವ ಸಂಭವವಿದೆ. ಮುಸಲ್ಮಾನರ ಕಾಟಕ್ಕಾಗಿ ಸರಸ್ವತೀ ತೀರದಿಂದ ಸಾರಸ್ವತ (ಬ್ರಾಹ್ಮಣ)ರೂ ಗೌಡದೇಶದಿಂದ ಗೌಡ (ಬ್ರಾಹ್ಮಣ)ರೂ ಬಂದರು. ಇದೇ ಮೇರೆ ಹಿಂದಕ್ಕೂ ಇತ್ತಕಡೆಗೆ ಬ್ರಾಹ್ಮಣರ ಹಲವು ಶಾಖೆಗಳು ಬಂದುವು. ನದಿ ಮತ್ತು ಪರ್ವತ ಪ್ರದೇಶಗಳಲ್ಲಿ ಬ್ರಾಹ್ಮಣರ ಮೊದಲಿನ ಬಿಡಾರಗಳು ಇದ್ದುವು. ಇವಕ್ಕೆಲ್ಲ ಸಂಸ್ಕೃತ ಹೆಸರುಗಳೇ ಮುಖ್ಯವಾಗಿ ಇರುವುದಕ್ಕೆ ಇದೂ ಒಂದು ಕಾರಣ. ಅಲ್ಲದೆ, ಆ ಹೆಸರುಗಳಲ್ಲಿ ಅಗಸ್ತ್ಯ ಗೌತಮಾದಿಗಳ ನೆನೆಹು ಅಡಕವಾಗಿದೆ.

ಇವರ ತಪೋನಿಷ್ಠೆ, ಜ್ಞಾನಶಕ್ತಿಗಳಿಗಾಗಿ ರಾಜಾಶ್ರಯವು ದೊರೆಯಲಾರಂಭಿಸಿದ ಬಳಿಕ ಅಗ್ರಹಾರಗಳು ತಲೆದೋರಿದುವು. ಈ ಬಗೆಯಾಗಿ ಬ್ರಾಹ್ಮಣರು ಊರಲ್ಲಿ ಬಂದರು. ಹಾರುವರ ಹಳ್ಳಿ, ಬೀಡುಗಳು ತಲೆಯೆತ್ತಿದುವು. ಬ್ರಾಹ್ಮಣಪುರಿ, ಬಮ್ಮನಹಳ್ಳಿ, ಬ್ರಹ್ಮನಾಳಗಳು ಹುಟ್ಟಿದುವು.

ಅಗ್ರಹಾರವೆಂಬುದು ಕಂನಾಡಿನಲ್ಲಿಯೆ ಮೊದಲು ಅಸ್ತಿತ್ವದಲ್ಲಿ ಬಂದಿರಬೇಕೆಂದು ನನ್ನ ಎಣಿಕೆ. ಏಕೆಂದರೆ ಕೇವಲ ಸಂಸ್ಕೃತದಿಂದ ಇದರ ಅರ್ಥವು ಪೂರ್ಣವಾಗಿ ಹೊರಡುವುದಿಲ್ಲ. ಅಗ್ರ+ಹಾರ ಎಂಬ ಎರಡು ಪದಗಳು ಇದರಲ್ಲಿ ಇದ್ದುದರ ಬಗೆಗೆ ಭಿನ್ನಾಭಿಪ್ರಾಯವಿಲ್ಲ. ಆದರೆ, ಅಗ್ರ ಮತ್ತು ಹಾರ ಎಂಬ ಪದಗಳಿಗೆ ಏನು ಅರ್ಥವೆಂಬುದೆ ಮುಖ್ಯ ಪ್ರಶ್ನೆಯಾಗಿದೆ. ಇದನ್ನು ಕುರಿತು 'ಅಗ್ರಂ ಬ್ರಾಹ್ಮಣಭೋಜನಂ ತದರ್ಥಂ ಹ್ರಿಯಂತೇ, ರಾಜಧನಾತ್ ಪೃಥಕ್ ಕ್ರಿಯಂತೇ ತೇ ಕ್ಷೇತ್ರಾದಯಃ' ಎಂದು ನೀಲಕಂಠಭಟ್ಟರು ಬರೆಯುತ್ತಾರೆ; ವಾಚಸ್ಪತ್ಯಕೋಶದಲ್ಲಿ ಹೀಗಿದೆ: 'ಕ್ಷತ್ರೋತ್ಪನ್ನ ಶಸ್ಯಾದುದ್ಧೃತ್ಯ ಬ್ರಾಹ್ಮಣೋದ್ದೇಶೇನ ಸ್ಥಾಪ್ಯಂ ಧಾನ್ಯಾದಿ ಗುರುಕುಲಾದಾವೃತ್ತ ಬ್ರಹ್ಮಚಾರಿಣೇ ದೇಯಂ ಕ್ಷೇತ್ರಾದಿ ಗ್ರಾಮಭೇದಶ್ಚ;' 'ಅಗ್ರಂ ಪ್ರಥಮಂ ಹ್ರಿಯತೇ ಉತ್ಪನ್ನ ಶಸ್ಯಾದುದ್ಧೃತ್ಯ ಸ್ಥಾಪ್ಯತೇ'; 'ಅಗ್ರಂ ಹರತಿ;'

ಆದರೆ, 'ಅಗ್ರಂ' ಇದಕ್ಕೆ ಬ್ರಾಹ್ಮಣಭೋಜನಂ ಎಂದು ಏಕೆ ಮತ್ತು ಹೇಗೆ ಅರ್ಥವಾಗುವುದೊ ತಿಳಿಯದು. ಅಗ್ರಹಾರಗಳು ಬ್ರಾಹ್ಮಣರಿಗೆ ಉಂಬಳಿ-ಉಂಬುವುದಕ್ಕೆ ಕೊಟ್ಟುವು ನಿಜ. ಆದರೆ, ಭೋಜನವೆಂಬ

ಅರ್ಥ ಕೊಡುವ ಪದವು ಅಲ್ಲಿ ಆವುದು ? 'ಅಗ್ರಂ' ಎಂದರೆ ಮೊದಲು ಎಂದು ಅರ್ಥವಾಗುವುದು. ಬಳಿಕ 'ಹಾರ' ಎಂಬುದಕ್ಕೆ ಅರ್ಥವೇನು? (ಬ್ರಾಹ್ಮಣನು) 'ಅಗ್ರಂ' ಎಂದರೆ ಮೊದಲು (ಅಲ್ಲಿಯ ಬೆಳೆಯನ್ನು) ಹರತಿ ಒಯ್ಯುತ್ತಾನೆ; ಅಥವಾ ಅವನಿಂದ ಒಯ್ಯಲಾಗುತ್ತದೆ, (ಹ್ರಿಯತೇ) ಎಂದು ಅರ್ಥವೆ? ಇದರಿಂದ ಹಾರವೆಂಬುದು ಹೃ ಧಾತುವಿನಿಂದ ಬಂದುದೆಂದು ಹಾಗಾಯಿತು.

ಹಾಗಾದರೆ ಅಗ್ರಖೇಟ (ಅಗರ ಖೇಡ) ಕ್ಕೆ ಅರ್ಥವೇನು? 'ಅಗ್ರ' ಎಂದರೆ ಮೊದಲು ಎಂಬರ್ಥವಂತೂ ಇಲ್ಲಿ ಹೊಂದುವುದೇ ಇಲ್ಲ. 'ಅಗ್ರ' ಎಂದರೆ (ಚಾತುರ್ವರ್ಣ್ಯದಲ್ಲಿ) ಮೊದಲು ಹುಟ್ಟಿದವ-ಬ್ರಾಹ್ಮಣ ಎಂದು ಅರ್ಥ ಮಾಡಬಹುದು. ಹಾಗಾದಲ್ಲಿ ಅಗ್ರಖೇಟವೆಂದರೆ ಬ್ರಾಹ್ಮಣ(ರ) ಹಳ್ಳಿ ಎಂದು ಅರ್ಥವಾಗುವುದು. ಬ್ರಾಹ್ಮಣರ (ಭೋಜನಕ್ಕಾಗಿರುವ) ಹಳ್ಳಿ ಎಂದೂ ಅಧ್ಯಾಹೃತ ಪದವನ್ನು ಸ್ವೀಕರಿಸಿ ಸ್ಪಷ್ಟೀಕರಿಸಿಕೊಳ್ಳಬಹುದಾದಲ್ಲಿ 'ಅಗ್ರಂ' ಎಂದರೆ 'ಬ್ರಾಹ್ಮಣ ಭೋಜನಂ' ಎಂಬುದು ಇಲ್ಲಿ ಸರಿಹೋಗುವುದು. ಆದರೆ, ಮೇಲೆ 'ಹಾರ' ಎಂದರೆ 'ಹರತಿ' ಅಥವಾ 'ಹ್ರಿಯತೇ' ಎಂದು ಹೇಳಿದಂತೆ ಖೇಟಕ್ಕೆ ಹೇಗೆ ಅರ್ಥ ಮಾಡುವುದು ಸಾಧ್ಯ?

'ಹಾರ' ಇದಕ್ಕೆ 'ಹ್ರಿಯತೆ' ಅಥವಾ 'ಹರತಿ' ಎಂದು ಸ್ಪಷ್ಟೀಕರಿಸುವುದಾದರೆ, 'ಪ್ರೇಹಾರ' 'ಶಿಲಾಹಾರ' ಎಂಬುವು ಪ್ರದೇಶದ ಹೆಸರೆಂದು ತಿಳಿದುಬರುತ್ತದೆ. (ಮೈಸೂರ ಶಾಸನ ಇಲಾಖೆಯ ವರದಿ ೧೯೨೯) . ಶಾತವಾಹನಿ ಹಾರ ಎಂಬ ಹೆಸರೂ ಶಾಸನಗಳಲ್ಲಿ ದೊರೆತಿದೆ. ಇಲ್ಲಿ 'ಹಾರ' ಶಬ್ದಕ್ಕೆ ಏನು ನಿರುಕ್ತ? ನನ್ನ ತಿಳುವಳಿಕೆಯಂತೆ ಅಗ್ರಹಾರ, ಪ್ರೇಹಾರ, ಶಾತವಾಹನಿ ಹಾರ ಇಲ್ಲಿ ಹಾರ ಎಂಬುದು ಎಡೆಯನ್ನು ಹೇಳುವ ಶಬ್ದವಾಗಿದೆ. ಪಾಡಿ-ಪಾರಾ-ಹಾರಾ ಎಂಬೀ ಬಗೆಯಾಗಿ ಕಂನುಡಿಯಿಂದ ಇದರ ಹುಟ್ಟನ್ನು ಅರಿತುಕೊಳ್ಳ ಬಹುದಾಗಿದೆ. ಕಂನಾಡಿನಲ್ಲಿ ಎಡೆಗಳ ಹೆಸರಿನ ಕೊನೆಗೆ ಹಾರ ಎಂಬ ಪದವಿದ್ದುದನ್ನು ಕೋಲ್ಹಾರ, ಎಂಬ ಗ್ರಾಮಗಳಲ್ಲಿ ಮನಗಾಣಬಹುದು. ಅಗ್ರಹಾರ ಕೊಲ್ಹಾರವೆಂಬುದಕ್ಕೆ ಕಂನುಡಿಯ ಪಾಡಿಯೆ ಮೂಲ. ಆದಕಾರಣ, ಕೇವಲ ಸಂಸ್ಕೃತದಿಂದ ಇದರ ವ್ಯುತ್ಪತ್ತಿಯು ತಿಳಿಯಲಾರದು. ಅಗ್ರಹಾರ ಎಂಬುದು ಆರ‍್ಯರು ಹಟ್ಟಿಕಾರರ ನಾಡಿನಲ್ಲಿ ನೆಲೆಸಿ, ನಾಡಿನೊಡನೆ ಬೆರೆಯಲಾರಂಭಿಸಿದುದರ ಕುರುಹಾಗಿದೆ. ಸಂಸ್ಕೃತ ಮತ್ತು ಕಂನುಡಿಗಳ ಬೆರಕೆಯಿಂದ ಈ ಪದವು ಸಿದ್ಧವಾಗಿದೆ.

ಬ್ರಾಹ್ಮಣರು ದೇಶಸ್ಥರಾಗಲಾರಂಭಿಸಿದುದು

ಮೊದಲು ಬ್ರಾಹ್ಮಣರಲ್ಲಿ ಗೋತ್ರಗಳಂತೆ ಗುಂಪುಗಳಾಗಿದ್ದುವೆಂದು ತೋರುತ್ತದೆ. ಗೋತ್ರವೆಂದರೆ ಒಂದು ಗೋಷ್ಠಿಯವರು ಒಂದು ಮತಕ್ಕೆ ಹೊಂದಿದವರು ಎಂದು ಕೆಲರ ಅಭಿಪ್ರಾಯವಿದೆ. ವಾಸಿಷ್ಠ ಗೋತ್ರದವರೆಂದರೆ ವಸಿಷ್ಠನ ಮತವನ್ನು ಅನುಸರಿಸುವವರು ಎಂದು ಅರ್ಥ. ಆದರೆ, ಇನ್ನು ಕೆಲರು, ಆ ಮನೆತನದ ಮೂಲಪುರುಷನ ಹೆಸರೆ ಗೋತ್ರವೆಂಬ ಅಭಿಪ್ರಾಯದವರಾಗಿದ್ದಾರೆ. ಇದರಲ್ಲಿ ಮೊದಲನೆಯ ಮತವೆ ಹೆಚ್ಚು ಸಮಂಜಸವೆಂದು ತೋರುತ್ತದೆ. ಏಕೆಂದರೆ ಗೋತ್ರ ಶಬ್ದದಲ್ಲಿ ವಂಶವೆಂಬುದಕ್ಕಿಂತಲೂ ಗೋಷ್ಠ, ಗೋಷ್ಠಿ ಎಂಬ ಧ್ವನಿಯೆ ನಿಶ್ಚಿತವಾಗಿದೆ.

ಗೋತ್ರಗಳಂತೆ ಇನ್ನೊಂದು ಬಗೆಯ ಪಂಗಡಗಳು ಮುಂದೆ ಬಂದುವು. ಅವು ವೇದ, ಶಾಖೆ, ಸೂತ್ರಗಳಿಂದಾದುವು. ಋಗ್ವೇದಿಗಳು, ಯಜುರ್ವೇದಿಗಳು, ಎಂಬಂತೆ ಕಾಣ್ವಶಾಖೆಯವರು, ಆಪಸ್ತಂಬರು, ಹಿರಣ್ಯಕೇಶಿಗಳು, ಬೌದ್ಧಾಯನರು ಎಂದು ಮುಂತಾದ ಹೆಸರಿನ ಗುಂಪುಗಳಿದ್ದುವು. ಆದರೆ, ಊರ ಅಡ್ಡ ಹೆಸರಿನ ಪರಂಪರೆ ಬ್ರಾಹ್ಮಣರಲ್ಲಿ ತೀರ ಹೊಸತು. ಅಗ್ರಹಾರಾದಿಗಳನ್ನು ಸ್ವೀಕರಿಸಿ ಅಲ್ಲಲ್ಲಿ ಬೇರೂರಿ ನಿಲ್ಲಲಾರಂಭಿಸಿದ ಬಳಿಕ ದೇಶವಿಭಾಗದಂತೆ ಬ್ರಾಹ್ಮಣರಲ್ಲೂ ಹೊಸ ಪಂಗಡಗಳು ತಲೆದೋರಿದುವು. ಮನೆತನಗಳಿಗೆ ಊರ ಹೆಸರಿನಿಂದ ಕರೆವ ವಾಡಿಕೆಯುಂಟಾಯಿತು.

ಕರ, ವಾಲಾ ಎಂದು ಮೊದಲಾಗಿ ಹಚ್ಚಿ ಕೊಳ್ಳದೆ ಕೇವಲ ಊರ ಹೆಸರಿನ (ಅಡ್ಡ ಹೆಸರಿನ) ಪದ್ಧತಿಯು ಮೊದಲು ಕಂನಾಡಿನಲ್ಲಿಯೆ ಆರಂಭವಾಗಿರಬೇಕೆಂದು ಡಾ. ದೇವದತ್ತ ಭಂಡಾರಕರರ ಅಭಿಪ್ರಾಯವಿದೆ. ಎರಡನೆಯ ಪುಲಿಕೇಶಿಯ ಒಂದು ದಾನಪತ್ರದಲ್ಲಿ. ಹೀಗೆ ಒಂದು ಉಲ್ಲೇಖವು ಬಂದಿದೆ.[೧೨]

> ವಾಸಿಷ್ಠ ಗೋತ್ರಾಯ ತೈತ್ತಿರೀಯಾಯ ತಗರಾಧಿವಾಸಿನೇ
> ಚತುರ್ವೇದಾಯೋಟಂಬರ ಖೇಡ ಕುಲನಾಮ ಧೇಯಾಯ ಜ್ಯೇಷ್ಠಾಶರ್ಮಣೇ...

ಈ ರೀತಿಯಿಂದ ಊರ ಹೆಸರಿನಿಂದ ಕುಲನಾಮವನ್ನು ಹೇಳುವ ವಾಡಿಕೆ ಇದಕ್ಕೂ ಮೊದಲು ಕಂಡುಬರುತ್ತಿದ್ದಿಲ್ಲ. ಆದುದರಿಂದ, ಇದನ್ನು ಕುರಿತು. ಡಾ. ಭಂಡಾರಕರರು ಬರೆಯುವುದೇನೆಂದರೆ:

> This reminds me of the practice of the Kanarese Brahmins of adopting, as family names, the names of villages and towns, without the additition of any termination such as 'Kar', or 'wall', which is employed in Maharashtra or Gujarat which signifies '(originally) residing in'. This is highly important, for we can now definitely say that this practice which is prevalent to this day in the Kanarese speaking districts can be traced back to the beginning of the 7th centurey A.D.

ಏಳನೆಯ ಶತಕದ ಸುಮಾರಿಗೆ ಈ ರೂಢಿಯು ಆರಂಭವಾಯಿತು. ಬ್ರಾಹ್ಮಣರಲ್ಲಿ ಊರುಗಳ ಹೆಸರಿನಲ್ಲಿ ಗುಂಪುಗಳಾದುವು. ನಾಡಿನ ಬೇರೆ ಬೇರೆ ಭಾಗದ ಹೆಸರಿನಲ್ಲಿ ಗುಂಪುಗಳಾದುವು. ಶಿವಳ್ಳಿಯವರು, ಹೈಗರು, ಅರುವತ್ತನಾಲ್ಕು ಒಕ್ಕಲು, ಮುಲುಕನಾಡು, ಕಮ್ಮೆ; ಕಮ್ಮೆಯಲ್ಲಿಯೆ ಮತ್ತೆ ಉಲೂಚಿ ಕಮ್ಮೆ, ಬೊಬ್ಬೂರು ಕಮ್ಮೆ, ಬಡಗರು, ತೆಂಗಲೆಯವರು, ಕೋಟರು ಎಂದು ಮುಂತಾದ ಸಣ್ಣ ಸಣ್ಣ ನಾಡ ಪಂಗಡಗಳಲ್ಲದೆ ದೇಶಸ್ಥವೆಂಬ ದೊಡ್ಡ ಸಮೂಹವು ಉತ್ತರ ಕಂನಾಡಿನಲ್ಲಿದೆ. ಇದು ಹಳೆಯ ಬೃಹತ್ ಕರ್ಣಾಟವೆಂಬ ಹೆಸರಿನ ಇಂದಿನ ಮಹಾರಾಷ್ಟ್ರದ ವರೆಗೂ ಹಬ್ಬಿರುವುದು. ದೇಶದಲ್ಲಿ ನೆಲೆಸಿರುವವರು ದೇಶಸ್ಥರು, ಎಂದು ಅರ್ಥವಾದುದರಿಂದ ಈ ಬ್ರಾಹ್ಮಣರ ನೆಲೆಸಿದ ವಿಸ್ತಾರವು ಹಿಂದಿನ ಕಾಲದ 'ದೇಶಸ್ಥ'ವೆಂಬ ಹೆಸರಿನ ಪ್ರದೇಶವನ್ನು ಸೂಚಿಸುವುದು. ಅಲ್ಲದೆ ಕರ್ಹಾಟ ಬ್ರಾಹ್ಮಣರುಂಟು; ಕೊಂಕಣಸ್ಥ ಅಥವಾ ಚಿತ್ಪಾವನರುಂಟು.

ಕಾಶ್ಮೀರ-ಸರಸ್ವತೀ ತೀರದಿಂದ ಸಾರಸ್ವತರೂ ಮತ್ತು ಸಹವಾಸಿಗಳೂ ಗೌಡದೇಶದಿಂದ ಗೌಡರೂ ಇಲ್ಲಿ ಬರುವ ಮೊದಲೆ ಕಂನಾಡಿನಲ್ಲಿ ನಾಡಿನ ಮೇಲಿಂದ ಬ್ರಾಹ್ಮಣರ ಪಂಗಡಗಳು ಆಗಿಬಿಟ್ಟಿರಲಿಕ್ಕೆ ಬೇಕು. ಆದುದರಿಂದಲೆ, ಅವರಿಗೆ ಮೊದಲೆ ನೆಲೆಯಾಗಿದ್ದ ಇಲ್ಲಿಯವ ರೊಡನೆ ಒಂದಾಗಲು ಹೊಸದಾಗಿ ಬಂದವ ರಾದುದರಿಂದ ತೊಂದರೆಯಾಯಿತು. ಹಲಕಾಲದಿಂದ ಇಲ್ಲಿ ಮೊದಲು ನೆಲೆಸಿದವರ ನಡೆವಳಿಗಳು ಇಲ್ಲಿಯವರಂತೆ ಮಾರ್ಪಟ್ಟಿದ್ದುವು; ಉತ್ತರದಿಂದ ಬಂದವರ ರೂಢಿ ಸಂಪ್ರದಾಯಗಳು ಕೆಲವೊಂದು ಭಿನ್ನವಾಗಿರುವುದೂ, ಇಲ್ಲಿಯ ದೇಶಸ್ಥರು ಅವರಿಂದ ಸ್ವಲ್ಪ ದೂರವಾಗುವುದಕ್ಕೆ ಕಾರಣವಾಗಿರಬೇಕು. ಈ ಕಾರಣದಿಂದ ಬ್ರಾಹ್ಮಣರ ಈ ಪಂಗಡಗಳು ಹನ್ನೆರಡನೆಯ ಶತಮಾನದ ಸುಮಾರಿಗೆ ಬಂದಿರಬಹುದೆಂದು ತೋರುತ್ತದೆ. ಚಾಲುಕ್ಯ ವಿಕ್ರಮಾಂಕದೇವನ ಓಲಗದ ವಿದ್ವಾಂಸನಾದ ಬಿಲ್ಹಣನು ಕಾಶ್ಮೀರದ ಪಂಡಿತನು. ೧೧-೧೨ನೆಯ ಶತಮಾನದಲ್ಲಿ ಮಲೆಯಾಳ ಪಂಡಿತರೂ ಕಂನಾಡಿನಲ್ಲಿ ಬಂದು ಶಿಷ್ಯಕೋಟಿಯಿಂದ ಸನ್ಮಾನ ಹೊಂದುತ್ತಿದ್ದರೆಂದು ಕೆಲವು ಶಾಸನಗಳ ಮೇಲಿಂದ ತಿಳಿದುಬರುತ್ತದೆ. ಗದಗು ತಾಲೂಕಿನ ಎಲೆಯ ಪಸುಂಡಿ (ಅಸುಂಡಿ) ಗ್ರಾಮದ ಶಾಸನದಲ್ಲಿ ಇಂತಹ ಒಂದು ಉಲ್ಲೇಖವಿದೆ. ಅಣ್ಣಿಗೆರೆಯ ನಕರೇಶ್ವರ ದೇವಾಲಯದ ಮಲೆಯಾಳ ಪಂಡಿತರು ಯಮನಿಯಮ ಸ್ವಾಧ್ಯಾಯಧ್ಯಾನಧಾರಣ ಮೌನಾನುಷ್ಠಾನ ಪರಾಯಣರೆಂದು ಹೆಸರಾಗಿದ್ದರಂತೆ. ಇದರಂತೆ ದ್ರಾವಿಡ ಬ್ರಾಹ್ಮಣರೂ ಬಂದುದುಂಟು

ರಾಜರಲ್ಲಿ ಆಶ್ರಯ ಹೊಂದಲು ನಾನಾದೇಶದ ಬ್ರಾಹ್ಮಣರು ಕಂನಾಡಿಗೆ ಬಂದಿರುವುದು ಸ್ವಾಭಾವಿಕವಾಗಿದೆ. ಶಾತವಾಹನ, ಕದಂಬ, ಗಂಗ, ಚಾಲುಕ್ಯ, ರಾಷ್ಟ್ರಕೂಟ, ಯಾದವ, ವಿಜಯನಗರ ಮೊದಲಾದ ಅರಸರ ಕಾಲದಲ್ಲಿ ಅನೇಕ ಶಾಸ್ತ್ರ, ಸಾಹಿತ್ಯ, ವಿದ್ಯೆಗಳಲ್ಲಿ ನಿಷ್ಣಾತರಾದ ಜನರು ಇಲ್ಲಿಗೆ ಹೊರನಾಡುಗಳಿಂದ ಬಂದಿರುವುದು ಸೋಜಿಗವಲ್ಲ. ಒಂದೊಂದು ಅಗ್ರಹಾರಾದಿಗಳಲ್ಲಿ ಸಾವಿರಾರು ಬ್ರಾಹ್ಮಣರಿದ್ದ ಉಲ್ಲೇಖಗಳೂ ದೊರೆಯುತ್ತವೆ.

ಇನ್ನುಳಿದ ಕೆಲಜನ

ಅರ್ವಾಚೀನ ಕಾಲದಲ್ಲಿ ಇನ್ನೂ ಹಲವು ಜಾತಿಯ ಜನಗಳು ಕಂನಾಡಿಗೆ ಬಂದಿವೆ. ಅವರೆಲ್ಲರನ್ನೂ ಸೂಚಿಸುವ ಸ್ವತಂತ್ರ ಎಡೆಯ ಹೆಸರುಗಳು ಸಿಕ್ಕುವುದು ದುರ್ಲಭ. ಊರ ಓಣಿಕೇರಿಗಳ ಹೆಸರಿನಲ್ಲಿ ಅವು ಕೆಲವೆಡೆಗೆ ದೊರೆಯುತ್ತದೆ. ಆದರು, ಮುಸಲ್ಮಾನರ ಹೆಸರಿನ ಊರುಗಳ ಸಂಖ್ಯೆಗೆ ಕೊರತೆಯಿಲ್ಲ. ಫಿರಂಗಿ ಪೇಟೆ, ಫ್ರೆಂಚರಾಕ್ ಎಂಬವು ಯುರೋಪೀಯರು ಬಂದು ನೆಲೆಸಿದ ಕುರುಹುಗಳು. ವೈಟಫೀಲ್ಡ್, ಬ್ರೌನಿಂಗ ಪೇಟೆ, ಫ್ರೇಸರ ಪೇಟೆಗಳಂತಹ ವೈಯಕ್ತಿಕ ಹೆಸರಿನ ಸ್ಮಾರಕಗಳ ಊರುಗಳೂ ಹಲಕೆಲವು ತಲೆದೋರಿವೆ.

ಟಿಪ್ಪಣಿ

೧. ***Explorations of Sind***; p. 154
೨. ***Epigraphia Carnatica,*** Vol. K. IX
೩. Ibid, Karn. IIIMI. P. 112
೪. Ibid, Vol. VIII
೫. ***Tribes and Castes of Bombay Presidency,*** Vol. II, p. 57
೬. ***Linguistic Survery of India,*** Vol. I, Part I, p. 144
೭. ***Tribes and Castes of C. P. I.,*** p. 51
೮. ***Tribes and Castes of Nizams Dominion,*** Vol. I, p. 248-255
೯. ***Epigraphia Indica,*** Vol. III
೧೦. ***Epigraphia Carnatica,*** Vol. Kar. VII. I, Pp. 20, 23
೧೧. ***ಶತಪಥ ಬ್ರಾಹ್ಮಣ,*** XIII ೮.೧.೫
೧೨. ***Epigraphia Indica,*** Vol. IV. p. 73-74

ಕುಡುವರು: ನಾಡವರು: ರಡ್ಡಿಗಳು

ಕುಡುವರು ಯಾರು?

'ಪಟ್ಟಿ'- ಪಾಡಿಯು ನಮ್ಮ ನಾಡಿನ ಮೊದಲಿಗರ ಆರಂಭದ ಪಾಡು ಸೂಚಿಸುವ ಪದವಾಗಿರುವಂತೆ 'ಕುಡಿ' ಅಥವಾ 'ಕುಡು' ಎಂಬುದು ಅದರ ಮುಂದಿನ ಮಟ್ಟವನ್ನು ನಿರ್ದೇಶಿಸುವ ಶಬ್ದವಾಗಿದೆ. 'ಪಟ್ಟಿ' (ಹಟ್ಟಿ)ಯಲ್ಲಿ ದನಗಾರಿಕೆಯ ಪಾಡಿನ ಧ್ವನಿಯಿದ್ದರೆ, 'ಕುಡಿ' ಅಥವಾ 'ಕುರಡು' ಎಂಬಲ್ಲಿ 'ಒಕ್ಕಲ'ತನದ ಆರಂಭವನ್ನು ಹೇಳುವ ಅರ್ಥವು ಅಡಕವಾಗಿದೆ. ಒಕ್ಕಲಿಕ್ಕು ಎಂದರೆ ಕಡಿ, ಕತ್ತರಿಸು ; ಕುಟುಕಿ, ಕುಟ್ಟಿ, ತುಂಡರಿಸಿ, ಉಳಿಯಲಿಕ್ಕೂ, ಬೆಳೆಯಲಿಕ್ಕೂ ಇಂಬನ್ನು ಮಾಡಿಕೊಂಡ ಸೂಚನೆಯು ಕುಡು ಅಥವಾ ಒಕ್ಕಲು ಎಂಬ ಮಾತಿನಲ್ಲಿ ದೊರೆಯುತ್ತಲಿದೆ. ಆದುದರಿಂದಲೆ ಕುಡುವ ಎಂದರೆ ಒಕ್ಕಲು; ಒಕ್ಕಲು ಎಂದರೆ ಕುಡುವ. ಕುಡುವರೆ ನಮ್ಮ ನಾಡಿನ 'ಕುಳಗಳು'. ಕುಟುಂಬಿ ಎಂಬ ಸಂಸ್ಕೃತ ರೂಪದ ಮೂಲವು ಕುಡು ಎಂಬುದರಲ್ಲಿದೆ. ಕುಣಬಿ, ಕುಳಬಿ ಎಂದು ಮರ್ಹಾಟಿಯಲ್ಲಿ ಒಕ್ಕಲರ ಹೆಸರು. ಗುಜರಾತಿಯಲ್ಲಿ ಇದುವೆ ಕಣಬಿ ಎಂದಾಗಿದೆ. 'ಕೃಷೀವಳಂ, ಕರ್ಷಕಂ ಕುಟುಂಬಿ ಎನಿಕ್ಕುಂ' ಎಂದು ಅಭಿಧಾನ ವಸ್ತುಕೋಶದಲ್ಲಿ ಹೇಳಿದೆ. ಆದಕಾರಣ ಕುಟುಂಬಿ ಎಂಬುದರ ಮೂಲ ರೂಪವು ಕುಡುಒಕ್ಕಲು ಎಂಬುದೇ ಆಗಿದೆ.

ಸಸ್ಯಾದಿಗಳಿಂದ ಆಹಾರವನ್ನು ಪಡೆದುಕೊಳ್ಳುವ ವಿಚಾರದಲ್ಲಿ ಪ್ರಗತಿಯಾದಂತೆ ಪಟ್ಟಿಕಾರರು ಹಲವರು ಅಲೆಯುವುದನ್ನು ತೊರೆದು ಕಾಡು ಕಡಿದು, ಅಲ್ಲಲ್ಲಿ ಒಕ್ಕಲಾಗಿ ನಿಲ್ಲಲಾರಂಭಿಸಿದರು. ಈ ಕಾಲದಲ್ಲಿ ಕಟ್ಟಿಕೊಂಡ ಬೀಡುಗಳೆ ಕುಡಿ(ಗುಡಿ)ಗಳು. 'ಪಟ್ಟಿ'ಯಂತೆ 'ಕುಡಿ'ಯೂ ನಮ್ಮ ನಾಡಿನ ಪ್ರಾಚೀನ ಇತಿಹಾಸವನ್ನು ಹೇಳುವ ಅತ್ಯಂತ ಮಹತ್ವದ ಪದವಾಗಿದೆ.

ಕುಡಿ (ಗುಡಿ-ಗುಡಿಸಲು) ವಾಸಕ್ಕೆ ಯೋಗ್ಯವಾದ ಪ್ರಾಥಮಿಕ ಸ್ಥಿತಿಯ ಗುಡಾರ-ಅದುವೆ ಬಿಡಾರ; ಇಲ್, ಕೋಣೆ, ಮನೆ ಎಂಬಿವೆ ಮೊದಲಾದುವು ಕುಡಿ-ಗುಡಿಗಿಂತಲೂ ಮುಂದಿನ ಕಾಲದ ವಿಶೇಷ ಪ್ರಕಾರದ ಪ್ರಶಸ್ತವಾದ ಬಿಡಾರಗಳೆಂದು ಆ ಪದಗಳೇ ಹೇಳುತ್ತವೆ. ಪಟ್ಟಿ-ಪಾಡಿ ಎಂದರೆ ಪಟ್ಟುಕೊಂಡಿರುವ ಎಡೆ, ದನದ ಹಕ್ಕಿ ಎಂದು ಇಷ್ಟೆ ಒಮ್ಮೆ ಆರಂಭದಲ್ಲಿ ಅರ್ಥವಿದ್ದರೂ ಅದುವೆ ವಾಡಿ, ವಾಡಾ, ವಾಡೆ ಎಂಬ ರೂಪದಲ್ಲಿ ಕಂನಾಡ ಉತ್ತರ ಮೇರೆಯಲ್ಲಿಯೂ ಮಹಾರಾಷ್ಟ್ರದಲ್ಲೂ ವಿಶಾಲವಾದ ವಾಸಸ್ಥಾನ, ಮಹ(ಡಿ) ಮನೆ-ವಠಾರು (ಪಾಟರು=ವಾಡಿ) ಓಣಿ ಎಂಬರ್ಥದಲ್ಲಿ ರೂಢವಾಗಿದೆ. ಅದರಂತೆ ಗುಡಿಸಲೆಂಬಲ್ಲಿ ಪ್ರಾಥಮಿಕ ರೂಪದಲ್ಲಿ ಕಾಣಿಸಿಕೊಳ್ಳುವ ಕುಡಿಯೇ ಮುಂದೆ ಕಾಲಕ್ರಮದಲ್ಲಿ 'ಗುಡಿ' ಎಂಬಲ್ಲಿ (ದೇವಾಲಯದ) ಹೆಚ್ಚಿನ ಪ್ರಾಶಸ್ತ್ಯ, ಪಾವಿತ್ರ್ಯಗಳನ್ನು ಪಡೆದುದನ್ನು ಕಾಣಬಹುದು.

ನಮ್ಮ ನಾಡಿನ ಊರುಗಳಲ್ಲಿ ಪಾಡಿಯು ಅತಿ ಪುರಾತನದ್ದು. ಅದರ ತರುವಾಯದ್ದು ಕುಡಿ-ಗುಡಿ; ಆದರೆ, ಪಾಡಿ ಮತ್ತು ಕುಡಿ ಎಂಬ ಎಲ್ಲ ಊರುಗಳೂ ಒಂದೇ ಕಾಲಕ್ಕೆ ತಲೆಯೆತ್ತಿದುವು; ಎಲ್ಲವೂ ಅಷ್ಟೇ ಪ್ರಾಚೀನವೆಂದು ಮಾತ್ರ ಭಾವಿಸಲಾಗದು: ಕುಡಿ-ಕುಡು ಎಂಬುದರ ಕೋಡು ಎಂದರೆ ಪರ್ವತದ ಶಿಖರ, ಕೊಂಬು ಎಂಬರ್ಥದ ಊರುಗಳನ್ನು ಬಿಟ್ಟರೆ ಉಳಿದುವು-ಕುಡಿ, ಗುಡಿ, ಕೊಡು, ಗೊಡು, ಕೋಡು, ಗೋಡು ಎಂಬುವೆಲ್ಲವು ಒಂದೇ ಬಳಗದುವು ಎಂದು ಹೇಳಲು ಅಡ್ಡಿಯಿಲ್ಲ. ಇಂತಹ ಊರುಗಳು ನಮ್ಮ ನಾಡಿನ ಎಲ್ಲ ಭಾಗದಲ್ಲೂ ಇವೆ. ಕುಡಚಿ, ಗೊಡಚಿ, (ಪಟ್ಟಣ) ಕುಡಿ, (ಚಿಕ್ಕ ಮತ್ತು ಹಿರಿಯ) ಕೋಡಿ, ಗುಡಿ-ಗೇರಿ, -ಬಂಡಿ, -ಸಾಗರ, - ಊರ, -ಪಾಡಿ, ಮೊದಲಾದುವು ಇದಕ್ಕೆ ನಿದರ್ಶನ. ಪಾಡಿಗಳು, ನಂದಗ್ರಾಮಗಳು, ಗೋಪಾಡಿಗಳು, ಕುರಿಗ್ರಾಮಗಳು ಮೊದಲಾದುವು ನಮ್ಮ ನಾಡಿಗರ ಹಟ್ಟಿಕಾರ-ದನಗಾರಿಕೆಯ ಸೂಚಕವಾಗಿರುವಂತೆ ಕುಡಿ, ಗುಡಿಗಳು ನಮ್ಮ ಕುಡು-ಒಕ್ಕಲರ ಆರಂಭವನ್ನು ಹೇಳುವ ಊರುಗಳಾಗಿವೆ. ಹಟ್ಟಿಕಾರರು ಒಕ್ಕಲರಾದ ಬಳಿಕ ನೇಗಿಲ ಯೋಗಿಗಳಾದ ಈ ಕುಡುವರಿಂದಲೇ ನಮ್ಮ ನಾಡಿನ ಮುಂದಿನ ಏಳ್ಗೆಗೆ ಆರಂಭವಾಯಿತು

ಕುಡಿಯ ಬಳಿಕ ಪೊಲ, ಪೊಟಿಲುಗಳು ಬೆಳೆದುಬಂದುವು. ಪೊಳಲುಗಳ ಪ್ರಾಚೀನತೆಗೆ ಮುದಿಪೊಳಲು= ಮುದುವೊಳಲು (ಮುಧೋಳ) ಎಂಬ ಊರುಗಳೇ ಸಾಕ್ಷಿ. ನಿಜಾಂ ಕಂನಾಡು, ಉತ್ತರ ಕಂನಾಡುಗಳಲ್ಲಿ ಕೂಡಿ ಮುದಿವೊಳಲುಗಳು ಮೂರು-ನಾಲ್ಕು ಇವೆ. ಪೊಲ(ಹೊಲ), ಪೊಳಲು (ಹೊಳಲು)ಗಳಂತೆ ತೋಟ, ಪಟ್ಟಿ, ಗದ್ದೆ ಊರುಗಳೂ, ಇವೆಲ್ಲ ಕುಡಿಯ ಮುಂದಿನ ವಿಕಾಸದ ಎಡೆಗಳು. ಹೊಲ ಎಂಬುದರ ಮೂಲ ರೂಪವು ಪುಲ; ಪುಲ ಎಂದರೆ ಪುಲ್-ಹುಲ್ಲು ಬೆಳೆವ ಭೂಮಿ. ನೀರಿನ ಎಡೆಯ ಪ್ರದೇಶವೆಂದರ್ಥವಾಗುವುದು. ಪೊಳಲು ಎಂದರೂ ಹೀಗೆಯೆ; ಅದರಲ್ಲೂ ಔಚಿತ್ಯವುಂಟು. 'ಪೊಟಿಲ್' ಎಂದರೆ ತಮಿಳಿನಲ್ಲಿ ತೋಟ, ಬನವೆಂದರ್ಥವಿದೆ.

ಕೆರೆ, ಕಟ್ಟಿ, ಕುಂಟೆ, ಗುಂಟೆ, ಕೊಳ, ಹೊಳೆ, ಹಳ್ಳ, ಕೆರೆ, ತೊರೆ, ಝುರಿ, ಬಾವಿ, ಹೊಂಡ, ಮೊದಲಾದುವು. ಇವು ಒಕ್ಕಲತನಕ್ಕೂ ಇರುವುದಕ್ಕೂ ಅನುಕೂಲವಾದ ಜಲಾಶಯಗಳ ಗುಂಟ ಊರುಗಳು ಹೇಗೆ ಬೆಳೆದುವೆಂಬುದನ್ನು ತೋರಿಸುತ್ತವೆ. ಗುಡಿಗೆರೆ (ಕುಡಿಕೆರೆ) ಗುಡಿಗುಂಟೆ (ಕುಡಿಕುಂಟ), ಗುಡಿಸಾಗರಗಳು ಇದಕ್ಕೆ ನಿದರ್ಶನ. ಪಟ್ಟಿ ಎಂಬುದಕ್ಕೆ ತೋಟವೆಂಬರ್ಥವೂ ದೊರೆಕೊಂಡುದು ಈ ಕಾಲದಲ್ಲಿಯೇ ಪೊಳಲು ಎಂಬುದೂ ಈ ಮಾತನ್ನು ಪುಷ್ಟೀಕರಿಸುತ್ತದೆ.

ಕುಡುವರ ಏಳ್ಗೆಯಾದಂತೆ ನಾಡಿನಲ್ಲಿ ಧಾನ್ಯಾದಿಗಳ ಸಮ್ಮದ್ಧಿಯಾಗುವುದು ಸಹಜ. ಬೆಳೆದ ಮೇಟಿಯ ಒಕ್ಕಲು ಕ್ರಮವಾಗಿ ವ್ಯಾಪಾರಕ್ಕೆ ಕೈಯಿಕ್ಕಿರುವುದು ಸ್ವಾಭಾವಿಕ. ಬಳಿಕ ಪಟ್ಟಿ (ಹಟ್ಟಿ)ಯು ಪೇಟೆಯಾಯಿತು. 'ಹಟ್ಟ' ಶಬ್ದಕ್ಕಿರುವ 'ಪೇಟೆ ಯೆಂಬರ್ಥವು ಮನನೀಯವಾಗಿದೆ. ಖೇಟ ಅಥವಾ ಖೇಡವೆಂಬ ಸಂಸ್ಕೃತ ಜನ್ಯ ಶಬ್ದದಲ್ಲೂ ಒಕ್ಕಲತನದ ಊರೆಂಬ ಧ್ವನಿಯಿದೆ. ಇದು ಮೂಲ ಸಂಸ್ಕೃತ ಪದವಲ್ಲ. ಪಾಕೃತದಿಂದ ಸಂಸ್ಕೃತದಲ್ಲೂ ದೇಶಭಾಷೆಗಳಲ್ಲೂ ಸೇರಿದೆ. ಕುಡಿ ಎಂದರೆ ಒಕ್ಕಲರ ಊರು, ಎಂಬಂತೆ ಖೇಡ ಅಥವಾ ಖೇಟವೆಂದರೂ ಅದೇ ಅರ್ಥವೆ ಇದೆ. ಖೇಟ ಅಥವಾ ಖೇಡವನ್ನು ಕ್ಷೇತ್ರ, ಖೇತಗಳೊಡನೆ ಹೋಲಿಸಿ ನೋಡಬಹುದು. ಖೇಡ ಧಾತುವಿಗೆ ಪ್ರಾಕೃತದಲ್ಲಿ ಕೃಷ್, ಒಕ್ಕಲತನ ಮಾಡು ಎಂದರ್ಥವಿದೆ. ಆದ ಕರಾಣ ಖೇಡ (ಹಳ್ಳಿ) ಎಂಬ ನಾಮಪದವು ಖೇಡ (ಒಕ್ಕಲುತನ ಮಾಡು) ಧಾತುವಿನಿಂದ ಬಂದಿತೆಂದು ಊಹಿಸಿದರೆ ತಪ್ಪಾಗಲಾರದು. ಮರ್‍ಹಾಟಿಯಲ್ಲಿ ಖೇಡಗಾವ ಎಂದು ಹಳ್ಳಿಗೆ ಹೆಸರು. ಖೇಟ-ಖೇಡಗಳಿಗೆ ಕೆಲವು ಕೋಶಗಳಲ್ಲಿ ಮಣ್ಣು ಗೋಡೆಯ ಪ್ರಕಾರವಿದ್ದ ಪಟ್ಟಣ, ನದಿ ಅಥವಾ ಪರ್ವತದ ನೆರೆಯ ದೊಡ್ಡ ಊರು ಎಂದು ಅರ್ಥ ಕೊಟ್ಟಿದೆ. ಆದರೆ, ಇದು ಆರಂಭದ ಮೂಲಾರ್ಥವಲ್ಲ. ಮುಂದಿನ ಕಾಲದಲ್ಲಿ ಪ್ರಾಪ್ತವಾದ ವಿಶೇಷಾರ್ಥ.

ಮೂಲದಲ್ಲಿ ಖೇಟವು ಕೃಷಿವಳರ ಊರೆಂದೇ ಅರ್ಥವುಳ್ಳುದ್ದಾಗಿದೆ. ಈಗ ಕೆಲವು ಊರುಗಳ ಕೊನೆಗೆ ಖೇಟವೆಂಬಂತೆ ಖೇತವೆಂದಿರುವುದೂ ಇಲ್ಲಿ ವಿಚಾರಾರ್ಹವಾಗಿದೆ.

ಇಂತೀ ಬಗೆಯಾಗಿ ಹಟ್ಟಿಕಾರರು ಅಲ್ಲಲ್ಲಿ ನಟ್ಟುಕೊಂಡು ನಾಟಿಕೊಂಡು ನೆಲೆಯಾದರು. ಆಗ ನಾಡುಗಳು ಉಂಟಾದುವು. ದೇಶವಾಚಕವಾಗಿ ಇದ್ದ ಪಾಡಿ, ಹಟ್ಟಿ ಎಂಬ ಪದಗಳನ್ನು ಹಿಂದಿಕ್ಕಿ ನಾಡು ಎಂಬುದು ಮುಂದುಬರಲಾರಂಭಿಸಿತು. 'ಹೊಲ', 'ಹೊಳಲಿಸಂತೆಯೆ' ನಾಡು ಇದರ ಮೂಲವೂ ಒಕ್ಕಲತನದಲ್ಲಿಯೆ ಇದೆ. ಊರು, ವಾಸಸ್ಥಾನವೆಂದಿದ್ದ ಮೊದಲಿನ ಅರ್ಥವು ಬಳಿಕ ವಿಸ್ತೃತವಾಗಿ ಪ್ರದೇಶವೆಂದು ಬದಲಾಯಿತು. ಪಾಡಿಯ ಜನಗಳು ಪಟ್ಟಿ (ಪತ್ರಿ)ಗಳು ಎನೆಸಿದಂತೆ ನಾಡಿನ ಜನಗಳು ನಾಡವ (ನಾಟ್ಟವ)ರು ಎಂದು ಕರೆಯಲ್ಪಟ್ಟರು. ಪತ್ತಿಗಳ ಉಲ್ಲೇಖವು ಯಜುರ್ವೇದದಲ್ಲಿ ದೊರೆತರೆ, ಮನುಸ್ಮೃತಿಯಲ್ಲಿ ನಟ (ನಾಡವ)ರ ಹೆಸರು ಸಿಕ್ಕುತ್ತದೆ. (ಮನು. ೧೦. ೨೩) ಆದುದರಿಂದ ಮನುಸ್ಮೃತಿಯ ಕಾಲದ ಸುಮಾರಿಗೆ ನಮ್ಮ ನಾಡುಗಳು ತಲೆಯೆತ್ತಿ ಕೊಂಡಿದ್ದುವೆಂದು ಊಹಿಸಬಹುದಾಗಿದೆ. ಮನುಸ್ಮೃತಿಯ ರಚನಾ ಕಾಲವು ಮಹಾಮಹೋಪಾಧ್ಯಾಯ ಪಿ. ವಿ. ಕಾಣೆ ಅವರ ಅಭಿಪ್ರಾಯದಂತೆ ಕ್ರಿ. ಶ. ದ ಮೊದಲು ೨೦೦ ರಿಂದ ಕ್ರಿ.ಶ. ದ ತರುವಾಯ ೨೦೦ ವರೆಗೆ ಇದೆ. ಆದಕಾರಣ ಕ್ರಿಸ್ತಾಬ್ದದ ಆರಂಭದ ಸುಮಾರಿಗೆ ಕಂನಾಡ ಮೊದಲಿಗರು ಹಟ್ಟಿಕಾರಿಕೆಯಿಂದ ಕುಡುವರು, ನಾಡವರಾಗಿ ಬಾಳುತ್ತಿದ್ದರೆಂದು ಗೊತ್ತು ಪಡಿಸಬಹುದಾಗಿದೆ.

ಪಾಡು (ಬಾಡು) ಕುಡು ಮತ್ತು ನಾಡು ಎಂಬಿವು ನಮ್ಮ ನಾಡವರ ಬಾಳಿನ ಬೆಳೆಯ ಮೂರು ಮಹತ್ವದ ಘಟ್ಟಗಳಾಗಿವೆ. ಆರಂಭದಲ್ಲಿ ಪಾಡಿ, ಕುಡಿ, ಊರು ಅಥವಾ ನಾಡು ಎಂದು ಮುಂತಾಗಿ ಬರಿ ಈ ಸ್ಥಳ ವಾಚಕಗಳೇ ತಲೆದೋರಿರಬೇಕು. ಆದರೆ, ಇಂತಹವು ಅಲ್ಲಲ್ಲಿ ಹಲವು ಬೆಳೆದುಕೊಂಡು ಬಂದಂತೆ ಇವುಗಳನ್ನು ವಿಂಗಡಿಸಿ ತೋರುವ ಒಂದು ವಿಶೇಷ ಪದದ ಆವಶ್ಯಕತೆಯು ಉಂಟಾಗಿರುವುದು ಸಹಜ. ಆಗ ಅವುಗಳ ಮೊದಲು, ಇಂತಹ ಪಾಡಿ, ಇಂತಹ ಕುಡಿ, ಇಂತಹ ನಾಡು ಎಂದು ಸೂಚಿಸುವ ವಿಶೇಷ ಪದವೊಂದು ಸೇರಿಕೊಂಡಿತು. ಆದಕಾರಣ, ಬರಿ ಪಾಡಿ, ಪಟ್ಟಿ (ಹಟ್ಟಿ) ಕುಡಿ (ಚಿ), ನಾಡು ಎಂದಿರುವ ಎಡೆಗಳು ಉಳಿದುವುಗಳಿಗಿಂತ ಹೆಚ್ಚು ಪುರಾತನವಾಗಿರಬೇಕೆಂದು ನನ್ನ ತಿಳುವಳಿಕೆ. ಈ ದೃಷ್ಟಿಯಿಂದ ಕುಡಿಚಿಯಲ್ಲಿ ಪುರಾತನದ ಕುರುಹುಗಳು ಈವರೆಗೆ ಏನೂ ಕಾಣಿಸಿಕೊಂಡಿಲ್ಲವಾದರೂ ಗೊಡಚಿಯಲ್ಲಿ ಏನೊ ಸ್ವಲ್ಪ ಪ್ರಾಚೀನತೆಯ ಅವಶೇಷಗಳಿವೆ. ಇದು ಒಂದು ಪ್ರಾಚೀನ ಕ್ಷೇತ್ರಸ್ಥಾನವಾಗಿದೆ. ಆದರೆ, ಇವೆಲ್ಲಕ್ಕಿಂತ ಹಟ್ಟಿ (ನಿಜಾಂ)ಯಲ್ಲಿ ಈ ಮೊದಲು ಹೇಳಿರುವಂತೆ, ಇರುವ ಹೊನ್ನಗಣಿಗಳು ಭರತಖಂಡಲ್ಲಿಯೇ ಅತಿ ಪುರಾತನದುವೆಂದು ಸಂಶೋಧಕರು ನಿರ್ಣಯಿಸಿದ್ದಾರೆ.

ಒಕ್ಕಲ (ಕುಡುವ)ರು ನಾಡವರು ಬೇರೆ ಬೇರೆಯಾಗಿ ಬೆಳೆದುಕೊಂಡು ಅವರಲ್ಲಿ ಹತ್ತುಗೆಯಿಲ್ಲವೆನಿಸುವಷ್ಟು ಇಂದು ದೂರವಾಗಿದ್ದಾರೆ. ಆದರು ಒಕ್ಕಲುತನವು ಇವರಿಗೆ ದೂರವಾಗಿಲ್ಲ. 'ಒಕ್ಕಲ್ಮೆ' One of the Cultivating Class called Bants; a Bant ಎಂದು ತುಳುಕೋಶದಲ್ಲಿದೆ. ಇದು ಗಮನಾರ್ಹವಾದ ಸಂಗತಿ. ತಮಿಳಿನಲ್ಲಿ ನಾಟ್ಟವನ್ ಎಂದರೆ ಒಕ್ಕಲ, ಕುಡುವನೆಂದು ಅರ್ಥವಿದೆ.

ನಾಡವರು ಯಾರು?

ಕರ್ಣಾಟವೆಂದು ಸಂಸ್ಕೃತದಲ್ಲಿ ರೂಢವಾಗಿರುವ ಮಾತು ಮೂಲದಲ್ಲಿ ಸಂಸ್ಕೃತವಾಗಿರಲಾರದೆಂದು ಕಾಲ್ಡವೆಲ್ಲ ಪ್ರಭೃತಿಗಳು ಊಹಿಸಿ ಹೇಳಿದರು. ಆ ಊಹೆಗೆ ಇಂದು ಶಾಸನಾದಿಗಳ ಆಧಾರವೂ ದೊರೆತಿದೆ. 'ಕಂನಾಡು' ಎಂಬ ಪದವನ್ನು ಸಂಸ್ಕೃತಕ್ಕೆ ತಿರುಗಿಸಿಕೊಂಡಾಗ ಅದು 'ಕರ್ಣಾಟ'ವಾಗಿದೆಯೆಂದು ತಜ್ಞರು ಈಗ ನಿರ್ಧರಿಸಿದ್ದಾರೆ. 'ಕಂನಾಡು' ಎಂಬ ಉಲ್ಲೇಖವಿರುವ ಹಲವು ಶಾಸನಗಳು ಕರ್ನೂಲ ಜಿಲ್ಹೆಯಲ್ಲಿ ದೊರೆತಿವೆ. ತಮಿಳ ಶಾಸನಗಳಲ್ಲಿಯೂ, ಸಾಹಿತ್ಯದಲ್ಲಿಯೂ ಈ ಪದವು ಹಲವೆಡೆಗಳಲ್ಲಿ ಬಂದಿದೆ. ಅಲ್ಲದೆ 'ಕನ್ನಡ'ವೆಂದು ಬಳಿಕೆಯಲ್ಲಿರುವ ಶಬ್ದದ ಮೂಲರೂಪವು ಕಂನಾಡು ಎಂದೇ ಇದೆ. ಇದನ್ನು ಕುರಿತು ಬಲ್ಲಿದರಲ್ಲಿ ಒಮ್ಮತವಿದೆ.

ರೂಢಿಯ ಒತ್ತಾಯಕ್ಕೆ ಸೋತುದರಿಂದ 'ಕನ್ನಡ'ವೆಂಬ ಅಶುದ್ಧ ಪದವು ಇಂದು ನಮ್ಮ ನಾಲಗೆಯ ಮೇಲೆ ಕುಣಿಯುತ್ತಿದ್ದರೂ ಅದರ ನಿಜವಾದ ರೂಪವು 'ಕಂನಾಡು' ಎಂಬಲ್ಲಿ ಸಂದೇಹಕ್ಕೆ ಎಡೆಯೆ ಇಲ್ಲ. ಕಂನಾಡು ಎಂಬುದು ಒಂದು ಕೂಡು-ನುಡಿ. ಇದರಲ್ಲಿ ಎರಡು ಪದಗಳಿವೆ. 'ಕಂ' ಮತ್ತು 'ನಾಡು' ಎಂದು. 'ಕಂ' ಎಂಬಲ್ಲಿರುವ ಅನುಸ್ವಾರವನ್ನು ಕನ್ ಅಥವಾ ಕಣ್ ಎಂದು ಎರಡು ಬಗೆಯಾಗಿಯೂ ಹೇಳಲು ಅವಕಾಶವಿದೆ. ಆದಕಾರಣ ಇದನ್ನು ಕನ್ ನಾಡು ಅಥವಾ ಕಣ್ ನಾಡು ಎಂದು ಕರೆಯಬಹುದಾಗಿದೆ.

'ಕನ್' ಅಥವಾ 'ಕಣ್' ಎಂದರೆ, ಏನೆಂಬುದನ್ನು ನಿರ್ಧರಿಸಲು ಇಲ್ಲದ ಯಾವ ವಾದದಲ್ಲಿ ಸೇರುವ ಕಾರಣವೆ ಇಲ್ಲ. ಏಕೆಂದರೆ ಈ ಹೆಸರಿನ ಸ್ಥಳಗಳಲ್ಲಿರುವ ಪೂರ್ವಪದವು ಜನಾಂಗವಾಚಕವಲ್ಲದೆ ಅದಕ್ಕೆ ಬೇರೆ ಅರ್ಥವೆ ಇಲ್ಲ. ಈ 'ಕನ್' ಅಥವಾ 'ಕಣ್' ಎಂಬ 'ನಾಡು' ಇವುಂತೆ ನೂರಾರು ಊರುಗಳು ಇವೆ. 'ಕನ್' ಅಥವಾ 'ಕಣ್' ವೆಂದು ಒಂದು ಜನದ ಹೆಸರಾಗಿದೆ. ಈ ಹೆಸರಿನ ಜನಗಳೂ ಸಿಕ್ಕುತ್ತಾರೆ. 'ಕನ್' ಜನಗಳಂತೆ ಕಮ್ಮರೆಂಬ ಜನಗಳು ಉಂಟು.

ಆದರೆ, ನಮ್ಮ ನಾಡವರು ತಮ್ಮ ಪೂರ್ವಪರಂಪರೆಗಳನ್ನು ಸಂಪೂರ್ಣವಾಗಿ ದುರ್ಲಕ್ಷಿಸಿದುದರಿಂದ ಅಥವಾ ಮರೆತುಬಿಟ್ಟುದರಿಂದ ಅವರಿಗೆ ತಾವು ಯಾರು? ತಮ್ಮ ಮೊದಲಿಗರ ಹೆಸರೇನು? ತಮ್ಮ ನಾಡಿನ ವಿಸ್ತಾರವು ಎಷ್ಟಿದ್ದಿತು? ಎಂಬಿವೆ ಮೊದಲಾದ ಯಾವ ಸಂಗತಿಗಳ ಅರಿವೂ ಸ್ಪಷ್ಟವಾಗಿ ಉಳಿಯಲಿಲ್ಲ. 'ಕನ್ನಡ'ವೆಂಬುದು ಭಾಷೆಯ ಹೆಸರೊ ದೇಶದ ಹೆಸರೊ ಮೂಲದಲ್ಲಿ, ಎಂಬುದು ನಿನ್ನೆ ಮೊನ್ನೆಯ ವರೆಗೆ ಕಂನಾಡ ಬಲ್ಲಿದರಿಗೂ ಗೊತ್ತಿದ್ದಿಲ್ಲ! ತಪ್ಪನ್ನೆ ಒಪ್ಪವೆಂದು ಸಾಧಿಸುವ ಪ್ರಯತ್ನಗಳೂ ನಡೆದಿವೇ! ತಪ್ಪು ಪದಪ್ರಯೋಗಗಳಿಂದ ತಿಳುವಳಿಕೆ ಕಡಿಮೆಯಾಗುತ್ತದೆ. ನಾಡಿನಲ್ಲಿ ಬುದ್ಧಿಮಾಂದ್ಯವು ನೆಲೆಗೊಳ್ಳುತ್ತದೆ. ಹಟ್ಟಿಕಾರವೆಂಬುದನ್ನು ಹಟಗಾರವೆಂದು ಬಳಸುವುದರಿಂದ ಕರ್ನಾಟ-ಮಹಾರಾಷ್ಟ್ರಗಳಲ್ಲಿ ಯಾರಿಗೂ ಈ ವರೆಗೆ ಈ ಪದದ ಅರ್ಥವಿಶೇಷವೇ ತಿಳಿಯದೆ ಹೋಯಿತು. ನಮ್ಮ ನಾಡಿನ ಅಷ್ಟೊಂದು ಇತಿಹಾಸವು ಕಗ್ಗತ್ತಲೆಯಲ್ಲಿ ಉಳಿಯಿತು. 'ಕಂನಡ' 'ಕರ್ನಾಟ'ವೆಂಬುದರಿಂದಲೂ ಇದೇ ಹಾಡು. ನಮ್ಮ ನಾಡ ಮೊದಲಿಗರ ಕತೆಯೆ ಮುಗ್ಗಿ ಹೋಗಿದೆ. ಕಂನಾಡು ಎನ್ನುವುದರಿಂದ ಇದು ಕನ್ ಅಥವಾ ಕಣ್ ಎಂಬ ಜನದ ನಾಡೆಂಬ ಮಾತು ಸ್ಪಷ್ಟವಾಗಿ ಹೊಳೆಯುತ್ತದೆ. ಈ ತಿಳುವಳಿಕೆ, ಈ ವಿಚಾರದ ಬೆಳಕು ಬೇಕಾಗಿದ್ದರೆ ಕಂನಡ, ಕರ್ನಾಟವೆಂಬುದಕ್ಕಿಂತಲೂ 'ಕಂನಾಡು' ಎಂದು ಬಳಸುವುದೇ ಲೇಸಲ್ಲವೆ?

'ಕನ್'ರ ಹೆಸರಿನ ಊರುಗಳು ದಕ್ಷಿಣಾಪಥದಲ್ಲಿ ಎಲ್ಲೆಡೆಗೂ ಹರಡಿವೆ. ಅದರಲ್ಲೂ ಇವು ವಿಂಧ್ಯ ನೀಲಗಿರಿಯ ನಡುವಣ ನಾಡಿನಲ್ಲಿ ವಿಶೇಷವಾಗಿವೆ. 'ಕಂನ್'ರೊಡನೆ ಕಮ್ಮರ ಕೆಲವು ಊರುಗಳೂ ಕಮ್ಮಗಾವ (ಖಾಮಗಾವ); ಕಮ್ಮಸಾಂದ್ರ; ಕಮ್ಮೂರು, ಕಮ್ಮವಾರಿಪಲ್ಲೆ ಇಂತಹವು ಕೆಲವು ಅಲ್ಲಿ ಇಲ್ಲಿ ದೊರೆಯುತ್ತವೆ.

'ಕಂನ್'ರ' ಊರುಗಳು

ಖಾನದೇಶ	: ಈ ಹೆಸರೆ ಮೂಲದಲ್ಲಿ 'ಕಂನ್'ದೇಶವೆಂದಿದೆಯೆಂಬುದನ್ನು 'ಕಮ್ಮರೆಯಾದ ಕಂನಡ' ಮತ್ತು 'ಕಂನಡದ ನೆಲೆ'ಗಳಲ್ಲಿ ವಿವರಿಸಿದ್ದಾಗಿದೆ. ಅಲ್ಲಿ ದೊರೆವ ಈ ಹೆಸರಿನ ಹಲವು ಊರುಗಳು ಮೇಲಣ ನಿರ್ಣಯವನ್ನು ದೃಢಪಡಿಸುತ್ತವೆ ಕಾನ್ಹೇರಿ, ಕಾನ್ಹೇರೆ; ಕಣ್ಹೇರವಾಡ; ಕನ್ಹೇರವಾಡಿ; ಖಾನಾಪೂರ (ಕನ್ನಪುರ); ಕನ್ಹಾಳೆ; ಕಾನರ ಖೇಡೆ; ಕಾನ್ಹೆಗಾವ; ಕನಗಾವ; ಖಾನಗಾವ; ಕಾನಡಿ, ಕನದ್ಲಿ
ನಾಸೀಕ ಜಿಲ್ಹಾ	: ಕಾನಡಗಾವ, ಕಾನ್ಹೇರವಾಡಿ;
ಪುಣೆ ಜಿಲ್ಹಾ	: ಕನೆಗಾವ ಕಾನ್ಹೇರಿ; ಖಾನಾಪೂರ (ಕನ್ನಪುರ); ಕನ್ಹೇಶ್ವರ, ಕನ್ಹೇವಾಡಿ; ಕನ್ಹೆ; ಕನ್ಹೋರ;
ರತ್ನಾಗಿರಿ ಜಿಲ್ಹಾ	: ಕನ್ಹೆ; ಕಾನೇರಿ; ಖನವಳಿ (ಕನ್ನವಳ್ಳಿ); ಖನವಲೆ (ಕನ್ನವಳ್ಳಿ);

ಠಾಣೆ ಜಿಲ್ಹಾ	:	ಕಾನ್ಹೇರಿ; ಕನಹೋರ (ಕನ್ನೂರ); ಕನಹೋಳ- (ಕನ್ನಹಳ್ಳಿ ಅಥವಾ ಕನ್ನಹಾಳ), ಕನಹರೆ;
ಸಾತಾರಾ ಜಿಲ್ಹಾ	:	ಖಾನಾಪೂರ ೨; ಕನ್ಹರವಾಡಿ; ಕನ್ಹೇರವಾಡಿ; ಕನ್ಹೇರ; ಕಾನ್ಹೇರ; ಕನ್ಹವಾಡಿ; ಕನೂರ; ಕರ್ಣವಾಡಿ (ಕಣ್ಣವಾಡಿ); ಕನೆಗಾವ;
ಕೊಲ್ಲಾಪೂರ ಸಂಸ್ಥಾನ	:	ಕನವಾಡ; ಕಣೇರಿ ೨, ಕಣ್ಣೇರಿ ೨;
ಸಾಂಗ್ಲಿ ಸಂಸ್ಥಾನ	:	ಕಾನವಾಡಿ; ಖನಗಾವ ೨;
ಮಿರಜ್ ಸಂಸ್ಥಾನ	:	ಕಾನಡವಾಡಿ.
ಸೊಲ್ಲಾಪುರ ಜಿಲ್ಹಾ	:	ಕನ್ಹೆರಗಾವ; ಕನ್ಹಪುರಿ, ಖಾನಾಪೂರ ೨; ಕನ್ಹರವಾಡಿ; ಕನ್ಹೇರಖೇಡೆ;
ವಿಜಾಪೂರ ಜಿಲ್ಹೆ	:	ಖಾನಾಪೂರ ೩; ಖಾನಕೇರಿ (ಕನ್ನಕೇರೆ) ಕನ್ನಾಳ೨; ಕನಮಡಿ; ಕನ್ನೊಳ್ಳಿ; ಕನ್ನಡ; ಕನ್ನಡಗಿ (ಕೊನೆಯವೆರಡೂ ಹಳೆಯ ಶಾಸನಗಳಲ್ಲಿ ದೊರೆಯುತ್ತವೆ). ಕನ್ನಡಿಗೆಯ ಇಂದಿನ ಹೆಸರು ಬಾಬಾನಗರ.
ಬೆಳಗಾವಿ	:	ಕಣಬರಿಗೆ ಖಾನಾಪೂರ ೪; ಕಸದಿ; ಕನೂರ೨; ಖನಗಾವಿ (ಕನ್ನಗ್ರಾಮ); ಖನಹಟ್ಟಿ (ಕನ್ನ ಹಟ್ಟಿ);
ಧಾರವಾಡ ಜಿಲ್ಹಾ	:	ಖಾನಾಪೂರ ೩; ಕನ್ನೇಶ್ವರ; ಕನವಳ್ಳಿ; ಖನ್ನೂರ; ಹಿರೇಕಣಗಿ; ಚಿಕ್ಕ ಕಣಗಿ
ನಿಜಾಂ ಇಲಾಖೆ-		
ಬೀದರ್ ಜಿಲ್ಹಾ	:	ಕನ್ಹಳ್ಳಿ; ಖಾನಾಪೂರ ೨; ಕನ್ ಸಟವಾಡಿ;
ನಿಜಾಮಾಬಾದ್ (ಪ್ರಾಚೀನ		
ಇಂದೂರ) ಜಿಲ್ಹೆ	:	ಕನ್‌ಚರ್ಲಾ; ಕನ್ನಾಪೂರ೨ ; ಕನ್‌ಕಲ್ಲು;
ಔರಂಗಾಬಾದ್ ಜಿಲ್ಹೆ	:	ಕನ್ನಡ (ಊರು ಮತ್ತು ತಾಲ್ಲೂಕು).
ಪರಭಣಿ ಜಿಲ್ಹೆ	:	ಕಾನಪೂರ, ಕಾನ್ಹೋಳ; ಕನ್ಹೆರಗಾವ; ಕಾನ್ಹಡ ಖೇಡ; ಕಾನಡಿ; ಕರ್ಣಹೋಲ್, ಕಾನ್ಹೆ; ಕಾನ್ಹೆಗಾವ.
ಬೀಡ ಜಿಲ್ಹಾ	:	ಕಾನಡಿ೨ ; ಕನ್ಹೇರವಾಡಿ; ಖಾನಾಪೂರ ೨; ಕಾನಾಪೂರ;
ಗುಲಬುರ್ಗಾ ಜಿಲ್ಹಾ	:	ಕಾನಡಿ; ಕಣ್ಣೂರು; ಕೆನ್ನೆ ಕೋಲೂರು; ಖಾನಾಪೂರ ೨; ಕನ್ನೆಹಳ್ಳಿ; ಕಾನಾಗಡ್ಡಾ.
ರಾಯಚೂರ ಜಿಲ್ಹೆ	:	ಖಾನಾಪೂರ; ಕ್ಯಾನೂರ; ಕಣ್ಣರೂ; ಕನ್ನಾರಿ; ಕಾನ್ಹಾಳ; ಕನ್ನೆ ಕೊಪ್ಪ; ಕನ್ಗಲ್ ಕಾನೇಪಳ್ಳಿ;
ಅನಂತಪೂರ ಜಿಲ್ಹೆ	:	ಕನ್ನೆ ಪಳ್ಳಿ; ಕನ್ನಂಪಳ್ಳಿ.
ಬಳ್ಳಾರಿ	:	ಕನ್ನೆಹಳ್ಳಿ
ಕರ್ನೂಲು ಜಿಲ್ಹೆ	:	ಈ ಜಿಲ್ಹೆಯಲ್ಲಿ ಸಿಕ್ಕುವ ಕಂನಾಡ ಮತ್ತು ಕನ್ನೆನಾಡ ಹೆಸರಿನ ಹಲವು ಶಾಸನಗಳು; ಕಣ್ಣ ವಿಷಯ, ಕರ್ಣಾಟಸೀಮಾ ಎಂಬ ಶ್ರೀಶೈಲದ ಹತ್ತರಿನ ಒಂದೇ ಸ್ಥಳಕ್ಕಿರುವ ಎರಡೂ ಹೆಸರು. ಇದು ಶ್ರೀಶೈಲೇಶ್ವರನಿಗೆ ಇರುವ ಹಾಟಕೇಶ್ವರನೆಂಬ ವಿಶೇಷ ನಾಮ. ಇಂತಿವೆಲ್ಲ ಸಂಗತಿಗಳನ್ನು ಒಂದೆಡೆಯಲ್ಲಿ ತಂದು ವಿಚಾರಿಸಿದರೆ ಕರ್ನೂಲು ಎಂಬುದು ಕಣ್ಣನೂರು ಎಂಬುದರ ಅಪಭ್ರಂಶವಿರಬೇಕೆಂದು ಹೇಳಬೇಕಾಗುತ್ತದೆ.
ಕೊಳ್ಳೆಗಾಲ ತಾಲ್ಲೂಕು	:	ಕಣ್ಣೂರು; ಕನ್ನಂಪಾಳ್ಯ
ಕೃಷ್ಣಗಿರಿ	:	ಕನ್ನಾಂಡಹಳ್ಳಿ; ಕಣ್ಣೂರ ಪಟ್ಟಿ
ದಕ್ಷಿಣ ಕನ್ನಡ	:	ಕಣ್ಣೂರ೨; ಕನ್ನಾನ, ಕನ್ಯಾಡಿ, ಕಾಣ್ಯೂರ, ಕನ್ಯ ಕಾನ್ನಂ, ಗಾಡು

ಉತ್ತರ ಕನ್ನಡ : ಕನ್ನೂರು; ಕಾನಗೋಡ ೪; ಕನ್ನೂರ ಹೆಗ್ಗರಣೆಗೆ, ಕನ್ನಿಗೆರೆ; ಕನ್ನಾಡಗಾಲ; ಕಾನಳ್ಳಿ; ಕಾನಗೋಡು; ಕಣಕೊಪ್ಪ; ಕಾನಮುಸುಕಿ; ಕಾನಸೂರ; ಕನಗೊಂಡು.

ಮೈಸೂರ ಸೀಮೆ : ಕನ್ನಮಂಗಲ ೧೮; ಕನ್ನಸವದಿ; ಕನ್ನೂರು ೩; ಕನ್ನ ಸಾಂದ್ರ ೨; ಕನ್ನಂಪಳ್ಳಿ; ಕಣ್ಣಂಬಾಡಿ; ಕನ್ನ ಸಮುದ್ರ; ಕನ್ನಪುರ; ಕನನ ಕಟ್ಟೆ; ಕನ್ನೆನ ಹಳ್ಳಿ; ಕನಕುಪ್ಪ; ಕನ್ನಗೋಡು; ಕನ್ನಿಗಿ; ಕನಡಹಳ್ಳಿ; ಕನ್ನೇನೂರು; ಕನ್ನಗೆರೆ; ಕನ್ನೆ ಕೊಪ್ಪ;

ಇಷ್ಟೊಂದು ವಿಸ್ತೃತವಾದ ನಾಡನ್ನು ಕಟ್ಟಿ ನರ್ಮದೆಯಿಂದ ನೀಲಗಿರಿಯವರೆಗೆ ಕನ್ನರು ತಮ್ಮ ಹೆಸರಿನ ನೂರಾರು ಊರುಗಳನ್ನೂ ಕನ್ನವಾಡ, ಕನ್ನನಾಡು ಕನ್ನದೇಶ ಎಂಬ ಹೆಸರಿನ ದೇಶವಿಭಾಗಗಳನ್ನು ರಚಿಸಕೊಂಡರು. ಈ ಭಾಗಕ್ಕೆಲ್ಲ ಅವರ ಹೆಸರು ಆಯ್ತು. ಕಂನಾಡು, ಕರ್ಣಾಟವೆಂದು ರೂಪತಾಳಿ ಸಂಸ್ಕೃತದಲ್ಲಿ ಸ್ಥಾನ ಪಡೆದಿತು.

ಆದರೆ, ಮುಂದೆ ನಾಡಿನಲ್ಲಿ ನೆಲೆಸಿದ ಜನಗಳು, ಇದನ್ನು ಮೊದಲು ಒಕ್ಕಲಾಗಲು ಹದಗೊಳಿಸಿ ಪಾಡಿ, ಬೀಡು, ಊರುಗಳನ್ನು ಕಟ್ಟಿ ಊರ್ಜಿತ ಸ್ಥಿತಿಗೆ ತಂದ ಆ ಕನ್ನರನ್ನು ಕೃತಜ್ಞತೆಯಿಂದ ನೆನೆಯುವುದು, ಅವರ ಹೆಸರು ಮುಂದೆ ಉಳಿಯುವಂತೆ ಮಾಡುವದು ಕರ್ತವ್ಯವಾಗಿಲ್ಲವೆ? ಕಂನಡ ಅಥವಾ ಕರ್ಣಾಟವೆಂಬುದರಿಂದ ಇವರ ಮೊದಲಿನ ನೆನಹು ಉಳಿದಿರುವುದಿಲ್ಲ. ಕಂನಾಡು ಎಂದು ಬಳಸುವದರಿಂದಲೇ ಅದು ಉಳಿಯಬಲ್ಲದು. ಯಾವ ನಾಡಿನಲ್ಲಿ ನೆಲೆಸಿರುವೆವೊ ಅದರ ಮೊದಲಿಗರ ನೆನಹನ್ನು ಮರೆಯಿಸಿ ಬಿಡುವುದು ಆ ನಾಡಿಗರ ಸಂಸ್ಕೃತಿಗೇ ಒಂದು ಕುಂದು!

ಕಣ್ಣರು ಯಾರು

ಸಂಸ್ಕೃತ ಸಾಹಿತ್ಯದಲ್ಲಿ 'ಕಣ್ಣ' ವೆಂಬುದು 'ಕರ್ಣ'ವೆಂದು ವ್ಯವಹರಿಸುತ್ತದೆ. ಕರ್ಣರ ಉಲ್ಲೇಖವು ಮತ್ಸ್ಯಪುರಾಣದಲ್ಲಿ ಬರುತ್ತದೆ. ಅಲ್ಲಿ ಇವರು ತುರ್ವಸುವಿನ ಪೀಳಿಗೆಯವರೆಂದು ಹೇಳಿದೆ.[೧] ಕರ್ಣರು ಚೋಳ, ಪಾಂಡ್ಯ ಕೇರಳರ ನೆರೆಯಲ್ಲಿ ನೆಲೆಸಿದವರೆಂದೂ ವರ್ಣಿಸಿದ್ದುಂಟು. ಕೇರಳದ ವರೆಗೂ ಕಣ್ಣರ ಊರು (ಕಣ್ಣಾನೂರು)ಉಂಟು. ಕರ್ಣಾಟರು (ಯದು) ತುರ್ವಶರ ರಕ್ತಸಂಬಂಧಿಗಳೆಂದು ಇಲ್ಲಿ ಮತ್ತೆ ಇನ್ನೂ ಒಂದು ಬೇರೆ ಬಗೆಯಿಂದ ಹೊರವಡುತ್ತಲಿದೆ.

ಮನುಸ್ಮೃತಿಯಲ್ಲಿ ಉಲ್ಲೇಖಿತರಾದ 'ಕರಣ'ರು, ಮತ್ಸ್ಯಪುರಾಣದ 'ಕರ್ಣ'ರಿಂದ ಬೇರೆಯಲ್ಲ. 'ಕರಣ' ಮತ್ತು 'ಕರ್ಣ' ಎಂಬ ಎರಡು ಬಗೆಯ ಉಚ್ಚಾರವೇ, ಈ ಶಬ್ದವು ಮೂಲತಃ ಸಂಸ್ಕೃತವಲ್ಲವೆಂಬುದನ್ನು ಸೂಚಿಸುತ್ತದೆ. ಪರಭಾಷೆಯಿಂದ ಎತ್ತಿಕೊಂಡ ಪದಗಳನ್ನು ರೂಢಿಸಿಕೊಳ್ಳುವಾಗ ಪ್ರತಿಯೊಂದು ಭಾಷೆಯಲ್ಲಿಯೂ ಈ ಬಗೆಯಾದ ಒಂದಕ್ಕಿಂತ ಹೆಚ್ಚು ಉಚ್ಚಾರಗಳು ಬಳಕೆಯಲ್ಲಿ ಬಂದ ಉದಾಹರಣೆಗಳು ಪ್ರತಿಯೊಂದು ಭಾಷೆಯಲ್ಲಿಯೂ ಉಂಟು. ಇಂಗ್ರೇಜಿಯಲ್ಲಿ ಸಂಸ್ಕೃತದಿಂದ ಸ್ವೀಕರಿಸಿದ 'ಪಂಡಿತ' ಎಂಬ ಪದವು ಇದಕ್ಕೆ ನಿದರ್ಶನ. Pundit, Pandit ಎಂದು ಎರಡು ಬಗೆಯಾಗಿ ಬರೆದುದನ್ನೂ ಆಕ್ಸಫರ್ಡ ಕೋಶದಲ್ಲಿ ಕಂಡುಕೊಳ್ಳಬಹುದು. ಹಿಂದಿಯಲ್ಲಿ ಅಂಗ್ರೇಜಿ, ಇಂಗ್ರೇಜಿ; ಕಂನುಡಿಯಲ್ಲಿ ಆಂಗ್ಲ ಇಂಗ್ರೇಜಿ ಇಂಗ್ಲೀಷ್, ಇಂಗ್ಲೀಶ್ ಎಂದು ಮುಂತಾಗಿ English ಎಂಬ ಒಂದೇ ಪದಕ್ಕೆ ಭಿನ್ನರೂಪಗಳು! ಇಂತಹ ಉದಾಹರಣೆಗಳು ಬೇಕಾದಷ್ಟಿವೆ. ಆದ ಕಾರಣ ಸಂಸ್ಕೃತದಲ್ಲಿ ದೊರೆವ ಕರಣ ಮತ್ತು ಕರ್ಣ ಎಂಬ ಎರಡೂ ಪದಗಳು ಮೂಲದಲ್ಲಿ ಕಣ್ಣ ಎಂಬ ಒಂದರ ರೂಪಗಳೇ ಆಗಿವೆಯೆಂದು ನಿರ್ಧರಿಸಬಹುದಾಗಿದೆ. ಮನುಸ್ಮೃತಿಯಲ್ಲಿ ಕರಣರೊಡನೆ ನಟರು, ಝಲ್ಲರು, ಮಲ್ಲರು, ದ್ರವಿಡರುಗಳ ಉಲ್ಲೇಖವೂ ಇದೆ. ಇವರೆಲ್ಲ ವ್ರಾತ್ಯಕ್ಷತ್ರಿಯರೆಂದು ಅಲ್ಲಿ ಹೇಳಿದೆ. ದ್ರಾವಿಡರ ಸಮಾನವಾಗಿ ಹೇಳಿದ ಕರಣರು ನಟರೂ ಆರ್ಯೇತರರೆಂಬುದನ್ನು ಇನ್ನೊಂದು ತೆರನಾಗಿಯೂ ಮನಗಾಣಬಹುದಾಗಿದೆ.

ಕರ್ಣರು ನಾಡವರಾದುದು

ಜನಗಳಿಗೆ ಮತ್ತು ದೇಶಗಳಿಗೆ ಹಲವೆಡೆಗಳಲ್ಲಿ ಒಂದಕ್ಕಿಂತ ಹೆಚ್ಚು ಹೆಸರುಗಳಿರುವುದು ಕಂಡುಬರುತ್ತದೆ. ಅದಕ್ಕೆ ಕೆಲವೊಂದು ಕಾರಣಗಳೂ ಉಂಟು. ನಮ್ಮ ರಾಷ್ಟ್ರಕ್ಕೆ ಆರ್ಯಾವರ್ತ, ಭರತಖಂಡ (ಭಾರತವರ್ಷ), ಹಿಂದೂದೇಶ (ಹಿಂದುಸ್ತಾನ) ಎಂಬೀ ಬಗೆಯಾಗಿ ಸಾಧಾರಣವಾಗಿ ಮೂರು ಹೆಸರುಗಳು ಕೇಳಬರುತ್ತವೆ. ತೆಲುಗಿಗೆ ಆಂಧ್ರವೆಂಬ ಇನ್ನೂ ಒಂದು ಹೆಸರಿದೆ. ದ್ರಾವಿಡರಿಗೆ ತಮಿಳರೆಂದು ಕರೆವ ವಾಡಿಕೆಯೂ ಇದೆ. ವ್ಯಕ್ತಿಗಳ ಹೆಸರಿನಲ್ಲಿ ಸಹ ಈ ವಾಡಿಕೆಯುಂಟು.

ಇವುಗಳಲ್ಲಿ ಒಂದು ಹೆರವರಲ್ಲಿ, ಹೊರನಾಡುಗಳಲ್ಲಿ ಪ್ರಸಿದ್ಧವಾಗಿದ್ದರೆ ಇನ್ನೊಂದು ತಮ್ಮವರಲ್ಲಿ, ಒಳದೇಶದಲ್ಲಿ ಪ್ರಚಾರದಲ್ಲಿರುತ್ತದೆ. ನಮ್ಮ ರಾಷ್ಟ್ರಕ್ಕಿರುವ ಹಿಂದೂದೇಶ ಮತ್ತು ಭರತಖಂಡ ಎಂಬ ಹೆಸರುಗಳನ್ನು ನೋಡಬಹುದು. ಹಿಂದೂದೇಶವೆಂಬ ಹೆಸರು ಪ್ರಾಚೀನ ಸಂಸ್ಕೃತ ಗ್ರಂಥಗಳಲ್ಲಿ ಎಲ್ಲಿಯೂ ದೊರೆಯಲಾರದು. ಸಿಂಧೂನದಿಯ ಮೇಲಿಂದ ಈ ನಾಡಿಗೆ ಹಿಂದೂ ದೇಶವೆಂದು, ಸಿಂಧೂ ನದಿಯ ಆಚೆಯ ಹೊರನಾಡಿನವರು ಇಟ್ಟ ಹೆಸರಿದು. ಪ್ರಾಚೀನ ಪರಂಪರೆಯಿಂದ ನಡೆದು ಬಂದ ಹೆಸರೆಂದರೆ ಭರತಖಂಡ ಅಥವಾ ಭಾರತವರ್ಷವೆಂಬುದೇ. 'ಜಂಬೂದ್ವೀಪೇ ಭರತವರ್ಷೇ....' ಎಂಬುದಿದು ನಿತ್ಯಸಂಕಲ್ಪದೊಳಗೆ ನಮ್ಮವರು ಹೇಳುವ ಹೆಸರು. ಆದರೆ, ಈಗ ಭರತಖಂಡವೆಂಬುದಕ್ಕಿಂತ ಹಿಂದೂದೇಶವೆಂಬ ಹೆರವರ ಹೆಸರೆ ವಿಶೇಷ ಪ್ರಚಾರದಲ್ಲಿ ಬಂದಿದೆ! ಮತ್ತು ಅದೇ ಅತಿ ಪುರಾತನ ಕಾಲದಿಂದ ಬಂದ ಹೆಸರೆಂಬಂತೆ ಹಲರು ನೆರೆನಂಬಿ, ಆ ಹೆಸರಿನಲ್ಲಿ ಹೆಮ್ಮೆ ಪಟ್ಟುಕೊಳ್ಳುವುದೂ ಉಂಟು.

ಕರ್ಣಾಟ, ಕಂನಾಡುಗಳ ವಿಚಾರವೂ ಹೀಗೆಯೇ ಇದೆ. ಕರ್ಣಾಟವೆಂಬುದು ಕಂನಾಡ ಹೊರಗಿನವರು ಕರೆಯಲಾರಂಭಿಸಿದ ಹೆಸರು. ಅದು ಸಂಸ್ಕೃತಸಾಹಿತ್ಯದಲ್ಲಿದೆ. ಪೂರ್ವ ಪರಂಪರಾವಿಚ್ಛೇದವಾಗಿ-ಕಂನಾಡು ಎಂಬ ಮೂಲ ರೂಪವು ಮರೆತು ಹೋಗಿ- ನಮ್ಮ ಒಳನಾಡಿನ ಜನಗಳ ಬಾಯಲ್ಲಿ 'ಕನ್ನಡ' ಎಂಬುದೇ ಹೆಚ್ಚಾಗಿ ರೂಢವಾಗಿದೆ.

ಹೆರವರು ಕರೆವ ಹೆಸರು ಬೇರೆಯಾಗುವುದಕ್ಕೆ ಎರಡು ಕಾರಣಗಳುಂಟು: ಹೆರವರು ತಾವೇ ಇಟ್ಟ ಹೆಸರಿದ್ದರೆ ಅದನ್ನು ತಮಗೆ ಅರ್ಥವಾಗುವ ರೀತಿಯಲ್ಲಿ, ಅವರು ತಮ್ಮ ದೃಷ್ಟಿಯಿಂದ ಸಾರ್ಥವಾದುದನ್ನೆ ಇಡುವರು. ಆದರೆ, ಎಷ್ಟೋ ಬಾರಿ, ಒಂದು ದೇಶಕ್ಕಿದ್ದ ಆ ಜನಗಳಿಟ್ಟ ಹೆಸರನ್ನೆ ಹೆರವರು ಎತ್ತಿ ಕೊಳ್ಳಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಆ ಮೂಲ ಹೆಸರು ಹೆರವರ ಬಾಯಲ್ಲಿ ಅವರ ಉಚ್ಚಾರಕ್ಕನುಸರಿಸಿ ಮಾರ್ಪಡುತ್ತದೆ. ಹಿಂದೂದೇಶ ಮತ್ತು ಇಂಡಿಯಾ ಎಂಬುವು ಮೇಲಣ ಎರಡೂ ಪ್ರಕಾರಗಳಿಗೆ ಕ್ರಮವಾದ ಉದಾಹರಣಗಳಾಗಿವೆ. 'ಕರ್ಣಾಟ'ವೆಂಬುದು ಸಂಸ್ಕೃತ ಮತ್ತು ಪ್ರಾಕೃತ ಗ್ರಂಥಗಳಲ್ಲಿ ಈ ನಾಡವರು ಕರ್ಣ, ಕರಣ ಅಥವಾ ಕಣ್ಣರೆಂದು ಉಲ್ಲೇಖಿತರಾಗಿದ್ದಾರೆ. 'ಕರ್ಣ' ಎಂಬುದು ಜನದ ಹೆಸರಾದ ಬಳಿಕ 'ಕರ್ಣಾಟ'ವೆಂಬುದರೊಳಗಿನ 'ಕರ್ಣ'ವು ಹೋಗಲಾಗಿ ಅಟ ಅಥವಾ ನಾಟವೆಂಬ ಪದವು ಉಳಿಯುವುದು. ಇವೆರಡಕ್ಕೂ ಭಾಷೆಯವರೆ ಇಟ್ಟ ಹೆಸರಾಗಿದ್ದರೆ ಅದಕ್ಕೆ ಆ ಭಾಷೆಯಿಂದ ಸರಿಯಾಗಿ ಅರ್ಥವಾಗಬೇಕಾಗಿತ್ತು. ಸಂಸ್ಕೃತ ಭಾಷೆಯಿಂದ ದೇಶವೆಂಬ ಅರ್ಥವಾಗುವುದಿಲ್ಲ. ಕೊನೆಯ ನಾಟವೆಂಬುದು 'ನಾಡು' ಎಂಬುದರ ಒಂದು ರೂಪವಾಗಿರುವುದೆ ನಿದರ್ಶನಕ್ಕೆ ಬರುತ್ತದೆ. ಆದುದರಿಂದ ಕಂನಾಡು ಎಂಬುದೇ ಮೂಲ ಪದವೆಂಬುದು ನಿಶ್ಚಿತ. ಕಣ್ಣರು ನಾಡವರಾದ ಕಾಲದಲ್ಲಿ ಇದು ಕ್ರಿ.ಶ. ೩-ಳನೆಯ ಶತಮಾನದ ಸುಮಾರಿಗೆ ಬಳಕೆಯಲ್ಲಿ ಬಂದಿದೆ.

ಒಳನಾಡಿನಲ್ಲಿಯೆ ಒಂದಕ್ಕಿಂತ ಹೆಚ್ಚು ಹೆಸರುಗಳು ಬಳಕೆಯಲ್ಲಿ ಇರುವುದೂ ಉಂಟು. ಕುಡು-ಒಕ್ಕಲರು ಎಂಬದನ್ನೆ ತಕ್ಕೊಂಡರೆ ಒಂದೇ ಜನಕ್ಕೆ ಇದ್ದ ಎರಡು ಹೆಸರುಗಳನ್ನಿಲ್ಲಿ ಮನಗಾಣಬಹುದು. ಕುಡುವರು ಎಂಬುದು ಒಂದು ಕಾಲದ ಹೆಸರು; ಇದು ಆರಂಭದ್ದು. ಆದರೆ ಇದರಿಂದ ಅರ್ಥವು ಸ್ಪಷ್ಟವಾಗಿ

ತಿಳಿಯದಾದುರಿಂದಲೊ, ಒಕ್ಕಲರು ಎಂಬ ಇನ್ನೊಂದು ಅದೇ ಅರ್ಥದ ಹೆಸರು ಮುಂದೆ ಬಂದಿತು. ಕುಡುವನೆಂದು ತಮಿಳಿನಲ್ಲೂ ಒಕ್ಕಲರಿಗೆ ಹೆಸರಿದೆ. ಅದರಿಂದ ತಾವು ಬೇರೆಯೆಂದು ಸ್ಪಷ್ಟಪಡಿಸಿಕೊಳ್ಳಲು ಒಕ್ಕಲರು ಎಂಬ ಅಚ್ಚ ಕಂನುಡಿಯ ಮಾತು ತಲೆಯೆತ್ತಿರುವ ಸಂಭವವೂ ಇದೆ. ಪ್ರಾಂತಪ್ರಾಂತಗಳಲ್ಲಿ ಭಿನ್ನತೆಯು ಉಂಟಾದಂತೆ ಅವರು ಬಳಸುವ ಪ್ರಯೋಗಗಳಲ್ಲೂ ಅದು ಕಾಣಿಸಿಕೊಳ್ಳುತ್ತದೆ. ಕಂನಾಡು-ಮರ್ಹಾಟಗಳ ಭಾಷೆಯಲ್ಲಿ ಈ ಬಗೆಯ ಉದಾಹರಣೆಗಳು ಸಾಕಷ್ಟಿವೆ. 'ಮೊದಲು' ಎಂಬುದನ್ನು ಮೂಲ ಧನ, ಬಂಡವಾಳವೆಂಬರ್ಥದಲ್ಲಿ ನಯಸೇನನು (೧೨ನೆಯ ಶತಮಾನ) ಬಳಸಿದ್ದಾನೆ. ಇದು ಮರ್ಹಾಟಿಯಲ್ಲಿ 'ಮುದ್ದಲ' ಎಂದು ಈಗಲೂ ಉಳಿದಿದೆ. ಕಂನಾಡವರು 'ಅಸಲು' ಎಂಬ ಪರಕೀಯ ಪದವನ್ನು ರೂಢಿಸಿಕೊಂಡಿದ್ದಾರೆ. ಮುದಲು ಮರ್ಹಾಟಿಯ ಮಾತೆಂದು ಹಲವರು ನಂಬಿರುವುದು ಕಂಡುಬರುತ್ತದೆ. ಪಾಟೀಲ ಮತ್ತು ಗೌಡ ಎಂಬ ಎರಡು ಪರ್ಯಾಯ ಶಬ್ದಗಳು ೧೨ನೆಯ ಶತಮಾನಕ್ಕೆ ಮೊದಲಿನಿಂದಲೂ ನಡೆಯುತ್ತ ಬಂದಿದ್ದರೂ ಗೌಡ-ಗಾಮುಂಡವನ್ನು ನಮ್ಮ ಲೇಖಕರು ಬಳಸಿರುವರೆ ಹೊರತು ಈ ನಾಡವರದೇ ಆದ ಪಾಟಿಲ (ಪಟ್ಟಿ ಇಲ್ಲ) ಶಬ್ದವನ್ನು ಉಪಯೋಗಿಸಲಿಲ್ಲ! ಪಟ್ಟ ಇಲ್ಲವನ್ನು ಪ್ರಾಕೃತ ಗ್ರಂಥಗಳು ಬಳಸಿವೆ! ಆದರೆ, ಕಂನಾಡಿನಲ್ಲಿ ಬಳಕೆಯಲ್ಲಿದ್ದರೂ ಕಂನುಡಿಯ ಗ್ರಂಥಗಳಲ್ಲಿಲ್ಲ! ಇಲ್ಲದ ಪ್ರಯೋಗವು ದೊರೆವ 'ಸುಪಾಸನಾಹ ಚರಿಯ'ವು ಕ್ರಿ.ಶ. ೧೧೪೩ರಲ್ಲಿ ಬರೆಯಲ್ಪಟ್ಟ ಪ್ರಾಕೃತ ಕವಿತೆಯ ದೊಡ್ಡ ಗ್ರಂಥವಾಗಿದೆಯೆಂದು ಡಾ. ಎ. ಎನ್. ಉಪಾಧ್ಯೆಯವರು ತಿಳಿಸುತ್ತಾರೆ.

ಕಣ್ಣರು ಕುಡುವರಾದುದು

ಒಂದಕ್ಕಿಂತ ಹೆಚ್ಚು ಹೆಸರುಗಳಿಗೆ ಅವರ ನಿಲುಮೆ, ಮತ್ತು ವೃತ್ತಿಗಳೂ ಕಾರಣವಾಗುತ್ತವೆ. ಉದಾಹರಣಾರ್ಥವಾಗಿ ಹಟ್ಟಿಕಾರರು ಎಂಬುದು ದನಗಾರಿಕೆಯ ನಿಲುಮೆಯ ಹೆಸರಾದರೆ, ಹಾಲುಮತದವರೆಂಬುದು ಅವರು ಗೋರಸ ವ್ಯವಹಾರಿಗಳೆಂದು. ಕಳವರು ಅಥವಾ ಕಣ್ಣರೆಂದರೂ ಹಾಲು ಮನೆತನದವರೆಂದೇ ಅರ್ಥವು. ಕಳವರೆಂಬುದಕ್ಕಿಂತಲೂ ಕಣ್ಣರೆಂಬುದು ಅರ್ವಾಚೀನ; ಕಣ್ಣರೆಂಬುದಕ್ಕಿಂತಲೂ ಹಾಲುಮನೆತನದವರೆಂಬುದು ಅರ್ವಾಚೀನ-ತೀರ ಇತ್ತೀಚಿನದು. ಕಳವರೆಂಬ ಕಂನುಡಿಯ ಅರ್ಥವೇ ಯಾದವರೆಂಬ ಸಂಸ್ಕೃತ ಪದಕ್ಕೂ ಉಂಟು.

ಹಟ್ಟಿಕಾರಿಕೆಯಿಂದ ಮುಂದಿನ ಮಟ್ಟಕ್ಕೆ ಹೋದ ಪಂಗಡವು ತೋಟ-ಪಟ್ಟಿಗಳ ಸಾಗುವಳಿಯನ್ನು ಕೈಕೊಂಡುದರಿಂದ ಅದಕ್ಕೆ ಕುಡುವರೆಂದೂ ಒಕ್ಕಲರೆಂದೂ ಹೆಸರು ಬಂದಿತು. ದನಗಾರಿಕೆಯ ಪಾಡಿನೊಳಗಿಂದಲೇ ತೋಟಪಟ್ಟಿಯ ಆರಂಭವು ಹೇಗಾಯಿತೆಂಬುದನ್ನು ಸಮಾಜ ವಿಕಾಸಶಾಸ್ತ್ರವು ಚೆನ್ನಾಗಿಯೆ ವಿವರಿಸುತ್ತದೆ. ಗಂಡಸು ದನಗಳೊಡನೆ ಅಲೆಯಬೇಕಾದರೂ ಹೆಣ್ಣಿಗೆ ಮಕ್ಕಳ ಆರೈಕೆ, ಮನೆಗೆಲಸಗಳಿಗಾಗಿ ಹಟ್ಟಿಯಲ್ಲಿಯೆ ಕಾಲೂರಿಕೊಂಡು ಇರುವ ಆವಶ್ಯಕತೆಯುಂಟಾಗುತ್ತಿದ್ದಿತು. ಈ ಹೆಣ್ಣುಮಕ್ಕಳು ತಮ್ಮ ಹಿತ್ತಿಲ ಪಟ್ಟಿಯಲ್ಲಿ ದಿನದ ಆಹಾರಕ್ಕೆ ಉಪಯುಕ್ತವಾದ ಗಿಡಗಂಟೆಗಳನ್ನು ನಟ್ಟು ನೀರು ಹಾಕಿ ಬೆಳೆಸುವುದಕ್ಕಾರಂಭಿಸಿದರು. ಇದುವೆ ವಿಕಾಸವಾಗಿ ಕೃಷಿಯ ವ್ಯವಸಾಯವು ವಿಸ್ತಾರಹೊಂದಿತು.

ಇದು ಕುಡುವರಿಂದ ಆರಂಭವಾದುದೆಂದು ಕುಳ ಶಬ್ದಕ್ಕೆ ರೈತರೆಂಬ ಅರ್ಥವಿದೆ. ಕುಳವಾರು, ಕುಳವಾಡಿಗಳೆಂದರೆ ರೈತರ ಕುಟುಂಬಗಳು. ಕುಳವಾಡಿ ಎಂದರೂ ಇಲ್ಲಿ ಮತ್ತೆ ದ್ವಿರುಕ್ತಿಯಿದೆ. ಕುಳ+ವಾಡಿ; ವಾಡಿ=ಪಾಡಿ; ಮರ್ಹಾಟಿಯಲ್ಲಿ 'ಕುಳವಿಣೆ' ಎಂಬ ಧಾತುವಿದೆ. ಅದಕ್ಕೆ ನೆಲವನ್ನು ಹಸನ ಮಾಡು, ಎಂಬ ಅರ್ಥವುಂಟು. 'ಕುಳವೇ' (ನಾಮ): ಅಡವಿಯನ್ನು ಕಡಿದು ಮೊದಲನೆಯ ಬಾರಿಯೆ ರಾಗಿ ಪೈರು ಬೆಳೆವ ಹೊಲ. ಈ 'ಕುಳವೇ' ಎಂಬ ಮರ್ಹಾಟಿ ನಾಮಪದದಲ್ಲಿ 'ಕುಡು' ವರ 'ಆರಂಭದ' ಕೆಲಸದ ಸಂಪೂರ್ಣ ಭಾವವು ಒಳಗೊಂಡಿದೆ. ಕಾಡನ್ನು ಕುಟುಕಿ, ಕಡಿದು, ಒಕ್ಕಲಿಕ್ಕಿ, ಹಸನ ಮಾಡಿ ಕೃಷಿಗೆ ಯೋಗ್ಯಮಾಡಿದ ಕ್ರಿಯೆಯ ಸಂಪೂರ್ಣ ಅರ್ಥವು ಅದರಲ್ಲಿ ಅಡಕವಾಗಿದೆ. ಕುಡುವ (ಕುಡ್ವ) ಎಂಬ ಅಡ್ಡಹೆಸರಿನ ಮನೆತನಗಳಿವೆ.

ಇದರಂತೆ ಕಮ್ಮಿಗಳೂ ಉಂಟು. ಕಮತಿಗನೆಂದರೆ ರೈತ; ಒಕ್ಕಲ. ಇದು ಕಂನುಡಿಯೆಂದು ಹೇಳುವುದು ಕಷ್ಟ. ಅರ್ವಾಚೀನ ಪದವು. ಕಮ್ಮಿ ಎಂಬರ್ಥದಲ್ಲಿ ಕುಡುವ ಎಂಬುದು ಪ್ರಾಚೀನ ಪದ. ಗೌಡ ಸಾರಸ್ವತ ಬ್ರಾಹ್ಮಣರಲ್ಲಿ ಇವೆರಡೂ ಅಡ್ಡಹೆಸರುಗಳಿವೆ. ಅವರು ಮೊದಲು ಕೃಷೀವಳರಾಗಿದ್ದುದನ್ನು ಆ ಅಡ್ಡ ಹೆಸರು ಹೇಳುತ್ತದೆ. ಕುಡುವ, ಕುಡುಮಿ, ಕುಟುಂಬಿ ಎಂಬುವೆಲ್ಲ ಒಕ್ಕಲರ ಹೆಸರುಗಳೇ.

ನಾಡವರೆಂದರೂ ಮೊದಲು ಕುಡುವರೆ. ತುಳುನಾಡಿನಲ್ಲಿ ಹಾಗೆ ಅರ್ಥವೂ ಉಂಟು. ಆದರು, ನಾಡು ಎಂಬ ಪದದ ಅರ್ಥವು ವಿಸ್ತೃತವಾದಂತೆ ನಾಡವರೆಂಬುದಕ್ಕೂ ವಿಶೇಷವಾದ ಅರ್ಥವೂ ಪ್ರಾಪ್ತವಾಯಿತು. ಈ ಜನಗಳು ಮುಂದಿನ ಕಾಲದಲ್ಲಿ, ನಾಡನ್ನು ಕಟ್ಟುವ ಕೆಲಸದಲ್ಲಿ-ರಾಜಕೀಯ ರಣರಂಗದಲ್ಲಿ ಮುನ್ನುಗ್ಗಿ ತಮ್ಮ ಹೆಸರಿಗೆ ಹೆಚ್ಚಿನ ಅರ್ಥವನ್ನು ಸಂಪಾದಿಸಿದರು. ಈ ನಿಲುಮೆಯಲ್ಲಿ ನಾಡವರಿಗೆ ಬಂಟರೆಂಬ ಇನ್ನೊಂದು ಅನ್ವರ್ಥಕ ನಾಮವು ಪ್ರಾಪ್ತವಾಯಿತು. ಈ ನಾಡವರಿಗೆ ಸಂಸ್ಕೃತ ಭಾಷೆಯಿಂದ ಬರುವ ರಾಷ್ಟ್ರಿಕರೆಂಬ ಇನ್ನೊಂದು ಹೆಸರೂ ಉಂಟು.

ಕವಿರಾಜಮಾರ್ಗದಲ್ಲಿ ಮಾಡಿದ ನಾಡವರ್ಗಳ ವರ್ಣನೆಯು ಇಡೀ ಕಂನಾಡಿನ ಎಲ್ಲ ಜನಗಳಿಗೂ ಸಂಬಂಧಪಟ್ಟುದೆಂದೂ, ಅದು ಕಂನಾಡ ಅಭಿಮಾನದಿಂದ ಬರೆದ ಪದ್ಯವೆಂದೂ ಕೆಲವರ ಗ್ರಹಿಕೆಯಿದ್ದಿತು. ಆದರೆ, ಇಂದಿನ ಕಾಲದ ದೇಶಾಭಿಮಾನದ ರೀತಿಯೆ ಬೇರೆ. ಇಂದಿನ ಅಖಂಡ ಕಂನಾಡಿನ ದೃಷ್ಟಿ ಅಂದಿನ ಕಾಲದಲ್ಲಿಯೂ ಇದ್ದಿತೆಂದು ವಾದಿಸುವುದು ಹೇಗೆ ವ್ಯರ್ಥವೊ, ಹಾಗೆಯೆ ಇಂದಿನ ದೇಶಾಭಿಮಾನದ ಕಲ್ಪನೆಗಳು ಅಂದು ಇದ್ದುವೆಂಬುದೂ ಹುಸಿ. ದೇಶ, ಭಾಷೆಗಳ ಇಂದಿನ ಅಭಿಮಾನದ ಬಗೆಯೆ ಬೇರೆ. ಅಂದು ತಮ್ಮ ಬಗೆ, ಜಾತಿ, ಧರ್ಮಗಳು ಪ್ರಾಮುಖ್ಯವಾಗಿದ್ದುವು. ಆದುದರಿಂದ, ರಾಷ್ಟ್ರಕೂಟ ನೃಪತುಂಗದೇವನ ಆಸ್ಥಾನದಲ್ಲಿ ರಚಿತವಾದ ಕವಿರಾಜಮಾರ್ಗದಲ್ಲಿ ಬಂದ ನಾಡವರ ವರ್ಣನೆಯು ಇಡೀ ಕಂನಾಡಿನ ಜನಗಳದಲ್ಲ. 'ನಾಡವರು' ಎಂಬ ವಿಶಿಷ್ಟವರ್ಗದ್ದಾಗಿದೆ. ಈ ನಾಡವರೆ ರಾಷ್ಟ್ರಿಕರು. ಆದುದರಿಂದ, ಅದು ರಾಷ್ಟ್ರಕೂಟ ಕುಲದ ವರ್ಣನೆಯೂ ಅಹುದು. ಈ ಕಾರಣದಿಂದಲೆ ಅದು ನೃಪತುಂಗದೇವನ ಪ್ರಶಂಸೆಯೂ ಆಗುವುದು. ನಾಡವರೆಂದರೇ ರಾಷ್ಟ್ರಿಕರು ಎಂಬುದು ಕವಿರಾಜ ಮಾರ್ಗದ ಆ ವರ್ಣನೆಗಳಿಂದ ಕಂಡುಬರುವುದು. ದೇಶೀಯ ಹೆಸರುಗಳನ್ನು ಭಾಷಾಂತರಿಸಿ ಕೊಂಡು ಬಳಸುವ ರೀತಿಯು ಸಂಸ್ಕೃತದಲ್ಲಿ ಎಂದಿನಿಂದಲೂ ಇವೆ.

ರಾಷ್ಟ್ರಿಕರ ನೆಲೆವೀಡು

ರಾಷ್ಟ್ರಿಕರ ಹೆಸರು ಅಶೋಕನ ಶಾಸನಗಳಲ್ಲಿ ಬಂದಿದೆ. ರಿಷ್ಟಿಕ ಭೋಜಕರ ಹೆಸರುಗಳು ಕೆಲವೆಡೆಗೆ ಕೂಡಿಬರುತ್ತವೆ. ಆದುದರಿಂದ, ಇವೆರಡೂ ಜನಗಳು ಹತ್ತಿರ ಹತ್ತಿರ ವಾಸವಾಗಿರಬೇಕೆಂದು ಡಾ. ಬಿ. ಸಿ. ಲಾ ಅವರು ಬರೆಯುತ್ತಾರೆ. ಭೋಜಕ ರಿಷ್ಟಿಕ, ಪಿಟಣಿಕರ ಹೆಸರು ಇನ್ನೊಂದೆಡೆಗೆ ಕೂಡಿ ಇವೆ. ಭೋಜಕರು ವರ್‍ಹಾಟದಲ್ಲಿ ಆಳಿದರು. ಕಚ್ಛದ ರಾಜಧಾನಿಯಾದ ಭೋಜ (ಕಟಕ) ವೆಂಬ ಊರು ಭೋಜರ ಪ್ರಾಚೀನ ಕುರುಹೆಂದು ಡಾ. ಜಯಸ್ವಾಲರು ಬರೆಯುತ್ತಾರೆ. ಕಂನಾಡಿನಲ್ಲಿ (ಬೆಳಗಾವ ಜಿಲ್ಲೆ ಚಿಕ್ಕೋಡಿ ತಾಲ್ಲೂಕು) ಒಂದು ಭೋಜಗ್ರಾಮವಿದೆ. ವರ್‍ಹಾಟದಲ್ಲಂತೂ ಪ್ರಾಚೀನ ಕಾಲದಲ್ಲಿ ಭೋಜರು ಆಳಿದ ಬಗೆಗೆ ತಜ್ಞರಲ್ಲಿ ಭಿನ್ನಾಭಿಪ್ರಾಯಗಳಿಲ್ಲ. ಭೋಜಕರೂ ರಾಷ್ಟ್ರಕೂಟರೂ ಹತ್ತಿರ ಹತ್ತಿರ ಇದ್ದರೆಂಬುದು ಅಶೋಕನ ಶಾಸನಗಳಿಂದ ಕಂಡುಬರುವ ಮಾತಿಗೆ ಬೇರೆ ಐತಿಹಾಸಿಕ ಆಧಾರಗಳೂ ಉಂಟು. ರಾಷ್ಟ್ರಕೂಟರ ಪುರಾತನ ಶಾಸನಗಳು ವರ್‍ಹಾಟದಲ್ಲಿಯೆ ಸಿಕ್ಕಿವೆ. ರಾಷ್ಟ್ರಕೂಟರು ಯದುವಂಶಿಗಳು, ಭೋಜಕುಲದವರೆಂದು ಅವರ ಶಾಸನಗಳಲ್ಲಿ ಬರೆದ ವಂಶವೃತ್ತದಿಂದ ತಿಳಿದುಬರುತ್ತದೆ. ಆದುದರಿಂದ, ರಾಷ್ಟ್ರಕೂಟರ ಮೂಲಸ್ಥಾನವು ವರ್‍ಹಾಟವೆಂದು ಹೇಳಬೇಕಾಗುತ್ತದೆ.

ನಾಡವರಿಗೆ ರಾಷ್ಟ್ರಿಕರೆಂದು ಹೆಸರಿದ್ದಿತೆಂದು 'ಕಣ್ಮರೆಯಾದ ಕಂನಡ'ದಲ್ಲಿ (೧೯೩೩) ಬರೆದುದು ಈಗ ಬೇರೆ ವಿದ್ವಾಂಸರಿಗೂ ಒಪ್ಪಿಗೆಯಾಗಿದೆ. ಪ್ರೊ. ಮುಗಳಿಯವರು ಎಂಬ ತಮ್ಮ ಗ್ರಂಥದಲ್ಲಿ ನಾಡವರು ರಾಷ್ಟ್ರಿಕರೆಂಬುದನ್ನು ಸಿದ್ಧ ಸಂಗತಿಯಂತೆ ಎತ್ತಿಕೊಂಡಿದ್ದಾರೆ.[೨] ರಾಷ್ಟ್ರಕೂಟರ ಇತಿಹಾಸವನ್ನು ಬರೆದ ಅಳತೇಕರರಿಗೆ ಕಂನಾಡ ಜನ ಮತ್ತು ಪರಂಪರೆಗಳ ಪರಿಚಯವಿದ್ದರೆ ಅವರೂ ಈ ಮಾತನ್ನು ತಮ್ಮ ಗ್ರಂಥದಲ್ಲಿ ಕಾಣಿಸಬಹುದಾಗಿತ್ತು. ಏಕೆಂದರೆ, ನಾಡವರು ಮತ್ತು ರಾಷ್ಟ್ರಿಕರು ಒಂದು, ಎಂಬ ಮಾತನ್ನು ಸ್ವೀಕರಿಸುವುದರಿಂದ ಅವರು ಮುಂದೆ ಪ್ರತಿಪಾದಿಸಿದ ಸಿದ್ಧಾಂತಕ್ಕೆ ಹೆಚ್ಚಿನ ಪುಷ್ಟಿಯು ದೊರೆಯುತ್ತಿತ್ತು. ರಾಷ್ಟ್ರಕೂಟರು ಕಂನಾಡ ಜನ; ಇವರ ಮೂಲಭಾಷೆ ಕಂನುಡಿ ಎಂದು ಡಾ. ಆಳತೇಕರರು ಮಾಡಿದ ನಿರ್ಣಯಕ್ಕೆ ಅದರಿಂದ ಹೆಚ್ಚಿನ ಸಹಜತೆ ಮತ್ತು ಹೆಚ್ಚಿನ ಬಲವು ಬರುತ್ತಿದ್ದಿತು. ಏಕೆಂದರೆ ಡಾ. ಅಳತೇಕರರು ಇದಕ್ಕೆ ಪ್ರಮಾಣವೆಂದು ಹೇಳಿದ ಬೇರೆ ಆಧಾರಗಳು ಬಹಳ ದುರ್ಬಲವಾಗಿವೆ.

ರಾಷ್ಟ್ರಕೂಟರ ಗುಜರಾತಿನ ಶಾಸನಗಳಲ್ಲಿ ರಾಜನು ಕೊನೆಗೆ ಕಂನಾಡ ಅಕ್ಷರಗಳಲ್ಲಿ ತನ್ನ ಒಪ್ಪವನ್ನು ಹಾಕಿದ್ದು ಕಂಡುಬರುತ್ತದೆ. ರಾಷ್ಟ್ರಕೂಟ ಮೂರನೆಯ ಕೃಷ್ಣನು ಜೂರಾ ಎಂಬಲ್ಲಿ (ಉತ್ತರ ಹಿಂದುಸ್ಥಾನದಲ್ಲಿ) ಬರೆಯಿಸಿದ ಶಾಸನವು ಕಂನುಡಿಯಲ್ಲಿದೆ. ಇವರು ಕಂನುಡಿಗೆ ರಾಜಾಶ್ರಯವನ್ನಿತ್ತಿರುವರು. ಆದಕಾರಣ, ರಾಷ್ಟ್ರಕೂಟರು ಕಂನಾಡವರೇ ಇರಬೇಕು. ಏಕೆಂದರೆ, ಇವರಿಗೆ ತಮ್ಮ ನಾಡು ಮತ್ತು ನುಡಿಯಲ್ಲಿ ವಿಶೇಷ ಅಭಿಮಾನವಿದ್ದುದು ಮೇಲಣ ಸಂಗತಿಗಳಿಂದ ಕಂಡುಬರುತ್ತದೆ ಎಂದು ಡಾ. ಅಳತೇಕರರ ಹೇಳಿಕೆ.

ಕಂನಾಡವರಲ್ಲಿ ತಮ್ಮ ನಾಡು ಮತ್ತು ನುಡಿಯ ವಿಷಯಕ್ಕೆ ವಿಶೇಷ ಅಭಿಮಾನವಿರುತ್ತದೆಂಬ ಸಂಗತಿಗೆ ಐತಿಹಾಸಿಕ ಆಧಾರಗಳು ವಿಶೇಷವಾಗಿ ದೊರೆಯಲಾರವು. ಇದಕ್ಕೆ ವಿರೋಧವಾದ ಸಂಗತಿಗಳೇ ಹುಡುಕಿದಷ್ಟೂ ಬೆಳಕಿಗೆ ಬರುತ್ತಿವೆ. ಇದರ ವಿವರಣೆಯು ಮುಂದಿನ ಪ್ರಕರಣದಲ್ಲಿ ಬರಲಿರುವುದರಿಂದ ಅದನ್ನಿಲ್ಲಿ ವಿಸ್ತರಿಸುವುದಿಲ್ಲ. ರಾಷ್ಟ್ರಕೂಟರು ಕಂನಾಡ ಲಿಪಿಯನ್ನು ಕೆಲವೆಡೆಗೆ ಬಳಸಿದ್ದು ನಿಜ. ಅದರಂತೆ ಕೆಲವು ಕವಿಗಳಿಗೆ ರಾಜಾಶ್ರಯವನ್ನಿತ್ತುದೂ ನಿಜ. ಆದರೆ, ಅದರಲ್ಲಿ ವಿಶೇಷ ಅಭಿಮಾನವಿದ್ದುದಕ್ಕೆ ಏನೂ ಆಧಾರಗಳಿಲ್ಲ. ಪ್ರವಾಹ ಪತಿತರಾಗಿ-ಅನಿವಾರ್ಯವಾಗಿ ಆ ಕಾಲಕ್ಕೆ ಮಾಡಬೇಕಾದುದನ್ನು ಮಾಡಿರುವರೆ ಹೊರತು ಅವರ ಆ ಕೃತಿಯ ಹಿಂದೆ ಕಂನಾಡ ಅಭಿಮಾನವಿದ್ದಿತೆಂದು ಹೇಳುವುದು ಸರಿಯಾಗಲಾರದು. ಏಕೆಂದರೆ, ಹಾಗೆ ಅವರಲ್ಲಿ ಅಭಿಮಾನವು ವಿಶೇಷವಿದ್ದರೆ, ಕಂನಾಡ ಲಿಪಿಯಲ್ಲಿಯೆ ರಾಷ್ಟ್ರಕೂಟರ ಶಾಸನಗಳು ಹೆಚ್ಚಾಗಿ ಇರಬೇಕಾಗಿತ್ತು. ಇವುಗಳ ಪ್ರಮಾಣವು ತೀರ ಸ್ವಲ್ಪವಿದೆ. ಕಂನುಡಿಯ ಶಾಸನಗಳಿಗಿಂತ ಸಂಸ್ಕೃತ ಶಾಸನಗಳೂ, ತಾಮ್ರಪಟಗಳೂ ಹೆಚ್ಚಾಗಿವೆಯೆಂದು ನನ್ನ ಗ್ರಹಿಕೆ. ಅಲ್ಲದೆ ರಾಷ್ಟ್ರಕೂಟರ ಕಾಲದಲ್ಲಿ ರಾಜಾಶ್ರಯವನ್ನು ಪಡೆದ ಸಂಸ್ಕೃತ ಪ್ರಾಕೃತ ಕವಿಗಳಿಗಿಂತ ಕಂನುಡಿಯ ಕವಿಗಳು ಹೆಚ್ಚಿದ್ದರೆಂದು ಹೇಳುವುದಕ್ಕೂ ಆಧಾರವಿಲ್ಲ. ಹೀಗಿದ್ದರೂ ರಾಷ್ಟ್ರಕೂಟರು ಮೂಲ ಕಂನಾಡವರೆಂಬುದು ಸುಳ್ಳಲ್ಲ. ಏಕೆಂದರೆ ಹೆಚ್ಚಾಗಿ ಹಿಂದಿನ ಕಂನಾಡ ರಾಜರ ವೈಶಿಷ್ಟ್ಯವೇ ಹೀಗಿದೆ.

ಡಾ. ಅಳತೇಕರ ಅಭಿಪ್ರಾಯದಂತೆಯೆ ರಾಷ್ಟ್ರಿಕರು ಕಂನಾಡ ಮೂಲ ಜನಗಳೇ ಆಗಿದ್ದರೆ, ಆ ಜನದ ಮೊದಲಿನ ಹೆಸರು 'ರಾಷ್ಟ್ರಿಕ' ಎಂದು ಇರಲಾರದು. ಏಕೆಂದರೆ 'ರಾಷ್ಟ್ರಿಕ' ಎಂಬುದು ಸಂಸ್ಕೃತ ಪದ. ಕಂನಾಡ ಜನಗಳ ಮೂಲ ಹೆಸರು ಕಂನುಡಿಯದೇ ಆಗಿರಬೇಕೆಂಬುದು ಎಲ್ಲರೂ ಒಪ್ಪಬೇಕಾದ ಮಾತು. ಆದುದರಿಂದ, 'ರಾಷ್ಟ್ರಿಕ' ವೆಂಬುದು ಮೂಲ ಕಂನುಡಿಯ ಯಾವುದೊ ಒಂದು ಪದದ ಭಾಷಾಂತರವಾಗಲಿಕ್ಕೆ ಬೇಕು. (ಏಕೆಂದರೆ ರೂಪಾಂತರವಾಗಿದೆಯೆನ್ನಲು ಅಲ್ಲಿ ಇಂಬಿಲ್ಲ). ರಾಷ್ಟ್ರಿಕವೆಂಬುದನ್ನು ಕಂನುಡಿಗೆ ತಿರುಗಿಸಿಕೊಂಡರೆ ಅದರ ಅರ್ಥವು 'ನಾಡವ' ಎಂದಾಗುವುದು. ನಾಡವರೆಂಬ ಜನಗಳೂ ನಮ್ಮಲ್ಲಿ ಉಂಟು. ಅವರು ವೀರ-ಬಂಟರು. 'ನಾಯಕ'ವೆಂಬುದು ಅವರಲ್ಲಿ ಹುಟ್ಟಿನೊಡನೆ ಬಂದ ಪದವಿ! ವೀರಜನ ಒಂದು ಕಾಲಕ್ಕೆ ಅರಸು ಕುಲದವರಾಗಿ ವೈಭವ ದೆಶೆಯಲ್ಲಿ ಮೆರೆದರೆಂಬುದಕ್ಕೆ ಇಂದಿಗೂ ಇರುವ ಅವರ ನಡೆವಳಿ, ನುಡಿವಳಿಯೆ ಸಾಕ್ಷಿ.

ವಿನ್ಸೆಂಟಸ್ಮಿತ್‌ರ ಅಭಿಪ್ರಾಯದಂತೆಯೂ ರಾಷ್ಟ್ರಿಕರು-ರಾಷ್ಟ್ರಕೂಟರು indigenous. ಆದಕಾರಣ ಇವರು ನಾಡವರೆಂಬುದು ನಿಶ್ಚಿತ. ರಾಷ್ಟ್ರಿಕವೆಂಬ ಮಾತು ರಟ್ಟವೆಂದು ಬಳಕೆಯಲ್ಲಿ ಬಂದಿತು. ಸಂಸ್ಕೃತ ಶಾಸನಗಳಲ್ಲಿ ಸಹ ರಟ್ಟವು ನುಸುಳಿಕೊಂಡಿದೆ. ಆ ರಟ್ಟವೆಂಬ ಜನವೆ ಇಂದಿನ ರಡ್ಡಿಗಳು. ರಡ್ಡಿಗಳಲ್ಲಿ ಮತ್ತು ನಾಡವರಲ್ಲಿ ತುಂಬ ಹೋಲಿಕೆಯಿದೆ. ಇವರ ಆಚಾರಾದಿಗಳಲ್ಲಿ ಸಹ ಒಂದುತನವನ್ನು ಕಾಣಬಹುದು. ಇವರೆಲ್ಲರೂ ಗಿರಿಯ (ವೆಂಕಟರಮಣನ) ಒಕ್ಕಲು. ಹಟ್ಟಿಕಾರರ ಪರ್ವತಪೂಜೆಯ ವೈಶಿಷ್ಟ್ಯವನ್ನೆ ಇಲ್ಲಿಯೂ ಕಾಣಬಹುದು.

ರಡ್ಡಿಗಳೂ ಕುಡುವರೂ ನಾಡವರೂ

ಎಂಥೋವೆನರು ರಡ್ಡಿಗಳನ್ನು ಕುರಿತು ಹೀಗೆ ಬರೆದಿರುವರು:

> Raddis, another large cultivating caste, have a tradition that they were once connected with the Kudvakkalas which seems probable.

ಇವರು ರಾಷ್ಟ್ರಕೂಟರ ಸಂಬಂಧಿಗಳೆಂಬುದು ನಿಜವಿರಬೇಕೆಂಬುದನ್ನೂ ಎಂಥೋವೆನ್‌ರು ಒಪ್ಪಿಕೊಂಡಿದ್ದಾರೆ.[೩] ರಡ್ಡಿಗಳು ಪೂಜ್ಯಳೆಂದೂ ಮೂಲ ವಂಶಜಳೆಂದೂ ಹೇಳುವ ಹೇಮರಡ್ಡಿ ಮಲ್ಲಮ್ಮನಿಗೆ ಒಬ್ಬ ತಮ್ಮನಿದ್ದು ಆ ತಮ್ಮನ ಹೆಸರು ಕುರುಬರನ್ನು ಸೂಚಿಸುವ ಸಾಂಕೇತಿಕ ಪದವಾಗಿರಬೇಕೆಂದು ತೋರುತ್ತದೆ. ಕುಲ ಪರಂಪರೆಗಳನ್ನು ನಿರೀಕ್ಷಿಸಿದರೆ ಇವರು ಕುಡು-ಒಕ್ಕಲರ ಸಂಬಂಧಿಗಳೆಂದೂ, ಕುರುಬರಿಗೆ ಹತ್ತಿರದವರೆಂದೂ ಕಂಡುಬರುವುದು. ಮದುವೆಯ ಕಾಲಕ್ಕೆ ನಡುವ ಹಾಲಗಂಬವು, ಹಾಲು ಮತದವರೊಡನೆ ಇದ್ದ ಇವರ ಆರಂಭದ ಸಂಬಂಧವನ್ನು ಸೂಚಿಸುತ್ತದೆ ಪೂರ್ವಪರಂಪರೆ, ಕುಲವೃತ್ತಾಂತಗಳಿಂದ ಕುಡುವರು, ನಾಡವರು ಮತ್ತು ರಡ್ಡಿಗಳು ಒಂದೇ ಬುಡಕಟ್ಟಿನವರೆಂಬುದು ತಿಳಿದು ಬರುತ್ತದೆ. ಹಟ್ಟಿಕಾರ-ದನಗಾರಿಕೆಯಿಂದ ಮುಂದಿನ ಮಟ್ಟದಲ್ಲಿ ವಿಕಾಸವಾಗುತ್ತ ಈ ಜನಗಳ ಬೇರುಗಳು 'ಕುರುವ' ಕುಲದವರೆಗೂ ಹೋಗಿ ಮುಟ್ಟುತ್ತವೆ. ಯದು-ತುರ್ವರ, ಕುಂತಿಭೋಜರ ಸಂಬಂಧಿಗಳೆಂಬ ಮಾತು, ಅದನ್ನೇ ಪೌರಾಣಿಕ ರೀತಿಯಲ್ಲಿ ವ್ಯಕ್ತಪಡಿಸುತ್ತದೆ.

ರಾಷ್ಟ್ರಿಕರ ಹೆಸರಿನ ಇನ್ನುಳಿದ ಕೆಲವು ಸ್ಥಳಗಳನ್ನು ಗಮನಿಸಿದರೆ ವರ್‍ಹಾಟವು ಇವರ ಮಧ್ಯವರ್ತಿಯಾದ ನೆಲೆವೀಡೆಂದು ಕಂಡುಬರುವುದು. ಗುಜರಾತಿನಲ್ಲಿ ಸೌರಾಷ್ಟ್ರವೆಂಬ ಹೆಸರು ರಾಷ್ಟ್ರಿಕರಿಂದಲೆ ಬಂದುದೆಂದು ಡಾ. ಜಯಸ್ವಾಲರು 'ಹಿಂದೂಪೊಲಿಟಿ' ಎಂಬ ಗ್ರಂಥದಲ್ಲಿ ಹೇಳುತ್ತಾರೆ. ಲಾಟವೆಂದೂ ಗುಜರಾತಿನ ಒಂದು ಭಾಗಕ್ಕೆ ಹೆಸರಿದ್ದಿತು. ಲಾಟವು ಮೂಲಪದವಲ್ಲವೆಂಬುದು ಎಲ್ಲರೂ ಒಪ್ಪುತ್ತಾರೆ. ರಾಟ-ರಾಡವು ಇದರ ಮೂಲ ಪದವಾಗಿದ್ದು ಅದು ರಟ್ಟರ ಒಂದು ಕಾಲದ ನೆಲೆವೀಡಾಗಿದ್ದಿತೆಂದು ಬಲ್ಲಿದರ ಅಭಿಪ್ರಾಯವಿದೆ. ನಾಟವು ಲಾಟದ ಮೂಲ ಪದವೆಂದು ಗ್ರಹಿಸಿದರೆ ಇದು ನಾಡವರ ನಿವಾಸವೆಂದು ಹೇಳಬೇಕಾಗುವುದು. ನಾಡವರದೆಂದರೂ ಒಂದೇ. ರಾಷ್ಟ್ರಿಕರದೆಂದರೂ ಒಂದೇ. ಆದಕಾರಣ ಈ ಭಾಗವು ಒಂದು ಕಾಲಕ್ಕೆ ಕಂನಾಡವರ ಬೀಡಾಗಿದ್ದಿತೆಂಬುದು ಯಾವ ಬಗೆಯಿಂದ ನೋಡಿದರೂ ಕಂಡುಬರುವುದು.

ಬಂಗಾಳದಲ್ಲಿ ಗೌಡವೆಂಬ ಹೆಸರಿದ್ದಂತೆ. 'ರಾಢ'ವೆಂದೂ ಒಂದು ಪ್ರದೇಶಕ್ಕೆ ಸಂಜ್ಞೆಯಿದ್ದುದು ಹಳೆಯ ಗ್ರಂಥಾಂತರಗಳಿಂದ ಕಂಡುಬರುತ್ತದೆ. 'ಗೌಡಂ ರಾಷ್ಟ್ರಮನುತ್ತಮಂ ನಿರುಪಮಾ ತತ್ರಾಪಿ ರಾಢಾಪುರೀ' (ಪ್ರಬೋಧ ಚಂದ್ರೋದಯ). ಈ ಹೆಸರು ಬರಲು ಕಾರಣರಾದ ರಾಢರು ರಟ್ಟವಂಶಿಗಳಾಗಿರಬೇಕು. ಗೌಡದೇಶ; ರಾಢಾಪುರಿ; ಹಟ್ಟಿ, ಪೊಲ, ಊರು ಎಂಬ ಗ್ರಾಮಗಳು! ಇಂತಿವೆಲ್ಲವೂ ಬಂಗಾಳದಲ್ಲಿ ಮೊದಲಿಗರಾಗಿದ್ದ ಕಂನಾಡವರ ಕುರುಹುಗಳೆಂದೇ ಹೇಳಿದರೆ ತಪ್ಪಾದೀತೆ?

ಸೌರಾಷ್ಟ್ರದಿಂದ ರಾಢ (ಬಂಗಾಳ)ದವರೆಗೆ ಹಬ್ಬಿದ ರಾಷ್ಟ್ರಿಕರ ಮಧ್ಯವರ್ತಿಯಾದ ನೆಲೆವೀಡು ವರ್‍ಹಾಟವಾಗಿದ್ದಿತೆಂಬುದು ಗೊತ್ತಾಗದೆ ಹೋದುದರಿಂದ ರಟ್ಟರ ಇತಿಹಾಸದಲ್ಲಿ ಡಾ. ಆಳತೇಕರರಿಗೆ ಒಂದು ಮಾತಿನ ಅರ್ಥವೆ ಆಗದೆ ತೊಡಕಿನಲ್ಲಿ ಬಿದ್ದುದು ಕಂಡುಬರುತ್ತದೆ. ರಾಷ್ಟ್ರಕೂಟರ ತೀರ ಹಳೆಯ ಶಾಸನಗಳು ಮಧ್ಯಪ್ರಾಂತದಲ್ಲಿ ದೊರೆಯುತ್ತವೆ. ಅದರ ಮುಂದಿನ ಕಾಲದಲ್ಲಿ ಮಳಖೇಟದ ಮನೆತನವು ಪ್ರಸಿದ್ಧಿಯನ್ನು

ಹೊಂದಿದೆ. ಕಾಲಕ್ರಮದಲ್ಲಿ ಹೇಳುವುದಾದರೆ, ಕ್ರಿ.ಶ.ದ ೬ನೆಯ ಶತಮಾನದ ಮೊದಲಿನಿಂದ ವರ್ಹಾಟದ ಕಡೆಗೆ ನೆಲೆಸಿದ್ದ ರಾಷ್ಟ್ರಕೂಟವಂಶದ ಒಂದು ಮನೆತನವು ಮಳಖೇಟದಲ್ಲಿ ೮ನೆಯ ಶತಮಾನದಲ್ಲಿ ವಿಶೇಷ ಖ್ಯಾತಿಯನ್ನು ಹೊಂದಿತು, ಎಂದು ವರ್ಣಿಸುವುದು ಸಮಂಜಸವಾಗಿದೆ.

ಆದರೆ, ರಾಷ್ಟ್ರಕೂಟರು ಕಂನಾಡವರು, ಎಂದು ನಿಶ್ಚಿತವಾಗಿರುವುದರಿಂದ ಅವರ ಮೂಲ ಮನೆತನವು ವರ್ಹಾಟ-ಮಧ್ಯಪ್ರಾಂತದತ್ತ ಇರುವುದು ಅಸಂಭವ. ಇದು ಕಂನಾಡಿನಲ್ಲಿಯೆ ಮೊದಲು ತಲೆದೋರಿರಬೇಕು. ಆದಕಾರಣ ರಾಷ್ಟ್ರಕೂಟರು ವರ್ಹಾಟದ ಕಡೆಗೆ ಹೊರಗಿನಿಂದ ಹೋಗಿ ನೆಲೆಸಿದ್ದರೆಂದು ಡಾ. ಅಳತೇಕರರು ಅರ್ಥಮಾಡುತ್ತಾರೆ![೪] ಕ್ರಿ.ಶ. ೬ನೆಯ ಶತಮಾನದಲ್ಲಿ ವರ್ಹಾಟದಲ್ಲಿ (ಕಂನಾಡವರಾದ) ರಾಷ್ಟ್ರಕೂಟರು ಇದ್ದರೆಂಬುದಂತೂ ತಾಮ್ರಪಟಗಳಿಂದ ನಿಶ್ಚಿತವಾಗಿದೆ. ವರ್ಹಾಟದಲ್ಲಿ ಕಾಣಿಸಿಕೊಳ್ಳುವ ಈ ರಾಷ್ಟ್ರಕೂಟರು ಕಂನಾಡವರಿರುವ ಸಂಭವವೇ ಇಲ್ಲವೆಂದು ಡಾ. ರಾಮಕೃಷ್ಣ ಗೋಪಾಳ ಭಂಡಾರಕರರ ಅಗ್ರಹ! ರಾಷ್ಟ್ರಿಕರು ಅಥವಾ ರಾಷ್ಟ್ರಕೂಟರು ಕಂನಾಡವರೆಂಬ ಬಗೆಗೆ ಡಾ. ಅಳತೇಕರರಿಗೆ ಸಂದೇಹವೇ ಇಲ್ಲ. ಇನ್ನು, ರಾಷ್ಟ್ರಕೂಟರ ತೀರ ಮೊದಲಿನ ಶಾಸನಗಳು ವರ್ಹಾಟದ ಕಡೆಗೇ ಸಿಕ್ಕುತ್ತಿರುವುದೂ ಸುಳ್ಳಲ್ಲ. ಪ್ರತ್ಯಕ್ಷ ಅನುಭವಕ್ಕೆ ಒಂದು ಮಾತು. ಆದರೆ ದಕ್ಷಿಣದಿಂದ-ಇಂದಿನ ಕಂನಾಡಿನಿಂದ ವರ್ಹಾಟಕ್ಕೆ ರಾಷ್ಟ್ರಕೂಟರು ನೆಲಸಲು ಹೋದುವಕ್ಕೆ ಐತಿಹಾಸಿಕ ಆಧಾರಗಳು ದೊರೆಯುತ್ತಿಲ್ಲ. ಸೊರಗಿ, ಕೊರಗಿ, ಬಡವಾದ ಇಂದಿನ ಕಂನಾಡ ಪಾಡವನ್ನು ನೆನೆದು ವರ್ಹಾಟದಲ್ಲಿ ರಾಷ್ಟ್ರಕೂಟರ ಮೂಲ ಮನೆತನಗಳು ಇರುವುದು ಸಾಧ್ಯವೇ ಇಲ್ಲವೆಂದು ನಿರ್ಣಯಿಸುವುದರಿಂದ ಇದೆಲ್ಲ ಗೊಂದಲಕ್ಕೆ ಕಾರಣವಾಗಿದೆ. ಇದಕ್ಕಿಂತಲೂ, ಒಂದು ಕಾಲದಲ್ಲಿ ವರ್ಹಾಟವೂ ಕಂನಾಡ ಭಾಗವಾಗಿದ್ದಿತೆಂದು ಬಗೆದರೆ ಡಾ. ಅಳತೇಕರ ಪ್ರಭೃತಿಗಳಿಗೆ ಉಂಟಾಗಿರುವ ತೊಡಕು ಸಹಜವಾಗಿ ಬಿಟ್ಟು ಹೋಗುತ್ತದೆ.

ವರ್ಹಾಟವು ಕಂನಾಡ ಭಾಗವಾಗಿದ್ದಿತೆಂಬುದಕ್ಕೆ ಅನೇಕ ಆಧಾರಗಳಿವೆ. ಕಂನಾಡಿಗಿರುವ ಕುಂತಲವೆಂಬ ಪರ್ಯಾಯ ನಾಮವು ವರ್ಹಾಟಕ್ಕೂ ಒಂದು ಕಾಲಕ್ಕಿತ್ತು. ರಾಜಶೇಖರಾದಿಗಳ ಸಂಸ್ಕೃತ ಗ್ರಂಥಗಳಲ್ಲಿ ಇದಕ್ಕೆ ಆಧಾರವಿದೆ. ವರ್ಹಾಟವು ಹಟ್ಟಿಗಳ ನಾಡೆಂದು ಈ ಮೊದಲೆ ವಿವರಿಸಿದೆ. ಅಲ್ಲಿ ಪಾಟಿಲರು, ದೇಶಮುಖರು ಹಟ್ಟಿಕಾರರು. ದೇಶದ ಹೆಸರು ವರಹಟ್ಟ. ಕೊರಬು (ಕುರುಬ), ಹಳಬರು ಎಲ್ಲ ಹಳ್ಳಿಗಳ ಆಯಗಾರರೂ ಆದ ನಾಡು ಕಂನಾಡೆಂದು ಸಿದ್ಧಪಡಿಸಲು ಬೇರೆ ಆಧಾರಗಳು ಬೇಕೆ? ಅಲ್ಲಿ ಇಂದು ಕಂನುಡಿ ಕೇಳಬರುವುದಿಲ್ಲ. ಆದರೆ ಅಲ್ಲಿಯ ಜನಗಳ ಭಾಷೆಯಲ್ಲಿ ಕಾಣಬರುವ ಕಂನುಡಿಯ ಪ್ರಭಾವದ ಅರ್ಥವೇನು? ಅಲ್ಲಿ ಒಂದು ಕಾಲದಲ್ಲಿ ಇದು ಜನದ ಭಾಷೆಯಾಗಿದ್ದಿತೆಂದು ಗ್ರಹಿಸದೆ ಹೋದರೆ, ಮರ್ಹಾಟಿಯಲ್ಲಿ ಕಂನುಡಿಯ ಅನೇಕ ಧಾತುಗಳು, ನಾಮಾದಿ ಪ್ರಯೋಗ, ಪಡೆನುಡಿಗಳು ಇರುವ ಕಾರಣವೇನು? ವರ್ಹಾಟದವರೆಗಿದ್ದ ಕಂನುಡಿಯು ಮಾಯವಾದುದಕ್ಕೆ ಡಾ. ಗ್ರಿಯರಸನರು ಇನ್ನೊಂದೆಡೆಗೆ ಹೇಳಿದ ಕಾರಣವೇ ಇಲ್ಲಿಯೂ ಸರಿ ಹೋಗುತ್ತದೆ. 'ಆರ್ಯ ಮತ್ತು ದ್ರಾವಿಡ'ಗಳ ಸಂಪರ್ಕವುಂಟಾದಾಗ ಯಾವಾಗಲೂ ಆರ್ಯವರ್ಗದ ಭಾಷೆಯೆ ಪ್ರಭಾವಿಯಾಗಿ ಉಳಿದು ದ್ರಾವಿಡ ವರ್ಗದ ನುಡಿಯು ಮೂಲೆಗುಂಪಾದುದೇ ಕಂಡುಬರುತ್ತದೆ. ಈ ಕಾರಣದಿಂದಲೆ ಕಂನಾಡು ದಿನದಿನಕ್ಕೂ ಕ್ಷೀಣವಾಗಿ ಈ ಪಾಡು ಬಂದಿದೆ.

ಸೌರಾಷ್ಟ್ರ, ವರ್ಹಾಟ, ರಾಢ (ಬಂಗಾಳ) ದ ವರೆಗೆ ರಾಷ್ಟ್ರಿಕರು ಹಬ್ಬಿದ್ದರೆಂಬುದು ಸ್ಥಳದ ಹೆಸರುಗಳಿಂದಲೂ, ಐತಿಹಾಸಿಕ ಆಧಾರಗಳಿಂದಲೂ ನಿಶ್ಚಿತವಾಗುತ್ತದೆ. ಉತ್ಕಲದಲ್ಲಿ ಒಕ್ಕಲಾದ ಮೂಲ ಜನವೂ ಡಾ. ಬಾರ್ನೆಟರ ಊಹೆಯಂತೆ ಕಂನಾಡವರೆ ಆಗಿರಬೇಕು. ನಾಗಪೂರ ಭಾಗದ ಜನಗಣನೆಯಲ್ಲಿ ಒಕ್ಕಲರೆಂಬ ಹೆಸರಿನ ಜನಗಳು ಸ್ವಲ್ಪ ಈಗಲೂ ಅಲ್ಲಿ ಉಳಿದುದು ಕಂಡುಬಂದಿದೆ.

ಈ ಕಾರಣದಿಂದ, ಹಟ್ಟಿಕಾರರು, ಕುಡು-ಒಕ್ಕಲುತನಕ್ಕೆ ಮಾರ್ಪಡುತ್ತಿದ್ದುದರ ಕುರುಹುಗಳು ಉತ್ತರಾಪಥ ದಲ್ಲಿಯೂ ದೊರೆಯುತ್ತವೆಯೆಂದು ಹೇಳಬೇಕಾಗುತ್ತದೆ. ಗುಜರಾತಿಯ ಕಣಬಿ, ಮರ್ಹಾಟಿಯ 'ಕುಳವಾಡಿ' 'ಕುಣಬಿ'ಗಳು Non-Aryan ಎಂದು ಸಂಶೋಧಕರ ಅಭಿಪ್ರಾಯವಿದೆ.

ರಾಷ್ಟ್ರಕೂಟರ ಶಾಸನಗಳಲ್ಲಿ ಅವರಿಗೆ 'ಕುಟುಂಬಿ'ಗಳೆಂದು ಕೆಲವೆಡೆಗೆ ಹೇಳಿದೆ. ನೇಗಿಲ ಚಿಹ್ನವು ಶಾಸನಗಳ ಮೇಲ್ಭಾಗದಲ್ಲಿದ್ದುದೂ ಕಂಡುಬರುತ್ತದೆ. ಈ ಕಾರಣದಿಂದ, ರಾಷ್ಟ್ರಿಕರು-ಒಕ್ಕಲರು-ಕುಡುವರೆಂದು ಹೇಳಲು ಅಡ್ಡಿಯಿಲ್ಲ. ರಡ್ಡಿಗಳೂ ನಾಡವರೂ ಇದೇ ಬಗೆಯಾಗಿ ಕುಡುವರು-ಒಕ್ಕಲರಾಗಿದ್ದರೆಂದು ಹಿಂದೆ ಹೇಳಿದೆ.

ಬಂಗಾಳ, ಗುಜರಾತಗಳಲ್ಲಿ 'ನಡಿಯಾ' ಎಂಬ ಸ್ಥಲವಾಚಕ ಹೆಸರುಗಳಿವೆ. 'ನಾಡಗಾವ' ಎಂಬ ಗ್ರಾಮ ನಾಮಗಳು ಮಹಾರಾಷ್ಟ್ರದಲ್ಲಿವೆ. ಕೊಂಕಣದಲ್ಲಿ ನಾಡಸೂರ ಎಂಬ ಬಗೆಯ ಊರುಗಳಿವೆ. ವಿಜಾಪೂರ ಜಿಲ್ಹೆಯಲ್ಲಿ 'ನಾಡ' ಎಂಬ ಹೆಸರಿನ ಎರಡು ಹಳ್ಳಿಗಳಿವೆ. ಇನ್ನೂ ದಕ್ಷಿಣ.ಭಾಗದಲ್ಲಿ ಇಂತಹ ಊರುಗಳು ಉಂಟೆಂದು ಹೇಳುವ ಕಾರಣವಿಲ್ಲ. ಕೊಡಗು ನಾಡಿಗೆ ಕುಡಗು ಎಂದೂ ಹೆಸರಿದೆ. ಇದು ಕುಡುವರ ಎಂದರೆ ಒಕ್ಕಲರ ನಾಡೆಂದು ಅರ್ಥಕೊಡುವುದು. ತುರುಕಾರರಿದ್ದ ಕಾಲದ ವಸಾಹತು ತುಳುನಾಡು, ಪಾಡಿ, ಹಟ್ಟಿಗಳು. ಅದರಂತೆ ಕಾಡುಕಡಿದು, ಒಕ್ಕಲತನದ ಮಟ್ಟದಲ್ಲಿ ಆದ ವಸಾಹತು ಕುಡುಗು (ಕೊಡುಗು), ಎಂದು ಹೇಳಿದರೆ ತಪ್ಪಾಗದು. ಕುಡಿಗೆರೆ, ಕುಡುಗೆರೆ, ಕುಡಿಲೂರು, ಕುಡಿಗವೂರು, ಕುಡಹಳ್ಳಿ, ಕುಡುಮ ವಿಷಯ ಮುಂತಾದುವು ಇದೇ ಬಗೆಯಾದ ಕುಡುವರ ನೆಲೆಗಳಾಗಿವೆ.

ಇವರೆ ನಾಡಗೌಡರಾಗಿ, ರಾಷ್ಟ್ರಿಕರು, ರಟ್ಟರೆಂದು ಹೆಸರಾದ ಕಾಲದ ಇವರ ನೆನಹು ಕೊಡುವ ಹಲವು ಊರುಗಳು ನಮ್ಮ ನಾಡಿನಲ್ಲಿವೆ. ಲಟ್ಟಲೂರು (ಲಾತೂರು), ರಟ್ಟೆ ಹಳ್ಳಿ, ರಡ್ಡೇರಹಟ್ಟಿ, ರಟ್ಟಾಡಿ (ದ. ಕ), ರಟ್ಟಿ ಪಾಡಿ, ಲಾಟವಾಡಿ, ಲಾಟಗಾವ ಮೊದಲಾದುವು ಈ ಬಗೆಯವು.

ಟಿಪ್ಪಣಿ

೧. *ಮತ್ಸ್ಯಪುರಾಣಂ,* ಪೂನಾ ಮುದ್ರಣ ೪೮-೫
೨. Mugali R. S., ***The Culture Heritage of Karnataka***
೩. Enthoven, ***Castes and Tribes of Bombay,*** Vol. II P. 272
೪. Altekar, ***Rashtrakutas and Their Times,*** p. 4

ನೆಲದ ಪಾಡು

ಎಡೆಗಳ ಹೆಸರುಗಳಿಂದ ಜನದ ಪಾಡಿನಂತೆ, ನೆಲದ ಪಾಡೂ (ಎಂದರೆ ಭೌಗೋಲಿಕ ವಿಚಾರವೂ) ಎಷ್ಟೋ ಗೊತ್ತಾಗುವುದು. ಅದು ಎಡೆಗಳ ಹೆಸರಿನಲ್ಲಿಯೆ ಅಡಕವಾಗಿರುತ್ತದೆ. ಕಣನುಡಿಯ ತಿರುಳು ತಿಳಿಯದ್ದರಿಂದ ಹಲವೆಡೆಯಲ್ಲಿ ಅದರ ಸೊಗಸಿಗೆ ಎರವಾಗಬೇಕಾಗಿದೆ. ಇವು ಜನಗಳಲ್ಲಿ ವಿಚಾರ, ಚರ್‌ಚೆ, ವಿಮರ್ಶೆಗಳು ಬೆಳೆದಂತೆ ಬಂದ ಹೆಸರುಗಳು. ಆದುದರಿಂದ ಬಹುಮಟ್ಟಿಗೆ ಅರ್ವಾಚೀನ.

ದೇಶದ ವಿಭಾಗಗಳಿಗೆ ಬಂದ ಹೆಸರಿನಲ್ಲಿ ಭೌಗೋಲಿಕ ಸ್ಥಿತಿಗತಿಯ ಅರ್ಥವು ಅಳವಟ್ಟಿರುತ್ತದೆ. ಉದಾ : ಬೆಳುವೊಲ, ಮಲೆನಾಡು; ಬೆಳುಪೊಲದ ನಾಡಿಗೆ ಬಯಲುಸೀಮೆಯೆಂದೂ ಹೆಸರಿದೆ; ಎರೆಸೀಮೆಯೆಂದೂ ಕೆಲಬಾರಿ ಹೇಳುವುದುಂಟು. 'ಮಲೆ' ಎಂಬುದರ ಅರ್ಥವನ್ನು ಸಾಮಾನ್ಯ ಜನವು ಮರೆತಿರುವುದರಿಂದ ಅದರ ಅರ್ಥದ ಸೊಗಸು ಬಹು ಜನರಿಗೆ ತಿಳಿಯದಾಗಿದೆ. ಮಲೆನಾಡನ್ನು ಮಲ್ನಾಡ, ಎಂದು ಹೇಳುವುದಕ್ಕೆ ಇದೇ ಕಾರಣ. ಮಲೆಯೆಂದರೆ ಗುಡ್ಡ, ಪರ್ವತ. ಮಲೆನಾಡೆಂದರೆ ಪರ್ವತ ಪ್ರದೇಶ ಮಾಡ. ಮಾಳ, ಮರಡಿ, ಮಡ್ಡಿ ಎಂಬ ಪದಗಳೂ ಮಲೆಯ ಬಳಗದ ನುಡಿಗಳಾಗಿವೆ. ಮಧ್ಯ ಹಿಂದುಸ್ತಾನದಲ್ಲಿ 'ಮಾಳವಾ' ಎಂಬುದು ಎತ್ತರವಾದ ಪ್ರದೇಶ, ಗುಡ್ಡದ ನಾಡಾಗಿದೆ. ಮಲೆಯ ಅರ್ಥ ತಿಳಿಯದೆ ಮಾಳವಾ ಎಂಬ ಹೆಸರಿನ ಸಾರ್ಥಕತೆಯು ಅಲ್ಲಿ ತಿಳಿಯದು. ಮಹಾರಾಷ್ಟ್ರದಲ್ಲಿ 'ಮಾವಳ' ಎಂಬುದು ಸಹ್ಯಾದ್ರಿಯ ಬಳಿಯ ಒಂದು ತಾಲ್ಲೂಕು ಪುಣೆ ಜಿಲ್ಹೆಯಲ್ಲಿ; ಮಾವಳಣೆ ಎಂದರೆ ಮುಳುಗು ಅಸ್ತಂಗತನಾಗು ಎಂದು ಆರಿಯ ಮಾತಿನಲ್ಲಿ ಅರ್ಥವಿದೆ. ಈ ತೆರನಾಗಿ 'ಮಾವಳ' ಎಂಬುದಕ್ಕೆ ಪಶ್ಚಿಮದ ಊರು, ಪಡುವಣ ಎಡೆ ಎಂಬರ್ಥವನ್ನೂ ಮಾಡಬಹುದು. ಆದರೆ, ಅದೇ ಭಾಗದಲ್ಲಿ 'ಮಾಲಾಡ' ಊರುಂಟು. ಅದೂ ಗುಡ್ಡದ ಭಾಗ. ಆದಕಾರಣ ಮಲೆನಾಡೆಂದು ಅದಕ್ಕೆ ಅರ್ಥ ಹೇಳದೆ ಗತಿಯಿಲ್ಲ.

ಮಾಡ ಎಂದರೆ ಎತ್ತರ, ಉಪ್ಪರಿಗೆ; ಚಾರಮಾಡಿ ಎಂದು ಮುಂತಾದ ಎಡೆಗಳಲ್ಲಿ ಮಾಡವು ಕಾಣಿಸಿ ಕೊಳ್ಳುವುದು. ಮಾಳಗುಡ್ಡ,. ಮಾಳಮರಡಿ ಎಂಬ ದ್ವಿರುಕ್ತಿಗಳು ಬಳಕೆಯಲ್ಲಿ ಬಂದುದು, ಅಲ್ಲಿ 'ಮಾಳ' ಶಬ್ದದ ಮೂಲಾರ್ಥದ ಅರಿವು ಕಡಿಮೆಯಾದುದರ ಕುರುಹು. ಮಾಳದ ಮೂಲಾರ್ಥವು ತಿಳಿದಿದ್ದರೆ ಮತ್ತೆ ಅದರ ಮುಂದೆ ಅದೇ ಅರ್ಥದ ಗುಡ್ಡ ಅಥವಾ ಮರಡಿ ಎಂಬುದನ್ನಿಡುವ ಸಂಭವವಿಲ್ಲ.

ಕುಪ್ಪ, ಕುಪ್ಪೆ, ಗುಪ್ಪೆ, ಕೊಪ್ಪ ಎಂಬುದು ಮಾಳ ಎಂಬರ್ಥದ ಎತ್ತರ ಪ್ರದೇಶವನ್ನು ಸೂಚಿಸುವ ಇನ್ನೊಂದು ನುಡಿಗಡಣ. 'ಕುಪ್ಪು' ಎಂದರೆ ಪುಂಜೀಕರಣವೆಂದು ಅರ್ಥವಿದೆ, (ಶ. ಮ. ದ). ಕುಪ್ಪ, ಕುಪ್ಪೆ, ಗುಪ್ಪೆ, ಕೊಪ್ಪಗಳು ಮೂಲದಲ್ಲಿ ಗುತ್ತು, ಗುಂಪು, ಗುಡ್ಡು ಎಂಬರ್ಥವುಳ್ಳವುಗಳಾಗಿವೆ. ಕೋಪಣನಗರವೆಂದು

ಹೆಸರಾಂತ ಕೊಪ್ಪಳದಲ್ಲಿ ಗುಡ್ಡವಿದ್ದುದು ಸರಿಯಾದುದೇ ಆಗಿದೆ. ಸಾಂಗಲಿಯ ಹತ್ತಿರ 'ಕೂಪವಾಡ', ವೆಂದು ಕರೆಯಲ್ಪಡುವ ಮಾಳವಿದೆ. ಎತ್ತರವಾದ ಈ ಪ್ರದೇಶಕ್ಕೆ ಕುಪ್ಪವಾಡವೆಂದು ನಿಜವಾದ ಹೆಸರು. ಆದರೆ ದ್ವಿತ್ವವನ್ನು ಉಚ್ಚರಿಸಲು ಆರಿಯ ಮಾತಿನವರಿಗೆ ತೊಂದರೆಯಾಗುತ್ತದೆ. ಆದಕಾರಣ ಕಪ್ಪುರ-ಕಾಪೂರವಾದಂತೆ ಕುಪ್ಪವು ಕೂಪವಾಯಿತು. ಕುಪ್ಪಗಲ್ಲು, ತಾಳಗುಪ್ಪೆ ಇಂತಿವೆಲ್ಲವೂ ಮಾಳದ ನೆಲಗಳು. ಆದರೆ, ಕೊಪ್ಪವೆಂಬುದು ಕೆಲವೆಡೆಗೆ ಊರ ಹರಹು, ನೆರೆಯ ಹಳ್ಳಿ ಎಂಬರ್ಥದಲ್ಲೂ ಬಳಕೆಯಲ್ಲಿ ಬಂದುದು ಕಂಡುಬರುವುದು.

ಕುಮರಿ, ಕುಂಬೆಗಳು ಗುಡ್ಡದ ಪ್ರದೇಶ, ಗುಡ್ಡದ ಬದಿಗೆ ಇರುವ ಊರು ಎಂಬರ್ಥವುಳ್ಳುವುಗಳಾಗಿವೆ.

ಕುನ್ನ, ಗುನ್ನ, ಗೊನ್ನಿ, ಗೊಣ್ಣೆ, ಗೊನ್ನ ಎಂಬೀ ಬಳಗದ ನುಡಿಗಳು ಸ್ವಲ್ಪ ಎತ್ತರದ ಪ್ರದೇಶ, ಗುಡ್ಡದ ನೆರೆಯವೂರು ಎಂಬರ್ಥವುಳ್ಳವುಗಳಾಗಿವೆ. ತಮಿಳಿನಲ್ಲಿ ಕನ್‌ಱು ಎಂಬ ಪದವು ಇದೇ ಅರ್ಥವುಳ್ಳುದಾಗಿದೆ. ನಮ್ಮ ನಾಡಿನ ಕುನ್ದರ (ನಾಡು), ಕುನ್ದರಿಗಿ ಎಂಬೀ ಸ್ಥಳಗಳು ಕುನ್‌ಱು ಎಂಬ ತಮಿಳ ರೂಪಕ್ಕೆ ಬಹಳ ಹತ್ತಿರದುವುಗಳಾಗಿವೆ.

ಕೂನು ಅಥವಾ ಗೂನು ಎಂದು ಬಾಗಿದ್ದಕ್ಕೆ, ವಕ್ರತೆಗೆ ಹೇಳುವುದುಂಟು. ಕುಳ್ ಅಥವಾ ಕುನ್ ಎಂಬುದು ಇದರ ಬೀಜಶಬ್ದ. ಕುಳ್-ಕುಳ್ಳಿ-ಗುಳ್ಳಿ; ಗುಂಡು, ಗುಡ್ಡೆ....., ಈ ಗೂನಿನ ಒಳಬದಿಯಿಂದ ನೋಡಿದರೆ ಅದು ತಗ್ಗು ಎಂಬರ್ಥ ಕೊಡುವುದು; ಹೊರಬದಿಯಿಂದ ಎತ್ತರವೆಂದಾಗುವುದು. ಹೀಗಿದು ಆಳ ಮತ್ತು ಎತ್ತರ ಎಂಬ ಎರಡೂ ಅರ್ಥಗಳನ್ನು ಸೂಚಿಸಬಲ್ಲುದಾಗಿದೆ. ಆದುದರಿಂದ ಇದರೊಳಗಿನ ಗುಂಡಿ, ಕುಂಟೆ ಎಂಬೀ ಕೆಲವು ನುಡಿಗಳು ಕೆರೆ, ಕೊಳ ಎಂಬರ್ಥವುಳ್ಳುವುಗಳಾಗಿವೆ.

ಕುಂದ, ಗುಂದಗಳು ಇರುವ ಭಾಗದ ನಕ್ಷೆ ತೆಗೆಯಬೇಕು. ಇವು ಕಂನಾಡಿನ ಒಂದು ವಿಶಿಷ್ಟ ಭಾಗದಲ್ಲಿಯೆ ಹೆಚ್ಚಾಗಿವೆ. ಕುಂದಾಪುರ, ಕುಂದರಗೆ, ಹುನಗುಂದ, ಮುಳಗುಂದ, ನೀಲಗುಂದ, ನರಗುಂದ ಇಲ್ಲಿ ಎಲ್ಲೆಡೆಗೂ ಕುಪ್ಪ, ಗುಪ್ಪದಂತೆ ಎತ್ತರದ ಪ್ರದೇಶ, ಮರಡಿ, ಗುಡ್ಡವಿದ್ದುದುಂಟು. ಆದರೆ, ರೋಣ ತಾಲೂಕಿನ (ಧಾ. ಜಿ) ನಿಡುಗುಂದದಂತಹ ಸ್ವಲ್ಪ ಸ್ಥಳಗಳಲ್ಲಿ ಇದಕ್ಕೆ ಅಪವಾದವನ್ನು ಕಾಣಬಹುದು. ತೀರ ಹತ್ತಿರವಿಲ್ಲದಿದ್ದರೂ ಸಮೀಪದಲ್ಲಿ ಸ್ವಲ್ಪ ಮೇಲಿನ ಮೇಲೆ ನಿಡುಗುಂದಿಗೆ ಗುಡ್ಡವುಂಟು. ಗುಂಡ, ಗುಂಡಿ, ಗೊಂದಿಗಳು ನಾಡಿನ ಇನ್ನೊಂದು ನಿಟ್ಟಿನಲ್ಲಿ ಕಾಣಿಸಿಕೊಳ್ಳುವುವು.

ಹೊಲಗಳೆಂದ ಹೇಳುವುದು ಬೆಳುವೊಲದ ವಿಶೇಷ: ಗದ್ದೆ ಮಲೆನಾಡಿನಲ್ಲಿ ಮುಖ್ಯ. ಗದ್ದೆಯೆಂದೊಡನೆ ಅಲ್ಲಿ ಬತ್ತವೆ ಮುಖ್ಯ ಬೆಳೆ. ಮಕ್ಕಿ, ಮೊಗರು, ಹಿತ್ತಿಲು, ಕಾಡು, ಕಳ ಇವೂ ಮಲೆನಾಡಿನ-ಕಂನಡ ಜಿಲ್ಲೆಯ ಎಡೆಗಳೇ. ಖೇಟಗಳು, ಖೇಡಗಳು ವಿಜಾಪುರದ ಕಡೆಗೆ ಇರುವುವಾದರೆ ಶೇತ ಕಾರವಾರದಲ್ಲಿ. ಪೊಳಲು, ಹೊಳಲು ಕಂನಾಡ ಎಲ್ಲ ಭಾಗದಲ್ಲೂ ಉಂಟು. ಏರಿ, ಕಟ್ಟೆ, ಕೆರೆ, ಕುಂಟೆ, ಕೊಳ, ಕೊಳ್ಳಗಳು ದೇಶದ ವಿಶಿಷ್ಟ ಭಾಗದಲ್ಲಿಯೆ ಉಂಟೆಂದಲ್ಲ. ಆದರೂ ಕುಳಿ-ಗುಳಿ, ಗುಣಿಗಳು ಕನ್ನಡ ಜಿಲ್ಲೆಯತ್ತ ಹೆಚ್ಚು ಕಾಣುತ್ತವೆ.

ಕೊಂಬು, ಕೋಡುಗಳು ಪರ್ವತದ ಶಿಖರಗಳು; ಬಂಡಿ, ಕಲ್ಲು, ಶಿಲೆಗಳು ಗುಡ್ಡದ ಪ್ರದೇಶವೆಂದು ಅರ್ಥ ಮಾಡಬಹುದಾದರೂ ಇವುಗಳಲ್ಲಿ ಕಲ್ಲು ಎಂಬುದು ಹಲವೆಡೆಗೆ ಅಪವಾದವಾಗಿ ಇದ್ದುದು ಕಂಡುಬಂದಿದೆ. ತೋರಗಲ್ಲು, ತೋರಣಗಲ್ಲುಗಳಲ್ಲಿ ಗುಡ್ಡವಿದ್ದರೆ, ಕೊಳಗಲ್ಲುಗಳಂತಹ ಎಡೆಯಲ್ಲಿ ಕೇವಲ ಬಯಲು ಇದ್ದುದುಂಟು. ಕಲ್ಲು ಎಂದರೆ ಹರಳು ಎಂಬರ್ಥ ಮಾಡಬಹುದೇನೊ, ಅಂತಹ ಎಡೆಗಳಲ್ಲಿ ಮಲೆನಾಡಿನಲ್ಲಿ ಬಯಲ ಊರುಗಳು ಅದೆಷ್ಟೋ ತಲೆದೋರಿದ್ದು ಸಹಜವಾಗಿದೆ.

ಹಳ್ಳ, ಹೊಳೆ, ತೊರೆ, ಕೆರೆ, ಸರೋವರ, ಸಮುದ್ರ, ಸಾಂದ್ರ, ಸಾಗರಗಳಿದ್ದಲ್ಲಿ ಜಲಾಶಯವುಂಟೆಂದು ಹೇಳಬೇಕಾದ ಕಾರಣವಿಲ್ಲ. ಆದರೂ ಸಮುದ್ರ ಮತ್ತು ಸಾಗರಗಳು ನಮ್ಮ ನಾಡಿನ ಕೆಲವೊಂದು ಭಾಗದಲ್ಲಿಯೆ

ಇವೆ. ಮೈಸೂರು ಸೀಮೆಯಲ್ಲಿ ಇವು ವಿಪುಲವಾಗಿವೆ. ದ್ವಾರಸಮುದ್ರದ ಮಾದರಿಯಲ್ಲಿ ಉಳಿದ-ಸಮುದ್ರಗಳು ತಲೆಯೆತ್ತಿದುವೊ ಎಂಬುದು ಅಭ್ಯಸನೀಯವಾಗಿದೆ. ಇವು ಬಳ್ಳಾರಿ ಜಿಲ್ಲೆಯಲ್ಲಿವೆ. ಧಾರವಾಡ ಜಿಲ್ಲೆಯಲ್ಲಿ ಗದಗ ತಾಲೂಕಿನ ವರೆಗೆ ಮಲಸಮುದ್ರ ಮುಂತಾದ ಈ ಬಗೆಯ ಹೆಸರುಗಳಿವೆ. ಬೆಳಗಾವ ಜಿಲ್ಲೆಯಲ್ಲಿ ಪರಸಗಡ, ಬೈಲಹೊಂಗಲ ತಾಲೂಕಿನ ವರೆಗೆ ಅಕ್ಕಿ ಸಾಗರ ಮುಂ. ಇಂತಹ ಹೆಸರನ್ನು ಕಾಣಬಹುದು. ಕನ್ನಡ ಜಿಲ್ಲೆ, ವಿಜಾಪೂರಗಳ ಕಡೆಗೆ ನನ್ನ ಕಣ್ಣಿಗೆ ಬಿದ್ದಿಲ್ಲ. ಇವುಗಳಲ್ಲಿ ಎಷ್ಟೋ ದ್ವಾರಸಮುದ್ರದ ಅನುಕರಣದಿಂದ ಉಳಿದ ಸಮುದ್ರ, ಸಾಗರಗಳು ತಲೆದೋರಿದ್ದರೆ ಅದು ಹೊಯಿಸಳರ ಕಾಲದ ಪ್ರಭಾವವೆಂದು ಹೇಳಬಹುದಾಗಿದೆ.

ಹಂಪೆಯ ಹೆಸರನ್ನು ಅನುಕರಿಸಿ ಅನೇಕ ಊರುಗಳು ತಲೆಯೆತ್ತಿದ್ದು ಆ ಕ್ಷೇತ್ರದ ಮಹಿಮೆಯೆ ಆಗಿದೆ. ಹಂಪಸಾಗರ (ಧಾ) ಹಂಪಿಹೊಳೆ (ರಾಮದುರ್ಗ); ಹಂಪಾಪಟ್ಟಣ(ಬ), ಹಂಪಸಾಗರ(ಬ), ಹಂಪಾ ದೇವನಹಳ್ಳಿ (ಬ), ಹಂಪಾಪುರಂ(ಬ), ಮುಂತಾದುವುಗಳು ಇದಕ್ಕೆ ನಿದರ್ಶನ. ನಮ್ಮಲ್ಲಿಯ ಉಜ್ಜಯನಿ ಮತ್ತು ಸೋಮನಾಥಪುರಗಳೂ ಆ ಕ್ಷೇತ್ರದ ವಿಷಯಕ್ಕಿದ್ದ ಆತ್ಮೀಯತೆಯನ್ನೆ ಸೂಚಿಸುತ್ತವೆ.

ಊರ ಹೆಸರುಗಳಿಂದ ಕೆಲವೆಡೆಗೆ ನೆಲದ ಸ್ಥಿತಿ ತಿಳಿಯುತ್ತದೆ. ಕರ್ಲಕೊಪ್ಪ, ಎರೆಗಟ್ಟಿ, ಕರೆಕಟ್ಟಿಗಳು ಆ ಭೂಮಿಯನ್ನು ವರ್ಣಿಸುತ್ತವೆ. ಕೆಸರ ಕೋಡಿ, ಕೆಸರಕೊಪ್ಪ, ಕೊಳಚಿ, ಜಲದುರ್ಗ, ಜಲಗಡ್ಡೆ, ಸುವಳ ಹಳ್ಳಿಗಳು ತಾವಿದ್ದ ಎಡೆಯ ಬಗೆಯ ಸೂಚಕವಾಗಿವೆ. ಉಪ್ಪಾರು, ಉಪ್ಪಿನ ಅಂಗಡಿ, ಉಪ್ಪಿನ ಬೆಟ್ಟಗೆರೆಯಂತಹ ಎಡೆಗಳಲ್ಲಿ ಉಪ್ಪು ತೆಗೆವ ಕೆಲಸ ನಡೆಯುತ್ತಿದ್ದಿತೇನೋ ವಿಚಾರಾರ್ಹವಾದ ವಿಷಯ.

ಊರ ಪ್ರಾಕೃತಿಕ ಸ್ಥಿತಿಯು ತಿಳಿಯುವಂತೆ ಹಲವು ಹೆಸರುಗಳು ಅಲ್ಲಿಯ ಸಸ್ಯಾದಿಗಳ ಬೆಳೆಯನ್ನು ಹೇಳುವುವು. ತುಳಸಗೇರಿ, ತುಳಸಾಪುರದಂತಹವು ಅಲ್ಲಿ ತುಳಸಿಯ ಗಿಡ ಬೆಳೆಯುವುದನ್ನು ಸೂಚಿಸುವುವು, ಎಂದು ತರ್ಕಿಸುವುದು ಸರಿಯಾಗಲಾರದು. ತುಳಸಿಯಲ್ಲಿರುವ ತಮ್ಮ ನಂಬುಗೆಯ ಸಲುವಾಗಿ, ಅದರ ಮೇಲಣ ಭಕ್ತಿ, ಪ್ರೀತಿಯಿಂದ ಇಟ್ಟ ಹೆಸರು ಎಂದು ಬಗೆಯುವುದೆ ಹೆಚ್ಚು ಸಮಂಜಸವಾಗಿದೆ. ಏಕೆಂದರೆ ತುಳಸಿ ಬೆಳೆಯದ ಪ್ರದೇಶವಿಲ್ಲ. ತೇಗೂರು ಎಂಬುದು ಹಾಗಲ್ಲ. ಬಯಲ ಸೀಮೆಯಲ್ಲಿ ತೇಗು ಕಾಣದು. ಅದು ಮಲೆನಾಡಿನ ಮರ. ಆದಕಾರಣ ತೇಗೂರೆಂಬಲ್ಲಿ ಎಂತಹ ಭೂಮಿ, ಎಂತಹ ಹವಾಮಾನವು ಇದ್ದೀತೆಂಬುದನ್ನು ಆ ಊರ ಹೆಸರಿನಿಂದಲೆ ಕೆಲಮಟ್ಟಿಗೆ, ನಿರ್ಧರಿಸಲು ಬರುವುದು. ಜಾಲಿಕಟ್ಟಿ, ಜಾಲಿಕೊಪ್ಪ, ಬಾಬುಳಗಾವಗಳು ಬೆಳುವೊಲದಲ್ಲಿಯೆ ಬಹಳ. ಇದರಂತೆ ತಾವರಗೆರೆ, ತಾವರೆಗಟ್ಟಿಗಳು ಮಳೆಯು ಅಪರೂಪವಾಗಿರುವ ನೀರಿಲ್ಲದ ಪ್ರದೇಶದಲ್ಲಿ ಇರುವುದು ಸಾಧ್ಯವೆ?

ಕೆರೆ ಮತ್ತು ಕೇರಿ ಎಂಬೆರಡು ಪದಗಳಲ್ಲಿ ಆಗಾಗ ಅದಲು ಬದಲು ಆಗುತ್ತಿರುತ್ತದೆ. ನುಗ್ಗೀ-ಕೆರೆಯೊ, ನುಗ್ಗೀಕೇರೆಯೊ? ಇಂತಹ ಸಂದರ್ಭಗಳಲ್ಲಿ ಕೆರೆಯೆಂಬುದೇ ಹೆಚ್ಚು ಇಷ್ಟವಾದುದೆಂದು ನನ್ನ ತಿಳುವಳಿಕೆ. ಕೆರೆಯಾದರೂ ನೀರಿಗಾಗಿ ಊರಿಗೆ ಬೇಕೇಬೇಕು. ಕೆರೆ ಮೊದಲಾದ ಜಲಾಶಯದಿಂದ ಊರಿಗೆ ಹೆಸರು ಬಂದಿರುವುದು ಸ್ವಾಭಾವಿಕ. ಆದರೆ, ಕೇರಿಯೆಂದರೂ ತಪ್ಪಲ್ಲ. ಕೇರಿ ಎಂದರೆ ಸೇರುವೆ, ಕೂಟ, ವಸತಿ ಸ್ಥಾನ, ತಮಿಳಿನಲ್ಲಿ ಇದೇ ಚೇರಿಯೆಂದಿದೆ. ಕೆರೆಯಂತಹ ಜಲಾಶಯಕ್ಕೆ ಮುಖ್ಯತ್ವವಿಲ್ಲದೆ, ಇರುವ ಎಡೆ ಎಂಬರ್ಥವಿರುವಾಗ ಕೆರೆಗಿಂತ ಕೇರಿಯೆಂಬುದೇ ಲೇಸು. ಆದಕಾರಣ ತಮ್ಮ ಊರ ಹೆಸರಿನ ಕೊನೆಯ ಪದವು ಕೆರೆಯೊ ಕೇರಿಯೊ ಎಂಬುದನ್ನು ಆಯಾ ಊರವರೇ ನಿರ್ಧರಿಸಬೇಕು.

ಇದರಂತೆ ಪ್ರಾಣಿಗಳಿಂದ ಬಂದ ಹೆಸರಿನಿಂದಲೂ ಭೌಗೋಲಿಕ ಸ್ಥಿತಿಯ ಕಲ್ಪನೆಯು ಬರುವುದು. ಆನೆಗೊಳ, ಆನೆಗೊಂದಿಗಳು ಬೆಟ್ಟಗಳಿಲ್ಲದ ಬಯಲನಾಡಿನಲ್ಲಿದ್ದರೆ ಆ ಊರ ಹೆಸರು ಅಲ್ಲಿ ಆನೆಗಳು ವಿಶೇಷವಾಗಿ ಇದ್ದುದಕ್ಕಾಗಿ ಬಂದುವಾಗಿರಲಾರವು. ಬೇರೆ ಕಾರಣಕ್ಕಾಗಿ ಬಂದಿರಬೇಕೆಂದು ನಿಶ್ಚಿತವಾಗಿ ಹೇಳಬಹುದಾಗಿದೆ. ಯಾವನೊಬ್ಬ ಅರಸನು ಸಾಕಿದ ಆನೆಗಳು ಕ್ರೀಡಿಸುವುದಕ್ಕಾಗಿ ಕಟ್ಟಿದ ಕೊಳದ ಮೇಲಿಂದ ಆನೆಗೊಳವೆಂದು

ಹೆಸರಾಂತ ಕೊಪ್ಪಳದಲ್ಲಿ ಗುಡ್ಡವಿದ್ದುದು ಸರಿಯಾದುದೇ ಆಗಿದೆ. ಸಾಂಗಲಿಯ ಹತ್ತಿರ 'ಕೂಪವಾಡ', ವೆಂದು ಕರೆಯಲ್ಪಡುವ ಮಾಳವಿದೆ. ಎತ್ತರವಾದ ಈ ಪ್ರದೇಶಕ್ಕೆ ಕುಪ್ಪವಾಡವೆಂದು ನಿಜವಾದ ಹೆಸರು. ಆದರೆ ದ್ವಿತ್ವವನ್ನು ಉಚ್ಚರಿಸಲು ಆರಿಯ ಮಾತಿನವರಿಗೆ ತೊಂದರೆಯಾಗುತ್ತದೆ. ಆದಕಾರಣ ಕಪ್ಪುರ-ಕಾಪೂರವಾದಂತೆ ಕುಪ್ಪವು ಕೂಪವಾಯಿತು. ಕುಪ್ಪಗಲ್ಲು, ತಾಳಗುಪ್ಪೆ ಇಂತಿವೆಲ್ಲವೂ ಮಾಳದ ನೆಲಗಳು. ಆದರೆ, ಕೊಪ್ಪವೆಂಬುದು ಕೆಲವೆಡೆಗೆ ಊರ ಹರಹು, ನೆರೆಯ ಹಳ್ಳಿ ಎಂಬರ್ಥದಲ್ಲೂ ಬಳಕೆಯಲ್ಲಿ ಬಂದುದು ಕಂಡುಬರುವುದು.

ಕುಮರಿ, ಕುಂಬೆಗಳು ಗುಡ್ಡದ ಪ್ರದೇಶ, ಗುಡ್ಡದ ಬದಿಗೆ ಇರುವ ಊರು ಎಂಬರ್ಥವುಳ್ಳವುಗಳಾಗಿವೆ.

ಕುನ್ದ, ಗುನ್ದ, ಗೊನ್ದಿ, ಗೊಣ್ಡೆ, ಗೊನ್ದ ಎಂಬೀ ಬಳಗದ ನುಡಿಗಳು ಸ್ವಲ್ಪ ಎತ್ತರದ ಪ್ರದೇಶ, ಗುಡ್ಡದ ನೆರೆಯವೂರು ಎಂಬರ್ಥವುಳ್ಳವುಗಳಾಗಿವೆ. ತಮಿಳಿನಲ್ಲಿ ಕನ್‌ಱು ಎಂಬ ಪದವು ಇದೇ ಅರ್ಥವುಳ್ಳುದಾಗಿದೆ. ನಮ್ಮ ನಾಡಿನ ಕುನ್ದರ (ನಾಡು), ಕುನ್ದರಿಗಿ ಎಂಬೀ ಸ್ಥಳಗಳು ಕುನ್‌ಱು ಎಂಬ ತಮಿಳ ರೂಪಕ್ಕೆ ಬಹಳ ಹತ್ತಿರದುವುಗಳಾಗಿವೆ.

ಕೂನು ಅಥವಾ ಗೂನು ಎಂದು ಬಾಗಿದ್ದಕ್ಕೆ, ವಕ್ರತೆಗೆ ಹೇಳುವುದುಂಟು. ಕುಳ್ ಅಥವಾ ಕುನ್ ಎಂಬುದು ಇದರ ಬೀಜಶಬ್ದ. ಕುಳ್-ಕುಳ್ಳಿ-ಗುಳ್ಳಿ; ಗುಂಡು, ಗುಡ್ಡೆ....., ಈ ಗೂನಿನ ಒಳಬದಿಯಿಂದ ನೋಡಿದರೆ ಅದು ತಗ್ಗು ಎಂಬರ್ಥ ಕೊಡುವುದು; ಹೊರಬದಿಯಿಂದ ಎತ್ತರವೆಂದಾಗುವುದು. ಹೀಗಿದು ಆಳ ಮತ್ತು ಎತ್ತರ ಎಂಬ ಎರಡೂ ಅರ್ಥಗಳನ್ನು ಸೂಚಿಸಬಲ್ಲುದಾಗಿದೆ. ಆದುದರಿಂದ ಇದರೊಳಗಿನ ಗುಂಡಿ, ಕುಂಟೆ ಎಂಬೀ ಕೆಲವು ನುಡಿಗಳು ಕೆರೆ, ಕೊಳ ಎಂಬರ್ಥವುಳ್ಳವುಗಳಾಗಿವೆ.

ಕುಂದ, ಗುಂದಗಳು ಇರುವ ಭಾಗದ ನಕ್ಷೆ ತೆಗೆಯಬೇಕು. ಇವು ಕಂನಾಡಿನ ಒಂದು ವಿಶಿಷ್ಟ ಭಾಗದಲ್ಲಿಯೆ ಹೆಚ್ಚಾಗಿವೆ. ಕುಂದಾಪುರ, ಕುಂದರಗೆ, ಹುನಗುಂದ, ಮುಳಗುಂದ, ನೀಲಗುಂದ, ನರಗುಂದ ಇಲ್ಲಿ ಎಲ್ಲೆಡೆಗೂ ಕುಪ್ಪ, ಗುಪ್ಪದಂತೆ ಎತ್ತರದ ಪ್ರದೇಶ, ಮರಡಿ, ಗುಡ್ಡವಿದ್ದುದುಂಟು. ಆದರೆ, ರೋಣ ತಾಲೂಕಿನ (ಧಾ. ಜಿ) ನಿಡುಗುಂದದಂತಹ ಸ್ವಲ್ಪ ಸ್ಥಳಗಳಲ್ಲಿ ಇದಕ್ಕೆ ಅಪವಾದವನ್ನು ಕಾಣಬಹುದು. ತೀರ ಹತ್ತಿರವಿಲ್ಲದಿದ್ದರೂ ಸಮೀಪದಲ್ಲಿ ಸ್ವಲ್ಪ ಮೇಲಿನ ಮೇಲೆ ನಿಡುಗುಂದಿಗೆ ಗುಡ್ಡವುಂಟು. ಗುಂಡ, ಗುಂಡಿ, ಗೊಂದಿಗಳು ನಾಡಿನ ಇನ್ನೊಂದು ನಿಟ್ಟಿನಲ್ಲಿ ಕಾಣಿಸಿಕೊಳ್ಳುವುವು.

ಹೊಲಗಳೆಂದ ಹೇಳುವುದು ಬೆಳುವೊಲದ ವಿಶೇಷ: ಗದ್ದೆ ಮಲೆನಾಡಿನಲ್ಲಿ ಮುಖ್ಯ. ಗದ್ದೆಯೆಂದೊಡನೆ ಅಲ್ಲಿ ಬತ್ತವೆ ಮುಖ್ಯ ಬೆಳೆ. ಮಕ್ಕಿ, ಮೊಗರು, ಹಿತ್ತಿಲು, ಕಾಡು, ಕಳ ಇವೂ ಮಲೆನಾಡಿನ-ಕಂನಡ ಜಿಲ್ಲೆಯ ಎಡೆಗಳೇ. ಖೇಟಗಳು, ಖೇಡಗಳು ವಿಜಾಪುರದ ಕಡೆಗೆ ಇರುವುವಾದರೆ ಶೇತ ಕಾರವಾರದಲ್ಲಿ. ಪೊಳಲು, ಹೊಳಲು ಕಂನಾಡ ಎಲ್ಲ ಭಾಗದಲ್ಲೂ ಉಂಟು. ಏರಿ, ಕಟ್ಟೆ, ಕೆರೆ, ಕುಂಟೆ, ಕೊಳ, ಕೊಳ್ಳಗಳು ದೇಶದ ವಿಶಿಷ್ಟ ಭಾಗದಲ್ಲಿಯೆ ಉಂಟೆಂದಲ್ಲ. ಆದರೂ ಕುಳಿ-ಗುಳಿ, ಗುಣಿಗಳು ಕನ್ನಡ ಜಿಲ್ಲೆಯತ್ತ ಹೆಚ್ಚು ಕಾಣುತ್ತವೆ.

ಕೊಂಬು, ಕೋಡುಗಳು ಪರ್ವತದ ಶಿಖರಗಳು; ಬಂಡಿ, ಕಲ್ಲು, ಶಿಲೆಗಳು ಗುಡ್ಡದ ಪ್ರದೇಶವೆಂದು ಅರ್ಥ ಮಾಡಬಹುದಾದರೂ ಇವುಗಳಲ್ಲಿ ಕಲ್ಲು ಎಂಬುದು ಹಲವೆಡೆಗೆ ಅಪವಾದವಾಗಿ ಇದ್ದುದು ಕಂಡುಬಂದಿದೆ. ತೋರಗಲ್ಲು, ತೋರಣಗಲ್ಲುಗಳಲ್ಲಿ ಗುಡ್ಡವಿದ್ದರೆ, ಕೊಳಗಲ್ಲುಗಳಂತಹ ಎಡೆಯಲ್ಲಿ ಕೇವಲ ಬಯಲು ಇದ್ದುದುಂಟು. ಕಲ್ಲು ಎಂದರೆ ಹರಳು ಎಂಬರ್ಥ ಮಾಡಬಹುದೇನೊ, ಅಂತಹ ಎಡೆಗಳಲ್ಲಿ ಮಲೆನಾಡಿನಲ್ಲಿ ಬಯಲ ಊರುಗಳು ಅದೆಷ್ಟೋ ತಲೆದೋರಿದ್ದು ಸಹಜವಾಗಿದೆ.

ಹಳ್ಳ, ಹೊಳೆ, ತೊರೆ, ಕೆರೆ, ಸರೋವರ, ಸಮುದ್ರ, ಸಾಂದ್ರ, ಸಾಗರಗಳಿದ್ದಲ್ಲಿ ಜಲಾಶಯವುಂಟೆಂದು ಹೇಳಬೇಕಾದ ಕಾರಣವಿಲ್ಲ. ಆದರೂ ಸಮುದ್ರ ಮತ್ತು ಸಾಗರಗಳು ನಮ್ಮ ನಾಡಿನ ಕೆಲವೊಂದು ಭಾಗದಲ್ಲಿಯೆ

ಇವೆ. ಮೈಸೂರು ಸೀಮೆಯಲ್ಲಿ ಇವು ವಿಪುಲವಾಗಿವೆ. ದ್ವಾರಸಮುದ್ರದ ಮಾದರಿಯಲ್ಲಿ ಉಳಿದ-ಸಮುದ್ರಗಳು ತಲೆಯೆತ್ತಿದುವೊ ಎಂಬುದು ಅಭ್ಯಸನೀಯವಾಗಿದೆ. ಇವು ಬಳ್ಳಾರಿ ಜಿಲ್ಲೆಯಲ್ಲಿವೆ. ಧಾರವಾಡ ಜಿಲ್ಲೆಯಲ್ಲಿ ಗದಗ ತಾಲೂಕಿನ ವರೆಗೆ ಮಲಸಮುದ್ರ ಮುಂತಾದ ಈ ಬಗೆಯ ಹೆಸರುಗಳಿವೆ. ಬೆಳಗಾವ ಜಿಲ್ಲೆಯಲ್ಲಿ ಪರಸಗಡ, ಬೈಲಹೊಂಗಲ ತಾಲೂಕಿನ ವರೆಗೆ ಅಕ್ಕಿ ಸಾಗರ ಮುಂ. ಇಂತಹ ಹೆಸರನ್ನು ಕಾಣಬಹುದು. ಕನ್ನಡ ಜಿಲ್ಲೆ, ವಿಜಾಪೂರಗಳ ಕಡೆಗೆ ನನ್ನ ಕಣ್ಣಿಗೆ ಬಿದ್ದಿಲ್ಲ. ಇವುಗಳಲ್ಲಿ ಎಷ್ಟೋ ದ್ವಾರಸಮುದ್ರದ ಅನುಕರಣದಿಂದ ಉಳಿದ ಸಮುದ್ರ, ಸಾಗರಗಳು ತಲೆದೋರಿದ್ದರೆ ಅದು ಹೊಯಿಸಳರ ಕಾಲದ ಪ್ರಭಾವವೆಂದು ಹೇಳಬಹುದಾಗಿದೆ.

ಹಂಪೆಯ ಹೆಸರನ್ನು ಅನುಕರಿಸಿ ಅನೇಕ ಊರುಗಳು ತಲೆಯೆತ್ತಿದ್ದು ಆ ಕ್ಷೇತ್ರದ ಮಹಿಮೆಯ ಆಗಿದೆ. ಹಂಪಸಾಗರ (ಧಾ) ಹಂಪಿಹೊಳೆ (ರಾಮದುರ್ಗ); ಹಂಪಾಪಟ್ಟಣ(ಬ), ಹಂಪಸಾಗರ(ಬ), ಹಂಪಾ ದೇವನಹಳ್ಳಿ (ಬ), ಹಂಪಾಪುರಂ(ಬ), ಮುಂತಾದುವುಗಳು ಇದಕ್ಕೆ ನಿದರ್ಶನ. ನಮ್ಮಲ್ಲಿಯ ಉಜ್ಜಯನಿ ಮತ್ತು ಸೋಮನಾಥಪುರಗಳೂ ಆ ಕ್ಷೇತ್ರದ ವಿಷಯಕ್ಕಿದ್ದ ಆತ್ಮೀಯತೆಯನ್ನೆ ಸೂಚಿಸುತ್ತವೆ.

ಊರ ಹೆಸರುಗಳಿಂದ ಕೆಲವೆಡೆಗೆ ನೆಲದ ಸ್ಥಿತಿ ತಿಳಿಯುತ್ತದೆ. ಕರ್ಲಕೊಪ್ಪ, ಎರೆಗಟ್ಟಿ, ಕರೆಕಟ್ಟೆಗಳು ಆ ಭೂಮಿಯನ್ನು ವರ್ಣಿಸುತ್ತವೆ. ಕೆಸರ ಕೋಡಿ, ಕೆಸರಕೊಪ್ಪ, ಕೊಳಚಿ, ಜಲದುರ್ಗ, ಜಲಗಡ್ಡೆ, ಸುವಳ ಹಳ್ಳಿಗಳು ತಾವಿದ್ದ ಎಡೆಯ ಬಗೆಯ ಸೂಚಕವಾಗಿವೆ. ಉಪ್ಪಾರು, ಉಪ್ಪಿನ ಅಂಗಡಿ, ಉಪ್ಪಿನ ಬೆಟ್ಟಗೆರೆಯಂತಹ ಎಡೆಗಳಲ್ಲಿ ಉಪ್ಪು ತೆಗೆವ ಕೆಲಸ ನಡೆಯುತ್ತಿದ್ದಿತೇನೋ ವಿಚಾರಾರ್ಹವಾದ ವಿಷಯ.

ಊರ ಪ್ರಾಕೃತಿಕ ಸ್ಥಿತಿಯು ತಿಳಿಯುವಂತೆ ಹಲವು ಹೆಸರುಗಳು ಅಲ್ಲಿಯ ಸಸ್ಯಾದಿಗಳ ಬೆಳೆಯನ್ನು ಹೇಳುವುವು. ತುಳಸಗೇರಿ, ತುಳಸಾಪುರದಂತಹವು ಅಲ್ಲಿ ತುಳಸಿಯ ಗಿಡ ಬೆಳೆಯುವುದನ್ನು ಸೂಚಿಸುವುವು, ಎಂದು ತರ್ಕಿಸುವುದು ಸರಿಯಾಗಲಾರದು. ತುಳಸಿಯಲ್ಲಿರುವ ತಮ್ಮ ನಂಬುಗೆಯ ಸಲುವಾಗಿ, ಅದರ ಮೇಲಣ ಭಕ್ತಿ, ಪ್ರೀತಿಯಿಂದ ಇಟ್ಟ ಹೆಸರು ಎಂದು ಬಗೆಯುವುದೆ ಹೆಚ್ಚು ಸಮಂಜಸವಾಗಿದೆ. ಏಕೆಂದರೆ ತುಳಸಿ ಬೆಳೆಯದ ಪ್ರದೇಶವಿಲ್ಲ. ತೇಗೂರು ಎಂಬುದು ಹಾಗಲ್ಲ. ಬಯಲ ಸೀಮೆಯಲ್ಲಿ ತೇಗು ಕಾಣದು. ಅದು ಮಲೆನಾಡಿನ ಮರ. ಆದಕಾರಣ ತೇಗೂರೆಂಬಲ್ಲಿ ಎಂತಹ ಭೂಮಿ, ಎಂತಹ ಹವಾಮಾನವು ಇದ್ದಿತೆಂಬುದನ್ನು ಆ ಊರ ಹೆಸರಿನಿಂದಲೆ ಕೆಲಮಟ್ಟಿಗೆ, ನಿರ್ಧರಿಸಲು ಬರುವುದು. ಜಾಲಿಕಟ್ಟಿ, ಜಾಲಿಕೊಪ್ಪ, ಬಾಬುಳಗಾವಗಳು ಬೆಳುವೊಲದಲ್ಲಿಯೆ ಬಹಳ. ಇದರಂತೆ ತಾವರಗೆರೆ, ತಾವರೆಗಟ್ಟಿಗಳು ಮಳೆಯು ಅಪರೂಪವಾಗಿರುವ ನೀರಿಲ್ಲದ ಪ್ರದೇಶದಲ್ಲಿ ಇರುವುದು ಸಾಧ್ಯವೆ?

ಕೆರೆ ಮತ್ತು ಕೇರಿ ಎಂಬೆರಡು ಪದಗಳಲ್ಲಿ ಆಗಾಗ ಅದಲು ಬದಲು ಆಗುತ್ತಿರುತ್ತದೆ. ನುಗ್ಗೀ-ಕೆರೆಯೊ, ನುಗ್ಗೀಕೇರೆಯೊ? ಇಂತಹ ಸಂದರ್ಭಗಳಲ್ಲಿ ಕೆರೆಯೆಂಬುದೇ ಹೆಚ್ಚು ಇಷ್ಟವಾದುದೆಂದು ನನ್ನ ತಿಳುವಳಿಕೆ. ಕೆರೆಯಾದರೂ ನೀರಿಗಾಗಿ ಊರಿಗೆ ಬೇಕೇಬೇಕು. ಕೆರೆ ಮೊದಲಾದ ಜಲಾಶಯದಿಂದ ಊರಿಗೆ ಹೆಸರು ಬಂದಿರುವುದು ಸ್ವಾಭಾವಿಕ. ಆದರೆ, ಕೇರಿಯೆಂದರೂ ತಪ್ಪಲ್ಲ. ಕೇರಿ ಎಂದರೆ ಸೇರುವೆ, ಕೂಟ, ವಸತಿ ಸ್ಥಾನ, ತಮಿಳಿನಲ್ಲಿ ಇದೇ ಚೇರಿಯೆಂದಿದೆ. ಕೆರೆಯಂತಹ ಜಲಾಶಯಕ್ಕೆ ಮುಖ್ಯತ್ವವಿಲ್ಲದೆ, ಇರುವ ಎಡೆ ಎಂಬರ್ಥವಿರುವಾಗ ಕೆರೆಗಿಂತ ಕೇರಿಯೆಂಬುದೇ ಲೇಸು. ಆದಕಾರಣ ತಮ್ಮ ಊರ ಹೆಸರಿನ ಕೊನೆಯ ಪದವು ಕೆರೆಯೊ ಕೇರಿಯೊ ಎಂಬುದನ್ನು ಆಯಾ ಊರವರೇ ನಿರ್ಧರಿಸಬೇಕು.

ಇದರಂತೆ ಪ್ರಾಣಿಗಳಿಂದ ಬಂದ ಹೆಸರಿನಿಂದಲೂ ಭೌಗೋಲಿಕ ಸ್ಥಿತಿಯ ಕಲ್ಪನೆಯು ಬರುವುದು. ಆನೆಗೊಳ, ಆನೆಗೊಂದಿಗಳು ಬೆಟ್ಟಗಳಿಲ್ಲದ ಬಯಲನಾಡಿನಲ್ಲಿದ್ದರೆ ಆ ಊರ ಹೆಸರು ಅಲ್ಲಿ ಆನೆಗಳು ವಿಶೇಷವಾಗಿ ಇದ್ದುದಕ್ಕಾಗಿ ಬಂದುವಾಗಿರಲಾರವು. ಬೇರೆ ಕಾರಣಕ್ಕಾಗಿ ಬಂದಿರಬೇಕೆಂದು ನಿಶ್ಚಿತವಾಗಿ ಹೇಳಬಹುದಾಗಿದೆ. ಯಾವನೊಬ್ಬ ಅರಸನು ಸಾಕಿದ ಆನೆಗಳು ಕ್ರೀಡಿಸುವುದಕ್ಕಾಗಿ ಕಟ್ಟಿದ ಕೊಳದ ಮೇಲಿಂದ ಆನೆಗೊಳವೆಂದು

ಹೆಸರು ಬಂದಿದೆಯೆಂದು ತರ್ಕಿಸಲು ಅಡ್ಡಿಯಿಲ್ಲ. ಆದರೆ, ಮಲೆನಾಡಿನ ಕಾಡು ಸುತ್ತಲೂ ಇರುವ ಪ್ರದೇಶದಲ್ಲಿ ಆನೆಗೊಳವಿದ್ದರೆ ಅಲ್ಲಿ ಒಮ್ಮೆ ಆನೆಗಳು ವಿಶೇಷವಾಗಿದ್ದ ಮೂಲಕವಾಗಿಯೆ ಹೆಸರು ಬಂದಿದೆಯೆಂದು ತಿಳಿಯಲು ಅಡ್ಡಿಯಿಲ್ಲ. ಇದೆ ಮೇರೆಗೆ ಹುಲ್ಲೆ, ಹುಲಿ, ಹಂದಿ ಮೊದಲಾದ ಪ್ರಾಣಿಗಳ ಹೆಸರಿನ ಹಳ್ಳಿಗಳ ವಿಚಾರವೂ ಉಂಟು.

ಈ ಬಗೆಯಾಗಿ ಪ್ರಾಕೃತಿಕ ಸ್ವರೂಪದಂತೆ, ಎಡೆಯ ಹೆಸರುಗಳಿಂದ ರಾಜಕೀಯ ಭೂಗೋಲವೂ ಗೊತ್ತಾಗುವುದು. ನಗರ, ಪೇಟೆ, ಪಟ್ಟಣ, ಅಂಗಡಿ ಎಂಬ ಹೆಸರಿನ ಊರುಗಳು ಒಂದು ಕಾಲಕ್ಕೆ ವ್ಯಾಪಾರದ ಸ್ಥಳಗಳೆಂದು ಸಾಮಾನ್ಯವಾಗಿ ಹೇಳಿದರೆ ವಿಶೇಷ ತಪ್ಪಾಗಲಾರದು. ಅಂಗಡಿಗಳೆಂಬುವು ಕಂನಡ ಜಿಲ್ಲೆಯಲ್ಲಿ ಕಂಡುಬರುತ್ತವೆ. ಉಪಿನಂಗಡಿ, ಬೆಳ್ತಂಗಡಿ, ಹಟ್ಟಿಯಂಗಡಿ ಮುಂ.

ಕೋಟೆ, ಕಣಿವೆ, ಕಂಡಿಗಳು ರಾಜಕೀಯ ದೃಷ್ಟಿಯಿಂದ ಮಹತ್ವದ ಠಾಣ್ಯಗಳಾಗಿರುತ್ತವೆ.

ಬಾದಾಮಿ, ಕಲ್ಯಾಣ, ಮಳಖೇಡ, ಬನವಾಸಿ, ಹಂಪಿ, ಹಳೇಬೀಡು, ತಳಕಾಡು, ಇಂತಹ ಪ್ರಮುಖ ಹಿರಿಯೂರೂಗಳೊಳಗೆ ಹೋಗಿಬರುವ ರಾಜಮಾರ್ಗಗಳು ಇರಲೇಬೇಕು. ಶಾಸನಗಳಲ್ಲಿ ದಾನಭೂಮಿಯ ಮೇರೆಗಳನ್ನು ಹೇಳುವಾಗ 'ರಾಜಪಥ'ದ (ಯಾವುದೊಂದು ದಿಕ್ಕಿಗೆ ಇದ್ದರೆ) ಉಲ್ಲೇಖಗಳು ಸಿಕ್ಕುತ್ತವೆ. ಕಲ್ಯಾಣದಿಂದ ಕಾಂಚಿಯ ವರೆಗೆ ಅವ್ಯಾಹತವಾದ ರಾಜಕೀಯ ಹಾಗೂ ಧಾರ್ಮಿಕ, ಸಾಮಾಜಿಕ ವ್ಯವಹಾರಗಳು ಸಾವಿರ ವರುಷಕ್ಕಿಂತ ಹೆಚ್ಚು ಕಾಲ ನಡೆದೆ ಇದ್ದುವು. ಆದರೆ, ಈ ಹೆದ್ದಾರಿಯು ಯಾವ ಯಾವ ಊರುಗಳ ಹತ್ತಿರಿನಿಂದ ಹೋಗುತ್ತಿದ್ದಿತೆಂಬುದು ನಿಶ್ಚಿತವಾಗಿ ಇನ್ನೂ ಬೆಳಕಿಗೆ ಬಂದಿಲ್ಲ. ಇದರಂತೆ ಉತ್ತರದಲ್ಲಿ ಪೈಠಣ, ಎಲ್ಲೂರು (ಎಲೋರಾ), ಅಜಂತಾ, ಅನಹಿಲವಾಡ, ಸೌರಾಷ್ಟ್ರಾದಿಗಳ ಸಂಗಡ ಇದ್ದ ವ್ಯವಹಾರವು ಸಾಗುತ್ತಿದ್ದ ಹೆದ್ದಾರಿಗಳೂ ಬೆಳಕಿಗೆ ಬರಬೇಕಾಗಿದೆ. ದ್ವಾರಕೆಯು ಪೂರ್ವಕಲಾದಲ್ಲಿ ಪಶ್ಚಿಮ ಕರಾವಳಿಯಿಂದ ಒಳನಾಡಿಗೆ ಸಾಗುತ್ತಿದ್ದ ವ್ಯಾಪಾರದ ಹೆಬ್ಬಾಗಿಲು ಆಗಿರುವ ಸಂಭವವಿದೆ. 'ದ್ವಾರ' ವೆಂಬ ಪದವು ಇದೇ ಅರ್ಥವನ್ನು ಸೂಚಿಸುವುದೆಂದು ನನ್ನ ಊಹೆ. 'ಬಾಯಿ' 'ಬಾಗಿಲು'ಗಳೆಂಬ ಊರುಗಳು ಒಂದು ಕಾಲದ ರಾಜಕೀಯ ಅಥವಾ ವ್ಯಾಪಾರೋದ್ಯೋಗದ ಮುಖಗಳಾಗಿರಬೇಕು. ಅವುಗಳ ಮುಖಾಂತರವಾಗಿ ವ್ಯವಹಾರಗಳು ಮುಂದುವರಿಯುತ್ತಿರಬೇಕು.

ಕೆಲವು ಎಡೆಯ ಹೆಸರುಗಳು, ತಮ್ಮ ನೆರೆಯಹೊರೆಯಲ್ಲಿರುವ ಭೂಗತ ಸ್ವಾಭಾವಿಕ ದ್ರವ್ಯದ ಸಂಶೋಧನಕ್ಕೆ ಸೂಚನೆಯನ್ನು ಕೊಡುತ್ತವೆ. ಭದ್ರಾವತಿಯ ಕಬ್ಬಿಣದ ಕಾರಖಾನೆಯ ಉಗಮವು ಇದೇ ತೆರನಾಗಿ ಆಗಿದೆಯೆಂದು ಕೇಳಿದ್ದೇನೆ. ಭದ್ರಾವತಿಯ ಮೊದಲಿನ ಹೆಸರು ಬೆಂಕೀಪುರವೆಂದಿತ್ತು. ಬೆಂಕೀಪುರವೆಂದು ಹೆಸರು ಬರಲು ಏನಾದರೂ ವಿಶೇಷ ಕಾರಣವಿರಬೇಕೆಂದು ನಡಸಿದ ಸೂಕ್ಷ್ಮ ನಿರೀಕ್ಷಣೆಯೆ ಮುಂದೆ ಇಂದಿನ ಭವ್ಯವಾದ ಔದ್ಯೋಗಿಕ ಕೇಂದ್ರ ನಿರ್ಮಾಣಕ್ಕೆ ಕಾರಣವಾಯಿತು. ಕೆಮ್ಮನ ಗುಂಡಿಯ ಮಾಳದಿಂದ ಕಬ್ಬಿಣದ ಅದಿರು ದೊರೆತು ಭಾರತದಲ್ಲಿ ಅದ್ವಿತೀಯವಾದ ಕಾರಖಾನೆಯು ನಡೆದಿದೆ.

ಪ್ರಾಚೀನ ಕಾಲದಲ್ಲಿ ಹೊಳೆಗಳ ರೇವೆಯಲ್ಲಿ ಬಂಗಾರವನ್ನು ಸೋಸುವುದು ನಡೆಯುತ್ತಿದ್ದಿತಂತೆ. ಹೊಳೆಗಳು ಹರಿಯುತ್ತ ಬರುವಾಗ ಹಲವೆಡೆಗೆ ಬಂಗಾರದ ಸೂಸು ಕಣಗಳನ್ನು ತಂದು ಮಳಲಿನಲ್ಲಿ ಬಿಡುವುದುಂಟು. ಈ ಕಾರಣದಿಂದಲೊ ಏನೊ ಕಂನಾಡ ಕೆಲವು ಹೊಳೆಗಳಿಗೆ ಸುವರ್ಣಾವತಿ, ಹೇಮಾವತಿ ಎಂಬೀ ಬಗೆಯ ಹೆಸರುಗಳಿವೆ. ಹಟ್ಟಿ (ನಿ. ಕಂ.) ಯಲ್ಲಿ ಚಿನ್ನದ ಅತಿ ಪುರಾತನ ಗಣಿಗೆಳಿವೆ. ಹಟ್ಟಿಯಲ್ಲಿ ಹುಟ್ಟಿದ ವಸ್ತುವೆಂದು ಬಂಗಾರಕ್ಕೆ 'ಹಾಟಕ' ವೆಂಬ ಹೆಸರು ಬಂದುದುಂಟು. ಕೊಡಗಿನ ಹರಿಂಗಿ ಎಂಬ ಹೊಳೆಗೆ ಒಂದು ಭಾಗದಲ್ಲಿ ಹಟ್ಟಿ ಹೊಳೆ ಮತ್ತೊಂದು ಭಾಗದಲ್ಲಿ ಸುವರ್ಣಾವತಿ ಎಂಬ ಹೆಸರುಂಟು. ಈ ಹೊಳೆಗಳಲ್ಲಿ ಸೋಸಿದರೆ ಬಂಗಾರವು ಈಗಲೂ ಹೊರಡುವುದೆ ಎಂಬುದು ನೋಡಬೇಕಾದ ಸಂಗತಿ.

ಅಕ್ಕಿ, ಕಬ್ಬು, ಜೋಳ, ಗೋದಿ, ಹತ್ತಿಗಳಿಗೆ ಹೆಸರಾದ ನಾಡು. ಅಕ್ಕಿಯ ಹೆಸರಿನ ಊರುಗಳೂ, ಬತ್ತದ ಬಗೆಬಗೆಗಳನ್ನು ಸೂಚಿಸುವ ಬೇರೆ ಬೇರೆ ಊರುಗಳೂ ಹಲವಾರು ಇವೆ. ಕಬ್ಬೂರುಗಳಿಗಂತೂ ಎಣಿಕೆಯಿಲ್ಲ. ಅವು ಮಲೆನಾಡು, ಬೆಳುವೊಲ ಎಲ್ಲೆಡೆಗೂ ಇವೆ. ಅವೆಲ್ಲವೂ ಒಮ್ಮೆ ಕಬ್ಬು ಬೆಳೆವ ಊರಾಗಳಾಗಿದ್ದುವು. ಬೆಲ್ಲದ ಮೇಲೆ ನಮ್ಮ ನಾಡಿಗರಿಗೆ ನಚ್ಚು ಬಹಳ. 'ಬೆಲ್ಲದಿಂದೆ ಇನಿಯನೆ'? (ಬೆಲ್ಲಕ್ಕಿಂತಲೂ ಸವಿಯಾಗಿರುವ್ವನೆ?) ಎಂದು ಕೇಳುವ ವಾಡಿಕೆಯಿದೆ. ಮುದ್ದಿಗೆ (ಚಿಕ್ಕ ಮಕ್ಕಳಲ್ಲಿ) 'ಬೆಲ್ಲ' ಎಂಬ ಪಡೆನುಡಿಯುಂಟು. ಇಷ್ಟು ಬೆಲ್ಲದ ಮೇಲಣ ಒಲವು. ಅದು ಇಲ್ಲಿ ವಿಶೇಷವಾಗಿ ಇದ್ದಿತು. 'ಜೋಳದ ಉಪಕಾರ' ಎಂಬ ಪಡೆನುಡಿಯಿದ್ದಿತು. ಜೋಳದ ರಾಶಿಯ ಊರ ಹೆಸರಿವೆ. ಗೋದಿ ಹಾಳೂ ಉಂಟು. ಹತ್ತಿಯ ಬೆಳೆ ವಿಶೇಷವಾದರೂ ಆ ಹೆಸರಿನ ಊರು ಇಲ್ಲದುದು ಸೋಜಿಗ. ನೂಲವಿ, ಜಾಡರಹಳ್ಳಿ, ಇವೆ.

ಕಡಲೆ ಕ್ರಿಸ್ತಶಕದ ಆದಿಯಲ್ಲಿ ಭಾರತಕ್ಕೆ ಬಂದಿತಂತೆ. ಆದರೆ, ಆ ಹೆಸರಿನ ಊರುಗಳೂ ಇವೆ. ನಮ್ಮ ನಾಡಿಗೆ ಹೊರಗಣಿಂದ ಬಂದ ಕೆಲವು ಗಿಡಗಳಿವೆ. ಕಲ್ನಾರು ಹೊರಗಿನದು. ಆದರೆ, ಆ ಹೆಸರಿನ ಎಡೆಗಳಿಲ್ಲ. ಸಿಂದಿಗಿಡವು ಸಿಂಧೂದೇಶದಿಂದ ಬಂದುದು. 'ಸೇಂಧೀ-ಸಿಂಧ ದೇಶ, ಜಹಾ ಖಜೂರ ಬಹುತ ಹೋತಾ ಹೈ: ಖಜರೂ; ಖಜೂರಕಾ ಶರಾಬ;' ಮೀಠೀ ಶರಾಬ; ಎಂಬ ಅರ್ಥಗಳು ಕೋಶದಲ್ಲಿ ದೊರೆಯುತ್ತವೆ. ಸಿಂದಿಗೆ, ಸಿಂದವಾಡಿ ಮೊದಲಾದ ಊರುಗಳು ಸಿಂದರೆಂಬ ಈ ನಾಡಿನಲ್ಲಿ ಆಳಿದ ರಾಜರಿಂದ ಬಂದುವೆಂದೇ ನನ್ನ ನಂಬುಗೆ. ವಿಜಾಪೂರ ಜಿಲ್ಹೆಯೊಳಗಿನ ಸಿಂದಿಗೆ (ತಾಲ್ಲೂಕು) ಬಾಗಿಲಕೋಟೆಯ ಹತ್ತರಿನ ಸಿಂದಿಗೆ ಎರಡೂ ಸಿಂದಿಗೆಗಳಲ್ಲಿ ಸಿಂದೀ ಗಿಡಗಳು ಅಪರೂಪವೆಂದು ತಿಳಿದವರಿಂದ ಕೇಳಿಕೊಂಡಿದ್ದೇನೆ. ಇನ್ನುಳಿದ ಸಿಂದಿಕುರುಬೆಟ್ಟ ಮೊದಲಾದ ಬೇರೆಡೆಗಳಲ್ಲಿ ಯಾವುದಾದರೂ ಒಂದೆರಡು ಸಿಂದಿಗಿಡದ ಮೂಲಕ ಹೆಸರುಳ್ಳವುಗಾಳಾಗಿರಲೂ ಬಹುದು. ಈ (ಸಿಂದಿ) ಹೆಸರಿನಿಂದ, ಇಂದು ಸಿಂಧೂದೇಶದಿಂದ ಬಂದ ಗಿಡವೆಂಬುದು ನಿಶ್ಚಿತ ಎಂದು ಬಂದಿತು, ಹೇಗೆ ಬಂದಿತೆಂಬುದನ್ನು ಇನ್ನೂ ನಿಶ್ಚಿತವಾಗಿ ಅರಿತುಕೊಳ್ಳುವುದು ಅವಶ್ಯವಾಗಿದೆ.

ಚಂದ್ರವಳ್ಳಿ ಮೊದಲಾದ ಕಡೆಗೆ ದೊರೆವ ಗ್ರೀಕ, ರೋಮರ ನಾಣ್ಯಗಳಿಂದ ಆ ನಾಡುಗಳೊಡನೆ ಕಂನಾಡವರ ವ್ಯಾಪಾರವು ನಡೆಯುತ್ತಿದ್ದುದು ತಿಳಿದುಬರುತ್ತದೆ. ಕ್ರಿ.ಶ. ೨ನೆಯ ಶತಕದ ಸುಮಾರಿನ ಒಂದು ಗ್ರೀಕ ನಾಟಕದಲ್ಲಿ ಕಂನುಡಿಯ ಮಾತುಗಳಿದ್ದುದನ್ನು ಬಲ್ಲಿದರು ಕಂಡುಹಿಡಿದಿರುವರು. ಸುರತ ಮಲ್ಪೆ ಮೊದಲಾದ ಬಂದರಗಳು ಊರ್ಜಿತ ಸ್ಥಿತಿಯಲ್ಲಿದ್ದುವು. ಕ್ರಿ.ಶ. ದ ಆರಂಭಕ್ಕೆ ಜೋಳವು ಇಟಲಿಗೆ ಹಿಂದೂದೇಶದಿಂದ ಬಂದಿರಬೇಕೆಂದು ಹೇಳುತ್ತಾರೆ. ಹತ್ತಿಯಂತೂ ಹಿಂದೂ ದೇಶದಿಂದಲೇ ಹೋದುದು ನಿಶ್ಚಿತವಾಗಿ ತಿಳಿದಿದೆ. ವಸ್ತ್ರಗಳ ನಿರ್ಮಾಣಕ್ಕಾಗಿ ವಿಖ್ಯಾತವಾದ ಪಟ್ಟಿ (ಹಟ್ಟಿ)ಯು ಆ ವ್ಯಾಪಾರವನ್ನು ಗ್ರೀಸ, ರೋಮಗಳೊಡನೆ ಮಾಡುತ್ತಿರುವ ಸಂಭವವೂ ಇಲ್ಲದಿಲ್ಲ.

ಬೆಳುವೊಲ, ಮಲೆನಾಡು ಎಂಬೀ ಬಗೆಯವು ಪ್ರಾಕೃತಿಕ ವಿಭಾಗಗಳಾದುವು. ಇದರಂತೆ ಸಪ್ತಾರ್ಧ ಲಕ್ಷ ರಟ್ಟಪಾಡಿ, ಗಂಗವಾಡಿ ತೊಂಬತ್ತಾರು ಸಾವಿರ, ಬನವಾಸೆ ಹನ್ನೆರಡು ಸಾವಿರ ನಾಡು, ಕದಂಬಲಿಗೆ ಸಾಸಿರ, ಕರಹಾಟ ನಾಲ್ಕು ಸಾವಿರ, ಮಾಸವಾಡಿ, ಮಹಾರಾಜವಾಡಿ ಪೊರಮಲೆನಾಡು, ಮೇಳಲನಾಡು, ನಾಗರಖಂಡ, ಮೊದಲಾದುವು ಕಾಲಕಾಲಕ್ಕೆ ತಲೆದೋರಿದ ರಾಜಕೀಯ ವಿಭಾಗಗಳು.

ಪಾಡಿ, ವಾಡಿ, ನಾಡು, ಮಂಡಲ, ವಿಷಯ, ದೇಶ ಎಂದು ಮುಂತಾದುವು ಅಂದಿನ ವಿಭಾಗಗಳ ಹೆಸರು. ಇವುಗಳಲ್ಲಿ ತಾರತಮ್ಯವೇನೆಂಬುದನ್ನು ಕುರಿತು ಇನ್ನೂ ನಿರ್ಣಯವಾಗಿಲ್ಲ. ಬನವಾಸಿಯ ಉಲ್ಲೇಖವು ನಾಡು, ವಿಷಯ, ಮಂಡಲ, ದೇಶ ಎಂದು ಎಲ್ಲ ಬಗೆಯಿಂದಲೂ ಬಂದಿದೆ. ಅಲ್ಲದೆ 'ಕದಂಬ' ಹೆಸರಿನಲ್ಲೂ ದೇಶವಿಭಾಗಗಳ ಉಲ್ಲೇಖಗಳು ಸಿಕ್ಕುತ್ತವೆ. ಕಂಬಲಿಗೆ ನಾಡು, ಕದಂಬ, ದೇಶ, ಕದಂಬ ವಿಷಯಗಳುಂಟು. ಸುತ್ತಲಿನ ನಾಡಿಗೆ ಅದರ ಮುಖ್ಯ ಸ್ಥಳದ ಹೆಸರನ್ನು ಕೊಡುವ ವಾಡಿಕೆಯು ಇದ್ದಂತೆ ಆಳುವ ಅರಸು ಮನೆತನದಿಂದಲೂ ದೇಶವಿಭಾಗಕ್ಕೆ ಹೆಸರು ಬರುತ್ತಿದ್ದಿತು. ರಟ್ಟರು, ಸಿಂದರು, ಕದಂಬರು, ಹೊಯ್ಸಳರು

ಮೊದಲಾದ ಮನೆತನಗಳ ಹೆಸರಿನ ನಾಡುಗಳು ದೊರೆಯುತ್ತವೆ. ಇದಕ್ಕೂ ಪ್ರಾಚೀನ ಕಾಲದಲ್ಲಿ ಜನದಿಂದ ನಾಡಿಗೆ ಹೆಸರು ಬರುವ ವಾಡಿಕೆಯಿದ್ದಿತು. ಆರ್ಯರು, ಕಣ್ಣರು, ಪಟ್ಟಿ (ಹಟ್ಟಿ) ಗಳು, ಆಭೀರರು, ಗುರ್ಜರರು ಮೊದಲಾದವರಿಂದ ಬಂದ ಹೆಸರುಗಳು ಇದಕ್ಕೆ ದೃಷ್ಟಾಂತ.

ಈ ದೇಶವಿಭಾಗದ ಕ್ಷೇತ್ರಗಳು ಆ ಕಾಲದ ರಾಜಕೀಯ ಪರಿಸ್ಥಿತಿಗನುಸರಿಸಿ ಕಾಲಕಾಲಕ್ಕೆ ಬದಲಾಗುತ್ತಿದ್ದುವು. ಕುಂತಲವೆಂಬ ದೇಶವಾಚಕ ಹೆಸರಿನಲ್ಲಿ ಅಳವಡುವ ಪ್ರದೇಶವು ಕಾಲಕಾಲಕ್ಕೆ ಹೆಚ್ಚು ಕಡಿಮೆಯಾಗಿ ಕಂಡುಬರುವುದಕ್ಕೆ ಇದೇ ಕಾರಣ. ಯಾವ ಯಾವ ಕಾಲಕ್ಕೆ ಈ ಪ್ರಮುಖ ವಿಭಾಗಗಳ ವ್ಯಾಪ್ತಿಯು ಎಷ್ಟಿದ್ದಿತೆಂಬುದರ ಸಂಶೋಧನವು ಇನ್ನೂ ಆಗದೆ ಇರುವುದರಿಂದ ಈ ಹೆಸರುಗಳು ಕೆಲವು ಸಾರೆ ವಿಚಾರದ ತೊಡಕನ್ನು ಹೆಚ್ಚಿಸುತ್ತವೆ. ದ್ವಾರಕೆಯಿಂದ ಬನವಾಸಿಯ ನಾಡು ಸಂಪೂರ್ಣ ಕುಂತಲವೆಂಬ ಹೆಸರಿದ್ದುದಕ್ಕೆ ಆಧಾರಗಳು ಸಿಕ್ಕುತ್ತವೆ. ಇದೆಲ್ಲವೂ ಕುಂತಲವೆಂದು ಒಮ್ಮೆ ಕರೆಯಲ್ಪಡುತ್ತಿರಬೇಕು. ಏಕೆಂದರೆ ಭಂಡಾರಕರ ಸಂಸ್ಥೆಯವರು ಪ್ರಕಟಿಸಿರುವ ಉದ್ಯೋಗಪರ್ವದ ವರೆಗಿನ ಮಹಾಭಾರತದ ಪ್ರತಿಗಳಲ್ಲಿ ಕರ್ಣಾಟವು ಕಾಣಿಸುವುದಿಲ್ಲ. ಬರಿ ಕುಂತಲವೆಂಬ ಹೆಸರು ಉಂಟು. ಕೆಲವೊಂದು ಪ್ರದೇಶಕ್ಕೆ ಕರ್ಣಾಟವೆಂದು ಹೆಸರು ಮುಂದೆ ಬಂದ ಬಳಿಕ ಉಳಿದ ಭಾಗಕ್ಕೆ ಕುಂತಲವೆಂಬುದು ಹಾಗೆಯೆ ಉಳಿದುಕೊಂಡಿತು. ಆಮೇಲೆಯೂ ಹಳೆಯ ರೂಢಿಯೊಳಗಿನ ಹೆಸರು ಒಮ್ಮೆಲೆ ಬಿದ್ದುಹೋಗುವುದಿಲ್ಲ. ಹೀಗಾಗಿ, ಒಂದೇ ಪ್ರದೇಶಕ್ಕೆ ಒಂದೇ ಕಾಲಕ್ಕೆ ಕರ್ಣಾಟವೆಂದೂ ಕುಂತಲವೆಂದೂ ಹೆಸರು ಬಂದಿರುವುದು ಸ್ವಾಭಾವಿಕವಾಗಿದೆ.

ದ್ವಾರಕೆಯಿಂದ ಆರಂಭಮಾಡಿ ಈ ಪ್ರದೇಶವು ಆರ್ಯೀಕರಣಕ್ಕೆ ಒಳಗಾಗಿ ಅಲ್ಲಿಯ ಮೂಲಿಗರಾದ ಪಟ್ಟಿಲರು (ಹಟ್ಟಿಕಾರರು) ತಮ್ಮ ಭಾಷೆಯನ್ನು ಸಂಪೂರ್ಣವಾಗಿ ಕಳೆದುಕೊಳ್ಳುವ ವರೆಗೂ (ಗುಜರಾತ, ಮರ್‍ಹಾಟಗಳೆರಡೂ) ಕುಂತಲವೆಂದರೂ ಸರಿಯೆ; ಕರ್ಣಾಟವೆಂದರೂ ಸರಿಯೆ. ಆದರೆ, ಅಲ್ಲಿ ಕಂನುಡಿಯು ಕಣ್ಮರೆಯಾದ ಬಳಿಕ ನೃಪತುಂಗನ ಕವಿರಾಜಮಾರ್ಗದಲ್ಲಿ ಹೇಳಿದಂತೆ ಗೋದೆಯಿಂದ ದಕ್ಷಿಣಕ್ಕೆ ಮಾತ್ರ ಕಂನಾಡು ಉಳಿದು, ಉತ್ತರವು ಪೈಠಣ, ವರ್‍ಹಾಟ ಮೊದಲಾದ ಭಾಗಗಳು ರಾಜಶೇಖರಾದಿ ಕವಿಗಳು ಹೆಸರಿಸಿದಂತೆ ಕುಂತಲವಾಗಿ ಉಳಿದುವು. ಹೀಗೆ ಕುಂತಲ ಮತ್ತು ಕರ್ಣಾಟಗಳು ಬೇರೆಯಾದವು. ಆದರೂ ಕಂನಾಡಿಗೆ ಕುಂತಲವೆಂದೆಂಬ ವಾಡಿಕೆ ಒಮ್ಮೆಲೆ ನಿಂತುಹೋಗಲಿಲ್ಲ.

ಕದಂಬ ದಶಸಹಸ್ರ ದೇಶವೆಂದು ಒಂದೆಡೆಗೆ ಇದೆ.[೧] ಕಂದಬಲಿಗೆ ಸಾಸಿರನಾಡೆಂದು ಇನ್ನೊಂದೆಡೆ ಉಂಟು.[೨] ಬನವಾಸೆ ಹನ್ನೆರಡು ಸಾವಿರವೆಂದೂ ಬೇರೊಂದೆಡೆಯಲ್ಲಿ ಬಂದಿದೆ.[೩] ಆ ನಾಡಿನ ಮೇರೆಗಳು ಕಾಲಕಾಲಕ್ಕೆ ಬದಲಾಗುತ್ತಿದ್ದುದರಿಂದಲೆ ಒಮ್ಮೆ ಹತ್ತು ಸಾವಿರದ ನಾಡು ಇನ್ನೊಮ್ಮೆ ಒಂದು ಸಾವಿರ, ಮತ್ತೊಮ್ಮೆ ಹನ್ನೆರಡು ಸಾವಿರವಾದುದುಂಟು. ಕಂನಾಡಿನ ಬೇರೆ ಬೇರೆ ಭಾಗಗಳನ್ನು ಬೇರೆ ಬೇರೆ ರಾಜರು ಸ್ವತಂತ್ರವಾಗಿ ಆಳುತ್ತಿದ್ದುದರಿಂದ ಪೂರ್ವಕಾಲದಿಂದ ಕರ್ಣಾಟವೆಂಬ ಹೆಸರಿಗಿಂತಲೂ ಈ ನಾಡಿನ ಉಳಿದ ನಾಮಾಂತರಗಳೇ ಶಾಸನಾದಿಗಳಲ್ಲೆಲ್ಲ ಹೆಚ್ಚಾಗಿ ತುಂಬಿಕೊಂಡಿರುವುದು ಕಂಡುಬರುತ್ತದೆ. ಚಲುಕ್ಯರು ಮತ್ತು ರಾಷ್ಟ್ರಕೂಟರನ್ನುಳಿದರೆ ಬೇರೆ ಕಾಲದಲ್ಲಿ ಕಂನಾಡು ಒಂದೇ ಹಿರಿಯ ಆಡಳಿತದಲ್ಲಿ ಎಂದೂ ಇರಲಿಲ್ಲ. ಚಲುಕ್ಯರೂ ಮತ್ತು ರಾಷ್ಟ್ರಕೂಟರ ಕಾಲಕ್ಕೆ ಗಂಗ ಕದಂಬಾದಿ ಬೇರೆ ಹಲ ಕೆಲವು ಮಾಂಡಲಿಕರೂ, ಸಾಮಂತರೂ ಕಂನಾಡಿನ ಒಂದೊಂದು ಭಾಗದಲ್ಲಿ ರಾಜ್ಯ ಭಾರ ನಡೆಸುತ್ತಿದ್ದರೂ ಅವರೆಲ್ಲ ಸಾಮಾನ್ಯವಾಗಿ ಚಲುಕ್ಯ ಅಥವಾ ರಾಷ್ಟ್ರಕೂಟರ ಅಂಕಿತದಲ್ಲಿದ್ದುದರಿಂದ ಅಲ್ಲಿಯವರೆಗೆ ಕಂನಾಡಿನ ಅಖಂಡತ್ವವು ಅಚ್ಚಳಿಯದೆ ಉಳಿದಿದ್ದಿತೆನ್ನಲು ಅಡ್ಡಿಯಿಲ್ಲ ಕಂನಾಡಿನ ಎಲ್ಲ ಭಾಗಗಳು ಒಮ್ಮುಖದಿಂದ ಕೂಡಿಕೊಂಡಿದ್ದುವು.

ಆದರೆ, ಕಲ್ಯಾಣ ಚಾಲುಕ್ಯರ ಆಳಿಗಾಲದ ತುರವಾಯ ಎಂದರೆ ೧೨ನೆಯ ಶತಮಾನದಿಂದ ಛಿನ್ನ ವಿಚ್ಛಿನ್ನ ವಾಗುತ್ತ ನಡೆದ ಕಂನಾಡಿನ ದುರ್ದೈವವು ಇದೀಗ ೨೦ನೆಯ ಶತಮಾನದ ಮಧ್ಯದ ಸುಮಾರಿಗೆ ಕೊನೆ

ಗಾಣುವುದರಲ್ಲಿದೆ. ಕಲ್ಯಾಣ ಚಾಲುಕ್ಯರ ವಂಶವನ್ನು ಹಿಂದಿಕ್ಕಿ ಬಿಜ್ಜಳನು ಮುಂದೆ ಬಂದನು. ಆದರೆ, ಆತನ ಕಲಚೂರಿ ವಂಶವೂ ಬೇಗನೆ ಮುಗ್ಗಿತು. ಬಳಿಕ ಯಾದವ ಮನೆತನದ ಕೈಯಲ್ಲಿ ಕಂನಾಡ ಆಡಳಿತವು ಬಂದಿತು. ಆದರೆ, ಈ ಯಾದವರಲ್ಲಿ ಎರಡು ಮನೆತನಗಳಾದುವು. ಹಿರಿಯ ಅರಸುತನಕ್ಕಾಗಿ ಸೇವುಣರು, ಮತ್ತು ಹೊಯ್ಸಳರು ತಮ್ಮ ತಮ್ಮೊಳಗೆ ಹೋರಾಟ ನಡಸಿದರು. ಕಂನಾಡಿನಲ್ಲಿ ಯಾದವೀ ಯುದ್ಧಗಳು-ದಾಯಾದಿತನದ ಹೊಡೆದಾಟಗಳು ನಡೆದುವು. ಚಲುಕ್ಯರೂ ರಾಷ್ಟ್ರಕೂಟರೂ ಉತ್ತರಕ್ಕೆ ನರ್ಮದೆಯ ಆಚೆಗೆ, ದಕ್ಷಿಣಕ್ಕೆ ಕಾಂಚಿಯ ಹತ್ತಿರಕ್ಕೆ ಇರುವ ಎದುರಾಳಿಗಳೊಡನೆ ಕಾದಾಡಿ ಈ ನಡುವಣ ನಾಡನ್ನು ಯಾವಾಗಲೂ ಅಖಂಡವಾಗಿ ತಮ್ಮ ಕೈಯಲ್ಲಿ ಇರಿಸಿಕೊಳ್ಳಲು ಹವಣಿಸುತ್ತಿದ್ದರು. ಆದರೆ, ೧೨ನೆಯ ಶತಮಾನದ ತರುವಾಯ ಈ ಯಾದವರ ಯಾದವೀ ಯುದ್ಧಗಳಲ್ಲಿ ಕಂನಾಡ ಹೃದಯರಂಗವೇ ಕಾಳಗದ ಕಣವಾಯಿತು. ಹಳೇಬೀಡಿನ ಯಾದವರು ಕೃಷ್ಣೆಯ ವರೆಗೆ ನುಗ್ಗಿ ಬರಬೇಕು! ಈ ಹೊಡೆದಾಟಗಳಲ್ಲಿ ಕೃಷ್ಣಾ-ತುಂಗಾ ನದಿಗಳ ನಡುವಣ ಕಂನಾಡ ಜನಗಳ ಗೋಳು ದೇವರೆ ಬಲ್ಲ. ಇಂದು ಸೇವುಣ ಯಾದವರ ಕೈಯಲ್ಲಿ ಇದ್ದರೆ, ನಾಳೆ ಹೊಯ್ಸಳರ ಆಡಳಿತದಲ್ಲಿ! ೧೪ನೆಯ ಶತಮಾನದಿಂದ ಮುಂದೆ ಮುಸಲ್ಮಾನರ ಹಾಗೂ ಪೇಶ್ವೆಯವರ ತುಳಿದಾಟದಲ್ಲಿ ಕಂಗೆಟ್ಟಿತು. ಈ ಬಗೆಯ ಅನಿಶ್ಚಿತ ಜೀವನದಲ್ಲಿ ಒಂದು ಕಾಲಕ್ಕೆ ಕಂನಾಡ ತಿರುಳೆನಿಸಿದ ಈ ಭಾಗದ ಜನಗಳ ಪಾಡು ಏತಕ್ಕೂ ಬೇಡವಾಯಿತು.

೧೩ನೆಯ ಶತಕದ ಸುಮಾರಿಗೆ ಯಾದವೀ ಕಲಹಗಳಿಂದ ನುಗ್ಗು ನುಸಿಯಾದ ಕಂನಾಡಿನಲ್ಲಿ ಒಳನುಗ್ಗಿ ಹಾಳುಮಾಡಲು ಮುಸಲ್ಮಾನ ದಾಳಿಗಾರರಿಗೆ ಇನ್ನಷ್ಟು ಸುಲಭವಾಯಿತು. ದೇಶದಲ್ಲಿ ಅರಾಜಕತೆ ಅವ್ಯವಸ್ಥೆಗಳ ತಾಂಡವ ನಡೆಯಿತು. ಆ ಸುಮಾರಿಗೆ ಕಂನಾಡು ಇದ್ದ ಬಿದ್ದ ಶಕ್ತಿ ಸರ್ವಸ್ವವನೆಲ್ಲ ಕೇಂದ್ರೀಕರಿಸಿ ಹರಿಹರ-ಬುಕ್ಕರಿಂದ ಎಂತೂ ಕರ್ಣಾಟಸಿಂಹಾಸನವನ್ನು ಮತ್ತೆ ಭದ್ರಪಡಿಸಿಕೊಂಡಿತು. ಉತ್ತರದಲ್ಲಿ ನೆಲೆಗೆಟ್ಟು ಹಾಳವಾಗುತ್ತಿದ್ದ ಹಿಂದೂ ಸಂಸ್ಕೃತಿಯನ್ನು ಸಂರಕ್ಷಿಸಿ ಕಂನಾಡು ಭಾರತದ ಮರ್ಯಾದೆಯನ್ನು ಕಾಯಿತು. ನಿಜ.

ಆದರೆ, ಏನೇ ಆದರೂ ಒಮ್ಮೆ ಮುಕ್ಕಾದ ಕಂನಾಡ ಉತ್ತರದ ಮೇರೆ ಕೊನೆಯ ವರೆಗೂ ಮುಗ್ಗಿಯೆ ಹೋಯಿತು. ವಿಜಯನಗರದವರು ವಿಶ್ವ ಪ್ರಯತ್ನ ಮಾಡಿ ಕೃಷ್ಣೆಯ ವರೆಗೆ ತಮ್ಮ ಮರ್ಯಾದೆಯನ್ನು ಕಾಯ್ದುಕೊಳ್ಳ ಬೇಕಾದರೆ ಸಾಕುಬೇಕಾಗುತ್ತಿತ್ತು. ಪೈಠಣ, ಎಲ್ಲೂರು-ಅಂಜತಾ, ಮಳಖೇಡ, ಕಲ್ಯಾಣಗಳಲ್ಲಿದ್ದ ಕಂನಾಡ ಕೇಂದ್ರವು ಕ್ರಮವಾಗಿ ಸರಿಯುತ್ತ ತುಂಗೆಯು ಕೆಳಗೆ ಹಳೆಬೀಡಿಗೆ; ಹಂಪೆಗೆ, ಮುಂದೆ ಅದಕ್ಕೂ ದಕ್ಷಿಣಕ್ಕೆ ಮೈಸೂರಿಗೆ ಸರಿಯಿತು! ಕಂನಾಡ ಭೌಗೋಲಿಕ ಮರ್ಯಾದೆ ಸಂಕೋಚ ಗೊಂಡುದು, ಅದರ ಆಂತರಿಕ ಜೀವಾಳವು ಕುಗ್ಗುತ್ತಿದ್ದುದರ ಬಾಹ್ಯ ಲಕ್ಷಣವೆಂದೇ ಹೇಳಬಹುದಲ್ಲವೆ?

ಉತ್ತರದಲ್ಲಿ ತಮ್ಮ ಕೈಸಾಗದೆ ಇದ್ದರೂ ಹೊಯ್ಸಳರೂ ವಿಜಯನಗರದವರೂ ದಕ್ಷಿಣಕ್ಕೆ, ತಮ್ಮ ರಾಜ್ಯವನ್ನು ವಿಸ್ತರಿಸಿದರು. ತಮಿಳ ದೇಶವು ತಮಿಳದೇಶವೇ. ಅದು ಕಂನಾಡು ಆಗಲಾರದು; ಆಗಲೂ ಇಲ್ಲ. ಆರ್ಕಾಟದ ಭಾಗಕ್ಕೆ ಕರ್ಣಾಟವೆಂಬ ಹೆಸರು ಬಂದರೂ ಅದು ಕೇವಲ ಭ್ರಾಂತಿ. ಇವರು ಕಳೆದುಕೊಂಡ ಅಥವಾ ಕಂನಾಡವರ ಕೈಯಿಂದ ಜಾರಿದ ಕಂನಾಡಿನ ಉತ್ತರ ಭಾಗದ ವಿಷಯವೆ ಬೇರೆ. ಅದು ಮೂಲದಲ್ಲಿ ಕಂನಾಡವರ ಭೂಮಿ. ಆರಿಯರಿಗೆ ಬಿಟ್ಟುಕೊಟ್ಟಂತಾಯಿತು. ತನ್ನ ಮನೆಯನ್ನು ಹೆರವರಿಗೆ ಬಿಟ್ಟುಕೊಟ್ಟು ಹೆರವರದನ್ನು ಆಕ್ರಮಿಸಲು ಪ್ರಯತ್ನಿಸಿದಂತೆ. ತನ್ನದು ಹೋದುದು ಹೋಗಿಯೆ ಹೋಯ್ತು. ಹೆರವರದಂತೂ ತನ್ನದಾಗಿ ಉಳಿಯಲು ಸಾಧ್ಯವೇ ಇಲ್ಲ.

ಕಂನಾಡ ಪಡುವಣ ಮೇರೆಯ ಬಗೆಗೆ ಭಿನ್ನಾಭಿಪ್ರಾಯಗಳಿಗೆ ಎಡೆಯೆ ಇಲ್ಲ. ಏಕೆಂದರೆ ಪಶ್ಚಿಮ ಕರಾವಳಿಯ ಸ್ಥಿರವಾದ ರೇಷೆ ಅಲ್ಲಿದೆ. ಅಲ್ಲದೆ ಕನ್ನಡ ಜಿಲ್ಹೆಯೆಂಬ ಹೆಸರು ಆ ಭಾಗಕ್ಕೆ ಈಗಲೂ ಉಳಿದುಕೊಂಡಿದೆ. ಇನ್ನು ಉತ್ತರದ ಮೇರೆ. ನೃಪತುಂಗನ ಕಾಲದ ಕವಿರಾಜ ಮಾರ್ಗದಲ್ಲಿ ಉತ್ತರದಲ್ಲಿ ಗೋದೆಯವರೆಗೆ ಕಂನಾಡು ಎಂಬ ಸ್ಪಷ್ಟವಾದ ನಿರ್ದೇಶವಿದೆ. ೯ನೆಯ ಶತಮಾನದಲ್ಲಿ ಅಲ್ಲಿಯ ವರೆಗೆ ಕಂನಾಡು ಇದ್ದಿತೆಂಬುದು

ಸ್ಪಷ್ಟವಿದೆ. ಆದರೆ, ಅದಕ್ಕೂ ಮೊದಲು ಗೋದೆಯ ಉತ್ತರಕ್ಕೆ ನರ್ಮದೆಯು ಕಂನಾಡ ಬಡಗಣ ಮೇರೆಯಾಗಿ ಇದ್ದಿತೆಂದು ನನ್ನ ಕಂಡಿತ. ಅದಕ್ಕೆ ಕೆಲವು ಕಾರಣಗಳನ್ನು ಈ ಮೊದಲು ೪ ಮತ್ತು ೭ನೆಯ ಅಧ್ಯಾಯಗಳಲ್ಲಿ ಹೇಳಿದೆ. (೧) ನಾಡಿನ ಹೆಸರೆ (ಮರ) ಹಟ್ಟಿ (೨) ಮರಹಟ್ಟಿಯ (ವರ್ಹಾಟದ) ಪ್ರಮುಖ ಜನ ಹಟ್ಟಿಕಾರರೆಂಬವರು. ಅವರೆ ಅಲ್ಲಿಯ ದೇಶಮುಖರೂ ಪಾಟೀಲರೂ, (೩) ಊರ ಆಯಗಾರರು ಹಳಬರು, ಕುರುಬರು (ಕೊರಬು) (೪) ಆರೆ ಮಾತಿನಲ್ಲಿರುವ ಕಂನುಡಿಯ ಪಡೆನುಡಿ, ಧಾತುಗಳು (೫) ಕಂನಾಡವರೆಂದು ನಿಶ್ಚಿತವಾಗಿರುವ ರಾಷ್ಟ್ರಕೂಟರ ಮೊದಲ ನೆಲೆವೀಡು. ಮುಂ. ಇವಲ್ಲದೆ ಇನ್ನೂ ಬೇರೆ ಕೆಲವು ಸಾಂಸ್ಕೃತಿಕ ಸಂಬಂಧಗಳ ವಿಚಾರವು ೯-೧೦ನೆಯ ಅಧ್ಯಾಯಗಳಲ್ಲಿ ಬಂದಿದೆ.

ಪ್ರಸ್ತುತ, ಕಂನಾಡ ಉತ್ತರ ಮರ್ಯಾದೆ ಎಲ್ಲಿಯವರೆಗೆ ಇದ್ದಿತೆಂಬುದಕ್ಕೆ ಮಹಾರಾಷ್ಟ್ರದ ಹಲಕೆಲವು ಗ್ರಾಮನಾಮಗಳ ಬಗೆಯನ್ನು ಇಲ್ಲಿ ವಿವರಿಸುವುದು ಉದ್ದೇಶವಾಗಿದೆ.

೧. ಕೊಂಕಣಪಟ್ಟಿಯಿಂದ ಖಾನದೇಶಗಳ ವರೆಗೆ ಪಾಡಿಗಳು ದೊರೆಯುತ್ತವೆ. ಮಹಾರಾಷ್ಟ್ರದ ಉಚ್ಚಾರದಲ್ಲಿ ಅವು ಪಾಡಾ ಆಗಿವೆ

ಉದಾ : ಕೊಂಕಣಭಾಗ-ಗೌರಿಪಾಡಾ, ಹಳದಪಾಡಾ, ನಾಗಪಾಡಾ

ಖಾನದೇಶ : ಪಟ್ಟಿಪಾಡಾ, ಚಿಂತಪಾಡಾ, ಚೋಪಡಾ (ಚೌಪಾಡಾ) ಪಾಡಾವಿಹೀರ, ರತನಪಾಡಾ, ರೇವಿಪಾಡಾ, ವಳಿಪಾಡಾ ಠಾಣೇಪಾಡಾ ಮುಂ.

ಉಳಿದ ಕಡೆಗಳಲ್ಲಿ : ಪಾಡೆಗಾವ, ಪಾಟಣ, ಪಾಟಗಾವ, ಅಂಬೇಪಾಡಾ ಮುಂ.

೨) ವಾಡ, ವಡ ವಾಡಿ ಗ್ರಾಮಗಳಿಗಂತೂ ಎಣಿಕೆಯಿಲ್ಲ. ಇವು ಇಲ್ಲದ ಮಹಾರಾಷ್ಟ್ರದ ಭಾಗವೇ ಇಲ್ಲ. ಆದರಿಂದ ಅವುಗಳ ಉದಾಹರಣೆಕೊಡುವ ಕಾರಣವಿಲ್ಲ.

೩) ಪೇಟೆಗೆ ಹಾಟವೆಂಬ ಹೆಸರು ಉದಾ: ಪಿಂಪರಿಹಾಟ (ಖಾ) ಪಾರನೇರ ಪಾರಗಾವ, ಎಂಬೀ ಬಗೆಯ ಹೆಸರುಗಳಲ್ಲಿ ಪಾಡಾ-ಪಾರವಾದುದನ್ನು ಕಾಣಲು ದೊರೆಯುತ್ತವೆ. ಕೊಲ್ಹಾರ, ಅಗ್ರಹಾರಾದಿಗಳಲ್ಲಿ ಕಾಣುವ ಹಾರದ ಪೂರ್ವರೂಪ, ಹಾರವೆಂಬುದೂ ಕೆಲವಡೆಗೆ ಉಂಟು. ಸೋಜ಼ರ ಹಾರಾ (ಖಾ); ಚಿಂಛಟಿ (ಚಿಂಚಹಟ್ಟಿ); ಹತ್ತಿ, ಹತ್ತಿಖಿರ್ದ, ಹತ್ತಿ ಬುದ್ರುಕ; ಇವು ಹಟ್ಟಿ ಊರುಗಳು. ಇಲ್ಲಿ ಟವರ್ಗವು ತವರ್ಗವಾದುದು ಕಂಡುಬರುತ್ತದೆ. 'ಓಡ' ಎಂದು ಊರ ಕೊನೆಯ ಭಾಗವು ಕಂನಾಡಿನಲ್ಲಿದ್ದು ಖಾನದೇಶದಲ್ಲಿ ಓದವೆಂದಾಗಿದ್ದುದ್ದು ಅನುಭವಕ್ಕೆ ಬರುತ್ತದೆ. ಮುಗಿಲೋಡು, ಐರೋಡು, ತೆಲ್ಗೋಡುಗಳೆಂದು ಕಂನಾಡಿನಲ್ಲಿವೆ. ಮಾಲೋದ, ಶಿರಿಸೋದ, ವಾಡೋದ ಮುಂತಾದುವು ಕಾನದೇಶದಲ್ಲಿವೆ. ಇದು ತಳೋದೆ, ಮಾಲೋದೆ ಎಂದೂ ಕೇಳಬರುವುದು. ಆದರೆ, ವಾಘೋಡೆ ಅಥವಾ ವಾಘೋಡಾ ಎಂಬಲ್ಲಿ ಡಕಾರವೇ ಕೇಳಬರುತ್ತದೆ.

೪) ಹಾಳ, ಆಳ, ಹ್ವಾಳ, ವಾಳ, ಹೋಳ ಎಂಬ ರೂಪಗಳು ಹಲವು ಹಳ್ಳಿಗಳ ಕೊನೆಗೆ ದೊರೆಯುತ್ತವೆ. ಬ್ರಹ್ಮ ನಾಳ (ಸಾ): ಪನ್ಹಾಳ (ಕೊ.) ನಂದವಾಳ (ಕೊ); ಬೋಮನಾಳ (ಕೊ); ಚೆಲಕಹ್ವಾಳ(ಕೊ.); ವಾಜರಾಳ (ರ); ಖಾನದೇಶದಲ್ಲಂತೂ ಇವು ವಿಶೇಷ ಉದಾ: ಜಂಬನ್ಯಾಳ; ಮೋರವ್ಹಾಳ; ಬೇಲವ್ಹಾಳ; ಭುಸಾವಳ; ಪಾಳ; ಜಂಬವ್ಯಾಳ; ಅಂಬಿಲಹೋಳ; ಮುಂ.

೫) ಸಂಪಖಂಡ, ನಾಗರ ಖಂಡಗಳಲ್ಲಿ ಕಾಣುವ ಖಂಡವೆಂಬುದು ಮಹಾರಾಷ್ಟ್ರದಲ್ಲಿ ಖಾನದೇಶದಲ್ಲಿ ಮಾತ್ರ ಉಂಟು. ಉದಾ: ಚಿರಖಂಡ; ಮಾಲಖಂಡ; ಅದರಂತೆ ಮಂಡಲ; ಭಾಗಮಂಡಲ, ಕದರ ಮಂಡಲಗಿ ನಮ್ಮಲ್ಲಿ, ಮಹುಮಂಡಲ, ಮಹುಮಂಡಲಿ ಎಂಬ ಎರಡೂರು ಖಾನದೇಶದಲ್ಲಿ.

೬) ಪಳ್ಳಿ, ಹಳ್ಳಿ ಎಂಬುದು ಮಹಾರಾಷ್ಟ್ರದ ಸಾವಿರಾರು ಊರುಗಳ ಕೊನೆಯ ಶಬ್ದವಾಗಿದ್ದುದನ್ನು ಮನಗಾಣಬಹುದು.

ಶಿರಸೋಳಿ (ಖಾ)=ಶಿರಸಹಳ್ಳಿ, ಲೊಖೋಲಿ (ಖಾ)=ಲಕ್ಕವಳ್ಳಿ, ಭಿಲಳಿ (ಖಾ)=ಭಿಲ್ಲಹಳ್ಳಿ; ದೇವಳಿ (ಖಾ)=ದೇವಹಳ್ಳಿ; ಕಢೇಳಿ(ಖಾ)=ಕಡೆ ಹಳ್ಳಿ; ಭನೋಳಿ(ಖಾ)=ಬನ್ನಿಹಳ್ಳಿ(?);

ಡೌಲವಳ್ಳಿ (ರ); ಖಾನವಲಿ (ರ)=ಕನ್ನವಳ್ಳಿ; ಚಿಂಚವಲಿ (ನಾ)=ಚಿಂಚವಳ್ಳಿ: ಶಿನೋಳಿ (ನಾ.)=ಶಿವನಳ್ಳಿ; ಚಾಂದೋಲಿ (ನಾ.)=ಚಾಂದವಳ್ಳಿ; ಚಿಂದ್ರವಲಿ (ರ)=ಚಿಂದ್ರವಳ್ಳಿ; ಶಿವಳಿ (ಪು)=ಶಿವಳ್ಳಿ; ನಂದವಲಿ (ರ)=ನಂದಪಳ್ಳಿ=ನಂದಹಳ್ಳಿ; ಬಮನೋಳಿ (ರ.)=ಬಮ್ಮನಹಳ್ಳಿ; ಚಿಂಚೋಳಿ (ರ.)=ಚಿಂಚವಳ್ಳಿ; ಶಿರಸೋಳಿ, ಶಿರಾಳ, ಶಿರಾಳಿ (ರ.)=ಶಿರಸವಳ್ಳಿ, ಶಿರಹಾಳ, ಶಿರಹಾಳಿ; ಕಾತ್ರೋಳಿ (ರ.)=ಕಾತರಹಳ್ಳಿ; ನಾಗರೋಳಿ (ಕು.) =ನಾಗರಪಳ್ಳಿ; ಬಮನೋಳಿ (ಕು.)=ಬಮ್ಮನಹಳ್ಳಿ; ಕಡವಲಿ (ಕು.)=ಕಡಪಳ್ಳಿ=ಕಡಹಳ್ಳಿ; ಶಿರವಳಿ (ಡಾ).=ಶಿರಪಳ್ಳಿ; ಚಿಂಚವಲಿ (ಠಾ)=ಚಿಂಚವಳ್ಳಿ; ಶಿರೋಳ(ಠಾ).=ಶಿರವೊಳಲು; ಡೊಂಬಿವಲಿ (ಠಾ)= ಡೊಂಬವಳ್ಳಿ; ಐನವಳಿ(ರ.) =ಐಯನಪಳ್ಳಿ;

೭) ಊರು ಎಂಬ ಪದವು ಕೊನೆಗೆ ಇರುವ ಗ್ರಾಮಗಳು, ಸಾವಿರಾರು ವರುಷಗಳ ತರುವಾಯ ಈಗಲೂ ಉಳಿದುಕೊಂಡಿವೆ. ಅವುಗಳಲ್ಲಿ ಕೆಲವು ಬಂಗಾಳದಲ್ಲಿ ಊರಾ ಆಗುವಂತೆ, ಇಲ್ಲಿ ಊರಿ, ಊರೆ, ಓರೆ ಎಂಬ ರೂಪ ತಾಳಿವೆ.

ಖಾನದೇಶ : ಹತನೂರು (ಮೂರು ಇವೆ); ಕಢೂರ; ದಸನೂರ; ದೇವೂರ (ಈ ಹೆಸರಿನ ೫ ಊರುಗಳಿವೆ); ವಿಂಚೂರು (ಮೂರು ಊರಿವೆ). ಕೋಥೂರ, ಧನೋರೆ (ಮೂರು ಇವೆ); ಸಾಹೂರ; ನಿಂಭೋರೆ; ರಾಜೂರ (ನಾಲ್ಕೆಂಟು); ಜಾಂಭೋರೆ; ರಾಜೂರೆ (ಎರಡಿವೆ); ಸಾಂಜೋರಿ; ಸಿಂದೂರಿ; ಗೊಂಡೂರ; ಧಾನೂರ; ವಾಘೂರ; ಮಣೂರ; ಪಾಚೋರಾ; ನಂದೂರ (ಬಾರ);

ನಾಸಿಕ ಜಿಲ್ಹೆ : ಹತನೂರ; ಮಣೂರ; ಚಾಂದೋರ; ಗಣೂರ; ದಿಂಡೋರಿ; ಧಗೂರ; ನಂದೂರ ೭; ರಾಜೂರ ೨; ಭಾವೂರ; ಚಿಂಚೂರ; ಓತೂರ ೨; ಜೇವೂರ; ಸಕೂರ; ಚಾಂದೋರೆ; ರಾಹೂರಿ; ವಿಂಚೂರಿ ೨; ಚಾಂದೋರಿ; ಕೋಥೂರ; ವಿಂಚೂರ ೨; ಕಸೂರ;

ಪುಣೆ ಜಿಲ್ಹಾ : ರಾಜೂರ; ರಾಜೂರಿ ೨; ಥೇವೂರ; ನಂದೂರ; ಸಾಕೋರಿ; ಸಂಗನೋರೆ; ತೇಜೂರ; ಬಾವೂರ; ಕುಸೂರ; ಜೇವೂರ; ಜೇಜೂರಿ; ಮಾಹೂರ; ಶಿರೂರ; ಕೆಂದೂರ;

೮) i. ಪಾಡಿ, ಹಟ್ಟಿ, ಹಾಳ, ಹಳ್ಳಿ ಊರು ಈ ಹೆಸರುಗಳಿದ್ದುದು ನಿಜವಾದರೆ 'ಏರಿ' ಎಂಬುದೂ ಕಾಣಿಸಿಕೊಂಡಲ್ಲಿ ಅಚ್ಚರಿಗೆ ಕಾರಣವಿಲ್ಲ. ಏರಿಯ ಬದಲು ಅದೇ ಅರ್ಥದ 'ಟೇಕ' ಎಂಬುದೂ ಹಲವೆಡೆಗೆ ಉಂಟು.

ಉದಾ : ಶಿವನೇರಿ, ಅಮಳನೇರಿ, ಪಾರನೇರ, ವಡನೇರ, ಕಾನ್ಹೇರಿ, ಜಾಮನೇರ, ರಾವಟೇಕ, ಭೋರಟೇಕ;

ii. ಗದಗು ತಾಲೂಕಿನ ಒಂದು ಶಾಸನದಲ್ಲಿ ಚಿಂಚಲಿ ಎಂಬ ಗ್ರಾಮನಾಮವು 'ಚಿಂಚಲ' ಎಂದು ಕಾಣಿಸಿಕೊಂಡಿದೆ. 'ಚಿಂಚಿಲ' ಎಂಬುದರಲ್ಲಿ 'ಇಲ್' ಎಂದರೆ ಇರುವ ಸ್ಥಳ. ಮನೆ ಎಂಬರ್ಥದ ಕೊನೆಯ ಪದವಾಗುವುದು.

ಮಹಾರಾಷ್ಟ್ರದಲ್ಲಿ ಚಿಂಚಲಿ ಎಂಬ ಹಲವು ಗ್ರಾಮಗಳಿವೆ. ಆ ಗ್ರಾಮನಾಮದ ಕೊನೆಗೆ 'ಇಲ್' ಎಂಬುದು ಉಂಟೆಂದು ಹೇಳಬೇಕಾಗುವುದು.

iii. 'ಇಲ್' ಇದರಂತೆ 'ಮನೆ' ಎಂಬುದೂ ನಾಸೀಕ, ಖಾನದೇಶಗಳ ಗ್ರಾಮನಾಮಗಳ ಕೊನೆಗೆ ಉಂಟೆಂದು ನನ್ನ ನಂಬುಗೆಯಾಗಿದೆ. ಊರು, ವಾಡಿ, ಪಾಡಿ, ಪಾಳ, ಹಾಳಗಳಿರುವಲ್ಲಿ 'ಮನೆ' ಎಂಬುದೂ ಇದ್ದರೆ ಸಹಜವಾದುದೇ ಸರಿ. ಆದರೆ ಅದು ಮಾನೆ ಎಂದು ಉಚ್ಚರಿಸಲ್ಪಡುತ್ತದೆ. ಮನೆ ಎಂಬುದಕ್ಕೆ ಸರಿಯಾಗಿ ಘರ ಎಂಬ ಊರುಗಳೂ ಅಲ್ಲಿ ಉಂಟು. ಕಾರಣ ಮಾನೆ ಎಂಬುದಕ್ಕಿಂತ ಮನೆಯೆ ಸಮರ್ಪಕವಾಗಿದೆ.

ಉದಾ : ರಾಜಮಾನೆ (ನಾ.); ಘೋಡಜಮಾನೆ (ಖಾ); ಸಾತೋನೆ (ಖಾ)=ಸಾತಮನೆ (?); ಸಾತಮನೆ (ಖಾ); ಶಿರಸಮನಿ (ಖಾ); ರಾಜಮಾನೆ (ಖಾ); ಕಲಮಾನೆ (ನಾ);

iv ಈ ಬೆಳಕಿನಲ್ಲಿ ಈಗ ಕೋಪರಗಾಂವ, ಖೋಪರ ಖೇಡೆ ಇಂತಹ ಹೆಸರುಗಳ ಔಚಿತ್ಯವು ತಿಳಿದುಬರುವುದು. ಮರ್ಹಾಟಿಯಲ್ಲಿ ಹ್ರಸ್ವ ಒಕಾರವೇ ಇಲ್ಲ. ಆದುದರಿಂದ ಮೂಲ ಹ್ರಸ್ವಾಕ್ಷರವಿದ್ದರೂ ಆರಿಯ ಮಾತಿನಲ್ಲಿ ದೀರ್ಘವಾಗುವುದು. ಕೊಪ್ಪವು ಖೋಪವಾಗಿರಲು ಸಾಕು. ಖೋಪವಲಿ=ಕೊಪ್ಪವಳ್ಳಿ; ಗುಡ್ಡದ ಪ್ರದೇಶಕ್ಕೆ ಕುಪ್ಪೆ, ಕೊಪ್ಪ ಎಂಬ ಹೆಸರು ಕಂನುಡಿಯಲ್ಲಿದೆ. ಖಾನದೇಶದಲ್ಲಿ 'ಮಲೆ'- ಮಲೆಗಾವ ಗಳುಂಟು; ಮಾಳ (ಮಳ) ಖೇಡಗಳಿವೆ. 'ಮರಡಿ' ಎಂಬ ಊರೂ ಉಂಟು. ಪುಣೆಜಿಲ್ಲೆ ಧೋಂಡ ತಾಲೂಕಿನಲ್ಲಿ ೨ ಮಾಲಾಡ ಗಳಿವೆ. ಕಲಮಡಿ, ಕಲಗಾವಗಳು ಖಾನದೇಶದಲ್ಲುಂಟು.

ಬೀಡಗಳು, ಖಾನದೇಶದವರೆಗೂ ನಾಲ್ಕಾರು ಇವೆ. ಬಿಜ್ಜಲಖೇಡ ಎಂಬ ಉರು ಅಲ್ಲಿದೆ. ನವಲಿ, ನವಲೆ, ನವಲಪೂರಗಳು (ಮೋರವಡಗಳಲ್ಲದೆ) ಇವೆ. ರತ್ನಾಗಿರಿಯಲ್ಲಿ ಐನವಳಿ (ಅಯ್ಯನಪಳ್ಳಿ) ಇರುವಂತೆ ಖಾನದೇಶದಲ್ಲಿ ಐನಾಪೂರ (ಅಯ್ಯನಪುರ) ವಿದೆ.

ಇವೆಲ್ಲ ಎಡೆಗಳ ಹೆಸರುಗಳನ್ನು ಮುಂಬೈ ಸರಕಾರದ ಪ್ರಕಟನೆ- ೧೯೪೩ನೆಯ ಇಸವಿಯ Village Hand-book ಗಳಿಂದ ಆಯ್ದುಕೊಟ್ಟಿದೆ. ಹಳೆಯ ಶಾಸನಗಳ ಆಧಾರಗಳಿಂದ ಇನ್ನೂ ಹೆಚ್ಚಿನ ಬೆಳಕು ಇದರ ಮೇಲೆ ಬೀಳಬಹುದೆಂದು ತೋರುತ್ತದೆ. ಏಕೆಂದರೆ ಗುಜರಾತದ ವರೆಗೂ ಪಳ್ಳಿಗಳ ಹೆಸರು ದೊರೆಯುತ್ತವೆ. ಇಂದಿನ ಅಹಮ್ಮದಾಬಾದಿಗೆ ಪ್ರಾಚೀನ ಹೆಸರು ಆಸಾಪಳ್ಳಿ ಎಂಬುದಾಗಿದ್ದಿತೆಂದು ನಂದೋಲಾಲ ದೇ ಅವರು ಬರೆಯುತ್ತಾರೆ.[೪] ಬಾರಡಪಲ್ಲಿಕಾ (ಬಾರಡೋಲಿ), ಕುಂಡೀರವಳ್ಳಿಕಾ, ಪೂಸಿಲಾವಳ್ಳಿ, (ತ) ಸಿಲಾವಳ್ಳಿ, ವಿನ್‌ಹುಚವಳ್ಳಿ ಎಂಬೀ ಬಗೆಯ ಹಳ್ಳಿಗಳು ಅಲ್ಲಿದ್ದುದು ಶಾಸನಗಳಿಂದ ತಿಳಿಯುತ್ತದೆ ಬಾರಡೋಲಿ ಎಂಬುದರಲ್ಲಿರುವ ಕೊನೆಯ ಓಲಿಯು ವಳ್ಳಿಯ ಒಂದು ವಿಕೃತರೂಪವೆಂಬುದನ್ನು ಮೇಲಣ ಶಾಸನದ ಉಲ್ಲೇಖದಿಂದ ನಿಶ್ಚಿತವಾಗಿ ಕಂಡುಕೊಳ್ಳಬಹುದಾಗಿದೆ. ವಿಜಾಪೂರ ಜಿಲ್ಲೆಯಲ್ಲಿಯೂ ಒಂದು ಬಾರಡೋಲಿಯುಂಟು. ಪ್ರಾಚೀನ ಕಾಲದಲ್ಲಿ (ಚಾಲುಕ್ಯ, ರಾಷ್ಟ್ರಕೂಟರ ಆಡಳಿತದಲ್ಲಿ) ಗುಜರಾತ ಮತ್ತು ವಿಜಾಪೂರ (ಕಂನಾಡು)ಗಳ ನಿಕಟ ಸಂಬಂಧವಿದ್ದುದಕ್ಕೆ ಇದು ಸಾಕ್ಷಿ.

ಅಲ್ಲದೆ, ಬಾದಾಮಿ ನಾಡಿನಲ್ಲಿ ಮತ್ತು ಖಾನದೇಶದ ಅನೇಕ ಹಳ್ಳಿಗಳ ಹೆಸರಿನಲ್ಲಿ ತುಂಬ ಸಾಮ್ಯವಿದೆ. ತಾಂಬೆ, ವರಬೇಡಿ, ಜಳಗಾವ-ಜಲಗಡ್ಡಾ, ಚಾಳಿಸಗಾವ-ನಾಲ್ವತ್ತವಾಡ, ಐನಾಪೂರ, ಖೇಡ, ಶೆಲವಡಿ, ಪಿಂಪರಿ-ಹಿಪ್ಪರಿಗಿ, ಕನ್ಹೇರೆ-ಕನ್ನೂರ, ಮಳಖೇಡ, ನಿಂಬ-ನಿಂಬರಗಿ; ಮಲಪೂರ-ಮಲ್ಲಾಪೂರ; ಜೋಗಳ ಖೇಡ-ಜೋಗುಳ; ಶಿವಣೆ-ಶಿವಣಗಿ; ಬೇಲವ್ಹಾಳ= ಬೇಲೂರ, ನಾಡಗಾವ-ನಾಡ; ಕಲಮಡಿ, ಕಲ್ಲಗಾವ-ಕಲ್ಲಹಳ್ಳಿ; ಶಿಂದಿ, ಶಿಂದಖೇಡ-ಶಿಂದಗಿ; ಶಿದವಡಿ-ಸಿದ್ದಾಪುರ; ಅಂತ್ರೊಳಿ-ಅಂತರವಳ್ಳಿ; ನರಸಿಪೂರ-ನರಸಾಪುರ; ಭುಸಾವಳ-ಭೂಸನೂರ; ಖರಡಿ-ಕರಡಿ; ಮುಂಗಸೆ-ಮುಂಗಲಿ; ರಾಜೂರು, ಮಂಗಳವಾಡಿ-ಮಂಗಳವೀಡು; ದೇವೂರ; 'ಅಕ್ಕಲ' ಕುವಾ-'ಅಕ್ಕಲ'ಕೋಟೆ; ಭುತೇ-ಭೂತನಾಳ; ತೋಂಡೆ-ತೊಂಡಿಕಟ್ಟಿ; ಶಿರೂಡ-ಶಿರೂರ; ಮಾಹುಲಿ; ಯಾವಲ-ಯಾವಗಲ್ಲು; ಮಣೂರ-ಮಣ್ಣೂರು; ಮು.೦ ಈ ಹೋಲಿಕೆಯ ಕಾರಣವೇನೆಂಬುದನ್ನು ಆಳವಾಗಿ ಅಭ್ಯಾಸಮಾಡಿ ಕಂಡುಹಿಡಿಯುವುದು ಅವಶ್ಯವಿಲ್ಲವೆ? ಇದರ ಕಾರಣಗಳು ತಿಳಿದಲ್ಲಿ ಪ್ರಾಚೀನ ಕಂನಾಡು ಮತ್ತು ಖಾನದೇಶಗಳ ಐತಿಹಾಸಿಕ ಸಂಬಂಧಗಳು ಬೆಳಕಿಗೆ ಬಾರದೆ ಇರಲಾರವು.

ಊರು, ಪಾಡು, ಹಾಳಗಳು ಸಾತಾರಾ, ಪುಣೆ, ನಾಸೀಕದ ವರೆಗೆ ಮಾತ್ರ ದೊರೆತರೆ 'ಕಾವೇರಿಯಿಂದಮಾ ಗೋದಾವರಿಯ ವರಂ ಇರ್ದ ನಾಡದಾ ಕಂನಾಡು' ಎಂದಲ್ಲಿ ಸೋಜಿಗಪಡದೆ ಇರಬಹುದು. ಆದರೆ ಖಾನದೇಶ, ಗುಜರಾತಗಳಲ್ಲಿ ಊರು, ಪಳ್ಳಿ, ಪಾಡಿ, ಹಾಳ, ಹಟ್ಟಿಗಳು ಇರಲು ಕಾರಣವೇನು? ಗೋದೆಯ ಉತ್ತರದ

ನಾಡಲ್ಲವೆ ಇದು? ಆದ ಕಾರಣ, ಇನ್ನೂ 'ಗೋದಾವರಿಯ ವರೆಗೆ ಮಾತ್ರ ಒಮ್ಮೆ ಕಂನಾಡು ಇದ್ದಿತೆಂ'ದು ಕವಿರಾಜಮಾರ್ಗದ ಗಿಳಿಪಾಠ ಒಪ್ಪಿಸುವುದರಲ್ಲಿ ಹುರುಳಿಲ್ಲವೆಂದು ಹೇಳಬೇಕಾಗುತ್ತದೆ. ೯ನೆಯ ಶತಮಾನಕ್ಕೆ ಮೊದಲು ಆ ಭಾಗದಲ್ಲಿ ಕಂನುಡಿಯು ನೆಲಿಸಿದ್ದಿತೆಂದು ಲೆಕ್ಕಕ್ಕೆ ಹಿಡಿಯದೆ ಹೋದರೆ ಮೇಲಣ ಗ್ರಾಮನಾಮಗಳು ಅಲ್ಲಿದ್ದದಕ್ಕೆ ಬೇರೆ ಏನಾದರೂ ಸಮಾಧಾನಕರವಾದ ಕಾರಣವನ್ನು ಹೇಳಲೆ ಬೇಕಷ್ಟೆ? ಸಮರ್ಪಕವಾಗಿ ಐತಿಹಾಸಿಕ ಹಿನ್ನೆಲೆಯಲ್ಲಿ ಕಾರಣವನ್ನಾದರೂ ಕೊಡಬೇಕು; ಇಲ್ಲವಾದರೆ ಅಲ್ಲಿ ಒಂದು ಕಾಲಕ್ಕೆ ಕಂನುಡಿಯು ಜನರ ಬಳಕೆಯಲ್ಲಿದ್ದಿತೆಂದು ಒಪ್ಪಿಕೊಳ್ಳುವುದಕ್ಕಾದರೂ ಸಿದ್ಧವಾಗಬೇಕೆಂದು ನನ್ನ ಮನಸು ನನಗೆ ಒತ್ತಾಯಪಡಿಸುತ್ತಲಿದೆ.

ಖಾನದೇಶಕ್ಕೆ ಹೊಂದಿರುವ ಔರಂಗಾಬಾದ್ ಜಿಲ್ಹೆಯಲ್ಲಿರುವ 'ಕನ್ನಡ' ವೆಂಬ ತಾಲ್ಲೂಕಿನ ಅದೇ ಹೆಸರಿನ ಊರು ಈ ನಿಟ್ಟಿನಲ್ಲಿ ಅತ್ಯಂತ ಮಹತ್ವದ್ದಾಗಿದೆ. 'ನಡ' ಎಂಬುದು ನಾಡು ಶಬ್ದದ ಅಪಭ್ರಂಶವೆಂದು ಬಲ್ಲಿದರೆಲ್ಲರೂ ಒಪ್ಪಿದ್ದುಂಟು. ಆದಕಾರಣ 'ಕನ್ನಡ'ದ ನಿಜವಾದ ಹೆಸರು ಕಂನಾಡು. ಇದು ದೇಶವಾಚಕ ಪದ. ಇದು ಇದ್ದುದು ಗೋದೆಯ ಉತ್ತರದಲ್ಲಿಯೆ! ಒಂದು ಕಾಲದಲ್ಲಿ ಇಲ್ಲಿಯ ವರೆಗೆ ಹಬ್ಬಿದುದರ ಹಿಂದುಳಿದ ಕುರುಹೆ ಈ 'ಕನ್ನಡ'. ನಾಡು ತನ್ನ ರೂಪ ಬದಲಿಸಿತು. 'ಕಂನಾಡು' ಎಂಬ ಮೂಲ ಶುದ್ಧರೂಪವೂ ಮಾರ್ಪಟ್ಟಿತು. ಆಡುವ ಭಾಷೆ ಅಂದಿನ ಜನಜೀವನದ ದ್ಯೋತಕವೆಂದು ಶಾಸ್ತ್ರಜ್ಞರು ಹೇಳುತ್ತಾರೆ. ಅದರ ಸತ್ಯತೆಯನ್ನಿಲ್ಲಿ ಮನಗಾಣಬಹುದು. ನಮ್ಮ ನಾಡಿನ ಉತ್ತರದ ಮರ್ಯಾದೆ ನರ್ಮದೆಯವರೆಗೂ ಇದ್ದಿತೆಂಬುದಕ್ಕೆ ಈ 'ಕನ್ನಡ' ತಾಲ್ಲೂಕು, ಮತ್ತು ಕನ್ನ(ಖಾನ)ದೇಶಗಳೆ ಪ್ರಮಾಣ.

ಖಾನದೇಶ, ನಾಸಿಕಗಳಲ್ಲಿ 'ಕಾನಡ' ಗೌಳಿಗಳುಂಟು; ಖಾನದೇಶವು, ಬಿಲ್ಲವರೆಂದು ಕಂನುಡಿಯ ಹೆಸರನ್ನು ಧರಿಸಿದ ಭಿಲ್ಲಜನಗಳ ನೆಲೆವೀಡು. ಇನ್ನು, ದಕ್ಷಿಣದ ಮೇರೆ ನೀಲಗಿರಿ. ಇಲ್ಲಿಯ ಸ್ಥಳನಾಮಗಳು ಇದಕ್ಕೆ ಆಧಾರ. ದೊಡ್ಡ ಬೆಟ್ಟವೆಂದು ಇಲ್ಲಿಯ ಒಂದು ಶ್ರೇಣಿಗೆ ಹೆಸರು. 'ದೊಡ್ಡ' ಅಥವಾ 'ದೋರ'ವೆಂಬುದು ತಮಿಳಿನ ಮಾತಲ್ಲ. ಹುಲ್ಲತ್ತಿ ಎಂಬ ಸ್ಥಳವೊಂದಿದೆ. ಹಟ್ಟಿಗಳೂ ಇಲ್ಲಿ ಉಂಟು. ಆದರೆ ತಮಿಳರ ಪ್ರಭಾವದಿಂದಲೊ ಏನೊ ಅವುಗಳ ಹೆಸರು ಸ್ವಲ್ಪ ಮಾರ್ಪಟ್ಟಿವೆ. ಅಧಿಕಾರಟ್ಟಿ, ಬಿಕ್ಕಟಿ ಎಂಬ ಹೆಸರುಗಳೊಳಗಿನ ಅಟ್ಟಿ, ಅಟಿಗಳು ಹಟ್ಟಿಯೆಂದಲ್ಲದೆ ಅಲ್ಲಿ ಬೇರೆ ಅರ್ಥವನ್ನು ಕೊಡಲಾರವು. ಮೇಲಕುಂದ, ಕೀಳಗುಂದ ಎಂಬ ಹೆಸರುಗಳಿವೆ. ತಮಿಳಿನಲ್ಲಿ ಕುನ್ರ ಎನ್ನುವರು. 'ಕುಂದ' ಎಂಬುದು ಕಂನಾಡವರ ಮಾತು. ನೀಲಗಿರಿಯಲ್ಲಿರುವ ಕುರುಂಬರು, ಬಡಗರು ಮೊದಲಾದವರು ಕಂನುಡಿಯನ್ನೆ ಆಡುವರು. ಕಂನಾಡವರ ಈಗಿನ ದುರ್ದೈವದ ಕಾಲದಲ್ಲಿ ನೀಲಗಿರಿಯು ತಮಿಳರ ಕೈವಾಡಕ್ಕೆ ಒಳಗಾಗಿದೆ.

ಕಂನಾಡಿನ ದಕ್ಷಿಣೋತ್ತರ ಮೇರೆಗಳನ್ನು ಕುರಿತು ಆಗಾಗ ಚರ್ಚೆಗಳು ಆಗಿವೆ. ಪೂರ್ವದಿಕ್ಕಿನಲ್ಲಿ ಇದು ಎಲ್ಲಿಯ ವರೆಗೆ ಹಬ್ಬಿದ್ದಿತೆಂಬುದನ್ನು ನಿಶ್ಚಿತವಾಗಿ ಹೇಳಲು ಈ ವರೆಗೆ ಬಲವಾದ ಆಧಾರಗಳು ದೊರೆತಿದ್ದಿಲ್ಲ. ಆದರೆ, ಈಗ ಅವು ಶಾಸನ ಇಲಾಖೆಯವರ ಶ್ರಮದ ಫಲವಾಗಿ ಎಷ್ಟೋ ಸಿಕ್ಕಿವೆ. ಹಿಂದಿನ ಅಧ್ಯಾಯದಲ್ಲಿ ಸೂಚಿಸಿದಂತೆ ಕಂನಾಡ ಪೂರ್ವಭಾಗವು ಕರ್ನೂಲ ಜಿಲ್ಹೆಯಲ್ಲಿ ಒಳಗೊಂಡಿದ್ದಿತು. ಆ ಜಿಲ್ಹೆಯ ಹಲವೆಡೆಗೆ 'ಕಂನಾಡಿನ' ಉಲ್ಲೇಖವಿರುವ ಶಾಸನಗಳು ದೊರೆತಿವೆ.

ಕಂನಾಡು ಹಲವು ರಾಜರಿಂದ ಆಳಲ್ಪಡುತ್ತಿದ್ದಾಗ ಆಯಾ ಭಾಗದವರು ತಮ್ಮ ತಮ್ಮ ವಿಭಾಗದ 'ಕನ್ನಡ' 'ಕಂನಾಡು' ಗಳನ್ನು ಬೇರೆ ಬೇರೆಯಾಗಿ ಹೆಸರಿಸಿದ್ದುದು ಸ್ವಾಭಾವಿಕವಾಗಿದೆ. ಆದುದರಿಂದ, ಅಲ್ಲಲ್ಲಿ ಕಂನಡ, ಕಂನಾಡು, ಕನ್ನವಾಡ, ಕನ್ನದೇಶ ಎಂದು ಮುಂತಾಗಿ ಬೇರೆ ಬೇರೆಯಾಗಿ ಶಾಸನಾದಿಗಳಲ್ಲಿ ಕಾಣಬರುತ್ತದೆ. ಔರಂಗಾಬಾದ ಜಿಲ್ಹೆಯಲ್ಲಿ ಕಂನಡ ತಾಲೂಕು; ಖಾನದೇಶವೆಂಬುದು ಕನ್ನದೇಶವಾಯಿತು. ವಿಜಾಪೂರ ಜಿಲ್ಹೆಯ ಹುನಗುಂದ ತಾಲೂಕಿನ ಕಂದಗಲೆಯ ಸುತ್ತಲಿನ ಭಾಗಕ್ಕೆ ಕಂನಡವೆಂಬ ಹೆಸರಿತ್ತು. 'ಶ್ರೀ ಮದಯ್ಯಾವಳೆಯ .ಯ್ನೂರ್ವರ್ ಸ್ವಾಮಿಗಳು ಮುಖ್ಯವಾಗಿ ಕನ್ನಡ ನಾಲ್ ಸಾಯಿರಕಂ (ವೇಂ) ಠಗೊಣಂ ಮಳಿಗೆಯ ಮನೆ

ಕಂದಗಲೆಯ ಸ್ಥಳದಲು ಶ್ರೀ ಮನ್ಮಹಾಪ್ರಭು ಜಕ್ಕರಸನ ಮಗ ಸೋಮರಸನು........' ಎಂಬ ಈ ಶಾಸನದಲ್ಲಿ (೧೨೧೦ ಕ್ರಿ.ಶ.) ಕನ್ನಡ ನಾಲ್ಕು ಸಾವಿರದ ಹೆಸರು ಬರುತ್ತದೆ. ಇದೇ ಜಿಲ್ಲೆಯ ಇನ್ನೊಂದು ೯ನೆಯ ಶತಮಾನದ ಶಾಸನದಲ್ಲಿ ಕನ್ನವುರಿ ವಿಷಯದ ಹೆಸರು ಬರುವುದು. ನೃಪತುಂಗನ ಕಾಲದ (೯ನೆಯ ಶತಕದ) ಒಂದು ಶಾಸನವು ಮೈಸೂರ ಸಂಸ್ಥಾನದಲ್ಲಿ ದೊರೆತಿದ್ದು ಅದರಲ್ಲಿ ಕನ್ನವಾಡ ಹೆಸರುಂಟು[೫] ಕನ್ನಡ ಜಿಲ್ಲೆಗಳಂತೂ ಸುಪ್ರಸಿದ್ಧವಿವೆ. ನಾಲ್ಕು ಸಾವಿರದ ಕನ್ನಡ, ಎರಡು ನೂರರ ಕನ್ನಡ ಎಂದು ಮುಂತಾದ ತುಂಡು ಭಾಗಗಳನ್ನೆಲ್ಲ ಒಂದುಗೂಡಿಸಿ, ಏಕೀಕೃತವಾಗಿ ನೋಡಿದಲ್ಲಿ ಮಾತ್ರ ನಮಗೆ ಸಮ್ಯಕ್ ಕಂನಾಡು ಕಣ್ಣಿಗೆ ಬೀಳಬಲ್ಲದು. ಇಲ್ಲವಾದರೆ ಖಾನದೇಶದಲ್ಲಿ ಒಂದು ಕನ್ನನಾಡು, ವಿಜಾಪೂರದಲ್ಲಿ ಒಂದು ಕನ್ನವೂರ, ಮತ್ತು ನಾಡು, ಪಶ್ಚಿಮ ಕರಾವಳಿಯತ್ತ ಇನ್ನೊಂದು ಕಂನಡ ಪ್ರದೇಶ ಹೀಗಿವೆಲ್ಲ ಬೇರೆ ಬೇರೆ ಉಲ್ಲೇಖಗಳನ್ನು ಕಂಡು ದಿಗಿಲುಗೊಂಡು ಬೆಪ್ಪಾಗ ಬೇಕಾಗುವುದು.

ಉತ್ತರ, ದಕ್ಷಿಣ, ಪಶ್ಚಿಮಗಳಿಗೆ ಕಂನಾಡ ಹೆಸರಿನ ಸಣ್ಣ ದೊಡ್ಡ ಭಾಗಗಳು ದೃಷ್ಟಿಗೋಚರವಾಗುವಂತೆ ಪೂರ್ವಕ್ಕೆ ಇರುವ ಹೆಸರುಗಳೂ ಈಗ ಉಪಲಬ್ಧವಾಗಿವೆ. (೧) ಕರ್ನೂಲ ಜಿಲ್ಲೆಯ ನಂದಿಕೊಟಕೂರು ತಾಲ್ಲೂಕು, ಅಲ್ಲಿ ಮಿಟ್ಟ ಕಂದಾಲ ಗ್ರಾಮದ ಆಂಜನೇಯ ದೇವಸ್ಥಾನದ ಎದುರು ನಟ್ಟಿರುವ ನಂದಿಸ್ತಂಭದ ಮೇಲೆ ವಿಜಯನಗರದ ಮೊದಲನೆಯ ಬುಕ್ಕರಾಯನ ಕಾಲದ (ಕ್ರಿ. ಶ. ೧೩೭೩) ಒಂದು ಶಾಸನ ತೆಲುಗಿನಲ್ಲಿದೆ.

'ಶ್ರೀ ಸಂಗಮೇಶ್ವರ ದೇವರ ಕು ಕಂನಾಟಿಲೋ ಮಿಟಕಂದ್ಯಾಲ ಅಂಗ ರಂಗ
ಭೋಗಾನಕು ಸಂಗರಾಜ ಕೊಡುಕು ತಿಪ್ಪರಾಜು ಧಾರವೋ ಇಂಚು ಕೊನೆನು.'

ತಿಪ್ಪರಾಜನು ಕಂನಾಡಿನೊಳಗಿನ ಮಿಟ ಕಂದ್ಯಾಲವನ್ನು ದತ್ತಿಯಾಗಿ ಸಂಗಮೇಶ್ವರ ದೇವರಿಗೆ ಅರ್ಪಿಸಿದನೆಂದು ಅದರಲ್ಲುಂಟು.

ಈಗ ಈ ಊರಿಗೆ ಕಂದಾಲವೆಂದರೂ ಅದರ ಒಂದು ಕಾಲದ ಉಚ್ಚಾರವು ಕಂದ್ಯಾಲವೆಂದು ಇದ್ದುದನ್ನು ಮೇಲಣ ಶಾಸನವು ಹೇಳುತ್ತದೆ. ಕಂದಾಲ, ಕಂದ್ಯಾಲ, ನಂದ್ಯಾಲಗಳಂತಹ ಹೆಸರನ ಕೊನೆಯ ಅಕ್ಷರವು ಳಕಾರವಾಗಿದ್ದು ಬಳಿಕೆಯಲ್ಲಿ ಲಕಾರವು ಬಂದಿದೆ. ಆಳ, ಹಾಳವೆಂಬುದು ಅದರ ಮೂಲ ರೂಪ. ಬಸವನಾಳ, ಹುಲ್ಯಾಳ, ನವಣ್ಯಾಳ ಮುಂತಾದ ಊರುಗಳ ಕೊನೆಗೆ ಈ ಪದವನ್ನು ಕಾಣಬಹುದು. ಹಾಳವೆಂಬುದು ತೆಲುಗಿನಲ್ಲಿ ಇಲ್ಲ. ಹಟ್ಟಿ, ಹಾಳವೆಂದಿರುವ ಊರುಗಳು ಕಂನಾಡಿನವೇ. ೧೪ನೆಯ ಶತಮಾನದಲ್ಲಿ ಅಲ್ಲಿ ತೆಲುಗು ನುಡಿ ಬಂದಿದ್ದರೂ ಆ ಊರು ಮೂಲತಃ ಕಂನಾಡಿನದೇ ಆಗಿದ್ದಿತೆಂದು ಕಂದ್ಯಾಳ ಅಥವಾ ಕಂದಾಳವೆಂಬ ಹೆಸರಿನಿಂದಲೇ ಗೊತ್ತಾಗುತ್ತದೆ. ಅಲ್ಲಿ ತೆಲುಗು ಭಾಷೆಯು ರೂಢಿಯಲ್ಲಿ ಬಂದರೂ ಆ ಭಾಗಕ್ಕೆ 'ಕಂನಾಡು' ಎಂಬ ನಾಮಾಭಿಧಾನವಿದ್ದುದನ್ನು ಶಾಸನಗಳು ಉಸುರುತ್ತಿವೆ.

೨) ಅದೇ ಜಿಲ್ಲೆಯ ಅದೇ ತಾಲೂಕಿನ ಮೇಲ್ಬುನೂರಲ್ಲಿ ಅಂಕಾಳಮ್ಮನ ಗುಡಿಯ ಆವಾರದಲ್ಲಿ ಮೂರು ಹೋಳಾದ ಒಂದು ಶಾಸನವುಂಟು. ಕಾಕತೀಯ ಪ್ರತಾಪರುದ್ರನ (II) ಮಹಾ ಸಾಮಂತನೊಬ್ಬನು 'ಕಂನಾಡು ಏಲುಚಂನುಂಡಿ' (ಆಳುತ್ತಿರುವ) ಕಾಲದಲ್ಲಿ ಮೂಲಸ್ಥಾನ ಸಿದ್ದೇಶ್ವರ ದೇವರಿಗೆ ಬಿಟ್ಟ ದತ್ತಿಯ ಉಲ್ಲೇಖವಿದೆ. ಇದರ ಕಾಲ ಕ್ರಿ.ಶ. ೧೩೧೮. ಮೇಲಣ ಶಾಸನಕ್ಕಿಂತ ೫೫ ವರುಷ ಮೊದಲಿನದು. ಆಗಲೂ ಆ ಭಾಗಕ್ಕೆ ಕಂನಾಡು ಎಂಬ ಹೆಸರಿದ್ದಿತು.

೩) ಅದೇ ಜಿಲ್ಲೆಯ ಅದೇ ತಾಲೂಕಿನ ಲಿಂಗಾಲ ಎಂಬಲ್ಲಿಯ 'ಬಸವನ್ನ ಪಾಡು' ಎಂಬ ಹೆಸರಿನ ಹೊಲದಲ್ಲಿ ನಟ್ಟ ನಂದಿಸ್ತಂಭ. ಇದರ ಕಾಲ ಕ್ರಿ.ಶ. ೧೨೯೨. ಶ್ರೀಶೈಲ ಮಲ್ಲಿಕಾರ್ಜುನನ ಪೂಜಾರಿಗಳಿಗೆಂದು ಕಲ್ಮಠಾಧಿಪತಿಯಾದ ಪರಮ ಶಿ(ವಾ),ಚಾರ್ಯರ ಕೈಯಲ್ಲಿ ಧಾರೆಯೆರೆದು ದಾನಕೊಟ್ಟ ವಿಚಾರವು ಇದರಲ್ಲಿದೆ. ಇದರ ಭಾಷೆಯೂ ತೆಲುಗು. ಕಂನಾಡಿನ ಉಲ್ಲೇಖವು ಬರುವುದು.

ಲಿಂಗಾಲವೆಂಬುದು ಲಿಂಗಾಳ-ಲಿಂಗದಹಾಳವಾಗಿದೆ. ತೆಲಗಿನ ಪ್ರಭಾವದಿಂದ ಅದರ ಕೊನೆಯ ಹಾಳವೆಂಬ ಗ್ರಾಮವಾಚಕ ಪದವು ಮಾರ್ಪಟ್ಟಿದೆ.

೪) ಅದೇ ಜಿಲ್ಲೆಯ ಅದೇ ತಾಲೂಕಿನ ಚೇಬೋಲು ಗಣಂಪುರದ ನಾಗರಕಟ್ಟೆಯ ಬೇವಿನ ಮರದ ಕೆಳಗೆ ಬಿದ್ದಿರುವ ಕಲ್ಲಮೇಲೆ ಕ್ರಿ.ಶ. ೧೨೪೯ರ ಸುಮಾರಿನ ಒಂದು ಶಾಸನವಿದೆ. ಇದರಲ್ಲಿ ವಣಗದೇವನೆಂಬ ಶೂರ ನಾಯಕನು 'ಕಂನ್ನಾಂಡು' ಎಂಬ ದೇಶವನ್ನು ರಾಜನಿಂದ ಪಡೆದು ಆಳುತ್ತಿದ್ದನೆಂದು ಹೇಳಿದೆ. ಈ ನಾಡಿನ ನಿರ್ದೇಶ ಬರುವ ಭಾಗವು ಇಂತಿದೆ:-

ಅಸೌಡಾವುಳ ದೇವಸ್ಯ ತನಯೋ ವಣಗಾಹ್ವಯಂ। ಲಬ್ಧವಾನಥ ತಂ
ದೇಶಂ ರಾಜ್ಞಃ ಕನ್ನಾಂಡು ನಾಮಕಮ್॥

ಈ ಶಾಸನವು ತೆಲುಗು ಮತ್ತು ಸಂಸ್ಕೃತ ಎರಡರಲ್ಲೂ ಇದೆ.

೫) ಕಂನಾಡಿನಂತೆ ಕನ್ನೆ ನಾಡ ಉಲ್ಲೇಖಗಳೂ ದೊರೆತಿವೆ. ಅದೇ ತಾಲೂಕಿನ ಸಂಗಮೇಶ್ವರವೆಂಬಲ್ಲಿಯ ಶಾಸನದಲ್ಲಿಯ 'ಕಂನಡ ನಾಲ್ಕು ಸಾಯಿರದ' ಉಲ್ಲೇಖವು ಬರುತ್ತದೆ. ಮುಂದೆ 'ಕನ್ನೆ ಮುಂನೂಱಱ ಪಟ್ಟಣ ಗಂಡನಾರಾಯಣಪುರ, ಮೊಸಳಿ ಮಡುವಿನ ಸ್ಥಳ'ದಲ್ಲಿ ಕೆಲ ಸೆಟ್ಟಿಯರು ನೆರೆದು ಬಿಟ್ಟ ದತ್ತಿಯನ್ನು ಹೇಳಿದೆ. ಮೊಸಳಿ ಮಡುಗು ಎಂಬ ಗ್ರಾಮವು ಇದೇ ತಾಲೂಕಿನಲ್ಲಿ ಈ ಊರಿಂದ ಸ್ವಲ್ಪ ಅಂತರದಲ್ಲಿದೆ. ಮುಂದೆ ಇದೇ ಶಾಸನದ ವಿವರಣೆಯಲ್ಲಿ 'ಕಂನೆ ಮೂನೂಱು' ಮತ್ತು 'ಕಂನ್ನೆ ನಾಡಿ'ನ ನಿರ್ದೇಶಗಳು ಬರುತ್ತವೆ. ಈ ಶಾಸನವು ಸಂಪೂರ್ಣವಾಗಿ ಕಂನುಡಿಯಲ್ಲಿದೆ. ಕಲಚೂರಿ ವಂಶದ ರಾಯಮುರಾರಿ ಸೋವಿದೇವನ ಕಾಲದ್ದು. (ಕ್ರಿ. ಶ. ೧೧೭೨)

(೬) ಅದೇ ತಾಲೂಕಿನ ಸಿದ್ಧೇಶ್ವರದಲ್ಲಿ ಇರುಗುಣ ಚೋಳನೆಂಬವನು 'ಕನ್ನೆ ಮೂನುಱು' ಮುಂತಾದ ಪ್ರದೇಶಗಳನ್ನು ಆಳುತಿದ್ದುದನ್ನು ಹೇಳಿದೆ. ಇದರ ಕಾಲ ಕ್ರಿ.ಶ. ೧೦೬೧ ಸಂಪೂರ್ಣವಾಗಿ ಕಂನುಡಿಯಲ್ಲುಂಟು.

ಮೇಲಣ ಸಂಗಮೇಶ್ವರ ಮತ್ತು ಸಿದ್ಧೇಶ್ವರದ ಎರಡೂ ಶಾಸನಗಳಲ್ಲಿ ಕಂನುಡಿಯು ಕಾಣಿಸಿಕೊಳ್ಳುವುದು. ೧೩ನೆಯ ಶತಮಾನದ ವರೆಗೆ ಶಾಸನಗಳಲ್ಲಿ ತೆಲುಗು ಭಾಷೆ ಕಾಣಿಸಿಕೊಂಡರೆ ಹನ್ನೆರಡನೆಯ ಶತಮಾನ ದಿಂದ ಹಿಂದೆ ಕಂನುಡಿಯು ಕಣ್ಣೆಗೆ ಬೀಳುವುದು. ಹೀಗೆ ಹಿಂದೆ ಹೋದಂತೆ ಕಂನುಡಿಯು ಅಲ್ಲಿ ನಡೆಯುತ್ತಿದ್ದುದಕ್ಕೆ ಆಧಾರಗಳು ದೊರೆಯುತ್ತಿವೆ.

ಇದೇ ಮೇರೆಗೆ ಕನ್ನೆ ನಾಡಿನ ಇನ್ನೂ ಹಲವು ಉಲ್ಲೇಖಗಳು ಈಗಾಗಲೇ ಪ್ರಕಟವಾಗಿರುವ ದಲ್ಲಿ ಬರುತ್ತವೆ.[೬] 'ಅದರೊಳಗಿನ ೧೧೯ನೆಯ ಶಾಸನದಲ್ಲಿ ಬರುವ 'ಕನ್ನೆ ಮೂನೂಱಱ ಒಳಗಿನ ದುದ್ದಿಯಾಲು, ಕುಱುಕುನ್ದೆ, ಮತ್ತು ಸಿವಪುರ ಗ್ರಾಮಗಳು ಮತ್ತು ಮೇರೆಯನ್ನು ಹೇಳುವಾಗ ಬರುವ ಆತಕೂರು ಮುಂತಾದ ಗ್ರಾಮಗಳು ಇಂದಿನ ನಂದಿಕೊಟಕೂರ ತಾಲೂಕಿನ ಪೂರ್ವಭಾಗದಲ್ಲಿ ಇವೆ. ಇವುಗಳಿಗೆ ಇರುವ ಇಂದಿನ ಹೆಸರುಗಳು ಕುಱುಕುನ್ದ, ದುದ್ದಿಯಾಲ, ಮತ್ತು ಶಿವಪುರ; ಇವಲ್ಲದೆ ಆತ್ಮಕೂರು ಈ ಗ್ರಾಮಗಳು ಮೇಲೆ ಕಂನಾಡಿನ ಒಳಗಿನವು ಎಂದು ಉಕ್ತವಾದ ಗ್ರಾಮಗಳು ಸುಮಾರಾಗಿ ಸಮೀಪದಲ್ಲಿ- ಒಂದೇ ಪ್ರದೇಶದಲ್ಲಿ ಇರುವುದರಿಂದ ಕಂನಾಡು=ಕನ್ನೆ ನಾಡು ಎಂಬ ಸಮೀಕರಣವು ಸಲ್ಲುವಂತಿದೆ' ಎಂದು ಈ ವಿಷಯದಲ್ಲಿ ಬಲ್ಲಿದರಾದ ಶ್ರೀಮಾನ್ ದೇಸಾಯಿ ಪಾಂಡುರಂಗರಾಯರು ಪರಿಶ್ರಮಪೂರ್ವಕವಾಗಿ ಕಂಡುಹಿಡಿದು ಮೇಲಣ ವಿವರಣಗಳನ್ನು ತಿಳಿಸಿದ್ದಾರೆ.

ಅದೆ ಹೊತ್ತಿಗೆಯ ೧೨೧ನೆಯ ಶಾಸನವು ಶಿವಪುರದಲ್ಲಿ ದೊರೆತುದು. ಶಿವಪುರವು ಕಂನೆ ನಾಡಿನಲ್ಲಿದ್ದುದಾಗಿ ಅಲ್ಲಿ ಬಂದಿದೆ (೩೫-೩೯ ಸಾಲು ನೋಡಿ) ಮೇಲಣ ಸಮೀಕರಣಕ್ಕೆ ಇದು ಪುಷ್ಟಿಯನ್ನು ಕೊಡುತ್ತದೆ. ನಂ. ೧೪೭, ೨೩೧ ಮತ್ತು ೪೦೨ ಈ ಶಾಸನಗಳಲ್ಲೂ 'ಕಂನೆ ಮೂನುಱು' ಉಕ್ತವಾಗಿದೆ.

'ಕಮ್ಮ ನಾಡು ಕಂನಾಡಿಗಿಂತ ಭಿನ್ನವಾಗಿದ್ದು ಅದರ ಉತ್ತರಕ್ಕೆ ಇದ್ದಂತೆ ಶಾಸನ ಪ್ರಮಾಣಗಳಿಂದ ವ್ಯಕ್ತವಾಗುತ್ತದೆ,' ಎಂದೂ ಶ್ರೀ ದೇಶಾಯಿಯವರು ತಮ್ಮ ಕಂಡಿತವನ್ನು ತಿಳಿಸಿದ್ದಾರೆ. ವಿಜಯನಗರದ

ಮಲ್ಲಿಕಾರ್ಜುನನ ಕಾಲದ (೧೫೧೩ ಕ್ರಿ.ಶ.) ಶ್ರೀಶೈಲದ ಶಾಸನದಲ್ಲಿ ಕಮ್ಮನಾಡು ಮತ್ತು ಕನ್ನಾಡುಗಳ ಬೇರೆ ಬೇರೆ ಉಲ್ಲೇಖಗಳಿವೆ.

ಈ ಆಧಾರಗಳಿಲ್ಲದೆ, ಶ್ರೀಶೈಲದ ಹತ್ತಿರದ ನಾಡಿಗೆ ಕಣ್ಣವಿಷಯವೆಂಬ ಹೆಸರಿದ್ದ ಬಾದಾಮಿಯ ರಣರಸಿಕ ವಿಕ್ರಮ ಚಾಲುಕ್ಯರ ಕಾಲದ ಇನ್ನೊಂದು ತಾಮ್ರಪಟವೂ ಬಹಳ ಮಹತ್ವದ್ದಾಗಿದೆ. ಅದರಲ್ಲಿ 'ಕಣ್ಣ ವಿಷಯ' ವೆಂದು ಹೇಳಿದ ಪ್ರದೇಶಕ್ಕೇ 'ಕರ್ಣಾಟ ಸೀಮಾ' ಎಂಬುದಾಗಿಯೂ ಇನ್ನೊಂದೆಡೆ ಉಲ್ಲೇಖವಿದ್ದುದನ್ನು ಎನ್. ವೆಂಕಟರಮಣಯ್ಯನವರು ಕಂಡುಹಿಡಿದಿದ್ದಾರೆ.

ಇಂತಿವೆಲ್ಲ ಉಲ್ಲೇಖಗಳಿಂದ, ಕರ್ನೂಲ ಜಿಲ್ಲೆಯಲ್ಲಿ ದೊರೆವ ಕನ್ನಾಡು, ಕನ್ನೆನಾಡು, ಕಣ್ಣವಿಯ ಎಂಬೀ ಹಲವಾರು ನಿರ್ದೇಶಗಳಿಂದ ಈ ಜಿಲ್ಹೆಯ ಕರ್ನೂಲವೆಂಬ ಹೆಸರು ಮೂಲದಲ್ಲಿ ಕಣ್ಣನೂರೆಂದಿರ ಬಹುದೇ? ಎಂಬ ಸಂದೇಹವು ತಲೆದೋರುತ್ತದೆ. ಅದೇನೆ ಇದ್ದರೂ ಈ ಆಧಾರಗಳಿಂದ ೧೨ನೆಯ ಶತಮಾನದವರೆಗೂ ಕರ್ನೂಲ ಜಿಲ್ಹೆಯು ಕಂನಾಡಿನ ಭಾಗವಾಗಿದ್ದುದನ್ನು ಯಾರೂ ಅಲ್ಲಗಳೆಯುವುದು ಸಾಧ್ಯವಿಲ್ಲ.

ಇನ್ನೂ ಒಂದು ಸಂಗತಿಯು ಇಲ್ಲಿ ನಿಶ್ಚಿತವಾಗಿ ಗೊತ್ತಾಗುತ್ತಿದೆ. 'ಕನ್ನಡ' ವೆಂಬುದರ ಮೂಲ ಶುದ್ಧರೂಪವು 'ಕಂನಾಡು' ಎಂಬ ಬಗೆಗೆ ಈಗ ಸಂದೇಹಕ್ಕೆ ಎಡೆಯೆ ಉಳಿಯುವುದಿಲ್ಲ. 'ಕಂನಾಡು' ಇದು ಮೂಲ ರೂಪವೆಂದು ಒಪ್ಪಿಕೊಂಡರೂ ಕೆಲವರಿಗೆ 'ಕಂನಾಡು' ಎಂಬ ಕೂಡುನುಡಿಯೊಳಗಿನ ಮೊದಲಿನ ಪದದ ಬಗೆಗೆ ಸಂದೇಹವಿದ್ದಿತು. ಕರಿದು+ನಾಡು ಅಥವಾ ಕರು+ನಾಡು; ಇದು ಕೂಡುವಾಗ ಕಂನಾಡು ಎಂದು ಏಕೆ ಆಗಿರಲಿಕ್ಕಿಲ್ಲ? ಎಂದು ಅವರ ಊಹೆಯಿದ್ದಿತು. ಆದರೆ, ಆ ಊಹೆಯೂ ನಿರಾಧಾರವೆಂದು ಸಿದ್ಧವಾಯಿತು. ಕಣ+ನಾಡು; ಅಥವಾ ಕನ್ನೆ+ನಾಡು ಎಂಬುದು ಶಾಸನಗಳ ಆಧಾರದಿಂದಲೇ ಈಗ ನಿಶ್ಚಿತವಾಗಿದೆ. ಕಣ್ಣೂರು ಕಣ್ಣಂಬಾಡಿ, ಕನ್ನೇಶ್ವರ, ಕನ್ನೆ ಮೊದಲಾದ ಊರುಗಳ ಪಟ್ಟಿಯನ್ನು ಹಿಂದಿನ ಅಧ್ಯಾಯದಲ್ಲಿ ಕೊಟ್ಟಿದೆ. ಅವುಗಳಿಂದಲೂ ಈ ಮಾತು ದೃಢಪಡುತ್ತಿದೆ. ಆದುದರಿಂದ, ಕರಿದು+ನಾಡು ಅಥವಾ ಕರು+ನಾಡು ಎಂಬುದು ನಿರಾಧಾರವಾದ ವಿಚಾರ ವೆಂದು ಬೇರೆ ಹೇಳಬೇಕಾಗಿಲ್ಲ.

ಟಿಪ್ಪಣಿ

೧. ***Epigraphia Carnatica,*** Vol. XI Dg. 1
೨. Ibid, XI Gl. 9, 10
೩. ***Epigraphia Carnatica,*** VII S.K. 119, 120
೪. ***Indian Antiquary,*** Vol. 49
೫. ***ಮೈಸೂರು ಶಾಸನ ಇಲಾಖೆಯ ವರದಿ,*** ೧೯೨೯
೬. ***South Indian Inscriptions,*** Vol. IX

ಸಂಸ್ಕೃತಿ ವಿಚಾರ

ಹಟ್ಟಿಕಾರರೂ ಆರ್ಯರೂ

ಈ ಮೊದಲು ವಿವರಿಸಿದಂತೆ, ಹಟ್ಟಿಕಾರರೆಂದರೆ ವೇದದಲ್ಲಿ ಉಲ್ಲೇಖಿತ ಪತ್ತಿಗಳೂ ಯದು-ತುರ್ವರೂ ಎಂಬುದು ನಿಜವಿದ್ದರೆ ಆರ್ಯರೊಡನೆ ಇವರ ಬೆಟ್ಟಿಯು ಪಂಜಾಬ-ಸಿಂಧಗಳಲ್ಲಿಯೆ ಮೊದಲು ಆಯಿತೆಂಬುದು ಸ್ಪಷ್ಟವಿದೆ.

ಋಗ್ವೇದದ ವರ್ಣನೆಗಳಿಂದ ಹಟ್ಟಿಕಾರರು ಒಂದು ಕಾಲಕ್ಕೆ ಆರ್ಯರ ವಿರೋಧಿಗಳಾಗಿದ್ದಂತೆ, ಮುಂದೆ ಅವರು ಒಬ್ಬರೊಬ್ಬರಿಗೆ ಬೇಕಾದವರಾದುದೂ ಕಂಡು ಬರುತ್ತದೆ. ಋಗ್ವೇದದಲ್ಲಿ ಹತ್ತು ಮಂಡಲಗಳಿವೆ. ಇವುಗಳಲ್ಲಿ ಎರಡರಿಂದ ಏಳನೆಯ ವರೆಗೆ ಇರುವ ಆರು ಮಂಡಲಗಳು ಅತಿ ಪುರಾತನ ಕಾಲದುವೆಂದು ಬಲ್ಲಿದರ ಮತವಿದೆ. ಈ ಆರೂ ಮಂಡಲಗಳಲ್ಲಿ ಒಂದು ಬಗೆಯ ಸುಸಂಬದ್ಧತೆಯಿದೆ. ಇವನ್ನೆಲ್ಲ ರಚಿಸಿದ ಋಷಿಗಳು ಒಂದೇ ಮನೆತನದವರಾಗಿದ್ದಾರೆ. ಆದುದರಿಂದ, ಋಗ್ವೇದ ಈ ಭಾಗಕ್ಕೆ 'ಮನೆತನದ ಸೂಕ್ತಗಳು' ಎಂದು ಹೇಳುವ ವಾಡಿಕೆಯಿದೆ. ಅತಿಪುರಾತನ ಈ ಭಾಗಕ್ಕೆ ಒಂದು ಮತ್ತು ಎಂಟನೆಯ ಮಂಡಲಗಳನ್ನು ಮುಂದಿನ ಕಾಲದಲ್ಲಿ ಜೋಡಿಸಲಾಯಿತು. ಅಲ್ಲಿ ಇಲ್ಲಿ ಸೇರಿದ್ದ ಸೋಮಸೂಕ್ತಗಳನ್ನೆಲ್ಲ ಒಂದೆಡೆಗೆ ಆಯ್ದ ಬಳಿಕ ಒಂಬತ್ತನೆಯ ಮಂಡಲವು ಸಿದ್ಧವಾಯ್ತು. ಕೊನೆಗೆ ಪರಿಶಿಷ್ಟದಂತೆ ೧೦ನೆಯ ಮಂಡಲವೊಂದು ಬೆಳೆದುಬಂದಿತು.

ಆರ್ಯರ ಮತ್ತು ಯದು-ತುರ್ವರ ವೈರವು ಪುರಾತನ ಭಾಗದಲ್ಲಿಯೆ ವಿಶೇಷವಾಗಿ ಕಂಡುಬರುವುದು. ಮುಂದಿನ ಕಾಲದ ಸೂಕ್ತಗಳಲ್ಲಿ ಇದು ಅಷ್ಟು ಸ್ಪಷ್ಟವಾಗಿ ಇಲ್ಲ. ಕೆಲವೆಡೆಗೆ ವಿರೋಧವು ತೋರಿದರೆ ಕೆಲವಡೆಗೆ ಸ್ನೇಹವಿದ್ದುದೂ ಕಂಡುಬರುವುದು.[೧] ಕೆಲವು ಯುರೋಪೀಯ ವಿದ್ವಾಂಸರ ಅಭಿಪ್ರಾಯದಂತೆ ವೇದ ಕಾಲವು ಕ್ರಿ. ಶಕಕ್ಕೆ ಮೊದಲು ೧೦೦೦ದಿಂದ ೫೦೦ವರೆಗೆ; ಆದರೆ, ಇದು ಇನ್ನುಳಿದ ವರ್ಣನೆಗಳಿಗೆ ವೇದದಲ್ಲಿ ಸರಿ ಹೊಂದುವುದಿಲ್ಲವೆಂದು ಡಾ. ವಿಂಟರ್ನಿಟ್ಸ್‌ನು ಕ್ರಿಸ್ತಪೂರ್ವ ೨೫೦೦ ಅಥವಾ ೨೦೦೦ ರಿಂದ ೭೫೦ ಅಥವಾ ೫೦೦ವರೆಗೆ ವೇದಕಾಲವಿರಬೇಕೆಂದು ಪ್ರತಿಪಾದಿಸಿದ್ದಾನೆ.

ಆರ್ಯರು ಬರುವ ಮೊದಲು ಸಿಂಧ-ಪಂಜಾಬಿನಲ್ಲಿ ಹಟ್ಟಿಗಳನ್ನು ಕಟ್ಟಿಕೊಂಡು ಯದು-ತುರ್ವರೂ, ಕುರುವರೂ, ಪಣಿಗಳೂ ನೆಲೆಸಿದ್ದರು. ಈಗ ಹರಪ್ಪಾ, ಮೊಹೆಂಜೊದಾರೊದಲ್ಲಿ ದೊರೆವ ಪುರಾತನ ಪಟ್ಟಣಗಳು ಈ ಯದು-ತುರ್ವ-ಕುರುವರ ಬೀಡುಗಳಾಗಿರುವ ಸಂಭವವಿದೆ. ಆರ್ಯರ ಮೊದಲನೆಯ ಗುಂಪು ಇವರನ್ನು ವಿರೋಧಿಸಿದರೂ ಮುಂದಿನ ಕಾಲದಲ್ಲಿ ಬಂದವರು ಇವರಿಗೆ ಅನುಕೂಲರಾಗಿಯೆ ನಡೆದುಕೊಂಡರೆಂದು

ಹೇಳಬಹುದು. ಹಟ್ಟಿಕಾರರ ಮತ್ತು ಆರ್ಯರ ಸಂಸ್ಕೃತಿಯ 'ಕೂಡಲ-ಸಂಗಮ'ಕ್ಕೆ ಅಂದಿನಿಂದಲೆ ಆರಂಭವಾಯಿತು. ಎರಡೂ ಪಂಗಡಗಳು ಹತ್ತಿರ ಹತ್ತಿರದಲ್ಲಿ ಇದ್ದು ಬಾಳುವಾಗ ಅವರ ನಡೆವಳಿ, ನುಡಿವಳಿಗಳ ಪರಿಣಾಮವು ಪರಸ್ಪರರ ಮೇಲೆ ಆಗಿ, ಹೊಸತೊಂದು ಸಮ್ಮಿಶ್ರ ಸಂಸ್ಕೃತಿಯು ತಲೆದೋರಲಾರಂಭಿಸಿತು.

ದಕ್ಷಿಣಾಪಥದಲ್ಲಿ ಆರ್ಯರು, ಎಂದರೆ ಬ್ರಾಹ್ಮಣರು ಅಥವಾ ಋಷಿಗಳು ಬಂದು ನೆಲೆಸಿದ ಬಗೆಯನ್ನು ನೆನೆದುಕೊಂಡರೆ, ಅತಿಪುರಾತನ ಕಾಲದಲ್ಲಿ ಸಿಂಧ-ಪಂಜಾಬಿನಲ್ಲಿಯೂ ಇದೆ ತೆರನಾಗಿ ನಡೆದಿರಬಹುದೆಂದು ಊಹಿಸಿಕೊಳ್ಳಲು ಅಡ್ಡಿಯಿಲ್ಲ. ನದೀ ತೀರದಲ್ಲಿ ಅಥವಾ ಪರ್ವತಗಳ ಆಶ್ರಯದಲ್ಲಿ ಜಲಾಶಯಗಳ ಅನುಕೂಲತೆಯನ್ನು ನೋಡಿಕೊಂಡು ಇವರು ತಮ್ಮ 'ಆ-ಶ್ರಮ'ಗಳನ್ನು ಕಟ್ಟಿಕೊಂಡು, ಶ್ರಮಜೀವಿಗಳಾಗಿ ಮೊದಲು ವಾಸಿಸಿದರು. ನೆರೆಹೊರೆಯ ಜನದಲ್ಲಿ ತಮ್ಮ ದೈವೀಶಕ್ತಿಯ ವಿಷಯಕ್ಕೆ ನಂಬುಗೆಯುಂಟಾಗುವಂತೆ ಮಾಡಿದರು; ತಮ್ಮ ಶೀಲ, ಆಚಾರ, ವಿಚಾರಗಳ ಪ್ರಭಾವಕ್ಕೆ ಒಳಗಾದ ಜನರ ಹಿತಚಿಂತಕರಾಗಿ ಎಂದರೆ 'ಪುರೋಹಿತ'ರಾಗಿ ಬಾಳಲಾರಂಭಿಸಿದರು. ಈ ರೀತಿಯಿಂದ ಇವರು ಸಾಮಂತರ, ಮನ್ನೆಯರ, ರಾಜರ, ಮಹಾರಾಜರ ಕುಲಪುರೋಹಿತರಾಗಿ ಮುಂದೆ ಬಂದರು. ನಮ್ಮ ನಾಡಿನಲ್ಲಿ ಎಂದಿನಿಂದಲೂ ಪರಂಪರೆಯೆ ಹೀಗಿದೆ. ಬ್ರಾಹ್ಮಣನ ಮಂತ್ರ ಶಕ್ತಿಯ ನೆರವಿನಿಂದ ರಾಜರು ತಮ್ಮ ರಾಜ್ಯಭಾರವನ್ನು ನಡೆಸುತ್ತಿದ್ದರು. ನಿರ್ವಂಚನೆಯಿಂದ ನಿಜವಾಗಿಯೂ ಹಿತಚಿಂತಕನಾಗಿ-ಪುರೋಹಿತನಾಗಿ, ಮೊದಲು ತನ್ನ ಕುಳಗಳ ಕಲ್ಯಾಣಕರ್ತನೆಂಬ ಶ್ರದ್ಧೆಯು ಜನಸಾಮಾನ್ಯರಲ್ಲಿ ದೃಢವಾಯಿತು. ಅದರಿಂದ ಬ್ರಾಹ್ಮಣನಿಗೆ ತನ್ನ ಐಹಿಕ ಸಂಪತ್ತನ್ನೂ ಸಂಗ್ರಹಿಸಲು ಇಂಬುದೊರೆಯಿತು.

ಬ್ರಾಹ್ಮಣನಲ್ಲಿ ಭೌತಿಕ ಸಂಪತ್ತು ಹೆಚ್ಚಾದಂತೆ ದೈವೀಸಂಪತ್ತು ಕಡಿಮೆಯಾಗಲಾರಂಭಿಸಿರಬೇಕು. ತನ್ನ ಜೀವಂತ ಗುಣಗಳ ಬಲದಿಂದ ಸಮಾಜದಲ್ಲಿ ಪ್ರತಿಷ್ಠಿತನಾದ ಬ್ರಾಹ್ಮಣನಿಗೆ, ಬಳಿಕ ತನ್ನ ಜಾತಿಯ ಹೆಸರಿನ ಬಲದಿಂದಲೇ ಮಾನ ಮರ್ಯಾದೆಗಳನ್ನು ಉಳಿಸಿಕೊಳ್ಳುವ ಹೊತ್ತು ಬಂದಿತು. ಬ್ರಾಹ್ಮಣನ ಸ್ಥಾನ, ಮಾನ, ಮಹತ್ವಗಳನ್ನು ಹೇಳುವ ಶಾಸ್ತ್ರವಚನ, ಪುರಾಣಕತೆಗಳ ಆಧಾರ ಹಿಡಿದು ಈ ಸಮಾಜವು ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡು ಇರಬೇಕಾದ ಕಾಲವೂ ಬಂದಿತು. ಆದರೂ ಕಾಲಕಾಲಕ್ಕೆ ಎಷ್ಟೋ ತೇಜೋನಿಧಿಗಳು, ಜ್ಞಾನಿಗಳು ತಲೆದೋರಿ, ಈ ಸಮಾಜದೊಳಗಿಂದ ಬ್ರಾಹ್ಮಣ್ಯವು ತೀರ ನಷ್ಟವಾಗಿಲ್ಲವೆಂಬುದನ್ನು ಲೋಕದ ನಿದರ್ಶನಕ್ಕೆ ತಂದುಕೊಡುತ್ತಿದ್ದರು. ಅಂತಹರ ಹೆಸರಿನ (ಪುಣ್ಯದ) ಆಧಾರದಿಂದ ಉಳಿದ ಹೆಸರಿನ ಬ್ರಾಹ್ಮಣರು ಬದುಕಿಕೊಂಡು ಬಂದರು. ಬ್ರಾಹ್ಮಣವೆಂಬುದು ಮೊದಲು ಪರಿಶ್ರಮದಿಂದ, ತಪಸ್ಸಿನಿಂದ ಪಡೆಯಬೇಕಾದ ಸಿದ್ಧಿಯಾಗಿದ್ದಿತು. ಮುಂದೆ ಅದು ಒಂದು ಜಾತಿಯಾದಂತೆ ಅದರ ಸ್ವರೂಪವು ಬದಲಾಯಿತು.

ಭಾರತಕ್ಕೆ ಬ್ರಾಹ್ಮಣರು ಹೆಂಡಿರನ್ನು ಕಟ್ಟಿಕೊಂಡು ಬಂದಿದ್ದರೆಂದು ಹೇಳಲಿಕ್ಕಾಗುವುದಿಲ್ಲ. ಆದುದರಿಂದ, ಅವರಿಗೆ ಈ ನಾಡವರೊಡನೆ ಶರೀರ ಸಂಬಂಧವು ಅನಿವಾರ್ಯವಾಯಿತು. ಕೆಲರಿಗೆ ಈ ಮಾತು ಒಪ್ಪಿಗೆಯಾಗದಿದ್ದರೂ ಅನುಲೋಮ ವಿವಾಹಗಳು ಧರ್ಮಸಮ್ಮತವಾಗಿದ್ದುವೆಂಬುದು ಸ್ಮೃತಿಗಳಿಂದಲೆ ಸಿದ್ಧವಾಗುತ್ತದೆ. ಬ್ರಾಹ್ಮಣನು ಬ್ರಾಹ್ಮಣೆಯಲ್ಲದವಳನ್ನು ಮದುವೆಯಾಗುತ್ತಿದ್ದನು. ಅನುಲೋಮವಿವಾಹದ ಸಂತತಿಗೆ ಕೆಲವು ಕಾಲದ ವರೆಗೆ ತಂದೆಯ ಜಾತಿಯೆ ಪ್ರಾಪ್ತವಾಗುತ್ತಿತ್ತು. ಮೊದಲು ಅದಕ್ಕೆ ಸಾಮಾಜಿಕ ವಿರೋಧವಿದ್ದಿಲ್ಲ. ಜಮದಗ್ನಿಯು ರೇಣುಕೆಯನ್ನು ಮದುವೆಯಾದ; ಅವಳು ಕ್ಷತ್ರಿಯ ಕನ್ಯೆ. ಆದರೂ ಅವಳಲ್ಲಿ ಹುಟ್ಟಿದ ಪರಶುರಾಮನು ಬ್ರಾಹ್ಮಣನೆಂದೇ ಅಂದಿನವರು ಬಗೆಯುತ್ತಿದ್ದರು.

ಆರಿಯರ ಉದಯ

ಪ್ರತಿಲೋಮ ವಿವಾಹವು ಶಾಸ್ತ್ರಸಮ್ಮತವಿದ್ದಿಲ್ಲ. ಅದರಿಂದ, ಅಂತಹ ಸಂಬಂಧಗಳ ವಿವರಣೆಯು ದೊರೆಯುವುದು ದುರ್ಲಭ. ಆದರೂ ಯಯಾತಿ ಮತ್ತು ದೇವಯಾನಿಯ ಮದುವೆಯಾದುದನ್ನು ಪುರಾಣಗಳು ಹೇಳುತ್ತವೆ. ಯಯಾತಿಯಿಂದ ದೇವಯಾನಿಯ ಹೊಟ್ಟೆಯಲ್ಲಿ ಹುಟ್ಟಿದ ಹಿರಿಯ ಮಗನೆ ಯದುರಾಜನೆಂದು

ಪುರಾಣ ಕತೆಯಿದೆ. ತುರ್ವಸುವು ಇವರ ಕಡೆಗೂಸು. ದೇವಯಾನಿಯು ಶುಕ್ರಾಚಾರ್ಯನ ಮಗಳು. ಶುಕ್ರಾಚಾರ್ಯನು ಅಸುರರ ಎಂದರೆ ಆರ್ಯವಿರೋಧಿಗಳ ಗುರುವಾಗಿದ್ದನು. ಆ ಪಂಗಡದ ವೃಷಪರ್ವ ರಾಜನ ಮಗಳಾದ ಶರ್ಮಿಷ್ಠೆಯು ಯಯಾತಿಯ ಎರಡನೆಯ ಹೆಂಡತಿ. ಶರ್ಮಿಷ್ಠೆಯಿಂದ ಪೂರುವು ಹುಟ್ಟಿದನು. ಇವನು ಕೌರವ-ಪಾಂಡವರ ಮೂಲಪುರುಷನು. ಈ ತಳಿಯು ಅಸುರಪುತ್ರಿಯ ಸಂತತಿ.

ಋಗ್ವೇದದಲ್ಲಿ ಯದು-ತುರ್ವಸುಗಳು ಹುಟ್ಟಿನ ಮಾತೆ ಬಂದಿಲ್ಲ. ಅಲ್ಲಿ ಇವರು ಇಂದ್ರನೊಡನೆ ಕಾದಿದ ಅಥವಾ ಇಂದ್ರನ ಬೆಂಬಲದಿಂದ ಅನೇಕ ವೈರಿರಾಜರನ್ನು ಸೋಲಿಸಿ ಓಡಿಸಿದ ವರ್ಣನೆಗಳು ಮಾತ್ರ ದೊರೆಯುತ್ತವೆ. ಮಹಾಭಾರತದ ಕಾಲಕ್ಕೂ ಋಗ್ವೇದ ಕಾಲಕ್ಕೂ ಎರಡುವರೆ ಸಾವಿರಕ್ಕಿಂತ ಹೆಚ್ಚಿನ ಕಾಲಾವಧಿಯು ಅಂತರವಿದೆ. ಭಾರತ ಮತ್ತು ಪುರಾಣಗಳಲ್ಲಿ ಮರೆತುಹೋಗುತ್ತಿದ್ದ ವೇದಕಾಲದ ಕತೆ, ನಡೆವಳಿಗಳನ್ನು ಸಂಗ್ರಹಿಸಿ ಸಾಧ್ಯವಾದಷ್ಟು ಅವನ್ನು ಜೀವಂತವಾಗಿ ಉಳಿಸಿಕೊಳ್ಳಲು ನಡೆದ ಪ್ರಯತ್ನವು ಕಂಡುಬರುತ್ತದೆ. ಅಂತಹ ಒಂದು ಪ್ರಯತ್ನವೆ ಈ ಯದು-ತುರ್ವರ ಕತೆಯ ಸಂಗ್ರಹವು. ವೇದದಲ್ಲಿ ಕಾಣಿಸಿಕೊಳ್ಳುವ ಯದು-ತುರ್ವರು ಒಂದು ಜನಾಂಗ. ಯದುವಾಗಲಿ, ತುರ್ವಸುವಾಗಲಿ ಒಂದು ವ್ಯಕ್ತಿಯಲ್ಲ ಒಂದು ತಂಡ. ಯದು ಮತ್ತು ತುರ್ವಸು ಎಂಬ ಹೆಸರಿಗೆ ಇರುವ ಅರ್ಥವನ್ನು ನೋಡಿದರೂ ಸರಿ. ಅದು ಒಂದು ವ್ಯಕ್ತಿಯು ಇಟ್ಟ ಹೆಸರು ಎಂಬುದಕ್ಕಿಂತ ಒಂದು ಜನದ ಸಾಮಾನ್ಯ ನಾಮವೆಂದು ಬಗೆಯುವುದೆ ಲೇಸೆಂದು ತೋರುತ್ತದೆ. ಆದರೆ, ಸು. ೨೫೦೦-೩೦೦೦ ವರುಷಗಳ ತರುವಾಯ ಸಂಗ್ರಹಿಸಿದ ಹಳೆಯ ಕತೆಯಲ್ಲಿ ನಡುವಿನ ಕಾಲಾವಧಿಯೊಳಗೆ ಆಗಿರುವ ಕೆಲವೊಂದು ಪರಿವರ್ತನಗಳ ಛಾಯೆಯೂ ಕಾಣಿಸಿಕೊಳ್ಳುವ ಸಂಭವವಿದೆ. ಆ ಪರಿವರ್ತನವೆಂದರೆ ಆರ್ಯರೂ ಮತ್ತು ಹಟ್ಟಿಕಾರ ರಲ್ಲಿ ನಡೆದಿರಬಹುದಾದ ವೈವಾಹಿಕ ಸಂಬಂಧ. ಪೌರಾಣಿಕ ಯದು-ತುರ್ವರ ಕತೆಯಲ್ಲಿ ಆ ಸೂಚನೆಯೆ ಇದೆ.

ಆರ್ಯರು ಹಟ್ಟಿಕಾರರ ಹೆಣ್ಣನ್ನು ಮದುವೆಯಾದುದರಿಂದಾಗಲಿ, ಅಥವಾ ಹಟ್ಟಿಕಾರರು ಆರ್ಯರ ಕನ್ಯೆಗಳನ್ನು ಕೈಹಿಡಿಯುವುದರಿಂದಾಗಲಿ, ಹುಟ್ಟಿದ ಸಂತತಿಯಿಂದಲೆ ಮುಂದೆ ಆರಿಯರೆಂಬ ಜನವು ನಿರ್ಮಾಣವಾಯಿತು. ವ್ಯಾಸ, ಪರಶುರಾಮಾದಿಗಳಂತೆ ಹಲವರಿಗೆ ತಂದೆಯ ಜಾತಿಯೆ ಒಂದು ಕಾಲಕ್ಕೆ ದೊರೆತರೂ ಈ ಸಂಪ್ರದಾಯವು ಸ್ಮೃತಿಕಾಲದ ಹೊತ್ತಿಗೆ ಸಂಪೂರ್ಣ ನಿಂತುಹೋಯಿತು. ಅನುಲೋಮ ವಿವಾಹಕ್ಕೆ ಸಮ್ಮತಿಸಿದರೂ ಶಾಸ್ತ್ರಗಳು ಅವರ ಮಕ್ಕಳಿಗೆ ತಂದೆಯ ಜಾತಿಯೆ ಪ್ರಾಪ್ತವಾಗುವುದೆಂಬುದನ್ನು ಒಪ್ಪಲಿಲ್ಲ. ಆ ಜಾತಿಯ ಹಕ್ಕು ಬರಬೇಕಾದರೆ ನಡುವೆ ಸಾಮಾನ್ಯವಾಗಿ ಅಶಕ್ಯವಾದ ಹಲವು ಅಡ್ಡಿಗಳನ್ನು ಹಾಕಲಾಯಿತು.

ಬ್ರಹ್ಮ-ಕ್ಷತ್ರಿಯರು

ವಿಖ್ಯಾತ ಶ್ರವಣಬೆಳಗೊಳದ ಗೊಮ್ಮಟೇಶ್ವರನನ್ನು ನಿಲ್ಲಿಸಿದ ಚಾವುಂಡರಾಯನು ಬ್ರಹ್ಮಕ್ಷತ್ರಿಯನು. ಬಂಗಾಳದಲ್ಲಿ ಆಳಿದ ಸೇನ-ಬಲ್ಲಾಳ ಮನೆತನದ ರಾಜರು ಕರ್ಣಾಟದ ಬ್ರಹ್ಮಕ್ಷತ್ರಿಯ ಕುಲದವರೆಂದು ಅವರ ವಂಶಾವಳಿಯಲ್ಲಿದೆ. ಮೊದಲು ಕ್ಷತ್ರಿಯರಿದ್ದು ಬ್ರಹ್ಮಜ್ಞಾನಿಗಳಾಗಿ ಬ್ರಹ್ಮ-ಕ್ಷತ್ರಿಯರೆಂದೆನಿಸಿದರೊ ಅಥವಾ ಮೊದಲು ಬ್ರಾಹ್ಮಣರಿದ್ದು ಬಳಿಕ ಕ್ಷತ್ರಿಯತ್ವವು ಇವರಿಗೆ ಬಂದಿತೆಂದು ಅರ್ಥ ಮಾಡಬೇಕೆ? ಕದಂಬ ಮಯೂರಶರ್ಮನು ಮೊದಲು ಬ್ರಾಹ್ಮಣನು. ಮುಂದೆ ಈ ರಾಜವಂಶದವರು 'ವರ್ಮ' ಎಂದು ಹಚ್ಚಿ ಕೊಳ್ಳಲಾರಂಭಿಸಿ ತಾವು ಕ್ಷತ್ರಿಯರಾದುದನ್ನು ಸೂಚಿಸಿದ್ದಾರೆ.

ಆರ್ಯರ ನಂತರದಲ್ಲೂ ದೇಶದಲ್ಲಿ ಅನೇಕ ಪರಕೀಯ ಜನಾಂಗಗಳು ನುಗ್ಗಿ ಬಂದಿವೆ. ಅವರಲ್ಲಿ ಅನೇಕರು ಈ ದೇಶದಲ್ಲಿ ನೆಲೆಸಿ ನಾಡಿನ ಜನಗಳೊಡನೆ ಒಂದಾದರು. ಹೊಸದಾಗಿ ಬಂದವರೊಡನೆ ಮೊದಲು ವಿರೋಧೀಭಾವವು ಇರುವುದು ಸ್ವಾಭಾವಿಕವಾದರೂ ಹತ್ತಿರಹತ್ತಿರ ನೆಲೆಸಿದ ಬಳಿಕ ಒಬ್ಬರೊಬ್ಬ ರೊಳಗಿನ ಒಳ್ಳೆತನವು ತಿಳಿದು ಬಂದು ಅವರಲ್ಲಿ ಮನುಷ್ಯ ಸಹಜವಾದ ಸಹಾನುಭೂತಿ, ಸಹಕಾರ ಭಾವನೆ

ತಲೆದೋರುವುದು. ಸಮಾನ ಸಂಸ್ಕೃತಿ, ಸಾಮಾಜಿಕ ಸ್ಥಾನಮಾನಗಳಲ್ಲಿಯ ಸಮಾನತೆಗೆ ಅನುಸರಿಸಿ ಅವರಲ್ಲಿ ವೈವಾಹಿಕ ಸಂಬಂಧಗಳು ಉಂಟಾದುವು. ಚಂದ್ರಗುಪ್ತನು ಸೆಲ್ಯುಕಸನ ಮಗಳನ್ನು ಮದುವೆಯಾದನು; ಅನೇಕ ಗ್ರೀಕರಾಜರು ಹಿಂದೂಧರ್ಮವನ್ನು ಸ್ವೀಕರಿಸಿ ಈ ದೇಶದಲ್ಲಿ ನೆಲಸಿದ್ದು ಕಾರ್ಲೆ, ಕಾನ್ಹೇರಿ ಮೊದಲಾದ ಕಡೆಯ ಶಾಸನಗಳಿಂದ ಗೊತ್ತಾಗುತ್ತದೆ.[೨] ದತ್ತಮಿತ್ರ, ಇಂದ್ರಾಗ್ನಿದತ್ತ ಎಂಬೀ ಬಗೆಯ ಹೆಸರುಗಳನ್ನೂ ಅವರು ಧರಿಸಿದರು. ಹೆಲಿಯೊಡೋರಾನು ಗ್ವಾಲಿಯೇರಿಯಲ್ಲಿ ಸ್ತೂಪಕಟ್ಟಿದ್ದಾನೆ. ವಾಸುದೇವನ ಸತ್ರಕ್ಕಾಗಿ ಗರುಡಧ್ವಜವನ್ನು ನಿಲ್ಲಿಸಿರುವನು. ಅದರ ಮೇಲಿನ ಬರೆಹದಲ್ಲಿ ಈತನಿಗೆ 'ಭಾಗವತ'ನೆಂದು ಹೇಳಿದೆ.

ಹಿಂದೂ ಸಂಸ್ಕೃತಿಯ ಆಧಾರಸ್ತಂಭರಾಗಿ ಶಕಸ್ಥಾಪಕರಾದ ಸಾತವಾಹನರು ಕ್ಷತ್ರಪರೆಂಬ ಪರಕೀಯ ರಾಜರೊಡನೆ ಬೀಗತನ ಮಾಡಿದ್ದು ಜುನಾಗಡದ ಲೇಖದಿಂದ ಗೊತ್ತಾಗುತ್ತದೆ. ಆಭೀರರು ಭಾರತೀಯರಲ್ಲ ವಾದರೂ ಈ ದೇಶದಲ್ಲಿ ಬಂದು ನೆಲೆಸಿದ ಬಳಿಕ ತಾವೂ ಯದುವಂಶಿಗಳೆಂದು ಹೇಳಿಕೊಳ್ಳಲಾರಂಭಿಸಿದರು. ಎಮ್ಮಿಗರೂ ಒಂದು ಕಾಲಕ್ಕೆ ಬೇರೆ ಪಂಗಡದವರಾಗಿದ್ದರೂ ಮುಂದೆ ತುರುಕಾರರಲ್ಲಿ ಬೆರೆತಿರಬೇಕು. ಈಗ ಅವರ ಬೇರೆ ಹೆಸರೂ ಕೇಳಬರುವುದಿಲ್ಲ. ಆದರೆ, ಇಂದು ಹೆಸರು ಗೌಳಿಯಾಗಿದ್ದರೂ ಸಾಕುವುದು ಮುಖ್ಯವಾಗಿ ಎಮ್ಮೆಗಳನ್ನೇ. ಹೀಗೆ ಎಮ್ಮಿಗರು ಸೋತು ಗೆದ್ದರು; ತುರುಕಾರರು ಗೆದ್ದುಸೋತರು.

ಈ ಬಗೆಯಾದ ಸಮ್ಮಿಶ್ರಣದ ಪರಿಣಾಮವು ಜನಗಳ ನಡೆವಳಿ ಮತ್ತು ನುಡಿವಳಿಗಳ ಮೇಲೂ ಆಗದೆ ಎಂದೂ ಇರಲಾರದು. ಭಿನ್ನವಾದ ಎರಡು ಜನಗಳ ಬಳಕೆ, ಬೆರಕೆಯಾದಲ್ಲಿ ಒಬ್ಬರು ಸೋತು ಗೆದ್ದುದೂ ಇನ್ನೊಬ್ಬರು ಗೆದ್ದು ಸೋತುದೂ ಕಂಡುಬರುವುದು. ಹಟ್ಟಿಕಾರರು ಮತ್ತು ಆರ್ಯರಲ್ಲಿ ಕಂಡುಬರುವ ಪರಿಣಾಮವು ಇದೇ ಬಗೆಯದಾಗಿದೆ. ಆದರೆ, ಯಾವುದೊಂದು ಪಕ್ಷಾಭಿಮಾನದಿಂದ ಕಣ್ಣುಗುರುಡಾದವರು ಇನ್ನೊಂದು ಪಕ್ಷದ ಪರಿಣಾಮಗಳನ್ನು ಸೂಕ್ಷ್ಮವಾಗಿ ನೋಡಿ ತಿಳಿದುಕೊಳ್ಳುವುದಕ್ಕೆ ಅಸಮರ್ಥರಾಗುತ್ತಾರೆ. ಇನ್ನೊಬ್ಬರ ಪರಿಣಾಮವೇ ಆಗದೆ, ಕೇವಲ ಒಂದು ಜನದ ಸಂಸ್ಕೃತಿಯೆ ಉಳಿದು ಬೆಳೆದು ಬಂದ ಉದಾಹರಣವು ಸಿಕ್ಕುವುದೇ ಸಾಧ್ಯವಿಲ್ಲ. ಬೇರೆ ಬೇರೆ ಜನಗಳ ನಡೆವಳಿ, ನುಡಿವಳಿಗಳನ್ನು ಹೋಲಿಸಿ, ತೂಗಿ, ಬಗೆದು ಭಾವಿಸಿದಲ್ಲಿ ಒಬ್ಬರೊಬ್ಬರ ಮೇಲೆ ಅವರ ಪರಿಣಾಮವು ಹೇಗೆ ಆಗಿದೆಯೆಂಬುದು ಬಹುಮಟ್ಟಿಗೆ ತಿಳಿದುಬರಬಹುದಾಗಿದೆ.

ಹಳೆಯ ಕೆಲವು ನಡೆವಳಿ

ಪರ್ವತಪೂಜೆ ಇವರ ವೈಶಿಷ್ಟ್ಯ. ಇಂದ್ರನು ಮೊದಲು ಪರ್ವತದ ವೈರಿ. ಆತನು ತನ್ನ ವಜ್ರದಿಂದ ಪರ್ವತಗಳ ಪಕ್ಕಗಳನ್ನು ಕಡಿದ ಕತೆಯಿದೆ. ಆದರೆ, ಋಗ್ವೇದದಲ್ಲಿ 'ಇಂದ್ರಾ- ಪರ್ವತಾ' ಎಂಬ ಜೋಡು ದೇವತೆಯು ಹಟ್ಟಿಕಾರರು ಮತ್ತು ಆರ್ಯರಲ್ಲಿ ಬಳಿಕ ಆದ ಒಡಂಬಡಿಕೆ ಹೊಂದಿಕೆಯ ನಿದರ್ಶಕವಾಗಿದೆ. ಯಾದವರು (ಭಾರತ ಕಾಲದಲ್ಲಿ) ಇಂದ್ರನ ಪೂಜೆ ಮಾಡದೆ ಆತನನ್ನು ಕೆರಳಿಸಿದರಂತೆ. ಆಗ ಅವರು ಗಿರಿ ಪೂಜಕರಾಗಿದ್ದರು. ಆಗ ಇಂದ್ರನು ಎಡೆಬಿಡದೆ ಮಳೆಗರೆದು ಅವರನ್ನು ಪೀಡಿಸಿದನು. ಆದರೆ ಕೃಷ್ಣನ ನೇತೃತ್ವದಲ್ಲಿ ಯಾದವರು (ಎಂದರೆ ಹಟ್ಟಿಕಾರರು) ಗಿರಿಯ ಆಶ್ರಯವನ್ನು ಪಡೆದು ಆ ಕುತ್ತಿನಿಂದ ಪಾರಾದರಂತೆ. ಆ ಪರ್ವತದ ಹೆಸರು ಗೋವರ್ಧನಗಿರಿ. ತಮ್ಮ ಗೋವುಗಳಿಗೂ ತಮಗೂ ಅನ್ನ-ನೀರುಗಳನ್ನಿತ್ತು ಸಲಹುವುದೆಂಬ ಸುಪ್ತಭಾವನೆಯೆ ಹಟ್ಟಿಕಾರರ ಗಿರಿಪೂಜೆಯ ಮೂಲ ಕಾರಣವಿರಬೇಕು. ಗುಡ್ಡಪ್ಪ, ಪರ್ವತಪ್ಪ, ಗಿರಿಯಪ್ಪ ಇವು ಇವರ ಮೆಚ್ಚಿಕೆಯ ಹೆಸರುಗಳು

ಮಲೆಯರೆಂದು ಪರ್ವತೇಯರಿಗೆ ಹೆಸರು. ಎಲ್ಲ ಹಟ್ಟಿಕಾರರೂ ಇಂದ್ರನ ಪರಂಪರೆಗೆ ತಲೆವಾಗಲಿಲ್ಲ. ಇಂತಹರೊಡನೆ ಆದ ಕಲಹದ ಕತೆಯೆ ಮಲ್ಲಾರಿಯ ಪುರಾಣದಲ್ಲಿದೆ. ಮಲ್ಲಾಸುರನನ್ನು ಸಂಹರಿಸಿದಂತೆ ಇರುವ ವರ್ಣನೆಯು ಅದರಲ್ಲಿದೆ. 'ಮಲ್ಹಾರಿ' ಎಂದು ಆರಿಯರ ಪರಂಪರೆಯಲ್ಲಿರುವ ಹೆಸರು. ಇದೇ ದೇವತೆಗೆ ಹಟ್ಟಿಕಾರ ಜನಗಳು ಮಲ್ಲಯ್ಯನೆಂದು ಕರೆಯುತ್ತಾರೆ. ಪ್ರೇಮಪುರ (ಬೀದರ), ಮೈಲಾರ (ಯಾದಗಿರಿ) ಹಿಪ್ಪರಿಗಿ, ದೇವರಗುಡ್ಡ, ಮಣ್ಣಮೈಲಾರ, ಕಾರಿಮನೆ (ಬೆ. ಜಿ.) ಮಂಗಸೂಳಿ, ಜೆಜೂರಿ (ಪುಣೆ), ಶ್ರೀಶೈಲ,

ಪಾಲಿ (ಸಾತಾರಾ), ಧಾಮಣಿ (ಪುಣೆ) ಮುಂತಾದುವು ಕ್ಷೇತ್ರಗಳು. ಅಲ್ಲದೆ ಮಲ್ಲರ ನೆನಹು ಕೊಡುವ ಮಲ್ಲಾಪುರ, ಹಿರೇಮಲ್ಲೂರು ಮೊದಲಾದ ಊರುಗಳಂತೂ ಸರಿಯೆ. ಈ ಮಲ್ಲಾರಿ ದೇವತೆಯು ಶಿವನ ಅವತಾರವೆಂದು ಗ್ರಹಿಕೆಯಿದ್ದರೂ ಆ ದೇವತೆಯ ವಾಹನಾದಿಗಳನ್ನು ನೋಡಿದರೆ ಅದರಲ್ಲಿ ಇಂದ್ರನ ಕುರುಹುಗಳೂ ಕಾಣುವುವು. ಹಟ್ಟಿಕಾರರಲ್ಲಿ ಕುರುವರು ಈ ದೇವತೆಯ ಉಪಾಸಕರು ಬಹಳ. ಮರ್ಹಾಟರು ಮಲ್ಲಾರಿ ಅಥವಾ ಖಂಡೋಬನೆಂಬ ಹೆಸರಿನಲ್ಲಿ ಆರಾಧಿಸುವ ದೇವತೆಯೂ ಇದೆ. ಶ್ರೀಶೈಲ ಅಥವಾ ಪರ್ವತಪ್ಪನ ಭಕ್ತರು ಕುರುವರು ವಿಶೇಷ. ಗಿರಿ (ತಿರುಪತಿ) ಗೆ ನಾಡವರೂ ರಡ್ಡಿಗಳೂ ನಡೆದುಕೊಳ್ಳುವುದು ಹೆಚ್ಚು. ಬ್ರಾಹ್ಮಣರೂ ಈ ದೇವತೆಗಳನ್ನು ಸ್ವೀಕರಿಸಿದ್ದಾರೆ.

ಮಲ್ಲಯ್ಯ-ಮಲ್ಲಾರಿ ದೇವತೆಯು ಕಂನಾಡವರ ವೈಶಿಷ್ಟ್ಯ. ತೆಲುಗು, ತಮಿಳು ನಾಡಿನಲ್ಲಿ ಈ ದೇವತೆಯ ಪ್ರಾಶಸ್ತ್ಯವಿಲ್ಲ. ಈ ಕಾರಣದಿಂದಲೂ ಕಣ್ಣ ವಿಷಯವೆಂಬ-ಕರ್ನೂಲ ಜಿಲ್ಹೆಯಲ್ಲಿರುವ ಶ್ರೀ ಶೈಲವು ಅಥವಾ ಪರ್ವತದ ಮ ಲ್ಲಯ್ಯನು ಕಂನಾಡುವರ ದೇವರು. ಹಟ್ಟಿಕಾರರ ಹಾಟಕೇಶ್ವರನೂ ಇವನು. ತೆಲುಗು ದೇಶದಲ್ಲಿ ಕರ್ಣಕುಲದ ಒಂದು ಜನವಿದೆ. ಅವರಿಗೆ ಪುರಗಿರಿ ಕ್ಷತ್ರಿಯರು, ಪರಶುರಾಮ ಕ್ಷತ್ರಿಯರು, ಪೆರಿಕೆ ಕ್ಷತ್ರಿಯರೆಂದು ನಾಮಾಂತರಗಳಿವೆ. ಇವರೆಲ್ಲ ಮಲ್ಲಯ್ಯನ ಭಕ್ತರು. ಪ್ರಾಚೀನ ಕಾಲದಲ್ಲಿ ಕಂನಾಡನಿಂದ ಓಡಿ ಇತ್ತ ಬಂದುದಾಗಿ ಹೇಳುತ್ತಾರೆ. ಗಿರಿಮಲ್ಲ, ಸಿದ್ಧಮಲ್ಲ ಎಂಬೀ ತೆರನಾದ ಗೋತ್ರ ಸೂತ್ರಗಳುಂಟು ಇವರಲ್ಲಿ.

ಹಟ್ಟಿಕಾರರಲ್ಲಿ ಗಿಡಗಳಿಂದ ತಮ್ಮ ಬೆಡಗುಗಳನ್ನು ಹೇಳುವ ಸಂಪ್ರದಾಯವಿದೆ. 'ಕಲ್ಲೇ ದೈವ, ಮಡಕೆಯೆ ದೈವ, ಮರವೇ ದೈವ....' ಎಂಬ ವಚನದಲ್ಲಿ ಶ್ರೀ ಬಸವಣ್ಣನವರು ಈ ಪದ್ಧತಿಯ ವಿಷಯದಲ್ಲಿ ತಮ್ಮ ಅಸಮ್ಮತಿಯನ್ನು ಸೂಚಿಸಿದ್ದಾರೆ. ಬಸವಣ್ಣನವರ ಕಾಲದಲ್ಲೂ ಈ ಪದ್ಧತಿಯು ಪ್ರಬಲವಾಗಿದ್ದಿತೆಂದು ಆ ವಚನದಿಂದ ಗೊತ್ತಾಗುವುದು. ಮೊಹೆಂಜೋದಾರೊದ ಅವಶೇಷಗಳಿಂದ ಆ ಕಾಲದಲ್ಲಿಯೂ ಈ ಸಂಪ್ರದಾಯವು ಇದ್ದಿತೆಂದು ತಜ್ಞರು ಹೇಳುತ್ತಾರೆ.[೪]

ಒಂದೊಂದು ದೇವತೆಯೊಡನೆ ಸಂಬಂಧ ಜೋಡಿಸಿ, ಅಥವಾ ಬೇರೆ ಕಾರಣದಿಂದ ಮಹತ್ವದುವು, ಪವಿತ್ರವೆಂದು ಬಗೆದು ಪೂಜಿಸಿ ಕಾಪಾಡಿಕೊಂಡು ಬಂದ ಹಲವು ಗಿಡಗಳು ಮಾನವನ ನೆಮ್ಮದಿಗೆ ಸಹಾಯಕವಾಗಿವೆ ಯೆಂದು ಕಂಡುಬರುತ್ತದೆ. ಬಿಲ್ವ, ತುಳಸಿ, ಬೇವು, ತುಂಬಿ ಇಂತಹವುಗಳನ್ನು ಔಷಧಿಗೆ ಉಪಯುಕ್ತವೆಂದು ಇಂದಿನವರು ಕೂಡ ಕಾಪಾಡಿಕೊಂಡು ಬೆಳಸುವಹಾಗಿದೆ. ಬೇವು, ಬನ್ನಿ, ಆಲ, ಅರಳೆಗಳಂತಹ ಕೆಲವು ಗಿಡಗಳ ವಿಚಾರದಲ್ಲಿ ನಮ್ಮ ನಾಡಿಗರಲ್ಲಿ ದೆವ್ವಿನ ಅಥವಾ ದೇವತ್ವದ ಭಾವನೆಯು ಇದ್ದುದು ಕಂಡುಬರುತ್ತದೆ. ಮೊಹೆಂಜೋದಾರೋದ ಒಂದು ಅವಶೇಷದಲ್ಲಿ ಅರಳೆಯ ಗಿಡದ ಪೂಜೆಯು ನಡೆದ ಹಾಗೆ ಚಿತ್ರಿಸಿದ್ದುಂಟಂತೆ.

ಆರಿಯರೆನಿಸುವ ಮರ್ಹಾಟರಲ್ಲಿಯೂ ಗಿಡಗಳಿಂದ ಬೆಡಗು ಹೇಳುವ ಸಂಪ್ರದಾಯವಿದೆ. ಆರಿ, ಬನ್ನಿ, ಮುತ್ತಲ, ಆಲ ಮೊದಲಾದವುಗಳು ಒಂದೊಂದು ಮನೆತನದ ಬೆಡಗುಗಳಿದ್ದು ಮದುವೆಯ ಕಾಲಕ್ಕೆ ಇವುಗಳನ್ನು ವಿಚಾರಿಸಿಯೆ ಹೆಣ್ಣು-ಗಂಡು ಗೊತ್ತುಪಡಿಸುವರು. ಬ್ರಾಹ್ಮಣರಲ್ಲಿಯೂ ಆಲ, ಅರಳೆ, ತುಳಸಿ, ಬನ್ನಿಗಳ ಪೂಜೆ ಸೇರಿಕೊಂಡಿದೆ. ತುಳಸಗೇರಿ ಮೊದಲಾದ ಕೆಲವು ಊರ ಹೆಸರುಗಳು ನಮ್ಮ ನಾಡಿಗರ ವೃಕ್ಷಭಕ್ತಿಯ ಮೂಲಕವಾಗಿಯೂ ಬಂದಿರುವ ಸಂಭವವಿದೆ.

ಯಾವುದೇ ಒಂದು ಮಹಾಕಾರ್ಯದ ಸಿದ್ಧಿಗಾಗಿ ದೇವರಿಗೆ ಬಲಿಯನ್ನು- ಮನುಷ್ಯ ಬಲಿಯನ್ನು ಕೊಡುವ ಸಂಪ್ರದಾಯವಿದ್ದಿತು. ದೊಡ್ಡ ಕಟ್ಟಡ, ಕೋಟೆ, ಕೆರೆ ಮೊದಲಾದವುಗಳ ಪೂರ್ಣತೆಗೆ ಸಹ, ಪೂರ್ಣಾಹುತಿಯೆಂದು ಈ ಬಲಿದಾನದ ಆವಶ್ಯಕತೆಯಿದ್ದುದಾಗಿ ತಿಳುವಳಿಕೆಯಿತ್ತು. ಹಂಪೆಯ ವಿರೂಪಾಕ್ಷನ ಗುಡಿಯ ಮಹಾದ್ವಾರದ ಮೇಲಣ ಗೋಪುರವು ನಿಲ್ಲಲು ಅದಕ್ಕೊಂದು ಬಲಿಯನ್ನು ಅರ್ಪಿಸಬೇಕಾಯಿತಂತೆ. ಆ ಬಲಿಯನ್ನು ಕೊಟ್ಟ ಮನೆತನದವರಿಗೆ ರಾಜರಿಂದ ಕೊಡುಗೆಯ ಭೂಮಿ ದೊರೆತಿದ್ದು, ಬಲಿದಾನಕ್ಕಾಗಿ ಕೊಟ್ಟ ಆ ಹೆಣ್ಣುಮಗಳ ದಿನವನ್ನು ಅವರು ಇಂದಿಗೂ ನೆನೆಯುವರು. ದೊಡ್ಡ ಕೆರೆ, ಕಟ್ಟೆಗಳು ಭದ್ರವಾಗಿ ನಿಲ್ಲುವುದಕ್ಕಾಗಿ ಕೊಟ್ಟ

ಆಹಾರದ ಕತೆಗಳು ಎಲ್ಲೆಡೆಗೂ ಪ್ರಚಾರದಲ್ಲಿವೆ. ಹಳ್ಳಿಯ ಹಾಡಿನಲ್ಲಿ ಇವು ಸಂಸ್ಮರಣೀಯವಾಗಿ ಉಳಿದುದೂ ಉಂಟು.

ಜೋಕುಮಾರನ ಹುಟ್ಟು ದಿನ ಪಾಲಿಸುವಲ್ಲಿ ನರಬಲಿಯ ಕತೆಯೆ ಅಡಕವಾಗಿದೆ. ಆತನು ಹೋದ ಬಳಿಕ ಮಳೆಯಾಗುವುದೆಂದು ನಂಬುಗೆಯಿದೆ. ಜೋಕುಮಾರನ ರುಂಡವನ್ನು ಅಗಸರ ಕಲ್ಲಬುಡದಲ್ಲಿ ಹುಗಿಯುವುದು ನರಬಲಿಯ ನಿಶ್ಚಿತ ಕುರುಹಾಗಿದೆ.

ಮಹಾರಾಷ್ಟ್ರದಲ್ಲಿ ಶಿಲಾಸಪ್ತಮಿ (ಶ್ರಾವಣ ಶು.) ದಿನವನ್ನು ಪಾಲಿಸುವ ಸಂಪ್ರದಾಯವಿದೆ. ಕೆರೆಗೆ ಆಹಾರವಾಗಿ ಕೊಟ್ಟ ಬಾಲಕನ ನೆನಹಿಗಾಗಿ ಆ ದಿನವಿದ್ದುದು. ಆ ಸಂಬಂಧದಲ್ಲಿ ಹೇಳುವ ಕತೆಯಿಂದ ಗೊತ್ತಾಗುತ್ತದೆ.

ದೇವರ ತೇರಿನ ಬುಡದಲ್ಲಿ ಮಕ್ಕಳನ್ನು, ಅಥವಾ ಮನುಷ್ಯನನ್ನು ಬಲಿಕೊಡುವ ವಾಡಿಕೆಯಿತ್ತು. ದೇವಿಯ ಎದುರು ಸಿಡಿ ಹಾಯುವ ಪದ್ಧತಿಯನ್ನು ಸರಕಾರದವರು ಒತ್ತಾಯದಿಂದ ನಿಲ್ಲಿಸಿದರು. 'ಕಾಲಿಗೆ ಹೋತು ಬಲಿ ಕೊಟ್ಟವನು ವಾಗ್ಮಿಯಾಗುವನು; ಕುರಿ ಕೊಟ್ಟವನು ಕವಿಯಾಗುವನು; ಕೋಣ ಕೊಟ್ಟವನು ಸಿರಿವಂತನಾಗುವನು; ಹುಲ್ಲೆಕೊಟ್ಟವನು ಮೋಕ್ಷ ಪಡೆಯುವನು; ಪುರುಷ ಬಲಿಕೊಟ್ಟವನು ಅಷ್ಟೈಶ್ವರ್ಯವನ್ನೂ ಅಷ್ಟಸಿದ್ಧಿಯನ್ನೂ ಹೊಂದುವನು'. ಎಂದು ಶಾಕ್ತಮಾರ್ಗದಲ್ಲಿ ಹೇಳಿದೆ. ಶಿರಾಳ ಅಥವಾ ಸಿರಿಯಾಳನು ಅತಿಥಿರೂಪದಿಂದ ಬಂದ ಪರಮಾತ್ಮನಿಗೆ ಉಣಬಡಿಸಲು ತನ್ನ ಮಗನನ್ನು ಕೊಯ್ದು ಅಡುಗೆ ಮಾಡಿದ ಕತೆ ಇದೆ. ಹರಿಶ್ಚಂದ್ರನು ತನಗೆ ಮಗುವಾದರೆ ಆತನನ್ನು ವರುಣನಿಗೆ ಅರ್ಪಿಸಿಕೊಡುವುದಾಗಿ ಹರಕೆ ಹೊತ್ತಿದ್ದುದು ಬ್ರಾಹ್ಮಣ ಗ್ರಂಥದಲ್ಲಿ ಬರುತ್ತದೆ.

ಲಕ್ಷ್ಮೀಶನ ಜೈಮಿನಿಯಲ್ಲಿಯೂ ಇಂತಹ ಎರಡು ಲೋಕಕತೆಗಳು ಬಂದಿವೆ. ಮಂತ್ರಿಯು ಚಂದ್ರಹಾಸನನ್ನು ಕಾಳಿಗೆ ಬಲಿಕೊಡುವ ಏರ್ಪಾಟುಮಾಡಿದ್ದು ತಪ್ಪಿ, ಆತನ ಮಗನೆ ಅಲ್ಲಿ ಆಹುತಿಯಾದನಂತೆ. ಇನ್ನೊಂದು ಕತೆ ಮಯೂರಧ್ವಜನದು. ಶ್ರೀಕೃಷ್ಣನು ಮಯೂರಧ್ವಜನ ಭಕ್ತಿಯ ಹಿರಿಮೆಯನ್ನು ಅರ್ಜುನನಿಗೆ ತೋರುವುದಕ್ಕಾಗಿ ಆತನನ್ನು ಮಯೂರಧ್ವಜನಲ್ಲಿಗೆ ಕರೆತಂದನು. ಇಬ್ಬರೂ ಬ್ರಾಹ್ಮಣವೇಷ ತಾಳಿದ್ದರು. ಮಯೂರಧ್ವಜನು ಬ್ರಾಹ್ಮಣನ ಬೇಡಿಕೆಯನ್ನು ಪೂರೈಸಲು ತನ್ನ ಅರ್ಧದೇಹವನ್ನು ಕೊಯ್ದು ಕೊಡಲು ಆನಂದದಿಂದ ಸಿದ್ಧನಾದ ನೆಂಬ ವರ್ಣನೆಯು ಬರುತ್ತದೆ.

ಇಂತಹ ಕತೆಗಳಿಗೆ ನಮ್ಮ ನಾಡಿನಲ್ಲಿ ಕೊರತೆಯಿಲ್ಲ. ಮೈ ಮೇಲಣ ಲಿಂಗವು ಕಳೆದುಹೋದರೆ ಕಂಬಕ್ಕೆ ಕತ್ತಿಯನ್ನು ಕಟ್ಟಿ ಇರಿದು ಕೊಳ್ಳಬೇಕೆಂಬ ಉಗ್ರವೀರದ ವಚನಗಳೂ ದೊರೆಯುತ್ತವೆ.

ಜೀವದ ಹಂಗು ಇಲ್ಲದ ವೀರರ ನಾಡಿದು. ತನ್ನ ಊರ ಕಾಯಲು, ತನ್ನ ಒಡೆಯನ ಕಾರ್ಯಸಿದ್ಧಿಯನ್ನು ಮಾಡಲು, ತನ್ನ ತನುವನ್ನು ಈಡಾಡಿ ಸ್ವರ್ಗವನ್ನೇರಿದ ವೀರರ ನೆನಹು ಕೊಡುವ ಕಲ್ಲುಗಳು ಕಂನಾಡಿನ ಎಲ್ಲ ಭಾಗದಲ್ಲೂ ಉಂಟು. ಮರ್ಹಾಟರಲ್ಲಿ ಇವಕ್ಕೆ 'ವೀರಗಳ' ಎಂದು ಹೇಳುವರು. ಅರ್ಥವನ್ನರಿಯದೆ ಹೋದರೂ ಬೀರರ ಪೂಜೆ ಅವರಲ್ಲೂ ಇದೆ. ಈ ವೀರಗಲ್ಲಿನ ಸಂಪ್ರದಾಯವು ಮರ್ಹಾಟರಲ್ಲಿ ಇಲ್ಲವಾದರೂ ನಾಸೀಕ ಜಿಲ್ಹೆಯ ಹಲವು ತಾಲ್ಲೂಕುಗಳಲ್ಲಿ ಇವು ಅಲ್ಲಲ್ಲಿ ಬಹಳವಿದ್ದುದು ಅಲ್ಲಿಯ ಗ್ಯಾಝಿಟಿಯರುಗಳಿಂದ ತಿಳಿದು ಬರುತ್ತದೆ! ಈ ವೀರಗಲ್ಲುಗಳ ಮೇಲಿಂದ ಇದೂ ಒಂದು ಕಾಲದ ಕಂನಾಡವರ ನೆಲೆವೀಡೆಂದು ಹೇಳಿದರೆ ತಪ್ಪೇನು?

ಸತಿ ಹೋಗುವ ಪದ್ಧತಿಯೂ ಆತ್ಮ ಬಲಿಯ ಒಂದು ರೂಪ. 'ಮಾಸತಿ' ಊರುಗಳು, ಇಂತಹ ಹೆಣ್ಣು ಮಕ್ಕಳ ಸ್ಮಾರಕಗಳಾಗಿವೆ. ಮಾಸತಿ ಕಲ್ಲಿನ ಪೂಜೆ, ಜಾತ್ರೆ ನಡೆವ ಎಡೆಗಳೂ ಹಲಕೆಲವು ಉಂಟು.

ತಮ್ಮ ಜೀವಿತ ಕಾರ್ಯವು ಮುಗಿದ ಮೇಲೆ, ಕೂಳಿಗೆ ಕಾಳರಾಗಿ, ಭೂಮಿಗೆ ಭಾರವಾಗಿ ಬದುಕುವುದು ಹೀನಬಾಳು. ಮೈಯಲ್ಲಿ ಕರ್ತೃತ್ವ ಶಕ್ತಿ, ಲೋಕಕಲ್ಯಾಣದ ಕಾರ್ಯವು ನಡೆಯುತ್ತಿರುವವರೆಗೆ ಬಾಳಿದರೆ ಬಾಳಬೇಕು. ಇಲ್ಲವಾದರೆ ಕೂಡಲೆ ದೇಹತ್ಯಾಗಕ್ಕೆ ಸಿದ್ದರಾಗಬೇಕೆಂಬ ಉಗ್ರ ಗಂಭೀರ ಸಂಕಲ್ಪವೊಂದು ಈ ನಾಡಿನಲ್ಲಿ ಜೀವಂತವಾಗಿ ವ್ಯವಹಾರದಲ್ಲಿದ್ದಿತೆಂದು ಹಲವು ಉದಾಹರಣಗಳಿಂದ ತಿಳಿದುಬರುತ್ತದೆ. ೧೧ನೆಯ ಶತಮಾನದ ಕೊನೆಯ ಭಾಗದಲ್ಲಿ ಕಲ್ಯಾಣ ಚಾಲುಕ್ಯರಾಜ ಸೋಮೇಶ್ವರನು ಈ ಬಗೆಯಾಗಿ ಕುರುವತ್ತಿಯ ಹತ್ತಿರ ತುಂಗೆಯಲ್ಲಿ ಜಲಸಮಾಧಿಯನ್ನು ಹೊಂದಿದ ಉದಾಹರಣವುಂಟು.

ಜೈನ ಯತಿಗಳಲ್ಲಿ ಸಲ್ಲೇಖನಾದಿ ವ್ರತಗಳಿಂದ ಮುಡಿಪಿಗೊಂಬುವ ಈ ಪರಂಪರೆಯು ಬಹಳ ಪುರಾತನ ಕಾಲದಿಂದ ಇದೆ. ಶ್ರವಣಬೆಳುಗೊಳದ ಶಾಸನಗಳಲ್ಲಿ ಇಂತಹ ಉದಾಹರಣಗಳು ಸಿಕ್ಕುತ್ತವೆ. ಉಳಿದ ಬಗೆಯವರಲ್ಲಿಯೂ ಸನ್ಯಾಸಿಗಳು ಇದೇ ರೀತಿಯಿಂದ ತಾವಾಗಿಯೆ ಸಮಾಧಿಪ್ರವೇಶ ಮಾಡುವ ವಾಡಿಕೆಯು ಕಂಡುಬರುತ್ತದೆ. ಇದಕ್ಕೆ ಗುಹಾಪ್ರವೇಶವೆಂದೂ ಹೆಸರಿದ್ದಿತು. ವಿದ್ಯಾರಣ್ಯರು ಗುಹಾಪ್ರವೇಶ ಮಾಡಿದರೆಂದು ಹೇಳುತ್ತಾರೆ. ಮಹಾರಾಷ್ಟ್ರದಲ್ಲಿ ಜ್ಞಾನೇಶ್ವರನ ಗುಹಾಪ್ರವೇಶದ ಸಮಾರಂಭದ ರೋಮಾಂಚಕಾರಿ ಯಾದ ವರ್ಣನೆಯು ದೊರೆಯುತ್ತದೆ. ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಕಥೆಯೂ ಹೀಗಿದೆ. ತುಕಾರಾಮನು ಇಂದ್ರಾಯಣಿ ನದಿಯ ಮಡುವಿನಲ್ಲಿ ತನ್ನನ್ನು ತೂರಿ ಕೊಂಡನು. ಶ್ರೀಮದಲ್ಲಮ ಬಸವಾದಿ ಪ್ರಮಥರು ಇದೇ ರೀತಿಯಿಂದ ಒಂದೊಂದು ತೆರನಾಗಿ ಲಿಂಗೈಕ್ಯರಾದರು.

ಆದರೆ, ರಾಯಬಹಾದ್ದೂರ ರಾಮಪ್ರಸಾದ ಚಂದಾ ಇವರ ಅಭಿಪ್ರಾಯದಂತೆ ಇದು ಆರ್ಯರ ನಡೆವಳಿಯಲ್ಲ. ತನ್ನನ್ನು ತಾನೆ ಮುಡಿಪಿಕೊಳ್ಳುವುದಾಗಲಿ, ಎರಡನೆಯವರು ತಂದು ಕೊಡುವ ನರಬಲಿಯಾಗಲಿ ಬ್ರಾಹ್ಮಣ ಧರ್ಮಕ್ಕೆ ತೀರ ಅಸಮ್ಮತವಾದ ರೂಢಿಯೆಂದು ಅವರು ವೇದಾದಿಗಳಿಂದ ಆಧಾರವನ್ನು ಕೊಟ್ಟು ಇದು ಆರ್ಯ ಪೂರ್ವ ಜನಾಂಗದವರ ವಾಡಿಕೆಯಾಗಿರಬೇಕೆಂದು ಪ್ರತಿಪಾದಿಸಿದ್ದಾರೆ ನಿಸರ್ಗದತ್ತ ಆಯುಷ್ಯವನ್ನು, ತನ್ನ ಪಾಲಿನ ಕರ್ತವ್ಯ ಕರ್ಮಗಳನ್ನು ನಿರಪೇಕ್ಷ ಬುದ್ಧಿಯಿಂದ ಸತ್ಯ (ಆತ್ಮ) ಸಾಕ್ಷಿಯಿಂದ ನೆರವೇರಿಸುತ್ತ ಅದುವೆ ಯಜ್ಞವೆಂದು, ಸಂಪೂರ್ಣವಾಗಿ ಮಾಡುವುದೇ ವೇದವಿಹಿತ ಧರ್ಮ. 'ಜಿಜೀವಿಷೇತ್ ಶತಂ ಸಮಾಃ' ಇದಕ್ಕೆ ವಿರುದ್ಧವಾಗಿ ತನ್ನನ್ನು ತಾನೆ ಕೊಂದುಕೊಳ್ಳುವುದು ಆಧರ್ಮವೆಂದು ಬ್ರಾಹ್ಮಣರ ವಿಚಾರ. ಲಕ್ಷ್ಮೀಶನ ಕೃಷ್ಣನು ಮಯೂರಧ್ವಜನ ಬಲಿ-ನರಬಲಿ ಕೇಳಿದನು. ಆದರೆ, ವ್ಯಾಸಭಾರತದ ಕೃಷ್ಣನು ನರಬಲಿಯ ವಿರೋಧಿ ಯಾಗಿದ್ದಾನೆ! ಜರಾಸಂಧನು ನರಬಲಿ ಕೊಡುವುದಕ್ಕಾಗಿ ೧೦೦ ರಾಜರನ್ನು ಕಲೆಹಾಕುವ ಉದ್ಯೋಗದಲ್ಲಿ ತೊಡಗಿದ್ದನೆಂದು ಮಹಾಭಾರತದಲ್ಲಿದೆ. ಜರಾಸಂಧನು ಗಿರಿವ್ರಜವೆಂಬ ತನ್ನ ರಾಜಧಾನಿಯಲ್ಲಿ ಎಂಬತ್ತಾರು ರಾಜರನ್ನು ಇದಕ್ಕಾಗಿ ಸೆರೆಯಲ್ಲಿ ಇರಿಸಿ, ಇನ್ನು ಹದಿನಾಲ್ಕು ಜನ ರಾಜರನ್ನು ಬೇಗನೆ ಸಂಗ್ರಹಿಸಬೇಕೆಂಬ ಆತುರದಲ್ಲಿದ್ದನು.

ಆದರೆ, ಇಷ್ಟರಲ್ಲಿ ಶ್ರೀಕೃಷ್ಣನು ಅರ್ಜುನ ಮತ್ತು ಭೀಮರೊಡನೆ ಜರಾಸಂಧನಲ್ಲಿ ಹೋಗಿ ಆತನನ್ನು ಈ ಅನ್ಯಾಯದ ಘೋರಕೃತ್ಯವನ್ನು ಎಸಗದಿರಲು ಬೇಡಿಕೊಂಡರು.

> 'ಎಲೈ ರಾಜಾಧಿರಾಜನೆ, ಒಬ್ಬ ರಾಜನು ಸನ್ಮಾರ್ಗದಲ್ಲಿರುವ ಇನ್ನೊಬ್ಬ ರಾಜನನ್ನು ಏಕೆ ಕೊಲ್ಲಬೇಕು? ರಾಜರನ್ನು ಸೆರೆಹಿಡಿದು ಬಳಿಕ ಅವರನ್ನು ರುದ್ರನಿಗೆ ಬಲಿಯೆಂದು ಅರ್ಪಿಸಬೇಕೆಂದಿರುವೆಯಾ?....... ನರಬಲಿಯು ಎಂದೂ ನಡೆದು ಬಂದಿಲ್ಲ. ಶಂಕರನಿಗೆ ನೀನು ಅವರನ್ನೇಕೆ ಬಲಿಗೊಡುವೆ?'[೩]

ಶ್ರೀ ಕೃಷ್ಣನು ಜರಾಸಂಧನನ್ನು ಸೆರೆಯಲ್ಲಿರುವ ಅರಸರ ಬಿಡುಗಡೆ ಮಾಡಲು ಕೇಳಿಕೊಂಡನು. ಆದರೆ, ಜರಾಸಂಧನು ನರಬಲಿಯು ನ್ಯಾಯವಾದದ್ದೆಂದು ಹೇಳಿ ತನ್ನ ಕೃತ್ಯದ ಮಂಡನೆ ಮಾಡಿಕೊಂಡನು. 'ಪುರುಷ ಮೇಧ'ವು ಕ್ಷತ್ರಿಯರ ನಡೆವಳಿಯೆಂದು ಪೂರ್ವಕಾಲದಿಂದಲೂ ಹೇಳಲಾಗಿದೆ. ತನ್ನ ತೋಳ್ಬಲದಿಂದ ಗೆದ್ದು ತಂದ ರಾಜರನ್ನು ತನ್ನ ಮನಬಂದಂತೆ ನಡೆಸಿಕೊಳ್ಳುವ ಹಕ್ಕು ವಿಜಯಶಾಲಿಯಾದವನಿಗೆ ಇದೆ. ನಾನು

ಸತ್ಕಾರ್ಯಕ್ಕಾಗಿಯೆ ಈ ರಾಜರನ್ನು ಸೆರೆಹಿಡಿದು ತಂದಿದ್ದೇನೆ. ಕ್ಷತ್ರಿಯೋಚಿತವಾದ ವ್ರತವನ್ನೆ ನಾನು ಕೈಕೊಂಡಿದ್ದು, ಈಗ ಹೆರವರ ಹೆದರಿಕೆಯಿಂದ ನಾನು ಇವರನ್ನು ಬಿಟ್ಟುಕೊಡಲೆ?' ಎಂದು ಜರಾಸಂಧನು ಪ್ರಶ್ನೆ ಮಾಡಿದನು.

ಜರಾಸಂಧನು ತನ್ನ ಕೃತಿಯ ಬೆಂಬಲಕ್ಕೆ ಶ್ರುತಿ, ಸ್ಮೃತಿಗಳ ಆಧಾರವನ್ನು ಹೇಳಹೋಗಿಲ್ಲವೆಂಬ ಮಾತನ್ನು ಶ್ರೀ ಚಂದಾ ಅವರು ಎತ್ತಿ ತೋರಿಸಿದ್ದಾರೆ. ಅಗ್ನಿಚಯನಾದಿ ಯಜ್ಞಗಳಲ್ಲಿ ನರಬಲಿಯ ಮಾತು ಬರುವುದೂ ನಿಜವಾದರೂ ಅದನ್ನು ವೇದಕಾಲದಲ್ಲಿಯೆ ಮುಂದೆ ಬಿಟ್ಟು ಬಿಟ್ಟುದನ್ನು ಶ್ರೀ ಚಂದಾ ಅವರು ವಿವರಿಸಿದ್ದಾರೆ. ನರಬಲಿಯು ಪಾಪಕೃತ್ಯವೆಂದು ಬ್ರಾಹ್ಮಣರು ಬಿಟ್ಟುಕೊಟ್ಟ ಮೇಲೂ ಕ್ಷತ್ರಿಯರು ಅದನ್ನು ಹಾಗೆಯೆ ನಡೆಸಿಕೊಂಡು ಬಂದರು. ಇದರಲ್ಲಿ ಇವರೆಡೂ ಪಂಗಡಗಳ ಮನೋರಚನೆ, ನಡೆವಳಿಗಳಲ್ಲಿ ಇರುವ ಭಿನ್ನತೆಯೆ ಸ್ಪಷ್ಟವಾಗುತ್ತದೆ, ಎಂದು ಶ್ರೀ ಚಂದಾ ಅವರು ತಮ್ಮ ಪ್ರಬಂಧದಲ್ಲಿ ಕಾಣಿಸಿದ್ದಾರೆ.

ಸತಿಹೋಗುವ ಪದ್ಧತಿಯನ್ನು ಬ್ರಾಹ್ಮಣರು ನಿಷೇಧಿಸುತ್ತಲೆ ಬಂದಿದ್ದರೂ ಉಳಿದವರಲ್ಲಿ ಅದು ಹಾಗೆಯೆ ನಡೆದು ಬಂದುದರ ಕಾರಣವೇನು? ಇವೆರಡೂ ಜನಗಳ ಭಿನ್ನ ಮನಃಸ್ಥಿತಿ, ಭಿನ್ನ ಸಂಪ್ರದಾಯಗಳೇ ಕಾರಣ. ಚಂದಾ ಇವರು ಸಾಧಾರವಾಗಿ ತೋರಿಸಿರುವಂತೆ ಸುಮಾರು ೧೦ನೆಯ ಶತಮಾನದ ಮೇಧಾತಿಥಿ ಎಂಬ ಮನುಸ್ಮೃತಿಯ ಟೀಕಾಕಾರನ ಕಾಲದವರೆಗೂ ಅಕೃತ್ಯವೆನಿಸಿದ ಸತಿಪದ್ಧತಿಯು, ೧೨ನೆಯ ಶತಮಾನದಲ್ಲಿ ಯಾಜ್ಞವಲ್ಕ್ಯ ಸ್ಮೃತಿಗೆ ಟೀಕೆ ಬರೆದ ವಿಜ್ಞಾನೇಶ್ವರನಿಗೆ ಸುಕೃತ್ಯವೆನಿಸಿತು! ಏಳನೆಯ ಶತಮಾನದಲ್ಲಾಗಿ ಹೋದ ಬಾಣಭಟ್ಟನಂತೂ ಸತೀಪದ್ಧತಿಯನ್ನು ಸಂಪೂರ್ಣವಾಗಿ ಅಲ್ಲಗಳೆದಿದ್ದಾನೆ. ಮಹಾಶ್ವೇತೆಯು ಗಂಡನು ಮರಳಿಬರುವ ದಾರಿಯನ್ನು ಕಾಯುತ್ತ ಇರುವಾಗ, ಅವಳು ತಾನು ಸತಿಹೋಗುವುದಿಲ್ಲವೆಂದು ನಿರ್ಧರಿಸಿರುವಾಗಲೂ ಚಂದ್ರಾಪೀಡನು ಅವಳಿಗೆ ಸತೀಪದ್ಧತಿಯು ಎಷ್ಟು ಅವಿಚಾರದ್ದೂ, ತಲೆ ತಿರುಕತನದ್ದೂ ಆಗಿದೆಯೆಂಬುದನ್ನು ಹೇಳುವನು. ಸತೀ ಪದ್ಧತಿಗೆ ಬಾಣಭಟ್ಟನು ಎಷ್ಟು ವಿರೋಧಿಯಾಗಿದ್ದನೆಂಬುದು ಇದರಿಂದ ಗೊತ್ತಾಗುತ್ತದೆ. ಆದರು ಬ್ರಾಹ್ಮಣರು ಲೋಕರೂಢಿಗೆ ಹೇಗೆ ತಲೆವಾಗಬೇಕಾಗುತ್ತಿದ್ದಿತೆಂಬುದಕ್ಕೆ ವಿಜ್ಞಾನೇಶ್ವರನು ಸತೀಪದ್ಧತಿಗೆ ಕೊಟ್ಟ ಸಮ್ಮತಿಯೆ ಸಾಕ್ಷಿಯಾಗಿದೆ.

ಪುರಾಣಗಳು, ಲೋಕಕಥೆಗಳು, ಹಳ್ಳಿಯ ಹಾಡುಗಳು, ಕಾವ್ಯಾದಿ ಸಾಹಿತ್ಯಗಳಲ್ಲೂ ಇತಿಹಾಸದಲ್ಲೂ ಇಂತಹ ಉದಾಹರಣೆಗಳ ವರ್ಣನೆಗಳು ಸಿಕ್ಕುತ್ತವಲ್ಲದೆ ಶಿಲ್ಪದಲ್ಲೂ ಇಂತಹ ಒಂದು ಚಿತ್ರವು ಗೋವೆಯಲ್ಲಿ ದೊರೆಯುತ್ತದೆ. ಒಬ್ಬ ವೀರನು ಶಸ್ತ್ರಪಾಣಿಯಾಗಿ ನಿಂತುಕೊಂಡು ತನ್ನ ರುಂಡವನ್ನು ಹಾರಿಸಿಕೊಂಡಿದ್ದಾನೆ. ಅದು ಬದಿಯಲ್ಲಿಯೇ ಬಿದ್ದಿದೆ. ಅದರ ಮೊಗದಲ್ಲಿ ನಗೆಯು ಸೂಸುತ್ತಿದೆ. ಎರಡನೆಯ ವೀರಬಲ್ಲಾಳ ಹೊಯ್ಸಳರಾಜನು ಮಡಿದೊಡನೆ ಆತನ ಮೈಗಾಪಿನ ಸಾವಿರಮಂದಿ ಗರುಡರು ಹೀಗೆಯೆ ತಮ್ಮ ದೇಹಗಳನ್ನು ಈಡಾಡಿದ ವರ್ಣನೆಯು ಶಾಸನದಲ್ಲಿ ದೊರೆಯುತ್ತದೆ. 'ರಣಮೂರ್ಖ'ರೆಂಬ ಬಿರುದನ್ನು ಹೆಮ್ಮೆಯಿಂದ ತಾಳಿದ ವೀರರು ನಮ್ಮಲ್ಲಿ ಆಗಿದ್ದಾರೆ!

(ಜಂಗಮ) ಯತಿಗಳು ನಡೆವಳಿ ವೈದಿಕ ಪದ್ಧತಿಗೆ ಹೊಸದೆಂದು ಶ್ರೀ ಚಂದಾ ಅವರು ಮೇಲೆ ಹೇಳಿದ ತಮ್ಮ ಪ್ರಬಂಧದಲ್ಲಿ ಪ್ರತಿಪಾದಿಸಿದ್ದಾರೆ ಛಾಂದೋಗ್ಯ ಮತ್ತು ಬೃಹದಾರಣ್ಯಕಗಳಲ್ಲಿ ಹೇಳಿದ ದೇವಯಾನ ಅಥವಾ ಪಿತೃಯಾನಗಳೆಂಬ ಎರಡು ಮಾರ್ಗಗಳಿಂದ ಇದು ಭಿನ್ನವಾಗಿದೆ. 'ಅಡವಿಯಲ್ಲಿದ್ದು ಶ್ರದ್ಧಾಯುಕ್ತರಾಗಿ ಸತ್ಯವ್ರತದ ಉಪಾಸನೆಯನ್ನು ಮಾಡುವುದು ದೇವಯಾನ. ಇವರು ಮುಕ್ತರಾಗಿ ಜನ್ಮ ಮರಣರಹಿತರಾಗುವರು'[೫] ಯಜ್ಞ, ದಾನ, ತಪಗಳಿಂದ ಸಾಧನ ಮಾಡುವುದು ಪಿತೃಯಾನ. ಈ ದಾರಿಯಿಂದ ನಡೆಯುವವರು ಸ್ವರ್ಗವನ್ನು ಪಡೆಯುವರು. ಪುಣ್ಯವು ತೀರಿದ ಬಳಿಕ ಮತ್ತೆ ಭೂಲೋಕದಲ್ಲಿ ಜನ್ಮತಾಳುವರು.[೬] ಇದರಲ್ಲಿ ಯೋಗಮಾರ್ಗದ ಸಮಾವೇಶವಾಗಿಲ್ಲ. ಹಠಯೋಗವನ್ನು ವೈದಿಕರು ಈಗಲೂ ತಿರಸ್ಕರಿಸುವರು. ಧ್ಯಾನಯೋಗದ ಉಲ್ಲೇಖವು ಕೂಡ ವೈದಿಕ ಸಾಹಿತ್ಯದಲ್ಲಿ ಬಹಳ ಮುಂದಿನ ಕಾಲಕ್ಕೆ ಬರುವುದು. ಯಜ್ಞಯಾಗಾದಿ ವಿಧಿವಿಧಾನಗಳಲ್ಲಿ ಯೋಗಸಾಧನೆಗೆ ಇಂಬಿಲ್ಲ.

ವ್ರಾತ್ಯರ ನಿಂದಾ-ಸ್ತುತಿಯುಕ್ತವಾದ ಸೂಕ್ತಗಳು ಅಥರ್ವವೇದದಲ್ಲಿವೆ ಅಲ್ಲಿಯ ವರ್ಣನೆಯಿಂದ ವ್ರಾತ್ಯರೆಂದರೆ ಯತಿಗಳೆಂದು ಕಂಡುಬರುತ್ತದೆ. "ವ್ರಾತ್ಯನು ಒಂದು ವರುಷದವರೆಗೆ ನೆಟ್ಟಗೆ ನಿಂತಿದ್ದನು. 'ವ್ರಾತ್ಯನೇ ಏಕೆ ಹೀಗೆ ನಿಂತಿರುವೆ?' ಎಂದು ದೇವನು ಕೇಳಿದನು. 'ಅವರೆಲ್ಲ ಕೂಡಿ ನನಗಾಗಿ ಆಸನವನ್ನು ತರಲಿ' ಎಂದನು. ಅವರು ವ್ರಾತ್ಯನಿಗಾಗಿ ಆಸನವನ್ನು ತಂದರು. ವ್ರಾತ್ಯನು ಆ ಆಸನವನ್ನಲಂಕರಿಸಿದನು." ಅಥರ್ವವೇದದೊಳಗಿನ ವ್ರಾತ್ಯನ ಇಂತಹ ಹಲವು ವರ್ಣನೆಗಳಿವೆ. ಇವನ್ನೋದಿದರೆ ನಮ್ಮ ನಾಡಿನ ಜಂಗಮ ಯತಿಗಳ ನಡೆವಳಿಕೆಯ ಹೋಲಿಕೆಯು ಕಂಡುಬರುತ್ತದೆ. ಮನೆಗೆ ಬಂದ ವ್ರಾತ್ಯನನ್ನು ಉಪಚರಿಸಿ ಸತ್ಕರಿಸಿದರೆ ಅದರಿಂದ ಎಣೆಯಿಲ್ಲದ ಐಶ್ವರ್ಯಾದಿಗಳು ಲಭಿಸುವವೆಂದು ಅಲ್ಲಿ ಹೇಳಿದೆ. ಮೊಹೆಂಜೊಧಾರೊದಲ್ಲಿ ದೊರೆತ ಕಲ್ಲಿನ ಎರಡು ಅರ್ಧ ಪುತ್ಥಳಿಗಳು ಧ್ಯಾನಮೂರ್ತಿಗಳಾಗಿರುವುವೆಂದು, ಕಲಕತ್ತೆಯ ಆರ್ಕಿಯಾಲಾಜಿಕಲ್ ಮ್ಯೂಸಿಯಮ್ಮಿನ ಸುಪರಿಂಟೆಂಡೆಂಟರಾದ ಶ್ರೀ ಚಂದಾ ಅವರು ತಮ್ಮ ಪ್ರಕಟನೆಯಲ್ಲಿ ವಿವರಿಸಿದ್ದಾರೆ. ಇವು ವೇದಪೂರ್ವಕಾಲದ ಸಿದ್ಧ-ಯತಿಗಳ ಮೂರ್ತಿಗಳಾಗಿರಬೇಕೆಂದು ಅವರ ಅಭಿಪ್ರಾಯವಾಗಿದೆ (ಪು. ೭೩) ಇಂದ್ರನು ಯತಿಗಳನ್ನು ನಾಶಮಾಡಿದ ಹಾಗೂ ಅವರಲ್ಲಿ ಕೇವಲ ಮೂವರು ಮಾತ್ರ, ಇಂದ್ರನಿಗೆ ಮಗುಗಳಂತೆ ಮೊರೆಯಿಟ್ಟುದರಿಂದ ಉಳಿದರೆಂದೂ ತೈತ್ತೀರಿಯ ಸಂಹಿತೆಯಲ್ಲಿ ವರ್ಣನೆಯಿದೆ.[೭] ಐತರೇಯ ಬ್ರಾಹ್ಮಣ, ಪಂಚವಿಂಶ ಬ್ರಾಹ್ಮಣಗಳಲ್ಲೂ ಇಂತಹ ಕತೆಯುಂಟು. ಜೈಮಿನೀಯ ಬ್ರಾಹ್ಮಣದಲ್ಲಿ ಉಳಿದ ಮೂವರು ಯತಿಗಳು ರಾಯೋವಾಜ, ಪೃಥುರಶ್ಮಿ, ಬೃಹದ್ಗಿರಿ ಇವರು ಇಂದ್ರನನ್ನು ಸ್ತುತಿಸಿದ್ದುದನ್ನು ವರ್ಣಿಸಿದೆ.

ಧ್ಯಾನಬುದ್ಧ ಮೂರ್ತಿಗಳನ್ನೂ, ಜಿನಬಿಂಬಗಳನ್ನೂ, ಗೊಮ್ಮಟೇಶ್ವರನನ್ನೂ ನೋಡಿದಲ್ಲಿ ವೇದ ಪೂರ್ವಕಾಲದ ಆ ಸಿದ್ಧ-ಯತಿಗಳ ಪರಂಪರೆಯೆ ಮುಂದೆ ಈ ಬಗೆಯಾಗಿ ಸಾಗಿಬಂದಿರಬೇಕೆಂದು ತೋರುತ್ತದೆ; ಎಂದು ಶ್ರೀ ಚಂದಾ ಅವರ ಅಭಿಪ್ರಾಯವಿದೆ. ಲಿಂಗವಂತ ಜಂಗಮಯತಿಗಳ ಪರಂಪರೆಯೂ ಈ ಸಂದರ್ಭದಲ್ಲಿ ಮನನೀಯವಾಗಿದೆ. ಅಲ್ಲದೆ ಸಿದ್ಧರ ಒಂದು ಪೀಳಿಗೆಯು ನಮ್ಮ ನಾಡಿನಲ್ಲಿ ಆಗಿದೆ. ರೇವಣಸಿದ್ಧ, ಅಮೋಘಸಿದ್ಧ, ಕಾಡಸಿದ್ಧ ಮೊದಲಾದ ಅಮರ ಹೆಸರುಗಳು ಸುಪ್ರಸಿದ್ಧವಾಗಿವೆ. ಸೊನ್ನಲಿಗೆಯ ಸಿದ್ಧರಾಮನೂ ಈ ಪಂಗಡಕ್ಕೆ ಸೇರಿದವನೆ. ಹಾಲುಮತದಲ್ಲಿ ಕುರುವರಲ್ಲಿ ಈ ಸಿದ್ಧರು ಹೆಚ್ಚು. ಆಧುನಿಕ ಸುಪ್ರಸಿದ್ಧ ತತ್ವಜ್ಞಾನಿಗಳೂ ಅನುಭಾವಿಗಳೂ ಎಂದು ಹೆಸರಾದ ಪ್ರೊ. ರಾನಡೆ ರಾಮರಾಯರ ಗುರುಪರಂಪರೆಯಲ್ಲಿ ಶ್ರೀ ಕಾಡಸಿದ್ಧ ಮೊದಲಾದವರ ಹೆಸರುಗಳು ಬರುತ್ತವೆ.

ಯೋಗಸಿದ್ಧರು, ಜಂಗಮ ಯತಿಗಳು ಮೊದಲಾದ ಈ ಪರಂಪರೆಗಳು ಆರಂಭದಲ್ಲಿ ವೈದಿಕ-ಮಾರ್ಗದಿಂದ ತೀರ ಭಿನ್ನವಾಗಿದ್ದುವು. ನಾಮ ಸ್ಮರಣೆಯ ಭಕ್ತಿಪಂಥವೂ ಇದೇ ಬಗೆಯದೆಂದು ಹೇಳಬಹುದಾಗಿದೆ. ವೈದಿಕ ಪರಂಪರೆಯ ಅಭಿಮಾನಿಗಳು ಈ ಬಗೆಯ ಭಕ್ತಿಪಂಥವನ್ನು ಕೀಳ್ಗಳೆಯುತ್ತಾರೆ. ವ್ಯಾಸಕೂಟ, ದಾಸಕೂಟಗಳಲ್ಲಿರುವ ಭೇದವು ಈ ಬಗೆಯದೆ ಆಗಿದೆ. ಗುರುವಿನಲ್ಲಿ ಸರ್ವ ಸಮರ್ಪಣ ಮಾಡಬೇಕೆಂಬ ತಿಳುವಳಿಕೆಯು ಅತಿರೇಕಕ್ಕೆ ಮುಟ್ಟಿ ಹೊಲ-ಮನೆ-ಧನಗಳಂತೆ ಮಡದಿಯನ್ನೂ ಗುರುವಿಗೆ ಅರ್ಪಿಸುವ ನಡೆವಳಿಯು ೧೨ನೆಯ ಶತಮಾನದಲ್ಲಿ ಕಂನಾಡು, ಮರಹಟ್ಟಿಗಳಲ್ಲಿ ಇದ್ದುದಕ್ಕೆ ಆಧಾರಗಳು ಸಿಕ್ಕುತ್ತವೆ. ಉಪನಿಷತ್ತು ಗುರುವಿನ ಗುಲಾಮನಾಗಲು ಬೋಧಿಸುವುದಿಲ್ಲ.

> 'ಯಾನ್ಯನವದ್ಯಾನಿ ಕರ್ಮಾಣಿ ತಾನಿ ಸೇವಿತವ್ಯಾನಿ; ನೋ ಇತರಾಣಿ;
> ಯಾನಿ ಅಸ್ಮಾಕಂ ಸುಚರಿತಾನಿ ತಾನಿ ತ್ವಯೋಪಾಸ್ಯಾನಿ; ನೋ ಇತರಾಣಿ'[೮]

ಎಂದು ತೈತ್ತಿರೀಯೋಪನಿಷತ್ತಿನ ಆಜ್ಞೆಯಿದೆ ಆದರೂ ಬಾಯ್ತಂಬುಲ, ಮತ್ತು ಮಡುಗೂಳು ಪ್ರಸಾದವೆಂದು ಸ್ವೀಕರಿಸುವುದೂ, ಬೀಳುಡೆ (ಶೇಷವಸ್ತ್ರ) ಧರಿಸುವುದೂ, ಚರಣತೀರ್ಥವನ್ನು ಕುಡಿಯುವುದೂ ನಡೆವ ಭಕ್ತಿಪಂಥಗಳೂ ಈಗಲೂ ಇಲ್ಲದಿಲ್ಲ.

ತಮ್ಮದೇ ಸನಾತನಧರ್ಮ; ಅದು ಎಂದಿನಿಂದಲೂ ಇದ್ದಕಿದ್ದಂತೆಯೆ ಏನೂ ಬದಲಿಲ್ಲದೆ ನಡೆಯುತ್ತ ಬಂದಿದೆಯೆಂಬ ಹೆಮ್ಮೆಯ ಮಾತುಗಳು ನಾಡಿನಲ್ಲಾದ ಐತಿಹಾಸಿಕ ಪರಿವರ್ತನಗಳನ್ನು ಅರಿತುಕೊಂಡವರ

ಬಾಯಿಂದ ಎಂದೂ ಬಾರವು. ಇಂದ್ರಾಗ್ನಿ ಪೂಜೆಯೆ ವೈಶಿಷ್ಟ್ಯವಾಗಿದ್ದ ವೈದಿಕಧರ್ಮವು ಲುಪ್ತವಾದುದನ್ನು ಒಪ್ಪಿಕೊಳ್ಳಲೇಬೇಕು. ವೈದಿಕ ಧರ್ಮಾಭಿಮಾನವು ನಖ-ಶಾಖಾಂತವಾಗಿದ್ದರೂ ವೇದದ ಒಂದು ಋಚೆಯ ಅರ್ಥವೂ ತಿಳಿಯದಿರುವವರಿದ್ದಾರೆ. ವೇದಗಳ ಅರ್ಥವು ತಿಳಿಯದಾದುರಿಂದಲೋ ಅಥವಾ ಬೇರೆ ಕಾರಣಕ್ಕಾಗಿಯೋ ವೈದಿಕಮಂತ್ರಗಳು ಹಿಂದೆ ಬಿದ್ದು, ಪುರಾಣೋಕ್ತ, ಆಗಮೋಕ್ತ, ತಂತ್ರೋಕ್ತ ಕ್ರಿಯೆಗಳು ನಡೆಯಹತ್ತಿ ಅವುಗಳ ಪಠಣವೇ ಆಗ ನಡೆಯುವುದುಂಟು. ಈಗ ಇವುಗಳ ಅರ್ಥವೂ ತಿಳಿಯದ್ದರಿಂದ ದೇಶಭಾಷೆಯಲ್ಲಿ ಮಂತ್ರ ಹೇಳುವ ಆವಶ್ಯಕತೆಯುಂಟಾಗಿದೆ.

ಜೈನ-ಬೌದ್ಧಧರ್ಮಗಳು ಅವೈದಿಕ ಪಂಥಗಳೆಂದು ಸಾರಿದರೂ ಅವುಗಳ ವಿಚಾರದ ಪರಿಣಾಮವು ವೈದಿಕ ಧರ್ಮದ ಮೇಲೆ ಆಗದೆ ಹೋಗಿಲ್ಲ. ಶ್ರೀ ಶಂಕರಾಚಾರ್ಯರ ಪಂಥಕ್ಕೆ ಪ್ರಚ್ಛನ್ನ ಬೌದ್ಧಮತವೆಂದೂ ಶ್ರೀ ಮಧ್ವಾಚಾರ್ಯರ ಪಂಥಕ್ಕೆ ಪ್ರಚ್ಛನ್ನ ಜೈನಮತವೆಂದೂ ಇರುವ ಆಕ್ಷೇಪವನ್ನು ತೀರ ಅಲ್ಲಗಳೆಯುವುದಕ್ಕಾಗುವುದಿಲ್ಲ. ವೈದಿಕರು ರುದ್ರನನ್ನು ಹೇಗೋ ಸ್ವೀಕರಿಸಿದ್ದರೂ ಲಿಂಗ ಪೂಜಕರನ್ನು 'ಶಿಶ್ನೋ ದೇವ'ರೆಂದು ಹೀಯಾಳಿಸಿ ದೂರಮಾಡುತ್ತಿದ್ದರು. (ಲಿಂಗ, ಯೋನಿಗಳ ಆಕಾರಗಳು ಮೊಹೆಂಜೋದಾರದಲ್ಲಿ ದೊರೆತಿವೆ) ಆದರೆ, ಆ ಪಂಥಗಳು ಬ್ರಾಹ್ಮಣರನ್ನು ತನ್ನಲ್ಲಿ ಸೆಳೆದು ಕೊಳ್ಳದೆ ಬಿಡಲಿಲ್ಲ. ವೇದಪೂರ್ವ ಕಾಲದಲ್ಲಿ ರೂಢವಾಗಿದ್ದ ಒಂದೊಂದು ವಿಚಾರವೂ ಈ ತೆರನಾಗಿ ಮುಂದೆ ಒಂದೊಂದು ಧರ್ಮ-ಪಂಥದ ರೂಪತಾಳಿ ಕಾಲೋಚಿತವಾದ ಹಲವು ಮಾರ್ಪಾಡುಗಳೊಂದಿಗೆ ಇಂದಿನ ವರೆಗೆ ಉಳಿದುಕೊಂಡಿದ್ದು ಕಂಡುಬರುತ್ತದೆ. ಕಾಲಪರಿಸ್ಥಿತಿಯ ಕಾವಿನಲ್ಲಿ ಭಾರತದ ವೈದಿಕ-ಅವೈದಿಕ ಮತಗಳು ಒಂದು ಮುಸಿಯಲ್ಲಿ ಕರಗಿ ಒಂದುಗೂಡಿ ಇಂದು ಭಾರತಿಯ ಧರ್ಮ, ಹಿಂದೂ ಧರ್ಮವೆಂಬ ಒಂದು ದಿವ್ಯಘಟ್ಟಿಯು ಸಿದ್ಧವಾಗಿದೆ; ಆಗುತ್ತಲೂ ಇದೆ. ಎನ್ನುವುದಕ್ಕೆ ಒಂದು ಕಾರಣವಿದೆ. ಇದು ಉಳಿದ ಧರ್ಮಗಳಂತೆ ಕೇವಲ ಭೂತಮೂರ್ತಿಯಲ್ಲ. ಭವ್ಯಮೂರ್ತಿ. 'ಯದ್ಭೂತಂ ಯಚ್ಚಭವ್ಯಂ' ಎಲ್ಲವೂ ಆ ಸಹಸ್ರಶೀರ್ಷನಾದ ಅನಂತನ, ಸತ್ಯದ ರೂಪಗಳು; ಎಂಬುದು ಭಾರತೀಯರ ಪರಮಶ್ರದ್ಧೆ. ಈ ಶ್ರದ್ಧೆಯ ಬಲದಿಂದಲೆ ಅವರು ಬಂದುದನ್ನೆಲ್ಲ ತಿಳಿಮಾಡಿ ಅರಗಿಸಿಕೊಂಡಿದ್ದಾರೆ. ಇನ್ನು ಮುಂದೆ ಅರಗಿಸಿಕೊಳ್ಳುತ್ತಾರೆ. ಈ ಅದ್ಭುತ ಶಕ್ತಿಯೆ ಭಾರತ ಸಂಸ್ಕೃತಿಯನ್ನು ಅಮರವಾಗಿ ಮಾಡಿದೆ.

ಕಂನಾಡಿನಲ್ಲಿರುವ ಅನೇಕ ಊರಗಳು ಮೇಲ್ಕಾಣಿಸಿದ ಸಿದ್ಧಪುರುಷರ ಪ್ರಭಾವದ ಸೂಚಕವಾಗಿವೆ. ಕುರುವರಿಂದ ಭಾರತ ಸಂಸ್ಕೃತಿಗೆ ಇನ್ನೊಂದು ದೇವತೆಯ ಕಾಣಿಕೆ ದೊರೆತಿದೆಯೆಂದು ನನ್ನ ಗ್ರಹಿಕೆ. ಕುರುವರು ವೀರಶಿವನ ಭಕ್ತರು. ಇವರು ವೀರ 'ನಾಯಕರು'. ಆದಕಾರಣ ಬೀರನಲ್ಲಿ ಭಕ್ತಿ. ಈ ಬೀರನೇ ಮತ್ತೆ ಸಂಸ್ಕೃತ ರೂಪ ತಾಳಿ ಭೈರವೇಶ್ವರನಾಗಿರಬೇಕೆಂದು ನನ್ನ ಊಹೆ. ಭೈರವನು ಕ್ಷೇತ್ರಪಾಲಕ ದೇವತೆಯಂತೆ; ಸರಿ. ಇವನು ಊರ ಕಾವಲುಗಾರ. ಆದುದರಿಂದಲೆ, ಊರ ಹಳಬ-ಕುರುಬ. ಉಳಿದ ಪ್ರಾಂತಗಳಿಗಿಂತಲೂ ಕಂನಾಡಿನಲ್ಲಿ ಭೈರನ ಹೆಸರು ಹೆಚ್ಚು ಪ್ರಚಾರದಲ್ಲಿದೆಯೆಂದು ನನ್ನ ತಿಳುವಳಿಕೆಯಾಗಿದೆ. ಹಳೆಯ ಶಾಸನಗಳಲ್ಲಿ ಈ ಹೆಸರು ಸು. ೧೦ನೆಯ ಶತಮಾನದಿಂದ ಮುಂದೆ ಅಡಿಗಡಿಗೆ ಬರುತ್ತದೆ. ಭೈರನ ಹಳ್ಳಿ, ಭೈರಗಿ ಕೊಪ್ಪ, ಭೈರಾಖ್ಯಪುರ, ಭೈರಾಪುರ, ಭೈರಸಾಂದ್ರ, ಭೈರವಾಡಿ, ಭೈರವಾ ಪಟ್ಟಣ, ಭೈರನಮಟ್ಟಿ ಮೊದಲಾದ ಎಡೆಗಳಿವೆ. ಈ ಸಂಪ್ರದಾಯ ದಲ್ಲಿ ನಾಥ ಪಂಥದ ಪ್ರಭಾವವೂ ಒಂದಿಷ್ಟು ಕಂಡುಬರುವುದು. ಭೈರವಮೂರ್ತಿಯು ನಾಥಯತಿಯ ಒಂದು ಪ್ರತೀಕವೆಂದರೂ ಸರಿ.

ಕಂನಾಡು ಜೈನಧರ್ಮದ ತವರ್ಮನೆಯಾಗಿತ್ತು. ಊರ ಹೆಸರುಗಳಲ್ಲಿ ಜಿನರಾಳ, ಜೈನಾಪುರ, ಬಸದಿಕೊಪ್ಪ, ಬಸ್ತಿವಾಡ ಮುಂತಾದುವು ಜೈನಧರ್ಮದ ಸ್ಪಷ್ಟವಾದ ಕುರುಹುಗಳಾಗಿವೆ. ಇನ್ನು ಕೆಲವು ಹೆಸರುಗಳು ಜೈನರವೆಂದು ತಿಳಿಯದಂತಹ ಸ್ಥಿತಿಯು ಬಂದಿದೆ. ಆ ಊರಲ್ಲಿ ಜೈನರ ಕುರುಹುಗಳು ದೊರೆಯದೆ ಇದ್ದರೂ ಊರ ಹೆಸರು ಜೈನರ ಪ್ರಾಚೀನ ವರ್ಚಸ್ಸಿನ ಸಾಕ್ಷಿಯಾಗಿದೆ. ಉದಾಹರಣಾರ್ಥವಾಗಿ ಸವಣೂರು. ಇದು ಶ್ರಮಣರ ಊರೆಂದು ಆ ಹೆಸರೆ ಸಾರುತ್ತಲಿದೆ.

ಶಿವಸಂಬಂಧದ ಅನೇಕ ಊರುಗಳು ಇಲ್ಲಿಯ ಶೈವಪಂಥದ ಪ್ರಚಾರ, ವಿಸ್ತಾರದ ದ್ಯೋತಕವಾಗಿವೆ. ಹಳ್ಳಿಹಳ್ಳಿಗೆ ಮೂಲಸ್ಥಾನದೇವರು ಮೂಲಸ್ಥಾನ ಕಲ್ಲೇಶ್ವರವೆಂಬ ದೇವಸ್ಥಾನವು ಇಲ್ಲದ ಭಾಗಗಳು ಇಲ್ಲ. ಮಲ್ಲಯ್ಯನಂತೆ ಕಲ್ಲೇಶ್ವರ, ಕಲ್ಮೇಶ್ವರ ಅಥವಾ ಕಲ್ಲಿನಾಥವೆಂಬ ಹೆಸರಿನ ದೇವಸ್ಥಾನಗಳು ಪರ್ವತದ ಪೂಜೆಯ ಸೂಚಕವಾಗಿರಬೇಕೆಂದು ಪ್ರೊ. ಎ. ಆರ್. ಕೃಷ್ಣ ಶಾಸ್ತ್ರಿಗಳು 'ಸಂಭಾವನೆ' ಗ್ರಂಥದ ಲೇಖನದಲ್ಲಿ ಬರೆದಿರುವರು. ಆದರೆ, ಇದನ್ನು ಒಪ್ಪಿಕೊಳ್ಳಲು ಒಂದು ತೊಂದರೆಯಿದೆ. ಮೈಲಾರಗಳು ಬಹುತರವಾಗಿ ಎಲ್ಲವೂ ಮಲೆಯ (ಎಂದರೆ ಗುಡ್ಡ, ಪರ್ವತ) ವಾಗಿವೆ. ಹಾಗೆ ಕಲ್ಲೇಶ್ವರ ಅಥವಾ ಕಲ್ಮೇಶಗಳ ಒಂದು ಪ್ರಖ್ಯಾತ ದೇವಸ್ಥಾನವಾದರೂ ಪರ್ವತದ ಮೇಲೆ ಇದ್ದುದು ನನಗೆ ದೊರೆತಿಲ್ಲ. ಈ ಕಲ್ಮೇಶ್ವರದ ಸಂಬಂಧದ ಕತೆಗಳಲ್ಲಿ ಕೆಲವೆಡೆಗೆ, 'ಗೋವು ಒಂದು ಹುತ್ತಿನ ಮೇಲೆ ಹೋಗಿ ಹಾಲು ಕರೆಯುತ್ತಿತ್ತು. ಅಲ್ಲಿ ಹುಡುಕಿ ನೋಡಲು ಶಿವಲಿಂಗವು ದೊರೆತ್ತಿತ್ತು. ಆದುವೆ ಈ ಕಲ್ಲಿನಾಥ' ಎಂಬೀ ಬಗೆಯ ಪವಾಡ-ಕತೆಗಳುಂಟು. ಈ ಕತೆಯೊಳಗಿನ ಹಾಲಿನ ಸಂಬಂಧವನ್ನು ಇನ್ನು ಕೆಲವು ದೇವತೆಗಳಿಗೂ ಹೇಳುವ ವಾಡಿಕೆಯಿದೆ. ಆದರೆ, ಇಲ್ಲಿ ಮುಖ್ಯವಾಗಿ ಶಿವನೊಡನೆ ಹಾಲಿನ ಸಂಬಂಧವು ಬಂದುದರಿಂದಲೇ ಕಲ್ಲೇಶ (ಕಳ್ಳೇಶ) ಎಂದ ಹೆಸರು ಉಂಟಾಗಿರಬೇಕೆಂದು ನನ್ನ ಊಹೆ. ಕಳ್ ಎಂದರೆ ಹಾಲು; ಕಲ್ಲಿನಾಥ,. ಕಲ್ಲೇಶ್ವರ ಎಂದರೆ ಹಾಲಪ್ಪನೆಂದರ್ಥ. ಕಲ್ಲಿನಾಥನಿರುವ ದೇವಸ್ಥಾನಗಳಿಗೇ ಮೂಲಸ್ಥಾನದ ದೇವರೆಂಬ ಪರ್ಯಾಯ ನಾಮವಿದ್ದುದು ಬಹಳ ಮಹತ್ವದ್ದಾಗಿದೆ. ಈ ನಾಡ ಮೂಲಿಗರು ಕಳವರು. ಇದು ಅವರ ಮೂಲಿಗರ, ಮೂಲಸ್ಥಾನದ ದೇವರೆಂದು ಅರ್ಥವಾಗುತ್ತದೆ. ಈ ಕಲ್ಲೇಶನಿಗೆ ಕಣ್ಣೇಶನೆಂದು ಇನ್ನೊಂದು ಹೆಸರು. ಕಣ್ಣೇಶ್ವರನ ಪಲವು ದೇವಸ್ಥಾನಗಳಿವೆ. ಅವನ್ನು ಅನೇಕರು ಪುರಾತನ ಐತಿಹಾಸಿಕ ಹಿನ್ನೆಲೆ ತಿಳಿಯದೆ ಕಣ್ವೇಶ್ವರನೆಂದು ಭಾವಿಸಿದ್ದುಂಟು. ಕನ್ನಂಬಾಡಿಗೆ ಇಂತಹ ದೇವಸ್ಥಾನವುಂಟು. ಹಾನಗಲ್ಲ ತಾಲೂಕಿನಲ್ಲಿ ಕಣ್ಣೇಶ್ವರವೆಂಬ ಊರಿದೆ. ಕನ್ನೂರು, ಕಣ್ಣಪುರ ಮೊದಲಾದ ೬ನೆಯ ಅಧ್ಯಾಯದಲ್ಲಿ ಕೊಟ್ಟ ಊರುಗಳೆಲ್ಲವೂ ಈ ಬಗೆಯಾಗಿ ಶಿವಾಲಯಗಳೇ ಇವೆ. ಇವೇ ಕಣ್ಣ ದೇವಸ್ಥಾನಗಳು. ಕಣ್ಣೇಶ್ವರ ಕಲ್ಲೇಶ್ವರ ದೇವಸ್ಥಾನಗಳು.

ಶಿವನ ಇನ್ನೂ ಹಲವು ಹೆಸರಿನ ಊರುಗಳು ದೊರೆಯುವುವು. ಅದರಂತೆ ವಿಷ್ಣುವಿನ ನಾನಾತರದ ಹೆಸರಿನ ಊರುಗಳಿವೆ. ವೆಂಕಟ, ವಿಠ್ಠಲ, ನರಸಿಂಹಾದಿ ದೇವತೆಗಳ ಕ್ಷೇತ್ರಗಳಿವೆ. ಬ್ರಹ್ಮನ ಹೆಸರಿನ ಊರು ಉಂಟು ಶಂಕರನಾರಾಯಣ, ಹರಿಹರ ಎಂಬೀ ಹೆಸರುಗಳು ಶೈವ ಮತ್ತು ವೈಷ್ಣವ ಪಂಥದ ಸಮನ್ವಯದ ಸೂಚಕಗಳಾಗಿವೆ. ವೈಷ್ಣವ ಪಂಥವು ಶೈವ ಪಂಥದ ನಂತರ ಇಲ್ಲಿ ವಿಶೇಷ ಪ್ರಚಾರದಲ್ಲಿ ಬಂತು. ದ. ಕನ್ನಡ ಜಿಲ್ಹೆಯ ಹಲವು ಊರ ಹೆಸರುಗಳು ಶಿವಸೂಚವಾಗಿದ್ದೂ ವೈಷ್ಣವ ಮತದ ಪ್ರಚಾರದ ಕಾಲದಲ್ಲಿ ಅಲ್ಲಿಯ ಶಿವಾಲಯಗಳು ಹಿಂದೆ ಬಿದ್ದು ವಿಷ್ಣು-ಕೃಷ್ಣರ ದೇಗುಲಗಳಿಗೆ ಪ್ರಾಶಸ್ತ್ಯಬಂದುದು ಇಲ್ಲಿಯ ಶಾಸನಾದಿಗಳಿಂದ ತಿಳಿದುಬರುತ್ತದೆ. ಪಂಡರಿಗೆ (ಪಂಧರಪುರ), ಉಡುಪಿ ಇಂತಹ ಮಹತ್ವದ ಸ್ಥಾನವಾಗಿವೆ. ಶೈವ ವೈಷ್ಣವರು ಹಲವು ಜೈನ ಮಂದಿರಗಳನ್ನು ಆಕ್ರಮಿಸಿ ತಮ್ಮ ದೇಗುಲಗಳನ್ನಾಗಿ ಮಾರ್ಪಡಿಸಿದ್ದೂ ಉಂಟು. ಒಂದು ಕಾಲದಲ್ಲಿ ತ್ರೈಪುರುಷ ದೇವಾಲಯಗಳು ನಮ್ಮ ನಾಡಿನಲ್ಲಿ ಇದ್ದುವು. ಶಿವ-ವಿಷ್ಣು-ಬ್ರಹ್ಮ, ಅಥವಾ ಬ್ರಹ್ಮನ ಬದಲು ಸೂರ್ಯರನ್ನು ಸಮಾನವಾಗಿ ಇಟ್ಟು ಯಾವ ಭೇದವನ್ನೆಣಿಸಿದೆ ಪೂಜಿಸುತ್ತಿದ್ದ ಕಾಲವೊಂದಿತ್ತು. ಬಾದಾಮಿ ಚಾಲುಕ್ಯರು, ಮತ್ತು ಮಳಖೇಡಿನ ರಾಷ್ಟ್ರಕೂಟರುಗಳ ಕಾಲದನಂತರ ಇಂತಹ ದೇವಾಲಯಗಳು ಹಿಂದೆ ಬಿದ್ದು ಒಂದೇ ವಿಶಿಷ್ಟ ದೇವತೆಯ ವಿಪರೀತ ಅಭಿಮಾನವು ಚಿಗಿತುಕೊಂಡಿತು. ಮುಂದಿನ ಕಾಲದಲ್ಲಿ ಸೂರ್ಯೋಪಾಸನೆಯಂತೂ ಸಂಪೂರ್ಣ ಹೋಯಿತು. ನೇಸರಿಗೆ, ಭಾನಾಪೂರಗಳಂತಹ ಊರ ಹೆಸರುಗಳು ಸೂರ್ಯಭಕ್ತಿಯ ಸಾಕ್ಷಿಯಾಗಿವೆ.

ಇಲ್ಲಿ ಶಾಕ್ತ ಪಂಥವೂ ಏರಿಕೆಯಲ್ಲಿತ್ತು. ದೇವಿಗೆ 'ಭಗವತಿ' ಎಂದು ಪ್ರಾಚೀನಕಾಲದಲ್ಲಿ ಕರೆವ ವಾಡಿಕೆಯಿತ್ತು. ಪಂಪನು 'ಭಗವತಿ ಏರುವೇಳ್ವ ತೆರದಿಂ' ಎಂಬ ಪದ್ಯದಲ್ಲಿ ಈ ಹೆಸರನ್ನು ಬಳಸಿದ್ದಾನೆ. ವಿಜಾಪೂರ ಜಿಲ್ಹೆಯಲ್ಲಿ

'ಭಗವತಿ' ಎಂಬ ಹೆಸರಿನ ಊರು ಉಂಟು. ಈಗ 'ಭಗವತಿ' ಎಂದರೆ ಅರ್ಥವಾಗುವದೋ ಸಂದೇಹ! ಭಗವತಿ ಎಂಬ ಸಂಪ್ರದಾಯವು ಮರ್‍ಹಾಟದಲ್ಲಿ ಈಗಲೂ ಉಂಟು. ಲಕ್ಷ್ಮಿ ಮತ್ತು ಪಾರ್ವತಿದೇವಿಯನ್ನು ಒಂದೇಯೆಂದು ನೋಡುತ್ತಿದ್ದುದು ಕೊಲ್ಹಾಪುರದ ದೇವಿಗೆ ಇರುವ ಹೆಸರುಗಳಿಂದ ಕಂಡುಬರುವುದು. 'ಕೊಲ್ಲಾಪುರದ ಮಹಾಲಕ್ಷ್ಮಿ' ಎಂದು ಹೇಳುವ ವಾಡಿಕೆಯಿರುವಂತೆ, ಗೊಂದಲಿಗರಲ್ಲಿ 'ಕೊಲ್ಲಾಪುರದ ಅಂಬಾಭವಾನಿ' ಎಂಬ ಸಾಂಪ್ರದಾಯವು ಇದೆ. ೧೦೪೯ ಕ್ರಿ.ಶ. ದ ಒಂದು ಶಾಸನದಲ್ಲಿ ಇದಕ್ಕೆ ಆಧಾರವು ದೊರೆಯುತ್ತದೆ. ಬಾಗಲಕೋಟೆ ತಾಲೂಕಿನ ಶಿರೂರ ಶಾಸನ.

'ರುದ್ರಾರ್ದ್ಧಾಂಗೋತ್ತುಂಗ ನಿವಾಸಿನೀ. ಸಿಂಹವಾಹಿನೀ, ಶ್ರೀಮತ್ ಕೊಲ್ಲಾಪುರ ಪೀಠಾಧಿಷ್ಠಿತೇ,
ಶ್ರೀಮನ್ಮಹಾಲಕ್ಷ್ಮೀ ದೇವ್ಯಾಪಾದ-ಪದ್ಮೋಪ ಜೀವಿ ಪಾಶುಪತಾಚಾರ್‍ಯ ಪ್ರಭು ರಾಜವರ್ಮನ'

ಹೆಸರು ಅದರಲ್ಲಿ ಬಂದಿದೆ. ಪಾಶುಪತರ ಉಲ್ಲೇಖವು ಅಲ್ಲಿ ಬಂದಿರುವುದರಿಂದ, ನಮ್ಮಲ್ಲಿ ಆಗ ಆ ಸಂಪ್ರದಾಯವು ಪ್ರಚಾರದಲ್ಲಿದ್ದುದು ಗೊತ್ತಾಗುತ್ತದೆ. ಮಂಗಳೂರಿನ ಮಂಗಳಾದೇವಿಯೂ ಬಾದಾಮಿಯ 'ಬನದೇವಿ'ಯೂ ಕಾಪಾಲಿಕರಿಂದಲೂ ಪೂಜೆಗೊಳುತ್ತಿರಬೇಕು. ಮಹಾಕೂಟದಲ್ಲಿ ಕಾಪಾಲಿಕರನ್ನು ಚಿತ್ರಿಸಿದಂತಹ ಕೆತ್ತನೆಯೊಂದಿದೆ.

ಕಂನಾಡ ಶಾಕ್ತರಲ್ಲಿ ಶ್ರೀ ಚಕ್ರದ ಆರಾಧನೆಯು ವಿಶೇಷವಾಗಿದ್ದುದನ್ನು ಕೇಳಿದ್ದೇನೆ. ನಮ್ಮ ನಾಡಿನಲ್ಲಿರುವ ನೂರಾರು 'ಸಿರಿ'ಪೊಳಲು, ಪುರ ಊರು ಹಟ್ಟಿ, ಹಾಳ ಗ್ರಾಮ (ಗಾವ)ಗಳು ಶ್ರೀದೇವಿಯ ಉಪಾಸನೆಯ ಕುರುಹುಗಳಾಗಿವೆ. ಇದು ಕಂನಾಡ ವೈಶಿಷ್ಟ್ಯವೇನೋ. ಪುಣೆ ಜಿಲ್ಹೆಯಲ್ಲಿ ಶಿರೂರ ಎಂಬ ತಾಲೂಕಿನ ಸ್ಥಳವಿದೆ. 'ಶಿರೂರ'ದ ಕೊನೆಯ ಊರು ಕಂನಾಡಿನ ಅಚ್ಚಳಿಯದ ಮುದ್ರೆಯಾಗಿದೆ. ಶಿರಾಳಿ, ಶಿರಟೆ, ಎಂಬೀ ಬಗೆಯ ರೂಪತಾಳಿದುವಂತೂ ಎಷ್ಟೋ ಇವೆ.

ಲಕ್ಷ್ಮಿಯ ಹೆಸರಿನ ಎಡೆಗಳು ತೀರ ಕಡಮೆ; ಇದ್ದರೂ ಅವು ಬಹಳ ಇತ್ತೀಚಿನವು. ಶ್ರೀದೇವಿ ಭೂದೇವಿ ಎಂದು ವಿಷ್ಣುದೇವರ ಹೆಂಡಿರೆಂದು ಹೇಳುವುದು ಹಳೆಯ ವಾಡಿಕೆ. ಶಿನ್ ಎಂಬ ಕಂದಮಿಳ ವರ್ಗದ ಶಬ್ದಬೀಜ ದಿಂದ ಉಂಟಾದ ಶಬ್ದಮಾಲಿಕೆಯಲ್ಲಿ ಶ್ರೀ ಎಂಬ ಸಂಸ್ಕೃತ ರೂಪವೂ ಒಳಗೊಳ್ಳುವುದೆಂದು ನನ್ನ ನಂಬುಗೆ ಯಾಗಿದೆ. ಶ್ರೀಸೂಕ್ತದಲ್ಲಿ ಲಕ್ಷ್ಮಿಗೆ ಎಂದರೆ ಶ್ರೀದೇವಿಗೆ 'ಚಂದ್ರಾ', 'ಚಂದ್ರಾಭಾ' ಎಂದು ವರ್ಣಿಸಿದೆ. ಶ್ರೀ-ಶಕ್ತಿಯ ಪೂಜೆಯ ಮುಖ್ಯದಿನವು ಹುಣ್ಣಿವೆ (ದಕ್ಷಿಣ ಕನ್ನಡ ಜಿಲ್ಹೆಯಲ್ಲಿ 'ತಿಂಗಳ' ಎಂಬ ಊರಲ್ಲಿ ದೇವಿಯ ಸ್ಥಾನವಿದೆ). 'ಹಿರಣ್ಯವರ್ಣಾಂ' ಎಂದು ಶ್ರೀದೇವಿಯ ಬಣ್ಣವನ್ನು ಶ್ರೀಸೂಕ್ತವು ಹೇಳುವುದು. ಶಿನ್-ಚಿನ್-ಕೆನ್ ಎಂಬುವಲ್ಲಿಯೇ ಈ ಅರ್ಥವು ಅಡಕವಾಗಿದೆ. ಸಂಸ್ಕೃತ ಭಾಷೆಯಿಂದ ಅದರ ಅರ್ಥವು ಸ್ಪಷ್ಟವಾಗದೆ ಇದ್ದುದರಿಂದ 'ಹಿರಣ್ಯವರ್ಣಾಂ' 'ಹೇಮಮಾಲಿನೀಂ' ಎಂದು ಅದರ ಸ್ಪಷ್ಟೀಕರಣ ಮಾಡಬೇಕಾಗಿದೆ. ಶಿನ್‌ದಿಂದ ಶ್ರೀಶಬ್ದವು ನಿಷ್ಪನ್ನವಾಗಿರುವುದೆಂದು ನನ್ನ ಗ್ರಹಿಕೆಯಾಗಲು ಇದೊಂದು ಮುಖ್ಯವಾದ ಕಾರಣ. ಶಿನಿವಾಲಿ ಎಂದರೆ ಚಂದಿರನ ಒಂದು ಹೆಸರು. ಚಂದ್ರವೆಂಬುದರ ವ್ಯುತ್ಪತ್ತಿಯೂ ಇಲ್ಲಿ ಸೂಚಿತವಾಗುತ್ತದೆ. ಶಿನ್-ಚೆನ್-ಕೆನ್ನ, ಚೆಂದ; ಇದುವೆ ಸಂಸ್ಕೃತದಲ್ಲಿ ಚಂದ್ರವಾಗಿದೆಯೆಂದು ಗ್ರಹಿಸಲು ಏನು ಬಾಧಕ?

ಉತ್ತರ ಕಂನಡ ಜಿಲ್ಹೆಯ ನಾಡವರಲ್ಲಿ ಕೆಂಗಲಾ ಪರಮೇಶ್ವರಿಯ ಪೂಜೆಯಿದೆ. ದೇಶಸ್ಥ ಬ್ರಾಹ್ಮಣರಲ್ಲಿ ಹಲವರಲ್ಲಿ ಚೆಂದಲಾ ಪರಮೇಶ್ವರಿಯುಂಟು. ಖಾನದೇಶದಲ್ಲಿ ಚಾಂಗದೇವಿಯ ಮಹೋತ್ಸವಗಳು ಹಳ್ಳಿ ಹಳ್ಳಿಗೆ ನಡೆಯುತ್ತವೆ. ಇವಳಿಗೆ ಚೆಂಗಳಿಕೆಮ್ಮನೆಂದು ನಮ್ಮ ನಾಡಿನಲ್ಲಿ ಹೆಸರು. ಹೀಗೆ ಇವೆಲ್ಲ ಶ್ರೀದೇವಿಯ ಹೆಸರುಗಳೆ ಆಗಿವೆ. ಶಿನ್ (ಶ್ರೀ) ಎಂಬುದರ ಬಳಗದ ನುಡಿಗಳವು ಕೆನ್ ಮತ್ತು ಚೆನ್ ಎಂದು. ಶಿರೂರುಗಳಂತೆ ಕೆಂದೂರುಗಳುಂಟು. ಪುಣೆ ಜಿಲ್ಹೆ ಶಿರೂರು ತಾಲ್ಲೂಕಿನಲ್ಲಿ ಒಂದು ಕೆಂದೂರು ಇದೆ. ಚೆಂದೂರುಗಳೂ ಹಲವಿವೆ. ಮಹಾರಾಷ್ಟ್ರದಲ್ಲಿ ಚಾಂದ, ಚಾಂದೋರ, ಚಾಂದೋರಿ, ಚಾಂದೋರೆ ಎಂಬ ಊರುಗಳು ೧೫ಕ್ಕೆ ಮೀರಿವೆ. ಖಾನದೇಶದಲ್ಲಿ ಚಾಂದಸರ, ವರ್‍ಹಾಡದಲ್ಲಿ ಚಾಂದಾ; ನಾಸಿಕದಲ್ಲಿ 'ಚಾಂದೋರ' ಮಹಾಲ; ಚಾಂದೋರಿ; ಪುಣೆಯಲ್ಲಿ ಚಂದ; ಚಂದಿವಲಿ; ರತ್ನಾಗಿರಿಯಲ್ಲಿ ಚಾಂದೋರ; ಎಂದು ಮುಂತಾದುವು ಇದಕ್ಕೆ ಉದಾಹರಣ. ಮಹಾರಾಷ್ಟ್ರ

ಭಾಗದ ಶಿನೋಳಿ, ಶೇಣವಲಿ; ಶೇಣಲೆ; ಶಿಂಗಿ, ಶಿಂಗೋಲೆ, ಶೇಂದುರಣೆ, ಸಿನ್ನರ; ನಮ್ಮಲ್ಲಿ ಶೆನವಾಡ ಶ್ಯಾನವಾಡ ಎಂಬೀ ಊರುಗಳ ಹೆಸರಿನಲ್ಲಿ ಶಿನ್ ಎಂಬ ಮೂಲರೂಪವೆ ಕಂಡುಬರುತ್ತದೆ. ಇಂತಿವೆಲ್ಲವೂ ಶ್ರೀದೇವಿಯ ವಿವಿಧ ಹೆಸರಿನ ಊರುಗಳು. ಶಿಂಗಿಯ ನಿಜವಾದ ಅರ್ಥ ತಿಳಿಯದೆ ಹಲವರು ಶೃಂಗಿ ಎಂದು ಅದನ್ನು ತಿದ್ದುತ್ತಾರೆ! ಶಿನ್ (ಚಿನ್) ದೇಶ ಶ್ರೀದೇವಿಯ ಕೇವಲ ಆರಾಧಕರು ನಮ್ಮ ನಾಡಿನಲ್ಲಿ ಪಾಂಚಾಳರು! ಶಿರಸಂಗಿ (ಅಥವಾ ಶಿಂಗಿ?) ಕಾಳಮ್ಮನ ಪರಮ ಭಕ್ತರು. ಈ ಕಾಳಮ್ಮನೆಂದರೆ ಉಗ್ರಕಾಲಿಯಾಗಿರಲಾರಳು. ಏಕೆಂದರೆ ಅವರಲ್ಲಿ, ಸಿರಸಂಗಿಯಲ್ಲಿ ಹಿಂಸೆಗೆ ಎಡೆಯಿಲ್ಲ, ಪಾಂಚಾಲರು ಕಲಾವಿದರು. ಕಾರಣ ಕಲಾದೇವಿಯ ಉಪಾಸನೆಯಾಗಿರಬೇಕು. ಅವರು ಸುವರ್ಣಕಾರರು. ಆದುದರಿಂದ ಶ್ರೀದೇವಿ, ಶಿಂಗಿದೇವಿಯ ರೂಪದಲ್ಲೂ ಅವಳನ್ನು ಕಾಣುತ್ತಿರಬೇಕು.

ಕಂನಾಡಿನಲ್ಲಿ ೧೦-೧೫ ಹರದಾರಿಯೊಳಗಾಗಿ ಒಂದಿಲ್ಲೊಂದು ದೇವಿಯ ಸ್ಥಾನವು ಇದ್ದೇ ಇದೆ. ರಾಜರಾಜೇಶ್ವರಿ, ದುರ್ಗಾಪರಮೇಶ್ವರಿ, ಶಾಂತಾದುರ್ಗಾ, ಚಂಡಿ, ಚಾಮುಂಡಿ, ಚೌಂಡೇಶ್ವರಿ, ಚೆಂಗಳಿಕವ್ವ, ಕಾಲಿ, ಕರೆಮ್ಮ, ಮಾಯವ್ವ, ಮಾರೆಮ್ಮ, ದೇಮವ್ವ, ಮುಂತಾದ ಹೆಸರಿನಲ್ಲಿ ದೇವಿಯು ಜನರಿಂದ ಪೂಜೆಗೊಳ್ಳುತ್ತಿದ್ದಾಳೆ. ಈ ಶಾಕ್ತಪಂಥದ ಸಂಬಂಧವು ದಕ್ಷಿಣದಲ್ಲಿ ಕಾಂಚಿಯ ವರೆಗೆ ಹೋಗಿ ಮುಟ್ಟುತ್ತದೆ. ಕಾಂಚಿಯೆಂಬಲ್ಲಿ ಕಾಂಚನ ಅಥವಾ ಕೆನ್ ಎಂಬುದರ ಭಾವವು ಇರಬೇಕು. ಕಾಂಚಿಯು ಶಾಕ್ತರ ಒಂದು ವಿಖ್ಯಾತ ಕೇಂದ್ರ. ಕಂನಾಡಿನೊಳಗಿನ ಹಲವು ಅಮ್ಮನವರ ದೇವಸ್ಥಾನದಲ್ಲಿ ಕಾಂಚಿಯ ನೆನಹು ಈಗಲೂ ಇದೆ. ಕಾಂಚಿಕಾ ಪರಮೇಶ್ವರಿ ಎಂದು ಕೆಲವೆಡೆಗೆ ನಮ್ಮ ದೇವಿಯರ ಹೆಸರಿದೆ. ಶಿರಸಂಗಿ ಕಾಳಮ್ಮನ ಸುಪ್ರಸಿದ್ಧ ದೇವಸ್ಥಾನದಲ್ಲಿ ಚೈತ್ರಮಾಸದ ವಾರ್ಷಿಕ ಉತ್ಸವವುಂಟು. ಆಗ ಗುಡಿಪಾಡಿವದ ಬೆಳಗಿನ ಜಾವದಲ್ಲಿ ಅರ್ಚಕರು ಬುತ್ತಿಯ ಉಂಡೆಗಳನ್ನು ದೇವಿಯ ಎದುರು ತೂರುತ್ತಾರೆ. ಅವುಗಳಲ್ಲಿ ಒಂದು ಕಾಂಚಿಗೆ ಹೋಗಿ ಬೀಳುವುದೆಂಬ ಭಾವಿಕರ ನಂಬುಗೆಯಿದೆ. ಈ ಉಂಡೆಯು ಕಾಂಚಿಯಲ್ಲಿ ಬಿದ್ದೊಡನೆ ಅಲ್ಲಿಯ ರಥೋತ್ಸವವು ಆರಂಭವಾಗುವುದಂತೆ. ಈ ಸಂಗತಿಗಳಿಂದ ಕಾಂಚಿಯೊಡನಿದ್ದ ಕಂನಾಡವರ ನಿಕಟಸಂಬಂಧವು ಗೊತ್ತಾಗುತ್ತದೆ. ಚಲುಕ್ಯ, ರಾಷ್ಟ್ರಕೂಟರ ಕಣ್ಣು ಯಾವಾಗಲೂ ಕಾಂಚಿಯ ಮೇಲೆಯಿರುತ್ತಿದ್ದಿತೆಂಬ ಐತಿಹಾಸಿಕ ಘಟನೆಗಳನ್ನು ಇದರೊಡನೆ ಅಭ್ಯಾಸ ಮಾಡುವಂತಿದೆ. ಶ್ರೀ ವಿದ್ಯಾರಣ್ಯರು ಕೆಲಕಾಲ ಕಾಂಚಿಯಲ್ಲಿದ್ದರು. ಮಯೂರಶರ್ಮನ ಕತೆಗೂ ಕಾಂಚಿಯಿಂದಲೆ ಆರಂಭವಾಗುತ್ತದೆ. ಕಾಂಚಿಯೊಡನೆ ಇದ್ದ ಕಂನಾಡಿನ ಸಾಂಸ್ಕೃತಿಕ ಸಂಬಂಧವು ಸ್ಪಷ್ಟವಾದಷ್ಟು ಹಳೆಯ ಐತಿಹಾಸಿಕ ಘಟನೆಗಳ ಸ್ಪಷ್ಟೀಕರಣವಾಗಲಿದೆ. ಶೇಡಿಂಬ (ನಿ. ಕಂ.)ದಲ್ಲಿ ದೊರೆತ ಚಲುಕ್ಯತ್ರಿಭುವನಮಲ್ಲನ ಕಾಲದ ಒಂದು ಶಾಸನದಲ್ಲಿ 'ಕಾಂಚೀ ಪುರದ್ವಾರ ಕವಾಟ ಪುಟ ಭೇದನಾಭಿಚಾರ ಹೋಮ ಸಾಧಕರುಂ, ಹೇಮ ಕುಂಡಳ ಜ್ವಾಳಿನೀ ದೇವ್ಯಾಕರ್ಷಣರುಂ' ಎಂದು ಒಬ್ಬ ಶಾಕ್ತನ ವರ್ಣನೆಯಿದೆ. ಕಾಂಚಿಯನ್ನು ಗೆಲ್ಲುವ ಆಸಕ್ತಿಯು ಇದರಲ್ಲಿ ಕಂಡುಬರುವುದಲ್ಲದೆ ಶಾಕ್ತರನ್ನು ರಾಜರು ಏಕೆ ಪೋಷಿಸುತ್ತಿದ್ದರೆಂಬುದೂ ಈ ಶಾಸನದಿಂದ ಸ್ಪಷ್ಟವಾಗುತ್ತದೆ.

ದೇವಿಗಿರುವ ದೇಮವ್ವ ಎಂಬ ಹೆಸರು ಕಂನಾಡಿನಲ್ಲಿಯೆ ಪ್ರಚಾರದಲ್ಲಿ ಬಂದಿರಬೇಕೆಂದು ನನ್ನ ಗ್ರಹಿಕೆ. ದೇವ ಇದರಿಂದಲೆ ದೇಮ ಆಗಿರುವುದು ಸ್ಪಷ್ಟವಿದ್ದರೂ ಇದು ಯಾವ ವ್ಯಾಕರಣನಿಯಮಕ್ಕನುಸರಿಸಿ ಆಗಿದೆಯೊ ತಿಳಿಯದು. ಆ ವ್ಯಾಕರಣ ನಿಯಮವು ನಮ್ಮ ಹಳೆಯ ವೈಯಾಕರಣಿಗಳ ಗ್ರಂಥದಲ್ಲಿ ದೊರೆಯದೆ ಹೋದಲ್ಲಿ 'ದೇಮ' ಇದನ್ನು ದೇವದಿಂದ ಬಂದಿತೆಂದು ಒಪ್ಪುವುದಕ್ಕೂ ಕೆಲರು ಸಂಕೋಚಪಡಬಹುದಾಗಿದೆ. ಅದೇನೆ ಇದ್ದರೂ ಈ ಹೆಸರಿನ ಗಂಡು ದೇವರಿಲ್ಲವಾದರೂ ಹೆಣ್ಣುದೇವತೆ ಗ್ರಾಮದೇವತೆ ಇದ್ದುದು ನಿಜ. ಗಂಡು ಹೆಣ್ಣುಗಳಿಗೆ ಈ ಹೆಸರನ್ನು ಅಕ್ಕರೆಯಿಂದ ಇಡುತ್ತಿದ್ದುದೂ ಕಂಡುಬರುತ್ತದೆ. ವಿಜಯನಗರದ ದೇವರಾಯನ ರಾಣಿ ದೇಮಾಂಬಿಕೆಯೆಂಬವಳೊಬ್ಬಳಿದ್ದಳು.[೯] ೧೨ನೆಯ ಶತಮಾನದಲ್ಲಿ ವರ್ಧಾಟದ ವರೆಗೂ ಈ ಹೆಸರಿದ್ದಿತೆಂದು

ಚಕ್ರಧರನ ಲೀಳಾಗ್ರಂಥದಿಂದ ಕಂಡುಬರುತ್ತದೆ. ಮಹಾನುಭಾವ ಪಂಥದ ಶಿಷ್ಯರಲ್ಲಿ 'ದೇಮಾಯಿ'ಯು ಇದ್ದಳು. ಆದರೆ, ದೇಮವ್ವನ ಜಾತ್ರೆ ಮೊದಲಾದುವು ಈಗ ಮರ್ಹಾಟದಲ್ಲಿ ಆಗುವುದಿಲ್ಲ. ದೇಮಲಾಪುರ, ದೇಮಲಿಗೆ ನಾಡು, ದೇಮಲವ್ವನ ಹಳ್ಳಿ ಎಂಬೀ ಬಗೆಯ ಹಳ್ಳಿಗಳು ನಮ್ಮ ನಾಡಿನಲ್ಲಿಯೆ ಇವೆ. ಇಂದು ಶಾಕ್ತರೆನಿಸಿಕೊಳ್ಳಲು ಒಪ್ಪದ ಬ್ರಾಹ್ಮಣರಲ್ಲಿಯೂ ಕೂಡ ಒಂದಿಲ್ಲೊಂದು ದೇವಿಯ ಉಪಾಸನೆಯಿಲ್ಲದ ಮನೆಗಳಿಲ್ಲ. ಪಂಚಮಕಾರಾದಿ ಕೃತಿಗಳ ಮೂಲಕ ಶಾಕ್ತಪಂಥಕ್ಕೆ ಸಮಾಜದಲ್ಲಿ ಗೌರವಸ್ಥಾನವು ಇಲ್ಲದಾಗುತ್ತ ಬಂದಿತು. ಆದರು ಆ ಭಾಗವನ್ನುಳಿದು ಈಗಲೂ ದೇವಿಪೂಜೆ ಸರ್ವಸಮ್ಮತವಾಗಿ ಉಳಿದಿದೆ.

ರೇವಾತೀರದಿಂದ ಮೈಸೂರ ವರೆಗೂ ಎಲ್ಲಮ್ಮನ ಭಕ್ತರುಂಟು. ೧೨ನೆಯ ಶತಮಾನದಲ್ಲಿ ಖಾನದೇಶ-ವರ್ಹಾಟದಲ್ಲಿ 'ಎಲ್ಲೂ ಆಯಿ' ಈ ಹೆಸರಿನಿಂದಲೇ ರೇಣುಕೆಯು ಅಲ್ಲಿಯ ತನ್ನ ಭಕ್ತರಿಂದ ಪೂಜೆಗೊಳ್ಳುತ್ತಿದ್ದಳು. ಮರ್ಹಾಟಿಯ ಆದಿ ಕವಿಯಿತ್ರಿಯೊಬ್ಬಳ ತಾಯಿ ಹೆಸರು ಎಲ್ಲೂ ಆಯಿಯೆಂದಿದೆ. ಆ ಭಾಗದಲ್ಲಾದ ಮಹಾನುಭಾವ ಪಂಥದ ಸ್ಥಾಪಕ ಚಕ್ರಧರನ ಶಿಷ್ಯರಲ್ಲಿ ಎಲ್ಲಂಭಟ್ಟ ಈ ಹೆಸರಿನವರಿದ್ದಾರೆ. ಶಿಲ್ಪಕಲೆಯ ಆದರ್ಶವೆಂದು ಹೆಸರಾದ 'ಎಲ್ಲೋರಾ' ಎಂಬ ಊರ ನಿಜವಾದ ಹೆಸರು 'ಎಲ್ಲೂರು'! ಎಲ್ಲಮ್ಮನೆಂದರೆ ಎಲ್ಲರ ತಾಯಿ. ಇದು ಭೂದೇವಿಯ ಪೂಜೆಯಾಗಿದೆಯೆಂದು ಶ್ರೀ ಅರಟಾಳ ರುದ್ರಗೌಡರು ಹಿಂದೆ ಬರೆದಿದ್ದಾರೆ. ಅದು ನಿಜವಿದೆ. ರಂಡೆಹುಣಿವೆ ಚಳಿಗಾಲದಲ್ಲಿ ಬೆಳೆ ಕೊಯ್ದಾಗ! ಹೊಸವರ್ಷದ ಆರಂಭ, ಚೈತ್ರದಲ್ಲಿ ವಸಂತಾಗಮದಲ್ಲಿ ಮುತ್ತೈದೆ ಹುಣ್ಣಿಮೆ. ಪರಶುರಾಮನು ತನ್ನ ತಾಯಿಯನ್ನು ಹರಣ ಮಾಡಿದ್ದಕ್ಕೆ ಕ್ರೋಧಾವಿಷ್ಟನಾದನು. ಇದು ಕಾರ್ತವೀರ್‍ಯನು ತಮ್ಮ ನಾಡು ಸುಲಿದುದಕ್ಕಾಗಿ ಉಂಟಾದ ಸಿಟ್ಟು, ಆತನ ದೇಶಾಭಿಮಾನದ ಸೂಚಕ. ಇದನ್ನು ತಾಯಿ ರೇಣುಕೆಗೂ ಜೋಡಿಸಿ ಕತೆಕಟ್ಟಿದ್ದಾರೆ. ಧಾರ್ಮಿಕ ರೂಪದಲ್ಲಿರುವ ದೇಶಾಭಿಮಾನದ ಹಳೆಯ ರೀತಿಯಿದು.

ಕಾಳಾಮುಖರ ಪಂಥವೂ ಬಹಳ ಹಬ್ಬಿದ್ದಿತು. ಆ ಕಾಲದ ಅನೇಕ ವಿದ್ವಾಂಸರು ಪಾಶುಪತ, ಕಾಳಾಮುಖಾದಿ ಪಂಥಗಳಲ್ಲಿ ಇದ್ದರು. ಕಾಶ್ಮೀರಪಂಡಿತ, ಜ್ಞಾನರಾಶಿದೇವ, ರುದ್ರಶಕ್ತಿಜೀಯ, ಮಲೆಯಾಳ ಪಂಡಿತಾದಿ ಹೆಸರುಗಳು ದೊರೆಯುತ್ತವೆ. ಇವರ ಪ್ರಭಾವವು ಜನಸಾಮಾನ್ಯರ ಮೇಲೆ ವಿಶೇಷವಾಗಿತ್ತು. ನಾಥಸಂಪ್ರದಾಯವು ಇಲ್ಲಿಯೆ ಹುಟ್ಟಿದುದಲ್ಲವಾದರೂ ಕಂನಾಡಿನಲ್ಲಿ ಅದಕ್ಕೆ ಎಡೆಯು ದೊರೆಯದೆ ಹೋಗಿಲ್ಲ. ಮಂಗಳೂರಿನ ಹತ್ತಿರದ ಕದ್ರಿಯಲ್ಲಿ ಈಗಲೂ ಈ ಪಂಥದ ಒಂದು ಮಠವಿದೆ. ಅಲ್ಲಿಯ ಹಳೆಯ ಶಾಸನಗಳಲ್ಲಿ ಮಂಗಳನಾಥ,. ಚಂದ್ರನಾಥ ಹೆಸರಿನವರು ಕಾಣಿಸಿಕೊಳ್ಳುತ್ತಾರೆ. ಗೋರಕ್ಷಕನಾಥನ ನೈವೇದ್ಯಕ್ಕೆ ಕೊಟ್ಟ ತೋಟದ ಉಲ್ಲೇಖವಿದೆ. ಬೆಳಗಾವಿಯ ಹತ್ತಿರದ ವೈಜನಾಥವು ಒಂದು ಕಾಲಕ್ಕೆ ನಾಥಪಂಥದ ಒಂದು ಕೇಂದ್ರವಾಗಿತ್ತು. ಸಹ್ಯಪರ್ವತದ ಗುಂಟ ನಾಥರ ಹಲಕೆಲವು ಎಡೆಗಳು ದೊರೆಯುತ್ತವೆ. ಜೋಗಿಹಳ್ಳಿ, ಜೋಗಿಮಡ್ಡಿಗಳಿವೆ. ಜೋಗಣ್ಣಾ, ಜೋಗರಸ, ಜೋಗಿನಾಯಕರ ಹಳೆಯ ಶಾಸನಗಳ ಉಲ್ಲೇಖಗಳಿವೆ.

ಹಠಯೋಗ ಪ್ರದೀಪಿಕೆಯೆಂಬ ಗ್ರಂಥದ ಪೀಠಿಕೆಯಲ್ಲಿ ಹೇಳಿದ ಆ ಪಂಥದ ಗುರುಪರಂಪರೆಯಲ್ಲಿ ಅಲ್ಲಮಪ್ರಭುವಿನ ಹೆಸರು ಬಂದಿದೆ. ಆದುದರಿಂದ, ಈತನು ಶೂನ್ಯ ಸಿಂಹಾಸನಾಧಿಷ್ಠಿತನಾಗಿ ಲಿಂಗವಂತ ಮತದ ಅಧ್ವರ್ಯುವಾಗುವ ಮೊದಲು ನಾಥಪಂಥದಲ್ಲಿಯೂ ಹೆಸರಾದ ಮುಂದಾಳಾಗಿದ್ದನೆಂದು ಕಾಣುತ್ತದೆ. ಅನಿಮಿಷನು ಶ್ರೀ ಪ್ರಭುದೇವರ ಗುರುವಂತೆ. ಈ ಅನಿಮಿಷನೆಂದರೆ ಮತ್ಸ್ಯೇಂದ್ರನಾಥನಾಗಿರಬೇಕೆಂದು ಕೆಲರ ಊಹೆಯಿದೆ. ಮಹಾನುಭಾವ ಪಂಥದ ಚಕ್ರಧರನ ಗುರು ಗುಂಡಮಪ್ರಭುವು ಘೋಡಾಚೂಲಿಯ ಶಿಷ್ಯನಂತೆ. ಹಠಯೋಗ ಪ್ರದೀಪಿಕೆಯಲ್ಲಿ ಅಲ್ಲಮನ ನಂತರ ಘೋಡಾಚೂಲಿಯ ಹೆಸರುಂಟು. ಮಹಾರಾಷ್ಟ್ರದ ಸಂತ ಪಂಥದ ಅಗ್ರಣಿಯೆನಿಸಿದ ಶ್ರೀ ಜ್ಞಾನೇಶ್ವರನ ಗುರು ಪರಂಪರೆಯು ನಾಥ ಸಂಪ್ರದಾಯದಿಂದಲೆ ದೀಕ್ಷೆ ಹೊಂದಿದ್ದಾಗಿದೆ. ಆತನು ನಾಥಪಂಥವನ್ನು ತನ್ನಲ್ಲಿ ಅಳವಡಿಸಿಕೊಂಡು ಸಂತಪಂಥದ ಉದ್ಧಾರಕನಾದನು. ಅದೇ ಮೇರೆಗೆ ನಾಥ ಸಂಪ್ರದಾಯದಿಂದ ಸ್ಫೂರ್ತಿಪಡೆದು ಶ್ರೀ ಪ್ರಭುದೇವರೂ ಲಿಂಗವಂತ ಮತದ

ಉದ್ಧಾರಕರಾಗಿರುವ ಸಂಭವವಿದೆ. ಜ್ಞಾನೇಶ್ವರಿಯಲ್ಲಿ ಲಿಂಗಾಯತ ಪಂಥದ ಪರಿಭಾಷೆಯನ್ನೂ ತನ್ನ ಮತಸ್ಥಾಪನೆಗೆ ಶ್ರೀ ಜ್ಞಾನೇಶ್ವರನು ಬಳಸಿಕೊಂಡಿದ್ದಾನೆ. ಹೀಗೆ ಈ ನಾಡಿನಲ್ಲಿ ನಾಥಪಂಥವು ಸ್ವತಂತ್ರವಾಗಿ ವಿಶೇಷ ಮೆರೆಯಲಿಲ್ಲ. ಬೇರೆಪಂಥಗಳಲ್ಲಿ ಹುದಗಿಕೊಂಡಿತು. ಆದರು ಈ ಪಂಥದ ಬಾವಾ, ಬೈರಾಗಿ, ಜೋಗಿಮ-ಹಂತರುಗಳು ನಮ್ಮ ನಾಡಿನಲ್ಲಿ ಇಲ್ಲದಿಲ್ಲ.

ಕಂನಾಡಿನ ಉತ್ತರ ಮೇರೆಯಲ್ಲಿ ೧೫ನೆಯ ಶತಮಾನದ ಸುಮಾರಿಗೆ ವಿಶೇಷ ಪ್ರಚಾರದಲ್ಲಿ ಬಂದ ದತ್ತ ಸಂಪ್ರದಾಯದ ಮೇಲೂ ನಾಥಪಂಥದ ಪರಿಣಾಮವು ಬಹಳವಾಗಿದೆ. ಇದಕ್ಕೆ ಅವಧೂತ ಮಾರ್ಗವೆಂದು ಹೇಳುವರು. ಇದು ಮುಖ್ಯವಾಗಿ 'ಯತಿ' ಪಂಥವು. ಯತಿ ಸಂಪ್ರದಾಯವು ವೇದಗಳಿಗೆ ಅಷ್ಟು ಸಮ್ಮತವಲ್ಲವೆಂದು ಈ ಮೊದಲೆ ಸೂಚಿಸಿದೆ. ಆದರೆ, ದತ್ತ ಸಂಪ್ರದಾಯವು ಯತಿಪಂಥವಾದರೂ ಸನಾತನ ವೇದಾಭಿಮಾನವು ಅದರ ವಿಶೇಷವಾಗಿದೆ. ಹೀಗಿದೊಂದು ಎರಡು ಸಂಸ್ಕೃತಿಗಳ ಕೂಡಲಸಂಗಮ. ಇದರಲ್ಲಿ ಮುಸಲ್ಮಾನ ಧರ್ಮದ ಬಾವಾ-ಫಕೀರ ವೃತ್ತಿಯ ಛಾಯೆಯೂ ಕಾಣಿಸಿಕೊಳ್ಳುವುದು. ಮೈಸೂರ ಸಂಸ್ಥಾನದಲ್ಲಿರುವ ದತ್ತ ಕ್ಷೇತ್ರಕ್ಕೆ ಬಾಬಾ ಬುಡನಗಿರಿ ಎಂಬ ಹೆಸರು ಇದೆ. ದತ್ತ ಸಂಪ್ರದಾಯ ಕ್ಷೇತ್ರಗಳೆಲ್ಲ ಮುಖ್ಯವಾಗಿ ಕಂನಾಡಿನಲ್ಲಿಯೆ ಇವೆ. ವಾಡಿ (ನೃಸಿಂಹ ಸರಸ್ವತಿಗಳ) ಕ್ಷೇತ್ರ, ಗಾಣಗಪುರ, ಕುರುಗಡ್ಡೆ ಇವೆಲ್ಲ ಕೃಷ್ಣೆಗುಂಟ ಇವೆ. ವಿಜಾಪುರದ ಅಲ್ಲಿ ಆದಿಲಶಾಹನ ಕಾಲದಲ್ಲಿ ಈ ಸಂಪ್ರದಾಯದ ಒಬ್ಬ ಯತಿಗಳು ಪವಾಡಪುರುಷರೆಂದು ಹೆಸರಾದರು. ಬಾದಶಹನು ಇವರಲ್ಲಿ ಭಕ್ತಿಯನ್ನಿಟ್ಟಿದ್ದನಂತೆ.

ಬೆನಕನಕಟ್ಟೆ, ಗಣೇಶವಾಡಿಗಳು ಗಣಪತಿಯ ಉಪಾಸನೆಯ ಸೂಚಕವಾಗಿವೆ. ಶ್ರೀ ಶಂಕರಾಚಾರ್ಯರು ಎದುರಿಸಿದ ಪಾಶುಪತಾದಿ ಹಲವು ಪಂಥಗಳಲ್ಲಿ ಗಾಣಾಪತ್ಯರ ಹೆಸರೂ ಬರುವುದು. ಶ್ರೀ ಸಿದ್ಧಿವಿನಾಯಕನ ಒಕ್ಕಲು ಕಡಲತೀರದಲ್ಲಿ ಹೆಚ್ಚೆಂದು ತೋರುತ್ತದೆ. ಹಲವು ಹವ್ಯಕರಲ್ಲಿ ಚಿತ್ಪಾವನರಲ್ಲಿ ಗಣಪತಿಯು ಕುಲದೇವತೆಯಾಗಿದೆ. ಟರಾವು (ಮಂಗಳೂರು), ಮದಪುರ (ದಂ.ಕ.) ಇಡಗುಂಜಿ (ಉ. ಕ.), ಪುಳೆ (ಕೊಂಕಣ) ಇಲ್ಲಿಯ ಗಣಪತಿ ದೇವಸ್ಥಾನಗಳು ಪ್ರಸಿದ್ಧವಾಗಿವೆ. ಭೂತ ಪಿಶಾಚಾದಿಗಳ ಸಿದ್ಧಿಗೆ ಹಾತೊರೆವ ಸುಡುಗಾಡ ಸಿದ್ಧರು ಈ ನಾಡಿನಲ್ಲಿ ಇದ್ದರು. ಬಲಾರಿ, ಬ್ಯಾತನಾಳ, ಭೂತನಾಳಗಳು ಭೂತಪೂಜೆಯ ನೆನಪುಕೊಡುತ್ತವೆ. ಕಂನಡ ಜಿಲ್ಹೆಯಲ್ಲಿ. ತುಳುನಾಡಿನಲ್ಲಿ ಭೂತಪೂಜೆ ಇನ್ನೂ ಜೀವಂತ ಸ್ಥಿತಿಯಲ್ಲಿದೆ.

ಯಕ್ಷಪೂಜೆಗೂ ನಮ್ಮಲ್ಲಿ ಸ್ಥಾನವಿದ್ದಿತು. ಜಖಬಾಳ, ಜಕ್ಕಸಾಂದ್ರ, ಜಕ್ಕಲಿ ಮುಂತಾದುವು ಯಕ್ಷರ ಸ್ಮಾರಕಗಳಾಗಿವೆ. ಜೈನರಲ್ಲಿ ಯಕ್ಷಿಣಿಯ ಆರಾಧನೆಯಿದೆ. ಮದುವೆ ಮುಂಜಿಗಳ ಮೊದಲು ಅಥವಾ ಮನೆಯಲ್ಲಿ ಅನಿಷ್ಟವು ಒದಗಬಾರದೆಂದು ಬ್ರಾಹ್ಮಣರ ಮನೆಗಳಲ್ಲಿಯೂ 'ಜಖಣಿ' ಆರಾಧನೆ ನಡೆಯುವುದು.

ಟಿಪ್ಪಣಿ

೧. ***ಋಗ್ವೇದ ಸಂಹಿತಾ,*** ೬೧. ೨; IX ೯. ೪; VIII. ೧೭೪. ೯
೨. ***Epigraphia Indica***, Vol. VII ೫೩-೫೫
೩. ***ಶ್ರೀಮನ್ಮಹಾಭಾರತಂ,*** ೨.೨೨.೯-೧೧
೪. ***Survival of the Pre-historic Civilisation of the Indus Valley.*** No. 41, 1942, pp. 14-24.
೫. ***ಬೃಹದಾರಣ್ಯಕೋಪನಿಷತ್*** ೬-೨-೧೫
೬. ಮೇಲಿನದ ೬-೪-೯.೨
೭. ***ತೈತ್ತಿರೀಯ ಸಂಹಿತಾ,*** ೨.೪.೯.೨
೮. ***ತೈತ್ತಿರೀಯೋಪನಿಷತ್,*** ೧.೧೧.೨
೯ ***Epigraphia Carnatica,*** Vol. III MC 121

ಸಂಸ್ಕೃತಿ ವಿಚಾರ

ಇತಿಹಾಸ ಮತ್ತು ಪುರಾಣ

ರಾಮಾಯಣ, ಮಹಾಭಾರತಗಳು ಮೂಲದಲ್ಲಿ ಇತಿಹಾಸಗಳಾದರೂ ಅವುಗಳು ನಮ್ಮ ಪಾಲಿಗೆ ಪುರಾಣಗಳಾಗಿವೆ; ಪವಾಡಗಳಿಂದ ಕೂಡಿವೆ. ಕಂನಾಡಿನಲ್ಲಿ ರಾಮಾಯಣ, ಮಹಾಭಾರತದ ನೆನಹು ಕೊಡುವ ಸ್ಥಳಗಳು ಎಲ್ಲೆಲ್ಲೂ ತುಂಬಿವೆ. ಹಂಪೆ ಮತ್ತು ಆವನಿ (ಮೈ.) ಇವೆರಡು ರಾಮಾಯಣದ ಕುರುಹುಗಳಿಗಾಗಿ ವಿಶೇಷ ವಿಖ್ಯಾತವಾಗಿವೆ. ಗೋಕರ್ಣ ಮೊದಲಾದ ಇನ್ನೂ ಕೆಲವು ಸ್ಥಳಗಳನ್ನೂ ಇದರೊಡನೆ ಹೇಳಬಹುದು. ಆದರೆ, ರಾಮಾಯಣಕ್ಕಿಂತ ಭಾರತದ ನೆನೆಹುದೋರುವ ಎಡೆಗಳೆ ಹೆಚ್ಚು. ಯದು ತುರ್ವರ ಪೀಳಿಗೆಯವರ ನಾಡೆಂದು ಇವು ವಿಶೇಷವಾಗಿರುವ ಸಂಭವವಿದೆ.

ರಾಮ ಮತ್ತು ಕೃಷ್ಣರು ನಮ್ಮ ಲೋಕಕ್ಕೆ ಮಾಡಿದ ಉಪಕಾರಗಳನ್ನು ನೆನೆದು ಕೃತಜ್ಞತೆಯಿಂದ ಅವರನ್ನು ದೇವಾಂಶರು, ಏಕೆ ಪ್ರತ್ಯಕ್ಷದೇವರೆಂದೇ ಭಜಿಸುವ ವಾಡಿಕೆಯಿದೆ. ರಾಮನು ಪರಕೀಯ ದಾಳಿಯಿಂದ ನಾಡನ್ನು ಉಳಿಸಿದನು. ಕೃಷ್ಣನ ಕಾಲದಲ್ಲಿ ಪರಕೀಯರ ಹೆದರಿಕೆಯಿಲ್ಲದಿದ್ದರೂ ಸ್ವಕೀಯರ ಅನಾಚಾರ, ಕ್ರೂರ ನಡೆವಳಿಗಳನ್ನು ನಿಷೇಧಿಸಿ, ನಿಗ್ರಹಿಸಿ, ನಾಡಿಗೊಂದು ಹಿರಿದಾದ ಸಮ್ಯಕ್ ತತ್ವಜ್ಞಾನವನ್ನು ಬೋಧಿಸಿ ಅದರ ಪುರಸ್ಕರ್ತನಾಗಿ ಆಜನ್ಮ ಹೆಣಗಿದನು. ಇಂತಹ ಅಮೋಘವಾದ ಉಪಕಾರಗಳಿಗಾಗಿ ಕೃತಜ್ಞತೆಯಿಂದ ಬ್ರಾಹ್ಮಣನೂ ಕ್ಷತ್ರಿಯ ವೀರರನ್ನು ದೇವರಂತೆ ಪೂಜಿಸಹತ್ತಿದ್ದುದು ಕೌತುಕಾಸ್ಪದವಾಗಿದೆ. ಬೀರರ ಪೂಜೆ ನಮ್ಮ ನಾಡವರು ಎಂದಿನಿಂದ ಮಾಡುತ್ತಲೇ ಇದ್ದಾರೆ. ಇಂದ್ರಾದಿ ದೇವತೆಗಳ ಸ್ಥಳದಲ್ಲಿ ರಾಮ, ಕೃಷ್ಣರು ಬಂದರು. ಇದು ಸಾಂಸ್ಕೃತಿಕ ಸಮ್ಮಿಲನದ ದೃಷ್ಟಿಯಿಂದ ಅತ್ಯಂತ ಮಹತ್ವದ ಸಂಗತಿಯಾಗಿದೆ.

ವೈದಿಕ ಋಷಿಗಳು ವೇದಗಳ ಮುಖಾಂತರವಾಗಿ ತಮ್ಮ ಕಾಲದ ಕೆಲವೊಂದು ಚರಿತೆಯನ್ನು ಬರೆದಿರುವುದರ ಬಗೆಗೆ ಸಂದೇಹವೆ ಇಲ್ಲ. ಆದರೆ, ಅವರ ಆ ನಿವೇದನದ ರೀತಿಯು ಬಹಳ ತೊಡಕಿನದಾಗಿದೆ. ಕವಿಗಳು, ಮನೀಷಿಗಳು ಬರೆದ ಕತೆಯದು; ಕೇವಲ ಇತಿಹಾಸವಲ್ಲ. ಆದುದರಿಂದ ಅದು ಒಂದು ಕಾವ್ಯ. ಆದುದನ್ನು ಆದಂತೆಯೆ ಹೇಳದೆ ಅದನ್ನು ರೂಪಕದಿಂದ, ಸಂಕೇತದಿಂದ, ತಾತ್ವಿಕಮಟ್ಟದಿಂದ ಬಗೆಬಗೆಯಾಗಿ ಬರೆದಿರುವರು. ನೆಲದ ಮೇಲಿನ ಸಂಗತಿಯನ್ನು ಹೇಳ ಹೇಳುತ್ತಲೆ ಮುಗಿಲಿಗೆ ಹಾರುವರು. ಋಗ್ವೇದದೊಳಗಿನ ದಾಶರಾಜ್ಞದ ಯುದ್ಧವರ್ಣನೆ (vii ೧೮), ಇಂದ್ರನು ತಮ್ಮನ್ನು ಕಾಪಾಡುವನೆಂಬ ಪ್ರಾರ್ಥನೆ (i ೩೦. ೪); ಮತ್ತು (vii. ೧೮. ೬) ಇಂತಹ ಎಡೆಗಳಲ್ಲಿ ಈ ಮಾತು ನಿದರ್ಶನಕ್ಕೆ ಬರುವುದು. ಋಷಿಗಳು ವರ್ಣಿಸುವುದು ಭೂಮಿಯ

ಮೇಲಿನ ಸಂಗತಿಗಳನ್ನೊ, ಅಥವಾ ಅದ್ಭುತ ಪವಾಡಗಳನ್ನೊ ಇಲ್ಲವೆ ಒಡಪಿನಂತಿರುವ ಸತ್ಯವನ್ನೊ ಏನೆಂಬುದೇ ಗೊತ್ತಾಗುವುದು ಕಷ್ಟವಾಗುತ್ತದೆ. ಇವುಗಳ ಹಿನ್ನೆಲೆಯಲ್ಲಿ ಈ ಲೋಕದ ಕೆಲವೊಂದು ಆಗು-ಹೋಗುಗಳು ಇರುವುದಂತೂ ಮನಸ್ಸಿಗೆ ಹೊಳೆಯುತ್ತಿರುತ್ತದೆ. 'ಬ್ರಾಹ್ಮಣೋSಸ್ಯ ಮುಖಮಾಸೀತ್' ಎಂಬ ಮಂತ್ರವನ್ನು ನೋಡಿದರೆ; ಅದು ಆ ಕಾಲದಲ್ಲಿದ್ದ ಸಮಾಜದೊಳಗಿನ ನಾಲ್ಕು ವರ್ಗಗಳನ್ನು ವರ್ಣಿಸಿದ್ದುದು ಸ್ಪಷ್ಟವಿದೆ. ಆದರೆ, ಆ ವರ್ಣನೆಯ ರೀತಿ ಕಾವ್ಯಮಯವೂ ಸಾಂಕೇತಿಕವೂ ಆಗಿರುವುದರಿಂದ ಅದನ್ನು ವಾಸ್ತವ (Fact) ವೆಂದು ಸ್ವೀಕರಿಸಲಿಕ್ಕೆ ಹಲವರಿಗೆ ಸಂಕೋಚವೆನಿಸುತ್ತದೆ.

ಇಷ್ಟೆಲ್ಲ ವಿವರವನ್ನು ಹೇಳುವುದರ ಕಾರಣವೆಂದರೆ, ನಮ್ಮ ದೇಶದಲ್ಲಿ ಮುಂದಿನ ಕಾಲದಲ್ಲಿ ಬರೆಯಲಾದ ಇತಿಹಾಸಗಳಲ್ಲಿ ಕೂಡ ಎಲ್ಲರೂ ವೈದಿಕಋಷಿಗಳ ಈ ಮಾದರಿಯನ್ನೇ ಅನುಸರಿಸಿದ್ದುಂಟು. ವಾಲ್ಮೀಕಿಯ ರಾಮಾಯಣ, ವ್ಯಾಸರ ಭಾರತಗಳಂತೂ ಸರಿಯೆ. ಬಸವಪುರಾಣ, ಶಂಕರ ದಿಗ್ವಿಜಯ, ಸುಮಧ್ವ ವಿಜಯ, ಪ್ರಭುಲಿಂಗ ಲೀಲೆ ಎಲ್ಲವುಗಳ ಬಗೆಯೂ ಒಂದೇ. ಪ್ರತಿಯೊಬ್ಬರೂ ತಮ್ಮ ತಮ್ಮ ಯೋಗ್ಯತೆಯಂತೆ ಹೇಳುವ ರೀತಿಯಲ್ಲಿ ವೈದಿಕ ಋಷಿಗಳ ಕೃತಿಯನ್ನು ಅನುಸರಿಸುವ ಪ್ರಯತ್ನಪಟ್ಟಿದ್ದಾರೆ.

ನಮ್ಮ ನಾಡಿನ ಸ್ಥಳಪುರಾಣಗಳಲ್ಲೂ ಇದೇ ಹಾಡು. ಈ ಆಲಂಕಾರಿಕ ರೀತಿಯಲ್ಲಿ ಅಲಂಕಾರವಾವುದು, ವಾಸ್ತವವಾವುದೆಂಬುದನ್ನು ಅರಿತುಕೊಳ್ಳುವ ಶಕ್ತಿಯು ನಮ್ಮ ಜನರಲ್ಲಿ ಬರುಬರುತ್ತ ಸಂಪೂರ್ಣವಾಗಿ ಲೋಪವಾಯಿತು. ದೇಶದ ತೀರ ಅಧೋಗತಿಗೆ ಇಳಿದ ಲಕ್ಷಣವದು. ರಾಮನಿಗೆ ಮಂಗಗಳು ನೆರವಾದುವು, ಎಂದೊಡನೆ ಜನ, ಅಲ್ಲಿ ಅವನ್ನು ಮಂಗಗಳೆಂದೇ ನಂಬಿಬಿಟ್ಟುದು ಕಂಡು ಬರುತ್ತದೆ! ನಮ್ಮ ಪಾಲಿಗೆ ಭೂತ(ಕಾಲ)ವು ಇಷ್ಟು ವಿಕೃತವಾಯಿತು. ಅದರಿಂದ, ನಮ್ಮ ನಾಡಿನ ಜನಗಳಲ್ಲಿ ಹಿಂದಿನ ಇತಿಹಾಸದ ಬಗೆಗೆ ವಿಚಾರದ ಸ್ಪಷ್ಟತೆಯು ಉಳಿಯದೆ ಗೊಂದಲಗೇಡಿತನವು ಹೆಚ್ಚಾಯಿತು. ಕಂನಾಡಿನ ಊರೂರಿಗೂ ಒಂದೊಂದು ಕ್ಷೇತ್ರ, ತೀರ್ಥವಿದೆ. ಅವುಗಳ ವಿಷಯಕ್ಕೆ ನೈಜಸಂಗತಿಗಳು ಮರೆಯಲ್ಲುಳಿದು ಅದರ ಮೇಲಿನ ಪವಾಡ, ಅದ್ಭುತ ರಮ್ಯಕತೆಗಳ ಹೊದಿಕೆಯೆ ಹೆಚ್ಚಾಗಿ ಬಿಟ್ಟಿದೆ.

ನಮ್ಮ ನಾಡಿನಲ್ಲಿ ಇಂದ್ರನ ನೆನೆಪು ಕೊಡುವ ಹರೀಂದ್ರಾಳ. ಸುರಪುರ, ಅಮರಾವತಿ., ಅಲಕಾಪುರ ಮೊದಲಾದ ಎಡೆಗಳಿವೆ. ದೇವನೂರು ಮೊದಲಾದ ಸಾಮಾನ್ಯವಾದ ದೇವರ ಹೆಸರಿನ ಸ್ಥಳಗಳಿಗಂತೂ ಮಿತಿಯಿಲ್ಲ. ಯಕ್ಷರ ಹೆಸರಿನ ಊರುಗಳನ್ನು ಹಿಂದೆ ಹೇಳಿದೆ. ಕಿನ್ನರೀಪುರವುಂಟು. ಕಿಂಪುರುಷದ ಹೆಸರೂ ಬರುವುದು ಅಪ್ಸರಗೊಂಡವೆಂಬ ಊರೂ ಇದೆ; ಗಂಧರ್ವಪುರವಿದೆ.

ನಮ್ಮ ನಾಡಿನಲ್ಲಾಳಿದ ರಾಜರ ನೆನಹುಗೊಡುವ ಎಡೆಗಳು ಸಾಕಷ್ಟಿವೆ. ಆದರೆ, ಅವರಲ್ಲಿ ಚಾಲುಕ್ಯರವು ಸರಿಯಾಗಿ ದೊರೆಯುವುದಿಲ್ಲ. ಇವರಿಗೆ ಕುಂತಲಾಧಿಪತಿಗಳೆಂದು ಹೆಸರಿದ್ದಿತು. ಕುಂತಳವೆಂಬುದು ಕ್ರಿಸ್ತಶಕದ ಆರಂಭದಿಂದಲೂ ಕೇಳಬರುತ್ತದೆ. ಚಲುಕ್ಯರಿಂದಲೆ ಆರಂಭವಾದುದಲ್ಲ. ಕುಂತಳವೆಂಬ ಹೆಸರಿನ ಔಚಿತ್ಯವೇನೆಂಬುದರ ಬಗೆಗೆ ಇನ್ನೂ ಚರ್ಚೆಗಳು ಆಗಬೇಕಾಗಿವೆ. ಕುಂತಲವೆಂಬುದು ಕೂಂದಲವೆಂಬುದರ ಸಂಸ್ಕೃತೀಕರಣವೆಂದು ಕಿಟ್ಟೆಲ್ಲರ ಅಭಿಪ್ರಾಯವಿದೆ. ಮೀಸಿಪ್ರಿಯರು ನಮ್ಮ ಹಟ್ಟಿಕಾರರು ಇದರಿಂದ ಈ ನಾಡವರಿಗೆ ಕುಂತಲರೆಂಬ ಹೆಸರು ಬಂದಿರಬಹುದೆ? ಅಥವಾ ಕುಂತಲವೆಂದರೆ ಬರ್ಚಿ, ಈಟಿ ಇದು ಹಟ್ಟಿಕಾರ-ದನಗಾರರ ಕೈಯೊಳಗಿನ ಪ್ರೀತಿಯ ಆಯುಧ. ಈ ಕಾರಣದಿಂದಲೂ ಕುಂತಲರು (ಬರ್ಚಿಧಾರಿಗಳು) ಎಂದು ಹೆಸರು ಬಂದಿರುವ ಸಂಭವವಿದೆ.

ಕದಂಬ ದಶಸಹಸ್ತ ನಾಡಿನ ಹೆಸರು ಬರುವುದು; ಕಂದಬರಿಗೆ ನಾಡು, ಕದಂಬಗಟ್ಟ, ಕದಂಬಪುರ, ಕದಂಬೂರು, ಕದಂಬೆಹಳ್ಳಿಗಳೆಂಬ ಉಲ್ಲೇಖಗಳು ಶಾಸನಗಳಲ್ಲಿ ದೊರೆಯುತ್ತವೆ. ಗಂಗನಾಡು, ಗಂಗಪಾಡಿ, ಸಾತವಾಹನಿ ಹಾರ, ಸಾತವಾಹನಿ ರಠ, ರಟ್ಟಪಾಡಿ, ಲಟ್ಟಲೂರು ಮುಂತಾದುವು. ಹೊಯಿಸಳನಾಡು,

ಹೊಯಿಸಣಕಟ್ಟೆ, ಹೊಯಿಸಳಗಟ್ಟ ಮುಂತಾದುವು ಆಯಾ ರಾಜರ ಕುರುಹುಗಳು. ವಿಜಯನಗರದವರ ಕುರುಹುಗಳು ಇನ್ನೂ ಒಂದು ಬಗೆಯವಾಗಿವೆ. ಈ ರಾಜರಿಗೆ ಕರ್ಣಾಟ ಸಿಂಹಾಸನಾಧೀಶ್ವರರೆಂದು ಹೇಳುವ ವಾಡಿಕೆಯ ಮೂಲಕ ಇವರು ಆಳುತ್ತಿರುವ ಹೊರಗಿನ ಭಾಗಕ್ಕೂ 'ಕರ್ಣಾಟ'ವೆಂಬ ಹೆಸರು ಬಂತು. ಅರ್ಕಾಟದ ಭಾಗಕ್ಕೆ ಕರ್ಣಾಟವೆಂಬ ಹೆಸರು ಬರಲು ಇದೇ ಕಾರಣ. ಈ ರಾಜರಲ್ಲಿ ಹಲಕೆಲವು ಆರಸು-ಅರಸಿಯರ ವೈಯಕ್ತಿಕ ಹೆಸರಿನ ಪಟ್ಟಣಗಳು ಉಂಟು. ಇವರು ಕಟ್ಟಿಸಿದ ಬಸದಿ, ಗುಡಿ, ಕೆರೆ ಮೊದಲಾದುವುಗಳಿಗೂ ಇವರಿಂದ ಬಂದ ಹೆಸರುಗಳಿವೆ.

ರಕ್ಕಸ-ತಂಗಡಯಂತಹ ಆದೆಷ್ಟೊ ಘೋರಸಂಗ್ರಾಮಗಳು ಆಗಿದ್ದರೂ 'ಕುರುಕ್ಷೇತ್ರ' ದಂತೆ, 'ಪಾಣಿಪತ್ತಿ'ನಂತೆ ರಣಭೂಮಿಯೆಂಬ ಹೆಸರಿನಿಂದ ಪ್ರಸಿದ್ಧಿಯನ್ನು ಹೊಂದಿ ಕಾಳಗದ ಕಣಗಳ ನೆನೆಹು ವಿಶೇಷವಾಗಿ ಉಳಿದುಕೊಂಡು ಬಂದಿಲ್ಲ, ರಾಜರ, ರಾಯರ ಊರುಗಳು ಅವರ ನಿಯೋಗಿಗಳ ಊರುಗಳು ಇವೆ.

ಸಮಾಜ

ಚಾತುರ್ವರ್ಣಗಳು, ಚತುರಾಶ್ರಮಗಳು ನಮ್ಮ ಸಮಾಜದ ವೈಶಿಷ್ಟ್ಯವೆಂದು ಹೇಳಲ್ಪಡುವುದಾದರೂ ಎಂದಾದರೂ ಕೇವಲ ನಾಲ್ಕೇ ವರ್ಣಗಳು ಇದ್ದುವೆಂದು ನಂಬುವುದಕ್ಕೂ ಕಷ್ಟವಾಗಿದೆ. ವೇದದಲ್ಲಿಯೆ ನಿಷಾಧಾದಿ ಹಲವು ಬೇರೆ ಜಾತಿಗಳ ಹೆಸರು ಬರುತ್ತವೆ. ಜಾತಿಗಳು ಎಷ್ಟೇ ಇದ್ದರೂ ಅವನ್ನೆಲ್ಲ ನಾಲ್ಕು ವರ್ಗಗಳಲ್ಲಿ ವಿಂಗಡಿಸಬಹುದೆಂದು ಕೆಲರ ಅಭಿಪ್ರಾಯವಿರಬಹುದು. ಹಾಗಾದಲ್ಲಿ ಜಾತಿ ಮತ್ತು ವರ್ಣಗಳನ್ನು ಬೇರೆ ಬೇರೆಂದು ಎಣಿಸಬೇಕಾಗುವುದು. ಗೀತೆಯಲ್ಲಿ ಹೇಳಿದಂತೆ ಗುಣ ಮತ್ತು ಕರ್ಮದಿಂದ ವರ್ಣಗಳನ್ನು ನಿರ್ಧರಿಸುವುದಾದರೆ ಹಾಗೆ ಮಾಡಲು ಅಡ್ಡಿಯಿಲ್ಲ. ಆದರೆ, ತಕ್ಕ ಗುಣ ಮತ್ತು ಕರ್ಮದ ಆವಶ್ಯಕತೆಯಿಲ್ಲದೆ ಹುಟ್ಟಿನೊಡನೆಯೆ ಶ್ರೇಷ್ಠ ಜಾತಿಯವರೆಂದೆನಿಸಿಕೊಳ್ಳುವುದಕ್ಕೆ ಸಿಕ್ಕುವವರು, ಗೀತೆಯ 'ಚಾತುರ್ವರ್ಣ್ಯಂ ಮಯಾಸೃಷ್ಟಂ ಗುಣಕರ್ಮ ವಿಭಾಗಶಃ' ಎಂಬ ವಾಕ್ಯಕ್ಕೆ ಬೇರೆ ಅರ್ಥ ಹಚ್ಚಿದ್ದರೆ ಸೋಜಿಗವಲ್ಲ. ಬ್ರಾಹ್ಮಣ ಮಗನು ಬ್ರಾಹ್ಮಣ, ರಾಜನ ಮಗನು ರಾಜ, ಗೌಡನ ಮಗನು ಗೌಡನಾಗಿಯೆ ಉಳಿಯಲು ಹಂಬಲಿಸುವುದು ಸ್ವಾಭಾವಿಕವಾಗಿದೆ. ಇದರಿಂದ ವರ್ಣಗಳೂ ಜಾತಿಗಳೇ ಆದುವು.

ಅನೇಕ ಜಾತಿಗಳು ಉದ್ಯೋಗ, ವ್ಯವಸಾಯಗಳಿಂದಲೆ ಹುಟ್ಟಿವೆ. ಮಗನಿಗೆ ತೀರ ಹೊಸವಿದ್ಯೆ ಕಲಿಯುವುದಕ್ಕಿಂತ ತಂದೆಯ ಉದ್ಯೋಗವನ್ನು ನಡೆಸುವುದು ಹೆಚ್ಚು ಅನುಕೂಲವಾಗಿರುವುದರಿಂದ ಒಂದೊಂದು ಕಸಬೂ ಒಂದೊಂದು ಜಾತಿಯ ಸೊತ್ತಾಯಿತು. ಈ ಕಸಬುಗಳನ್ನು ಬದಲಿಸಲು ಸಾಮಾನ್ಯವಾಗಿ ಸಾಮಾಜಿಕ ವಿರೋಧವು ಕಂಡುಬಂದುದರಿಂದಲೂ, ಅದಕ್ಕೆ ಹಲವೆಡೆಗೆ ರಾಜನ ಬೆಂಬಲವೂ ದೊರಕಿದ್ದರಿಂದಲೂ ಒಂದೊಂದು ಬಗೆಯವರಲ್ಲಿ ಒಂದು ಹೋರೆಯು ತಲೆತಲಾಂತರಗಳಿಂದ ನಡೆದು ಬಂದುದುಂಟು. ಇಂತಹ ಬೇರೆ ಬೇರೆ ಕಸಬಿನವರು ಮುಖ್ಯರಾಗಿರುವುದರಿಂದ ಹಲವು ಊರುಗಳಿಗೆ ಅವರ ಹೆಸರುಗಳೇ ಬಂದುದನ್ನು ಕಾಣಬಹುದು. ಅಂತಹ ಊರುಗಳು ಆ ಕಸುಬಿನವರ ಜಾಣ್ಮೆಗಾಗಿ ಉಂಬಳಿಯಾಗಿ ದೊರೆತುವೂ ಇರಬಹುದು

ಹಿಂದಿನ ಸಾಮಾಜಿಕ ಜೀವನದಲ್ಲಿ ಗುಂಪುಗೂಡಿ, ತಂಡಗಳಾಗಿ ಬಾಳುವುದು ಆವಶ್ಯಕವೆ ಆಗಿದ್ದಿತು. ಗಣಗಳಾಗಿರುತ್ತಿದ್ದರು. ಇದು ಹಟ್ಟಿಕಾರರ ವೈಶಿಷ್ಟ್ಯ. ಗಣಗಳಲ್ಲಿ ರಾಜಪದ್ಧತಿಯಿದ್ದಿಲ್ಲ. ಒಬ್ಬ ಹಿರಿಯನನ್ನು ಆರಿಸಿಕೊಂಡು ಒಂದು ಕುಟುಂಬಿಯರಂತೆ ಇರುತ್ತಿದ್ದರು. 'ದೈವದವರು,' ಕೂಡಿ ಸಮಾಜವನ್ನು ಆಳುವುದು ಎಂದಿನಿಂದಲೂ ಬಂದ ವಾಡಿಕೆ. ಪುರಾತನಕಾಲದ ಯಾದವರಲ್ಲಿ ಇದೇ ಬಗೆಯಾದ ನಡೆವಳಿಯಿದ್ದುದು ಮಹಾಭಾರತಾದಿಗಳಿಂದ ಗೊತ್ತಾಗುತ್ತದೆ. ವೃಷ್ಣಿಗಳಲ್ಲಿ ರಾಜನಿಲ್ಲ (ಶಾಂತಿ ಪ. ೩೭೫). ಯದು-ತುರ್ವರಿಗೆ

'ಅರಾಜಭಾಕ್' ರಾಗಿರೆಂದು ಒಂದು ಶಾಪವಿದ್ದಂತೆ ಹೇಳಿದೆ. ಆದರೆ, ವಾಸ್ತವ ಸತ್ಯವನ್ನು ಶಾಪದ ನಿಮಿತ್ತದಿಂದ ಹೇಳಿದ ಹಾಗಿದೆ. ಕಂದಮಿಳ ಭಾಷೆಯಲ್ಲಿ 'ರಾಜ' ಶಬ್ದವಿಲ್ಲವೆಂದು ಕಂಡು ಬರುತ್ತಿರುವುದಕ್ಕೂ ಇದೇ ಕಾರಣವಿರಬೇಕು. ಕೃಷ್ಣನು ಯಾದವರ ಒಂದು ಗುಂಪಿನ ಅಧ್ಯಕ್ಷರಾಗಿದ್ದನು. 'ಹಿಂದೂ ಪೊಲಿಟಿ' ಎಂಬ ಗ್ರಂಥದಲ್ಲಿ ಶ್ರೀ ಜಯಸ್ವಾಲರು ಇದನ್ನು ಸವಿಸ್ತಾರವಾಗಿ ಸಾಧಾರವಾಗಿ ಚರ್ಚಿಸಿದ್ದಾರೆ (ಪು. ೩೬).

ನಾಡಿಗೆ ಯಾವ ರಾಜರೆ ಒಡೆಯರಾಗಿರಲಿ; ಹಳ್ಳಿಪಳ್ಳಿಗಳಲ್ಲಿ ಈ ಬಗೆಯ ಪ್ರಜಾಪ್ರಭುತ್ವದ ಆಡಳಿತವೆ ಎಂದಿನಿಂದಲೂ ನಮ್ಮಲ್ಲಿ ನಡೆದುಬಂದಿದೆ. ಬ್ರಿಟಿಶರು ಈ ಪದ್ಧತಿಯನ್ನು ಬುದ್ಧಿಪೂರ್ವಕವಾಗಿ ಮುರಿದುಬಿಟ್ಟರು. ಹಟ್ಟಿಗಳಲ್ಲಿ ಹಟ್ಟಿಕಾರ ಜನದೊಡನೆ ಬೇರೆ ಪಂಗಡಗಳೂ ಜಾತಿ ಮತಗಳೂ ವ್ಯಾಪಾರ ಉದ್ಯೋಗಗಳೂ ಬೆಳೆದುಬಂದಂತೆ ಅವರ ಸಮಿತಿ, ಸಂಘಗಳು ನಿರ್ಮಾಣವಾದುವು. ಅವರೆಲ್ಲರೂ ಪರಸ್ಪರರ ಸಹಕಾರದಿಂದ ತಮ್ಮ ಬಾಳನ್ನು ನಡೆಸಿಕೊಂಡು ಬರುತ್ತಿದ್ದರು. ಶಿಲಾಶಾಸನಗಳಲ್ಲಿ ಈ ಬಗೆಯ ಜೀವನ ಚಿತ್ರಗಳು ಬೇಕಾದಷ್ಟು ದೊರೆಯುತ್ತವೆ. ಊರ ರಕ್ಷಣೆಗಾಗಿ, (ಊರ ತುರುಗಳನ್ನು ಹರಿಸಿಕೊಂಡೊಯ್ದವರನ್ನು ಎದುರಿಸಿ) ತನ್ನ ಜೀವವನ್ನು ಧಾರೆಯೆರೆಯಲು ಅಂಜದ ವೀರರ ಸ್ಮಾರಕಗಳು ಸಿಕ್ಕುತ್ತವೆ. ಇಂತಹ ವೀರಬಂಟರ ಹೆಸರಿನ ಊರುಗಳು ಇವೆ. ಊರ 'ಮಹಾಜನರು', ಗ್ರಾಮದ 'ಸಮಸ್ತ ಹಲರು' ಕೂಡಿ ತಮ್ಮೂರ ಆಡಳಿತವನ್ನು ನಡೆಸುತ್ತಿದ್ದರು. ಇದರಿಂದ ಪ್ರತಿಯೊಂದು ಹಳ್ಳಿಯಲ್ಲಿ ಒಂದು ಗಣರಾಜ್ಯವು ಆಚರಣೆಯಲ್ಲಿತ್ತು. 'ಗಣ' ಶಬ್ದವು ಸಂಸ್ಕೃತವಲ್ಲವೆಂದೂ ಕಂದಮಿಳ (ದ್ರಾವಿಡ) ವರ್ಗಕ್ಕೆ ಸೇರಿದುದೆಂದೂ ಡಾ. ಸುನೀತಿಕುಮಾರ ಚಟರ್ಜಿಯವರ ಅಭಿಪ್ರಾಯವಿದೆ.

ಕುಟುಂಬ ಪದ್ಧತಿ

ಹಟ್ಟಿಕಾರರಲ್ಲಿ ಹೆಣ್ಣುದೇವರ ಆರಾಧನೆ ವಿಶೇಷ. ಆರ್ಯರಲ್ಲಿ ದೇವೀಪೂಜೆಗೆ ಪ್ರಾಧಾನ್ಯವಿಲ್ಲ. ಕುಟುಂಬ ಪದ್ಧತಿಯಲ್ಲಿಯೂ ಈ ವ್ಯತ್ಯಾಸವು ಕಂಡುಬರುತ್ತದೆ. ಮಾತೃ ಪ್ರಧಾನವಾದ ಕುಟುಂಬ ಪದ್ಧತಿಯು ಹಟ್ಟಿಕಾರರದು. ಅಳಿಯ ಸಂತಾನದ ಕಟ್ಟು, ತುಳುವ ನಾಡವರಲ್ಲಿ ಈಗಲೂ ಉಂಟು. ಮಗಳ ಮಗನೆ ಮನೆಯ ಒಡೆಯನಾಗತಕ್ಕವನು. ಮಗನು ಹೊರಗಿನವನಾಗುತ್ತಾನೆ. ಅದರಿಂದ, ಅಳಿಯ ಮತ್ತು ಮಾವಂದಿರಲ್ಲಿ ಈರ್ಷ್ಯೆ-ಅಸೂಯೆಗಳಿಗೆ ಇಂಬುದೊರೆಯುವುದು ಸಹಜ. ಕೃಷ್ಣ ಮತ್ತು ಕಂಸರಲ್ಲಿ ಇದು ಹುಟ್ಟಿಕೊಳ್ಳಲು ಇದುವೆ ಮುಖ್ಯ ಕಾರಣ. ಆದರೆ, ಅಳಿಯ ಸಂತಾನದ ಕಟ್ಟನ್ನು ಅರಿಯದವರಿಗೆ ಅವರೊಳಗಿನ ಈ ಹುಟ್ಟು ಹಗೆತನದ ಅರ್ಥ ಆಗದು. ಅಭಿಮನ್ಯುವು ಮುಂದೆ ತನ್ನನ್ನು ಕೊಲ್ಲಬಹುದೆಂಬ ಹೆದರಿಕೆಯಿಂದ ಕೃಷ್ಣನು ಆತನನ್ನು ರಣದಲ್ಲಿಯೆ ಮಡಿಯಗೊಟ್ಟನೆಂದು ಜಾನಪದಗೀತದಲ್ಲಿ ಕೇಳಲು ದೊರೆಯುತ್ತದೆ. ಈ ಕಾರಣದಿಂದ ಯಾದವರು ಆರ್ಯೀಕರಣದಲ್ಲಿ ಆರ್ಯರಂತೆ ಪಿತೃಪ್ರಧಾನ ಕುಟುಂಬ ಪದ್ಧತಿ ಮೊದಲಾದ ನಡೆವಳಿಗಳನ್ನು ಸ್ವೀಕರಿಸಲಾರಂಭಿಸಿದ್ದರೂ ಹಳೆಯ ರೂಢಿಗಳು ಒಮ್ಮೆಲೆ ಹೋಗುವುದಿಲ್ಲ. ತುಳುನಾಡವರಲ್ಲಿ ಅಳಿಯ ಸಂತಾನದ ಕಟ್ಟು ಈಗಲೂ ಇದೆ. ನುಡಿವಳಿಯೊಳಗಿನ 'ಅಳಿಯ', 'ಅತ್ತಂ', 'ಮಾವ', 'ಸೊಸೆ' ಎಂಬ ಮಾತುಗಳು (ಅಕ್ಕನ ಮಗ, ಅಕ್ಕ, ಅಕ್ಕನ ಗಂಡ, ತಮ್ಮನ ಮಗಳು ಇವರಿಗೆ ಇರುವ ಹೆಸರುಗಳು) ಹಾಗೆಯೆ ನಡೆದುಬಂದಿವೆ. ಸಂಸ್ಕೃತದ ಬಂಧುವಾಚಕ ಪದಗಳಲ್ಲಿ ಈ ಬಗೆಯ ವೈವಾಹಿಕ ಸಂಬಂಧವನ್ನು ತೋರಿಸುವ ಪದಗಳು ಇಲ್ಲ. ಅಕ್ಕನ ಮಗನಿಗೆ ಜಾಮಾತೃ (ಅಳಿಯ)ನೆಂದು ಕರೆವ ವಾಡಿಕೆಯಿಲ್ಲ. ಇಷ್ಟೆ ಅಲ್ಲ, ಮಾತುಲ ಕನ್ಯಾವಿವಾಹವನ್ನು ಸ್ಮೃತಿಗಳು ನಿಷೇಧಿಸುತ್ತವೆ. ಆದರೂ ದಕ್ಷಿಣಾಪಥದ ಎಂದರೆ ಹಟ್ಟಿನಾಡಿನ ಬ್ರಾಹ್ಮಣರಲ್ಲಿ ಈ ನಡೆವಳಿ ಸೇರಿಕೊಂಡಿದೆ. ಔತ್ತರೇಯರಲ್ಲಿ ಇದು ಇಲ್ಲ.

ಬ್ರಾಹ್ಮಣರಲ್ಲಿ ಪಿತೃಪ್ರಧಾನ ಕುಟುಂಬ ಪದ್ಧತಿಯುಂಟು. ಹೆಣ್ಣುಮಕ್ಕಳಿಂದ ವಂಶದ ಹೆಸರು ಹೇಳುವ ವಾಡಿಕೆಯು ಇಲ್ಲ. ಆದರೆ, ಅದು ನಮ್ಮ ನಾಡಿಗರಲ್ಲಿ ಕಂಡುಬರುತ್ತದೆ. ಸಾತವಾಹನರಲ್ಲಿ ಗೋತಮೀ ಪುತ್ರ, ವಾಸಷ್ಠಿ ಪುತ್ರರಿದ್ದಾರೆ. ಪ್ರೊ. ಕುಂದಣಗಾರರು ತಾವು ಸಂಪಾದಿಸಿದ ಶಾಸನದ ಮುನ್ನುಡಿಯಲ್ಲಿ ಸೂಚಿಸಿರುವಂತೆ ನಮ್ಮಲ್ಲಿ ಹನುಮಕ್ಕನವರ, ಮಾಯನಕ್ಕನವರ, ಭಾಯವ್ವನವರ ಎಂದು ಮುಂತಾಗಿ ಕುಟುಂಬದ ಹೆಸರುಗಳು

ಬಳಕೆಯಲ್ಲಿವೆ (ಪು. ೨೮). ಮತ್ತು ಮುತ್ತಗೆ (ವಿಜಾಪೂರ ಜಿ.) ಯ ಮಲ್ಲಿಕಾರ್ಜುನ ಗುಡಿಯಲ್ಲಿರುವ ಶಾಸನದಿಂದ ಇಂತಹ ಎರಡು ಉದಾಹರಣಗಳನ್ನೂ ಎತ್ತಿತೋರಿಸಿದ್ದಾರೆ (ಪು. ೫೧, ೫೨). ಈ ಶಾಸನವು ಕ್ರಿ. ಶ. ೧೧೬೬ ಸುಮಾರಿನದು. ಅದರಲ್ಲಿ ಸಿರಿದೇವಿಯಕ್ಕನ ಮಗ ಬಾಚಯ್ಯನು, ಹೊಂನಿಯಕ್ಕನ ಮಗ ಮುದ್ದಯ್ಯನು ಉಲ್ಲೇಖಿತರಾಗಿದ್ದಾರೆ. ಕುರುವರಲ್ಲಿ ಮತ್ತು ಯಾದವರಲ್ಲಿ ಈ ಪದ್ಧತಿಯೆ ರೂಢಿವಾಗಿತ್ತು. ದೇವಕೀ ನಂದನ ಕೃಷ್ಣ, ಪಾರ್ಥ, ಕೌಂತೇಯ, ಕುಂತಿಭೋಜ ಮೊದಲಾದ ಹೆಸರುಗಳು ಈ ಬಗೆಯವೆ ಆಗಿವೆ.

ಕಂನಾಡಿನಲ್ಲಿರುವ ಬಳಗದವರಿಂದ ಬಂದ ಹೆಸರಿನ ಊರುಗಳನ್ನು ಅಭ್ಯಾಸ ಮಾಡುವಹಾಗಿದೆ (ಪು. ೨೨). ಗಂಡಸರ ಹೆಸರಿನ ಊರುಗಳಿಗಿಂತಲೂ ಹೆಣ್ಣುಮಕ್ಕಳ ಸಂಬಂಧ ಇದುವೆ ಹೆಚ್ಚಿವೆ. ಅಕ್ಕಲಕೋಟೆ, ಅಕ್ಕವಳ್ಳಿ, ಅಕ್ಕೂರು, ಅಕ್ಕತಂಗಿಯರಹಾಳ, ಮಗಳೂರು ಇವೆ ಹೆಚ್ಚು. ವ್ಯಕ್ತಿಯ ಹೆಸರುಗಳಿಂದ ಬಂದ ಊರುಗಳು ಗಂಡಸರುವೆ ಇರುವುದು ಎಲ್ಲ ಪ್ರಾಂತಗಳಲ್ಲಿ ವಾಡಿಕೆ. ಆದರೆ ನಮ್ಮಲ್ಲಿ ಹೆಣ್ಣುಮಕ್ಕಳ ಹೆಸರುಗಳಿರುವ ಊರುಗಳು ಅದೆಷ್ಟೊ ಇವೆ! ಐತಿಹಾಸಿಕ ಮಹತ್ವದ ಸುವಿಖ್ಯಾತ ಹೆಣ್ಣುಮಕ್ಕಳ ಹೆಸರಿನ ಊರುಗಳಿದ್ದರೆ ಸೋಜಿಗಕ್ಕೆ ಕಾರಣವಿದ್ದಿಲ್ಲ. ನೀಲವ್ವ, ಸಿದ್ದವ್ವ, ದ್ಯಾಮವ್ವ, ಪಾಲವ್ವ, ಮಲ್ಲಕ್ಕನಂತಹ ಸಾಮಾನ್ಯ ಗರತಿಯರ ಹೆಸರಿನ ಹಳ್ಳಿಗಳು ಇಷ್ಟು ಇದ್ದುದು ಬೇರೆ ಪ್ರಾಂತದಲ್ಲಿ ನನ್ನ ಕಣ್ಣಿಗೆ ಬಿದ್ದಿಲ್ಲ. ಆಡಳಿತಕ್ಕಾಗಿ, ತಿಳಿವಿಗಾಗಿ, ದಾನಕ್ಕಾಗಿ, ಪರಾಕ್ರಮಕ್ಕಾಗಿ ಹೆಸರಾಂತ ಹೆಣ್ಣುಮಕ್ಕಳ ಹೆಸರುಗಳು ನಮ್ಮ ಪ್ರಾಂತದ ಇತಿಹಾಸದಲ್ಲಿ ಬಹಿರಂಗವಾಗಿ ಮುಂದೆ ಬಂದಿರುವಷ್ಟು ಬೇರಿನ್ನಾವ ಪ್ರಾಂತದಲ್ಲೂ ಕಾಣುವುದಿಲ್ಲವೆಂದು ನನ್ನ ತಿಳುವಳಿಕೆಯಾಗಿದೆ.

ಕೊಲ್ಲಾಪೂರ ಸಂಸ್ಥಾನದಲ್ಲಿ ಅತ್ಯಾಳ, ಆಕನೂರ, ಆಕುರ್ಡೆ, ತಮನಾಕ (ತಮ್ಮನಾಯಕ) ವಾಡಿ, ಕಲನಾಕ (ಕಲ್ಲನಾಯಿಕ) ವಾಡಿ, ಕೂಸೂರು ಎಂಬೂರುಗಳಿವೆ. ಇದು ಮರ್‍ಹಾಟಿ ಸಂಸ್ಥಾನವೆಂದೆನಿಸಿದರೂ ಬುಡಕಟ್ಟು ಎಲ್ಲವೂ ಕಂನಾಡಿನದೆಂಬುದನ್ನು ಈ ಊರುಗಳೇ ಹೇಳುವುವು. ಇಲ್ಲಿಯೂ ಒಂದು ಕಾನಡೇವಾಡಿಯುಂಟು. ಖಾನದೇಶದಲ್ಲಿ ನವರಾ, ನವರಿ, ಲೇಕುರವಾಳಿಗಳೆಂಬ (ಗಂಡನೂರು, ಮದುಮಕ್ಕಳ ಊರು, ತಾಯೂರು, ಮಗಳೂರುಗಳು) ಊರು ಇವೆ.

ಬುಗಡಿ, ಬಂಕಿಹಾಳ ಎಂಬ ಎರಡು ಊರುಗಳು ಆ ಅಲಂಕಾರದ ಹೆಸರಿನಿಂದ ಬಂದವೊ ಎಂಬುದು ನಿಶ್ಚಿತವಾಗಿ ತಿಳಿಯದು. ಬಳೆವಾಡ, ಬಳಗಾನೂರು ಕಂಕಣವಾಡಿಗಳು ಬಳೆಯ ನೆನೆಪನ್ನು ಕೊಡುತ್ತವೆ. ನಮ್ಮ ನಾಡಿಗರ ಉಡುವು ಮತ್ತು ತೊಡವುಗಳ ಕ್ರಮವಾದ ಇತಿಹಾಸವು ತಿಳಿದರೆ, ಆಹಾರ ವಸ್ತುಗಳಂತೆ ಇದರಲ್ಲಿಯೂ ನಮ್ಮಲ್ಲಾದ ಆಶ್ಚರ್ಯಕರವಾದ ಎಷ್ಟೋ ಮಾರ್ಪಾಟುಗಳು ಗೊತ್ತಾಗುವುವು. ಈ ದೃಷ್ಟಿಯಿಂದ ಮಾನಸೋಲ್ಲಾಸ ವೆಂಬ ಗ್ರಂಥವು ಬಹಳ ಅಭ್ಯಸನೀಯವಾಗಿವೆ. ನತ್ತು ಮತ್ತು ಮೂಗುತಿಗಳು, ಇಂದು ಮಹತ್ವದ ಸೌಭಾಗ್ಯಾಲಂಕಾರ ಗಳೆಂದು ನಂಬುಗೆಯಾಗಿದೆ. ಆದರೆ, ಈ ಅಲಂಕಾರಗಳು ಸುಮಾರು ೧೦ನೆಯ ಶತಮಾನಕ್ಕೆ ಹಿಂದೆ ಇರಲಿಲ್ಲವೆಂದು ಶ್ರೀ ಪಿ. ಕೆ. ಗೋಡೆಯವರು ಸಪ್ರಮಾಣವಾಗಿ ಸ್ಥಾಪಿಸಿದ್ದಾರೆ. ಹಂಪೆಯ ವಿರುಪಾಕ್ಷ ದೇವಾಲಯದಲ್ಲಿ ಬರೆದ ಗಿರಿಜಾಕಲ್ಯಾಣದ ಚಿತ್ರಗಳಲ್ಲಿ ಹೆಣ್ಣುಮಕ್ಕಳ ಮೂಗಿನಲ್ಲಿ ನತ್ತು ಇದೆ. ಆದರೆ, ಅಜಂತಾ, ಎಲ್ಲೂರು, ಅಥವಾ ಬಾದಾಮಿಯ ಸ್ತ್ರೀಮೂರ್ತಿ ಚಿತ್ರಗಳಲ್ಲಿ ಇದು ದೊರೆಯದು. ಇದು ಹೊರಗಿನಿಂದ ಬಂದ ಅಲಂಕಾರ. ಕಿವಿಯ ಓಲೆಗಳು ಮುತ್ತೈದೆತನದ ಮುಖ್ಯ ಚಿಹ್ನವೆಂದು ಹಿಂದೆ ನಂಬುಗೆಯಿದ್ದುದಕ್ಕೆ ಸಾಹಿತ್ಯದಲ್ಲಿ ಆಧಾರಗಳಿವೆ. ಓಲೆಭಾಗ್ಯ, ತನ್ನ ಓಲೆಯನ್ನು ಕಾಯಬೇಕು; ಎಂಬೀ ಬಗೆಯ ಪಡೆನುಡಿಗಳು ಪಂಪ, ಕುಮಾರವ್ಯಾಸರಲ್ಲಿ ಬಂದಿವೆ.

ಸೋನಾರಹಳ್ಳಿ ಮಯಸಾಂದ್ರಗಳು ವಿಶ್ವಕರ್ಮ ವಿದ್ಯಾವಿಶಾರದರ ನೆನಹು ಕೊಡುವುವು. ಕಂನಾಡಿನ ಮೇಧಾವಿ ಜನಗಳಲ್ಲಿ ಸೊನ್ನಗಾರರಿಗೆ, ಕಮ್ಮಾರರಿಗೆ, ಉಪ್ಪಾರರಿಗೆ, ಬಡಿಗರಿಗೆ ಅತ್ಯಂತ ಮಹತ್ವದ ಒಂದು ಸ್ಥಾನವಿದೆ. ಆದರೆ ಈ ಜನಕ್ಕೆ ಇತ್ತೀಚಿನ ಕಾಲದಲ್ಲಿ ತಮ್ಮ ಪರಂಪರಾಗತ ವಿದ್ಯೆಯನ್ನು ಉಳಿಸಿಕೊಂಡು, ಬೆಳಿಸಿಕೊಂಡು ಮುಂದೆ ಬರಲು ಏನೂ ಇಂಬು ದೊರೆಯದೆ ಹೋದುದರಿಂದ ನಮ್ಮ ನಾಡಿಗೆ ಅಪಾರ ಹಾನಿಯಾಗಿದೆ. ಸೂಕ್ಷ್ಮ ಕೆತ್ತನೆಯ ಕೆಲಸದಲ್ಲಿ, ಯಂತ್ರಾದಿಗಳನ್ನು ನಿರ್ಮಿಸುವಲ್ಲಿ ಇವರಿಗಿರುವ ಹುಟ್ಟು

ಪ್ರತಿಭೆಯನ್ನು ಕಂಡು ಯಾರಾಗಲಿ ಬೆರಗಾಗುವಂತಿದೆ. ಆದರೆ, ಅದಕ್ಕೆ ವಿಶೇಷ ಉತ್ತೇಜನವಿಲ್ಲದೆ ಮೂಲೆ ಗುಂಪಾಗುತ್ತಿದೆ. ನಮ್ಮ ನಾಡಿನ ಗುಡಿಗೋಪುರಗಳ ಮಯಸೃಷ್ಟಿಯ ನಿರ್ಮಾತೃಗಳು ಇವರೇ ಆಗಿದ್ದಾರೆ.

ಖಾನದೇಶದಲ್ಲಿ ಧೋತ್ರೆ ಎಂಬ ಊರಿದ್ದು ಅದಕ್ಕೂ ಆ ಬಟ್ಟೆಯ ಹೆಸರಿಗೂ ಏನು ಸಂಬಂಧವೊ ತಿಳಿಯದು. ಧೋತ್ರ ಶಬ್ದವು ನನ್ನ ತಿಳುವಳಿಕೆಯಂತೆ ಕುಮಾರವ್ಯಾಸನಲ್ಲಿಯೆ ಮೊದಲು ದೊರೆಯುತ್ತಿದೆ. ಹರಿಹರನ ರಗಳೆಯ ಗಂಡಸಿನ ವರ್ಣನೆಯಲ್ಲಿ ಅವನು ಸೀರೆಯನ್ನುಟಂತೆ ಹೇಳಿದೆ. 'ಶೀರೆ' ಎಂದರೆ ಚೀರ; ನಾರಿನ ಬಟ್ಟೆ; ಅಥವಾ ತುಂಡು ವಸ್ತ್ರ. ಅಮ್ಮ ಶಬ್ದದಂತೆ ಶೀರೆಯೂ ಸಂಕುಚಿತಾರ್ಥವನ್ನು ತಾಳಿತು. ರನ್ನ ಕವಿಯು ಅಮ್ಮ ಶಬ್ದವನ್ನು ಪುಲ್ಲಿಂಗದಲ್ಲಿ ಬಳಸಿದ್ದಾನೆ. ಅಯ್ಯಮ, ಅಲ್ಲಮಾದಿ ಹೆಸರುಗಳಲ್ಲಿ ಕೊನೆಗೆ ಅಮ್ಮವೇ ಇದೆ. ಇದು ಈಗ ಕೇವಲ ಸ್ತ್ರೀವಾಚಕವಾಗಿದೆ. ಬಿಗಿದು ಸುತ್ತುವಲ್ಲಿ ಸೀರೆ, ಚೀರವೆ ದಟ್ಟಿಯೆನಿಸುವುದು. ಸಡಿಲಾದ ಚಲ್ಲಣವನ್ನುಡುವುದು ವಾಡಿಕೆಯಿದ್ದಂತೆ ಪಂಪಭಾರತದಿಂದ ತಿಳಿದು ಬರುತ್ತದೆ. ಕರ್ಣನು ಕಾಳಗಕ್ಕೆ ಹೊರಟಾಗ 'ಪಾಲ್ಗಡಲ ತೆರೆಯ ನೊರೆಯ ದೊರೆಯದು ಕುಲಾಂಬರದೊಳ್ ಇಂಬಾಗಿ ಚಲ್ಲಣಮಂ ಉಟ್ಟು'ಕೊಂಡಿದ್ದನೆಂದು ಅಲ್ಲಿ ವರ್ಣಿಸಿದೆ.

ಸೀರೆಯ ಹೆಸರಿನ ಊರುಗಳಿಲ್ಲವಾದರೂ ಕೆಲವು ಊರುಗಳನ್ನು ಉಚ್ಚರಿಸಿದೊಡನೆ ಸೀರೆಯನ್ನು ನೆನೆದಂತೆಯೆ ಇದೆ. ಪೈಠಣ, ಇಳಕಲ್ಲು, ಧರ್ಮಾವರಂ ಮುಂ. ಕಂನಾಡಿನ ಜಾಡರು, ದೇವಾಂಗದವರೂ ತಮ್ಮ ಕೌಶಲದಿಂದ ಒಂದು ಕಾಲಕ್ಕೆ ಬಹಳ ಖ್ಯಾತಿಯನ್ನು ಪಡೆದಿದ್ದರು. ಈ ನಾಡಿನ ಸಂಪದಭಿವೃದ್ಧಿಯನ್ನು ಮಾಡಿದ್ದರು. ಪೈಠಣದಿಂದ ಇವರು ಗುಳೆಯೆದ್ದು ಬಾದಾಮಿ ಸೀಮೆಗೆ ಒಮ್ಮೆ ಬಂದು ನೆಲೆಸಿದರೆಂದು ನನ್ನ ತರ್ಕವಿದೆ. ಗುಳೇದಗುಡ್ಡ, ಇಳಕಲ್ಲುಗಳು ಈ ಭಾಗದ ದೇವಾಂಗ, ಜಾಡರ ನೆಲೆವೀಡು. ಇವರ ಕುಲದೈವತ ಬನದ ದೇವಿಯ ಕ್ಷೇತ್ರವೂ ಹತ್ತಿರದಲ್ಲಿಯೇ ಇದೆ.

ಹಿಂದುತ್ವದ ಉದಯ

ನಾಡಿನಲ್ಲಿ ಹಲವು ಧಾರ್ಮಿಕ ರಾಜಕೀಯ ವಿಚಾರ ಪ್ರವಾಹಗಳು ಬಂದುವು; ಹೋದುವು. ಅವುಗಳಿಂದ ನಮ್ಮ ಸಾಂಸ್ಕೃತಿಕ ಜೀವನದ ಮೇಲಾದ ಪರಿಣಾಮಗಳು ಬಹಳ ಮಹತ್ವದುವುಗಳಾಗಿವೆ. ವೈದಿಕ, ಬೌದ್ಧ, ಜೈನ, ವೀರಶೈವಾದಿ ಅಭಿಮಾನದ ಹೋರಾಟದ ಹಿಂದಿನ ಮಾತು ಮುಸಲ್ಮಾನರ ದಾಳಿಯಿಂದ ತಗ್ಗಿತು; ಮೈಮೇಲೆ ನುಗ್ಗಿ ಬರುತ್ತಿರುವ ಪರಧರ್ಮೀಯ ಪುಂಡರನ್ನು ತಡೆದು ಹಿಡಿಯುವದಕ್ಕಾಗಿ ತಾವೆಲ್ಲ ಒಂದುಗೂಡುವ ಆವಶ್ಯಕತೆಯೆನಿಸಿತು. ವಿಜಯನಗರದ ರಾಜರು 'ಹಿಂದೂರಾಯ ಸುರತ್ರಾಣ' ಎಂಬೀ ಬಿರುದನ್ನು ಧರಿಸಿದರು. 'ಹಿಂದೂ' ಎಂಬ ಸಮ್ಯಗರ್ಥದ ಪದವು ರಾಜಮಾನ್ಯತೆಯನ್ನು ಪಡೆದು ಮುಂದೆ ಬಂದುದು ಕಂನಾಡಿನಲ್ಲಿಯೇ ಮೊದಲು. ಹಿಂದುಪೂರ ಎಂಬ ಹೆಸರಿನ ಊರು ಇಂತಹ ಒಂದು ಭಾವನೆಯ ದ್ಯೋತಕವೇ ಆಗಿದೆ.

ಅಗ್ರಹಾರಗಳಿಗೆ ಹೆಸರಾದ ನಾಡು; ಇದು ವಿದ್ಯೆಗೆ ಆಗರವಾಗಿದ್ದಿತೆನ್ನಲು ಅಡ್ಡಿಯಿಲ್ಲ. ಬಿಜ್ಜಲವಾಡಿ, ಬಿಜ್ಜಲವೀಡು, ಸರಸ್ವತಿಪುರ, ಬೊಮ್ಮನರಸಿಪುರ ಮುಂತಾದುವು ವಿದ್ಯೆಯ ಬಗೆಗೆ ಇರುವ ನಮ್ಮ ನಾಡಿಗರ ಆಸ್ಥೆಯನ್ನು ತೋರಿಸುತ್ತವೆ. ಕೊಲ್ಲೂರ (ದ.ಕ.) ಕೊಲ್ಹಾಪುರವೆಂದು ಅಲ್ಲಿಯ ಸ್ಥಳಪುರಾಣದಲ್ಲಿ ವರ್ಣಿಸಲ್ಪಟ್ಟಿದೆ. ಆದರೆ, ಅಲ್ಲಿಯ ದೇವಿಯ ಹೆಸರು ಮಾತ್ರ ಮೂಕಾಂಬೆ. ದೇವಿ ಮೂಕಾಂಬೆಯಾದರೂ ಈ ಅಮ್ಮನವರ ಉಪಾಸನೆಯಿಂದ ಸರಸ್ವತಿಯ ವರಪ್ರಸಾದವು ಸಿಕ್ಕುವುದೆಂದು ಅಲ್ಲಿ ನಂಬುಗೆಯಿದೆ.

ಕಂನಾಡಿನ ಜನಸಾಮಾನ್ಯರಲ್ಲಿ ದಾನಬುದ್ಧಿಯು ಎಂದಿನಿಂದಲೂ ಅತಿಶಯವಾಗಿದೆ. ಜ್ಞಾನಪ್ರಸಾರಕ್ಕಾಗಿ ಉದಾರಬುದ್ಧಿಯಿಂದಿತ್ತ ಕೊಡುಗೆಗಳನ್ನು ವರ್ಣಿಸುವ ಶಾಸನಗಳು ಸಾವಿರಾರು ಉಂಟು. 'ಕವಿ, ಕಥಕ, ಗಾಯಕ, ವಾದಕ, ನಗ್ನ, ಭಗ್ನ, ನಟ, ಭಟ, ಮಾಗಧಾನಾಥ, ಶಿಷ್ಟೋಪ್ಪ ಸಭಿಲಕ್ಷಿತಾರ್ಥದಾನ ವಿನೋದೆಯರಾದ 'ದಾನಚಿಂತಾಮಣಿ'ಗಳೆಂದು ಖ್ಯಾತಿವೆತ್ತ ಹೆಣ್ಣುಮಕ್ಕಳು ಇಂದಿಗೂ ವಂದ್ಯರೂ, ಅನುಕರಣೀಯರೂ ಆಗಿದ್ದಾರೆ. 'ಯತೀನಾಂ ವಿದ್ಯಾರ್ಥಿನಾಂ ಚ ಸತ್ರಂ'ಗಳನ್ನು ನಡೆಸಿದ್ದುಂಟು. 'ವಂಶಿಗೆ, ಪಾಡುವರ್ಬರ್ಗೆ, ಪಾತ್ರವೆರಡಕಂ,

ಭೋಗದ ಸೂಳೆಯರ್, ಮಾಲೆಗಾರಂ, ದಂಡೆಗಾರಂ' ಮೊದಲಾದ ಕಲಾವಂತರಿಗೆ ಕೊಟ್ಟ ಭೂಮಿಸೀಮೆಗಳ ವರ್ಣನೆಗಳು ಶಾಸನಗಳಲ್ಲಿ ಬರುತ್ತವೆ. ಧಾರವಾಡದ ಹತ್ತಿರದ ಮುಗು(ಂ)ದ ಶಾಸನದಲ್ಲಿ (ಕ್ರಿ. ಶ. ೧೦೪೫) ಒಂದು ನಾಟ್ಯಶಾಲೆ ಕಟ್ಟಿಸಿದ್ದಾಗಿ ಹೇಳಿದೆ. ಮಹಾ ಸಾಮಂತ ಮಾರ್ತಂಡಯ್ಯನು ಸಮ್ಯಕ್ತ್ವ ರತ್ನಾಕರ ಚೈತ್ಯಾಲಯವನ್ನೂ ಅದಕ್ಕೊಂದು ನಾಟಕಶಾಲೆಯನ್ನೂ ಕಟ್ಟಿಸಿದನು.

ಹಿಂದೆ ನಮ್ಮಲ್ಲಿ ಯಾವ ಯಾವ ವಿಷಯಗಳ ಶಿಕ್ಷಣವು ಸಾಗುತ್ತಿದ್ದಿತೆಂಬುದಕ್ಕೆ ಪಂಪಭಾರತಾದಿ ಗ್ರಂಥಗಳಿಂದಲೂ ಶಾಸನಗಳ ಉಲ್ಲೇಖಗಳಿಂದಲೂ ಬಹುಮಟ್ಟಿಗೆ ಗೊತ್ತಾಗುವುದು. ಕಾವ್ಯಾದಿ ಸಾಹಿತ್ಯ, ನಾಟಕ, ಧರ್ಮಶಾಸ್ತ್ರ, ವೇದವೇದಾಂಗ, ದರ್ಶನಗಳು, ಭರತಪ್ರಣೀತ ನೃತ್ಯ, ನಾರದಾದಿಪ್ರಣೀತ ಗಾಂಧರ್ವವಿದ್ಯೆ, ಗಜಾಗಮ, ಚಿತ್ರಕರ್ಮ, ಗ್ರಹಗಣಿತ, ರತ್ನಪರೀಕ್ಷೆ, ದಾರುಕರ್ಮ (ಮರದ ಕೆತ್ತನೆಯ ಕೆಲಸ), ವಾಸ್ತುವಿದ್ಯೆ, ಚಾಪ, ಚಕ್ರ, ಪರಶು, ಕೃಪಾಣ, ತೋಮರ, ಮುಸಲ, ಮುಸುಂಡಿ, ಭಂಡಿವಾಳ, ಮುದ್ಗರ ಗದಾದಿ ವಿವಿಧಾಯುಧಂಗಳ ಜ್ಞಾನ, ಆಗಮ, ಪುರಾಣಾದಿ ಮತಗ್ರಂಥಗಳ ಪರಿಚಯ ಮುಂತಾದ ವಿಷಯಗಳನ್ನು ಬೇರೆ ಬೇರೆ ಪಾಠಶಾಲೆಗಳಲ್ಲಿ ಕಲಿಸುತ್ತಿದ್ದರು.

ಸಂಸ್ಕೃತ ಭಾಷೆ ಮತ್ತು ಸಾಹಿತ್ಯಕ್ಕೆ ತುಂಬಾ ಉತ್ತೇಜನವಿದ್ದಿತು. ರಾಜರು ವಿದ್ವಾಂಸರನ್ನು ಬರಮಾಡಿಕೊಂಡು ಆಶ್ರಯಕೊಡುತ್ತಿದ್ದರಲ್ಲದೆ ಹಲವರು ಸಂಸ್ಕೃತದಲ್ಲಿ ಗ್ರಂಥರಚನೆಯನ್ನು ಮಾಡಿರುವರು. 'ಕರ್ಣಾಟ ರಾಜಪ್ರಿಯೆ'ಯಾದ ವಿಜಯಾಂಕಾ, ಮತ್ತು ಅಕ್ಕದೇವಿಯರನ್ನು ಅಭಿನವ ಸರಸ್ವತಿ ಎಂದು ಹೊಗಳಿದುದು ಕಂಡುಬರುತ್ತದೆ. ಸಂಸ್ಕೃತ ಭಾಷೆ ಮತ್ತು ಸಾಹಿತ್ಯಕ್ಕೆ ಕಂನಾಡು ಮಾಡಿದ ಸಹಾಯವನ್ನು ಕುರಿತು ಒಂದು ಸ್ವತಂತ್ರ ಗ್ರಂಥವೆ ಆಗುವಹಾಗಿದೆ. ವೇದಕ್ಕೆ ಭಾಷ್ಯ ಬರೆದ ಶ್ರೇಯಸ್ಸು ಇರುವ ಪ್ರಾಂತಗಳೆ ಕಡಿಮೆ ಭಾರತದಲ್ಲಿ. (ಚೋಳ ದೇಶವನ್ನು ಬಿಟ್ಟರೆ) ಇಬ್ಬರು ಭಾಷ್ಯಕಾರರಿಗೆ ಜನ್ಮಕೊಟ್ಟ ಭಾಗ್ಯವು ಕಂನಾಡಿನದಾಗಿದೆ. ಕರ್ಣಾಟ ಸಿಂಹಾಸನಾಧೀಶ್ವರನಾದ ಬುಕ್ಕರಾಯನ ಆಸ್ಥಾನದಲ್ಲಿ ಮಂತ್ರಿಯಾಗಿದ್ದ ಸಾಯಣಾಚಾರ್ಯರು, ಮತ್ತು ಬನವಾಸಿ ಪಟ್ಟಣದ ಉದ್ಗೀಥಾಚಾರ್ಯರು ಇವರಲ್ಲಿ ಮೊದಲನೆಯವರ ಹೆಸರನ್ನು ಮಾತ್ರ ಬಹುಜನರು ಬಲ್ಲರು. ಸಾಯಣರ ಹೆಸರಿನ ಊರುಗಳೂ ಉಂಟು. ಸಾಯಣ-ಮಾಧವರು ತಮ್ಮ ಕಾಲಕ್ಕೆ ತಿಳಿದ ಜ್ಞಾನಶಾಖೆಯ ಎಲ್ಲ ವಿಷಯಗಳ ಮೇಲೂ ಒಳ್ಳೊಳ್ಳೆಯ ಗ್ರಂಥಗಳನ್ನು ಬರೆಯಿಸಿ ಭಾರತೀಯ ಸಂಸ್ಕೃತಿಯ ಪುನರುಜ್ಜೀವನ ಮಾಡಿದರು. ಕಂನಾಡು ಸಂಸ್ಕೃತಕ್ಕೆ ಮಾಡಿದ ಈ ಅಮೋಘ ಸೇವೆಯನ್ನು ಭಾರತವು ಎಂದೂ ಮರೆಯಲಾರದು. ಅವರು ಬರೆದುದು ಅದೊಂದು ಭಾರತೀಯ ಜ್ಞಾನಕೋಶವೇ ಸರಿ. ಇಂತಹ ಜ್ಞಾನಕೋಶದ ಸಂಪಾದಕರಿಗೆ ಒಬ್ಬರಿಗೆ ವಿದ್ಯಾರಣ್ಯರೆಂದು ಹೆಸರು ಬಂದಿದ್ದು ಉಚಿತವಾಗಿದೆ. 'ಸರ್ವಜ್ಞಃ ಸ ಹಿ ಮಾಧವಃ' ಎಂಬ ಅವರ ವಿಷಯದ ಧನ್ಯೋದ್ಗಾರವು ಸಾರ್ಥವೇ ಸರಿ.

ಆಧುನಿಕ ವಿಶ್ವಕೋಶ ಅಥವಾ ಜ್ಞಾನಕೋಶವೆಂಬುದಕ್ಕೆ 'ಅಭಿಲಷಿತಾರ್ಥ ಚಿಂತಾಮಣಿ' ಎಂದು ಕಂನಾಡವರಿಟ್ಟ ಹೆಸರಾಗಿದೆ. ವಿದ್ಯಾರಣ್ಯರಿಗಿಂತಲೂ ಮೊದಲು ಕಲ್ಯಾಣ ಚಲುಕ್ಯ ಚಕ್ರವರ್ತಿ ೩ನೆಯ ಸೋಮೇಶ್ವರನು ಇಂತಹ ವಿಶ್ವಕೋಶವನ್ನೊಂದನ್ನು ಸಿದ್ಧಪಡಿಸಿದ್ದಾನೆ. ಇದೂ ಸಂಸ್ಕೃತದಲ್ಲಿಯೆ. 'ಮಾನಸೋಲ್ಲಾಸ'ವೆಂಬ ಇನ್ನೊಂದು ಹೆಸರೂ ಅದಕ್ಕುಂಟು. ಹಿಂದೆ ಸೂಚಿಸಿದಂತೆ ಆ ಕಾಲದ ಸಾಂಸ್ಕೃತಿಕ ಇತಿಹಾಸದ ಮಾಹಿತಿಯ ಕಣಿಯೆ ಅದು. ಅದು ಇನ್ನೂ ಸಂಪೂರ್ಣವಾಗಿ ಅಚ್ಚಾಗದಿರುವುದು ದುರ್ದೈವ. ಈ ಬಗೆಯಾದ ಜ್ಞಾನಕೋಶವನ್ನು ರಚಿಸಿದ್ದು, ಅಷ್ಟು ಹಿಂದಿನ ಕಾಲದಲ್ಲಿ ಕೌತುಕಾಶ್ಚರ್ಯವನ್ನುಂಟುಮಾಡುತ್ತದೆ. ಭರತಖಂಡದಲ್ಲಿಯೆ ಇದು ಅಪೂರ್ವವಾದ ಗ್ರಂಥ.

ಇದೇ ಬಗೆಯಾಗಿ ಇನ್ನೂ ಕೆಲವು ಜ್ಞಾನಕೋಶಗಳು ಮುಂದಿನ ಕಾಲದಲ್ಲಿಯೂ ರಚಿತವಾಗಿವೆ. ಕೆಳದಿಯ ಅರಸನಾದ ಬಸವರಾಜೇಂದ್ರನಿಂದ ಬರೆಯಲ್ಪಟ್ಟ 'ಶಿವತತ್ತ್ವ ರತ್ನಾಕರ'ವು ಇಂತಹ ಒಂದು ಜ್ಞಾನಸಂಗ್ರಹದ

ಗ್ರಂಥವಾಗಿದೆ. (ಇವನು ಕ್ರಿ. ಶ. ೧೭೯೮ ರಿಂದ ೧೭೧೫ರವರೆಗೆ ಆಳಿದನು.) 'ವೇದಾಗಮಾಂತರ್ಗತ ವಿವಿಧ ವಿದ್ಯಾತಂತ್ರಸಾರಭೂತ ಶಿವತತ್ವರತ್ನಾಕರ'ವೆಂದು ಇದನ್ನು ಬಣ್ಣಿಸಿದ್ದಾಗಿದೆ.

ಶಿವತತ್ವ ರತ್ನಾಕರಕ್ಕಿಂತಲೂ ಮೊದಲು ಇದೇ ಬಗೆಯ ಇನ್ನೂ ಒಂದು ಜ್ಞಾನಸಿಂಧುವಿನಂತಹ ಗ್ರಂಥವು ಕಂನಾಡಿನಲ್ಲಿ ಆಗಿದೆ. ಆದರೆ, ಅದು ಕಂನುಡಿಯಲ್ಲಿದೆ. ಇದನ್ನು ಬರೆದವರು ನಿಜಗುಣ ಶಿವಯೋಗಿಗಳು (ಸು. ಕ್ರಿ. ಶ. ೧೫೦೦). ಪೂರ್ವಾಶ್ರಮದಲ್ಲಿ ಇವರೂ ಒಂದು ಸಣ್ಣನಾಡಿಗೆ ಅರಸರಾಗಿದ್ದರು. ಇವರು ತಮ್ಮ ಈ ಬಗೆಯ ಗ್ರಂಥಕ್ಕೆ 'ವಿವೇಕ ಚಿಂತಾಮಣಿ' ಎಂದು ಹೆಸರನ್ನಿಟ್ಟಿದ್ದಾರೆ. 'ಚಿಂತಾಮಣಿ' ಎಂದರೆ ಬಯಸಿದ್ದನ್ನು-ಚಿಂತಿಸಿದುದನ್ನು ಕೊಡುವ ರತ್ನವು. ಯಾವ ವಿಷಯವು ಬೇಕೊ ಆ ವಿಷಯದ ಜ್ಞಾನವನ್ನೂ 'ಅಭಿಲಷಿತ ಅರ್ಥ ಚಿಂತಾಮಣಿ'ಯಲ್ಲಿಯೂ 'ವಿವೇಕ ಚಿಂತಾಮಣಿ'ಯಲ್ಲಿಯೂ ಪಡೆದುಕೊಳ್ಳಬಹುದು. ಅವರು ಅಂದು ತಮಗೆ ನಿಲುಕಿದಷ್ಟನ್ನೆಲ್ಲ ಕಲೆಹಾಕಿ ಮುಂದಿನ ಪೀಳಿಗೆಗೆ ಜ್ಞಾನನಿಧಿಯನ್ನು ಕೊಟ್ಟಿದ್ದಾರೆ. ಅದನ್ನು ಕಾಲಕಾಲಕ್ಕೆ ಮತ್ತೆ ಹೆಚ್ಚು ಗಳಿಸಿ ಬೆಳೆಸಿಕೊಳ್ಳುವುದು ಕಂನಾಡವರ ಕರ್ತವ್ಯವಾಗಿತ್ತು. ಶ್ರೀ ನಿಜಗುಣ ಶಿವಯೋಗಿಗಳು ವಿವೇಕ ಚಿಂತಾಮಣಿಯಲ್ಲಿ ೭೬೫ ವಿಷಯಗಳನ್ನು ಕುರಿತು ವಿವೇಚಿಸಿದ್ದಾರೆ.

ವ್ಯಾಕರಣ, ಛಂದಸ್ಸು, ತಂತ್ರ, ಆಗಮ, ವೇದಾಂತ, ಗಣಿತ ಸಂಗೀತ ಮೊದಲಾದ ಶಾಸ್ತ್ರಗಳ ಮೇಲಣ ಸಣ್ಣದೊಡ್ಡ ಗ್ರಂಥ, ಟೀಕೆ ಮೊದಲಾದವು ಸಂಸ್ಕೃತದಲ್ಲಿ ಬರೆಯಲ್ಪಟ್ಟಿವೆ. ಆದರೆ, ಜ್ಞಾನಕೋಶಗಳ ವೈಶಿಷ್ಟ್ಯವು ಭಾರತೀಯ ಸಾಹಿತ್ಯದ ಇತಿಹಾಸದಲ್ಲಿ ಕಂನಾಡವರ ಪಡೆಮಾತೆಂದು ಹೇಳಬಹುದಾಗಿದೆ.

ಪ್ರಾಕೃತದ ವಿಶೇಷ ಅಭ್ಯಾಸದ ಶ್ರೇಯಸ್ಸು ಜೈನರದ್ದಾಗಿದೆ. ರಾಷ್ಟ್ರಕೂಟ ರಾಜರ ಆಶ್ರಯದಲ್ಲಿ ಅನೇಕ ಜೈನ ಮಹಾಗ್ರಂಥಗಳು ನಿರ್ಮಿತವಾದುವು. ಪುಷ್ಪದಂತ ಕೃತ ಮಹಾಪುರಾಣವು ಪ್ರಾಕೃತ (ಅಪಭ್ರಂಶ) ಕಾವ್ಯಗಳಲ್ಲಿ ಮಹತ್ವದ್ದಾಗಿದೆ. ಇದು ರಾಷ್ಟ್ರಕೂಟ ಮೂರನೆಯ ಕೃಷ್ಣನ ಕಾಲದಲ್ಲಿ ರಚಿತವಾಯಿತು. ಇದರಲ್ಲಿ ನೇಸರ, ಹಟ್ಟಿ, ತುಪ್ಪ ಮೊದಲಾದ ಕಂನುಡಿಯ ಮಾತುಗಳು ಸೇರಿವೆ. ಹೆಚ್ಚಾಗಿ ಇದೆಲ್ಲವೂ ಆಚಾರ್ಯ, ಭಟ್ಟ, ಭಟಾರಕ, ಜಂಗಮಾದಿ ಅಧ್ಯಯನವೆ ಮುಖ್ಯವಾದ ವ್ಯವಸಾಯದವರ ಕಾರ್ಯವಾಯಿತು.

ರಸಿಕತೆ

ಕವಿರಾಜಮಾರ್ಗದಲ್ಲಿ 'ನಾಡವರ' ರಸಿಕತೆಯ ಮತ್ತು ಅವರ ಸ್ವಭಾವದ ವಾಸ್ತವವರ್ಣನೆಯು ಬಹಳ ಚೆನ್ನಾಗಿಯೆ ಇದೆ.

> ಸುಭಟರ್ಕಳ್ ಕವಿಗಳ್, ಸು -
> ಪ್ರಭುಗಳ್ ಚೆಲ್ವರ್ಕಳ್ ಅಭಿಜನರ್ಕಳ್ ಗುಣಿಗಳ್
> ಅಭಿಮಾನಿಗಳ್ ಅತ್ಯುಗ್ರರ್,
> ಗಭೀರ ಚಿತ್ತರ್ ವಿವೇಕಿಗಳ್ ನಾಡವರ್ಗಳ್॥೧.೨೮॥

ಈ ಪದ್ಯದೊಳಗಿನ ವಿಶೇಷಣಗಳಲ್ಲಿ 'ಅಭಿಜನರ್ಕಳ್' ಎಂದು ನಾಡವರನ್ನು ವರ್ಣಿಸುವ ಪದವು ವಿಶೇಷ ಮಹತ್ವದ್ದಾಗಿದೆ. ಅಭಿಜನ ಶಬ್ದದಿಂದ ಇವರು ಕುಲೀನರೆಂಬ ಮಾತನ್ನು ಸೂಚಿಸಿದ್ದಲ್ಲದೆ ಇವರು ಈ ನಾಡಿನವರೇ (ಹೊರಗಿನವರಲ್ಲ) ಎಂಬುದನ್ನೂ ಧ್ವನಿತಮಾಡಿದ್ದಾಗಿದೆ. ಆದುದರಿಂದ ಹಟ್ಟಿನಾಡಿನ ಮೊದಲಿಗರು ಇವರೆಂಬುದು ಮತ್ತೆ ಇಲ್ಲಿ ಸ್ಪಷ್ಟವಾಗುತ್ತದೆ. ಚೆಲುವರಾದ ಈ ಜನ, ಗುಣಿಗಳೂ ರಸಿಕರೂ ಆಗಿದ್ದುದು ಸ್ವಾಭಾವಿಕವೆ ಆಗಿದೆ. ಆದುದರಿಂದಲೆ ಕವಿಗಳೆಂದೂ ವರ್ಣಿಸಿದ್ದಾಗಿದೆ.

ಬ್ರಾಹ್ಮಣರಂತೆ ಅಧ್ಯಯನವೇ ಇವರ ಜೀವನದ ಮುಖ್ಯವ್ಯಾಸಂಗವಲ್ಲ. ಇವರ ಹೋರೆ, ಹೊರಗಿನ ಹೋರಾಟ. ಆದುದರಿಂದಲೇ 'ನಿಜದಿಂ ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್;' ಆದಕಾರಣ

ಇವರು 'ಚದುರರ್' ಎಂದು ಹೇಳಿದ್ದುಂಟು. ಓದಿ, ಆಜನ್ಮ ಸಾಹಿತ್ಯದ ಅಭ್ಯಾಸಮಾಡಿ ಕಾವ್ಯಗಳನ್ನು ರಚಿಸುವ ವರ್ಗದವರು ಇವರಲ್ಲ; ಎಂಬುದನ್ನೆ ಇವರು 'ಕುಱಿತವರಲ್ಲ' ಎಂಬ ಪದದಿಂದ ಅಲ್ಲಿ ಸ್ಪಷ್ಟೀಕರಿಸಲಾಗಿದೆ. 'ಕುಱಿತವರಲ್ಲದೆ ಇದ್ದರೂ 'ತಮ್ಮ ತಮ್ಮ ನುಡಿಯೊಳ್ ಎಲ್ಲರ್ ಜಾಣರ್;' 'ಪದನರಿದು ನುಡಿಯಲುಂ, ನುಡಿದುದಂ ಅರಿದು ಆರಯಲುಂ ಆರ್ಪರ್ ಆ ನಾಡವರ್ಗಳ್' ಎಂದು ಬಣ್ಣಿಸಿದೆ. ಇಂತಿದು ನಮ್ಮ ಪಟ್ಟಿಲರಾದ-ನಾಡವರ ಹುಟ್ಟುರಸಿಕತೆಯ ವರ್ಣನೆಯಾಗಿದೆ. ಇವರನ್ನು ಗಂಭೀರಚಿತ್ತರೆಂದೂ ಉಗ್ರರಾದರು ವಿವೇಕಿಗಳೆಂದೂ ಒಳ್ಳೆ ಬಂಟರೆಂದೂ ಅಭಿಮಾನಧನರೆಂದೂ ಹೇಳಿದೆ. ಇದು ೯ನೆಯ ಶತಮಾನದ ಚಿತ್ರ.

ನಮ್ಮ ನಾಡ ರಾಜರಿಗಿದ್ದ ವಿವಿಧ ಕಲಾವಿನೋದದ ಪ್ರೀತಿಗೆ- ಅವರ ಉದಾರಾಶ್ರಯದಲ್ಲಿ ರಚಿತವಾದ ಕಾವ್ಯಗಳು, ಗುಡಿ-ಗೋಪುರಗಳು, ಅಂಜಂತಾ ಬೇಲೂರುಗಳೇ ಉತ್ತಮವಾದ ನಿದರ್ಶನಗಳಾಗಿವೆ. ಓಜರು, ಭಟ್ಟರು, ಪಂಡಿತರು, ಆಚಾರ್ಯರು, (ಕವಿ, ಗಮಕಿ, ವಾದಿ, ವಾಗ್ಮಿಗಳು) ಮೊದಲಾದವರಿಗೆ ರಾಜಾಶ್ರಯವಸಿತ್ತರು. ಈ ವರ್ಗದ ಜನಗಳ ಹೆಸರಿನ ಹಳ್ಳಿಗಳು-ಓಜನಹಳ್ಳಿ ಮೊದಲಾದುವುಗಳ ಹೆಸರು ಈಗಲೂ ಉಳಿದಿದೆ. ಸಂಗೀತ ನೃತ್ಯಕ್ಕೂ ತುಂಬ ಆಶ್ರಯವಿದ್ದಿತು. ಪಾತ್ರದವರ, ಕಲಾವಂತೆಯರ ಹೆಸರಿನ ಊರುಗಳು ಈ ನಾಡಿನಲ್ಲಿ ವಿಶೇಷವೆಂದು ತೋರುತ್ತದೆ. ಪೃಥ್ವಿರಾಜ ಚಹ್ವಾಣನನ್ನು ಕೆಣಕಿ ಮಾತನಾಡಿದ ಕಂನಾಡ ಕಲಾವಂತೆಯ ಒಂದು ದಂತಕಥೆಯಿದೆ.

ನಮ್ಮ ನಾಡವರಿಟ್ಟ ಊರ ಹೆಸರುಗಳೂ ಇವರ ರಸಿಕತೆಗೆ ಸಾಕ್ಷಿ. ಹೂಗಳ ಮೇಲೆ ಜನಕ್ಕೆ ಹುಚ್ಚು ಪ್ರೀತಿ. ಬಗೆ ಬಗೆಯ ಹೂ-ಬಳ್ಳಿಗಳನ್ನು ಬೆಳೆಸಲು ತೋಟಿಗನಿಗೆ ಉಂಬಳಿಕೊಟ್ಟುದುಂಟು. ಪುರದ ಉಪವನ, ನಂದನವನಗಳ ರಮ್ಯವಾದ ವರ್ಣನೆಗಳು ಕಾವ್ಯಗಳಲ್ಲಿ ಬರುತ್ತವೆ. ಹೂವಿನಕೇರಿಯ, ಸೊಗಸಾದ ವಾಸ್ತವ ಚಿತ್ರಗಳನ್ನೂ ಕೊಟ್ಟಿದ್ದಾರೆ. ಅಲ್ಲಿಯ ವ್ಯಂಗ್ಯ ವಿನೋದವೂ ಇವರ ರಸಿಕತೆಯನ್ನು ಸೂಚಿಸುತ್ತದೆ. ತಾವರೆಗೇರಿ, ಮಲ್ಲಿಗವಾಡ, ಜಾಜೂರು, ಕಮಲಾಪುರ, ಹೂವಿನೂರು, ಹೂವಿನಕೇರಿ, ಪೂವಳ್ಳಿ, ಅರಳಗುಪ್ಪಿ, ಪುಷ್ಪಗಿರಿ ಎಷ್ಟು ಅಂದ ಅಂದದ ಹೂಗಳ ಎಡೆಗಳಿವು! ಇಷ್ಟು ಬಗೆಬಗೆಯ ಹೂಗಳ ಹೆಸರಿನ ಊರುಗಳೂ ಕಂನಾಡ ಹೊರಗೆ ಇದ್ದುದು ಕಂಡುಬರುವುದಿಲ್ಲ. ಸಂಪಖಂಡ, ಸಂಪಗೋಡು, ಸಂಪಗಾವಗಳು ಸಂಪಗೆಯ ಹೂವಿನಿಂದ ಬಂದ ಹೆಸರುಗಳಾಗಿರಬೇಕು. ಸಂಪಗೆಗೆ ಆರಿಯ ಮಾತಿನಲ್ಲಿ ಚಾಫಾ ಎನ್ನುವರು. ಹಳದಿಗೆಂಪು ಸೂಚಿಸುವ 'ಚೆನ್' ಎಂಬ ಮೂಲಶಬ್ದದಿಂದ ಸಿದ್ಧವಾದ ಶಬ್ದವಿದು. ಚೆನ್ಪಕ ಎಂದು ಸಂಸ್ಕೃತದಲ್ಲಿ ಇಂಬುಗೊಂಡಿದೆ. ಸೋನಚಾಫಾ ಎಂದು ಆರಿಯ ಮಾತಿನಲ್ಲಿ, ಕೆನ್ದಸಂಪಗೆಯೆಂದು ಕಂನುಡಿಯಲ್ಲಿ ಹೇಳುವ ರೀತಿಯಲ್ಲಿ ಚೆನ್‌ಪಕದ ಬಣ್ಣದ ಸ್ಪಷ್ಟೀಕರಣವೆ ಇದೆ.

ಕಂನಾಡ ವಿದ್ಯೆ, ಕಲೆಗಳ ರಕ್ಷಣೆಗೆ, ಬೆಳವಣಿಗೆಗೆ-ತನ್ಮೂಲಕವಾಗಿ ರಸಿಕತೆ ಶೆಟ್ಟರೂ ಸಿರಿವಂತರೂ ಮಾಡಿದ ಸಹಾಯವೂ ಸಂಸ್ಮರಣೀಯವಾಗಿದೆ. 'ಶೆಟ್ಟಿಯ ಬಳ್ಳ (ಒಂದು ಅಳತೆ) ಆವಗಂ ಕಿರಿದು' ಎಂದು ಪಂಪನು ಅವರ ನಗೆಯಾಡಿದ್ದರೂ, ಅವರು ತಮ್ಮ ಸಂಪಾದನೆಯನ್ನು ಸಮಾಜದ ಸಲುವಾಗಿ ವೆಚ್ಚಮಾಡುತ್ತಿದ್ದುದರಿಂದ ನಾಡಿನಲ್ಲಿ 'ಶ್ರೇಷ್ಠ'ರೆಂದು ಹೆಸರಾದರು. ಬನವಾಸಿಯ ಒಬ್ಬ ಸೆಟ್ಟಿಯ ಔದಾರ್ಯದಿಂದಲೆ ಕಾರ್ಲೆಯ ರಮ್ಯವಾದ ಚೈತ್ಯಾಲಯವು ನಿರ್ಮಿತವಾಯಿತು. ಅನೇಕ 'ನಗರೇಶ್ವರ' ದೇವಾಲಯಗಳು ಶೆಟ್ಟರ ದಾನದಿಂದಲೆ ಆಗಿವೆ. ನಗರ್ತರು, ನಗರದ ನಾಗರಿಕತೆಗೆ ಪೋಷಿಸಿದ್ದಾರೆ. ಪಟ್ಟಣ ಶೆಟ್ಟರ ಕೈಯಲ್ಲಿ ಆ ಪಟ್ಟಣ ಸೂತ್ರಗಳು ಇರುತ್ತಿದ್ದವು. ಇಂತಹ ಶೆಟ್ಟರ ನೆನಹಿನ ಊರುಗಳೂ ಅಲ್ಲಿ ಇಲ್ಲಿ ಉಂಟು.

ಕಂನುಡಿ

ಈ ನಾಡಿನ ಮೂಲ ಜನ ಕಣ್ಣರು. ಈ ಕಾರಣದಿಂದ ಅವರು ನೆಲೆಸಿದ ನೆಲ ಕಂನಾಡು; ಅವರಾಡುವ ಮಾತು ಕಂನುಡಿ, ಎಂದು ಕರೆಯಲ್ಪಡುವುದು ಸ್ವಾಭಾವಿಕವಾಗಿದೆ.

ಇವರು ತುರುಕಾರರು, ಹಾಲಿನವರು ಎಂಬುದೇ ಕಳವರು ಅಥವಾ ಕಣ್ಣರೆಂಬ ಪದದಿಂದ ಸೂಚಿತವಾಗುತ್ತದೆ. ಇವರಿಗೆ ಸಂಸ್ಕೃತದಲ್ಲಿ ಯಾದವರು, ಯದುಗಳು-ತುರ್ವಸುಗಳೆಂದು ಇದೇ ಅರ್ಥದಲ್ಲಿ ಹೆಸರು ಬಂದಿದೆ. ತುರುಕಾರರಿಗೆ ಹಟ್ಟಿಕಾರರೆಂದು ಕರೆವ ವಾಡಿಕೆಯಿದೆ. ಈ ಜನ ವೇದಕಾಲದುಕ್ಕಿಂತಲೂ ಮೊದಲಿನವರೆಂಬುದು ನಿಜವಿದ್ದರೆ, ಯದು-ತುರ್ವರೆಂದೂ ಪತ್ತಿಗಳೆಂದೂ, ಪಣಿಗಳೆಂದೂ ಕುರುವರೆಂದೂ ವೇದದಲ್ಲಿ ಹೆಸರುಗೊಂಡು ಈ ಜನದ ಪ್ರಾಚೀನ ಸಾಹಿತ್ಯವು ಏನೂ ದೊರೆಯದೆ ಇರುವುದು ಬಹಳ ವಿಚಿತ್ರವೆನಿಸುವಂತಿದೆ.

ಆದರೆ, ಈ ಜನದ ಜೀವನದ ರೀತಿಯನ್ನು, ಅವರ ಮೂಲ ಮನೋಭೂಮಿಕೆಯನ್ನೂ, ಇವರ ಪರಂಪರೆ, ಸಂಪ್ರದಾಯಗಳ ಬಗೆಯನ್ನು ಸೂಕ್ಷ್ಮವಾಗಿ ನಿರೀಕ್ಷಿಸಿದರೆ ಈ ವಿಷಯದಲ್ಲಿ ಸೋಜಿಗಪಡುವುದಕ್ಕೆ ಕಾರಣವೆ ಉಳಿಯುವುದಿಲ್ಲ. ಭಾರತದಲ್ಲಿ ಧರ್ಮ-ತತ್ವಜ್ಞಾನಗಳ ಗ್ರಂಥಗಳು ಬೆಳೆದಂತೆ ಭೌತಶಾಸ್ತ್ರದ ಬೆಳವಣಿಗೆ ಆಗಲೆ ಇಲ್ಲ; ಇದು ವಿಚಿತ್ರ! ಎಂದು ಯಾರಾದರೂ ಆಕ್ಷೇಪಿಸಿದರೆ ಅದಕ್ಕೆ ನಮ್ಮ ಉತ್ತರವೇನು? ಭಾರತೀಯರಲ್ಲಿ ಚಿಕಿತ್ಸಾಬುದ್ಧಿ, ವಿಮರ್ಶಾ ಶಕ್ತಿಯಿದ್ದಿಲ್ಲವೆಂದು ಒಪ್ಪಲಿಕ್ಕಾದೀತೆ? ಭಾರತೀಯರ ಮನಸಿನ ಒಲವು ಹೆಚ್ಚಾಗಿ ಅಂತರ್ಮುಖವಾಗಿದ್ದುದರಿಂದ ಇಲ್ಲಿ ಭೌತಶಾಸ್ತ್ರದ ಪ್ರಗತಿಗೆ ಅಂದು ಎಡೆ ದೊರೆಯಲಿಲ್ಲ; ಭಾರತೀಯರ ಹಾಗೂ ಯುರೋಪೀಯರ ಒಂದು ಕಾಲದಲ್ಲಿದ್ದ ಮನಸಿನ ಒಲವುಗಳಲ್ಲಿಯ ಅಂತರವೆ ಇದಕ್ಕೆ ಮುಖ್ಯವಾದ ಕಾರಣ.

ಅದರಂತೆ, ಆರ್ಯರ ಮತ್ತು ಹಟ್ಟಿಕಾರರ ಇರುವಿನ ಬಗೆಯೆ ಬೇರೆಯಾಗಿದ್ದಿತು. ಮಾತಿಗಿಂತ ಮಾಡುವುದರಲ್ಲಿ ಇವರಿಗೆ ಮೆಚ್ಚಿಕೆ. ವಿಚಾರಕ್ಕಿಂತ ಆಚಾರದಲ್ಲಿ ಆಸಕ್ತಿ ಬಹಳ. ಆದುದರಿಂದ, ಇವರ 'ಕೃತಿ' ಕಾವ್ಯ, ಸಾಹಿತ್ಯ, ಇತಿಹಾಸಗಳ ರೂಪದಲ್ಲಿ ಕಂಡುಬರುವುದಿಲ್ಲ. ಲೋಕ ವ್ಯವಹಾರ, ರಾಜ್ಯ ವ್ಯವಹಾರಗಳ ಹೋರಟೆಯೆ ಇವರ 'ಕೃತಿ'. ಕೂತು ಮಾತಿನ ಮಲ್ಲಗಾಳಗ ಮಾಡುವುದಕ್ಕಿಂತಲೂ ಕುಣಿದು-ರಿಂಗಣಗುಣಿದು ಕೇಕೆ ಹಾಕುವಲ್ಲಿ ಇವರಿಗೆ ಹಿಗ್ಗುಹೆಚ್ಚು. ಇದುವೇ ಇವರ ಪಾಡು; ಹಾಡು. ಇರುವುದನ್ನು ಬಿಟ್ಟು, ಹೇಳುವ ದಂದುಗವನ್ನು ಕೈಕೊಳ್ಳುವುದರಲ್ಲಿ ಇವರಿಗೆ ಕಡಿಮೆತನವೆನಿಸುತ್ತಿದ್ದಿತು.

ಆರ್ಯೇತರ ಸಿದ್ಧ-ಯತಿ ಪರಂಪರೆಯಲ್ಲೂ ನಾಲಗೆಯವರಾಗುವುದಕ್ಕೆ ಬೆಲೆಯಿದ್ದಿಲ್ಲವೆಂದು ಈಗಲೂ ಉಳಿದಿರುವ ಪರಂಪರೆಗಳ ಬಲದಿಂದ ಹೇಳಬಹುದಾಗಿದೆ. ವಿವೇಚನ, ಪ್ರವಚನಾದಿ ಬಾಯ ಲೆಕ್ಕಾಚಾರದಿಂದೇನು ಫಲ? 'ಸತ್ಯವನು ಅರಿತವನು ಸತ್ತಹಾಗಿರಬೇಕು' ಎಂದು ಸರ್ವಜ್ಞನ ವಚನವು ಈ ಪರಂಪರೆಯವರ ಸೂತ್ರ ವಾಕ್ಯವೇ ಅಹುದು. ಆತ್ಮದ ಧ್ಯಾನ, ಮನನ; ನಾಮಸ್ಮರಣ. ಇದಕ್ಕೆ ಮಿಕ್ಕಿ ಗುಡ್ಡದಂತಹ ಹೊತ್ತಗೆಗಳನ್ನು ರಚಿಸುವ ಜನವು ಇದಲ್ಲ. ಮೌನದ ಮಹತ್ವ ತಿಳಿದವನು ಮೌನವನ್ನಾಚರಿಸಬೇಕು; ಮೌನವನ್ನು ಕುರಿತು ಮಹಾಗ್ರಂಥ ಬರೆವಂತೆ ಬಾಯ್ಮಾತೆಲ್ಲವೂ ಬಯಲುನುಡಿಯೆಂಬುದು ಈ ಜನದ ವಿಚಾರದ ತಿರುಳು.

ಹೀಗಾಗಿ ಪುರಾಣ-ಕಾವ್ಯಾದಿಗಳನ್ನು ಬರೆಯುವವರ- (ಆ ಪುರಾತನ ಕಾಲದಲ್ಲಿ ಬರೆಯುವುದು ಎಲ್ಲಿ ಗೊತ್ತಿದ್ದಿತು?)- ಅಲ್ಲ, ಹೇಳುವವರ ವಿಷಯಕ್ಕೆ ಈ ಜನದ ಭಾವನೆ ಏನಿದ್ದಿತೆಂಬುದನ್ನು, ಈ ಹೇಳುವವರಿಗೆ ಅವರಿತ್ತ, ಅಥವಾ ಗತಾನುಗತಿಕವಾಗಿ ಬಂದ ಹೆಸರಿನಿಂದಲೇ ಅರಿತುಕೊಳ್ಳಬಹುದಾಗಿದೆ. ಭಾಟ ಅಥವಾ ಭಟ್ಟವೆಂಬುದಕ್ಕೆ ಒಂದು ನಿಟ್ಟಿನಲ್ಲಿ ವೀರ, ಪಂಡಿತವೆಂದು ಅರ್ಥವಿದ್ದರೂ ಇನ್ನೊಂದು ನಿಟ್ಟಿನಲ್ಲಿ 'ಹೊಗಳುವವ'ನೆಂದು ಕೀಳ್ಬಗೆವ ಭಾವನೆಯು ಅಲ್ಲಿ ಅಡಕವಾಗಿದೆ. 'ಹೊಗಳುವವ'ರೆಂದರೆ ಇನ್ನೂ ಲೇಸು. (ಹೊಟ್ಟೆಯ ರೊಟ್ಟಿಗಾಗಿ ಬೊಗಳುವ) 'ಶುನಕ'ರೆಂದು ಇವರಿಗೆ ನಾಮಾಭಿಧಾನವಿದೆ ಈ ಸಾಹಿತಿಗಳೆಲ್ಲ ಸೂತರೂ ಶೌನಕಾದಿಗಳೂ! ಈ ವರ್ಗದವರು ಸಾಹಿತಿಗಳಿಗೆ ಇಟ್ಟ ಹೆಸರಿದು. ಕಂನುಡಿಯೊಳಗಿನ ಪರಂಪರಾಗತವಾದ ಹೆಸರೂ ಮೇಲಣ ವಿಚಾರವನ್ನೆ ಪುಷ್ಟೀಕರಿಸುತ್ತದೆ. ನಮ್ಮ ನಾಡವರ ಮನೆತನದ ಗತ ಇತಿಹಾಸವನ್ನೆಲ್ಲ ನೆನಪಿಟ್ಟು ಕತೆಮಾಡಿ ಹೇಳುವ ಒಂದು ವರ್ಗವೆ ಇದೆ. ಇವರೆ ನಮ್ಮ ನಾಡಿನ ಪರಂಪರಾಗತವಾದ

ಇತಿಹಾಸಕಾರರು, ಕತೆಗಾರರು; ಐತಿಹಾಸಿಕ ಕಾದಂಬರಿಕಾರರೂ ಅಹುದು. ಒಂದೊಂದು ಮನೆತನಕ್ಕೂ ಕಾಲಕಾಲಕ್ಕೆ ಬಂದು ಅವರ ಹಿರಿಯರ ಬಿರುದಾವಳಿ, ಪೂರ್ವ ಚರಿತೆಗಳೆಲ್ಲವನ್ನೂ ಚೆನ್ನಾಗಿ ಬಣ್ಣ ಬಳಿದು ಮನಸೆಳೆವಂತೆ ಹೇಳುವಲ್ಲಿ ಇವರು ಗಟ್ಟಿಗರು. ಇದಕ್ಕಾಗಿ ಇವರು ಉಂಬಳಿ ಮಾನ್ಯಗಳನ್ನು ಪಡೆದುದೂ ಉಂಟು. ಈ ವರ್ಗದ ಹೆಸರು ಏನು? ಈ ಹೇಳುವವರೆಲ್ಲ 'ಹೆಳವರು'! ಹೆಳವನಕಟ್ಟೆ, ಹೆಳವನ ಹಳ್ಳಿ ನಮ್ಮ ನಾಡಿನಲ್ಲಿವೆ. ಕೊನೆಯದು ಮೈಸೂರ ಸೀಮೆಯ ಶಾಸನದಲ್ಲಿದೆ.[೨]

ಹೆಳವನೆಂದರೆ ಕಾಲಿಲ್ಲದವನು. ಆದರೆ, ಹೆಳವರೆಂಬ ಈ ಜನವೆಲ್ಲ ಕಾಲಿಲ್ಲದ್ದೆಂದು ಮಾತ್ರ ತಿಳಿಯಕೂಡದು. (ಕಾಲಿದ್ದವರಾದರೂ) ಬರಿ 'ಹೇಳುವ' ಉದ್ಯೋಗದಿಂದ, ಬಾಯಿಯಿಂದ ಹೊಟ್ಟೆ ಹೊರೆಯುವುದರಿಂದ ಇವರಿಗೆ ಹೆಳವರೆಂದು ಲಾಕ್ಷಣಿಕವಾಗಿ ಹೇಳಿದೆ. ಒಂದು ಜಾತಿಗೆ ಜಾತಿಯೆ ಕಾಲಿಲ್ಲದ್ದು ಇರುವ ಸಂಭವವುಂಟೆ? ಹೆಳವನ ಭಾರವನ್ನು ಕಾಲಿದ್ದವರು ಹೊರಬೇಕಾಗುವುದು; ಹೆಳವರು ಪರಾವಲಂಬಿಗಳು. ಇದು ಸ್ವಾಭಿಮಾನದ ಜೀವನವಲ್ಲ. 'ಅಭಿಮಾನಿಗಳ್', 'ವೀರರ್ಕಳ್' ಎಂದು ಹೆಸರಾದ ಕುನಾಡು ಮೊದಲಿಗರು ಹೆಳವರು-ಹೇಳವರು ಆಗುವುದಕ್ಕೆ ಮನಸು ಮಾಡಿರದಿದ್ದರೆ ಸೋಜಿಗವಲ್ಲ.

ವೇದಗಳಲ್ಲಿ ಸಂಸ್ಕೃತವಲ್ಲದ ಕಂದಮಿಳ ವರ್ಗಕ್ಕೆ ಸಲ್ಲುವ ಹಲವು ಮಾತುಗಳು ದೊರೆಯುವುದನ್ನು ಸಂಶೋಧಕರೆಲ್ಲರೂ ಒಪ್ಪುತ್ತಾರೆ. ಆರ್ಯರಿಂದ ಭಿನ್ನವಾದ ಹಟ್ಟಿಕಾರ ಜನದ ಅಸ್ತಿತ್ವವು ವೇದಕಾಲಕ್ಕೆ ಮೊದಲಿನಿಂದಲೂ ಇದ್ದುದಕ್ಕೆ ಆಧಾರಗಳು ದೊರೆಯುತ್ತವೆ. ಜನವಿದ್ದ ಬಳಿಕ ಅವರ ನುಡಿಯೊಂದು ಇರಲೇ ಬೇಕಷ್ಟೆ. ಇದರ ಅಂದಿನ ಸ್ವರೂಪವೇನಿದ್ದಿತೆಂಬುದನ್ನು ನಿರ್ಧರಿಸುವ ಪ್ರಯತ್ನಗಳು ಅಲ್ಪಸ್ವಲ್ಪ ನಡೆದಿವೆ.

ಆರ್ಯರು ಮತ್ತು ಹಟ್ಟಿಕಾರರು ಹತ್ತಿರದವರಾಗಿ, ಹೊಂದಿದವರಾಗಿ ಬಾಳಲಾರಂಭಿಸಿದ ಬಳಿಕ ಇವರಿಬ್ಬರ ಭಾಷೆಗಳ ಪರಿಣಾಮವು ಒಬ್ಬರೊಬ್ಬರ ಮೇಲಾಯಿತು. ಸಂಸ್ಕೃತ ಭಾಷೆಯಲ್ಲಿ ಸೇರಿದ ಹಟ್ಟಿಕಾರರ ಮಾತುಗಳನ್ನು ಕೆಲವು ಈ ಮೊದಲು ಸೂಚಿಸಿದೆ. ಈ ವಿಷಯವನ್ನು ಕುರಿತು ಹೆಚ್ಚಿನ ಸಂಶೋಧನಗಳೂ ನಡೆದಿವೆ.

ಸಂಸ್ಕೃತಕ್ಕಿಂತಲೂ ಪ್ರಾಕೃತದ ಮೇಲೆ ಹಟ್ಟಿಕಾರನ ಮಾತಿನ ಪರಿಣಾವು ಹೆಚ್ಚಾಗಿದೆ. ಆಧುನಿಕ ಪ್ರಾಕೃತ ಭಾಷೆಯ ಹುಟ್ಟಿಗೆ ಆರ್ಯೀಕರಣಕ್ಕೆ ಒಳಗಾದ ಹಟ್ಟಿಕಾರ ಜನವೇ ಕಾರಣವೆಂದು ಕಂಡುಬರುತ್ತದೆ. ಕಾಲಿಂದೀ ತೀರದಲ್ಲಿ-ಮಥುರಾ-ವೃಂದಾವನದ ಬಳಿಯ ಹಟ್ಟಿಗಳಲ್ಲಿ ವ್ರಜಭಾಷೆಯು ತಲೆದೋರಿತೆಂದು ಸಂಶೋಧಕರು ನಿರ್ಧರಿಸಿದ್ದಾರೆ. ಇದುವೆ ಆಧುನಿಕ ಮೊದಲನೆಯ ಪ್ರಾಕೃತ. ವ್ರಜವೆಂದರೆ ಸಮೂಹ; ವ್ರಜರೆಂದರೆ ಗೋವಳರು; ಅಲೆದಾಡುವವರು ಎಂದೂ ಅರ್ಥವಿದೆ. ಕಾಲಿಂದೀ ತೀರದಲ್ಲಿ ಹಟ್ಟಿಗಳನ್ನು ಕಟ್ಟಿಕೊಂಡಿದ್ದ ಗೋವಳು ಯದು-ತುರ್ವರೆಂಬ ಬಗೆಗೆ ಭಿನ್ನಾಭಿಪ್ರಾಯಗಳಿಲ್ಲ.

ಡಾ. ಭಂಡಾರಕರ (ಹಿರಿಯ)ರು ಪ್ರಾಕೃತಗಳ ಹುಟ್ಟು, ಬೆಳವಿಗೆಗಳನ್ನು ಕುರಿತು ಒಂದು ಉಪನ್ಯಾಸ-ಗ್ರಂಥವನ್ನು ಬರೆದಿದ್ದಾರೆ. ಅದರಲ್ಲಿ ಅವರಿಗೆ ಒಂದು ಸಂದೇಹವು ತಲೆದೋರಿದ್ದುದನ್ನು ಕಾಣಿಸಿದ್ದಾರೆ. ಪ್ರಾಕೃತದ ಪೆಮ್ಮ, ತೆಲ್ಲ, ಪೊಕ್ಖರ, ದೆಕ್ಖ, ಎಕ್ಕ, ಚೊತ್ಥ ಎಂಬಿವೆ ಮೊದಲಾದ ಪದಗಳಲ್ಲಿ ಕಾಣಿಸಿಕೊಳ್ಳುವ ಹ್ರಸ್ವ ಎ, ಒ ಕಾರಗಳು ಸಂಸ್ಕೃತದಲ್ಲಿ ಇಲ್ಲ. ಇವು ಎಲ್ಲಿಂದ ಬಂದುವು ಎಂಬುದೇ ಡಾ. ಭಂಡಾರಕರರ ಆ ಸಂದೇಹ. 'ದ್ರಾವಿಡ ಜನಾಂಗದ ಪರಿಣಾಮದಿಂದ ಈ ಉಚ್ಚಾರಗಳು ಪ್ರಾಕೃತದಲ್ಲಿ ಬಂದಿರಬೇಕೆಂ'ದು ಈ ಸಂದೇಹಕ್ಕೆ ಡಾಕ್ಟರರು ತಾವೇ ಉತ್ತರವನ್ನು ಕಂಡುಕೊಂಡಿರುವರು.

ಆದರೆ ಆ 'ದ್ರಾವಿಡ'ವೆಂಬ ಜನ ಯಾವುದು? ಎಂಬ ಬಗೆಗೆ ಮಾತ್ರ ಇನ್ನೂ ಯಾರೂ ನಿಶ್ಚಿತವಾದ ಉತ್ತರವನ್ನು ಕಂಡುಹಿಡಿವ ಪ್ರಯತ್ನಪಟ್ಟಿಲ್ಲ. ಇನ್ನು ಕೆಲವು ಆರ್ಯಾಭಿಮಾನಿಗಳಿಗೆ, ಈ ಉಚ್ಚಾರಗಳನ್ನು 'ದ್ರಾವಿಡರಿಂದ ಎತ್ತಿಕೊಂಡಿರಬೇಕೆಂ'ಬುದೂ ಸಹನವಾಗದೆ ಅವರು ಹ್ರಸ್ವ ಎ, ಒ ಕಾರಗಳು ಸಂಸ್ಕೃತದಲ್ಲೂ ಉಂಟೆಂಬ ಆಗ್ರಹವನ್ನು ತೋರುತ್ತಿದ್ದಾರೆ! ಆದರೆ, ಇಂತಹ ಉಚ್ಚಾರದ ಶಬ್ದಗಳನ್ನು ಸಂಸ್ಕೃತಭಾಷೆಯಲ್ಲಿ ಬೆರಳಿಟ್ಟು ತೋರಿಸುವುದಕ್ಕೆ ಮಾತ್ರ ಮುಂದೆ ಬರಲೊಲ್ಲರು. ಹ್ರಸ್ವ ಎ, ಒ ಕಾರಗಳು ಸಂಬೋಧನದ ನಿಪಾತಗಳು

ಕೆಲವೆಡೆಗೆ ಸಿಕ್ಕುತ್ತವಂತೆ! ಆದರೆ, ಅವು ಸಮರ್ಪಕವಾದ ಉದಾಹರಣಗಳೆಂದು ಒಪ್ಪುವುದಕ್ಕಾಗುವುದಿಲ್ಲ. ಮೇಲ್ಕಾಣಿಸಿದಂತಹ ಶಬ್ದಗಳಲ್ಲಿ (ನಿಪಾತಾದಿ ಏಕಾಕ್ಷರಿಗಳಲ್ಲಿ ಅಲ್ಲ) ಆರಂಭದಲ್ಲಾಗಲಿ, ಮಧ್ಯದಲ್ಲಾಗಲಿ ಹ್ರಸ್ವ ಎ, ಒ ಗಳುಳ್ಳ ಸಂಸ್ಕೃತ ಶಬ್ದಗಳನ್ನು ನಾಲ್ಕಾರಾದರೂ ಉದಹರಿಸಿದಲ್ಲಿ ಅವರ ಮಾತಿಗೆ ಏನಾದರೂ ಬೆಲೆ ಬರಬಹುದು. ಅದು ಏನೆ ಇದ್ದರೂ ಪ್ರಾಕೃತದಲ್ಲಿ ಹ್ರಸ್ವ ಎ, ಒ ಮೊದಲಾದ 'ದ್ರಾವಿಡರ'ದೆಂದು ಹೇಳುವ ಪರಿಣಾಮಕ್ಕೆ ಕಾರಣರಾದ ಜನರಾರೆಂದು ಹೊರಗೆ ಎಲ್ಲಿಯಾದರೂ ಹುಡುಕುವುದಕ್ಕೆ ಅಲೆದಾಡುವ ಕಾರಣವೇ ಇಲ್ಲ. ಕಂಕುಳಲ್ಲಿಯೆ ಕೂಸನ್ನಿಟ್ಟುಕೊಂಡು ಊರೆಲ್ಲ ಸುತ್ತಿದರೆ ಅದು ಎಲ್ಲಿ ದೊರೆಯಬೇಕು? ಉತ್ತರಾಪಥ, ಗುಜರಾತ, ಮಹಾರಾಷ್ಟ್ರಾದಿಗಳಲ್ಲಿ ಕಾಣುವುದೆಂದು ಹೇಳುವ ದ್ರಾವಿಡಪ್ರಭಾವದ ವಿಚಾರವೂ ಹೀಗೆಯೇ ಇದೆ.

ಯಾವ ಯದು-ತುರ್ವರ ವ್ರಜಗಳಲ್ಲಿ ಈ ಭಾಷೆಯು ಜನ್ಮತಾಳಿತೊ ಆ ಯದು-ತುರ್ವರೇ 'ದ್ರಾವಿಡ' ವರ್ಗೀಯ ಹಟ್ಟಿಕಾರರೆಂದು ಗ್ರಹಿಸಿದರೆ ಇದೆಲ್ಲ ತೊಡಕೂ ಸುಸೂತ್ರವಾಗಿ ಬಿಟ್ಟುಹೋಗುವುದು. ಅಚ್ಚ ಕಂನಾಡವರೇ ಎಂದು ಡಾ. ಅಳತೇಕರ, ಸ್ಮಿತ್ ಮೊದಲಾದವರು ನಿರ್ಧರಿಸಿದ ರಾಷ್ಟ್ರಕೂಟರೂ ಅಲ್ಲದೆ ಚಲುಕ್ಯ, ಗಂಗ, ವಿಜಯನಗರದ ತುಳುವಂಶದ ರಾಜರುಗಳು ಮೊದಲಾದವರು ತಮ್ಮ ಕುಲಪರಂಪರೆಯನ್ನು ಹೇಳುವಾಗ ತಾವು ಯದು-ತುರ್ವರ ಸಂತತಿಯೆಂದು ಹಲವೆಡೆಗೆ ಹೇಳಿಕೊಂಡಿದ್ದಾರೆ. ಹೀಗೆ ಸಾವಿರಾರು ವರುಷಗಳಿಂದ, ತಲೆತಲಾಂತರಗಳಿಂದ ಅಚ್ಚಳಿಯದೆ ಬಂದ ಪರಂಪರೆಯೆ ಸುಳ್ಳೆಂದು ತಿರಸ್ಕರಿಸುವ ಅನ್ಯಾಯವನ್ನೂ ಮಾಡಬೇಕಾಗುವುದಿಲ್ಲ. ಈ ರಾಜರು ಪ್ರತಿಷ್ಠೆಗಾಗಿಯೆ ಪುರಾತನ ವಂಶಗಳ ಹೆಸರನ್ನು ಹೇಳುತ್ತಿರುವುದಾಗಿದ್ದರೆ, ನಡುವೆ ಕೆಲರಾಜರಿಗೆ ರಾಮನ ಇಕ್ಷ್ವಾಕುವಂಶದವರೆಂದು ಹೇಳುವ ಮೋಹವೂ ಆಗಬಹುದಾಗಿದ್ದಿತಲ್ಲ! ಒಂದು ಮನೆತನದ ಚಲುಕ್ಯರಾಗಲಿ, ರಾಷ್ಟ್ರಕೂಟರಾಗಲಿ ತಾವು ಯಾದವರ ಪೀಳಿಗೆಯವರೆಂದು ಹೇಳಿ, ಬಳಿಕ ಮುಂದಿನವರು ಇಕ್ಷ್ವಾಕು ಅಥವಾ ಬೇರೆ ಇನ್ನೊಂದು ಯಾವ ಸಂತತಿಯವರೆಂದು ಹೇಳಿಕೊಂಡಿದ್ದರೆ ಇಂತಹ ಸಂದರ್ಭದಲ್ಲಿ ಈ ಪರಂಪರೆಗೆ ಅವಿಚ್ಛಿನ್ನವಾದುದೆಂದು ಹೇಳುವುದು ಅಸಮಂಜಸವಾಗುತ್ತಿದ್ದಿತು. ಸಂಸ್ಕೃತ ಒಂದು ವಾಕ್ಯವೂ ಗೊತ್ತಿಲ್ಲದ ಇಂದಿನ ಒಬ್ಬ ಬ್ರಾಹ್ಮಣನು ವಾಸಿಷ್ಠ ಗೋತ್ರದವರು ತಾವು ಎಂದು ಹೇಳಿದರೆ, ಆತನು ಸುಳ್ಳಾಡುವನೆಂದು ಆಕ್ಷೇಪಿಸಲಿಕ್ಕಾದೀತೆ? ನಮ್ಮ ದೇಶದಲ್ಲಿ ಇವು ಹಟ್ಟಿಕಾರರಲ್ಲಿ, ಜೈನರಲ್ಲಿ, ವೈದಿಕರಲ್ಲಿ ಅವಿಚ್ಛಿನ್ನವಾಗಿ ನಡೆದು ಬಂದ ಪರಂಪರೆಗಳುಂಟು. ಅವನ್ನು ಲೆಕ್ಕಕ್ಕೆ ಹಿಡಿಯದೆ ಹೋದರೆ ನಮ್ಮ ಸಾಂಸ್ಕೃತಿಕ ಇತಿಹಾಸವೆ ತಿಳಿಯುವ ಸಂಭವವಿಲ್ಲ.

ಈ ಕಾರಣದಿಂದಲೂ ಯದು-ತುರ್ವರು ಕಂನಾಡವರ ಮೊದಲಿಗರು; ಆರ್ಯೇತರರು, ಎಂದು ನನ್ನ ತಿಳುವಳಿಕೆಯಾಗಿದೆ. ಇವರು ಆರ್ಯಭಾಷೆಯನ್ನು ತಮ್ಮದಾಗಿ ಮಾಡಿಕೊಳ್ಳುವಾಗ ಈ ವ್ರಜಭಾಷೆಯು ರೂಪಗೊಂಡಿತು. ಪಾಕೃತದಲ್ಲಿ ಕಂನಾಡವರ ಪ್ರಭಾವವು ಕಾಣುವಂತೆ, ಕಂನಾಡವರ ಮೇಲೆ ಪ್ರಾಕೃತದ ಪರಿಣಾಮವೂ, ತುಂಬ ಆಗಿದೆ. ಕಂನುಡಿಯೊಳಗಿನ ತದ್ಭವ ಪ್ರಕರಣವು ಸುಮಾರಾಗಿ ಒಂದು ಪ್ರಾಕೃತ ವ್ಯಾಕರಣವೆ ಆಗಿದೆ.

ಜನಗಳ ಹುಟ್ಟು ಭಾಷೆ ಒಂದು; ಲೌಕಿಕ ಮಹತ್ವಕ್ಕಾಗಿ ಕಲಿತು ಆಡಬೇಕಾದ ಭಾಷೆ ಇನ್ನೊಂದು; ಹೀಗೆ ಎರಡು ಭಾಷೆಗಳನ್ನು ಬಳಸುವ ಪ್ರಸಂಗಗಳು ಹಲವು ಬಾರಿ ಉಂಟಾಗುತ್ತವೆ. ಈ ದ್ವಿಭಾಷೆಗಳ ಅಭ್ಯಾಸವು ಜನಗಳ ವಿಚಾರ ವಿಕಾಸಾದಿಗಳ ದೃಷ್ಟಿಯಿಂದ ಆವಶ್ಯಕವಾದರೂ ಆ ಜನಗಳು ಅದರಿಂದ ಒಂದು ಗುಂಡಾಂತರಕ್ಕೂ ಈಡಾಗುವರು. ಹೊಸದಾಗಿ ಕಲಿಯಬೇಕಾದ ಭಾಷೆಯಲ್ಲಿ ನೈಪುಣ್ಯವನ್ನು ಸಂಪಾದಿಸುವ ಆವಶ್ಯಕತೆ, ಆಮಿಷ, ಮೋಹಗಳು ಹೆಚ್ಚಾಗಿದ್ದಷ್ಟು ತನ್ನ ಮೊದಲಿನ ಭಾಷೆಯ ಮೇಲಿನ ಮಮತೆಯು ಕಡಿಮೆಯಾಗುವುದು. ಆ ಪರಭಾಷೆಗೆ ಸಾಮಾಜಿಕ, ರಾಜಕೀಯ ಅಥವಾ ಧಾರ್ಮಿಕ ಮಹತ್ವ, ಪ್ರತಿಷ್ಠೆಗಳಿದ್ದರಂತೂ ತೀರಿಯೆ ಹೋಯಿತು. ಅಂತಹ ಎಡೆಗಳಲ್ಲಿ ಆ ಪರಕೀಯ ಭಾಷೆಯೇ ಬೇಗನೆ ಆ ಜನಗಳ ಸ್ವಕೀಯ ಭಾಷೆಯಂತೆ ಆಗುವಲ್ಲಿ ಸಂದೇಹವಿಲ್ಲ.

ಯಾದವರಲ್ಲಿ ವ್ರಜಭಾಷೆಯು ಪ್ರಾಶಸ್ತ್ಯವನ್ನು ಪಡೆಯಲು ಇದುವೆ ಮುಖ್ಯಕಾರಣ. ಸಂಸ್ಕೃತ ಭಾಷೆಗೆ ಪ್ರಥಮಸ್ಥಾನ; ಸಂಸ್ಕೃತವು ಅಸಾಧ್ಯವಾದಾಗ ಪ್ರಾಕೃತವು ಅಷ್ಟೇ ಪವಿತ್ರವೂ, ಮಹತ್ವದ್ದೂ ಎನಿಸುವುದು. ಈ ಮನೋಭೂಮಿಕೆಯಲ್ಲಿ ಈಗಲೂ ವಿಶೇಷ ವ್ಯತ್ಯಾಸವಾಗಿಲ್ಲ. ಜೈನರು, ಬ್ರಾಹ್ಮಣಾದಿಗಳ ಪರಂಪರೆ, ರೂಢಿಗಳಲ್ಲಿ ಈ ಮಾತನ್ನು ಮನಗಾಣಬಹುದಾಗಿದೆ. ಮಾಧ್ವ ಉತ್ತರಾದಿಮಠದ ಪಂಚಾಂಗವು ಕಂನುಡಿಯಲ್ಲಿದ್ದರೂ ಕೊನೆಗೆ ದೇವನಾಗರಿ ಲಿಪಿಯಲ್ಲಾದರೂ ಅಚ್ಚಾಗಲೆಬೇಕು!

ದಕ್ಷಿಣಾಪಥದಲ್ಲಿ ಸಂಸ್ಕೃತದಂತೆ ಪ್ರಾಕೃತದ ಅಭ್ಯಾಸವೂ ಹಲವೆಡೆಗೆ ನಡೆಯುತ್ತಿತ್ತು. ಪ್ರಾಕೃತದ ಹೊಟ್ಟೆಯಿಂದಲೆ ಮುಂದೆ ಮರ್‍ಹಾಟಿಯು ಹುಟ್ಟಿತು. ಹಟ್ಟಿಕಾರರು ಸಂಸ್ಕೃತವನ್ನು ಸ್ವೀಕರಿಸುವಲ್ಲಿ ವ್ರಜ ಪ್ರಾಕೃತವು ಹುಟ್ಟಿಕೊಂಡಂತೆ, ಸಂಸ್ಕೃತ, ಪ್ರಾಕೃತ ಭಾಷಾಭಿಜ್ಞರು ಕಲಿತು ಆಡಲಾರಂಭಿಸಿದ ಈ ನಾಡನುಡಿ ಕಂನುಡಿಯ ರೂಪಗೊಂಡಿತು. ಕಂದಮಿಳ ವರ್ಗದ ಮೂಲಭಾಷೆಯಿಂದ ಬದಲಾವಣೆ ಹೊಂದಿ ಸ್ವತಂತ್ರವಾಗಿ ಬೆಳೆದು ಕೊಂಡಿತು. ಭಾಷೆಯಲ್ಲಿ, ಸಂಸ್ಕೃತ ಶಬ್ದಗಳ ಪರಿಣಾಮದಿಂದ ಮಹಾಪ್ರಾಣಾದಿ ಹೊಸ ಸ್ವರ, ವ್ಯಂಜನಗಳು ಬಂದು ಸೇರಿದುವು. ಹೊಸ ಭಾಷೆಯು ಜನ್ಮ ತಾಳಲಾರಂಭಿಸಿತು.

ಆರಂಭದಲ್ಲಿ ತದ್ಭವಗಳು ಹೆಚ್ಚು. ಏಕೆಂದರೆ ಅಂದಿನ ವರೆಗೆ ಸಂಸ್ಕೃತ ಶಬ್ದಗಳನ್ನು ಇದ್ದಕ್ಕಿದ್ದಂತೆ ಉಚ್ಚರಿಸುವುದೆ ಸಾಧ್ಯವಿದ್ದಿಲ್ಲ. ಕಂನಾಡ ಬಾಯಿಂದ-ತಮ್ಮ ಸೊಲ್ಲಿನಿಂದ ಸಂಸ್ಕೃತವನ್ನು ಆಡುತ್ತಿದ್ದರು. ತೈಲವೆನ್ನುವುದಕ್ಕೆ ಆಗದೆ ಅದು ತೆಲ್ಲವೆಂದು ಮಾರ್ಪಡುತ್ತಿದ್ದಿತು. 'ತೆಲಗಿ' ಎಂಬ ಊರು ವಿಜಾಪೂರ ಜಿಲ್ಹೆಯಲ್ಲಿದೆ. 'ಸುವರ್ಣ'ವೆಂಬುದು 'ಸೊನ್ನ'ವಾಗುತ್ತಿತ್ತು. ಸೊನ್ನ, ಸೊನ್ನಲಾಪುರವೆಂಬ ಊರುಗಳು ಈ ಬಗೆಯ ಉಚ್ಚಾರವು ನಮ್ಮ ನಾಡವರಲ್ಲಿ ಒಂದು ಕಾಲಕ್ಕೆ ಇದ್ದುದಕ್ಕೆ ಸಾಕ್ಷಿ. ಈ ಕಾರಣದಿಂದ ಪ್ರಾಕೃತದ ವ್ಯಾಖ್ಯೆಯನ್ನು, ಹೀಗೆ ಮಾಡಬಹುದಾಗಿದೆ. ಅಂದು ಕಂನಾಡ ಮೊದಲಿಗರ-ಹಟ್ಟಿಕಾರ ಯದು-ತುರ್ವರ ಸೊಲ್ಲಿನಿಂದ ಮಾರ್ಪಟ್ಟ ಸಂಸ್ಕೃತವೇ ಪ್ರಾಕೃತವೆಂದು ಹೆಸರುಗೊಂಡಿತು. ಗೋವಳರಾದ ಯದುತುರ್ವರೆಂದರೆ ಸುಶಿಕ್ಷಿತರಲ್ಲ. ಸಾಮಾನ್ಯ ಜನ, ಪ್ರಾಕೃತ ಜನ. ಆದುದರಿಂದ ಆ ಭಾಷೆಗೂ ಪ್ರಾಕೃತವೆಂಬ ಹೆಸರು ಬಂದಿತು. ಕಂನುಡಿಯಲ್ಲಿ ತೆಲ್ಲ, ಪಿತ್ಥ, (ಪಿತ್ಥೆ), ಸೊನ್ನ, ಗಬ್ಬ ಮೊದಲಾದ ಅಚ್ಚ ಪ್ರಾಕೃತಶಬ್ದಗಳು ಬಳಕೆಯಲ್ಲಿವೆ. ಆದರೆ, ಪ್ರಾಕೃತದ ಮಗಳೆಂದು ನಿಶ್ಚಿತವಾಗಿರುವ ಮರ್‍ಹಾಟಿಯಲ್ಲಿ ತೇಲ, ಪೀಠ, ಸೋನೆ, ಗಾಭ ಮೊದಲಾದ ಒಂದು ಮುಂದಿನ ಅವಸ್ಥೆಯ ಪದಗಳು ರೂಢವಾಗಿವೆ. ಮರ್‍ಹಾಟಿಯ ತಾಯ್ನುಡಿಯು (ಪ್ರಾಕೃತವು) ಇಲ್ಲಿ ಕಂನುಡಿಯಲ್ಲಿ ಹುದುಗಿಕೊಂಡಿರುವುದನ್ನು ನಮ್ಮವರು ಗಮನಿಸಲೆ ಇಲ್ಲ! ಗಮನಿಸಿಯೂ ಇಲ್ಲ. ಇದನ್ನು ಸರಿಯಾಗಿ ತಿಳಿದುಕೊಳ್ಳದುದರಿಂದಲೆ ಕಂನುಡಿ ಮತ್ತು ಮರ್‍ಹಾಟಿಗಳ ತೊಡಕು ಹಲವರಿಗೆ ದಿಗ್ಭ್ರಾಂತಿಯನ್ನುಂಟು ಮಾಡುತ್ತಲಿದೆ.

ಯದು-ತುರ್ವರ ಹಟ್ಟಿಗಳಿದ್ದ ಯಮುನಾ ನದಿಯ ಹತ್ತಿರದ ಊರ ಹೆಸರು ಮಥುರಾ! ಇದರೊಳಗಿನ ಕೊನೆಯ ಪದವು ಊರಾ, ಊರು ಎಂಬುದಾಗಿದೆ. ಇದಕ್ಕೆ ಸಾಧಾರಣವಾಗಿ ಸಮಾನ ಉಚ್ಚಾರದ ಮಾತ್ತೂರು ಮತ್ತೂರುಗಳನ್ನು ಹೋಲಿಸಿ ನೋಡಬೇಕು. (ಹತ್ತಿ) ಮತ್ತೂರು, ಮಾತ್ತೂರುಗಳು ನಮ್ಮ ಕಡೆಗೆ ಇವೆ. ಮೂತ್ತೂರು ಅಥವಾ ಮತ್ತೂರು ಮಥುರಾ ಆಗಿರುವುದು ಅಸಂಭವವಲ್ಲ. ಮಾ ಎಂದರೆ ಪ್ರಾಣಿಗಳು, ದನಗಳು ಎಂಬರ್ಥದ ಪದವೊಂದು ತಮಿಳಿನಲ್ಲಿದೆ. ಮಥುರಾ-ಮಾತ್ತೂರು ಎಂದರೆ (ದನಗಳ) ಹಟ್ಟಿ ಎಂಬರ್ಥವೆ ಇರಬಹುದೆಂದು ತೋರುತ್ತದೆ. ವೃಂದಾವನ; ವೃಂದವೆಂದರೆ ಸಮೂಹ, ಗುಂಪು, ಗುಂಪುಗೂಡಿ ಇರುವ ಗೌಳಿಗರ ನೆಲೆಗೆ ವೃಂದಾವನವೆಂಬ ಹೆಸರು ಬಂದಿರಬೇಕು. ವೃಂದಾ ಎಂದು ತುಳಸಿಗೂ ಹೆಸರಿದೆ. ವೃಂದಾವನವೆಂದರೆ ತುಳಸಿಯ ಬನವೆಂದು ಅರ್ಥವಾಗುವುದು. ಆದರೆ, ಅಲ್ಲಿ ಹುಟ್ಟಿದ 'ವ್ರಜ' ಭಾಷೆಯ ಹೆಸರಿನಿಂದ ವೃಂದಾವನಕ್ಕೆ ಗುಂಪು ಎಂಬರ್ಥವೆ ಹೆಚ್ಚು ಸಮಂಜಸವೆಂದು ಹೇಳಬೇಕಾಗುತ್ತದೆ. ಬನಹಟ್ಟಿ ಎಂಬೀ ಬಗೆಯ ಕಂನಾಡಿನ ಊರುಗಳನ್ನು ಇಲ್ಲಿ ಹೋಲಿಸಿ ನೋಡಬಹುದು.

ಮತ್ತೂರು ಅಥವಾ ಮಥುರೆಯ ಪಕ್ಕದಲ್ಲಿ ಹರಿವ ನದಿಗೆ-ಯಮುನೆಗೆ ಕಾಳಿಂದೀಯೆಂಬ ಇನ್ನೊಂದು ಹೆಸರಿದೆ. ಆ ನದಿಯ ನೀರು ಕರಿದು. ಯಮುನೆಗೆ ಕಾಳಿಯೆಂಬ ಹೆಸರು ಕರಿದು ಎಂಬ ಕಂನುಡಿಯಿಂದ ಬಂದುದೆನ್ನಲು ಆಸ್ಪದವಿದೆ.

ಇಲ್ಲಿ ಸಮೀಪದಲ್ಲಿಯೆ ಇರುವ ಗ್ವಾಲೇರಿಯುಂಟು. ಗ್ವಾಲೇರಿಯ ಹೆಸರು ಗೋಪಾಲಿಕ ಎಂಬುದಾಗಿದ್ದಿತೆಂದು ಡಾ. ಹಲ್ಮನ ಅಭಿಪ್ರಾಯವಿದೆ; ಗೋಪಾದ್ರಿಯೆಂದು ಕೀಲ್ಹಾರ್ನನು ಹೇಳುವನು[೩] ಗೋಪಾದ್ರಿಯ್ಲು ಗ್ವಾಲೇರಿಯಾಯಿತೆಂದು ಬಗೆಯುವುದಕ್ಕಿಂತ ಗೌಳಿ-ಏರಿ ಎಂದು ಗ್ರಹಿಸುವುದು ಹೆಚ್ಚು ಯೋಗ್ಯವೆಂದು ನನ್ನ ತಿಳುವಳಿಕೆ. ಏಕೆಂದರೆ ಹಟ್ಟಿ, ಊರು, ಪಾಡಿಗಳು ಇರುವಲ್ಲಿ 'ಏರಿ' ಇರುವುದು ಅಸಂಭವವಲ್ಲ. ಇಂದೂರು, ಹೋಳಕರರ ರಾಜಧಾನಿ. ಗ್ವಾಲೇರಿ-ಗೌಳಿಯೇರಿ ಸಿಂದರ ರಾಜಧಾನಿ. ಈ ಸಿಂದರು ಪಾಟೀಲರು. ಮಹಾದಾಜಿ ಸಿಂದನು ಪಾಟೀಲಬುವಾ ಎಂದು ಹೆಸರಾಗಿದ್ದನು.

ಹೀಗಿದು ಉತ್ತರದಲ್ಲಿ ಕಂಡುಬಂದರೆ ದಕ್ಷಿಣದಲ್ಲಿ ಇದಕ್ಕೆ ಸರಿಯಾಗಿ ತಿರುವುಮುರುವು! ಬೈಲಹೊಂಗಲ, ಚಿಂಚಲಿ, ಅಂಬೋಲಿ, ಬೋರಗಾವ, ಭೋಪಾಳಪುರ (ಧಾ.); ದೂಧನಿ (ವಿ.) ದೂಧಿಹಾಳ; ಗೂಳವಾಡಿ; ತಿಳಗೂಳ; ಚಾರಮಾಡಿ; ಸಾತೂರು; ಎಕ್ಕುಂಡಿ; ಮ್ಹೈಸವಳ್ಳಿ, ಮ್ಹೈಸಊರು, ಸೋನಾರಹಳ್ಳಿ (ಸಾಲೆಂ)! ಅಚ್ಚ ಸಂಸ್ಕೃತ ಪದಗಳ ಊರುಗಳಂತೂ ಸರಿ. ಆದರೆ, ಅಂಬಾ, ಚಿಂಚ, ಬೋರ, ಭೊಪಳಾ, ಧೂಧ, ತೀಳ, ಗೂಳ ಮುಂತಾದ ದಿನಸಿನ ಹೆಸರುಗಳು, ಎಕ್ಕ, ಚಾರ, ಸಾತ ಮುಂತಾದ ಅಂಕಿಗಳೂ ಮ್ಹೈಸ, ಬೈಲ ಮೊದಲಾದ ಪ್ರಾಣಿಗಳ ಹೆಸರುಗಳೂ ಸೋನಾರ ಮೊದಲಾದ ವೃತ್ತಿವಾಚಕ ನಾಮಪದಗಳೂ ಸಾಲೆಂದ ವರೆಗೂ ಹಬ್ಬಿವೆ! ಇವು ಸಂಸ್ಕೃತವಲ್ಲ. ಪ್ರಾಕೃತಪದಗಳೆಂದು ಕೆಲರು ಸಮಾಧಾನಪಟ್ಟುಕೊಳ್ಳಬಹುದು. ಆದರೆ, ಇವನ್ನು ಮರ್ಹಾಟಿಯ ಮಾತುಗಳೆಂದು ಒಪ್ಪಿಕೊಳ್ಳುವುದೇ ಹೆಚ್ಚು ನ್ಯಾಯವಾಗಿದೆ. ಇವು ಮರ್ಹಾಟಿ ಎಂದು ಒಪ್ಪಿಕೊಂಡರೆ 'ಆರಿಯಹಳ್ಳಿ'ಗಳು ಈ ಭಾಗಗಳಲ್ಲಿ ಕಾಣಿಸಿಕೊಳ್ಳುತ್ತಿರುವುದರ ಅರ್ಥವಾಗುವುದು.

ಮೇಲೆ ಸೂಚಿಸಿದಂತಹ ಪದ-ಪ್ರಯೋಗಗಳು ಪ್ರಾಕೃತವೆಂದರೆ ಕೆಲರಿಗೆ ಒಪ್ಪಿಗೆ; ಮರ್ಹಾಟಿಯೆಂದರೆ ಅಸಮಾಧಾನ! ಪ್ರಾಕೃತದ ಉಚ್ಚಾರಗಳಲ್ಲಿರುವರು ಕಂನುಡಿಯ ಪ್ರಭಾವವು ಕಡಿಮೆಯಾದರೆ ಅದು ಮುಂದೆ ಮರ್ಹಾಟಿ ಎನಿಸುವುದು. ಕಂನುಡಿಯ ಶಬ್ದಗಳ ಮೊದಲನೆಯ ಭಾಗದ ಮೇಲೆ ಆಘಾತವಿರುತ್ತದೆ. ಪ್ರಾಕೃತದಲ್ಲೂ ಇದೇ ತೆರನಾಗಿದೆ. ಉದಾ: 'ಅಪ್ಪ;' ಕಕ್ಕ; 'ವಿಷಯ;' ಪುಸ್ತಕ ಮುಂ. ಈ ತೆರನಾಗಿ ಮೊದಲನೆಯ ಅಕ್ಷರವನ್ನು ಜೋರಿನಿಂದ ಬಡಿದು ಹೇಳುವ ವಾಡಿಕೆಯ ಮೂಲಕ ದಿವ್ಸ, ಕೆಲ್ಸ, ವಿಷ್ಯ ಎಂಬಂತೆ ಬರೆವವರೂ ಹಳ್ಳಿಗಳಲ್ಲಿ ಉಂಟು. ಸೊನ್ನ, ಚೊಕ್ಕ, ಅಪ್ಪ, ಕಕ್ಕ ಇವುಗಳ ಮೊದಲನೆಯ ಭಾಗದ ಆಘಾತವು ಸಡಲಿ ಕೊನೆಯ ಭಾಗಕ್ಕೆ ಹೋಗಲು ಅದುವೆ ಆರಿಯ (ಮರ್ಹಾಟಿ) ಮಾತೆನಿಸುವುದು. ಸೋನ, ಚೋಖ, ಆಬಾ, ಕಾಕಾ ಮುಂ. ಈ ಕಾರಣದಿಂದ ಮೊದಲು ಪ್ರಾಕೃತವೆಂದು ಎನಿಸುತ್ತಿದ್ದುದೇ ಮುಂದೆ ಮರ್ಹಾಟಿಯಾಗಿ ಮಾರ್ಪಡಲು ಬಹಳ ಶ್ರಮಪಡಬೇಕಾಗಲಿಲ್ಲ. ಕೆಲವೊಂದು ಕಾಲಾವಧಿಯ ತರುವಾಯ ಅದು ಆ ರೂಪವನ್ನೂ ತಾಳಿತು. ೧೫ನೆಯ ಶತಮಾನದ ಸುಮಾರಿನ ಕುಮಾರವ್ಯಾಸನು ಇಂತಹ ಪದಗಳನ್ನು ಧಾರಾಳವಾಗಿ ಬಳಸಿದ್ದಾನೆ. ಅವುಗಳ ಪ್ರತಿರೂಪಗಳು ಮರ್ಹಾಟಿಯಲ್ಲಿ ಇವೆ. ಈ ಸುಮಾರಿಗೆ ಮರ್ಹಾಟಿಯು ಗ್ರಂಥಸ್ಥಭಾಷೆಯಾಗಿ ಬಳಕೆಯಲ್ಲಿತ್ತು. ಆದಕಾರಣ ಕುಮಾರವ್ಯಾಸನ ಆ ಪದಗಳು ಪ್ರಾಕೃತದುವು ಎಂಬುದು ಸರಿಯಾಗಲಾರದು.

ಅಚ್ಚ ಕಂನುಡಿಯಲ್ಲಿಯೆ ಬರೆವ ಪ್ರತಿಜ್ಞೆಯನ್ನು ಮಾಡಿ ಕಾವ್ಯವನ್ನು ರಚಿಸಿದ ಆಂಡಯ್ಯನಲ್ಲಿ ಹೇರಳವಾಗಿ ಪ್ರಾಕೃತ ಪದಗಳು ತುಂಬಿಕೊಂಡಿವೆ. ಕಂನುಡಿಯು ಪ್ರಾಕೃತದಿಂದ ಭಿನ್ನವಲ್ಲವೆಂದು ಅಂದಿನ ವಿದ್ವಾಂಸರ ನಂಬುಗೆಯಿದ್ದಿತು. ಈ ಕಾರಣದಿಂದಲೆ ಕಂನುಡಿಯ ಹೊಟ್ಟೆಯಲ್ಲಿ ಮರ್ಹಾಟಿಯು ಪ್ರಾಕೃತದ ಹೆಸರದಿಂದ ಸುಖವಾಗಿ ಬೆಳೆದು ದೊಡ್ಡದಾಗಿ ಮುಂದೆ ಜನ್ಮತಾಳಿತು.

ಆಂಡಯ್ಯನು ರಾಹುತರ ವರ್ಣನೆಯಲ್ಲಿ ಅವರಾಡಿದ ಕೆಲವು ಮಾತುಗಳನ್ನು ಉಲ್ಲೇಖಿಸಿದ್ದಾನೆ. ಝಾರೇ! ಜಝಾರೆ!ಹಳೂರೇ!ಹೋಹೊ!ಮಝಾ! ಎಂಬುಲಿ ನೆಗೆವಿನೆಗಂ ಬಿಟ್ಟು ಮಾರಾಂತ ಮೇಲಾಳ್ಗಳನಾಗಳ್ ತಳ್ತುಪೊಯ್ದು....॥೨೭೯॥ ಆಂಡಯ್ಯನ ಕಾಲ ಕ್ರಿ.ಶ. ಸು. ೧೨೩೫

ಕ್ರಿ.ಶ. ೧೨೦೯ರ ಸುಮಾರಿನ ಜನ್ನನಲ್ಲಿಯೂ ಈ ಬಗೆಯ ವಾಕ್ಯಗಳು ಬಂದಿವೆ. 'ಊರಿ, ಊತ, ಮಾಗಾ ಬೈಸ ಜಾತೂ ಹಳೂ' (ಅನಂತನಾಥ ಪುರಾಣ) ಕ್ರಿ. ಶ. ೯೩೨ರ ಸುಮಾರಿನ ಪಂಪ ಮಹಾಕವಿಯು ಅರ್ಜುನನ ಪ್ರಶಂಸೆಯಲ್ಲಿ ದ್ರೋಣನಿಂದ ನುಡಿಸಿದ ನುಡಿಗಳಿವು: 'ಅರೆ, ಹೋಯ ಜ (ಜಾ), ಬಾಪ್ಪ' ಎಂದು ಹರಿಗನಂ ಗುರು ಪೊಗಳ್ದಂ. ಮರ್ಹಾಟಿಯ ಮೊದಲನೆಯ ಶಾಸನವು ದೊರೆತುದು ಎಲ್ಲಿ? ಶ್ರವಣಬೆಳುಗೊಳದಲ್ಲಿ! ಕ್ರಿ. ಶ. ೯೭೮ರ ಸುಮಾರಿಗೆ ಆದ ಚಾವುಂಡರಾಯನು ಬರೆಯಿಸಿದ ಶಾಸನ ವಾಕ್ಯಗಳಲ್ಲಿ ಇದೂ ಒಂದು: ಚಾವುಂಡರಾಯೇಸುತ್ತಾಲೇ ಕರವಿಯಲೇ'.

ಇಂತಿದು ಕಂನಾಡ ತೆಂಕಣದಲ್ಲಿ ಆರಿಯಮಾತು; ಮರ್ಹಾಟದ ಉತ್ತರದ ತುತ್ತತುದಿಯಲ್ಲಿ ಕಂನುಡಿಯ ಊರು, ಜನ! ಕಂನುಡಿಯ ಹೊಟ್ಟೆಯೊಳಗಳಿಂದ ಮರ್ಹಾಟಿಯು ಜನ್ಮತಾಳಿದರೆ. ಮರ್ಹಾಟಿಯಲ್ಲಿ ಕಂನುಡಿಯ ಧಾತುಗಳು! ಈ ಸಂದರ್ಭದಲ್ಲಿ ನ್ಯಾಯಮೂರ್ತಿ ರಾನಡೆಯವರು ತಮ್ಮ ಗ್ರಂಥದಲ್ಲಿ ಬರೆದ ಮಾತುಗಳ ಸತ್ಯತೆಯು ಮನದಟ್ಟಾಗುವುದು

> "The mixture of the two elements (Marathi and Dravidian) is best illustrated by the peculiarities of the (Marathi) language, whose base is Dravidian, but whose structure have been entirely fashioned by Aryan influence."

ಈ ಮೊದಲು ವಿವರಿಸಿದಂತೆ ಹಟ್ಟಿಕಾರರು ಕೃತಿವೀರರು. ಇವರ ವೀರಕೃತಿಗಳನ್ನು ಬರೆವ ಕೆಲಸವನ್ನು ವಹಿಸಿಕೊಂಡವರು ಬೇರೆ. ಅವರು ಆ ಕೃತಿಗಳನ್ನು ಸಂಸ್ಕೃತದಲ್ಲಿ ಬರೆದರು; ಪ್ರಾಕೃತದಲ್ಲಿ ಬರೆದರು. ಕುನುಡಿಯನ್ನು ಕಡೆಗಣಿಸಿದರು. ಕಂನುಡಿಯ ಜನಗಳು ವೇದಕಾಲದಷ್ಟು ಹಳಬರಾದರೂ ಅಂದಿನ ಅವರ ಭಾಷೆಯಲ್ಲಿಯೆ ಅವರ ಸಾಹಿತ್ಯವು ಬರಲಿಲ್ಲ. ಅದು ಹೊರಬರಬೇಕಾದರೆ ಕ್ರಿಸ್ತಶಕದ ಮೊದಲ ದಶಕವು ಮೂಡಬೇಕಾಯಿತು! ಈಗ ಕಾಲೇಜುಗಳು, ಮೇಲಿನ ನ್ಯಾಯಾಲಯಗಳು ಕಾಯಿದೆ ಮಂಡಲಗಳು ಮೊದಲಾದುವುಗಳ ವ್ಯವಹಾರ ವೆಲ್ಲವೂ ಇಂಗ್ರೇಜಿಯಲ್ಲಿ ನಡೆದಂತೆ ಅಂದು ಸಂಸ್ಕೃತ, ಪ್ರಾಕೃತಗಳಲ್ಲಿ ಕೆಲಸ ಸಾಗುತ್ತಿದ್ದಿತು. ಕೋರ್ಟಿನಲ್ಲಿ ದೇಶಭಾಷೆಯಲ್ಲಿ ಸಾಕ್ಷಿ ನುಡಿದರೂ ಅದನ್ನು ಇಂಗ್ರೇಜಿಯಲ್ಲಿ ಬರೆದುಕೊಳ್ಳುವರು. ಸಂಸ್ಕೃತ ಭಾಷೆಯಲ್ಲಿಯೇ ಕುರುವಂಶದ ಕತೆಯುಂಟೆಂದು ಅವರ ಮಾತು. ಸಂಸ್ಕೃತವೇ ಆಗಿದ್ದಿತೆಂದು ತರ್ಕಿಸುವುದು ಅಸಮರ್ಪಕವಾಗಿದೆ. ಭಾರತದಲ್ಲಿಯೆ ಒಂದೆಡೆಗೆ ಓಲಗದ ವರ್ಣನೆಯಲ್ಲಿ 'ಅಲ್ಲಿ ನೆರೆದ ರಾಜರು ನಾನಾ ದೇಶೀಯ ತಮ್ಮ ತಮ್ಮ ಭಾಷೆಗಳಲ್ಲಿ ಮಾತನಾಡುತ್ತಿದ್ದರು' ಎಂದು ಹೇಳಿದೆ.

ಆರ್ಯರ ಪ್ರಭಾವಕ್ಕೆ ಒಳಗಾಗಿ ಹಟ್ಟಿಕಾರರು-ಯದುತುರ್ವರು ಸಂಸ್ಕೃತ, ಪ್ರಾಕೃತಗಳಿಗೆ ಮನಸೋತರು. ಅದರ ಪರಿಣಾಮವೆ ಪ್ರಾಕೃತ. ಕಂನುಡಿಯಲ್ಲಿ ಮಹಾಪ್ರಾಣಾದಿಗಳ ಸೇರ್ಪಡೆ. ಮರ್ಹಾಟಿಯೆಂಬುದು ಈ ಬಗೆಯ ಪರಿವರ್ತನದಲ್ಲಿ ಹುಟ್ಟಿಕೊಂಡ ಆನುಷಂಗಿಕ ಫಲ. ಆರಂಭದಲ್ಲಿ ಮರ್ಹಾಟಿಯನ್ನು ಆಡುವ ಜನ ಮರ್ಹಾಟದ ಕಡೆಗೆ ವಿಶೇಷವಾಗಿದ್ದರೂ ಕಂನಾಡಿನ ಉಳಿದ ಭಾಗಗಳಲ್ಲೂ ಅದು ರೂಪಗೊಳ್ಳುತ್ತಲೆ ಇದ್ದಿತು. ಯಾದವರಲ್ಲಿ ಒಳ ಬಣಗಳಾಗಿ ಸೇವುಣರೂ ಹೊಯ್ಸಳರೂ ಎದುರಾಳಿಗಳಾಗಿ ನಿಲ್ಲದಿದ್ದರೆ ಇಡಿಯ ಕಂನಾಡೆ ಮರ್ಹಾಟವಾಗುವ ಹೆದರಿಕೆಯಿತ್ತು. ಶ್ರವಣಬೆಳುಗುಳದ ಶಾಸನ, ಪಂಪ, ಜನ್ನ, ಆಂಡಯ್ಯಾದಿಗಳು ಒಕ್ಕಣಿಸಿದ ಆರಿಯ ಮಾತುಗಳು ಇದರ ಸೂಚನೆಯೆ ಆಗಿದೆ.

ಆದರೆ, ಹನ್ನೆರಡನೆಯ ಶತಮಾನದ ಸೇವುಣರ ಮತ್ತು ಹೊಯ್ಸಳರ ರಾಜಕೀಯ ಹೋರಟೆಯಲ್ಲಿ ಒಬ್ಬರು ಹೆಚ್ಚಾಗಿ ಆರಿಯರ ಬೆಂಬಲದಿಂದಲೂ ಇನ್ನೊಬ್ಬರು ಮುಖ್ಯವಾಗಿ ಕಂನಾಡವರ ನೆರವಿನಿಂದಲೂ ತಮ್ಮ ಸಿಂಹಾಸನಗಳನ್ನು ಉಳಿಸಿಕೊಳ್ಳಬೇಕಾಯಿತು. ಈ ಕಾರಣದಿಂದ ಮರ್‍ಹಾಟಿಗೆ ತನ್ನ ಒಂದು ಸ್ವಂತದ ರಾಜ್ಯವೆ ದೊರೆತಂತಾಯಿತು. ಇದಕ್ಕೂ ಮೊದಲು ಮರ್‍ಹಾಟಿಗೆ ಪ್ರತ್ಯಕ್ಷವಾಗಿ ಎಲ್ಲಿಯೂ ರಾಜಾಶ್ರಯವೆಂಬುದು ಇದ್ದಿಲ್ಲ. ಸೇವುಣ ಯಾದವರಲ್ಲಿ ಮಹಾದೇವರಾಯನ ವರೆಗೂ ಓಲಗದಲ್ಲಿ ಕಂನುಡಿಯೆ ನಡೆಯುತ್ತಿದ್ದಿತ್ತು. ಧಾಡಿಯಪ್ಪ ಮೊದಲಾದ ಆ ಮನೆತನದ ಹೆಸರುಗಳು, ಮಲ್ಲಿಸೆಟ್ಟಿ ಮೊದಲಾದ ಓಲಗವವರ ಹೆಸರುಗಳೂ ಅಲ್ಲಿಯ ಕಂನುಡಿಯ ಪ್ರಭಾವವನ್ನು ಹೇಳುತ್ತವೆ.

ಆ ಕಾಲದ ಮರ್‍ಹಾಟಿಭಾಷೆಯ ಅಧ್ವರ್ಯುಗಳಾಗಿ ಶುಕ್ಲ ಯಜುರ್ವೇದಿಗಳು, ಮುಖ್ಯವಾಗಿ ಮಾಧ್ಯಂದಿನ ಬ್ರಾಹ್ಮಣರು ಬಹಳ ಮಹತ್ವದ ಕಾರ್ಯ ಜರುಗಿಸಿದ್ದಾಗಿ ಡಾ. ಇರಾವತಿಬಾಯಿ ಕರ್ವೇಯವರು ಕಂಡು ಹಿಡಿದಿರ ವರು. ಜ್ಞಾನೇಶ್ವರಾದಿ ಅಂದಿನ ಮೇಧಾವಿ ನೇತಾರರೆಲ್ಲ ಈ ಶಾಖೆಯವರಾಗಿದ್ದರು. ಇತ್ತ, ಹೊಯ್ಸಳ ಕರ್ನಾಟರೆಂದು ಹೆಸರಾಂತ ಬ್ರಾಹ್ಮಣರು ಕೃಷ್ಣ ಯಜುರ್ವೇದಿಗಳಾಗಿರುವುದು ಬಹಳ ವಿಚಾರಾರ್ಹವಾಗಿದೆ. 'ಕನ್ನಡ ಬ್ರಾಹ್ಮಣ'ರೆಂದು ಶಾಸನದಿಂದ ನಿಶ್ಚಿತವಾಗಿರುವ ಸಾಯಣ ಮಾಧವರೂ ಕೃಷ್ಣಯಜುರ್ವೇದಿಗಳೇ.

೧೩ನೇ ಶತಮಾನದಲ್ಲಿ ಯಜುರ್ವೇದಿಗಳು ಸಮಾಜದ ಮುಂದಾಳುಗಳಾಗಿದ್ದರೆಂದೂ ಅವರ ಎರಡು ಪಂಗಡಗಳಲ್ಲಿ ಒಬ್ಬರು ಮಹಾರಾಷ್ಟ್ರವನ್ನು ಕಟ್ಟುವುದಕ್ಕೂ ಇನ್ನೊಬ್ಬರು ಕರ್ನಾಟದ ಪುನರುಜ್ಜೀವನಕ್ಕೂ ಕಾರಣರಾದರೆಂದೂ ಕಂಡುಬರುತ್ತದೆ. ಋಗ್ವೇದಿಗಳು ಇವರನ್ನು ಹಿಂದಿಕ್ಕಿ ೧೬-೧೭ನೆಯ ಶತಮಾನದಿಂದ ಮುಂದೆ ಬಂದರೆಂದು ತೋರುತ್ತದೆ. ನಮ್ಮ ನಾಡಿನ ಹಳೆಯ ವತನದಾರ ಮನೆತನದ ಕುಲಕರ್ಣಿ, ನಾಡಗೌಡ ಮೊದಲಾದ ಮನೆತನಗಳು ಯರ್ಜುವೇದಿಗಳವೆ ಆಗಿವೆ. ಹಳಬರನ್ನು ಹಿಂದಿಕ್ಕಿ ಹೊಸಬರ ಚೆಲ್ಲಾಟ. ಯರ್ಜುವೇದಿಗಳು ಹಿಂದುಳಿದವರು; ಋಗ್ವೇದಿಗಳು ಸಮಾಜದಲ್ಲಿ ಗಣ್ಯರೆನಿಸಿದರು.

ಕಂನಾಡ ಮೊದಲಿಗರು ಬಹಳ ಪುರಾತನದಿಂದಲೂ ಆರ್ಯೀಕರಣಕ್ಕೆ ಮೈಗೊಟ್ಟುದರಿಂದ ಈ ನಾಡಿಗರಲ್ಲಿ ತಮ್ಮ ಭಾಷೆಯ ಅಭಿಮಾನವು ವಿಶೇಷವಾಗಿರಲಿಲ್ಲ. ರಾಷ್ಟ್ರಕೂಟರು ಚಾಲುಕ್ಯಾದಿಗಳಿಗೆ ಔತ್ತರೇಯರ ವಿವಾಹಾದಿ ಸಂಬಂಧಗಳು ಉಂಟಾಗುತ್ತಿದುವು. ಇದರಿಂದ ಅರಮನೆಯಲ್ಲಿ ಪ್ರಾಕೃತ ಎಂದರೆ ಮರ್‍ಹಾಟಿಯ ಪ್ರಾಥಮಿಕರೂಪಕ್ಕೆ ಇಂಬು ದೊರೆಯುತ್ತಿತ್ತು. ಯಾದವರು, ಜಾಧವರು, ಮರ್‍ಹಾಟದ ಆಧಾರಸ್ತಂಭವೆನಿಸಿದರು. ಪುರಾತನ ಕಂನಾಡ ಯದುಗಳ ಅವಶೇಷವೆಂದು ಮೈಸೂರ ಒಡೆಯರ ಒಂದು ಮನೆತನವು ಮಾತ್ರ ಉಳಿದುಕೊಂಡಿದೆ. ಹೊಯ್ಸಳವೆಂಬ ಅಡ್ಡ ಹೆಸರಿನವರು ಭೋಸಲೆಗಳೆಂದು ಡಾ. ಸಾಲೆತ್ತೂರರ ಅಭಿಪ್ರಾಯವಿದೆ. ಬಳ್ಳಾರಿ ಜನ್ಮಭೂಮಿಯಾದ ಸಾತವಾಹನರು ಪ್ರಾಕೃತವನ್ನೇ ಮುಖ್ಯಭಾಷೆಯಾಗಿ ಸ್ವೀಕರಿಸಿದರು. ಸಿಂದವಾಡಿ ಸಾಸಿರವೆಂದು ಕೆಚ್ಚ ಕಂನಾಡಿನಲ್ಲಾಳಿದ ಸಿಂದರ ಮನೆತಗಳ ಅಡ್ಡಹೆಸರು ನಮ್ಮಲ್ಲಿ ದುರ್ಲಭ. ಸಿಂಧೆಗಳೆಲ್ಲ ಮರ್‍ಹಾಟರೇ! ಸಾಮಂತರು, ಮಾನೆಗಳೂ ದವಿಗಳೂ ಮರ್‍ಹಾಟರೇ! ಚಾಲುಕ್ಯರ ಹೆಸರಿಗೆ ಹೋಲುವ ಸೋಳುಂಕಿಗಳು ಆರಿಯರಲ್ಲಿ! ಕದಂಬರ ಹೆಸರಿಗೆ ಸಮೀಪದ ಕದಮಗಳು ಹಾನಗಲ್ಲ, ಹಲಸಿಗೆ, ಗೋವೆ, ಬನವಾಸಿ ದೇಶದಲ್ಲಿ ಕನ್ನಾಡವರಾಗಿ ಇರಬೇಕಲ್ಲವೇ? ಆದರೆ, ಇಲ್ಲಿ ಕೆಲವರಿದ್ದರೂ ಅವರೆಲ್ಲ ಆರಿಯರೆಂದೇ ತಿಳುವಳಿಕೆ!

ರಾಷ್ಟ್ರಿಕರು ಕಂನಾಡವರಷ್ಟೇ; ರಟ್ಟವೆಂಬುದು ರಾಷ್ಟ್ರಿಕ ತದ್ಭವ. ಆದಕಾರಣ ರಟ್ಟರು ರಾಷ್ಟ್ರಿಕರೂ ಒಂದೇ. ರಡ್ಡಿ ಎಂಬ ಪದವು ರಟ್ಟದಿಂದಲೇ ಬಂದುದಾಗಿದೆ. ತೆಲುಗಿನ 'ರೆಡ್ಡಿ' ಎಂಬ ಪದವು ರಡ್ಡಿಯಿಂದ ನಿಷ್ಪನ್ನವಾಗಿದೆ. ರೆಡ್ಡಿಯೆಂಬದು ಸ್ವತಂತ್ರಪದವಲ್ಲ. ಅಥವಾ ಕೆಲವರು ಎಣಿಸಿದಂತೆ ರಾಜನ್ ಶಬ್ದದಿಂದ ನಿಷ್ಪನ್ನವಾದುದೂ ಅಲ್ಲ. ರಾಷ್ಟ್ರಿಕ-ರಟ್ಟ-ರಡ್ಡಿ-ರೆಡ್ಡಿ. ತೆಲುಗು ಪ್ರೊಫೆಸರ ಡಾ. ಸಿ. ನಾರಾಯಣರಾಯರೂ ಇದೇ ಅಭಿಪ್ರಾಯದವರಾಗಿದ್ದಾರೆ. ಆಂಧ್ರ ಇತಿಹಾಸ ಸಂಶೋಧನ ಪ್ರತಿಕೆಯು ೧೯೨೩ನೆಯ ಇಸವಿಯ ಸಂಪುಟದಲ್ಲಿ ಈ ವಿಷಯವಾಗಿ ಒಂದು ಲೇಖನವು ಬಂದಿರುವುದಾಗಿಯೂ ತಿಳಿಯುತ್ತದೆ.

ರಾಷ್ಟ್ರಿಕರು, ಮುಂದೆ ಯಾರು ರಾಷ್ಟ್ರಕೂಟರೆಂದು ಖ್ಯಾತಿ ಪಡೆದರೊ ಆ ಜನ ಕಂನಾಡಿನವರು; ಕಂನುಡಿಗೆ ಪ್ರೋತ್ಸಾಹಿಸಿದವರೆಂದು ಡಾ. ಅಳತೇಕರರು ಬರೆಯುತ್ತಾರೆ. ಆದರೆ, ಆ ರಾಷ್ಟ್ರಿಕರ ಸಂತಾನವೆನಿಸಿದ ರೆಡ್ಡಿಗಳು ಇಂದು ತೆಲುಗಿನ ಅಭಿಮಾನಿಗಳು! ಇಷ್ಟೇ ಅಲ್ಲ; ಕಂನಾಡಿನಲ್ಲಿರುವ ರಡ್ಡಿ ಜನಗಳು ಕೂಡ ತಾವು ತೆಲುಗರೇನೋ ಎಂಬ ಭ್ರಾಂತಿಯಲ್ಲಿರುವುದು ಈ ನಾಡಿನ ದುರ್ದೈವದ ಪರಮಾವಧಿಯಲ್ಲವೆ? ರಟ್ಟರು ಎಂದೂ ತೆಲುಗರಾಗಿರಲಾರರು. ತೆಲುಗಿನ ಭಾಷೆಸಾಹಿತ್ಯದಲ್ಲಿ ರಟ್ಟಜನದ ಹೆಸರಿನ ಸುಳಿವೇ ಇಲ್ಲ. ಯಾವ ಜನದ ಹೆಸರೆ ಆ ನಾಡಿನ ಪ್ರಾಚೀನ ಸಾಹಿತ್ಯದಲ್ಲಿ ದೊರೆಯುವದಿಲ್ಲವೊ ಅವರು ಆ ದೇಶದವರೆಂದು ಹೇಳುವುದಕ್ಕಾದೀತೆ? ರಟ್ಟವೆಂಬುದು ಕಂನಾಡ ಶಾಸನಗಳಲ್ಲಿದೆ. 'ರಟ್ಟಾಖ್ಯಾ ಕರ್ಣಾಟೀ' ಎಂದು ರಾಜತರಂಗಿಣಿಯಲ್ಲಿ ಕೂಡ ಉಲ್ಲೇಖವುಂಟು. ರಟ್ಟಮತವೆಂಬ ಪದ್ಧತಿಯು ಕೂಡ ಆಧುನಿಕ ಕಾಲದ ವರೆಗೆ ದೊರೆಯುವುದು. ರಟ್ಟಾಡಿ, ರಟ್ಟೀಹಳ್ಳಿಗಳು ನಮ್ಮಲ್ಲಿವೆ. ರಟ್ಟಶಬ್ದದ ಮುಂದಿನ ರೂಪ ರಡ್ಡಿ; ರೆಡ್ಡಿಯೆಂಬುದು ಇನ್ನೂ ಒಂದು ಮುಂದಿನ ಕಾಲದ ಮಾರ್ಪಾಟು. ತೆಲುಗಿನಲ್ಲಿ ತಮಿಳಿನಲ್ಲಿ ರಡ್ಡಿಯಿಲ್ಲ. ರೆಡ್ಡಿಯಿದೆ. ಇದರಿಂದ ಈ ಜನಗಳು ಕಂನುಡಿಯನ್ನು ಬಿಟ್ಟು ತೆಲುಗರಾದುದು ಈ ಕೊನೆಯ ಮಾರ್ಪಾಟಿನ ಕಾಲದಲ್ಲಿ; ಆರಂಭದಿಂದಲೂ ಅಲ್ಲವೆಂದು ನಿರ್ಣಯಿಸಲು ಅವಕಾಶವಿದೆ.

ರಾಷ್ಟ್ರಿಕರ ಒಂದು ದೊಡ್ಡ ಶಾಖೆಯು ರೆಡ್ಡಿಗಳೆಂದು ತೆಲುಗು ಅಭಿಮಾನ ಹಿಡಿಯಿತು. ಉತ್ತರದಲ್ಲಿ ಇದ್ದವರು ರಾಠೋಡವೆಂಬ ಹೆಸರಿನಲ್ಲಿ ರಾಜಪೂತರೆನಿಸಿಕೊಂಡು ಕಂನುಡಿಗೆ ಬೆನ್ನು ತೋರಿದರು. ಮರಾಠರಲ್ಲಿ ಕೆಲವು ಲಾಡರಿದ್ದರೂ ವಿಶೇಷ ಜನವಿಲ್ಲ. ರಟ್ಟರ ಬಗೆಗೆ ಮರ್ಹಾಟಿಯಲ್ಲಿ ಆದರದ ಪಡೆನುಡಿಯಿಲ್ಲ. ರಾಠವೆಂಬ ಒಂದು ಪದವು ಅಸಂಸ್ಕೃತ, ತುಂಟವೆಂಬರ್ಥದಲ್ಲಿ ಬಳಕೆಯಲ್ಲಿದೆ. ಕಂನಾಡಿನ ಅನೇಕ ಜಮೀನದಾರರೂ ಜಹಗೀರರಾದರೂ ದೇಸಾಯರೂ ರಡ್ಡಿಗಳಾಗಿದ್ದಾರೆ. ಈ ನಾಡಿನ ಪ್ರಾಚೀನ ಪರಂಪರೆಯ ಮಹತ್ವದ ಕುರುಹು. ತಮ್ಮ ಜ್ಞಾನ ಧೈರ್ಯ, ಸಾಹಸ, ಔದಾರ್ಯ, ವ್ಯವಹಾರ ಕೌಶಾಲ್ಯಾದಿಗಳ ಬಲದಿಂದ ಭಾರತದ ಇತಿಹಾಸದಲ್ಲಿ ಕಂನಾಡಿಗೆ ಯಾರು ಮರ್ಯಾದೆ ಮಹತ್ವಗಳನ್ನು ತಂದು ಕೊಟ್ಟಿದ್ದರೊ ಆ ರಾಷ್ಟ್ರಕೂಟರ ಉತ್ತರಾಧಿಕಾರವು ಇಂದಿನ ನಮ್ಮ ನಾಡಿನ ರಡ್ಡಿಗಳಿಗೆ ಬರುತ್ತದೆ. ಇವರೆ ನಮ್ಮ ನಾಡಗೌಡರು; ಪಟ್ಟಿಲರು. ವೀರಶೈವವೆಂಬುದು ಧರ್ಮದ ಹೆಸರು. ನಾಡವರು ಅಥವಾ ರಡ್ಡಿಗಳೆಂಬುದು ಜನವಾಚಕ ಹೆಸರು.

ಕಂನಾಡತಾಯ ಮಕ್ಕಳು ಈ ವರೆಗೆ ತಮ್ಮ ತಾಯನ್ನು ಮರೆತರು. ಕಂನಾಡಿನಲ್ಲಿ ಹುಟ್ಟಿ, ಕಂನಾಡ ಅನ್ನದಿಂದ ಬೆಳೆದರೂ ಈ ಭಾಷೆಗೆ ಕೃತಜ್ಞರಾಗಲಿಲ್ಲ. ಪರಭಾಷೆಗೆ ಒಲಿದು ಅದನ್ನೇ ತಮ್ಮದನ್ನಾಗಿ ಮಾಡಿಕೊಂಡು ಅದಕ್ಕೇ ಪ್ರೊತ್ಸಾಹವನ್ನೀವ ಕೆಲಸವು ಈ ದೇಶದಲ್ಲಿ ಬಹುಕಾಲದಿಂದ ನಡೆಯುತ್ತ ಬಂದಿತು. ಕರ್ಣಾಟ ರಮಾರಮಣ, ಕರ್ಣಾಟ ಸಿಂಹಾಸನಾಧೀಶನಾದ ವಿಜಯನಗರದ ಕೃಷ್ಣರಾಜನು ತೆಲುಗಿನ ಭಕ್ತ! ಕಂನಾಡಿನ ಕೊನೆಯ ಸಾಮ್ರಾಜ್ಯದ ಕೊನೆಯ ಮಹಾರಾಜನ ವರೆಗೂ ಇದೇ ಹಾಡು!

ಈ ಅವಸ್ಥೆಯಲ್ಲಿಯೂ ಕಂನುಡಿಯು ಬದುಕಿಕೊಂಡು ಬಾಳಿತು; ಇದೇ ಸೋಜಿಗ! ನಾಡಿನ ಕೀಳ್ಮೆ ಹಿರಿಮೆಗಳ ಪರಿಣಾಮವು ಆ ನುಡಿಯ ಮೇಲೂ ಆಗುತ್ತಿರುತ್ತದೆ. ಮೂಲತಃ ಹಿರಿದಾದ ಅರ್ಥಶಕ್ತಿಯಿರುವ ಕಂನುಡಿಯ ಅಪದೆಸೆಯ ಕಾಲದಲ್ಲಿ ಅದರ ಅರ್ಥಶಕ್ತಿಯೂ ಬಡವಾಯಿತು. ತೀರ ಕೆಳಗಿನ ಮಟ್ಟಕ್ಕೆ ಇಳಿಯಿತು. ಹಿರಿದಾದ ಅರ್ಥದಲ್ಲಿ ಪರಿಭಾಷೆಯ ಪದಗಳು ಮುಂದೆ ಬಂದುವು. ಸಂಕುಚಿತಾರ್ಥ, ಅಪಾರ್ಥದಲ್ಲಿ ಕಂನುಡಿಯ ಮಾತುಗಳು ವ್ಯವಹರಿಸಲಾರಂಭಿಸಿದುವು. ಪಟ್ಟಿ, ಪಾಡಿಗಳೆಂಬ ನಮ್ಮ ಊರ ಮತ್ತು ಜನಗಳ ಹೆಸರನ್ನು ಕೂಡ ಹೊಸಗನ್ನಡದಲ್ಲಿ ಹೇಳಬೇಕಾದರೆ ನಾಚಿಕೆ, ಕೀಳಭಾವವು ಬಂದಿತು! ಈ ಸಂದರ್ಭದಲ್ಲಿ ನನಗೆ ಮತ್ತೆ ಮಿಲ್ಟನ್ ಮಹಾಕವಿಯ ಮಹಾವಾಕ್ಯದ ನೆನಪಾಗುತ್ತದೆ.

> I am much more inclined to believe that the downfall of a dominion and humiliation of its high estate will ensue when the essential rightness of language falls into disrepute. It is not as plain

> as can be that when the verbal currency is cheapened and debased its image and superscription obliterated and forgotten, the minds of an abjectly passive and spiritless people are already ripe for slavery of some sort? On the other hand, never have we herd that any state or empire did not prosper at least moderately, as long as its zeal for exactness and grace of speech endured.

ನಾಡಿನ ಜನಗಳಿಗೆ ತಮ್ಮ ನಾಡುನುಡಿಯಲ್ಲಿ ಹೆಮ್ಮೆಹಿಗ್ಗುಗಳು ಕಡಿಮೆಯಾಗುವುದು ಆ ನಾಡಿನ ಅಧೋಗತಿಯ ಪೂರ್ವಸಿದ್ಧತೆ. ಇದು ಕಂನಾಡ ಮೊದಲಿಗರಲ್ಲಿ ಎಂದಿನಿಂದಲೇ ನಡೆದುಹೋಗಿತ್ತು. ದೇವ ಭಾಷೆ, ಧರ್ಮಭಾಷೆ, ರಾಜಭಾಷೆ ಎಂದು ಮುಂತಾಗಿ ಕಂನುಡಿಯಲ್ಲದ ಮಾತಿಗೇ, ಕಾಲಕಾಲಕ್ಕೆ ಮಹತ್ತ್ವವು ಬಂದಿತು; ಬಂದಿದೆ. ಕಂನುಡಿಗೆ ಗೌಣಸ್ಥಾನದಲ್ಲಿಯೆ ಇರಬೇಕಾಯಿತು. ಆದರ ಫಲವೇ ನಮ್ಮ ಇಂದಿನ ಗೌಣಸ್ಥಿತಿ.

ಜನಗಳಿಗೆ ತಮ್ಮ ನಾಡಿನ, ನುಡಿಯ ನಿಜಸ್ವರೂಪದ ತಿಳುವಳಿಕೆಯೂ ಈ ವರೆಗೆ ಅವಶ್ಯವೆನಿಸಿರಲಿಲ್ಲ. 'ಕನ್ನಡ'ವೆಂಬುದು ಮೂಲದಲ್ಲಿ ದೇಶದ ಹೆಸರೂ ಭಾಷೆಯ ಹೆಸರೂ ಎಂಬುದೂ ಮರೆತುಹೋಗಿತ್ತು! ರಾಮ್ಯಾ, ಬಶ್ಯಾ ಎಂದು ಬಹಳ ದಿನಗಳಿಂದ ಕರೆಯಿಸಿಕೊಳ್ಳುತ್ತಿದ್ದವನಿಗೆ ರಾಮ, ಬಸವಂತನೆಂದು ಯಾರಾದರೂ ತಿದ್ದಿ ಹೇಳಿದರೂ ಆತನಿಗೆ ತನ್ನ ಹೆಸರು ರಾಮ, ಬಸವಂತನೆಂದು ಸರಿಯಾಗಿ ಹೇಳಲೂ ಸಂಕೋಚವೆನಿಸುವಂತಾಗಿದೆ ನಮ್ಮ ನಾಡಿಗರ ಪಾಡು. ನಮ್ಮ ನಾಡು, ನುಡಿಗಳ ಶುದ್ಧ ಅರ್ಥವತ್ತಾದ ರೂಪಗಳನ್ನು ಬಳಸುವುದಕ್ಕೂ ಮನಸ್ಸಿನ ಸಿದ್ಧತೆಯಾಗಬೇಕಾಗಿದೆ ಇನ್ನೂ! ಇಂತಿದು ಆರ್ಯರು ಗೆದ್ದು ಸೋತ, ಕಂನಾಡ ಮೊದಲಿಗರ ಸೋತು ಗೆದ್ದ ಸಂಕ್ಷಿಪ್ತ ಕತೆ.

ಟಿಪ್ಪಣಿ

೧. ***Epigraphia Carnatica,*** Cm. 103

೨. Ibid, V. Hn. I7I

೩. ***Indian Antiquary,*** XV. p. ೨೦೨, ೩೫, ೪೧, ೪೩

ಗೊನೆ

ತಮ್ಮತನವನ್ನು ಅರಿತು ಆಚರಿಸಿದರೆ ಕಂನಾಡವರ ಭವಿಷ್ಯವು ಉಜ್ವಲವಾಗಿದೆ. ಹಿಂದಿನದೆಲ್ಲ ಆಯ್ತು; ಹೋಯ್ತು. ಅದರಿಂದ ಬುದ್ಧಿಗಲಿಯಬೇಕಲ್ಲದೆ ಮಿಡುಕುವುದರಲ್ಲಿ ಕಾಲ ಕಳೆಯಲಾಗದು. ಇಂದಿನ ತೊಡಕಿನ ಕಾರಣ ಪರಂಪರೆಗಳು ತಿಳಿಯದೆ ನಾಳಿನ ನಡೆಯ ಬಗೆಯನ್ನು ನಿರ್ಧರಿಸಿಕೊಳ್ಳಲು ಸಾಧ್ಯವಿಲ್ಲ. ಇಂದಿನ ತೊಡಕಿನ ಕಾರಣಮೀಮಾಂಸೆಗೆ ನಿನ್ನೆಯ ಸ್ಥಿತಿ ತಿಳಿಯಬೇಕಾಗುತ್ತದೆ. ಅದಕ್ಕಾಗಿ ಈ ಕತೆ. ಯಾವ ಸಂಗತಿಯೂ ಸಂಪೂರ್ಣ ಹಿತಕಾರಿ, ಅಥವಾ ಅಹಿತಕಾರಿ ಎಂದು ಹೇಳಲಿಕ್ಕಾಗುವುದಿಲ್ಲ. ಪ್ರತಿಯೊಂದು ವಸ್ತುವೂ ಸಂಮಿಶ್ರವಾದದು. ಅದರ ಮಿತಿಯನ್ನು ಅರಿತು ಯಾವುದರಿಂದಲೂ ಜಾಣರಾದವರು ತಮ್ಮ ಕಲ್ಯಾಣವನ್ನು ಮಾಡಿಕೊಳ್ಳಬಲ್ಲರು. ತ್ರಿಕಾಲಾಬಾಧಿತವೆಬ ಸಂಗತಿಗಳು ಈ ವಾಸ್ತವ ಲೋಕದಲ್ಲಿ ಯಾವುವೂ ಇಲ್ಲ. ಕಾಲಕಾಲಕ್ಕೆ ಮಾರ್ಪಡದೆ ಇದ್ದುದು ಬಾಳಲು ನಿರುಪಯುಕ್ತವಾಗುತ್ತದೆ.

ಏನಿದ್ದ ಒಳ್ಳೆಯತನ, ಹಿರಿಮೆ, ಹೆಚ್ಚಳವೆಲ್ಲವೂ ಹಿಂದೆ ಇದ್ದಿತು, ಎಂದು ಒರಗುಮೋರೆ ಮಾಡಿಕೊಂಡು ಉಸಿರುಗರೆವವರಿಗೆ ಉಜ್ವಲ ಭವಿಷ್ಯವೆಂಬುದಿಲ್ಲ. ಅವರಿಗೆ ಬದುಕುವ ಹಕ್ಕೂ ಇಲ್ಲ. ಹಳೆಯದೆಲ್ಲವನ್ನೂ ಹೊಲ್ಲವೆಂದು ತೆಗಳಿ ತಾವೇ ತಿಳಿದವರೆಂಬಂತೆ ಉರಿದಾಡಿ ಮಾತನಾಡುವವರು, ನಿನ್ನೆಯೊಳಗಿನ ಒಳ್ಳೆಯದಕ್ಕೆ ಎರವಾಗುವ ಹುಂಬತನವನ್ನು ಮಾಡುತ್ತಾರೆ. 'ಹಿಂದಿನದು ಯಾವುದೂ ಬೇಡ; ನಾವೇ ಎಲ್ಲವನ್ನೂ ಕಟ್ಟೋಣ' ಎಂದೆಂಬುದು ಅವಿವೇಕಿಗಳು ಕೂಗು. ಹೀಗಾದಲ್ಲಿ ಯಾವ ಪ್ರಗತಿಯೂ ಸಾಧ್ಯವಿಲ್ಲ. ಹಿಂದಿನ ತಲೆಮಾರಿನವರು ಕಾಯ್ದು ತಂದ ಸಂಸ್ಕೃತಿ ವಿದ್ಯೆಯೊಳಗಿನ ಉಪಯುಕ್ತ ಭಾಗಗಳನ್ನು ಸ್ವೀಕರಿಸಿ ಅಳವಡಿಸಿಕೊಂಡು ಮುನ್ನಡೆಯಬೇಕಲ್ಲದೆ ಅದೆಲ್ಲವನ್ನೂ ಅಲ್ಲಗಳೆದರೆ ಅದು ಪ್ರಗತಿಯೆನಿಸದು. ನಿನ್ನೆಯನ್ನು ಲೆಕ್ಕಕ್ಕೆ ಹಿಡಿಯದವನು ಪ್ರಗತಿಶೀಲನಾಗಲಾರನು. ಏಕೆಂದರೆ ನಿನ್ನೆಯ ತಪ್ಪು-ಒಪ್ಪುಗಳ ಲಾಭವನ್ನು ಪಡೆದೇ ಇಂದಿನ ಜ್ಞಾನಸಿದ್ಧಿಯಾಗಿರುತ್ತದೆ.

ಕಂನಾಡವರ ನಡೆವಳಿ, ನುಡಿವಳಿಗಳ ಹಿಂದೆ ನಿಂತು ಅವರಿಂದ ಕೆಲಸ ಮಾಡಿಸುವ ಅವರ ಸಾರಭೂತವಾದ ಗುಣವು ಆವುದು? ಇವರ ಸಂಸ್ಕೃತಿಯ ತಿರುಳಾವುದು? ಇವರಲ್ಲಿ ನರನರಗಳಲ್ಲಿ ಮಿಡಿವ ಶಕ್ತಿಯು ಯಾವುದು? ಯಾವ ಗುಣದ ಮೂಲಕ ಇವರು ಒಂದು ಕಾಲಕ್ಕೆ ಸಾಮ್ರಾಜ್ಯಗಳನ್ನು ಒಂದಲ್ಲ ಕನಿಷ್ಟ ಐದು ಮಹಾರಾಜ್ಯಗಳನ್ನು ಇತಿಹಾಸ ಕಾಲದಲ್ಲಿ ಕ್ರಿಸ್ತಾಬ್ದದ ಆರಂಭದಿಂದ ಹದಿನಾರನೆಯ ಶತಮಾನದ ವರೆಗೆ ಎಡೆಬಿಡದೆ ಆಳಿದರೋ ಆ ಗುಣದ ಹೆಸರೇನು? ಆ ಗುಣವು ಈಗಲೂ ಉಂಟೆ? ಏಳ್ಗೆಯ ಆಸೆಯು ಇರುವುದೆ?

ಸಾಮಾನ್ಯವಾದ ಗುಣವನ್ನು ಎತ್ತಿಹೇಳುವಾಗ ಒಂದು ತೊಂದರೆಯಿದೆ. ಅದು ಅಲ್ಲವೆಂದು ಪ್ರತಿಪಾದಿಸಲೂ ಅವಕಾಶವಿರುತ್ತದೆ. ೧॥ ಅಡಿಗೆ ಒಂದು ಮೊಳ ಎಂದು ಸಾಮಾನ್ಯವಾಗಿ ಹೇಳಿದರೆ ತೀರ ಸರಿಯಾಗಿ ೧॥

ಅದೆ (೧೮.೪ಂಚು) ಉದ್ದವಿರುವ ಮೊಳದವರು ಏಸು ಜನವೊ? ಒಬ್ಬರದು ಒಂದೆರಡು ಇಂಚು ಕಡಿಮೆ ಇದ್ದರೆ ಇನ್ನೊಬ್ಬರದು ಅಷ್ಟು ಹೆಚ್ಚು ಇರುವುದು. ಸರಾಸರಿ, ಸಾಮಾನ್ಯವೆಂಬುದು ಕೆಲವೆಡೆಗಳಲ್ಲಿ ತೀರ ವಾಸ್ತವವಲ್ಲವೆನಿಸಿದರೂ ತಾತ್ವಿಕ ಸತ್ಯವಿದು.

ಕಂನಾಡವರ ಗುಣವಿಶೇಷವನ್ನು ಕಂಡುಹಿಡಿದ ಶ್ರೇಯಸ್ಸು ಸಂಪೂರ್ಣವಾಗಿ ಕವಿರಾಜಮಾರ್ಗದ ಕರ್ತೃವಿಗೆ ಸಲ್ಲುತ್ತದೆ. ಹಿಂದೆ ಉದಾಹರಿಸಿದ ಪದ್ಯದಲ್ಲಿ 'ಸುಭಟರ್ಕಳ್' ಎಂದು ಇವರನ್ನು ವರ್ಣಿಸಿದ್ದಾನೆ. ಈ ವೀರದ ಮೂಲಭೂತ ಸ್ವಭಾವವು ಉತ್ಕಟತೆ ಅಥವಾ ಅತಿಶಯತೆಯಾಗಿದೆ. ಇದು ಕಂನಾಡ ಭೂಮಿಯ ವೈಶಿಷ್ಟ್ಯ. 'ಡೋಣಿ ಬೆಳೆದರೆ ಓಣಿಯೆಲ್ಲ ಕಾಳು'. ಕರಾವಳಿಯಲ್ಲಿ ಸೃಷ್ಟಿಸೌಂದರ್ಯದಲ್ಲೂ ಇದೇ ಬಗೆ. ನೆಲದ ಗುಣವೆ ನಾಡಿಗರಲ್ಲೂ ಒಡಮೂಡುತ್ತದೆ. ಉತ್ಕಟ ಭಾವವು ಯಾವಾಗಲೂ ಆವೇಶ, ಉತ್ಸಾಹದಿಂದ ಒಡಗೂಡಿಸುತ್ತದೆ. ಇವು ಒಂದರಿಂದೊಂದು ದೂರವಲ್ಲ. ಈ ಉತ್ಕಟತೆಯು ಲೋಕವ್ಯವಹಾರದಲ್ಲಿ ವೀರದ ಕಡೆಗೆ ಒಲಿದರೆ, ಆಧ್ಯಾತ್ಮದಲ್ಲಿ ಭಕ್ತಿಯ ರೂಪ ತಾಳುವುದು. ಸಾಹಿತ್ಯ ಕಲೆಯಲ್ಲಿ ಭವ್ಯತೆಯನ್ನು ತೋರುವುದು. ಕವಿರಾಜಮಾರ್ಗದ ಕರ್ತೃವು (೮೧೫ ಕ್ರಿ.ಶ.) ನೃಪತುಂಗನ ಆಸ್ಥಾನದಲ್ಲಿದ್ದುದರಿಂದ ಜೋಳದ ಪಾಳಿಗಾಗಿ ಈ ಜನಗಳನ್ನು 'ಸುಭಟರ್ಕಳ್' ಎಂದು ಹೊಗಳಿರಬೇಕು; ಅದು ಮುಖಸ್ತುತಿಯ ಮಾತು, ಎಂದು ಕೆಲರು ಆಕ್ಷೇಪಿಸಲು ಅವಕಾಶವಿದೆ. ಆದರೆ, ೧೦ನೆಯ ಶತಮಾನದ ರಾಜಶೇಖರನೆಂಬ ಕವಿಯು ಕಂನಾಡ ರಾಯರ ಆಶ್ರಯ ದಲ್ಲಿದ್ದವನಲ್ಲ. ಆದರೂ ಆತನು

'ಸಮರ ಕರ್ಮಣಿ ನಿಸರ್ಗೋದ್ಭಟಾಃ ಕರ್ಣಾಟಾಃ'
'ಅಖಂಡಿತ ಪುರುಷಾಕಾರಾಃ ಕರ್ಣಾಟಾಃ'

ಎಂದು ಮುಂತಾಗಿ ವರ್ಣಿಸಿದ್ದಾನೆ.

ಇಂತಹ ಮನಸಿನ ವೀರವೃತ್ತಿಯಲ್ಲಿ ಮೆಚ್ಚಿಕೆಯಿರುವ ಈ ಜನಗಳಿಗೆ ಮಹಾವೀರನ ಧರ್ಮದಲ್ಲಿ ಆಸಕ್ತಿಯುಂಟಾಗುವುದೇನು ಸೋಜಿಗ? ಕಂನಾಡು ಜೈನಧರ್ಮದ ತವರ್ಮನೆಯೆನಿಸಲು ಕಾರಣವೇನೆಂಬುದು ಇಲ್ಲಿ ಸ್ಪಷ್ಟವಾಗುವುದು. ವೀರಶೈವ, ವೀರವೈಷ್ಣವ ಪಂಥಗಳ ನೆಲೆವೀಡು ಕಂನಾಡೇ. ಮಹಾರಾಷ್ಟ್ರದಲ್ಲಿ ಇವು ಅಷ್ಟು ಬೇರು ಹಿಡಿಯಲಿಲ್ಲ. ಇದರಿಂದ ಎರಡೂ ಪ್ರಾಂತಗಳ ಮನಸ್ಥಿತಿಯಲ್ಲಿರುವ ವ್ಯತ್ಯಾಸವು ಸ್ಪಷ್ಟವಾಗುತ್ತದೆ.

ಕಲೆಯಲ್ಲಿ ಭವ್ಯತೆಗೆ ಶ್ರವಣಬೆಳಗೊಳ, ಕಾರ್ಕಳಗಳ ಗೊಮಟೇಶ್ವರರು ಸಾಕ್ಷಿ. ಬಾದಾಮಿಯ ಗುಡ್ಡವನ್ನೆ ಕಡೆದ ಗವಿಯ ಶಿಲ್ಪವು, ಕಾರ್ಲೆಯ ಚೈತ್ಯಾಲಯವು ಎಲ್ಲೂರಿನ ಕೈಲಾಸ ದೇವಾಲಯ, ಅಜಂತೆಯ ಚಿತ್ರಕಲೆ, ಪಟ್ಟದಕಲ್ಲು, ಹಳೇಬೀಡು ಮೊದಲಾದ ಕಡೆಯ ಗುಡಿಗಳೂ, ಬಸದಿಗಳೂ ಕಂನಾಡ ಶಿಲ್ಪಕಲೆಯ ಉದಾತ್ತ ಭವ್ಯಸ್ವರೂಪಕ್ಕೆ ನಿದರ್ಶನ.

ಸಾಹಿತ್ಯದಲ್ಲೂ ಹಾಗೆಯೆ. ಚಂಪೂ ಮಹಾಕಾವ್ಯ, ಮಹಾಪುರಾಣಗಳನ್ನು ನಿರ್ಮಿಸುವ ಹಂಬಲವೇ ಹಂಬಲ. ದೇಶಭಾಷೆಯ ವ್ಯಾಕರಣವನ್ನು ಸಂಸ್ಕೃತದಲ್ಲಿ ಬರೆವ ಉತ್ಕಟತೆಯನ್ನು ವಿಶೇಷವಾಗಿ ಕಂನಾಡಿನಲ್ಲಿಯೆ ಕಾಣಬಹುದು. 'ಕವಿಚಕ್ರವರ್ತಿ' 'ಕವಿಸಾರ್ವಭೌಮ' ನೆಂಬ ಬಿಕುದನ್ನು ಪಡೆವ ಹಂಬಲವು ನಮ್ಮ ಕವಿಗಳಿಗೆ, 'ಕರ್ಣಾಟ ರಾಜಪ್ರಿಯೆ'ಯ ಆತ್ಮವಿಶ್ವಾಸದ ಮಾತುಗಳಲ್ಲಿ ಕಾಣಿಸಿಕೊಳ್ಳುವ ವೀರವು ಯಾರನ್ನಾಗಲಿ ಬೆರಗು ಗೊಳಿಸದೆ ಇರದು : 'ವ್ಯಾಸ ವಾಲ್ಮೀಕಿಗಳನ್ನು ಬಿಟ್ಟು ಇನ್ನುಳಿದವರು ಯಾರಾದರೂ ಕವಿಗಳೆಂದು ನನ್ನೆದುರು ಬಂದರೆ ಅವರ ನೆತ್ತಿಯ ಮೇಲೆ ನನ್ನ ಎಡಗಾಲನಿಡುವೆನು! ಭಾಸ, ಭವಭೂತಿ ಕಾಲಿದಾಸಾದಿಗಳನ್ನೂ ಲೆಕ್ಕಿಸದ ಅಭಿಮಾನದ ಈ ದರ್ಪದ ಮೂಲವು, ಮೇಲೆ ವಿವರಿಸಿದ ಕಂನಾಡ ನೆಲದ ಗುಣದ ಆ ಉತ್ಕಟ ಭಾವನೆಯಲ್ಲಿಯೆ ಇದೆ. ಇದು ಒಬ್ಬ ಹೆಣ್ಣುಮಗಳು-ರಾಜಕನ್ಯೆಯಾಡುವ ರೀತಿ!

ಮನಸ್ಸಿನ ಈ ಉತ್ಕಟ ಭಾವನೆ-ಅತಿಶಯತೆ-ಏಕಾಂತಿಕತೆ-ಅತಿರೇಕವು, ವಿಚಾರ-ವಿವೇಕದ ಬೆಂಬಲದಿಂದ ಮುಂದೆ ಸಾಗಿದ್ದಾಗ ಲೋಕವೆ ಬೆರಗಾಗುವಂತಹ ಅದ್ಭುತ ಸಾಹಸಾದಿಗಳನ್ನು ನೆರವೇರಿಸಬಲ್ಲುದು. ಮಾತು ಮಾತಿಗೂ ಎಣಿಕೆ, ವಿಚಾರ ಮಾಡುತ್ತ ಕೂಡುವವರಿಂದ ಯಾವ ಅತಿಶಯದ ಹಿರಿಗೆಲಸವೂ ಆಗದು.

ಇಂಗ್ಲಿಷ್ ಮತ್ತು ಜರ್ಮನ್ ಸ್ವಭಾವದಲ್ಲಿ ಈ ಅಂತರವನ್ನು ಚೆನ್ನಾಗಿ ಮನಗಾಣಬಹುದು. ಇಂಗ್ಲಿಷರು ವಿವೇಕಿಗಳಾದರೆ ಜರ್ಮನರು ಸಾಹಸಿಗಳು. ಇವೆರಡೂ ಗುಣಗಳು ಒಂದುಗೂಡಿದಲ್ಲಿ ಬಾಳಿನಲ್ಲಿ ಹೆಚ್ಚಳವು ನಿಶ್ಚಿತ. ವಿಚಾರ ಅಥವಾ ವಿವೇಕವೆಂಬುದು ಹೆಳವ; ಉತ್ಕಟತೆ, ಅಥವಾ ತೀವ್ರ ಮನೋಭಾವನೆಯು ಕುರುಡ. ವಿವೇಕದ ಕಣ್ಣೂ, ಉತ್ಕಟತೆಯ ಉತ್ಸಾಹದ ಪ್ರಚೋದಕ ಶಕ್ತಿಯೂ ಕೂಡಿ ನಡೆದಲ್ಲಿ ಪ್ರಗತಿಗೆ ತಡೆಯಿಲ್ಲ. ಕವಿರಾಜಮಾರ್ಗದ ಕವಿಯು 'ವಿವೇಕಿಗಳ್ ನಮ್ಮ ನಾಡವರ್ಗಳ್ ' ಎಂದು ಕೊನೆಗೊಂದು ಮಾತನ್ನು ಆ ಪದ್ಯದಲ್ಲಿ ಹಾಕಿದ್ದಾನೆ. ಚಲುಕ್ಯ, ರಾಷ್ಟ್ರಕೂಟದವರೆಗಿನ ಕಂನಾಡು ಏಳ್ಗೆಯಲ್ಲಿ ಇದ್ದುದರ ರಹಸ್ಯವು ಅಲ್ಲಿ ತಿಳಿದುಬರುತ್ತದೆ.

ಹೆಳವನಾದರೂ ಅರುಣನನ್ನು, ಸೂರ್ಯನಂತಹ ತೇಜಸ್ವಿಯು ಕೂಡ ತನ್ನ ಸಾರಥಿಯೆಂದು ಸ್ವೀಕರಿಸಿದ್ದಾನೆ, ಎಂಬ ಈ ಪರಂಪರಾಗತವಾದ ಸಾಂಕೇತಿಕ ಭಾಷೆಯು ಬಹಳ ಅರ್ಥಗರ್ಭಿತವಾಗಿದೆ. ಭಕ್ತಿಪಂಥದ ಆವೇಶದಲ್ಲಿ ನಮ್ಮ ಜನಗಳು ಬುದ್ಧಿಯನ್ನು ಕಡೆಗಣಿಸಿದರು. ಬುದ್ಧಿ ವಿಕಾಸವು ಮುಕ್ತಿ ಸಾಧನೆಗೆ ಅಡ್ಡವಾಗುವದೆಂಬ ಕಲ್ಪನೆಯು ಒಲವಾಯಿತು. ಇದುವೆ ಜನಗಳ ಅವನತಿಗೆ ಕಾರಣವಾಯಿತು. ಸುಮಾರು ೨೦ನೆಯ ಶತಮಾನದ ಮಧ್ಯದ ವರೆಗೆ ನಮ್ಮ ನಾಡು ಕಗ್ಗತ್ತಲೆಯಲ್ಲಿ ಬಿದ್ದುಕೊಂಡಿದ್ದಿತೆನ್ನಲು ಅಡ್ಡಿಯಿಲ್ಲ. ಕಂನಾಡು, ಕಂನಡ ಹೋಗಲಿ, ಕರ್ಣಾಟವೆಂಬ ಹೆಸರು ಸಹ ಪರಪ್ರಾಂತೀಯರಿಗೆ ಅರಿದಾಗಿದ್ದಿತು. ಮೈಸೂರ ಹೊರಗೆ ಕರ್ಣಾಟ ವುಂಟೆ? ಎಂದು ಸಂದೇಹಪಟ್ಟುಕೊಂಡು ಕಾಲವೂ ಆಯಿತು.

ಇದಕ್ಕೆ ನಿಜವಾಗಿಯೂ ದುರ್ಗತಿಯೆನ್ನುವುದಾದರೆ ಇದರ ಆರಂಭವು ಎಲ್ಲಿಂದ ಆಯ್ತು? ಏಕಾಯ್ತು? ಎಂಬುದನ್ನು ಏಳ್ಗೆಯನ್ನು ಹಾರಯಿಸುವವರು ತಿಳಿಯಲೇಬೇಕಷ್ಟೆ? ರಾಷ್ಟ್ರಕೂಟ ಮೂರನೆಯ ಕೃಷ್ಣನ ಕಾಲವೇ ಕಂನಾಡ ಪರಮಾವಧಿ ಏಳ್ಗೆಯ ಕಾಲವೆಂದು ನನ್ನ ಮತ; ಹೆಚ್ಚಾದರೆ ಕಲ್ಯಾಣ ಚಲುಕ್ಯ ಆರನೆಯ ವಿಕ್ರಮನ ಕಾಲವೆನ್ನಬಹುದು. ವಿಜಯನಗರ ಸಾಮ್ರಾಜ್ಯವು ನಮ್ಮ ಕೊನೆಯ ದೊಡ್ಡ ಸ್ವತಂತ್ರರಾಜ್ಯ. ಇದಾದಬಳಿಕ ಸಂಪೂರ್ಣ ಕಗ್ಗತ್ತಲೆಯ ಕಾಲ. ೨೦ನೆಯ ಶತಮಾನದ ಸುಮಾರು ಕಾಲುಶತಕದ ವರೆಗೂ. ಬಾದಾಮಿಯ ಪುಲಿಕೇಶಿಯ ಕಾಲದಿಂದ ಎಂದರೆ ಸುಮಾರು ೬ನೆಯ ಶತಮಾನದಿಂದ ೧೦ ಅಥವಾ ೧೧ನೆಯ ಶತಮಾನದ ವರೆಗೆ ನಿಶ್ಚಿತವಾಗಿ ಕಂನಾಡ ವೈಭವ ಕಾಲ; ೧೨ನೆಯ ಶತಮಾನದಿಂದ ೧೬ನೆಯ ಶತಮಾನದ ವರೆಗೆ ಇಳಿಮುಖವಾದ ಕಾಲ. ೧೬ ರಿಂದ ೨೦ನೆಯ ಶತಮಾನದ ವರೆಗೆ ಅಜ್ಞಾತವಾಸದ ಕಗ್ಗತ್ತಲೆಯ ಕಾಲ. ಮೇಲೆ ಹೇಳಿದ ಅವಧಿಗಳಲ್ಲಿ ಏಳ್ಗೆಯಲ್ಲಿ ನಡನಡುವೆ ಸ್ವಲ್ಪ ಕೆಡುಗಾಲ; ಇಳಿಗಾಲದಲ್ಲಿ ಸ್ವಲ್ಪ ಒಳ್ಳೆಯ ಕಾಲ ಬಂದೇ ಬರುತ್ತವೆ. ಇಳಿಗಾಲವು ಒಂದೇ ಸವನೆ ಭರದಿಂದ ಇರುವುದು ಸೃಷ್ಟಿಕ್ರಮವಲ್ಲ. ಮಧ್ಯದಲ್ಲಿ ಎಷ್ಟೋ ಮಹಾಪುರುಷರು ಅವತರಿಸಿದ್ದುಂಟು; ಅವರು ನಮ್ಮ ಇಳಿಗಾಲವನ್ನು ತಡೆದು ಹಿಡಿಯಲು ಹೆಣಗಾಡಿದ್ದುಂಟು; ಕೆಲವೊಂದು ಕಾಲ ಅದರ ಫಲವಾಗಿ ಸ್ವಲ್ಪ ಸುಕಾಲವು ಬಂದಂತಾದುದೂ ಉಂಟು. ರಕ್ಕಸತಂಗಡಿಯ ಘೋರ ಕಾಳಗದಲ್ಲಿ ನಿರ್ವಿಣ್ಣರಾಗಿ ನೆಲಕ್ಕುರುಳಿದ ಜನದ ಭಾಷೆ-ಸಂಸ್ಕೃತಿಗಳ ಪ್ರಾಣಗಳನ್ನು ಮೈಸೂರ ಒಡೆಯರು ಕಾಯ್ದುಕೊಂಡು ಬಂದುದೂ ಉಂಟು. ಇದೆಲ್ಲವೂ ನಿಜವಾದರೂ, ಪರಮಾವಧಿಯ ಇಳಿತದ ಕಡೆಗೇ ಒಲವಿದ್ದ ಈ ಕಾಲಕ್ಕೆ ಏಳ್ಗೆಯ ವೈಭವ ಕಾಲವೆಂದು ಕರೆಯಲಿಕ್ಕಾಗುವುದಿಲ್ಲ.

ಇಳಿಗಾಲದ ಪಡಿನೆಳಲು ಜನದ ಭಾಷೆ, ಕಲೆಗಳು, ನಡೆವಳಿಗಳಲ್ಲೂ ಕಾಣಿಸಿಕೊಳ್ಳುವುದು. ನುಡಿಯೊಳಗಿನ ಬಿಗುಪು ಹೋಗುವುದು; ಸಾಹಿತ್ಯದಲ್ಲಿ ಕೃತ್ರಿಮತೆ, ಪರಂಪರಾಪ್ರೀತಿ, ಅತಿಶಯೋಕ್ತಿ ಅಸಂಬದ್ಧತೆಗಳು ಕ್ರಮವಾಗಿ ಹಣೆಯಿಕ್ಕುವವು. ಪಂಪನಲ್ಲಿ ಕಾಣುವ ವರ್ಣನೆಯ ಔಚಿತ್ಯ ಹಿತಮಿತ ವಚನ ಅಪರೂಪದ್ದಾಗುವುದು. ಪಂಪನಲ್ಲಿ ಕಾಣುವ ಬಂದ ಸೂಳೆಗೇರಿಯ ವರ್ಣನೆಯಲ್ಲಿರುವ ಸಂಯಮವನ್ನು ಮುಂದೆಮುಂದೆ ಒಬ್ಬಿಬ್ಬರಲ್ಲಿ ಕಾಣಬಹುದು. ಅಂದಿನ ಮಧು ಮಹೋತ್ಸವವು ಇಂದಿನ ಬೀಭತ್ಸ ಕಾಮನ ಹಬ್ಬವಾಗಿದೆ! ಬಾದಾಮಿ ಪಟ್ಟದ ಕಲ್ಲು, ಎಲ್ಲೂರಿನ ಕೆತ್ತನೆಯಲ್ಲಿದ್ದ ಸಹಜ ಮನೋಹರತೆ, ಹಳೇಬೀಡಿನಲ್ಲಿ ಮಾಯವಾಯಿತು. ಮಿತಿಮೀರಿದ

ಅತಿಶಯತೆಯು ಅಲ್ಲಿ ತಾನೆತಾನಾಗಿ ಒಡಮೂಡಿದೆ. ಕೆತ್ತನೆಯ ಕೆಲಸವು ತುಂಬ ಸೊಗಸಾಗಿರುವುದೇನೋ ಒಂದು ನಿಜ. ಆದರೆ, ಅದರಲ್ಲಿ ಸಂಯಮವು ಉಳಿದಿಲ್ಲ. ಕುಸುರು ಮಿತಿಮೀರಿದರೆ ಅದೂ ಹದೆಗೆಡಿಸುವುದು. ಸವಿಯೆಂದು ಕಂಪೆಂದು ಸಕ್ಕರೆ ಕೇಶರವನ್ನು ಹಾಕುವುದಕ್ಕೂ ಏನಾದರೂ ಅಳತೆ ಕಟ್ಟು ಇರಲೆಬೇಕಷ್ಟೇ. ಕಂನಾಡವರ ಜೀವನದೊಳಗಿನ ಸಂಯಮದ ಭಾಗವು ಸಡಿಲಾಗುತ್ತ ನಡೆದುದರ ಕುರುಹು ಇದು. ಮದುವೆ ಮುಂಜಿ ಮೊದಲಾದುವುಗಳಲ್ಲಿ ಆಡಂಬರಕ್ಕೆ ಬಂದ ಮಹತ್ವ, ಸಾಲಮಾಡಿಯೂ ಭೂಮಾ, ಶ್ರಾದ್ಧ ಮೊದಲಾದುವುಗಳಲ್ಲಿ ನಡೆವ ದುಂದು, ಮೊದಲಾದುವೆಲ್ಲ ಜೀವವದಲ್ಲಿ ವಿವೇಕಕ್ಕೆ, ಸಂಯಮಕ್ಕೆ ಸ್ಥಾನವಿದ್ದುದರ ಲಕ್ಷಣಗಳೆಂದು ಹೇಳಲಿಕ್ಕಾದೀತೆ?

ಹಿರಿದಾದ ಮಿಗಿಲಾದ ಗುರಿಯು ಕಣ್ಣೆದುರು ಇಲ್ಲದಾಗ ವೀರ, ಸಾಹಸ ಅಥವಾ ಉತ್ಕಟತೆಯು ಜನರನ್ನು ಕ್ಷುದ್ರ ಕಲಹಗಳಲ್ಲಿ ತೊಡಗಿಸುತ್ತದೆ. ಇಂತಹ ಕಾಲದಲ್ಲಿ ವೀರವು ಒರಟು ಹುಂಬತನ, ಔದ್ಧತ್ಯವೆಂದೆನಿಸುವುದು. ಇವೆಲ್ಲ ನಾಡಿನ ಇಳಿಗಾಲದಲ್ಲಿ ತಲೆದೋರುವ ಅವಗುಣಗಳು. ಪಾರತಂತ್ರ್ಯವು ಬಂದಾಗ ಇದು ಹೀಗಾಯ್ತು. ನಮ್ಮನ್ನು ನಾವು ಎಷ್ಟೋ ಮೇಲುಗಟ್ಟಿಕೊಂಡು ಹೊರನಾಡಿಗರು ಕೊಂಡಾಡುವಂತಾಗಬೇಕು. ನಮ್ಮ ನಡೆವಳಿ; ಆಗಲೆ ನಾವು ಏಳ್ಗೆಯ ಸರಿ ದಾರಿಯಲ್ಲಿರುವೆವೆಂದು ಎಣಿಸಲಿಕ್ಕಾದೀತು. ಇದೀಗ ಭಾರತದಲ್ಲಿ ಸ್ವಾತಂತ್ರದ ಹೊಂಬೆಳಕು ಒಡಮೂಡಿದೆ. ಕಂನಾಡವರು ತಮ್ಮ ಗುಣವಿಶೇಷಗಳಿಂದ, ಹಿಂದಿನ ತಮ್ಮ ವೈಭವಕ್ಕೆ ಸಲ್ಲುವ ರೀತಿಯಲ್ಲಿ ಮತ್ತೆ ಭಾರತದ ಏಳ್ಗೆಗೆ ನೆರವಾಗುವ ಸುವರ್ಣ ಸಂಧಿಯು ಒರಗಿದೆ. ತಮ್ಮ ಅಭಿಜಾತ ವೀರ ಸಾಹಸಾದಿ ಗುಣಗಳಿಗೆ ವಿವೇಕ, ವಿಚಾರ ಶಕ್ತಿಯ ನೆರವನ್ನು ಪಡೆದುಕೊಂಡು ಕಂನಾಡ ಸತ್ಕೀರ್ತಿಯನ್ನು ಭಾರತದಲ್ಲೆಲ್ಲ ಕೇಳಿಸಲು ಅಣಿಯಾಗುವರಷ್ಟೇ?

ಕಂನುಡಿಯ ಹುಟ್ಟು

ಅಥವಾ

ನಿರುಕ್ತ

ಅರಿಕೆ

(ಮೊದಲನೆಯ ಮುದ್ರಣಕ್ಕೆ)

ನಾವು ದಿನಾಲು ಮಾತನಾಡುವುದು ಕನ್ನಡ; ಆದುದರಿಂದ ಅದು ಬಂದೇ ಬರುತ್ತದೆ; ಅದಕ್ಕೆ ಅಭ್ಯಾಸದ ಆವಶ್ಯಕತೆಯೇನು?' ಎಂದು ಹಲರು ಒಂದು ಬಗೆಯ ಮಬ್ಬಿನಲ್ಲಿ ಗಳಹುತ್ತಿರುತ್ತಾರೆ. ಯಾವನೊಬ್ಬನಲ್ಲಿ ಉಸಿರು ಆಡುತ್ತಿದ್ದರೆ ಆತನು ಆರೋಗ್ಯವಂತನಿರಲೇಬೇಕೆಂದು ಎದೆತಟ್ಟಿ ಹೇಳುವುದು ಹುಚ್ಚುತನ.

ಜಗತ್ತೆಲ್ಲವೂ ಕಾಲಮೇಲೆ ನಡೆಯುತ್ತಿದ್ದರೆ ತಲೆಕೆಳಗೆ ಮಾಡಿ, ತಿರುವು ಮುರುವು ನಡೆಯುವುದರಲ್ಲಿ ನಮ್ಮ ನಾಡಿನವರಿಗೊಂದು ಹಿರಿದಾದ ಹಿಗ್ಗು. ಅದರಲ್ಲೂ ಕರ್ಣಾಟದಲ್ಲಿ ಈ 'ಡೊಂಬವಿದ್ದೆ'ಗೆ ಪ್ರೋತ್ಸಾಹನ ವಿರುವಷ್ಟು ಬೇರೆ ಇನ್ನಾವ ಎಡೆಯಲ್ಲಿಯೂ ಇರಲಿಕ್ಕಿಲ್ಲ. ಕನ್ನಡನಾಡಿನಲ್ಲಿ ತಲೆತಲಾಂತರಗಳಿಂದ ನೆಲೆಸಿದ ಅನೇಕರು ಕನ್ನಡವನ್ನು ಹೀಯಾಳಿಸಿ ಒಂದಿಲ್ಲೊಂದು ಪರಭಾಷೆಯ ಆರಾಧನೆಯನ್ನು ನಡೆಯಿಸಿದ್ದಾರೆ! ಮತ್ತು ತಮ್ಮ ಈ ಕೃತ್ಯವು ಚೆಂದಕಾಣುವಂತೆ ಮಾತೃಭಾಷೆ, ರಾಷ್ಟ್ರಭಾಷೆ, ರಾಜಭಾಷೆ ಮುಂತಾದ ಏನಾದರೊಂದು ತಾತ್ತ್ವಿಕ ದೊಡ್ಡ ಹೆಸರಿನ ಹೊದಿಕೆ ಹಾಕಿ ಇನ್ನುಳಿದವರಿಗೂ ಬಾಯಿಗೆ ನೀರು ಬಿಡುವಂತೆ ಮಾಡುತ್ತಾರೆ!

ಈ ನಾಡಿನಲ್ಲಿ ಬೇರೂರಿದವರು ಮೊದಲು ಕನ್ನಡವನ್ನೆ ಚೆನ್ನಾಗಿ ಕಲಿಯದೆ ಬೇರೆ ಭಾಷೆಗಳನ್ನು ಕಲಿಯಲು ಒದ್ದಾಡುವುದು ಯಾವ ಬಗೆಯಿಂದಲೂ ತಕ್ಕುದಲ್ಲ. ಇಂಗ್ಲೆಂಡಿನಲ್ಲಿ ಸರ್ ಹೆನರಿ ನರ‍್ಯೂ ಬೋಲ್ಬರ ಅಧ್ಯಕ್ಷತೆಯಲ್ಲಿ ಒಂದು ಶಿಕ್ಷಣ ಮಂಡಲವು ಏರ್ಪಟ್ಟಿತ್ತು. ಅದರಲ್ಲಿ ಕ್ವಿಲರ ಕೌಚ್, ಪರ್ಥ ಮೊದಲಾದ ವಿದ್ವಾಂಸರಿದ್ದರು. ಆ ಮಂಡಲದ ವರದಿಯೊಳಗಿನ ವಿಚಾರಗಳು ಪ್ರತಿಯೊಬ್ಬರೂ ಎದೆಯಲ್ಲಿ ಕೊರೆದಿಟ್ಟುಕೊಳ್ಳುವ ಹಾಗಿವೆ.

> Education in English is for all Englishmen, a matter of most vital concern and one which must by its very nature take precedence of all other branches of learning.

ಇಂಗ್ಲೆಂಡಿನಲ್ಲಿ ಇಂಗ್ಲಿಷಿನಂತೆ ಕರ್ಣಾಟದಲ್ಲಿ ಕನ್ನಡವೇ ಮುಖ್ಯಭಾಷೆ-ಮೊದಲ ಭಾಷೆಯಾಗಿರಬೇಕಲ್ಲವೆ? ಅಲ್ಲದೆ, ಮಕ್ಕಳಿಗೆ ತಮ್ಮ ನಾಡಿನ ಭಾಷೆಯು ಚೆನ್ನಾಗಿ ಬಾರದೆ ಇದ್ದರೆ ಅವರು ಬೇರೆ ವಿಷಯಗಳನ್ನು ಸರಿಯಾಗಿ ಅರಿತುಕೊಳ್ಳುವುದೇ ಸಾಧ್ಯವಿಲ್ಲ;

> 'It is self evident that untill a child has aquired no certain command of the native language, no other educational development is ever possible.... language is one indispensable preliminary and fountain of all the rest;'

ಎಂದು ಆ ವರದಿಯಲ್ಲಿ ಬರೆದುದು ತೀರ ಸಮರ್ಪಕವಾಗಿದೆ. ನಾವು ಮನಸ್ಸಿನಲ್ಲಿ ವಿಚಾರ ಮಾಡುವುದಕ್ಕಾಗಲಿ, ನಮ್ಮ ವಿಚಾರಗಳನ್ನು ವ್ಯಕ್ತಪಡಿಸುವುದಕ್ಕಾಗಲಿ ಭಾಷೆಯು ಬೇಕಲ್ಲವೆ? ನೆಲಗಟ್ಟಿನ ನುಡಿಯೆ ಇಲ್ಲದಿದ್ದರೆ ನಮ್ಮ ವಿಚಾರಗಳ ಅರಮನೆಯು ಏತರ ಮೇಲೆ ನಿಲ್ಲುವುದು? ಇನ್ನು ತನ್ನ ನಾಡಿನ ನುಡಿಯನ್ನು ಕಡೆಗಣಿಸಿ ಪರಭಾಷೆಯ ಮುಖಾಂತರವಾಗಿ ಹೇಗೂ ಸಂಪಾದಿಸಿದ ವಿದ್ಯೆಯ ಲಾಭವನ್ನು ತನ್ನ ನಾಡಿನವರಿಗೆ ಕೊಡಲಿಕ್ಕಾಗದೆ, ಅದು ಆ ಮನುಷ್ಯನಲ್ಲಿಯೆ ಉಳಿದು, ಹುಗಿದಿಟ್ಟ ದ್ರವ್ಯದಂತೆ ಇದ್ದಲ್ಲಿಯೇ ಬಿದ್ದು ಮಣ್ಣುಪಾಲಾಗುವುದು. ಆದುದರಿಂದಲೆ, ನಮ್ಮ ವಿಶ್ವವಿದ್ಯಾಲಯಗಳಲ್ಲಿ ದಿನದಿನಕ್ಕೆ ದೇಶಭಾಷೆಗಳಿಗೆ ಮಹತ್ವದ ಸ್ಥಾನವು ದೊರೆಯಲಾರಂಭಿಸಿದೆ.

ಇದೀಗ ಕನ್ನಡದಲ್ಲಿ ಓದಬೇಕು, ಬರೆಯಬೇಕು ಎಂಬ ಹುಮ್ಮಸವು ತರುಣರಲ್ಲಿ ತಲೆದೋರಲಾರಂಭಿಸಿದೆ. ಕನ್ನಡದ ನುಡಿಯ ಗುಟ್ಟನ್ನು ತಿಳಿಸಿಕೊಡುವ ಪುಸ್ತಕಗಳಿಲ್ಲದ್ದರಿಂದ ಆಗುವ ಸಂಕಷ್ಟಗಳನ್ನು ನಾನು ಅನುಭವಿಸಿದ್ದೇನೆ. ಇದನ್ನು ಕುರಿತು ನನಗಾಗಿ ಮಾಡಿಕೊಂಡಿದ್ದ ಟಿಪ್ಪಣಿಗಳೊಳಗಿನ ಕೆಲವು ಭಾಗವು 'ಕನ್ನಡ ನುಡಿಜೇನು' ಎಂಬ ಹೆಸರಿನಿಂದ, ೧೯೨೪ರಲ್ಲಿ ಸಹ ಸಂಪಾದಕರಾಗಿದ್ದ ಸಾಲಿ ರಾಮಚಂದ್ರರಾಯರ ಒತ್ತಾಯದಿಂದ ಜಯ ಕರ್ನಾಟಕದಲ್ಲಿ ೩-೪ ಲೇಖನಗಳ ರೂಪದಿಂದ ಪ್ರಕಟವಾಗಿತ್ತು. ಆಗ ಶ್ರೀಮಾನ್ ಪಂಜೆ ಮಂಗೇಶರಾಯರು ಮತ್ತೆ ಶ್ರೀ ದೇವುಡು ನರಸಿಂಹ ಶಾಸ್ತ್ರಿಗಳಂತಹ ಭಾಷಾವಿಶಾರದರು ಈ ವಿಚಾರವನ್ನು ಮುಂದುವರಿಸಲು ಆಶೀರ್ವದಿಸಿದ್ದರು. ಈ ಪುಸ್ತಕದ ಮುನ್ನುಡಿಯ ಬಹುಭಾಗವು 'ಕನ್ನಡದ ಕೊರತೆ'ಗಳು ಎಂಬ ಹೆಸರಿನಿಂದ ಕರ್ಣಾಟಕ ಕಾಲೇಜಿನ ಪತ್ರಿಕೆಯಲ್ಲಿ ಮೊನ್ನೆ ತಾನೆ ಬಂದಿತ್ತು. ವಿಶ್ವವಾಣಿಯ ಸಂಪಾದಕರಾದ ಶ್ರೀ. ಅ. ನ. ಕೃಷ್ಣರಾಯರು ಅದನ್ನು ಇನ್ನೂ ಹೆಚ್ಚಿನ ಬೆಳಕಿನಲ್ಲಿ ತಂದರು; ಅವರು ಮತ್ತೂ ಕೆಲರು, 'ಈ ದಿಕ್ಕಿನಿಂದ ಕನ್ನಡದಲ್ಲಿ ವಿಚಾರ ವಿಮರ್ಶೆಗಳು ನಡೆದಿಲ್ಲ ನಡೆಯ ಬೇಕಾಗಿದೆ; ನೀವು ನಿಮ್ಮ ವಿಚಾರಗಳಿಗೆ ಪ್ರಕಟನೆಯನ್ನು ಕೊಡಿ''ರೆಂದು ಕೈವಾರದಿಂದ ತಿಳಿಸಿದರು. ಇವರೆಲ್ಲರ ಹರಕೆಗಳ ಹಣ್ಣು ಈ ಪುಸ್ತಕ.

ಕುಂದುಕೊರತೆಗಳು ಮನುಷ್ಯನ ಗೆಯ್ಮೆಗೆ ಕಾಲಿನಂತೆ ಬೆನ್ನು ಹತ್ತಿವೆಯೆಂಬುದರ ಅರಿವು ನನಗಿದೆ. ಆದುದರಿಂದ ಇದರಲ್ಲಿ ಯಾವ ಬಗೆಯ ಕೊರತೆಗಳೂ ಉಳಿದಿಲ್ಲವೆಂದು ಸಾಧಿಸುವ ಹುಚ್ಚುಹಂಬಲವು ನನ್ನನ್ನು ತಟ್ಟಲಾರದು. ಸಮುದ್ರದಲ್ಲಿ ಮುತ್ತುಗಳಿಗಾಗಿ ಮುಳುಗುವಾಗ ಅಲ್ಲಿ ತಮಗೆ ದೊರೆತುದನ್ನು ಒಟ್ಟರಿಸಿಕೊಂಡು ಮೇಲಕ್ಕೆತ್ತಿ ತರುವರು; ತಂದುದರಲ್ಲಿ ಆಣೆಮುತ್ತುಗಳೊಡನೆ ಬರಿ ಚಿಪ್ಪುಗಳೂ ಇರಬಹುದು. ತನ್ನ ಕೈಗೆ ಬಂದುದನ್ನು ದಂಡೆಗೆ ತಂದಿರಿಸುವುದು ಆಳಿನ ಕೆಲಸ; ತಂದಿರಿಸಿದುದರಲ್ಲಿ ಹುರುಳಿದ್ದಷ್ಟನ್ನು ಎತ್ತಿಕೊಂಡು ಹುಳುಕಿದ್ದುದನ್ನು ಎಂದು ಬಿಡುವುದು ಒಡೆಯನ ಕೆಲಸ. ನಾನು ನನ್ನ ಕೆಲಸವನ್ನು ಮಾಡಿದ್ದೇನೆ. ಹಿರಿಯರು ತಮ್ಮದನ್ನು ನೆರವೇರಿಸಲಿ.

ಭಾಷಾಶಾಸ್ತ್ರದ ವಿಷಯವು ಅಗಾಧವಾದ ಮಹಾಸಾಗರ. ಇದರಲ್ಲಿ ಈಸಿ ಓಲಾಡುವ ಹನುಮಂತರ ಮುಂದೆ ನಾನು ಒಂದು ಗುಬ್ಬಿ. ಯಾರ ಅಳವು ಎಷ್ಟೊ ಅವರು ಅಷ್ಟು ಈಸುವರು. ಈ ವಿಷಯವನ್ನು ಬರೆಯಲು ಬೇಕಾಗುವಷ್ಟು ಪಾಂಡಿತ್ಯವಾಗಲಿ, ಪದವಿಯಾಗಲಿ ನನಗಿಲ್ಲ. ಆದರೂ ಎರಡು ಕಾರಣಗಳು ನನ್ನನ್ನು ಈ ಸಾಹಸಕ್ಕೆ ಮುಂದೂಡಿದುವು. ಮೇಲ್ಕಾಣಿಸಿದಂತೆ ಹಲಕೆಲವರು ಬೆನ್ನುತಟ್ಟಿ ಹರಸಿದುದು ಒಂದು ಕಾರಣ. ಇನ್ನೊಂದು ಕಾರಣವೆಂದರೆ ಈ ನಾಡಿನ ಹುಟ್ಟುಗುಣ. "ಸದಭಿಸ್ತುತಮಪ್ಪ...... ಒಂಕುಂದದ ತಿರುಳ್ಗನ್ನಡ" ನಾಡೊಳಗೆ ಹುಟ್ಟಿ, "ಪುಲಿಗೆರೆಯ ನಾಡಿನಲ್ಲಿ" ಬೆಳೆದವನು ನಾನು. ಆದರೆ, ನಾನು ಮಾಡಿದ ಈ ಸಾಹಸವು ಸರಿಯಾಯ್ತೆ ತಪ್ಪಾಯ್ತೆ ಎಂಬುದನ್ನು ನಿರ್ಣಯಿಸುವ ಅಧಿಕಾರವು ಬಲ್ಲಿದರಾಗಿದೆ. ಕನ್ನಡ-ಶಬ್ದ-ಸಿದ್ಧಿಕ್ರಮವನ್ನು ನಿರೂಪಿಸುವ ಪುಸ್ತಕಗಳು ಇನ್ನೂ ಸಾಕಷ್ಟು ಪ್ರಕಟವಾಗಿಲ್ಲ. ನುಡಿಯ ಹುಟ್ಟಿನ ಬಗೆಯು ಗೊತ್ತಾಗದೆ ಹೊಸನುಡಿಗಳನ್ನು ಮಾಡಿಕೊಳ್ಳುವುದಕ್ಕಾಗಲಿ, ಇದ್ದ ನುಡಿಗಳ ಗುಟ್ಟನ್ನು ತಿಳಿದು ಕೊಳ್ಳಲಿಕ್ಕಾಗಲಿ ಆಗುವುದಿಲ್ಲ. ಇವೆರಡರ ಆವಶ್ಯಕತೆಯೂ ಈಗ ಕನ್ನಡಕ್ಕಿದೆ. ಇದರಲ್ಲಿ ನನಗೆ ತಿಳಿದ ಒಂದೆರಡು ಅಂಶಗಳನ್ನು ತಮ್ಮೆಲ್ಲರ ಮುಂದೆ ಇರಿಸಿದ್ದೇನೆ. ಇದರೊಳಗಿನ ಕೆಲವು ಮಾತುಗಳು ಕನ್ನಡದಲ್ಲಿ ಹೊಸದಾಗಿಯೆ ಬೆಳಕಿಗೆ ಬರುತ್ತಲಿವೆ.

ಕನ್ನಡ ನುಡಿಯ ಹುಟ್ಟನ್ನು ತಿಳಿಸುವ ಮೊದಲನೆಯ ಪುಸ್ತಕವಿದು. ಆದುದರಿಂದ, ಇದರಲ್ಲಿ ಒಳಗೊಳ್ಳದ ಹೆಚ್ಚಿನ ಸಂಗತಿಗಳನ್ನು ಬೇರೆ ಇಡಬೇಕಾಯಿತು.

ಇದನ್ನು ಬರೆಯುವುದರಲ್ಲಿ ನಾನು ಹಲವರಿಗೆ ಹಂಗಿಗನಾಗಿದ್ದೇನೆ. ಈ ವಿಷಯವನ್ನು ಆಳವಾಗಿ ಅರಿತುಕೊಂಡು ಗ್ರಂಥಗಳನ್ನು ಬರೆದಿರುವ ಪೂರ್ವಸೂರಿಗಳ ಉಪಕಾರದ ಹೊರೆ ದೊಡ್ಡದು. ಶ್ರೀ ಬೆಟ್ಟಗೆರೆ ಕೃಷ್ಣಶರ್ಮರು, ಶ್ರೀಸಾಲಿ ರಾಮಚಂದ್ರರಾಯರು, ಶ್ರೀ. ಕೊಪ್ಪಳ ಮಾಸ್ತರರು, ಪ್ರೊ. ಎಸ್. ಎಸ್. ಮಾಳವಾಡರು ಸಲಹೆಗಳನ್ನಿತ್ತುದಕ್ಕೆ ಅವರಿಗೂ ಋಣಿಯಾಗಿದ್ದೇನೆ. ಮುಸಲ್ಮಾನೀ ಶಬ್ದಗಳ ವ್ಯುತ್ಪತ್ತಿಯ ವಿಚಾರದಲ್ಲಿ ನೆರವಾಗಿ ಆ ಲಿಪಿಯಲ್ಲಿ ಅಚ್ಚು ಮಾಡಿಸಲಿಕ್ಕೆ ಸಹಾಯ ಮಾಡಿದ ಶ್ರೀ. ದಿವೇಕರ, ಬಿ. ಎ. ಇವರ ಹೆಸರನ್ನು ಇಲ್ಲಿ ಉಲ್ಲೇಖಿಸದಿರಲಾರೆನು. ಗೆಳೆಯರಾದ ಶ್ರೀ. ಬೆಟ್ಟಗೆರೆಯವರು ಮೊದಲಚ್ಚಿನ ಹಾಳೆಗಳನ್ನು ನೋಡಿಕೊಟ್ಟುದಕ್ಕೆ ಅವರ ಹಂಗು ಇನ್ನೂ ಹೆಚ್ಚಾಗಿದೆ. ಅಚ್ಚಿನ ಕೆಲಸದಲ್ಲಿ, ಮೋಹನ ಮುದ್ರಣಾಲಯದ ಒಡೆಯರಾದ ಶ್ರೀ. ರಾಯದುರ್ಗ ಕೃಷ್ಣರಾಯರು ಮಾಡಿದ ಸಹಾಯವನ್ನು ಎಂದೂ ಮರೆಯುವುದಕ್ಕಾಗದು.

ನನ್ನ ಅಲ್ಪಸ್ವಲ್ಪ ಕನ್ನಡದ ಸೇವೆಗೆ ಅನುಕೂಲತೆಯನ್ನು ಕಲ್ಪಿಸಿಕೊಟ್ಟಿರುವ ವಿಕ್ಟೋರಿಯಾ ಹೈಸ್ಕೂಲಿನ ಸಂಚಾಲಕ ವರ್ಗದವರಿಗೆ, ನನ್ನ ಶ್ರೇಯಸ್ಸಿನ ಬಹುಭಾಗವು ಸಲ್ಲತಕ್ಕುದ್ದಾಗಿದೆ. ಮತ್ತು ನನ್ನಲ್ಲಿ ಹೆಚ್ಚಿನ ನಂಬುಗೆ-ನಲವುಗಳನ್ನು ತೋರಿ ನನ್ನಿಂದ ಅಳಿಲುಸೇವೆಯನ್ನು ಸ್ವೀಕರಿಸುತ್ತಲಿರುವ ಕನ್ನಡ ನಾಡಿನ ಹಿರಿಯರಿಗೂ ಕಿರಿಯರಿಗೂ ನಾನು ಎಷ್ಟು ಕೃತಜ್ಞನಾಗಿದ್ದರೂ ಕಡಿಮೆಯೆ.

ಶಂ. ಬಾ. ಜೋಶಿ

ಬಿನ್ನಹ ಪತ್ರ

ಪೂಜ್ಯರೆ,

ಕನ್ನಡದ ಮೇಲ್ಮೆಗಾಗಿ ಇರುಳನ್ನೂ ಹಗಲು ಮಾಡಿ ದುಡಿಯುತ್ತಿರುವವರು ನೀವು. ನಿಮ್ಮ ಕೈಯಲ್ಲಿದೆ ಕನ್ನಡದ ಏಳ್ಗೆ. ಕನ್ನಡಿಗರಲ್ಲಿ ಧೀರೋದಾತ್ತ ಭಾವನೆಗಳು ಬೇರೂರಬೇಕು, ಉಚ್ಚವಿಚಾರಗಳು ವಿಕಾಸಗೊಳ್ಳಬೇಕು, ಕನ್ನಡಿಗರು ಪರಿಶುದ್ಧವಾದ ಹಾಗೂ ವಿಶಾಲವಾದ ಭಾವನೆ-ಬುದ್ಧಿಗಳುಳ್ಳವರಾಗಿ, ತಮ್ಮ ಶ್ರೇಷ್ಠವಾದ ಕೃತಿಗಳಿಂದ ಭಾರತಕ್ಕೆ ಕೀರ್ತಿಯನ್ನು ತರಬೇಕು-ಎಂಬ ಈ ಹಿರಿಗುರಿಯು ನಿಮ್ಮದು. ಇದರ ಸಿದ್ಧಿಗಾಗಿ ಹಣ್ಣಾಗುತ್ತಿರುವ ವ್ರತಿಗಳು ನೀವು. ಇದನ್ನು ಕುರಿತು ನಿಮ್ಮ ಧ್ಯಾನಸಮಾಧಿಯಲ್ಲಿ ಕಂಡ ಕಣಸುಗಳನ್ನು ಎದೆಗೊಳುವಂತೆ ಉಚಿತ ಪದಗಳಿಂದ ಚಿತ್ರಿಸಿ ತೋರಿಸಿ, ಜನರನ್ನು ಎಚ್ಚರಿಸುವ ಮಹಾಶಕ್ತಿಯು ನಿಮ್ಮಲ್ಲಿದೆ. ಆದರೂ ನಿಮ್ಮ ಒಳಗಣ್ಣಿಗೆ ಕಾಣುವ ನೋಟವನ್ನೆಲ್ಲ ಸಾಕಷ್ಟು ಅಚ್ಚ ಕನ್ನಡದಿಂದಲೇ ಮೂಡಿಸುವುದಕ್ಕಾಗದೆ ಮಿಡುಕಾಡುವ ಪ್ರಸಂಗವು ನಿಮಗೆ ಎಷ್ಟೋ ಸಾರೆ ಬಂದಿರಬೇಕೆಂದು ನನ್ನ ಅನುಭವವು ಹೇಳುತ್ತಿದೆ.

ಇದಕ್ಕೆ ಕಾರಣವೇನು? ಭಾವವು ಹಿರಿದು, ಶಬ್ದವು ಕಿರಿದು; ಇದು ಯಾವಾಗಲೂ ಇದ್ದುದೇ. ಆದರೂ ಇನ್ನೊಂದು ಭಾಷೆಯಲ್ಲಿ ವ್ಯಕ್ತಪಡಿಸಲು ಸಾಧ್ಯವಿರುವ ಮಾತುಗಳನ್ನು ನಮ್ಮ ಭಾಷೆಯಲ್ಲಿ ಆಡಿ ತೋರಿಸಲು ಮಾತ್ರ ಏಕೆ ಬಿಗಿಯಾಗಬೇಕು? ಇದಕ್ಕೆ ಎರಡು ಕಾರಣಗಳಿವೆ; ಭಾವಕ್ಕೆ ತಕ್ಕ ಪದಗಳನ್ನು ಸಿದ್ಧಪಡಿಸಿಕೊಳ್ಳುವ ಹದವು ಕನ್ನಡದಲ್ಲಿ ಇಲ್ಲವೇ ಇಲ್ಲವೆಂತಲ್ಲ; ಇದೆ. ಆದರೆ, ಅದರ ಅರಿವು ನಮಗಿಲ್ಲ; ಅದನ್ನು ದುರ್ಲಕ್ಷಿಸಿ, ಮರೆತು ಬಿಟ್ಟಿದ್ದೇವೆ; ಇದು ಒಂದು ಕಾರಣ. ಕಾಲಕಾಲಕ್ಕೆ ಆವಶ್ಯಕವಾದ ಹೊಸ ಏರ್ಪಾಟಗಳನ್ನು ಮಾಡಿಕೊಳ್ಳದಿದ್ದುದು ಎರಡನೆಯ ಕಾರಣ. ಆದುದರಿಂದ ಕನ್ನಡದ ಏಳ್ಗೆಯನ್ನು ಅಪೇಕ್ಷಿಸುವವರು ಇವೆರಡರೂ ದೃಷ್ಟಿಗಳಿಂದ ತಮ್ಮನ್ನು ತಿದ್ದಿಕೊಳ್ಳುವುದು ಕರ್ತವ್ಯವಾಗಿಲ್ಲವೇ?

ಮನುಷ್ಯ ತನ್ನ ಸಂಸಾರವನ್ನು ಎರಡು ಬಗೆಯಿಂದ ಸಾಗಿಸಬಹುದು: (೧) ತನ್ನ ಬಾಳುವೆಗೆ ಬೇಕಾಗುವ ದುಡ್ಡು ದುಗ್ಗಾಣಿಯನ್ನು ತಾನೇ ಗಳಿಸಿ : (೨) ಇಲ್ಲವೇ ಹೆರವರಿಂದ ಎರವು (ಕೈಗಡ) ತಂದು. ಭಾಷಾಸಂಸಾರದ ರೀತಿಯೂ ಹೀಗೆಯೇ ಇದೆ. ಇವರೆಡರಲ್ಲಿ ಮೊದಲನೆಯದು ಹಿರಿತನದ ಹಾದಿ, ಎರಡನೆಯದು ಕೀಳುದಾರಿ. ಸುಖದಿಂದ ಬಾಳುವೆ ಮಾಡಿಕೊಂಡಿರಬೇಕೆಂದು ಬಯಸುವವನಿಗೆ ಹೆರವರ ನೆರವು ಎಳ್ಳಷ್ಟೂ ಬೇಡವೆಂಬ ಬಿಂಕವು ದುಃಖಕ್ಕೆ ಕಾರಣವಾಗುವುದು. ನೆರವು ಬೇಕು; ಅದಿಲ್ಲದೆ ನಡೆಯದು; ಆದರೆ ಆ ನೆರವು ನಮ್ಮ ಕೊರಲ ಉರಲು ಆಗದಂತೆ ಮಾತ್ರ ಎಚ್ಚರಿರಬೇಕು.

ಕನ್ನಡವು ಸಂಸ್ಕೃತದಿಂದ ತುಂಬ ನೆರವು ಪಡೆದಿದೆ; ಇಂದಿಗೂ ಪಡೆಯುತ್ತಲಿದೆ, ಇಂಗ್ಲಿಷು ಭಾಷೆಯಿಂದಲೂ ಕನ್ನಡಕ್ಕಾಗುತ್ತಿರುವ ಲಾಭವು ಅಷ್ಟು ಇಷ್ಟಲ್ಲ. ಕನ್ನಡವು ತನ್ನ ಬೆಳವಣಿಗೆಯ ಸುಲವಾಗಿ ಯಾವ ಭಾಷೆಯಿಂದಲೂ ನೆರವನ್ನು ಕೋರಬಹುದು. ಆದರೆ, ಆ ನೆರವಿನಿಂದ ಕನ್ನಡವು ತನ್ನತನವನ್ನು ಮಾತ್ರ ಕಳೆದುಕೊಳ್ಳಕೂಡದು. ಪರಭಾಷೆಯ ಶಬ್ದಗಳನ್ನು ಎತ್ತಿಕೊಳ್ಳದ ಭಾಷೆಯು ಜಗತ್ತಿನಲ್ಲಿ ದೊರೆಯಲಾರದು. ಆದರೂ ಪ್ರತಿಯೊಂದು ಪ್ರೌಢಶಾಲೆಯಲ್ಲಿ ಅದಕ್ಕೊಂದು ಅಳತೆ-ಕಟ್ಟು ಇರುವುದನ್ನು ಕಾಣಬಹುದು. ಪರಭಾಷೆಯ ಶಬ್ದಗಳನ್ನು ಎತ್ತಿಕೊಳ್ಳುವವರಲ್ಲಿ ಸುಮಾರಾಗಿ ನಾಲ್ಕು ವರ್ಗಗಳನ್ನು ಮಾಡಬಹುದು; (೧) ಕಿರುತಿಳಿವಿನಿಂದ ಕೆಲರು; (೨) ಅನಿವಾರ್ಯವಾಗಿ ಕೆಲರು; (೩) ಮೈಗಳ್ಳತನದಿಂದ ಕೆಲರು; (೪) ಪಾಂಡಿತ್ಯದ ಪ್ರದರ್ಶನಕ್ಕಾಗಿ ಕೆಲರು. ಕೊನೆಯ ಎರಡು ವರ್ಗದವರು ತಾವು ಮಾಡುವುದರಲ್ಲಿ ತಪ್ಪಿಲ್ಲವೆಂದು ಪ್ರತಿಪಾದಿಸುವಾಗ, ತಮ್ಮ ಹಟವಾದಕ್ಕೆ ಒಂದು ತಾತ್ವಿಕ ಸ್ವರೂಪವನ್ನೂ ಕೊಡುವರು. 'ಬಾಯಿಗೆ ಬಂದದ್ದೇ ಭಾಷೆ: ಅದು ಅಚ್ಚಕನ್ನಡವಿರಬೇಕು, ಶುದ್ಧವಿರಬೇಕು, ಇವೇ ಮೊದಲಾದ ಕಟ್ಟು-ಪಾಟುಗಳನ್ನು ಹಾಕುವುದು ಸರಿಯಲ್ಲ' ಎಂದು ಇವರ ಅಭಿಪ್ರಾಯ. ಬಾಯಿಗೆ ಬಂದಂತೆ ಭಾಷೆ ಬದಲಾಗಲಾರಂಭಿಸಿದರೆ ಅದಕ್ಕೊಂದೂ ಬುಡಕಟ್ಟು ಉಳಿಯಲಾರದು; ಯಾರ ಬಾಯನ್ನು ಯಾರು ತಾನೆ ಹಿಡಿಯಬೇಕು? ಹೆಸರಿಗೆ ಕನ್ನಡ ಮಾತು; ಆದರೆ ಆಡಿದ ಮಾತುಗಳಲ್ಲಿ ನೂರಕ್ಕೆ ತೊಂಬತ್ತಕ್ಕಿಂತ ಹೆಚ್ಚು ಪರಭಾಷೆಯ ಪದಗಳೇ. ಇದೇನು ಕನ್ನಡವೊ! ಇದು ಹೆಸರಗನ್ನಡ! ಕನ್ನಡ ಮಾತಿನಲ್ಲಿ ಮೊದಲು ಕನ್ನಡ ನುಡಿಗಳಿಗೇ ಇಂಬು ಇರಬೇಕಲ್ಲವೇ?

ಕನ್ನಡ ಮಾತಿನಲ್ಲಿ ಕನ್ನಡ ನುಡಿಗಳಿಗೇ ಮೊದಲು ಪಟ್ಟವಿರಬೇಕು. ಕನ್ನಡವನ್ನು ಈಗಿನ ಕುತ್ತಿನಿಂದ ಉಳಿಸಿ ಬೆಳೆಯಿಸುವುದಿದ್ದಲ್ಲಿ ಹೀಗೆ ಮಾಡದಿದ್ದರೆ ನಡೆಯದು. ಪ್ರತಿಯೊಬ್ಬರೂ ತಾವು ಆಡಿದ ಇಲ್ಲವೆ ಬರೆದ ಮಾತಿನಲ್ಲಿ ಕನ್ನಡ ನುಡಿಗಳೆಷ್ಟು? ಪರಭಾಷೆಯ ಪದಗಳೆಷ್ಟು? ಎಂಬುದನ್ನು ಅಡಿಗಡಿಗೆ ನೋಡಿಕೊಳ್ಳಬೇಕು; ನೂರಕ್ಕೆ ಐವತ್ತು, ಅರುವತ್ತಷ್ಟು ಸಹ ಕನ್ನಡ ನುಡಿಗಳಿಲ್ಲದ ತಮ್ಮ ಆ ಮಾತಿಗೆ ಕನ್ನಡವೆಂಬ ಹೆಸರು ಸಲ್ಲುವುದೋ ಎಂಬುದನ್ನು ತಾವೇ ಹೇಳಬೇಕು. ಕನ್ನಡದಲ್ಲಿ ಹೊಸನುಡಿಗಳನ್ನು ಮಾಡಿಕೊಳ್ಳುವ ಹದವನ್ನು ಅರಿತುಕೊಳ್ಳಬೇಕು. ಆದರೆ ಎಷ್ಟೋ ಸಾರೆ ಕೈಸಾಗದಾಗಿ, ಆಗಿನ ಮಟ್ಟಿಗಾದರೂ ಪರಕೀಯ ಶಬ್ದಗಳನ್ನು ಎತ್ತಿಕೊಳ್ಳದೆ ಬೇರೆ ದಾರಿಯೇ ಇರುವುದಿಲ್ಲವೆಂಬುದು ನಿಜ. ಇದು ಬಹಳ ಮಟ್ಟಿಗೆ ನಮ್ಮ ನುಡಿಯ ಬಡತನವನ್ನೇ ತೋರಿಸುತ್ತದೆ. ಕುತ್ತದಲ್ಲಿ ಔಷಧವೆಂದು ಸ್ವೀಕರಿಸುವುದನ್ನು ದಿನಾಲು ಮಾತುಮಾತಿಗೆ ತಕ್ಕೊಂಡರೆ ಒಳಿತಿಗಿಂತ ಕೆಡುಕೇ ಹೆಚ್ಚಾಗುವುದಲ್ಲವೇ? ಇದಕ್ಕೆ ನಮ್ಮ ಬಡತನವನ್ನು ಹೋಗಲಾಡಿಸಿಕೊಳ್ಳುವುದೊಂದೇ ಉಪಾಯ; ಹೊರತು ಅಡಿಗಡಿಗೆ ಪರಕೀಯ ಶಬ್ದಗಳನ್ನು ತಕ್ಕೊಳ್ಳುವುದು ಹಿತಕರವಾಗಲಾರದು. ಏಕೆಂದರೆ ಎರವು ಸಿರಿಯಲ್ಲ; ಎರವು ನಮ್ಮ ದೈನ್ಯದ ಕುರುಹು.

ಆದರೆ, ಈಗಾಗಲೆ ಕನ್ನಡದಲ್ಲಿ ಮೆಯ್ಯೂಡಿರುವ ಪರಕೀಯ ಶಬ್ದಗಳನ್ನು ಕಿತ್ತಿ ಎಸೆದು ಬಿಡುವ ಹುಚ್ಚಾಟವನ್ನು ಯಾರೂ ಆರಂಭಿಸಲಾಗದು. ಅರಗಿ ನೆತ್ತರೊಡನೆ ಕೂಡಿದುದನ್ನು ಬೇರ್ಪಡಿಸುವುದು ಶಕ್ಯವಿಲ್ಲ; ಮತ್ತು ಅವಶ್ಯವೂ ಇಲ್ಲ. ಆದರೆ ಕನ್ನಡದ ಒಡಲೊಳಗಿದ್ದು ಅರಗದೆ; ಕರಗದೆ ಗಂಟುಗಟ್ಟಿಕೊಂಡಿರುವ ಭಾಗದ ಬಗ್ಗೆ ಮಾತ್ರ ಬಹಳ ಎಚ್ಚರಾಗಿರಬೇಕು. ಉಂಡುದು ದಕ್ಕದಿದ್ದರೆ ಕಕ್ಕಬೇಕಾಗುವುದು. ಅರಗದ ಅನ್ನವು ಕುತ್ತವಾಗಿ ಜೀವಕ್ಕೆ ಅಪಾಯವನ್ನುಂಟು ಮಾಡದೆ ಇರಲಾರದು. ಸಂಸ್ಕೃತ-ಪ್ರಾಕೃತಗಳ ಹಿರಿಮೆಗೆ ಮನಸೋತು, ಅಳತೆ ಕಟ್ಟಿಲ್ಲದೆ ಅವುಗಳಿಂದ ಎತ್ತಿಕೊಂಡು, ಅದೆಲ್ಲವನ್ನೂ ಮೆಯ್ಯೂಡಿಸಿಕೊಳ್ಳಲಿಕ್ಕಾಗದೆ ಕನ್ನಡವು ಹಿಂದೊಮ್ಮೆ ಹಿರಿದಾದ ಹಾನಿಗೆ ಒಳಗಾಗಿದೆ. ಅದು ಜೀವದ ಮೇಲಿನ ಕುತ್ತೇಪಾರಾಗಿ ಉಳಿದು ಇಂದಿನ ದಿನಗಳನ್ನು ಕಂಡುದೇ ಸುದೈವ. ಸಂಸ್ಕೃತ-ಪ್ರಾಕೃತಗಳು ಕೆಲವೊಂದು ಮಟ್ಟದ ವರೆಗೂ ಕನ್ನಡದ ಮೇಲ್ಮೆಗೆ ಕಾರಣವಾಗಿದ್ದುದು ನಿಜ; ಆದರೆ ಆ ಮಟ್ಟವನ್ನು ಮೀರುತ್ತಲೆ ಅವು ಕನ್ನಡದ ಕೀಳ್ಮೆಗೆ ಕಾರಣವಾದುದೂ ನಿಜ. ಕನ್ನಡದೊಡನೆ ಬಾಳಲು ಬಂದ ಸಂಸ್ಕೃತ-ಪ್ರಾಕೃತ ಶಬ್ದಗಳು ಕನ್ನಡ ನುಡಿಗಳೊಡನೆ ಕೂಡಿಕೊಳ್ಳಲಿಲ್ಲ. ಒಂದೇ ಮನೆಯಲ್ಲಿಯ

ಅವುಗಳ ಸಂಸಾರವೇ ಬೇರೆ! ಸಂಸ್ಕೃತದ ಮಟ್ಟಕ್ಕೆ ಕನ್ನಡ ಶಬ್ದಗಳು ಬಂದು ನಿಲ್ಲಬೇಕಾಯಿತೇ ಹೊರತು ಕನ್ನಡದ ಮಟ್ಟಕ್ಕೆ ಸಂಸ್ಕೃತ ಶಬ್ದಗಳು ಬೇಗನೆ ಬಂದು ನಿಲ್ಲಲು ಒಪ್ಪಲಿಲ್ಲ.

ಮಾತು ಕನ್ನಡ; ಆದರೆ ಬಾಯಿ (ಉಚ್ಚಾರಪದ್ಧತಿ) ಮಾತ್ರ ಸಂಸ್ಕೃತ ಶಬ್ದಗಳ ಉಚ್ಚಾರ ವೈಶಿಷ್ಟ್ಯವು ಹಾಗೆ ಉಳಿಯಿತು; ಅವುಗಳನ್ನು ಕನ್ನಡನುಡಿಗಳೊಡನೆ ಕೂಡಿಸಲಾಗದೆಂಬ ಕಟ್ಟಳೆಯಿಂದ ಅವು ಕನ್ನಡದೊಡನೆ ಒಂದುಗೂಡಲಿಲ್ಲ. ಹೀಗೆ, ಕನ್ನಡದ ಒಡಲೊಳಗೆ ಸೇರಿದ ಸಂಸ್ಕೃತ ಮತ್ತು ಪ್ರಾಕೃತದ ಅಂಶವು ಸ್ವತಂತ್ರವಾಗಿ ಉಳಿದು, ಬೆಳೆಯುತ್ತ ಬೆಳೆಯುತ್ತ ಕೊನೆಗೆ, ಮರಾಠಿ ಭಾಷೆಯು ತಲೆದೋರುವುದಕ್ಕೆ ಪೂರ್ವಪೀಠಿಕೆಯಾಯಿತು. ಆದಿಪುರಾಣ, ಜಗನ್ನಾಥವಿಜಯ ಇಂತಹ ನಮ್ಮ ಕಾವ್ಯಗಳೊಳಗಿನ ಆ ಭಾಷೆಯ ಕನ್ನಡಪ್ರತ್ಯಯಗಳನ್ನು ಕಿತ್ತುಬಿಟ್ಟರೆ ಅವು ಮರಾಠೀ ಭಾಷೆಯ ಕಾವ್ಯ ಗಳಾಗುತ್ತವೆಂದು ಹೇಳುವುದಕ್ಕೆ ವಿಶೇಷ ಸಂಕೋಚಪಟ್ಟುಕೊಳ್ಳ ಬೇಕಾಗಿಲ್ಲ. ಮಿತಿಮೀರಿ ಇಂಗ್ಲಿಷು ಬೆರಸಿದ್ದರಿಂದ ಚೀನದೇಶದಲ್ಲಿ 'ಪಿಜನ್ ಇಂಗ್ಲಿಷ್' (Pigeon English) ಎಂಬುದೊಂದು ಹೊಸಭಾಷೆಯು ರೂಪುಗೊಂಡಿದೆ. ನರ್ಮದಾತೀರದಿಂದ, ಹೋಗಲಿ, ನೃಪತುಂಗನು ಹೇಳುವ 'ಗೋದಾವರಿವರಂ' ಇದ್ದ ಕನ್ನಡವು ಕೃಷ್ಣಾತಟಕ್ಕಾದರೂ ಸ್ಥಿರವಾಗಿ ನಿಲ್ಲುವುದೋ ಇಲ್ಲವೋ ಎಂಬ ಸಂದೇಹವು ಉಂಟಾಗುವದಕ್ಕೆ ಕಾರಣವೇನು? ಕನ್ನಡದೊಡನೆ ಒಂದುಗೂಡದೆ ಇದ್ದ ಸಂಸ್ಕೃತ-ಪ್ರಾಕೃತವು ತನಗೊಂದು ಸ್ವತಂತ್ರ ಭೂಮಿಯನ್ನು ಸಂಪಾದಿಸಿ ಕೊಂಡಿತು. ಕನ್ನಡವು ತನ್ನ ಅಷ್ಟು ಸೀಮೆಗೆ ಎರವಾಯಿತು.*

ಕನ್ನಡಿಗರಲ್ಲಿ ತಮ್ಮತನದ ಅರಿವು ಉಂಟಾಗದಿದ್ದರೆ, ಕನ್ನಡವು ಈಗಲೂ ಬಾಳುವ ಆಶೆಯಿಲ್ಲ. ಎಲ್ಲ ಮಾತಿನಲ್ಲಿಯೂ ಕನ್ನಡಕ್ಕೆ ಮೊದಲ ಪಟ್ಟ ಎಲ್ಲಿಯ ವರೆಗೆ ಇಲ್ಲವೊ ಅಲ್ಲಿಯ ವರೆಗೆ, ಕನ್ನಡವು ತಲೆಯೆತ್ತಲಾರದು. ಕನ್ನಡ ಮಾತುಗಳನ್ನು ಕನ್ನಡ ಬಾಯಿಂದ-ಕನ್ನಡ ಸೊಲ್ಲಿನಿಂದಲೆ ಆಡುವ ನಿಶ್ಚಯವು ಬೇಕು. ನಮ್ಮಲ್ಲಿ, ಇಂಗ್ಲಿಷರು, ಬಂಗಾಲಿಗಳು, ಗುರ್ಜರರು, ಮರಾಠರು ಪರಭಾಷೆಯ ಪದಗಳನ್ನು ಹೆಚ್ಚಾಗಿ ತಮ್ಮ ಬಾಯಿಂದಲೇ ಹೇಳುವರು. 'ಅರವಿಂದ' ಎಂಬುದನ್ನು ಬಂಗಾಳಿಗಳು 'ಓರೋಬಿಂದೊ' ಎಂದು ಉಚ್ಚರಿಸುವರು. ಇದು ಬಂಗಾಳದ ಸುಶಿಕ್ಷಿತರ ಸೊಲ್ಲಿನ ರೀತಿ. ಆದರೆ, ನಮ್ಮಲ್ಲಿಯ ಸುಶಿಕ್ಷಿತರಲ್ಲಿ ಬಹು ಜನರಿಗೆ, ತಮ್ಮ ಸೊಲ್ಲಿನ ವೈಶಿಷ್ಟ್ಯದ ಅರಿವು ಸಹ ಇಲ್ಲ! ಪ್ರತಿಯೊಂದು ಪರಕೀಯ ಭಾಷೆಯ ಪದವನ್ನು ಆಯಾ ಭಾಷೆಯ ಮೂಲ ಉಚ್ಚಾರಕ್ಕೆ ಸಮಿಸಮೀಪವಾಗಿ ಹೇಳುವ ಪ್ರಯತ್ನವು ನಡೆದುದನ್ನೇ ನಮ್ಮ ಸುಶಿಕ್ಷಿತರಲ್ಲಿ ಕಾಣಬಹುದು. ನಮ್ಮವರು ಆಡುವ ಒಂದೇ ವಾಕ್ಯದಲ್ಲಿಯೆ ಹಿಂದೀ, ಇಂಗ್ಲಿಷು, ಮರಾಠಿ ಮೊದಲಾದ ಪರಕೀಯ ಉಚ್ಚಾರ ಪದ್ಧತಿಗಳು ತಲೆದೋರಿ, ಕನ್ನಡಕ್ಕೆ ತುಂಬ ಹಾನಿಯುಂಟಾಗುತ್ತಲಿದೆ.

ಕನ್ನಡಕ್ಕೂ ಒಂದು ಸೊಲ್ಲು ಉಂಟು. ಆ ಬಗೆಯ ಛಂದದಿಂದಲೆ ಅದನ್ನು ಉಚ್ಚರಿಸಬೇಕು. ಆ ತೆರನಾಗಿ ಮಾತನಾಡುವಾಗ ಪರಕೀಯ ಶಬ್ದಗಳಲ್ಲಿ ಆಗುವ ಸ್ವಾಭಾವಿಕವಾದ ಮಾರ್ಪಾಟಗಳನ್ನು ಮಾಡಿಕೊಳ್ಳಲು ಬೆದರುವ ಕಾರಣವಿಲ್ಲ. ವಿಶೇಷ ಕಾರಣಗಳಿಗಾಗಿ ಕೆಲಸಾರೆ ಪರಕೀಯ ಪದಗಳನ್ನು ಇದ್ದಕ್ಕಿದ್ದಂತೆ ಹೇಳದೆ ನಡೆಯುವುದಿಲ್ಲ. ಆದರೆ, ಹೀಗೆ ಕನ್ನಡದೊಡನೆ ಒಂದುಗೂಡದೆ, ತಮ್ಮದೊಂದು ಸ್ವತಂತ್ರ ವ್ಯಕ್ತಿತ್ವವನ್ನು ಕಾಯ್ದುಕೊಳ್ಳುವ ಶಬ್ದಗಳ ಬಗ್ಗೆ ಬಲು ಎಚ್ಚರಾಗಿರಬೇಕು. ಏಕೆಂದರೆ ಅಂತಹವುಗಳ ಸಂಖ್ಯೆಯು ಹೆಚ್ಚಾಗಿ, ಕನ್ನಡವು ಮತ್ತೆ ರೂಪಾಂತರವನ್ನು ತಾಳುವ ಗಂಡಾಂತರವು ಬಾರದೆ ಇರದು. ಉಚ್ಚಾರದಲ್ಲಿ ಸಂಸ್ಕೃತದ ಸಮತೂಕಕ್ಕೆ ತಂದಿಡುವ ಎಳೆದಾಟದಲ್ಲಿ, ಕನ್ನಡವು ಮೇಲೆ ಸೂಚಿಸಿದಂತೆ ಒಮ್ಮೆ ಕೆಲವೊಂದು ಹಾನಿಗೆ ಒಳಗಾಗಿ, ತನ್ನದೊಂದು ವಿಶೇಷ ವೈಶಿಷ್ಟ್ಯವನ್ನು ಸಂಪಾದಿಸಿಕೊಂಡಿತು. ಹಿಂದೂದೇಶದ ಯಾವ ಪ್ರಾಂತೀಯರೂ

* ಕಣ್ಮರೆಯಾದ ಕನ್ನಡ, ಮಹಾರಾಷ್ಟ್ರದ ಮೂಲ ಮತ್ತು ಕರ್ನಾಟದ ವೀರ ಕ್ಷತ್ರಿಯರು ಎಂಬ ಮೂರು ಪುಸ್ತಕಗಳಲ್ಲಿ ಈ ಮಾತಿಗೆ ಹೆಚ್ಚಿನ ಆಧಾರಗಳನ್ನು ಕಂಡುಕೊಳ್ಳಬಹುದು. ಬೇಗನೆ ಅಚ್ಚಾಗಲಿರುವ "ಕನ್ನಡವು ಮರಾಠಿಗೆ ಕೊಟ್ಟ ಸಾಂಸ್ಕೃತಿಕ ಋಣ" ಎಂಬ ಪ್ರಬಂಧದಲ್ಲಿಯೂ ಇದರ ವಿಶೇಷ ವಿವರಣೆಯನ್ನು ಕಾಣಬಹುದು. (ಇದು ಆನಂತರ ಪ್ರಕಟಗೊಳ್ಳಲಿಲ್ಲ. ಸಂ)

ಸಂಸ್ಕೃತವನ್ನು ಕರ್ಣಾಟಕರಷ್ಟು ಶುದ್ಧವಾಗಿ ಉಚ್ಚರಿಸಲಾರರು. ಆದರೆ, ಕನ್ನಡವು ಇಂದು ತನ್ನ ಈ ವೈಶಿಷ್ಟ್ಯವನ್ನು ಎಲ್ಲಿ ಕಳೆದುಕೊಳ್ಳುವುದೊ ಎಂಬ ಹೆದರಿಕೆಯುಂಟಾಗಿದೆ. ಇಂಗ್ಲಿಷು, ಹಿಂದಿ, ಮರಾಠಿ, ಗುಜರಾತಿ ಮೊದಲಾದ ಭಾಷೆಯ ಪದಗಳನ್ನು ಇದ್ದಕ್ಕಿದ್ದಂತೆ ಕನ್ನಡದಲ್ಲಿ ಎತ್ತಿಕೊಳ್ಳುವ ರೂಢಿಯು ತಲೆದೋರುತ್ತಲಿದೆ. 'ಮೀರಾಬೆಹೆನ್' ಎಂಬುದನ್ನು ಕನ್ನಡ ರೀತಿಯಿಂದ ಉಚ್ಚರಿಸುವುದೇ ಸಾಧ್ಯವಿಲ್ಲ; ಅಲ್ಲಿ ಪರಕೀಯ ಉಚ್ಚಾರವು ಬರಲೇಬೇಕು. ಕನ್ನಡ ಬಾಯಿಂದ ಅದನ್ನು ಹೇಳಬೇಕಿದ್ದರೆ 'ಮೀರಾಬಾಯಿ' ಅಥವಾ 'ಮೀರಾಭಗಿನಿ' ಎಂದು ಉಚ್ಚರಿಸಬೇಕಾಗುವುದು. 'ಬ್ಯಾಂಗಲೋರ್'; 'ಬೆಳಗಾಮ್' ಎಂದು ಮುಂತಾಗಿ ಅನಾವಶ್ಯಕವಾಗಿ ನಮ್ಮ ಊರುಗಳ ಹೆಸರು ಮೊದಲಾದವುಗಳನ್ನು ಪರಭಾಷೆಯ ಉಚ್ಚಾರ ಪದ್ಧತಿಯಿಂದ ಬರೆಯುವುದು ಅಥವಾ ಹೇಳುವುದು ಎರಡೂ ಅಸಮಂಜಸವಾಗಿದೆ. ಕನ್ನಡದಲ್ಲಿ ಹೆಚ್ಚಾಗಿ ಮೊದಲಕ್ಷರದ ಮೇಲೆ ಆಘಾತರವಿರುತ್ತದೆ. ಮರಾಠೀ, ಹಿಂದೀ ಮೊದಲಾದವುಗಳ ಉಚ್ಚಾರ ಪದ್ಧತಿಯು ತೀರ ಬೇರೆಯಾಗಿದೆ; ನಾವು ಪರಭಾಷೆಯ ಮೇಲಿನ ಮೋಹದಿಂದ ಆವಶ್ಯಕವಿಲ್ಲದಲ್ಲಿಯೂ ಆಯಾಭಾಷೆಗಳ ಶಬ್ದಗಳನ್ನು ಮೂಲದಂತೆ ಉಚ್ಚರಿಸುವ ಪ್ರಯತ್ನದಲ್ಲಿ, ನಮ್ಮ ನುಡಿಗೆ ಕೇಡು ಬಗೆಯುತ್ತಲಿದ್ದೇವೆ.

ಕನ್ನಡದ ಬಳಗದಲ್ಲಿ ಬಂದು ಸೇರಿದ ಪರಕೀಯ ಶಬ್ದಗಳು (ಮುಖ್ಯವಾಗಿ ಸಂಸ್ಕೃತ ಶಬ್ದಗಳ) ಪರಕೀಯತೆಯು, ಮೊದ-ಮೊದಲು ಕೆಲದಿನ ಉಳಿಯುವುದು (ಉಳಿದಿರುವದು) ಅನಿವಾರ್ಯ. ಆದರೆ ಅದು ಹಾಗೆಯೆ ಕೊನೆಯವರೆಗೂ ಉಳಿಯಬೇಕೆಂಬ ಹಟವು ಮಾತ್ರ ಅಹಿತಕರ. ಅವು ಸಹಜವಾಗಿ ಕನ್ನಡದಲ್ಲಿ ಒಂದುಗೂಡಿ ಹೋಗುತ್ತಿದ್ದರೆ, ಅದಕ್ಕೆ ತಡೆಯನ್ನು ಉಂಟುಮಾಡಲಾಗದು. ಹಾಗೆ ಮಾಡಿದರೆ 'ಕಟ್ಟೇ ಕಾಂತ' 'ಅರಸುಗುಣ' 'ಮಂಗಳಾರತಿ' ಇಂತಹ ಸೊಗಸಾದ ಮಾತುಗಳಿಗೆ ನಾವು ಎರವಾಗಬೇಕಾಗುವುದು. ನಮ್ಮ ಪೂರ್ವ ಸೂರಿಗಳು ಇದನ್ನು ಕುರಿತು ಮಾಡಿದ ವಿಚಾರಗಳನ್ನು ಇಲ್ಲಿ ಪರ್ಯಾಲೋಚಿಸುವುದು ಅವಶ್ಯವಾಗಿದೆ. ಸಂಸ್ಕೃತ ಪದಗಳಲ್ಲಿ ಕನ್ನಡದೊಡನೆ ಬೆರೆತುಕೊಳ್ಳಲು ಯಾವ ಅಡೆ-ತಡೆಗಳೂ ಇಲ್ಲದಂತಹ-ಉಚ್ಚಾರದಲ್ಲಿ, ಕನ್ನಡಕ್ಕೆ ಸರಿಸಮಾನವಾಗಿರುವ- ಸಂಸ್ಕೃತ ಶಬ್ದಗಳನ್ನು, ಕನ್ನಡದೊಡನೆ ಬೇಕಾದ ಹಾಗೆ ರೂಸಿಕೊಳ್ಳಬೇಕೆಂದು, 'ಕವಿರಾಜಮಾರ್ಗ' ಮತ್ತು 'ಕರ್ಣಾಟಕ ಭಾಷಾಭೂಷಣ' ಗಳು ಅನುಮತಿಯನ್ನಿತ್ತಿವೆ. ಇದರಲ್ಲಿ ಕವಿರಾಜಮಾರ್ಗ ಕ್ಕಿಂತ ಭಾಷಾಭೂಷಣ (ಸೂತ್ರ ೧೩೨) ಮತ್ತು ಕಾವ್ಯಾವಲೋಕನ (ಸೂತ್ರ ೬೩)ಗಳು ಹೆಚ್ಚು ನಿಃಸಂದಿಗ್ಧವಾಗಿ ಅಪ್ಪಣೆಯನ್ನಿತ್ತಿವೆ. ಕನ್ನಡದೊಡನೆ ಉಚ್ಚಾರದಲ್ಲಿ ಸಮವಾಗಿರುವ ಸಂಸ್ಕೃತ ಶಬ್ದಗಳಿಗೆ 'ಸಮಸಂಸ್ಕೃತ' ಪದಗಳೆಂದು ಅರ್ಥಪೂರ್ಣವಾದ ಹೆಸರನ್ನಿತ್ತಿರುವರು. "ಸಮಸಂಸ್ಕೃತಂ ದೇಶೀಯ ಪದೇನ ಸಮಂ ಸಮಸ್ಯತೇ" ಎಂದು ನಾಗವರ್ಮನ ಅಭಿಪ್ರಾಯ.

ಉಚ್ಚಾರದಲ್ಲಿ ಕನ್ನಡಕ್ಕಿಂತಲೂ ತೀರ ಭಿನ್ನವಾಗಿರುವಂತಹ "ಮಹುಮುರ್ಹುಃ", "ಉಚ್ಚೈರ್ಧ್ವಾನ" ಮೊದಲಾದ ಶಬ್ದಗಳ ಜಾತಿಯೇ ಬೇರೆ. ಇವು ಸಮಸಂಸ್ಕೃತಗಳಲ್ಲ, ಸಕ್ಕದಗಳು; ಕೇವಲ ಸಂಸ್ಕೃತ ಶಬ್ದಗಳೆಂದು ಹಿಂದಿನವರು ವರ್ಗೀಕರಿಸಿ 'ಸಕ್ಕದ-ಕನ್ನಡ'ಗಳ ಸಮಾಸಗಳನ್ನು ಮಾತ್ರ ಎಂದಿಗೂ ಮಾಡಲಾಗದೆಂದು ವಿಧಿಸಿದರು.

ಆದರೆ, ಈ ಗುಟ್ಟು ಗೊತ್ತಾಗದೆ ಕೇಶಿರಾಜ ಮತ್ತು ಭಟ್ಟಾಕಲಂಕರು ಹಿಂದಿನವರಿಂದ ನಡೆದುಬಂದ ಪರಂಪರೆಗೆ ಅಡ್ಡಗಟ್ಟಿ ನಿಂತರು. 'ಸಮಸಂಸ್ಕೃತ'ಗಳೊಡನೆ ಸಹ ಕನ್ನಡವನ್ನು ಕೂಡಿಸಲಾಗದೆಂದು ಕಟ್ಟಪ್ಪಣೆ ಮಾಡಿದರು; ಮತ್ತು ಹಿಂದಿನವರು ಮಾಡಿದ 'ಪೊಡವೀಶ' 'ಕೂರಸಿ' 'ಒಳ್ಗವಿ' ಮೊದಲಾದ ಸೊಗಸಾದ ಶಬ್ದಗಳನ್ನು ಅಪವಾದಗಳೆಂದು ಹೇಳಿದರು. ಇದು ಸೃಷ್ಟಿಕ್ರಮಕ್ಕೆ ತೀರ ವಿಪರೀತವಾದ ನಿರ್ಬಂಧ. ಆದರೆ ಭಾಷಾಶುದ್ಧಿಯ ಈ ಬಗೆಯ ಹುಚ್ಚುಮಬ್ಬು ತಲೆಗೆ ಏರದೆ ಇದ್ದ ನಾಗವರ್ಮನು ಹೀಗೆ ಹೇಳುತ್ತಾನೆ:

ಬೆರಸಿ ಸಮಸಂಸ್ಕೃತಂಗ।
ಳ್ಬೆರೆ ಕನ್ನಡದೊಳಗೆ ಸಮತೆಯಿಂದಂ ಸಲ್ಗುಂ॥

ನೃಪತುಂಗನು ಸಕ್ಕದ (ಸಂಸ್ಕೃತ) ಕನ್ನಡ ಸಮಾಸವನ್ನು ಮಾಡಕೂಡದೆಂದು ಕಡುನ್ನುಡಿಯಿಂದ ಹೇಳಿದ್ದರೂ, ಸಮಸಂಸ್ಕೃತ ಮತ್ತು ಕನ್ನಡಗಳನ್ನು ಬೆರೆಸುವ ಬಗೆಗೆ ಅವನ ಅಭಿಪ್ರಾಯವು ಹೀಗಿದೆ:

ವಿದಿತ ಸಮಸಂಸ್ಕೃತೋದಿತ।
ಪದಂಗಳೊಳ್ ಪುದಿದು ಬೆರಸಿ ಬರೆ ಕನ್ನಡದೊಳ್॥
ಮುದಮನವು ತರ್ಕುಮತಿಶಯ।
ಮೃದಂಗಸಂಗೀತಕಾದಿಮಧುರರವಂಬೋಲ್॥

ಸಮಸಂಸ್ಕೃತ ಮತ್ತು ಕನ್ನಡ ಕೂಡಿದರೆ ಮಧುರ ಸಂಗೀತದಂತೆ ಮನಸ್ಸಿಗೆ ಹಿಗ್ಗು ಉಂಟಾಗುವುದೆಂದು ಕವಿರಾಜಮಾರ್ಗವು ಹೇಳುತ್ತದೆ. ಆದರೆ, ಕನ್ನಡದೊಡನೆ ಸಮಸಂಸ್ಕೃತಗಳನ್ನೂ ಬೆರಸಲಾಗದೆಂದು ಅವ್ಯವಹಾರ್ಯವೂ ಅಸಾಧ್ಯವೂ ಆದ ನಿರ್ಬಂಧವನ್ನು ಹಾಕಿ, ಮುಂದಿನ ವೈಯಾಕರಣಿಗಳು ಕನ್ನಡಕ್ಕೆ ಹಾನಿಯನ್ನುಂಟು ಮಾಡಿದ್ದಾರೆ. ಕವಿರಾಜಮಾರ್ಗವು ಹೇಳುವ ಆ 'ಮಧುರಸಂಗೀತ'ದ ಇಂಪಿನ ಎಷ್ಟೋ ಕನ್ನಡ ನುಡಿಗಳಿಗೆ (ಈ ವರೆಗೆ ಉಂಟಾಗಬಹುದಾಗಿದ್ದ ಅನೇಕ ಹೊಸನುಡಿಗಳಿಗೆ) ಕನ್ನಡಿಗರು ಎರವಾಗಿದ್ದಾರೆ!

ಗಂಗಾಯಮುನೆಗಳ ಸಂಗಮವಾದ ಬಳಿಕ ಅವುಗಳ ನೀರಿಗೆ, ಒಂದರೊಳಗೊಂದು ಬೆರೆತುಕೊಳ್ಳದಿರಲು ಕಟ್ಟಪ್ಪಣೆಯನ್ನು ವಿಧಿಸುವುದು ಸಮಂಜಸವಾದೀತೆ? ಅದರೊಳಗೂ ವಂಶಮಿಶ್ರಣವಾಗಿರುವಲ್ಲಂತೂ ಭಾಷೆಗಳ ಬೆರಕೆಯಾಗುವುದು ಕ್ರಮಪ್ರಾಪ್ತವಾದ ಮಾತು. ಹಟ್ಟಿಕಾರರ ಮತ್ತು ಆರ್ಯರ ವಂಶಮಿಶ್ರಣದಿಂದ ಕನ್ನಡ ಜನಾಂಗವಾಗಿದೆ...... ಎಂಬುದನ್ನು ಕರ್ಣಾಟಕ ವೀರಕ್ಷತ್ರಿಯರು' ಈ ಪುಸ್ತಕದಲ್ಲಿ ವಿವರಿಸಲಾಗಿದೆ. ಇವೆರಡೂ ಜನಾಂಗಗಳ ಸಂಸ್ಕೃತಿಯ ಸಮ್ಮಿಶ್ರಣವೆ ಕನ್ನಡಸಂಸ್ಕೃತಿ; ಇದುವೆ ಕನ್ನಡದ ವೈಶಿಷ್ಟ್ಯ. ಆದುದರಿಂದಲೆ ಕನ್ನಡ-ಸಂಸ್ಕೃತಪದಗಳ ಸಮಾಸಗಳಾಗಕೂಡದೆಂಬ ನಿರ್ಬಂಧವು ಅಸ್ವಾಭಾವಿಕ; ಮತ್ತು ಪ್ರಗತಿಗೆ ವಿರೋಧಕ. ಇಂತಹ ಸಮಾಸಗಳೇ ಕೂಡದೆಂದು ವಿಧಿಸುವುದಕ್ಕಿಂತ 'ಕಿವಿಗೆ ಇಂಪಾಗದ ಪದಗಳ ಸಮಾಸಗಳನ್ನು ಮಾಡಲಾಗದು' ಎಂಬ ಈ ಬಗೆಯ ನಿರ್ಬಂಧಗಳನ್ನು ಹಾಕಬಹುದು. ತನ್ನ ಕಾಲ ಮೇಲೆ ತಾನು ನಿಲ್ಲುವುದರಲ್ಲಿಯೆ ಏಳ್ಗೆಯ ಆಸೆಯಿದೆ. ಹೆರವರ ಮೇಲೆ ಕೆಯ್ಯೂರಿ ನಿಂತವರು ಯಾವಾಗ ನೆಲಕ್ಕುರುಳುವರೊ ಹೇಳಲಿಕ್ಕಾಗುವುದಿಲ್ಲ. ಭಾಷೆಯೂ ಈ ನಿಯಮಕ್ಕೆ ಹೊರತಾಗಿಲ್ಲ. ಆದುದರಿಂದ, ಯಾವಾಗಲೂ ಹೆರವರಿಂದ ಸಿದ್ಧಶಬ್ದಗಳನ್ನು ಸ್ವೀಕರಿಸುವುದು ಅಷ್ಟು ಹಿತಕರವಲ್ಲ. ತಮ್ಮ ಭಾಷೆಯಲ್ಲಿಯೇ ಹೊಸಶಬ್ದಗಳನ್ನು ಹುಟ್ಟಿಸಿಕೊಳ್ಳಬೇಕು. ಯಾವುದೊಂದು ಭಾಷೆಯು ಬೆಳೆಯಬೇಕಾದರೆ ಇದೇ ಮಿಗಿಲಾದ ಹಾದಿ.

ಕನ್ನಡದ ಶಬ್ದ ಸಂಪತ್ತನ್ನು ಹೆಚ್ಚಿಸಲು ನಾಲ್ಕು ಹಾದಿಗಳಿವೆ : (೧) ಹಿರಿಯರ ನಿಕ್ಷೇಪಧನದಂತೆ ಕನ್ನಡ ಕಾವ್ಯ ಶಾಸನಾದಿಗಳಲ್ಲಿ ಹುದುಗಿಕೊಂಡಿರುವ ಹುರುಳಿನ ನುಡಿಗಳನ್ನು ಮತ್ತೆ ಬೆಳಕಿಗೆ ತಂದು ಬಳಸ ಲಾರಂಭಿಸುವುದು (೨) ಹಳ್ಳಿಗರ ಹಾಗೂ ಪಟ್ಟಣಿಗರಲ್ಲಿ ಸಹ ಮನೆಮನೆಗೂ ಹೆಣ್ಣು ಮಕ್ಕಳ ಬಾಯಲ್ಲಿರುವ ಅಚ್ಚಕನ್ನಡದ ಕೆಚ್ಚಿನ ಮಾತುಗಳನ್ನು ಎತ್ತಿ ಬರೆಹದಲ್ಲಿ ಉಪಯೋಗಿಸಹತ್ತುವುದು (೩) ಈಗ ವ್ಯಾಕರಣಗಳಲ್ಲಿ ಹೇಳಿರುವ ಹಂಚಿಕೆಗಳಿಂದ ಹೊಸ ನುಡಿಗಳನ್ನು ಸಿದ್ಧಪಡಿಸಿಕೊಳ್ಳುವುದು (೪) ಸಂಸ್ಕೃತ, ಇಂಗ್ಲಿಷು ಮೊದಲಾದ ಭಾಷೆಗಳಲ್ಲಿರುವಂತೆ ಇನ್ನೂ ವಿವಿಧಾರ್ಥದರ್ಶಕ ಹೊಸ ಶಬ್ದಗಳನ್ನು ಸಿದ್ಧಪಡಿಸಿಕೊಳ್ಳಲು ಬೇಕಾದ ಹೊಸ ಹಂಚಿಕೆಗಳನ್ನು ಕಂಡುಹಿಡಿಯುವುದು.

ಇವೆಲ್ಲ ದಿಕ್ಕಿನಿಂದಲೂ ನಮಗೆ ದಾರಿತೋರುವುದಕ್ಕೆ ಪಂಪಮಹಾಕವಿಯು ಸಿದ್ಧನಿದ್ದಾನೆ. ಆತನ 'ವಿಕ್ರಮಾರ್ಜುನ ವಿಜಯವು' ಈಗಲೂ ನಮ್ಮ ಕೈಗನ್ನಡಿಯಾಗಬಹುದು; ಅದರಲ್ಲಿ ಅವನು ತೋರಿದ ದಾರಿಯಲ್ಲಿ ಮುಂದೆ ನಡೆಯದೆ ಇದ್ದುದರಿಂದಲೇ ಕನ್ನಡವು ಹೀಗೆ ಕುತ್ತಿಗೆ ಈಡಾಗಿದೆ. ಆತನು ಕನ್ನಡ ಸೇವಕರಿಗೆಲ್ಲ ಆದಿಗುರು. ಆದುದರಿಂದಲೇ ಆದಿಪಂಪನು ಅವನು. ಆದ್ಯರಲ್ಲಿ ಹಿರಿಯ ಪಟ್ಟ ಅವನಿಗೆ.

೧. ಕಾವ್ಯ-ಶಾಸನಾದಿಗಳಲ್ಲಿ ಅಡಗಿರುವ ಸೊಗಸಾದ ಕನ್ನಡನುಡಿಗಳು ಮತ್ತೆ ಈಗ ಬಳಕೆಯಲ್ಲಿ ಬಂದರೆ ಅದೆಷ್ಟು ಸೊಗಸಾದೀತು! ತಿಳಿಗನ್ನಡ ನುಡಿಗಳ ಸಂಖ್ಯೆಯು ಹೆಚ್ಚಾಗಿ ಎಷ್ಟೋಮಟ್ಟಿಗೆ ಕನ್ನಡದ ಬಡತನವು ಹಿಂಗಿಹೋಗುವುದು. ಕನ್ನಡಿಸು ಶಬ್ದವನ್ನು ಪಂಪನು 'ವಿಕ್ರಮಾರ್ಜುನವಿಜಯ'ದಲ್ಲಿ (೪.೫೫ ಮತ್ತು ೭. ೮೭) ಎಷ್ಟು ರಮ್ಯವಾಗಿ ಉಪಯೋಗಿಸಿದ್ದಾನೆ! 'ಕನ್ನಡಿಸು' ಎಂದರೆ (ಪರಭಾಷೆಯಿಂದ) 'ಕನ್ನಡದಲ್ಲಿ ಭಾಷಾಂತರಿಸು' ಎಂದಿಷ್ಟೇ ಈಗಿನ ರೂಢಾರ್ಥ. ಆದರೆ, ಪಂಪನು ಉಪಯೋಗಿಸುವುದರ ಅಂದವೇ ಬೇರೆ! 'ಕನ್ನಡಿಯಲ್ಲಿ ಪ್ರತಿಬಿಂಬವು ಹೇಗೆ ಚೆನ್ನಾಗಿ ಪ್ರತಿಫಲಿಸುವುದೋ ಹಾಗೆ ಅರ್ಥ-ಭಾವಗಳನ್ನು ಮನಸ್ಸಿನಮೇಲೆ ಸುಸ್ಪಷ್ಟವಾಗಿ ಮೂಡುವಂತೆ ಮಾಡುವುದೇ ನಿಜವಾದ ಕನ್ನಡಿಸುವಿಕೆ' ಎಂದು ಪಂಪನ ಭಾವ. 'ನೇರ್ಪಡಿಸು' ಎಂದರೆ ಸಿದ್ಧಪಡಿಸು, ತಯಾರಿಸು ಎಂಬರ್ಥದ ಸೊಗಸಾದ ಶಬ್ದವನ್ನು ಪಂಪನು ಉಪಯೋಗಿಸಿದ್ದಾನೆ. ಅದನ್ನು ನಾವು ಇಂದು ರೂಢಿಸಿದರೆ ತಪ್ಪಾದೀತೆ? ಶಾಸನಗಳಲ್ಲಿ ಮಹತ್ವದ ಎಷ್ಟೋ ಒಳ್ಳೊಳ್ಳೆಯ ಕನ್ನಡ ನುಡಿಗಳು ನಮಗೆ ಈಗಲೂ ಉಪಯುಕ್ತ ವಾಗಿರುವಂತಹವು ದೊರೆಯುತ್ತವೆ. 'ಕೊಡಿಗೆ' ಶಬ್ದವನ್ನೆ ತಕ್ಕೊಳ್ಳುವ. ವೀರರ ರಣಭೂಮಿಯಲ್ಲಿ ತಮ್ಮ ಜೀವದ ಹಂಗು ಇಲ್ಲದೆ ನೆತ್ತರ ಸುರಿಸಿದುದಕ್ಕಾಗಿ ಅವರಿಗೆ, 'ಕೊಡಿಗೆ', 'ರಕ್ತ ಕೊಡಿಗೆ', 'ಕೊಡಿಗೆ ಮಕಾನ್ಯ' (ಉಚಿತ, ಉಂಬಳಿ) ಗಳು ಕೊಡಲ್ಪಡುತ್ತಿದ್ದುವು. ದತ್ತಿಯಾಗಿ ಕೊಟ್ಟುದೇ 'ಕೊಡಿಗೆ', 'ಕೊಡು' ಧಾತುವಿನಿಂದ ಸಾಧಿಸಿದ ಎಷ್ಟು ಉಚಿತಾರ್ಥವುಳ್ಳ ಶಬ್ದವಿದು!

ಉಚಿತಾರ್ಥವುಳ್ಳ ಇಂತಹ ಪದಗಳನ್ನು ಕಾವ್ಯ-ಶಾಸನಾದಿಗಳಿಂದ ಆಯ್ದುಕೊಂಡು, ಅವು ಲೋಕಪ್ರಿಯ ವಾಗುವಂತೆ ತಿಳಿಯಾದ ಅರ್ಥದಲ್ಲಿ ಆಗಾಗ ಜನಸಾಮಾನ್ಯರ ಕಣ್ಣಮುಂದೆ ತುರುವುದು ಅಭ್ಯಾಸಿಗಳಾದ ಸಾಹಿತಿಗಳ ಕರ್ತವ್ಯವಾಗಿದೆ. ಕೆಲವು ಶಬ್ದಗಳನ್ನು ಹಳಗನ್ನಡದಿಂದ ಇದ್ದಕ್ಕಿದ್ದಂತೆಯೇ ಎತ್ತಿಕೊಂಡು ಬಳಸುವುದು ಸರಿಯಾಗುವುದಿಲ್ಲ. ಅಂತಹ ಸಂದರ್ಭದಲ್ಲಿ ಅವುಗಳಿಗೆ ಸ್ವಲ್ಪ ಆಧುನಿಕ ಸಂಸ್ಕಾರ ಕೊಟ್ಟು ರೂಢಿಸುವುದು ಯೋಗ್ಯವಾಗಿರುತ್ತದೆ. ಒರಂಟು=ಒರಟು, ಕಾಣ್ಕೆ=ಕಾಣಿಕೆ, ತೊಟ್ಟಗೆ=ತಟ್ಟನೆ-ಥಟ್ಟನೆ, ಪುಯ್ಯಲಿಡು= ಹುಯ್ಯಲಿಡು...... ಹೀಗೆ ಇವುಗಳನ್ನು ಈಗಿನ ರೂಪಕ್ಕೆ ತಿರುಗಿಸಿಕೊಳ್ಳುವುದು ಯುಕ್ತವಾಗಿದೆ.

೨. ಪರಭಾಷೆಯ ಸಂಪರ್ಕವುಂಟಾದವರ ಉಚ್ಚಾರದ ರೀತಿಯಲ್ಲಿ, ವಾಕ್ಯರಚನಾಶೈಲಿಯಲ್ಲಿ ಅವರಿಗೆ ಹೆಚ್ಚಾಗಿ ಸಂಬಂಧವು ಬಂದ ಪರಭಾಷೆಯ ಪರಿಣಾಮವು ಕೆಲಮಟ್ಟಿಗಾದರೂ ತೋರದೆ ಇರಲಾರದು. ಕೆಲವು ಸಾರೆ, 'ಇದು ಪರ-ಭಾಷೆಯ ರೀತಿ' ಎಂದು ಗೊತ್ತಿದ್ದರೂ ಅನಿವಾರ್ಯವಾಗಿ ತಿಳಿದೂ ತಿಳಿದೂ-ಅದನ್ನು ಅನುಸರಿಸುವ ಪ್ರಸಂಗವು ಬರುವುದು. ಎಷ್ಟೋ ಸಾರೆ ಗೊತ್ತಾಗದೆಯೆ ಶಬ್ದಗಳ ಜೋಡಣೆ, ಮಾತಿನ ರೀತಿಗಳು ನಾವು ಕಲಿತ ಪರಭಾಷೆಯ ಮಾದರಿಯಲ್ಲಿ ತಾವಾಗಿಯೇ ಬಂದು ಹೋಗುತ್ತವೆ. ಆದುದರಿಂದಲೇ ಯಾವುದೊಂದು ಭಾಷೆಯ ನಿಜಸ್ವರೂಪವನ್ನು ಅರಿತುಕೊಳ್ಳಬೇಕಾಗಿದ್ದರೆ ಹಳ್ಳಿಯ ಮಾತು-ಹೆಣ್ಣು ಮಕ್ಕಳ ಮಾತುಗಳ ಅಭ್ಯಾಸವು ಆವಶ್ಯಕವಾಗಿರುತ್ತದೆ. ಈ ದಿಕ್ಕಿನಲ್ಲಿ ಸ್ವಲ್ಪ ಪರಿಶ್ರಮಪಟ್ಟರೆ ಇದು ಸಹ ಕನ್ನಡನುಡಿಯ ಬೆಡಗನ್ನು ಹೆಚ್ಚಿಸಲು ಕಾರಣವಾಗದೆ ಇರಲಾರದು.

ಆದಿಪಂಪನ ಕಾವ್ಯದಲ್ಲಿ ಸಿಕ್ಕುವ ಎಷ್ಟೋ ಮಾತುಗಳನ್ನು, ನನ್ನ ಹಳ್ಳಿಯ ಒಕ್ಕಲರ ಮಾತಿನಲ್ಲಿ ಆಗಾಗ ಕೇಳಿ ನಾನು ಸೋಜಿಗಗೊಂಡಿದ್ದೇನೆ. 'ಪಸವು' ಶಬ್ದವನ್ನು ಬಯಕೆ, ಅಪೇಕ್ಷೆ, ಎಂಬರ್ಥದಲ್ಲಿ ಪಂಪನು ಉಪಯೋಗಿಸುತ್ತಾನೆ. ಕಿಟ್ಟೆಲ್ಲದಲ್ಲಿ ಈ ಅರ್ಥವೇ ಇಲ್ಲ. ಆದರೆ, ನಮ್ಮ ಕುಳನು "ನಮ್ಮ ಹಸವು ಇದ್ದಷ್ಟು ಬೇಡಿದೆವು; ಇದಕ್ಕೂ ಹೆಚ್ಚು ನಮ್ಮಿಂದಾಗುವುದಿಲ್ಲ" ಎಂದು ಆಡುತ್ತಾನೆ! ನಮ್ಮ ಕಾವ್ಯದಲ್ಲಿ ದೊರೆವ 'ಜಡಿದು' ಶಬ್ದವನ್ನು ನಮ್ಮ ಹಳ್ಳಿಗರ ದಿನದ ಮಾತಿನಲ್ಲಿ ಕೇಳಿದ್ದೇನೆ. ಈ ಬಗೆಯ "ಜಡಿದು" ಶಬ್ದ ಪ್ರಯೋಗವು ಕೇವಲ ಜಾನಪದದ ಮಾತಿನ ರೀತಿಯೆಂದು ತಿಳಿದು ನಮ್ಮ ಬರೆಹಗಾರರು ಅದನ್ನು ಈಗ ಕಡೆಗಣಿಸಿದ್ದಾರೆ! ಪಂಪ ಮೊದಲಾದ ಕವಿಗಳಲ್ಲಿ ಇದರ ಪ್ರಯೋಗಗಳು ಬೇಕಾದಷ್ಟು ಸಿಕ್ಕುತ್ತವೆ. ಅವಕಾಶವೆಂಬರ್ಥದಲ್ಲಿ 'ತೆರಪು' ಶಬ್ದವು ನಮ್ಮ ಜನಗಳ ಬಾಯಲ್ಲಿದೆ. 'ತೆರಪಿಲ್ಲದೆ ಮಳೆ ಸುರಿಯಿತು' ಎಂಬುದನ್ನು ಯಾರು ತಾನೆ ಕೇಳಿಲ್ಲ?

ಆದರೆ, ಸಾಹಿತಿಗಳು ಮಾತ್ರ ಸಾಮಾನ್ಯವಾಗಿ ಇಂತಹ ಮಾತುಗಳನ್ನು ಲೆಕ್ಕಿಸುವುದೇ ಇಲ್ಲ! "ಮಳೆ ಹೊರಪು ಆಯಿತು" ಎಂಬಲ್ಲಿ ಬಳಸಿದ 'ಹೊರಪು' ಶಬ್ದವನ್ನು ಸಿದ್ಧಪಡಿಸಿಕೊಂಡಿರುವ ಜಾನಪದದ ಶಬ್ದಸಾಧನೆಯ ಸಹಜಮನೋಹರವಾದ ಚಾತುರಿಯು ಹೊಗಳತಕ್ಕಂತಹದಾಗಿಲ್ಲವೆ?

ಕಾವ್ಯ-ಶಾಸನಾದಿಗಳಲ್ಲಿ, ಜಾನಪದರ ಮಾತಿನಲ್ಲಿ ಸಿಕ್ಕಾಗ ಹುರುಳಿನ ನುಡಿಗಳನ್ನು ತಕ್ಕ ರೀತಿಯಿಂದ ಎತ್ತಿಕೊಂಡು ಅವನ್ನು ಪ್ರಚಾರಕ್ಕೆ ತರುವುದು ಮಹತ್ವದ ಕೆಲಸವೆ ಆಗಿದೆ. ನಮ್ಮ ಹಿರಿಯರ ನಿಕ್ಷೇಪದ್ರವ್ಯವಿದು. ನಮ್ಮ ಅಜ್ಜ ಮುತ್ತಂದಿರ ಕಾಲದಿಂದ ಹುದುಗಿರುವ ಈ ದ್ರವ್ಯದಲ್ಲಿ ಹಿಂದಿನ ಕಾಲದ ಹೊನ್ನ-ವರಾಹಗಳೆ ತುಂಬಿವೆ; ಈಗ ನಡೆಯುವುದಿಲ್ಲ, ಕಾರಣವು ಬೇಡವೇಬೇಡವೆನ್ನಬಹುದು ಕೆಲರು. ಆದರೆ, ಹೊನ್ನು ಏನಿದ್ದರೂ ಹೊನ್ನೇ ತಾನೆ? ಆ ನಾಣ್ಯಗಳನ್ನು ಅವಶ್ಯವಿದ್ದಷ್ಟು ಮಾರ್ಪಡಿಸಿ ಈಗಿನ ಕಾಲದಲ್ಲಿಯೂ ನಡೆಯುವಂತೆ ಮಾಡಿಕೊಳ್ಳಲು ಬರಲಿಕ್ಕಿಲ್ಲವೆ? ಆದುದರಿಂದ ತಿಳಿಗೇಡಿತನದಿಂದ "ಇದೇನು ಹಿಂದಿನ ಕಾಲದ ದ್ರವ್ಯ; ಈಗ ನಿರುಪಯುಕ್ತ' ಎಂದು ಅದೆಲ್ಲವನ್ನು ತಿಪ್ಪೆಗೆ ಎಸೆವ ಪೆಚ್ಚದಂತೆ ಯಾರೂ ನಡೆದುಕೊಳ್ಳಬಾರದೆಂದು ಬಿನ್ನಹ.

೩. ನಮ್ಮ ವ್ಯಾಕರಣಗಳಲ್ಲಿ ಹೊಸನುಡಿಗಳನ್ನು ನೇರ್ಪಡಿಸಿಕೊಳ್ಳತಕ್ಕ ಕೆಲವು ಹಂಚಿಕೆಗಳನ್ನು ಹೇಳಿದೆ. ಆದರೆ, ಅವುಗಳ ಲಾಭವನ್ನು ನಾವು ಸಾಕಷ್ಟು ಪಡೆಯುತ್ತಿಲ್ಲ. ಗೋವಳ, ದೆಸೆವಳ, ಮಡಿವಳ, ಮೊದಲಾದ ಶಬ್ದಗಳಲ್ಲಿ ಕಣ್ಣಿಗೆ ಬೀಳುವ 'ವಳ' (ವಾಳ) ಪ್ರತ್ಯಯವು ಹಿಂದೆ ಬಿದ್ದಿದೆ. ಇದರಂತೆಯೆ 'ಕುಟಿಗ', 'ಇಲಿ', 'ಪು', 'ಮೆ' ಮೊದಲಾದ ಪ್ರತ್ಯಯಗಳು ಮೂಲೆ ಸೇರಿವೆ. 'ಇಗ', 'ಕಾರ', (ಗಾಂ)ಗಳು ಸೇರಿ, ಕಳೆದ ನಾಲ್ಕೆಂಟು ವರುಷಗಳಲ್ಲಿ ಹತ್ತೆಂಟು ಹೊಸ ಶಬ್ದಗಳಾದರೂ ಜನಸಾಮಾನ್ಯರಲ್ಲಿ ಬಳಕೆಗೆ ಬಂದಿದ್ದರೆ ಆಣೆ! ಹೊಲಬು, ಅರಬು, ಇಂತಹ ಶಬ್ದಗಳ ಕೊನೆಗಿರುವ 'ಬು' ಅಥವಾ ಹರಡು, ಕೊರಡು, ಬರಡು, ಇಂತಹ ಶಬ್ದಗಳ ಕೊನೆಗಿರುವ 'ಡು' ಈ ಬಗೆಯ ಹಲವು ಪ್ರತ್ಯಯಗಳು ಈ ವರೆಗಿನ ಯಾವ ನಮ್ಮ ವೈಯ್ಯಾಕರಣಿಗಳ ಕಣ್ಣಿಗೂ ಬೀಳದ್ದರಿಂದ, ಕನ್ನಡ ವ್ಯಾಕರಣದಲ್ಲಿ ಎಲ್ಲಿಯೂ ಎಡೆಸಿಕ್ಕದೆ ಹೀಗೇ ಅಜ್ಞಾತವಾಸದಲ್ಲಿವೆ. ಅವುಗಳನ್ನು ಬಿಟ್ಟರೂ ನಮ್ಮ ವ್ಯಾಕರಣಗಳಲ್ಲಿ ಹೇಳಿರುವ ಪ್ರತ್ಯಯಗಳ ಸಂಪೂರ್ಣ ಉಪಯೋಗವನ್ನಾದರೂ ನಾವು ಏಕೆ ಮಾಡಿಕೊಳ್ಳಬಾರದು?

೪. ಸಂಸ್ಕೃತ ಮತ್ತು ಇಂಗ್ಲಿಷು ಭಾಷೆಗಳೊಡನೆ ತೂಗಿ ನೋಡಿದರೆ, ಕನ್ನಡದಲ್ಲಿ ಆ ಭಾಷೆಗಳಲ್ಲಿರುವಂತಹ ಶಬ್ದಸಾಧನೆಯ ವಿವಿಧ ಅನುಕೂಲತೆಗಳು ಎಷ್ಟೋ ಮಟ್ಟಿಗೆ ಕಡಿಮೆ ಇರುವುದು ಕಂಡುಬರುವುದು. Positive-Negative ಶಬ್ದಗಳನ್ನು ಬೇಕಾದಂತೆ ಸಿದ್ಧಪಡಿಸಿಕೊಳ್ಳುವ ಎದೆಗಾರಿಕೆಯನ್ನು ನಾವು ತೋರಿಸಿಲ್ಲ. ಹಿಂದಿನವರು ನಮಗೆ ಈ ದಿಕ್ಕಿನಲ್ಲಿ ಕೆಲವೊಂದು ದಾರಿಯನ್ನು ತೋರಿದ್ದಾರೆ. 'ಬಯಲು-ನಿರ್ವಯಲು' 'ಬೆರಗು-ನಿಬ್ಬೆರಗು' ಇಂತಹ ಪ್ರಯೋಗಗಳು ಶರಣರ ವಚನಗಳಲ್ಲಿಯೂ 'ನಿರ್ನೆರಂ' ಮೊದಲಾದ ಕೆಲವು ಶಬ್ದಗಳು ಕಾವ್ಯಗಳಲ್ಲಿಯೂ ಸಿಕ್ಕುತ್ತವೆ. ಆದರೆ, ಈ ಪರಂಪರೆಯನ್ನು ಮುಂದೆ ನಡೆಯಿಸಿಕೊಂಡು ಹೋಗುವ ಬಲ್ಲಿದರು ಮಾತ್ರ ಈವರೆಗೆ ಯಾರೂ ಹುಟ್ಟಲಿಲ್ಲ! ತಾರತಮ್ಯವನ್ನು ಸೂಚಿಸುವ ತರ-ತಮ ವಾಚಕ ಪ್ರತ್ಯಯಗಳು, 'ಸಂ' 'ಪ್ರತಿ' 'ವಿ' ಮೊದಲಾದ ಉಪಸರ್ಗಗಳು, ಅಲ್ಪಾರ್ಥಕ ಅಥವಾ ವಿಶೇಷಾರ್ಥಕ (ಕ,ಮಯ,) ಪ್ರತ್ಯಯಗಳು ಹೊಚ್ಚ ಹೊಸತು. re, ize, ism, logy, anti, pro, neo, pre, co, sub, ex, non ಈ ಬಗೆಯ ಉಪಸರ್ಗ ಪ್ರತ್ಯಾದಿಗಳ ಆವಶ್ಯಕತೆಯು ಈಗ ಉಂಟಾಗಿದೆ. ಕನ್ನಡದ ಈ ಕೊರತೆಯನ್ನು ಹೇಗೆ ಪೂರಯಿಸಿಕೊಳ್ಳಬೇಕೆಂಬುದನ್ನು ಕಂಡುಹಿಡಿಯುವುದು ಕವಿಗಳೇ ಮೊದಲಾದ ಪ್ರತಿಭಾಶಾಲಿಗಳ ಕೆಲಸವಾಗಿದೆ.

ಪರಭಾಷೆಯಿಂದ ಇಂತಹ ಅರ್ಥದ ಸಿದ್ಧಶಬ್ದಗಳನ್ನು ಎತ್ತಿಕೊಂಡರೆ ಕೆಲಸವು ತೀರಲಿಲ್ಲ; ನಮ್ಮ ಕೊರತೆಯು ಹಿಂಗಲಿಲ್ಲ; ಹಾಗೆ ತಿಳಿದುಕೊಂಡರೆ ನಮಗೆ ನಾವೇ ಮೋಸ ಮಾಡಿಕೊಂಡಂತಾಗುವುದು. ಪರದೇಶದಿಂದ ಸಿದ್ಧವಸ್ತುಗಳನ್ನು ತರಿಸುವುದಕ್ಕಿಂತ, ಆ ಸರಕನ್ನು ಸಿದ್ಧಮಾಡತಕ್ಕ ಯಂತ್ರವನ್ನು ತಂದು ತಮ್ಮಲ್ಲಿಯೆ ಆ ವಸ್ತುಗಳನ್ನು ತಯಾರಿಸಿಕೊಳ್ಳುವುದು ಹೆಚ್ಚು ಲಾಭಕರ. ಆದ ಕಾರಣ, ಈ ಬಗೆಯ ಪ್ರತ್ಯಯಾದಿಗಳ ಸಲುವಾಗಿ ಎಂದಿನಂತೆ

ಸಂಸ್ಕೃತದ ಸಹಾಯವನ್ನು ಪಡೆಯಲು ಹಿಂದೆಗೆಯಲಾಗದು. ಕಾರ, ವಂತ, ಸ್ಥ, ಮೊದಲಾದ ಹಲವು ಪ್ರತ್ಯಯಗಳನ್ನು ಹಿಂದಕ್ಕೆ ಸಂಸ್ಕೃತದಿಂದಲೇ ಸ್ವೀಕರಿಸಿದ್ದಾಗಿದೆ. ಅದೇ ರೀತಿಯನ್ನು ಈಗಲೂ ಏಕೆ ಅನುಸರಿಸಬಾರದು? ಇಂಗ್ಲಿಷು ಭಾಷೆಯ ಬೆಳವಣಿಗೆಯ ಇತಿಹಾಸವು ನಮಗೆ ಇಲ್ಲಿ ಮಾರ್ಗದರ್ಶಕ ವಾಗುವಂತಿದೆ. ಇಂಗ್ಲೀಷು ಭಾಷೆಯ ಮಹಾವಿದ್ವಾಂಸರೆಂದು ವಿಖ್ಯಾತರಾಗಿರುವ ಹೆನ್ರಿ ಬ್ರ್ಯಾಡ್ಲೆಯವರು Making of English ಎಂಬ ಗ್ರಂಥದಲ್ಲಿ ಬರೆವುದೇನೆಂದರೆ;

> "But the native machinery of derivation.......... has not been found sufficient for the necessities of the languages, and has been largely supplemented by additions obtained from other languages."

ಇಂಗ್ಲಿಷಿನವರು ಫ್ರೆಂಚ, ಗ್ರೀಕ, ಲ್ಯಾಟಿನ್ ಮೊದಲಾದ ಭಾಷೆಗಳಿಂದಲೂ ತಮಗೆ ಆವಶ್ಯಕವಾದ ಪ್ರತ್ಯಯ, ಉಪಸರ್ಗಾದಿಗಳನ್ನು ಎತ್ತಿಕೊಂಡು ತಮ್ಮ ಕೊರತೆಗಳನ್ನು ಪೂರೈಸಿಕೊಂಡರು. ಹಾಗೆ, ನಾವೂ ಸಹ ಇಂದು ನಮ್ಮ ನುಡಿಯ ಬಡತನವನ್ನು ದೂರಮಾಡುವುದಕ್ಕೆ ಏನಾದರೂ ಹಂಚಿಕೆಗಳನ್ನು ಹುಡುಕುವುದು ಕರ್ತವ್ಯವಾಗಿಲ್ಲವೆ! ಲಂಗೋಟಿಯು ಚಿಕ್ಕಂದಿನಲ್ಲಿ ಚೆಂದಕಾಣುತ್ತಿರಬಹುದು. ಆದರೆ, ವಯಸ್ಸು ಹೆಚ್ಚಾದ ಮೇಲೆಯೂ ಅದಕ್ಕಿಂತ ದೊಡ್ಡ ಬಟ್ಟೆಯ ಆವಶ್ಯಕತೆಯಿಲ್ಲವೆಂದು ಹಾಗೆಯೆ ಮಬ್ಬಿನಲ್ಲಿದ್ದು ಬಿಟ್ಟರೆ ಜಗತ್ತಿನ ಕೈಯಿಂದ ನಗಿಸಿಕೊಳ್ಳಬೇಕಾಗುವುದು ಮಾತ್ರ ನಿಶ್ಚಿತ!

ಆದುದರಿಂದ, ಮಹನೀಯರೇ, ಕನ್ನಡವನ್ನು ಇವೆಲ್ಲ ತೊಂದರೆಗಳೊಳಗಿಂದ ಹೊರದೆಗೆದು ಮುಂದಕ್ಕೆ ತರುವ ಹೊಣೆಯು ನಿಮ್ಮ ತಲೆಯಮೇಲೆ ಇದೆ. ನೀವು 'ಶಬ್ದ-ಸೃಷ್ಟಿಯ ವಿಧಾತೃಗಳು". ನಿಮ್ಮ ಯೋಗ್ಯತೆಯು ಭೌತಿಕ ಸೃಷ್ಟಿಕರ್ತನಾದ ಬ್ರಹ್ಮನಿಂದಲೂ ಒಂದು ತೂಕ ಹೆಚ್ಚು. ಬ್ರಹ್ಮನು ನಿರ್ಮಿಸಿದ ಶಕುಂತಲೆಯು ಎಂದೋ ಮಣ್ಣು ಗೂಡಿದಳು; ಆದರೆ, ಕಾಲಿದಾಸನ ಶಕುಂತಲೆಯು ಇನ್ನೂ ನಮ್ಮ ಕಣ್ಣೆದುರಿಗೆ ನಲಿದಾಡುತ್ತಿದ್ದಾಳೆ. ನಿಮ್ಮ ನಾಲಗೆಯಲ್ಲಿ ಅಮೃತವಿದೆ; ನಿಮ್ಮ ಕೈಯಲ್ಲಿ ಸಂಜೀವನದ ಶಕ್ತಿಯಿದೆ. ನೀವು ಮನಸ್ಸು ಮಾಡಿದರೆ ಅವುದು ಅಸಾಧ್ಯ? ನಿರ್ಜೀವಿಗಳಿಗೆ ಜೀವಕಳೆಯನ್ನಿತ್ತ ನೀವು, ಐದು ಸಾವಿರ ವರುಷಗಳಿಂದಲೂ-ಇಂದಿಲ್ಲ ನಾಳೆ- ತನಗೆ ಉಜ್ವಲವಾದ ಭವಿಷ್ಯತ್ಕಾಲವು ಇದ್ದೇ ಇದೆಯೆಂಬ ನಂಬುಗೆಯಿಂದ ಜೀವಹಿಡಿದುಕೊಂಡಿರುವ ಕನ್ನಡಕ್ಕೆ ನವಚೈತನ್ಯವನ್ನು ಎರೆಯಲಾರಿರಾ? ನಿಮ್ಮ ಶಕ್ತಿಯನ್ನು ನೆನೆಯಿರಿ! ನಿಮ್ಮಲ್ಲಿ ನಿಮ್ಮ ನಂಬುಗೆ ಹುಟ್ಟಲಿ! ಪಂಪರನ್ನರಿಂದಲೂ ಮುಂಚೆ, ಅನಾದಿಕಾಲದಿಂದ ಕನ್ನಡವು ಕವಿಗಳಿಗೆ ಜನ್ಮಕೊಡುತ್ತ ಬಂದಿದೆ. ಆ ಅಖಂಡ ಪರಂಪರೆಯು ಸ್ವಲ್ಪ ಹೆಚ್ಚುಕಡಮೆ ಪ್ರಮಾಣದಿಂದ ಇಂದಿನ ವರೆಗೂ ನಡೆದಿದೆ. ಆದುದರಿಂದಲೆ ಕನ್ನಡವು ಬದುಕಿದೆ. ಏಕೆಂದರೆ 'ಕವಿ'ಯ ಹತ್ತಿರ ಸಂಜೀವಿನೀ ಶಕ್ತಿಯು (ಮಂತ್ರವು)* ಇದ್ದೇ ಇದೆ ಎಂದು ಪುರಾಣಗಳೂ ಹೇಳುವುವು. ಓ,. ಅಮೃತಪುತ್ರರೇ, ಕನ್ನಡದಲ್ಲಿ ಸಂಜೀವನವನ್ನು ಎರೆಯಿರಿ! ಕನ್ನಡದೊಳಗಿನ ಅಮೃತತ್ವವನ್ನು ಜಗತ್ತಿಗೂ ತೋರಿಸಿಕೊಟ್ಟು ನಮ್ಮ ನುಡಿಗೆ ಮನ್ನಣೆಯನ್ನು ತನ್ನಿರಿ!

ಆದರೆ, ಕೊನೆಗೊಂದು ಬಿನ್ನಹ: ಕನ್ನಡದ ಏಳ್ಗೆಯ ಹೊಣೆಯು ಕೇವಲ ತಮ್ಮ ಮೇಲೆಯೆ ಇದ್ದಹಾಗೆ ಹೆಮ್ಮೆಯಿಂದ ಭಾವಿಸಿಕೊಂಡು ಉಳಿದವರನ್ನು ಕಡೆಗಣಿಸಿ ಯಾರೂ ನಡೆಯಲಾಗದು. ಕನ್ನಡದ ಮೇಲ್ಮೆಗಾಗಿ ಪ್ರತಿಯೊಬ್ಬರಿಗೂ ಪ್ರಯತ್ನಪಡುವ ಹಕ್ಕು ಇದೆ. ಆದುದರಿಂದ, ಒಬ್ಬರೊಬ್ಬರ ಬಗೆಗೆ ತಾಳ್ಮೆಯು ಬೇಕು. "ಕನ್ನಡದ ಶಬ್ದಗಳು. ಕನ್ನಡದ ಶೈಲಿ ಹೀಗೆಹೀಗೆಯೆ ಇರಬೇಕು; ತನ್ನ ರೀತಿಯನ್ನೇ ಉಳಿದವರು ಅನುಸರಿಸಬೇಕು; ತಾನು ಮಾಡುತ್ತಿದ್ದುದೇ ಮಿಗಿಲು" ಎಂಬೀಬಗೆಯ ಉರ್ಕಿನ ನುಡಿಗಳು ಯಾರಿಗೂ ಸಲ್ಲವು. ನಮ್ಮ ನಮ್ಮ

---

* 'ಕವಿ' ಯೆಂದು ಶುಕ್ರಾಚಾರ್ಯರಿಗೆ ಹೆಸರು. ಶುಕ್ರಾಚಾರ್ಯರಲ್ಲಿ ಸಂಜೀವನ ಮಂತ್ರವಿದ್ದುದನ್ನು ಪುರಾಣಗಳು ಹೇಳುತ್ತವೆ.

ಅಳಿಲುಸೇವೆಯನ್ನು ಸಲ್ಲಿಸುವುದಷ್ಟೇ ನಮ್ಮ ಕೆಲಸ. ಅದರಲ್ಲಿ ಬೇಕಾದುದನ್ನಿಟ್ಟುಕೊಂಡು ಬೇಡವಾದುದನ್ನು ಎಸೆದುಬಿಡುವ ಅಧಿಕಾರವು ಕನ್ನಡನಾಡಿನ ಒಡೆಯನಿಗೆ ಇದೆ. ಅವನು ನಮ್ಮನ್ನು ಸಾಸಿರ ಕಂಗಳಿಂದ ನೋಡಿ ಸಾಸಿರ ತಲೆಗಳಿಂದ ಚೆನ್ನಾಗಿ ವಿಮರ್ಶಿಸುತ್ತಲಿದ್ದಾನೆ. ನಮ್ಮ ಕೃತಿಗಳ ಕೊನೆಯ ನಿರ್ಣಯವು ಅವನ ಕೈಯಲ್ಲಿದೆ; ಆದುದರಿಂದ, ನಾವು ಮಾಡುವುದನ್ನು ಅವನ ಅಡಿಯಲ್ಲಿರಿಸುವುದೊಂದೇ ನಮ್ಮ ಕೆಲಸ.

ಇದನ್ನು ಕುರಿತು ನನಗೆ ಹೊಳೆದು, ತಿಳಿದ ಕೆಲವು ಮಾತುಗಳನ್ನು ತಮ್ಮಲ್ಲಿ ಅರಿಕೆಮಾಡಿಕೊಂಡಿದ್ದೇನೆ. ನಮ್ಮ ಮನಸಿನೊಳಗಿನ ಸೂಕ್ಷ್ಮಭಾವನೆ ಮತ್ತು ವಿಚಾರಗಳನ್ನು ಕನ್ನಡಿಸುವ ಅಂದ, ಚೆಂದದ, ಬಿನ್ನಾಣದ. ಬೆಡಗಿನ ಹೊಸಹೊಸ ನುಡಿಗಳನ್ನು ನಾವು ನಮ್ಮ ಇಚ್ಛೆಯಂತೆ ನೇರ್ಪಡಿಸಿಕೊಂಡರೂ ಅವುಗಳ ಮೇಲೆ ಕನ್ನಡ ಜನತಾ ಜನಾರ್ದನನ ಮನ್ನಣೆಯ ರಾಜಮುದ್ರೆಯು ಇಲ್ಲದಿದ್ದರೆ ಅವಕ್ಕೇನೂ ಬೆಲೆಯಿಲ್ಲ. ಆದಕಾರಣ, ಮೊಟ್ಟಮೊದಲು ಆತನನ್ನು ಒಲಿಸಿಕೊಳ್ಳುವುದು. ನಮ್ಮ ಕರ್ತವ್ಯವಾಗಿದೆ. ಈ ಹೊಸದಾರಿಯಲ್ಲಿ ಯಾರೊಬ್ಬರೇ ಮುಂದೆ ನುಡುಕುವುದು ಹುಚ್ಚು ಸಾಹಸವೆನಿಸದೆ ಇರದು. ಮಹನೀಯರೆ, ತಮ್ಮಂತಹ ಹಲರು ಒಬ್ಬರೊಬ್ಬರಿಗೆ ಬೆಂಬಲಿಗರಾಗಿ ಹೊರಟರೆ ಮಾತ್ರ ಇದು ಸುಖಕರವಾದ ದಾರಿ. ಯಾವ ತಡೆ, ತೊಂದರೆಗಳಿಲ್ಲದೆ ನಮ್ಮ ಗುರಿಗೆ ಹೋಗಿ ಮುಟ್ಟಬಹುದು. ಆದರೆ, ಇದಕ್ಕೂ ಮೊದಲು ನಮ್ಮಲ್ಲಿ ಸಾವಿರಾರು ವರುಷಗಳಿಂದ ನಡೆದುಬಂದ ಕನ್ನಡ ಪುರಾತನದ ಶಬ್ದಸಿದ್ಧಿಕ್ರಮದ ರೀತಿಯನ್ನು ತಿಳಿದುಕೊಳ್ಳುವುದು ಅವಶ್ಯವೆಂದೆನಿಸಿ, ಅದನ್ನು ಈ ಸಣ್ಣ ಪುಸ್ತಕರೂಪದಲ್ಲಿ ತಮ್ಮೆದುರಿಗಿರಿಸಿದ್ದೇನೆ. ದಯವಿಟ್ಟು ಪರಾಮರ್ಶಿಸಬೇಕಾಗಿ ಬೇಡಿಕೆ. ಬಲ್ಲವರಾದ ತಮಗೆ ಹೆಚ್ಚಿಗಿನ್ನೇನು ಹೇಳಲಿ?

ಕನ್ನಡದ ಏಳ್ಗೆಗಾಗಿ ತಪಂಬಡುತ್ತಿರುವ
ತಮ್ಮೆಲ್ಲರ ಹರಕೆಗಳನ್ನು ಕೋರುವ
ಶಂಕರನು

ಅರಿಕೆ

(ಎರಡನೆಯ ಮುದ್ರಣಕ್ಕೆ)

ಧನ-ಸಂಪತ್ತು ಕೆಲವರಿಗೆ ಇರಬಹುದು: ಕೆಲವರಿಗೆ ಇರಲಿಕ್ಕಿಲ್ಲ. ಒಬ್ಬನು ಸಿರಿವಂತನಾಗಬೇಕಾದರೆ ಇನ್ನೊಬ್ಬನು ಬಡವನಾಗಬೇಕಾಗುತ್ತದೆ. ಆದರೆ, ಶಬ್ದಸಂಪತ್ತಿನ ವಿಷಯವು ಹಾಗಿಲ್ಲ. ಒಬ್ಬನ ಶಬ್ದ-ಸಂಪತ್ತು ಹೆಚ್ಚಾದರೆ ಇನ್ನೊಬ್ಬನದು ಕಡಿಮೆಯಾಗಬೇಕಿಲ್ಲ. ಹೀಗಿದ್ದರೂ ನಮ್ಮ ಜನಗಳು ಶಬ್ದ-ದರಿದ್ರರಾಗಿರುವುದು ಅತ್ಯಂತ ಶೋಚನೀಯವಲ್ಲವೆ? ಇಡಿ ದಿನದಲ್ಲಿ ಕೆಲವರು ನಾಲ್ವತ್ತು-ಐವತ್ತಕ್ಕಿಂತ ಹೆಚ್ಚು ಶಬ್ದಗಳನ್ನು ಬಳಸುವರೆ ಎಂಬುದೇ ಸಂದೇಹ. 'ಛಲೋ' 'ಕೆಟ್ಟ' ಎಂಬ ಎರಡು ಮಾತಿನಲ್ಲಿಯೆ ಲೋಕದೊಳಗಿನ ಎಲ್ಲ ಸಂಗತಿಗಳನ್ನು ಇವರು ವರ್ಣಿಸಿ ಹೇಳುವರು. 'ಕುದುರೆ ಹೇಗಿದೆ?' 'ಛಲೋ ಅದೆ': 'ಪುಸ್ತಕ?' 'ಛಲೋ ಅದೆ.' 'ಅಡಿಗೆ?' 'ಕೆಟ್ಟಿದೆ', ಆಯ್ತು: ಇದೇ ಬಗೆಯಾಗಿ ಉಳಿದ ಎಲ್ಲ ಮಾತುಗಳೂ ಕೇವಲ ಸ್ಥೂಲ! 'ಕುದುರೆ ಛಲೊ' ಎಂದರೇನು? ರೂಪ-ಆಕಾರಗಳಿಂದಲೋ? ಓಟ-ನಡಿಗೆಗಳಿಂದಲೊ? ಯಾವ ಬಗೆಯಿಂದ? ಇದೇ ಮೇರೆಗೆ ಪುಸ್ತಕ, ಅಡಿಗೆಗಳ ವಿಷಯವನ್ನೂ ಸೂಕ್ಷ್ಮವಾಗಿ ವಿಮರ್ಶಿಸಿ, ವಿಚಾರಿಸಿ ವಿವರಿಸಬೇಡವೆ?

ನಮ್ಮ ಶಬ್ದ-ಸಂಗ್ರಹವು ಎಷ್ಟೋ, ಅಷ್ಟೇ ನಮ್ಮ ಮನಸ್ಸಿನ ಆಳವೂ ಇರುವುದು. ಶಬ್ದ-ದಾರಿದ್ರ್ಯವು ಮನಸ್ಸಿನ ಬಡತನವನ್ನು ಸೂಚಿಸುತ್ತದೆ. ಮಾತಿನ ವೈಖರಿಯಿಲ್ಲದ ಸಾಧು-ಸಜ್ಜನರೂ ಉದಾರ ಮನಸ್ಕರೂ ಇರುವುದಿಲ್ಲವೆ? ಎಂದು ಕೇಳಬಹುದು. ಇಂತಹವರು ಉಂಟೆಂಬಲ್ಲಿ ಸಂದೇಹವಿಲ್ಲ. ಆದರೆ, ಇಂತಹರೆಲ್ಲರೂ ಸುಮಾರಾಗಿ ಬಾಲಭಾವದವರು, ಮುಗ್ಧರು, ಮೊದ್ದರೆಂದೇ ಹೇಳುವಲ್ಲಿ ಸಂದೇಹವಿಲ್ಲ. ಏಕೆಂದರೆ ಈ ಲೋಕದ ನಾನಾ ಥರದ ಅನುಭವಗಳ ಸಿಹಿ, ಕಹಿಗಳನ್ನು ಉಂಡು ಅರಗಿಸಿಕೊಳ್ಳದೆ ಯಾವ ಮನಸ್ಸೂ ವಿಶಾಲತೆಯನ್ನು ಪಡೆಯದು. ವಿವಿಧವೂ ಸೂಕ್ಷ್ಮವೂ ಕೋಮಲವೂ ಆದ ವಿಚಾರ ಮತ್ತು ಭಾವನೆಗಳ ಅನುಭವವು ಬಂದ ಹಾಗೆಲ್ಲ, ಅದನ್ನು ನಿರ್ದೇಶಿಸುವ ಮಾತುಗಳೂ ಹೊಳೆಯಲೇಬೇಕು. ಪ್ರತಿಯೊಂದು ಮಾತು ಮನಸ್ಸಿನ, ಒಂದೊಂದು ಅನುಭವದ ಪ್ರತಿನಿಧಿಯಾಗಿದೆ. ಅವ್ಯಕ್ತ ಮನಸ್ಸಿನ ವ್ಯಕ್ತರೂಪವೆ ಮಾತು.

ಆದುದರಿಂದ ಭಾವನೆ ಮತ್ತು ವಿಚಾರಗಳ ಆಳವು ಹೆಚ್ಚಾಗಬೇಕೆಂದು ಬಯಸುವವರೆಲ್ಲರೂ ತಮ್ಮ ಅಂತರಂಗವನ್ನು ನುಡಿಯ ಹುಟ್ಟನ್ನಾಗಿ ಮಾರ್ಪಡಿಸಿಕೊಳ್ಳಬೇಕು. ನುಡಿ-ಜೇನು ಸಂಗ್ರಹಿಸಬೇಕು. ಒಂದೊಂದು ಶಬ್ದಕ್ಕೂ ಹಲಕೆಲವು ಪ್ರತಿಶಬ್ದಗಳು ತಿಳಿದಿರಬೇಕೆಂಬುದು ನಿಜ. ಆದರೆ, ಆ ಶಬ್ದದೊಳಗಿನ ಸೂಕ್ಷ್ಮಾರ್ಥ ಭೇದ ಅವುಗಳ ಔಚಿತ್ಯ ಮೊದಲಾದುದು ತಿಳಿಯದೆ ಇದ್ದರೆ ಬರಿಯ ಆ ಶಬ್ದ ಪಾಂಡಿತ್ಯವು ಗಿಳಿಯ ಓದು: ಶಬ್ದಗಳನ್ನು ನೆನಪಿಟ್ಟುದು ತಲೆಗೆ ಭಾರ. ಪರಭಾಷೆಯ ಪದಗಳನ್ನು ಔಚಿತ್ಯವರಿತು ಬಳಸುವ ನಾವು ನಮ್ಮ ನುಡಿಯ

ವಿಷಯದಲ್ಲಿ ಮಾತ್ರ ತೀರ ಅನಾಸ್ಥೆಯನ್ನು ತೋರುತ್ತಿದ್ದೇವೆ. ಅದಕ್ಕೆ ಕೆಲವೊಂದು ಕಾರಣಗಳೂ ಇಲ್ಲದಿಲ್ಲ. ಶಾಲೆ-ಕಾಲೇಜುಗಳಲ್ಲಿ ಪರಭಾಷೆಗಳ ಅಭ್ಯಾಸಕ್ಕಿರುವ ಇಂಬು ದೇಸಿಗೆ ಇಲ್ಲ. ಸಮಾಜದಲ್ಲಿ ಇಂಗ್ಲೀಷು, ಸಂಸ್ಕೃತ, ಹಿಂದಿ ಮೊದಲಾದ ಹೊರನಾಡಿನ ಭಾಷೆಗಳನ್ನು ಓದಿದವರಿಗೆ ಇರುವ ಸ್ಥಾನಮಾನಗಳು ನಮ್ಮ ನಾಡಿನ ನುಡಿಯವರಿಗಿಲ್ಲ. ಈ ಕಾರಣದಿಂದಲೇ ಪರದೇಶಿಯು ಮಿಗಿಲೆನಿಸಿ, 'ದೇಸಿಕ'ವು ಎಂದರೆ ಅನಾಥ-ಪರದೇಶಿ ಎನಿಸಿಕೊಂಡಿದೆ! 'ದೇಸಿಕ' ಎಂಬ ಶಬ್ದಕ್ಕೆ ಬಂದಿರುವ ಅಪಾರ್ಥವೆ ಇದಕ್ಕೆ ಸಾಕ್ಷಿ. ತನ್ನ ದೇಶದಲ್ಲಿಯೆ ತಾನು ಪರದೇಶಿ ಎನಿಸಿಕೊಳ್ಳುವ ಹೊತ್ತು ಬರುವುದಕ್ಕಿಂತ ಹೆಚ್ಚಿನ ದುರ್ದೈವವು ಇನ್ನಾವುದಿದೆ?

ನಮ್ಮ ಗೊತ್ತು-ಗುರಿಗಳನ್ನು ಮರೆತುದರಿಂದಲೆ ನಮಗೆ ಇಂದು ಇಂತಹ ಹೊತ್ತು ಬಂದಿದೆ. ಅಳಿಗಾಲದ ಮೊದಲು ಮಾನವನು ಅರಿವುಗೇಡಿಯಾಗುವನು. ಅರಿವುಗೇಡಿಯು ಯಾರು? ತನ್ನ ಇರುವಿನ ಅರಿವು ಮಾಸಿದವನು. ಮಾತಿನಲ್ಲಿ ಆಳವಾದ ಅರ್ಥ, ಔಚಿತ್ಯಗಳು ಕಡಿಮೆಯಾಗುತ್ತಿರುವುದು. ಅರಿವುಗೇಡಿತನದ ಸ್ಪಷ್ಟವಾದ ಕುರುಹು. ಶಬ್ದಗಳ ನಿಜಾರ್ಥವೆ ಮರೆತು ಹೋಗುವುದೂ ಮಾತುಗಳೆಲ್ಲ ವಿಶಾಲಾರ್ಥವನ್ನು ಕಳೆದುಕೊಂಡು ಅಲ್ಪಾರ್ಥದಲ್ಲಿ-ವಿಪರೀತಾರ್ಥದಲ್ಲಿ- ಹೀನಾರ್ಥದಲ್ಲಿ ರೂಢವಾಗುವುದೂ ಬಲ್ಲಿದರೆಂಬುವರಿಗೆ ಕೂಡ ಕೇವಲ ರೂಢಾರ್ಥವು ಮಾತ್ರ ಗೊತ್ತಿರುವುದೂ ಆ ನುಡಿಯ ಅಳಿಗಾಲವು ಸಮೀಪಿಸಿರುವ ಪೂರ್ವ ಸೂಚನೆಗಳು. ಇಂತೀ ಬಗೆಯಾಗಿ ಭಾಷೆಯು ಮೂಲೆಗುಂಪಾಗುತ್ತ ನಡೆದ ಜನಗಳ ನಾಡೂ ಕೀಳ್ಮಗೆ ಇಳಿಯುತ್ತಿದ್ದರೆ ಸೋಜಿಗವೇನು? ನುಡಿಯೆ ನಾಡಿನ ಉಸಿರು: ಪ್ರಾಣ. ಆ ಪ್ರಾಣರೂಪಿಯಾದ ಭಾಷೆಯೆ ಕ್ಷೀಣವಾಗುತ್ತಿರುವಾಗ ಯಾವ ದೇಶವು ತಾನೆ ಉನ್ನತಸ್ಥಿತಿಯನ್ನೈದುವುದು ಸಾಧ್ಯ?

ತನ್ನ ತಾನು ಅರಿತವನು ಅಮರನಾಗುವನು: ತನ್ನ ತಾ ಮರೆತವನು ಮಣ್ಣು ಪಾಲಾಗುವನು. ಹೊರಮಿಂಚಿಗೆ ಮನಸೋತು ಒಳಬೆಳಕಿಗೆ ನಾವು ಎರವಾಗಿದ್ದೇವೆ. ಇಂಗ್ಲೀಷಿನ ಸೊಗಸನ್ನು ಅರಿತು ಆನಂದಗೊಳ್ಳುವೆವು; ಸಂಸ್ಕೃತದ ಸೌರಭಕ್ಕೆ ಮುಗ್ಧರಾಗುವೆವು ಸರಿ, ಒಳ್ಳೆಯ ಕೆಲಸವೆ. ಆದರೆ, ನಮ್ಮ ನುಡಿಯ ಹುಟ್ಟು-ಗುಟ್ಟುಗಳ ತಿಳವಳಿಕೆ ಮಾತ್ರ ನಮಗಿಲ್ಲ! ಉಳಿದ ಶಬ್ದಗಳ ಇಂಪು, ಕಂಪು, ಹುಟ್ಟಿದ ಬಗೆ ಇವುಗಳ ಮಾತು ಅದಂತಿರಲಿ; 'ಕನ್ನಡವೆಂದರೆ ನಮ್ಮ ಪಂಚಪ್ರಾಣ'ವೆಂದು ಹೆಮ್ಮೆಯಿಂದ ಪ್ರತಿಯೊಬ್ಬರೂ ಆಡಿಕೊಳ್ಳುವ ಆ 'ಕನ್ನಡ' ಎಂದರೆ ಏನು? ಎಂಬುದರ ಅರಿವು ಕೂಡ ನಮಗೆ ಉಳಿದಿರಬಾರದೆ?

ಆಡುವ ಮಾತಿನ ಅರ್ಥದ ಅರಿವಿಲ್ಲದೆ ಬಾಳ್ವೆ ನಡೆಸಿದ ಜನಗಳು, ಎಚ್ಚೆತ್ತ ಜನಾಂಗವೆಂದು ಹೇಳಲಿಕ್ಕಾದೀತೆ? 'ಕನ್ನಡ'- ಉತ್ತರ ಕನ್ನಡ ದಕ್ಷಿಣ ಕನ್ನಡ-ಎಂದು ಜಿಲ್ಹೆಯ ಹೆಸರಿದೆ. ಖಾನದೇಶದತ್ತ ಒಂದು ತಾಲ್ಲೂಕು. ಒಂದು ಊರಿನ ಹೆಸರೂ ಉಂಟು. 'ಕನ್ನಡ'ವೆಂಬುದು ಸ್ಥಳವಾಚಕ-ದೇಶವಾಚಕ ಶಬ್ದವೆಂದು ವಿದ್ವಾಂಸರೆಲ್ಲರೂ ಒಪ್ಪಿಕೊಂಡ ಮಾತಾಗಿದೆ. ಪ್ರಾಕ್ತನ ವಿಮರ್ಶಾ ವಿಚಕ್ಷಣ ಆರ್. ನರಸಿಂಹಾಚಾರ್ಯರು. 'ಕನ್ನಡ'ವೆಂಬುದರ ಮೂಲ ರೂಪವು 'ಕನ್ನಡ'- ಎಂದು ಕಂಡುಹಿಡಿದಿದ್ದಾರೆ. ಅದಕ್ಕೆ ಶಾಸನಗಳ ಆಧಾರಗಳು ದೊರೆತಿವೆ. ತಮಿಳಿನ ಶಾಸನ ಸಾಹಿತ್ಯಗಳಲ್ಲಿ 'ಕಂನಾಡು' ಎಂಬ ಪದವು ದೊರೆಯುತ್ತದೆ. ಮತ್ಸ್ಯಪುರಾಣ, ಮನುಸ್ಮೃತಿ ಮೊದಲಾದ ಸಂಸ್ಕೃತ ಗ್ರಂಥಗಳಿಂದಲೂ ಬೇರೆ ಕೆಲವು ಪ್ರಾಕೃತ ಉಲ್ಲೇಖಗಳಿಂದಲೂ ಕಂನಾಡಿನ ಮೂಲ ಜನಾಂಗವು ಕಂ-ಕನ್, (ಕಣ್ಣ ಅಥವಾ ಕರ್ಣ-ಕರಣ) ಎಂದಾಗಿದ್ದಿತೆಂದು ಈಗ ನಿಶ್ಚಿತವಾಗಿ ಗೊತ್ತಾದ ಸಂಗತಿಯಾಗಿದೆ.* ಆದುದರಿಂದ ಕನ್ನಡ=ಕನ್ನಡ=ಕಂನಾಡು; ಕಂನ್ನಾಡು ಎಂದರೆ 'ಕಂ' ಎಂಬ ಜನಾಂಗದ ನಾಡು ಎಂಬುದು ಇಂದು ಸಿದ್ಧವಾದಂತಾಗಿದೆ. ಆದುದರಿಂದ 'ಕಂನಡ' ವೆಂಬುದು ಸ್ಥಳವಾಚಕ=ದೇಶವಾಚಕ ಹೆಸರೆಂಬುದನ್ನು ನೆನಪಿನಲ್ಲಿ ಇಟ್ಟು ಔಚಿತ್ಯ ಮೀರದಂತೆ ಇದನ್ನು ಬಳಸುವುದೇ ತಿಳಿದವರಿಗೆ ತಕ್ಕುದಲ್ಲವೆ?

---

* ಇದನ್ನು ಕುರಿತು ಕ. ಸಾ. ಪ. ೧೯೪೫ರ ಸಂ. ೨೦ರಲ್ಲಿಯೂ 'ಕನ್ನಡದ ನೆಲೆ' ಎಂಬ ಪುಸ್ತಕದಲ್ಲಿಯೂ ವಿವರವಾಗಿ ಓದಿಕೊಳ್ಳಬಹುದು (ಸಂ)

ಕಂನಡ-ಕಂನಾಡು ಇದುವೆ ಮೂಲತಃ ದೇಶವಾಚಕವಾಗಿರುವಾಗ ಮತ್ತೆ 'ಕಂನಡ-ನಾಡು' ಅಥವಾ 'ಕಂನಡದೇಶ'ವೆಂದು ಹೇಳುವುದು ನಮ್ಮ ಮರಗುಳಿತನ ಇಲ್ಲವೆ ಅರಿವುಗೇಡಿತನವನ್ನೇ ಲೋಕಕ್ಕೆ ಸಾರುವುದಿಲ್ಲವೇ? ಸಹ್ಯಾದ್ರಿ ಪರ್ವತ, ಛಪ್ಪನ್ನೈವತ್ತಾರು (ದೇಶ), ಚಾತುರ್ಮಾಸನಾಲ್ಕುತಿಂಗಳು, ಆಕಳಗೋಮೂತ್ರ ಎಂದು ಮುಂತಾಗಿ ಹೇಳುವ ಅನುಚಿತ ಪ್ರಕಾರಗಳಲ್ಲಿಯೇ 'ಕಂನಡ-ನಾಡು' ಎಂಬುದೂ ಒಂದಾಗಿದೆ.

'ಕಂನಡ'ವೆಂಬುದು ದೇಶವಾಚಕ ಪದವೆಂದು ನಿಃಸಂದಿಗ್ಧವಾಗಿ ಸಿದ್ಧವಾಗಿರುವಾಗ ಅದನ್ನು ಒಂದು ಭಾಷೆಯ ಹೆಸರಿನಂತೆ ಬಳಸುವುದೆಂದರೆ, ನಾವು ಎಷ್ಟೊಂದು ರೂಢಿಯ ಅಧೀನರಾಗಿದ್ದೆವೆಂಬುದನ್ನೇ ಸ್ಪಷ್ಟಪಡಿಸುತ್ತದೆ. ರೂಢಿಗಳು ಇಲ್ಲದೆ ಯಾವ ಸಮಾಜವೂ ನಡೆಯಲಾರದೆಂಬುದು ನಿಜ. ಆದರೆ, ಆ ರೂಢಿಗಳ ಮೇಲೆ ಯಾವಾಗಲೂ ವಿಚಾರದ ಅಂಕುಶವಿರಬೇಕು. ಇಲ್ಲವಾದರೆ ಮದ್ದಾನೆಯಂತೆ ಅದು ಸಮಾಜವನ್ನೆಲ್ಲ ತೊತ್ತಳ ತುಳಿದು ನಾಶಮಾಡದೆ ಬಿಡದು. ವಿಚಾರ ಮತ್ತು ರೂಢಿಯ ತಿಕ್ಕಾಟದಲ್ಲಿ ರೂಢಿಗೇ ಗೆಲುವಿರುವ ಸಮಾಜದ ಕೊನೆಯ ದಿನಗಳು ಸಮೀಪಿಸಿರುವವೆಂದು ಹೇಳಲು ಅಡ್ಡಿಯಿಲ್ಲ. 'ಕಂನಡ'ವೆಂಬುದು ದೇಶದ ಹೆಸರು. ಆದರೂ ಅದಕ್ಕೊಂದು ಸಂದಿಗ್ಧಾರ್ಥವು ಪ್ರಾಪ್ತವಾಗಿದೆ. 'ಕಂನಡ' ಎಂದರೆ ದೇಶವೊ ಭಾಷೆಯೊ ಎಂಬ ಸಂದೇಹವುಂಟಾಗುತ್ತದೆ ಆದುದರಿಂದಲೆ 'ಕಂನಡ' ಎಂಬುದರ ಮುಂದೆ 'ನಾಡು' ಅಥವಾ 'ದೇಶ' ಎಂಬ ಇನ್ನೂ ಒಂದು ಪದವನ್ನಿಡಬೇಕಾಗುತ್ತದೆ. ಇದು, ನಮ್ಮ ಮಾತಿನ ಅರ್ಥ ನಮಗೆ ಗೊತ್ತಿಲ್ಲೆಂಬುದರ ಸೂಚಕ. ಈ ಬಗೆಯ ತಿಳಿಗೇಡಿತನದ ಪ್ರದರ್ಶನವಾಗಬಾರದಾಗಿದ್ದರೆ, ಇನ್ನು ಮುಂದೆ 'ಕಂನಡ' ಎಂಬ ಸಂದಿಗ್ಧಾರ್ಥದ ವಿಕೃತ ಪದವನ್ನು ಬಳಸದೆ ಅದರ ಶುದ್ಧರೂಪವಾದ 'ಕಂನಡ' ಎಂಬುದನ್ನೆ ರೂಢಿಸುವುದು ಲೇಸಲ್ಲವೆ?

ತಿಳಿಯದೆ ಆದ ತಪ್ಪನ್ನು, ಅರಿವು ತಲೆದೋರಿದ ಬಳಿಕ ತಿದ್ದಿಕೊಳ್ಳುವುದೆ ಜೀವಂತತನದ ಲಕ್ಷಣ. ತಪ್ಪನ್ನು ಒಪ್ಪವೆಂಬಂತೆ ಪ್ರತಿಪಾದಿಸಿ ಅದನ್ನು ಎತ್ತಿ ಹಿಡಿಯುವುದು. ಇನ್ನೂ ಹೆಚ್ಚು ಹೆಚ್ಚಿನ ತಪ್ಪುಗಳಾಗಲು ಅವಕಾಶವನ್ನು ಕಲ್ಪಿಸಿಕೊಟ್ಟಂತೆ. 'ಚಾತುರ್ಮಾಸ-ನಾಲ್ಕು ತಿಂಗಳು' ಎಂಬೀ ಬಗೆಯ ಪ್ರಯೋಗಗಳು ಭಾಷೆಯಲ್ಲಿ ಅನಿವಾರ್ಯವಾಗಿ ತಲೆದೋರುತ್ತವೆಂದು ಹೇಳಿ 'ಕಂನಡ-ನಾಡು' ಅಥವಾ 'ಕಂನಡ-ದೇಶ'ವೆಂಬುದೂ ತಪ್ಪಲ್ಲವೆಂಬುದು ತಿಳಿವಿನ ಅಪಮಾನ. ಬಂಗಾಲ ದೇಶ; ಅದರ ಭಾಷೆ ಬಂಗಾಲಿ. ಫ್ರಾನ್ಸ್ ದೇಶ: ಅದರ ಭಾಷೆ ಫ್ರೆಂಚ. ಹೀಗೆ ನಮಗೂ ಭಾಷಾ ಸೂಚಕ ಸ್ವತಂತ್ರ ಶಬ್ದವಿಲ್ಲವೆಂಬುದು ಅಭಿಮಾನಾಸ್ಪದವೆ? 'ಕಂನಡ' ಅಥವಾ 'ಕಂನಾಡು' ಎಂಬುದು ದೇಶದ ಹೆಸರಾಯ್ತು. ಭಾಷೆಗೆ ಏನು ಹೆಸರು? ದೇಶದ ಹೆಸರನ್ನೆ ಭಾಷೆಗೂ ಹೇಳುವುದು ಅನುಚಿತ. ಆಂಗ್ಲ ಭಾಷೆಗೂ (ದೇಶದ ಹೆಸರಿನಿಂದಲೇ) 'ಇಂಗ್ಲಂಡ' ಎಂದೇ ಕರೆದಂತೆ!

ನಮ್ಮ ಭಾಷೆಯಲ್ಲಿ ತಕ್ಕ ಹೊಸಶಬ್ದಗಳನ್ನು ನೇರ್ಪಡಿಸಿಕೊಂಬ ಕಸುವು ಇಲ್ಲವೆ? 'ನಿಲ್ದಾಣ' (station) ಬಾನುಲಿ (radio) ಮೊದಲಾದ ಹೊಸ ಮಾತುಗಳನ್ನು ಬಳಕೆಗೆ ತಂದವರು ಇಲ್ಲಿ ಮಾತ್ರ ಕೈಲಾಗದವರಾದರೆ? 'ಕಂ'ನರ ನಾಡು 'ಕಂನಾಡು' ಆಗಿರುವಂತೆ, 'ಕಂ'ನರ ನುಡಿ 'ಕಂನುಡಿ' ಎಂದು ಹೇಳಿದರೆ ಆಗದೆ? ಈ ಕಾರಣದಿಂದಲೆ ಈ ಪುಸ್ತಕಕ್ಕೆ 'ಕುಂನುಡಿಯ ಹುಟ್ಟು' ಎಂದು ಈ ಬಾರಿ ಹೇಳಿದ್ದಾಗಿದೆ. 'ಕಂನಡ ನುಡಿಯ' ಎಂಬುದಕ್ಕಿಂತ ಇದು ಹೇಳುವುದಕ್ಕೂ ಸುಲಭ ಮತ್ತು ಸೊಗಸಾಗವುದಿದೆ. 'ಕಂನಡ' ನುಡಿ ಅಥವಾ 'ಕಂನಾಡ' ನುಡಿ ಎಂದು ಪ್ರತಿಸಾರೆ ಹೇಳುವುದು English ಎನ್ನದೆ Language of England ಎಂದ ಹಾಗಾಗುತ್ತದೆ. ಆದುದರಿಂದ ಈ ಸತ್ತು ಮಾತಿಗಿಂತ 'ಕಂನುಡಿ' ಎಂಬ ಸರಳ ಮಾತೆ ಚೆನ್ನು ಎಂದು ಯಾರಾಗಲಿ ಒಪ್ಪಬಹುದಾಗಿದೆ.

ಉಚಿತಾರ್ಥದಲ್ಲಿ ಸಾರ್ಥವಾದ ಪದಗಳನ್ನು ಬಳಸುವುದು ಅರಿತವರ ರೀತಿ. ಅರಿವು ಇದ್ದವರ ಬಗೆ. ಇಂತಹರಿಗೆ ಅರಿಗರೆಂದೂ ರಸಿಕರೆಂದೂ ಹೆಸರು. ಅರಿಗನೆನಿಸಿದ ಪಂಪನ ಪರಂಪರೆಯನ್ನು ಇನ್ನು ಮುಂದೆಯೂ ನಡೆಸಿಕೊಂಡು ಹೋಗುವುದು ಕಂನಾಡಿಗರ ಕರ್ತವ್ಯವಾಗಿದೆ. ಕಂನುಡಿಯಲ್ಲಿ ಪಂಪನ ಕಾಲದಲ್ಲಿದ್ದ ಜೀವಶಕ್ತಿಯ ಸೊಗಸು ಮುಂದೆ ಕಡಿಮೆಯಾಗುತ್ತ ಹೋದುದು ಕಂಡುಬರುತ್ತದೆ. ಅದರಲ್ಲಿ ಮತ್ತೆ ಹೊಸ ಸವಿಯುಂಟಾಗಲು ಕಂನುಡಿಯ ಹುಟ್ಟನ್ನು ಅರಿತು ಅದನ್ನು ಜೋಕೆಯಿಂದ ಕಾಪಾಡಬೇಕು.

ನಾಡಿಗೊಂದು ನುಡಿಜೇನು ಇರುವುದಂಟು. ನಾಡಿಗರೆಂಬ ತುಂಬಿಗಳ ಆ ಜೇನಹುಟ್ಟು ಬರಿದಾಗದಂತೆ ಅದನ್ನು ತುಂಬುವ ಕೆಲಸವನ್ನು ತಮಗರಿಯದಲೆಯೆ, ಎಡೆಬಿಡದೆ ನಡೆಸಿರುತ್ತವೆ. ಇನ್ನು ಹೆಚ್ಚು ಚೊಕ್ಕಟವಾಗುವಂತೆ ಹಲವು ಹಂಚಿಕೆ ಹವಣಿಕೆಗಳಿಂದ, ತಿಳಿದವರು ಈ ಕೆಲಸವನ್ನು ಮುಂದುವರಿಸುತ್ತಿರುತ್ತಾರೆ. ಆದರೆ, ಯಾವದೊಂದು ನಾಡಿನ ದುರ್ದೈವದಿಂದ ಅಲ್ಲಿಯ ಜನಗಳು (ತುಂಬಿಗಳು) ಹೊರಗಿನ ಸೆಳೆತಕ್ಕೆ ಸಿಲುಕಿ ತಮ್ಮಲ್ಲಿ ಮಕರಂದ ತರುವುದನ್ನು ನಿಲ್ಲಿಸಿದರೆ ಆವರ ನುಡಿಯ ಹುಟ್ಟು ಬರಿದಾಗದೆ ಉಳಿಯದು. ಅದಕ್ಕಾಗಿ ಹೊರಗೆ ಮನಸೋತು ಮೈಮರೆತ, ಅಥವಾ ಮನೆಯಲ್ಲಿ ಬಿದ್ದುಕೊಂಡು ಉಂಡಾಡಿ ಮೈಗಳ್ಳವಾದ (drone) ಹುಳಗಳ ಸಂಖ್ಯೆಯು ಹೆಚ್ಚಾಗುವುದರಿಂದ ಆನುಡಿಯ ಹುಟ್ಟು ಅಡಗದೆ ಇರದು. ಕಂನುಡಿಯು ಈ ಬಗೆಯ ಕುತ್ತಕ್ಕೆ ಈಡಾದ ಹೆದರಿಕೆಯ ಕಾಲವು ಒಂದಿತ್ತು.

ನಮ್ಮ ಮನೆಯಲ್ಲಿ ನಮ್ಮ ಮಾತೆ ನಡೆಯಬೇಕಷ್ಟೆ. ಹೆರವರ ಮಾತು ನಡೆದರೆ ಅದು ನಮ್ಮ ದಾಸ್ಯದ ಲಕ್ಷಣ. ಆದುದರಿಂದ ಕಂನುಡಿಯು ಪರಭಾಷೆಗಳ ಬಂಧನದಲ್ಲಿ ಸಿಲುಕದಂತೆ ಪ್ರತಿಯೊಬ್ಬರೂ ಎಚ್ಚರಾಗಿರುವುದು ಕರ್ತವ್ಯವಾಗಿದೆ. ಆದರೆ, ಕಂನುಡಿಯ ಒಣ ಹೆಮ್ಮೆ ಏತಕ್ಕೂ ಬಾರದು. ಇದರ ಹೆಚ್ಚಳವನ್ನು ಹಾರಯಿಸುವವರೆಲ್ಲರೂ ಈ ನುಡಿಯ ತಿರುಳನ್ನು ಅರಿತುಕೊಳ್ಳಬೇಕು ಮತ್ತು ಕೈನಡೆವ ವರೆಗೂ ಅಚ್ಚುಕೆಚ್ಚಿನ ಕಂನುಡಿಯಲ್ಲಿಯೆ ಬರೆಯಬೇಕು. ಮಾತನಾಡಬೇಕೆಂಬ ಜಿಗಟುಳ್ಳವರಾಗಬೇಕೆಂದು ಬೇರೆ ಹೇಳಬೇಕಾಗಿಲ್ಲ. ಈ ಬಗೆಯ ಹಂಬಲದಿಂದಲೆ ತನಗಾಗಿ ಮಾಡಿಕೊಂಡ ಈ ಸಂಗ್ರಹವು ಇನ್ನುಳಿದವರಿಗೂ ಉಪಯುಕ್ತವಾಗುವಂತಿದ್ದರೆ ಆಗಲೆಂದು ಮೊದಲು ಇದನ್ನು ಬೆಳಕಿಗೆ ತಂದಿತು.

ಪ್ರಬುದ್ಧ ಕರ್ನಾಟಕಾದಿ ಪತ್ರಿಕೆಗಳಲ್ಲಿ ಇದರ ಬಗ್ಗೆ ಒಳ್ಳೆಯ ವಿಮರ್ಶೆಗಳು ಬಂದುವು. ಹಲವು ಹಿರಿಯರೂ ಗೆಳೆಯರೂ ಇದಕ್ಕೆ ಮೆಚ್ಚಿ ಮಾತನಾಡಿದರು. ಮದರಾಸ ಬಿ. ಓ. ಎಲ್. ಪರೀಕ್ಷೆಗೆ ಓದಬೇಕಾದ ಪುಸ್ತಕಗಳಲ್ಲಿ ಇದನ್ನು ಸೇರಿಸಿ ಮದರಾಸ ವಿಶ್ವವಿದ್ಯಾನಿಲಯದ ವಿದ್ವಾಂಸರು ಇದಕ್ಕೆ ತಮ್ಮ ಮನ್ನಣೆಯನ್ನಿತ್ತರು. ಹೈದರಾಬಾದ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿಯೂ ಒಂದು ತರಗತಿಗೆ ಪಠ್ಯಪುಸ್ತಕವಾಗಿದೆಯೆಂದು ಕೇಳಿದ್ದೇನೆ. ಮುಂಬೈ ವಿಶ್ವವಿದ್ಯಾನಿಲಯದ ಪಠ್ಯಪುಸ್ತಕಗಳಲ್ಲಿ ಇದು ಪ್ರತ್ಯಕ್ಷವಾಗಿ ಸೇರಿಲ್ಲವಾದರೂ ಇದನ್ನು ಅವರು ಕಡೆಗಣಿಸಿಲ್ಲ ಭಾಷಾಭ್ಯಾಸವನ್ನು ಕುರಿತು ಹೊರಟ ಹಲವು ಪುಸ್ತಕಗಳಲ್ಲಿ ಇದರಿಂದ ಎಷ್ಟೊ ಭಾಗಗಳನ್ನು ಎತ್ತಿಕೊಂಡು ಮುದ್ರಿಸಿದ್ದುದು, ನಮ್ಮ ಈ ಪುಸ್ತಕದ ವಿಷಯಕ್ಕೆ ಅವರಿಗೆ ಇರುವ ಪ್ರೀತಿಯನ್ನೇ ವ್ಯಕ್ತಪಡಿಸುತ್ತದೆ. ಕಂನುಡಿಯಲ್ಲಿ ಒಲವು ಇದ್ದವರು, ಅದನ್ನು ಕಲಿಯಬೇಕಾದವರು-ಎಲ್ಲರೂ ಇದನ್ನು ಹೀಗೆ ಬರಮಾಡಿ ಕೊಂಡುವದರಿಂದಲೆ ಇದು ಇಂದು ಎರಡನೆಯ ಬಾರಿ ಬೆಳಕನ್ನು ಕಾಣುತ್ತಲಿದೆ. ಇದಕ್ಕಾಗಿ ನಾನು ಅವರೆಲ್ಲರಿಗೂ ತುಂಬ ಹಂಗಿಗನಾಗಿದ್ದೇನೆ.

ಶಂ. ಬಾ. ಜೋಶಿ.

ಪೀಠಿಕೆ

೧. ಸಂಸಾರದಲ್ಲಿ ಸುಖವನ್ನು ಬಯಸುವ ಪ್ರತಿಯೊಬ್ಬನಿಗೂ ಧನಸಂಗ್ರಹದಷ್ಟೇ ಶಬ್ದಸಂಗ್ರಹವೂ ಅತ್ಯವಶ್ಯ. ತಕ್ಕಹೊತ್ತಿನಲ್ಲಿ ತಕ್ಕ ಮಾತುಗಳು ಬರದಿದ್ದರೆ, ಕೆಲಸವು ಕೆಟ್ಟು ಬಾಳುವೆಯು ಹಾಳಾಗುವುದು. ಮಾತು ಬಲ್ಲವ ಮಾಣಿಕ ತಂದ; ಎಂಬ ನಾಣ್ನುಡಿಯುಂಟು. ಪ್ರಪಂಚದಲ್ಲಿ ಮಾತರಿವವರಿಗೆ ಮರ್ಯಾದೆ. ಬಾಳುವೆಗೂ ಬದುಕಿಗೂ ಮಾತೇ ಮೊದಲು. ಮಾತೇ ನಮ್ಮ ಜೀವನದ ಮೂಲಾಧಾರ. ಅಥವಾ 'ಮಾತೆ ನಮ್ಮ ತಾಯಿ, ಮಾತೆ ನಮ್ಮ ತಂದೆ' ಎಂದು ಹೇಳಿದರೂ ಅಡ್ಡಿಯಿಲ್ಲ. ಏಕೆಂದರೆ, ಅದುವೆ ನಮ್ಮ ಅಳಿವಿಗೂ ಉಳಿವಿಗೂ ಮೂಲ ಕಾರಣ. ಅಲ್ಲಮಪ್ರಭುವಂತೂ "ಮಾತೆಂಬುದೂ ಜ್ಯೋರ್ತಿಲಿಂಗ" ಎಂದು ಹೇಳಿದ್ದಾನೆ. ಶಬ್ದಬ್ರಹ್ಮನಿಂದ ಸೃಷ್ಟಿಗೆ ಆರಂಭವಾಯಿತೆಂದು ವೇದಾಂತಿಗಳ ಅಭಿಪ್ರಾಯವು ಜಗತ್ತಿನ ಎಲ್ಲ ಪ್ರಮುಖ ಧರ್ಮಗಳಲ್ಲಿಯೂ ಈ ಬಗೆಯ ನಂಬುಗೆಯಿದ್ದುದನ್ನು ಕಾಣಬಹುದು.

೨. ನುಡಿಯ ಗುಟ್ಟನ್ನು ಅರಿಯದವರು ನಾಲಗೆಯವರಲ್ಲ; ನಾಲಗೆಯಿಲ್ಲದವರು ಮಾನವರಲ್ಲ. ನಾಲಗೆಯವರೆಂದರೆ 'ಕವಿ, ಗಮಕಿ, ವಾದಿ, ವಾಗ್ಮಿ.' ಲೇಖಕ, ವಾಚಕರೆಲ್ಲರೂ ಇದರಲ್ಲಿ ಒಲಗೊಳ್ಳುವರು. ಆದುದರಿಂದ ನಾಲಗೆಯವರೆಂಬ ಮಾತು ಸಾಹಿತಿ, ಎಂಬುದಕ್ಕಿಂತಲೂ ತುಂಬ ಆಳವಾದ ಅರ್ಥವುಳ್ಳದು. ಮಯ್ಯ ಕೊಬ್ಬಿಗಿಂತಲೂ ನಾಲಗೆಯ ನಲವಿನ ಹಿಗ್ಗು ಮಿಗಿಲಾದುದೆಂದು ಲೋಕವೆಲ್ಲವೂ ಒಪ್ಪುತ್ತಿದೆ.

೩. ತಮ್ಮ ನಾಡುನುಡಿಯನ್ನು ಕಡೆಗಣಿಸುವುದು, ಅವರ ಮುಂದಿನ ಇಳಿಗಾಲದ ಪೂರ್ವ ಸೂಚನೆ, ಎಂಬರ್ಥದ ಒಂದು ವಿಚಾರವನ್ನು ಮಿಲ್ಟನ್ ಮಹಾಕವಿಯು ಹಿಂದೆಯೆ ಹೇಳಿದ್ದಾನೆ.

> I am much more included to belive that the downfall of a dominion
> and humiliation of its high estate will ensue when the essential
> rightness of language falls in to, disreptute.

ಜನಗಳು ತಮ್ಮ ನುಡಿಯ ಆಳವಾದ ಅರ್ಥ, ಸೊಬಗು, ಇಂಪು, ಅದರ ತೂಕ, ಹದ ಮೊದಲಾದ ಸಂಗತಿಗಳನ್ನು ಅರಿತುಕೊಳ್ಳದೆ ಇದ್ದರ ಅವರ ಮಾತಿನಲ್ಲಿ ಶಕ್ತಿ ಸಾಲದೆ ಅವರು ಕೈಕೊಂಡ ಕೆಲಸಗಳು ಯಶಸ್ವಿಯಾಗುವುದೇ ಕಷ್ಟವಾಗುವುದು.

೪. ನುಡಿಯೆ ನಾಡಿನ ಉಸಿರು. ಉಸಿರೇ ಪ್ರಾಣ; ಜೀವ. ಕಂನುಡಿಯು ಬದುಕಿರುವ ವರೆಗೆ ಮಾತ್ರ ಕಂನಾಡು ಬದುಕಿದೆ. ಕಂನುಡಿಯು ಕಂದಿದರೆ, ಕುಂದಿದರೆ ಅಥವಾ ಕಟ್ಟಾದರೆ ಕಂನಾಡೂ ಸೊರಗಿ ಕೊರಗಿ, ಕೊನೆಗೆ ಹೇಳಹೆಸರಿಲ್ಲದಂತಾಗುವುದಕ್ಕೆ ಸಂದೇಹವಿಲ್ಲ.

೫. ಆದುದರಿಂದ, ಈ ಬಗೆಯಾಗಿ ನಮ್ಮ ನಲವಿಗೆ ಹಾಗೂ ನಮ್ಮ ನಾಡಿನ ಇರುವು ಏಳಿಗೆಗಳಿಗೆ ಕಾರಣವಾಗಿರುವ ನುಡಿಯ ಗುಟ್ಟನ್ನು ಅರಿಯುವುದು ನಮ್ಮೆಲ್ಲರ ಮೊದಲ ಕೆಲಸವಾಗಿಲ್ಲವೆ?

ಸಮಾಸಗಳು

೬. ಜಗತ್ತಿನ ಆವುದೇ ಭಾಷೆಯಲ್ಲಾಗಲಿ ಮೂಲ ಸಿದ್ಧ ಶಬ್ದಗಳಿರುವುದು ಅಷ್ಟಕ್ಕಷ್ಟೆ. ಆದರೂ ಇದ್ದ ಸ್ವಲ್ಪ ಮೂಲಶಬ್ದಗಳಿಂದಲೇ ಬಗೆಬಗೆಯ ಹೊಸ ನುಡಿಗಳನ್ನು ಸಾಧಿಸಿಕೊಳ್ಳುವ ಹಲವು ಹಂಚಿಕೆಗಳು ಪ್ರತಿಯೊಂದು ಭಾಷೆಯಲ್ಲೂ ಉಂಟು: ಹಾಗೆ ಕಂನುಡಿಯಲ್ಲಿಯೂ ಇವೆ. ಇವುಗಳಲ್ಲಿಯೆ ಸಮಾಸವೆಂಬುದೂ ಒಂದು. ನುಡಿಯ ಮುಂದೆ ನುಡಿಯನ್ನಿಟ್ಟು ಹೊಸ ನುಡಿಗಳನ್ನು ಮಾಡಿಕೊಳ್ಳುವ ಈ ಹಂಚಿಕೆಯು ಬಹು ಪುರಾತನ ಕಾಲದಿಂದ ಬಳಕೆಯಲ್ಲಿದೆ. ತನ್ನ ಶಬ್ದಸಂಗ್ರಹವನ್ನು ಹೆಚ್ಚಿಸಿಕೊಳ್ಳಲು ಮಾನವರು ಮಾಡಿಕೊಂಡ ಮೊದಲನೆಯ ಹಂಚಿಕೆಯ ಇದು. ಎರಡು ನುಡಿಗಳು ಕೂಡಿ ಆಗುವುದರಿಂದ ಇದಕ್ಕೆ 'ಕೂಡುನುಡಿ' ಅಥವಾ ಸಮಾಸವೆಂದು ಕರೆಯಬಹುದು.

ಸಮಾಸದ ಎರಡೂ ನುಡಿಗಳು ಸೇರಿ ಒಂದೇ ಅರ್ಥವನ್ನು ಸೂಚಿಸುವುವು. ಕಣ್ಣುಗಳೆರಡು: ಆದರೂ ಕಾಂಬ ನೋಟವು ಮಾತ್ರ ಒಂದೇ. ಹಾಗೆ ಬೇರೆ ಬೇರೆ ಎರಡು ನುಡಿಗಳು ಕೂಡಿದ ಬಳಿಕ ಆ 'ಕೂಡುನುಡಿ'ಯಿಂದ ಹೊರಹೊಮ್ಮುವ ಅರ್ಥವು ಮಾತ್ರ ಒಂದೇ.

ಉದಾ : ತಳಿರಡಿ-ತಳಿರಿನಂತಹ ಅಡಿ:

ಇದರಲ್ಲಿ ತಳಿರು ಮತ್ತು ಅಡಿ ಎಂಬ ಎರಡು ನುಡಿಗಳು ಸೇರಿ ಆದ 'ತಳಿರಡಿ' ಎಂಬ 'ಕೂಡುನುಡಿ'ಯು ಸಿದ್ಧವಾಯಿತು. 'ನಯವಾದ ಕೋಮಲವಾದ ಅಡಿ' ಎಂಬ ಒಂದೇ ಹೊಸ ಅರ್ಥವು ಪ್ರಾಪ್ತವಾಯಿತು.

೭. 'ಕೂಡುನುಡಿ'ಯೊಳಗಿನ ಎರಡನೆಯ ನುಡಿಯು ಸಾಮಾನ್ಯ ಅರ್ಥವನ್ನೂ (general meaning) ಮೊದಲನೆಯ ನುಡಿಯ ವಿಶೇಷ ಅರ್ಥವನ್ನೂ ಸೂಚಿಸುವುದು.

ಉದಾ : ಕರೆಗುದುರೆ, ಚಿನ್ನದುಂಗರ

ಈ ಸಮಾಸಗಳಲ್ಲಿ ಎರಡನೆಯ ನುಡಿಗಳಾಗಿರುವ ಕುದುರೆ ಮತ್ತು ಉಂಗುರ ಇವು ಸಾಮಾನ್ಯವಾದ ಅರ್ಥವನ್ನು ಹೇಳುವುವು. 'ಕರಿದು' ಎಂಬುದು ಕುದುರೆಯ ವಿಶೇಷವನ್ನೂ 'ಚಿನ್ನದ' ಎಂಬುದು ಉಂಗುರದ ವಿಶೇಷವನ್ನೂ ಸೂಚಿಸುವುದು.

ಸಮಾಸದೊಳಗಿನ ಮೊದಲನೆಯ ನುಡಿಗೆ 'ಪೂರ್ವಪದ' ಮತ್ತು ಎರಡನೆಯ ನುಡಿಗೆ 'ಉತ್ತರಪದ' ಎಂಬ ಸಂಜ್ಞೆ. ಸಮಾಸದಲ್ಲಿ ಸಾಮಾನ್ಯಾರ್ಥಸೂಚಕವಾದ ಪದವೇ ಮುಖ್ಯಪದವೆನಿಸುವುದು.

೮. ಸಮಾಸಗಳಲ್ಲಿರುವ ಪದಗಳ ಮುಖ್ಯಾಮುಖ್ಯತೆಯ ಮೇಲಿಂದ ಅವುಗಳಲ್ಲಿ ನಾಲ್ಕು ಪ್ರಕಾರಗಳನ್ನು ಕಲ್ಪಿಸಿದ್ದಾರೆ.

೧. ಪೂರ್ವಪದವು ಮುಖ್ಯವಾದುದು;
೨. ಉತ್ತರಪದವು ಮುಖ್ಯವಾದುದು;
೩. ಎರಡೂ ಪದಗಳು ಮುಖ್ಯವಾದುದು;
೪. ಎರಡೂ ಪದಗಳು ಅಮುಖ್ಯವಾದುದು.

ಇನ್ನೂ ಬೇರೆ ಬೇರೆ ವಿಧದಿಂದಲೂ ಇವನ್ನು ವಿಭಾಗಿಸಬಹುದು:

೧ ನಾಮ + ನಾಮ
೨. ವಿಶೇಷಣ + ನಾಮ
೩. ಅವ್ಯಯ + ನಾಮ
೪. ನಾಮ + ಕ್ರಿಯಾರೂಪ; ಮುಂತಾದವು

ಆದರೆ, ನಮ್ಮ ವ್ಯಾಕರಣಕಾರರು ಮೇಲಣ ಎರಡೂ ಬಗೆಗಳನ್ನು ಬೆರೆಸಿ ಸಮಾಸಗಳಲ್ಲಿ ಪ್ರಕಾರಗಳನ್ನು ಗೊತ್ತುಪಡಿಸಿದ್ದರೂ, ಅವುಗಳಿಗೆ ಮೂರನೆಯದೊಂದು ತೆರನಾಗಿಯೆ ಹೆಸರುಗಳನ್ನು ಕೊಟ್ಟಿದ್ದಾರೆ.

(೧) ದ್ವಂದ್ವ (೨) ತತ್ಪುರುಷ (೩) ಕರ್ಮಧಾರಯ (೪) ದ್ವಿಗು (೫) ಬಹುವ್ರೀಹಿ (೬) ಅವ್ಯಯೀಭಾವ ಅಥವಾ ಅಂಶಿ (೭) ಕ್ರಿಯಾ ಸಮಾಸ.

೯. ಸಮಾಸಗಳ ಎಂದರೆ 'ಕೂಡುನುಡಿ'ಗಳ ಸಂಖ್ಯೆಯು ಮಿತಿ-ಮೀರಿರುವ ಭಾಷೆಗಳು ಕೆಲವಿವೆ: ತೀರ ಕಡಿಮೆಯಾಗಿರುವ ಭಾಷೆಗಳೂ ಕೆಲವಿವೆ. ಕಂನುಡಿಯಲ್ಲಿ ತಮಿಳಿಗಿಂತ 'ಕೂಡುನುಡಿಗಳು' ಬಹಳ ಕಡಿಮೆ. ನಮ್ಮ ಸಮಾಸಗಳ ಪರಿಭಾಷೆಯನ್ನು (ತತ್ಪುರುಷಾದಿ ಹೆಸರುಗಳನ್ನು) ನೋಡಿದರೆ, ಇದು ಸಂಸ್ಕೃತದಿಂದ ಅನುಕರಿಸಿದ ಪದ್ಧತಿಯೆಂದು ಎನಿಸುವಂತಿದೆ. ಆದರೆ, ನಿಜಸ್ಥಿತಿಯು ಹಾಗಿಲ್ಲ. 'ಕೂಡುನುಡಿ'ಗಳು ಕಂನುಡಿಗೆ ಹೊಸವಲ್ಲ; ಪರಿಭಾಷೆಯು ಮಾತ್ರ ಹೊಸದು; ಸಂಸ್ಕೃತ ವ್ಯಾಕರಣದಿಂದ ಎತ್ತಿಕೊಂಡುದು. ಏಕೆಂದರೆ ಕಂನುಡಿಗೆ ವ್ಯಾಕರಣ ಬರೆದ ಮಹನೀಯರೆಲ್ಲ ಸಂಸ್ಕೃತದ ಭೂಮಿಕೆಯ ಮೇಲೆ ನಿಂತು ಕಂನುಡಿಯನ್ನು ಕಂಡವರು. ಹಲವು ನುಡಿಗಳಿಂದ ಹೇಳಬಹುದಾದ ಮಾತನ್ನು ಎರಡೇ ನುಡಿಗಳನ್ನು ಕೂಡಿಸಿ 'ಕೂಡುನುಡಿ'ಯಿಂದ-ಸಮಾಸದಿಂದ ಹೇಳುವ ಪದ್ಧತಿಯು ಸ್ವಲ್ಪ ಹೆಚ್ಚು ಕಡಿಮೆ ಪ್ರಮಾಣದಿಂದ ಎಲ್ಲ ಭಾಷೆಗಳಲ್ಲಿಯೂ ಇದ್ದೇ ಇದೆ.

ಮಾನವನ ಆರಂಭಕಾಲದ ಭಾಷೆಯಲ್ಲಿ 'ಕೂಡುನುಡಿ'ಗಳೇ ಹೆಚ್ಚಾಗಿದ್ದುವೆಂದು ಭಾಷಾಶಾಸ್ತ್ರಜ್ಞರ ಅಭಿಪ್ರಾಯ. 'ಕೂಡುನುಡಿ'ಗಳು ಭಾಷೆಯ ಆರಂಭದ ಸ್ಥಿತಿದರ್ಶಕ ಶಬ್ದಗಳಾಗಿಹವೆ. ಭಾವನೋದ್ದೀಪನಕ್ಕೆ ಸಮಾಸಗಳು ಬಹಳ ಅನುಕೂಲ. ಭಾವನೆಗಳೇ ಬಲಿಷ್ಠವಾಗಿದ್ದ ಮಾನವನ ಪ್ರಾಥಮಿಕ ಅವಸ್ಥೆಯೊಳಗಿನ ಭಾಷೆಯಲ್ಲಿ ಸಮಾಸಗಳೇ ಹೆಚ್ಚಾಗಿರುವುದು ಸ್ವಾಭಾವಿಕವಾಗಿದೆ.

'ಕನ್ನಡಿ-ಕದಪು' ಎಂದೊಡನೆ ಕದಪಿನೊಡನೆ ಕನ್ನಡಿಯ ನೆನಪು ಉಂಟಾಗಿ. 'ಕನ್ನಡಿಯಂತೆ ತಳತಳನೆ ಹೊಳೆವ ಕದಪು' ಎಂಬ ಚಿತ್ರವು ಕಣ್ಣೆದುರು ನಿಲ್ಲುವುದು. 'ಮುಖಚಂದ್ರ' 'ಎರಳೆಗಣ್ಣು' ಮುಂತಾದ 'ಕೂಡುನುಡಿ'ಗಳು ಕಣ್ಣಮುಂದೆ ಒಂದೊಂದು ಚಿತ್ರವನ್ನೇ ತಂದು ನಿಲ್ಲಿಸುವುವು. ಭಾವನೆಗಳನ್ನು ಉಕ್ಕೇರಿಸುವ ಕೆಲಸದಲ್ಲಿ ಸಮಾಸಗಳು ಕವಿಗಳಿಗೆ ಬಹಳ ಉಪಯುಕ್ತವಾಗಿವೆ. ಆದುದರಿಂದಲೇ ಸಾಮಾನ್ಯವಾಗಿ ಕವಿಗಳಿಗೆ ಅವುಗಳ ಕಡೆಗೆ ಒಲವು.

೧೦. ಸಮಾಸಗಳಲ್ಲಿ ಒಂದು ಬಗೆಯ ಕೊರತೆಯೂ ಇದೆ. ಕೂಡಿದ ಎರಡೂ ನುಡಿಗಳ ಮೂಲಾರ್ಥವನ್ನು ಮರೆಯಲು ಬಾರದಿದ್ದರೆ ಆ 'ಕೂಡುನುಡಿ'ಯಿಂದ ಮನಸ್ಸಿಗೆ ಅಷ್ಟು ಸುಖವಾಗುವುದಿಲ್ಲ. 'ಕಮಲಮುಖಿ' ಎಂಬಲ್ಲಿ 'ಕಮಲದಂತಹ ಮುಖವುಳ್ಳವಳು ಎಂದರೇನು? ಮುಖದಲ್ಲಿ ಕಮಲದಂತೆ ಎಸಳು, ಬಣ್ಣವೇ ಮೊದಲಾದುವೆಲ್ಲ ಉಂಟೆ?' ಎಂದು ವಿಚಿಕಿತ್ಸಕನೊಬ್ಬನು ಕೇಳಲಾರಂಭಿಸಿದರೆ ತೊಂದರೆಯೇ ಸರಿ. ಒಟ್ಟಿನಲ್ಲಿ

'ಕಮಲದಂತೆ ಸುಂದರವಾದ ಮುಖವುಳ್ಳವಳು' ಎಂಬ ಅರ್ಥವನ್ನಷ್ಟೇ ಗ್ರಹಿಸಲಿಕ್ಕೆ ಮನಸ್ಸು ಸಿದ್ಧವಾಗಬೇಕಾದರೆ, ಆ ಸಮಾಸದೊಳಗಿನ ಅವಯವಾರ್ಥವನ್ನು ಕಣ್ಮರೆ ಮಾಡಬೇಕಾದುದು ಅವಶ್ಯ.

ಆದರೆ, ಅವಯವಾರ್ಥವು ಸಂಪೂರ್ಣ ಮರೆತುಹೋದ 'ಕೂಡುನುಡಿ'ಗಳು ಉಚ್ಚಾರದಲ್ಲಿ ಬೇಗನೆ ಬದಲಾಗತೊಡಗುವುವು.

ಉದಾ : ತಣ್ಣನೆಯ+ಕೂಳು=ತಂಗೂಳು=ತಂಗುಳ=ತುಂಗ್ಳು=ತಂಗಳ.

ಇದರಂತೆಯೆ ಕೋಡಬಳೆ-ಕ್ವಾಡಬಾಳೆ, ಮಹಾನವಮಿ-ಮಾನೋಮಿ-ಮಾನಾಮಿ-ಮಾನಮ್ಮಿ, ಮಹಾರನವಮಿ ಮುಂತಾದುವುಗಳು ವಿಚಿತ್ರ ವಿಕಾರಗಳನ್ನು ಹೊಂದಿವೆ. ಊರ ಹೆಸರಿನ ವಿಕಾರಗಳೂ ವಿಚಾರಾರ್ಹವಾಗಿವೆ:

ಉದಾ : ಮುನ್ನಪಳ್ಳಿ (ಮುನವಳ್ಳಿ)-ಮುನೋಳಿ-ಮನೋಳಿ; ಆನೆಗೋಳ-ಅನಿಗೋಳ-ಅನಗೋಳ; ಜಂಬುಕಂಡಿ-ಜಮಖಂಡಿ; ಮುದುವೊಳಲು-ಮುಧೋಳ ಮುಂತಾದುವೆ ಇದಕ್ಕೆ ದೃಷ್ಟಾಂತ

೧೧. ಸಮಾಸಗಳೊಳಗಿನ ಪೂರ್ವೋತ್ತರ ಪದಗಳು ಒಂದರೊಡನೊಂದು ಕೂಡುವ ಮೂರು ಬಗೆಗಳನ್ನು ಕಾಣಬಹುದು.

(i) ಕೆಲವು ಸಮಾಸಗಳಲ್ಲಿ ಪೂರ್ವಪದದ ವಿಭಕ್ತಿ ಪ್ರತ್ಯಯವು ಕೂಡ ಲೋಪವಾಗುವುದಿಲ್ಲ.

ಉದಾ : ಚಿನ್ನದುಂಗುರ; ಬಾಳೆಯ ಗಿಡ; ಮುಂ

(ii) ಕೆಲವು ಸಮಾಸಗಳಲ್ಲಿ ವಿಭಕ್ತಿ ಪ್ರತ್ಯಯಗಳು ಲೋಪವಾದರೂ, ಪೂರ್ವಪದವು-ಹಲವು ಸಾರೆ-ತನ್ನ ತೀರ ಪ್ರಾಥಮಿಕ ಸ್ವರೂಪವನ್ನು ತಾಳುವುದಿಲ್ಲ.

ಉದಾ : ಬಿಳಿಗುದುರೆ ಅಥವಾ ಬೆಳುಗುದರೆ; ಆದರೆ ಬಿಳಿ-ಬೆಳು ಇದರ ಪ್ರಾಥಮಿಕ ರೂಪವು 'ಬೆಳ್' ಎಂದಾಗುವುದರಿಂದ 'ಬೆಳ್ಗುದುರೆ' ಎಂದೂ ಇದನ್ನು ಕೂಡಿಸಬಹುದು.

'ಕಾಡುಕಸ' ಎಂಬ 'ಕೂಡುನುಡಿ'ಯೊಳಗಿನ 'ಕಾಡು' ಎಂಬ ಪದದ ಪ್ರಾಥಮಿಕ ರೂಪವು 'ಕಗ್' ಎಂದಾಗುವುದರಿಂದ ಈ ಸಮಾಸವನ್ನು 'ಕಗ್ಗಸ' ಅಥವಾ 'ಕಾಗಸ' ('ಕಾಕುಳ್ಳು' ಎಂಬಂತೆ) ಎಂದೂ ಹೇಳಬಹುದಾಗಿದೆ. ಆದರೆ, ಇದು 'ಕ್ಯಾಗಸ' 'ಕೆಂಗಸ' ಎಂಬೀ ರೂಪದಲ್ಲಿ ಮನೆ ಮಾತಿನಲ್ಲಿ ಕಾಣಿಸಿಕೊಳ್ಳುತ್ತಿದೆ!

(iii) ಕೆಲವು ಸಮಾಸಗಳಲ್ಲಿ ಪೂರ್ವಪದವು ತನ್ನ ವಿಭಕ್ತಿಪ್ರತ್ಯಯವನ್ನು ಕಳೆದುಕೊಳ್ಳುವುದಲ್ಲದೆ ಅದು ತನ್ನ ಪ್ರಾಥಮಿಕ ಸ್ವರೂಪವನ್ನೂ ತಾಳುವುದು.

ಉದಾ : ಕೆಂಗಣ್ಣ ; ಆದರೆ ೨ನೆಯ ಪ್ರಕಾರದಂತೆ 'ಕಿಸುಗಣ್ಣ' ಎಂದೂ ಇಲ್ಲಿ ಕೂಡಿಸಿದರೆ ತಪ್ಪಲ್ಲ

ಬೆಳ್ಗೊಡೆ, ಕಗ್ಗತ್ತಲೆ, ಕಿಳ್ಳೊಟ್ಟೆ ಇಂತಹ ಇನ್ನೂ ಹಲವು ಉದಾಹರಣಗಳನ್ನು ಕೊಡಬಹುದು: ಇವುಗಳಲ್ಲಿ ಪೂರ್ವಪದಗಳು ಪ್ರಾಥಮಿಕ ಸ್ವರೂಪವನ್ನು ತಾಳಿವೆ.

ಆದರೆ, ಒಟ್ಟಿನಲ್ಲಿ ಮೇಲ್ಕಾಣಿಸಿದ ಮೂರು ಪ್ರಕಾರಗಳಲ್ಲಿ ಮೊದಲ ಹಾಗೂ ಕೊನೆಯ ಪ್ರಕಾರಗಳಿಗಿಂತ ನಡುವಿನ (೨ನೆಯ) ಪ್ರಕಾರವೇ ಹೆಚ್ಚು ಬಳಕೆಯಲ್ಲಿದೆ.

'ಕೂಡುನುಡಿ'ಗಳನ್ನು ಬಿಡಿಸಿ ತೋರಿಸುವಾಗ ಪೂರ್ವಪದವು ಕಳೆದುಕೊಂಡ ವಿಭಕ್ತಿ ಪ್ರತ್ಯಯಾದಿಗಳನ್ನು ಅದಕ್ಕೆ ಅಂಟಿಸಿ ಹೇಳುವುದುಂಟು. ಇದಕ್ಕೆ ವಿಗ್ರಹವೆಂದು ಹೆಸರು.

ಉದಾ : ಬಿಳಿದು + ಕೊಡೆ-ಬೆಳ್ಗೊಡೆ:
ಕರಿದು ಕೊರಲು ಉಳ್ಳವನು-ಕರಿಗೊರಲು
ಕರಿದು ಕೊರಲು ಯಾವನಿಗೊ ಅವನು-'ಕರಿಗೊರಲ'
ಎಂದೂ ವಿಗ್ರಹಿಸುವ ರೂಢಿಯಿದೆ.

೧೨. ಪೂರ್ವಪದವು ಮುಖ್ಯವಾಗಿರುವ ಸಮಾಸ

ಇದರಲ್ಲಿ ಪೂರ್ವಪದವು ಸಾಮಾನ್ಯಾರ್ಥವನ್ನುಳ್ಳದಿರುತ್ತದೆ. ಅದು ಯಾವಾಗಲೂ ನಾಮಪದವಾಗಿದ್ದು ಉತ್ತರಪದವು ಪೂರ್ವಪದದ ಅಂಶ ಅಥವಾ ಭಾಗವನ್ನು ಸೂಚಿಸುತ್ತಿರುವುದುಂಟು. ಆದುದರಿಂದ ಇದಕ್ಕೆ ಅಂಶಿಸಮಾಸವೆಂಬ ಹೆಸರು.

ಆದರೆ, ಉತ್ತರ ಪದದಲ್ಲಿ ಹೆಚ್ಚಾಗಿ ಒಳಗು, ಹೊರಗು ಮೊದಲಾದ ಅವ್ಯಯಗಳು ಇರುವುದರಿಂದ ಈ ಸಮಾಸಕ್ಕೆ ಅವ್ಯಯೀಭಾವ ಸಮಾಸವೆಂದೂ ಕರೆವ ವಾಡಿಕೆಯಿತ್ತು.

ಉದಾ : ಅಟ್ಟದ ಹೊರಗು-ಹೊರಅಟ್ಟ
ಪೊಟ್ಟೆಯ ಕೆಳಗು-ಕಿಳ್ಪೊಟ್ಟೆ
ಕೈಯ ಮೇಗು-ಮೇಗೈ
ಕೈಯ ಮುಂದು-ಮುಂಗೈ
ಕಾಲ ಅಕಂ-ಅಂಗಾಲು: ಕೈಯ ಅಕಂ-ಅಂಗೈ ಮುಂ.

೧೩. ಉತ್ತರ ಪದವು ಮುಖ್ಯವಾಗಿರುವ ಸಮಾಸ

ಇದರಲ್ಲಿ ನಾಲ್ಕು ಒಳಭೇದಗಳಿವೆ. ಈ ನಾಲ್ಕರಲ್ಲಿ ಮೊದಲಿನ ಮೂರು ಒಂದು ಬಗೆಯವು: ಈ ಮೂರರಲ್ಲಿಯೂ ಉತ್ತರಪದವು ನಾಮಪದವಾಗಿರುತ್ತದೆ. ಪೂರ್ವಪದವು ಮಾತ್ರ ಬೇರೆ. ಆದರೆ, ನಾಲ್ಕನೆಯದರಲ್ಲಿ ಉತ್ತರಪದವು ಕ್ರಿಯಾವಾಚಿಯಾಗಿದ್ದು ಪೂರ್ವಪದವು ನಾಮವಾಗಿರುತ್ತದೆ.

(i) ಪೂರ್ವಪದವು ಉತ್ತರಪದದಂತೆಯೇ ನಾಮವಾಗಿರುವುದು ತತ್ಪುರುಷ. ತೃತೀಯಾದಿ ವಿಭಕ್ತಿಗಳಿಂದ ಪೂರ್ವಪದವು ಉತ್ತರಪದದೊಡನೆ ಕೂಡಿಕೊಂಡಿರುತ್ತದೆ.

ಮೈಯಿಂದ ಕಲಿ	-	ಮೆಯ್ಗಲಿ	(ತೃ. ತತ್ಪುರುಷ)
ತೇರಿಗೆ ಮರ	-	ತೇರ್ಮರ	(ಚ. ತತ್ಪುರುಷ)
ಕಳ್ಳರಿಂದ ಅಂಜಿಕೆ	-	ಕಳ್ಳರಂಜಿಕೆ	(ಪಂ ತತ್ಪುರುಷ)
ಮಾವಿನ ಮರ	-	ಮಾಮರ	(ಷ. ತತ್ಪುರುಷ)
ಚಿನ್ನದ ಉಂಗುರ	-	ಚಿನ್ನದುಂಗುರ	(ಷ. ತತ್ಪುರುಷ)
ಹರಟೆಯಲ್ಲಿ ಮಲ್ಲ	-	ಹರಟೆಮಲ್ಲ	(ಸ. ತತ್ಪುರುಷ)

(ii) ಪೂರ್ವಪದವು ಗುಣವಾಚಕವಾಗಿದ್ದರೆ ಅದು ಕರ್ಮಧಾರಯವೆನಿಸುವುದು.

ಉದಾ : ಒಳ್ಳಿತು ನುಡಿ	-	ಒಳ್ನುಡಿ
ಕಿರಿದು ಕೂಸು	-	ಕಿರುಗೂಸು
ತಳಿರಂತಹ ನುಡಿ	-	ತಳಿರಡಿ ಅಥವಾ ಅಡಿದಳಿರು
ಬಿರುಸು ಮಾತು	-	ಬಿರುಮಾತು; ಬಿರುವಾತು
ಕುಡು (ಕೊಂಕು) ಕೋಲು	-	ಕುಡುಗೋಲು
ಇರುಳೆಂಬ ಪೆಣ್ಣು	-	ಇರುಳುವೆಣ್ಣು

(iii) ಪೂರ್ವಪದವು ಸಂಖ್ಯಾವಾಚಕವಾಗಿದ್ದರೆ ಅದು ದ್ವಿಗುಸಮಾಸ ಎನಿಸುವುದು

ಉದಾ : ಮೂರು ಲೋಕಗಳು	-	ಮೂಲೋಕ
ನಾಲ್ಕು ದೆಸೆಗಳು	-	ನಾಲ್ದೆಸೆಗಳು
ಐದು ಪತ್ತು	-	ಐವತ್ತು

(iv) ಪೂರ್ವಪದವು ನಾಮಪದವಿದ್ದು ಉತ್ತರಪದವು ಕ್ರಿಯೆಯಾಗಿದ್ದರೆ ಅದು ಕ್ರಿಯಾಸಮಾಸವಾಗುವುದು.

ಉದಾ : ಸುಖವನ್ನು ಪಡು - ಸುಖಬಡು
ಮರೆಯನ್ನು ಪುಗು - ಮರೆವೊಗು
ಮನವನ್ನು ಕೊಳ್ಳು - ಮನಂಗೊಳ್ಳು
ಮಕ್ಕಳಿಂ ಬೆರಸು - ಮಕ್ಕಳ್ವೆರಸು
ಎದುರಿಗೆ ಬಂದು - ಎದುರ್ವಂದು

೧೪. ಎರಡೂ ಪದಗಳು ಅಮುಖ್ಯವಾಗಿರುವ ಸಮಾಸ

ಇದರಲ್ಲಿ ಎರಡೂ ಪದಗಳು ನಾಮವಾಗಿರುತ್ತವೆ. ಈ ಸಮಾಸಕ್ಕೆ ದ್ವಂದ್ವವೆಂಬ ಹೆಸರು. ತತ್ಪುರುಷದಲ್ಲಿಯೂ ಎರಡು ಪದಗಳು ನಾಮವಾಗಿದ್ದರೂ ಅಲ್ಲಿ ಉತ್ತರಪದವು ಮಾತ್ರ ಮುಖ್ಯವಾಗಿರುತ್ತದೆ. ದ್ವಂದ್ವಸಮಾಸದಲ್ಲಿ ಎಷ್ಟೋ ಸಾರೆ ಎರಡಕ್ಕಿಂತ ಹೆಚ್ಚು ಪದಗಳೂ ಇರುವುದುಂಟು. ಸಮಾಸದ ಪದಗಳು ಪ್ರಥಮಾ ವಿಭಕ್ತಿಯಿಂದ ಒಂದರೊಡನೆ ಒಂದು ಕೂಡಿರುವುವು.

ಉದಾ : ಹತ್ತೂ ನಾಲ್ಕೂ - ಹದಿನಾಲ್ಕು
ತಾಯಿಯೂ ತಂದೆಯೂ - ತಾಯ್ತಂದೆ
ರಾಮನೂ ಲಕ್ಷ್ಮಣನೂ - ರಾಮಲಕ್ಷ್ಮಣರು
ಆನೆಯೂ, ಕುದುರೆಯೂ, ತೇರೂ, ಕಾಲಾಳೂ.....ಆನೆಕುದುರೆತೇರ್ಕಾಲಾಳುಗಳು

೧೫. ಎರಡೂ ಪದಗಳು ಅಮುಖ್ಯವಾಗಿರುವ ಸಮಾಸ:

ಈ ಸಮಾಸದಲ್ಲಿ ಕೆಲಸಾರೆ ಎರಡಕ್ಕಿಂತ ಹೆಚ್ಚು ಪದಗಳು ಇರುವುದುಂಟು. ಇದರೊಳಗಿನ ಪದಗಳು ಸೇರಿ ಹೊರಗಿನ ಪದವನ್ನು ನಿರ್ದೇಶಿಸುವುವು. ಇದಕ್ಕೆ ಬಹುವ್ರೀಹಿ ಸಮಾಸ ಎನ್ನುವರು.

ಉದಾ : ನಿಡಿದು ಮೂಗು ಉಳ್ಳವನು - ನಿಡುಮೂಗಿ
ಹಣೆಯಲ್ಲಿ ಕಣ್ಣುಳ್ಳವನು - ಹಣೆಗಣ್ಣ
ನಾಲ್ಕು ಅಥವಾ ಐದು - ನಾಲ್ಕೈದು
ಕೋಲಿನಿಂದ ಕೋಲಿನಿಂದ ಆದ ಕಲಹ - ಕೋಲಾಕೋಲಿ

೧೬. ಕಂನುಡಿಯಲ್ಲಿ ರೂಢವಾಗಿರುವ ಹಲವು ಸಂಸ್ಕೃತ ಸಮಸ್ತ ಪದಗಳುಂಟು. ಅವುಗಳಲ್ಲಿ ಕೆಲವನ್ನು ಹಾಗೆ ಮಾಡಲಿಕ್ಕೆ ಆಗುವುದಿಲ್ಲ. ಆದುದರಿಂದ ಅವನ್ನು ಕಂನುಡಿಯಿಂದ ಬಿಡಿಸಲೇ ಕೂಡದು. ಕಂನುಡಿಯಿಂದ ಬಿಡಿಸಬಹುದಾದುವಕ್ಕೆ:

ಉದಾ : ಚೋರರ ಭಯ - ಚೋರಭಯ
ಕೋಪವೆಂಬ ಅಗ್ನಿ - ಕೋಪಾಗ್ನಿ
ಮಾತೆಯೂ ಪಿತೃವೂ - ಮಾತಾಪಿತೃ
ಚಕ್ರವು ಪಾಣಿಯಲ್ಲಿ ಯಾವನಿಗೆ ಅವನು - ಚಕ್ರಪಾಣಿ

ಕಂನುಡಿಯಿಂದ ಬಿಡಿಸಲು ಸಾಧ್ಯವಿಲ್ಲದುವಕ್ಕೆ:

ಉದಾ : ಅನುರೂಪ; ಪ್ರತಿದಿನ; ತ್ರ್ಯಂಬಕ; ಇತ್ಯಾದಿ

ಕೃತ್ತದ್ಧಿತಗಳು

೧೭. 'ಕೂಡುನುಡಿ' ಅಥವಾ ಸಮಾಸಗಳಂತೆ ಹೊಸನುಡಿಗಳನ್ನು ಸಾಧಿಸಿಕೊಳ್ಳುವ ಇನ್ನೊಂದು ಹಂಚಿಕೆಯಿದೆ. ಈ ಹಂಚಿಕೆಯಿಂದ ಮಾಡಿಕೊಂಡ ಹೊಸ ನುಡಿಗಳಲ್ಲಿ ಕೆಲವಕ್ಕೆ ಕೃದಂತಗಳೆಂದೂ ಇನ್ನು ಕೆಲವಕ್ಕೆ ತದ್ಧಿತಾಂತಗಳೆಂದೂ ಹೆಸರು.

೧೮. ಕೃದಂತ ವಿಚಾರ : ಧಾತುಗಳಿಂದ ಹೊಸದಾಗಿ ವಿಶೇಷಣ, ನಾಮ ಮತ್ತು ಅವ್ಯಯಗಳನ್ನು ಸಾಧಿಸಿಕೊಳ್ಳಬಹುದು: ಇವುಗಳನ್ನು ಸಾಧಿಸುವುದಕ್ಕಾಗಿ ಧಾತುಗಳಿಗೆ ಹಚ್ಚುವ ಪ್ರತ್ಯಯಗಳಿಗೆ 'ಕೃತ್ ಪ್ರತ್ಯಯ' ಗಳೆಂಬ ಹೆಸರಿದೆ. ಕೃತ್‌ಪ್ರತ್ಯಯಗಳು ಸೇರಿ ಆದ ಧಾತುಸಾಧಿತಗಳೇ ಕೃದಂತಗಳು.

ಕೃದಂತ ವಿಶೇಷಣಗಳು

(i) ಇವುಗಳಲ್ಲಿ ಕೆಲವು ಭೂತ, ವರ್ತಮಾನ ಮತ್ತು ಭವಿಷ್ಯತ್ ಕಾಲ ಸೂಚಕಗಳಾಗಿವೆ.

ಧಾತುಗಳಿಗೆ ಇದ, ದ ಪ್ರತ್ಯಯಗಳು ಸೇರಿ ಭೂತಕೃದಂತ ವಿಶೇಷಣಗಳಾಗುತ್ತವೆ

ಉದಾ : ಮಾಡಿ; ಕರೆದ; ತಿಂದ; ಬಂದ ಮುಂತಾದವು.

ಧಾತುಗಳಿಗೆ ಉಪ ಪ್ರತ್ಯಯವನ್ನು ಹಚ್ಚಿದರೆ ವರ್ತಮಾನ ಭವಿಷ್ಯತ್ ಕೃದಂತ ವಿಶೇಷಣಗಳಾಗುತ್ತವೆ.

ಉದಾ : ಓದುವ; ಹೋರುವ; ಬರೆಯುವ; ಮುಂತಾದವು.

(ii) ಧಾತುಗಳಿಗೆ ಅದ ಪ್ರತ್ಯಯವನ್ನು ಸೇರಿಸಿದರೆ ನಿಷೇಧ ಕೃದಂತ ವಿಶೇಷಣಗಳಾಗುವುವು.

ಉದಾ : ಕೊಡದ; ಬೇಡದ; ಮಾಡದ; ಮುಂ.

(iii) ಕಾಲಸೂಚಕವಲ್ಲದ ಕೃದಂತ ವಿಶೇಷಣಗಳು ಕೆಲವು ಉಂಟು

ಉದಾ : ಮುರಕ; ಹರಕ; ಒಡಕ; ಮುಂ

ಕೃದಂತ ನಾಮಗಳು

ಕೃದಂತ ವಿಶೇಷಣಗಳಿಗೆ ಪುಂ-ಸ್ತ್ರೀ ಅಥವಾ ನಪುಂಸಕ ಲಿಂಗಗಳನ್ನು ಸೂಚಿಸುವ ಪ್ರತ್ಯಯಗಳನ್ನು ಸೇರಿಸಿದರೆ, ಅವೇ ಕೃನ್ನಾಮ (ಅಥವಾ ಕೃದಂತನಾಮ) ಗಳಾಗುವುವು.

ಉದಾ : ಭೂತಕೃನ್ನಾಮಗಳು	:	ಮಾಡಿದವನು ಮಾಡಿದವಳು	ಮಾಡಿದವರು
		ಮಾಡಿದುದು	ಮಾಡಿದುವು
ವರ್ತಮಾನ ಮತ್ತು ಭವಿಷ್ಯತ್ ಕೃನ್ನಾಮಗಳು	:	ಮಾಡುವವನು ಮಾಡುವವಳು	ಮಾಡುವವರು
		ಮಾಡುವುದು	ಮಾಡುವುವು
ನಿಷೇಧ ಕೃನ್ನಾಮಗಳು	:	ಮಾಡದವನು ಮಾಡದವಳು	ಮಾಡದವರು
		ಮಾಡದದು	ಮಾಡದುವು
ಕಾಲ ಸೂಚಕವಲ್ಲದ ಕೃನ್ನಾಮಗಳು	:	ಕುಂಟನು ಕುಂಟಳು	ಕುಂಟರು
		ಕುಂಟು	ಕುಂಟುಗಳು

ಸಾಮಾನ್ಯವಾಗಿ ಎಲ್ಲ ಧಾತುಗಳಿಗೂ ಉದು ಪ್ರತ್ಯಯವು ಸೇರಿ ಕೃದಂತಭಾವನಾಮಗಳಾಗುವುವು. ಕೆಲವು ಸಾರೆ ಓಣ ಎಂಬ ಪ್ರತ್ಯಯವನ್ನು ಉಪಯೋಗಿಸುವುದುಂಟು. ಕೆಲವು ಧಾತುಗಳು ಮೂಲಸ್ವರೂಪದಲ್ಲಿಯೆ ಉಳಿದು ಭಾವಾರ್ಥವನ್ನು ಕೊಡುತ್ತವೆ

ಉದಾ : (i) ನಡೆವುದು ಅಥವಾ ನಡೆಯುವುದು: ಮಾಡುವುದು; ಕೇಳುವುದು; ಮುಂತಾದುವು.

(ii) ಓದೋಣ ಬರೆಯೋಣ; ಮುಂ

(iii) ಓದು; ಬದುಕು; ಬಾಳು; ಮುಂ.

ಕೃದಂತ ಅವ್ಯಯಗಳು

ಇವುಗಳನ್ನು ವರ್ಗೀಕರಿಸುವುದರಲ್ಲಿ, ಕೆಲವರು ಸಾಮಾನ್ಯವಾಗಿ ಮೇಲೆ ಹೇಳಿದ ವಿಶೇಷಣ ಮತ್ತು ನಾಮಗಳಂತೆಯೇ ವಿಭಾಗಗಳನ್ನು ಮಾಡುವರು. ಆದರೆ, ಕೆಲವರು ಈ ಅವ್ಯಯಗಳನ್ನೇ ಇನ್ನೊಂದು ಬಗೆಯಾಗಿ ವಿಭಾಗಿಸುವರು.

(೧) ಭೂತ ಕೃದಂತಾವ್ಯಯ; (೨) ವರ್ತಮಾನ ಕೃದಂತಾವ್ಯಯ; (೩) ನಿಷೇಧ ಕೃದಂತಾವ್ಯಯ; (೪) ಭಾವರೂಪ ಕೃದಂತಾವ್ಯಯ; (೫) ಪಕ್ಷಾರ್ಥಕ ಕೃದಂತಾವ್ಯಯಗಳೆಂದು ವಿಭಾಗಿಸುವವರು ಕೆಲವರು.

ಮೊದಲನೆಯ ತೆರ

೧) ಭೂತಕೃದಂತಾವ್ಯಯಗಳಲ್ಲಿ ಧಾತುಗಳಿಗೆ ಇ, ಅಥವಾ ದು, ಪ್ರತ್ಯಯವು ಹತ್ತುವುದು.
ಉದಾ : ತಾಗಿ; ಮಾಡಿ; ತಿಂದು; ಕರೆದು ಮುಂ.

೨) ವರ್ತಮಾನ ಕೃದಂತಾವ್ಯಯಗಳಲ್ಲಿ ಧಾತುಗಳಿಗೆ ಉತ್ತ ಎಂಬ ಪ್ರತ್ಯಯವು ಸೇರುವುದು.
ಉದಾ : ಮಾಡುತ್ತ; ಓಡುತ್ತ; ಕುಣಿಯುತ್ತ; ಮುಂ.

೩) ನಿಷೇಧ ಕೃದಂತಾವ್ಯಯಗಳಲ್ಲಿ ಧಾತುಗಳಿಗೆ ಅದೆ ಪ್ರತ್ಯಯವು ಬರುವುದು.
ಉದಾ : ಮಾಡದೆ; ಬೇಡದೆ; ಕೇಳದೆ; ಮುಂ.

೪) ಭಾವರೂಪ ಕೃದಂತಾವ್ಯಯಗಳಲ್ಲಿ ಧಾತುವಿಗೆ ಎ, ಅ, ಅಲು, ಅಥವಾ ಅಲಿಕ್ಕೆ ಎಂಬ ಪ್ರತ್ಯಯಗಳು ತಗುಲುವುವು

ಉದಾ : ಮಾಡೆ; ಮಾಡ; ಮಾಡಲು; ಮಾಡಲಿಕ್ಕೆ ಮುಂ.

(೫) ಪಕ್ಷಾರ್ಥಕ ಕೃದಂತಾವ್ಯಯಗಳಲ್ಲಿ ಧಾತುಗಳಿಗೆ ರೆ. ಪ್ರತ್ಯಯವು ಹತ್ತುವುದು. ಇದರಲ್ಲಿಯೂ ಭೂತ, ವರ್ತಮಾನ ಮತ್ತು ಭವಿಷ್ಯತ್ ಕಾಲಸೂಚಕ ಪಕ್ಷಾರ್ಥಕ ಕೃದಂತಾವ್ಯಯಗಳೆಂದು ಮೂರು ಭೇದಗಳಿವೆ.

ಉದಾ : ಭೂತಕಾಲಕ್ಕೆ ಹೋದರೆ; ತಂದರೆ.
ವರ್ತಮಾನಕ್ಕೆ ಮತ್ತು ಭವಿಷ್ಯತ್ತಿಗೆ ಬರುವರೆ; ನೋಡುವರೆ.

ಎರಡನೆಯ ತೆರ:

(೧) ಏಕಕರ್ತೃಕ ಕೃದಂತಾವ್ಯಯಗಳು:

ಒಬ್ಬನಿಂದ ಒಂದಕ್ಕಿಂತ ಹೆಚ್ಚು ಕ್ರಿಯೆಗಳು ಸಂಭವಿಸಿದಲ್ಲಿ ಅವುಗಳನ್ನು ಹೇಳುವ ಕೃದಂತಾವ್ಯಯಗಳಲ್ಲಿ:

(೧) ಕೆಲವು ಅದೇ ಕಾಲಕ್ಕೆ ನಡೆದುದನ್ನು ಸೂಚಿಸುವುವು. (೨) ಕೆಲವು ಅದೇ ಕಾಲಕ್ಕೆ ನಡೆದುದನ್ನು ಹೇಳುವುವು; (೩) ಕೆಲವು ಆ ಕ್ರಿಯೆಯ ನಿಷೇಧವನ್ನು ವ್ಯಕ್ತಪಡಿಸುವುವು; (೪) ಕೆಲವು ಪ್ರಯೋಜನವನ್ನು ಸೂಚಿಸುವುವು.

ಉದಾ : ೧. ಮೊದಲು ಒದಗಿದುದಕ್ಕೆ: ಹಣಕೊಟ್ಟು ತಂದೆನು.
೨. ಅದೇ ಕಾಲದಲ್ಲಿ ನಡೆದುದುಕ್ಕೆ : ಆಡುತ್ತ ಹಾಡುತ್ತ.
೩. ನಿಷೇಧಕ್ಕೆ : ದುಡಿಯದೆ ಕೆಡುವನು.
೪. ಪ್ರಯೋಜನಕ್ಕೆ : ಅವನು ಕೊಡಲು ನಾನು ಹೋದೆನು.

(೨) ಭಿನ್ನಕರ್ತೃಕ ಕೃದಂತಾವ್ಯಯಗಳು

ಇವುಗಳಲ್ಲಿ (೧) ಕಾರಣವನ್ನು ಸೂಚಿಸುವುವು ಕೆಲವು: (೨) ಏಕಕಾಲಕ್ಕೆ ನಡೆದ ಬೇರೆ ಬೇರೆ ಕ್ರಿಯೆಗಳನ್ನು ಸೂಚಿಸುವುವು ಕೆಲವು.

ಉದಾ : ಕಾರಣಕ್ಕೆ : ಅವನು ಹೇಳಲು ನಾನಿದನ್ನು ಕೈಕೊಂಡೆನು ಮಳೆ ಬಿದ್ದರೆ ಬೆಳೆ ಬರುವುದು.
ಏಕಕಾಲಕ್ಕೆ : ಮಂಜನು ಕೆಣಕಲು ತೈಲಪನು ಮೇಲೆ ಬಿದ್ದನು. ಊರೆಲ್ಲ ನೋಡುತ್ತಿರಲು ಆ ಮೆರವಣಿಗೆಯು ಮುಂದೆ ಸಾಗಿತು.

ಗಾಯಕನು ಹಾಡಲು ಜನರು ಮೆಚ್ಚಿದರು.

(೩) ಪಕ್ಷಾರ್ಥಕ ಕೃದಂತಾವ್ಯಯಗಳು

ಇವುಗಳನ್ನು ಏಕಕರ್ತೃಕ ಮತ್ತು ಭಿನ್ನಕರ್ತೃಕಗಳೆಂಬ ಮೇಲಣ ಎರಡೂ ಪ್ರಕಾರದ ಅವ್ಯಯಗಳಲ್ಲಿ ಸೇರಿಸಿಕೊಳ್ಳಬಹುದಾಗಿದೆ.

ಉದಾ : ಏಕಕರ್ತೃಕ : ನಾನು ಬಂದರೆ ನಿನ್ನನು ನೋಡುವೆನು.

ಭಿನ್ನಕರ್ತೃಕ : ನಾನು ಒಳ್ಳೆಯವನಾದರೆ ಜಗತ್ತೇ ಒಳ್ಳೆಯದು

೧೯. ತದ್ಧಿತಾಂತಗಳ ವಿಚಾರ : ಧಾತು ಮತ್ತು ಅವ್ಯಯಗಳ ಹೊರತು ಉಳಿದ ಶಬ್ದಗಳಿಗೆ ನಾಮವಿಭಕ್ತಿ ಪ್ರತ್ಯಯಗಳಲ್ಲದಂತಹ ಕೆಲವು ಪ್ರತ್ಯಯಗಳು ಸೇರಿ, ಹೊಸದಾಗಿ ವಿಶೇಷಣ, ನಾಮ ಮತ್ತು ಅವ್ಯಯಗಳು

ಸಿದ್ಧವಾಗುವುವು. ಇಂತಹ ಪ್ರತ್ಯಯಗಳಿಗೆ ತದ್ಧಿತಪ್ರತ್ಯಯಗಳೆಂಬ ಹೆಸರು ಈ ಪ್ರತ್ಯಯಗಳು ಸೇರಿದ ಶಬ್ದಗಳಿಗೆ ತದ್ಧಿತಾಂತಗಳೆನ್ನುವರು.

ತದ್ಧಿತಾಂತ ವಿಶೇಷಣಗಳು

ವಂತ ಮೊದಲಾದ ಪ್ರತ್ಯಯಗಳು ನಾಮಗಳಿಗೆ ಸೇರಿ ಈ ವಿಶೇಷಣಗಳು ಸಿದ್ಧವಾಗುತ್ತವೆ.

ಉದಾ : ಗುಣವಂತ; ರೋಗಿ; ಕರಿಯ; ಕೊಳಕ ಮುಂ.

ತದ್ಧಿತಾಂತ ನಾಮಗಳು

ಇವುಗಳಲ್ಲಿ ಎರಡು ಪ್ರಕಾರಗಳಿವೆ.

೧. ನಾಮ ಅಥವಾ ವಿಶೇಷಣಗಳಿಗೆ ತನ, ಕೆ, ಇಪು, ಮೆ ಮೊದಲಾದ ಪ್ರತ್ಯಯಗಳು, ಸೇರಿ, ತದ್ಧಿತಾಂತ ಭಾವನಾಮಗಳು ಸಿದ್ಧವಾಗುತ್ತದೆ.

ಉದಾ : ಕಲಿತನ, ಚೆಲುವಿನ, ಪೆಂಪು, ಜಾಣ್ಮೆ ಮುಂ.

ಸಂಖ್ಯಾವಾಚಕಗಳ ಮೇಲೆ ಅನೆಯ ಪ್ರತ್ಯಯವು ಸೇರಿ ಕ್ರಮವಾಚಕ ತದ್ಧಿತಾಂತ ನಾಮಗಳಾಗುತ್ತವೆ.

ಉದಾ : ಐದನೆಯ, ಎಂಟನೆಯ ಮುಂ.

೨. ಇಗ, ಕಾರ, ಗಾರ, ಮೊದಲಾದ ಪ್ರತ್ಯಯಗಳು ಸೇರಿ, (ಶೀಲಗುಣ - ಉದ್ಯೋಗವಾಚಕ ತದ್ಧಿತಾಂತ ಭಾವನಾಮಗಳು ಸಿದ್ಧವಾಗುವುವು.

ಉದಾ : ಗಾಣಿಗ; ಅಂಗಡಿಕಾರ; ಮಾತಾಳಿ; ಜದಾಳಿ; ಮಡಿವಳ

ಸ್ತ್ರೀ ಪ್ರತ್ಯಯಗಳು

(i) ಇ, ಎ, ಇತಿ, ಗಿತ್ತಿ, ಸಾನಿ, ಳು, ಮತ್ತು ಣಿ ಮೊದಲಾದವು ಪ್ರತ್ಯಯಗಳು ಸೇರಿ ಸ್ತ್ರೀವಾಚಕ ತದ್ಧಿತನಾಮಗಳಾಗುವುವು.

ಉದಾ : ಅರಸಿ; ಕಕ್ಕಿ; ಹುಡುಗೆ; ಮುದುಕೆ; ಒಕ್ಕಲತಿ; ಬೀಗತಿ ಸೂಲಗಿತ್ತಿ; ದೊರೆಸಾನಿ; ಗೌಡಸಾನಿ; ಮನದನ್ನಳು, ಜಮೀನದಾರಳು; ಜಮೀನದಾರಿಣಿ ಮುಂ.

(ii) ಕಂನಾಡಿನಲ್ಲಿ ಹಿಂದಿನಿಂದಲೂ, ಗಂಡುಸರ ಹೆಸರುಗಳಿಗೆ ಲೆ, ವ್ವೆ, ಬೆ ಮೊದಲಾದ ಪ್ರತ್ಯಯಗಳನ್ನು ಸೇರಿಸಿ ಸ್ತ್ರೀವಾಚಕ ಶಬ್ದಗಳನ್ನು ಮಾಡಿಕೊಳ್ಳುತ್ತಿದ್ದುದು ಕಂಡಬರುತ್ತದೆ. ಈ ಪ್ರತ್ಯಯಗಳು ಅಲೆ, ಅಲ್ವೆ, ಅಬ್ಬೆ ಶಬ್ದಗಳ ಸಂಕ್ಷೇಪಗಳೆಂದು ಬೇರೆ ಹೇಳಬೇಕಾಗಿಲ್ಲ. ಸಾನಿ ಎಂಬುದರ ಸ್ವಾಮಿನಿಯ ಸಂಕ್ಷಿಪ್ತರೂಪ.

ಉದಾ : ಚಂದ-ಚಂದಲೆ
ಐಚ-ಐಚಲೆ
ಲಚ್ಚ-ಲಚ್ಚಲೆ
ಚಟ್ಟ-ಚಟ್ಟಲೆ
ಮಾಳ-ಮಾಳವ್ವೆ ಮಾಳಬ್ಬೆ ಮುಂ.

ಇದರಂತೆ ಸನ್ಮಾನಾರ್ಥದಲ್ಲಿ ಅಕ್ಕ, ಅಮ್ಮ, ಅಂಬೆ, ದೇವಿ ಮೊದಲಾದುವು ಸೇರುವುದು ಕಂಡುಬರುತ್ತದೆ.

ಉದಾ : ಮಾಯಕ್ಕ; ಮಹಾದೇವಿಯಕ್ಕ; ಕಾಳಮ್ಮ; ಬೊಪ್ಪಾದೇವಿ; ಬೊಂತಾದೇವಿ; ಚೆಂದಲಾಂಬೆ; ಜಕ್ಕಲಬ್ಬೆ; ಸುಗ್ಗಲದೇವಿ; ಲೋಕಲದೇವಿ; ಮಾಳಲದೇವಿ; ಚೆನ್ನಮಾಂಬೆ;
"ವೀರಮಾಂಬೆ, ಭದ್ರಮಾಂಬೆ ಎಂಬೀರ್ವ ಕನ್ಯಾ ರತ್ನಂಗಳ್."

-ಕೆಳದಿ ನೃಪವಿಜಯ.

ತದ್ಧಿತಾಂತ ಅವ್ಯಯಗಳು

(i) ಹೋಲಿಸುವಲ್ಲಿಯ ಮೊದಲಾದ ಕಡೆಗೆ ಬರುವ ಅಂತೆ, ಹಾಗೆ, ಒಲು (ಒತ್ ಓಲ್) ಮುಂತಾದುವು ಸೇರಿ ಆಗುವ ರೂಪಗಳು.

ಉದಾ : ತಾವರೆಯಂತೆ, ರಾಮನಹಾಗೆ, ಕೃಷ್ಣನವೊಲು ಮುಂ.

(ii) ಸಂಖ್ಯಾವಾಚಕಗಳ ಮೇಲೆ ಸಾರೆಯನ್ನು ಸೂಚಿಸುವುದಕ್ಕಾಗಿ ಬರುವ ಮೆ, ಪ್ರತ್ಯಯವು ಸೇರಿ ಆಗುವ ರೂಪಗಳು.

(iii) ಅನ್ನ, ಅನಕ, ತನ ಅಥವಾ ತನಕ, ವರೆಗೆ ಎಂಬ ಅವ್ಯಯರೂಪಗಳು.

ಉದಾ : ಬರುವನ್ನ, ಬರುವನಕ ಅಥವಾ ಬರುವತನಕ, ಬರುವವರೆಗೆ,

(iv) ಸಲುವಾಗಿ, ಓಸುಗ, ಓಸ್ಕರ ಎಂಬ ಅವ್ಯಯಗಳು

ಉದಾ : ನಾಡಿನ ಸಲುವಾಗಿ; ದೇವರಿಗೋಸುಗ; ಗೆಳೆಯನಿಗೋಸ್ಕರ; ಮುಂ.

(v) ಅದು ಇದು, ಎಂಬ ಸರ್ವನಾಮಗಳಿಂದ ಆದ ಕಾಲವಾಚಕ ಅಂದು, ಇಂದು ಮುಂತಾದ ಅವ್ಯಯಗಳು

೨೦. ಕೃತ್ತದ್ಧಿತ ಪ್ರಕರಣವು ಕಂನುಡಿಯಲ್ಲಿ ಸಂಸ್ಕೃತದಷ್ಟು ಚೊಕ್ಕಟವಾಗಿಲ್ಲ. ಇದರ ಅರ್ಥವು ಕಂನುಡಿಯಲ್ಲಿ ಕೃದಂತ ಅಥವಾ ತದ್ಧಿತಗಳೇ ಇಲ್ಲವೆಂದಲ್ಲ. ಕಂನುಡಿಯಲ್ಲಿ ಕೃತ್ತದ್ಧಿತಗಳಿವೆ. ಆದರೆ, ಅವುಗಳಲ್ಲಿ ಕೆಲವು ಶುದ್ಧವಾದ ಕೃತ್ತದ್ಧಿತಾಂತನಾಮ ಮತ್ತು ಅವ್ಯಯಗಳನ್ನು ಬಿಟ್ಟರೆ, ಉಳಿದವುಗಳನ್ನು ಇನ್ನೊಂದು ಬಗೆಯಾಗಿ ವರ್ಗೀಕರಿಸುವುದು. ಹೆಚ್ಚು ಲೇಸು.

ಕೃದಂತಭಾವನಾಮಗಳೆಂಬ ಶಬ್ದಗಳನ್ನು ಆಧುನಿಕ ದೃಷ್ಟಿಯಿಂದ ವಿಚಾರಿಸಿದರೆ, ವಸ್ತುವಾಚಕ ಮತ್ತು ಭಾವವಾಚಕಗಳೆಂದು ಇನ್ನಿಷ್ಟು ತಿಳಿಯಾಗಿ ಬಿಡಿಸಿ ಹೇಳುವುದು ಅವಶ್ಯವಿದೆ. ಹಿಂದಿನವರ ಒಂದು ಕಲ್ಪನೆಯಂತೆ ಎಲ್ಲವುಗಳನ್ನೂ ಭಾವನಾಮಗಳೆಂದೇ ಹೇಳುವ ರೂಢಿಗೆ ಈಗಿನ ವಾಸ್ತವ ವಿಚಾರಸರಣಿಯು ಅಡ್ಡಬರುತ್ತದೆ. ಭಾವನೆಯಲ್ಲಿ ಅರಿತುಕೊಳ್ಳಬೇಕಾದ-ಕಣ್ಣಿಗೆ ಕಾಣದ (abstract) - ನಾಮಕ್ಕೆ ಭಾವನಾಮವೆಂಬುದು ಸರಿ ಮತ್ತು ಅದರಂತೆ ಕಣ್ಣಿಗೆ ಕಾಣುವ ನಾಮಗಳಿಗೆ ವಸ್ತುವಾಚಕ (concerete) ನಾಮಗಳೆಂದು ವಿಂಗಡಿಸಿ ಹೇಳುವುದೂ ತಕ್ಕುದಾಗಿದೆ. ಅಂಜಿಕೆ, ನಾಚಿಕೆ ಇವು ಭಾವನಾಮಗಳಾಗಬಹುದು; ಆದರೆ, ಅಡಿಗೆ ಆಟಿಗೆ ಮೊದಲಾದುವು ವಸ್ತುವಾಚಕ ಕೃದಂತನಾಮಗಳೆನಿಸುವುವು.

ಈ ಪ್ರತ್ಯಯಗಳನ್ನು ಈಗಿದ್ದುದಕ್ಕಿಂತಲೂ ಇನ್ನೊಂದು ಬಗೆಯಾಗಿ ವರ್ಗೀಕರಿಸಬೇಕೆನ್ನುವುದಕ್ಕೆ ಇನ್ನೂ ಒಂದೆರಡು ಕಾರಣಗಳಿವೆ:

(ಅ) ಕಂನುಡಿಯಲ್ಲಿ ಇವು ಕೃದಂತ. ಇವು ತದ್ಧಿತಗಳೆಂದು (ಕೆಲವನ್ನು ಬಿಟ್ಟರೆ) ಎಲ್ಲವುಗಳನ್ನೂ ನಿಃಸಂದಿಗ್ಧವಾಗಿ ಹೇಳುವುದಕ್ಕೆ ಸ್ವಲ್ಪ ತೊಂದರೆಯಾಗುತ್ತಿವೆ. ಹಲವು ಧಾತುಗಳು ಏನೂ ವಿಕಾರವಿಲ್ಲದೆ, ಪ್ರತ್ಯಯಗಳು ತಗುಲದೆ, ನಾಮಗಳಂತೆ ನಡೆಯುವುದರಿಂದ, ಧಾತುಸಾಧಿತ (ಕೃದಂತ ಆವುದು? ತದ್ಧಿತಾಂತ ಆವುದು? - ಎಂಬುದನ್ನು ನಿರ್ಧರಿಸುವುದು ತುಸು ಬಿಗಿ. ಏರು-ಏರಿಕೆ ಇದರಲ್ಲಿ ಏರಿಕೆಯೆಂಬುದು ಧಾತುಸಾಧಿತವೊ? ನಾಮ ಸಾಧಿತವೊ?

ಎಂಬುದು ಸ್ವಲ್ಪ ವಾದದ ವಿಷಯವಾಗುತ್ತದೆ. ಇಷ್ಟೊಂದು ವಾದವಿವಾದದ ಉದ್ದ ನೀರಿಗೆ ಹೋಗುವುದು ಜನಸಾಮಾನ್ಯಕ್ಕೆ ಆಗದಮಾತು.

(ಆ) ಅಲ್ಲದೆ, ಪ್ರತ್ಯಯಗಳ ಅನಿಶ್ಚಿತತೆಯೊಂದು ಬೇರೆ! ಸಂಸ್ಕೃತದಂತೆ ಕಂನುಡಿಯಲ್ಲಿ ಕೃತ್ಪ್ರತ್ಯಯಗಳೂ ತದ್ಧಿತ ಪ್ರತ್ಯಯಗಳೂ ಸ್ವತಂತ್ರವಿಲ್ಲ; ಧಾತುಸಾಧಿತಗಳಲ್ಲಿ ಉಪಯೋಗಿಸುವ ಪ್ರತ್ಯಯಗಳೇ ತದ್ಧಿತಗಳಲ್ಲಿಯೂ ಕಂಡುಬರುವುವು. ಪೆಡಪು, ಕಾಯ್ಪು ಎಂಬ ಧಾತುಸಾಧಿತಗಳಲ್ಲಿರುವ ಪು. ಪ್ರತ್ಯಯವೇ ಪೆಂಪು, ಕೂರ್ಪು, ಬಿಸುಪು ಮೊದಲಾದ ತದ್ಧಿತಾಂತಗಳಲ್ಲಿಯೂ ಕಣ್ಣಿಗೆ ಬೀಳುತ್ತಲಿದೆ. ಓದಾಳಿ, ಏರಾಳಿ ಎಂಬಲ್ಲಿ ಕೃತ್ಪ್ರತ್ಯಯವೆನಿಸಬಹುದಾದ ಆಳಿ ಪ್ರತ್ಯಯವು ಮಾತಾಳಿ, ಜೂದಾಳಿ ಮೊದಲಾದ ಕಡೆಗೆ ತದ್ಧಿತ ಪ್ರತ್ಯಯವಾಗಿರುವುದನ್ನು ಕಾಣಬಹುದು. ಈ ಬಗೆಯ ಅನಿಶ್ಚಿತತೆಯು ಇರುವುದರಿಂದ, ಕೇವಲ ಕೃತ್ತದ್ಧಿತಗಳಾಗಿರುವುದನ್ನು ಬಿಟ್ಟು ಉಳಿದವುಗಳನ್ನು ಮುಂದೆ ೫ನೆಯ ಪ್ರಕರಣದಲ್ಲಿ ತೋರಿಸಿದಂತೆ ಇನ್ನೊಂದು ತೆರದಿಂದ ವರ್ಗೀಕರಿಸಿದರೆ, ಕಂನುಡಿಯ ಘುಟ್ಟುಗುಣಕ್ಕೆ ಅನುಸರಿಸಿ ಅವುಗಳನ್ನು ವಿಂಗಡಿಸಿದಂತೆ ಆಗುವುದು.

ತತ್ಸಮ-ತದ್ಭವಗಳು

೨೧. ಆವುದೇ ಭಾಷೆಯ ಶಬ್ದಸಂಪತ್ತು ಬೆಳೆಯುವುದಕ್ಕೆ ಪರಭಾಷೆಗಳಿಂದ ಎತ್ತಿಕೊಂಡ ಶಬ್ದಗಳೂ ಎಷ್ಟೋ ಮಟ್ಟಿಗೆ ಕಾರಣವಾಗಿರುತ್ತವೆ. ಸ್ವಭಾಷೆಯೊಳಗಿನ ಸಿದ್ಧ ಮತ್ತು ಸಾಧಿತ ಶಬ್ದಗಳೊಡನೆ ಅನೇಕಾನೇಕ ಪರಕೀಯ ಶಬ್ದಗಳೂ ಸಹ ಕೂಡಿಕೊಂಡಿವೆಯೆಂಬುದರ ಅರಿವು ಜನಸಾಮಾನ್ಯರಿಗೆ ಇರುವುದಿಲ್ಲ. ಕಂನುಡಿಯಲ್ಲಿ ಈಗಾಗಲೆ ಕೂಡಿಕೊಂಡಿರುವ ಮತ್ತು ಕೂಡಿಕೊಳ್ಳುತ್ತಿರುವ ಪರಕೀಯ ಶಬ್ದಗಳನ್ನು ಕುರಿತು ಮೊದಲು ಸ್ವಲ್ಪ ಪರ್ಯಾಲೋಚಿಸಿ, ಬಳಿಕ ಕಂನುಡಿಯೊಳಗಿನ ಶಬ್ದ ಸಿದ್ಧಿಕ್ರಮದ ಹೆಚ್ಚಿನ ವಿವರಗಳನ್ನು ಅರಿತುಕೊಳ್ಳುವ.

೨೨. ಪರಭಾಷೆಯ ಶಬ್ದಗಳು ಬೆರೆತುಕೊಳ್ಳದ ಸೊಲ್ಲೆ, ಜಗತ್ತಿನಲ್ಲಿಲ್ಲ ಮಾತಿನಲ್ಲಿ-ಬರೆಹದಲ್ಲಿ ಪರಭಾಷೆಯ ಪದಗಳು ತೆರೆಪಿಲ್ಲದೆ ಸೇರಿಕೊಳ್ಳುವುದು ಹಾನಿಕರವಾಗಿದ್ದರೂ, ಪರಭಾಷೆಯ ಸಂಪರ್ಕವಿಲ್ಲದೆ ಭಾಷೆಯು ಬೆಳೆಯದು. ಪ್ರಪಂಚದಲ್ಲಿ ಒಬ್ಬರೊಬ್ಬರ ಪರಿಚಯ ಸಂಬಂಧ-ಆಘಾತಗಳಿಂದಲೆ ಜನಾಂಗಗಳಾಗಲಿ, ದೇಶಗಳಾಗಲಿ, ಭಾಷೆಗಳಾಗಲಿ ಬೆಳೆಯುತ್ತಿರುವುವು. ಆದುದರಿಂದ, ಪರಭಾಷೆಯ ಗಾಳಿಯೂ ತಮಗೆ ಸೋಂಕಬಾರದೆಂಬುದು, ಸೃಷ್ಟಿಯ ನಿಯಮಕ್ಕೆ ವಿಪರೀತವಾಗಿರುವ ಚಂಡಿತನ. ನಾವು ಬೇಡವೆಂದರೂ ಇದು ನಮ್ಮ ಬೆನ್ನು ಬಿಟ್ಟುದಲ್ಲ; ನಾವಿದನ್ನು ಬಿಡುವುದರಲ್ಲಿ ಬುದ್ಧಿವಂತಿಕೆಯೂ ಇಲ್ಲ. ಪರಭಾಷೆಯು ತನ್ನ ನೆರೆಹೊರೆಗೂ ಬೇಡವೆಂಬುದಕ್ಕಿಂತ ಪರಭಾಷೆಯ ಗೊಬ್ಬರಹಾಕಿ, ಕೃಷಿಮಾಡಿ, ತನ್ನ ನುಡಿಯ ಬಳ್ಳಿವಳ್ಳಿಯು ಹಬ್ಬಿಕೊಬ್ಬುವಂತೆ ಮಾಡಿಕೊಳ್ಳುವುದರಲ್ಲಿಯೇ ಜಾಣ್ಮೆಯಿದೆ.

೨೩. ಎರಡು ಭಾಷೆಗಳು ಬೆರೆತುಕೊಳ್ಳುವುದರಲ್ಲಿ ಕೆಲವೊಂದು ತರಗತಿಗಳಿವೆ. (ಅ) ಬರಿ ರಾಜಕೀಯ ಮತ್ತು ಸಾಂಸ್ಕೃತಿಕ ಸಂಬಂಧ ಅಥವಾ ವರ್ಚಸ್ಸಿನ ಮೂಲಕ ಭಾಷೆಗಳ ಮೇಲೆ ಆದ ಪರಿಣಾಮಗಳು ಬೇರೆ; (ಆ) ವಂಶಮಿಶ್ರಣದಿಂದಾದ ಪರಿಣಾಮಗಳು ಬೇರೆ. ಮೊದಲನೆಯದಕ್ಕಿಂತ ಎರಡನೆಯದು ಹೆಚ್ಚು ದೃಢವಾದುದು. ಆವುದೊಂದು ಭಾಷೆಯ ಮೇಲಾಗಿರುವ ಪರಭಾಷೆಯ ಪರಿಣಾಮಗಳ ಮೇಲಿಂದ ಅವೆರಡೂ ಭಾಷೆಯ ಮೇಲಾಗಿರುವ ಪರಭಾಷೆಯ ಪರಿಣಾಮಗಳ ಮೇಲಿಂದ ಅವೆರಡೂ ಜನಾಂಗಗಳಲ್ಲಿದ್ದ ಬಳಕೆಯ ಆಳವನ್ನು ಅಳೆಯಬಹುದು. ಇಂಗ್ಲಿಷು-ಕಂನುಡಿಗಳ ಸಂಬಂಧವು ಮೊದಲನೆಯ ಬಗೆಯದು; ಸಂಸ್ಕೃತ-ಕಂನುಡಿಗಳ ಕೂಟವು ಎರಡನೆಯ ಬಗೆಯದು.

೨೪. ಆವುದೊಂದು ಭಾಷೆಯಲ್ಲಿ ಪರಭಾಷೆಯ ಶಬ್ದಗಳು ಮೊಟ್ಟಮೊದಲು ತಲೆದೋರುವಾಗ, ಒಂದು ವಿಶೇಷವಾದ ನೋಟವು ಕಣ್ಣಿಗೆ ಬೀಳುತ್ತದೆ. ಒಂದೊಂದು ಭಾಷೆಗೂ ಒಂದೊಂದು ಉಚ್ಚಾರವೈಶಿಷ್ಟ್ಯವು ಇದ್ದೇ ಇದೆ. ಒಂದೊಂದು ಜನಾಂಗದ ಸೊಲ್ಲಿನ ಬಗೆಯೇ ಒಂದೊಂದು ತೆರ. ಪ್ರತಿಯೊಂದು ಭಾಷೆಯಲ್ಲಿಯೂ

ಕೆಲವೊಂದು ವಿಲಕ್ಷಣವಾದ ಉಚ್ಚಾರಗಳುಳ್ಳ ಅಕ್ಷರಗಳಿರುವುದುಂಟು. ಹೆರವರಿಗೆ ಅವನ್ನು ಸರಿಯಾಗಿ ಉಚ್ಚರಿಸುವುದಕ್ಕೆ ತುಂಬ ಕಷ್ಟ. ಆದುದರಿಂದ, ಇಂತಹ ವಿಲಕ್ಷಣ ಉಚ್ಚರಗಳುಳ್ಳ ಶಬ್ದಗಳನ್ನು ಹೆರವರಿಂದ ಎತ್ತಿಕೊಳ್ಳಬೇಕಾದಾಗ, ಮೊದಮೊದಲಿಗಂತೂ ಅವುಗಳಲ್ಲಿ ಮಾರ್ಪಾಡುಗಳಾಗುವುದು ಅನಿವಾರ್ಯ.

ಕಂನುಡಿಯಲ್ಲಿ ಒಂದು ಕಾಲಕ್ಕೆ ಮಹಾಪ್ರಾಣಗಳು (ಖ, ಘ, ಛ, ಝ ಮುಂತಾದುವು) ಇದ್ದಿಲ್ಲ; ಋ, ಇ, ಷ ಮೊದಲಾದ ಅಕ್ಷರಗಳಿದ್ದಿಲ್ಲ. ಆಗ ಸಂಸ್ಕೃತದಿಂದ ಕಂನುಡಿಯಲ್ಲಿ ಬಂದ ಮಹಾಪ್ರಾಣಾಕ್ಷರದ ಶಬ್ದಗಳು. ಕಂನಾಡ ಸೊಲ್ಲಿಗೆ ಸರಿಹೋಗುವಂತೆ ಬದಲಾವಣೆಗಳನ್ನು ಹೊಂದಲೇ ಬೇಕಲ್ಲವೆ! ಈಗ ಕಂನುಡಿಯಲ್ಲಿ ಬಂದ ಇಂಗ್ಲೀಷು ಹಾಗೂ ಇಂಗ್ಲೀಷಿನಲ್ಲಿ ಸೇರಿದ ದೇಶೀಯ ಶಬ್ದಗಳು ಹೊಂದುವ ಮಾರ್ಪಾಟುಗಳನ್ನು ಗಮನಿಸಿದರೆ, ಈ ಮಾತು ಇನ್ನಿಷ್ಟು ಸ್ಪಷ್ಟವಾಗುವುದು. 'High' ಇದನ್ನು ಕಂನುಡಿಯಿಂದ ಬರೆಯುವುದಾಗಲಿ ಹೇಳುವುದಾಗಲಿ ಬಲುಕಷ್ಟ. ಏಕೆಂದರೆ। ಇದಕ್ಕೆ ಸರಿಯಾದ ವರ್ಣವು ನಮ್ಮಲ್ಲಿಲ್ಲ. ಆದುದರಿಂದ 'ಹಾಯ್' ಅಥವಾ 'ಹೈ' ಇಲ್ಲವೆ 'ಹೈ' ಎಂದು ಒಂದೊಂದು ಬಗೆಯಿಂದ ಬರೆಯಬೇಕಾಗುವುದು. ಮೂಲಉಚ್ಚಾರಕ್ಕೆ ಸರಿಯಾದ ರೀತಿಯಿಂದ ಬರೆವುದಂತೂ ಅಸಾಧ್ಯ. ಇದರಂತೆಯೆ ನಮ್ಮ ದೇಶಭಾಷೆಗಳೊಳಗಿನ ತವರ್ಗವನ್ನು ಇಂಗ್ಲೀಷಿನಲ್ಲಿ ಬರೆಯಲಿಕ್ಕಾಗದೆ, ಟವರ್ಗದಿಂದಲೇ ಆ ಕೆಲಸವನ್ನು ನೆರವೇರಿಸಿಕೊಳ್ಳಬೇಕಾಗುವುದು. ತೀರ ಆರಂಭದಲ್ಲಿ, ಕನ್ನಡ-ಸಂಸ್ಕೃತಗಳ ನಡುವೆ ಸಹ ಇದೇ ಪರಿಸ್ಥಿತಿಯು ಇತ್ತು. ಆದುದರಿಂದಲೆ 'ತದ್ಭವ'ಗಳು ತಲೆದೋರಿದುವು.

"ವಿಕಾರವನ್ನು ಹೊಂದಿ ಕನ್ನಡದಲ್ಲಿ ಬಂದ ಸಂಸ್ಕೃತ ಶಬ್ದಗಳಿಗೆ ತದ್ಭವಗಳೆನ್ನುತ್ತಾರೆ." ಎಂದು ನಮ್ಮ ವ್ಯಾಕರಣಗಳು ಹೇಳುತ್ತವೆ. ಸಂಸ್ಕೃತ ಶಬ್ದಗಳು ವಿಕೃತವಾಗಿ, ಕೆಟ್ಟು ಕನ್ನಡದಲ್ಲಿ ಬಂದಿವೆಯೆಂದು ಹಲವರ ತಿಳಿವಳಿಕೆ. ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಬರುವ ಶಬ್ದವು ಮಾರ್ಪಡುವುದಕ್ಕೆ 'ವಿಕಾರ ಹೊಂದುವುದು' ಎಂದರೆ ಕೆಡುವುದು ಎಂದು ಅರ್ಥಮಾಡಿಕೊಳ್ಳುವುದೇ ತಪ್ಪು. ಮೇಲಣ ತದ್ಭವದ ವ್ಯಾಖ್ಯೆಯೊಳಗಿನ 'ವಿಕಾರ' ಎಂಬ ಶಬ್ದವು ಅಪಾರ್ಥಕಾರಕವಾಗಿದೆ. ಯಾವ ಭಾಷೆಯವರೇ ಆಗಲಿ, ಹೆರವರ ಭಾಷೆಯೊಳಗಿನ ಪದಗಳನ್ನು (ಎರವು ತಕ್ಕೊಳ್ಳುವಾಗ). ಕೆಡಿಸಿ ಉಚ್ಚರಿಸುವರು ಎಂಬ ಗ್ರಹಿಕೆಯೆ ಮೊದಲು ತಪ್ಪಾಗಿದೆ. 'ಧಾರವಾಡ'ವನ್ನು ಕೆಡಿಸಿ ನುಡಿಯಬೇಕೆಂದು ಅದನ್ನು (Dharwar) 'ಡಾರವಾರ್' ಮಾಡಿಕೊಂಡಿಲ್ಲ. ಇಂಗ್ಲೀಷ್ ಪದಗಳೊಡನೆ ಸರಿಹೊಂದಿಕೊಳ್ಳುವಾಗ ಧಾರವಾಡವು ತಾನಾಗಿಯೆ 'Dharwar' ಆಯಿತು. ಅದರಂತೆ, ಸಂಸ್ಕೃತ ಪದಗಳನ್ನು ವಿಕಾರವಾಗಿ ಉಚ್ಚರಿಸಬೇಕೆಂದು ಕನ್ನಡಿಗರು ಎಂದೂ ಇಚ್ಛಿಸಿಲ್ಲ. ಕನ್ನಡ ಬಾಯಿಂದ ಉಚ್ಚರಿಸುವಾಗ ಪರಭಾಷೆಯ ಪದಗಳು ಕೆಲವೊಂದು ಮಾರ್ಪಾಟಗಳನ್ನು ಹೊಂದಿದ ಶಬ್ದಗಳೇ ತದ್ಭವಗಳು.

ಹಿಂದಕ್ಕೆ ಕಂನಾಡಿನೊಡನೆ ಸಂಬಂಧವು ಬಂದ ಭಾಷೆಯು ಸಂಸ್ಕೃತವೊಂದೇ. ಆಮೇಲೆ ಮುಸಲ್ಮಾನಿ, ಪೋರ್ತುಗೀಜ್, ಇಂಗ್ಲೀಷ್ ಮೊದಲಾದ ಭಾಷೆಗಳ ಸಂಬಂಧವೂ ಉಂಟಾಗಿದೆ. ಇವುಗಳೊಳಗಿನ ಹಲವು ಶಬ್ದಗಳು, ಕಂನಾಡ ಸೊಲ್ಲಿಗೆ ಸರಿಹೋಗುವಂತೆ ಕೆಲವೊಂದು ಮಾರ್ಪಾಟುಗಳನ್ನು ಹೊಂದಿ ನಮ್ಮ ನುಡಿಯಲ್ಲಿ ಬಂದು ಸೇರಿಕೊಂಡಿವೆ. ಇವುಗಳ ಸಂಖ್ಯೆಯು ಸಂಸ್ಕೃತದಷ್ಟು ವಿಶೇಷವಾಗಿಲ್ಲವಾದರೂ, ತದ್ಭವಗಳ ವಿಚಾರ ಮಾಡುವಾಗ ಇವುಗಳನ್ನು ಲೆಕ್ಕಿಸದೆ ನಡೆಯದು. ನಮ್ಮ ನಾಗವರ್ಮ, ಕೇಶಿರಾಜರು ತಮ್ಮ ವ್ಯಾಕರಣಗಳನ್ನು ಬರೆದ ಕಾಲಕ್ಕೆ, ಕಂನುಡಿಯೊಡನೆ ಉರ್ದು ಮೊದಲಾದ ಭಾಷೆಗಳ ಸಂಬಂಧವು ಇನ್ನೂ ಬಂದಿರಲಿಲ್ಲ. ಆದುದರಿಂದ, ಸಂಸ್ಕೃತದ ತದ್ಭವಗಳನ್ನು ಮಾತ್ರ ಅವರು ಕೊಟ್ಟರು. ಈಗ ನಮ್ಮ ವ್ಯಾಕರಣವು ಅಪೂರ್ಣವಾಗಿ ಉಳಿಯಬಾರದಾಗಿದ್ದರೆ ಉರ್ದು ಇಂಗ್ಲೀಷ ಮೊದಲಾದ ಭಾಷೆಗಳಿಂದ ಬಂದು ಸೇರಿಕೊಂಡಿರುವ-ಸೇರಿಕೊಳ್ಳಲಿರುವ ತದ್ಭವಗಳ ವಿಚಾರವನ್ನು ಮಾಡುವುದು ಅಗತ್ಯದ ಕರ್ತವ್ಯವಾಗಿದೆ ಮತ್ತು ಈ ನುಡಿಗಳು ನಮ್ಮ ಭಾಷೆಯಲ್ಲಿ ಹೊಂದುತ್ತಲಿರುವ ಮಾರ್ಪಾಟುಗಳನ್ನು ನಿರೀಕ್ಷಿಸಿ, ಅವುಗಳ ಸಾಮಾನ್ಯ ನಿಯಮಗಳನ್ನು ಸಿದ್ಧಪಡಿಸುವುದೂ ಅವಶ್ಯವಾಗಿದೆ.

೨೫. ಒಂದೊಂದು ನಾಡಿನವರ ಮಾತಿನ ರೀತಿಯಲ್ಲಿ ಒಂದೊಂದು ವೈಶಿಷ್ಟ್ಯವಿರುತ್ತದೆ. ಆದರೆ, ಕನ್ನಡಿಗರಲ್ಲಿ ಮಾತ್ರ ತಮ್ಮ ನುಡಿಯ ಈ ವೈಶಿಷ್ಟ್ಯದ ಸರಿಯಾದ ಅರಿವು ಇದ್ದವರು ತೀರ ಕಡಮೆ. ಕನ್ನಡಿಗರು ತಮ್ಮ ಉಚ್ಚಾರ ವೈಶಿಷ್ಟ್ಯವನ್ನು ಕಾಯ್ದುಕೊಳ್ಳದೆ ಇದ್ದುದರಿಂದ ತಮ್ಮ ಭಾಷೆಗೆ ದೊಡ್ಡ ಹಾನಿಯುಂಟು ಮಾಡಿಕೊಂಡಿದ್ದಾರೆ. ಸಂಗೀತದಲ್ಲಿ ಅಪಶ್ರುತಿಯಾಗದಂತೆ ಹೇಗೆ ಎಚ್ಚರಪಟ್ಟುಕೊಳ್ಳುವುದುಂಟೊ ಹಾಗೆಯೆ ಕಂನಾಡ ಮಾತಿನಲ್ಲಿಯೂ ಅಪಸ್ವರವಾಗಬಾರದಾಗಿದ್ದರೆ ಕಂನುಡಿಯನ್ನು ಕಂನಾಡ ಬಾಯಿಂದಲೇ ಆಡಬೇಕೆಂಬ ನಿಶ್ಚಯವನ್ನು ಇಟ್ಟುಕೊಳ್ಳಬೇಕು.

ನಮ್ಮ ನೆರೆಹೊರೆಯ ಭಾಷೆಗಳ ಸೊಲ್ಲಿನ ರೀತಿಗಳಲ್ಲಿ ಕೆಲವೊಂದು ವೈಶಿಷ್ಟ್ಯಗಳಿವೆ. ಕಂನಾಡಿಗರು 'ನಳ' ಎಂದುಚ್ಚರಿಸುವರು. ಮರ್‍ಹಾಟಿ ಬಾಯಿಗೆ 'ಕಕ್ಕ' ಶಬ್ದವನ್ನು ಉಚ್ಚರಿಸುವುದಕ್ಕಾಗದೆ ಅದು ಅವರಲ್ಲಿ 'ಕಾಕಾ' ಆಯಿತು. 'ಎರಡು' ತೆಲುಗಿನ ಸೊಲ್ಲಿನಲ್ಲಿ 'ರೆಂಡು' ಆಗುವುದು; 'ಕಿವಿ'ಯು 'ಚೆವಿ' ಎಂದು ರೂಪುಗೊಳ್ಳುವುದು. ನಾವು 'ಅಡಿಗಡಿಗೆ' ಎಂಬುದನ್ನು ತಮಿಳರು 'ಅಡಿಕ್ಕಡಿ' ಎಂದು ನುಡಿಯುವರು.

ಸಾಮಾನ್ಯವಾಗಿ ಕಂನುಡಿಯ ಬಿಡಿಬಿಡಿಯಾದ ನುಡಿಗಳಲ್ಲಿ ಮೊದಲಕ್ಕರದ ಮೇಲೆ ಆಘಾತವನ್ನಿತ್ತು ಮಾತನಾಡುವ ರೂಢಿಯು ಕಂಡುಬರುತ್ತದೆ. ಅದರಿಂದ ಅಚ್ಚ ಕಂನುಡಿಯಲ್ಲಿ ಎರಡು, ಹೆಚ್ಚಾದರೆ ಮೂರು ಅಕ್ಕರದ ಮಾತುಗಳೇ ಹೆಚ್ಚು. ಮೊದಲಕ್ಕರದ ಮೇಲೆ ಆಘಾತವನ್ನು ಕೊಟ್ಟರೆ, ಅನೇಕ ಅಕ್ಕರದ ಶಬ್ದಗಳನ್ನು ಉಚ್ಚರಿಸುವುದಕ್ಕಾಗುವುದಿಲ್ಲ. 'ದಿವಸ' 'ದಿವ್ಸ' 'ಕೆಲಸ' 'ಕೆಲ್ಸ' ಎಂದು ಮುಂತಾಗಿ ನಮ್ಮ ಹಳ್ಳಿಗಳ ಗೌಡರ ಬರೆಹಗಳಲ್ಲಿ ಕಾಣಬರುವುದಕ್ಕೆ ಇದೇ ಕಾರಣ. ನುಡಿಯೊಳಗೆ ಅಕ್ಷರಗಳು ಹೆಚ್ಚಾದ ಹಾಗೆ ಮೊದಲಕ್ಕರದ ಮೇಲಣ ಆಘಾತದ ಜೋರು ಕಡಿಮೆಯಾಗುವುದು. 'ಕೆಂಪುಕುದುರೆ' ಎಂಬಲ್ಲಿ, ಮೊದಲಕ್ಕರದ ಮೇಲೆ ಆಘಾತ ಕೊಟ್ಟು ಹೇಳಿದರೆ ಕೆಂಗುದುರೆ' ಎಂದಾಗುವುದು. ಆದರು, ಸಾಮಾಜಿಕ ಪದಗಳಲ್ಲೆಲ್ಲ ಮೊದಲಕ್ಕರದ ಮೇಲಣ ಆಘಾತವು ಶಿಥಿಲವಾಗುವುದು ಅನಿವಾರ್ಯ. ಸಾಮಾಜಿಕ ಶಬ್ದವು ಎರಡು-ಮೂರಕ್ಕಿಂತ ಹೆಚ್ಚು ಅಕ್ಷರಗಳುಳ್ಳದಾಗುವುದೇ ಇದಕ್ಕೆ ಮೂಲಕಾರಣ.

ಮೊದಲಕ್ಕರವು ಸಂಯುಕ್ತವಾಗಿದ್ದರೆ ಅದನ್ನು ಅಚ್ಚ ಕಂನಾಡ ಬಾಯಿಂದ ಸೊಲ್ಲಿಸುವುದೇ ಅಸಾಧ್ಯ ಮೊದಲಿಗೆ ಒತ್ತಕ್ಕರವಿರುವ ಅಚ್ಚ ಕಂನುಡಿಯ ಮಾತುಗಳೇ ಇಲ್ಲ. ಮೊದಲು ಸಂಯುಕ್ತಾಕ್ಷರವಿರುವ ಸಂಸ್ಕೃತ ಮತ್ತು ಇಂಗ್ಲೀಷಿನೊಳಗಿನ ಶಬ್ದಗಳು ಕನ್ನಡದಲ್ಲಿ ತಟ್ಟನೆ ಮಾರ್ಪಡುತ್ತಿರುವುದಕ್ಕೆ ಇದೇ ಕಾರಣವು. 'ಸ್ತಂಭ=ಕಂಬ' 'ಸ್ಕೂಲು=ಇಸ್ಕೂಲು' ಎಂಬೀ ಬಗೆಯ ಹಲವು ಉದಾಹರಣೆಗಳನ್ನು ಇದಕ್ಕೆ ಕೊಡಬಹುದು.

ಬಹಳ ದಿನಗಳಿಂದ ಕಷ್ಟಪಟ್ಟು ಕಂನುಡಿಯಲ್ಲಿ ಮಹಾಪ್ರಾಣಗಳನ್ನು ತಂದುದಾಯಿತು. ನಡುವೆ ಸಂಯುಕ್ತಾಕ್ಷಗಳಿದ್ದರೆ-ಸ್ವಲ್ಪ ಬಿಗಿಯಾಗಿದ್ದರೂ-ಉಚ್ಚರಿಸುವುದನ್ನು ಕಲಿತುದಾಯಿತು. ಆದರೆ, ಮೊದಲಿಗೆ ಸಂಯುಕ್ತಾಕ್ಷರವಿದ್ದರೆ ಅದನ್ನು ಉಚ್ಚರಿಸುವುದು ಮಾತ್ರ ಇನ್ನೂ ಗಡುಚಾಗಿದೆ. 'ವ್ಯರ್ಥ'ವನ್ನು 'ವರ್ಥ'ವೆಂದೂ 'ವ್ಯವಸ್ಥೆ'ಯನ್ನು 'ವೆವಸ್ಥೆ' ಎಂದೂ ಬರೆಯುವುದನ್ನು ಈಗಲೂ ಕಾಣಬಹುದು.

೨೬. ನಮ್ಮ ಸಾಹಿತ್ಯದಲ್ಲಿ ಕಣ್ಣಿಗೆ ಬೀಳುವ ತದ್ಭವಗಳೆಲ್ಲ ನಿಜವಾದುವುಗಳಲ್ಲ:

(i) ನಿಜವಾಗಿ ಕನ್ನಡ ಬಾಯಿಗೆ ಸರಿಹೊಂದದಿದ್ದರೆ ಮಾತ್ರ ಸಂಸ್ಕೃತ ಶಬ್ದಗಳನ್ನು ನಾವು ಮಾರ್ಪಡಿಸಿಕೊಳ್ಳಬೇಕು. ಕನ್ನಡ ಬಾಯಿಗೆ ಸರಿಹೋಗುವ ಸಂಸ್ಕೃತ ಶಬ್ದಗಳಿಗೆ "ಸಮಸಂಸ್ಕೃತ"ಗಳೆಂದು ಪ್ರಾಚೀನರು ಬಹಳ ಸೊಗಸಾದ ಹೆಸರನ್ನಿಟ್ಟಿರುವರು. ಈ "ಸಮಸಂಸ್ಕೃತಗಳಿಗೇ ಮುಂದೆ ತತ್ಸಮಗಳೆಂಬ ಹೆಸರು ದೊರೆತು, ಅದು ಈಗಲೂ ಪ್ರಚಾರದಲ್ಲಿದೆ. ಕನ್ನಡದಂತೆಯೆ ಉಚ್ಚಾರಪದ್ಧತಿಯುಳ್ಳ- ಎಂದರೆ ಕಂನಾಡ ಸೊಲ್ಲಿನಲ್ಲಿ ಒಂದುಗೂಡಲು ಅದಾವ ತೊಂದರೆಯೂ ಇಲ್ಲದ 'ಸಮಸಂಸ್ಕೃತ' ಶಬ್ದಗಳನ್ನು ಮಾರ್ಪಡಿಸಿಕೊಂಡು, ಅವುಗಳ ತದ್ಭವಗಳನ್ನು ಮಾಡಿಕೊಳ್ಳುವುದು ಅನಾವಶ್ಯಕ. ಕಾಮ=ಕಾವ, ಕಮಲ=ಕಮಳ, ಎಂಬೀ ಬಗೆಯವೆಲ್ಲ ಅನಾವಶ್ಯಕವಾದ ತದ್ಭವಗಳೇ ಸರಿ.

(ii) ಇನ್ನು ಕೆಲವು ಅಸ್ವಾಭಾವಿಕವಾದ ತದ್ಭವಗಳಾಗಿವೆ. ಅಚ್ಚ ಕಂನಾಡ ಜನರಾಡುವ ಮಾತುಗಳಿಂದ ತದ್ಭವಗಳನ್ನು ಆಯ್ದುಕೊಂಡು. ಅವುಗಳ ಮೇಲಿಂದಲೇ ಎಲ್ಲ ತದ್ಭವಗಳ ಕಟ್ಟು-ಕಟ್ಟಳೆಗಳನ್ನು ಮಾಡಿಕೊಂಡಂತೆ ಕಾಣುವುದಿಲ್ಲ. ವ್ಯಾಕರಣಗಳಲ್ಲಿ ಕಾಣಬರುವ ಎಷ್ಟೋ ತದ್ಭವಗಳಿಗೂ ಜನಸಾಮಾನ್ಯರ ಮಾತಿನಲ್ಲಿ ಕೇಳಿಬರುವ ಅವೇ ರೂಪಗಳಿಗೂ ತುಂಬ ವ್ಯತ್ಯಾಸವುಂಟು. ವಿಧಿ=ಬಿದಿ ಎಂದು ವ್ಯಾಕರಣ ಹೇಳಿದರೆ, ಜನರ ಮಾತಿನಲ್ಲಿ ಅದು 'ಇದಿ'ಯಾಗಿದೆ. ಸುಖ=ಸೊಗವೆಂದು ವ್ಯಾಕರಣ; ಜನರಾಡುವುದು 'ಸುಕ' ಎಂದು. ಪಂಪನಲ್ಲಿ ಕೂಡ 'ಸುಕ' ಎಂಬ ಪ್ರಯೋಗವೇ ಸಿಕ್ಕುತ್ತದೆ. (೧-೧೪೦)

೨೭. ಪರಭಾಷೆಯನ್ನು ಅಭ್ಯಾಸ ಮಾಡಿದವರಿಗೆ ಆ ಭಾಷೆಯೊಳಗಿನ ಶಬ್ದಗಳನ್ನು ಶಕ್ಯವಿದ್ದಷ್ಟು ಪ್ರಯತ್ನಪಟ್ಟು-ಮೂಲ ಉಚ್ಚಾರಕ್ಕೆ ಸಮಿ-ಸಮೀಪವಾಗಿಯೇ ಹೇಳಬೇಕು, ಬರೆಯಬೇಕು; ಎಂಬ ಹಂಬಲವಿರುವುದು ಸ್ವಾಭಾವಿಕ. ಆ ಭಾಷೆಯ ವಿಷಯಕ್ಕೆ ಪ್ರೀತಿ-ಪೂಜ್ಯ ಬುದ್ಧಿಗಳಿದ್ದರಂತೂ ಮಾತೇ ಮುಗಿಯಿತು. ಆ ಭಾಷೆಯ ಶಬ್ದಗಳನ್ನು ಸ್ವಲ್ಪವೂ ಬದಲಿಸಿಕೊಳ್ಳಲು ಅವರ ಮನಸ್ಸು ಒಪ್ಪದು. ಆ ಮೂಲ ಶಬ್ದಗಳನ್ನು 'ವಿಕಾರ' ಗೊಳಿಸುವುದು ಪಾಪವೆಂಬ ಭಾವನೆಯು ಅವರಲ್ಲಿ ತಲೆದೋರುವುದು. ನಮ್ಮಲ್ಲಿ ತದ್ಭವಗಳ ವಿಷಯಕ್ಕೆ ಅನಾದರವಿರುವುದಕ್ಕೂ ಶುದ್ಧ ಸಂಸ್ಕೃತ ಶಬ್ದಗಳಿಗೆ ಇಷ್ಟೊಂದು ಇಂಬು ದೊರೆತುದಕ್ಕೂ ಇದೇ ಕಾರಣ. ಅನೇಕ ಶತಮಾನಗಳ ತಿಕ್ಕಾಟದ ತರುವಾಯ ಕಂನುಡಿಯು ಮೂಲ ದ್ರಾವಿಡದಿಂದ ಸ್ವತಂತ್ರವಾಗಿ ತನ್ನದೊಂದು ವೈಶಿಷ್ಟ್ಯವನ್ನು ಸಂಪಾದಿಸಿಕೊಂಡಿತು.

ಕಂನುಡಿಯನ್ನು ಕಂನಾಡ ಬಾಯಿಂದಲೇ ಆಡಬೇಕಷ್ಟೇ? ಒಂದು ಭಾಷೆಯನ್ನು ಆಡುವಾಗ ಮತ್ತೊಂದು ಭಾಷೆಯ ಸೊಲ್ಲು ನಡುವೆ ಅನಾವಶ್ಯಕವಾಗಿ ಬಂದುಬಿಟ್ಟರೆ, ಅದು ಸಾಮಾನ್ಯವಾಗಿ ಅಪಶ್ರುತಿ ಎನಿಸುವುದು. ಕಂನುಡಿಯಲ್ಲಿ ಬರುವ ಇಂಗ್ಲಿಷ್, ಹಿಂದಿ, ಮರಾಠಿ ಮೊದಲಾದ ಭಾಷೆಗಳ ಶಬ್ದಗಳನ್ನು ಅವುಗಳ ಮೂಲ ಉಚ್ಚಾರಗಳಿಗೆ ಹೊಂದಿಕೆಯಾಗುವಂತೆ ಹೇಳಲು ಪ್ರಯತ್ನ ಪಟ್ಟರೆ; ಕಂನುಡಿಯ ವೈಶಿಷ್ಟ್ಯವೇ ಹಾಳಾಗಿ ಹೋಗುವುದು! ಒಮ್ಮೆ ಇಂಗ್ಲೀಷು, ಒಮ್ಮೆ ಹಿಂದಿ, ಒಮ್ಮೆ ಕಂನುಡಿ ಹೇಗೆ ಒಂದೇ ವಾಕ್ಯದೊಳಗಿನ ಬೇರೆ ಬೇರೆ ಶಬ್ದಗಳನ್ನು ಬೇರೆಬೇರೆ ಸೊಲ್ಲಿನಿಂದ ಆಡಲಿಕ್ಕೆ ಪ್ರಯತ್ನಿಸುವಲ್ಲಿ, ಗಂಟಲಿನ ನರಗಳಿಗೂ ನಾಲಗೆಗೂ ಚೆನ್ನಾಗಿ ವ್ಯಾಯಾಮವು ದೊರೆತು, ಅವು ಬಲವುಳ್ಳವುಗಳಾಗುವ ಅಲ್ಪಸ್ವಲ್ಪ ಲಾಭವು ಇದರಲ್ಲಿ ಇರಬಹುದು. ಆದರೆ, ತಮಗೆ ಅಶಿಕ್ಷಿತರೆಂದೆನಿಸಿಕೊಳ್ಳಬೇಕಾದೀತೆಂಬ ಹೆದರಿಕೆಯಿಂದ ಪರಭಾಷೆಯ ಶಬ್ದಗಳ ಶುದ್ಧ ಉಚ್ಚಾರದ ಗಡಿಬಿಡಿಯಲ್ಲಿ ನಾವು ಕಂನುಡಿಗೆ ಕೇಡು ಬಗೆಯುತ್ತಿರುವೆವೆಂಬುದನ್ನು ಮರೆಯಲಾಗದು. ತೀರ ಆವಶ್ಯಕ ವಾದಂತಹ ಕೆಲವು ಅಪವಾದಾತ್ಮಕ ಪ್ರಸಂಗಗಳನ್ನು ಬಿಟ್ಟರೆ, ಸಾಮಾನ್ಯವಾಗಿ ನಾವು ಕಂನುಡಿಯಲ್ಲಿ ಬರುವ ಆವುದೇ ಭಾಷೆಯ ಪದಗಳನ್ನು ಕಂನಾಡ ಸೊಲ್ಲಿನಿಂದಲೇ ಹೇಳುವ ನಿಶ್ಚಯವುಳ್ಳವರಾಗಲಿಕ್ಕೇ ಬೇಕು. ಕಂನುಡಿ ಶ್ರುತಿಗೆ-ಚೆಂದಕ್ಕೆ-ಒಂದುಗೂಡುವಂತೆ ಅವುಗಳನ್ನು ಬೆದರದೆ ಬೆಚ್ಚದೆ ಮಾರ್ಪಡಿಸಿಕೊಳ್ಳಲು ಸಿದ್ಧರಾಗಬೇಕು. ತದ್ಭವಗಳು ನಮ್ಮ ಭಾಷೆಯ ಉಚ್ಚಾರದ ವೈಶಿಷ್ಟ್ಯವನ್ನು ತೋರುವ ಶಬ್ದಗಳೇ ಹೊರತು ಅವು 'ವಿಕಾರ' 'ವಿಕೃತಿ'ಗಳಲ್ಲ. ತದ್ಭವಗಳಿಗಾಗಿ ನಾವು ಎಳ್ಳಷ್ಟೂ ನಾಚಿಕೊಳ್ಳಬೇಕಾದುದಿಲ್ಲ. ತದ್ಭವಗಳೆಂದರೆ ಪರಭಾಷೆಯ ಶಬ್ದಗಳ ಕಂನುಡೀಕರಣ. 'ಕಂನಾಡ ಉಚ್ಚಾರಪದ್ಧತಿಗೆ ಸರಿಹೋಗುವಂತೆ ಪರಭಾಷೆಯ ಪದಗಳನ್ನು ಅವಶ್ಯವಿದ್ದಲ್ಲಿ ಮಾರ್ಪಡಿಸಿಕೊಂಡು ಶಕ್ಯವಿದ್ದಷ್ಟು ಪ್ರಯತ್ನದಿಂದ ಕಂನಾಡ ಸೊಲ್ಲಿನಿಂದಲೇ ಯಾವಾಗಲೂ ಮಾತನಾಡುವ ಎಚ್ಚರಪಡಬೇಕು.

ತದ್ಭವ-ತತ್ಸಮಗಳಪಟ್ಟಿ

ಕಂನುಡಿಯಲ್ಲಿ ಸಂಸ್ಕೃತದಷ್ಟು ಬೇರೆ ಇನ್ನಾವ ಭಾಷೆಯ ಶಬ್ದಗಳೂ ಸೇರಿಕೊಂಡಿಲ್ಲ. ಯಾವುದೇ ಭಾಷೆಯ ಪದಗಳು ಸಂಸ್ಕೃತದಷ್ಟು ಹೆಚ್ಚಾಗಿಲ್ಲವಾದರೂ ತಕ್ಕಮಟ್ಟಿಗೆ ಇವೆ. ಇಂಗ್ಲಿಷ್ ಶಬ್ದಗಳೂ ಮೆಲ್ಲಮೆಲ್ಲನೆ

ತಮ್ಮ ಬಳಗವನ್ನು ಬಳೆಯಿಸಿಕೊಳ್ಳುತ್ತಲಿರುವುವು. ನಡುವೆ ಸ್ವಲ್ಪಕಾಲ ಕನ್ನಡದೊಡನೆ ಸಂಬಂಧವು ಬಂದ ಪೋರ್ತುಗೀಸರು ಸಹ ಕಂನಾಡ ದೇವಿಗೆ ತಮ್ಮ ಕಿರಿಯ ಕಾಣಿಕೆಯನ್ನು ಸಲ್ಲಿಸಿದ್ದಾರೆ.

ಸಂಸ್ಕೃತ

೨೮. ಕಂನುಡಿಯಲ್ಲಿ ಒಂದುಗೂಡಿರುವ 'ಸಮಸಂಸ್ಕೃತ'ಗಳನ್ನು ಬೇರ್ಪಡಿಸಿ ಎಣಿಕೆ ಮಾಡಿಹೇಳುವುದು ಸಹ ಅಸಾಧ್ಯ. 'ಸಮಸಂಸ್ಕೃತ'ಗಳಲ್ಲದೆ' ಕಂನುಡಿಯಲ್ಲಿ ಸೇರಿಕೊಂಡಿರುವ ಇನ್ನೊಂದು ಬಗೆಯ ಸಂಸ್ಕೃತ ಪದಗಳಿವೆ: ಕಂನಾಡ ಬಾಯಿಗೆ ಸರಿಹೋಗುವಂತೆ ಕೆಲವು ಬದಲಾವಣೆಗಳನ್ನು ಹೊಂದಿರುವುದರಿಂದ ಇವುಗಳ ಮೂಲರೂಪಗಳನ್ನು ಅರಿತುಕೊಳ್ಳುವುದಕ್ಕೆ ಎಷ್ಟೋ ಸಾರೆ ಸ್ವಲ್ಪ ಗಡುಚಾಗುವುದು. ಇಂತಹ ಕೆಲವು ತದ್ಭವ ತತ್ಸಮಗಳನ್ನು ಕೆಳಗಿನ ಪಟ್ಟಿಯಲ್ಲಿ ವಿವರಿಸಲಾಗಿದೆ.

ಸಂಸ್ಕೃತೋದ್ಭವವಾದ ಹಲವು ಪದಗಳ ಕಂನುಡೀಕರಣವು ಎರಡು ಬಗೆಯಿಂದ ಆಗುತ್ತಿದ್ದಿತೆಂದು ಕಂಡುಬರುತ್ತದೆ. ಉದಾಹರಣಾರ್ಥವಾಗಿ 'ಕಾರ್ಯ' ಎಂಬುದನ್ನೇ ತಕ್ಕೊಳ್ಳಬಹುದು. ಇದು 'ಕಜ್ಜ' ಮತ್ತು 'ಕಾರಿಯ' ಎಂದು ಎರಡು ತೆರನಾಗಿ ನಮ್ಮಲ್ಲಿ ಕಾಣಿಸಿಕೊಳ್ಳುತ್ತದೆ. ಇದರಂತೆ ರಾಜ-ರಾಯ, ಅರಸ: ಆರ್ಯ-ಅಜ್ಜ, ಅರಿಯ; ಮುಂ. ಇದರಲ್ಲಿ ಮೊದಲನೆಯದು 'ಪ್ರಾಕೃತ' ಭಾಷೆಗೆ ಸರಿಹೋಗುವುದು; ಎರಡನೆಯದು ಕಂದಮಿಳ ವರ್ಗದ ಮಾತಿಗೆ ಹೊಂದಿಕೆಯಾಗುವುದು. ತಮಿಳಿನಲ್ಲಿ ಈ ಬಗೆಯಾಗಿಯೆ ಸಂಸ್ಕೃತವನ್ನು ಮಾರ್ಪಡಿಸಿಕೊಳ್ಳುವ ರೀತಿಯು ಈಗಲೂ ಉಳಿದಿದೆ. ಕಂನುಡಿಯು ಮಾತ್ರ ಪ್ರಾಕೃತದ ಕಡೆಗೆ ಒಲೆದಿತು.

ಅಕ್ಕರ	-	ಅಕ್ಷರ	ಕಜ್ಜ	-	ಕಾರ್ಯ
ಅಗುಳಿ	-	ಅರ್ಗಲ	ಗಜೆ	-	ಗದೆ
ಅಚ್ಚರಿ	-	ಆಶ್ಚರ್ಯ	ಗಾದೆ	-	ಗಾಥಾ
ಅಂಚೆ	-	ಹಂಸ	ಅಚ್ಚಿ	-	ಅಕ್ಷಿ
ಅಮರ್ದು	-	ಅಮೃತ	ಅಚ್ಚು	-	ಅಕ್ಷ
ಅಸುಗೆ	-	ಅಶೋಕ	ಅಜ್ಜ	-	ಆರ್ಯ
ಆಗಸ	-	ಆಕಾಶ	ಜವ	-	ಯಮ
ಆಣೆ	-	ಆಜ್ಞೆ	ಜೌವನ	-	ಯೌವನ
ಉಂಗುಟ	-	ಅಂಗುಷ್ಠ	ಜೂದು	-	ದ್ಯೂತ
ಉಜ್ಜುಗ	-	ಉದ್ಯೋಗ	ತದಿಗೆ	-	ತೃತೀಯ
ಕಕ್ಕಸ	-	ಕರ್ಕಶ	ತಿಸುಳಿ	-	ತ್ರಿಶೂಲಿ
ಕಬ್ಬ	-	ಕಾವ್ಯ	ದಾಡೆ	-	ದಂಷ್ಟ್ರಾ
ಕವುಂಗ	-	ಕ್ರಮುಕ	ದೋಣಿ	-	ದ್ರೋಣಿ
ಕಳಸ	-	ಕಲಶ	ನಚ್ಚಣಿ	-	ನರ್ತಕೀ
ಕಾವ	-	ಕಾಮ	ನಿಚ್ಚವ	-	ನಿಶ್ಚಯ
ಕುವರ	-	ಕುಮಾರ	ನಿಚ್ಚ	-	ನಿತ್ಯ
ಕುಂಬಳ	-	ಕೂಷ್ಮಾಂಡ	ನಿದ್ದೆ	-	ನಿದ್ರಾ
ಕೊಂಚೆ	-	ಕ್ರೌಂಚ	ಜುಗ	-	ಯುಗ

ಹಸು	-	ಪಶು	ಸಂತೆ	-	ಸಂಸ್ಥಾ
ಪಟಿಕ	-	ಸ್ಪಟಿಕ	ಸನ್ನೆ	-	ಸಂಜ್ಞಾ
ಪಾಡಿವ	-	ಪ್ರತಿಪತ್	ಸರ	-	ಸ್ವರ
ಪಾವುಗೆ (ಹಾವುಗೆ)	-	ಪಾದುಕಾ	ಬಗ್ಗ	-	ವ್ಯಾಗ್ರ
ಪಿಟ್ಟು (ಹಿಟ್ಟು)	-	ಪಿಷ್ಟ	ಬಣ್ಣ	-	ವರ್ಣ
ಪಿಸುಣ	-	ಪೈಶೂನ್ಯ	ಬತ್ತಿ	-	ವರ್ತಿ
ಪೆಕ್ಕಣ	-	ಪ್ರೇಕ್ಷಣ	ಬವಣೆ	-	ಭ್ರಮಣ
ಗಾವಿಲ	-	ಗ್ರಾಮೀಣ	ಬಸದಿ	-	ವಸತಿ
ಗೋಡೆ	-	ಕುಡ್ಯ	ಬಸವ	-	ವೃಷಭ
ಚಾಗ	-	ತ್ಯಾಗ	ಬಾವಿ	-	ವಾಪಿ
ಚಿಪ್ಪಿಗ	-	ಶಿಲ್ಪಿಕ	ಬಿಜ್ಜೆ	-	ವಿದ್ಯೆ
ಚೌಕ	-	ಚತುಷ್ಕ	ಬಿಸ್ತರ	-	ವಿಸ್ತಾರ
ಚೌತಿ	-	ಚತುರ್ಥಿ	ಬಿನ್ನಣ	-	ವಿಜ್ಞಾನ
ಜಗುನೆ	-	ಯಮುನಾ	ಸಗ್ಗ	-	ಸ್ವರ್ಗ
ಜಂತ	-	ದಂತ	ಸಕ್ಕಿ	-	ಸಾಕ್ಷಿ
ಜಂತ್ರ	-	ಯಂತ್ರ	ಸಾಣೆ	-	ಶಾಣ
ಜನ್ನ	-	ಯಜ್ಞ	ಸಿಂಗ	-	ಸಿಂಹ
ಬಿನ್ನಪ	-	ವಿಜ್ಞಾಪನ	ಸಿರಿ	-	ಶ್ರೀ
ಬೆತ್ತ	-	ವೇತ್ರ	ಸೀರೆ	-	ಚೀರ
ಬೇಹಾರ	-	ವ್ಯವಹಾರ	ಸೆಜ್ಜೆ	-	ಶಯ್ಯಾ
ಬೊಮ್ಮ	-	ಬ್ರಹ್ಮ	ಸೊಗ	-	ಸುಖ
ಮಸಣ	-	ಸ್ಮಶಾನ	ಸೊಬಗು	-	ಸೌಭಾಗ್ಯ
ಮಾನಿಸ	-	ಮಾನುಷ	ಸೊಸೆ	-	ಸ್ನುಷಾ
ಮಿಳ್ತು	-	ಮೃತ್ಯು	ಹಗ್ಗ	-	ಪ್ರಗ್ರಹ
ಮೊಗ	-	ಮುಖ	ಹದಿಬದೆ	-	ಪತಿವ್ರತಾ
ರಕ್ಕಸ	-	ರಾಕ್ಷಸ	ಹರಣ	-	ಪ್ರಾಣ
ಲಕುಮಿ	-	ಲಕ್ಷ್ಮಿ	ಹರಯ	-	ಪ್ರಾಯ
ಸಕ್ಕದ	-	ಸಂಸ್ಕೃತ	ಹಲಗೆ	-	ಫಲಕ
ಸಂಕಲೆ	-	ಶೃಂಖಲಾ	ಹೋಳಿಗೆ	-	ಸ್ಫೋಟಕ

ಮುಸಲ್ಮಾನೀ ಶಬ್ದಗಳು

೨೯. ಕಂನಾಡಿಗರೊಡನೆ ಅರಬರ ಸಂಬಂಧವು ೮-೯ನೆಯ ಶತಮಾನದಿಂದಲೆ ಬಂದಿದೆ. ಕ್ರಿ.ಶ. ೮೧೫ರ ಸುಮಾರಿಗೆ ಆದ ಸುಲೈಮಾನನೆಂಬ ವರ್ತಕನು, ರಾಷ್ಟ್ರಕೂಟ ನೃಪತುಂಗದೇವನು ಜಗದ್ವಿಖ್ಯಾತನಾದ ಸಾಮ್ರಾಟನೆಂದು ವರ್ಣಿಸಿದ್ದಾನೆ. ಗುಜರಾತಿನಲ್ಲಿ ಆಳಿದ ಚಾಲುಕ್ಯರು ಮತ್ತು ರಾಷ್ಟ್ರಕೂಟರಿಗೆ ಸಿಂಧದತ್ತಣಿಂದ ಒಳನುಗ್ಗುತ್ತಿದ್ದ ಮುಸಲ್ಮಾನರ ಧಾಳಿಗಳನ್ನು ಆಗಾಗ ಎದುರಿಸಬೇಕಾಗುತ್ತಿತ್ತು.

ಆದರೂ ಮುಸಲ್ಮಾನೀ ಶಬ್ದಗಳು ಕಂನುಡಿಯಲ್ಲಿ ವಿಶೇಷವಾಗಿ ಸೇರಲಾರಂಭಿಸಿದುದು ೧೪ನೆಯ ಶತಮಾನದಿಂದ ಮುಂದೆ. ಅವುಗಳಲ್ಲಿ ಹಲವು ನಮ್ಮ ಮಾತಿನಲ್ಲಿ ತೀರ ಒಂದಗೂಡಿ ಹೋಗಿವೆ. ಅಂತಹ ಕೆಲವು ಮಹತ್ವದ ಶಬ್ದಗಳನ್ನು ಇಲ್ಲಿ ಕೊಟ್ಟಿದೆ.

ಹವೆ	-	ಹವಾ	ಮೇಜವಾನಿ	-	ಮೇಜಬಾನಿ
ಸಲಹೆ	-	ಸಲಾಹ	ಕಬೂಲ	-	ಕಬೂಲ್
ದುಂಬಾಲಬೀಳು	-	ದುಂಬಾಲ	ರಾಜೀ	-	ರಾಝೀ
ಸರಾಯಿ	-	ಷರಾಬ	ತಾರೀಖು	-	ತಾರೀಖ್
ತಯಾರು	-	ತಯ್ಯಾರ	ಬಾಕೀ	-	ಬಾಕೀ
ತಕರಾರು	-	ತಕರಾರ್	ಜಮೆ }	-	ಜಮಾ
ತರಕಾರಿ	-	ತರಕಾರೀ	ಜಮಾ }		
ತ್ರಾಸು	-	ತರಾಜೂ	ಖರ್ಚು	-	ಖರ್ಚ್
ಕಾಗದ	-	ಕಾಗಝ್	ಕಿಮ್ಮತ್ತು	-	ಕೀಮತ್
ಪರದೆ	-	ಪರದಾ	ಕಾಯಂ	-	ಕಾಯಿಮ್
ಕಚೇರಿ	-	ಕಚ್‌ಹರೀ	ಪರಿವೆ	-	ಪರ್‌ವಾಹ್
ಬಾದಾಮು	-	ಬಾದಾಮ್	ಜಮೀನು	-	ಝಮೀನ್
ಮುದ್ದತ್ತು	-	ಮುದತ್	ಶಿಕ್ಕಾ	-	ಸಿಕ್ಕಾ
ವಸೂಲು	-	ವಸೂಲ್	ಮೊಹರ್	-	ಮುಹರ್
ಬಾಜಾರ	-	ಬಾಝೂಲ್	ನಾಜೂಕ್	-	ನಾಝುಕ್
ಇಸಮು	-	ಇಸ್ಮ	ಹಾಸಲು	-	ಹಾಸೀಲ್
ಆಸಾಮಿ	-	ಆಸಾಮೀ	ದುರಸ್ತ	-	ದುರುಸತ್
ಮೈದಾನ	-	ಮೈದಾನ್	ಸಾಧಾ	-	ಸಾದಾ
ರೈತ	-	ರಇಯತ್	ಮುಲುಖು	-	ಮುಲ್ಕ್
ರುಮಾಲ	-	ರುಮಾಲ್	ಶಹರ	-	ಷಹ್ರ್
ಖಾತ್ರಿ	-	ಖಾತರೀ	ನಜರು	-	ನಝರ್
ಸುಮಾರು	-	ಷುಮಾರ್	ಹದು (ಸೀಮಾ)	-	ಹದ್ದ್
ಕಂದೀಲು	-	ಕಂದೀಲ್	ಶಿಫಾರಸು	-	ಸಿಫಾರಿಷ್
ಖುರ್ಚಿ	-	ಕುರ್ಸೀ	ವಸೀಲಿ (ಸಹಾಯ)	-	ಮಸೀಲಾ
ಮೇಜು	-	ಮೇಜ್			

ಕೆಲವು ಪೋರ್ಚುಗೀಸ್ ಶಬ್ದಗಳು

೩೦. ವಿಜಯನಗರದ ಚಕ್ರವರ್ತಿಗಳ ಕಾಲದಲ್ಲಿ ಪೋರ್ಚುಗೀಸರ ಸಂಬಂಧವು ಕಂನಾಡಿಗರೊಡನೆ ವಿಶೇಷವಾಗಿ ಬಂತು. ಮುಂದೆ ಕೆಲವರುಷಗಳಲ್ಲಿ ಆ ಸಂಬಂಧವು ತಪ್ಪಿದರೂ ಈ ಸ್ವಲ್ಪ ಕಾಲದಲ್ಲಿ ಸಹ ಪೋರ್ಚುಗೀಸ್‌ರಿಂದ ಕಂನುಡಿಯಲ್ಲಿ ಬಂದ ಕೆಲವು ಶಬ್ದಗಳುಂಟು. ಅವುಗಳಲ್ಲಿ ಕೆಲವನ್ನು ಇಲ್ಲಿ ಕೊಡಲಾಗಿದೆ.

ಪಗಾರ; ಚಾವಿ; ಹಾಪೂಸ (ಅಪೂಸ), ಪಾಯರಿ, ಫರ್ನಾದ (ಇವೆಲ್ಲ ಮಾವಿನ ಹಣ್ಣಿನ ಪ್ರಕಾರಗಳು); ಬಟಾಟೆ; ಕಾಡತೂಸ; ಅನನಸ; ರತ್ತಲ; ಬಿಸ್ಕೂಟ; ಬಂಬ್; ಕೋಬಿ; ಇಸ್ತ್ರಿ; ಲಿಲಾವು; ಪೊಪ್ಪಾಯಿ (ಹಣ್ಣು); ಪೀಪೆ.

ಇಂಗ್ಲೀಷ ಶಬ್ದಗಳು

೩೧. ಆಡಳಿತದೊಳಗಿನ ಮಾತುಗಳು, ಆಧುನಿಕ ಶಾಸ್ತ್ರೀಯ ಪರಿಭಾಷೆ, ಹೊಸ ಹೊಸ ಸೊಗಸಿನ ಸರಕುಗಳ ಹೆಸರುಗಳು ಕಂನುಡಿಯಲ್ಲಿ ಅನಿವಾರ್ಯವಾಗಿ ಸೇರಿಕೊಳ್ಳುತ್ತಲಿವೆ. ತಟ್ಟನೆ, ಅವುಗಳಿಗೆ ಪ್ರತಿಶಬ್ದಗಳನ್ನು ಹೇಳುವುದು ದುಸ್ತರ; ಹಾಗೆ ಯಾರಾದರೂ ಹೇಳಿದರೂ ಅದು ಎಲ್ಲರ ಒಪ್ಪಿಗೆಯನ್ನು ಪಡೆಯುವುದಕ್ಕೆ ಕಾಲಾವಧಿ ಬೇಕು. ಅಲ್ಲಿಯ ವರೆಗೆ ದಿನದ ವ್ಯವಹಾರಗಳು ನಿಲ್ಲುವುದು ಸಾಧ್ಯವಿಲ್ಲ. ಇದರಿಂದ ಅನೇಕ ಇಂಗ್ಲೀಷ್ ಶಬ್ದಗಳು ಇದ್ದಕ್ಕಿಂದ್ದಂತೆ ನಮ್ಮ ಭಾಷೆಯಲ್ಲಿ ಹೊಕ್ಕುಬಿಡುತ್ತಲಿವೆ. ಆದರೆ, ಇವೆಲ್ಲವುಗಳಿಗೂ ಸಾಹಿತ್ಯದಲ್ಲಿ ಎಂದೂ ಸ್ಥಾನವು ದೊರೆಯಲಾರದು. ಆದರೂ ಹಲವು ಶಬ್ದಗಳು ಒಂದಿಲ್ಲೊಂದು ಬಗೆಯಿಂದ ಕಂನಾಡ ನುಡಿಯೊಡನೆ ಒಂದುಗೂಡುತ್ತಲಿರುವುದನ್ನು ಕಾಣಬಹುದು.

ಕಂತ್ರಾಟ	-	Contract	ಟೇಸನ್ನ	-	Station
ಆಸ್ಪತ್ರಿ	-	Hospital	ಕಂದೀಲು	-	Candle
ಮಾಸ್ತರ ಮೇಷ್ಟ್ರು	-	Master	ಲಾಟನ್ನು ಲಾಂದ್ರು	-	Lantern
ಇಸ್ಕೂಲು	-	School	ಬಾಟ್ಲಿ	-	Bottle
ಗಟಾ	-	Guttur			

ನುಡಿಯ ಗುಟ್ಟು

೩೨. ನಮ್ಮ ವ್ಯಾಕರಣಗಳಲ್ಲಿ ಕೊಟ್ಟಿರುವ ಕೃದಂತ, ತದ್ಧಿತ, ಸಮಾಸ ಮತ್ತು ತತ್ಸಮ-ತದ್ಭವಗಳು ಇಷ್ಟರಿಂದಲೆ ನುಡಿಯ ನೆಲೆಯನ್ನು ಸಂಪೂರ್ಣವಾಗಿ ಕಂಡುಹಿಡಿಯಲಿಕ್ಕೆ ಆಗುವುದಿಲ್ಲ. ಉದಾಹರಣಾರ್ಥವಾಗಿ: ಗೆಳೆಯನೆಂಬುದು ಗೆಣೆಯನೆಂದಾಯ್ತು. ಗೆಳೆಯನೆಂಬುದಕ್ಕಿಂತ ಬೇರೆ ಅರ್ಥವನ್ನು ಪಡೆಯಿತು. ಇದರಂತೆ ಎಣ್ಣೆ, ಹೊನ್ನು (ನಾಣ್ಯ) ಮುಂತಾದ ಹಲವು ನುಡಿಗಳ ಹುಟ್ಟಿನ ಗುಟ್ಟು. ಈ ವರೆಗೆ ವಿವರಿಸಿದ ಆವ ಬಗೆಯಿಂದಲೂ ಗೊತ್ತಾಗುವುದು ಸಾಧ್ಯವಿಲ್ಲ. ಆದುದರಿಂದ, ಇದಕ್ಕೂ ಕೆಲವು ಬೇರೆ ಹೆಚ್ಚಿನ ಸಂಗತಿಗಳನ್ನು ಅರಿತುಕೊಳ್ಳುವುದು ಅವಶ್ಯವಾಗಿದೆ.

೩೩. ನುಡಿಯು ಹೇಗೆ ಹುಟ್ಟಿರಬಹುದೆಂಬ ಬಗ್ಗೆ ಈ ವರೆಗೆ ಹಲವರು ಹಲವು ತೆರನಾಗಿ ತರ್ಕಿಸಿದ್ದಾರೆ. ಕಡುಜಾಣರೆಂದು ಹೆಸರಾದ ಹಲವು ನುಡಿಗಳ ಬಲ್ಲಿದರು ಇಷ್ಟುದಿನ ಕಷ್ಟಪಟ್ಟರೂ ನುಡಿಯು ಹೀಗೆ ಹುಟ್ಟಿರಲಿಕ್ಕಿಲ್ಲವೆಂದು ಹೇಳುವುದಕ್ಕೆ ಸಮರ್ಥರಾಗಿರುವರೆ ಹೊರತು. ಹೀಗಿಯೆ ಹುಟ್ಟಿರಬೇಕೆಂದು ಎದೆತಟ್ಟಿ ಹೇಳುವ ಧೈರ್ಯವನ್ನು ಮಾಡಿದವರು ಕಡಿಮೆ. ನುಡಿಯನ್ನು ದೇವರು ಹುಟ್ಟಿಸಿದನೆಂದು ಕೆಲರು: ಆದರೆ ಇದು ಸಂದಿಗ್ಧಾರ್ಥವುಳ್ಳ ಮಾತು. 'ಈ ಜಗತ್ತಿನಲ್ಲಿ ಆಗುಹೋಗುವುದೆಲ್ಲವೂ ಆತನಿಂದಲೇ' ಎಂಬ ಆಧ್ಯಾತ್ಮಿಕ ಅರ್ಥದಿಂದ ಮೇಲಣ ಮಾತನ್ನು ಹೇಳಿದರೆ ಸರಿ; 'ಆಗಲ್ಲಿ' ಎಂದು ಸುಮ್ಮನಿರಬಹುದು. ಆದರೆ, ದೇವರೆಂಬ ಒಂದು ವ್ಯಕ್ತಿಯು ಬಂದು, ಇಲ್ಲಿ ಭಾಷೆಯನ್ನು ರಚಿಸಿ, ಕೋಶಗಳನ್ನು ಬರೆದಿಟ್ಟು ಹೋದನೆಂಬ ಈ ಬಗೆಯ ಆವುದೊಂದು ಮರುಳುತನದ ನಂಬುಗೆಯು ಯಾರಲ್ಲಾದರೂ ಇದ್ದರೆ ಅದು ಶುದ್ಧ ಹುಚ್ಚು. ಇದನ್ನು ಅಲ್ಲಗಳೆಯುವುದಕ್ಕೆ ಬೇರೆ ಪ್ರಮಾಣಗಳೇ ಬೇಕಿಲ್ಲ.

ನಮ್ಮ ಪೂರ್ವಜರು ಹಲವರು ಸೇರಿ ಭಾಷೆಯನ್ನು ರಚಿಸಿದರೆಂದು ಇನ್ನೊಂದು ಮತ. ಭಾಷೆಯನ್ನು ರಚಿಸುವುದಕ್ಕಾಗಿ ಕೂಡಿದ್ದ ಆ ಮಹಾಜನರು ಮಾತನಾಡಿದ ಭಾಷೆ ಯಾವುದಿರಬಹುದು? ತಮಗೆ ಭಾಷೆಯಿಲ್ಲದ್ದರಿಂದ ಅದನ್ನು ರಚಿಸಲಿಕ್ಕೆ ಅವರು ಕೂಡಿದ್ದರೆ, ವಿಚಾರವಿನಿಮಯವನ್ನು ಮಾಡಿದ್ದು ಹೇಗೆ? ಭಾಷೆಯೆ ಇಲ್ಲದ ಆ ಕಾಲದಲ್ಲಿ "ಭಾಷೆಯನ್ನು ರಚಿಸಲಿಕ್ಕೆ ನಾವೆಲ್ಲ ಕೂಡುವುದು ಅವಶ್ಯ" ಎಂಬ ವಿಚಾರವು ಮನಸ್ಸಿನ ಬರುವುದು ಕೂಡ ಅಸಂಭವನೀಯ. ಆದಕಾರಣ ಇದೂ ಒಂದು ಬುಡವಿಲ್ಲದ ಬಾಯ್ಮಾತು.

೩೪. ನುಡಿಯ ಹುಟ್ಟನ್ನು ಕುರಿತು ಮೊತ್ತಮೊದಲು ಹೆಚ್ಚು ಸರಿಯಾದ ದಾರಿಯಲ್ಲಿ ವಿಚಾರಗಳನ್ನು ಪ್ರಕಟಿಸಿದವರಲ್ಲಿ ಭಾರತೀಯರೇ ಅಗ್ರಗಣ್ಯರು. ಈ ವಿಷಯಕ್ಕೆ ದೊರೆವ ಜಗತ್ತಿನಲ್ಲಿಯ ಅತಿ ಪ್ರಾಚೀನ ಗ್ರಂಥವೆಂದರೆ ಯಾಸ್ಕಾಚಾರ್ಯರ 'ನಿರುಕ್ತ'. ಯಾಸ್ಕರು ತಮಗಿಂತಲೂ ಮೊದಲು ಆಗಿಹೋದ ಹಲವರ

ಹೆಸರುಗಳನ್ನು ಹೇಳುವರು. ಆದರೆ, ಅವರ ಗ್ರಂಥಗಳು ದೊರೆತಿಲ್ಲ. ಯಾಸ್ಕರ ಅಭಿಪ್ರಾಯದಂತೆ ಧಾತುಗಳೇ ಭಾಷೆಗೆ ಮೂಲ. ಪಶ್ಚಿಮ ದೇಶದ ವಿದ್ವಾಂಸರು ಸಹ ಮೊನ್ನೆಮೊನ್ನೆಯವರೆಗೆ ಇದೇ ಮತದವರಾಗಿದ್ದರು. ಆದರೆ, ಇದು ಸಂಪೂರ್ಣವಾದ ಸತ್ಯವಲ್ಲ. ಅವುದೇ ಭಾಷೆಯನ್ನು ವಿಮರ್ಶಿಸಿದರೂ ಅದರೊಳಗಿನ ಎಲ್ಲ ಶಬ್ದಗಳೂ ಧಾತುಸಾಧಿತಗಳಾಗಿಲ್ಲ. ಅಲ್ಲದೆ, ಮಾನವನ ವಿಚಾರವು ವಿಕಾಸಗೊಂಡುದು ಸ್ಥೂಲದಿಂದ ಸೂಕ್ಷ್ಮಕಡೆಗೆ : ವಸ್ತುವಾಚಕದಿಂದ ಭಾವವಾಚಕದ ಕಡೆಗೆ. ಮಾನವನು ತನ್ನಲ್ಲಿ ಅರಿವು ಮೂಡಿ ಬೆಳಗಲಾರಂಭಿಸಿದ ಬಳಿಕ ಇವು ನಾಮ, ಇವು ಧಾತು, ಇವು ವಿಶೇಷಣ ಎಂದು ಮುಂತಾಗಿ ತಾರತಮ್ಯಗಳನ್ನು ಕಲ್ಪಿಸಿಕೊಳ್ಳಲಾರಂಭಿಸಿದನು. ಆದರೆ, ಈ ಬಗೆಯ ವರ್ಗೀಕರಣದಿಂದಲೇ ಭಾಷೆಗೆ ಆರಂಭವಾಯಿತೆಂದು ಬಗೆಯುವುದು ತೀರ ತಿರುವು-ಮುರುವು.

ನಡುವೆ ಇನ್ನೂ ಕೆಲವು ವಾದಗಳು ಮುಂದೆ ಬಂದು ಈಗ ತಲೆ ಮರೆಯಿಸಿಕೊಂಡಿವೆ. 'ಗಣ್, ಗಣ್' ಎನ್ನುವುದರಿಂದ 'ಗಂಟೆ'; ಗಂಟೆ ತತ್ಸಮವೂ ಅಲ್ಲ, ತದ್ಭವವೂ ಅಲ್ಲ; ಅನುಕೃತಿ ಶಬ್ದ. ಗಣ್‌ಗಣ್ ಎಂಬ ನುಡಿಯು ಕೇಳಬಂದಿತು; ಮಾನವನು ತಾನು ಕಿವಿಯಿಂದ ಕೇಳಿದ ಶಬ್ದವನ್ನೇ ಮರಳಿ ಉಚ್ಚರಿಸಿ ಆ ಧ್ವನಿಮಾಡುವ ವಸ್ತುವನ್ನು ಅದೇ ಹೆಸರಿನಿಂದ ಕರೆದನು. ಆದುದರಿಂದ ಗಣ್‌ಗಣ್ ಎಂಬುದು ಗಂಟೆ; ಕಾಕಾ ಎಂಬುದು ಕಾಗೆ. ಕಿವಿಯಿಂದ ಕೇಳಿದುದನ್ನು ಮರಳಿ ಉಸಿರುವಾಗ ಒಂದೇ ಶಬ್ದದ ಬೇರೆ ಬೇರೆ ಜನಾಂಗದಲ್ಲಿ ಬೇರೆ ಬೇರೆ ರೂಪವನ್ನು ತಾಳಿದುದು ಕಂಡುಬರುತ್ತದೆ. ಇದಕ್ಕೆ ಅವರವರ ಸೊಲ್ಲಿನ ವಿಶಿಷ್ಟ ರೀತಿಯೇ ಕಾರಣ. ಗಂಟೆ, ಘಂಟಾ, Gong ಎಂದು ಮುಂತಾಗಿ ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಷ ಭಾಷೆಗಳಲ್ಲಿ ಅದರ ಭಿನ್ನರೂಪಗಳು ಕಾಣಿಸಿಕೊಳ್ಳುವುದು ಇದಕ್ಕಾಗಿಯೇ. ಇದೇ ಬಗೆಯ ಅನುಕೃತಿ ಶಬ್ದಗಳಿಂದಲೆ ಭಾಷೆಯಾಗಿದೆಯೆಂದು ಒಂದು ಪಂಥದವರ ಅಭಿಪ್ರಾಯ. ಇವರಿಗೆ 'ಘಂಟಾವಾದಿ'ಗಳೆಂದು ಹೆಸರು ಕೊಡಬಹುದು.

ಆದರೆ, ಇವರನ್ನು ಎದುರಿಸಿದ ಇನ್ನೊಂದು ಪಂಗಡವಿದೆ. ತನ್ನ ಸುಖ-ದುಃಖಗಳ ಕಾಲದಲ್ಲಿ ಮಾನವನ ಬಾಯಿಂದ ಹೊರಟ ಹರ್ಷ-ವಿಷಾದಾತ್ಮಕ ಸಹಜೋದ್ಗಾರಗಳಿಂದ ಭಾಷೆಯಾಗಿರುತ್ತದೆಯೆಂದು ಇವರ ವಾದ 'ಅಹಾ' 'ಅಬ್ಬಾ' 'ಅಪ್ಪಾ' 'ಉಸ್' ಎಂಬೀ ಬಗೆಯ ಮೂಲ ಶಬ್ದಗಳ ವಿಸ್ತಾರದಿಂದ ಭಾಷೆಯಾಯ್ತೆಂದು ಇವರ ಮತ. ಮನುಷ್ಯನು ಏನೊಂದು ಕೆಲಸ ಮಾಡುತ್ತಿರುವಾಗಲೂ ತನ್ನ ದಣಿವಾರಿಸಿಕೊಳ್ಳಲಿಕ್ಕಾಗಲಿ, ಕೆಲಸಕ್ಕೆ ಹುರುಪು ಬರಲೆಂದಾಗಲಿ ತಾನು ಕೈಕೊಂಡ ಕೆಲಸದೊಡನೆ, ಏನಾದರೂ ವಿಶೇಷ ಪ್ರಕಾರದ ಧ್ವನಿಯಿಂದ-ತನ್ನಷ್ಟಕ್ಕೆ ತಾನೆ-ಗುಣಗುಟ್ಟುತ್ತಿರುತ್ತಾನೆ. ತಮ್ಮ ಹೊಲ-ಮನೆಯ ಕೆಲಸಗಳಲ್ಲಿ ತೊಡಗಿದಾಗ ಹೀಗೆ ಏನಾದರೊಂದು* ನಾದದಲ್ಲಿ ಮೈಮರೆತುದನ್ನು ಕಾಣುವುದು ಅಪರೂಪವಲ್ಲ. ಹಂತಿಯ ಹಾಡುಗಳು, ಒನಕೆವಾಡುಗಳು ಈ ಬಗೆಯ ಕಾರ್ಯಾನುಕೂಲವಾದ ನಾದದಲ್ಲಿಯೆ ಹುಟ್ಟಿವೆ. ನುಡಿಯು ಮೈದೋರಿದುದೂ ಇದೇ ತೆರದಿಂದಲೆ ಎಂದು ಕೆಲವರ ವಿಚಾರ.

ಪಶುಪಕ್ಷಿಗಳ ಧ್ವನಿಗಳೇ ಮಾರ್ಪಟ್ಟು ಮುಂದೆ ಮಾನವನ ಮಾತಿಗೆ ತಳಹದಿಯಾಯ್ತೆಂಬ ಒಂದು ಪಂಥವಿದೆ. ಏಕೆಂದರೆ ಮನುಷ್ಯನೂ ಪ್ರಾಣಿವರ್ಗದಿಂದ ಹೊರಗಿನವನವಲ್ಲ. ತೀರ ಆರಂಭದಲ್ಲಿ ಅಂಗವಿಕ್ಷೇಪ, ಹಾವಭಾವಾದಿ ಚಟುವಟಿಕೆಗಳಿಲ್ಲದೆ ಬರಿ 'ಮಾತು' ಎಂಬುದು ಇರಲೇ ಇಲ್ಲ. ಅದು ಆಗಿನವರಿಗೆ ಸಾಧ್ಯವೂ ಇದ್ದಿಲ್ಲ. ಆದುದರಿಂದ, ಆರಂಭದ ಭಾಷೆಯಲ್ಲಿ ಕಾಣಿಸಿಕೊಂಡ ಶಬ್ದಗಳೆಲ್ಲವೂ 'ಕೃತಿ'ಯ ಮೇಲಿಂದ ಬಂದುವು ಇರಬೇಕೆಂದು ಇನ್ನು ಕೆಲವರ ಮತವಿದೆ.

---

* ಈ ಬಗೆಯ ನಾದಮೂಲವಾದ 'ಹುಟ್ಟುನುಡಿ'ಗಳ ಸಂಪೂರ್ಣ ವಿವರಣೆಯನ್ನು 'ಕಂನುಡಿಯ ಜೀವಾಳ' ಎಂಬ ಗ್ರಂಥದಲ್ಲಿ ಕಾಣಬಹುದು (ಸಂ)

ಮೇಲ್ಕಾಣಿಸಿದ ಪ್ರತಿಯೊಂದು ಬಗೆಯ ಎಷ್ಟೋಶಬ್ದಗಳು ಭಾಷೆಯಲ್ಲಿ ದೊರೆಯುವುದು ನಿಜ: ಆದರೆ ಕೇವಲ ಮೇಲಣ ಆವುದಾದರೊಂದೇ ಒಂದು ಬಗೆಯಿಂದ ಭಾಷೆಯಾಗಿರುವುದೆಂದು ಪ್ರತಿಪಾದಿಸುವುದು ಮಾತ್ರ ಸುಳ್ಳು.

೩೫. ನುಡಿಯು ಮೊದಲು ಹುಟ್ಟಿದುದು ಬುದ್ಧಿಯಿಂದಲ್ಲ: ಭಾವನೆಯಿಂದ. ಶ್ರೀ ಅರವಿಂದರು ಇದನ್ನೇ ವೈದಿಕ ಪರಿಭಾಷೆಯಲ್ಲಿ ಹೀಗೆ ಹೇಳುತ್ತಾರೆ: 'ಇಂದ್ರನಿಂದ ವಾಕ್ ಹುಟ್ಟಲಿಲ್ಲ: ಅಗ್ನಿ-ವಾಯುಗಳೇ ವಾಕ್ಕಿಗೆ ಕಾರಣರು.' ಮಾನವನು ಮೂಲದಲ್ಲಿ ಭಾವನಾಮಯನು. ಬುದ್ಧಿಯು ಕಾಲಕ್ರಮದಲ್ಲಿ ಉದಯವಾಯ್ತು. ಮಾನವನು ಕೇವಲ ವಿಚಾರಕ್ಕಾಗಿ abstract thinking ಭಾಷೆಯನ್ನು ಉಪಯೋಗಿಸಲಾರಂಭಿಸಿದುದು ತೀರ ಅರ್ವಾಚೀನ ಕಾಲದಿಂದ. ತನ್ನ ಮನಸ್ಸಿನಲ್ಲಿ ಅಡಿಗಡಿಗೆ ಮೂಡುವ ಭಾವನೆ-ಮನೋವಿಕಾರಗಳನ್ನು ಬಗೆಬಗೆಯ ಧ್ವನಿಗಳಿಂದ ವ್ಯಕ್ತಪಡಿಸಲು ಹವಣಿಸುತ್ತಿರುವಾಗ-ನಗೆ, ಹಾರಾಟ, ಚೀರಾಟಗಳಿಂದ ಲೀಲಾ-ವಿನೋದಗಳನ್ನು ನಡೆಯಿಸಿದಾಗ-ನುಡಿದುದು ಎಂದರೆ ಧ್ವನಿಮಾಡಿದುದೇ ಬರುಬರುತ್ತ ಒಂದು ನುಡಿ (ಭಾಷೆ)ಯಾಗಿ ಪರಿಣಮಿಸಿರಬೇಕೆಂದು ಬಲ್ಲಿದರು ತರ್ಕಿಸುತ್ತಿದ್ದಾರೆ. ನುಡಿ ಮಾಡಿದುದಲ್ಲ; ಆಡುತ್ತ ಆಡುತ್ತ ನುಡಿಯಾಯಿತು.

೩೬. ತೀರ ಆರಂಭಕಾಲದ ಭಾಷೆಯ ಸ್ವರೂಪಕ್ಕೂ ಈಗ ಜ್ಞಾತಕಾಲದಿಂದಿತ್ತ ಕಾಣಬರುವ ಭಾಷೆಯ ಸ್ವರೂಪಕ್ಕೂ ಇರುವ ಹೆಚ್ಚು ಕಡಮೆಗಳನ್ನು, ಬರಿ ಕಲ್ಪಿಸಿಕೊಳ್ಳಬೇಕೆಂದರೂ ಕಷ್ಟ. ಆದರು, ಆದೆಷ್ಟೋ ಪ್ರಯತ್ನದಿಂದ ವಿದ್ವಾಂಸರು ಇದನ್ನು ಕೆಲಮಟ್ಟಿಗೆ ಊಹಿಸಿಕೊಂಡಿದ್ದಾರೆ. ಆರಂಭದಲ್ಲಿ ಈಗಿನಂತಹ ಸ್ವಲ್ಪ ಅಕ್ಷರಗಳ ಕಿರುನುಡಿಗಳಿದ್ದಿಲ್ಲ. ಮೊದಲಿನವು ಹಲವಕ್ಕರಗಳ ಹಿರಿನುಡಿಗಳಿರಬೇಕೆಂಬ ಜಸ್ಪರ್‌ಸೆನ್ನರ ಸಿದ್ಧಾಂತವು ಈಗ ಸರ್ವಮಾನ್ಯವಾಗಿದೆ. ಇಂತಹ ಉದ್ದುದ್ದ ಶಬ್ದಗಳಿಗೆ ನಾವು 'ತಾರಗ ಬೀರಗ' (ತರಗಾ-ಬರಗಾ) ಜಾತಿಯ ನುಡಿಗಳೆಂದು ಕರೆಯಬಹುದಾಗಿದೆ. ಆ ನುಡಿಗಳಲ್ಲಿ ಆಳವಾದ ಅರ್ಥಶಕ್ತಿಗಿಂತ ಅಕ್ಷರಸಂಯೋಜನೆಯಿಂದುಂಟಾದ ಧ್ವನಿವಿಶೇಷವೇ ಮುಖ್ಯವಾಗಿತ್ತು. ಮನುಷ್ಯನ ಬಾಯಿಂದ ಹಿಗ್ಗು, ತಗ್ಗು ಸಿಟ್ಟು, ಸೆಡವುಗಳ ಹೊತ್ತಿನವಲ್ಲಿ ಸಹಜವಾಗಿಯೇ ಆ ಅವಸ್ಥೆಯ ಭಾವನೆಯನ್ನು ತಟ್ಟನೆ ತಿಳಿಸುವಂತಹ ಕೆಲವೊಂದು ಬಗೆಯ ಉಚ್ಚಾರಗಳು ಹೊರ ಬರುವುದುಂಟು. ಆ ಭಾವನೆಗನುಸರಿಸಿ ಮಿದುವಾದ ಅಥವಾ ಬಿರುಸಾದ ಅಕ್ಷರಗಳು ಆ ನುಡಿ (ಧ್ವನಿ)ಯಲ್ಲಿ ತಾವಾಗಿಯೆ ಸೇರಿಕೊಳ್ಳುವವು. ಆದುದರಿಂದಲೇ, ಆರಂಭದ ಭಾಷೆಯಲ್ಲಿ, ಉಚ್ಚರಿಸಿದ ಕೂಡಲೆ ಅರ್ಥಕೊಡುವ ಶಕ್ತಿಯಿದ್ದಿತೆಂದು ಎಲ್ಲ ವಿದ್ವಾಂಸರೂ ಒಂದೇ ಕೊರಲಿನಿಂದ ಹೇಳುತ್ತಿದ್ದಾರೆ.

ಭಾವನಾವಶನಾದ ಮನುಷ್ಯನ ಮಾತಿನೊಡನೆ ಆತನ ಮೋರೆಯ ಬಣ್ಣ, ಕಣ್ಣ ಹೊಳಪು, ಕೈ-ಮೈಯಲುಗಾಟ ಇವೆಲ್ಲವೂ, ಅವನ ಅಭಿಪ್ರಾಯವನ್ನು ಚೆನ್ನಾಗಿ ವ್ಯಕ್ತಪಡಿಸುವುದಕ್ಕೆ ತುಂಬ ನೆರವಾಗುತ್ತವೆಂಬುದು ಎಲ್ಲರಿಗೂ ಗೊತ್ತಿದ್ದ ಸಂಗತಿಯಾಗಿದೆ. ಮನುಷ್ಯನು ವಿಚಾರಪ್ರಧಾನವಾದ ಹಾಗೆ ಈ ಬಗೆಯ ಹಾವ-ಭಾವಗಳು ತೀರ ಕಡಿಮೆಯಾಗುತ್ತ ಹೋಗುವವು. ಮಾನವನು ಪ್ರಥಮಾವಸ್ಥೆಯಲ್ಲಿ ಕೇವಲ ಭಾವನಾವಶನಾದ ಪ್ರಾಣಿಯಾಗಿದ್ದನೆಂದು ಶಾಸ್ತ್ರಜ್ಞರು ಕಂಡುಹಿಡಿದಿದ್ದಾರೆ. ಮಾನವನ ಆರಂಭಕಾಲದ ಮಾತುಗಳಿಗೆ, ಆತನ ಆ ಸಮಯದ ಭಾವನೆಗಳನ್ನು ಅನುಸರಿಸಿ, ಸಹಜವಾಗಿ ಆಗುತ್ತಲಿದ್ದ ಮುಖವಿಕಾರಾದಿ ಹಾವ-ಭಾವಗಳು ತುಂಬ ಜೀವಾಳದಂತಿರುತ್ತಿದ್ದುವು. ಹಾವ-ಭಾವಗಳೂ ಒಂದು ಬಗೆಯ ಭಾಷೆಯೆ. ಶಬ್ದಗಳಿಗೆ ಒಂದೊಂದು ವಿಶಿಷ್ಟವಾದ ಅರ್ಥಶಕ್ತಿಯು ಬರುತ್ತ ಹೋದಹೋಗೆ ಮತ್ತು ಮಾನವನು ಭಾವನೆಗಳನ್ನು ಬುದ್ಧಿಯ ಅಂಕೆಯಲ್ಲಿ ಇರಿಸ ಹತ್ತಿದಹಾಗೆ, ಮಾತಿನಲ್ಲಿ ಹಾವ-ಭಾವಗಳು ಹಿಂದೆ ಬೀಳಲಾರಂಭಿಸಿದುವು. ಮುಂದೆ ಹಾವ-ಭಾವಗಳು ಒಂದು ಸ್ವತಂತ್ರ ಕಲಾಸ್ವರೂಪವನ್ನೇ ತಾಳಿ ನೃತ್ಯ, ಅಭಿನಯ, ನಾಟ್ಯಗಳ ರೂಪದಿಂದ ಈಗಲೂ ಮಾನವನ ಭಾವನೋದ್ದೀಪನ ಕಾರ್ಯಕ್ಕೆ ನೆರವಾಗುತ್ತಲಿವೆ. ಆರಂಭದಲ್ಲಿ ಮಾನವನು ತನ್ನ ಅಭಿಪ್ರಾಯವನ್ನು ಸೂಚಿಸುವುದಕ್ಕೆ ನೆಲದ ಮೇಲೆ ಅಥವಾ ಕಲ್ಲಮೇಲೆ ಪ್ರಾಣಿ-ವನಸ್ಪತಿಗಳ ಆಕಾರದ ಗುರುತಗಳನ್ನು ಬರೆಯುತ್ತಿದ್ದನು. ಇದರಲ್ಲಿಯೆ, ಮುಂದೆ ಎರಡು ಕವಲೊಡೆದು ಒಂದು ಚಿತ್ರಕಲೆಯಲ್ಲಿ, ಇನ್ನೊಂದು ಈಗಿನ ಲಿಪಿಗಳ ಸ್ವರೂಪದಲ್ಲಿ ಬೆಳೆದು ಬಂದಿದೆ.

ಆರಂಭದ ಭಾಷೆಯಲ್ಲಿ ಭಾವವಾಚಕ (abstract) ನಾಮಗಳು ದೊರೆಯಲಾರವು; ಎಲ್ಲವೂ ವಸ್ತುವಾಚಕಗಳೆ. ಇದರಂತೆ ಮರ, ಗಿಡ, ದನ, ಬಂಧುಗಳು ಮೊದಲಾದ ಬಗೆಯ ಸಾಮಾನ್ಯಾರ್ಥಕ (ಜಾತಿವಾಚಕ) ಶಬ್ದಗಳೂ ಇದ್ದಿಲ್ಲ. ಒಂದೊಂದಕ್ಕೂ ಒಂದೊಂದು ಬೇರೆ ಬೇರೆ ಶಬ್ದವೆ. ಕೆಲವು ಭಾಷೆಗಳಲ್ಲಿ ಕೆಂಪು ಆವು, ಕರಿ ಆವು, ಬಿಳಿ ಆವು ಎಂಬರ್ಥದ ಬೇರೆ ಬೇರೆ ಶಬ್ದಗಳಿದ್ದರೂ 'ಆಕಳು' ಎಂಬ ಸಾಮಾನ್ಯಾರ್ಥಕ ಶಬ್ದವು ಮಾತ್ರ ದೊರೆಯುವುದಿಲ್ಲವೆಂದು ಸಂಶೋಧಕರು ಕಂಡುಹಿಡಿದಿದ್ದಾರೆ. ಕಂನುಡಿಯಲ್ಲಿ ಅಣ್ಣ, ತಮ್ಮ, ಅಕ್ಕ, ತಂಗಿ ಎಂಬ ಪದಗಳಿವೆ; ಸಾಮಾನ್ಯಾರ್ಥದ ಬಂಧುವಾಚಕ (ಸೋದರ, ಸೋದರಿ ಎಂಬರ್ಥದ) ಶಬ್ದವೇ ಇಲ್ಲ. ಭಾಷೆಯ ಪ್ರಾಥಮಿಕ ಸ್ಥಿತಿಯಲ್ಲಿ ನಾಮಗಳೆ ವಿಶೇಷಣದ ಕೆಲಸವನ್ನು ನೆರವೇರಿಸುತ್ತಿದ್ದುವು. ಒಂದೇ ಶಬ್ದವೇ ಬೇಕಾದಾಗ ನಾಮವೂ, ಬೇಕಾದಾಗ ಧಾತುವೂ ಆಗಬಲ್ಲುದು. ಹಾಡು, ನಗು, ನುಡಿ ಮುಂತಾದುವು ಕಂನುಡಿಯಲ್ಲಿ ಈಗಲೂ ಉಂಟು. ಪ್ರತ್ಯಯಗಳೆಂಬುವು ಆಗ ಇರಲೇ ಇಲ್ಲ; ನುಡಿಯ ಮುಂದೆ ನುಡಿಯಗಳನ್ನಿಟ್ಟು 'ಕೂಡಿನ ಡಿ'ಗಳನ್ನು ಮಾಡಿಕೊಳ್ಳುವ ರೂಢಿಯೊಳಗಿಂದ ಮುಂದೆ 'ಪ್ರತ್ಯಯಗಳು' ತಲೆಯೆತ್ತಿದುವು, ಕಂನುಡಿಯಲ್ಲಿ ಇಂತಹ ಅವಶೇಷಗಳಿಗೆ ಕೊರತೆಯಿಲ್ಲ. 'ಬಂದವನು' ಇದರಲ್ಲಿ (ಬಂದ+ಅವನು) 'ಅವನು' ಎಂಬ ಪುಲ್ಲಿಂಗದ ಪ್ರತ್ಯಯವು ಸರ್ವನಾಮ. ಇದು ಒಂದು ಸ್ವತಂತ್ರ ಶಬ್ದವೇ ಆಗಿದೆ. ಇದರಂತೆಯೆ ಈಗ ಪ್ರತ್ಯಯಗಳೆನಿಸುವವೆಲ್ಲವೂ ಒಮ್ಮೆ ಒಂದೊಂದು ಸ್ವತಂತ್ರ ಶಬ್ದಗಳೇ ಆಗಿದ್ದುವೆಂದು, ಭಾಷಾಶಾಸ್ತ್ರಜ್ಞರು ಹಲವು ಭಾಷೆಗಳ ಸೂಕ್ಷ್ಮವಾದ ಅಭ್ಯಾಸದಿಂದ ನಿರ್ಧರಿಸಿದ್ದಾರೆ.

ಮನೋಭಾವನೆಗಳನ್ನು ವ್ಯಕ್ತಪಡಿಸಲು ಹೊರಗೆ ಬಂದ ನುಡಿ(ಧ್ವನಿ) ಯನ್ನು ಬೆಳೆಸುವ ಕೆಲಸಕ್ಕೆ, ಕಾಲಕ್ರಮದಲ್ಲಿ ಮಾನವನ ಬುದ್ಧಿಶಕ್ತಿಯೂ ನೆರವಾಗಲಾರಂಭಿಸಿತು. ಈ ಸ್ಥಿತಿಯಿಂದ ಮುಂದೆ ಭಾಷೆಯಲ್ಲಿದ್ದ ಸ್ವಾಭಾವಿಕವಾದ ಅರ್ಥದ್ಯೋತಶಕ್ತಿಯು ಕಡಿಮೆಯಾಗಹತ್ತಿ, ಕೃತ್ರಿಮತೆಯು ತಲೆದೋರಿತು. "ಸಂಕೇತವಶಾತ್ ಭಾಷಾ" ಎಂದು ಹೇಳುವುದಕ್ಕೆ ಇಂಬು ದೊರೆಯಿತು.

೩೭. ಮಾತಿನೊಳಗಿರುವ ಸವಿಯನ್ನು ಬಲ್ಲವರು, ನುಡಿಯನ್ನು ಜೇನಿನೊಡನೆ ಹೋಲಿಸಿದರೆ ಅದು ಬಹಳ ಸಮರ್ಪಕವಾದ ಉಪಮೆಯೆಂದು ರಸಿಕರು ಹಿಗ್ಗಿನಿಂದ ತಲೆದೂಗದೆ ಇರಲಾರರು. ನುಡಿಗೆ ಜೇನಿನ ಹೋಲಿಕೆಯು ಇನ್ನೊಂದು ಬಗೆಯಿಂದಲೂ ತೀರ ತಕ್ಕುದಾಗಿದೆ. ಜೇನಿನಂತೆ ನುಡಿಯು ಸಹ ಯಾರಾದರೂ ಒಬ್ಬರಿಂದಲೇ ಆದುದಲ್ಲ. ಹಲವು ತುಂಬಿಗಳು ತಂದು ತುಂಬಿದ ಮಧುವಿನಿಂದ ಜೇನು ಆಗಿದೆ. ನುಡಿಯುಂಟಾದುದೂ ಇದೇ ರೀತಿಯಿಂದ. ಜೇನಹುಟ್ಟಿನಲ್ಲಿ ಕಾಣುವ ಆ ರಚನಾಕೌಶಲದ ಅಂದವನ್ನು ನೋಡಿ, ಒಳ್ಳೊಳ್ಳೆಯ ಶಿಲ್ಪಕಾರರೂ ಬೆರಗಾಗದಿರಲಾರರು. ಆದರೆ, ಬಲ್ಲಿದರನ್ನೂ ಬೆರಗುಗೊಳಿಸುವ ಆ ಜೇನಹುಟ್ಟನ್ನು ಕಟ್ಟುವಾಗ ಅಥವಾ ಕಟ್ಟುವ ಮೊದಲು, ತುಂಬಿಗಳೆಲ್ಲ ಸೇರಿ ಇದನ್ನು ಹೀಗೆ ಹೀಗೆಯೆ ಕಟ್ಟಬೇಕೆಂಬ ಹಂಚಿಕೆ ಹಾಕಿದ್ದುಂಟೆ? ಎಲ್ಲವೂ ತಮ್ಮ ತಮ್ಮ ಅಂತಃಪ್ರೇರಣೆಯಿಂದ ಕೆಲಸ ಮಾಡುತ್ತಿರುವಾಗ ಸವಿಯಾದ ಹಾಗೂ ಸೊಗಸಾದ ಆ ಜೇನ್-ಕೊಡವು ಸಿದ್ಧವಾಗುವುದಿಲ್ಲವೇ? ನಾಡು-ನಾಡಿಗೆ ಒಂದೊಂದು 'ನುಡಿಜೇನು' ಕಟ್ಟಿದ ಬಗೆಯಾದರೂ ಹೀಗೆಯೇ ಇದೆ. ಒಬ್ಬೊಬ್ಬರು ಒಂದೊಂದು ದಿಕ್ಕಿನಿಂದ ಬೇರೆ ಬೇರೆ ಪ್ರಯತ್ನಗಳನ್ನು ನಡೆಯಿಸಿದ್ದರೂ, ಹದತಪ್ಪಿ ಕೆಡದಂತೆ ಅವೆಲ್ಲವುಗಳನ್ನೂ ಅಳವಡಿಸಿಕೊಂಡು ಬೆಳೆಯುವ ಹುಟ್ಟುಗುಣವು ಪ್ರತಿಯೊಂದು ಜೀವಂತ ಭಾಷೆಯಲ್ಲಿಯೂ ಇದ್ದೇ ಇದೆ.

೩೮. ಭಾಷೆಯಲ್ಲಿ ಯಾವಾಗಲೂ ಮೂಲಶಬ್ದಗಳ ಸಂಖ್ಯೆ ಕಡಿಮೆ : ಮೂಲಶಬ್ದಗಳ ಸಹಾಯದಿಂದ ಮಾಡಿಕೊಂಡ (ಸಾಧಿತ) ಶಬ್ದಗಳೆ ಹೆಚ್ಚು. ಮೂಲಶಬ್ದಗಳೆಂದು ಹೇಳುವ ನುಡಿಗಳನ್ನು ಅರೆದು ಒರೆದು ನೋಡಿದರೆ ಅವೂ ಕೂಡ ಒಂದು ಬಗೆಯಿಂದ ಸಾಧಿತ ಶಬ್ದಗಳೆಂದೆನ್ನಬೇಕಾಗುತ್ತದೆ. 'ತಿರಿ' ಇದು ಮೂಲಶಬ್ದವಷ್ಟೆ? ಆದರೆ, ಇದರ ಮೂಲವು 'ತಿರ್', 'ತಿಡ್' ಎಂದಿರುವುದು; ತಿರ್ರನೆ ತಿರುಗು ಎಂಬಲ್ಲಿ 'ತಿರ್' ಇದು ನಮಗೆ ಕಾಣಿಸಿಕೊಳ್ಳುವುದು: ಅಡ್ಡ 'ತಿಡ್' ಎಂಬುದು ಆಗಾಗ ನಮ್ಮ ಕಿವಿಗೆ ಬೀಳುತ್ತದೆ: ಇದರಂತೆ. ಕುಳ್ 'ಕುಡ್'

ಇದು ಕುಳ್ಳ 'ಕುಡು' (ಕೊಂಕು) ಇವೇ ಮೊದಲಾದ ನುಡಿಗಳ ಬಳಗದ ಮೂಲವಾಗಿದೆ. ಆದರೆ, ಇವು ಅವ್ಯವಹಾರ್ಯ ರೂಪಗಳು. ತಿರ್-ತಿಡ್, ಕುಳ್-ಕುಡ್, ಕೆನ್-(ಕೆಂಪು), ಬಿಳ್-(ಬಿಳಿ) ಮೊದಲಾದ ಈ ಬಗೆಯ ಪ್ರಾಥಮಿಕ ಸ್ವರೂಪಗಳಿಗೆ "ಶಬ್ದ ದ್ರವ್ಯ" ಅಥವಾ ಶಬ್ದಮೂಲ Word Stem ಎಂದು ಕರೆಯಬಹುದು. ಶಬ್ದದ್ರವ್ಯದಿಂದ ಮಾಡಿಕೊಂಡ ವ್ಯವಹಾರ್ಯ ರೂಪಗಳಿಗೆ ಮೂಲಶಬ್ದಗಳೆಂದು ಹೇಳುವುದು ಉಚಿತವಾಗಿದೆ.

೩೯. ಮೂಲನುಡಿಗಳಿಂದ ಹೊಸ ನುಡಿಗಳನ್ನು ಮಾಡಿಕೊಳ್ಳುವ ಹಲವು ಬಗೆಗಳನ್ನು ಕಾಣಬಹುದು. ಇವುಗಳಲ್ಲಿ ಸಮಾಸ, ಕೃದಂತ ಮತ್ತು ತದ್ಧಿತಾಂತಗಳ ವಿಚಾರವು ಈ ಮೊದಲೆ ಬಂದಿದೆ. ಅವುಗಳ ಇನ್ನೂ ಕೆಲವು ಪ್ರಕಾರಗಳುಂಟು.

(i) ಕೆಲವೊಂದು ಅಕ್ಷರಗಳು ಉಚ್ಚಾರದಲ್ಲಿ ವ್ಯತ್ಯಾಸ ಹೊಂದುವುದು ಎಲ್ಲ ನುಡಿಗಳಲ್ಲಿ ವಾಡಿಕೆಯಾಗಿದೆ. ಪ=ಹ, ಳ=ಣ ಮುಂತಾಗಿ ಬದಲಾವಣೆಗಳನ್ನು ಹೊಂದಿದ ಹಲವು ನುಡಿಗಳುಂಟು.

ಉದಾ : ಪಾಡು-ಹಾಡು
ನೊಳ-ನೊಣ;

ಹೀಗೆ ಬದಲಾದ ಅಕ್ಷರಗಳುಳ್ಳ ಹೊಸನುಡಿಯು-ಹಲವೆಡೆಗಳಲ್ಲಿ-ಕೇವಲ ಮೂಲಶಬ್ದದ ಅರ್ಥವನ್ನೇ ಸೂಚಿಸದೆ ಕೆಲವೊಂದು ಹೊಸ ಅರ್ಥವನ್ನು ಕೊಡುವುದು. ಕೆಳಗೆ ಕೊಟ್ಟ ಉದಾಹರಣೆಗಳಿಂದ ಈ ಮಾತಿನ ಮನವರಿಕೆಯಾಗದೆ ಇರಲಾರದು.

ಕುರಿ	- ಗುರಿ	ಜರಿ	- ಸರಿ
ಕೂಡು	- ಗೂಡು	ತಣೆ	- ದಣೆ
ಕೂಡಿಸು (ಜನವಸ್ತು)	- ಗೂಡಿಸು (ಕಸ ಮುಂ)	ತೊಡೆ	- ತೊಳೆ
ಕೀರು (ಸಿಟ್ಟಾಗು)	- ಚೀರು	ತೊಡಕು	- ತೊಡಗು
ಕಡೆ (ಕಡಿ)	- ಗಡಿ	ಪಸಿ (ಹಸಿ)	- ಬಸಿ (ಒಸರು)
ಕೆರೆ (ಧಾ)	- ಗೆರೆ (ನಾ.)	ಪಡೆ	- ಹಡೆ
ಕುಳ್ಳಿ (ಮಣ್ಣಿನ ಮಿಳ್ಳೆ)	- ಗುಳ್ಳೆ (ನೀರ ಮೇಲಣದು)	ಪುಡಿ	- ಹುಡಿ
ಕಣ್ಣು	- ಗಣ್ಣು	ಪೆರ್ಮೆ	- ಹೆಮ್ಮೆ
ಕಾಲಿ	- ಗಾಲಿ	ಪಣಜೆ (ಪಂಜೆ; ಹಣಜೆ)	- ಬಂಜೆ
ಕೇಲಿ	- ಗೇಲಿ	ಮುಡಿ	- ಮುದಿ-ಮುರಿ (ಮುಗಿ)
ಕೊನೆ	- ಗೊನೆ	ಸಾರು	- ಜಾರು
ಗೆಳೆಯ	- ಗೆಣೆಯ...ಗೆಣತಿ	ಸೊಲ್ಲು	- ಜೊಲ್ಲು (ಜೊಲ್ಲು)
ಚಿಗಿ	- ಜಿಗಿ	ಸೋಲು	- ಜೋಲು

ಈ ಬಗೆಯಾಗಿ ಒಂದಕ್ಕರದ ಉಚ್ಚಾರದಲ್ಲಿ ಸ್ವಾಭಾವಿಕವಾಗಿ ಆಗುವ ಸ್ವಲ್ಪವ್ಯತ್ಯಾಸದ ಲಾಭವನ್ನೇ ಪಡೆದುಕೊಂಡು, ಮೊದಲಿಗಿಂತಲೂ ಭಿನ್ನವಾದ ಸೂಕ್ಷ್ಮಾರ್ಥವುಳ್ಳ ಹೊಸ ನುಡಿಗಳನ್ನು ಮಾಡಿಕೊಳ್ಳಲು ಈ ಹಂಚಿಕೆಯು ಈಗಲೂ ಬಹಳ ಅನುಕೂಲವಾಗಿದೆ.

(ii) ಹ್ರಸ್ವಾಕ್ಷರವನ್ನು ದೀರ್ಘವನ್ನಾಗಿ ಮಾಡಿಕೊಂಡು ಹೊಸನುಡಿಗಳನ್ನು ಮಾಡಿಕೊಂಡುದು ಕಂಡುಬರುತ್ತದೆ.

ಉದಾ : ಪಡು (ಧಾ) - ಪಾಡು

ಕೊಲ್ಲು (ಧಾ) - ಕೋಲು (ಬಾಣ, ಕೊಲ್ಲುವ ಸಾಧನ)

ಬಿಡು - ಬೀಡು

ಕೆಡು - ಕೇಡು

ನಡು - ನಾಡು

ಹೊಗು - ಹೋಗು

ಕೊರೆ - ಕೋರೆ

ಕೊಡು - ಕೋಡು (ದಾನ ಕೊಡುವುದು);

(iii) ಅಕ್ಷರಗಳ ಪಲ್ಲಟದಿಂದ ಹಲವು ಸಾರೆ ಕೆಲವೊಂದು ಬೇರೆ ಅರ್ಥವು ಬರುವುದರಿಂದ, ಅದೂ ಒಂದು ಹೊಸನುಡಿಯಾಗುವುದು.

ಉದಾ : ತಿರುಗಿ-ತಿಗುರಿ

ಕಾಲುವೆ (ಜಲಾಶಯದಿಂದ ಒಯ್ದುದು)-ಕಾವಲಿ

(ಮನೆಯ ಮುಂದೆ ಅಥವಾ ಹಿತ್ತಲಲ್ಲಿರುವ ಹರಿ)

(iv) ಸ್ವರಾದಿಯಾದ ಹಲವು ನುಡಿಗಳ ಆರಂಭದಲ್ಲಿ ವ್ಯಂಜನವು ಸೇರಿ ಹೊಸ ನುಡಿಗಳಾಗುವುವು.

ಉದಾ : ಒಂದು-ಹೊಂದು

ಇಂಗು-ಹಿಂಗು ಮುಂತಾದುವು

(v) ಎರಡೆರಡು ಮೂರು-ಮೂರು ನುಡಿಗಳ ದೀರ್ಘಶಬ್ದಗಳನ್ನು ವ್ಯವಹಾರ ಸೌಲಭ್ಯಕ್ಕಾಗಿ ಸಂಕ್ಷೇಪಿಸಿ, ಅವುಗಳ ಮೊದಲಕ್ಕರಗಳಿಂದ ಹೇಳುವುದುಂಟು. ಮುಂದೆ ಆ ಸಂಕ್ಷೇಪವು ಒಂದು ಶಬ್ದದಂತೆ ವ್ಯವಹರಿಸುವುದು.

ಉದಾ : ವ್ಹಿ. ಪಿ,.(Value Payable)

ಬಿ. ಎ. (Bachelor of Arts)

ದೇ. ಭ. (ದೇಶಭಕ್ತ)

ಸೌ. (ಸೌಭಾಗ್ಯವತಿ)

ಶ್ರೀ (ಶ್ರೀಯುತ, ಶ್ರೀಮಾನ್)

ರಾ. ರಾ. (ರಾಜಮಾನ್ಯ ರಾಜಶ್ರೀ)

ತೀ. ಸ್ವ. (ತೀರ್ಥಸ್ವರೂಪ) ಮುಂತಾದುವು.

(vi) ಆವುದೊಂದು ಕಾರಣಕ್ಕಾಗಿಯೆ ಆಗಲಿ, ಶಬ್ದಗಳು ಮೊದಲಿಗಿಂತಲೂ ಬೇರೆ ಅರ್ಥದಲ್ಲಿ ವ್ಯವಹರಿಸಲಾರಂಭಿಸುತ್ತಲೆ ಅವು ಹೊಸ ನುಡಿಗಳೆನಿಸುವುವು. ಹೀಗೆ ನುಡಿಗಳ ಮೂಲ ಅರ್ಥದಲ್ಲಿ ಹೆಚ್ಚು ಕಡಿಮೆಗಳಾಗುವ ಕೆಲವು ಬಗೆಗಳನ್ನು ಕೆಳಗೆ ಕಾಣಿಸಿದಂತೆ ವಿಂಗಡಿಸಬಹುದು.

(ಅ) ಒಂದೇ ಅರ್ಥದ ಹಲವು ನುಡಿಗಳು ಬಳಕೆಯಲ್ಲಿ ಬರಲಾರಂಭಿಸುತ್ತಲೇ ಅವುಗಳಲ್ಲಿ ಸ್ವಲ್ಪ ಸೂಕ್ಷ್ಮವಾದ ಅರ್ಥಭೇದವನ್ನು ಕಲ್ಪಿಸಿಕೊಳ್ಳುವುದು ಮನುಷ್ಯಸ್ವಭಾವವಾಗಿದೆ. ಇದಕ್ಕನುಸರಿಸಿ ಸೂಕ್ಷ್ಮವಾದ ಅರ್ಥವ್ಯತ್ಯಾಸವುಳ್ಳ ಎಷ್ಟೋ ನುಡಿಗಳು ರೂಢಿಯಲ್ಲಿ ಬಂದಿವೆ.

ಉದಾ : ಹಿರಿ (ದು) ಮತ್ತು ದೊಡ್ಡ

ಜಳಕಮಾಡು ಮತ್ತು ಮೈತೊಳಕೊಳ್ಳು;

(ಅ) ಒಂದೇ ಅರ್ಥದ ದೇಶೀಯ ಪದಗಳ ಸಾಲಿನಲ್ಲಿ ಹಲವು ಬಾರಿ ಪರಭಾಷೆಯ ನುಡಿಗಳೂ ಬಂದು ಸೇರುವುವು. ಆಗ ಅವು ಬಹುತರವಾಗಿ ವಿಶಿಷ್ಟವಾದ ಅರ್ಥವನ್ನುಳ್ಳ ಹೊಸ ನುಡಿಗಳಾಗುವುವು.

ಉದಾ : ಕಾರ್ಯ, ಕೆಲಸ, ವರ್ಕ (Work) : ವೈದ್ಯ, ಹಕೀಮ, ಡಾಕ್ಟರ

ನರು (ಗುಂಪು) ಇದಕ್ಕೆ ಸುಗಂಧವೆಂಬ ಅರ್ಥವಿದೆ. ಆದರೆ, ಸುಗಂಧ ಸುವಾಸನೆಗಳೆಂಬ ಪದಗಳು ಬಳಕೆಯಲ್ಲಿ ಬರುತ್ತಲೆ 'ನರು' ಹೋಗಿ (ಹೊಸಕನ್ನಡದಲ್ಲಿ) 'ನಾರು' (ದುರ್ಗಂಧ) ಆಯ್ತು!

ಊಟ, ಭೋಜನ ಮತ್ತು ಮೇಜವಾನಿ

(ಇ) ಕಾರಣಾಂತರಗಳಿಂದ ಹಲವು ನುಡಿಗಳು ತಮ್ಮ ಮೂಲಾರ್ಥವನ್ನು ಕಳೆದುಕೊಂಡು, ತೀರ ವಿಪರೀತವಾದ ಅರ್ಥವನ್ನೇ ತಾಳುವುವು.

ಉದಾ : ಅರ್ಘದಿಂದಾದ ಅಗ್ಗ, ಅಗ್ಗಳ ಶಬ್ದಕ್ಕೆ ಶ್ರೇಷ್ಠ, ಹೆಚ್ಚಿನ ಬೆಲೆಯುಳ್ಳ ಎಂಬ ಅರ್ಥವು ಒಮ್ಮೆ ಇತ್ತು; ಆದರೆ ಈಗ ಬಹಳ ಬೆಲೆಯಿಲ್ಲದುದೆಂಬಲ್ಲಿ 'ಅಗ್ಗ' ಎಂದು ಹೇಳುವರು. ಇದರಂತೆ ನ್ಯಾಯ (ಜಗಳ); ಸಂತೆ (ಸಂಸ್ಥೆ ಎಂಬರ್ಥವು ನಷ್ಟವಾಗಿ, ಅವ್ಯವಸ್ಥಿತವಾಗಿ ಕೂಡಿದ ಜನ... ಎಂಬರ್ಥವು ಬಂದಿದೆ); Contract ಕಂತ್ರಾಟ;

(ಈ) ಕೆಲವು ನುಡಿಗಳ ಸಾಮಾನ್ಯಾರ್ಥವು ಹಿಂದೆ ಬಿದ್ದು, ವಿಶಿಷ್ಟಾರ್ಥವು ಮಾತ್ರ ಮುಂದೆ ಬರುವುದು.

ಉದಾ : 'ಸೀರೆ' ಎಂಬುದು ಈಗ ಹೆಂಗಸರುಡುವ ಬಟ್ಟೆಯೆಂದು ವಿಶಿಷ್ಟಾರ್ಥವಿದ್ದರೂ ಹರಿಹರಾದಿ ಕವಿಗಳು ಗಂಡಸರ ಬಟ್ಟೆಗೂ 'ಸೀರೆ' ಎಂದು ಹೇಳಿರುವರು.

'ತೊತ್ತು'ಗಂಡೂ ಇರಬಹುದು, ಹೆಣ್ಣೂ ಇರಬಹುದು. ಆದರೆ, ಈಗ 'ತೊತ್ತು' ಎಂದರೆ 'ದಾಸಿ' ಎಂಬ ಭಾವನೆಯು ಹೆಚ್ಚಾಗಿದೆ.

'ಅಮ್ಮ' ಎಂಬುದು ಹಿರಿಯರೆಂಬರ್ಥದಲ್ಲಿ ಪು-ಸ್ತ್ರೀಲಿಂಗ ವಾಚಕ ಶಬ್ದವಾಗಿದ್ದುದು. ಈಗ ಬರಿ ಸ್ತ್ರೀಲಿಂಗದಲ್ಲಿ ಮಾತ್ರ ರೂಢವಾಗಿದೆ.

(ಉ) ಮೂಲಾರ್ಥವು ಕಣ್ಮರೆಯಾದ ಬಳಿಕ ಎಷ್ಟೋ ನುಡಿಗಳ ಅಪಪ್ರಯೋಗಗಳನ್ನು ಮಾಡಿದರೂ ಅವು ಸಾಧುವೆಂದು ತಿಳಿಯಲಾಗುತ್ತದೆ.

ಉದಾ : ಎಣ್ಣೆ-(ಎಳ್+ನೆಯ್) ಎಳ್ಳಿನಿಂದಾದ ತುಪ್ಪ (ನೆಯ್) ಎಂಬರ್ಥ. ಎಣ್ಣೆಯೆಂಬುದು ಮುಂದೆ ಅಖಂಡ ನುಡಿಯೆನಿಸಿ ಕೊಬ್ಬರಿ ಎಣ್ಣೆ-ಕುಸುಬಿ ಎಣ್ಣೆ-ಎಂದು ಮುಂತಾಗಿ ಪ್ರಯೋಗಿಸುವೆವು. ನಿಜವಾಗಿ ನೋಡಿದರೆ 'ಕೊಬ್ಬರಿ-ನೆಯ್', 'ಕುಸುಬೆನೆಯ್' ಎಂಬ ರೂಪಗಳಾಗಬೇಕಿತ್ತು.

'ಆಕಳು' ಇದು ಬಹುವಚನಾಂತ ಶಬ್ದವು; 'ಆವು' ಏಕವಚನ. ಆದರೂ 'ಆಕಳು' ಎಂಬ ಬಹುವಚನಾಂತ ಪದವನ್ನೇ ಏಕವಚನದಂತೆ ಬಳಸುವ ರೂಢಿಯಿದೆ.

'ಪೀತಾಂಬರ' ಎಂದರೆ ಪೀತ (ಹಳದಿ) ವರ್ಣದ ಬಟ್ಟೆ; ಆದರೆ, ಪೀತಾಂಬರವೆಂದರೆ ರೇಶ್ಮೆಬಟ್ಟೆಯೆಂಬ ತಿಳಿವಳಿಕೆಯಿಂದ ಕೆಂಪು ಪೀತಾಂಬರ, ಹಸಿರು ಪೀತಾಂಬರ ಎಂದು ಮುಂತಾಗಿ ಹೇಳುವರು.

(ಊ) ಆಲಂಕಾರಿಕವಾಗಿ ಉಪಯೋಗಿಸಿದ ನುಡಿಗಳು ಒಂದೊಂದು ವಿಶೇಷಾರ್ಥವನ್ನು ತಾಳಿ ಹೊಸ ನುಡಿಗಳಂತೆ ಮುಂದೆ ಬರುವುವು. ಇದರಲ್ಲಿ ಹಲವು ಪ್ರಕಾರಗಳಿವೆ. ಅವುಗಳಲ್ಲಿ ಮಹತ್ವದ ಕೆಲವನ್ನು ಇಲ್ಲಿ ಕೊಟ್ಟಿದೆ:

(A) ವಿಶಿಷ್ಟಾರ್ಥಕ ಶಬ್ದಗಳು ಸಾಮಾನ್ಯಾರ್ಥವನ್ನು ತಾಳುವುದು.

ಉದಾ : ಭಗೀರಥ; ವಿಶ್ವಾಮಿತ್ರ; ಗಂಗಾ; ಕಾಶಿ; ವರಾಹ (ವರಾಹ; ಕಾವೇರಿ; ಕೃಷ್ಣೆಯರೇ ನಮ್ಮ ಗಂಗೆ. ಹಂಪೆಯೆ ನಮ್ಮ ಕಾಶಿ ವಿಜಯನಗರದ ರಾಜ್ಯದಲ್ಲಿ ವರಾಹ (ನಾಣ್ಯ)ಗಳು ಬಳಕೆಯಲ್ಲಿದ್ದುವು.)

(B) ಸಾಮಾನ್ಯಾರ್ಥವನ್ನುಳ್ಳ ಶಬ್ದಗಳು ವಿಶಿಷ್ಟಾರ್ಥವನ್ನು ಹೊಂದುವುವು.

ಉದಾ : ಹೊನ್ನು-ಬಂಗಾರವೆಂಬ ಸಾಮಾನ್ಯಾರ್ಥ, ಆದರೆ, ನಾಣ್ಯಗಳೆಂಬಲ್ಲಿ ಅದಕ್ಕೆ ವಿಶಿಷ್ಟಾರ್ಥವು ಬಂದಿತು.

ಶರಣರು; ದಾಸರು; ಅಯ್ಯನವರು; ಭಟ್ಟರು; ಮುಂ.

ಕೆಂಪಗಿರುವುದೆಂದು ಕೆನ್ನೆ; ಹೊರುವ ಸ್ವಭಾವವುಳ್ಳದ್ದೆಂದು ಹೋರಿ; ಪಂಕ (ಕೆಸರು)ದಲ್ಲಿ ಜನಿಸಿದ್ದೆಂದು ಪಂಕಜ (ಕಮಲ); ಆದರೆ, ಇವುಗಳೆಲ್ಲವೂ ತಮ್ಮ ಸಾಮಾನ್ಯಾರ್ಥವನ್ನು ಕಳೆದುಕೊಂಡು ವಿಶಿಷ್ಟಾರ್ಥದಲ್ಲಿ ಮಾತ್ರ ರೂಢವಾಗಿವೆ.

(C) ಹೋಲಿಕೆಯಲ್ಲಿ ಉಪಯೋಗಿಸಿದ ಎಷ್ಟೋ ನುಡಿಗಳು ಹೊಚ್ಚ ಹೊಸತಾಗುವುವು. ಈ ಹೋಲಿಕೆಯ (i) ಬಾಹ್ಯ ಆಕಾರದಲ್ಲಿರಬಹುದು; ಅಥವಾ (ii) ಗುಣಗಳಲ್ಲಿರಬಹುದು.

ಉದಾ : 'ಪತ್ರ'ಕ್ಕೆ ಎಲೆ ಎಂದು ಮೊದಲು ಅರ್ಥ; ಈಗ ಅದು ಪಡೆದಿರುವ ಅರ್ಥವೇ ಬೇರೆ. ಈ ಅರ್ಥದಲ್ಲಿ ಇದೊಂದು ಹೊಸ ನುಡಿಯೆ ಸರಿ (ಕಾಗದ) ಪತ್ರ; ಪತ್ರ ಬರೆಹ; ಆದರೆ 'ಪತ್ರಾವಳಿ' ಎಂದರೆ ಕಾಗದ ಪತ್ರಗಳ ಆವಳಿ ಅಲ್ಲ; ಉಣ್ಣುವ ಎಲೆಗಳು!

'ಹೊಗೆ-ಬಂಡಿ'; ದೀಪಾವಳಿ (ದೀವಳಿಗೆ); ಮುಂ.

(D) ಹೋಲಿಕೆಗಿಂತಲೂ ಒಂದಡಿ ಮುಂದಿಟ್ಟು, ರೂಪಕದಿಂದ 'ಅದೆ ಇದು' ಎಂದು ಹೇಳುವಲ್ಲಿ ಎಷ್ಟೋ ಹೊಸ ನುಡಿಗಳಾಗಿವೆ.

ಉದಾ : ಕೈ=ಆಧಾರ; ತಲೆ=ವಂಶ; ಬುದ್ಧಿ;
ಹಂದೆ=ಹೇಡಿ; ಹುಲಿ=ಧೈರ್ಯಶಾಲಿ; ಸಾಸಿಗ;
ಸುಯೇಜವು ಬ್ರಿಟಿಷ್ ಸಾಮ್ರಾಜ್ಯದ ಮೂಗು.

(E) ಮುಚ್ಚು ಮಾತು, ಚುಚ್ಚು ಮಾತುಗಳಲ್ಲಿ ಹಲವು ನುಡಿಗಳು ಹೊಸ ಅರ್ಥವನ್ನು ಹೊಂದುವುವು.

ಉದಾ : 'ಪೆದ್ದ'ನೆಂದರ ನಿಜವಾಗಿ ಪಂಡಿತನೆಂದರ್ಥ. ಆದರೆ, ಈಗ 'ಪೆದ್ದ'ನೆಂದರೆ ಹುಚ್ಚ; ಎಬಡ; ನ್ಯಾಯ (ಜಗಳ); ನ್ಯಾಯ (ಅನ್ಯಾಯವಲ್ಲದ್ದು).

(F) ಮನಸ್ಸಿಗೆ ಅಸತ್ಯವಾಗಬಾರದೆಂದು ಕೆಲವೊಂದು ಮಾತುಗಳನ್ನು ಬೇರೊಂದು ಬಗೆಯಿಂದ ಹೇಳುವ ರೂಢಿಯಿದೆ.

ಉದಾ : ಸತ್ತನೆನ್ನುವ ಬದಲು ಸ್ವರ್ಗಸ್ಥನಾದನು. ಕೈಲಾಸವಾಸಿ, ವೈಕುಂಟವಾಸಿಯೆಂಬಲ್ಲಿಯೂ ಇದೇ ಭಾವನೆಯಿದೆ. ದೀಪ ನಂದಿತು ಎನ್ನದೆ ಶಾಂತವಾಯಿತು; ಅಥವಾ ದೊಡ್ಡದಾಯಿತೆಂಬುವರು

(G) ಅತ್ಯಂತ ಆದರವುಳ್ಳವರ ಹೆಸರನ್ನು ಹೇಳುವುದಕ್ಕೆ ಮನಸ್ಸಾಗದೆ ಅಥವಾ ರೂಢಿಯ ಮೂಲಕ ಅದನ್ನು ಹೇಳಲಾರದೆ ಬೇರೊಂದು ಬಗೆಯಿಂದ ಸೂಚಿಸುವುದುಂಟು.

ಉದಾ : ಅವರು: ಯಜಮಾನರು; ಶ್ರೀಪಾದಂಗಳು; ತಮ್ಮಡಿಗಳು; ಮುಂ

೪೦. ನಡೆಗೂ ನುಡಿಗೂ ಬಹಳ ನಿಕಟವಾದ ಸಂಬಂಧವಿದೆ. ಜೀವನದಲ್ಲಿ ಹೊಸಬಗೆಗಳು ತಲೆದೋರಲಾರಂಭಿಸುತ್ತಲೆ ಭಾಷೆಯಲ್ಲಿಯೂ ಬದಲಾವಣೆಗಳಾಗುವುದು ಅನಿವಾರ್ಯ. ಆದುದರಿಂದಲೆ, ಕಾಲಕಾಲಕ್ಕೆ ಹೊಸಹೊಸ ಬಗೆಯ ಶಬ್ದಗಳು ರೂಢಿಯಲ್ಲಿ ಬರುವುದುಂಟು. ಧರ್ಮಕ್ರಾಂತಿ, ವಿಚಾರಕ್ರಾಂತಿಗಳಾಗುತ್ತಲೆ

ಭಾಷೆಯ ಮೇಲೆಯೂ ಅದರ ಪರಿಣಾಮಗಳು ಆಗದೆ ಇರುವುದಿಲ್ಲ. ಭಾಷೆಯೊಳಗಿನ ಅನೇಕ ಶಬ್ದಗಳಲ್ಲಿ, ಒಂದೊಂದು ಶಿಲಾಶಾಸನಕ್ಕಿಂತಲೂ ಹೆಚ್ಚಿಗಿರುವ ಧಾರ್ಮಿಕ, ಸಾಮಾಜಿಕ, ರಾಜಕೀಯ ಘಟನೆಗಳ ಐತಿಹ್ಯವು ಹುದುಗಿಕೊಂಡಿರುವುದನ್ನು ಕಾಣಬಹುದು. ಅಧಿಕಾರ ನಡೆಯಿಸು. ತನ್ನ ವಟವನ್ನೇ ಸಾಧಿಸು-ಎಂಬ ಅರ್ಥದಲ್ಲಿ "ಶಕನಡಿಸು" ಎಂದು ಹೇಳುವ ರೂಢಿಯಿದೆ. ನಮ್ಮ ಕಂನಾಡ ರಾಜದಲ್ಲಿ ಶಕಕರ್ತರಾಗುವ ಹಂಬಲವು ಹೆಚ್ಚು. ತಾವು ಆರಂಭಿಸಿದ ಶಕವು ಮುಂದೆ ಬಹುಕಾಲದ ವರೆಗೆ ನಡೆಯಲಿ ನಡೆಯದಿರಲಿ; ಅನೇಕರು ತಮ್ಮ ತಮ್ಮ ಹೆಸರಿನ ಶಕಗಳನ್ನು ನಿರ್ಮಿಸಿ, ಶಾಸನಗಳಲ್ಲಿ ಬರೆಯಿಸಿಟ್ಟುದು ಈಗ ಬೆಳಕಿಗೆ ಬರುತ್ತಲಿದೆ, ಆದರೆ, ತಲೆತಲಾಂತರಗಳಿಂದ ನಡೆದು ಬಂದ "ಶಕನಡಿಸು" ಎಂಬ ಪಡೆನುಡಿ ನಮ್ಮ ನಾಡಿನ ಈ ಐತಿಹಾಸಿಕ ಪರಂಪರೆಯನ್ನು ಈ ಮೊದಲೆ ನಮಗೆಲ್ಲ ಅರಹುತ್ತಲಿದೆ. 'ಶರಣ' ಮತ್ತು 'ದಾಸ' ಎಂಬ ಶಬ್ದಗಳ ಮೂಲಾರ್ಥವು ಯಾವುದೊಂದು ಜಾತಿಸೂಚಕವಾದುದಲ್ಲ. ಆದರೂ ಇವು ಒಂದೊಂದು ವಿಶಿಷ್ಟಪಂಥದ ನಿದರ್ಶಕಗಳಾಗಲು ಆಯಾಕಾಲದ ಧಾರ್ಮಿಕ ಘಟನೆಗಳೇ ಕಾರಣಗಳಾಗಿವೆ.

ಒಂದೊಂದು ಜಾತಿಯವರು, ಒಂದೊಂದು ಕಸುಬಿನವರು, ಒಂದೊಂದು ಧರ್ಮದವರು, ಒಂದೊಂದು ಪಂಥದವರು ತಮ್ಮವೇ ಆದ ಸೊಗಸಾದ ನೂರಾರು ನುಡಿಗಳ ಕಾಣಿಕೆಯನ್ನು ನುಡಿತಾಯಿಯ ಅಡಿಯಲ್ಲಿ ಒಪ್ಪಿಸಿದ್ದಾರೆ. ಅಂಗ, ಲಿಂಗ, ಜಂಗಮ, ಶರಣ, ವಚನಗಳು, ಕಾಯಕ ಮೊದಲಾದವು ವೀರಶೈವರ ಕಾಣಿಕೆ, ಓಂ ನಮಃ ಸಿದ್ಧಂ (ಓ. ನಾ. ಮಾಸಿಧಂ). ಭವ್ಯರು, ಬಸದಿ (ಬಸ್ತಿ) ಶ್ವೇತಾಂಬರ, ಮುಡಿಪು, ನೋಂಪಿ ಮೊದಲಾದವು ಜೈನರ ಕಾಣಿಕೆ; ನಾಮ, ಅಕ್ಷತಿ, ಅಂಗಾರ, ಮುದ್ರೆ, ದೊಡ್ಡ ದೇವರು ದಾಸರು ಮೊದಲಾದವು ವೈಷ್ಣವರ ಕಾಣಿಕೆ; ಇದರಂತೆ ಪತ್ತಾರ, ಕಮ್ಮಾರ, ನೆಯ್ಕಾರ, ಬಡಿಗ, ಒಕ್ಕಲಿಗರೇ ಮೊದಲಾದ ಬೇರೆ ಬೇರೆ ಕೆಲಸ-ಕೈಗಾರಿಕೆಯವರು ನುಡಿತಾಯಿಗೆ ಒಪ್ಪಿಸಿದ ಮೀಸಲ ಕಾಣಿಕೆಯೂ ಮಹತ್ತ್ವದ್ದಾಗಿದೆ. ವರಾಹ, ಹೊನ್ನು ಕೊಡಿಗೆ, ಮಾನ್ಯ, ಅಂಕ, ಟಂಕ, ದಂಡು, ದಾಳಿ ಮೊದಲಾದವು ಕರ್ನಾಟಕ ರಾಜಾಧಿರಾಜರ ಕಾಣಿಕೆ; ಇವರ ಕಾಣಿಕೆಯು ಎಣಿಕೆಗೆ ಮೀರಿದ್ದಾಗಿದೆ. ಅದು ಅರಸರ ಕಾಣಿಕೆ; ಅಗಣಿತವಿರುವುದು ಸಹಜ. ಕಂನಾಡ ಕಾವ್ಯ ಶಾಸನಾದಿಗಳಲ್ಲಿ ಕಂಡುಬರುವ ಶಬ್ದ ಸಂಪತ್ತಿನ ಬಹುಭಾಗವು ರಾಜಕೀಯ ಘಟನೆಗಳ ಪಡಿಯಚ್ಚಿನೊಳಗಿಂದ ಹೊರಬಿದ್ದುದೆ ಆಗಿದೆ.

ಕಂನುಡಿಯ ಏಳ್ಗೆಯಾಗಬೇಕಿದ್ದರೆ, ಕಂನಾಡಿನೊಳಗಿನ ಪ್ರತಿಯೊಂದು ಸಮಾಜದ ಪ್ರತಿಯೊಂದು ವ್ಯಕ್ತಿಯೂ ತನ್ನ ಒಂದಿಲ್ಲೊಂದು ತೆರನಾದ ಕಾಣಿಕೆಯನ್ನು ತಮ್ಮ ನುಡಿಗೆ ಸಲ್ಲಿಸಲೇಬೇಕು. ಎಲ್ಲರೂ ಕವಿಗಳು, ಲೇಖಕರು ಆಗುವುದು ಸಾಧ್ಯವಿಲ್ಲದಿದ್ದರೂ ನಮ್ಮಿಂದ ಚೊಕ್ಕಟವಾದ ಕಂನುಡಿಯಲ್ಲಿಯೆ ವಿಚಾರ ಮಾಡುವ ಮಾತನಾಡುವ ನಿಶ್ಚಯವು ಶಕ್ಯವಿಲ್ಲವೇ? ಆಧುನಿಕ ಶಾಸ್ತ್ರ-ಸಾಹಿತ್ಯಗಳಲ್ಲಿ ನಿಷ್ಣಾತರಾದ ನಮ್ಮ ಜನರು ತಾವು ಅರಿತುದನ್ನು-ಕುರಿತುದನ್ನು ಕಂನುಡಿಯಲ್ಲಿ ಮೂಡಿಸಲು ಹವಣಿಸಿದರೆ ನಮ್ಮ ನುಡಿಯ ಬೆಳವಣಿಗೆಯಾಗಲು ತಡವಿಲ್ಲ.

೪೧. ಭಾಷೆಯು ಬದಲಾವಣೆಗಳನ್ನು ಹೊಂದಕೂಡದೆಂದು ಎಷ್ಟೊಂದು ಕಟ್ಟು-ಕಟ್ಟಳೆಗಳನ್ನು ಮಾಡಿದರೂ ಅದು ಬದಲಾಗದೆ ನಿಲ್ಲಲಾರದು. ಬದಲು ಜೀವಂತತನದ ಲಕ್ಷಣ; ಬದಲು ಸೃಷ್ಟಿನಿಯಮ; ಬದಲು ಆಗಲೆ ಕೂಡದೆಂದು ಕಡುತರವಾದ ಕಟ್ಟಳೆಗಳನ್ನು ಮಾಡಿದರೆ ಭಾಷೆಯು ನಿರ್ಜೀವವಾಗುವುದು ನಿಶ್ಚಿತವಾಗಿರುವಂತೆ, ಸಿಕ್ಕ ಹಾಗೆ ಅದಲು ಬದಲಾಗಗೊಟ್ಟರೆ ಭಾಷೆಯು ವಿಕೃತಿಯನ್ನು ಹೊಂದಿ ಹಾಳಾಗುವುದೂ ಅಷ್ಟೇ ನಿಜವಾಗಿದೆ. ಬದಲು ನಿಶ್ಚಿತವೆಂದು, ಯಾರಾದರೂ ಸಮಾಜದ ಬೆಂಬಲವಿಲ್ಲದೆ ಅದನ್ನು ತನ್ನ ಮನಬಂದಂತೆ ಪಲ್ಲಟಿಸಲು ಹವಣಿಸಿದರೆ, ಅವನ ಆ ಕೃತ್ಯವು ಬರಿ ಹುಚ್ಚಾಟವೆನಿಸದೆ ಇರದು. ತನ್ನದು ಎಲ್ಲವೂ, ಅಚ್ಚಳಿಯದೆ ಉಳಿಯ ಬೇಕೆಂದು ಮನುಷ್ಯನ ಆಂತರಿಕ ಆಕಾಂಕ್ಷೆ. ಅದಕ್ಕಾಗಿಯೆ, ಮನುಷ್ಯನು ಯಾವುದೂ ತನ್ನ ಕೈಯಿಂದ ಓಡಿ ಹೋಗದಂತೆ ಬಿಗಿದು ಹಿಡಿದಿಡಬೇಕೆಂದು ಹವಣಿಸುವನು. ದಿನಕ್ಕೊಂದು ಪರಿಯಿಂದ ಭಾಷೆಯು ಬದಲಾಗಲಾರಂಭಿಸಿದರೆ-ಒಬ್ಬೊಬ್ಬರೂ ತಮತಮಗೆ ತಿಳಿದಂತೆ ಭಾಷೆಯಲ್ಲಿ ಮಾರ್ಪಾಡುಗಳನ್ನು ಮಾಡಹತ್ತಿದರೆ

ಒಬ್ಬರ ಮಾತು ಮತ್ತೊಬ್ಬರಿಗೆ ತಿಳಿಯುವುದೇ ಅಸಾಧ್ಯವಾಗುವುದು. ಈ ದೃಷ್ಟಿಯಿಂದ ಮನುಷ್ಯನೊಳಗಿನ ಪರಂಪರಾಪ್ರೀತಿಯು ಕೆಲವೊಂದು ಮಟ್ಟಿನ ವರೆಗೆ ಸಮಾಜದ ಸ್ಥೈರ್ಯಕ್ಕೆ ಹಿತಕಾರಕವಾಗಿದೆ.

ಆದರೂ ಭಾಷೆಯಲ್ಲಿ ಆಗುವ ಬದಲು ತಪ್ಪಿದಲ್ಲ. ಇದಕ್ಕೆ ಹಲವು ಕಾರಣಗಳುಂಟು: (೧) ಒಬ್ಬರ ಉಚ್ಚಾರಗಳಂತೆ ಮತ್ತೊಬ್ಬರ ಉಚ್ಚಾರಗಳಿರುವುದಿಲ್ಲ: (೨) ಒಬ್ಬನು ಆಡಿದುದನ್ನು ಮತ್ತೊಬ್ಬನು ಕಿವಿಯಿಂದ ಕೇಳಿ ಹೇಳಬೇಕು: ಕೇಳುವಲ್ಲಿ ಸ್ವಲ್ಪ ಹೆಚ್ಚು ಕಡಮೆಯಾಗುವ ಸಂಭವವಿದೆ. ಅಲ್ಲದೆ, ಮುಂದೆ ಕೇಳಿದುದನ್ನೇ ಮರಳಿ ಹೇಳುವಾಗ, ಹೇಳುವವನ ಉಚ್ಚಾರದ ರೀತಿಯಲ್ಲಿ ಕೆಲಸಾರೆ ಅಲ್ಪಸ್ವಲ್ಪ ಬದಲಾವಣೆಗಳು ಆಗುವುದುಂಟು. (೩) ಪರಭಾಷೆಯ ಅಭ್ಯಾಸಮಾಡುವುದರಿಂದ ಅಥವಾ ಅದು ಮೇಲಿಂದ ಮೇಲೆ ಕಿವಿಗೆ ಬೀಳುವುದರಿಂದ ನಮ್ಮ (i) ಉಚ್ಚಾರ, (ii) ಶಬ್ದಯೋಜನೆ (iii) ವಾಕ್ಯರಚನೆ-ಶೈಲಿಗಳಲ್ಲಿ ವ್ಯತ್ಯಾಸಗಳಾಗುವುದು ಸಹಜವಾದುದು. (೪) ಆರ್ಯವಂಶದವರೇ ದ್ರಾವಿಡ ಭಾಷೆಗಳ ಪುರಸ್ಕರ್ತರಾದಂತೆ ಪರಕೀಯರು ಆವುದೊಂದು ಭಾಷೆಯನ್ನು ಸ್ವೀಕರಿಸಿ ಅವರೆ ಅದರ ಹಕ್ಕುಬಾಧ್ಯಸ್ಥರಾದಾಗ, ಭಾಷೆಯಲ್ಲಿ ಬದಲಾವಣೆಗಳು ಆಗುವುದು ಸೋಜಿಗವಲ್ಲ. (೫) ರಾಜಕೀಯ ಅಥವಾ ಸಾಂಸ್ಕೃತಿಕ ಪರಿವರ್ತನಗಳುಂಟಾಗಲು ಇಲ್ಲವೆ ನಮ್ಮ ಸುತ್ತಲಿನ ಪರಿಸ್ಥಿತಿಯು ಬದಲಾಗಿ ಜೀವನಕ್ರಮದಲ್ಲಿ ಹೊಸಬಗೆಯು ತಲೆದೋರಲು, ನಮ್ಮ ಭಾಷೆಯಲ್ಲಿ ಹೆಚ್ಚು ಕಡಮೆಗಳಾಗದೆ ನಡೆಯಲಾರದು. ಈ ಕಾರಣಗಳಿಂದಲೇ ಡಕಾರವು ಳಕಾರವಾಗಿ. ಳಕಾರುವ ಣಕಾರವಾಗಿ, ಲಕಾರವು ನಕಾರವಾಗ ಪರಿಣಮಿಸಿದುದನ್ನು ಕಾಣಬಹುದು.

ತೊಡೆ=ತೊಳೆ; ಮಾಡುವ=ಮಾಳ್ವ; ಮುಳುಗು=ಮುಣುಗು: ಲಿಂಬಿ= ನಿಂಬಿ

ಪಂಪನು 'ನೊಳ', 'ಕುಳಿ' ಎಂದು ಪ್ರಯೋಗಿಸಿದ ಶಬ್ದಗಳನ್ನು ನಾವು ಇಂದು 'ನೊಣ', 'ಕುಣಿ' ಎಂದು ಹೇಳುವೆವು. ಇಂದು ಒಂದೇ ಶಬ್ದವನ್ನೇ ಸರಪಳಿ, ಸರಪಣಿ ಎಂದು ಎರಡು ಬಗೆಯಿಂದ ಹೇಳುವ ರೂಢಿಯುಂಟು. ನಿಜವಾಗಿ ಹುಳಿಸೆ ಎಂದಿರಬೇಕಾದ ಶಬ್ದವು ಹುಣಿಸೆಯೆಂದಾದುದೇಕೆ? ಇಟ್ಟಿಗೆ ಎಂಬುದು ಶುದ್ಧರೂಪ; ಆದರೆ ಈಗ ಇಟ್ಟಂಗಿ ಎಂಬುದು ರೂಢಿ! ನಮ್ಮ ಉಚ್ಚಾರಗಳಲ್ಲಿ ಬದಲಾವಣೆಗಳಾಗುತ್ತಿರುವುದೇ ಇದಕ್ಕೆಲ್ಲ ಕಾರಣ. ಮೂಲ ದ್ರಾವಿಡ ಭಾಷೆಯಲ್ಲಿಲ್ಲದ ಮಹಾಪ್ರಾಣಗಳೂ ಮತ್ತು 'ಹ'ಕಾರ ಮೊದಲಾದುವೂ ಸೇರಿ ಹೊಸದಾಗಿ ಕಂನಾಡ ಭಾಷೆಯು ರೂಪುಗೊಳ್ಳಲಿಲ್ಲವೆ; ಹುಡುಗು, ಹುಡಿಗಿ ಎಂಬ ಶಬ್ದಗಳ ಹಳಗನ್ನಡದಲ್ಲಿ ಸಿಕ್ಕಲಾರವೆಂದು ಹೇಳಿದರೆ ಹಲವರಿಗೆ ಆಶ್ಚರ್ಯವಾಗದೆ ಇರಲಾರದು. ವರ್ತಮಾನಪತ್ರ, ಸಂಪಾದಕ, ವೇಳಾಪತ್ರಿಕೆ, ಕಾರ್ಯಕಾರೀ ಮಂಡಲ, ಸ್ಥಾನಿಕಸ್ವರಾಜ್ಯ, ಉಗೆಬಂಡಿ ಇವೇ ಮೊದಲಾದವು ನಮ್ಮ ಹೊಸ ಕಾಲದ ಬಾಳಿನಲ್ಲಿ ಇತ್ತೀಚೆಗೆ ಬೇಕಾದ ಶಬ್ದಗಳಾಗಿವೆ.

ಹೊಸ ಆವಶ್ಯಕತೆಗಳುಂಟಾದ ಹಾಗೆ ಹೊಸ ಹಂಚಿಕೆಗಳೂ ಹುಟ್ಟುವುವು. ಕಾಲಕಾಲಕ್ಕೆ ಭಾಷೆಯೊಳಗಿನ ಕೊರತೆಗಳನ್ನು ಕಂಡುಹಿಡಿದು, ಅವುಗಳನ್ನು ಪೂರಯಿಸಿಕೊಳ್ಳುವ ಬಗೆಯನ್ನು ತೋರಿಸಿಕೊಡುವ ಹೊಣೆಯು ಪ್ರತಿಭಾಶಾಲಿಗಳಾದ ಸಾಹಿತ್ಯ ಸೇವಕರ ಮೇಲಿದೆ. ಕವಿಗಳು ನಿರಂಕುಶರು. ಅವರು ತಮ್ಮ ಮಟ್ಟಿಗೆ ಹಲವು ಪ್ರಕಾರದ ಪ್ರಯೋಗಗಳು ಮಾಡಿಕೊಂಡು ನೋಡಿ, ಅವುಗಳಲ್ಲಿ ವಿಚಾರ-ವಿಮರ್ಶೆಗಳು ಒರೆಗಲ್ಲಿಗೆ ಸರಿಹೊಂದುವ ಮಾತುಗಳನ್ನು ಜನಸಾಮಾನ್ಯರೆದುರಿಗಿಟ್ಟು. ಲೋಕಪ್ರಿಯವಾಗುವಂತೆ ಮಾಡಿ, ಭಾಷೆಯನ್ನು ಪರಿಪೂರ್ಣ ಸ್ಥಿತಿಗೆ ಒಯ್ಯಲು ಯತ್ನಿಸುತ್ತಿರುವುದು ಉಂಟು. ಶೆಕ್ಸಪಿಯರನಷ್ಟು ಇಂಗ್ಲೀಷ್ ಭಾಷೆಗೆ ಮಹೋಪಕಾರ ಮಾಡಿದ ವ್ಯಕ್ತಿಯೇ ಈ ವರೆಗೆ ಬೇರೊಂದು ಆಗಿಲ್ಲವೆಂದು ಆ ಭಾಷೆಯ ಬಲ್ಲಿದರ ಅಭಿಪ್ರಾಯವಿದೆ. ಕಂನಾಡಿನ 'ನುಡಿಗೊಡೆಯನೊರ್ವನೆ ಪಂಪಂ' ಎಂದು ಪ್ರಾಚೀನ ಮಹಾಕವಿಯು ಮಾಡಿದಂತೆ ಈಗ ಸಹ ಕಂನುಡಿಗೆ ಹೊಸ ಮೆರಗನ್ನು ಕೊಟ್ಟು, ಇದನ್ನು ಹೊಸಯುಗಕ್ಕೆ ತಕ್ಕ ಬೆಡಗಿನ ನುಡಿಯನ್ನಾಗಿ ಮಾಡುವ ಕಾಲವು ಒದಗಿಲ್ಲವೆ?

ಮಹತ್ವದ ಹಲವು ಪ್ರತ್ಯಯಗಳು

೪೨. ಕಂನುಡಿಯ ಶಬ್ದಸಿದ್ಧಿಕ್ರಮವನ್ನು ಸರಿಯಾಗಿ ಅರಿತುಕೊಳ್ಳಬೇಕಾಗಿದ್ದರೆ, ಪದಗಳನ್ನು ಕೆಲವೊಂದು ಬೇರೆ ವಿಧದಿಂದ ವರ್ಗೀಕರಿಸುವುದು ಅವಶ್ಯವೆಂದು ಹಿಂದೆ ೨೦ರಲ್ಲಿ ಸೂಚಿಸಲಾಗಿದೆ.

ಕಂನುಡಿಯಲ್ಲಿ ಹೊಸ ನುಡಿಗಳನ್ನುಂಟುಮಾಡುವ ಹಲವು ಪ್ರತ್ಯಯಗಳುಂಟು. ಈ ಪ್ರತ್ಯಯಗಳಿಂದ ಉಂಟಾಗುವ ನುಡಿಗಳಲ್ಲಿ ನಾಲ್ಕು ಬಗೆಗಳನ್ನು ಕಲ್ಪಿಸಬಹುದು: (೧) ಧಾತುಗಳು; (೨) ವಸ್ತುವಾಚಕ ನಾಮಗಳು; (೩) ಭಾವವಾಚಕನಾಮಗಳು: (೪) ಶೀಲ-ಗುಣ ಮತ್ತು ಉದ್ಯೋಗವಾಚಕನಾಮಗಳು.

ಇವುಗಳಲ್ಲಿ ಮೊದಲಿನ ಮೂರು ಬಗೆಯ ನುಡಿಗಳನ್ನು ಹುಟ್ಟಿಸುವ ಪ್ರತ್ಯಯಗಳೆಲ್ಲವೂ ಸಾಮಾನ್ಯವಾಗಿ ಒಂದೇ. ಆದರೆ, ಸಿದ್ಧವಾಗುವ ಶಬ್ದಗಳಲ್ಲಿ ಭೇದಗಳಿವೆ: ಪ್ರತ್ಯಯಗಳಲ್ಲಿ ಇಲ್ಲ. ಆದುದರಿಂದ ಈ ಪ್ರತ್ಯಯಗಳಲ್ಲಿ ತದ್ಧಿತ-ಕೃದಂತಗಳೆಂಬ ಭೇದವನ್ನು ಕಲ್ಪಿಸುವುದಕ್ಕಿಂತ, ಅವುಗಳಿಂದ ಸಿದ್ಧವಾದ ಶಬ್ದಗಳಲ್ಲಿಯೆ ವಸ್ತುವಾಚಕ, ಭಾವವಾಚಕ ಎಂದು ಮುಂತಾಗಿ ಮೇಲೆ ಕಾಣಿಸಿದಂತೆ ವರ್ಗೀಕರಣವನ್ನು ಮಾಡುವುದು ಹೆಚ್ಚು ಸಯುಕ್ತಿಕವಾಗಿದೆ.

೪೩. 'ಕೂಡುನುಡಿ'; (ಸಮಾಸ)ಗಳಿಗಿಂತ, ಪ್ರತ್ಯಯಾಂತ ಶಬ್ದಗಳು ಹೆಚ್ಚು ಸುಸ್ಪಷ್ಟವಾದ ಅರ್ಥವನ್ನು ಕೊಡಬಲ್ಲವು-ಎಂದು ೧೪ರಲ್ಲಿ ವಿವರಿಸಲಾಗಿದೆ. ಕಂನುಡಿಯಲ್ಲಿ ಪುರಾತನ ಕಾಲದಿಂದ ನಡೆದುಬಂದ ಎಷ್ಟೋ ಪ್ರತ್ಯಯಗಳನ್ನು, ಹಿಂದಿನ ನಮ್ಮ ವೈಯಾಕರಣರು ದುರ್ಲಕ್ಷಿಸಿದುದರಿಂದ ಅವು ಮೂಲೆ ಗುಂಪಾಗಿವೆ. ಈಗ ಪ್ರತ್ಯಯಗಳೆನಿಸುವುವೆಲ್ಲವೂ ಒಂದಾನೊಂದು ಕಾಲಕ್ಕೆ ಒಂದೊಂದು ಶಬ್ದಗಳೇ ಆಗಿದ್ದುವೆಂದು ಭಾಷಾಶಾಸ್ತ್ರಜ್ಞರ ಸಿದ್ಧಾಂತವಿದೆ. ಆದುದರಿಂದ, ಪ್ರತ್ಯಯಗಳಿಂದ ಸಿದ್ಧವಾದ ನುಡಿಗಳು ಸಹ ಒಮ್ಮೆ 'ಕೂಡಿನುಡಿ' (ಸಮಾಸ)ಗಳೇ ಆಗಿದ್ದುವೆಂದು ಹೇಳಬೇಕಾಗುತ್ತದೆ. ಒಂದು ನುಡಿಯ ಮುಂದೆ ಬಂದ ಮತ್ತೊಂದು ನುಡಿಯು ಕ್ರಮವಾಗಿ ಸವೆದು ಈಗ ಪ್ರತ್ಯಯ ಸ್ವರೂಪವನ್ನು ಹೊಂದಿದೆ. ಪ, (ಪ್ಪ), ಣ, ಮ (ಮ್ಮ). ಎಂಬುವು ಅಪ್ಪ, ಅಣ್ಣ, ಅಮ್ಮ ಎಂಬವುಗಳಿಂದಾದ ಪ್ರತ್ಯಯಗಳು. ಟೊಣಪ, ಮಕಾಯಣ, ಅಲ್ಲಮ ಇಂತಹ ಪದಗಳ ಮುಂದೆ ಪ, ಣ, ಮ ಗಳು ಪ್ರತ್ಯಯಗಳಂತೆ ಸೇರಿದುದನ್ನು ಕಾಣಬಹುದು. ಪ್ರತ್ಯಯದ ಸ್ವರೂಪವನ್ನು ತಾಳಿದ ಅಕ್ಷರವು ಅಥವಾ ಅಕ್ಷರಗಳು, ಸಾಮಾನ್ಯವಾಗಿ ಸವೆದುಹೋದ ಆ ಮೂಲಶಬ್ದದ ಮೊದಲಕ್ಕರವಾಗಲಿ, ಕೊನೆಯಕ್ಕರವಾಗಲಿ ಇರುವುದುಂಟು.

ಕಂನುಡಿಯಲ್ಲಿ ಪ್ರತ್ಯಯಗಳಂತೆ ವ್ಯವಹರಿಸುವ 'ಕುಲಿ' (ಮುಂಗುಲಿ ಮುಂತಾದುವುಗಳಲ್ಲಿ). 'ಇಲಿ' (ನಾಣಲಿ ಮುಂತಾದುವುಗಳಲ್ಲಿ), 'ಕೇಡಿ' (ಬುದ್ಧಿಗೇಡಿ ಮುಂತಾದುವುಗಳಲ್ಲಿ) ಇಂತಹವು ಇನ್ನೂ ತಮ್ಮ ಶಬ್ದ ಸ್ವರೂಪವನ್ನು ಕಳೆದುಕೊಂಡಿಲ್ಲ. ಆದರೂ ಇವುಗಳನ್ನು ಪ್ರತ್ಯಯಗಳೆಂದು ಗ್ರಹಿಸುವುದುಂಟು. ಅದಾವ ನುಡಿಗಳು

ಸವೆಕುಳಿಗೊಂಡು ಕು, ಕೆ, ಸ, ಪು ಮೊದಲಾಗಿ ಪ್ರತ್ಯಯಗಳ ಸ್ವರೂಪವನ್ನು ಹೊಂದಿರುವುವು? ಎಂಬುದನ್ನು ನಿಶ್ಚಿತವಾಗಿ ಹೇಳುವುದು ಬಿಗಿಯಾಗಿದೆ. ಅಲ್ಲದೆ, ಅದು ನಮ್ಮ ಪ್ರಸ್ತುತ ವಿಷಯವು ಅಲ್ಲ.

ಒಂದು ಭಾಷೆಯೊಳಗೆ ಬಳಕೆಯಲ್ಲಿರುವ ಪ್ರತ್ಯಯಗಳೆಲ್ಲವೂ ಮೂಲ ಅದೇ ಭಾಷೆಯವೆಂದು ಎದೆತಟ್ಟಿ ಹೇಳಲಿಕ್ಕಾಗದು; ಕಾಲಕಾಲಕ್ಕೆ ಆವಶ್ಯಕತೆಯುಂಟಾದಂತೆ, ಪರಭಾಷೆಗಳಿಂದ ಎಷ್ಟೋ ಪ್ರತ್ಯಯಗಳನ್ನು ಎತ್ತಿಕೊಳ್ಳಬೇಕಾಗುತ್ತದೆ. ಅಖಂಡವಾದ ಪರಕೀಯ ಶಬ್ದಗಳನ್ನು ಎತ್ತಿಕೊಳ್ಳುವುದಕ್ಕಿಂತ, ಅಂತಹ ಶಬ್ದಗಳನ್ನು ಸಿದ್ಧಪಡಿಸುವ ಪ್ರತ್ಯಯಗಳನ್ನು ಸ್ವೀಕರಿಸುವುದು ಹೆಚ್ಚು ಲೇಸು. ಅಥವಾ ಅಂತಹ ಅರ್ಥಕೊಡುವ ಹೊಸ ಪ್ರತ್ಯಯಗಳನ್ನು ತಮ್ಮಲ್ಲಿ ಉಂಟುಮಾಡಿಕೊಳ್ಳುವುದು ಅದಕ್ಕೂ ಲೇಸು. ಪರಭಾಷೆಯಿಂದ ಒಂದೆರಡು ಶಬ್ದಗಳನ್ನು ತಕ್ಕೊಳ್ಳುವುದರಿಂದ ನಮ್ಮ ಕೊರತೆಯು ತೀರುತ್ತಿದ್ದರೆ ಆ ಮಾತು ಬೇರೆ. ಆ ತೆರನಾದ ಅನೇಕಾನೇಕ ಶಬ್ದಗಳ ಆವಶ್ಯಕತೆಯಿದ್ದಾಗ, ಹೆರವರ ಹತ್ತಿರ ಅಡಿಗಡಿಗೆ ಸಾಲಕ್ಕೆ ಕೈಯೊಡ್ಡುವುದಕ್ಕಿಂತಲೂ ತಮ್ಮ ಭಾಷೆಯಲ್ಲಿಯೆ ಹೊಸ ನುಡಿಗಳನ್ನು ಹುಟ್ಟಿಸುವ ಹಂಚಿಕೆಗಳನ್ನು ಹುಡುಕಿಕೊಳ್ಳುವುದು ಮೇಲು. ಇಂಗ್ಲೀಷ್ ಭಾಷೆಯವರು ಗ್ರೀಕ್, ಲ್ಯಾಟಿನ್, ಫ್ರೆಂಚ್ ಮೊದಲಾದ ಭಾಷೆಗಳಿಂದ ಹಲವು ಪ್ರತ್ಯಯಗಳನ್ನು ಸ್ವೀಕರಿಸಿ, ತಮ್ಮ ಭಾಷೆಯೊಳಗಿನ ಶಬ್ದನಿರ್ಮಾಣ ಶಕ್ತಿಯನ್ನು ಹೆಚ್ಚಿಸಿಕೊಂಡಿದ್ದಾರೆ. ಮರಾಠಿಯವರು ಕಂನುಡಿ ಮತ್ತು ಉರ್ದುಗಳಿಂದಲೂ ಪ್ರತ್ಯಯಗಳನ್ನು ಎತ್ತಿ ತಮ್ಮ ಕೊರತೆಗಳನ್ನು ಹಿಂಗಿಸಿಕೊಳ್ಳುತ್ತಲಿದ್ದಾರೆ. ನಮ್ಮಲ್ಲಿಯೂ ಸಂಸ್ಕೃತದಿಂದ ಹಲವು ಪ್ರತ್ಯಯಗಳನ್ನುಗಳು ಸ್ವೀಕರಿಸಿದ್ದಾಗಿದೆ. ಕಾರ, ವಂತ, ವಾಳ (ವಳ್ಳ)* ಸ್ಥ ಮೊದಲಾದುವು ಸಂಸ್ಕೃತದಿಂದ ತಕ್ಕೊಂಡ ಪ್ರತ್ಯಯಗಳು : ದಾರ, ಕೋರ, (ಮೊದಲಾದುವುಗಳನ್ನು) ಮುಸಲ್ಮಾನಿಯಿಂದ ಎತ್ತಿಕೊಳ್ಳಲಿದ್ದೇವೆ.

೪೪. ಕೆಚ್ಚ ಕಂನುಡಿಯ ಆವುದೇ ಮೂಲಶಬ್ದವು ಸಾಮಾನ್ಯವಾಗಿ ಎರಡರಕ್ಕಿಂತ ದೊಡ್ಡದಿರುವುದಿಲ್ಲ. ಕಂನುಡಿಯಲ್ಲಿ ಎರಡಕ್ಕಿಂತ ಹೆಚ್ಚು ಅಕ್ಕರಗಳಿಂದಾದುದು ಸಾಧಿತ ಶಬ್ದವಾಗಿರಬೇಕು; ಇಲ್ಲವೆ ಪರಭಾಷೆಯಿಂದ ಬಂದುದಾಗಿರಬೇಕು. ಬೆಯ್, ಮೆಯ್, ನೊಯ್ ಮೊದಲಾದವುಗಳ ಕೊನೆಯ ವ್ಯಂಜನವು ಲೋಪವಾಗುತ್ತದೆ ಉಚ್ಚಾರದೊಳಗಿನ ತೂಕ ತಪ್ಪಬಾರದೆಂದು ಮೊದಲಕ್ಕರವು ದೀರ್ಘವಾಗುತ್ತದೆ.

ಉದಾ : ಬೇ, ಮೇ, ನೋ ಮುಂತಾದುವು.

ಕಂನುಡಿಯ ಮೂಲಶಬ್ದಗಳಲ್ಲಿ ಇನ್ನೊಂದು ವಿಶೇಷವಿದೆ: ಮೂಲ ಶಬ್ದಗಳಲ್ಲಿರುವ ಎರಡು ಅಕ್ಷರಗಳಲ್ಲಿ, ಮೊದಲನೆಯದು ಮಾತ್ರ ಸಾಮಾನ್ಯವಾಗಿ ಸ್ಥಿರವಾದ ಉಚ್ಚಾರವುಳ್ಳುದ್ದಾಗಿದೆ. ಎರಡನೆಯದು ಬಗೆಬಗೆಯಿಂದ ಬದಲಾಗುವುದು. 'ನಿಲ್' ಶಬ್ದದ 'ನಿಂತು' ಎಂಬ ರೂಪವನ್ನು ನೋಡಿದರೆ ಕೊನೆಯ ವ್ಯಂಜನವು ಅನುಸ್ವಾರ ವಾಯಿತೆಂದು ಒಪ್ಪಿಕೊಳ್ಳಬೇಕಾಗುವುದು. 'ಬೆಯ್'-ಬೆಂದು, ಇದರಲ್ಲಿಯೂ ಕೊನೆಯಕ್ಕರವು ಅನುಸ್ವಾರವಾದುದನ್ನು ಕಾಣಬಹುದು. ಮುಳಿ-ಮುನಿ (ಸಿಟ್ಟಾಗು) ಧಾತುಗಳನ್ನು ನಿರೀಕ್ಷಿಸಿದರೆ ಇಲ್ಲಿ ಳ=ನ (ಣ) ಆದುದು ಗೋಚರವಾಗುತ್ತದೆ. ಇದರಂತೆ, ಕೊನೆಯ ಅಕ್ಷರವು ರ, ಲ, ಳ, ಣ, (೦) ಮುಂತಾದ ಬೇರೆ ವರ್ಣದಲ್ಲಿ ಪರಿವರ್ತನವನ್ನು ಹೊಂದುವುದುಂಟು.

ಕಂನುಡಿಯ ಮೂಲಶಬ್ದಗಳಲ್ಲಿ ಒತ್ತಕ್ಷರಗಳು ಸಿಕ್ಕಲಾರವು. 'ನಿಲ್ಲು, ಕೊಳ್ಳು' ಮುಂತಾದುವು ಹೊಸನುಡಿಯಲ್ಲಿ ದ್ವಿತ್ವವಾಗಿ ಕಂಡರೂ ಅವು ಮೂಲ ಹಳೆನುಡಿಯಲ್ಲಿ 'ನಿಲ್, ಕೊಳ್' ಎಂದು ಮುಂತಾಗಿ ವ್ಯಂಜನಾಂತಗಳಾಗಿವೆ. ಇನ್ನು 'ಉಬ್ಬು, ಮುಚ್ಚು' ಮೊದಲಾದ ಇನ್ನೊಂದು ಬಗೆಯ (ಒತ್ತಕ್ಷರಗಳುಳ್ಳ) ಧಾತುಗಳುಂಟು. ಇವುಗಳು ನಮ್ಮ ನಾಡಿನ ಹಳೆನುಡಿಯಲ್ಲಿ 'ಉರ್ಬು, ಮುರ್ಚು' ಎಂದಿವೆ. ಇವುಗಳ ಕೊನೆಯ ಬು ಮತ್ತು ಚು ಇವು

---

* ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯ ೧೯೪೧ ಡಿಸೆಂಬರ ಸಂಚಿಕೆಯಲ್ಲಿ ಶಂಬಾ ಜೋಶಿಯವರು ವಾಳ (ವಳ್ಳ) ವನ್ನು ಕುರಿತು ಬರೆದ ಲೇಖನವನ್ನು ಆಸಕ್ತರು ನೋಡಬಹುದು. ಆಕಾಲಕ್ಕೆ ಈ ಬಗೆಯಾಗಿ ಹೇಳಿದವರೂ ವ್ಯಾಖ್ಯಾನಿಸಿದವರೂ ಕಡಮೆ. (ಸಂ)

ಪ್ರತ್ಯಯಗಳು. ಈ ಪ್ರತ್ಯಯಗಳನ್ನು ತೆಗೆದರೆ ಉರ್, ಮುರ್ ಎಂಬ ಶಬ್ದಮೂಲವು (Stem) ಉಳಿಯುವುದು. ಸಂಯುಕ್ತಾಕ್ಷರಗಳು ದ್ವಿತ್ವವಾಗುವ ರೂಢಿಯು ನಮ್ಮ ನುಡಿಯಲ್ಲಿದೆ.

ಉದಾ : ತೊಳ್ತು=ತೊತ್ತು; ಪೆರ್ಮೆ=ಹೆಮ್ಮೆ ಇದರಂತೆ ಮುಚ್ಚು, ಹೊಕ್ಕು ಮೊದಲಾದುವು ದ್ವಿತ್ವವನ್ನು ಹೊಂದಿರುವುವು.

ಬಿಡಿಸು=ಬಿಚ್ಚು, (ಹೊದಿಸು=ಹೊಚ್ಚು) ಇಂತಹ ಮೂರನೆಯ ಪ್ರಕಾರದ (ಒತ್ತಕ್ಷರವುಳ್ಳ) ಹಲವು ಧಾತುಗಳು ಉಂಟು. ಆದರೆ, ಇವೆಲ್ಲವೂ ಸಾಧಿತಗಳು; ಮೂಲಧಾತುಗಳಲ್ಲ.

೪೫. ಸಾಧಿತಧಾತುಗಳಲ್ಲಿ ಎರಡು ಪ್ರಕಾರಗಳನ್ನು ಮಾಡಬಹುದು; (ಅ) ಧಾತುಗಳಲ್ಲದ ನುಡಿಗಳಿಂದ ಮಾಡಿಕೊಂಡುವು; (ಆ) ಧಾತುಗಳಿಂದಲೆ ಮತ್ತೆ ಸಾಧಿಸಿದುವು.

ಶಬ್ದಮೂಲವು ಒಂದೆ ಇದ್ದರೂ ಬೇರೆ ಬೇರೆ ಪ್ರತ್ಯಯಗಳು ಸೇರುತ್ತಲೆ ಅದರ ಅರ್ಥದಲ್ಲಿ ಆಗುವ ಸೂಕ್ಷ್ಮವಾದ ಹೆಚ್ಚುಕಡಿಮೆಗಳು ನೆನಪಿಡುವಂತಹವುಗಳಾಗಿವೆ. ಹರಗು, ಹರಡು, ಹಬ್ಬು (ಪರ್‌ಬು) ಇವೆಲ್ಲವುಗಳ ಮೂಲವು ಒಂದೇ. ಆದರೆ, ಗು, ಡು, ಬು ಪ್ರತ್ಯಯಗಳು ಸೇರಿ, ಎಷ್ಟು ಅಂದ-ಅಂದದ ಹೊಸ ಧಾತುಗಳಾಗುವುವು! ತಿರುಗು, ತಿರುವು, ತಿದ್ದು (ತಿರ್‌ದು) ಇವುಗಳು ಒಂದೇ ಬಳಗದ ನುಡಿಗಳು. ಮೂಲಶಬ್ದವು ಒಂದೆ ಇದ್ದರೂ ಅರ್ಥವೈಚಿತ್ರ್ಯದಿಂದ ಇವೆಲ್ಲವೂ ಬೇರೆ ಬೇರೆ ಶಬ್ದಗಳಾಗಿವೆ. ಕಲಸು, ಕಲಕು, ಎರಡೂ ಒಂದೇ ಮೂಲದಿಂದಾಗಿದ್ದರೂ ಕಲುಸುವುದರ ಅರ್ಥವೆ ಬೇರೆ; ಕಲಕುವುದರ ಅರ್ಥವೆ ಬೇರೆ. ಕಲಸುವುದು ಬೇರೆ ಬೇರೆ ಪದಾರ್ಥಗಳನ್ನು ಕೂಡಿಸುವುದು; ಕಲಕುವುದು ಕದಡುವುದು ಒಂದೇ; ನೀರಿನಂತಹ ಪದಾರ್ಥವನ್ನು ಸ್ಥೂಲವಾದ ಅರ್ಥವು ಒಂದೆ ಇದ್ದರೂ ಅದರಲ್ಲಿ ಸೂಕ್ಷ್ಮವಾದ ಭೇದವಿದೆ. ಅರಚು ಎಂದರೆ ಒದರು, ಚೀರು, ಅರಟು (ಹರಟು) ಎಂದರೂ ಸುಮಾರು ಅದೇ ಅರ್ಥವಿದ್ದರೂ ಇದರ ರೀತಿ ಬೇರೆ; ಅರಚುವುದು ಒಬ್ಬನೆ; ಆದರೆ ಅರಟು(ಹರಟು)ವುದು ನಾಲ್ಕೆಂಟು ಜನ ಸೇರಿ.

ಕು, ಕೆ, ಸು ಮೊದಲಾದ ಪ್ರತ್ಯಯಗಳು ಸೇರಿಕೊಳ್ಳುವಾಗ ಪ್ರಕೃತಿ- ಪ್ರತ್ಯೆಯಗಳ ನಡುವೆ ಅ, ಇ ಅಥವಾ ಉಕಾರದಲ್ಲಿ ಆವುದು ನಿಲ್ಲುವುದೆಂಬುದು ರೂಢಿಯಿಂದ ಹಲವಡೆಗಳಲ್ಲಿ ಇನ್ನೂ ನಿಶ್ಚಿತವಾಗಬೇಕಾಗಿದೆ. ಬೆರೆ+ಕೆ=ಬೆರಕೆ ಅಥವಾ ಬೆರಿಕೆ; ಇದರಂತೆ ಉಗರು, ಉಗುರು ಅಥವಾ ಉಗಿರು; ಕಡಮೆ ಇಲ್ಲವೆ ಕಡಿಮೆ ಇವುಗಳಲ್ಲಿ ಪ್ರತಿಯೊಂದೂ ಸಾಧುವೆಂದು ಪ್ರತಿಪಾದಿಸಬಹುದಾಗಿದೆ. ಆದರೂ ಇವುಗಳಲ್ಲಿ ಅವುದೊಂದರ ಪಕ್ಷಪಾತವನ್ನೂ ಹಿಡಿಯದೆ. ಅದನ್ನು ನಿರ್ಧರಿಸುವ ಹೊಣೆಯನ್ನು ರೂಢಿಗೆ ಬಿಟ್ಟು ಬಿಡುವುದು ಒಳಿತು.

I

(ಅ) ಧಾತುಗಳಲ್ಲದ ನುಡಿಗಳಿಂದ ಮಾಡಿಕೊಂಡ ಧಾತುಗಳು. (ಬೇಕಾದರೆ ಇವುಗಳಿಗೆ ತದ್ಧಿತಧಾತುಗಳೆಂದು ಕರೆದರೂ ಅಡ್ಡಿಯಿಲ್ಲ).

ಪ್ರತ್ಯಯಗಳು	ಸಾಧಿತಧಾತುಗಳು
ಕು, ಂಕು	ಉರ್ಕು; ಉಕ್ಕು; ಸೊರ್ಕು; ಸೊಕ್ಕು; ತುಳುಕು; ಮುಸುಂಕು; ಕೊಂಕು.
ಗು, ಂಗು	ಮಿರುಗು; ಮಿನುಗು; ಬೆಳಗು; ಕೇಗು; ಕೂಗು; ತಂಗು; ಒಣಗು.
ಚು	ಮುಂಚು, ಪೆರ್‌ಚು; ಅರಚು; ಮಿಂಚು; ನುಣ್‌ಚು; ಹಿಂಚು.
ಟು	ಕುಂಟು; ಕೂಂಟು. ಉಂಟು (ಅವ್ಯಯಕ್ರಿಯಾಪದ)
ಡು	ಹೊರಡು; ಮುದುಡು.
ತ್ತು	ಬತ್ತು

ದು	ಒಂದು; ಊದು; ಓದು.
ಪು (ವು, ಹು)	ಒಪ್ಪು; ಎಡವು; ಎಡಹು
ಬು, ಂಬು	ಉರ್ಬು; ಉಬ್ಬು; ಪಲಂಬು; ಹಲಬು.
ಮು	ಒಮ್ಮು; ನೆಮ್ಮು; ಉಣ್ಮು
ರು	ಬೆಳರು (ಬೆಳ್ಳಗಾಗು; ಗಾಬರಿಯಾಗು); ಉಸುರು; ಕೊನರು.
ಸು	ಮೂಸು; ಮೊಗಸು; ಆಲಿಸು; ಓಲೈಸು; ನೆಲಸು; ಬಳಸು
ಳು	ಮರಳು (ಕುದಿ); ಉರುಳು; ಹೊರಳು; ಉಗುಳು.

(ಆ) ಧಾತುಗಳಿಂದ ಸಾಧಿತವಾದ ಧಾತುಗಳು. (ಇವುಗಳಿಗೆ ಬೇಕಾದರೆ ಕೃದಂತನಾಮಗಳೆನ್ನಬಹುದು.)

ಪ್ರತ್ಯಯಗಳು	ಸಾಧಿತಧಾತುಗಳು
ಕು, ಂಕು	ಕುಸಿಕು; ಕುಸಿಂಕು; ಮುರುಕು (ಮುಖದಲ್ಲಿ ಹಾವ ಭಾವಗಳನ್ನು ಪ್ರದರ್ಶಿಸು); ಸಾಕು; ಚೆಲುಕು; ಚೆಲಂಕು; ಕಲಕು; ಕಲಂಕು.
ಗು, ಂಗು	ಕರಗು; ಕರಂಗು; ಅಡಗು; ಅಡಂಗು; ಅಲುಗು. ಹರಗು; ಅರಗು; ಕೊರಗು; ಅಳ್ಗು, ಉಡುಗು; ಎಸಗು;
ಚು	ಕವಿಚು; ಬಿಚ್ಚು; ಬೆರ್ಚು; ಕುಚ್ಚು; ಹಚ್ಚು; ಕೆಚ್ಚು; ನೆಚ್ಚು; ಕಿರಿಚು.
ಜು	ಅಂಜು; ಹಿಂಜು.
ಟು, ಂಟು	ಮುರುಟು; ಮುರಂಟು; ಅರಟು; (ಹರಟು); ಒಟ್ಟು; ಸುರಟು; ಸುರಂಟು.
ಡು	ಹರಡು; ಒಡ್ಡು.
ತು	ಒತ್ತು (ಒದೆ+ತು); ಕಿತ್ತು (ಕೀಳ್ತು); ಬಿತ್ತು (ಬೀಳ್ತು);
ದು	ಅಳ್ದು-ಅದ್ದು (ಎದ್ದು), ಹೊಂದು.
ಪು (ವು.ಹು.)	ಅಪ್ಪು; ಮುಡಿಪು; ಅರಿಪು; ಅರಹು; ತಿಳಿಪು; ತಿಳಿಹು; ಕೆಡೆಪು, ಕೆಡಹು, ತಪು, ನೆಗಪು, ನೆಗವು, ನೆಗಹು, ತಿಣೆಪು, ಇಳಿಪು
ಬು, ಂಬು	ನಿಲುಂಬು, ಹಬ್ಬು, ಕೊಬ್ಬು, ತರಬು, ತಬ್ಬು
ಮು	ಕೆಮ್ಮು (ಕರೆ+ಮು)
ರು	ಅಡರು, ತೊಡರು, ಉದಿರು, ತಳಿರು
ಲು	ಅಳಲು,
ಸು	ತೀರಿಸು, ಬೆರಸು, ಹನಿಸು, ಕಲಸು, ಮರಸು, ಎಳಸು, ಸೆಣಸು, ಈಸು, ಕಳಿಸು
ಳು	ಮುಗುಳು, ಕೆರಳು, ಉಗುಳು

೩೬. ಸಾಧಿತನಾಮಗಳಲ್ಲಿ ವಸ್ತುವಾಚಕ (Concrete) ಗಳಾಗಿರುವವು ಕೆಲವು; ಭಾವವಾಚಕ (Abstract) ಗಳಾಗಿರುವುವು ಕೆಲವು. ವಸ್ತುವಾಚಕನಾಮಗಳನ್ನು ಮಾಡಿಕೊಳ್ಳುವುದಕ್ಕೆ ಇದೀಗ (೪೫ರಲ್ಲಿ ವಿವರಿಸಿದ ಪ್ರತ್ಯಯಗಳಲ್ಲದೆ ಇನ್ನೂ ಕೆಲವು ಹೆಚ್ಚಿನ ಪ್ರತ್ಯಯಗಳನ್ನು ಪೂರ್ವಕಾಲದಿಂದಲೂ ಉಪಯೋಗಿಸುತ್ತ ಬಂದಿರುವುದು ಕಂಡುಬರುತ್ತದೆ) ಈ ವಸ್ತುವಾಚಕನಾಮಗಳಲ್ಲಿ ಹಲವು ನುಡಿಗಳು ಮೂಲತಃ ಸಾಮಾನ್ಯವಾದ General ಅರ್ಥವುಳ್ಳವುಗಳಾಗಿದ್ದರೂ ರೂಢಿಯಿಂದ ಅವುಗಳಿಗೆ ವಿಶಿಷ್ಟಾರ್ಥವು ಮಾತ್ರ ಅಂಟಿಕೊಂಡು ನಿಂತಿದೆ. ಆದರೆ, ಮೂಲದಲ್ಲಿರುವ ವಿಶಾಲವಾದ ಸಾಮಾನ್ಯಾರ್ಥವು ಜನರ ಕಣ್ಮರೆಯಾಗಿ, ವಿಶಿಷ್ಟಾರ್ಥವು ಬಳಕೆಯಲ್ಲಿ ಉಳಿದಿದೆ.

ಕೋಡಗವೆಂದರೆ ಮಗನೆಂದು ಅರ್ಥವಿದೆ. ಕೋಡು ಎಂದರೆ ಮರಣ ಕೊಂಬೆ (ಟೊಂಗೆ); ಕೋಡಗ ಎಂದರೆ ಕೊಂಬೆಯಲ್ಲಿದ್ದುದು; ಮರದಲ್ಲಿದ್ದುದು ಮಂಗವೆಂದು ರೂಢಾರ್ಥವು ಬಂತು. ಆದರೆ, ಮರದಲ್ಲಿ 'ಕೋಡು'ಗಳ ಮೇಲೆ ಬರಿ ಮಂಗಗಳೇ ಏಕೆ-ಇಣಚಿ, ಗಿಳಿ, ಕಾಗೆ, ಕೋಗಿಲೆ ಮೊದಲಾದುವು ಇರುವುವು. ಅವೆಲ್ಲವೂ ಒಂದರ್ಥದಿಂದ ಕೋಡುಗಳೇ. ಆದರೂ ಈ ಸಾಮಾನ್ಯಾರ್ಥವು ಕಣ್ಮರೆಯಾಗಿ, ಕೋಡಗವೆಂದರೆ ಮಂಗವೆಂಬ ವಿಶಿಷ್ಟಾರ್ಥವು ಮಾತ್ರ ಉಳಿದಿರುವುದು. ಇದರಂತೆಯೆ, ಚಿಗುರ-ಚಿಗಿ(ಜಿಗಿ)ವ ಸ್ವಭಾವವುಳ್ಳದು; ಜಿಗಿಯುವ ಪ್ರಾಣಿಗಳು ಬೇರೆ ಹಲವು ಇದ್ದರೂ ಚಿಗರೆ (ಜಿಂಕೆ) ಎಂಬುದು ಒಂದು ವಿಶಿಷ್ಟಪ್ರಾಣಿಗಳಿಗಷ್ಟೆ ಹೆಸರು.

ವಸ್ತುವಾಚಕನಾಮಗಳಿಗೆ ಇರುವ ಹೆಸರುಗಳಲ್ಲಿ ಹುದುಗಿಕೊಂಡಿರುವ ಅಪಾರವಾದ ಅರ್ಥವನ್ನು ನೋಡಿದರೆ ಆ ನುಡಿಗಳನ್ನು ನೇರ್ಪಡಿಸಿಕೊಂಡ ಕಂನಾಡಿಗರ ಜಾಣ್ಮೆಯನ್ನು ಕಂಡು ಮನಸ್ಸು ಸೋಜಿಗಗೊಳ್ಳುತ್ತದೆ. ಕೆಚ್ಚನೆಯದಾಗಿ (ಕೆಂಪಾಗಿ) ಇರುವುದರಿಂದ ಅದು ಕೆನ್ನೆ; ಕೆಕ್ಕೆ. ಆರೋಗ್ಯವಂತರ ಕೆನ್ನೆಗಳು ಕೆಂಪಾಗಿ ಇರುವುದುಂಟು. ಕಂನಾಡಿನ ಮೊದಲಿಗರು ಆರೋಗ್ಯವಂತರಾದ ವೀರರಾಗಿದ್ದರೆಂದು ಇತಿಹಾಸವು ಹೇಳುತ್ತಲಿದೆ. 'ಕೆನ್ನೆ' ಎಂಬ ನುಡಿಯು ಆ ಕಾಲದ ಕನ್ನಡಿಗರ ಪರಿಪುಷ್ಟವಾದ ದೈಹಿಕ ಸ್ಥಿತಿಯನ್ನು ಚಿತ್ರಿಸುವ ಸೊಗಸಾದ ಶಬ್ದವಾಗಿದೆ.

ಬಗೆದು ಭಾವಿಸಿದರೆ, ಕಂನುಡಿಯ ಒಡ್ಡೊಂದು ಪದವೂ ಹೀಗೆಯೇ ಅಂದ ಅಂದದ ಅರ್ಥಯುಕ್ತವಾದ ಹುರುಳಿನ ನುಡಿಯಾಗಿರುವುದೆಂದು ಮನವರಿಕೆಯಾಗದೆ ಇರದು.

ಪ್ರತ್ಯಯಗಳು	ವಸ್ತುವಾಚಕನಾಮಗಳು
ಅ	ತೋಡು+ಅ=ತೋಟ, ಪಡು+ಅ=ಪಟ್ಟ ಬಿಗು+ಅ=ಬೀಗ
ಅಣ	ಪಟ್ಟ+ಅಣ=ಪಟ್ಟಣ, (ರಾಜಧಾನಿ)
	ಅರ (ಧರ್ಮ)+ಅಣ = ಅರಣ (ಅಹೇರು)
	ಅರೆ (ತಿಕ್ಕು)+ಅಣ = ಅರ್ನ (ಅರಣ), ಕೊಟ್ಟಣ
	ಕಡಿ, ವಣ, ಪೊಟ್ಟಣ
ಇ	ಕಳ್ (ಹಾಲು)+ಇ =ಕಳ್ಳಿ, ಹೋರು+ಇ =ಹೋರಿ, ಕೀಲಿ, ಇಲಿ, ಉಡಿ (ಉಡೆ), ಬೆಳ್ಳಿ
ಎ	ಹೊಗು+ಎ=ಹೊಗೆ, ಹೊರು+ಎ=ಹೊರೆ, ಅರಳು+ಎ = ಅರಳೆ ಕೆನ್+ಎ=ಕೆನ್ನೆ, ಇಕ್ಕೆ, ಕುಳೆ, ಸೋರೆ, ತೊಡೆ, ಚಿಕ್ಕೆ (ಚುಕ್ಕೆ), ಉಡೆ, (ಉಡಿ),
ಕ	ಬಾಳೆ + ಕ = ಬಾಳಕ ಅಲೆ+ಕ=ಅಲಕ
ಕು	ಕರಿಕು, ಉಸುಕು, ಮುಸುಕು, ಸರಕು
ಕೆ	ಅತಿಕೆ, ಒನಿಕೆ (ಒನಕೆ), ಹೊದಿಕೆ, ಮೊಳಕೆ.
ಗ	ಕಡಗ, ಕೋಡಗ.
ಗು	ಅಲಗು, ಹಡಗು, ಬುರುಗು
ಗೆ	ಗುದಿಗೆ, ಬಡಿಗೆ, ಸರಿಗೆ, ತೊಡಿಗೆ, ಕಿರಿಗೆ, ಉದ್ದಿಗೆ, ಕಡಿಗೆ (ಮುಟ್ಟು)
ಚು	ಅಚ್ಚು, ಅಂಚು, ನುಚ್ಚಿ, ಕಿಚ್ಚು
ಚೆ	ಕೊಳಚೆ, ಹುಣಚೆ, ಮಿಡಚೆ, ತುರಿಚೆ (ಚುರಿಚೆ)
ಜು	ಗುನಿ+ಜು=ಗುಂಜು, ಮಂಜು
ಜೆ	ಬರಿದ+ಜೆ=ಬಂಜೆ, ಹಂಜೆ

ಟ	ಅಡ್ಡ+ಟ=ಅಟ್ಟ
ಟು	ತರೆ+ಟು=ತರಟು (ತಟ್ಟು). ಕಟ್ಟು (Frame) ಮುಟ್ಟು
ಟೆ	ಗಂಟೆ, ಝಾಂಗಟೆ
ಡು	ಗುಳ್+ಡು=ಗುಂಡು, ತವಡು (ತಿವಡು), ಕೊರಡು, ಅವಡು, (ಹುರುಳು) ಬೆಂಡು.
ಡೆ	ಗಡ್ಡೆ, ಬುರುಡೆ, ಪುಂಡೆ (ಪುಂಡಿ)
ತ	ಅಗಳ್ತ (ಅಗಳತ), ಕೊಯ್ತು (ಕುಡುಗೋಲಿನ ಒಂದು ಪ್ರಕಾರ)
ತು	ತೊತ್ತು (ತೊಳ್ತು) ಎತ್ತು (ಎಳ್ತು), ಬಿತ್ತು (ಬೀಜ)
ತೆ	ಕತೆ (ಕಳ್ತೆ), ತತ್ತಿ (ತಳ್ತೆ), ಮಿಡಿತೆ, ಮುಗುತೆ.
ದು	ಕೈದು, ಹರದು (ಸರಕು), ಬಿರಿದು, ಹದ್ದು (ಪರ್ದ್ದು)
ದೆ	ಪಳಿದೆ, ಕವುದೆ, ಚಿಂದೆ (ಚಿಂದಿ)
ಪು	ಚಿಂಪು (ಸಿಂಪು), ಚಿಪ್ಪು, ಉಡುಪು, ಬಿಳುಪು (ರೋಗವಿಶೇಷ)
ಪೆ, ಂಪೆ	ಕುಪ್ಪೆ (ಸಣ್ಣ ಸೀಸೆ), ತಿಪ್ಪೆ, ಸಿಪ್ಪೆ, ಇರುಂಪೆ (ಇರುವೆ)
ಬು	ತುರುಬು, ಸಿಡುಬು, ಕೊಂಬು, ಕಿರುಬು, ಉಸುಬು, ಚೆಂಬು
ಬೆ, ಂಬೆ	ಬಣಂವೆ (ಬಣವೆ), ಸಿಂಬೆ, ಕುಂಬೆ
ಮು	ಕೆರೆ+ಮು=ಕೆಮ್ಮು, ದಣಿ + ಮು=ದಮ್ಮು
ರ	ಗುಡಾರ, ಬಿಡಾರ
ರು	ತಳಿರು, ಬಸಿರು, ಹಸುರು, ಉಗುರು, ಹೊದುರು, ಬೆಮರು, ಉಸಿರು
ಲು	ಹೆಳಲು, ಮಳಲು (ಮಣಲು), ಬೆರಲು, ತಿಳಲು, ಹಿತ್ತಿಲು (ಪಿಂತಿಲ್) ಉಸಿಲು
ವು	ತೊಡವು (ಆಭರಣ), ಮೇವು, ತಿರುವು (ಹೆದೆ)
ವೆ	ಹರವೆ, ಇರುವೆ, ಒಡವೆ
ಸು	ಹೊರಸು, ಇರಸು, ಆಣಸು, ಬೆಳಸು, (ಬೆಳಸಿ)
ಸೆ	ತೊನಸೆ, (ತೊನೆ-ಹಾರು), ಹುಣಿಸೆ
ಳು	ಮುಗುಳು, ಕುರುಳು, ಉಗುಳು, ಹರುಳು, ತಿರುಳು, ಮುಚ್ಚಳು.
ಳೆ	ಗುಳ್ಳೆ, ಮಿಳ್ಳೆ

೪೭. ಭಾವವಾಚಕ ನಾಮಗಳನ್ನುಂಟುಮಾಡುವ ಪ್ರತ್ಯಯಗಳು. ೪೧ರಲ್ಲಿ ಹೇಳಿದ ಪ್ರತ್ಯಯಗಳಿಗಿಂತ ಕೆಲವು ಹೆಚ್ಚಿಗಿವೆ.

ಉದಾ : ತನ, ಪಿ, ಮೆ, ವಳಿ

ಉಕಾರಾಂತಗಳಾದ ಕುರುಡು, ಹುಚ್ಚು ಎಂಬಿವೇ ಮೊದಲಾದ ಹಲವು ಶಬ್ದಗಳು ಮೂಲತಃ ಭಾವನಾಮಗಳಾಗಿವೆ. ಆದರೆ, ಇದನ್ನರಿಯದೆ 'ಕುರುಡುತನ' 'ಹುಚ್ಚುತನ' ಎಂದು ಮುಂತಾಗಿ ಕೆಲರು ಮತ್ತೆ 'ತನ' ಪ್ರತ್ಯಯವನ್ನು ಸೇರಿಸುವರು ಇದು ತಪ್ಪು. 'ತನ' ಪ್ರತ್ಯಯವನ್ನು ಹಚ್ಚುವುದೇ ಇದ್ದಲ್ಲಿ ಇಂತಹ ಭಾವನಾಮಗಳಿಗೆ ತತ್‌ಶೀಲಾರ್ಥಕವಾದ 'ಅ' ಪ್ರತ್ಯಯವನ್ನು ಸೇರಿಸಬೇಕು. ಕುಂಟು+ಅ= ಕುಂಟ, ಕುರುಡ, ಹುಚ್ಚ ಮೊದಲಾದವುಗಳಿಗೆ ಆಮೇಲೆ 'ತನ' ಪ್ರತ್ಯಯವನ್ನು ಸೇರಿಸಿ ಕುರುಡುತನ ಎಂದು ಮುಂತಾಗಿ ಪ್ರಯೋಗಿಸಬಹುದು.

ಮುಂದೆ ಕೊಟ್ಟಿರುವ ಪ್ರತ್ಯಯಗಳಲ್ಲಿ ಕೆಲವು ಕೇವಲ ಧಾತುಗಳಿಗೆ ಮಾತ್ರ ಸೇರುವುವು: ಇನ್ನು ಕೆಲವು ನಾಮಗಳಿಗೂ ಧಾತುಗಳಿಗೂ ಕೂಡಿಯೇ ತಗಲುವುವು: ಅದರ ವಿವರವನ್ನು ಶಕ್ಯವಿದ್ದ ಮಟ್ಟಿಗೆ ಆ ಪ್ರತ್ಯಯ

ಗಳೊಡನೆ ಕೊಡಲಾಗಿದೆ. ಕೆಲವು ಶಬ್ದಗಳಿಗೆ ಬೇರೆಬೇರೆ ಪ್ರತ್ಯಯಗಳನ್ನು ಹಚ್ಚಿ ಭಾವನಾಮಗಳನ್ನು ಮಾಡಿಕೊಳ್ಳಬಹುದಾಗಿದೆ.

ಉದಾ : ಗೆಯ್ಮೆ; ಗೆಯ್ತ; ನಡೆ; ನಡತೆ; ನಡೆವಳಿಕೆ; ನಡಿಗೆ; ತಾಳಿಕೆ; ತಾಳೆ;

ಇವುಗಳಲ್ಲಿ ಸೂಕ್ಷ್ಮವಾದ ಅರ್ಥಭೇದವು ಇದ್ದೇ ಇದೆ. ಆದರೂ ಈ ಪ್ರತ್ಯಯಗಳಿಗೆ ಸಾಕಷ್ಟು ನಿಶ್ಚಿತಾರ್ಥವು ಇನ್ನೂ ಬಂದಿಲ್ಲ. ಅದು ಬರುವಂತೆ ಈ ಪ್ರತ್ಯಯಗಳು ಹೆಚ್ಚಾಗಿ ಬಳಕೆಯಲ್ಲಿ ಬರುವುದು ಅವಶ್ಯವಾಗಿದೆ.

ಪ್ರತ್ಯಯಗಳು	ಸೇರುವ ಸ್ಥಳ ಮತ್ತು ಅದರ ಉದಾಹರಣೆಗಳು
ಅ	ವ್ಯಂಜನಾಂತ ಮತ್ತು ಉಕಾರಾಂತ ಧಾತುಗಳಿಗೆ ಉದಾ : ಸೋಲು; ಗೆಲ್ಲು; ಮಾಟ; ಓಟ; ತೂಕ; ಬೇಸರ
ಅಣ	ಸಾಧಾರಣವಾಗಿ ಉಕಾರಾಂತ ಧಾತುಗಳಿಗೆ ಉದಾ : ಒಡ್ಡಣ (ಗುಂಪು, ಸಮುದಾಯ); ಇಟ್ಟಣ; ಕಟ್ಟಣ.
ಇ	ವ್ಯಂಜನಾಂತಗಳಿಗೆ ಮತ್ತು ಉಕಾರಾಂತಗಳಿಗೆ ಉದಾ : ಮುದುಡಿ (ಮುದ್ದಿ); ಜೋಲಿ; ಪೋಲಿ [ತುಂಟತನ]
ಎ	ವ್ಯಂಜನಾಂತಗಳಿಗೆ ಉದಾ : ಕೊಲೆ; ಹೊಲೆ; ಬೇನೆ; ಕಲೆ [ವಿದ್ಯೆ] ಉಕಾರಾಂತ ಧಾತುಗಳಿಗೆ ಉದಾ : ನಗೆ; ಅರಟೆ
ಕ	ಇದು ಬಹಳ ಅಪರೂಪವಾದ ಪ್ರತ್ಯಯವು ಉದಾ : ಬಿಂಕ; ತಳ್ಳಂಕ; ಕೆಂಕ [ಪಂ. ರಾಮಾಯಣ]; ಪ್ರಯೋಗ : ಭೂನಾರ್ಥರ್ಕಳ ಬಾಳ್ಕೆ ಚಿತ್ತಕೆ ಸದಾ ತಳ್ಳಂಕವು - ರತ್ನಾಕರ ವರ್ಣಿ
ಕು, ಂಕು	ವ್ಯಂಜನಾಂತಗಳಿಗೆ ಉದಾ : ಬೆಳಕು; ತಳಕು [ಥಳಕು]; ಉರ್ಕು; ಸೊಕ್ಕು ಇ-ಎಕಾರಾಂತಗಳಿಗೆ ಉದಾ : ಬಿರುಕು; ಹರಕು; ಕೊಳಕು; ತೊಡಕು; ತೊಡಂಕು ಉಕಾರಾಂತಗಳಿಗೆ ಉದಾ : ಕೆಡಕು; ನಸುಕು
ಕುಳಿ	ಕೆಲವೆಡೆಗಳಲ್ಲಿ ಉದಾ : ಸವೆಕುಳಿ; ಅರಕುಳಿ; ಪೆಂಕುಳಿ [ಹುಚ್ಚತನ]
ಕೆ	ಬಹುತರವಾಗಿ ಎಲ್ಲ ಧಾತುಗಳ ಅಂತ್ಯಗಳಲ್ಲಿಯೂ ಉದಾ : ವ್ಯಂಜನಾಂತ ಧಾತುವಿಗೆ ಮಾಳ್ಕೆ; ಬಾಳ್ಕೆ; ಇ-ಎಕಾರಾಂತ ಧಾತುವಿಗೆ-ಅರಿಕೆ; ಹರಕೆ; ಬೆರಕೆ

ಉಕಾರಾಂತ ಧಾತುವಿಗೆ-ನಾಚಿಕೆ; ಅಂಜಿಕೆ; ಬೇಡಿಕೆ
ಧಾತುಗಳಲ್ಲದ ಶಬ್ದಾಂತ್ಯದಲ್ಲಿಯೂ
ಉದಾ : ಹೆಸರಿಕೆ; ಗೌಡಿಕೆ; ಬ್ರಾಹ್ಮಣಿಕೆ
ತೀರ ಕ್ವಚಿತ್ತಾಗಿದೆ

ಗ — ಉದಾ : ಒಗ್ಗ (ಬಂಡಿಯ ದಾರಿಯೊಳಗಿನ ತಗ್ಗುಮಿಟ್ಟಿ)
ಧಾತುಗಳಿಗೂ ಧಾತುಗಳಲ್ಲುವುಗಳಿಗೂ ಸೇರುವುದು.

ಗು — ಉದಾ : (i) ಮುಗ್ಗು (ಮುಂ+ಗು); ಕುಗ್ಗು.
(ii) ಹಿಗ್ಗು ; ಬೆಳಗು (ನಸುಕು); ಪಾಂಗು (ರೀತಿ)
ಬಹುತರ ಎಲ್ಲ ಕಡೆಗೆ ಕಾಣಿಸಿಕೊಳ್ಳುವುದು.

ಗೆ — ಉದಾ : ವ್ಯಂಜನಾಂತಕ್ಕೆ-ಸುಲಗೆ; ಏಳಿಗೆ
ಇ-ಎಕಾರಾಂತಕೆ-ಸುಲಿಗೆ; ನಡಿಗೆ; ಎಸಗೆ
ಉಕಾರಾಂತಕ್ಕೆ-ಅಪ್ಪುಗೆ; ನಂಬುಗೆ;
ಹಬ್ಬುಗೆ; ಬೇಸುಗೆ;
ವ್ಯಂಜನಾಂತಗಳಿಗೆ

ಚು — ಉದಾ : ನಚ್ಚು (ನಲ್+ಚು)
ಇ-ಎಕಾರಾಂತಗಳಿಗೆ
ಉದಾ : ಪೆಚ್ಚು (ಪೆರ್ಚು)

ಜು — ಗುಜ್ಜು; ಗುಂಜು; ಪರಿಜು; (ರೂಪ, ಆಕಾರ, ರೀತಿ).

ಜೆ — ಬಹಳ ಕ್ವಚಿತ್ತಾಗಿದೆ.
ಉದಾ : ಒಟ್ಟಜೆ (ಗುಂಪು)

ಟು, ಂಟು — ಇದು ಕೆಲವೆಡೆಗಳಲ್ಲಿ ಕಂಡುಬರುವುದು; ಇದನ್ನು ಅಕಾರಾಂತವಾಗಿಯೂ,
ಎಕರಾಂತವಾಗಿಯೂ ಹೇಳುವ ರೂಢಿಯುಂಟು.
ಉದಾ : ಒಗಟು: ಒಗಟ; ಒಗಟೆ

ಟೆ — ಬಹುತರ ಉಕಾರಾಂತಗಳಲ್ಲಿ
ಉದಾ : ಉರ್ಬಟೆ; ಹೋರಟೆ
ಪ್ರಯೋಗ : ಇನಿತೊಂದು ಉರ್ಬಟೆಯೇಂ ಪುಳಿಂದ? -ಷಡಕ್ಷರಿ
ಪುರಜನ ಮರುಗಿತು ಭೀಮ-ದುರ್ಯೋಧನರ ಹೋರಟೆಗೆ; - ಕು. ವ್ಯಾ,

ಡು — ಬಹುತರ ಇ-ಉಕಾರಾಂತಗಳಿಗೆ;
ಉದಾ : ಕುರುಡು; ಕಿವುಡು; ಕವಡು

ತ — ಉಕಾರಾಂತ ಹಾಗೂ ಒಂದಕ್ಕರದ ಧಾತುಗಳನ್ನು ಬಿಟ್ಟು ಉಳಿದ ಎಲ್ಲ ಧಾತುಗಳಿಗೂ
ಉದಾ : ವ್ಯಂಜನಾಂತಕ್ಕೆ-ಗೆಯ್ತ, ಹೊಯ್ತ, ಬೆಯ್ತ ಉಳಿದುವುದಕ್ಕೆ-ಕೊರತೆ
(ಚಳಿ, ನೋವು)

ತನ — ಮುಖ್ಯವಾಗಿ ನಾಮಗಳಿಗೆ
ಉದಾ : ಮನೆತನ, ಹೇಡಿತನ, ಹುಚ್ಚತನ, ಬಡತನ, ಹೊಸತನ
ಅಪವಾದ : (ಧಾತುವಿಗೂ ಕ್ವಚಿತ್ತಾಗಿ)
ಉದಾ : ಒಗೆತನ

ತೆ ಹಲವೆಡೆಗೆ ಬರುತ್ತದೆ
ಉದಾ : ವ್ಯಂಜನಾಂತಕ್ಕೆ-ಅಳತೆ, ನಡತೆ, ಕೊರತೆ
ಬೇರೆ ಕೆಲವಕ್ಕೆ-ದೊಡ್ಡಿತೆ

ದು ಹಲವೆಡೆಗಳಲ್ಲಿ ಶಬ್ದ ಮೂಲಕ್ಕೆ.
ಉದಾ : ಕೆಂದು, ಕುಂದು, ಬರಿದು

ಪು ಎಲ್ಲೆಡೆಗಳಲ್ಲಿ
ಉದಾ : ವ್ಯಂಜನಾಂತಕ್ಕೆ-ಬಲ್ಪು, ಕೂರ್ಪು, ಆರ್ಪು, ನುಣ್ಪು, ತಣ್ಪು (ತಂಪು)
ಒಂದಕ್ಕರದ ಧಾತುಗಳಿಗೆ-ಕಾಪು, ಮೇಪು, ಓಪು ಇ-ಎಕಾರಾಂತಗಳಿಗೆ
ಉದಾ : ಬಿಗುಪು, ಉರುಪು, ಹೊಳಪು, ಪಡೆಪು, ತೆರಪು, ಅಲಂಪು, ಒಡಪು, ಕಂಪು, ಇಂಪು, ಪೆಂಪು
ಉಕಾರಾಂತದಲ್ಲಿ ಕೆಲವೆಡೆಗೆ
ಕಡುಪು (ಹುರುಪು)

ಪಿ ಕೆಳಗಣ ಎರಡೇ ಎರಡು ಉದಾಹರಣೆಗಳ ಹೊರತು ಬೇರೆ ಪ್ರಯೋಗಗಳೇ ಸಿಕ್ಕುವುದಿಲ್ಲ.
ಉದಾ : ಕಲ್ಪಿ (ವಿದ್ಯೆ), ನೋಂಪಿ (ವ್ರತ)* ಶಮದ ೨೧೧.

ಬು ಹಲವೆಡೆಗಳಲ್ಲಿ ಬರುವುದು.
ಉದಾ : ಇಂಬು, ಅರಬು, ಬಿರುಬು, ಹೊಲಬು
ಪ್ರಯೋಗ : ಲೋಲಲೋಚನೆ!
ಬಿರುಬು ನುಡಿಯದೆ ತನ್ನನುಳುಹೆಂದ - ಕು. ವ್ಯಾಸ.

ಮು ಕೆಲವೆಡೆಗಳಲ್ಲಿ ಕಾಣಿಸಿಕೊಳ್ಳುವುದು
ಉದಾ : ದುಮ್ಮು, ಹಮ್ಮು, ಬಿಮ್ಮು

ಮೆ ಹಲವೆಡೆಗಳಲ್ಲಿ ಬರುವುದು
ಉದಾ : ನಾಮ, ವಿಶೇಷಣಗಳ ಮುಂದೆ-ಬಲ್ಮೆ, ಮೇಲ್ಮೆ, ಕೀಳ್ಮೆ, ಪೆರ್ಮೆ, ಅರಿಮೆ, ಜಾಣ್ಮೆ, ನೆಲ್ಮೆ,
ವ್ಯಂಜನಾಂತಗಳಿಗೆ ತಾಳ್ಮೆ, ಗೆಯ್ಮೆ, ಇ- ಎಕಾರಾಂತ ಧಾ, ಗಳಿಗೆ-ಒಲ್ಮೆ, ಒಲುಮೆ, ನಲ್ಮೆ ನಲುಮೆ

ರ ಕೆಲವು ಉಕಾರಾಂತ ಧಾತುಗಳಿಗೆ ಮಾತ್ರ
ಉದಾ : ಒತ್ತರ, ಎತ್ತರ, ಹತ್ತರ (ಹತ್ತಿರ)

ರು ಕೆಲವಡೆಗಳಲ್ಲಿ ಕಂಡುಬರುವುದು
ಉದಾ : ನವುರು (ನಾಜೋಕು), ಒಗರು, ತೊಡರು, ಅಳುರು (ಅಂಜಿಕೆ); ಹಸುರು

ಲು ಹಲವೆಡೆಗೆ ಬರುವುದು.

---

* ಮಾನ್ಯ ಬಿ. ಎಂ. ಶ್ರೀ ಅವರ ಸಂಭಾವನಾ ಗ್ರಂಥದಲ್ಲಿ ಈ ಲೇಖಕನು ಬರೆದ 'ಅಪರೂಪಗಳಾದ ನೋಂಪಿ, ಕಲ್ಪಿ' ಲೇಖ ಓದಿ

ಉದಾ : ವ್ಯಂಜನಾಂತಕ್ಕೆ - ಹೊಯ್ಲು, ಸುಯ್ಲು, ಕೊಯ್ಲು, ಮಯ್ಲು (ಹೊಲಸು)
ಇಕಾರಾಂತಕ್ಕೆ - ಸಡಿಲು (ಸರಿ+ಲು)
ಉಕಾರಾಂತಕ್ಕೆ - ಅಳಲು
ಒಂದಕ್ಕರದ ಧಾತುವಿಗೆ-ಕಾವಲು

ವು ಬಹುತರ ಎಲ್ಲೆಡೆಗಳಲ್ಲಿ
ಉದಾ : ವ್ಯಂಜನಾಂತಕ್ಕೆ-ನಿಲುವು, ಕಳುವು, ಚೆಲುವು
ಇ-ಎಕಾರಾಂತಕ್ಕೆ-ಉಳಿವು, ಪಳಿವು, ತಿಳಿವು, ಹಸಿವು, (ಹಸವು), ನಲಿವು, ದಣಿವು, ಕೆಸುವು, ಬಿಗುವು, ಮರವು, ಅಳವು, ತೆರವು
ಒಂದಕ್ಕರದ ಧಾತುವಿಗೆ-ಕಾವು, ನೋವು ಬಾವು, ಸಾವು

ವಿ ಎಕಾರಾಂತ+ಧಾತುಗಳಿಗೆ ಮಾತ್ರ.
ಉದಾ : ಬಳವಿ, ಅಳವಿ, ನೆರವಿ, ತೊರವಿ, ಬೆಳವಿ

ವೆ ಕೆಲವು ಒಳ್ಳೆಯ ಪ್ರಯೋಗಗಳು ದೊರೆಯುತ್ತವೆ
ಉದಾ : ಸೇರುವೆ, ಮರವೆ, ಎಳವೆ, ಬಾಳುವೆ
ಪ್ರಯೋಗ : ಮರವೆ ಪಿಂಗಿದಂ - ಶ. ಮ. ದ.
ಎಳವೆಯೊಳು ತಂದೆತಾಯ್ಗಳಿಗೆ.
ನಡುವೆರೆಯದೊಳು ನಲ್ಲನಿಗೆ,
ಅಡಕಮೆನಿಪುದು ಅಬಲೆಯರು! ಹದಿಬದೆಯ ಧರ್ಮ

ಸ ಕೆಲವಡೆಗಳಲ್ಲಿ
ಉದಾ : ಬೇವಸ, ಹಮ್ಮ್ಸ, ತಣ್ಣಸ (Coldness)

ಸು ಹಲವು ನುಡಿಗಳಲ್ಲಿ ಇದ್ದುದನ್ನು ಕಾಣಬಹುದು.
ಉದಾ : ಮುನಿಸು, ಮುಳಿಸು, ಕಿನಿಸು, ಗುಡಸು (ಗಡಚು) ಬಿರುಸು, ತುರಸು (ಈರ್ಷೆ), ಹೊಲಸು

ಹ ಹೊಸಗನ್ನಡದಲ್ಲಿ ರೂಢವಾಗಲಾರಂಭಿಸಿವೆ.
ಉದಾ : ಬರೆಹ, ಮೀಹ, ತೊರೆಹ

ಹು ವು>ಪು<ಹು ; ಆದುದರಿಂದ, 'ಹು' ಪ್ರತ್ಯಯದ ಉದಾಹರಣೆಗಳನ್ನು ಇಲ್ಲಿ ಮತ್ತೆ ಬೇರೆ ಹೇಳುವ ಕಾರಣವಿಲ್ಲ. ಆದರು 'ಹು'ಪ್ರತ್ಯಯವೆ ಸೇರಿ ಆದ ಹಲವು ಹೊಸನುಡಿಗಳು ಹೊಸಗನ್ನಡದಲ್ಲಿ ತಲೆದೋರುತ್ತಲಿವೆ.
ಉದಾ : ನೆನಹು, ಕುರುಹು, ಬಿಗುವು, ಬಲುಹು

ಳ ಕೆಲವೆಡೆಗಳಲ್ಲಿ
ಉದಾ : ಪದುಳ (ಹದುಳ), ಮುಚ್ಚಳ

ಳು ಕರುಳು (ಪ್ರೀತಿ)

ವಳಿ ವಣಿಗೆ (ವಳಿಗೆ) } ಹಲವೆಡೆಗಳಲ್ಲಿ
ಉದಾ : (i) ವ್ಯಂಜನಾಂತಕ್ಕೆ-ಸಲ್ವಳಿ (ಸಲುವಳಿ)
ಇ-ಎಕಾರಾಂತಕ್ಕೆ-ನುಡಿವಳಿ, ಹಿಡಿವಳಿ
(ಒಕ್ಕಲುತನ, ನಡೆವಳಿ,
ಉಕಾರಾಂತಕ್ಕೆ-ಸಾಗುವಳಿ, ಹುಟ್ಟುವಳಿ
(ii) ಬರೆವಣಿಗೆ, ಉರುವಣಿಗೆ, ಮೆರವಣಿಗೆ, ಬೆಳವಣಿಗೆ

೪೮. ಶೀಲ, ಗುಣ, ಉದ್ಯೋಗವಾಚಕ ಪ್ರತ್ಯಯಗಳಲ್ಲಿ ಈವರೆಗೆ ಹೇಳಿದುವುಗಳಿಗಿಂತಲೂ ಹೊಸವು ಹೆಚ್ಚಿಗಿವೆ. ಇವುಗಳನ್ನು ಚೆನ್ನಾಗಿ ಅರಿತುಕೊಂಡರೆ ಹಿಂದಿನವರ ಪದ್ಧತಿಗೆ ಅನುಸರಿಸಿ, ಇಂದು ನಮಗೆ ಬೇಕಾದ ಹೊಸ ಪ್ರತ್ಯಯಗಳನ್ನು ಉಂಟುಮಾಡಿಕೊಳ್ಳುವ ಹದವೂ ಗೊತ್ತಾಗಬಹುದಾಗಿದೆ. ಈ ಪ್ರತ್ಯಯಗಳಲ್ಲಿ ಅ, ಇ, ಕ, ಮೊದಲಾದುವುಗಳನ್ನು ಬಿಟ್ಟರೆ ಉಳ್ಳ, ಅಳಿ (ಅಡಿ), ಕುಟಿಗ (ಕುಟ್ಟಿಗ) ಮುಂತಾದ ಹಲವು ಪ್ರತ್ಯಯಗಳು ಇನ್ನೂ ಶಬ್ದಸ್ವರೂಪವನ್ನು ಕಳೆದುಕೊಂಡಿಲ್ಲ; ಆದುದರಿಂದ, ಈ ಬಗೆಯ ಪ್ರತ್ಯಯಗಳ ಗುಂಪೆ ಬೇರೆಯಾಗಿವೆ.

ಸಂಸ್ಕೃತದಿಂದ ಕನ್ನಡದಲ್ಲಿ ಬಂದ ಪ್ರತ್ಯಯಗಳು ಕೆಲವಿವೆ. 'ಕಾರ' ಪ್ರತ್ಯಯವು ಇವುಗಳಲ್ಲೆಲ್ಲ ಮಹತ್ತ್ವದ್ದು. ಇದಿಲ್ಲದೆ ಕಂನುಡಿಯಲ್ಲಿ ಮಾತನಾಡುವುದಕ್ಕೂ ಸಾಧ್ಯವಿಲ್ಲ. ಅಂಗಡಿಕಾರ, ಕೂಲಿಕಾರ ಎಂದು ಮೊದಲಾದ ಕಂನುಡಿಗಳೊಡನೆ ಇದು ಬೇಕಾದ ಹಾಗೆ ಕೂಡಿಕೊಳ್ಳುತ್ತದೆ. ಗಾರ ಎಂಬುದು ಕಾರ ಪ್ರತ್ಯಯದ ಇನ್ನೊಂದು ಸ್ವರೂಪ. ವಂತ, ಸ್ತ (ಸ್ಥ) ಇವು ಇನ್ನೂ ಕಂನುಡಿಗಳೊಡನೆ ಅಷ್ಟು ಬೆರೆತುಕೊಂಡಿಲ್ಲ. ಆದರೂ ಹಣವಂತ, ರೊಕ್ಕಸ್ತ ಇವೇ ಮೊದಲಾದ ಕೆಲವು ಉದಾಹರಣೆಗಳನ್ನು ಕಾಣಬಹುದಾಗಿದೆ.

ಮುಸಲ್ಮಾನಿಯಿಂದಲೂ ಕೆಲವು ಪ್ರತ್ಯಯಗಳು ಬಂದಿವೆ. ದಾರ, ಕೋರ ಎಂಬಿವೇ ಇವಕ್ಕೆ ಉದಾಹರಣೆ

ಆವ ಅರ್ಥದಲ್ಲಿ ಆವ ಪ್ರತ್ಯಯಗಳು ಬರುವುವು?		ಉದಾಹರಣೆಗಳು
೧. ಶೀಲ, ಗುಣ ಅಥವಾ ಸ್ವಭಾವದಲ್ಲಿ: ಅ, ಇ, ಕ, ಬುರು ಇಗ, ಪ (ಪು), ಯ ಆಡಿ, ಆಳಿ, ಇಲಿ, ಉಳ (ಉಳ್ಳ), ಉಳಿ, ಕುಳಿ, ಗುಳಿ ಕೋರ, ತಿನಿ, ವಾಳ (ವಳ)	ಅ.	ಜಾಣ, ಕುಂಟ, ತುಂಟ, ಪೋರ
	ಇ	ಕೆಲಸಿ, ಹೋರಿ, ಕಿಡಿ, ತಿನಿ, ಉಣಿ, ಉಣ್ಣಿ, ಕೂಳಿ (ಗೂಳಿ)
	ಕ	ಬಡಕ, ಕೊಳಕ, ಕುಡುಕ ಮುದುಕ, ಊಡುಕ, ಕಿಡುಕ, ಸಿಡುಕ, ಭಾವುಕ, ತಪ್ಪುಕ ಪ್ರಯೋಗ-"ತ್ರಿವಿಧದಲ್ಲಿ ತಪ್ಪಿದ ತಪ್ಪುಕ ನಾನಯ್ಯ ಕೂಡಲ ಸಂಗಯ್ಯ"
	ಬುರುಕ	ಅಂಜುಬುರುಕ, ಅಳುಬುರುಕ, ಚಾಡಿಬುರುಕ
	(ಇ) ಗ	ಸುಳ್ಳಿಗ; ಆಟಮಟಿಗ; ತುಡುಗ
	(ಪು) ಪ	ಮದುಪ; ಕರಪ; ಟೊಣಪ; ನುಂಗಪ್ಪ
	ಯ	ಕೆಳೆಯ (ಗೆಳೆಯ); ಎಳೆಯ; ಹಿರಿಯ; ಇನಿಯ; ಅಳಿಯ; ಕೊಂಡೆಯ, ಹೊಲೆಯ
	ಆಡಿ	ಉಂಡಾಡಿ; ನಾಡಾಡಿ; ಕಾದಾಡಿ; ಬೀಡಾಡಿ
	ಆಳಿ	ಓದಾಳಿ; ಮಾತಾಳಿ; ಹೀಹಾಳಿ; ಕೇಡಾಳಿ ಪ್ರಯೋಗ-ಕೇಡಾಳಿ ಬಂದನು -ಕು. ವ್ಯಾಸ ಕಡು ಹೀಹಾಳಿಯುಳ್ಳವನು -ಕು. ವ್ಯಾಸ (ಭೀಮ)
	ಉಳ	ಮರುಳ; ಹಸುಳ; ದುರುಳ.
	ಉಳಿ	(ಉಳ್ಳವ) ಎಗ್ಗುಳಿ
	ಕುಳಿ	ಉರುಕುಳಿ; ಓಡುಕುಳಿ

		ಗುಳಿ	ಹಾಡುಗುಳಿ; ಲಂಚಗುಳಿ
			ಸಾಲಗುಳಿ; ಆಟಗುಳಿ; ಮರುಗುಳಿ
		ಕೋರ	ಚಾಡಿಕೋರ, ಚೇಷ್ಟೆಕೋರ; ಕಳ್ಳಕೋರ
		ತನಿ	ಹೆಣದಿನಿ, ಲಂಚದಿನಿ
		ವಾಳ	ಪಾರುವಾಳ(ಪಾರಿವಾಳ); ಆರ್ಕೆವಾಳ (ಆರ್ಕೆ=ಪರಾಕ್ರಮ)
೨.	ಉಳ್ಳವನೆಂಬ	**ಇಗ**	ಬೇನಿಗ; ರೊಕ್ಕಿಗ
	ಅರ್ಥದಲ್ಲಿ:	**ಯ**	ಒಡೆಯ (ಒಡವೆಯನ್ನುಳ್ಳವ)
	ಇಗ, ಯ, ವಂತ,	**ವಂತ**	ಬುದ್ಧಿವಂತ; ಹಣವಂತ
	ಸ್ತ, ದಾರ ಸ್ತ	**ಸ್ಥ**	ನಂಬಿಗಸ್ತ
		ದಾರ	ಕಾಮದಾರ; ಹಕ್ಕುದಾರ; ಪೈರುದಾರ
೩.	ಇಲ್ಲದವ; ಹಾಳು	**ಇಲಿ**	ನಾಣಲಿ; ಹಲ್ಲಿಲಿ
	ಮಾಡುವವನೆಂಬಲ್ಲಿ:	**ಕುಲಿ**	ಅರುಗುಲಿ; (ಅರ=ಧರ್ಮ)
	ಇಲಿ, ಕುಲಿ, ಕೇಡಿ	**ಕೇಡಿ**	ಬುದ್ಧಿಗೇಡಿ; ಮಾನಗೇಡಿ; ತಿಳಿಗೇಡಿ
	ಸ್ತ, ದಾರ ಸ್ತ	**ಸ್ಥ**	ನಂಬಿಗಸ್ತ
೪.	ಅದರಲ್ಲಿ ಇರುವವ	**ಇಲ**	ಗಾವಿಲ
	ಎಂಬಲ್ಲಿ:	**ಗ**	ಕೋಡಗ (ಕೋಡು=ಕೊಂಬೆ)
	ಇಲ, ಗಲ,	**ಉಳಿಗ**	ಮಾತುಳಿಗ; ಮಣ್ಣುಳಿಗ; ಮಾತುಗಾರ;
	ಕಾರ, ಗಾರ, ಕಾರ	**ಗಾರ**	ಕೆಲಸಗಾರ
೫.	ಒಂದರದಲ್ಲಿ 'ಪಿರಿದು	**ಆಳಿ**	ಮಾತಾಳಿ; ಜೂದಾಳಿ
	ವರ್ತಿಪ'ನೆಂಬಲ್ಲಿ,	**ಕ**	ತಿರುಕ; ಕುಡುಕ
	ಅತ್ಯಂತಾಶಕ್ತಿಯನ್ನು	**ಗ**	ಮಾತುಗ; ಎರೆಗ (ದಾನಿ:
	ತೋರುವಲ್ಲಿ		ದಾನಶೂರ), ಹೆಣ್ಣುಗ
	ವಲ್ಲಿ:	**ಇಗ**	ಕೇಡಿಗ, ತಿನಿಸಿಗ
	ಆಳಿ, ಕ, ಗ, ಇಗ,	**ಕುಟಗ**	ಮರುಕುಟಿಗ; ನೀರುಕುಟಿಗ
	ದುಟಗ, ಬಡಕೆ,	**ಬಡಕ**	ಮಾತುಬಡಕ; ಲಂಚಬಡಕ
		ಬಕ್ಕ	ಕೊಳಬಕ್ಕ; ಲಂಚಬಕ್ಕ
೬.	ಇದರಿಂದಲೆ ಜೀವಿ	**ಉಣಿ**	ಕಳ್ಳುಣಿ; ತುಡುಗುಣಿ; ಬಂಡುಣಿ
	ಸುವನೆಂಬಲ್ಲಿ:	**ಉಳಿಗ**	ದೇವುಳಿಗ, ಮಾತುಳಿಗ; ಲಂಚವಣಿಗ;
	ಉಣಿ, ಉಳಿಗ, ವಣಿಗ	**ಸಾಲವಣಿಗ**	
೭.	ಇದು ಅವರ	**ಅ**	ಹರದ
	ಉದ್ಯೋಗವೆಂಬಲ್ಲಿ:	**ಅಟಗ**	ದೀವಟಿಗ, ಮಾವಟಿಗ, ಕೊಮ್ಮಟಿಗ
	ಅ. ಅಟಿಗ, ಆಡಿಗ,		ತಾಂಬಟಿಗ
	ಆಡಿಗ, ಆಯ್ತು, ಆಡಿಗ	**ಆಡಿಗ**	ಹಾವಾಡಿಗ, ಹೂವಾಡಿಗ ಕನ್ನಡಿಗ
	ಆಯ್ಲ, ಆರ, ಇಗ, ಆಯ್ತು		ಸೂಳಾಯ್ತ, ಅಚ್ಚುಳಾಯ್ತ
	ಕಾರ-ಗಾರ, ವಡಿಗ, ಆಯ್ಲ		ಫೋಳಾಯ್ಲ (ಫೋಡಾ +

ವಳ ವಾಳ ಸು		ಅಯ್ಲ = ರಾವುತ)
	ಅರ	ಕುವ್ಮಾರ, ಕುಂಬಾರ, ಸೊನ್ನಾರ
	ಇಗ	ತೋಟಿಗ, ಗಾಣಿಕ, ತಂಬುಲಿಗ,
	ಕಾರ, ಗಾರ	ಅಂಗಡಿಕಾರ, ಮಾಲೆಗಾರ ಮೊಟ್ಟೆಗಾರ
	ವಡಿಗ	ಕಂಚುವಡಿಗ, ಹುಲ್ಲುವಡಿಗ
	ವಳ, ವಾಳ	ದೆಸೆವಳ, ಗೋವಳ, ಚಿನ್ನವಳ (ಚಿನ್ನವಾಲ), ಮಡಿವಳ, ಮಡಿವಾಳ, ತೋಟವಾಳ (ತೋಟಿಗ)
	ಸು	ಬರಸು (ಬರೆಯಿಸಿ, ಪಾಠ ಕೇಳಿ ಜೀವಿಸುವವ)

II

೪೯. ಕೆಲವು ಶಬ್ದಗಳು ಬೇರೆ ಪದಗಳು ಮುಂದೆ ಅಥವಾ ಹಿಂದೆಸೇರಿ, ಪ್ರತ್ಯಯಗಳಂತೆ ಕೆಲವೊಂದು ವಿಶೇಷ ಕೆಲಸ ಮಾಡುತ್ತವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಕೊಟ್ಟಿದೆ.

(i) ಶಬ್ದಗಳ ಮುಂದೆ ಬರುವುವು

ಅನಕ ತನಕ, ವರೆಗೆ ಎಂಬ ಅರ್ಥದಲ್ಲಿ ಧಾತುಗಳ ವರ್ತಮಾನ ಕೃದಂತಗಳ ಮುಂದೆ ಸೇರುವುದು

ಉದಾ : ಮಾಡುವತನಕ, ಬರುವತನಕ

ಅನ್ನ 'ಅಂತಹ' 'ಆಗಿರುವಂತಹ' ಎಂಬ ಅರ್ಥದಲ್ಲಿ, ಮುಖ್ಯವಾಗಿ ವಿಶೇಷಣಗಳ ಮುಂದೆ ಬರುತ್ತದೆ.

ಉದಾ : (೧) ಬಟ್ಟನ್ನ, ದುಂಡನ್ನ, ತೆಳ್ಳನ್ನ, ಕೆಂಪನ್ನ ಬರುವನ್ನ (ಹರುವಂತಹರು) ಬಾರದನ್ನರು

(೨) ಮನದನ್ನ (ಮನಸ್ಸಿಗೆ ಬೇಕಾದಂತಹ) ಮನದನ್ನನು (ಪ್ರಿಯನು), ಮನದನ್ನಳು (ಪ್ರಿಯಳು)

ಆಡು ಇದು ಯಾವುದೊಂದು ಧಾತುವಿನ ಮುಂದೆ ಕೂಡಿಕೊಂಡು ಕೆಲವೊಂದು ವಿಶೇಷಾರ್ಥವನ್ನು ಕೊಡುತ್ತದೆ

ಉದಾ : ಹೋಗಾಡು (ಕಳೆದುಕೊಳ್ಳು), ಓಡಾಡು, ಕೊಂಡಾಡು (ಹೊಗಳು), ಕೇಳಾಡು ಮುಂ.

'ಓಡು' ಮತ್ತು 'ಓಡಾಡು'. ಒಗೆ ಮತ್ತು ಒಗೆದಾಡು ಇವುಗಳಲ್ಲಿ ಅರ್ಥಭೇದವನ್ನು ಅರಿತುಕೊಂಡರೆ 'ಆಡು' ಸೇರಿ ಉಂಟಾದ ಅರ್ಥ. ವಿಶೇಷವು ಗೊತ್ತಾಗುವುದು.

ಆರೆ ಮನಸು, ಬಾಯಿ, ಕೈ ಮೊದಲಾದುವುಗಳ ಮುಂದೆ ಸೇರಿ ಅವು ತಣಿವ ವರೆಗೆ, ಸಾಕಾಗುವ ವರೆಗೆ ಎಂಬ ಅರ್ಥವನ್ನು ಸೂಚಿಸುವುದು.

ಉದಾ : ಮನಸಾರೆ ಮಾತಾಡಿದನು.

ಮನವಾರೆ ನುಡಿಯುತ್ತುಂ -ಪಂಪ

ಬಾಯಾರೆ ಹೊಗಳಿದನು.
ಕಣ್ಣಾರೆ ನೋಡಿದನು.

ಇಡು ಕೆಲವು ಧಾತುಗಳಲ್ಲದ ಶಬ್ದಗಳ ಮುಂದೆ ಬಂದು ಅದಕ್ಕೆ ಧಾತ್ವರ್ಥವನ್ನು ಕೊಡುವುದು.

ಉದಾ : ಗೋಳಿಡು, ಹುಯ್ಯಲಿಡು, ಕುರುವಿಡು (ಎರಕ ಹೊಯ್), ಪಡುಲಿಡು (ಬೀಳು), ದಾಳಿಡು (ದಾಳಿಯಿಡು), ಮೊರೆಯಿಡು, ಬೊಬ್ಬಿಡು ಧೀಂಕಿಡು

ಕೊಳ್ಳು ಇದು ಶಬ್ದಗಳ ಮುಂದೆ ಸೇರಿ ಬೇರೆ ಬೇರೆ ಅರ್ಥವನ್ನು ಸೂಚಿಸುತ್ತವೆ. ಅಂತಹ ಅರ್ಥಗಳಲ್ಲಿ (೧) ಧರಿಸು, (೨) ಸ್ವೀಕರಿಸು, ಹೊಂದು, ಪಡೆ, (೩) ತನಗಾಗಿ ಮಾಡು ಎಂಬಿವು ಮುಖ್ಯವಾದುವು.

ಉದಾ : (೧) ಅಸುಂಗೊಳ್, ಬಿಲ್ಗೊಳ್,
(೨) ಭಯಗೊಳ್ಳು, ಇದಿರುಗೊಳ್ಳು
(೩) ಕಳಕೊಳ್ಳು, ಬರಕೊಳ್ಳು, ತಕ್ಕೊಳ್ಳು
'ಕೊಂಡು' ಎಂಬ ಪದವನ್ನಿಡುವ ವಾಡಿಕೆಯೂ ಇದೆ.

ಉದಾ : ನೋಡಿಕೊಂಡು, ಮಲಕೊಂಡು, ಕೊಂಡುಕೊಂಡು ಮುಂ.

ಪಡು, ಇಡು ಇಸು (ಸು=ಚು) ಇವೆಲ್ಲ ಸಾಧಾರಣವಾಗಿ ಒಂದೇ ಬಗೆಯವೇ. ಧಾತುಗಳಲ್ಲದ ಶಬ್ದಗಳಿಂದ ಹೊಸಧಾತುಗಳನ್ನು ಸಿದ್ಧಪಡಿಸಿಕೊಳ್ಳಲು ಬಹಳ ಉಪಯುಕ್ತವಾಗಿವೆ. ಸ್ಥೂಲವಾಗಿ ಈ ನುಡಿಗಳಿಗೆಲ್ಲ 'ಮಾಡು' ಎಂಬರ್ಥವುಂಟು.

ಉದಾ : (೧) ಹಿಂದೆ + ಇಸು=ಹಿಂದಿಸು=ಹಿಂಚು, ಹಿಂದೆ ಬೀಳು ಎಂಬರ್ಥವು ಬಂದಿದೆ.
ಇದರಂತೆಯೆ ಮಂಚು, ಸುಖಿಸು, ಕತ್ತರಿಸು
(೨) ಸುಖಪಡು, ಒಡಂಬಡು, ಆಸೆಪಡು, ಉಬ್ಬಸಪಡು

★ ★ ★

ಆಡು, ಇಡು, ಇರು, ಕೊಳ್ಳು, ಬಿಡು, ಹೋಗು ಮುಂತಾದ ಕೆಲವು ದಾತುಗಳು, ಇನ್ನೊಂದು ಧಾತುವಿನ ಭೂತನ್ಯೂನ ರೂಪಗಳ ಮುಂದೆ ಬಂದು, ಬಗೆಬಗೆಯ ವಿಶೇಷಾರ್ಥವನ್ನು ಕೊಡುವುವು.

ಉದಾ : ಆಡು - ಹೊಡೆದಾಡು, ಕೊಟ್ಟಾಡು
ಇಡು - ಮಾಡಿಡು, ಬರೆದಿಡು
ಇರು - ಬರೆದಿರು, ತಿಂದಿರು
ಕೊಳ್ಳು - ಹೊರಿಸಿಕೊಳ್ಳು, ಹೊಗಳಿಸಿಕೊಳ್ಳು
ಬಿಡು -ಮಾಡಿಬಿಡು, ತಿಂದುಬಿಡು.
ಹೋಗು -ಹಾರಿಹೋಗು, ಆಗಿಹೋಗು

ಹತ್ತು ಎಂಬುದು ಧಾತುಗಳ ಮೊದಲನೆಯ ಭಾವರೂಪದ ಮುಂದೆ ಬಂದು, ಆ ಕ್ರಿಯೆಗೆ ಆರಂಭವಾಯಿ ತೆಂಬರ್ಥವನ್ನು ಕೊಡುವುದು.

ಉದಾ : ಆಗಹತ್ತು, ಬರಹತ್ತು

(ii) ಶಬ್ದಗಳ ಹಿಂದೆ ಬರುವುವು

ಒಡ (ನ್) ಸಂಗಡ, ಸಹ ಎಂಬರ್ಥದಲ್ಲಿ ಅನೇಕ ಶಬ್ದಗಳ ಹಿಂದೆ ಬರುವುದು. ಇಂಗ್ಲೀಷಿನಲ್ಲಿ Co. ಎಂಬ ಅರ್ಥದ ಉಪಸರ್ಗದ ಅರ್ಥವನ್ನು ಕೊಡುವುದು.

ಉದಾ : i) ಒಡನಾಡಿ, ಒಡನೋದಿ
ii) ಒಡಗೊಳ್ಳು, ಒಡನುಡಿ

ಕಡು, ಕಟ್ ಅತ್ಯಂತವೆಂಬ ಅರ್ಥದಲ್ಲಿ

ಉದಾ : ಕಡುಮುನಿಸು, ಕಟ್ಟೇಕಾಂತ
ಕಟ್ಟಪ್ಪಣೆ, ಕಟ್ಟಾಳು

ಕಗ್ ಕರಿ(ದು) ಕೇಡಿನ, ಅಪಾಯಕಾರವೆಂಬರ್ಥದಲ್ಲಿ:

ಉದಾ : ಕರಿಗಾಲ, ಕಗ್ಗಾಲ, ಕಂಗಾಲ, ಕರಿಬಾಯಿ, ಕರಿದಿನ

ಕಾ. ಕಾಡು: ಹಾಳು, ಹೊಲ್ಲವೆಂಬರ್ಥದಲ್ಲಿ

ಉದಾ : ಕಾಕಳ್ಳು, ಕಾಬಾಳೆ, ಕಾಕಬ್ಬು, ಕಾಡುಮರ, ಕಾಟುತುಳಿಸಿ, ಕಾಡುಮಾತು
ಮರು ದೂರು ಮತ್ತೆ; ತಿರುಗಿ; ಪ್ರತಿ ಎಂಬರ್ಥದಲ್ಲಿ;

ಉದಾ : ಮರುಮಾತು; ಮರುಸಲ; ಮಾರುತ್ತರ;
ಮಾರ್ದನಿ, ಮಾರೋಲೆ

ಪಡೆ 'ವಿಶೇಷ', 'ಹೆಚ್ಚಿನ' ಎಂಬರ್ಥದಲ್ಲಿ ಇದನ್ನು ಉಪಯೋಗಿಸುವುದುಂಟು.

ಉದಾ : ಪಡೆಮಾತು; ಪಡೆಮೂಲಿ; ಪಡೆನುಡಿ (idiom) ಹುಬ್ಬಳ್ಳಿಯು ನಮ್ಮ ವ್ಯಾಪಾರದ ಪಡೆಮೂಲೆ

"ಅಳಿಪಿನ; ಲಲ್ಲೆಯ; ಚೆಲ್ಲದ ಪುರುಡಿನ, ಮುಳಿಸಿನ ನೆವದ
ಪಡೆಮಾತುಗಳು ನುಡಿದುಂ" - ಪಂಪ. ೭.೯೪ ವ

"ಕರ್ಣನಪಡೆಮಾತಿನೊಳ್ ಪುದಿದು
ಕರ್ಣರಸಾಯನಮಲ್ತೆ ಭಾರತಂ" - ಪಂಪ, ೧೨.೨೦೭

"ಪಡೆಮಾತೇಂ ಕುಂತೀ?" - ಪಂಪ, ೯.೭೮

"ನೀವಿದಾವುದು ಪಡೆಮಾತಂ ನುಡಿದಿರ್ಪುದು?"
-ಪಂಪ, ೧೧.೫೦

ಹಳೆಯ ಕಾವ್ಯಗಳಲ್ಲಿ ದೊರೆವ 'ಪಡೆಮಾತು' ಎಂಬ ಪದಕ್ಕೆ 'ಸುದ್ದಿ' 'ವೃತ್ತಾಂತ' ಎಂದಿಷ್ಟೇ ಅರ್ಥವನ್ನು ಕೆಲವೆಡೆಗೆ ಮಾಡಬಹುದಾದರೂ, ಇನ್ನು ಹಲವೆಡೆಗಳಲ್ಲಿ 'ವಿಶೇಷ ವೃತ್ತಾಂತ' 'ಹೆಚ್ಚಿನ ಸುದ್ದಿ' ಎಂಬ ಅರ್ಥವೆ ಸ್ಫುಟವಾಗಿದೆ. ಅಲ್ಲದೆ, ಉತ್ತರ ಕರ್ಣಾಟಕದಲ್ಲಿ 'ಪಡೆಮೂಲೆ' ಎಂಬಲ್ಲಿ 'ಪಡೆ' ಎಂಬುದಕ್ಕೆ ವಿಶೇಷ, ಹೆಚ್ಚಿನ ಎಂಬ ಅರ್ಥವು ರೂಢಿಯಿದೆ.

ಆದುದರಿಂದ, ಪಡೆನುಡಿ ಎಂದರೆ ವಿಶೇಷ ಪ್ರಕಾರದ-ವಿಶಿಷ್ಟ ನುಡಿ (idiom) ಎಂಬರ್ಥದ ಹೊಸ ಶಬ್ದವನ್ನು ಮಾಡಿಕೊಳ್ಳಬಹುದಾಗಿದೆ.

ಹುಸಿ, ಸುಳ್ಳು ಗಂಭೀರ ಸ್ವರೂಪದ್ದಲ್ಲ: ಕೇವಲ ಔಪಚಾರಿಕ, ವಿನೋದಾತ್ಮಕವೆಂಬರ್ಥದಲ್ಲಿ:

ಉದಾ : ಹುಸಿಗಾಳಗ, ಹುಸಿಗುಂಡು ಸುಳ್ಳೌತಣ (Formal Invitation)

ಕಿರಿ ಮತ್ತು ಹಿರಿ ಎಂಬ ಅರ್ಥವನ್ನು ತರುವುದಕ್ಕೆ ಉಪಯೋಗಿಸುವ ಕೆಲವು ಶಬ್ದಗಳು:

ಕಿರಿದೆಂಬಲ್ಲಿ

ಗುಬ್ಬಿ	ಗುಬ್ಬಿಬಾಳೆ; ಗುಬ್ಬಿ ಎಂಜಲು; ಗುಬ್ಬಿ (ಯಂತಹ) ಮೋರೆ
ಚಿಕ್ಕ, ಚಿಟ್ಟ	ಚಿಕ್ಕ ಅಬ್ಬೆ=ಅಬಚಿ; ಚಿಟ್ಟಿಲಿ; ಚಿಟ್ಟಾನೆ; ಚಿಟಗುರು
ಕಿರು	ಕಿರುನಗೆ, ಕಿರುಮನೆ
ಬಡ	ಬಡಮನ, ಬಡನಡು, ಬಡಮಾತು

ಹಿರಿದೆಂಬಲ್ಲಿ

ಆನೆ	ಆನೆನೆಗ್ಗಿಲು, ಆನೆಮುಳ್ಳು, ಆನೆಬಾಗಿಲು
ಹಿರಿ	ಹೆಬ್ಬುಲಿ, ಹೆಮ್ಮರ, ಹೆಗ್ಗಡೆ, ಹೆಬ್ಬಾವು
ಮಯ	ಶಬ್ದಗಳ ಮುಂದೆ 'ಮಯ' ಎಂಬುದನ್ನು ಉಪಯೋಗಿಸಿ ಅತಿಶಯ ಎಂಬರ್ಥವನ್ನು ತರುವುದುಂಟು.

ಉದಾ : ನೀರಮಯ (ಜಲಮಯ ಎಂಬಂತೆ;) ಹೊಲಸಮಯ; ಹೆಣಮಯ.

ಮೇಳ-ನುಡಿ

೫೦. ಅರ್ಥದಲ್ಲಿ ಮೇಳವಿರುವಂತಹವೆ ಮೇಳದ ನುಡಿಗಳು. (Synonyms) ಮೇಳದ ನುಡಿಗಳಲ್ಲಿ ಅರ್ಥಸಾಮ್ಯವಿರುವುದರಿಂದ ಕೆಲವೆಡೆಗಳಲ್ಲಿ ಅವುಗಳಲ್ಲಿ ಒಂದನ್ನು ಮತ್ತೊಂದರ ಸ್ಥಳದಲ್ಲಿ ಉಪಯೋಗಿಸಬಹುದು. ಇಂತಹ ಮೇಳದ ನುಡಿಗಳು ಬೇಕಾದಷ್ಟಿವೆ. ಅವನ್ನೆಲ್ಲ ಒಂದೆಡೆಗೆ ಸಂಗ್ರಹಿಸಿ ಅವುಗಳೊಳಗಿನ ಸೂಕ್ಷ್ಮಾರ್ಥ ಭೇದವನ್ನು ವಿವರಿಸುವ ಕೆಲಸವನ್ನು ಕನ್ನಡಿನಲ್ಲಿ ಇನ್ನೂ ಯಾರೂ ಮಾಡಿಲ್ಲ

ಮೇಳದ ನುಡಿಗಳೆಲ್ಲವೂ ಸುಮಾರಾಗಿ ಒಂದೇ ಅರ್ಥವನ್ನು ಸೂಚಿಸುವುವು. ಎಂದು ಹೇಳಬಹುದಾದರೂ ಇನ್ನೊಂದು ಬಗೆಯಿಂದ ವಿಚಾರಿಸಿದರೆ ನಿಜವಾದ ಮೇಳದ ನುಡಿಗಳು ಸಿಕ್ಕುವುದೇ ದುರ್ಲಭ. ವಿಶೇಷಾರ್ಥ (Denotation) ಮತ್ತು ಸಾಮಾನ್ಯಾರ್ಥ(Connation)ಗಳಲ್ಲಿ ಸಂಪೂರ್ಣವಾಗಿ ಸರಿಹೊಂದುವ ನುಡಿಗಳು ಎಷ್ಟಿರುವುವು ಎಂಬುದೇ ಸಂದೇಹ. ರೂಢಿಯ ಮೂಲಕವಾಗಿ ಹಲವು ನುಡಿಗಳಲ್ಲಿ ಕೆಲವೊಂದು ಅರ್ಥ ಸಾಮ್ಯವು ತೋರಿದರೂ ಒಂದು ನುಡಿಯು ಮತ್ತೊಂದರ ಬದಲು ಎಲ್ಲೆಡೆಯಲ್ಲಿಯೂ ನಡೆಯಲಾರದು. 'ಹಿರಿದು' ಮತ್ತು 'ದೊಡ್ಡದು' ಇವೆರಡೂ ಒಂದೇ ಅರ್ಥದ ನುಡಿಗಳು. ಹೆಗ್ಗೆರೆ, ಹೆಮ್ಮರ, ಹೆಬ್ಬುಲಿ ಎಂಬಲ್ಲಿರುವ 'ಹಿರಿದು' ಎಂಬ ನುಡಿಯನ್ನು ತೆಗೆದು ಅಲ್ಲಿ 'ದೊಡ್ಡದು' ಎಂಬುದನ್ನು ಇಟ್ಟರೂ ಅರ್ಥದಲ್ಲಿ ವ್ಯತ್ಯಾಸವಾಗುವುದಿಲ್ಲ. ಆದರೆ ಹಿರಿಯರು, ಹಿರಿಯ ಮನೆತನ ಎಂದು ಮುಂತಾಗಿರುವಲ್ಲಿ ಇರುವ ಹಿರಿದು ಎಂಬುದರ ಬದಲು ದೊಡ್ಡದು ಎಂಬುದನ್ನು ಸೇರಿಸಿ 'ದೊಡ್ಡವರು' 'ದೊಡ್ಡ ಮನೆತನ' ಎಂದು ಹೇಳಿದರೆ ಅರ್ಥವೆ ಬೇರೆಯಾಗುವುದು.

ಸೂಕ್ಷ್ಮವಾದ ಅರ್ಥಭೇದವುಳ್ಳ ಮೇಳದ ನುಡಿಗಳು ವಿಪುಲವಾಗಿರುವ ಭಾಷೆಯೇ ಶ್ರೇಷ್ಠವೆನಿಸುವುದು. ಸ್ಥೂಲವಾಗಿ ಒಂದೇ ಅರ್ಥದುವು ಎನಿಸಿದರೂ ಒಳಗೊಳಗೆ ಸೂಕ್ಷ್ಮವಾದ ಭೇದವು ಇಲ್ಲದೆ ಇರುವ ಮೇಳದ ನುಡಿಗಳು ಭಾಷೆಯಲ್ಲಿ ಎಷ್ಟಿದ್ದರೂ ಅವು ನಿರರ್ಥಕ. ಅವುಗಳೊಳಗಿನ ಒಂದೆರಡನ್ನು ಬಿಟ್ಟರೆ ಉಳಿದವುಗಳು ಇದ್ದೂ ಇಲ್ಲದಂತೆ. ಅದೊಂದು ತಲೆಹೊರೆ; ಕಸ. ಇಂತಹವು ಸುಮ್ಮನೆ ವಿದ್ಯಾರ್ಥಿಗಳ ತಲೆಗೆ ಭಾರ. ಒಬ್ಬ ಸಂಸಾರಿಯ ಮನೆಯಲ್ಲಿ (ವ್ಯಾಪಾರಿ ಅಲ್ಲ ಮತ್ತೆ) ಒಂದೇ ಬಗೆಯ ಹಲವು ವಸ್ತುಗಳಿರುವುದಕ್ಕಿಂತ ಅವೇ ಸ್ವಲ್ಪ ಬೇರೆ ಬೇರೆ ಪ್ರಕಾರದವು ಇದ್ದರೆ. ಅವು ಮನೆಯಲ್ಲಿ ಧೂಳು ತಿನ್ನುತ್ತ ಬೀಳದೆ ಆತನ ಸಂಸಾರ ಸೌಖ್ಯವನ್ನು ಹೆಚ್ಚಿಸಲಿಕ್ಕೆ ಕಾರಣಗಳಾಗುವುವು.

೫೧. ಉಚ್ಚಾರದಲ್ಲಿ ಸಾಮ್ಯವಿರುವ ಹಲಕೆಲವು ನುಡಿಗಳನ್ನು ಕಾಣಬಹುದು. ಉದಾ: ಬರೆ (Write) ಒರೆ (ಒಣಗು). ಅದರಂತೆ ರೂಪಸಾದೃಶ್ಯವಿರುವ ಹಲಕೆಲವು ನುಡಿಗಳೂ ಸಿಕ್ಕುತ್ತವೆ. ಉದಾ: ಕಾಯು (ದಾರಿ ನೋಡು. ನಿರೀಕ್ಷಿಸು). ಕಾಯು (ತಪ್ತನಾಗು) ಇಂತಹ ಎರಡು ಬಗೆಯವೂ ಮೇಳದ ನುಡಿಗಳೆನಿಸಲಾರವು.

೫೨. ಕಂನುಡಿಯಲ್ಲಿರುವ ಮೇಳದ ನುಡಿಗಳನ್ನೆಲ್ಲ ಸಂಗ್ರಹಿಸಿ ಅವುಗಳೊಳಗಿನ ಸೂಕ್ಷ್ಮವಾದ ಅರ್ಥಭೇದವನ್ನು ವಿವರಿಸಿ ಹೇಳುವುದಾದರೆ ಅದೊಂದು ಸ್ವತಂತ್ರ ಗ್ರಂಥವೆ ಆಗುವುದು. ಮುಖ್ಯವಾಗಿ ಮೇಳದ ನುಡಿಗಳನ್ನೆಲ್ಲ ಒಂದೆಡೆಗೆ ಕಲೆಹಾಕುವುದಿದ್ದಲ್ಲಿ ಅವುಗಳನ್ನು ಇನ್ನೂ ಒಂದು ಬೇರೆ ಬಗೆಯಿಂದ ವರ್ಗೀಕರಿಸಬಹುದಾಗಿತ್ತು. ಆದರೆ, ಅದುವೆ ಮಾತ್ರ ಇಲ್ಲಿ ಗುರಿಯಲ್ಲ. ಆದುದರಿಂದಲೆ, ಮಹತ್ವದ ಹಲವು ಮೇಳದ ನುಡಿಗಳನ್ನಷ್ಟೇ ಅಕಾರಾದಿಯಾಗಿ ಇಲ್ಲಿ ಕೊಟ್ಟಿದೆ. ಇವುಗಳೊಳಗಿನ ಎಷ್ಟೋ ನುಡಿಗಳಲ್ಲಿರುವ ಅರ್ಥ ಭೇದವು, ಧಾತ್ವರ್ಥದ ಸಹಾಯದಿಂದಲೂ, ರೂಢಿಯಿಂದಲೂ ಇನ್ನೂ ನಿಶ್ಚಿತವಾಗಬೇಕಾಗಿದೆ. ಮಾದರಿಗಾಗಿ ಕೆಲವನ್ನು ಕೊನೆಗೆ ವಿವರಿಸಿದೆ.

ಅಗೆ (ಅಗಿ), ಮರಿ, ಸಸಿ, ಅಂಟು
ಅಗಿ, ಸಗಿ, ಸುರುಳ್ಚು, ಅಂಜು
ಅಟ್ಟ, ಉಪ್ಪರಿಗೆ, ಮಾಡ, ಮಾಡಿ, ಮಹಡಿ, ಮಾಳಿ(ಗೆ), ಅಂತಸ್ತು
ಅಟ್ಟು, ಕಳುಹು, ಓಡಿಸು, ತಳ್ಳು
ಅಡಗು, ಹುದುಗು, ಮರೆಯಾಗು, ಮೈಗರೆ, ಕಾಣದಾಗು, ಅವಿತುಕೊಳ್ಳು, ಲೆಗರೆ
ಅಡಗು, ಅಡಬಳ, ಬಿಕ್ಕು, ಬಾಡು, ಸುಂಟಿಗೆ, (ಮಾಂಸದ ಹೆಸರು)
ಅಡಸು, ಹತ್ತು, ಅಂಟು
ಅಡಿ, ಬುಡ, ಮೊದಲು, ಮೂಲ
ಅಡೆ, ತಡೆ, ಎಡರು, ತೊಡರು, ತೊಂದರೆ, ಅಡ್ಡಿ, ಕಾಟ, ಪೀಡೆ
ಅಡು, ಸುಡು, ಹುರಿ, ಕರಿ, ಕಾಯಿಸು, ಬೇಯಿಸು, ಕುದಿಸು, (ಕುಚ್ಚು)
ಅಟ್ಟೆ, ದಿಂಡು, ಧಡ
ಅಂಚು, ಏಣು, ತುದಿ, ದಂಡೆ, ದಡ, ಕಡೆ, ಕರೆ, ತಡಿ, ಮೇರೆ, ಹದ್ದು, ಎಲ್ಲೆ
ಅಂಜು, ಅಳುಕು, ಅದಿರು, ನಡುಗು
ಅಂಜಿಕೆ, ಅಳುಕು, ನಡುಕ, ಹೆದರಿಕೆ, ಬೆದರಿಕೆ,
ಅಂದ, ಚೆಂದ, ಚೊಕ್ಕ, ಹಸ, ಎಡ್ಡ (ಎದ್ದ), (ಧಾಳ) ಕಂಗೊಳಿಪ
ಅಪ್ಪು, ತಬ್ಬು, ಅಮರು, ತಳ್ಕೈಸು (ತಕ್ಕೈಸು), ಮುಂಡಾಡು, ಬೋಳೈಸು
ಅರಗು, ಕರಗು, ಮೈಗೂಡು, ಅಳವಡು
ಅರಸು, ಆರಿಸು, ಆಯ್ (ಆಯಿ) ಆಯ್ದುಕೊಳ್ಳು, ಹುಡುಕು
ಅರಿ, ಕಲಿ, ತಿಳಿ
ಅರಿಕೆ, ಬಿನ್ನಪ್ಪ, ಬೇಡಿಕೆ
ಅರಿಪು, ತಿಳಿಸು, ಬೆಸಗೊಳ್ಳು, ಬಿನ್ನವಿಸು, ಬೆಸಕೆಯ್ಯ
ಅರಿವು, ಎಚ್ಚರ, ಪರವೆ, ನೆನಪು
ಅರೆ, ಒರೆ, ತಿಕ್ಕು, ತೇ(ಯು), ಉಜ್ಜು
ಅಲುಗು, ಉಲುಕು, ಅಲ್ಲಾಡು, ಅದಿರು, ಕದಲು, ಮಿಸುಕು, ಮುಲುಕು, ಸರಿ
ಅಲೆ, ತಿರಿ, ತಿರುಗು, ಸುತ್ತು, ಹೊಯ್ದಾಡು, ಓಡಾಡು
ಅಲೆ, ತೆರೆ
ಅಳತೆ, ಅಂದಾಜು, ಅಜಮಾಸು, ಸುಮಾರು
ಅಳತೆ, ಮಾನ, ಮಾಪು, ತೂಕ, ಕಟ್ಟು, ಮಾರು, ಮೊಳ, ಅಡಿ
ಅಳಿ, ಕಿಡು(ಕೆಡು), ಹಾಳಾಗು
ಅಳಪು, ಆಟಿಸು, ಕಣ್ಣಿಡು, ಕಾಮಿಸು
ಆಗು, ಒದಗು, ಒದವು, ಕೈಗೂಡು, ಕೂಡಿಬರು, ಸಮನಿಸು, ಉಂಟಾಗು, ನೆರವೇರು
ಆಗು, ತೀರು, ಮುಗಿ, ಜರುಗು, ಕೊನೆಗಾಣು
ಆಟ, ಕೇಳಿ, ಚೆಣ್ಣಾಟ (ಕೂಸಾಟ), ಹುಡುಗಾಟ, ನಲ್ಲಾಟ
ಆಟ, ಹಗರಣ, ನಾಟಕ, ನಾಟಿಕಾ
ಆಡು, ಮೇಕೆ, ಕಳಗಿ, ಹೋತು
ಆಡು, ಕೆಲೆ, ನಲಿ, ಕುಣಿ
ಆರೋಪ, ಅಪವಾದ, ಆಕ್ಷೇಪಣೆ
ಆಸೆ, ಎಳಸು, ಅಳಿಪು, ಲೋಭ
ಆಳು, ತೊತ್ತು, ದಾದಿ, ದಾಸಿ, ದಾಸ, ಅಡಿಗ, ಲೆಂಕ
ಇಡು, ಮಡಗು
ಇತಿಹಾಸ, ಪುರಾಣ, ಬಖೈರು

ಇಂಪು, ಸೊಂಪು, ಕಂಪು, ಸೌಸವ, ಅಲಂಪು, ನರುಗು, ಸೊವಡು, ಮಗಮಗ (ಘಮಘಮ)
ಇಂಬು, ಎಡೆ, ಬಿಡುವು, ತೆರವು, ಅನುವು, ತೆರಪು, (ತೆರಹು), ಗೊತ್ತು
ಇರುಳು, ಕತ್ತಲೆ, ಮಬ್ಬು, ಮಸುಕು
ಈಡು, ಒತ್ತೆ, ಅಡವು
ಈ (ಈನ್), ಹಡೆ, ಕೊಡು
ಈಸಾಡು, ಓಲಾಡು
ಉಗಿ, ಬಗಿ, ಹರಿ, ಕತ್ತರಿಸು, ಸೀಳು
ಉಗ್ಗು, ತೊದಲು
ಉಗ್ಗು (ಉಜ್ಜು), ಸಿಂಪಡಿಸು, ತಳಿಹಾಕು
ಉಘೆ, ಚಾಂಗು, ಭಲಾ, ಪೂತು, ಧಣು, ಮಝು, ಭಾಪು, ಸೈ
ಉಜ್ಜು, ತಿಕ್ಕು, ತೊಳೆ
ಉಡುಗು, ಒಣಗು, ಮುದುಡು, ಬಾಡು, ಸುರುಟು, ಸುರುಳ್ಳು, ಮುರು(೦) ಟು, ಸೇದು
ಉಣ್ಣು, ಊಡು, ತಿನ್ನು, ಮೇಯ್ಯು
ಉಚ್ಚು, ಬಿಚ್ಚು, ಬಿಡಿಸು, ಸಡಿಲ್ಬು
ಉದ್ದ, ನೇರ, ನಿಡಿದು, ನೀಳ
ಉದಿರು, ಬೀಳು, ಕಳಚು
ಉಂಬಳಿ, ಕೊಡುಗೆ, ದತ್ತಿ, ಮೆಚ್ಚು, ಮಾನ್ಯ, ಉಡುಗೊರೆ, ಬಳುವಳಿ
ಉಬ್ಬು, ಬಾವು, ಉಪ್ಪರ, ಎತ್ತರ, ದಪ್ಪ
ಉಬ್ಬು, ಹುಮ್ಮಸ, ಹುರುಪು
ಉಳ್ಳವ, ಒಡೆಯ, ರೊಕ್ಕಸ್ತ, ಧನಿ(ಯ)
ಉಳು, ಸಾಗುಮಾಡು, ಹರಗು
ಊಟ, ತಿನಿಸು, ತಿಂಡಿ, ಬಾಯ್ದೇಡಿಕೆ
ಊರು, ಕೇರಿ, ಬೀಡು, ಬಾಡ, ಬಾಳು, ವಾಡ, ವಾಡಿ, ಹಟ್ಟಿ, ಪಟ್ಟಿ, ಪಾಳ್ಯ, ಪಟ್ಟಣ, ಪೊಳಲು(ಹೊಳಲು) ಹಳ್ಳಿ, ಕಟ್ಟೆ, ಕೊಪ್ಪ (ಲು, ಳು) ಕೊಂಡ, ಕುಂದ, ಕುಂಡ, ಕುಡಿ, ಕೋಟೆ
ಎಗ್ಗ, ಹುಂಬ, ಹುಂಡ, ಕೆಂಚ, ಗಾಂಪ, ಗಾವಿಲ, ಹೆಡ್ಡ [ಪೆದ್ದ] ಪೆಚ್ಚ
ಎಡವು, ಬೀಳು, ಮುಗ್ಗರಿಸು
ಎಡೆ, ಮುಡಿಪು, ಮೀಸಲು
ಎಣಿಕೆ, ಲೆಕ್ಕ, ತೂಕ, ವಿಚಾರ
ಎಣಿಸು, ಎಳಿ, ಬಗೆ, ಭಾವಿಸು, ನೋಡು
ಎತ್ತು, ನೆಗಹು, ಕಳು [ಕಳವು ಮಾಡು], ಕದಿ
ಎನ್ನು, ಅನ್ನು, ಆಡು, ಹೇಳು, ಉಸಿರು, ಒರೆ
ಎರವು, ಮುಯ್ಯ; ಕಡ, ಸಾಲ
ಎರೆ, ಹನಿಸು, ಎರಚು, ಸುರುವು ಎಳೆ, ಚಿಕ್ಕ, ಸಣ್ಣ ಮರಿ, ಪುಸುಳ
ಎಳೆ, ಸೆಳೆ, ಕಸಿ
ಎಳೆ, ತೊಲೆ, ದಿಂಡು, ಉದ್ದಿಗೆ, ಈಸು
ಏರು, ಮಿಟ್ಟೆ, ದಿಣ್ಣೆ[ನ್ನೆ] ಮಾಡ, ಮಾಳ, ಮರಡಿ, ತೆವರು, ಬೆದ್ದಲು
ಏರು, ಅಡರು, ಹತ್ತು, ಅಡಸು
ಏಳು, ಎಚ್ಚರು, ಉಪ್ಪವಡಿಸು
ಏಳ್ಗೆ [ಏಳಿಗೆ], ಮೇಲ್ಮೆ, ಪೆಂಪು, ಹೆಗ್ಗಳಿಕೆ, ಹೆಚ್ಚಳ
ಒಕ್ಕಲಿಗ, ಕುಡುವ, ಆರಂಭಗಾರ, ರೈತ
ಒಕ್ಕಲು, ಕುಳ, [ಕುಡ], ಕುಟುಂಬ, ಮನೆತನ
ಒಗಟು, ಒಡಪ, ತೊಡಕು
ಒಗೆ, ಚೆಲ್ಲು, ಎಸೆ, ಬಿಸುಟು, ಬಿಸುಡು, ಬಿಸಾಡು [ಬೀಸಾಡು]
ಒಟ್ಟು, ಗುಂಪು, ಗೂಡು, ಇಕ್ಕಲ, ಬಣಬೆ [ಬಣಾವೆ]
ಒಡಲು, ಹೊಟ್ಟೆ, ಪೊಡೆ, ಬಸಿರು
ಒಡಕು, ಜಗಳ, ತಿಕ್ಕಾಟ
ಒಡ್ಡು, ಕಟ್ಟು, ಕಟ್ಟೆ, ಅಣೆ
ಒಡೆಯ, ದೊರೆ, ಆಳ್ದ, ಅಣ್ಮ, ಉಳ್ಳವ, ಎರೆಯ, ಅರಸು, ಯಜಮಾನ
ಒಣಗು, ಆರು, ಇಂಗು, ಬತ್ತು, ಬಾಡು, ಕಂದು, ಕುಂದು
ಒದರು, ಚೀರು, ಕೂಗು, ಬೊಬ್ಬಿರಿ, ಅರಚು, ಕಿರಚು, ಮೊರೆ, ಹುಯ್ಯಲಿಡು
ಒದೆ, ತುಳಿ ಮೆಟ್ಟು
ಒಪ್ಪಂದ, ಒಡಂಬಡಿಕೆ, ಕರಾರು
ಕಟ್ಟಳೆ, ಕಾಗದ, ಕೌಲು
ಒಪ್ಪು, ಅಮರು, ಎಸೆ, ಕಂಗೊಳಿಸು, ಒಡಂಬಡು, ಚಂದಕಾಣು, ಸೊಗಸು
ಒಲವು, ನಲವು, ಒಲುಮೆ, ಕೂರ್ಪು

ಕೂರ್ಮೆ, ಒರಲು, ಎರಕ, ಅಳ್ಕರು [ಅಕ್ಕರು], ಅಕ್ಕರತೆ, ಕರುಳು, ಕಕ್ಕುಲತೆ, ಮುದ್ದು, ಲಲ್ಲೆ
ಒಲಿ, ಎಸೆ, ಮೆಚ್ಚು, ಕರಗು, ಮರುಗು
ಒಳಿತು, ನಲ್ಲ, ಲೇಸು, ಚೆನ್ನ
ಓಡು, ಧೀಂಕಿಡು, ಹರಿ ಧಾವಿಸು,
ಓರಗೆ, ಗೆಡೆ, ಗಡೆ, ಕೆಳೆ, ಜೋಡಿ ಪೊಣರು
ಓರಣ, ಒಚ್ಚತ, ಅಚ್ಚುಕಟ್ಟು
ಓರೆ, [ವಾರಿ], ಬದಿ, ತಡೆ, ದಂಡೆ, ಮಗ್ಗಲು, ಅಂಚು
ಓಲೆ, ಕಾಗದ, ಪತ್ರ, ಪಾನು, ಪುಟ, ಹಾಳೆ
ಕಂಗು [ಏಂಗು] ಸೇಡು, ಸಿಟ್ಟು, ಮುಯ್ಯ
ಕಟ್ಟು, ಸೂಡು, ಪೆಂಡೆ, ಹೊರೆ
ಕಟ್ಟು, ಗುದಿ [ಪಾನಬಂಧನೆ]
ಕಡಿ, ಕಚ್ಚು, ನುರಿ, ಹರಿ, ಹೋಳು, ಜಬಡು, ಜಜ್ಜು, ಕುಟ್ಟು
ಕದಪು, ಕೆನ್ನೆ, ಕೆಕ್ಕೆ, ಗಲ್ಲ
ಕಂಡಿ [ಕಿಂಡಿ], ತೂತು, ಕಣಿ [ಗಣಿ], ಕಣವೆ. ಗವಿ
ಕಂದು, ಕುಂದು, ಮಾಸು, ಬಾಡು, ಸುರ್ಕು[ಸುಕ್ಕು] ಒಣಗು
ಕಪ್ಪ, ಕಾಣಿಕೆ, ಮುಡಿಪು, ಕೊಟ್ಟಜ
ಕರ, ಸುಂಕ, ತೆರಿಗೆ, ತೆರವು, ಪಟ್ಟಿ, ವಂತಿಗೆ, ದಂಡ
ಕರು, ಕುನ್ನಿ, ಮರಿ, ಚಿಳ್ಳೆ, ಚಿಣ್ಣ, ಪಿಳ್ಳೆ, ಕಂದ, ಕೂಸು, ಹಸುಳೆ, ಕಿರ್ಲು, ಪಡ್ಲೆ, ಮಗು, ಹುಡುಗ
ಕಲಕು, ಕದಡು, ಕಲಡು, ಕಲಂಬು, ಕಲಸು
ಕಲ್ಲು, ಬಂಡೆ, ದುಂಡಿ, ಅರೆ, ಪಾಸರೆ [ಹಾಸುಗಲ್ಲು], ಹರಳು
ಕವಿ, ಮುಸುಕು, ಮಸುರು, ಮುಚ್ಚು, ಮುತ್ತು, ಹೊದ್ದು [ಪೊರ್ದು]
ಕಸಬು, ಕೆಲಸ, ಹೋರೆ, ಬೇಸಾಯ, ಕಾಯಕ, ವ್ಯಾಪಾರ, ಉದ್ಯೋಗ, ಉದ್ದಿಮೆ [ಉದ್ಯಮ], ಊಳಿಗ, ಗೆಯ್ಮೆ, ದುಡಿಮೆ, ದಂದುಗ
ಕಸರು, ಸುಂಕ, ಊಬು, ಮುಳ್ಳು, ಕಂಟಿ
ಕಸುವು, ಅಣ್ಮು, ಆರ್ಪು, ಅದಟು, ಉರ್ಕು, ಅಳವು, ಆಳ್ತನ, ಬಲ, ಗಂಡು, ಜಿಗಟು, ಗಟ್ಟಿಗತನ, ಆಕೆವಾಳತನ, ಬಂಟತನ
ಕಾಟ, ಪೀಡೆ, ಗೋಳು, ಬಳಲಿಕೆ, ತೊಂದರೆ, ಇರುಕು, ಇರುದಿ, ಉರುಬೆ, ಉಬ್ಬಣ, ಆಸರು
ಕಾಡು, ಕಗ್ಗ, ಕಸ
ಕಾಡು, ಕಸ, ಬಹಳ, ಹುಚ್ಚು
ಕಾಡು, ಬೀಳು, ಹಾಳು, ಪಡ
ಕಾಡು, ಅರೆ, ಪಿಳಿ, [ಪೀಡಿಸು] ಹಿಂಡು, ಸುಲಿ, ಅಂಡಲೆ, ಗೋಳಾಡಿಸು
ಕಾಡಿಸು, ಪೀಡಿಸು, ಏಡಿಸು [ಏಳಿಸು]
ಕಾಣು, ತೋರು, ಅನಿಸು [ಎನಿಸು]
ಕಾರ್ಯ, ಕೆಲಸ, ಕರ್ಮ
ಕಾಲು, ಪಾದ, ಅಡಿ, ಹೆಜ್ಜೆ, [ಪಜ್ಜೆ]
ಕಾಲುವೆ, ಕಾವಲಿ, ಮೋರಿ, ಬಚ್ಚಲು, ಗಟಾರು, ಹರಿ
ಕಾಳು, ಹನಿ, ತಟಕು, ತೊಟ್ಟು, ಬಟ್ಟು, ಅಗಳು
ಕಿಚ್ಚು, ಕೆಂಡ, ಬೆಂಕಿ, ಬೇಗೆ, ಉರಿ, ಕಿವಿಮಾತು, ಗುಟ್ಟು, ಏಕಾಂತ
ಕೀಳ, ಕಿರುಕುಳ, ಸಣ್ಣ
ಕೀಳ, ಕೂಳ, ಸೇಡುಗಾರ
ಕೀಳು, ಕಿತ್ತು, ಜಗ್ಗು, ಹಿಸುಕು
ಕುಡಿ, ಮೊಗೆ, ಈಂಟು
ಕುಡಿಕೆ, ಗಡಿಗೆ, ಮಡಿಕೆ, ಹರವಿ, ಬಾನಿ
ಕುಡಿ, ಸೀಪು [ಚೀಪು], ನೆಕ್ಕು
ಕುಂಟ, ಹೆಳವ, ಕಾಟಿಲಿ
ಕುಂಟು, ದೂಂಟು
ಕುಂದು, ಕಲಂಕ, ಮಸಿ, ಕಪ್ಪು
ಕುರಿ, ತಗರು [ಟಗರು] ಎಳಗ
ಕುಸಿ, ನೆಗ್ಗು, ಬೀಳು, ಮುಳುಗು, ಕಳಚು, ಉದಿರು, ಉಚ್ಚು, ಸರಿ
ಕುಸುಕು, ಕುಟ್ಟು, ಥಳಿಸು, ಹೇರು, ಇಕ್ಕು, ಮೋದು, ಕುತ್ತು, ಗುದ್ದು, ಹಣೆ
ಕುಳ್ಳಿ, ಮಿಳ್ಳಿ, ಗಿಂಡಿ,
ಕೂಗು, ಕರೆ, ಒದರು
ಕೂಟ, ಸೇರುವೆ, ಹೊಂದಿಕೆ, ಸೇರಿಕೆ, ಬೆರಕೆ
ಕೂಡಲ, ಸಂಗಮ, ಅಳಿವೆ
ಕೂದಲು, ಕುರುಳು, ಅಲಕ, ನವಿರು

ಕೆದರು, ಗೋರು, ತೋಡು, ಅಗಿ
ಕೆರೆ, ಕಟ್ಟೆ, ಹೊಂಡ, ಗುಂಡಿ, ಕೊಂಡ, ಬೆಂಚೆ, ಕೊಳ, ಕುಂಟೆ
ಕೆರೆ, ತುರಿಸು, ತಿಕ್ಕು, ಚಿವಿ, ಚಿವುಟು, ಚಿವುರು, ಜಿಗಟು
ಕೆಲಸ, ಕಾಯಕ, ಹೋರೆ, ದಂದುಗ, ದುಡಿಮೆ
ಕೇವಣಿಸು, ಹೂಡು [ಬಾಣಗಳನ್ನು]
ಕೇಳು, ಬೆಸಕೊಳ್ಳು, ಬೇಡಿಕೊಳ್ಳು
ಕೇಳು, ಕಿವಿಗೊಡು, ಆಲಿಸು
ಕೈಗಳೆ, ಮೀರು, ಮಿಗು, ಮಿಕ್ಕು, ಹೋಗು, ಅಸಕಳಿ, ಹೆಚ್ಚು, ಹೆರೆ, ತುರಿ, ತುಂಡರಿಸು, ಹೋಳು [ಹೋಳುಮಾಡು]
ಕೊಡು, ಎರೆ, ಮುಟ್ಟಿಸು, ತಲುಪಿಸು, ಸಲ್ಲಿಸು
ಕೊಡು, ಮುಟ್ಟಿಸು, ತೀರಿಸು, ಬಗೆಹರಿಸು
ಕೊನರು, ಚಿಗುರು, ತಳಿರು, ಮುಗುಳು
ಕೊನೆ, ಮುಕ್ತಾಯ, ಕಡೆ, ಪಡಚ
ಕೊಂಬೆ, ಟೊಂಗೆ, ಟಿಸಿಲು, ಕವಲು, ಕೋಡು, ರೆಂಬೆ
ಕೊಯ್ಯು, ಕೆತ್ತು, ಕೊತ್ತು, ಕಡಿ, ಕತ್ತರಿಸು, ಸವರು, ತರೆ
ಕೊಲ್ಲು, ಮಡಿಪು
ಕೊಳೆ, ಕಸ, ಹೊಲಸು
ಕೊಳೆ, ಕೆಡು, ಕಳಿ, ಇಳಿ
ಕೊಳ್ಳೆ, ಸುಲಿಗೆ, ಸೂರೆ, ದಾಳಿ, ಲಗ್ಗೆ
ಕೊಳ್ಳೆ, ಕಿಡಿ, ಕಿಚ್ಚು, ಕೆಂಡ, ಬೆಂಕೆ
ಕೋಟೆ, ಗಡ, ಕೊತ್ತಳ
ಕೋಡು, ಕೊಂಬು
ಕೋಡು, ತುದಿ, ಕಳಸ, ಶಿಖರ
ಕೋರಿಕೆ, ಹಾರೈಕೆ, ಬಯಕೆ, ಬೇಡಿಕೆ
ಗಡಿಬಿಡಿ, ಅಸವಸ, ತವಕ, ಲವಲವಿಕೆ, ಅವಸರ
ಗಂಟು, ಗುಂಜು, ತೊಡಕು, ಮಲಕು
ಗಂಟೆ, ಜಾ(ಂ)ಗಟೆ, ತಮ್ಮಟೆ, ಪರೆ, ಹಲಗೆ, ದುಮಡಿ, ಢಕ್ಕೆ
ಗಂಡ, ಬಂಟ, ಭಟ, ಎದೆಗಾರ, ಸಾಸಿಗ
ಗಡಿ, ಸೀಮೆ, ಮೇರೆ, ಎಲ್ಲೆ, ಹದ್ದು
ಗರಿ, ಪಕ್ಕ, ಪುಚ್ಛ, ತುಪ್ಪಳ, ತಿಪ್ಪಳ, ರೆಕ್ಕೆ
ಗಳಹು, ಜರಚು, ಹರಟು (ಅರಟು)
ಗಳಿಕೆ, ಆಯ, ಉತ್ಪನ್ನ, ಹುಟ್ಟುವಳಿ, ಆದಾಯ, ಲಾಭ
ಗಾಳಿ, ಎಲರು, ಎರಲು
ಗಿಳಿ (ಗಿಣಿ), ಕೀರ, ನುಡಿವಕ್ಕಿ, ಪಂಡಿತವಕ್ಕಿ, ಕನ್ನಡವಕ್ಕಿ
ಗುಟ್ಟು, ತಿರುಳು, ಹುರುಳು
ಗುಡಾರ, ಜಾಡಿ (ಝಾಡಿ), ಜಮಖಾನೆ, ಹಾಳಿ
ಗುಡ್ಡೆ, ಗೂಡು, ಗುಂಪಿ
ಗುಂಪು, ದೊಂದುಳಿ, ಬಂಬಲು, ತುರುಗಲು, ಸಂದಣಿ, ಹೊರಳಿ, ಕದಲೆ, ಜಂಗುಳಿ, ಗೊಂದಣಿ, ತಿಂತಿಣಿ, ಹಿಂಡು, ಬಿಂದು, ಗಡಣ, ಒಟ್ಟಿಜೆ, ತಟ್ಟು (ಥಟ್ಟು)
ಗುಂಪು, ಕೂಟು, ಬಳಗ
ಗುರಿ, ಪಡೆವು
ಗೂಡು, ಹಕ್ಕಿ, ಇಕ್ಕೆ, ಹಟ್ಟಿ, ದೊಡ್ಡಿ, ಮುಂದೆ, ರೊಪ್ಪ
ಗೊಂಚಲು, ಗೊನೆ, ಕುಚ್ಚು, ತೊಂಗಲು, ತೊಂಗೆ, ತೊಂಬೆ, ತೊಡಂಬೆ ಜೊಂಪ
ಗೊಣಗು, ಜಿನುಂಗು, ಗುಣುಗಟ್ಟು
ಗೊಂದಲ, ಗಡಿಬಿಡಿ, ಗಲಾಟೆ, ಕಲಕಲ, ದೊಂದೆ, ದೊಂಬೆ
ಚದುರು, ಜಾಣ್ಮೆ, ಜಾಣು, ಕುಸುರು
ಚಂದ್ರ (ಚಂದಿರ), ತಿಂಗಳು, ಪೆರೆ
ಚಾವಡಿ ಓಲಗ, ಕಚೇರಿ, ಕಾರ್ಯಾಲಯ
ಚಿಕ್ಕ, ಕಿರಿ, ಎಳೆ, ಸಣ್ಣ, ಅಲ್ಪ, ಸ್ವಲ್ಪ
ಚಿಗಿ, ಮೊಳೆ, ಹಬ್ಬು, ಪಡಲುವಡೆ, ಕೊನರು, ಕುಡಿಬಿಡು, ಚಿಗುರು
ಚಿಗುರು, ಕೊನರು, ಮೊಳಕೆ, ಕುದಿ, ಕೊಂಬು, ತಳಿರು
ಚಿಗುರೆ, ಜಿಂಕೆ, ಎರಲೆ, ಎರಳೆ
ಚಿಂತೆ, ಬಾಗುಳ, ದುಗುಡ, ತಲ್ಲಣ (ತಳ್ಳಂಕ)
ಚುಚ್ಚುಮಾತು, ಕಚ್ಚುಮಾತು, ಬಿಚ್ಚುಮಾತು, ಮೂದಲಿಕೆ, ಕವಡು, ಕಟುಕಿ, ಕಡುನುಡಿ, ಬಿರುನುಡಿ, ಅಣಕ
ಚುಂಚು, ಕೊಕ್ಕು, ಮೂಗು
ಚೆಂದ, ಚೆಲುವು, ಸೊಗಸು, ಸೊಬಗು, ಸೊಂಪು,

ದೇಸೆ, ಗಾಡಿ, ಅಂದ, ಲೇಸು, ಒಳ್ಪು
ಚೆಲ್ಲು, ಸುರುವು, ಸೂರೆಮಾಡು, ದುಂಡುಮಾಡು, ಹಾಳುಮಾಡು
ಚೆಲ್ಲು, ಹಾನು, ಒಗೆ, ಎಸೆ
ಜಗಳ, ಕಾಳಗ, ಬವರ, ಕೊಳಗುಳ, ಹೊಣಕೆ, ಹೋರಾಟ, ಹೊಯ್ದಾಟ, ಬಂಡಣ, ಹಣೆದ, ಕದನ
ಜಗ್ಗು: ಎಳೆ, ಕೊಸರು, ಕಸಿ
ಜಡ, ಭಾರ, ಬಿಣ್ಪು, ತಿಣ್ಣ
ಜಳಕ, ಸ್ನಾನ, ಮೀಹ
ಜಳ್ಳು, ಟೊಳ್ಳು, ಪೊಳ್ಳು, ಪಣಜು, ಬರಡು
ಜಾಡ, ನೇಕಾರ, ಹಟಗಾರ, ದೇವಾಂಗ
ಜಾಡು, ಸುಳಿವು, ಅಂದಾಜು
ಜಾವಳ, ಚೆಂಡಿಕೆ, ಜಡೆ, ಮುಡಿ
ಜಾಣ, ಚದುರ, ಬಲ್ಲಿದ, ಬಲ್ಲವ, ಅರಿಗ, ಅರಿವ
ಜಾತಿ, ಬೆಡಗು, ಬಣ, ಕುಲ, ತತಿ, ಬಳಿ
ಜಾರು, ನುಣುಚು, ನುಸುಳು
ಜೋಡಿಸು, ಕೂಡಿಸು, ಕಟ್ಟುಹೊಂದಿಸು, ಬೆಸೆ, ಸಮೆ, ಹೆಣೆ, ಹಮ್ಮು, ಕೆಚ್ಚು, ಕೋ, ಹೊಲಿ
ಜೋಲು, ನೇಲು, ತೂಗು (ತೂಗಾಡು) ಸಡಿಲು ಜೋಕೆ, ಎಚ್ಚರ
ಟಕ್ಕು (ಠಕ್ಕು), ಠವಳಿ, ಮೋಸ, ಕವಡು, ಆಟಮಟ, ಮಾಟ, ಬೂಟಾಟಿಕೆ, ಕಂತ್ರಾಟ
ಠಕ್ಕ, ಬೊಂದುಕ, ಚಲ್ಲವತ್ತ ನಂಬಿಸಿ ತಿಂಬವ, ಮೋಸಗಾರ, ಕಾಕ, ದುರುಳ
ಡೊಳ್ಳು, ಹೊಟ್ಟೆ, ಬೊಜ್ಜು
ತಗ್ಗು, ಕುಣಿ, (ಕುಳಿ), ಗುಣಿ, ಹಗೆ, ಹಳ್ಳ, ಅಗಳ್ತೆ (ಕಂದಕ)
ತಡವು, ಕೆಣಕು, ಕಾಲುಕೆದರು
ತಣಿ, ದಣಿ, ಚಳಿ, ಸಾಕಾಗು, ಆಸರು-ಬೇಸರು
ತನಕ, ವರೆಗೆ, ಮಟ್ಟ, ಮುಟ್ಟ
ತಂಡ, ಪಂಗಡ, ಬಣ
ತಂಪು, ತಂಡಿ, ಚಳಿ, ಕುಳಿರು, ಕೋಡು
ತಲ್ಲಣ (ತಲ್ಲಣ), ತಳಮಳ, ತಡಂಬರ, ಕಳವಳ, ಸಿಡಿಮಿಡಿ, ಕಸಿವಿಸಿ, ಬೇಗುದಿ, ಅಳಲು, ತೊಳಲು
ತಲೆ, ಚೆಂಡು, ರುಂಡ
ತಲೆಗೂಡು, ನಿತ್ತರಿಸು, ಸೈರಿಸು, ತಳು
ತಲೆದೂಗು, ಒಪ್ಪು, ಹೂಗುಟ್ಟು, ಸಮ್ಮತಿಸು, ಒಡಂಬಡು
ತವಕ, ಲವಲವಿಕೆ, ಚಪಲ, ಅಸವಸ, ಚಳಿಕ
ತಳಿಗೆ, ತಟ್ಟೆ (ತಾಟು), ಪಡಗ, ಹರಿವಾಣ, ಓಡ
ತಳ್ತ, ಮಡಲ್ತ, ಬಳೆದ, ಬೆಳೆದ, ಹಬ್ಬಿದ ಕೊಬ್ಬಿದ
ತಾಗು, ತಗಲು, ಪಳಂಚಲೆ, ಹತ್ತು, ಅಟೆ, ತಟೆ, ಬಡಿ, ಸೋಂಕು
ತಾಯಿ, ಅವ್ವ, ಅಬ್ಬೆ, ಅಮ್ಮ
ತಾಯಿಲಿ, ತಬ್ಬಲಿ, ದೇಸಿಗ, ದಿಕ್ಕೇಡಿ
ತಿಕ್ಕು, ಹೊಸೆ, ಕಡೆ (ಮಜ್ಜಿಗೆ), ಉಜ್ಜು
ತಿಂಡಿ, ತಿನಸು, ತೀಟಿ, ತುರುಸು, ನಸೆ, ತೀನಿ
ತಿಣಿಕು, ಬಳಲು, ತೇಕು
ತಿದ್ದು, ಸರಿಪಡಿಸು, ನೇವರಿಸು, ಬದಲಿಸು, ಮಾರ್ಪಡಿಸು, ಹೆಚ್ಚುಕಡಿಮೆ ಮಾಡು
ತಿನ್ನು, ಮುಕ್ಕು, ನುಂಗು, ನೊಣೆ, ಉಣ್ಣು, ಮೆಲ್ಲು ಸವಿ, ಆರೋಗಿಸು
ತಿಂತಿಣಿ, ಕಿಕ್ಕಿರಿ, ತುರುಗು, ಬಂಬಲು, ಜಂಗುಳಿ, ಹಿಂಡು, ಗುಂಪು, ಬಳಗ, ತಂಡ, ಮುಂದೆ, ಮಂದಿ
ತಿರಿ, ಬೇಡು, ಕೇಳು, ಕೈಯ್ಯೊಡ್ಡು, ಬಾಯಿತೆರೆ
ತಿರುಗು, ಮರಳು, ಸುತ್ತು, ಅಲೆ
ತಿರುವು, ಮಗಚು[ಮಗಳ್ಚು]
ತಿಳಿ, ಹೊಳೆ, ಎನಿಸು
ತಿಳು(ಳಿ) ವಳಿಕೆ, ಒಳಗಣ್ಣು, ವಿಚಾರ
ತೀಡು, ಬೀಸು, ಸುಳಿ
ತೀರ, ಪೂರ, ತುಂಬ, ಕಡು, ಬಹಳ, ಒಳ್ಳೆ, ಸಲೆ, ಮಿಗೆ, ನಾಡೆ, ಉರೆ, ತವೆ
ತೀರ್ಪು, ತೀರ್ಮಾನ, ಗೊತ್ತು, ಗೊತ್ತುವಳಿ, ಠರಾವು
ತುಡುಕು, ದುಡುಕು, ಎರಗು, ಬೀಳು, ಹಾಯು, ತಾಗು, ತಳ್ತಿರಿ
ತುತ್ತು, ನೊಣೆ, ನುಂಗು, ಬಕ್ಕರಿಸು, ಕಬಳಿಸು
ತುದಿ, ಚೂಣಿ, ಮುಂದು, ತಲೆ
ತುಂಟ, ಪೋರ, ಪೋಲಿ, ಪೋಕರಿ, ಅಗಡ, ಟೊಣಪ, ದಿಂಡೆಯ, ದಿಂಡೆಗಾರ, ದಿಂಡುಕ, ನಾಡಾಡಿ

ಉಡಾಳ, ಊಡುಕ, ಉಂಡಾಡಿ, ಕೊಳ, ಗೂಳಿ
ತುಪ್ಪ, ನೆಯ್
ತುಸು, ನೆಸು, ಕಿರಿದು, ಕೊಂಚ, ಅರೆಕುಳಿ
ತೂಗು, ತೊನೆ, ಬೀಗು, ಒಲೆ, ತೂಗಾಡು, ಅಲ್ಲಾಡು
ತೆತ್ತು, ಕೊಡು, ಕಟ್ಟು, ತೆರು
ತೆನೆ, ಗೊನೆ, ಕದಿರು
ತೆರೆ, ಬಳುವಳಿ, ವರದಕ್ಷಿಣೆ, ವರೋಪಚಾರ
ತೀಡು, ನೇವರಿಸು, ಸರಿಪಡಿಸು
ತೊಗಟೆ, ತಿಗುಡು (ದಿಗುಡು), ಸಿಪ್ಪೆ, ಹೊಟ್ಟು, ತವುಡು
ತೊಡೆ, ಅಳಿಸು, ಒರಸು, ತೊಳೆ
ತೊಡೆ, ಮೆತ್ತು, ಪೂಸು (ಹೂಸು), ಹಚ್ಚು, ಅಣ್ಣು
ತೊದಳು, ಸುಳ್ಳು, ಎರಡು, ಹುಸಿ, ಮಸುಕು, ಸಟೆ, ತಗಲು
ತೊಂಡು, ತೊಳಸು, ಜಗಳ, ತೊಟ, ಕೈಕೈ, ಬಾಯ್-ಬಾಯ್
ತೊಂದರೆ, ಕಷ್ಟ, ಕಾಟ, ಕೇಡು
ಕೋಟಲೆ, ಉಪಟಳ, ಗಸಣೆ, ದೈವ, ಹಣೆಬರಹ, ಇದಿ (ವಿಧಿ)
ತೊರೆ, ಬಿಡು, ಕೊಡು
ತೊರೆ, ಮರೆ, ಬಿಡು, ಕೈಬಿಡು
ತೊಲಗು, ಅಗಲು, ನೀಗು, ಬಿಡು
ತೊಳಗು, ಬೆಳಗು, ಹೊಳೆ, ತೆರಂಬೊಳೆ, ತಳ್‌ಪೊಯ್
ತೊಳಲು, ಬಳಲು, ಬಸವಳಿ
ತೋರ (ದೋರ). ದೊಡ್ಡ, ಹಿರಿ
ದಟ್ಟಿ, ಸೀರೆ, ಕಿರಿಗೆ, ಹುಟ್ಟಿಗೆ, ಪಟ್ಟಳಿ (ಪಟ್ಟಾವಳಿ), ಪತ್ತಲ
ದಂಡು, ದಳ, ಪಡೆ, ಮೋಹರ, ಒಡ್ಡು
ದಂಡೆ, ಬಾಸಿಗ, ಮಾಲೆ
ದಾ(೦)ಟು, ಹೋಗು, ಪಾರಾಗು
ದಾರಿ, ಹಾದಿ, ಎಣಿಕೆ, ವಿಚಾರ, ಬಗೆ
ದಿಂಡು, ತುಂಡು, ಬಡ್ಡಿ
ದುಂದು, ಸೂರೆ
ದೂರು, ಚಾಡಿಹೇಳು
ದೆವ್ವ, ಭೂತ, ವೇತಾಳ, ಪಿಶಾಚಿ, ಮರುಳು, ಪಿರಿದಿನಿ
ದೊರೆ, ಸಿಗು, ಒದಗು, ಕೈಗೆಬರು, ಪಡೆ, ದೊರಕಿಸು
ಧುಮುಕು, ಬೀಳು, ನೆಗೆ, ನುಗ್ಗು, ಹಾರು, ಜಿಗಿ, ಎಗರು, ಎರಗು
ಧೋತರ, ಒಲ್ಲಿ, ಸೆಲ್ಲೆಯ
ನಗೆ, ಚೇಷ್ಟೆ, ಹುಡುಗಾಟ, ನಗು, ವಿನೋದ
ನಟ್ಟು, ಕರಿಕೆ, ಕಣಗಿಲು, ಏಕು, ಜೇಕು
ನಡು, ಚುಚ್ಚು, ಒತ್ತು, ಹತ್ತು
ನಡು, ಹುಗಿ, ಊರು
ನಡೆ, ಇರುವು, ಬಾಳು, ಬದುಕು
ನನ್ನಿ, ನಿಕ್ಕುವ, ನನಸು, ದಿಟ, ಸತ್ಯ, ಸಾಜ, ನಿಜ, ಖರೆಯ
ನನೆ, ಮೊಗ್ಗು(ಮೊಗ್ಗೆ), ಮುಗುಳು
ನಂಜು, ಬಾಡಿಸು
ನಂಜು, ವಿಷ, ಮದ್ದು
ನಂದು, ಆರು, ಹೋಗು
ನಂಬುಗೆ, ನೆಚ್ಚಿಗೆ
ನಲ್ಲ, ಇನಿಯ, ಗಂಡ, ಓಪ, ಮನದನ್ನ, ಕಾದಲ, ಕೂರ್ಪ
ನಲಿ, ಒಲಿ, ಮೆಚ್ಚು, ಮಚ್ಚು
ನವಿರು, ಕೂದಲು, ಜಾವುಳ, ಜಡೆ
ನವೆ, ಸವೆ, ತವಿ(ತವು) ಸೊರಗು, ಕೊರಗು, ನೆಳ್ಗ (ನೆಗ್ಗು)
ನಸುಕು, ಬೆಳಕು, ಹೊತ್ತು, ಹೊತ್ತರೆ
ನಾಚು, ನೃತ್ಯ, ಕುಣಿಹ, ಕುಣಿತ, ರಿಂಗಣ, ಗೊಂದಣ(ಳ), ಆಟ
ನಾಚಿಕೆ, ಹೇಸಿಕೆ, ಸಂಕೋಚ, ಅಸಿಮಿಸಿ
ನಾಟಿಕೆ, ಮೊಳೆ, ಮೊಳಕೆ, ಕೊಂಬು, ಕುಡಿ
ನಾಟು, ನೆಡು, ನಡು, ಹಚ್ಚು, ಊರು
ನಾಡು, ಬೀಡು, ಹಟ್ಟಿ (ಪಟ್ಟಿ, ಪೇಠಾ), ಮಹಲು, ದೇಶ, ವಿಷಯ, ಸೀಮೆ
ನಾಣು, ನಾಚಿಕೆ, ಸಿಗ್ಗು, ಏವ (ಹೇವ), ಎಗ್ಗು
ನಿದ್ದೆ, ಝುಂಪು(ಝೋಂಪು), ಮರವೆ, ಮರಸು
ನಿಲ್ಲು, ತಡೆ, ತಾಳು
ನೀಡು, ಹಾಕು, ಬಡಿಸು, ಕೊಡು, ಇಕ್ಕು
ನೀರು, ಈರು, ಇರ್ಪು, ರಸ, ಹಸಿ
ನುಗ್ಗು, ನೂಕು, ಒತ್ತು, ದೂಡು, ದೂಕು, ದಬ್ಬು, ತಳ್ಳು

ನುಡಿ, ಸೊಲ್ಲು, ಮಾತು, ಉಸಿರು,
ನುರಿತ, ಪಳಗಿದ, ಹಣ್ಣಾದ, ಹದಕ್ಕೆ ಬಂದ, ಪಾಡಾದ
ನೆಮ್ಮು, ಆನು, ಒರಗು
ನೆರವಿ, ಗುಂಪು, ಸಂತೆ, ಹಿಂಡು, ಜಾತ್ರೆ, ಪರಿಸೆ
ನೆಲೆ, ಆಳ, ಉದ್ದ, ಉಣ್ಬು, ಗುಂಬು, ಮಡು (ಮಡುವು)
ನೆವ, ನೆಪ, ನಿಮಿತ್ತ, ಕಾರಣ, ಕತ, ದೂಸರು, ದೆಸೆ, ಸಲುವಾಗಿ, ಓಸ್ಕರ
ನೊರೆ, ಬುರುಗು
ನೊಸಲು ಹಣೆ
ನೋವು, ಗಾಯ, ಏರು, ಪೆಟ್ಟು, ಹೊಡೆತ, ಬಾಸಳ, ಏಟು
ಪಟ್ಟ, ಪದವಿ, ಅಧಿಕಾರ, ಗಾದೆ (ಗದ್ದುಗೆ)
ಪಡೆ, ಹೊಂದು, ಒಂದು
ಪದುರುನುಡಿ, ಮುಸುಕುಮಾತು. ಸುತ್ತುಮಾತು, ಕಟಕಿ
ಪಾಡು, ಬಾಳು, ಬಾಳುವೆ, ಬದುಕು, ಇರುವು
ಪಾಲು, ಪಸುಗೆ, ಹಂಚಿಗೆ
ಪಿಡುಗು, ಕಾಟ, ರೋಗ
ಪುಕ್ಕ, ಹೇಡಿ, ಅಂಜುಬುರುಕ, ಅಂಜುಗುಳಿ
ಪುಡಿ, ಹುಡಿ, ಹಿಟ್ಟು
ಪೂಜೆ, ಬೇಳುವೆ
ಪೆಂಪು, ಪೆರ್ಮೆ, ಮೇಲ್ಮೆ, ಏಳ್ಗೆ
ಹೆಚ್ಚಳ, ಹೆಗ್ಗಳಿಕೆ
ಪೇಚು, ಪಟ್ಟು, ಹಿಡಿತ
ಪೊದೆ, ಗುಂಪು, ಗುತ್ತು (ಕುತ್ತು), ಮೆಳೆ, ಕಂಟಿ, ಬನ, ತೋಪು, ಅಡವಿ, ಹಳವು, ಗಡ್ಡೆ
ಪೊರೆ, ಸಾಕು, ಸಲುಹು, ಕಾಯು, ಕಾಪಾಡು, ಓವು, ನಡಪು, ಜೋಕೆಮಾಡು, ಜೋಪಾನ-ಮಾಡು
ಪೊಳ್ಳು, ಪೊಟ್ಟೆ (ಹೊಟ್ಟೆ), ಪೊದರು (ಹೊದರು), ಪದರು, ಡೊಗರು
ಫಕ್ಕನೆ, ಭೊಂಕನೆ, ಒಮ್ಮೆಲೆ, ತೊಟ್ಟಗೆ, ತಟ್ಟನೆ (ಥಟ್ಟನೆ) ಚಟ್ಟನೆ, ಚಕ್ಕನೆ, ಗಮ್ಮನೆ, ಗಕ್ಕನೆ, ಬುದಿಂಗನೆ, ಪುಸುಕನೆ
ಬಗೆಹರಿಸು, ನಿತ್ತರಿಸು, ಸಹಿಸು, ತಡೆ, ತಾಳು
ಬಗೆ, ತೆರ, ಅಂದ, ಪಾಂಗು, ಮಾಳ್ಕೆ, ಹೊಲಬು
ಬಡತನ, ಪಂಜೆತನ
ಬಂಡಿ, ಚಕ್ಕಡಿ, ಗಾಡಿ
ಬಣಜು, ಸರಕು, ಹರದು
ಬದುಕು, ಬಾಳು, ಬಾಳುವೆ, ಇರುವು
ಬಂಜೆ, ಬರಡು, ಕೊರಡು, ಬರ, ಅರಬು
ಬಯಗು, (ಬೈಗು), ಸಂಜೆ, ಇರುಳು
ಬಯಸು, ಬೇಡು, ಕೇಳು, ಕೋರು, ಹಾರೈಸು, ಪಾರು (ಹಾಲು)
ಬರು, ಸಾರು, ಎಯ್ದು, ಐತರು, ಎಳ್ತರು
ಬಲ, ಕಸುವು, ಜಿಗುಟು, ನೀರು, ಎಣ್ಣೆ
ಬಲುಮೆ, ಜುಲುಮೆ, ಒತ್ತಾಯ
ಬಣವೆ, ಬನ್ನ, ಕಷ್ಟ, ತೊಳಲಾಟ, ಪೀಕಲಾಟ
ಬಳಗ, ಊಳಿಗ, ಜನ, ಆಳು
ಬಳಿ, ಸಾರಿಸು, ಹಚ್ಚು, ಮೆತ್ತು
ಬಳಿಕ, ತರುವಾಯ, ಆಮೇಲೆ
ಬಳೆ, ಬೆಳೆ
ಬಾಗು, ಬೀಳು, ಮಣಿ, ಎರಗು, ಪೊಡಮಡು, ವಂದಿಸು, ಕೈಮುಗಿ
ಬಾಳು, ಬದುಕು, ಇರು, ನೆಲಸು ಒಕ್ಕಲಾಗು
ಬಾಳುಕ, ಉಪ್ಪಿನಕಾಯಿ
ಬಿಗಿ, ಗಡಚು, ಗಟ್ಟಿ, ರಿಕ್ಕು (ಇರ್ಕು)
ಬಿಗುಪು, ಬಿಂಕ, ಡೌಲು, ಹೆಮ್ಮೆ
ಬಿಡು, ಮುಗಿಸು, ತಡೆ, ನಿಲ್ಲು, ಮಾಣು (ಮಾಣ್)
ಬಿತ್ತು, ಬೀಜ ಗೊರಟ (ಕೊಪ್ಪು) ಕಾಳು, ಗಣ್ಣು (ಕಣ್ಣು)
ಬೀಳ್ಕೊಡು, ಕಳುಹು, ಅಪ್ಪಣೆಕೊಡು, ಹೋಗಗೊಡು
ಬೀಳ್ಕೊಳು, ಅಪ್ಪಣೆಪಡೆ, ಹೊರಡು
ಬುಟ್ಟಿ, ಪುಟ್ಟಿ, ಜೆಲ್ಲಿ, ಕೆರಸಿ
ಬುಡಮೇಲು, ತಳವೆಳಗು, ಅಡಿ-ಮೇಗು, ತಲೆಕೆಳಗು, ತಿರುವು-ಮುರುವು, ಅದಲು ಬದಲು
ಬೆಂಬಲಿಗ, ಕೈವಾರಿ, ಮೇಲುಗಟ್ಟುವವ
ಬೆಂಬಿಡದೆ, ಬಿಟ್ಟೂಬಿಡದೆ, ಒಂದೇ ಸವನೆ, ತೆರಪಿಲ್ಲದೆ, ಅಡಿಗಡಿಗೆ, ಆಗಾಗ, ಯಾವಾಗಲೂ, ಮೇಲಿಂದಮೇಲೆ, ಹಗಲಿರುಳು
ಬೆದರು, ಬೆಚ್ಚು, ಹೆದರು
ಬೆಯ್, ಹಳಿ, ಜರಿ, ಮೂದಲಿಸು, ತರಿ, ತುಡುರು, ತೆಗಳು

ಬೆಲೆ, ಕೂಡು, ಸೇರು
ಬೆಳಸೆ, ಸಿಹಿತೆನೆ [ಸೀತೆನೆ]
ಬೆಳೆ, ಪಯಿರು
ಬೇಗೆ, ಬಿಸಿ, ಉರಿ, ಸೆಕೆ, ಕಾವು
ಬೇಡು, ಕೇಳು, ಕೋರು, ಹಾರೈಸು, ಎಳಸು, ಮೊಗಸು, ಬಯಸು, ತಿರಿ
ಬೇನೆ, ಬೆಸರಿಕೆ, ಅಲಸಿಕೆ, ಜಡ್ಡು, ಜಡ
ಬೇಡು, ಕೇಳು, ಕೈಯೊಡ್ಡು, ಎರೆ, ತಿರಿ, ಬಾಯಿತೆರೆ
ಬೇಯು, ಸುಡು, ಉರಿ
ಬೇಸರು, ಆಸರು, ದಾವತಿ, ದಣಿವು, ಆಯಲು, ತೇಕು
ಬೊಬ್ಬೆ, ಅಬ್ಬರ, ಆರ್ಬಟೆ, ಅರ್ಬಾಟ
ಬೋನ, [ಬಾನ] ಅನ್ನ, ಊಟ, ಅಡಿಗೆ, ಎಡೆ, ಆರೋಗಣೆ, ಓಗರ
ಬೊಳೈಸು, ಭುಲ್ಲವಿಸು ಹೊಗಳು, ಚಪ್ಪರಿಸು, ತಟ್ಟು
ಭಾವುಕ, ರಸಿಕ, ಚದುರ, ಬಗೆಕಾರ, ಜಾಣ, ಅರಿಗ
ಮಗ್ಗಲು, ಬದಿ, ಹೊರೆ, ನೆರೆ, ಒತ್ತು
ಬಳಿ, ಹತ್ತಿರ, ನೆರೆ, ಕೆಲ
ಮಜ್ಜಿಗೆ, ಅಳೆ
ಮಡಿ, ಸಾಯು, ಅಗಲು, ತೀರು
ಮಣ್ಣು, ಮಟ್ಟೆ, ಗರಸು, ಗದ್ದೆ, ಮಸಾರಿ, ಎರೆ
ಮಣಲು [ಮಳಲು], ಉಸುಕು ಉಸುಬು
ಮನ್ನಿಸು, ತಲೆಬಾಗು, ಶರಣು-ಹೋಗು, ಅಡಿವಿಡಿ
ಮನೆ, ನೆಲೆ, ನಿಲಯ, ಬೀಡು, ಬೀಡಾರ, ಗುಡಾರ, ಗೂಡಾರ, ಗುಡಿಸಲು, ಚಪ್ಪರ
ಮರ, ಗಿಡ, ಕಂಟಿ
ಮರುಗು, ಮಿಡುಕು, ನೆನೆ
ಮಲಗು, ಒರಗು, ಬೀಳು, ಪವಡಿಸು
ಮಳೆ, ಸರಿ, ಸರವು, ಸೆಳಕು, ಸೊನೆ, ಇಹ, ಸಿಡಿಸಲು ಸಿಟಿಸಿಟಿ [ಜಿಟಿಜಿಟಿ]. ಜಡಿ, ಒದ್ದೆ, ತಂದಲು, ತುಂತುರ
ಮಾಟ, ಗೆಯ್ತ, ನೆಗಳ್ತೆ, ಗೆಯ್ಮೆ, ಕೈವಾಡ
ಮಾಡ [ಮಾಡಿ, ಮಹಡಿ], ಕರುವಾಡ, ಅಟ್ಟ, ಉಪ್ಪರಿಗೆ, ಮಾಳಿಗೆ, ಮಹಲು, ಅರಮನೆ
ಮಾಡು, ಎಸಗು, ನೆಗಳು, ಸಮೆ, ಗೈ, ಹೆಣಗು
ಮಾತು, ನಾಲಗೆ, ವಚನ
ಮಿದಿ, ನಾದು, ತಿಕ್ಕು, ತೊಳಸು [ಥಳಿಸು] ಕುಟ್ಟು
ಮಿರುಗು, ಮಿನುಗು, ಮಿಸುಗು, ಮಿಂಚು
ಮೀಯು, ಮೈತೊಳೆ, ಜಳಕ ಮಾಡು, ಸ್ನಾನಮಾಡು, ಎರಕೊಳ್ಳು
ಮೀರು, ಕೈಗಳೆ, ಕೈಮೀರು, ಅಸಕಳಿ, ಆಗು
ಮುಕ್ಕು, ತಿನ್ನು, ಮೆಲ್ಲು, ನುಂಗು
ಮುಗಿಲು, ಬಾನು, ಆಕಾಶ
ಮುಚ್ಚು, ಮುತ್ತು, ಬಯ್ಚು[ಬಚ್ಚು] ಹೊಚ್ಚು[ಹೊದಿಸು], ಕವಿ, ಪೊರ್ದು [ಹೊದ್ದು] ಹುಗಿ, ಹುದುಗಿಸು, ಅಡಗಿಸು
ಮಟ್ಟು, ಮೈಲಿಗೆ, ಹೊಲೆ, ಕಡಿಗೆ
ಮುಟ್ಟು, ತಲುಪು, ಕೈಸೇರು, ಸಿಗು, ದೊರೆ
ಮುಂಡಾಸ, ರುಮಾಲು, ಪಾಗು, ಪಾಗುಡ [ಪಾವುಡ] ಪಾಗೋಟೆ, ಪಗಡಿ
ಮುತ್ತು, ಮುಕ್ಕುರು, ಮುಸುರು
ಮುದಿ, ಹಣ್ಣು
ಮುದ್ದು, ಒಲವು, ಮೆಚ್ಚು [ಮುಚ್ಚು]
ಮುನಿ, ಮುಳಿ, ಕೀರು, ರೇಗು, ಸಿಟ್ಟಾಗು
ಮುನಿಸು, ಸಿಟ್ಟು ಸಿಡುಕು, ರೊಚ್ಚು, ಕಿಚ್ಚು, ಕಾಯು, ಕಿನಿಸು, ಕವಲಿಕೆ, ಮುಳಿಸು
ಮುಪ್ಪು, ಮುದಿತನ
ಮುಸುಕು, ಹೊದಿಕೆ, ತೆರೆ, ಮರೆ, ಅಡ್ಡ
ಮುಳುಗು, ಆಳ್ದು
ಮುಳುಗು, ಮರೆಯಾಗು, ಕಾಣದಾಗು, ಕಣ್ಮರೆಯಾಗು, ಅಡಗು
ಮೂಡು, ಕಾಣು, ಒಗೆ, ಉಣ್ಮು, ಪೊಣ್ಮು, ತಲೆಯೆತ್ತು, ತಲೆದೋರು, ಹುಟ್ಟು
ಮೇವು, ಕಣಿಕೆ, ಹುಲ್ಲು, ಬಾಟಿ
ಮೊದಲು, ಗಂಟು, ಬಂಡವಾಳ, ಅಸಲು, ಮೊಬಲಗು
ಮೊಸರು, ಕಳಲು
ಮೊಳಗು, ತುಂಬು, ಹಬ್ಬು, ಇಡಗು
ಮೋಡ, ಮುಗಿಲು, ಕಾರ್
ಮೋಡಿ, ಬಗೆ, ಹದ, ಕೀಲು, ಹಿಡಿತ, ಅಂದ, ರೀತಿ

ಮೋಸ, ಮಾಟ, ಗೆಯ್ತ, ಕೈತವ
ರಾಡಿ, ರೊಜ್ಜು, ಕೆಸರು, ಅರಲು, ರಟ್ಟು, ಹುದಿಲು
ರೂಢಿ, ವಾಡಿಕೆ, ಬಳಕೆ
ಲಂಚ, ಕೈಯಾಸಿ, ವಿಮಾನ, ನಡೆಮಾಡ, ಪಾರು
ಸಣ್ಣ, ಸವುರ, ಬಡಕ
ಸದ್ದು, ಸಪ್ಪಳ, ಉಲಿವು
ಸರತಿ, ಬಾರಿ, [ವಾರಿ] ಪಾಳಿ, ಸೂಳು, ಪರಿವಿಡಿ
ಸರಿ, ಇಳಿ, ಓಸರಿಸು, ಕಡಿಮೆಯಾಗು
ಸರಿ, ದೊರೆ, ಸಾಟ, ಪಾಸಟಿ, ಪಾಟಿ, ಗೆಡ್ಡೆ, ಎಣೆ, ಜೋಡು, ತೋಡು, ಈಡು, ಒರೆ, ಹೋಲುವೆ, ಹೋಲಿಕೆ
ಸರಿ, ಬಿಡು, ಹಿಂದೆಗೆ, ಕೈಬಿಡು, ಮೈದೆಗೆ
ಸವುಳು, ಉಪ್ಪು
ಸಾರು, ಬೀರು, ಡಂಗುರ ಹುಯ್ಯು
ಸಾಲು, ಓಳಿ, ಬಂತಿ [ಪಂಕ್ತಿ]
ಸಿಹಿ, ಸವಿ, ರುಚಿ, ಇನಿ(ದು)
ಸೀಳು, ಬಿರಿ, ಒಡೆ, ಮುರಿ
ಸುಗ್ಗಿ, ನೆಲೆ, ಮನೆ, ಕಣೆ, ಗೊತ್ತು, ಎಡ, ಇಕ್ಕೆ
ಸುತ್ತು, ಮುತ್ತು, ಬಳಸು
ಸುಮ್ಮನೆ, ಕೆಮ್ಮನೆ, ಬರಿದೆ, ಹುಸಿ
ಸೆರಗು, ಕೊನೆ, ತುದಿ, ಕಡೆ
ಸ್ಯೆರಣೆ, ತಾಳ್ಮೆ, ಸೈಪು
ಸೊಟ್ಟ, ಅಂಕು, ಡೊಂಕು, ಒಂಕು, ಕೊಂಕು, ಕುಡು, ಅಡ್ಡ, ತಿಡ್ಡ
ಸೋಗು, ಹಗರಣ, ನಟನೆ, ವೇಷ
ಸೋಜಿಗ, ಬೆರಗು, ಬೆಕ್ಕಸ, ವೇಷ
ಸೋಜಿಗ, ಬೆರಗು, ಬೆಕ್ಕಸ, ಅಕ್ಕಜ, ಬಿಸವಂದ, ಅಚ್ಚರಿ, ಚೋದ್ಯ
ಸೋರು, ಒಸರು, ಬಸಿ, ಹನಿ, ಊರು
ಸೋಲು, ಜೋಲು, ಹಿಂಜರಿ, ಹಿಂದೆಗೆ, ಮೈದೆಗೆ, ಓಡು, ಚೆದರು, ಬೆನ್ನುತೋರು.
ಹಗೆ, ಎದುರಾಳಿ, ಆಗದವ, ಆರಡಿ
ಹಡಪ, [ಪಡಪ], ಹಸುಬೆ, ಚೀಲ, ಗೋಣೆ, ಸಂಚಿ
ಹತ್ತಿ, ಅರಳೆ, ತೂಳೆ, ಹಂಜಿ
ಹನಿ, ತೊಟ್ಟು, ತಟಕು
ಹನೆ [ಮೊಳೆವಲ್ಲು], ಹಲ್ಲು
ಹಂದರ, ಚಪ್ಪರ, ಕಾವಣ
ಹರಟೆ (ಅರಟೆ), ಗೋಷ್ಠಿ, ಕಾಲ-ಕ್ಷೇಪ ಸುಖ-ಸಂಕಥಾ-ವಿನೋದ, ಕಾವ್ಯಶಾಸ್ತ್ರ ವಿನೋದ
ಹರಟೆ, ಪುರಾಣ, ರಗಳೆ
ಹರವಿ, ರಂಜಣಿಗೆ, ಬಾನಿ
ಹರಿ, ಮುರಿ, ಒಡೆ, ಪಿಸಿ[ಹಿಸಿ]
ಹಲಬು, ಹುಯ್ಯಲಿಡು, ಗೋಳಿಡು, ಹಲವು, ನಾನಾ, ಬಗೆ, ಎಷ್ಟೊ, ಹವಣ, ಹೊಲಬು, ಹದೆ, ಹಿಡಿತ, ಕೀಲ, ಗುಟ್ಟು
ಹಾಡು, ಪದ, ಚುಟಿಕಿ, ರಗಳೆ
ಹಾದಿ, ಬೀದಿ, ದಾರಿ, ಓಣಿ
ಹಾರು, ಕಿತ್ತು [ಕಣ್ಣು, ಹುಬ್ಬು ಮುಂತಾದುವು]
ಹಾಲು, ಕಳ್ಳು, ಸೊನೆ, ರಸ
ಹಾಳು, ಬೀಳು, ಪಡ
ಹಿಗ್ಗು, ಉಬ್ಬು, ಗುಡಿಗಟ್ಟು, ನವಿರೇರು, ಜುಮ್ಮೆನ್ನು
ಹಿಡಿ, ಸೆರೆ, ಬೊಗಸೆ
ಹಿಡಿ, ತಾಳು, ತಳೆ, ಅನು, ಹೊಂದು
ಹಿಂಜು ಹಿಕ್ಕು, ಬಾಚು, ಹಿಸಿ [ಪಿಸಿ]
ಹಿಂಡು, ಕರೆ, ಹೀರು, ಹಿಳಿ [ಹಿಳಿ]
ಹಿರಿ, ಹೀರು, ಎಳೆ, ಸೇದು, ಜಗ್ಗು
ಹಿರಿ, ದೊಡ್ಡ, ತೋರ [ದೋರ]
ಹಿಸುಕು, ಆದುಮು, ಹತ್ತಿಕ್ಕು, ಹಿಳಿ [ಪಿಳಿ], ಹಿಂಡು, ಒತ್ತು
ಹೀಚು, ಮಿಡಿ, ಕಸಕು, ಒಗರು, ಮಿಡಿ, ಕಾಯಿ, ಕಗ್ಗ
ಹುಚ್ಚು, ತಲೆತಿರುಕ, ಬ್ರಹ್ಮೇತಿ; ಛಾಂದಸಿ; ಹಟ; ಆಗ್ರಹ
ಹುಡುಕು; ಬೆದಕು; ಅರಸು; ಅರಿಸು
ಹುಡುಗ; ಪೋರ; ತುಂಟ
ಹುಮ್ಮಸ; ಹುರುಪು
ಹುಳಿ; ಕೆಡು (ಕಿಡು); ಹಳಸು
ಹೂಡು; ಹುಚ್ಚು; ಕಟ್ಟು; ಬಿಗಿ; ತೊಡರಿಸು; ಸಿಕ್ಕಿಸು
ಹೂವು; ಅರಲು (ಅರಳು); ಅಲರು; ಮಲರು; ಹೊಡೆ
ಹೆಸರು; ನೆಗಳ್ತೆ; ಬಿರುದು
ಹೆಳಲು; ತುರುಬು; ಮುಡಿ; ಜಡೆ; ಚೊಲ್ಲೆಯ (ಹೆರಳಿನ ತುದಿ)

ಹೇರು; ಹೊರಿಸು; ಹಾಕು ಒಟ್ಟು

ಹೊಗಳಿಕೆ; ಕೈವಾರ; ಕೊಂಡಾಟ

ಹೊಗು, ಹೋಗು, ಸೇರು, ನುಸುಳು, ನುಗ್ಗು

ಹೊಟ್ಟು; ಸೊಪ್ಪೆ

ಹೊಡೆ; ಎಬ್ಬಿಸು, ಎತ್ತು, ಸಾಗಿಸು

ಹೊಡೆ, ಬಡಿ, ಜಡಿ, ಕಡಿ, ಇಕ್ಕು, ಹೊಣೆ, ಹೊರೆ

ಹೊದಿಕೆ, ಮುಸುಕು, ಮೇಲುದ ಸೆರಗು, ಸೆಲ್ಲೆಯ, ಒಲ್ಲಿ

ಹೊನ್ನು ಚಿನ್ನ, ಕಸವರ, (ಕಡವರ), ಬಂಗಾರ, ಹಾಟಕ, ಮಿಸುನಿ, ಅಪರಂಜಿ

ಹೊನ್ನು, ಹಣ, ರೊಕ್ಕ, ದುಡ್ಡು

ಹೊರೆ, ಮೂಟೆ(ಮೊಟ್ಟೆ) ಒಚ್ಚೆ

ಹೊಲ, ಗದ್ದೆ, ತೋಟ, ಕೈವೊಲ, ಕೈದೋಟ, ಹೂದೋಟ

ಹೊಸ, ಮೀಸಲ, ಬಳಸದ, ಮುಡಿಪು

ಹೊಳಪು, ಹೊಗರು, ಪೊಡರ್ಪು, ತಳಕು (ಥಳಕು) ಬೆಳಕು, ಬೆಡಗು, ಮಿಂಚು, ಮಿರುಗು, ಮೆರಗು

ಹೊಳೆ, ತೊರೆ, ಹಳ್ಳ, ಸರುವು, ಒನಲು, ಒಳ್ಕು, ಪೊನಲು, ಹೊನಲು

ಹೋರು, ಗುದ್ದು, ತೂತು

ಹೋಳು, ತುಂಡು, ತುಣುಕು, ಚೂರು

ದೇಸಿನುಡಿ

೫೩. ದೇಸಿ* **(racy)** ನುಡಿಯ ಮಹತ್ತ್ವವನ್ನು ಸಾವಿರಾರು ವರುಷಗಳಿಂದಲೂ ಕನ್ನಡ ಕವಿಗಳು ಹೇಳುತ್ತ ಬಂದಿರುವರು. ಪೊನ್ನ-ರನ್ನರನ್ನು ಮೊದಲುಗೊಂಡು, ಕನ್ನಡ ಕವಿಪುಂಗವರೆಲ್ಲರೂ ದೇಸಿಗೆ ಮನಸೋತರವರೇ; ದೇಸಿಯನ್ನು ಮನಸಾರೆ ಹೊಗಳಿದವರಾಗಿದ್ದಾರೆ. 'ಪೊಸದೇಸೆಯ ನುಡಿಗಳೊಳ್ ಪೊಸದೆನಿಪಂತೆ', 'ದೇಸೆ ಒಡಂಬಡುವಂತೆ', 'ದೇಸವೆತ್ತ ಪೊಸನುಡಿ'ಯ ಕುಸುರು ಬಗೆಗೊಳ್ವಂತೆ, ನುಣ್ಪುವೆತ್ತ ಪೊಸದೇಸಿ ನುಡಿಗೆ ಆಗರವಾಗುವಂತೆ ತಮ್ಮ ತಮ್ಮ ಕಾವ್ಯಗಳನ್ನು ಬರೆಯಬೇಕೆಂದು ಹೆಮ್ಮೆಯಿಂದ ಪ್ರತಿಜ್ಞೆಗಳನ್ನು ಮಾಡಿದುದನ್ನು ಕಾಣಬಹುದು. ಪಂಪಭಾರತವು ಕನ್ನಡದ ದೇಸಿಯ ತಿರುಳನ್ನೊಳಗೊಂಡಿದೆ, ನಯಸೇನನ ಧರ್ಮಾಮೃತದಲ್ಲಿ ಕನ್ನಡ ದೇಸಿಯ ಹುತ್ತು ಹೊರಬಂದಿದೆ. ಆಂಡಯ್ಯ, ಕುಮಾರವ್ಯಾಸ. ಸರ್ವಜ್ಞಕವಿಗಳ ಗ್ರಂಥಗಳಿಗೆ ದೇಸಿಯೆ ಅಡಿಗಲ್ಲಾಗಿದೆ.

೫೪. ವ್ಯಕ್ತಿಗಳಿದ್ದಷ್ಟು ಪ್ರಕೃತಿಗಳು; ದೇಶಗಳಿದ್ದಷ್ಟು ದೇಸಿ. ಪ್ರತಿಯೊಬ್ಬರಲ್ಲಿಯೂ ಒಂದೊಂದು ಬಗೆಯ ವ್ಯಕ್ತಿ-ವೈಶಿಷ್ಟ್ಯವಿರುವಂತೆ ದೇಸಿ-ದೇಸಿಗಳಲ್ಲಿಯೂ ಒಂದೊಂದು ಬಗೆಯ ಅಂದವಿದೆ. ವ್ಯಕ್ತಿತ್ವವಿಲ್ಲದವನು ಮನುಷ್ಯನೇ ಅಲ್ಲ; ಅದು ಬೆಡಗು ಇಲ್ಲದ ಬೋಳುನುಡಿ. ದೇಸಿಯ ಸೊಗಸಿದ ಮಾತೂ ನರುಗಂಪಿಲ್ಲದ ಹೂವೂ ಒಂದೆ, ಆದುದರಿಂದಲೇ ಕವಿಗಳಿಗೆ ದೇಸಿಯ ಮೇಲೆ ಇಷ್ಟು ಮೋಹ ದೇಸಿಯನ್ನು ಬಿಟ್ಟು ಬೋಳುಮಾತಿನಿಂದ ಬರೆವ ತಪ್ಪುದಾರಿಯನ್ನು ಹಿಡಿದವರು ಕಂನುಡಿಯನ್ನು ಅಡ್ಡಮಾರ್ಗಕ್ಕೆ ಒಯ್ದರು. ದೇಸಿಯು ಭಾಷೆಯ ಜೀವಾಳ. ದೇಸಿಯನ್ನು ದುರ್ಲಕ್ಷಿಸಿದರೆ ಭಾಷೆಯು ನೀರಸವಾಗಿ, ಪರಿಪುಷ್ಟವಾಗಲಾರದು.

ದೇಸಿನುಡಿಯ ಲಕ್ಷಣವನ್ನು ಹೇಳುವುದು ದುಸ್ತರ, ದೇಸಿನುಡಿಯನ್ನು ಪರಭಾಷೆಗೆ ಶಬ್ದಶಃ ಪರಿವರ್ತಿಸಿ ಹೇಳಲಿಕ್ಕೆ ಆಗುವುದಿಲ್ಲ. ಇದೆ ದೇಸಿಯ ಹೆಗ್ಗುರುತು. ಒಂದು ಭಾಷೆಯೊಳಗಿನ ವೈಚಿತ್ರ್ಯಗಳೆಲ್ಲ ಸೇರಿ, ಸಾಧಾರಣವಾಗಿ ಅದುವೆ ದೇಸಿಯೆನಿಸುತ್ತದೆ. ದೇಸಿನುಡಿಯ ಮುಂದೆ ವ್ಯಾಕರಣ, ತರ್ಕಶಾಸ್ತ್ರಗಳ ಆಟವೆ ನಡೆಯುವುದಿಲ್ಲ.
'ಈ ರೂಪಾಯಿ ನಡೆಯುವುದಿಲ್ಲ', ಎಂಬುದನ್ನು ಇಂಗ್ಲೀಷಿಗೆ ಶಬ್ದಶಃ ಪರಿವರ್ತಿಸಲಿಕ್ಕಾಗುವುದಿಲ್ಲ. ರೂಪಾಯಿ ನಿರ್ಜೀವ ವಸ್ತು; ಅದು ನಡೆಯುವುದೆಂದು ಹೇಳುವುದೆ ಒಂದು ವೈಶಿಷ್ಟ 'ಹುಡುಗ ಏನು ಮಾಡುತ್ತದೆ?' ಇಲ್ಲಿ ಕರ್ತೃ ಮತ್ತು ಕ್ರಿಯಾಪದಗಳಲ್ಲಿ ಹೊಂದಿಕೆ ಇಲ್ಲ. ಪುಲ್ಲಿಂಗದ ಕರ್ತೃವಿದ್ದು ನಪುಂಸಕಲಿಂಗದ ಕ್ರಿಯಾಪದವಿದೆ.

---

* ದೇಸೆ ಮತ್ತು ದೇಸಿ ಎಂಬ ಎರಡು ಬಗೆಯ ರೂಪಗಳೂ ಹಿಂದಿನ ಸಾಹಿತ್ಯದಲ್ಲಿ ದೊರೆಯುತ್ತವೆ. ಅವುಗಳಲ್ಲಿ ಎರಡನೆಯದನ್ನು ಇಲ್ಲಿ ಸ್ವೀಕರಿಸಲಾಗಿದೆ.

ಇದು ವ್ಯಾಕರಣವಿರೋಧ. 'ಸೀತೆಯು ಗರ್ಭವತಿಯಾಗಿದ್ದಾಳೆ' ಎಂದರೆ ಸರಿ; ಆದರೆ, ಗರ್ಭ ಶಬ್ದವು ಕನ್ನಡದಲ್ಲಿ ಗಬ್ಬವೆಂದಾಗುತ್ತಲೆ ಅದನ್ನು ಮೇಲಣ ವಾಕ್ಯದಲ್ಲಿ ಪ್ರಯೋಗಿಸಲಾಗದೆಂದು ರೂಢಿಯ ಕಟ್ಟಪ್ಪಣೆಯಿದೆ! 'ಇನ್ನು ನನ್ನ ಕೈಯಿಂದ ನಡೆಯಲಿಕ್ಕಾಗುವುದಿಲ್ಲ' ಎಂಬ ವಾಕ್ಯದಲ್ಲಿ ಕೈಯಿಂದ ನಡೆಯುವುದು ಅದಾವ ರೀತಿ? ಹೀಗೆ ದೇಸಿ ಎಂದರೆ ಕಡುವೈಚಿತ್ರ್ಯದ ನುಡಿಯಾಗಿದೆ.

ದೇಸಿಯಲ್ಲಿ ನುಡಿನುಡಿಗೂ ಹೊಸತನವು ತುಂಬಿಕೊಂಡಿದೆ; ದೇಸಿಯೆಂದರೆ ಸಜೀವ ಭಾಷೆ; ಸಜೀವರ ಭಾಷೆ. ದೇಸಿಯ ಒಂದೊಂದು ನುಡಿಯಲ್ಲಿಯೂ ಕಣ್ಣಮುಂದೆ ಸುಸ್ಪಷ್ಟವಾದ ಚಿತ್ರಗಳನ್ನು ತಂದು ನಿಲ್ಲಿಸುವ ಸಾಮರ್ಥ್ಯವಿದೆ. 'ತಲೆದೂಗು' 'ಮೂಗುಮುರಿ' ಇವೇ ಮೊದಲಾದ ಮಾತುಗಳು ಮನಸ್ಸಿನ ಮೇಲೆ ಎಷ್ಟೊಂದು ಪರಿಣಾಮಕಾರಿಯಾಗಿ ಅರ್ಥವನ್ನು ಅಚ್ಚೊತ್ತಿದಂತೆ ಮೂಡಿಸುವುವು! ಬೇಕು, ಬೇಡ, ಅಹುದು, ಅಲ್ಲವೆಂಬ ಬರಿನುಡಿಗಿಂತ ಮೇಲಿನಂತಹ ದೇಸಿನುಡಿಯು ಯಾವಾಗಲೂ ಮಾತಿನ ಸವಿಯನ್ನು ಹೆಚ್ಚಿಸುವುದು. ಅಲ್ಲದೆ, ದೇಸಿಯಲ್ಲಿರುವ ಜೋರು; ಬಚ್ಚಬರಿ ಮಾತಿನಲ್ಲಿಲ್ಲ. ಭಾವನಾಯುಕ್ತರಾಗಿ ಒಳ್ಳೆ ಹಾವಭಾವ ಸಹಿತವಾಗಿ ಸುಖಸಲ್ಲಾಪ-ವಾಗ್ವಾದಗಳನ್ನು ನಡೆಯಿಸುವ ನಾಡವರಿಂದಲೆ (ಜನಸಾಮಾನ್ಯರಿಂದಲೆ) ದೇಸಿನುಡಿಯು ಬೆಳೆದುದು. ಆದುದರಿಂದ, ದೇಸಿಗೆ 'ನಾಡ ನುಡಿ' ಎಂದು ಹೇಳುವುದೂ ಉಚಿತವಾಗಿದೆ. ನಾಣ್ನುಡಿಯೂ ನಾಡನುಡಿಯೂ ಎಂದರೆ ದೇಸಿಯ ಒಂದು ಪ್ರಕಾರವೆ ಸರಿ.

೫೫. ದೇಸಿಯಲ್ಲಿ ಸ್ಥೂಲವಾಗಿ ಐದು ವಿಭಾಗಗಳನ್ನು ಕಲ್ಪಿಸಬಹುದು. (i) ಜೋಡುನುಡಿ (ii) ಮಾರುನುಡಿ (iii) ಕಿರುನುಡಿಗಳು, (iv) ಪಡೆನುಡಿ (v) ನಾಣ್ನುಡಿ (ಗಾದೆ)

(i) ಜೋಡುನುಡಿ

೫೬. ಈ ಬಗೆಯ ನುಡಿಗಳು ಎಲ್ಲ ಭಾಷೆಗಳಲ್ಲಿಯೂ ಇರುವುದು ಉಂಟು. ಆದರೆ, ಅವೆಲ್ಲವುಗಳ ಅಂದವೇ ಬೇರೆ. ಆಡಿದ ಮಾತಿಗೆ ಜೋರು ಬರುವುದಕ್ಕಾಗಿ ಈ ಬಗೆಯ ಮಾತಿನ ರೀತಿಯ ತಲೆದೋರಿದೆ (೧) ಇವುಗಳನ್ನು ತಟ್ಟನೆ ತಯಾರಿಸಿಕೊಳ್ಳುವ ಒಂದು ಪದ್ಧತಿಯಿದೆ.

ಉದಾ : ಪುಸ್ತಕಗಿಸ್ತಕ; ಮಾತುಗೀತು;ತಿಂದುಗಿಂದು; ಉಂಡುಗಿಂಡು; ಮಂದಿಗಿಂದಿ; ಹೊಲಗಿಲ ಮುಂತಾದುವು

ಪ್ರಯೋಗ : 'ಅರಸುಗಿರಸುಗಳ ಪಾಡಾವುದೀಗ ತನಗೆ' - ಲಕ್ಷ್ಮೀಶ

ಆದರೆ ಇವು, ತಿರಸ್ಕಾರದಂತಹ ಒಂದೆರಡಕ್ಕಿಂತಹ ಹೆಚ್ಚು ಮನೋಭಾವನೆಗಳನ್ನು ವ್ಯಕ್ತಪಡಿಸಲಾರವು (೨) ನಮ್ಮ ವ್ಯಾಕರಣಕಾರರು ಹೇಳುವ ಆಮ್ರೇಡಿತ ಅಥವಾ ದ್ವಿರುಕ್ತಿ ಬಹೂಕ್ತಿಯೆಂಬುದು ಜೋಡುನುಡಿಯ ಒಂದು ಪ್ರಕಾರವೇ' ದೂರ ಹತ್ತಿರ, ಸಿಟ್ಟು ಹಗೆತನ, ಹೊಟ್ಟೆ ಕಿಚ್ಚು, ಗಡಿಬಿಡಿ, ಹೊಗಳಿಕೆ ತೆಗಳಿಕೆ, ಎಂಬಿವೇ ಮೊದಲಾದ ಬಗೆಬಗೆಯ ಮನೋಭಾವಗಳನ್ನು ವ್ಯಕ್ತಪಡಿಸುವಾಗ ಒಂದೇ ನುಡಿಯೆ ಎರಡು, ಕೆಲಸಾರೆ ಎರಡಕ್ಕಿಂತ ಹೆಚ್ಚು ಬಾರಿ ಬರುವುದು.

ಉದಾ :	ದೂರಕ್ಕೆ	- ಅತ್ತಅತ್ತ, ಅಲ್ಲಿಅಲ್ಲಿ
	ಹತ್ತಿರಕ್ಕೆ	- ಇತ್ತಇತ್ತ, ಇಲ್ಲಿಇಲ್ಲಿ
	ಸಿಟ್ಟಿಗೆ	- ನಡೆನಡೆ, ಪೋಪೋ
	ಪ್ರತಿಯೊಂದು	- ಕೇರಿಕೇರಿಗಳನ್ನು ಹುಡುಕಿದನು
	ಎಲ್ಲ ಎಂಬಲ್ಲಿ	- ಮೆಳೆಮೆಳೆಗಳನ್ನು ಸೋವಿದರು

ಬಹಳವೆಂಬಲ್ಲಿ - ಮೃಗಮೃಗಂಗಳಂ ಕೆಡಹಿದರು.
ಜನಜನ ಜಾತ್ರೆ
ಗಡಿಬಿಡಿಗೆ - ಸರಿಸರಿ ಹಾವು

(೩) ಈ ಮೂರನೆಯ ಪ್ರಕಾರದ ಜೋಡುನುಡಿಗಳನ್ನು ಸಿಕ್ಕಹಾಗೆ ಮಾಡಿಕೊಳ್ಳಲಿಕ್ಕಾಗುವುದಿಲ್ಲ. ಇವುಗಳಲ್ಲಿರುವ ಎರಡೂ ಪದಗಳು ಸಾಮಾನ್ಯವಾಗಿ ಸಮಾನಾರ್ಥಕ ಶಬ್ದಗಳಾಗಿರುತ್ತವೆ: ಇಲ್ಲವೆ ಪೂರಕ ಪದಗಳಿರುತ್ತವೆ. ಸಾಧಾರಣವಾಗಿ ಇವುಗಳ ಸಂಖ್ಯೆಯು ನಿಯಮಿತವಾಗಿದೆ. ಮಾತಿನಲ್ಲಿ ಜೋರು ತರುವುದಕ್ಕಾಗಿ ಸೊಗಸನ್ನುಂಟುಮಾಡುವುದಕ್ಕಾಗಿ ಇವುಗಳನ್ನು ಉಪಯೋಗಿಸುವುದುಂಟು.

ಉದಾ : ಹೊಲಮನೆ: ದನಕರು ಮುಂತಾದುವು.

ಇವುಗಳಲ್ಲಿ ಒಂದು ಬಗೆಯ ಅನುಪ್ರಾಸದ ಅಂದವಿದ್ದು ಅದು ಕಿವಿಗೆ ಇಂಪನ್ನುಂಟು ಮಾಡುವುದು

ಉದಾ : ಮಂದಿಮಕ್ಕಳು; ತಾಳಮೇಳ; ಗಿಡಗಂಟೆ; ಗದ್ದೆ ಬೆದ್ದಲು ಮುಂತಾದುವು

(ಅ) ಎಲ್ಲ-ಸಂಪೂರ್ಣ ಎಂಬ ಅರ್ಥವನ್ನು ಸಾಧಿಸುವುದಕ್ಕೆ ಎರಡು ಪರಸ್ಪರ ವಿರುದ್ಧ ಶಬ್ದಗಳನ್ನು ಒಂದರ ಮುಂದೊಂದು ಜೋಡಾಗಿ ಇಡುವುದುಂಟು.

ಉದಾ : ಅಲ್ಲಿಇಲ್ಲಿ; ಅತ್ತ ಇತ್ತ; ಹಿಂದೆಮುಂದೆ; ಮೇಲೆಕೆಳಗೆ:
ಆಗಈಗ; ಎಡಬಲ; ಹಗಲಿರುಳು ಮುಂತಾದುವು.

(ಆ) ಈ ಬಗೆಯ ಜೋಡುನುಡಿಗಳಲ್ಲಿ, ಹಿಂದಕ್ಕೆ ಬಳಕೆಯಲ್ಲಿದ್ದ ಎಷ್ಟೋ ಶಬ್ದಗಳ ಅವಶೇಷಗಳು ಕಣ್ಣಿಗೆ ಬೀಳುತ್ತವೆ. ಈಗ ಒಂದನ್ನೆ ಬೇರೆಯಾಗಿ ಬಳಸಿದರೆ ಸಾಮಾನ್ಯ ಜನಕ್ಕೆ ಒಮ್ಮೆಲೆ ಅದರ ಅರ್ಥವು ಹೊಳೆಯುವುದಿಲ್ಲ!

ಉದಾ : (ಅಡ್ಡ) ತಿಡ್ಡ; (ಉಡಿಗೆ) ತೊಡಿಗೆ; (ಜಗಳ) ತೋಟಿ; (ಅವಳಿ) ಜವಳಿ

(ಇ) ಕೆಲವೆಡೆಗಳಲ್ಲಿ ಜೋಡುನುಡಿಯೊಳಗಿನ ಒಂದು ಪದವು ತನ್ನ ಮೂಲ ರೂಪದಿಂದ ಅಲ್ಪ ಸಲ್ಪ ದೂರ ಹೋಗುವುದು.

ಉದಾ : ಗಂಟುಗದಡಿ

ಇದರೊಳಗಿನ 'ಗದಡಿ' ಎಂಬುದರ ಶುದ್ಧರೂಪವು 'ಗಠಡಿ' ಎಂದಿರಬೇಕು: 'ಗಠ್ಠಿ' 'ಗಠಡಿ' ಗಟ್ಟಿ ಕಟ್ಟಿದ್ದು ಎಂಬರ್ಥದ ಪದ; 'ಗಂಟು ಗಠಡಿ' ಎಂದಿರಬೇಕಾದುದು ಉಚ್ಚಾರ ಸೌಲಭ್ಯಕ್ಕಾಗಿ 'ಗಂಟುಗದಡಿ' ಎಂದಾಗಿದೆ.

(ಈ) ಸ್ವಭಾಷೆಯ ಒಂದು ಪದದೊಡನೆ, ಪದಭಾಷೆಯೊಳಗಿನ ಅದೇ ಅರ್ಥದ ಇನ್ನೊಂದು ಪದವು ಸೇರಿ ಆದ ಹಲವು ಜೋಡು ನುಡಿಗಳು ಕಾಣಿಸಿ ಕೊಳ್ಳುತ್ತವೆ. ಭಿನ್ನಭಾಷೆಯ ಜನಾಂಗದೊಡನೆ ವಿಶೇಷ ಸಂಪರ್ಕವುಂಟಾದಾಗ, ಈ ಬಗೆಯ ಜೋಡಿಗಳು ತಲೆದೋರುವುವು.

ಉದಾ : ಕಾಗದ-ಪತ್ರ, ಛಪ್ಪನ್ನೈವತ್ತಾರು, ಕೂಡಲ-ಸಂಗಮ, ಚಂದ್ರಮ, (ಸ್), ಗವಲೆತ್ತು, ನಡುಮಧ್ಯ, ಹಣ್ಣ [ಹಂ] ಪಲ, ಕಾಯಿಪಲ್ಲೆ.

ಉ) ಅನುಕರಣವಾಚಿಗಳಂತಹ ಶಬ್ದಗಳಿಂದಲೂ, ನಿರರ್ಥಕ ನುಡಿಗಳಿಂದಲೂ ಸಿದ್ಧವಾದುವು ಕೆಲವುಂಟು.

ಉದಾ : ತಾರಗಬೀರಗ [ತರಗಾಬರಗಾ], ಎಕ್ಕಸಕ್ಕ, ಅಸಡಾಬಸಡಾ, ಅಡರಾಬಡರಾ, ಕಡರಾಬಡರಾ, ಅಂಡಂಡರಾಡ್ನಿ.

ಬೇರೆ ಜೋಡುನುಡಿಗಳು

ಅಂಜಿಕೆ-ಅಳುಕು; ಅಂಬಲಿ-ರೊಟ್ಟಿ; ಅಕ್ಕ-ತಂಗಿ; ಅಗಿ-ಸುಗಿ; ಅಚ್ಚು-ಮೆಚ್ಚು; ಅಜ್ಜ-ಮುತ್ತ; ಅಡಸಲ-ಬಡಸಲ; ಅಡ್ಡ-ತಿಡ್ಡ; ಅಣ್ಣ-ತಮ್ಮ; ಅರ್ಧ-ಮರ್ಧ; ಅರವು-ಮರವು; ಅರಿಸಿನ-ಕುಂಕುಮ; ಅಲ್ಪ-ಸ್ವಲ್ಪ;

ಅಷ್ಟು-ಅಷ್ಟು; ಅಷ್ಟು-ಇಷ್ಟು; ಆಚಾರ-ವಿಚಾರ; ಆಟ-ನೋಟ; ಆಟ-ಪಾಟ; ಆಪ್ತರು-ಇಷ್ಟರು; ಆಳು-ಹೋಳು; ಇಷ್ಟಿಷ್ಟು, ಇಷ್ಟೊ-ಇಷ್ಟೊ; ಉಕ್ಕು (ಳ)-ಸೊಕ್ಕು (ಳ); ಉಡಿಗೆ-ತೊಡಿಗೆ; ಉಪ್ಪು-ಮೆಣಸು (ಮೆಣಸಿನಕಾಯಿ); ಊಟ-ಉಡಿಗೆ; ಊಟ-ಉಪಚಾರ; ಊರು-ಕೇರಿ; ಎಣ್ಣೆ-ಬೆಣ್ಣೆ; ಎಲೆ-ಅಡಿಕೆ; ಒಂಕು-ಒಸಡಿ; ಓದು-ವಾದ; ಕತ್ತೆ-ಕುದುರೆ; ಕಥೆ-ಕಾದಂಬರಿ; ಕಪ್ಪು-ಕಾಣಿಗ; ಕಸ-ಕಡ್ಡಿ; ಕಳವು-ತುಡುಗು; ಕಳ್ಳರು-ಕಾಕರು; ಕರುಳು-ಕಕ್ಕುಲತೆ; ಕಳ್ಳಿ-ಬಳ್ಳಿ; ಕಾಗದ-ಪತ್ರ; ಕಾಡು-ಮೇಡು; ಕಾಯಿ-ಪಲ್ಲೆ; ಕಾಶಿ-ರಾಮೇಶ್ವರ; ಕಾಳು-ಕಡಿ; ಕೂಲಿ-ಕಂಬಳಿ; ಕೆಲಸ-ಬೊಗಸೆ; ಕೆರೆ-ಬಾವಿ; ಕೈ-ಕಾಲು; ಕೈ-ಬಾಯಿ; ಕೊಂಬು-ಕೊಳಲು; ಕೋಟೆ-ಕೊತ್ತಳ; ಕೋಪಾಟೋಪ; ಗಂಟು-ಗದಡಿ; ಗಡಿಗೆ-ಮಡಿಕೆ; ಗದ್ದೆ-ಬಿದ್ದಲು; ಗಂಧ-ಅಕ್ಷತೆ; ಗಾಳಿ-ಮಳೆ; ಗಿಡ-ಗಂಟೆ; ಗುಡಿ-ಗುಂಡಾರ; ಗಡ್ಡೆ-ಗೆಣಸು; ಗೊತ್ತು-ಗುರು; ಚಳಿ-ಮಳೆ; ಚಟ್ನಿ-ಬಕ್ಕರಿ; ಚಾಕು-ಚೂರಿ; ಚಿಕ್ಕ-ಪುಟ್ಟ; ಚೂರು-ಚಾರು; ಛತ್ರ-ಚಾಮರ; ಜಗಳ-ತೋಟೆ; ಜಪ-ತಪ; ಜಳ್ಳು (ಜೊಳ್ಳು)-ಕಾಳು; ಟೊಳ್ಳು-ಗಟ್ಟಿ; ಠಕ್ಕು-ಠೌಳಿ; ಡೊಂಕು-ಡುಸುಕು; ತಂದೆ-ತಾಯಿ; (ತಾಯ್ತಂದೆ); ತಾರಿ-ತಟ್ಟು; ತಾರು ಮಾರು; ತಾಳ-ಮೇಳ; ತಿಂಡಿ-ತೀರ್ಥ; ತಿರುಗಿ-ಮುರುಗಿ; ತೀರ್ಥ-ಯಾತ್ರೆ; ತೊಂಡು-ತೊಳಸು; ತೋಟ-ಪಟ್ಟಿ; ದನ-ಕರ; ದುಡ್ಡು-ದುಗ್ಗಾಣಿ; ದವೇರು-ದಿಂಡರು; ನಗಾರಿ-ನೌಬತ್ತು; ನಡೆ-ನುಡಿ; ನಯ-ಭಯ; ನಯ-ವಿನಯ; ನಾಯಿ-ನರಿ; ನಿಧಿ-ನಿಕ್ಷೇಪ; ನೀರು-ನಿಡಿ; ನುಚ್ಚು-ಅಂಬಲಿ; ನಚ್ಚು-ನುರಿ; ನುಚ್ಚು-ರೊಟ್ಟಿ; ನೆರೆ-ಹೊರೆ; ಪದವಿ-ಪಟ್ಟ; ಪಶು-ಪಕ್ಷಿ; ಪಾರೆಣೆ-ಪರ್ವ; ಪಾಲು-ಪಸುಗೆ; ಪ್ರೀತಿ-ವಿಶ್ವಾಸ; ಪುರಾಣ-ಪುಣ್ಯಕಥೆ, ಪೂಜೆ-ಪುನಸ್ಕಾರ; ಬಂಧು-ಬಳಗ; ಬಡವರು-ಬಗ್ಗರು; ಬಣ್ಣ-ವಣ್ಣ; ಬಳ್ಳಿ-ವಳ್ಳಿ; ಬಾಗು-ವೀಗು; ಬಿರುದು-ಬಾವುಲಿ; ಬೆರಗು-ಬಿನ್ನಾಣ; ಬೆಳ್ಳಿ-ಬಂಗಾರ; ಭಕ್ತಿ-ವಿಶ್ವಾಸ; ಮಂದಿ-ಮಕ್ಕಳು; ಮಕ್ಕಳು-ಮರಿ; ಮನೆ-ಮಾರು; ಮಣ್ಣು-ಮಸಂಟಿ; ಮಳೆ-ಬೆಳೆ; ಮುಚ್ಚು-ಮರೆ; ಯಂತ್ರ-ತಂತ್ರ; ಯಂತ್ರ-ಮಂತ್ರ; ಯಜ್ಞ-ಯಾಗ; ಯುಗ-ಜುಗ; ವೇದ-ಶಾಸ್ತ್ರ; ಶಾಸ್ತ್ರ-ಪುರಾಣ; ಶ್ರಾದ್ಧ-ಪಕ್ಷ; ಸಂತೆ-ಪೇಟೆ; ಸಂದಿ-ಗೊಂದಿ; ಸ್ನಾನ-ಸಂಧ್ಯಾನ; ಸ್ನಾನ-ಪಾನ; ಸೀರೆ-ಕುಪ್ಪಸ; ಸೆಲ್ಲೆಯ-ಮುಂಡಾಸ; ಸೊಟ್ಟ-ಡೊಂಕ; ಹಕ್ಕಿ-ಪಕ್ಕಿ; ಹಣ್ಣ-ಹಂಪಲ; ಹಣ್ಣು-ಹಾಲು; (ಹಾಲು-ಹಣ್ಣು ಹತ್ತು-ಹೊಂದು; ಹಬ್ಬ-ಹುಣ್ಣಿಮೆ; ಹಳ್ಳ-ಕೊಳ್ಳ; ಹಳ್ಳಿ-ಪಳ್ಳಿ; ಹಾಲು-ಮೊಸರು; ಹಾವು-ಚೇಳು; ಹಾಸು-ಹೊಕ್ಕು; ಹಾಸು-ಹೊಚ್ಚು; ಹುಸಿ-ಮುಸಕ; ಹುಳ-ಹುಪ್ಪಡಿ; ಹೆದರಿಕೆ-ಬೆದರಿಕೆ; ಹೊತ್ತು-ವೇಳೆ; ಹೋಳೆ-ಹಳ್ಳನ ಹೋಳಿಗೆ-ತುಪ್ಪ; ಗಂಟು-ಮೂಟೆ; ನೀರು-ನೆಳಲು; ಗನ್ನ-ಗತಕ; ತೊಂಡು-ತೊಳಸು; ಬಿಟ್ಟ-ಬೇಗಾರಿ; ಕ್ರಿಮಿ-ಕೀಟಕ; ಭೂಮಿ-ಸೀಮೆ

(ii) ಮಾರುನುಡಿ

೫೭. ಇವುಗಳಲ್ಲಿ ಕೆಲವನ್ನು ಜೋಡುನುಡಿಗಳಲ್ಲಿ ಸೇರಿಸಬಹುದಾದರೂ ಇನ್ನು ಹಲವಕ್ಕೆ ಒಂದು ಸ್ವತಂತ್ರವಾದ ಸ್ಥಾನವನ್ನು ಕಲ್ಪಿಸಿಕೊಡುವುದು ಯೋಗ್ಯವಾಗಿದೆ. ಮಾತಿನಲ್ಲಿ ಕೇವಲ ಜೋರಿನ (Emphasis) ಸಲುವಾಗಿ ಮಾತ್ರ ಇವನ್ನು ಉಪಯೋಗಿಸುವುದಿಲ್ಲ. ವಿರುದ್ಧಾರ್ಥಕ ಶಬ್ದಗಳ ಸಹಾಯದಿಂದ ಹೇಳಬೇಕಾದ ಅರ್ಥವನ್ನು ಇನ್ನಿಷ್ಟು ಹೆಚ್ಚು ಸ್ಪಷ್ಟಪಡಿಸುವುದಕ್ಕಾಗಿ ಅಡಿಗಡಿಗೆ ಇವು ಬೇಕಾಗುತ್ತವೆ. ಸಂಸ್ಕೃತ, ಇಂಗ್ಲೀಷು ಭಾಷೆಗಳಲ್ಲಿರುವಂತೆ (ಅ, ಅನ್, ನಿರ್, ನಿಸ್, ಮೊದಲಾದುವುಗಳ ನೆರವಿನಿಂದ) ಮಾರುನುಡಿಗಳನ್ನು ಮಾಡಿಕೊಳ್ಳುವ ಸೌಕರ್ಯಗಳು ಕನ್ನಡದಲ್ಲಿಲ್ಲ. ಆದರು, ಸ್ವಯಂಸಿದ್ಧವಿರುವ ಹಲವು ಮಾರುನುಡಿಗಳುಂಟು. ಅಂತಹ ಕೆಲವನ್ನು ಇಲ್ಲಿ ಸಂಗ್ರಹಿಸಲಾಗಿದೆ.

ಅಂಗಲ-ದಟ್ಟ; ಅಗಲ-ಉದ್ದ; ಅಗ್ಗ-ತುಟ್ಟಿ; ಅಡಿ-ಮುಡಿ; ಅತ್ತೆ-ಸೊಸೆ; ಬಡವ-ಬಗ್ಗ; ಅಳ್ಳ-ಅದಟ; ಅಳಿ-ಉಳಿ; ಅಳಿ-ಬೆಳೆ; ಅಳು-ನಗು; ಆಗು-ಹೋಗು; ಆಚೆ-ಈಚೆ; ಆನೆ-ಆಡು; ಆಳು-ಅರಸು; ಇಲಿ-ಬೆಕ್ಕು; ಇಲಿ-ಹುಲಿ; ಉಗಾದಿ-ಹೋಳೀಹುಣ್ಣಿಮೆ; ಉದ್ದ-ಗಿಡ್ಡ; ಉದ್ದರಿ-ರೋಖು; ಎಗ್ಗ-ಅರಿಗ; ಎಣ್ಣೆ-ಸೀಗೆ; ಏರು-ಇಳಿ;

ಏಳು-ಬೀಳು; ಒಗ್ಗು-ಮುಗ್ಗು; ಒಗೆತನ-ಹಗೆತನ; ಒಳ-ಹೊರ; ಕಡೆ-ಮೊದಲು; ಕನಸು-ನನಸು; ಕರಿ (ದು)-ಬಿಳಿ(ದು); ಕಸ-ಹಸ(ನ); ಕಾಗೆ-ಕೋಗಿಲ; ಕಾಯಿ-ಕೊಲ್ಲು; ಕುಣಿ-ಕುಂಟು; ಕೆಂಪು-ಕರಿ; ಕೆಲವು-ಹಲವು; ಕೆಲ-ಬಲ; ಕೆಳೆಯ-ಕೇಡಿಗ; ಕೊಡು-ಕೊಸೆ; ಕೊಡು-ಕೊಳ್ಳು; ಕೊನರು-ಕಮರು; ಕೊಬ್ಬು-ಕೊರಗು; ಗಳಿಸು-ಬ್ಬಳಿಸು; ಚಾರು-ಚೂರು; ಚಿಗಿ-ಮುಗಿ; ಜಡ-ಹಗುರು; ಜಾಣ-ಕೋಣ; ಠೋಕು ಚಿಲ್ಲರೆ; ತಂಪು-ಕಾವು; ತಗ್ಗು-ದಿನ್ನೆ; ತಗ್ಗು-ಮಿಟ್ಟೆ; ತಟ್ಟು-ಕಟ್ಟು; ತಣಿದಣಿ; ತಪ್ಪು-ಒಪ್ಪು; ತಲೆ-ಬಾಲ; ತಳ-ಬುಡ; ತಿಪ್ಪೆ-ಉಪ್ಪರಿಗೆ-ತಿರುಳು- ತೊಗಟೆ; ತೆರವು-ತುಂಬು; ತೆರೆ-ಮುಚ್ಚು; ತೇಲು-ಮುಳುಗು; ತೊಳೆ-ತೊಡೆ; ದಕ್ಕು-ಕಕ್ಕು; ದಪ್ಪ-ತಿಳುವು; ದೊರೆ-ದರಿದ್ರ; ನಗೆ-ಹೊಗೆ; ನುಚ್ಚು-ಮೆಚ್ಚು; ನಡುಪು-ನೂಕು; ನಾಡು-ಕಾಡು; ಪೆದ್ದ-ಪಂಡಿತ; ಪೊರೆ-ಪೊಯ್; ಬಡವ ಭಾಗ್ಯವಂತ; ಬಿತ್ತು-ಕಿತ್ತು; ಬೆಂಡ-ಭಾರ; ಬೆಳಕು-ಕತ್ತಲೆ; ಬೆಳಗು-ಬೈಗು; ಬೆಳೆ-ಬಾಡು; ಬೇಕು-ಬೇಡ; ಬೇವು-ಬೆಲ್ಲ; ಮಗು-ಮುದು; ಮಡಿ-ಮೈಲಿಗೆ; ಮನೆ-ಮಠ; ಮಾತುಗ-ಮೂಕ; ಮಾಡು-ಬೀಡು; ಮೂಕ-ಮಾತುಗ; ಮೂಡು-ಮುಳುಗು; ಮೆಚ್ಚು-ಕಚ್ಚು; ಮೇಲು-ಕೀಳು; ಮೇಲೆ-ಕೆಳಗೆ; ಮೊನೆ-ಮಂಡ; ರಾಡಿ-ತಿಳಿ; ಶಾಲು-ಶಾಟಿ; ಸಡಿಲು-ಬಿಗಿ; ಸಣ್ಣ-ದೊಡ್ಡ; ಸವಿ-ಸಪ್ಪಗೆ; ಸಾವು-ಉಳಿವು; ಸಿಪ್ಪೆ-ಸಾರ; ಸಿಹಿ-ಕಹಿ; ಸೊಕ್ಕು-ಸೊರಗು; ಸೋಲು-ಗೆಲವು; ಗೆಲ್ಲು; ಹಗಲು-ಇರುಳು; ಹಗೆತನ-ಒಗೆತನ; ಹಣ್ಣು-ಹೀಚು; ಹಸಿ-ಒಣ; ಹಸಿ-ಬಿಸಿ; ಹಳ್ಳ-ತಿಟ್ಟ; ಹಾವು-ಮುಂಗಲಿ; ಹಿಂದೆ-ಮುಂದೆ; ಹಿಗ್ಗು-ಕುಗ್ಗು; ಹಿಗ್ಗು-ತಗ್ಗು; ಹಿರಿ-ಕಿರಿ; ಹುಣ್ಣಿವೆ-ಅಮಾಸಿ; ಹುಲಿ-ಹಂದಿ; ಹೆಚ್ಚು-ಕಡಿಮೆ; ಹೆಣ್ಣು-ಗಂಡು; ಹೊಗಳು-ತೆಗಳು; ಹೊಗಳು-ಬೊಗಳು; ಹೊಟ್ಟು-ಹುರುಳು; ಹೊನ್ನು-ಮಣ್ಣು

(iii) ಕಿರುನುಡಿ

೫೮. ಇವುಗಳ ಅಂದವೇ ಬೇರೆ, ಇವು ಕಂನುಡಿಯ ಚೆಲುವಿಕೆಯನ್ನು ಹೆಚ್ಚಿಸಿವೆ. ತಿರುಳ್ಗನ್ನಡದಲ್ಲಿ ಬರೆಯಬೇಕೆಂಬ ಹಂಬಲವಿದವರು ಇವನ್ನು ಲೆಕ್ಕಿಸದೆ ನಡೆಯದು. ಇದರೊಳಗಿನ ಕೆಲವು ಪ್ರಕಾರಗಳನ್ನು ಇಲ್ಲಿ ಕೊಟ್ಟಿದೆ.

(ಅ) ಕ್ರಿಯಾವಿಶೇಷಣಾದಿ ಅವ್ಯಯಗಳಿಂದಾದುವು

ತಳತಳನೆ ತೊಳಗು	ಮಮ್ಮಲನೆ ಮರುಗು
ತಳತಳ ಹೊಳೆ	ಮಿಟ್ಟೆಂದು ಮಿಡುಕು
ಲಕಲಕ ಹೊಳೆ	ಮರಮರನೆ ಮರುಗು
ಮಿರಿಮಿರಿ ಮಿಂಚು	ಹಿರಿಹಿರಿ ಹಿಗ್ಗು
ಮಿಮ್ಮನೆ ಬಿಗಿ	ಬೆದೆ ಬೆದೆ ಬೆಯ್
ಬೆಮ್ಮನೆ ಬೆರೆ	ಬೆಂದು ಬೆಂಡಾಗು
ಬಿಬ್ಬನೆ ಬಿರಿ	ಸುಟ್ಟು ಕರಿಕು ಆಗು
ಜಜ್ಜನೆ } ಜರಿ	ಕಮರಿ ಸೀಕರಿವೋಗು
ಜರ್‍ರನೆ } ಜರಿ	ಸುಟ್ಟು ಬೂದಿಯಾಗು
ಕರ್‍ರನೆ ಕಂದು	ಹೇಳ ಹೆಸರಿಲ್ಲದಂತಾಗು
ಕಂಗನೆ ಕನಲು	ಕಿಡಿಕಿಡಿಗುಟ್ಟು
ಕರಕರನೆ ತಿನ್ನು (ಸಿಟ್ಟಿನಿಂದ ಹಲ್ಲು)	ಕಿಡಿಕಿಡಿ ಆಗು

ಕೆಂಪಗೆ ಕೆಂಡವಾಗು
ದುರ ದುರನೆ ಉರಿ
ಸಳಮಳನೆ ತುದಿ
ಕತಕತ ಕುದಿ
ತುಂಬಿ ಸೂಸು
ಸೂಸಿ ಹರಿ
ಸೂಸಿ ಹೊರಚೆಲ್ಲು
ಚಕ್ಕನೆ ಮಿಂಚು
ಮಿರ್ರನೆ ಮಿಂಚು
ಧಗಧಗನೆ ಉರಿ
ರಣರಣ ಬಿಸಿಲು
ತೆಕ್ಕನೆ ತೀವು
ತಿಂತಿಣಿಯಾಗಿ ತುಂಬು
ಕಿಕ್ಕಿರಿದು ತುಂಬು
ಬಳ್ವಳನೆ ಬೆಳೆ
ಬಚ್ಚ ಬರಿ
ಬಕ್ಕಂ ಬಯಲು
ಬಟ್ಟ ಬಯಲು
ಹೊಚ್ಚ ಹೊಸ
ತುತ್ತ ತುದಿ
ಮೊತ್ತ ಮೊದಲು
ಕಟ್ಟ ಕಡೆ
ನಟ್ಟ ನಡುವೆ
ಗಪಗಪ ತಿನ್ನು
ಗಟಗಟ ಕುಡಿ
ಲೊಚಲೊಚ ನೆಕ್ಕು
ಕರಕರ ಕಡಿ
ಚರಚರ
ಚರಪರ } ಹರಿ
ಪಳಪಳ
ಬುಳುಬುಳು } ಉದಿರು, ಬೀಳು
ಧರಪರ ಕಿತ್ತು
ಧಪಧಪ
ರಪರಪ
ಫಡಫಡಾ
ಸಟ್‌ಸಟ್ } ಹೊಡೆ

ತಪತಪ ತೊಯ್ಯು
ಗಸಗಸನೆ ಮಾಡು
ಝುಪಝುಪ ನಡೆ
ಸರಸರ ಏರು, ಹತ್ತು
ಬಿಲ್ಲು ಬೆರಗಾಗು (ಪಂಪ)
ಡಿಮಿಡಿಮಿ ಕುಣಿ
ಸರ್ರನೆ ಏರು, ಇಳಿ
ಜರ್ರನೆ ಇಳಿ
ದಡದಡ
ಸಳಸಳ
ಜುಳುಜುಳು
ಗುಳುಗುಳನೆ } ಹರಿ
ಟುಣ್‌ಪುಣ್ ಹಾರು
ಲುಟುಲುಟು
ತುರುತುರು
ಭರಭರ } ನಡೆ
ಸರಸರ
ಪಿರಿಪಿರಿ
ವಣವಣ
ಗಿಮಿಗಮಿ } ತಿರುಗು
ತಿರ್ರನೆ
ಗಡಗಡನೆ
ಗದಗದ
ನಡನ
ಥರಥರ } ನಡುಗು
ಬಂಬಲ ಮಾಡು
ಭಗಭಗ ಉರಿ(ಮೈ, ಕೈ)
ಚರಚರ ಹೆಚ್ಚು
ಚರಚರ ನಾದು (ಹಿಟ್ಟು)
ಥಕಥಕ ಕುಣಿ
ಥಕ್ಕತ್ತೈ ಆಡಿಸು
ಪೌವ್ವನೆ ಪಾರು (ಹೌವ್ವನೆ ಹಾರು)
ಢಣಢಣ
ಢಂಢಂ
ಗಣಗಣ } ಬಾರಿಸು (ನಗಾರೆ ಗಂಟೆ)

ಜಣಜಣ
ಛಣ್‌ಛಣ್ — ಬಾರಿಸು (ರೂಪಾಯಿ)
ಛಳಿಚಟಲ್ಲೆಂದು ಸಿಡಿ
ತೊತ್ತಳ ತುಳಿ
ಮಿಕಿಮಿಕಿ ನೋಡು (ಹುಚ್ಚನಂತೆ ಆಸೆಬುರುಕನಂತೆ)
ಪಿಳಿಪಿಳಿ ನೋಡು
ಪೆಳ್ಪಳಿಸಿ (ಸಿಟ್ಟು, ಕಿಚ್ಚುಗಳಿಂದ)
ಮಿಳಿಮಿಳಿ ನೋಡು (ಪೂರಾ ಕಣ್ಣು ತೆರೆಯಲು ಹೆದರಿ ಹೆದರಿ ಹೇಡಿಯಂತೆ)

ನಿನ್ನಯ ತಮ್ಮನ ನೆತ್ತರಂ ತವೆ ಪೀರ್ದ ಎಡೆಯೊಳ್ ಕಲಿಕರ್ಣನೇಕೆ ಪೇಳ್‌ಮಿಳಮಿಳನೆ ನೋಡುತ್ತಿರ್ದಂ?

-ಪಂಪ

ಗಜರಿ ಗರ್ಜಿಸು
ಪಿಸಿಪಿಸಿ ನಗು
ಬಿದ್ದು ಬಿದ್ದು ನಗು
ಹೊಟ್ಟೆ ಹುಣ್ಣಾಗುವಂತೆ ನಗು
ಹೊಟ್ಟೆ ಹಿಡಿಹಿಡಿದು ನಗು
ಕಳಕಳಿಸಿ ನಗು
ವಟವಟ ಹಚ್ಚು
ಗುಣುಗುಣು ಮಾತಾಡು
ಥಡಥಡ ಎನ್ನು (ಅನ್ನು)
ಕಿಟಕಿಟಿ
ಕಟಕಡ — ಮಾಡು
ಗಳಗಳನೆ ಗಳುಪು
ಮಿಕಿಮಿಕಿ
ಹುಳುಹುಳು
ಮಿಳ್‌ಪಿಳ್‌ನೆ (ಪಂಪ)
ಟಕಮಕ
ಕೆಕ್ಕರಿಸಿ
ದುರದುರನೆ
ಬಿರಬಿರನೆ — ನೋಡು

ಕಿಲಿಕಿಲಿ
ಕುಲುಕುಲು
ಕಿಸಿಕಿಸಿ
ಪಿಸಿಪಿಸಿ
ಖೊಳ್ಳನೆ
ಖೊಕ್‌ಖೊಕ್ — ನಗು
ಕುಸುಕುಸು
ಗಳಗಳನೆ
ಗುಸುಗುಸು — ಅಳು
ಪಟಪಟನೆ ಸಾಯು
ಚಟಪಟ ಒದ್ದಾಡು
ಚುಮುಚುಮು ನಸುಕು
ಜುಮುಜುಮು ನಸುಕು
ಜುಮುಜುಮು ಬೆಳಗು
ಬೆಳ್ಳಗೆ ಬೆಳಗಾಗು
ಮಟಮಟ ಮಧ್ಯಾಹ್ನ
ಕಕ್ಕರ ಸಂಜೆ
ಮಸಮಸಕು ಕತ್ತಲು, ಮಕ್ಕತ್ತಲು
ತನಿಗಂಪು, ತನಿವಣ್ಣು
ಬರಸಿಡಿಲು, ಬರಸೆಳೆ
ಭೋರ್ಗರೆಂದು
ಗುಡುಗುಡಿಸಿ
ಗಜರಿಗರ್ಜಿಸಿ
ಪಾರ್ದಾರ್ದು (ಹಾರಿಚೀರಿ)
ಪರ್ವಿಕೊರ್ವಿ(ಹಬ್ಬಿಕೊಬ್ಬಿ)
ಕೊನೆದು ಕೊಬ್ಬಿ
ಕೊಂಡು ಕೊನೆದು
ಬಳ್ವಳನೆ ಬೆಳೆ
ಬಳ್ಳಿವಳ್ಳಿಯಾಗಿ ಬೆಳೆದು
ಕಿಸುರುಂ ಕಲಹ
ಉಕ್ಕು ಉಕ್ಕು
ತೊಳಲು ಬಳಲು
ಜಡಿದು ಝುಂಕಿಸು

ಮಾಡಿ ನೋಡು, ನೋಡಿಮಾಡು	ಬದುಕಿ ಸಾಯು, ಸತ್ತು ಬದುಕು
ಮಾಡಿ ಆಡು, ಆಡಿ ಮಾಡು	ಕೂಡಿ ನೋಡು, ನೋಡಿ ಕೂಡು
ಬಯ್ದು ಹೇಳು, ಹೇಳಿ ಬಯ್ಯು	ಓಡಿ ಹೋಗು, ಹೋಗಿ ಓಡು

(ಆ) ಕೆಲವು ಕೂಗುಗಳು

ನಾಯಿ	-	ಬೊಗಳುವುದು.	ಬೊಗಳಿಕೆ;
ನರಿ	-	ಒರಲುವುದು, ಊಳುವುದು	ಕಲಕಲ;
ನವಿಲು	-	ಕೇಗುವುದು	ಕೇಕೆ;
ಗೂಳಿ	-	ಗುಟುರುವುದು	ಗುಟುರು, ಡರಕೆ;
ದನ	-	ಅಂಬೆ ಎನ್ನುವುದು.	ಒದರಿಕೆ;
ಗಿಳಿ	-	ಗಳಪುವುದು	ಮಾತು, ಚಪ್ಪರಣೆ;
ಕೋಗಿಲೆ	-	ಹಾಡುವುದು, ಬಗ್ಗಿಸುವುದು, ಕುಕಿಲುವುದು, ಬಗ್ಗಣೆ; ಕೂಗು, ಕುಕಿಲು	
ಕುದುರೆ ಖೇಕರಿಸುವುದ }	-	ಹೇಕರಿಸುವುದು, ಕೆನೆಯುತ್ತದೆ. ಹೇಕರಿಕೆ;	
ಕತ್ತೆ	-	ಕಿರಿಚುವುದು ಖೇಕರಿಸುತ್ತದೆ	(ಖೇಚರ);
ಹಲ್ಲಿ	-	ಲೊಟಲೊಟ-ಲೊಚಲೊಚಗುಟ್ಟು ನುಡಿ;	
	-	ಕಿಲಿಬಿಲಿ, ಚಿಲಿಪಿಲಿ, ಕೂಗುವುದು, ಉಲಿಯುವುದು;	
ಜೇನು, ತುಂಬಿ	-	ಝೇಂಕರಿಸುವುದು; ಮೊರೆಯುವುದು.	ಇಂಚರ;
ಆನೆ	-	ಘೀಳಿಡುವುದು	ಬೃಂಹಿತ;
ಹುಲಿ, ಸಿಂಹ	-	ಗುಡುಗುವುವು, ಆರ್ಭಟಿಸುವುವು	ಗುಡುಗು;

(ಇ) ಉಪಮಾನ ರೂಪಕಾದಿಗಳಿಂದ ಆದುವು

ಸಿಹಿ ಸಕ್ಕರೆ	ಕರ್ರಗೆ ಕಾಗೆ
ಹುಳಿ ಜೊಟ್ಟ: ಚೊಟಚೊಟ ಹುಳಿ	ಬೆಳ್ಳಗೆ ಬೆಳ್ಳಕ್ಕಿ
ಕಾರ ಬೆಂಕಿ	ಗಿಳಿ ಹಸುರು
ಉಪ್ಪಿನ ಕಟಿ	ಹಚ್ಚಗೆ ಹಸುರು
ಕಹಿವಿಷ	ನುಣ್ಣಗೆ ಬೆಣ್ಣೆ
ನೀಕು ನಿಕ್ಕಡಿ	ಎಳೆ - ಕರು, ಮದರಂಗಿ
ಕೆಂಪಗೆ ಕೆಂಜಗ	ಹರೆಯ - ಹೋರಿ

ಬಲಿತ	- ಬದನೆಕಾಯಿ	ಹಿಟ್ಟು ಚೆಲ್ಲಿದಂತೆ ಬೆಳದಿಂಗಳು
ಮುದಿ	- ಹದ್ದು, ಎತ್ತು, ಕೋಣ ಹಾಗಲಹಣ್ಣು	ಅರಳು ಹುರಿದಂತೆ ಮಾತು ಮುತ್ತು ಹವಳ ಉದುರಿಬಿದ್ದಂತೆ ಮಾತು
ಹಸಿ	- ಮುದ್ದೆ	ಬಂಗಾರದಂತಹ ಮಾತು
ಜಡ	- ಹೆಂಟೆ, ಕಲ್ಲು, ಸೀಸ	ಮುತ್ತಿನಂತಹ ಮಾತು
ಹಗುರು	- ಹುಲ್ಲು, ಅರಳೆಬೆಂಡು	ಮಾಣಿಕದಂತಹ ಮಾತು
ಬಿರುಸು	- ಕಲ್ಲು, ವಜ್ರ, ಕಬ್ಬಿಣ	ಮಾತಿನ ಬೆಲೆ
ಕೋಮಲ	- ಹೂ, ಬಾಳೆ, ಸುಳಿ	

ಸ್ತ್ರೀ ವರ್ಣನೆಯಲ್ಲಿ

ಕುರುಳು	- ಸುಳಿಗುರುಳು; ತುಂಬಿಯಂತೆ (ಭ್ರಮರ)
ಹೆಳಲು, ಮುಡಿ	- ನಾಗವೇಣಿ: ಕಾಳೋರಗ; ಬಿಡುಮುಡಿ; ಬಳಲ್ಮುಡಿ; ಜೋಲ್ಮುಡಿ; ಸೋರ್ಮುಡಿ
ನೊಸಲು, ಹಣೆ	- ಪೆರೆನೊಸಲು
ಹುಬ್ಬು	- ಕುಡಿಹುಬ್ಬು; (ಕಾಮನ) ಬಿಲ್ಲು
ಕಣ್ಣು	- ಎರಳೆಗಣ್ಣು; ನಗೆಗಣ್ಣು; ತಾವರೆಗಣ್ಣು; ಚಲ್ಲೆಗಂಗಳು; ಬೊಗಸೆಗಣ್ಣು; ಒಚ್ಚೇರೆಗಣ್ಣು; ಅರಳುಗಣ್ಣು; ಮೀಂಗಣ್ಣು (ಮೀನಾಕ್ಷ); ಸೋಗೆಗಣ್ಣು
ನೋಟ	- ಸೆಳೆನೋಟ; ಕಡೆಗಣ್ಣ ನೋಟ; ಓರೆನೋಟ; ನಲ್ನೋಟ; ಬೆದರು ನೋಟ; ನಿಡುನೋಡ
ಮೂಗು	- ಸಂಪಗೆ ಎಸಳು; ನಿಡುಮೂಗು
ಕದಪು	- ಕನ್ನಡಿಕದಪು; ನುಣ್ಗದಪು; ಮೆಲ್ಗದಪು, ತೆಳ್ಗದಪು
ಕೆನ್ನೆ	- ಹೊಳೆವ ಕೆನ್ನೆ; ಕೆನೆಯಂತಹ ಕೆನ್ನೆ
ಗಲ್ಲ	- ತುಂಬುಗಲ್ಲ; ಗುಲಾಬಿ ಗಲ್ಲ
ಬಾಯಿ	- ಬಂದುಗೆಯ ಹೂವಿನಂತಹ ಬಾಯಿ
ತುಟಿ	- ತೊಂಡೆಹಣ್ಣು; ತಳಿರು-; ಹವಳ-; ಚೆಂ-; ಚಿಗುರು-; ತಂಬುಲ-;
ಹಲ್ಲು	- ದಾಳಿಂಬಿ ಬೀಜ; ಕೋದಮುತ್ತು; ಸಾಲಿಟ್ಟ ಸಣ್ಣಕ್ಕಿ; ಹೊಳೆವ ಹಲ್ಲು (ಸುಲಿಪಲ್ಲು)
ಮೋರೆ	- ಚೆಂದಿರ; ತಾವರೆ
ಧ್ವನಿ	- ಕೋಗಿಲೆಯಂತಹುದು
ಮಾತು	- ಗಿಳಿಯಂತೆ ಮಾತು
ಕೈ	- ಕಮಲ, ತಾವರೆ
ತೋಳು	- ನಳಿದೋಳು, ಕಮಲದ ದೇಂಟು, ದುಂಡು ತೋಳು
ಕೊರಲು	- ನುಣ್ಗೊರಲು, ನಿಡುಗೊರಲು, ಸಂಕುಕೊರಲು
ನಡು	- ಅಸಿನಡು, ಬಡನಡು, ಬಳಕುವ ನಡು
ಉಡಿ	- ಅಸಿಯುಡಿ, ತೆಳ್ಪಸಿರು

ತೊಡೆ	-	ಬಾಳೆಯ ದಿಂಡು, ನುಣ್ದೊಡೆ
ಅಡಿ	-	ತಳಿರಡಿ, ಅಡಿದಾವರೆ, ಮೆಲ್ಲಡಿ
ಉಗುರು	-	ಸೆಳ್ಳುಗುರು, ಕನ್ನಡಿಯಂತಹ ಉಗುರು
ಮೈ	-	ಮಿದುವಾದ ಮೈ, ನುಣ್ಣನೆಯ ಮೈ, ಮುಟ್ಟಿದರೆ-ಮಾಸುವ ಮೈ
ಮೈಬಣ್ಣ	-	ಲಿಂಬಿಯ ಹಣ್ಣಿನ ಬಣ್ಣ, ಕೇದಗೆಯ ಬಣ್ಣ, ಬಂಗಾರದ ಬಣ್ಣ, ಹಾಲಕೆನೆಯಂಥ ಬಣ್ಣ, ಬಾಳೆಯ ಸುಳಿಯಂತಹ ಮೈ
ನಡಿಗೆ	-	ಮದ್ದಾನೆಯಂತಹುದು, ಹಂಸದಂತಹುದು, ನವಿಲಿನಂತಹ, ಕುಣಿತದ-
ಕೋಮಲತೆ	-	ಸಿರಿಸಲ ಹೂವು, ಪಾರಿಜಾತ
ಸೆಳೆವ ಚೆಲ್ವು	-	ರತಿ
ಶಾಂತ ಸೌಂದರ್ಯ	-	ಗೌರಿ
ಪ್ರತಿವ್ರತೆ	-	ಸೀತೆ, ಅರುಂಧತಿ
ಜಾಣೆ	-	ಸರಸ್ವತಿ
ಒಟ್ಟಿನಲ್ಲಿ	-	ಹುಲ್ಲೆಯಂತಹ ಹೆಣ್ಣು, ನಕ್ಷತ್ರದಂತಹ ಹುಡುಗೆ, ಕಡೆದ ಪುತ್ಥಳಿ, ಬರೆದ ಬೊಂಬೆ

ಗಂಡುಸಿನ ವರ್ಣನೆಯಲ್ಲಿ

ಮೀಸೆ	-	ಕುಡಿಮೀಸೆ, ಗಲ್ಲಮೀಸೆ, ಕೋರೆಮೀಸೆ, ಕೊರೆಮಿಸೆ,. ಮಿರಿಮೀಸೆ, ಹುರಿಮೀಸೆ
ಕೊರಲು	-	ಕೊಬ್ಬಿದ ಕೊರಳು
ತೋಳು	-	ನಿಡುದೋಳು
ಹೆಗಲು	-	ಅಗಲವಾದ ಹೆಗಲು
ಎದೆ	-	ಅದರಿದ ಎದೆ, ಹರವಾದ ಎದೆ
ಮೈ	-	ಕಬ್ಬಿಣ, ಉಕ್ಕು, ಕಲ್ಲುಗಳಂತೆ ಗಟ್ಟಿ
ಚೆಲುವಿಕೆಯಲ್ಲಿ	-	ಕಾಮ, ಚೆಂದಪ್ಪ
ಎತ್ತರ	-	ತಾಳೆಮರ
ಹುರುಪು ಚಪಲತನ	-	ಕುದುರೆ
ನಂಬುಗೆ	-	ನಾಯಿ
ಠಕ್ಕು	-	ಬೆಕ್ಕು, ನರಿ
ಪುಕ್ಕ	-	ಚಿಗರೆ
ಹೇಡಿ	-	ಹಂದೆ
ಹೆಡ್ಡ	-	ಕತ್ತೆ, ಕುರಿ, ಕೋಣ
ಕೂಳಬಕ್ಕ	-	ತೋಳ

ಉಂಡಾಡಿ	- ಗೂಳಿ, ಕೋಣ	
ಸವಿಗಾರ	- ಗಿಳಿ	
ಸೊಗಸುಗಾರ ನಿಶ್ಚಿಂತ	- ಹಕ್ಕಿ, ಕರು, ಕೂಸು	
ಉದ್ಯೋಗಿ	- ತುಂಬಿ, ಇರುವೆ	
ಸಿಟ್ಟು	- ಜಮದಗ್ನಿ; ವಿಶ್ವಾಮಿತ್ರ	
ಐಶ್ವರ್ಯ	- ಇಂದ್ರ	
ತೇಜ	- ಸೂರ್ಯ	
ಕಾಂತಿ	- ಚಂದ್ರ	
ಕಲಿ(ವೀರ)	- ಅರ್ಜುನ	
ಬಲ್ಲಾಳು (ಬಲಿಷ್ಠ)	- ಭೀಮ	
ಶಾಂತ (ತಾಳ್ಮೆ)	- ಧರ್ಮ	
ಬುದ್ಧಿ	- ಬೃಹಸ್ಪತಿ (ಗುರು)	
ಚಾಗ (ತ್ಯಾಗ)	- ಕರ್ಣ, ಬಲಿ, ದಧೀಚಿ	
ಛಲ, ಹಟ	- ಕರ್ಣ, ದುರ್ಯೋಧನ	
ಪ್ರಯತ್ನ	- ಭಗೀರಥ	
ನನ್ನಿ (ಸತ್ಯ)	- ಧರ್ಮ, ಹರಿಶ್ಚಂದ್ರ, ರಾಮ	
ಭಕ್ತ	- ಹನುಮ, ಪ್ರಲ್ಹಾದ, ಶಿರಾಳಶೆಟ್ಟಿ, ಕಣ್ಣಪ್ಪಯ್ಯ	
ಪರೋಪಕಾರಿ	- ದಧೀಚಿ, ಜೀಮೂತವಾಹನ, ಶಿಬಿ	
ಸೈಪು (ಶಾಂತಿ)	- ಚೆಂದಿರ, ಧರ್ಮ	
ತಾಣ್ಮೆ (ಸಹನಶೀಲತೆ)	- ಭೂಮಿ	
ಗುಣ್ಪು (ಗಭೀರ)	- ಕಡಲು, ಸಾಗರ	
ಬಿಣ್ಪು ಸ್ಥೈರ್ಯ, ಭಾರ)	- ಪರ್ವತ; ಗಿರಿಯಂತೆ ಬಿಣ್ಣಿದಂ (ಪ್ರಯೋಗ)	-ಶ.ಮ.ದ
ಕಲಿತನ ಎದೆಗಾರಿಕೆ	- ಹುಲಿ, ಸಿಂಹ	
ಕಸುವು	- ಆನೆ, ಸುರಕರಿಯಂತೆ ಬಲಾಢ್ಯಂ (ಪ್ರಯೋಗ)	- ಶ. ಮ. ದ
ಕೀರ್ತಿ	- ಬೆಳುದಿಂಗಳು, ಸುಗಂಧ	
ಅಪಕೀರ್ತಿ	- ಕತ್ತಲೆ	

(ಈ) ಗಾದೆಗೆ ಸಮೀಪವಾಗಿರುವಂತಹವು

೫೮. ಇವು ಪ್ರತ್ಯಕ್ಷ ಗಾದೆಗಳಲ್ಲ; ಇವುಗಳಲ್ಲಿ ಹಲವು ಗಾದೆಯ ಮಾತುಗಳ ತುಂಡುಗಳುಂಟು. ಇನ್ನು ಕೆಲವು ಪ್ರತಿಭಾಶಾಲಿಗಳ ಬರೆವಣಿಗೆಯಲ್ಲಿ ಬಂದ ಅರ್ಥವತ್ತಾದ ಪರಿಣಾಮಕಾರಕ ವಾಕ್ಯಾಂಶಗಳುಂಟು. ಇವು 'ಕಿರಿದರೊಳು ಪಿರಿದರ್ಥ'ವನ್ನು ಸೂಚಿಸುವುದರಿಂದ, ಇವನ್ನು ಉಪಯೋಗಿಸಿದ ಮಾತಿಗೂ ಬರೆಹಕ್ಕೂ ಒಂದುಬಗೆಯ ಹೆಚ್ಚಿನ ಕಂಪು ಬರುವುದು.

ಹಾವಿಗೆ, ಹಾಲು, ಮೊಸಳೆಗೆ ಉಪಕಾರ, ಅಸುರನಿಗೆ ಅಮೃತ.
ಅಜಮುಖ ವ್ಯಾಘ್ರ, ಗೋಮುಖ ವ್ಯಾಘ್ರ, ಧ್ಯಾನಿಬಕ, ಬಕಧ್ಯಾನ.
ಕೊರಡು ಕೊನರು, ಒನಕೆ ಕೊನರು, ಅತ್ತಿಯ ಹೂವು, ಬರಡು ಹಯನಾಗು, ಬಂಜೆಯ ಬಸಿರು
ಕನಸು ನನಸಾಗು, ಕುರುಡಂ, ಕಣ್ಬೆತ್ತಂತೆ.
ಬೇರಿಂದ ಹಲಸುಕಾತಂತೆ.
ತೊರೆಗೆ ನೀರಡಕು, ತೊರೆಗೆ ನೀರೆರೆ, ಗುಡ್ಡಕ್ಕೆ ಕಲ್ಲುಹೊರು, ಸೂರ್ಯನಿಗೆ ಸೊಡರಿಡು, ಕೆರೆಯ ಮುಂದಣ ಅರವಟ್ಟಿಗೆ
ಕತ್ತೆ, ಕುದುರೆ, ಒಂದೆಣಿಸು, ಮುತ್ತೂಮೆಣಸೂ ಕೋದಂತೆ, ಭತ್ತ ಮೊಸರು, ನೆಲ್ಲುಂ ಮೊಸರುಂ ಕೂಡಿದಂತೆ
ಅಂದಣವನೇರಿದ ಸೊಣಗ, ಪಂಚರದೊಳಗಣ ಕಾಗೆ, ಶಿಖರದ ಮೇಲಣ ಕಾಗೆ
ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿ
ಉರಿಯ ನೆಳಲು, ಹಾವಿನ ಹೆಡೆಯ ನೆಳಲು, ಹುಲಿಯ ಒಲವು, ಮಿಂಚಿನ ಮಳೆ, ಬಿಸಿಲಕುದುರೆ
ಮಾತಿನ ಮಂಡಿಗೆ, ತಿರುಕನ ಕನಸು, ಮಾತಿನ ಮಾಲೆ, ಗಾಳಿಗೋಪುರ.
ಚಿನ್ನದ ಚೂರಿ, ಬಕಧ್ಯಾನ, ಕತ್ತಿಗೆ ಮೆತ್ತಿದ ಜೇನು, ನಂಜಿನ ಸವಿ
ಒಲಿದುದು ಓಸರಿಸದು, ನಂಬಿದುದು ಸಂದೇಹಿಸದು, ತುಂಬಿದುದು- ತುಳುಕದು, ನೆರೆಯರಿಯದುದು ಮರೆಯದು, ನಚ್ಚು ಬಿಚ್ಚದು.
ಹಾವಿನ ಹೆಡೆಯಿಂದ ಕೆನ್ನೆ ತುರಿಸು, ಸುಣ್ಣದ, ಕಲ್ಲು ಮಡಲಲ್ಲಿ ಕಟ್ಟು.
ಹಾಲು ನೋಡಿ ಹೊಡೆತವ ಮರೆತ ಬೆಕ್ಕು, ತುಪ್ಪದ ಸಿವಗೆ ಅಲಗವ ನೆಕ್ಕುವ ಸೊಣಗ.
ಉರಿಮುಟ್ಟಿದ ಅರಳೆ, ನೀರು ಮುಟ್ಟಿದ ಜೇನು, ನಾಯಿ ಮುಟ್ಟಿದ ನೈವೇದ್ಯ.
ಹುಲಿಯ ಮೀಸೆ ಹಿಡಿದು ಉಯ್ಯಾಲೆಯಾಡು
ಬಾಳೆಗೆ ಗೊನೆ, ಚೇಳಿನ ಬಸಿರು
ಶೂಲದ ಮೇಲಣ ಭೋಗ, ಹಾವಿನ ಹೆಡೆಯ ರತ್ನ
ಅಳಲಿ ಭಕ್ತಿ, ಅಳಿಲು ಸೇವೆ, ತುಳಸಿ ಪತ್ರ, ಹೂವಿನ ಎಸಳು ವರಷವು ವಾರವಾಗು... ಗಳಿಗೆ ಯುಗವಾಗು.
ಮೀನು ನೀರಡಿಸು, ಆಗಸ ನೀರಡಿಸಿ ಸತ್ತ, ಬಿಲ್ಲು ದಂಟಾಗು, ನಚ್ಚಿನ ಎಮ್ಮೆ.
ಮೂಕನಿಗೆ ರಾಗ, ಕುರುಡನಿಗೆ ಕನ್ನಡಿ, ಕತ್ತೆಗೆ ಹೂರಣ, ಕತ್ತೆಗೆ ಕತ್ತುರಿ, ಕತ್ತೆಗೆ ಕಾಲಕಡಗ
ಗಾಣದ ಎತ್ತಿಗೆ ಗೆಜ್ಜೆ, ಎತ್ತಿಗೆ ಎಳೆನೀರು.
ಹಂದಿಗೆ ಚಂದನ, ನಾಯಿಗೆ ಕಚ್ಚಾಯ, ಬೂದಿಯಲ್ಲಿ ಯಾಗ, ನೀರಲ್ಲಿ ಹೋಮ, ಮಳಲಲ್ಲಿ ಹಾಲು ಹೊಯ್ಯು, ಮಂಗನ ಕೈ ಮಾಣಿಕ, ಬೋರ್ಗಲ್ಲ ಮೇಲೆ ಮಳೆ, ಕೋಣನ ಮುಂದೆ (ಕಿನ್ನರಿ) ಕೊಳಲು,
ಗೋದಲೆಯ ನಾಯಿ, ಬಣವೆ ಮೇಲಣ ನಾಯಿ, ಕ್ಷೇತ್ರದ ಕ್ಷೌರಿಕ, ದೇವರ ಪೂಜಾರಿ, ಧರ್ಮಸಾಲೆ ನಾಯಿ,
ನಾಯಿ ಬಾಲ, ಗಾಳಿ ಮೊಟ್ಟೆ ಗಾಳಿಯ ಮೂಟೆ, ನೆಲ್ಲಿಯ ಮೂಟೆ, ನೀರ ಮೇಲಣ ಬರೆಹ
ನೀರ ಮೇಲಣ ಗುಳ್ಳೆ.
ಕಲ್ಲುಗುಗ್ಗರಿ ಮೆಲ್ಲು, ಬರಿಮಾತಿನಿಂದ ಬರೆಕಳೆ.
ಗುಡ್ಡಕ್ಕೆ ಬೆಂಕಿ, ಕುತ್ತಿಗೆಗೆ ಬರು, ನೂರು ವರುಷ ತುಂಬು.
ಗುಮ್ಮಿಗಟ್ಟಿ ಜಂಗಮರು, ಆಲಮಟ್ಟಿ ಜಂಗಮರು, ಗಣಪ್ಪನ ಮದುವೆ, ಕತ್ತೆಗೆ ಜ್ವರ ಬರುವ ಮಾತು
ನೀಲಿ ಕೆಟ್ಟಸುದ್ದಿ, ಸನ್ಯಾಸಿಯ ಮದುವೆ, ಮುಂಡೆ ಮದುವೆ, ಬೆಟ್ಟಬೇನೆ ತಿನ್ನು, ಬೇವು ಬೆಲ್ಲವಾಗು.
ಲಾಯದಲ್ಲಿ ಉಪ್ಪು, ವಿಧವೆಯ ಪ್ರಾಯ, ಕಾನನದ ಬೆಳುದಿಂಗಳು

ಹುಳವಿನೊಳಗಿನ ಹೂವು, ಕನ್ನಡಿಯೊಳಗಿನ ಗಂಟು, ಕನಸಿನಲ್ಲಿಯ ಹೊನ್ನು.
ಉದ್ಯೋಗವಿಲ್ಲದ ಬಡಿಗ, ಕೆಲಸವಿಲ್ಲದ ಕುಂಬಾರ.
ಒಡಲೆರಡು ಜೀವವೊಂದೆ, ಅವಳಿ-ಜವಳಿ
ಒಂದೇ ಸಾಲಿನವರು, ಒಂದೇ ಗರಡಿಯವರು
ರಾಮಬಾಣ, ವಜ್ರಲೇಪ.
ಕೆಚ್ಚಲೊಳಗಿನ ಉಣ್ಣೆ, ಎಲೆಯಲೊಲ್ಲದ ಲೋಭಿ, ಕರೆಯಲೊಲ್ಲದ ಆವು.
ಬಿಸಿಲು ಬೆಳದಿಂಗಳಾಗು, ಬೆಳುದಿಂಗಳು ಬಿಸಿಲಾಗು
ನೆಲವೆದ್ದು ಬಡಿ, ಬೇಲಿಯೆದ್ದು ಮೇಯು, ಕಲಲು ಕರೆಮೀರು, ಹಗ್ಗವೆ ಹಾವಾಗು, ಹೊನ್ನು ಮಣ್ಣಾಗು.
ಕತ್ತುರಿ ಬಿಟ್ಟು ಕೆಸರುಗೊಳ್ಳು, ಆನೆಯ ಜರಿದು ಕೋಣನೇರು, ಹಾಲುಬಿಟ್ಟು ಹೆಂಡ ಬೇಡು.
ಮನೆಯೇನು ಮಠವವೇನು? ಮನೆಯೇನು ವನವೇನು? ಪಾಲೇಂ ಕದನ್ನದುಣಿಸೇಂ? ಹಟ್ಟಿಯೇನು ಪಟ್ಟಣವೇನು?
ಕೊಟ್ಟುದನೆ ಕೊಂಡಿರು, ಕೊಟ್ಟುದನೆ ಪ್ರಸಾದವೆಂದಿರು, ಹಾಕಿದಷ್ಟು ತಿಂದಿರು, ಹೇಳಿದ್ದಕ್ಕೆ ಅಹುದೆನ್ನು
ಎಂದುದನೆ ಎಂದು ಬಾಳು, ಇತ್ತು ತೆತ್ತುಂ ಬಾಳು
ಕೋಟೆ ಹೋದ ಮೇಲೆ ಕಾವಲ?
ಶೆಟ್ಟಿ ಶೃಂಗಾರವಾಗು
ಮುಳ್ಳೊಳ್ಳೆ ಮುಳ್ಳು, ಮುಳ್ಳಿನಿಂದ ಮುಳ್ಳು ತೆಗೆ
ಸಾವುಳಿವು ದೈವೇಚ್ಛೆ
ಹೆಗ್ಗಣ ಹತ್ತಿದ ಮನೆ
ಕಳ್ಳರ ನೆರೆ
ಕಟ್ಟಿದ ಬುತ್ತಿ, ನಿಂತನೀರು, ಕಲಿತಬುದ್ಧಿ
ಕಳವಿಗೆ ಹೋಗಿ ಕೆಮ್ಮಿದಂತೆ
ಬಳ್ಳಿಗುರುಡರು ಹಳ್ಳಕ್ಕೆ ಬಿದ್ದಂತೆ
ಮೋಡವಿಲ್ಲದೆ ಮಳೆ ಸುರಿದಂತೆ
ಕೆನೆವಾಲ್ಸಕ್ಕರೆ ಕುಡಿದಂತೆ
ತುಪ್ಪದ ಕೊಡದ ಮೇಲಣ ಇಲಿ, ಶಿವಲಿಂಗದ ಮೇಲಿರುವ ಅಥವಾ ಗಣಪತಿಯ ಇಲಿ.
ಕಳ್ಳಗೆ ಬೆಳುದಿಂಗಳು
ನೀರೊಳಗಿನ ಮೀನ

(iv) ನಾಣ್ನುಡಿ (ಗಾದೆ)

೫೯. 'ಗಾಥಾ' ಶಬ್ದದಿಂದ ಗಾದೆಯೆಂಬ ನುಡಿಯುಂಟಾಗಿದೆ. ಗಾಥಾ ಎಂದರೆ ಹಾಡು, ಪದ್ಯ ; ಗಾದೆಗಳು ಮೊದಲು ಹಾಡಿನ ಒಂದರ್ಥ ಸಾಲುಗಳಾಗಿದ್ದುವು: ಲೋಕಪ್ರಿಯವಾಗಿ ನಾಡಿಗರ-ನುಡಿಯಲ್ಲಿ ಮೇಲಿಂದಮೇಲೆ ಕಾಣಿಸಿಕೊಳ್ಳಲಾರಂಭಿಸಿ. ಅವೆ 'ನಾಣ್ನುಡಿ'ಗಳು, 'ಗಾದೆ'ಗಳು ಆಗಿರಬೇಕೆಂದು ಊಹಿಸಬಹುದಾಗಿದೆ. ಅವುಗಳೊಳಗಿನ ಕುಸುರಿಯ ಜಾಣ್ಮೆಯ ಮಾತಿನ ರೀತಿಯೆ ಅವುಗಳ ಲೋಕಪ್ರೀತಿಗೆ ಕಾರಣವಾಗಿದೆ. ಗಾದೆಯ ಮಾತುಗಳು ಹಾಡಿನ ಸಾಲುಗಳಂತೆ ಮನೋಹರವಾಗಿರುತ್ತವೆ; ಮನಸ್ಸಿನಲ್ಲಿ ಅಚ್ಚೊತ್ತಿದಂತೆ ಒಡಮೂಡಿ ನಿಲ್ಲುತ್ತವೆ. ಈಗ ಬಳಕೆಯಲ್ಲಿರುವ ಎಲ್ಲ ಗಾದೆಗಳೂ ಯಾವುದಾದರೊಂದು ಪದ-ಪದ್ಯದ ಭಾಗಗಳೆಂದು

ಮಾತ್ರ ತಿಳಿಯಲಾಗದು. ಆದರು ಅವುಗಳ ಪ್ರಾಸಬದ್ಧ ಬಿಗಿಕಟ್ಟು, ಶೈಲಿ, ತೂಕ, ಛಂದ, ಆಲಂಕಾರಿಕ ರೀತಿಗಳನ್ನು ನೋಡಿದರೆ ಅವು ಹಾಡು, ಕವಿತೆಗೆ ಬಹಳ ಹತ್ತಿರದುವೆಂದು ಹೇಳಬಹುದಾಗಿದೆ.

ಕನ್ನಡ ಗಾದೆಗಳನ್ನು ಸಂಗ್ರಹಿಸಿದ ನಾಲ್ಕೈದು ಪುಸ್ತಕಗಳು ಪ್ರಕಟವಾಗಿರುವುದರಿಂದ ಅವನ್ನು ಇಲ್ಲಿ ಮತ್ತೆ ಎತ್ತಿಕೊಡುವುದು ನದಿಗೆ ನೀರು ಎರೆದಂತೆ. ಇವೆಲ್ಲ ಸಂಗ್ರಹಗಳು ಅಕ್ಷರಾನುಕ್ರಮದಲ್ಲಿವೆ. ವಿಷಯನಾನುಕ್ರಮದಲ್ಲಿ ಅವನ್ನು ಯಾರಾದರೂ ಅಚ್ಚು ಹಾಕಿಸಿದರೆ ವಿದ್ಯಾರ್ಥಿಗಳಿಗೂ ಲೇಖಕರಿಗೂ ತಟ್ಟನೆ ಉಪಯೋಗಿಸಿಕೊಳ್ಳಲಿಕ್ಕೆ ಇನ್ನಿಷ್ಟು ಅನುಕೂಲವಾಗುವುದು.

ಗಾದೆಗಳು ಆ ನಾಡಿಗರ ಸಂಸ್ಕೃತಿಯ ಮಟ್ಟವನ್ನು ಸೂಚಿಸುತ್ತವೆ. ಒಂದು ನಾಡಿನ ಜನಗಳ ಅನುಭವಗಳು ಎಂತಹವು, ಆದರ ವೈವಿಧ್ಯವು ಎಷ್ಟು, ನೋಟದ ಬಗೆಯಾವುದು, ವಿಚಾರದ ಆಳವೇನು ಎಂಬಿವೆ ಮೊದಲಾದ ಸಂಗತಿಗಳನ್ನು ಆಯಾ ನಾಡಿನ ನುಡಿ (ನಾಣ್ನುಡಿ)ಗಳಿಂದ ಕಂಡುಕೊಳ್ಳಬಹುದಾಗಿದೆ. ಕಾಲಕಾಲಕ್ಕೆ ಗಾದೆಗಳು ಹೊಸಹೊಸ ರೂಪ ತಾಳುತ್ತವೆ. ಗಾದೆಗಳು ಲೋಕಸಾಭವದ ಸಾರವಾಗಿರುವುದರಿಂದ ಚಿಕ್ಕಂದು ಮಕ್ಕಳು ಅವನ್ನು ಮನದಟ್ಟಾಗಿ ಮಾಡಿಕೊಂಡರೆ; ಮುಂದಿನ ಬಾಳಿನಲ್ಲಿ ಅವರಿಗೆ ಅದೊಂದು 'ದಾರಿಯ ಬುತ್ತಿ'ಯೇ ಸರಿ. ನೂರಾರು ಗಾದೆಗಳು ಬಾಯಿಗೆ ಬರುತ್ತಿದ್ದರೆ ಅಷ್ಟೊಂದು ವಿಚಾರ ಸಂಗ್ರಹವು ಹತ್ತಿರ ಯಾವಾಗಲೂ ಸಿದ್ಧವಿದ್ದಂತೆ; ಅಲ್ಲದೆ ಹೀಗೆ ಪಾಠವಿದ್ದವರ ಭಾಷಾಶೈಲಿಯೂ ಚೆನ್ನಾಗಿ ಪರಿಣಾಮಕಾರಿಯಾದುದಾಗಿರಲೇಬೇಕು. ಅಪಾರವಾದ ಕಂನಾಡು ಸಾಹಿತ್ಯದಲ್ಲಿ ಹುದುಗಿಕೊಂಡಿರುವ ಗಾದೆಗಳನ್ನೂ ಅವತರಣ ಯೋಗ್ಯವಾದ ಒಳ್ಳೊಳ್ಳೆಯ ಮಾತುಗಳನ್ನೂ ಆರಿಸಿ 'ಸುಭಾಷಿತ ಸಂಗ್ರಹ'ದಂತೆ ಬೇರೆಯಾಗಿ ಪ್ರಕಟಿಸಿದರೆ, ನಮ್ಮ ನಾಡಿಗರ ಭಾಷೆ, ವಿಚಾರಗಳ ಬೆಳವಣಿಗೆಗೆ ತುಂಬ ಸಹಾಯವಾಗುವಂತಿದೆ.

ಪಡೆಯ ನೋಡಬಂದರಂ ಗುಡಿವೊರಿಸಿದರ್' (ದಂಡು ನೋಡ ಬಂದವರಿಗೆ ಧ್ವಜ ಹೊರಿಸಿದರು); 'ಬಡಿಗಂಡುದಿಲ್ಲ, ಪಾಲನೆ ಕಂಡಂ' (ಬೆಕ್ಕಿಗೆ ಬೆಣ್ಣೆ ಕಂಡಿತು ಡೊಣ್ಣೆ ಕಾಣಲಿಲ್ಲ); 'ಕುಲಂ ಕುಲುಮಲ್ತು; ಚಲಂ ಕುಲಂ'; 'ಪೆಣನಿರಿದು ಪಡೆಗೊಂಡಂ'; 'ಓಲಗಿಸಿ ಬಾಳ್ವುದೆ ಕಷ್ಟಂ ಇಳಾಧಿನಾಥರಂ'; 'ಪೊಲ್ಲಮೆಯೆ ಲೇಸು ನಲ್ಲರ ಮೆಯ್ಯೊಳ್'; ಕಡುಚಪಳನ ಗೋಣೆ ಬರಿದು'; 'ನೇರಿದರ ನೀತಿ ಸುರಲೋಕಂ'; ಕಳಲ್ವಂದವಂಗೆ ಕೈಯೆಡೆ ಕೊಟ್ಟರು; 'ಗಾಳಿಮೆಲ್ವಂಗೆ ಅವಲಂ ಪೊಯ್ದರ್'; 'ಮೂಗಿನೊಳ್ ಉಳುವಾತಂಗೆ ನೇಗಿಲಂ ಕೊಟ್ಟರ್'; 'ಬರಿದೆ ಕುಣಿವಂಗೆ ಮತ್ತೆ ಪರೆಯವನುಂ ಕೂಡಿದಂ'; 'ಜೀವಂ ಉಳ್ಳೊಡೆ ಹಾಡಿ ಉಣಲಕ್ಕುಂ'; 'ಸತ್ತು ಕೊಳ್ವ ಸ್ವರ್ಗದಿಂ ಬರ್ದುಕೊಳ್ವ ನರಕಂ ಲೇಸಂ'; ಎತ್ತಿಕೊಂಡ ಕಳ್ಳಂ ಬಾಯಿ ಸುಟ್ಟೋಡಿದಂ'; 'ಕನಸಿನ ಬತ್ತಕ್ಕೆ ಎಚ್ಚತ್ತು ಗೋಣೆಯಾಂತರು'; 'ದೇವಂಗಾರದೆ ಧರ್ಮಿಯಂ ಬಡಿದರ್' (ದೇವರಿಗೆ ಆಗದೆ ಪೂಜಾರಿಯನ್ನು ಥಳಿಸಿದರು); 'ಹೆಗ್ಗಣವನ್ನಿಟ್ಟು ಮನೆಕಟ್ಟು'; 'ನಾಲಗೆಯು ಕುಲವನರಹುವುದು'; 'ನಡೆವರೆಡಹದೆ ಕುಳಿತವರೆಡಹುವರೆ?'; 'ಸಿಡಿಲು ಹೊಡೆದಡೆ ಹಿಡಿದ ಕೊಡೆ ಕಾವುದೆ?'; 'ಮೆಣಸು ಹುಳಿತೊಡೆ ಜೋಳದಿಂಕುಂದೆ'; 'ನೀರಡಿಸಿದಂಗೆ ತುಪ್ಪಂ ಮರ್ದೆ?' ; 'ದಂಟನೂದುವಂಗೆ ಕೊಳಲು ದೊರೆಕೊಂಡುದು'; 'ಹುಲಿಗಂಜಿ ಹುತ್ತ ಹೊಕ್ಕರೆ ಹೆಬ್ಬಾವು ಹಿಡಿದೀತು.'

ಇದಕ್ಕೇನು ಕೊನೆಮೊದಲಿಲ್ಲ. ಸರ್ವಜ್ಞನಲ್ಲಂತೂ ಇವುಗಳ ಸುರಿಮಳೆ! ಗಾದೆಗಳನ್ನೆ ಹೊಸೆದು ತ್ರಿಪದಿ ಬರೆದಿರುವನೊ ಅಥವಾ ಆತನ ತ್ರಿಪದಿಗಳೆ ಗಾದೆಗಳಾಗಿ ಪರಿಣಮಿಸಿವೆಯೊ ಅದು, ಕಂನಾಡ ಕಾವ್ಯ ಮಹೋದಧಿಯಲ್ಲಿ ಅಡಗಿರುವ ಗಾದೆಮಾತುಗಳೆಂಬ ಮುತ್ತುರತ್ನಗಳನ್ನು ಬೆಳಕಿಗೆ ತಂದರೆ ಕಂನುಡಿಯ ಬೆಡಗು ಹೆಚ್ಚಾಗದೆ ಇರಲಾರದು.

ಪಡೆನುಡಿ

೬೦. ಯಾವುದೆ ಭಾಷೆಯ ಸಾರವೆ ಅವರ ದೇಸಿ. ಆ ದೇಸಿಯ ಸಾರ ಅದರ ಪಡೆನುಡಿ (idiom). ಪಡೆನುಡಿಯೆಂದರೆ ನುಡಿಯ ಕೆನೆಯಿದ್ದಂತೆ. ಇದನ್ನು ಬಿಟ್ಟರೆ ಕಂನುಡಿಯು ಸಪ್ಪೆಯಾಗುವುದು. ಪಡೆನುಡಿಗಳು ಹಲವು ಬಗೆಗಳಿಂದ ಮಾತಿನಲ್ಲಿ ಬೆಳೆದು ಬಂದಿವೆ. ನಮ್ಮ ಅವಯವಗಳ ಮೇಲಿಂದ ಪಡೆದುಕೊಂಡ ಮಾತುಗಳು ಅವೆಷ್ಟೊ ಇವೆ. ಈ ಅವಯವಗಳಲ್ಲಿ ಕನ್ನಡಗರಿಗೆ ಕೆಯ್ಯು ಹೆಚ್ಚಿನದು; ಕೆಯ್ಯ ಮೇಲೆ ನಮ್ಮ ಹೊಟ್ಟೆ; ಕೆಯ್ಯ ಮೇಲೆ ನಮ್ಮ ಬಾಳ್ವೆ. ಅದರಿಂದ ಕೆಯ್ಯ ಮೇಲಿನ ಪಡೆದುಕೊಂಡ ನುಡಿಗಳು ಉಳಿದ ಯಾವ ಅವಯವಕ್ಕಿಂತಲೂ ತುಂಬ ಹೆಚ್ಚಾಗಿದ್ದುದು ಕಂಡುಬರುತ್ತದೆ. ಮೆಯ್-ಕೆಯ್‌ಗಳಿಂದಲ್ಲದೆ ಪ್ರಾಣಿ-ವನಸ್ಪತಿಗಳು. ಧರ್ಮ, ಜ್ಯೋತಿಷ, ಇತಿಹಾಸ, ಪುರಾಣಾದಿಗಳಿಂದಲೂ ಪಡೆದುಕೊಂಡ ಸಾವಿರಾರು ನುಡಿಗಳು ಉಂಟು.

ಕಂನುಡಿಯ ಈ ಬಗೆಯ ಪಡೆನುಡಿಗಳ ಪರಂಪರೆಯು ಇಂದು ನಿನ್ನೆಯದಲ್ಲ, ಅನಾದಿಕಾಲದಿಂದ ಬಂದುದು. 'ಪ್ರೌಢವಾಗಿ' ಬರೆಯಬೇಕೆಂಬ ಮಬ್ಬಿನಲ್ಲಿ ಕಂನುಡಿಯ ದೇಸಿಯ ಈ ಸೊಬಗನ್ನು ಕಣ್ಣೆತ್ತಿ ಸಹ ನೋಡದ ಕೆಲಪಂಡಿತರನ್ನು ಬಿಟ್ಟರೆ, ಪಂಪನಿಂದ (ಅವನಿಂದಲೂ ಮೊದಲಿನಿಂದ) ಇಂದಿನ ತನಕ ಇದಕ್ಕೆ ಮನಸೋತು ಮಾರುಹೋಗದ ಸಾಹಿತಿಗಳೆ ಇಲ್ಲ. ಸಾವಿರಾರು ವರುಷಗಳ ಹಿಂದೆ ಉಪಯೋಗಿಸುತ್ತಲಿದ್ದ ಪಡೆನುಡಿಗಳು. ಈಗಲೂ ದಿನದ ಮಾತಿನಲ್ಲಿ ಕಿವಿಗೆ ಬೀಳುತ್ತಿರುವುದನ್ನು ನೋಡಿ ಮನಸ್ಸು ಹಿಗ್ಗುವುದು. ಒಬ್ಬ ಮನುಷ್ಯನು ತುಂಬ ಬಡವನು; ಹತ್ತಿರ ಏನೂ ಇಲ್ಲವೆಂಬುದನ್ನು ದೇಸಿಯಲ್ಲಿ ಹೇಳಬೇಕಾದರೆ "ಕೆಯ್ಯಲ್ಲಿ ಅಡಕೆ (ಚೂರು) ಸಹ ಇಲ್ಲ"; "ಹತ್ತಿರ ಹಸರು ಮಣಿ ಉಳಿದಿಲ್ಲ" ಎಂಬೀ ಬಗೆಯಾಗಿ ಮಾತನಾಡುವುದುಂಟು. ಇದು ಇಂದಿನ ಮಾತಿನ ರೀತಿಯೆಂದು ಮಾತ್ರ ತಿಳಿಯಲಾಗದು; ಸಾವಿರ ವರುಷಗಳ ಹಿಂದೆ ಪಂಪನ ಕಾಲದ ಭಾಷೆಯಲ್ಲಿಯೂ ಇವೆ ಮಾತುಗಳಿದ್ದುವು. ಆತನ ವಿಕ್ರಮಾರ್ಜುನ ವಿಜಯವೇ ಇದಕ್ಕೆ ಸಾಕ್ಷಿ

ಹಿಂದಿನ ಕಾಲದ ಕೆಲವು ಪಡೆನುಡಿಗಳಿಗೆ ಈಗ ಅರ್ಥವಾಗುವುದಿಲ್ಲ. 'ಕೆಯ್‌ಬೀಸು' (ಕೆಯ್ವಾಸು) ಎಂದು 'ಯುದ್ಧವು ಆರಂಭವಾಗಲೆಂದು ಸಂಜ್ಞೆ ಮಾಡು' ಸಿಗ್ನಲ್ಲು ಕೊಡು' (Signal) ಎಂಬರ್ಥದಲ್ಲಿ ಉಪಯೋಗಿಸಲ್ಪಡುತ್ತಿತ್ತು. ಆದರೆ, ಇದು ಈಗ ರೂಢಿಯಲ್ಲಿ ಉಳಿದಿಲ್ಲ. ಯುದ್ಧವೆ ಅರಿಯದ ಮಾತಾಗಿದ್ದಾಗ 'ಕೈವೀಸು' ಎಂಬುದರ ಅರ್ಥವೂ ಮರೆತು ಹೋಗಿದ್ದರೆ ಸೋಜಿಗವೇನು? ಕೆಲವು ನುಡಿಗಳು ಕಾಲಕಾಲಕ್ಕೆ ಅಲ್ಪ ಸ್ವಲ್ಪ ಮಾರ್ಪಾಟುಗೊಳ್ಳುತ್ತ ಬಂದಿವೆ. 'ಕೈಮಿಗು, ಕೈಗಳೆ, ಕೈಮೀರು, ಎಂಬಿವು ಇದಕ್ಕೆ ಉದಾಹರಣೆಗಳು. ಆದರೂ ಒಟ್ಟಿನಲ್ಲಿ, ಅನೇಕ ಶತಮಾನಗಳಿಂದ ಅವ್ಯಾಹತವಾಗಿ ನಡೆದು ಬಂದ ಕಂನಾಡ ಅವಿಚ್ಛಿನ್ನ ಪರಂಪರೆಯು ಕೌತುಕಾಸ್ಪದವಾಗಿದೆ, ಹೆಮ್ಮೆ ಪಡುವಂತಹುದಾಗಿದೆ.

ಈ ಪಡೆನುಡಿಗಳು ಅಂದಿನಿಂದ ಇಂದಿನ ವರೆಗೆ ಎಡೆಬಿಡದೆ ಹೇಗೆ ನಡೆದು ಬಂದಿವೆಯೆಂಬುದನ್ನು ತೋರಿಸುವ ಮಟ್ಟಿಗೆ ಕೆಲವನ್ನು ಮಾತ್ರ ಆಯ್ದು ಇಲ್ಲಿ ಕೊಡಲಾಗಿದೆ. ಪಡೆನುಡಿಗಳ ಅಭ್ಯಾಸದಿಂದ ನಮ್ಮ ಬರೆವಣಿಗೆಗೊಂದು ಹೊಚ್ಚ-ಹೊಸ ಬಣ್ಣವು ಏರದೆ ಇರಲಾರದು.

ಮೈ-ಕೈಗಳಿಗೆ ಸಂಬಂಧಪಟ್ಟುವು

ಅಳ್ಳೆದೆ (ಪುಕ್ಕಮನಸ್ಸು) : ಅರಿಗಂಡರ ಅಳ್ಳೆರ್ದೆಗಳಂ ತುಳಿವವೊಲ್ -ಪಂಪ
ಅಡಿ (ಮಹನೀಯರು) : ನಿಮ್ಮಡಿ ಬಂದ ಕಾರ್ಯ ಬೆಸಸಿ ಬೇಗದೊಳು -ಕು. ವ್ಯಾಸ
ಆಳು (ಸಮರ್ಥ) : ನಿಮ್ಮಿದಿರೊಳು ಆಳೇ ತಾನು? -ಕು. ವ್ಯಾಸ
ಪ್ರಕಟಮೈ ನಿಮ್ಮಾಳುತನ, ಪಲಾಯನ, ಪಂಡಿತರು ನೀವು! -ಕು. ವ್ಯಾಸ
ಎದೆ (ಅಂತಃಕರಣ) : ಎದೆಯರಿತು ನುಡಿದಳು : -ರತ್ನಾಕರವರ್ಣಿ
ಸುಭದ್ರೆಯ ಮನಂ ಒರಲ್ದುದು; ಎರ್ದೆ ಉರಿದುದು -ಪಂಪ
ಎಂಟೆರ್ದೆ (ಅತುಲ ಧೈರ್ಯ) : ಶುಭಕೀರ್ತಿ ಮುನಿಪನೊಳ್, ಏಂ ಗಡ!
ನುಡಿಯಲ್ಕೆ ಪರವಾದಿಗಳ್ಗೆ ಎಂಟೆರ್ದೆಯೆ? -ಶಾ. ಪ. ಮಂ.
ರನ್ನನ ಕೃತಿರತ್ನಮುಮಂ ಪೇಳ್ ಪರೀಕ್ಷಿಪಂಗೆ ಎಂಟೆರ್ದೆಯೆ? -ರನ್ನ
ಎದೆ ಅದಿರು, ಒಡೆ, ನಡುಗು; ಪರವಾದಿಗಳ ಎದೆ ಅದಿರೆ; ಬ. ಪುರಾಣ
(ಅರ್ಜುನನೊಡನೆ) ಆ ಮಹಾರಥ ದ್ರೋಣನೆದೆ ನಡುಗುವುದು ಕದನದಲಿ -ಕು. ವ್ಯಾಸ
ಎದೆಗುಂದು, ಕೆಡು, ಬಿರಿ : ಎಡರಿನಲಿ ಎದೆಗುಂದದೆ, ಬಡತನಕೆ ಕಂಗೆಡದೆ -ಅನುಭವಾಮೃತ
ನೀವುಂ ಇಂತು ಇನಿತು ಎದೆಗೆಟ್ಟಿರಿ! -ಪಂಪ
ವಿಡಂಬನವ ಕಂಡು ಎದೆಬಿರಿದುವು -ಕು. ವ್ಯಾಸ
ಎದೆಗೊಳ್ಳು (ಚೆಂದಕಾಣು): ಮದನನಾರಿಯ ರೂಪು ಎರ್ದೆಗೊಳ್ಳುವುದು -ಪಂಪ
ಎಡೆತೆರೆ (ದುಃಖಿಸು, ಅಂತಃಕರಣವನ್ನು ಬಿಚ್ಚು) : ಆಗಳ್ ಐವರುಂ ಆ
ಮಾತಂ ಕೇಳ್ದು ಭೋಂಕನೆ ಎರ್ದೆದೆರೆಯೆ -ಪಂಪ
ಒಡಕಬಾಯಿ: ಒಡಕ ಬಾಯವಳ ಮನೆವಾರ್ತೆ ಎಣ್ಣೆ ಕುಡಿಕೆ ಒಡೆದಂತೆ - ಸರ್ವಜ್ಞ
ಒಂದು ತಲೆಯಾಗಿ ಓಡು : ಒಂದು ತಲೆಯಾಗಿ ಓಡುವ ಕೌರವ
ಧ್ವಜನಿಯುವಂ ಅಶ್ವತ್ಥಾಮಂ ಕಂಡು -ಪಂಪ
ಕಲ್ಲೆದೆ (ಕಠೋರ ಮನಸ್ಸು) : ಸಾಲಕ್ಕೆ ಕಲ್ಲೆದೆಯು ಬೇಕು -ಸರ್ವಜ್ಞ
ಕಣ್ಕಟ್ಟು : ಅರಿತಲಿ ಕಣ್ಣಕಟ್ಟದು ಹೊಲ್ಲ -ಸರ್ವಜ್ಞ
ಕಣೋಲು : ಅಂದು ಅರ್ಜುನನಂ ಕಣ್ಸೋಲ್ತು ಕಂಡಳ್ -ಪಂಪ
ಕವಲು ನಾಲಗೆ, ಎರಡು ನಾಲಗೆ : ಪಕ್ಷಪಾತ ಸ್ಥಿತಿಯನಾಡೆನು; ಕವಲು
ನಾಲಗೆಯಿಲ್ಲ ತನಗೆಂದ -ಕು. ವ್ಯಾಸ
ಕಾಲೊಳು (ದೆಸೆಯಿಂದ): ಇಂದು ಕೀಚಕನ ಕಾಲೊಳು ನೊಂದೆ -ಕು. ವ್ಯಾಸ
ಕಾಲಕಸ : ಹಣವೆಂಬುದು ನಮ್ಮ ಮನೆಯಲ್ಲಿ ಕಾಲಕಸ; ಎಣಿಕೆ ಬೇಡ -ಮಂಗರಸ
ಕಾಲ್ವಿಡಿ : (ನಮಸ್ಕರಿಸು) ನಲ್ಲಳೆ ನಿನ್ನ ಕಾಲ್ವಿಡಿದಪೆಂ ಮೋನಮಿದೇಕೆ? -ಕೇಶಿರಾಜ
ಲೋಕವಿಖ್ಯಾತರಾಗಿ ಕೆಯ್ದುವಿಡಿವಲ್ಲಿಯೆ ಕಾಲ್ವಿಡಿಯಲ್ಕೆ ತಕ್ಕುದೆ? -ಪಂಪ

ಕಾಲೇಳದಿರು (ಹೋಗಲು ಇಚ್ಛೆ ಆಗದಿರು) : ಮುದ್ದುವೆಣ್ಣಿಗೆ ಪೇಳಿದನು
ನಿನ್ನ ಬಿಟ್ಟು ಕಾಲೆದ್ದು ಪೋಪವೆ? -ಕನಕದಾಸ
ಕಾಲ್ಗೆಡು : ಶೇಡಿಂದೆ (ಚಳಿಯಿಂದ) ಸಾರಥಿ ಕಾಲ್ಗೆಟ್ಟಿರೆ ಕಂಡು -ಪುಷ್ಪದಂತ ಪುರಾಣಂ
ಕಿವಿಕೆಡಿಸು : ಕುಮಂತ್ರಮಂ ಬೋಧಿಸಿ ಕಿವಿಗೆಡಿಸಿ; -ಕೆಳದಿ ನೃಪವಿಜಯ
ಕಿವಿಯೋಲೆ (ಸೌಭಾಗ್ಯ) : ಸತಿಯ (ದ್ರೌಪತಿಯ) ಕಿವಿಯೋಲೆಗಳು ಸ್ಥಿರವಲ್ಲವೆಂದನಸುರಾರಿ. -ಕು. ವ್ಯಾಸ
ಕಿವಿಗುಡು (ಕೇಳು) : ನಿನ್ನ ಮೆಲ್ನುಡಿಗಳಿಗೆ ಕಿವಿಗುಡದವರಾರು? -ಕನಕ
ಕಿವಿಹಿಡಿ (ತಿದ್ದು, ಒತ್ತಾಯಪಡಿಸು) : ಆಸೆಯೆಂಬ ಸ್ತ್ರೀ ಶರಣರಲ್ಲದವರ
ಕಿವಿಯ ಹಿಡಿದು ಕುಣಿಸಿದಳು -ವಚನ
ಕೂದಲೂ ಕೆಡದೆ: ಹಿಂದೆ ವಿಷವಿಕ್ಕಿದೆವು... ಒಂದು ಕೂದಲು ಸೀಯದೆ ಅನಿಬರು ಬಂದರು. -ಕು. ವ್ಯಾಸ
ಕೆಯ್ ಏಳು ; ಕೆಯ್‌ಬರು (ಮನಸ್ಸಾಗು); (ಕರ್ಣಂಗೆ) ಸಾರಥಿಯಿಲ್ಲ; ಮೆಯ್ಗೆ ಮರೆವೆಯುಂ ತಾನಿಲ್ಲ;
ಅದೆಂತಾ ಈಗಳ್ ಆನ್ ಇರಿವೆಂ? ನೋಡಿರೆ ಮತ್ತಂ (ಬಾಣವನೆಸೆಯಲ್) ಎನ್ನ ಕೆಯ್ ಏಳದು.
-ಪಂಪ

ಧರ್ಮಕ್ಕೆ ಕೆಯ್‌ಬಾರದೀಕಾಲ । ಪಾಪಕರ್ಮಕ್ಕೆ ಮನ ಸೋಲೋದೀಕಾಲ॥
- ಪುರಂದರದಾಸ

ಕೆಯ್ಯಾಸೆ (ಲಂಚದಾಸೆ) : ಕೆಯ್ಯಾಸೆಯಂ ಮಾಡದ ಮಂತ್ರೀಶ್ವರರ್ -ಸೋಮೇಶ್ವರ
ಕೆಯ್‌ಕೂಲಿ (ದುಡಿಮೆ) : ಸಲೆ ಕೆಯ್‌ಕೂಲಿಯ ಮಾಡಿಯಾದಡೆಯು ನಿಮ್ಮ ನಿಲುವಿಂಗೆ ಕಂದಿವೆ
- ಬಸವಣ್ಣ
ಕೆಯ್ಪಿಡಿ (ಕನ್ನಡಿ) : ಆ ಪೊತಚೂತಂ.....ಬಸಂತನ ಕಯ್ಪಿಡಿ - ಪೊನ್ನ
ಕೆಯ್ಯೊಳ್ (ಕೈಯಲ್ಲಿ) : ನಿನ್ನ ಮೃತ್ಯು ಎನ್ನ ಕೆಯ್ಯೊಳ್ -ಪಂಪ
ಭೀಮಗೆ ಹೇಳಿಸಿದಳಾ ಫಲಗುಣನ ಕೈಯಿಂದ - ಕು. ವ್ಯಾಸ
ಕೆಯ್‌ಗನ್ನಡಿ (ಇದು) ಮೂರುಲೋಕದ ಕಯ್‌ಗನ್ನಡಿ -ಜನ್ನ
ಇದು ಶೀಲವಂತರ ಕೆಯ್‌ಗನ್ನಡಿ -ಬಸವಪುರಾಣ
ಕೆಯ್‌ವೀಸು (ಯುದ್ಧವನ್ನು ಆರಂಭಿಸುವುದಕ್ಕೆ ಸನ್ನೆಮಾಡು) :
ಕೆಯ್‌ವೀಸಿದನು ಕುಸುಮಾಸ್ತ್ರನು ಆ ಕೀಚಕನ ಕಗ್ಗೊಲೆಗೆ -ಕು.ವ್ಯಾಸ
ಅತ್ತ ರಾಜರಾಜನುಂ ಇತ್ತ ಧರ್ಮರಾಜನು ಒಡನೊಡನೆ ಕೆಯ್ವೀಸುವಾ
ಪ್ರಸ್ತಾವದೊಳ್ -ಪಂಪ
ಕೆಯ್ಮೆ (ಮಾಟ, ಕೃತಿ) : ಅವರ ಕೆಯ್ಮೆಗೆ ತನ್ನ ಕೆಯ್ಮೆಯೆ ಹವಣು - ಕು. ವ್ಯಾಸ
ಯುದ್ಧರಂಗದೊಳ್ ತತ್ಪ್ರತಿಭಟನ ಕೆಯ್‌ವಾಡಕ್ಕಿಂತ ಐಮಡಿ ಚಮತ್ಕೃತಿಯಂ ತೋರಿ - ಕೆ. ನೃ.ವಿ.
ಕೆಯ್‌ದೆಗೆ (ಹಿಂಜರಿ) : ಕೆಯ್‌ದೆಗೆಯದೆ ಅನವರತಂ ಕುಡುತ್ತುಂ -ನಯಸೇನ
ಕೆಯ್‌ವಾರ : ಆನಿರೆ ವೀರಪಟ್ಟಮಂ ನೀನ್ ಈ ಸೂತಸುತಂಗೆ
ಕೆಯ್‌ವಾರದಿಂ ಒಸೆದಿತ್ತೊಡಂ ಏನಾಯ್ತು -ಪಂಪ
ಆರವನು? ಹಿರಿದಾಗಿ ನೀ ಕೆಯ್‌ವಾರಿಸುವೆ? - ಕು. ವ್ಯಾಸ
ಕೆಯ್‌ಮಾಡು : ಹೇಡಿಗಳಿದ್ದು ಫಲವೇನೆನುತ ಕೆಯ್‌ಮಾಡಿದನು ಕಲಿಕರ್ಣ; - ಕು. ವ್ಯಾಸ
ಬೇಡ ಮರುಳೆ, ಪಾಂಡವರು ಕೆಯ್ಮಾಡಿದರೆ ನೀನುಳಿಯೆ - ಕು. ವ್ಯಾಸ

ಕೆಯ್‌ದುಡುಕು : ಕಡುಮನದ ಕರ್ಣಾದಿಗಳು ಕೆಯ್‌ದುಡುಕಿದರೆ ಕೆಯ್‌ಗಾಯ್ದು
ಧರ್ಮದ ತಡಿಗೆ ಒಯ್ಯುವುದು - ಕು. ವ್ಯಾಸ

ಕೆಯ್‌ನಡೆ : ಅರ್ಧನೇಮಿಯು ಅಷ್ಟಮಾಶ್ವಾಸವನ್ನು ಬರೆದಕೂಡಲೆ ನೇಮಿಚಂದ್ರನು
ಕೆಯ್‌ಬಾಯಿ ನಡೆಯಲಾರದಷ್ಟು ಬೇನೆಯಾಗಿ ಸತ್ತಿರಲಾರನು. -ಜಯಕರ್ನಾಟಕ

ಕೆಯ್‌ಬಡು: ಕಾಗಿನೆಲೆಯಾದಿ ಕೇಶವನ ಕೈಬಿಟ್ಟೆಯಾದರೆ ನಿನಗೆ ಹರಿದಾಸರಾಣೆ -ಕನಕದಾಸ

ಕೆಯ್ಕೆಡೆ (ಕಾಣಿಕೆ) : ಗಂಗೆಗೆ ಕೆಯ್ಕೆಡೆಯೆಂದು ಕರ್ಣನಂ ಕೊಟ್ಟು ಪೋಗೆ; -ಪಂಪ
ಕುಂತೀ ಸತಿಯೆ ಕೆಯ್ಕೆಡೆಯ ಕಂದನನೊಪ್ಪುಗೊಳು ನೀನು; -ಕು. ವ್ಯಾಸ
ರಾಣಿಯೊರ್ವಳು ಬಂದು ಹೊಂದಾವರೆಯನು ಕೆಯ್‌ಗಾಣಿಕೆಯಿತ್ತು ಕೈಮುಗಿದು -ರತ್ನಾಕರವರ್ಣಿ

ಕೆಯ್‌ಚಳಕ : ಮಝರೆ, ಕೆಯ್‌ಚಳಕ ಲೇಸೆಂದನಾ ದ್ರೋಣಾ: -ಕು. ವ್ಯಾಸ
ಸಂಕಣನಾಯಕಂ...ಕಾಯ್ದು ಅವನ (ಅಂಕುಶಕಾನನ)
ಕೆಯ್‌ಚಳಕಮಂ ನಿಲಿಸಿ . - ಕೆ. ನೃ.ವಿ.

ಕೆಯ್‌ವಿಡಿ (i) ಮದುವೆಯಾಗು : ಓರಗೆಯ ಒಗೆತನ ಮೀರಿಹೋದವಳ
ಕೆಯ್ಯಾರು ಪಿಡಿಯಬೇಕು? - ಪುರಂದರದಾಸ
ಕೆಯ್ವಿಡಿದ ರಾಣಿಯರ ಸೊಬಗು - ಚಿಕ್ಕದೇವರಾಜ ವಿಜಯ
(ii) (ನೆರವಾಗು) : ಕೃಷ್ಣ ಕೆಯ್‌ಪಿಡಿವನು ಸತ್ಯದಿಂ ನಡೆದು ಭಕ್ತಿಯಿಂ ಭಜಿಸಿದರೆ -ಜಗನ್ನಾಥದಾಸ
(ಹರ ತನ್ನ ಭಕ್ತರ ಅರೆದು ಒರೆದು ನೋಡಿದಾಗ) ಬೆದರದೆ ಬೆಚ್ಚದೆ ಇದ್ದಡೆ ಕರಪಿಡಿದು
ಎತ್ತಿಕೊಂಬ ನಮ್ಮ ರಾಮನಾಥ
(iii) (ತಡೆ, ನಿರೋಧಿಸು); ನಮ್ಮೂರಲ್ಲಿ ಶ್ರೀನಿವಾಸನ ಕೆಯ್ ಹಿಡಿಯುವವರು ಯಾರೂ
ಇಲ್ಲದ್ದರಿಂದ ಅವನ ಸ್ವೈರವಿಹಾರಕ್ಕೆ ಅಡ್ಡಿಯೆ ಇಲ್ಲದಾಯಿತು. -ಜಯ ಕರ್ನಾಟಕ

ಕೆಯ್‌ಮೇಲೆ (ತತ್ಕಾಲಕ್ಕೆ) : ಕೂಡಲಸಂಗಮದೇವಾ ನಿಮ್ಮ ಪೂಜಿಸಿದ ಫಲ ಕೆಯ್‌ಮೇಲೆ -ಬಸವಣ್ಣ

ಕೆಯ್‌ವರ್ತಿಸು (ಕೊಡು, ಒಪ್ಪಿಸು) : ತನ್ನ ರಾಜ್ಯಭಾರಮಂ ಅನುಜನಹ
ಸಂಕಣ್ಣನಾಯಕರಿಗೆ ಕೆಯ್‌ದರ್ಶಿಸಿ -ಕೆ. ನೃ. ವಿ.

ಕೆಯ್‌ಕೊಡು : ಅವರ್ಗಗಳ ಸನ್ಮತಿ ಎಮಗೆ ಕೆಯ್‌ಗುಡುಗೆ ಸರಸ ಪದಪದ್ಧತಿಯೊಳ್ -ಜನ್ನ
ಕೃಪ-ಗುರುಸುತರು ಕೆಯ್ಗೊಟ್ಟರೆ ಹಗೆಗೆ - ಕು. ವ್ಯಾಸ

ಕೆಯ್‌ಗಟ್ಟು (ಸಿದ್ಧವಾಗು) : ಕಾಳಗಕೆ ಕೆಯ್ಗಟ್ಟೆ ಹಿಂಡೆದ್ದುದು. - ಕು. ವ್ಯಾಸ

ಕೆಯ್‌ಮರೆ (ಮೈಮರೆ) : ಕೌರವಸೇನೆ ಹರುಷದ ಸೊಗಸಿನಲ್ಲಿ
ಮೆಯ್ಮರೆಯೆ ಕೃಷ್ಣಾದಿಗಳು ಕೆಯ್ಮರೆಯೆ -ಕು. ವ್ಯಾಸ
ಹುದು [ಪ್ರೀತಿ] ನಡೆಯದಿವರೊಡನೆ: ನಮ್ಮೊಳು ಕದನವೇ ಕೆಯ್ಗಟ್ಟುವುದು;
ಕಾದಿದರೆ ಹೆಬ್ಬಲವಹುದು. -ಕು. ವ್ಯಾಸ

ಕೆಯ್‌ಸೋಲು: ಕೆಯ್ ಸೋತಿತೊ ರಂಗಾ! ಇತ್ತ ನೋಡೊ ಪುರಂದರದಾಸ

ಕೆಯ್‌ಗಲಸು [ಕಾದು, ಯುದ್ಧಮಾಡು] : ಈ ಶಿರೀಷಕೋಮಲೆಯ
ವಿಲೋಲ ನೀಲಕಬರಿಭರಮಂ ತೆಗೆವಾಗಳ್ ಅಲ್ಲಿಯೆ ಕೆಯ್ಗಲಸದೆ (ಇರ್ದವು!) - ಪಂಪ
ಉಭಯ ಸೈನ್ಯಕ್ಕಂ ಕೆಯ್‌ಗಲಸಿ ತುಮುಲ ಯುದ್ಧಂ ಪಣ್ತಲ್ -ಕೆ. ನೃ.ವಿ

ಕೆಯ್‌ಕಾಯು (i) (ಕಾಪಾಡು) : ಕರುಣಾಜಲನಿಧಿಯೆ ಕೆಯ್‌ಗಾಯ
ಬೇಕೆಂದು ಒರಲಿದಳು ತರಳೆ; -ಕು. ವ್ಯಾಸ

ಕಾಮಂ ಕೆಯ್‌ಗಾಯದೆ ನಿಂದಾರ್ದು ಇಸಲ್; -ನಯಸೇನ
(ii) [ತಡೆದು, ಬಿಗಿಹಿಡಿದು]: ಆಂ ಇನ್ನೆವರಂ ಕೆಯ್‌ಗಾಯ್ದು -ಕೆ.ನೃ.ವಿ
ಕೆಯ್‌ಕುಂದು : ಕೆಯ್‌ಗುಂದಿದನು ದ್ರೋಣನಂದನನು - ಕು. ವ್ಯಾಸ
ಕೆಯ್‌ಕೊಡು (i) (ನೆರವಾಗು; (ಕೈಹಿಡಿ ನೋಡು) (ii) ಮೋಸಮಾಡು;
ತಳ್ಳು-ಇತ್ತೀಚೆಗೆ ಬಳಕೆಯಲ್ಲಿ ಬಂದ ಮಾತು
ಕೆಯ್‌ಸಾರು [ದೊರೆ]; ಶ್ರೀರಮೆ ಕೆಯ್‌ಸಾರ್ಗುಂ -ನಯಸೇನ
ಕೆಯ್‌ಗೈಸು [ಅಲಂಕರಿಸು] : ಅಂತು ರುಕ್ಮಿಣಿಯ ಕೆಯ್ಗಯಿಸಿ -ರುದ್ರಭಟ್ಟ
ಕೆಯ್‌ಗೆಬರು [ಪೂರ್ಣವಾಗು; ಪಕ್ವವಾಗು]; ಕೋಗಿಲೆ ಕೆಯ್‌ಗೆವಂದ
ಮಾವಂ ಸಾರ್ದಂತೆ -ಆಂಡಯ್ಯ
ಕೆಯ್‌ಗೂಡು: ಕಾಲ(ನು) ಕೆಯ್‌ಗೂಡಿಸಿದರೆ ಲೇಸಿನ ಮೇಲೆ ಲೇಸು -ಕು. ವ್ಯಾಸ
ಕೆಯ್ಗೂಡಿಬದುಕು : (ಒಂದಾಗಿ, ಹೊಂದಿ) ನಿಮ್ಮೊಳಗೆ ನೀವ್ ಕೆಯ್ಗೂಡಿ
ಬದುಕುವುದು ಒಳ್ಳಿತು -ಕು. ವ್ಯಾಸ
ಕೈಯ್ಯೆತ್ತಿ ಕೊಡು (ಮನಃಪೂರ್ವಕವಾಗಿ): ಕೆಯ್ಯೆತ್ತಿ ಕೊಡಲಿಲ್ಲ -ಸರ್ವಜ್ಞ
ಕೈಯ್ಯಾನು, ಕೈ ಒಡ್ಡು (ಬೇಡು) : ಪಗೆವಂಗೆ ಯಮಪಾಶಂ; ಕೆಯ್ಯಾಂತಂಗೆ ಕಲ್ಪತರು - ನಾಗಚಂದ್ರ
ನಿನ್ನಂ ಕೆಯ್ಯನೊಡ್ಡಿ ಬೇಡಿದಪೆಂ - ಪಂಪ
ಕೈಯ್ಮುಗು, ಕೈಗಳೆ, ಕೈಮೀರು : ಭೀಮಾರ್ಜುನರ ಕಾಯ್ದು (ಸಿಟ್ಟು)
ಕೆಯ್ಮುಗೆ -ಪಂಪ
ಹರ್ಷ ಪುಲಕಂ ಕೈಗಣ್ಮೆ - ನಾಗಚಂದ್ರ
ಕೆಯ್‌ಗಳೆದ ಮನೆವಾಳ್ತೆ -ಸರ್ವಜ್ಞ
ನಿಮಗೆ ನಾವು ಕೈಮೀರಿ ನಡೆಯೆವು -ಕು.ವ್ಯಾಸ
ಕೈಯ್‌ಚಳಿ (ಸಾಕಾಗು, ದಣಿ) ಕೆಯ್‌ಚಳಿವಿನಂ ಇರಿದರ್ ಎರಡು ಬಲದೊಳಂ ಅದಟರ್ -ಪಂಪ
ಕೈಯ್‌ತೋರಿಸು : ತಾಯೆ! ಕೆಯ್‌ತೋರಿಸರು ನಿನ್ನಯ ರಾಯರೈವರು;
ಕೆಲದಲ್ಲಿದ್ದವರೇನು ಮಾಡುವರು? -ಕು.ವ್ಯಾಸ
ತೋರಿರ್ಪೆ ಅಸುರರ ಕೆಯ್‌ಗುಣವ - ಕು.ವ್ಯಾಸ
ಕೈಯ್ಯೆತ್ತು [ಸಮ್ಮತಿಸು. ಒಪ್ಪು] ; ಜಗಮೆಲ್ಲಂ ಕೆಯ್ಯೆತ್ತುವಿನಂ ಆಮಳ-
ಗುಣ ಸಂಪತ್ತಿಗೆ ಪೋಚಿಕಬ್ಬೆಯೆ ನೋಂತಳ್ -ಮಳವಳ್ಳಿ ಶಾಸನ
ಕೊರಳು (ಧ್ವನಿ, ರಾಗ): ಚೊಕ್ಕ ಚೊಕ್ಕನೆ ತಾನಗಳ ತಂದು ಕೊರಳ
ಜಕ್ಕುಲಿಸಿದರು ಜಾಣೆಯರು! -ರತ್ನಾಕರವರ್ಣಿ
ಮಂಗಳ ಪಾಠಕರಿರ್ವರುಂ ಒಂದೆ ಕೊರಲೊಳೆ....ಓದಿದರ್ -ಪಂಪ
ಕೊರಳಲ್ಲಿ ಕಟ್ಟು : ಪಳಿಯಂ ಕಟ್ಟಿದೆಯೊ ಭೂಪರನಿಬರ ಕೊರಲೊಳ್ -ಪಂಪ
ಗಂಟಲ ಹಿಚುಕು : ಬಂಟರಾಗಿ ಧರಣಿಯ ಗಂಟಲ ಹಿಚುಕುವರ ಸಂಗಬೇಡ -ಪುರಂದರದಾಸ
ಗಂಟಲ ಗಾಣ : ಖಳರ ಗಂಟಲಗಾಣ ಪುರಂದರ ವಿಠಲ,
ಗಂಟೆಲ್ಲ ತೀರ್ದ, ಮರುದಿನ, ನೆಂಟರ ಗಂಟಲಿಗೆ ಗಾಣ -ಪುರಂದರದಾಸ
ಜೀವಗಳ್ಳ (ಪುಕ್ಕ, ಹೇಡಿ): ವೀರರು ಈ ಪರಿ ಜೀವಗಳ್ಳರ ಪಥವ ಹಿಡಿವರೆ
(ಉತ್ತರ ಕುಮಾರ)? -ಕು. ವ್ಯಾಸ

ತಲೆ (i) [ಪೀಳಿಗೆ] : 'ತಲೆ ಸಂದ ಇಪ್ಪತ್ತೊಂದು ತಲೆವರೆಗಂ ನಮಗೆ ಪರಿಭವಂ -ಪಂಪ
(ii) [ವ್ಯಕ್ತಿ] : ಐವರು ಮಕ್ಕಳ ತಲೆಗಾದು ತೋರ್‍ಯೆ ಕಂದ! -ಕು. ವ್ಯಾಸ
ತಲೆಅರಿ [ಪೀಡಿಸು]: (ಅವನಂ) ನೆಲಕಿಕ್ಕಿ ಗಂಟಲಂ ಮೆಚ್ಚಿ ತಲೆಯನರಿವಾಗಳ್ -ಪಂಪ
ತಲೆವಾಗು : (i) (ಆದರ, ಭಕ್ತಿಯಿಂದ).
(ii) (ನಾಚಿ) : ಮಿಕ್ಕುದು ಉಂಡವರಂತೆ (ಕೀಳರು ದೀನರಂತೆ) ತಲೆಯು ಬಾಗಿ -ಪಂಪ
ತಲೆದೋರು (ಕಾಣಿಸಿಕೊಳ್ಳು) : ಪಾಂಡು ತನೂಜರ್ ತಲೆದೋರೆ -ಪಂಪ
ಶಶಿಮೌಳಿ ತಲೆದೋರಲಿ
ತಲೆಏಳು (ತಲೆನೋವು) : ಖಳರ ಕೊಪ್ಪರಿಸಿದರೆ ಸುಜನರ ತಲೆಗೆ ವೇದನೆಯೇನು? -ಕು. ವ್ಯಾಸ
ತಲೆಬಿರಿ : ನರನು ನರನೆಂದು ಅನವರತ ತಲೆಬಿರಿಯೆ ಹೊಗಳುವಿರಿ! -ಕು. ವ್ಯಾಸ
ತಲೆಗೆ ಏರು (i) (ಸಿಟ್ಟಿನಲ್ಲಿ): ಇದುವೆ ಪಿತ್ತದ ವಿಕಳತೆಯೊ? ಭಂಗಿ ತಲೆಗೇರಿದುದೊ? -ಕು. ವ್ಯಾಸ
(ii) (ಹಿಗ್ಗಿನಲ್ಲಿ) ಸಂಗೀತದಾ ಲಹರಿ ತಲೆಗೇರಿ ನಲಿದು; -ರತ್ನಾಕರವರ್ಣಿ
ತಲೆತುರಿಸಲು ಹೊತ್ತಿಲ್ಲದಿರು : ಅಂದಿನಿಂ ಬಲುಗೆಲಸವಲ್ಲದೆ ಇನಿಸು ತಲೆತುರಿಸಿವೊಡೆ
ಹೊತ್ತಂ ಕನಸಿನಲ್ಲಿಯುಂ ಕಾಣೆ -ಮಂಗರಸ
ತಲೆದೂಗು (i) (ಹಿಗ್ಗಿನಿಂದ) : ತಾನದನುಂಡು ತಲೆದೂಗಿದನು, ತೇಗಿದನು -ಕು. ವ್ಯಾಸ
(ii) (ಒಪ್ಪಿ) : (ಆ ಮಾತು) ಚಿತ್ತಕೆ ಸೊಗಸಿ ತಲೆದೂಗಿದನಾ ಖಚರ -ಕು. ವ್ಯಾಸ
(iii) (ದುಃಖದಿಂದ) ಕೇಳಿ ತಲೆದೂಗಿದನು... ಹುದಿದ ಭಾವದೆ ಲಾಲಿಸಿದನುಸುರಾರಿ
ತಲೆಕಾಯು : (ಕಾಪಾಡು) -ಕು. ವ್ಯಾಸ
ವೈರಿಯ ಭಯವ ತಪ್ಪಿಸಿ ತಲೆಯ ಕಾಯಲುಬಹುದು -ಕು.ವ್ಯಾಸ
ತಲೆದಂಡ : [ಪರೋಪಕಾರಕ್ಕಲ್ಲದೆ] ಎನ್ನ ಒಡಲಿಂಗೆ ಕುದಿವಿನಾದೊಡೆ ಎನ್ನ ತಲೆದಂಡ -ಬಸವಣ್ಣ
ತಲೆಕೆಳಗಾಗು [ಬೀಳು, ಚುತನಾಗು] : ತನ್ನ ಮರೆದು ದೇವರ ಕಂಡೆನೆಂಬ ಕಾರಣ ಹರಿಹರ
ಸುರಬ್ರಹ್ಮಾದಿಗಳು ತಲೆಕೆಳಗಾಗಿ ಹೋದರು -ಅಂಬಿಗರ ಚೌಡಯ್ಯ
ಅರಿವು ತಲೆಕೆಳಗಾಯ್ತು ಕೀಚಕನ -ಕು. ವ್ಯಾಸ
ತಲೆನಾಯಕರು : ಎರಡುಂ ಬಲದ ಕಡೆಯ ತಲೆಯ ನಾಯಕರ್
ಕೈಯ್ಗೊಂಡು [ಕಾದಿ] -ಪಂಪ
ತಲೆಮಟ್ಟು : ಅಂತು ಎರಡುಂ ಪಡೆಯ ನಾಯಕರ್ ಓರ್ವರೋರ್ವರೊಳ್
ತಲೆಮಟ್ಟು ಕಾದುವಾಗಳ್ -ಪಂಪ
ತಲೆಯೊತ್ತು [ಪ್ರಯತ್ನ ಮಾಡು, ಕಷ್ಟಪಡು]: ಇಂತು ತಲೆಯೊತ್ತುತ
ಮಹಾವಿಪಿನಾಂತರವ ತೊಳಲಿದೆವು; -ಕು. ವ್ಯಾಸ
ತಲೆವಾಲ ಕೆಡು : ತಲೆವಾಲಂಗೆಟ್ಟು ಜಗುಳ್ವ ಕವಿಯುಂ ಕವಿಯೆ? -ಮಧುರ
ತಲೆಯೊಳ್ಸೀರೆ (ಹೇಡಿತನದ ಲಕ್ಷಣ) : ತಲೆಯೊಳ್ಸೀರೆಯನಿಕ್ಕಿ ಕೆಮ್ಮನೆ ಇನಿತಂ ಪೂಣ್ದೆರ್ಪಂ -ಪಂಪ
ತೊಡೆಯ ತೊಟ್ಟಿಲ : ಭೀಷ್ಮರ್ ತೊಡೆಯ ತೊಟ್ಟಿಲಾಗೆ ಪಾಂಡವರಂ ನಡಪಿದರ್ -ಪಂಪ
ತೊಡೆಯಮೇಲೆ (ಮಗನಂತೆ ಜೋಪಾನ ಮಾಡಲಿಕ್ಕೆ): ನಿನ್ನಯ ತಾಯ್
ಸಾತ್ವತಿ, ನಿನ್ನ (ಶಿಶುಪಾಲನಂ) ತಂದು ಎನ್ನ ತೊಡೆಯ ಮೇಲೆ ಇಳಿಪುವುದುಂ -ಪಂಪ
ತೋಳುಮುರಿ : ಮತ್ಸ್ಯನ ತೋಳು ಮುರಿದುದೆ? ಕಟ್ಬಾಳು ಕೀಚಕ ಮಡಿದನೆ? -ಕು. ವ್ಯಾಸ
ತೋಳ್ವಲ : ಕುರುಬಲವೆಂಬುದು ಈ ಸುರನದೀಜನ ತೋಳ್ವಲವೆಂಬ
ವಜ್ರಪಂಜರದೊಳಗಿರ್ದು ಬಳ್ವಪುದು -ಪಂಪ

ನಡೆವ ಹೆಣ (ಜೀವನ್ಮೃತ): ನಡೆವೆಣನೇ ದರಿದ್ರನು -ಕು. ವ್ಯಾಸ
ನಾಲಗೆಆರು, ಒಣಗು : (ಯುದ್ಧದ ಭೀಕರತೆಯನ್ನು ನೆನೆದು) ಋಷಿಗಳ ನಾಲಗೆಗಳೊಣಗಿದುವು; - ಕು.ವ್ಯಾಸ
ನಾಲಗೆಯ ನೀರ (ಮಾತಾಳಿ, ಬಾಯ್ಬಂಟಿ) : ನಾಲಗೆಯ ವೀರರು ನೀವು -ಕು. ವ್ಯಾಸ
ನಾಲಗೆ ಶುದ್ಧವಿರು : ನಾಲಗೆ, ಕೈಪ (ಲಂಗೋಟಿ) ಶುದ್ಧವಿಲ್ಲದ ಯೋಗಿ ಮರಿನಾಯಿ ಬಾಲ! -ಸರ್ವಜ್ಞ
ನಿಟ್ಟೆಲವು ಮುರಿ (ಬೆನ್ನಹುರಿ): ಪಗೆವರ ನಿಟ್ಟೆಲವು ಮುರಿವೊಡೆ ಎನಗೆ ಪಟ್ಟಮಂ ಕಟ್ಟು -ಪಂಪ
ನೆತ್ತಿಗಣ್ಣು (ಸೊಕ್ಕು) : (ಸುಯೋಧನನಿಗೆ) ನೆತ್ತಿ ಕಣ್ಣಾಯ್ತು! -ಕು. ವ್ಯಾಸ
ನೆತ್ತರ ಕುದಿ (ಅತ್ಯಂತ ಕೋಪವುಂಟಾಗು); ನಿನ್ನ ಮೆಯ್ಯ ನೆತ್ತರ್ ಕುದಿದು, ಸಾವೆ! -ಪಂಪ
ನೊಸಲಕ್ಕೈ (ನಮಸ್ಕಾರ) : ಬಂದ ಕಾರ್ಯದ ಹೇಳಿಯೆನೆ ಮುನಿನಿಕರ
ಎದ್ದುದು ನೊಸಲಕೆಯ್ಗಳಲಿ! -ಕು. ವ್ಯಾಸ
ಬಲುಗೆಯ್ : ಓಡಿ ಬದುಕಿನ ಬಲುಗೆಯ್ಯ ಬಂಟನೀತ!
ಅಭಿಮನ್ಯುವು ಅರ್ಜುನನ ಕುವರವ; ಮಗುವಲ್ಲ; ಬಲುಗೆಯ್; -ಕು. ವ್ಯಾಸ
ಬರಿಕೆಯ್ : ತುರುಷ್ಕ ಸೈನ್ಯಮಂ ಬರಿಕೆಯದಂ -ಕೆ.ನ್ಯ.ವಿ
ಬಾಯಳಿ : ಕರ್ಣನೊಳಾದ ಶೋಕಾನಳನೊಳ್ ಬಾಯಳಿದು ಮೆಯ್ಮರೆದು -ಪಂಪ
ಬಾಯಾರು (i) ಜಗವನೆಲ್ಲವ ತಿರುಗಿ ಬಾಯಾರಿ ಬಂದೆ; ತೆಗೆ ನಿನ್ನ ಮುಸುಕು; -ಪುರಂದರದಾಸ
ಬಾರದುದ ಬಯಸಿ ಬಾಯಾರಬಹುದೆ? -ಮಂಗರಸ
(ii) ಕೋಟಿ ಚೆನ್ನಯರನ್ನು ಕಾಣುತ್ತಲೆ ಅವನ ಹೆಂಡತಿಯ ಬಾಯನೀರು ಒಣಗಿತು -ಪಂಜೆ
ಬಾಯಿ ಇರು : ಬಿನ್ನಹಕೆ ಬಾಯಿಲ್ಲವಯ್ಯ -ಪುರಂದರದಾಸ
ಬಾಯಿಗೆ ಬರು : ಕೈಗೆ ಬಂದುದು ಬಾಯಿಗೆ ಬರಲಿಲ್ಲ -ಗಾದೆ
ಬಾಯಮೇಲೆ ಬಡಿ : ಬಲ್ಲಿದ (ಬಲಿಷ್ಠ) ನೀನೆಂದೂ ಬಡವರ ಬಾಯ
ಮೇಲೆ ಬಡಿಯದಿರೆಚ್ಚರಿಕೆ! -ಕನಕ
ಬಾಯಿಗೆ ಬಂದಂತೆ : ಬಾಯ್ಗೆ ಬಂದನಿತುಮಂ ಅಮರಾರಿ ಬೆಯ್ಕೆ (ಕೃಷ್ಣಂ) ಸೈರಿಸಿ -ಪಂಪ
ವನಜಮುಖಿಯರ ಮುಂದೆ ಬಾಯ್ಗೆ ಬಂದಂತು ಸೊರಹಿದೆ -ಕು. ವ್ಯಾಸ
ಬಾಯಿತೆರೆ : (i) [ನಾಮ] [ತುಟಿ], ಪೊನ್ನಲತೆಯ ಮೈಯ್ಯುಮಂ, ನೀಲದ
ತಲೆನವಿರುಮಂ, ಪವಳದ ಬಾಯ್ದೆರೆಯುಮಂ, ಮುತ್ತಿನ ಪಲ್ಲುಮಂ -ಪಂಪ
(ii) ಧಾತು [ಸೋಜಿಗಗೊಳ್ಳು] ಮೇನಕೆ, ಸರಸ್ವತಿ ಬಾಯ್ದೆರೆವಂತೆ ಪಾಡಿದಳ್ -ಪಂಪ
(iii) [ಬೇಡು] ಎಲ್ಲ ದೈವವ ಬೇಡಿ ಹಲ್ಲು ಬಾಯ್ತೆರೆಯದೆ.... ಶಿವನ ಭಜಿಸಿದರೆ ಆತ
ಇಲ್ಲೆನ್ನಲರಿಯ - ಸರ್ವಜ್ಞ
ಬಾಯಿ ಬಡಿ : ಬಾಯ್ಬಡಿದೇನಹದು? ಕೈಗುಣವ ತೋರಿರೈ! -ಕು. ವ್ಯಾಸ
ಬಲ್ಲಿದ ನೀನೆಂದು ಬಡವರ ಬಾಯನು ಬಡಿಯದಿರೆಚ್ಚರಿಕೆ -ಪುರಂದರದಾಸ
ಬಾಯಿಬಿಡು (i) [ಗಳಹು] : ಮತಿಗೆಟ್ಟು ಬಾಯಿಬಿಡದಿರು. -ಪುರಂದರ
(ii) [ತಿರಿ, ಯಾಚಿಸು] : ಭ್ರಷ್ಟದೈವಕೆ ಬಾಯಿಬಿಟ್ಟಲ್ಲಿ ಫಲವಿಲ್ಲ -ಸರ್ವಜ್ಞ
(iii) [ಕಾಮಿಸು] : ಮುಂಡೆಯರ ಕಂಡು ಬಾಯ್ಬಿಡುವವ -ಸರ್ವಜ್ಞ
(iv) [ಬಳಲು] : ಗತಿವಿಹೀನನೆಗೆ ಕೃಷ್ಣ ನೀನೇ ಗತಿಯೆನುತ ಬಾಯ್ಬಿಡಲು -ಕು. ವ್ಯಾಸ
ಕೆಸರಲ್ಲಿ ಪಶುವಿನಂತೆ ನಾನು ದೆಸೆದೆಸೆ ಬಿದ್ದು ಬಾಯಿಬಿಡುತಿರ್ಪೆನಯ್ಯ -ಬಸವಣ್ಣ
(v) (ಬೆರಗಾಗು, ಆಶ್ಚರ್ಯ ಪಡು) : ಒಟ್ಟಿರ್ದಪೊನ್ನಬೆಟ್ಟಗಳ ಇತ್ತುದರ್ಕೆ
ಬಾಯ್ಬಿಟ್ಟರೆ ವಿಪ್ರಕೋಟಿ -ಪಂಪ

ಬಾಯಿಮಾಡು : ಅಶ್ವತ್ಥಾಮಂ ದಾಳಿಯನ್ನಿಟ್ಟು ಬಾಯ್ಮಾಡಿ; -ಪಂಪ
ಬಾಯಿಮಾತು : ಈ ಬಾಯ್ಮಾತಿನೊಳ್ ಏ ಒಂದಪುದು? ಅಣ್ಮೆ ಅಣ್ಮೆ ಕಾದುಕೊಳ್ಳಿ! -ಪಂಪ
ಬಾಯಿಲೆಕ್ಕ : ಜಂಗಮ ಜಂಗಮವೆಂದರೆ ಬಾಯಿಲೆಕ್ಕಕ್ಕೆ ಜಂಗಮವೆ -ಚೆನ್ನಬಸವಪುರಾಣ
ಬಾಯಲಿಮಣ್ಣು : ಬಣ್ಣದೊಡವೆಯ ಗಳಿಸಿ, ಉಣಲೊಲ್ಲದವನ ಬಾಯಲ್ಲಿ
ಮಣ್ಣು ಕಾಣಯ್ಯ -ಸರ್ವಜ್ಞ
ಹಾಡುವ ಬಾಯೊಳು ಮಣ್ಣ ಹೊಯ್ದೆ; -ರಾಘವಾಂಕ
ಬಾಯತಂಬುಲ ತಿಂದವನು (ಶಿಷ್ಯ, ಕಿರಿಯ, ಮಗ) : ಇಂದು ನಿನ್ನಯ
ಬಾಯತಂಬುಲ ತಿಂದವನು ನೋಡು -ಕು.ವ್ಯಾಸ
ಬಿಡಗೆಯ್ [ಉದಾರತೆ] : ಬಿಡಗೆಯ್‌ಚಾಗಿ ಕೃಷ್ಣನನೇನ ಹೇಳುವೆನು; -ಕು. ವ್ಯಾಸ
ಬೆನ್ನಟ್ಟು (ಓಡಿಸು): ಬೆನ್ನಟ್ಟಿದನಂತು ನಮ್ಮ ಹರಿಗಂ; ಗಂಡರ್ ಪೆರರ್ ಗಂಡರೆ? -ಪಂಪ
ಬೆನ್ನನೆ ಬರು (ಹಿಂಬಾಲಿಸು) : ಗೆಳೆಯ, ಬೆನ್ನನೆ ಬಂದಪೆಂ -ಪಂಪ
ಮಾಡಿದ ಪಾಪಪುಣ್ಯವು ನರರ ಬೆನ್ನಲಿ ಬಹುದು -ಕು. ವ್ಯಾಸ
ತಾನು ಮಾಡಿದ ಕರ್ಮ ತನ್ನಬೆನ್ನಲ್ಲಿ ಬಂದು ಸುಟ್ಟವಳು ಇವಳು. -ಬಿ. ಎಂ. ಶ್ರೀ
ಬೆಳ್ಳಾಗು (ಬಂಟ, ಬಲ್ಲಾಳು); ನೊಂದ ಸಿಂಗದ ಮೇಲೆ ಬೆರಗರಿಯದ ಬೊಳ್ಳಾಳ್ ಪಾಯ್ವಂತೆ -ಪಂಪ
ಬೆಂಬಲ : ಇನ್ನು ನಿನಗೆ ಆತಂ. ಆತಂಗೆ ನೀಂ ಬೆಂಬಲಂ -ಪಂಪ
ಬೆನ್ನಬಿಡು : (ಹಮ್ಮು) ಬೆನ್ನಬಿಡದಿರಲು ನರಕದ ಕುಂಭದೊಳಿಹನು (ಮನುಜ) -ಸರ್ವಜ್ಞ
ಮನಮುಟ್ಟ ಮಾಡು (ಮನಃಪೂರ್ವಕವಾಗಿ) : ಮನಮುಟ್ಟಿ ಶಿವನ ನೆನೆಯದವನು
ಬೆಟ್ಟದ ಕೊನೆಯಲ್ಲಿದ್ದೇನು? -ಸರ್ವಜ್ಞ
ಮನಸಿಗೆ ಬರು (ಒಪ್ಪಿಗೆಯಾಗು): ತೆಂಕಣನಾಡ ಮರೆಯಲ್ಕೆ ಎನ್ನ ಮನಂ ಬರ್ಕುಮೆ? -ಪಂಪ
ಮನಸು ಮುಳುಗು (ತನ್ಮಯವಾಗು): ಮನಮುಳುಗಿ ಶಿತಿಕಂಠನಲಿ
ಮಗುಳೆದ್ದು ಶಸ್ತ್ರವ ಬೇಡಿದನು (ಪಾರ್ಥ). -ಕು.ವ್ಯಾಸ
ಮಾತಿಗೆ ಬಾರದ್ದು (ನಿರುಪಯುಕ್ತ)
ಮಾತಿಗೆ ಬಾರದ ವಸ್ತು ಬಹಳಿದ್ದರೇನು।
ಹೋತಿನ ಕೊರಳೊಳಗೆ ಮೊಲೆಯಿದ್ದರೇನು।। -ಪುರಂದರ
ಮಾತಿಲ್ಲದಿರು (ಅವಕಾಶವಿಲ್ಲದಿರು) : ಅಲ್ಲಿ ತಮದ ಮಾತಿಲ್ಲ -ಅಭಿನವಪಂಪ
ಮೀಸೆಹೊರು : ನಿನ್ನಂ ತಳವೆಳಗಾಗೆ ಕಟ್ಟಿಸದ ಮಾಣ್ದೊಡೆ ಮೀಸೆವೊತ್ತೆನೆ? -ಪಂಪ
ಮೀಸೆಗಳಂ ಪೊತ್ತಿರ್ದುಂ ಸಾಸಂಗೆಟ್ಟು ಅಳ್ಕಿ ಬಳ್ಕುವ ಪರದಂ -ನಯಸೇನ
ಮುಂದಲೆ : ಕೃಷ್ಣೆಯ ಮುಂದಲೆಯಂ ಪಿಡಿದೆಳೆವಲ್ಲಿಯೆ ತಲೆವಿಡಿದರ್
ನಮ್ಮ ವೀರಮಂ ಕೌರವರುಂ -ಪಂಪ
ಪಾಪಿ ಕೌರವನು ಅಂದು ಮುಂದಲೆಯ ಪಿಡಿದ -ಕು.ವ್ಯಾಸ
ಮುಂಡಾಡು (ಪ್ರೀತಿಸು) : ಕೂಡೆ ಮೈದಡವಿದನು ಮಿಗೆ ಮುಂಡಾಡಿದನು -ಕು. ವ್ಯಾಸ
ಮೂಗಿನ ಮೇಲೆ ಬೆರಳು (ಚಿಂತೆ) : ಮೂಗಿನಲಿ ಬೆರಳಿಟ್ಟರಸನ ತಲೆದೂಗಿದನು;
ಸುಯ್ದನು ಬೆಯ್ದು ದುಷ್ಕೃತವ -ಕು. ವ್ಯಾಸ
ಮೂಗರಿ, ಮೂಗುಕೊಯ್ (ಮಾನಭಂಗ ಮಾಡು) : (ಅವರ) ಮೂಗನರಿದು -ಚಿ. ದೇ.ವಿ.
ಬಾಗಿಸಿದ ಬಿಲ್ಲಿನೊಳು ರಾಯರ ಮೂಗು ಕೊಯ್ದನು -ಕು. ವ್ಯಾಸ
ಮೂಗುಳ್ಳುವ (ಶ್ರೇಷ್ಠ) ಈ ನಪುಂಸಕರೊಡನೆ ಹುಟ್ಟಿದ ನಾನು ಮೂಗುಳ್ಳವನೆ ಮಾನಿನಿ! -ಕು. ವ್ಯಾಸ

ಮೂಗುತುರಿಸು : (ಕರ್ಣ, ಶಲ್ಯ) ಇವರಿರ್ವರ್ಗಂ ಒರ್ವರೋರ್ವರೊಳ್
ಮೂಗುತುರಿಸಲಾಗದ ಕಡ್ಡಂ : ಅವರ್ಗೆ ಎಂದುಂ ಒಡಂಬಡು ಆಗದು; -ಪಂಪ
ಮೂಗು (ಇಕ್ಕಟ್ಟಿನ, ಮಹತ್ವದ ಸ್ಥಾನ) : ಮೂಗು ಹಿಡಿದರೆ ಬಾಯಿ ತೆರೆವುದು -ಗಾದೆ
ಮೂಗು ಮೇಲೇರಿಸು (ಸೊಕ್ಕು, ಗರ್ವಿಷ್ಠನಾಗು) : ಮೂಗಂ ಮೇಲೆತ್ತಿ ಪೊಟ್ಟೆ ಏರಿಸಿ ಮರೆವರ್ (ಗ್ರಾಂಪರ್) -ನಯಸೇನ
ಬಳಿಕ ಇನ್ನಾವ ಮೂಗಂ ಮುಂದಿಟ್ಟು ಮದುವೆಯ ಮಾತನಾಡಿದೆಪೆವು? -ಹರಿಹರ
ಮೂಗು ಇಳಿಸು (ಗರ್ವಭಂಗಮಾಡು) : ದುಷ್ಕವಿಯ ಗರ್ವದ ಮೂಗನಿಳುಹದಿಂ -ರಾಘವಾಂಕ
ಮೂಗು ಒತ್ತೆ ಇಡು : ತಲೆಯಂ ಮೂಗುಮಂ ಒತ್ತೆಯಿಟ್ಟು (ಬೀಳಲ್) ಅವರ್ ಏನ್ ಗಾಂಪರೆ?
ಮೆಯ್‌ಆನು : ಮೈಒಡ್ಡು, ಮೈಗೂಡು:
(i) ವಿನತಾಪುತ್ರನ ವಜ್ರತುಂಡ ಹತಿಗಂ ಮೆಯ್ಯಾಂತು - ಪಂಪ
ಈ ನಿಯಮಕ್ಕೆಂತು ಮೆಯ್ಯೊಡ್ಡಿದೆ? - ಪಂಪ
(ii) ವೈಯೊಡ್ಡಿ ಸಂಮುಖದೊಳು ನಿಲ್ಲದೆಲ್ಲರ। ಮೈಯ ಮರೆಗೆ ಸಾರುವವಳಾ।। -ರತ್ನಾಕರವರ್ಣಿ
ಮೆಯ್ಯಿಕ್ಕು (i) (ನಮಸ್ಕರಿಸು): ಮುನಿಯು ಮೆಯ್ಯಿಕ್ಕಿದನು ಶ್ರೀಹರಿಗೆ -ಕು. ವ್ಯಾಸ
(ii) (ಬೀಳು) ಬಳಲಿದ... ಅನಿಲಸುತನು ಅವರೊಡನೆ ಮೆಯ್ಯಿಕ್ಕಿದನು ಕಳಚಿದ
ನೀಲಗಿರಿಯಂತೆ: -ಕು.ವ್ಯಾಸ
ಮೆಯ್ ಉರಿ: ಸುಯೋಧನಂಗೆ ರಣದೊಳ್ ಎಂತುಟವಸ್ಥೆಯೊ?
ಉರಿದಪುದೆನ್ನೆಯ್ ; -ಪಂಪ
ಮೆಯ್‌ಗರೆ (ಅಡಗು) : ಪಚ್ಚಲೆವಾರ್ದು, ಮೆಯ್‌ಗರೆದು ಕೊಂಬಂ
ಪೊರ್ದಿಯುಂ..... ನಾಣ್ಗುಂದಿ ನಿಂದಿಪರ್; -ಆಂಡಯ್ಯ
ಮೆಯ್‌ಗಳ್ಳ : ನೀ ಮೈಗಳ್ಳನಾಗಲು ಬೇಡ ಗುರುತಾಯ್ತೆಂದೆಗಳ ನುಡಿಗೆ
ಮೆಯ್ಗಲಿ : ತಲ ನೆಲದೊಳ್ ಉರುಳ್ದೊಡಂ, ಮೆಯ್ಗಲಿ ಒರ್ವಂ....
ಅಗ್ಗಲಿಸಿದ ಮುಳಿಸಿಂ (ಕಾದಿದಂ) -ಪಂಪ
ಮೆಯ್‌ಗೂಡು : ಮೈಗೂಡದಿರು ಪರವಧುವಿನಲಿ -ಕು. ವ್ಯಾಸ
ಮೆಯ್‌ಗೊಳ್ಳು (ಅವತರಿಸು): ಧರಣಿಯಲಿ ಮೈಗೊಂಡು ದೈತ್ಯರನು ಒರಸಿದನು -ಕು. ವ್ಯಾಸ
ಮೆಯ್‌ದೋರು : ಹಿಂದೆ ಸೀರೆಯ ಸೆಳೆಯಲಕಟ! ನೀ ಮೈದೋರಿದ್ಯೆ ತನಗೆ -ಕು. ವ್ಯಾಸ
ಮೆಯ್‌ದಡವು : ಹರಿಯೊಲಿದು ಮೈದಡವಿ (ದನು). - ಕು. ವ್ಯಾಸ
ಮೆಯ್‌ಮರೆ : ಭಾಗ್ಯ ಯೌವನಗಳ ಮಬ್ಬಿನಲಿ ಮೈಮರೆತವಗೆ ಲಭ್ಯವಾಗದು ಹರಿಪದಾಬ್ಜ! -ಪುರಂದರದಾಸ
ಮೆಯ್‌ಮುರಿ : (i) (ಬೇಸರವನ್ನು ಬಿಟ್ಟು) ಮಾದ್ರೀಸುತರು ಮೈಮುರಿದು; ಹರಿಯ ನೆನೆದರು -ಕು. ವ್ಯಾಸ
(ii) (ದುಡಿ) ತಾವು ಮೈಮುರಿದು ಗಳಿಸಿದ ಸಂಗತಿಗಳನ್ನು ಜೋಡಿಸಿ ಕೊಂಡು...
ವಿಸ್ತಾರವಾದ ಗ್ರಂಥಗಳನ್ನು ಬರೆದರು - ಪ್ರಬುದ್ಧ ಕರ್ನಾಟಕ
ಮೆಯ್ವೆರ್ಚು (ಹಿಗ್ಗು) : ಮಿಗೆ ನೆಚ್ಚಿ ಮೆಯ್ವೆರ್ಚಿ ಕೆಯ್ಯ ಬೆರಳಂ ಕರ್ಚಿ -ಹರಿಹರ
ಮೇಲುಗೆಯ್ : ಈಗಳು ಮೇಲುಗೆಯ್ಯ ನೀನಾದೆ -ಕು. ವ್ಯಾಸ
ಮೇಲುನೋಟ (ವಿಚಾರಣೆ, ನಿರೀಕ್ಷಣೆ): ಭೀಷ್ಮನು ಕೈಕೊಂಡನಲ್ಲಿಯ
(ಯಜ್ಞದ ವ್ಯವಸ್ಥೆಯ) ಮೇಲುನೋಟವನು. -ಕು. ವ್ಯಾಸ
ಮೇಲ ಮೂಗು : ಬಾಲವೃದ್ಧರ, ವಿಪ್ರರನು ನೀಂ! ಕಾಳಗದೊಳೋಡಿಸಿದೆನೆಂದೀ
ಮೇಲುಮೂಗಿನೊಳಿರಲಿದೇನೈ ಪಾರ್ಥ ಮರುಳಾದೈ।। -ಕು. ವ್ಯಾಸ

ಮೇಗರೆಯ ಮಾತು (ಮೇಲು ತೋರಿಕೆಯ ಮಾತು) ; ಮೇಗರೆಯ
ಮಾತಲ್ಲ; ಬಾಲಕನ ಆಗುಹೋಗು ಅದು ನಿನ್ನ ಕೈಯಲಿ -ಕು. ವ್ಯಾಸ
ಮೊಗತಿರುವು (ತಿರಸ್ಕರಿಸು) : ಪರಧನ, ಪರಸತಿಗೆ ಅಳುಪಲು ಸಿರಿ
ಮೊಗದಿರುಹುವಳೆಚ್ಚರಿಕೆ! -ಪುರಂದರದಾಸ
ಮೊಗಬಾಡು : (ಅರ್ಜುನನ ತಪೋಭಂಗ ಮಾಡುವುದಕ್ಕಾಗದೆ) ಕಾಮ-
ದೇವಂ ಮೊಗಂಬಾಡಿ ಪೋಗಿ; -ಪಂಪ
ಮೋರೆ: ಸುಯೋಧನನ ಮಕ್ಕಳ ಸಾವಂ ಕಂಡು ತಮ್ಮಣ್ಣನ ಮೊಗಮಂ
ಆವ ಮೊಗದೊಳ್ ನೋಳ್ಪೆನೆಂದು ದುಃಶಾಸನಂ (ಮಿಡುಕಿ) -ಪಂಪ
ಇನ್ನು ಆವ ಮೋರೆಯಂ ಕೊಂಡು ಬಂದು ಮದುವೆಯಾದಪೆನ್ -ಹರಿಹರ
ದೇವ! ಆವ ಮೊಗದೊಳು ನಿನ್ನ ಒತ್ತಿಗೆ ಬಹೆವು? -ರತ್ನಾಕರವರ್ಣಿ
ಕಾಮದೇವಂ ಇಂದ್ರನ ಮೊಗಮಂ ನೋಡಲ್ ನಾಣ್ಚಿ -ಪಂಪ
ಮೋರೆಕೆಡಿಸು (ಅಪಮಾನ ಮಾಡು, ಸೋಲಿಸು); ಪಡಿದಳವಾಂತು ಬಂದ
ರಾಯನಂ ಮೊಗಂಗಿಡಿಸಿ. -ಚಿ. ದೇ. ವಿ.
ಮೋರೆಮುರಿ (ಬೇಸರ, ತಿರಸ್ಕಾರ, ತೋರು); ಅಣಂಮೊಗಂ ಮುರಿಯದೆ -ಪಂಪ
ಮೋರೆಗೆ ಮಂಗಳಾರತಿ : ಇಂತು ಮೋರೆಗೆ ಮಂಗಳಾರತಿಯಾಗಿ ಹಿಂದೆರಳಿದ
ತನ್ನ ಹರಿಕಾರರನ್ನು ಕಂಡು.....ಅತ್ಯಂತ ಕೋಪಾಟೋಪದಿಂದ; -ಪಂಪ
ಹಲ್ಲುಮುರಿ : (ದುರ್ಯೋಧನಂ) ಪಾತಾಳಮಂ ಪೊಕ್ಕಡೆ ಶೇಷಾಹಿಯ ಪಲ್ಗಳಂ ಮುರಿದಪೆಂ -ರನ್ನ
ಹಲ್ಲುತಿನ್ನು : ಅಂತು ಎಲ್ಲಮಂ ತಿಂದು ತಣಿಯದೆ ಪಲ್ಲಂ ತಿಂಬಂ; -ಪಂಪ
ದ್ರೌಪದಿಯಂ ಹಸುವನೆಳೆವಂತೆ ಎಳೆವಾಗ ಅದಂ ಕಂಡು ಅಂತೆ ಪಲ್ಗರ್ಚಿ ಸೈರಿಸಿದೆಂ. -ಪಂಪ
ಹಲ್ಲುಕಿರಿ : ಎನಗೆ ನೀ ಹಲುಗಿರಿಯೆ ಬಿಡುವೆನೆ? ಕಾದು ನಡೆಯೆಂದ (ಅರ್ಜುನನು). -ಕು. ವ್ಯಾಸ
ಕಾಮುಕರ್, ಅಂತಕನೊಯ್ವಕಾಲದೊಳ್ ಮರ್ಕಟನಂತೆ ಪಲ್ಗಿರಿವರ್ -ರತ್ನಾಕರವರ್ಣಿ
ಹುಬ್ಬು ಹಾರಿಸು : ನೃಪಸುತರಿಗೆ ಹುಬ್ಬು ಹಾರಿಸುವಳು ನಸುನಗುತ -ರತ್ನಾಕರವರ್ಣಿ
ಹಣೆಬರೆಹ : ದೆಸೆಗೆಟ್ಟು ನಾಡದೈವಂಗಳಿಗೆ ಹಲುಬಿದಡೆ। ನೊಸಲ ಬರೆಹವ ತೊಳೆದು ತಿದ್ದಲಳವೆ? -ಕನಕ
ಹೆಗಲುಕೊಡು (ಹೊರು, ಸಹಿಸು) : ಭಂಗಕೆ ಹೆಗಲಕೊಟ್ಟಾನುವ
ವಿರೋಧಿಗಳುಂಟೆ ಲೋಕದಲಿ? -ಕುಮಾರವ್ಯಾಸ

ಹೊಟ್ಟೆಮಾತು (ಹುಸಿನುಡಿ) : ಪೊಟ್ಟೆನುಡಿಗಳಂತಿರಲಿ, ನಾರದ -ಕನಕದಾಸ
ಹೊಟ್ಟೆ ನೋವು (i) (ಅಸೂಯೆ): ಕೌರವ ಕುಲವ ಕಟ್ಟಿದರೇನು ಜಠರದ ಶೂಲೆ ನಿನಗೆಂದ
(ii) (ಮಾನಸಿಕ ವ್ಯಥೆ) : ಅತ್ತ ಸುಭದ್ರೆಗೆ [ಅರ್ಜುನನ ವಿರಹದಿಂ] ಒಡಲುರಿಯುತ್ತುಮಿರೆ -ಪಂಪ

ಇನ್ನುಳಿದ ಹಲವು

ಕುನ್ನಿ : ಕೀಚಕ ಕುನ್ನಿ ಒದೆದನು -ಕು. ವ್ಯಾಸ
ಕರು : ಪದಿನಾಲ್ಕು ವರುಷದ ಮಗನ್ನೆ! ನಿನ್ನಂ ಒರ್ವನಂ ಪಗೆವಡೆಯ ಒಡ್ಡುಗಳಂ
ಒಡೆಯಲ್ಕೆ ಪೇಳ್ದೆರ್ದೆ ಧಗಮೆನೆ ಸೈರಿಸುವ ಉಪಾಯಂ ಆವುದು ಕರುವೆ? -ಪಂಪ
ನಾಯಿತನ (ಕಾಮುಕತನ, ಬೆದೆಗುದಿ): ನಾಯಿತನ ಬೇಡೆಲವೊ ಕೀಚಕ -ಕು. ವ್ಯಾಸ

ನಾಯಕನರಕ : ನಾಯಕ ನರಕಂ ಈಕೆಗೆ ಒಚ್ಚತಮಾಯ್ತೆ? -ಜನ್ನ

ನಾಯಿ (i) (ಉಪಜೀವನಕ್ಕಾಗಿ ಅನುಸರಿಸುವ ಹೀನಪ್ರಾಣಿ) :
ಇವರು ಅರಮನೆಯ ನಾಯ್ಗಳು; ನಾವು ದೇಸಿಕರು -ಕು. ವ್ಯಾಸ

(ii) [ಹೆಣ್ಣಿನ ನಾತಕ್ಕೆ ಹಿಂಬಾಲಿಸುವ ಕಾಮುಕ ಪ್ರಾಣಿ]; ನಾಯಿತನ ಬೇಡೆಲವೊ ಕೀಚಕ! -ಕು. ವ್ಯಾಸ

ನೊರಜು (ಕ್ಷುಲ್ಲಕ ಪ್ರಾಣಿ): ಮಿಕ್ಕನ ನೊರಜುಗಳ ಪಾಡೇನು?

ನುಸಿ : ದೀವಿಜಪ್ರಸರಮಿಗೆ ನಡುಗುತ್ತಲಿಪ್ಪುದು; ನುಸಿಗಳಹ ಮಾನವರ ಪಾಡೇನು? -ಕು. ವ್ಯಾಸ

ಕುರಿ (ಮಂದ, ಬುದ್ಧಿಹೀನ ಪ್ರಾಣಿ): ನರಗುರಿಯೆ, ನಡೆ ಕಾಳೆಗಕೆನುತ ಹಿಡಿದೆಳೆದನುತ್ತರನ! -ಕು.ವ್ಯಾಸ

ಹಂದೆ [ಹೇಡಿ, ಪುಕ್ಕ, ಪ್ರಾಣಿ]: ಭಯವನರಿಯದ ಕಲಿಯುಂ ಚಾಗಿಯುಂ ಎನಿಸದೆ,
ನಾಡೆ ಲೋಭಿಯುಂ ಪಂದೆಯುಂ ಆಗಿ ಬಾಳ್ವುದೆ? -ಪಂಪ

ಕೊಡಗ [ಕಿಡಿಗೇಡಿ, ಅಲ್ಲದ ಕೆಲಸದಲ್ಲಿ ಆಸಕ್ತ ಪ್ರಾಣಿ] : ಕೋತಿಯಂತೆ ಕುಣಿಯಲು ಬೇಡ:
ನೀತಿಮಾರ್ಗವ ಹಿಡಿಯೊ ಮನುಜ -ದಾಸರು

ಡೊಂಬರ ಕೋಡಗ [ಕಲಿಸಿದಂತೆ ಕುಣಿಯುವುದು] : ದುರ್ಯೋಧನಂ ಡೊಂಬರ
ಕೊಡಗದಂತೆ (ಜೂಜು) ಆಡಿ, ಧರ್ಮನಂ ಗೆಲ್ದಾಗಳ್ -ಪಂಪ

ಬೇರ್ವರಿ [ಸ್ಥಿರವಾಗು, ನೆಲಸು]: (ಕೃಷ್ಣ) ಮಾಡಿದ ಮಂತ್ರ ಮನದೊಳು ನಟ್ಟು ಬೇರ್ವರಿಯೆ -ಕು. ವ್ಯಾಸ

ಬೇರಿಗೆ ಬೆನ್ನೀರು ಹೊಯ್ಯು [ಸಮೂಲ ನಾಶಮಾಡು]: ನಿನ್ನ ಪಗೆವಡೆಯ
ಬೇರೊಳ್ ಬೆನ್ನೀರಂ ಪೊಯ್ದು ನಿನಗೆ ಮಾಳ್ಪೆ ಧರೆಯಂ -ಪಂಪ

ಗಿಳಿಓದು [ಅರ್ಥ ತಿಳಿಯದೆ] : ಚಿತ್ತವಿಟ್ಟು ಓದದವ ಓದು ಗಿಳಿಯೋದು -ಸೊಡ್ಡಳ ಬಾಚರಸ

ಕಾಗೆ : ಕಾಗೆಯೊಲ್ ಇಂತು ಬಿಲ್ಗೆ ಅಂಜದಿರ್ -ಪಂಪ

ನರಿ [ಠಕ್ಕು ಪ್ರಾಣಿ]: ಬರೆವಾತ ನಾಡನರಿ - ಸರ್ವಜ್ಞ

ಜಿಗುಳೆ [ನೆತ್ತರ ಹೀರುವ, ಸತ್ವಗುಂದಿಸುವ ಪ್ರಾಣಿ]: ರಿಪುಬಲದ ನೆತ್ತರ
ಕಡಲೊಳಗಣ ಜಿಗುಳೆ ಬಳೆವ ತೆರದೊಳ್ ಬಳೆದಂ [ಅರಿಗಂ]. -ಪಂಪ

ಬಸವಿ [ಬಸವಿ-ಗೂಳಿ ಬಿಟ್ಟ ಆವಿನಂತಿರುವ ಹೆಣ್ಣು] ಬಸಿವಿಯರೊಳು..... ಕೆಳಗೊಳ್ಳದೆ.... -ಹೊನ್ನಮ್ಮ

ಬಸವ [ಹೆಡ್ಡ] : ನಿನಗೆ ಮಾದೇವರ ಮುಂತಣಾತ ನೆನಲಲ್ಲದೆ ಪೇಳ್ ಪೆರತೇನನೆಂಬುದೊ -ಪಂಪ

ಕೋಡು ಮೂಡು (ವಿಶೇಷವಾಗು): ಕೋಟಲೆಗೆ ಕೋಡು ಮೂಡಿದ ತೆರದಿಂ; -ಜನ್ನ

ಕೋಡು ಇರು [ವೈಶಿಷ್ಟ್ಯ, ವೈಚಿತ್ರ್ಯವಿರು]: ತಪಕೆ ಬೇರೆ ಕೋಡೆರಡುಂ ಒಳವೆ?

ಇನ್ನುಳಿದ ಬಗೆಯಿಂದ ಬಂದುವು

ವಜ್ರ ಪಂಜರ (ಅಭೇದ್ಯ ರಕ್ಷಣೆ): ಕೌರವ ಪಡೆಗೆ ಭಾರಿಯ ವಜ್ರಪಂಜರನಾದ ಭೀಷ್ಮ -ಕು.ವ್ಯಾಸ

ಬೆಲ್ಲವಾಗಿರು (ಪ್ರಿಯವಾಗು): ಬೆಲ್ಲವಾಗಿರಬೇಕು ಸಕಲ ಸಜ್ಜನರೊಳಗೆ; - ಕು. ವ್ಯಾಸ

ಬಾಯಬೆಲ್ಲ (ಮುದ್ದು, ಪ್ರೀತಿ): ನೀ ಮುದ್ದುವೆಂಗಳ ಮೃದುಬಾಯಬೆಲ್ಲವಾಗದೆ -ಕನಕದಾಸ

ಬೆಲ್ಲಮಾತು (ಸವಿನುಡಿ) : ನೇಲ್ದ ನರೆಗಡ್ಡದ ದೊಡ್ಡರ ಬೆಲ್ಲವಾತುಗಳ್ -ಮಲ್ಲಿನಾಥ

ಹುಗ್ಗಿಗರು (ಭೋಜನ ಪ್ರಿಯರು): ಹುಗ್ಗಿಗರು ಹುರಿಗೊಂಡ ಗೆಲೆದು
ಇನ್ನು ಇಳೆಯ ಕೊಡಿಸುವರೆ (ನಿನಗೆ)? -ಕು. ವ್ಯಾಸ

ಉಂಗುರವಿಡು (ಮದುವೆಯ ಮಾತುಕೊಡು): [ಭೀಷ್ಮರು ತನ್ನನ್ನು ಮದುವೆಯಾಗಲು

ಒಪ್ಪದ್ದರಿಂದ] ತನಗೆ ಕಿರಿಯಂದು ಉಂಗುರವಿಟ್ಟ ಸಾಲ್ವನೆಂಬ ಅರಸರಲ್ಲಿಗೆ ಪೋಗಿ
ನೀನೆನಂ ಕೆಯ್ಕೊಳವೇಳ್ಕುಂ ಎಂದೊಡೆ -ಪಂಪ

ದಾರಿಬೇಡ (ಸಂಬಂಧವೇ ಬೇಡ) : ಅರೆಭಕ್ತರಾದವರ ನೆರೆಬೇಡ; ಹೊರೆಬೇಡ;
ದಾರಿಸಂಗ ಬೇಡ; -ಬಸವಣ್ಣ

ಜಟ್ಟ, ಜಟ್ಟಿಗ (ವೀರ) : ನೀನೆ ಜಟ್ಟಿಗನ್ಯೆ: ಕೈಕೊಳ್ದರಾಭಾರಮಂ -ಪಂಪ

ಉಗುಳು ದಾಟು (ಮಾತು ಮೀರು) : ಕೆಲರು, ಮಾತೆಯರಿಕ್ಕಿದ ಉಗುಳ ದಾಟದಿಹರು -ಕನಕದಾಸ

ಗೆರೆದಾಟು (ಮೇರೆ ಮೀರು): ಅಣ್ಣನಾಜ್ಞೆಯ ಗೆರೆಯ ದಾಂಟಿದೆನು ಹೊಂಗೆಂದನಾ ಭೀಮ -ಕು.ವ್ಯಾಸ

ಆಟಿಕೆ ಆಗು (ಲೀಲೆ, ಸಹಜ ಆಗು) : ವೈರಿಗಳನ್ನು ಗೆಲ್ಲುವುದು ಆಟಿಕೆಯಾಯ್ತು; -ಕು. ವ್ಯಾಸ

ಬಲೆಹಾಕು : ಮುನಿ ಹಾಕಿದನಲಾ ಬಲೆಯನು -ಕು. ವ್ಯಾಸ

ಹಾವಾಡಿಗ (ಮಾಟಗಾರ) : (ಈತ) ಗಡ ಹಾವಾಡಿಗನು; -ಕು. ವ್ಯಾಸ

ಔಷಧಕ್ಕೆ ಇಲ್ಲ (ಬೇಕಿದ್ದರೂ ಇಲ್ಲದಾಗಿರು): ತಲೆಯಲ್ಲಿ ಕರಿದು ಕೂಂದಲುಗಳೌಷಧಿಗಿಲ್ಲ। - ಕನಕ

ಬಾಗಿಲುಕಾಯು (ಆಳಾಗಿರು) : ಶಿವ ನಿನ್ನ, ಬಾಗಿಲ ಕಾದಿಹನು; ಕಮಲ
ಸಂಭವ ನಿನ್ನ ಮನೆಯ ಬ್ರಾಹ್ಮಣನು. -ಕನಕದಾಸ

ಅಡಕೆ (ತೀರಕಡಿಮೆ ಕಾಸು) : ಒಡಮೆಯಂ ಅರ್ಥಿಗಿತ್ತೆಂ; ಅವನೀತಳುಂ ಗುರುಗಿತ್ತೆಂ;
ಈಗಳೊಂದು ಅಡಕೆಯುಂ ಕೆಯ್ಯೊಳಿಲ್ಲ; -ಪಂಪ
ಅವನು ಗೋಟಡಕೆಯರ್ಧಕೆ ಸಾಟಿಕಂಡಾ! -ರತ್ನಾಕರವರ್ಣಿ
ವರಧರ್ಮಕ್ಕೆ ಒಂದಡಕೆಯಂ ಈವರೊಳರೆ? ಪರಿತಂದು
ಬಂದಿಕಾರರ್ ಕೊರಲಂ ಪಿಡಿದೊತ್ತೆ ಬೇಡಿದರ್ಥಮಂ ಈವರ್ -ನಯಸೇನ

ಬಣ್ಣವೇರು : ಸತಿಯರು ಈ ಕೃತಿಯನು ಆಲಿಸಿದರೆ ಪತಿಭಕ್ತಿ
ಬಣ್ಣವೇರುವುದು -ಹೊನ್ನಮ್ಮ

ಬಣ್ಣಮಾತು (ಸವಿಮಾತು): ಬಲಮಗ್ಗೆಯ್ಯದೆ ಬಾಲೆಯ ಬಣ್ಣವತಿಂದೊಲಿಸಿ ಬರಿಸುವುದು; -ಹೊನ್ನಮ್ಮ

ಬಣ್ಣಗುಂದು : ಜೀವಿತೇಶ್ವರನ ವಿರಹದೊಳು ಬಣ್ಣಗುಂದುವಳು -ಹೊನ್ನಮ್ಮ

ಆಡಿಕೊಳ್ಳು (ನಿಂದಿಸು) : ಆಡಹೋದಲ್ಲೆ ಮಕ್ಕಳು ।
ಆಡಿಕೊಂಬುವರು ನೋಡಮ್ಮ॥ -ಪುರಂದರದಾಸ

ಜೀವನ್ನು : ಜೀ ಎಂಬರ್; ಕುಡು, ದಯೆಗೆಯ್ಯಿ ಎಂಬರ್। -ಪಂಪ

ವೀಳೆಯ ಕೊಡು (ಸಮ್ಮತಿಸು, ಒಪ್ಪು) : ರಾಯನ ಅರಸಿಯ ನಿನ್ನ
ತೊತ್ತುಗಳ ಲಾಯದಲಿ ತೋರುವೆವು; ತಾ, ತಾ ವೀಳೆಯವ -ಕು. ವ್ಯಾಸ
ರಣಕೆ ವೀಳೆಯವನಿತ್ತನು -ಕು.ವ್ಯಾಸ

ಮೀಸಲು : ಈಸು ದೈತ್ಯರು ನಿಮ್ಮ ಕೈಯಲ್ಲಿ ಘಾಸಿಯಾದರು;
ಮಗಧನೊಬ್ಬನು ಮೀಸಲುಳಿದನು ಗಡ! -ಕು. ವ್ಯಾಸ

ಉಣ್ಣು : (ಅನುಭವಿಸು): (ದುರ್ಯೋಧನನ ದುಷ್ಕೃತ್ಯಂಗಳಂ)
ಕಂಡುಂ ಉಂಡುಂ ಎಮಗೆ ಆತಂಗಳೊಳ್ ಪಾಳಿಯೆ? -ಪಂಪ
ಉಂಡು ತೀರಿಸಬೇಕು, ತಾ ಮುಂ।
ಕೊಂಡು ಮಾಡಿದ ಪುಣ್ಯಪಾಪ (ವ)॥ -ಕು. ವ್ಯಾಸ

ಉಪ್ಪು, ಜೋಳ (ಉಪಕಾರ): ಆಳ್ದಂ ಗೆಯ್ದು ಸತ್ಕೃತಮುಮಂ ಪಿಂತಿಕ್ಕಿ
ಜೋಳಕ್ಕೆ ತಪ್ಪಿಯುಂ ಇಂ ಬಾಳ್ವುದೆ? -ಪಂಪ

ಬದನೆಕಾಯಿ ಆಗು (ಹಾಳಾಗು) : ಸಕಲ ಲಕ್ಷಣಕಾಗಿ ಬಿರುಸು
ಮಾಡಿದರೆ ಪುಸ್ತಕದ ಬದನೆಕಾಯಿಹುದು -ರತ್ನಾಕರವರ್ಣಿ
ಹೆಣ್ಣಾಗು : (ಸೋಲು, ದಾಸನಾಗು) : ಬಂಡಣದೊಳ್ ಎನ್ನಂ
ಓಡಿಸಿಕೊಂಡುಯ್ದಂ.....ಅದರಿಂ ಅನುಂ (ಸಾಲ್ವನುಂ)
ಭೀಷ್ಮಗಳ ಪೆಡಂತಿಯೆ ಅದೆಂ! ಪೆಂಡಿರಿ ಪೆಂಡಿರೊಳ್
ಅದೆಂತು ಬೆರಸುವರ್ ಅಬಲೆ? -ಪಂಪ
(ಅದನೆ) **ಹಾಸಿ** (ಅದನೆ) **ಹೊರು** (ಆಸಕ್ತನಾಗು) : ಹುಸಿಯನೆ ಹಾಸಿ ಹೊದ್ದೆನಯ್ಯಾ.
ಇನ್ನೆನಗೆ ಎಂದಿಂಗೆ ಮೋಕ್ಷವಹುದೋ? -ವಚನ
ತೂಕದವರು : (ಗೌರವಸ್ಥರು): ಗಾಢಪ್ರತಾಪರ ಬರಸಿದನು ತೂಕದ ಮಹಾಮಂಡಳಿಕ ಮನ್ನೆಯರ!
-ಕು. ವ್ಯಾಸ
ನೀರಲ್ಲಿ ಹಾಕು (ವ್ಯರ್ಥಮಾಡು) : ಕಲಿತನವೆ ನೀರೊಳು ಕಲಕಿದೈ -ಕು.ವ್ಯಾಸ
ಸರಕುಮಾಡು (ಲಕ್ಷಿಸು, ಮನ್ನಿಸು) : ಸಿರಿಯುಳ್ಳವನೆ ಮಹಾತ್ಮನು।
ಸಿರಿರಹಿತ ಶಿವನಾದೊಡಾತನ! ಸರಕುಮಾಡದು
ಲೋಕ ಚಿತ್ತೈಸೆಂದನಾ ವಿದುರ।। -ಕು. ವ್ಯಾಸ
ಮೂಲೆ (ಕೇಂದ್ರ); ಕಾಳಗಕೆ ಬಂದರು ಮೂಲೆಯರಸುಗಳೆಲ್ಲ
(ಕುರುಪಾಂಡವರ ಪೊರೆಗೆ). -ಕು. ವ್ಯಾಸ
ಗುಂಡುಗೆಡಿಸು (ನಿರ್ವೀರ್ಯಮಾಡು): ಗಂಡುಗೆಡಿಸದೆ ಬಿಡುವುದೇ ವಿಧಿ? - ಕು. ವ್ಯಾಸ
ಹುಚ್ಚೇಳು (ತಲೆತಿರುಗು): ಅಚ್ಚ ಚೌವನೆಯರಿದ್ದರು ನೋಡುವರ ಮನ ಹುಚ್ಚೆದ್ದು ಧರೆಗೆ ಬೀಳ್ವಂತೆ।
-ರತ್ನಾಕರವರ್ಣಿ
ಮಾನಾಮಿ, ದೀವಳಿಗೆ (ಅತ್ಯಂತ ಸಂತೋಷ):
ನಿನಗೆ ಅಂದೆ ಮಾನಾಮಿಯಂ ದೀವಳಿಗೆಯಂ ಮಾಡೆನೆ? -ಪಂಪ
ಮಹನಮಿಯಲ್ಲದೆ ಬರಿದೆ ಬಿಡೆನು ಎಂದ -ಕು. ವ್ಯಾಸ
ನನಗೆ ಅಣ್ಣ ಬಂದರೆ ನಿಚ್ಚದೀವಳಿ ಮನೆಯೊಳಗೆ। -ಗರತಿಯ ಹಾಡು
ಮಣ್ಣಗೂಡು : ಹೆಣ್ಣಿನವದು ನಮ್ಮನೆಲ್ಲರನು ಮಣ್ಣುಗೂಡಿಸ ಬಂದಿಹನು (ರಾಮ) -ನರಹರಿ
ಪಾತ್ರವಾಡಿಸು (ಕುಣಿಸು): ಪದವಿಯ ರೂಪಿನ ಸೊಬಗಿನ ಮದಮಂ
ಮಾಡುವರ ಮೂಗಿನೊಳ್ ಪಾತ್ರಮನಾಡದೆ ಮಾಣಂ ಅನಂಗಂ -ಜನ್ನ
ಕಡಗಕಾಯು [ತಾಳಿ ಉಳಿಸು, ಸೌಭಾಗ್ಯ ರಕ್ಷಣೆ ಮಾಡು] : ಕಾವುದು
ಆತ್ಮಾನುಜೆಯ ಕಡಗಮಂ ನೀವೇ [ದ್ರೋಣಾಚಾರ್ಯ]. -ಪಂಪ
ಓಲೆಕಾಯು [ಸೌಭಾಗ್ಯಕಾಯು] : ಹೆಂಡಿರ ಓಲೆಯು ಕಳೆದುಹೋಗಲಿ -ಕು. ವ್ಯಾಸ
ಎನ್ನ ಓಲೆಯ, ಕಡಗದ ಅಳಿವಂ ಏನ್ ನೋಡಿದ ಪೈ? -ಪಂಪ
[ನೀಂ ಬಿರ್ದುಂಕಿದಪೆ] ಅಂತು ಎನ್ ಓಲೆ ಭಾಗ್ಯಂ ಉಂಟು -ಪಂಪ
ನೆಲಬರೆ : ತಲೆವಾಗಿ ನೆಲನಂ ಬರೆಯುತ್ತುಂ ಇರ್ದ ವೀರಭಟರ್ -ಪಂಪ
ಬಳೆತೊಡು [ಹೇಡಿಯಾಗು] : ಮುನ್ ಬಳೆದೊಟ್ಟ ಹೇಡಿಯೆ...... ಕೊಲೆ
ನೋಡುತಿರ್ಪುದು ಪಾಳಿಯೇ? -ಪಂಪ
ಡೊಂಬವಿದ್ಯೆ [ಮಾಟ, ಮೋಸ]: ಎನಿತಾನುಂ ತೆರನಾಗಿ ಡೊಂಬ-
ವಿದ್ದೆಯನಾಡಲ್ ನೀನ್ ಅರಿವೆ. -ಪಂಪ

ಕರ್ಣ [ದಾನಿ] : ನುಗುನಾಡ ರಾಮನೆಂದೊಡನೆ ಕಲಿಕಾಲ ಕರ್ಣಂ -ಶಾಸನ
ಮಾತು [ವಿಷಯ] : ಅಲ್ಲಿ ತಮದ ಮಾತಿಲ್ಲ -ನಾಗಚಂದ್ರ
ಎರಡು (i) [ಭೇದ, ಕೇಡು] : ಉಂಡ ಮನೆಗೆ ಎರಡು ಬಗೆಯ ಬಾರದು: -ಗಾದೆ
(ii) ಮರುದಿವಸಂ ಬಂದಪೆನ್ : ಎರಡಿಲ್ಲ (ಸುಳ್ಳಿಲ್ಲ) -ಹರಿಹರ
ಆಕೆ (ಹಿಡಿಂಬೆ) ಎಂದಳ್ : - ಎರಡು ಅರಿಯದೆ ಒಲ್ದು.
ನಿನ್ನೊಳ್ ಎರಡಂ ಮುಡಿಯಲಾಗದು ಎನಗೆ -ಪಂಪ
ಗುಡಿಕಟ್ಟು (ಹಿಗ್ಗು, ಸಂತೋಷಪಡು) : ಬಗೆಯಾಳೆ ಗುಡಿಗಟ್ಟಿ -
ಸಂತಸಂಬಟ್ಟು ಇಂತೆಂದಳ್ -ಪಂಪ
ಭೂಲಲನೆ ಗುಡಿಗಟ್ಟೆ.... -ಹರಿಹರ
ಗರಿಕಟ್ಟು : ಮೂಡು (ವೇಗ ಹೆಚ್ಚಾಗು)
(i) ಮರವೆ ಗರಿಟ್ಟಿತು ಕೀಚಕನ -ಕು. ವ್ಯಾಸ
(ii) ಗಾಳಿಗೆ ಗರಿಮೂಡಿದಂತೆ ಪರಿವ ಆನೆಗಳ್ -ನಾಗಚಂದ್ರ
ಪತಾಕೆ : ಎಮ್ಮ ವಂಶಕೆ ಈಕೆಯೆ ಪತಾಕೆ -ಪೊನ್ನ
ಶನಿ : (ಹಗೆಗಳಿಗೆ) ಶನಿಯುಂ ಆಂದ -ಪೊನ್ನ
ಕೇತು : (ಧೂಮಕೇತು): ಈತನೆ ನಮ್ಮ ಕುಲಕ್ಕೆ ಕೇತುಗಡ!.........
ಅಲ್ಲದೆ, ಏಕೆ ಇನಿತು ಉತ್ಪಾತಂ ತೋರ್ದುವು? -ಪಂಪ
ನೀರು (ವೀರ್‍ಯ, ಕಾಂತಿ, ಉತ್ಸಾಹ): (ಶಿವನ ಸೋಂಕು) ಗಿರಿಸುತೆಗೆ ನೀರೇರಿಸುತಿರೆ...... -ಪಂಪ
ನೋಡು : ಎನಗೆ ಅಡ್ಡಂ ಬರ್ಪ ಗಂಡರಂ ನೋಳ್ಪೆನ್, ಎಂದು
ಭೀಷ್ಮರ್ ಬಗ್ಗಿಸಿದೊಡೆ ದುರ್ಯೋಧನಂ ಬೆರ್ಚಿದನ್ -ಪಂಪ
ಇದಿರೊಳ್ ನಿಲ್ಲು : ಗಾಂಗೆಯಂಗೆ ಅದಿರದೆ ಇದಿರೊಳ್ ನಿಲ್ಲುವರ್ ಒಳರೆ? -ಪಂಪ

ಇಂತಿವೆಲ್ಲವೂ ಕಂನುಡಿಯಲ್ಲಿ 'ಬಂದನುಡಿ'ಗಳು : 'ಮಾಡುನುಡಿ'ಗಳಲ್ಲ. ಇವು ಇನ್ನೂ ಎಣಿಕೆಗೆ ಮೀರಿವೆ. ನಮ್ಮ ಹತ್ತಿರಿನ ಸಂಗ್ರಹದೊಳಗಿಂದ ಸ್ವಲ್ಪಭಾಗವನ್ನು ಮಾತ್ರ ಇಲ್ಲಿ ಕೊಟ್ಟಿದ್ದೇವೆ. ಅತಿ ವಿಸ್ತಾರದಿಂದ ಕೊಡಲು ಎಡೆ ಇಲ್ಲದ್ದರಿಂದ ಕೆಯ್ ಬಿಗಿಹಿಡಿಯಬೇಕಾಗಿದೆ. ಇಲ್ಲಿ ಕೊಟ್ಟಿರುವುದಕ್ಕಿಂತಲೂ ಬೇರೆ ಪ್ರಕಾರದ ಕೆಲವು ಪಡೆನುಡಿಗಳಂಟು. ಅವುಗಳ ಪ್ರಯೋಗಗಳನ್ನು ಉದಾಹರಿಸದೆ ಬರಿ ನಿರ್ದೇಶಿಸಿಬಿಡಬೇಕೆಂದರೂ ಅಳತೆ ಮೀರುವ ಹಾಗಿದೆ.

ಕೆಯ್, ಕಾಲು ಮೊದಲಾದುವುಗಳಿಂದ ಬಂದನುಡಿಗಳಲ್ಲಿ ಮೇಲೆ ಕೊಟ್ಟಿರುವುವು ತೀರ ತುಸು. ಕಾಲು ಬಿಡು, ಕಾಲುಚಾಚು, ಕಾಲುಹೋಗು, ಕಾಲಗುಣ, ಬೆರಲುಮುರಿ, ಬೆರಲಮೇಲೆ ಎಣಿಸುವಷ್ಟು ತಲೆ-ಹಾಕು, ತಲೆಗೊಡು, ತಲೆ ಇಲ್ಲದಿರು.... ಮುಂತಾದುವುಗಳನ್ನು ವಾಚಕರೆ ಊಹಿಸಿಕೊಳ್ಳಬಹುದಾಗಿದೆ.

ಇನ್ನು ಕೆಲವೊಂದು ಮಾತುಗಳಿಗೆ ವಿಶಿಷ್ಟ ಅರ್ಥವೇ ಇರುವುದು. 'ಎಳೆನೀರು' ಎಂಬುದು ಎಳೆಯ ತೆಂಗಿನೊಳಗಿನ ನೀರಿಗೇ ಹೆಸರು. ಇಲ್ಲದಿದ್ದರೆ ನೀರಿನಲ್ಲಿ ಎಳೆಯದು, ಬಲಿತುದು ಏನು?

'ಮಗು' ಮತ್ತು 'ಮರಿ' ಎಂಬುವ ಕ್ರಮವಾಗಿ ಮನುಷ್ಯರ ಹಾಗೂ ಮನುಷ್ಯೇತರ ಪ್ರಾಣಿಗಳ ಬಾಲಸಂತತಿಗೆ ಹೆಸರು. ಸ್ವಾಮಿಗಳು ಮಠಕ್ಕೆ ತಮ್ಮ ತರುವಾಯ ಅಧಿಕಾರಿಯಾಗಬೇಕೆಂದು ನಿರ್ಣಯಿಸಿ ತಂದು ಸಾಕಿರುವ ತರಳನಿಗೂ 'ಮರಿ' ಎಂದು ಹೇಳುವುದುಂಟು. ಮನುಷ್ಯೇತರ ಪ್ರಾಣಿಗಳ ಬಾಲಸಂತಿತಗೆ 'ಮರಿ' ಎಂಬುದು ಸಾಮಾನ್ಯವಾದ ಹೆಸರು ಇದ್ದರೂ ನಾಯಿಮರಿಗೆ 'ಕುನ್ನಿ' ಎಂದೂ ಆಡಿನ ಮರಿಗೆ 'ಕಳಿಗೆ' ಎಂದೂ ಹೇಳುವುದುಂಟು.

ಅಲ್ಲದೆ, ದನಗಳಲ್ಲಿ 'ಮರಿ' ಎಂಬ ಪದಗಳನ್ನು ಉಪಯೋಗಿಸುವ ಪದ್ಧತಿಯಿಲ್ಲ; ಅಲ್ಲಿ 'ಕರು' 'ಕಂದು' 'ಪಡ್ಡೆ' ಎಂಬ ಶಬ್ದವೇ ವಾಡಿಕೆಯಲ್ಲಿದೆ.

ಇದರಂತೆ ಧಾತುಗಳಲ್ಲಿ ವಿಶೇಷಾರ್ಥವನ್ನು ಪಡೆದಿರುವ ನುಡಿಗಳೂ ಅದೆಷ್ಟೋ ಇವೆ. ಕಾಸುವಾಗ ಹಾಲು ಕೆಟ್ಟರೆ ಅದಕ್ಕೆ 'ಒಡೆಯಿತು' ಎನ್ನುವರು. (ಕೆಟ್ಟ ಮನುಷ್ಯನು) 'ಸತ್ತ'ನೆಂಬಲ್ಲಿ 'ನೆಗೆದ' ನೆಂದು ಹೇಳುವರು. 'ತಿಮ್ಮನು ರಾಯರಲ್ಲಿ ನೀರು ಹೊರಲಿಕ್ಕೆ ನಿಂತಿದ್ದಾನೆ' ಎಂಬಲ್ಲಿ 'ನಿಲ್ಲು' ಧಾತುವು ಉದ್ಯೋಗ ಮಾಡು ಎಂಬರ್ಥವನ್ನು ಕೊಡುವುದು. 'ಭೀಮರಾಯರು ದಿನಾಲು ಕುಡಿಯುತ್ತಾರೆ:' ಎಂಬಲ್ಲಿ ಸೆರೆಯನ್ನು ಎಂದೇ ಸೂಚನೆಯಿದೆ. ಈ ಬಗೆಯಾಗಿ ಅನೇಕ ಧಾತುಗಳು ಒಂದೊಂದು ವಿಶೇಷಾರ್ಥವನ್ನು ಪಡೆದ ನುಡಿಗಳಾಗಿವೆ. ಇವೆಲ್ಲ ಸೂಕ್ಷ್ಮಗಳನ್ನು ಮನ್ನಿಸಿ ಮಾತುಗಳನ್ನು ಆಡುತ್ತ, ಬರೆಯುತ್ತ ಹೋದರೆ ಕಂನುಡಿಯ ಗುಣ್ಪು ಮತ್ತು ನುಣ್ಪು ಹೆಚ್ಚಾಗುವುದರಲ್ಲಿ ಸಂದೇಹವೇ ಇಲ್ಲ.

ಕಂನುಡಿಯ ಒಳ್ಗಂಪು

The Kannada Language... has hardly received from the European scholars the recognition and attention which it deserved. It is the most mellifIous of all the Indian vernaculars, and the richest in capability and force of expression.

F. Fleet

೬೧. ಕಂನುಡಿಯು ಬಹಳ ಸೊಗಸಾದುದೆಂದು ಎಂದಿನಿಂದಲೂ ಹಲರು ಹಲವು ತೆರನಾಗಿ ಹೊಗಳುತ್ತ ಬಂದಿರುವರು. 'ಸುಲಿದ ಬಾಳೆಯಹಣ್ಣು', 'ಕೆನೆವಾಲ್ಸಕ್ಕರೆ'ಗಳು ಸವಿಯಲ್ಲಿ ಇದಕ್ಕೆ ಸರಿಸಮಾನವಾಗಲಾರವು; ಆದುದರಿಂದ, ಇದು 'ಎನಿತು ಇನಿದು' ನುಡಿಯೆಂದು ಹಾಡಿರುವರುಂಟು. ಇದನ್ನು ಕತ್ತುರಿಗೆ ಹೋಲಿಸಿದವರುಂಟು. ಆದರೆ, ಇದೆಲ್ಲವೂ ಒಣಹೆಮ್ಮೆಯ ಟೊಳ್ಳುಮಾತೆ, ಅಥವಾ ಇದರಲ್ಲಿ ಎಳ್ಳನಿತಾದರೂ ಹುರುಳಿದೆಯೆ?

ಸಾವಿರಾರು ವರ್ಷಗಳಿಂದ ಹಲವು ಕುತ್ತಗಳೊಳಗಿಂದ ಪಾರಾಗಿ, ಕಾಲಕಾಲಕ್ಕೆ ತಲೆಯೆತ್ತಿ ಮೆರೆದ ಭಾಷೆಯಿದು-ಎಂಬ ಒಂದು ಸಂಗತಿಯೆ ಇದು ಹುರುಳುಳ್ಳ ನುಡಿ, ಸತ್ತ್ವಶಾಲಿಯಾದ ಭಾಷೆಯೆಂದು ಸಿದ್ಧಪಡಿಸಲು ಸಾಕಾಗಿದೆ. ತಮ್ಮ ಶೌರ್ಯ-ಪ್ರತಾಪಾದಿಗಳಿಂದ ಅಖಿಲ ಭರತಖಂಡದ ಕಣ್ಮನಗಳನ್ನು ಎಷ್ಟೋ ಶತಮಾನಗಳ ವರೆಗೆ ತಮ್ಮ ಕಡೆಗೆ ಸೆಳೆದ ಗಂಡುಗಲಿಗಳಾದ ಕರ್ನಾಟರ ಭಾಷೆಯು ಹುರುಳಿಲ್ಲದ ಬರಡುನುಡಿಯಾಗಿರುವುದು ಸಾಧ್ಯವಿಲ್ಲ. ಸೂರ್ಯನ ತೇಜಸ್ಸು ಆತನ ಬೆಳಕಿನಲ್ಲಿ ಕಾಣಲೇಬೇಕು; ವೀರ್ಯವಂತರ ವರ್ಚಸ್ಸು ಅವರ ಭಾಷೆಯಲ್ಲಿ ವ್ಯಕ್ತವಾಗಲೇಬೇಕು. ಗಂಗ, ಕದಂಬ, ಚಳುಕ್ಯ, ರಾಷ್ಟ್ರಕೂಟ, ಹೊಯ್ಸಳ, ವಿಜಯನಗರವೇ ಮೊದಲಾದ ಹಲವು ಸಾಮ್ರಾಜ್ಯಗಳನ್ನು ಕಟ್ಟಿ, ಜಗಜ್ಜನದ ಬಾಯಿಗೆ ನೀರು ಊರುವಂತೆ ವೈಭವವನ್ನು ಅನುಭವಿಸಿದವರು ಇವರು. ಒಂದು ರಾಜ್ಯವನ್ನು ಕಟ್ಟಬೇಕಾದರೆ ಅದಕ್ಕೆ ಎಂತಹ ಬುದ್ಧಿಸಾಮರ್ಥ್ಯವು ಬೇಕು: ಎಂತಹ ಶೌರ್ಯಶಕ್ತಿಗಳು ಬೇಕು : ಎಂಬುದನ್ನು ಒಂದರೆಗಳಿಗೆ ಪರ್ಯಾಲೋಚಿಸಬೇಕು: ಒಂದು ರಾಜ್ಯದ ಸಂಸ್ಕೃತಿಯನ್ನು ಉಳಿಸಿ ಬೆಳೆಯಿಸಲು ಎಂತಹ ಪ್ರತಿಭಾಶಾಲಿಗಳಾದ ಕವಿಗಳೂ, ಕಲಾವಿದರೂ ಬೇಕೆಂಬುದನ್ನು ತಿಳಿದು ನೋಡಬೇಕು. ಆಗ ಇಷ್ಟುರಾಜ್ಯಗಳಿಗೆ ಜನ್ಮವಿತ್ತ ಕಂನಾಡಿನ ಅಂತಃ-ಸತ್ತ್ವವು ಎಷ್ಟು ಪ್ರಭಾವಶಾಲಿಯಾಗಿರಬೇಕೆಂಬುದರ ಕಲ್ಪನೆಯು ಅಲ್ಪಾಂಶದಿಂದಲಾದರೂ ಬರಬಹುದು. ರಾಜ್ಯ-ಸಾಮ್ರಾಜ್ಯ ಸಂಸ್ಥಾಪಕರಾದ ತೇಜೋಮೂರ್ತಿಗಳು ಯಾವ ಮಾತುಗಳನ್ನಾಡಿದರೂ ಅದು ಅರ್ಥವಿಹೀನವಾದ ನಿಃಸತ್ತ್ವಭಾಷೆಯಾಗಿರಬಹುದೆಂದು ಹೇಳುವವನ ತಲೆ ತಾಳಗೆಟ್ಟಿರಬೇಕು.

೬೨. ಕಂನುಡಿಯಲ್ಲಿ ಹುರುಳಿದೆ; ಅದನ್ನು ಅರಿತು ಅರಗಿಸಿಕೊಳ್ಳುವವರು ಮಾತ್ರ ಬೇಕಾಗಿದ್ದಾರೆ. ಸಂಸ್ಕೃತ, ಪ್ರಾಕೃತ, ಮರಾಠಿ, ತೆಲುಗು, ಹಿಂದೀ ಮೊದಲಾದ ಭಾಷೆಗಳು ಕಂನುಡಿಯನ್ನು ಸ್ಥಾನಭ್ರಷ್ಟ ಮಾಡಲು ಒಂದೊಂದು ಕಾಲಕ್ಕೆ ಯತ್ನಿಸಿವೆ; ಯತ್ನಿಸುತ್ತಲೂ ಇವೆ. ಪರಭಾಷೆಗಳ ಮಾಯಾಜಾಲದಲ್ಲಿ ಸಿಲುಕಿ ಕಂನಾಡು ಹೇಳಹೆಸರಿಲ್ಲದಂತಾಗುವ ಹೆದರಿಕೆಯು ಉಂಟಾಗಿದೆ. ಈ ಕುತ್ತಿನೊಳಗಿಂದ ಪಾರಾಗುವುದಕ್ಕೆ ಕಂನುಡಿಯ ಆಳವಾದ ಅಭ್ಯಾಸ ಮತ್ತು ಸದಭಿಮಾನಗಳು ನಮ್ಮಲ್ಲಿ ಬೆಳೆಯಬೇಕು. ಜನಸಾಮಾನ್ಯರಿಗೆ ಕಂನುಡಿಯ ಸೊಬಗನ್ನು ತೋರಿಸಿ ಕೊಟ್ಟು, ಇದರ ಒಳಗುಂಪಿಗೂ ಅವರು ಮನಸೋತು ಇದರಲ್ಲಿ ಒಲವು-ನಲಿವುಗಳುಳ್ಳವರಾಗುವಂತೆ ಮಾಡಬೇಕು.

೬೩. ಕೆಳಗೆ ಕಾಣಿಸಿದಂತೆ ಹಲಕೆಲವು ಬಗೆಗಳಿಂದ ಎಲ್ಲರೂ ಮನಮುಟ್ಟಿ ಯತ್ನಿಸಿದರೆ ಕಂನುಡಿಯ ಏಳ್ಗೆಯು ಆದಾವು. ಅರಿದಾದ ಮಾತಲ್ಲ; ಕಂನುಡಿಯ ಬಳ್ಳಿವಳ್ಳಿಯು ಬಳ್ಳನೆ ಬೆಳೆದು ಸೊಗಸಾದ ಸಾಹಿತ್ಯದ ಹೂ-ಕಾಯಿ-ಹಣ್ಣುಗಳನ್ನಿತ್ತು. ಜನ-ಮನವನ್ನು ತಣಿಸದಿರಲಾರದು.

ತಿ. ಕಂನುಡಿಯ ಧಾತುಗಳಿಗೆ ಕೊರತೆಯಿಲ್ಲ; ಧಾತು-ಶಕ್ತಿಯಿದೆ; ಆದರೆ ಅದನ್ನು ಸರಿಯಾಗಿ ಉಪಯೋಗಿಸಿಕೊಂಡಿಲ್ಲ. ಸಂಸ್ಕೃತ, ಇಂಗ್ಲೀಷ್ ಮೊದಲಾದ ಭಾಷೆಗಳನ್ನು ನೋಡಿದರೆ; ಅವುಗಳೊಳಗಿನ ಒಂದೊಂದು ಧಾತುವಿಗೂ ಬಗೆಬಗೆಯ ಪ್ರತ್ಯಯಗಳನ್ನು ಹಚ್ಚಿ, ನಾಮ-ವಿಶೇಷಣಾದಿ ಹೊಸಹೊಸ ಶಬ್ದಗಳನ್ನು ಉಂಟುಮಾಡಿಕೊಳ್ಳುವುದನ್ನು ಕಾಣಬಹುದು. ಆದರೆ, ಕಂನುಡಿಯಲ್ಲಿ ಈ ಬಗೆಯಾಗಿ ಉಪಯೋಗಿಸಿಕೊಂಡಿರುವ ಧಾತುಗಳಿಗಿಂತಲೂ ಉಪಯೋಗಿಸದೆ ದುರ್ಲಕ್ಷಿಸಿರುವ ಧಾತುಗಳ ಸಂಖ್ಯೆಯೆ ಹೆಚ್ಚಿದೆ. ಕೆಲವು ಧಾತುಗಳು ಒಂದರ್ಥ ರೂಪದಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಲಿವೆ. 'ತಕ್ಕ' ಎಂಬುದು ಗೊತ್ತಿದೆ: ಇದರ ಮೂಲವಾದ 'ತಗು' ಧಾತುವಿನ ಅರಿವು ನಮಗಿಲ್ಲ! ಇದು ಬಳಕೆಯಲ್ಲಿಯೂ ಉಳಿದಿಲ್ಲ. ಮರಾಠಿಯಲ್ಲಿ, ಈ ಧಾತು ಬಳಕೆಯಲ್ಲಿದೆ. ಕನ್ನಡದಲ್ಲಿ ಮೂಲೆಗುಂಪಾಗಿ ಬಿದ್ದುಕೊಂಡಿದೆ. 'ಮಾಡಲಮ್ಮೆನು'; 'ಮಾಡಲಾರೆನು' ಈ ವಾಕ್ಯಗಳೊಳಗಿನ ಅಮ್ಮು, ಆರು, ಸಮರ್ಥವಾಗು ಎಂಬರ್ಥದ ಈ ಧಾತುಗಳ ನಿಷೇಧ ರೂಪಗಳು ಮಾತ್ರ ರೂಢಿಯಲ್ಲಿವೆ.

ಒಂದು ಧಾತುವನ್ನು ತಕ್ಕೊಂಡು ಅದಕ್ಕೆ ಈ ಮೊದಲು (೪೨-೪೯ವರೆಗೆ) ವಿವರಿಸಿದ ಹಲವು ಪ್ರತ್ಯಯಗಳಲ್ಲಿ ನಾಲ್ಕಾರನ್ನಾದರೂ ಅಂಟಿಸಿ, ಹೊಸನುಡಿಗಳನ್ನು ಏರ್ಪಡಿಸಿಕೊಂಡು ಬಳಸಿದರೆ ನಮ್ಮ ಶಬ್ದ-ಸಂಪತ್ತು ಹೆಚ್ಚಾಗುವುದಕ್ಕೆ ತಡವಿಲ್ಲ. ಭಾವನಾಮಗಳನ್ನು ಮಾಡಿಕೊಳ್ಳುವ ಹಲವು ಪ್ರತ್ಯಯಗಳಿದ್ದು 'ಒಣ' 'ಉವುದು' (ಉದು) ಇವುಗಳ ಹೊರತು ಉಳಿದುವು ನಮ್ಮ ತಿಳಿವಳಿಕೆಯನ್ನು ಮೀರಿವೆ. ಅವು ಕೋಶಗಳಲ್ಲಿ, ಪೂರ್ವಜರು ನಿರ್ಮಿಸಿಕೊಂಡ ನುಡಿಗಳಲ್ಲಿ ಮಾತ್ರ ಉಳಿದಿದ್ದು ಈಗ ನಿರುಪಯುಕ್ತವಾದಂತಾಗಿದೆ. 'ಹೋರು' ಧಾತುವಿನಿಂದ ಈಗ ಹೋರುವಿಕೆ. ಹೋರುವುದು, ಹೋರೋಣ ಎಂದು ಭಾವನಾಮಗಳನ್ನು ಮಾಡಿಕೊಳ್ಳುವರು. ಆದರೆ ಕುಮಾರವ್ಯಾಸನು 'ಹೋರಟೆ' ಎಂಬ ಸೊಗಸಾದ ಶಬ್ದವನ್ನು ನಿರ್ಮಿಸಿದ್ದಾನೆ! ಈ 'ಟೆ' ಪ್ರತ್ಯಯದ ಅರಿವು ಯಾರಿಗಿದೆ? ಒಂದು ಧಾತುವಿನಿಂದ ಸೂಕ್ಷ್ಮವಾದ ಅರ್ಥಭೇದವನ್ನು ಸೂಚಿಸುವಂತಹ ನಾಲ್ಕಾರು ಶಬ್ದಗಳನ್ನಾದರೂ ಸಿದ್ಧಮಾಡಿಕೊಳ್ಳಲು ಬರುತ್ತಿರಬೇಕು. ಬೇರೆ ಬೇರೆ ಅರ್ಥದ ಕಂನುಡಿಯ ಧಾತುಗಳನ್ನು ತಕ್ಕೊಂಡು ಅವುಗಳಿಂದ ಬಗೆಬಗೆಯ ಶಬ್ದಗಳನ್ನು ಸಾಧಿಸುವ ಪ್ರಯತ್ನಗಳೂ ನಡೆಯಬೇಕು.

ಆ. ತಕ್ಕ ಕಂನುಡಿಗಳಿರುವಾಗ. ಅವುಗಳಿಂದ ಅರ್ಥವು ಚೆನ್ನಾಗಿ ಹೊರಬರುತ್ತಿರುವಾಗ, ಸುಮ್ಮನೆ ಪರಭಾಷೆಯ ಪದಗಳನ್ನು ತಂದು ತುಂಬುವುದನ್ನು ನಿಲ್ಲಿಸಬೇಕು. ಕಂನುಡಿಗೆ ಈ ಬಗೆಯಿಂದ ಕೇಡುಮಾಡದವರೆ ಇಲ್ಲ; ಹಲವು ಸಾರೆ ಅರಿಯದೆ ಮಾಡಿರಬಹುದು. ಆದರೆ, ಆದ ಕೇಡು ಸುಳ್ಳಲ್ಲ. ಕಂನುಡಿಯ ತೂಕ ಹೆಚ್ಚಾಗಲೆಂಬ ಹಿತಬುದ್ಧಿಯಿಂದ ಹೆರವರ ಮಾತುಗಳನ್ನು ಎರವು ತಂದಿರಬಹುದು. ಆದರೆ, ಎರವು ಸಿರಿಯಲ್ಲ; ಅದು ಒಂದು ಅಳತೆ ಮೀರಿದರೆ ಎರವೆ ಸಾಲವೆನಿಸಿ. ಕೊರಲ ಉರುಲು ಆಗುವುದು. ಮೈಗೆ ಬಂದ ಬಾವು ಮತ್ತು ಎರವಲು ತಂದು ಬಂದ ಸಿರಿ ಎರಡೂ ಒಂದೇ. ತಿರುಗಿ ಮುಟ್ಟಿಸತಕ್ಕಂತಹದೆ ಎರವಲು, ಮುಯ್ಯಿ ಎನಿಸುವುದು.

ಕೈಸಾಗದಾದಾಗ ಎರವಲು ಅಗತ್ಯ. ಆದರೆ, ಅದು ಯಾವಾಗಲೂ ಅಪದ್ಧರ್ಮವೆಂಬುದು ನೆನಪಿನಲ್ಲಿರಬೇಕು. ಪರಭಾಷೆಯ ಪದಗಳು ಬಂದು. ನಮ್ಮ ಹುರುಳುಳ್ಳ ನುಡಿಗಳು ಹಿಂದೆ ಬೀಳುತ್ತಲಿವೆ. ಈ ಪುಸ್ತಕದ ೬ನೆಯ ಪ್ರಕರಣದಲ್ಲಿ ಕೊಟ್ಟಿರುವ ಮೇಳದ ನುಡಿಗಳನ್ನು ನಿಡಿದಾಗಿ ನೋಡಿದರೆ, ಕಂನುಡಿಯ ಆಳವು ಸ್ವಲ್ಪಾದರೂ ಗೊತ್ತಾಗಬಹುದು. ಇದರಲ್ಲಿ ಇಷ್ಟೊಂದು ಅಂದ ಅಂದದ ನುಡಿಗಳಿದ್ದೂ ಅವು ಇಂದು ಬಳಕೆಯೊಳಗಿಲ್ಲದುದನ್ನು ಕಂಡು, ಮನಸ್ಸು ಮಮ್ಮಲನೆ ಮರುಗುವುದು. ಒಂದು ಅರ್ಥವನ್ನು ಅರಳಿಸಿ ತೋರಿಸುವುದಕ್ಕೆ ಕೈಲಾಗದೆ ತೀರ ಬಾಯಿ ಕಟ್ಟಾದಾಗ ಹೆರವರಿಗೆ ಕೇಳಬೇಕೆ ಹೊರತು, ಅಡಿಗಡಿಗೊಮ್ಮೆ ಮಂದಿಯ ಬಾಗಿಲಿಗೆ ಹೋಗಿ ಕೈಯೊಡ್ಡುವುದರಿಂದ ನಮ್ಮ ನುಡಿತಾಯಿಗೆ ಅವಮಾನ ಮಾಡುತ್ತಲಿದ್ದೇವೆ. ಪರಿಸ್ಥಿತಿಯ ಒತ್ತಾಟದಲ್ಲಿ ಪರಕೀಯ ಶಬ್ದಗಳು ಆಗಂತುಕವಾಗಿ ಬಂದು ಕಾಲು ಚಾಚುತ್ತಲೆ ಇವೆ. ಇವುಗಳಿಗೆ ಕೈಲಾದಷ್ಟು ತಡೆಹಾಕುವುದು ಅಗತ್ಯ. ಕಂನಾಡಿಗರು ತಮ್ಮ ನುಡಿಯಲ್ಲಿ ಅಭಿಮಾನವುಳ್ಳವರಾಗಿ ತಮ್ಮತನವನ್ನು ಕಾಯ್ದುಕೊಳ್ಳದಿದ್ದರೆ ಅವರು ಹಿಂದೆ ಮಾಡಿದಂತೆ, ಈಗಲೂ ತಮ್ಮ ನಾಡನ್ನು ಹೆರವರ ಬೀಡಾಗಲು ತಾವೆ ನೆರವಾಗುತ್ತಲಿರುವರೆಂದು ಹೇಳಬೇಕಾಗುತ್ತದೆ.

ಇ. ಕಂನುಡಿಯಲ್ಲಿ ಹೊಸ ಶಬ್ದಗಳನ್ನು ಸಿದ್ಧಮಾಡಿಕೊಳ್ಳಲು ಕೆಲವು ಇನ್ನು ಹೆಚ್ಚಿನ ಅನುಕೂಲತೆಗಳು ಬೇಕಾಗಿದೆ. ಆದರೆ, ಅವುಗಳನ್ನು ಕಂಡುಕೊಳ್ಳುವ ಕೆಲಸದೊಡನೆ ನಮ್ಮ ಮೊದಲಿಗರ ಶಬ್ದನಿರ್ಮಾಣ ಪದ್ಧತಿಯನ್ನು ಸ್ವಲ್ಪ ಅಭ್ಯಾಸಿಸಿ, ಅದರಂತೆ ಈಗ ಮತ್ತೆ ಬಗೆಬಗೆಯ ನುಡಿಗಳನ್ನು ನೇರ್ಪಡಿಸಿಕೊಳ್ಳಲು ಅಡ್ಡಿಯೇನು?

ಕಂನುಡಿಯಲ್ಲಿ ನಾಮಗಳನ್ನು ಧಾತುಗಳನ್ನಾಗಿ, ಧಾತುಗಳನ್ನೇ ನಾಮಗಳನ್ನಾಗಿ ಅವಶ್ಯವಿದ್ದಲ್ಲಿ ಬಳಸುವ ಪದ್ಧತಿಯು ಹಿಂದಕ್ಕೆ ಬೇಕಾದ ಹಾಗೆ ಇತ್ತು. ಕೊನರು, ಮುಗುಳು, ಪೂ, ಕಾಯ್, ಪಣ್, ಅಲರ್, ಚಿಗುರ್ ಮೊದಲಾದುವು ನಾಮಗಳಿರುವಂತೆ ಧಾತುಗಳೂ ಅಹುದು. ಮೆಯ್, ಕೆಯ್ ಮೊದಲಾದುವೂ ಇದೇ ಬಗೆಯ ಇನ್ನೂ ಕೆಲವು ಉದಾಹರಣೆಗಳು. ನಾಗವರ್ಮನ ಭಾಷಾಭೂಷಣದ ಸೂತ್ರಗಳಿಗೆ ಟೀಕೆಯನ್ನು ಬರೆವಾತನು "ಕರ್ನಾಟಕ ಭಾಷೆಯ ಆಗು ಪೇಳಲ್ಪಡುವು"ಎಂದು ಆರಂಭಿಸುತ್ತಾನೆ. 'ಆಗು-ಹೋಗು'ಗಳು ಎಂದು ಸರ್ವಜ್ಞರಲ್ಲಿ ಬರುವುದು. 'ಹೋಗು' ಎಂಬುದನ್ನು ನಾಮದಂತೆ ಪಂಪನು ಪ್ರಯೋಗಿಸಿರುವನು. ಹೊಗೆ (ಹೊಗೆ ಅಗು). ತುತ್ತು (ತಿನ್ನು), ಹನಿ ಮೊದಲಾದುವುಗಳು ನಾಮ ಮತ್ತು ಧಾತುಗಳೆರಡರಲ್ಲಿಯೂ ನಡೆಯತ್ತಿದ್ದುದು ಶಬ್ದಮಣಿ ದರ್ಪಣದ ಧಾತುಕೋಶದಿಂದ ಗೊತ್ತಾಗುತ್ತದೆ. ಆದರೆ, ಇವು ಈಗ ಕೇವಲ ನಾಮ ಅಥವಾ ಧಾತುಗಳಿರುವುದೆ ಹೆಚ್ಚಾಗಿದೆ. ಇದರಿಂದ ನಮಗಿದ್ದ ನುಡಿಗಳನ್ನು ಬೇಕಾದ ಹಾಗೆ ಮಾರ್ಪಡಿಸಿಕೊಳ್ಳಬಹುದಾದ ಸಾಮರ್ಥ್ಯವನ್ನು ಕಳೆದುಕೊಂಡು ಬಡವರಾಗಿದ್ದೇವೆ. ಮೂಗು ಇದರಿಂದ ಮೂಸು ಸಿದ್ಧವಾಗಿದೆ: ಬೆರಲು-ಬೆರಂಟು. ಉಗುರು-ಉಗುರಿಸು ಇಂತಹ ಉದಾಹರಣೆಗಳಿಂದ ಯಾವುದೊಂದು ನಾಮಪದವನ್ನು ಕ್ರಿಯಾವಾಚಿಯಾಗಿ ಮಾಡಿಕೊಳ್ಳಲು ಇದ್ದ ಹಿಂದಿನವರ ಹಂಚಿಕೆಯು ತಿಳಿದು ಬರುವುದು. ಇಂತಹ ಯುಕ್ತಿಗಳಿಂದ ಈಗ ಮತ್ತೆ ಹೊಸ ಧಾತುಗಳನ್ನು ಮಾಡಿಕೊಂಡರೆ ಆಗದೆ? ಈ ಪುಸ್ತಕದ ೪ ಮತ್ತು ೫ನೆಯ ಅಧ್ಯಾಯಗಳಲ್ಲಿ ಈ ವಿಷಯವನ್ನು ಇನ್ನೂ ಸ್ವಲ್ಪ ವಿಸ್ತಾರದಿಂದ ಅರಿತುಕೊಳ್ಳಬಹುದು.

ಈ. ಕಂನುಡಿಯಲ್ಲಿ ಬಗೆಬಗೆಯ ಅರ್ಥಗಳನ್ನು ವ್ಯಕ್ತಪಡಿಸುವ ಅಗಾಧವಾದ ಶಕ್ತಿಯಿದೆ. ಅದನ್ನು ನಾವು ದರ್ಲಕ್ಷಿಸಿದ್ದೇವೆ. ಆದರೆ ಸ್ವಲ್ಪ ತಿಳಿಗಣ್ಣಿನಿಂದ ನೋಡಿದರೆ ನಮ್ಮ ಈ ನುಡಿಗಳ ಬೆಡಗು ಚೆನ್ನಾಗಿ ಕಂಡು ಬರದೆ ಇರದು.

(i) ಈ ಶಬ್ದದ ಉಚ್ಚಾರದೊಡನೆ ತಟ್ಟನೆ ಅರ್ಥವನ್ನು ಸೂಚಿಸುವ ಶಕ್ತಿಯುಳ್ಳ ಶಬ್ದಾನುಕೃತಿಯ (onomatopoetic) ಎಷ್ಟೊ ನುಡಿಗಳಿವೆ. ಸಾಹಿತ್ಯದಲ್ಲಿ ಈ ಗುಟ್ಟನ್ನು ಅರಿತು ನುಡಿಗಳನ್ನು ಬಳಸಿದರೆ, ಆ ಮಾತಿನಲ್ಲಿ ಒಂದು ಸೊಗಸು ಉಂಟಾಗುವುದು. ಬೇಟೆಯ ವರ್ಣನೆಯಲ್ಲಿ ಲಕ್ಷ್ಮೀಶನು 'ಬೊಬ್ಬಿರಿದು', 'ಆರ್ದು' ಎಂಬ ಮಾತುಗಳನ್ನು ಆಗಾಗ ತರುವನು, ಬೊಬ್, ಆರ್ ಎಂಬ ಧ್ವನಿಗಳೇ ಆ ಶಬ್ದಗಳ ಅರ್ಥವನ್ನು ಒಮ್ಮೆಲೆ

ಮನಸ್ಸಿನ ಮೇಲೆ ಮೂಡಿಸುವುವು. ಅರ್ಭಟ; ಆರ್ಭಾಟ, ಅರಚು ಇಲ್ಲವೆ 'ಆರ್' ಎಂಬ ಕೂಗಿನಿಂದ ಆದ ನುಡಿಗಳು ಈ ಬಗೆಯಾಗಿ ಧ್ವನಿಯ ಅನುಕರಣದಿಂದ ಮಾಡಿಕೊಂಡ ನುಡಿಗಳು ಇನ್ನೂ ಹಲವಿವೆ. ಆದರೆ, ಇವು 'ಗಂಟೆ' ಜಾತಿಯ ನುಡಿಗಳೆಂದು ಗೊತ್ತಿಲ್ಲದ್ದರಿಂದ, ಅವುಗಳ ನಾದದ ಸ್ವಾರಸ್ಯವು ತಿಳಿದು ಆಗ ಬೇಕಾದಷ್ಟು ಹಿಗ್ಗು ನಮ್ಮ ಜನಗಳಿಗೆ ಉಂಟಾಗುತ್ತಿಲ್ಲ. ಊದು, ಓದು, ಕೂಗು, ಧುಮುಕು, ಸರಿ (ಸರ್), ಜರೆ (ಜರ್). ಈ ಮೊದಲಾದ ಧಾತುಗಳು ಈ ವರ್ಗಕ್ಕೆ ಸೇರಿದುವು. ಎಷ್ಟೊ ಪ್ರಾಣಿವಾಚಕ ನಾಮಗಳೂ ಇದೇ ಬಗೆಯಾಗಿವೆ. ಗಿಳಿ (ಕಿಲಿ, ಕಿಲಿ = ಗಿಳಿ). ಕೋಗಿಲೆ, ಕಾಗೆ, ಗೂಗೆ, ಕೋಳಿ, ಗುಂಗಾಡು, ಗುಂಗಿಹುಳು, (ಟುಬಾ-ತುಬ್), ಚಟಾಕಿ (ಪಟಾಕಿ), ಸೊನೆ, ಸೋನೆ (ಸು(೦)ಯ್ಯನೆ ಜೋರಿನಿಂದ ಹೊರಬರುವುದರಿಂದ), ಮೊರೆ, ಡಂಗುರ, ಓಕರಿಕೆ ಮೊದಲಾದುವುಗಳ ಅರ್ಥವು ಅದರಲ್ಲಿಯೆ ತುಂಬಿಕೊಂಡು ಹೊರಹೊಮ್ಮುತ್ತಲಿದೆ. ಇವೆಲ್ಲವುಗಳ ಅನುಕರಣ ಶಬ್ದವಿಭಾಗದ ಮೇಲೆ ಸ್ವಲ್ಪ ಜೋರು ಕೊಟ್ಟು ಹೇಳಿದರೆ, ಕೂಡಲೆ ಅರ್ಥಪ್ರತೀತಿಯಾಗಿ ಆನಂದವುಂಟಾಗುವುದು. ಇದನ್ನು ಕುರಿತು 'ಕಂನುಡಿಯ ಜೀವಾಳ' ಎಂಬ ಗ್ರಂಥದಲ್ಲಿ ಸಂಪೂರ್ಣ ವಿವೇಚನೆ ಬಂದಿದೆ.

ಸವಿ, ಸಿಹಿ, ಕಹಿ, ಇಸ್ಸಿ (ಹೇಸಿ) ಈ ನುಡಿಗಳನ್ನು ಸರಿಯಾಗಿ ಉಚ್ಚರಿಸದೆ, ಇದ್ದರೆ, ಇವುಗಳೊಳಗಿನ ಅರ್ಥದ ಸೊಗಸು ಅನುಭವಕ್ಕೆ ಬರುವುದಿಲ್ಲ. ಸವಿ, ಸಿಹಿ ಇದರೊಳಗಿನ 'ಸ್' ಇದು ಬಹಳ ಅರ್ಥವತ್ತಾದ ಭಾಗ. ಒಳ್ಳೆ ಸವಿಯಾದ ಪದಾರ್ಥವನ್ನು ನಾಲಗೆ ಚಪ್ಪರಿಸಿ ಒಳಗೆ ಉಸಿರೆಳೆದು ಸೀಪುವಾಗ ಆಗುವ ಶಬ್ದವನ್ನು ಅದು ಸೂಚಿಸುತ್ತದೆ. ಇದರ ವಿರುದ್ಧವಾಗಿ ತಮ್ಮ ರುಚಿಗೆ ಸರಿಹೋದುದನ್ನು-ಬೇಡವಾದುದನ್ನು-ಕಹ್, ಇಸ್ ಎಂದು ಧ್ವನಿಮಾಡಿ ಹೊರಗೆ ಹಾಕುವುದುಂಟು: ಅದುವೆ ಕಹಿ, ಇಸ್ಸಿ (ಹೇಸಿ)

ಈ ಬಗೆಯಾದ ಸಹಜ ಸ್ವಾಭಾವಿಕ ಅರ್ಥಶಕ್ತಿಯುಳ್ಳ ಶಬ್ದಗಳು (ಹುಟ್ಟು ನುಡಿಗಳು) ಭಾಷೆಯಲ್ಲಿ ಹೆಚ್ಚಿದಷ್ಟೂ ಒಳ್ಳಿತೆ. ಈಗ ಇರುವುವುಗಳನ್ನು ಅರಿತುಕೊಂಡು, ಅದರಂತೆ ಇನ್ನು ಮುಂದೆ ಬೇಕಾಗುವ ನುಡಿಗಳನ್ನು ಹೊಸದಾಗಿ ಮಾಡಿಕೊಂಡು, ಅವನ್ನು ಬಳಕೆಯಲ್ಲಿ ತರುವ ಎದೆಗಾರಿಕೆ ಆ ಜಾಣ್ಮೆ ಇನ್ನು ಕಂನಾಡಿಗರಲ್ಲಿ ಮತ್ತೆ ತಲೆದೋರಲಾರದೆ? (ii) ಕಂನಾಡ ನುಡಿಗಳಲ್ಲಿ ಹುದುಗಿಕೊಂಡಿರುವ ಧಾತ್ವರ್ಥವು ಸರಿಯಾಗಿ ತಿಳಿದರೆ ಆ ಶಬ್ದವನ್ನು ತಕ್ಕ ಎಡೆಗಳಲ್ಲಿ ಬಳಸುವಾಗ ಹೇಳುವ ಮತ್ತು ಕೇಳುವವರಿಬ್ಬರಿಗೂ ಆಗುವ ಹಿಗ್ಗು ಅಷ್ಟು ಇಷ್ಟು ಅಲ್ಲ. ಕಂನುಡಿಯೊಳಗಿನ ಈ ಸವಿಯು ಗೊತ್ತಾದ ಬಳಿಕ ಅವುಗಳ ಬದಲು ಪರಭಾಷೆಯ ಶಬ್ದಗಳನ್ನು ಉಪಯೋಗಿಸುವುದಕ್ಕೆ ನಾಲಗೆ ಏಳದು.

ಹೋರಿ, ತಗರು ಮತ್ತು ಮೇಕೆ ಈ ಮೂರು ಪ್ರಾಣಿಗಳ ಹೆಸರನ್ನೆ ತಕ್ಕೊಳ್ಳುವ. ಇದರಲ್ಲಿ ಎಷ್ಟು ಅರ್ಥವು ಹುದುಗಿವೆ! ಹೋರುವ ಸ್ವಭಾವವಿದ್ದುದೆ ಹೋರಿ; ಆ ಮುಂದಿನ ವಯಸ್ಸಿನಲ್ಲಿ ಅದು ಎತ್ತು ಎನಿಸುವುದು. ತಗರು ಧಾತುವಿಗೆ ನಿಲ್ಲಿಸು, ತಡೆ ಎಂಬರ್ಥವಿರುವುದೆಂದು ಕೇಶಿರಾಜನು ಹೇಳಿದ್ದಾನೆ. ಅಡ್ಡಗಟ್ಟಿ ತರುಬುವ-ತಗರುವ ಸ್ವಭಾವವುಳ್ಳುದೆ ತಗರು(ಟಗರು). ಮೇ, ಮೇಲೆ ಎಂದು ಎಡೆಬಿಡದೆ ಕೂಗುವ ಪ್ರಾಣಿ 'ಮೇಕೆ' ; ಇದನ್ನು ಸಂಸ್ಕೃತ 'ಮೇಷ'ದೊಡನೆ ಹೋಲಿಸಿ ನೋಡಿ.

ಇಂತಹ ಔಚಿತ್ಯವು ಎಲ್ಲಿಯೋ ಒಂದೆರಡು ನುಡಿಗಳಲ್ಲಿದೆ ಎಂದು ಭಾವಿಸಲಾಗದು. ಕಂನುಡಿಯಲ್ಲಿ ಅರ್ಥಸ್ವಾರಸ್ಯವುಳ್ಳ ಶಬ್ದಗಳಿಗೆ ಕೊರತೆಯಿಲ್ಲ. ಪರ್ರನೆ ಪರಿದು (ಹಾರಿ) ಹೋಗುವ ಸ್ವಭಾವವಿರುವದೆಂದು ಪರ್ದು-ಹದ್ದು. ಕೂಳಿಯ (ತಿಂದು ತಿರುಗುವುದೆಂದು) ಗೂಳಿ. ಮಾತುಮಾತಿಗೆ ಇಂತಹ ಅರ್ಥಪೂರ್ಣ ಶಬ್ದಗಳನ್ನು ತೋರಿಸಿಕೊಡಬಹುದು.

ಮಗು ಮತ್ತು ಮರಿ ಶಬ್ದಗಳಲ್ಲಿ ಇನ್ನೂ ಸ್ವಲ್ಪ ವಿಶೇಷ ಅರ್ಥವಿದೆ. ಮಗುಳು, ಮರಳು ಎಂದರೆ ತಿರುಗು ಎಂಬ ಅರ್ಥವಿರುವುದನ್ನು ಎಲ್ಲರೂ ಬಲ್ಲರು. ಮಗುಳುವವನೆಂದು ಮಗು (ಮಗ); ಮರಳುವುದೆಂದು ಮರಿ. ತಂದೆಯೇ ಕೂಸಿನ ರೂಪದಲ್ಲಿ ತಿರುಗುವನೆಂದು ಈ ಜನಾಂಗದ ಕಲ್ಪನೆ! ಆದುದುರಿಂದಲೆ ಮಕ್ಕಳಿಗೆ ಮಗು, ಮರಿ ಎಂಬ ಹೆಸರು.

ಉ. ಸೂಕ್ಷ್ಮಾರ್ಥಭೇದವುಳ್ಳ ಮೇಳದ ನುಡಿಗಳು ಅದೆಷ್ಟೋ ಇವೆ. ಆದರೆ, ಅವುಗಳ ನಡುವಿನ ಅಂತರವು ಮಾತ್ರ ಮರೆತುಹೋಗಿದೆ: ಕಳವು ಮತ್ತು ತುಡುಗು ಶಬ್ದಗಳಲ್ಲಿರುವ ಅರ್ಥಭೇದದ ಅರಿವೆ ಈಗ ಉಳಿದಿಲ್ಲ! ಕಳೆದಂತೆ ಆದುದು-ತಿಳಿಯದೆ ಹೋದುದು ಕಳವು. ಮೈಮೇಲೆ ಏರಿಬಂದು ತುಡುರಿ, ತುಡುಕಿ (ಕಸಿದು) ಒಯ್ದುದು ತುಡುಗು. ಇಂಗ್ಲೀಷಿನೊಳಗಿನ Theft ಮತ್ತು robbery ಗಳಲ್ಲಿರುವ ವ್ಯತ್ಯಾಸವೇ ಮೇಲಣ ಎರಡೂ ನುಡಿಗಳಲ್ಲಿದೆ. ಆದರೆ, ಸಂಸ್ಕೃತ ಇಂಗ್ಲೀಷು ಭಾಷೆಯವರಂತೆ ನಾವು ನಮ್ಮ ಭಾಷೆಯೊಳಗಿನ ಕುಸುರಿಯನ್ನು ಉಳಿಸಿ ಬೆಳೆಸಿಕೊಳ್ಳುವ ಪ್ರಯತ್ನವನ್ನೇ ಮಾಡಿಲ್ಲವಲ್ಲ!

ತಂಪು, ಚಳಿ ಮತ್ತು ಕುಳಿರು ಈ ಮೂರು ಶೈತ್ಯವಾಚಕ ಶಬ್ದಗಳಲ್ಲಿ ಇರುವ ಅಂದವನ್ನು ಎಷ್ಟೆಂದು ಹೇಳಬೇಕು! ಶೈತ್ಯದ ಆರಂಭ ಸ್ಥಿತಿ ತಂಪು (ತಂಡಿ); ಅದರ ಮುಂದಿನ ಮಟ್ಟಕ್ಕೆ ಬಂದ ತಂಪ ಚಳಿ-ನಡುಕವಾಗುವುದು; 'ಕಂಡು' 'ಕುಡು' ನೆ ನಡುಗುವುದಕ್ಕೆ ಹಚ್ಚುವುದು. ಚಳಿಯ ಎಂದರೆ ಲಟಕಟಸುವ ಹೆಚ್ಚಿನ ಸ್ಥಿತಿಯೇ 'ಕೋಡು' ಮರಾಠಿಯಲ್ಲಿ 'ಥಂಡಿನೆ ಕುಡಕುತೊ' ಎಂದು ಹೇಳುವರು. ನಡುಕ, ಕೋಡು (ಕುಡುಕುಡು) ಗಳಿಗಿಂತಲೂ ಒಂದು ತೂಕ ಹೆಚ್ಚಿನ ಸ್ಥಿತಿಯು ಆದಾಗ ನಿಲ್ಲುವುದಕ್ಕಾಗದೆ ಮುದುಡಿಕೊಂಡು ಕುಳ್ಳಿರಬೇಕೆಂಬ ಸ್ಥಿತಿಗೆ-ಹೆಪ್ಪುಗಟ್ಟುವ ಅವಸ್ಥೆಗೆ ಬಂದುದೆ ಕುಳಿರು. ತಂಪಿನ ಮೊದಲಿನಿಂದ ಕೊನೆಯ ಸ್ಥಿತಿಯ ವರೆಗಿನ ಎಲ್ಲ ಭೇದಗಳನ್ನು ಸ್ಪಷ್ಟವಾಗಿ ಸೂಚಿಸುವ ಎಷ್ಟು ಅರ್ಥವತ್ತಾದ ನುಡಿಗಳಿವು!

ಭೀತಿಯೆಂಬರ್ಥದ ಮಾತುಗಳಲ್ಲಿ ಇರುವ ಸೂಕ್ಷ್ಮವಾದ ಅರ್ಥಭೇದವು ಜಗತ್ತಿನ ಬೇರೆ ಯಾವ ಭಾಷೆಯ ಇಂತಹ ಶಬ್ದಗಳಲ್ಲಿದೆಯೆ ಎಂಬುದು ಸ್ವಲ್ಪ ಸಂದೇಹಾಸ್ಪದವಾಗಿದೆ. ಪ್ರಾಣಿಗಳಲ್ಲಿ ಭೀತಿಯು ಮೂರು ಬಗೆಯಿಂದ ಕಾಣಿಸಿಕೊಳುತ್ತದೆ. ಕೆಲರು ಭಯಗೊಂಡು ಕಂದಿ ಕುಂದಿ ಮುದುಡಿ ಮುರುಟಿಕೊಳ್ಳುವರು: ಆಗಿ, ಸುಗಿ, ಸುರುಳ್ಚು, ಅಂಜು ಇವೆಲ್ಲ ಭೀತಿಯ ಈ ಅವಸ್ಥಾದರ್ಶಕ ಶಬ್ದಗಳಾಗಿವೆ. ಕೆಲಸಾರೆ ಭೀತಿಯಿಂದ ಗಡಗಡನೆ ನಡುಗುವುದನ್ನೆ ನಡುಕ, ಅಳುಕು, ಇವು ಸೂಚಿಸುವುವು. ಭೀತಿಯ ಮೂರನೆಯ ಪ್ರಕಾರವೊಂದಿದೆ. ಹೆದರಿದಾಗ ಶರೀರ ಗ್ರಂಥಿಗಳು ಸಡಿಲಾಗುವುದುಂಟು. ಮೊದಲನೆಯವಸ್ಥೆಯಲ್ಲಿ ಶರೀರ ಗ್ರಂಥಿಗಳು ಆಕುಂಚನವನ್ನು ಹೊಂದುವುದರಿಂದ ಭೀತಿಯಿಂದ ಕಣ್ಣುಮುಚ್ಚಿ ಕೈಕಾಲು ಮುದುಡಿಕೊಂಡು ಬೀಳುವರು. ಮೂರನೆಯ ಪ್ರಕಾರ ದಲ್ಲಿ ತೆರವಾಯಿಯಾಗಿ ನಾಲಗೆ ಹೊರದೆಗೆದು ಕಣ್ಣುಬಿಟ್ಟು, ಎದೆಬಿರಿದು ಅದೇ ಕಾಲಕ್ಕೆ ಒಂದು-ಎರಡು ಎಲ್ಲವೂ ಆಗಿ ಬಿಡುವುದುಂಟು. ಬೆರ್ಚು-ಬೆಚ್ಚು, ಬೆದರು ಹೆದರು ಎಂಬಿವು ಈ ಬಗೆಯ ಭೀತಿಯನ್ನು ಚಿತ್ರಿಸುವ ಶಬ್ದಗಳಾಗಿವೆ. ಬೆರ್ಚು ಇದರಲ್ಲಿರುವ 'ಬಿರಿ' ಎಂಬ ಮೂಲ ಶಬ್ದದಲ್ಲಿರುವ ಇಷ್ಟೆಲ್ಲ ಅರ್ಥವು ಅಡಕವಾಗಿದೆ.

ಊ. ಮೇಲಿಂದ ಮೇಲೆ ಆದ ಬೇರೆ ಬೇರೆ ಪರಭಾಷೆಗಳ ಆಘಾತಗಳಿಂದ ಕಂನುಡಿಯ ಪರಂಪರೆಯು ಹರಿಗಡಿದು ಹೋಗಿ ಬಹಳ ಹಾನಿಯಾಗಿದೆ. ಹಿಂದಿನ ತಲೆಯವರು ಮಾಡಿದ ವಿಚಾರ, ಅನುಭವ, ಪರಿಶ್ರಮಗಳ ಲಾಭವು ಮುಂದಿನ ಪೀಳಿಗೆಯ ವರಿಗೆ ದೊರೆಯದಿದ್ದರೆ ಯಾವ ಜನಾಂಗದ ಪ್ರಗತಿಯಾಗುವುದು ಸಾಧ್ಯ? ಈಗಲಾದರೂ ಕಂನಾಡಿಗರಿಗೆ ಹಿಂದಿನ ಪರಂಪರೆಯ ಲಾಭವನ್ನು ಪಡೆವ ಬುದ್ಧಿಯುಂಟಾಗದಿದ್ದರೆ ಇವರ ಏಳ್ಗೆಯ ಆಶೆಯಿಲ್ಲ. ಹಿಂದಿನ ಸಾಹಿತ್ಯದಲ್ಲಿ ಎಷ್ಟು ಅಂದ-ಚೆಂದದ ಕುಸುರಿಯ ಜಾಣೆಯ ನುಡಿಗಳಿವೆ! ಅವಕ್ಕೆ ಹಳೆಯವೆಂದು ಹೆಸರಿಟ್ಟು ಕಡೆಗಣಿಸಿ ಹಾನಿಗೆ ಈಡಾಗಿದ್ದೇವೆ. ಮನೆಯಲ್ಲಿ ನಿಧಿನಿಕ್ಷೇಪಗಳಿರುವಾಗ ಹೆರವರ ಬಾಗಿಲು ತಿರಿಯುವುದು ಮಾನಗೇಡು. 'ಹಳನುಡಿ' ಎಂದು ಹೆದರಿ ದೂರ ಸರಿಯುವುದಕ್ಕಿಂತ ಶಕ್ಯವಿದ್ದಷ್ಟು ಅದರಿಂದ ತನ್ನ ಲಾಭ ಮಾಡಿಕೊಳ್ಳುವುದರಲ್ಲಿಯೆ ಜಾಣತನವಿದೆ. ಛಾಸರ್, ಶೆಕ್ಸಪಿಯರ್, ಮಿಲ್ಟನ್, ಬೇಕನ್‌ರಿಂದ ಇಂಗ್ಲೀಷಿನವರು ಈಗಲು ಬೆಳಕು ಪಡೆಯುವುದಿಲ್ಲವೆ? ನಾವು ಮಾತ್ರ ಹಿಂದಿನ ಸಾಹಿತಿಗಳಿಂದ ಲಾಭವನ್ನು ಪಡೆಯದಿರಲಿಕ್ಕೆ ಕಂನಾಡಿನ ಪಂಪ-ರನ್ನಾದಿಗಳು ಮಾಡಿದ ತಪ್ಪೇನು?

ಹಿಂದಿನವರು ಮಾಡಿಕೊಂಡ ಅರ್ಥವತ್ತಾದ ಶಬ್ದಗಳಿವೆ. ಅವುಗಳನ್ನು ಬಿಡುವುದರಿಂದ ಬಂದ ಲಾಭವೇನು? ಉದಾಹರಣೆಗಾಗಿ ಒಂದೆರಡು ನೋಡುವ: ಮಳೆ, ಬಿಸಿಲು, ಗಾಳಿಗಳಿಂದ ನಮ್ಮನ್ನು ಕಾಯ್ದುಕೊಳ್ಳುವುದಕ್ಕಾಗಿ

ಮಾಡಿಕೊಂಡ ತಾತ್ಪೂರ್ತಿಕ ಚಾವಣಿಗೆ 'ಕಾವಣ' ವೆಂಬ ಹೆಸರು. ಹೇರ. ಹೇರಿಗನೆಂದು ಬೇಹಿನವ, ಗುಪ್ತಾಚಾರನೆಂದು ಅರ್ಥವತ್ತಾದ ಶಬ್ದ, ಸುದ್ದಿಗಳನ್ನು (ಬೇರೆಯವರು ಅರಿಯದಂತೆ) ಹೇರಿಕೊಂಡು ಬರುವವನೆ ಹೇರ ಅಥವಾ ಹೇರಿಗ. ಮರಾಠಿಯಲ್ಲಿ ಈ ಶಬ್ದವು ರೂಢವಿದ್ದೂ ಕಂನುಡಿಯಲ್ಲಿ ಕಾಣದಾಗಿದ್ದುದು ಶೋಚನೀಯ. ಕಣ್ಗಾಪು, ಕಾಲ್ಗಾಪು ಎಂಬ ನುಡಿಗಳು ಹಿಂದಿನ ಸಾಹಿತ್ಯದಲ್ಲಿ ದೊರೆಯುತ್ತವೆ. ಕಾಪು ಎಂದರೆ ಕಾವಲು, ಕಣ್ಣಿನಿಂದ ಮಾಡು ಕಾಪು-ಕಣ್ಗಾಪು, ಕಣ್ಣಲ್ಲಿ ಕಣ್ಣಿಟ್ಟು ಬಹಳ ಎಚ್ಚರದಿಂದ ಸೂಕ್ಷ್ಮ ನಿರೀಕ್ಷಣೆಯಿಂದ ಮಾಡಬೇಕಾದುದು. ಕಾಲ್ಗಾಪಿನಲ್ಲಿ ಕಣ್ಗಾಪಿನಷ್ಟು ಧೂರ್ತತನ ಧೋರಣೆಗಳಿಲ್ಲ. ಕಾಲಾಣ ನಿಂತುಕೊಂಡು ಮಾಡುವ ಕಾವಲು. 'ಬಂದ ಮಾವು' ಎಂಬುದು ಬಹಳ ಸವಿಯಾದ ಮಾತು. ಇದರೊಳಗಿನ ಬಂದ ಶಬ್ದದ ಔಚಿತ್ಯವನ್ನು ಬಲ್ಲವನೆ ಬಲ್ಲ. 'ಬಂದ' ಎಂಬುದರಲ್ಲಿ ಕೃತ್ರಿಮತೆಯ ಗಾಳಿಯು ಸಹ ಇರಲಾರದು. ತಾನಾಗಿ ಸಹಜ ಸ್ವಾಭಾವಿಕವಾಗಿ ಪರಿಪಕ್ವ ಸ್ಥಿತಿಗೆ ಬಂದುದು; ಕೈಗೆ ಬಂದುದು. 'ಮಾಡುವೆಟ್ಟ' ಎಂಬಲ್ಲಿರುವ 'ಮಾಡು' ಶಬ್ದಕ್ಕೆ ಕೃತ್ರಿಮವಾದುದು. ಸ್ವಾಭಾವಿಕವಲ್ಲದ್ದು ಎಂಬರ್ಥವಿದೆ. ಆಗಾಗ, ಕಂನಾಡ ಪರಂಪರಾವಿಚ್ಛೇದವಾಗಿ ಇಂತಹ ಅನೇಕಾನೇಕ ಹುರುಳಿನ ಮಾತುಗಳಿಗೆ ತಿರುಳಿನ ಎರವಾಗಿ ನಮಗೆ ಬಡತನದ ಭ್ರಮೆಯುಂಟಾಗಿದೆ.

೬೨. ಕಂನುಡಿಯೊಳಗಿನ ಎಲ್ಲಮಾತುಗಳ ಹುಟ್ಟನ್ನು ಕಂಡುಹಿಡಿದು ಅದರೊಳಗಿನ ಸೊಬಗನ್ನು ವಿವರಿಸಿ ಬರೆವ ಕೆಲಸವು ಬಲ್ಲವರಿಂದ ಇನ್ನೂ ಆಗಬೇಕಾಗಿದೆ. ನಮ್ಮ ನುಡಿಗಳಲ್ಲಿ ಬಗೆಬಗೆಯ ಅರ್ಥಗಳನ್ನು ಸೂಚಿಸುವ ಶಕ್ತಿಯಿದೆಯೆಂಬ ನಂಬುಗೆಯು ಇಲ್ಲದುದರಿಂದ ಅಚ್ಚಕಂನುಡಿಯಿಂದಲೆ ಶ್ಲೇಷ, ವ್ಯಂಗ್ಯ ವಿನೋದಾದಿಗಳನ್ನು ಸಾಧಿಸಲಿಕ್ಕೆ ಪ್ರಯತ್ನಪಟ್ಟವರು ಸಿಕ್ಕುವುದು ಕಷ್ಟ. ಆಟ-ಊಟಗಳಿಗಿಂತ ಹೆಚ್ಚಿನ ವಿಚಾರಗಳನ್ನು ಹೊರಪಡಿಸುವಾಗಲೆಲ್ಲ ಕಂನುಡಿಯನ್ನು ಬಳಸಲಾಗದೆಂಬ ಪಣತೊಟ್ಟಂತೆ ಕಾಣುತ್ತದೆ ನಮ್ಮ ಜನ! ಹೀಗಾದರೆ ಕಂನುಡಿಯಲ್ಲಿ ಹೊಟ್ಟೆಯ ಪಾಡಿನ ಮಾತುಗಳಿಗಿಂತಲೂ ಮೇಲಣ ಮಟ್ಟದ ನುಡಿಗಳು ಬೆಳೆವ ಬಗೆ ಹೇಗೆ?

೬೩. ಸಂಸ್ಕೃತ ಲೇಖಕರು ತಾವು ಬಳಸುವ ಪ್ರತಿಶಬ್ದದ ನಿರುಕ್ತವನ್ನು ಶಕ್ಯವಿದ್ದಷ್ಟು ಪ್ರಯತ್ನದಿಂದ ಅರಿತುಕೊಳ್ಳುತ್ತಿದ್ದರು. ಪದಗಳನ್ನು ವಿವಿಧ ರೀತಿಗಳಿಂದ ಉಪಯೋಗಿಸಿಕೊಂಡು ತಮ್ಮ ಬರೆಹದಲ್ಲಿ ಸೊಗಸು ಉಂಟಾಗುವಂತೆ ಮಾಡುತ್ತಿದ್ದರು. ಅದರಿಂದ ಸಂಸ್ಕೃತ ಶಬ್ದಗಳಲ್ಲಿ ಆಳವಾದ ಅರ್ಥವು ನಿಂತುಕೊಳ್ಳಲು ಅವಕಾಶವಾಯಿತು. ಎಷ್ಟೋ ಸಾರೆ ಕೇವಲ ಕಾಲ್ಪನಿಕ ವ್ಯುತ್ಪತ್ತಿಯನ್ನು ಸಹ ಹೇಳಿ ತಮ್ಮ ಕೆಲಸ ಸಾಧಿಸಿಕೊಂಡಿರುವರು. ಛಾಂದೋಗ್ಯ ಉಪನಿಷತ್ತಿನಲ್ಲಿ "ಸಂಪನ್ನೋಭವತಿ. ಸ್ವಮ್ ಅಪೀತೋ ಭವತಿ, ತಸ್ಮಾತ್ ಏನಂ ಸ್ವಪಿತೀತ್ಯಾಚಕಷ್ತೇ" ಎಂದು 'ಸ್ವಪ್' (ಮಲಗು) ಶಬ್ದದ ವಿಲಕ್ಷಣವಾದ ನಿರ್ವಚನವನ್ನು ಹೇಳಿದ್ದಾಗಿದೆ.

ನಮ್ಮಲ್ಲಿಯೂ ಇದೇ ಬಗೆಯಾಗಿ ನುಡಿಗಳಲ್ಲಿ ಅರ್ಥದ ಆಳವು ಹೆಚ್ಚಾಗುವಂತೆ ತಮಗೆ ಪ್ರಾಮಾಣಿಕವಾಗಿ ತಿಳಿದ ವ್ಯುತ್ಪತ್ತಿಗಳನ್ನು ಮೊದಲಿನಿಂದ ಹೇಳುತ್ತ ಬಂದಿದ್ದರೆ ಕಂನುಡಿಯಲ್ಲಿಯೂ ಅರ್ಥವೈಶಾಲ್ಯವು ಉಂಟಾಗಬಹುದಾಗಿತ್ತು. 'ತಿರೆ' ಎಂದು ಭೂಮಿಗೆ ಹೆಸರು. ತಿರ್‍ರನೆ ತಿರಿಗುವುದೆಂದು ಭೂಮಿಗೆ ತಿರೆ ಎಂಬ ಹೆಸರು ಬಂದಿರಬೇಕು, ಎಂದು ಮುಂತಾಗಿ ಮೇಲೆ ಉದಾಹರಿಸಿದ ಉಪನಿಷತ್ತಿನ ಋಷಿಯ ಪದ್ಧತಿಗೆ ಅನುಸರಿಸಿ ನಿರುಕ್ತವನ್ನು ಹೇಳಿ ನಮ್ಮ ಮಾತಿನಲ್ಲಿಯೂ ವಿಶೇಷಾರ್ಥಗಳನ್ನೂ ಕಲ್ಪಿಸಿದ್ದರೆ ಎಷ್ಟು ಚೆನ್ನಾಗಬಹುದಾಗಿತ್ತು. ಆದರೆ, ಇದಕ್ಕೆ ವಿಪರೀತವಾಗಿ ಅಚ್ಚಕಂನುಡಿಯ ಅಂದಚೆಂದದ ಎಷ್ಟೊ ನುಡಿಗಳನ್ನೇ ಸಂಸ್ಕೃತದಿಂದ ಬಂದುವೆಂದು ಸಾಧಿಸುವುದರಲ್ಲಿ ಹೆಮ್ಮೆ ಪಟ್ಟುಕೊಂಡಿದ್ದೇವೆ. ತಿರೆಯೆಂಬುದು 'ಸ್ಥಿರಾ' ಎಂಬ ಸಂಸ್ಕೃತ ಶಬ್ದದಿಂದ ಬಂದಿದೆಯೆಂಬುದು ನಿಜ. ಆದರೆ, ಕಂನುಡಿಯಲ್ಲಿ ಅದರ ಅರ್ಥವು ಮಿನುಗಬೇಕಾಗಿದ್ದರೆ ಸಂಸ್ಕೃತದಿಂದ ವ್ಯುತ್ಪತ್ತಿಯನ್ನು ಹೇಳಿದರೆ ಅದು ಸಾಧ್ಯವಿಲ್ಲ.

ಆದರೆ, ಪರಭಾಷೆಯಿಂದ ಎತ್ತಿಕೊಂಡ ಶಬ್ದಗಳಿಗೆ ತಮ್ಮ ಭಾಷೆಯಿಂದ ಅರ್ಥಹೇಳುವುದು ಸಶಾಸ್ತ್ರೀಯವಾಗಲಾರದು. ಭಾಷೆಯು ಮುಖ್ಯವಾಗಿ ಸಂಕೇತಮೂಲಕವಾದುದು. ಆದುದರಿಂದ, ನಾವು ಈ ಶಬ್ದಕ್ಕೆ ಇಂತಹ ಅರ್ಥವನ್ನೇ ಕಲ್ಪಿಸುತ್ತೇವೆಂದು ಪ್ರತಿಪಾದಿಸಿ ಮೇಲ್ಕಾಣಿಸಿದಂತೆ ನಿರುಕ್ತವನ್ನು ಹೇಳಬಹುದು. ಆದರು

ತುಲನಾತ್ಮಕ ಭಾಷಾಶಾಸ್ತ್ರದ ದೃಷ್ಟಿಯಿಂದ ಇದು ಈಗಿನ ಕಾಲಕ್ಕೆ ಅಷ್ಟು ತಕ್ಕುದೆಂದು ಎನಿಸಲಾರದು. ಹಿಂದಕ್ಕೆ ಸಂಸ್ಕೃತದಿಂದ ಕಂನುಡಿಯಲ್ಲಿ ಸ್ಥಿರಾ=ತಿರೆ ಎಂಬುದು ಬಂದಿತೆಂಬ ಮಾತು ಹಾಗಿರಲಿ; ಸೂರ್ಯನ ಸುತ್ತ ತಿರುಗುವಂತಹದು. ಮತ್ತು ದೈನಂದಿನ ಗತಿಯುಳ್ಳಂತಹದು ಎಂಬರ್ಥದಲ್ಲಿ 'ತಿರೆ' ಎಂಬ ಹೊಸ ನುಡಿಯನ್ನು ನಾವು ಈಗ ಹುಟ್ಟಿಸಿಕೊಳ್ಳುತ್ತೇವೆಂದು ಹೇಳಿದರೆ ಮಾತ್ರ ಆ ಮಾತು ಬೇರೆ.

೬೪. ಮಾತಿನೊಳಗಿನ ಆವುದೊಂದು ನುಡಿಯ ಹುಟ್ಟನ್ನು ಕಂಡುಕೊಳ್ಳುವಾಗ ಒಂದೆರಡು ಸಂಗತಿಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳುವುದು ಅವಶ್ಯವಿದೆ. ಯಾವ ಶಬ್ದದ ಹುಟ್ಟು ಹೇಳಬೇಕಾಗಿದೆಯೊ ಅದರ ಪ್ರಾಚೀನ ರೂಪವನ್ನು ಮೊದಲು ಲಕ್ಷಿಸಬೇಕು. 'ಎತ್ತು' ಶಬ್ದದ ಮೊದಲಿನ ರೂಪವು ಎಟ್ಟು ಎಂದಿದೆ. ಎತ್ತು ಎಂಬುದರ ಮೇಲಿಂದಲೆ ಊಹೆಗಳಿಗೆ ಆರಂಭಿಸಿದರೆ ಎತ್ತುವದಕ್ಕಾಗಿ ಇದ್ದುದು ಎತ್ತು ಎಂದು ಹೇಳಬೇಕಾಗುವುದು. 'ಎಟ್ಟು' ಎಂಬುದರ ಮೇಲಿಂದ ಎಳೆಯುವುದಕ್ಕಾಗಿ ಉಪಯೋಗಿಸಲ್ಪಡುತ್ತಿದ್ದುದು ಎಂಬ ಅರ್ಥವು ಸೂಚಿತವಾಗುತ್ತದೆ. ಇವುಗಳಲ್ಲಿ ಹೆಚ್ಚು ಪ್ರಾಚೀನವಾದುದೇ ಮೊದಲು ವಿಚಾರಾರ್ಹವಾದದ್ದು.

ಬೇರೆ ಬೇರೆ ಕಾಲಕ್ಕೆ ಒಂದು ಶಬ್ದದ ಅರ್ಥದಲ್ಲಿ ಆದ ವ್ಯತ್ಯಾಸಗಳನ್ನು ಗಮನಿಸಬೇಕು ಮತ್ತು ಅದರ ಬಳಗದ ಬೇರೆ ಭಾಷೆಗಳಲ್ಲಿ ಅದೇ ಶಬ್ದವು ಇದ್ದರೆ ಅಲ್ಲಿ ಅದಕ್ಕಿರುವ ಅರ್ಥಗಳು ಯಾವುವು ಎಂಬುದನ್ನು ತೂಗಿನೋಡಬೇಕು ಮತ್ತು ಇವುಗಳಲ್ಲಿ ಮೊಟ್ಟಮೊದಲಿನದು ಮೂಲವೆಂದು ತಿಳಿಯಬೇಕು.

ಈ ಕೆಲಸದಲ್ಲಿ ಉಚ್ಚಾರಶಾಸ್ತ್ರದ ನಿಯಮಗಳೂ ಮರೆತು ನಡೆಯದು. ಅವಶ್ಯವಿದ್ದಲ್ಲಿ ಇತಿಹಾಸ ಮತ್ತು ಭೂಗೋಲಗಳ ನೆರವನ್ನೂ ತಕ್ಕೊಳ್ಳುವುದು ಲೇಸು. ಕಾಗೆ, ಕೋಗಿಲೆ ಶಬ್ದಗಳು ಸಂಸ್ಕೃತದ ಕಾಕ ಕೋಕಿಲ ಶಬ್ದಗಳಿಂದ ಬಂದುವು ಎಂದು ಪ್ರತಿಪಾದಿಸುವವರುಂಟು. ಈ ಶಬ್ದಗಳು ಯಾವ ಸಂಸ್ಕೃತ ಧಾತುಸಾಧಿತಗಳಲ್ಲ. ಶಬ್ದಾನುಕೃತಿಯಿಂದ ಸಿದ್ಧವಾದ ನುಡಿಗಳು. ಆದುದರಿಂದ, ಇವುಗಳನ್ನು ಸಂಸ್ಕೃತದವರಷ್ಟೇ ಕಂನಾಡಿಗರಿಗೂ ತಮ್ಮವೆಂದು ಹೇಳಿಕೊಳ್ಳಲು ಅಧಿಕಾರವಿದೆ. ಅಲ್ಲದೆ ಭೌಗೋಲಿಕ ದೃಷ್ಟಿಯಿಂದ ವಿಚಾರಿಸಿದರೆ ಕಂನಾಡಿಗೆ ಕಾಗೆ-ಕೋಗಿಲೆಗಳು ಹೊಸವಲ್ಲ. ಇಲ್ಲಿ ಯಾವಾಗಲೂ ಕಣ್ಣಿಗೆ ಬೀಳುವ ಪ್ರಾಣಿಗಳಿಗೆ ಕಂನುಡಿಯಿಂದಲೆ ಹೆಸರಿರುವುದು ಅಸಂಭವನೀಯವಲ್ಲ. ಆದುದರಿಂದ, ಸುಮ್ಮನೆ ಕಂನುಡಿಗಳನ್ನು ಎಳೆದೊಯ್ದು ಸಂಸ್ಕೃತಕ್ಕೆ ಸಂಬಂಧ ಹಚ್ಚಿ ಅರ್ಥವನ್ನು ಹೇಳುವುದಕ್ಕಿಂತ, ಕಂನುಡಿಯಿಂದಲೆ ಅವುಗಳ ಅರ್ಥವು ಹೆಚ್ಚು ಸರಳವಾಗಿ ಹೊರಹೊಮ್ಮುತ್ತಿದ್ದರೆ ಹಾಗೆ ಮಾಡುವುದಕ್ಕೆ ಹಿಂಜರಿಯುವುದು ಸರಿಯಾಗಲಾರದು. 'ದ್ರಾವಿಡ' ಭಾಷೆಗಳೆಲ್ಲ ಸಂಸ್ಕೃತದಿಂದಲೆ ಹುಟ್ಟಿದುವೆಂದು ಪ್ರತಿಪಾದಿಸುವ ಒಂದು ಪಂಥವಿದೆ. ಅದು ಎಂದು ಸರ್ವಮಾನ್ಯವಾಗುವುದೊ ಅಂದು, ಕಂನುಡಿಯನ್ನು ಸಂಸ್ಕೃತದಿಂದ ಬಂದುದೆಂದು ಸಾಧಿಸಬಹುದು. ಆದರೆ, ಚೊಕ್ಕ ಚಿನ್ನದಂತಹ ಎಷ್ಟೋ ಕಂನುಡಿಗಳನ್ನು ಸಂಸ್ಕೃತದಿಂದ ಹುಟ್ಟಿದುವೆಂದು ಹೇಳಿ ಅವುಗಳ ಸೊಗಸಾದ ಅರ್ಥಾನುಭವಕ್ಕೆ ನಾವು ಎರವಾಗಿದ್ದೇವೆ. 'ಕಾಲ' (Time) ಶಬ್ದವು ಸಂಸ್ಕೃತದ್ದಲ್ಲವೆಂದು ತುಲನಾತ್ಮಕ ಭಾಷಾಶಾಸ್ತ್ರಜ್ಞರ ಸಂಸ್ಕೃತಪಂಡಿತರ ಮತವಿದೆ. ಕಂನುಡಿಯಲ್ಲಿ 'ಕಾಲು'ಗತಿಯನ್ನು ತೋರಿಸುವುದು. ಈ ದೃಷ್ಟಿಯಿಂದ ನೋಡಿದರೆ 'ಕಾಲ ಶಬ್ದವು ಕಂನುಡಿಯ ಎಷ್ಟು ಅರ್ಥಪೂರ್ಣವಾದ ಶಬ್ದವಾಗುವುದು.

ಗಮನಿಸಬೇಕಾದ ಇನ್ನೂ ಕೆಲವಂಶಗಳಿವೆ. ಆದರೆ, ಈ ಬಗೆಯಾದ ವಿವರಣೆಯು ಈ ಪುಸ್ತಕದ ಮೇರೆಯನ್ನು ಮೀರುತ್ತಿರುವುದರಿಂದ ಅವನ್ನೆಲ್ಲ ಬದಿಗಿರಿಸಲಾಗಿದೆ.

೬೫. ಕಂನುಡಿಯ ಏಳಿಗೆ ಅಥವಾ ಇಳಿಗೆಯು ಅದರ ಕೈವಾರಿಗಳ ಕೈಯಲ್ಲಿದೆ. ನಮ್ಮ ಈಗಿನ ಶಬ್ದದಾರಿದ್ರ್ಯವನ್ನು ಕಂಡು ಬೆಚ್ಚಿಬೀಳುವ ಕಾರಣವಿಲ್ಲ. ೧೪ನೆಯ ಶತಮಾನಕ್ಕೆ ಮೊದಲು ಇಂಗ್ಲಿಷ್ ಭಾಷೆಯು ಹೇಳಲಾಗದಂತಹ ಕೀಳ್ಮೆಯಲ್ಲಿತ್ತು. ಅನಿತು ಕಿರುಕುಳ ಸ್ಥಿತಿಯಲ್ಲಿದ್ದ ಹುಟ್ಟು ಬಡವಾದ ಭಾಷೆಯೆ, ಇಷ್ಟೊಂದು ಮೇಲ್ಮೆಗೆ ಬಂದಿದೆ. ಎಷ್ಟೋ ಶತಮಾನಗಳ ವೈಭವವನ್ನು ಅನುಭವಿಸಿದ ಕಂನುಡಿಗೆ ಮತ್ತೆ ಹೋರಾಡಿದರೆ ಹೆಗ್ಗಳಿಕೆಯ ಕಾಲವು ಬರಲಿಕ್ಕಿಲ್ಲವೆಂದು ಎಣಿಸುವುದು ಸರಿಯಾದೀತೆ? ಆದುದರಿಂದ, ಇನ್ನು ಮೇಲೆ ಕಂನುಡಿಯ

ಮರೆಯದಿದ್ದರೆ ಅದು ನಮ್ಮ ತಪ್ಪು; ಹೊರತು ನುಡಿಯದಲ್ಲ. ನಾವು ಇಂಬುಳ್ಳವರಾದರೆ, ನಮ್ಮ ಬಾಳು ಇಂಬುಳ್ಳುದಾದರೆ ನಮ್ಮ ನುಡಿಯೂ ಇಂಬುಳ್ಳುದು ಆಗುತ್ತದೆ. ಕಂನುಡಿಯ ಕಂಪನ್ನು ಸವಿದವರು ಕಂನುಡಿಯಲ್ಲಿ ನಂಬಿಗೆಯುಳ್ಳವರಾಗಿ, ತಮ್ಮ ನಾಡಿನ ಮತ್ತು ನುಡಿಯ ಹೆಚ್ಚಳಕ್ಕಾಗಿ ಕೆಚ್ಚೆದೆಯಿಂದ ಮುಂದೆ ಬರಬೇಕು. ಅಂಜಿ ಅಳುಕಿ ನಡೆದು ನಮ್ಮ ಬಾಳು ಕಿರಿದಾಗಿದೆ; ಕಿರಿದಾಗಿರುವ ಬಾಳು ಹಿರಿದಾಗಬೇಕಾಗಿದೆ. ನಾವು ಹಿಗ್ಗಿದರೆ ನಮ್ಮ ನಾಡು ಹಿಗ್ಗುವುದು; ನುಡಿ ಹಿಗ್ಗುವುದು. ನಾವು ಕುಗ್ಗಿದುದರಿಂದ ನುಡಿ ಕುಗ್ಗಿದೆ. ಕುಣಿಯಲು ಬಾರದವನಿಗೆ ನೆಲ ಡೊಂಕು. ಕಂನುಡಿಗೆ ಹೆಸರಿಡದೆ, ಕಂನುಡಿಗೆ ಹೆಸರು ತನ್ನಿರಿ. ಕಂನಾಡಿಗೆ ಹೆಸರು ಬರಬೇಕಾಗಿದ್ದರೆ ನೀವು ಹೆಸರಾಗಿರಿ. ಹೆಸರಾದ ಮೇಲೆ ಕಂನಾಡಿಗರೆಂದು ಹೇಳಿಕೊಳ್ಳಲು ನಾಚಿಕೊಳ್ಳುವ ಕೃತಘ್ನರನ್ನಾಗಿ ಮಾಡಬೇಡಿರಿ. ಕಂನಾಡ ಕಂದರು ಜಗದ್ವಂದ್ಯ ಮಹಾಪುರುಷರಾದಾಗ, ಕಂನುಡಿಯ ಎಳ್ಗಂಪಿಗೆ ಮನಸೋಲದ ಮಾನವರಾರು?

ಕನ್ನಡ ನುಡಿಯ ಜೇವಾಳ

ಅರಿಕೆ

ನುಡಿಯು ನಾಡಿನ ಉಸಿರು; ಪ್ರಾಣ. ಆದುದರಿಂದ ಅದನ್ನು ಸರಿಯಾಗಿ ಉಳಿಸಿಕೊಳ್ಳುವುದೂ, ಬೆಳಸಿಕೊಳ್ಳುವುದೂ ಏಳ್ಗೆಯನ್ನು ಹಾರೈಸುವ ಪ್ರತಿಯೊಬ್ಬನ ಮೊದಲನೆಯ ಕೆಲಸವಾಗಿದೆ. ತಮ್ಮ ನಾಡ ನುಡಿಯನ್ನು ಕಡೆಗಣಿಸುವವರು ಕೀಳ್ಮೆಯನ್ನು ಹೊಂದುವರು. ಅಥವಾ ನುಡಿಯನ್ನು ಕಡೆಗಣಿಸುವುದು ಮುಂದಿನ ಅವರ ಸರ್ವನಾಶದ ಪೂರ್ವಸೂಚನೆ ಎಂಬಲ್ಲಿ ಯಾವ ಸಂದೇಹವೂ ಇಲ್ಲ. ಆಂಗ್ಲ ದೇಶದ ವಿಖ್ಯಾತ ಕವಿಯಾದ ಮಿಲ್ಟನ್ನನು ಈ ಮಾತನ್ನು ಬಹಳ ಸ್ಪಷ್ಟವಾಗಿ ಹೀಗೆ ಹೇಳಿದ್ದಾನೆ.

> "....I am much more inclined to believe that the *downfall of a dominion and humiliation of its high estate will ensue when the essential rightness of language falls into disrepute.* Is it not as plain as can be that when the verbal currency is cheapened and debased its image and superscription obliterated and forgotten, the minds of an abjectly passive and spiritless people are already ripe for slavery of some sort? On the other hand, never have we heard that any state or empire did not prosper at least moderately, as long as its zeal for exactness and grace of speech endured."

ಕನ್ನಡ ನುಡಿಯ ಇಳಿಗಾಲದೊಡನೆ ನಾಡಿನ ವೈಭವದ ಅಳಿಗಾಲಕ್ಕೂ ಆರಂಭವಾಯಿತು. ಅರಸುತನದಿಂದ ಆಳುತ್ತಿದ್ದ ಕನ್ನಡಿಗರು ಹೆರವರ ಆಳಾಗಿ ಬಾಳಲಾರಂಭಿಸಿದರು.

ಹೊರಮಿಂಚಿಗೆ ಮನಸೋತು, ಕನ್ನಡಿಗರು ಅರಿವುಗೇಡಿಗಳಾದರು. ತಮ್ಮ ನುಡಿಯ ಜೀವಾಳವೆಲ್ಲಿದೆ ಯೆಂಬುದನ್ನು ಮರೆತರು. ತಮ್ಮ ಸೊಲ್ಲಿನ ಸವಿಯನ್ನು ತಿಳಿಯದಾದರು. ವ್ಯಾಕರಣದ ಕೃತ್ರಿಮ ಕಟ್ಟುಕಟ್ಟಳೆಗಳು ಹೆಚ್ಚಾದಂತೆ ಅವು ಕನ್ನಡದ ನುಡಿಬೆಡಗನ್ನು-ಶಬ್ದ ಸಂಪತ್ತನ್ನು-ಹೆಚ್ಚಿಸಲು ನೆರವಾಗುವ ಬದಲು ಹುರುಡುಗೆಡಿಸುವುದಕ್ಕೆ ಕಾರಣವಾದುವು. ಕನ್ನಡದಿಂದಲೆ ಹೊಸನುಡಿಗಳನ್ನು ನೇರ್ಪಡಿಸಿಕೊಳ್ಳಬೇಕೆಂಬ ಹುಮ್ಮಸವು ಮಾಯವಾಯ್ತು. ಅದರ ಹದವೂ ಅರಿಯದಾಯ್ತು. ಹೆರವರ ಮಾತಿಗೆ ತಲೆದೂಗುವಾಗ ತಮ್ಮ ಮಾತನ್ನು ಮರೆತವರು ಇನ್ನೊಬ್ಬರ ಆಳಾಗುವುದಕ್ಕೆ ತಡವಿಲ್ಲ. ಜನ ಮನಗಳು ಬರಡಾದುವು. ನುಡಿಯೂ ಬಡವಾಯ್ತು. ಅನುದಿನವೂ

ಕೊನರಿ ಕೊಬ್ಬಿ ಹಬ್ಬಬೇಕಾದ ಕನ್ನಡನುಡಿ ಬಳ್ಳಿವಳ್ಳಿಯು ಸುರುಟಿ ಮುರುಟಹತ್ತಿತು. ಕನ್ನಡ ಮಾತಿನ ಇಂಬು ಕಡಿಮೆಯಾಯ್ತು. ಕನ್ನಡದ ಅಂದವು ಕುಂದಿತು.

ಕನ್ನಡಿಗರು ಇಂದು ಮತ್ತೆ ಎಚ್ಚೆತ್ತು ತಮ್ಮ ಏಳ್ಗೆಯ ಹಾದಿಯನ್ನು ಕಂಡುಕೊಳ್ಳಲು ಹಲವು ನಿಟ್ಟಿನಿಂದ ಹೆಣಗಾಡುತ್ತಿದ್ದಾರೆ. ಹೋರಾಡುತ್ತಿದ್ದಾರೆ. ನುಡಿಯು ನಾಡಿನ ಪ್ರಾಣಶಕ್ತಿ. ಅದುವೆ ನಾಡಿಗರ ಹುರುಡು (ಹುರುಳು). ಲೋಕದಲ್ಲಿ ಕನ್ನಡಿಗರು ಚದುರ ಚೆನ್ನಿಗರೆಂದು ಹೆಸರು ಪಡೆಯಲು ಈ ಹುರುಡನ್ನು ಕುದುರಿಸಿಕೊಳ್ಳದೆ ನಡೆಯದು. ಆದುದರಿಂದ, ಕನ್ನಡ ನುಡಿಯ ಜೀವಾಳವು ಎಲ್ಲಿದೆಯೆಂಬುದನ್ನು ಕಂಡುಕೊಳ್ಳುವುದೂ ನಾಡಿನ ಏಳ್ಗೆಯ ದೃಷ್ಟಿಯಿಂದ ಅತ್ಯಂತ ಆವಶ್ಯಕವಾದ ಕೆಲಸವಾಗಿದೆ. ಆ ದಿಕ್ಕಿನಲ್ಲಿ ಮಾಡಿದ ಅಲ್ಪಸ್ವಲ್ಪ ಕೆಲಸವಿದು. ಇದು ಒಬ್ಬಿಬ್ಬರಿಂದ ಕೊನೆಗಾಣತಕ್ಕುದಲ್ಲ. ಹಿರಿಗೆಲಸ. ಪ್ರತಿಯೊಬ್ಬರ ಜೀವಾಳಕ್ಕೂ ಹತ್ತಿಹೊಂದಿದ ಕೆಲಸ. ಆದುದರಿಂದ, ಎಲ್ಲರೂ ಈ ವಿಷಯದಲ್ಲಿ ತಮ್ಮ ಮಟ್ಟದ, ತಮ್ಮ ಕೈಲಾದ ನೆರವನ್ನೀಯುವುದು ಎಲ್ಲರ ಕರ್ತವ್ಯವೆ ಆಗಿದೆ. ಆ ತೆರನಾಗಿ ನಾಡದೇವಿಗೆ ನನ್ನ ಪಾಲಿನ ಕಿರಿಯ ಕೈಗಾಣಿಕೆ, ಮೀಸಲದ ಮುಡಿಪು ಇದು.

ಬೆಳವಣಿಗೆಯೆ ಜೀವಂತತನದ ಕುರುಹು. ಬೆಳೆಯದುದು ಬದುಕಿದೆ ಎಂದು ಹೇಳಲಿಕ್ಕಾಗದು. ನೂರಾರು ವರುಷಗಳಿಂದ, ಹಲವು ಕಾರಣಗಳಿಂದ, ಕನ್ನಡದ ಹೊಸನುಡಿಗಳನ್ನು ನೇರ್ಪಡಿಸಿಕೊಂಬ ಹದವು ಕೆಟ್ಟಿದೆ; ಕಸುವು ಕುಗ್ಗುತ್ತಲಿದೆ. ಈ ಪಾಡು ಹೀಗೆಯೆ ಉಳಿದರೆ ಕನ್ನಡವು ಬದುಕಿದೆ, ಬೆಳೆಯುತ್ತದೆಯೆಂದು ಹೇಳುವುದೂ ಹಾಗೆ ನೆಚ್ಚಿಕೊಂಡಿರುವುದೂ ಪೆಚ್ಚುತನವೇ ಸರಿ. ಇಂದು ಕನ್ನಡದ ಏಳ್ಗೆಯನ್ನು ಹಾರೈಸುವವರೆದುರು ಎರಡು ದಾರಿಗಳಿವೆ: ಒಂದು, ಇಂದು ಕೈಲಾಸಂರಂತೆ ಇಂಗ್ರೇಜಿ ಮುಂತಾದ ಪದಗಳನ್ನು ಬೇಕಾದ ಹಾಗೆ ಬಳಸಿಕೊಂಡು (ಹಿಂದೆ ಸಂಸ್ಕೃತವನ್ನು ಉಪಯೋಗಿಸಿಕೊಂಡ ಪರಂಪರೆಯನ್ನೆ ಮುಂದೆ ಸಾಗಿಸಿ) ಕನ್ನಡದ ಹೆಚ್ಚಳವನ್ನು ಮಾಡಿಕೊಂಬುವುದು; ಇನ್ನೊಂದು, ಸೊಲ್ಲಿನಲ್ಲಿ ಮುಕ್ಕಾಲು ಪಾಲಿಗಿಂತಲೂ ಹೆಚ್ಚು ಮಾತುಗಳು ಕನ್ನಡದುವೇ ಇರಬೇಕಾದರೆ ಕನ್ನಡದಿಂದಲೇ ಹೊಸನುಡಿಗಳನ್ನು ನೇರ್ಪಡಿಸಿಕೊಂಬ ಹದವನ್ನು ಅರಿತು, ಅದನ್ನು ನಡೆವಳಿಯಲ್ಲಿ ತರುವುದು. ಅದಕ್ಕಾಗಿ ಇಂದು ನಮ್ಮ ನುಡಿಯ ಬೆಳಸಿಗೆ ಬಂದಿರುವ ತೊಡಕು-ತೊಂದರೆಗಳನ್ನೆಲ್ಲ ಚೆನ್ನಾಗಿ ತಿಳಿದುಕೊಂಡು ಅವನ್ನು ಹೋಗಲಾಡಿಸುವುದು ಕನ್ನಡದ ಅಭಿಮಾನಿಗಳ ಮೊದಲ ಕೆಲಸವಾಗಿಲ್ಲವೆ?

ಕನ್ನಡದಲ್ಲಿ ಹೊಸ ನುಡಿಗಳನ್ನು ಮಾಡಿಕೊಂಬ ಬಗೆ ಯಾವುದಿದ್ದೀತು ಎಂಬುದನ್ನು 'ಕನ್ನಡ ನುಡಿಯ ಹುಟ್ಟಿ'ನಲ್ಲಿ ಕೆಲಮಟ್ಟಿಗೆ ಬಿಡಿಸಿ ಹೇಳಿದೆ. ಕನ್ನಡದ ಮೊದಲಿಗರು ತಮಗೆ ಬೇಕಾಗುವ ವಸ್ತುವಾಚಕ, ಭಾವವಾಚಕ ಮೊದಲಾದ ನಾಮಪದಗಳನ್ನು, ಬಗೆಬಗೆಯ ಧಾತುಗಳು ಮೊದಲಾದುವುಗಳನ್ನೂ ಹೇಗೆ ನೇರವಾಗಿ ಮಾಡಿಕೊಳ್ಳುತ್ತಿದ್ದರೆಂಬುದನ್ನು ಅನೇಕ ಪ್ರತ್ಯಯಗಳ ನೆರವಿನಿಂದ ವಿವರಿಸಲಾಗಿದೆ. ಪ್ರತ್ಯಯಗಳ ವಿಚಾರವು ಅದರಲ್ಲಿ ಮುಖ್ಯವಾಗಿರುವಂತೆ, ಇದರಲ್ಲಿ ನುಡಿಯ ಪುದುಗಲು (ಶಬ್ದದ್ರವ್ಯ) ಆವುದು, ಅದು ಎಷ್ಟು ವಿಪುಲವಾಗಿದೆ ಮತ್ತು ಅದರಿಂದ ಬೇರೆ ಬೇರೆ ಭಾಷೆಯವರು ಎಷ್ಟು ಅಂದಚೆಂದದ ಬಗೆಬಗೆಯ ಮಾತುಗಳನ್ನು ನೇರ್ಪಡಿಸಿಕೊಂಡಿರುವರು, ಎಂಬುದನ್ನು ತೋರಿಸುವುದು ಈ ಕಿರಿಯ ಹೊತ್ತಿಗೆಯ ಗುರಿಯಾಗಿದೆ. ಹೊಸ ನುಡಿಗಳನ್ನು ನೇರ್ಪಡಿಸಲಿಚ್ಛಿಸುವವರಿಗೆ ಇವೆರಡೂ ಬಗೆಯ ತಿಳುವಳಿಕೆಯು ಅವಶ್ಯ.

ಕನ್ನಡದ ಬೆಳವಿಗೆ ಹೊಸನುಡಿಗಳ ಆವಶ್ಯಕತೆಯಿರುವಂತೆ, ವಿವಿಧ ಸೂಕ್ಷ್ಮಾರ್ಥಕ ಪದಗಳ ಅಗತ್ಯವೂ ಇದೆ. ಕನ್ನಡ ನುಡಿಗಳಲ್ಲಿ ಹುದುಗಿಕೊಂಡಿರುವ ಆಳವಾದ ತಿರುಳನ್ನು ತಿಳಿದುಕೊಂಡಲ್ಲಿ ಈಗ ಮೂಲೆಗುಂಪಾಗಿರುವ ಹಲವು ಮಾತುಗಳು ಮತ್ತೆ ಬೆಳಕಿಗೆ ಬರಲು ತಡವಿಲ್ಲ. ಈಗ ಕೆಳೆಯ-ಗೆಳೆಯ ಶಬ್ದದ ಔಚಿತ್ಯವನ್ನೆ ನೋಡಬಹುದು: ಕೂಡಿ 'ಕೆಲೆ'ವವನು ಕೆಳೆಯನು. ನಕ್ಕು ಕೆಲೆದು ಆಡುವವನು ಎಂಬ ಭಾವವು 'ಕೆಳೆಯ' ಎಂಬ ಮಾತಿನಲ್ಲಿ ಎಷ್ಟು ಸೊಗಸಾಗಿ ಹುದುಗಿದೆ! ಆದರೆ, ಇದನ್ನು ಅರಿತು, ಮಾತಿನಲ್ಲಿ ಬಳಸುವ ಸವಿಗಾರಿಕೆ ನಮ್ಮಲ್ಲಿ ಇನ್ನೂ ತಲೆದೋರಬೇಕಾಗಿದೆ. 'ಅಳಿಯನೊಂದಿಗೆ ತೋಟಿ' ಎಂಬ ಗಾದೆಯಿದೆ. ಇಲ್ಲಿಯ 'ತೋಳ'ನೆಂದರೆ ಗೆಳೆಯನು

ಎಂಬ ಮಾತು, ಉಳಿದೆಡೆಗಳಲ್ಲಿ ಬಳಕೆಯಲ್ಲಿ ಕಾಣಿಸಿಕೊಳ್ಳುವುದಿಲ್ಲ! ಈ 'ತೋಳ' ನೆಂಬುವುದನ್ನು 'ಸಮಾನ ಸ್ಕಂಧ' ಎಂಬ ಉದ್ದವಾದ ಸಂಸ್ಕೃತ ಪದದ ಬದಲು ರೂಢಿಸಲು ಅಡ್ಡಿಯೇನು? ಈ ಬಗೆಯಾಗಿ ಕನ್ನಡದ ಹಲವು ನುಡಿಗಳಲ್ಲಿ ಅಡಕವಾಗಿರುವ ಅಂದವನ್ನು ನನಗೆ ಕಂಡಂತೆ ಹೇಳುವ ಒಂದು ಅಲ್ಪ ಪ್ರಯತ್ನವನ್ನು ಕೊನೆಗೆ ಕೊಟ್ಟಿರುವ ಪಟ್ಟಿಯಲ್ಲಿ ಮಾಡಿದ್ದೇನೆ. ಮೈಯಲ್ಲಿ ನೆಮ್ಮದಿ ಸಾಕಷ್ಟಿದ್ದರೆ, ಇದರಲ್ಲಿ ಇನ್ನೂ ಕಡಿಮೆ ಕುಂದು-ಕೊರತೆಗಳು ಉಳಿಯುವಂತೆ ಮಾಡಬೇಕೆಂಬ ಹಂಬಲವಿದ್ದಿತು.

ಇಂದು ಕನ್ನಡದಲ್ಲಿ ಮಾತುಗಳನ್ನು ಬರಿ ರೂಢಾರ್ಥದಲ್ಲಿ ಮಾತ್ರ ಬಳಸುವುದುಂಟು. ಅದರಿಂದ ಅವುಗಳ ಅರ್ಥಶಕ್ತಿಯು ತೀರ ಕುಂದಿದೆ. 'ಕಱು' ಎಂಬರ್ಥದ ಕಂದಮಿಳ ವರ್ಗದ ನುಡಿಗಳನ್ನೆಲ್ಲ ಒಂದೆಡೆಗೆ ತಂದು ನೋಡಿದಲ್ಲಿ ಅವು ಎಷ್ಟು ಉಚಿತಾರ್ಥದ ಪದಗಳೆಂಬುದರ ಸೂಚನೆ ದೊರೆಯುವುದು. ಕ. ಕಱು, ತ. ಕನ್‌ಱು; ತು. ಕಂಜಿ; ಕ. ಕಂದು (ಹೋ ಕಂದ) ತೆ. ಕಂದು (ಕನ್ನ;) ಮ. ಕಱ್ರೆ ಕುಯಿ; ಕ್ರೈ; ಕುರ್ರ; ಕುರ್ರಾ; ಕಂದಮ್ಮಗಳ ಕಱ-ಕರ್ ಎಂಬ ಕೂಗಿನ ಕೂಸುತನದ ಸ್ವಭಾವವನ್ನು ಅನುಲಕ್ಷಿಸಿಯೆ ಈ ಹೆಸರುಗಳು ಬಳಕೆಯಲ್ಲಿ ಬಂದಿರಬಹುದಲ್ಲವೆ? ಎಂಬ ವಿಚಾರವು ಮತ್ತೆ ಮತ್ತೆ ತಲೆಯೆತ್ತುತ್ತದೆ. ಕಱುಱ್-ಕುಱುಱ್ ಎಂದು ಕುಯಿಗುಡುವ ಕುನ್ನಿಯನ್ನು ನೆನೆದಾಗಲಂತೂ ಈ ವಿಚಾರವು ಸರಿಯಾಗಿ ಇರಲು ಸಾಕು ಎಂದೆನಿಸುತ್ತದೆ.

ಶಬ್ದದ್ರವ್ಯದ ವಿಚಾರವನ್ನು ಇಷ್ಟು ವಿಸ್ತಾರದಿಂದ ವಿಮರ್ಶಿಸಿ ನುಡಿಗೆ ಹೊಂದಿಸಿ ಹೇಳುವ ಪ್ರಯತ್ನವು ಆಗುತ್ತಿರುವುದು ಇದೆ ಮೊದಲು. ಇದರಲ್ಲಿ ಇನ್ನೂ ಕೆಲ ಕೊರತೆಗಳು ಉಳಿದಿರುವುದನ್ನು ಬಲ್ಲೆ. ಕೆಲವು ತಪ್ಪು ತಡೆಗಳು ಗೊತ್ತಾಗದೆಯೆ ನುಸುಳಿಕೊಂಡಿರಲೂ ಸಾಕು. ಆದರೆ, ಅವುಗಳಿಂದ ಇದರಲ್ಲಿ ಹೇಳಬೇಕೆಂದಿರುವ ಮೂಲವಿಚಾರಕ್ಕೇ ಬಾಧೆ ಬಂದೀತೆಂದು ತೋರುವುದಿಲ್ಲ. ಈ ಅಭ್ಯಾಸದಲ್ಲಿ ನನ್ನ ಮಟ್ಟಿಗಂತೂ ಹಲವು ಸಂಗತಿಗಳ ಮೇಲೆ ಹೊಸ ಬೆಳಕು ದೊರೆತಿದೆ; ದೊರೆಯುತ್ತಲಿದೆ. ಅದು ಸರಿಯೆ, ಇಲ್ಲವೆ ನನ್ನ ಬರಿಯ ಬಯಲ ಹಂಬಲವೆ, ಎಂಬುದನ್ನು ಗೊತ್ತುಪಡಿಸುವ ಕೆಲಸವು ಬಲ್ಲಿದರದು. ಈ ದಿಕ್ಕಿನಲ್ಲಿ ಹೆಚ್ಚಿನ ವಿಚಾರ ವಿಮರ್ಶೆಗಳು ಸಾಗಿದರೆ, ಅವು ಇನ್ನು ಮೈಗೊಳ್ಳಲಿರುವ ಕೆಚ್ಚ ಕನ್ನಡದ ಮೆರುಗನ್ನು ಹೆಚ್ಚಿಸಲು ಕಾರಣವಾಗದೆ ಇರಲಾರವೆಂದು ನನ್ನ ನೆರೆನಂಬುಗೆ. (೧) ಹೊಸ ನುಡಿಗಳನ್ನು ನೇರ್ಪಡಿಸಿಕೊಂಬ ದಾರಿಯನ್ನು ಇದು ಸೂಚಿಸಬಲ್ಲದು. (೨) ಹಲವು ನುಡಿಗಳ ಮೂಲಾರ್ಥವು ತಿಳಿದು, ಅದನ್ನು ಬಳಸುವಾಗ ಔಚಿತ್ಯದ ಆನಂದವು ದೊರೆಯುವುದು; ನುಡಿಯ ಸೊಗಸು ಹೆಚ್ಚುವುದು. (೩) ಮಾತಿನೊಳಗೆ ಸೂಕ್ಷ್ಮಾರ್ಥ ಶಕ್ತಿಯು, ಧ್ವನಿಶಕ್ತಿಯು ಕಾಣಿಸಿಕೊಳ್ಳುವುದು. (೪) ಎಣಿಕೆಯಿಲ್ಲದಷ್ಟು, ಮೂಲೆಗುಂಪಾಗಿ ಹಿಂದೆ ಬಿದ್ದಿರುವ ಹುರುಳಿನ ತಿರುಳಿನ ನುಡಿಗಳು ಮತ್ತೆ ಜೀವಂತವಾಗಿ ಕನ್ನಡದ ಶಬ್ದ-ಸಂಪತ್ತು ಬೆಳೆಯುವುದು. (೫) ಕನ್ನಡ ನುಡಿಯ ಪುದುಗಲಿನ- ಶಬ್ದದ್ರವ್ಯದ-ಅಭ್ಯಾಸವು ಸಂಸ್ಕೃತ ಮೊದಲಾದ ಭಾಷೆಗಳೊಳಗಿನ ಅನೇಕ ಪದಗಳ ಬರುವಳಿಯ ಮೇಲೆ ಹೊಸ ಬೆಳಕನ್ನು ಬೀರುವುದು. ಮತ್ತು ಸಹಜಭಾವದ ನುಡಿಗಳಲ್ಲಿ (ಬೇರೆ ಬೇರೆ ಭಾಷೆಗಳಲ್ಲಿ) ಒಂದು ಬಗೆಯ ಒಳ ಹೋಲಿಕೆಯು ಹೇಗೆ ಇರುವುದೆಂಬ ಮಾತಿನ ಮನವರಿಕೆಯಾಗುವುದು. ಉದಾ : ಲಕಲಕ (ಹೊಳೆ)- ಸಂ. ಕಲಾ ಕಲ್ (ಧಾ): ಕ. ಕನ್ ಕನಿ (ಹೊಳೆ); ಮುಂ.

ಆದುದರಿಂದ, ಈ ನಿಟ್ಟಿನಲ್ಲಿ ಕಣ್ತೆರೆದು ನಿಡಿದಾಗಿ ನೋಡಿ, ಕಿವಿಯಾರೆ ಕೇಳಿ, ಮನಮುಟ್ಟಿ ಕೆಲಸ ಮಾಡಿದಲ್ಲಿ ಕನ್ನಡ ಸೊಲ್ಲಿನ ಬೆಡಗು ಹೆಚ್ಚಿ, ತಳತಳನೆ ತೊಳಗಿ ಬೆಳಗಿ ಅದು ಕನ್ನಡಿಗರ ಹಿಗ್ಗಿಗೆ ಕಾರಣವಾಗದೆ ಇರದು, ಎಂದು ನನ್ನ ಬಲವಾದ ನೆಚ್ಚಿಕೆ.

ಭಾಷಾಶಾಸ್ತ್ರವು 'ಆಭಾಸಶಾಸ್ತ್ರ'ವೆಂದು ಕೆಕ್ಕರಿಸಿ ನಗುವುದು, ಅಯುಕ್ತವಾದರೂ ಈ ದಾರಿಯಲ್ಲಿ ನೀರಿನ ಭ್ರಾಂತಿಯನ್ನುಂಟು ಮಾಡುವ ಬಿಸಿಲುಗುದುರೆಗಳು ಬಹಳವೆಂಬುದೂ ಸುಳ್ಳಲ್ಲ. ಆದುದರಿಂದ ಅಡಿಗಡಿಗೂ ಅಡ್ಡದಾರಿಗೆ ಹೋಗದಂತೆ ತಾನು ಎಚ್ಚರಾಗಿರುವುದು ಅವಶ್ಯ; ಎಚ್ಚರಿಸುವ ಗೆಳೆಯರೂ ಅವಶ್ಯ. ಆದರೆ, ಗೆಳೆಯರು ಗೇಳಿಗಳು (ಗೇಲಿಯವರು) ಮಾತ್ರ ಆಗದಿರಲಿ. ತನ್ನ ಕಂಡಿತವೆಲ್ಲವೂ ಉಂಟೇ ಉಂಟು, ಅದೇ ಸತ್ಯ ಎಂಬ ಹಟವು ನಿಜವಾದ ಸಂಶೋಧಕನಿಗೆ ಎಂದೂ ಸರಿಯಲ್ಲ. ಸಂಶೋಧಕನು ಹೊನ್ನಗಣಿಯ

ಕೆಲಸಗಾರನಂತೆ, ಮುತ್ತುತರಲು ಕಡಲ ಆಳಕ್ಕೆ ಮುಳುಂಗುವವನಂತೆ ಎಂದು ನಾನು ಈ ಮೊದಲಿನ ನನ್ನ ಪ್ರಕಟನೆಗಳ ಮುನ್ನುಡಿಯಲ್ಲಿ ಅರಿಕೆ ಮಾಡಿಕೊಂಡಿದ್ದೇನೆ. ತಾನು ತಂದುದೆಲ್ಲವೂ ಚೊಕ್ಕಚಿನ್ನ ಇಲ್ಲವೆ ಆಣೆ ಮುತ್ತುಗಳೇ ಎಂಬ ಆತನ ಹೆಮ್ಮೆ ವ್ಯರ್ಥ. ತನಗೆ ದೊರೆತುದನ್ನು ಬಲ್ಲಿದರ ಎದುರು ತಂದಿರಿಸುವುದು ಆತನ ಕೆಲಸ. ಅದರಲ್ಲಿ ಬಹು ಭಾಗವು ಬೆಲೆಯುಳ್ಳದಿದೆಯೆಂದು ತಿಳಿದವರು ಹೇಳಿದರೆ ಅದುವೆ ಆತನ ಗೆಲವು; ಹಿರಿಯ ಹಿಗ್ಗು.

ಆರ್ಥಿಕ ಅನುಕೂಲತೆಗಳಿದ್ದವರು ಕೈಕೊಂಡರೆ ಇಂತಹ ಕೆಲಸಗಳು ಹೆಚ್ಚು ಚೆನ್ನಾಗಿ ಆಗಬಲ್ಲವು: ಎಡೆಬಿಡದೆ ಅವರು ಅದೇ ಕೆಲಸವನ್ನು ಮುಂದುವರಿಸಬಲ್ಲರು; ಗ್ರಂಥ ಸಂಗ್ರಹಾಲಯಗಳ ಲಾಭ ಪಡೆಯಲು ಎಲ್ಲಿ ಬೇಕಾದಲ್ಲಿ ಅಲೆಯಬಹುದು; ಇಲ್ಲವೆ ಅವನ್ನು ತಮ್ಮಲ್ಲಿಗೆ ಬರಮಾಡಿಕೊಳ್ಳಬಹುದು. ಆದರೆ, ಇವಾವ ಅನುಕೂಲತೆಗಳೂ ಇಲ್ಲವೆಂದು ಮುರುಟಿಕೊಂಡು ಕೆಮ್ಮನಿರಲಿಕ್ಕಾದೀತೆ? ಅದೂ ಹೇಡಿತನವೆಂಬ ವಿಚಾರದಿಂದ ನನಗಿರುವ ಅನುಕೂಲತೆಗಳಲ್ಲಿಯೇ ಕೈಲಾದ ಅಳಿಲು ಸೇವೆಯನ್ನು ಸಲ್ಲಿಸಿದ್ದೇನೆ; ಅದನ್ನು ಸವಿಮಾಡಿಕೊಳ್ಳಬೇಕಾಗಿ ಬಿನ್ನಹ.

ನನ್ನ ಈ ಬಗೆಯ ಕೆಲಸಕ್ಕೆ ಬೆನ್ನು ತಟ್ಟಿ ಹುರುಪು ಕೊಟ್ಟು ಮುನ್ನಡೆಸಿದ ಶ್ರೇಯಸ್ಸು ಮೈಸೂರ ಸರಕಾರದ ದೇವರಾಜ ಬಹದ್ದೂರ ಪಾರಿತೋಷಕ ಸಮಿತಿ ಮತ್ತು ಕರ್ನಾಟಕ ವಿದ್ಯಾವರ್ಧಕ ಸಂಘ ಇವರಿಗೆ ಇದೆ. ಏಕೆಂದರೆ, ಕನ್ನಡದಲ್ಲಿ ಈ ಬಗೆಯ ಗ್ರಂಥಗಳಿಗೆ ಸಾಮಾನ್ಯವಾಚಕರ ಕೈಯಿಂದ ಎರಡು ಕಾಸು ದೊರೆತು ಅಚ್ಚಿನ ವೆಚ್ಚದ ಹೊರೆಯು ದೂರವಾಗುವ ಆಸೆಯೆ ಇಲ್ಲ. ಆದುದರಿಂದ, ಈ ಮೊದಲಿನ ಪುಸ್ತಕಗಳ ಸಾಲದಲ್ಲಿಯೆ ಸಿಕ್ಕಿಬಿದ್ದು ಒರಲುತ್ತಿದ್ದೆನಾದರೆ ಈ ಲೇಖನದ ವಿಚಾರವು ಎಂದೊ ಕಮರಿಹೋಗುತ್ತಿತ್ತು! ಮೇಲಣ ಸಂಸ್ಥೆಯವರು ಗುಣಗ್ರಾಹಕತೆಯಿಂದ ಅಚ್ಚಿನ ವೆಚ್ಚದ ಕೆಲವೊಂದು ಅಂಶವನ್ನಾದರೂ ಮೆಚ್ಚುಕೊಟ್ಟು ನೆರವಾದುದಕ್ಕಾಗಿ ಅವರನ್ನು ನಾನು ನೆನೆಯದೆ ಇರಲಾರೆನು. ಈ ಬಾರಿ ಇದನ್ನು ಬೆಳಕಿಗೆ ತರಲು ಮುಂಬೈ ವಿಶ್ವವಿದ್ಯಾನಿಲಯದವರಿಂದ ಐದು ನೂರು ರೂಪಾಯಿಗಳ ಧನಸಹಾಯವು ದೊರೆತಿದೆ. ಈಗಿನ ವಿಪರೀತ ಬೆಲೆ ಏರಿದ ಕಾಲದಲ್ಲಿ ಇಷ್ಟರಿಂದ ಬಗೆಹರಿಯದು ಎಂಬುದು ನಿಜವಾದರೂ ಅದು ಒಂದು ವಿಶ್ವವಿದ್ಯಾನಿಲಯದಿಂದ ಬಂದ ನೆರವು ಎಂಬ ದೃಷ್ಟಿಯಿಂದ ಅದರ ಬೆಲೆ (ಗೌರವ) ಕಡಿಮೆಯಿಲ್ಲ. ಈ ನೆರವನ್ನಿತ್ತುದಕ್ಕಾಗಿ ನಾನು ಅವರಿಗೆ ತಲೆವಾಗುತ್ತೇನೆ.

ಇದನ್ನು ಬರೆಯಲು ಕೆಲವು ಗ್ರಂಥಸಹಾಯ ಮಾಡಿದ್ದಕ್ಕಾಗಿಯೂ ಗಳೆಯರಾಗಿ ನೆರವಾದುದಕ್ಕಾಗಿಯೂ ಶ್ರೀ ಬೆಂಗೆರೆ ಹುಚ್ಚರಾಯರು, ಶ್ರೀ ಆಪ್ಪೆ ಶಂಕರರಾಯರು, ಶ್ರೀ ನೆಗಳೂರು ರಂಗರು ಮೊದಲಾದವರಿಗೆ ನನ್ನ ವಂದನೆಗಳು.

ಶಂ. ಬಾ. ಜೋಶಿ

ಪೀಠಿಕೆ

ನುಡಿಯು ಮುಖ್ಯವಾಗಿ ಕಿವಿಯ ವಿಷಯ, ಎಂಬುದನ್ನು ಜನಗಳು ತೀರ ಮರೆತಿರುವಂತೆ ತೋರುತ್ತದೆ. ಇಂದಿನ ಅಚ್ಚುಕೂಟದ ಯುಗದಲ್ಲಿ ನುಡಿಯು ಕಣ್ಣಿನ ವಿಷಯವೆಂಬಂತೆ ಜನಸಾಮಾನ್ಯರ ಗ್ರಹಿಕೆಯಾಗಿದ್ದರೆ ಸೋಜಿಗವೇನು? ಶಬ್ದಸ್ವರೂಪವನ್ನು ನಿರ್ಧರಿಸುವಲ್ಲಿ, ಈಗ ಕಿವಿಗಿಂತ ಕಣ್ಣೇ ಹೆಚ್ಚಿನ ಅಧಿಕಾರವನ್ನು ವಹಿಸಿದೆ, 'ತುಬಾಕಿ' ಎಂಬ ಶಬ್ದವನ್ನು 'ಟುಬಾಕಿ' ಎಂದು ಏಕೆ ಬರೆಯಬಾರದು? ಹಾಗೆ ಬರೆದರೆ ಆಗದೆ? 'ಗುಂಡು ಹೊಡೆವಾಗ ಆಗುವ ಸದ್ದು ಎಂತಹದು?' ಎಂದು ಕೇಳಿದರೆ 'ಟುಬ್ (ಠುಬ್')' ಎಂದು ಹೇಳುವೆವಾದರೂ ಬರೆಯುವುದು ಮಾತ್ರ 'ತುಬಾಕಿ' ಎಂದೇ! 'ಹೀಗೇಕೆ?' ಎಂದು ಪ್ರಶ್ನಿಸಿದರೆ 'ಹಲವು ದಿನಗಳಿಂದ ಇದೇ ಬಗೆಯಾಗಿ ಬರೆವ ವಾಡಿಕೆಯುಂಟು, ಎಂದು ಹೇಳುವುದುಂಟು! ಇಲ್ಲಿ ಕಿವಿಯ ಅಧಿಕಾರವನ್ನು ಕಣ್ಣೇ ಅಪಹರಿಸಿದುದನ್ನು ಮನಗಾಣಬಹುದು.

ಆದರೆ, ಬರೆವಣಿಗೆಯಲ್ಲಿ ಕಿವಿಯ ಮಾತು ನಡೆಯದಿದ್ದುದಕ್ಕೂ ಒಂದು ಕಾರಣವುಂಟು. ಕೇಳಿದ ಎಲ್ಲ ಶಬ್ದಗಳನ್ನು (ನಾದವನ್ನು) ಕೇಳಿದ ಹಾಗೆ, ಎಂದರೆ ಇದ್ದುದು ಇದ್ದಂತೆ, ಸರಿಯಾಗಿ ಬರೆದು ತೋರುವುದು ಸಾಧ್ಯವೆ ಇಲ್ಲ. ಒಪ್ಪಿಗೆಯನ್ನು ಸೂಚಿಸುವಾಗ, ಅಥವಾ 'ಸರಿ, ಮುಂದೆ ಸಾಗಲಿ' ಎಂಬರ್ಥದಿಂದ ತಲೆದೂಗುವಾಗ, ಬಾಯಿಂದ ಅಲ್ಲಲ್ಲ-ಮೂಗಿನಿಂದ ಹೊರಡುವ 'ಹುಂ' ಎಂಬೀ ಬಗೆಯ ನುಡಿಯನ್ನು ಯಥಾವತ್ತಾಗಿ ಬರೆದು ತೋರುವುದು ಯಾರಿಗೆ ತಾನೆ ಸಾಧ್ಯ? ಇದನ್ನು ಬರಿ 'ಹುಂ' ಎಂದಿಷ್ಟೇ ಮೂಡಿಸಿದರೆ, ಆ 'ಹುಂ' ಕಾರವನ್ನು ಉಚ್ಚರಿಸುವಲ್ಲಿ ಸ್ವಲ್ಪ ಹೆಚ್ಚುಕಡಿಮೆಯಾದರೆ ಆಯ್ತು; ಎಲ್ಲವೂ ಅನರ್ಥ! ಅಪಾರ್ಥ! ಸಮ್ಮತಿಯ ಬದಲು ಅಸಮ್ಮತಿಯನ್ನು ಸೂಚಿಸಿದಂತಾಗುವುದು! 'ಹುಂ' ಎಂಬುದಕ್ಕೆ ಸಮ್ಮತಿ, ಅಸಮ್ಮತಿ, ಆಕ್ಷೇಪಣೆ, ನಿರೋಧ, ಪ್ರಶ್ನೆ, ಮೊದಲಾದ ಹಲವು ಭಿನ್ನಾರ್ಥಗಳು ಉಚ್ಚಾರ ಭೇದದಿಂದ ತಲೆದೋರುವುವು. ಆದರೆ, ಈ ಭಿನ್ನಭಿನ್ನ ಅರ್ಥದ ಹುಂಕಾರದಲ್ಲಿ ಹುದುಗಿರುವ ನಾದಭೇದವನ್ನು ಬರೆದು ತೋರುವುದು ಮಾತ್ರ ಅಶಕ್ಯ. ಏಕೆಂದರೆ ಲಿಪಿಯಲ್ಲಿ ಇದಕ್ಕೆಲ್ಲ ಬೇಕಾಗುವ ಗುರುತುಗಳು ಇಲ್ಲ. ನುಡಿಯೊಳಗಿನ ಉಚ್ಚಾರದ ಎಲ್ಲ ಸೂಕ್ಷ್ಮ ಭೇದಗಳನ್ನು ಮೂಡಿಸಿ ತೋರುವ ಗುರುತುಗಳು, ಎಂದರೆ ಅಕ್ಷರಗಳು ಇರುವ ಭಾಷೆಯೇ ಜಗತ್ತಿನಲ್ಲಿ ಹುಟ್ಟಿಲ್ಲ. ಹುಟ್ಟುವುದು ಸಾಧ್ಯವೂ ಇಲ್ಲ.

ಏಕೆಂದರೆ ನಾದವು ಅನಂತ; ಬರೆಹವು ಸಾಂತ. ನಾದವು ಸೂಕ್ಷ್ಮ; ಬರೆಹವು (ಅಕ್ಷರ ಚಿಹ್ನಗಳು) ಸ್ಥೂಲ. ನಾದವು ಗಾಳಿ; ಬರೆಹವು ಗಟ್ಟಿ. ಈ ಕಾರಣಗಳಿಂದಲೇ ಒಂದು ನಾದದಲ್ಲಿರುವ ಎಲ್ಲ ವೈವಿಧ್ಯಗಳನ್ನೂ, ತಾರತಮ್ಯಗಳನ್ನೂ ಸಂಪೂರ್ಣವಾಗಿ ಮೂಡಿಸಿ ತೋರುವುದಕ್ಕೆ ಲಿಪಿಯು ಅಸಮರ್ಥವಾಗಿದೆ. ಬರೆಹದ

ಕೆಲಸಗಾರನಂತೆ, ಮುತ್ತುತರಲು ಕಡಲ ಆಳಕ್ಕೆ ಮುಳುಂಗುವವನಂತೆ ಎಂದು ನಾನು ಈ ಮೊದಲಿನ ನನ್ನ ಪ್ರಕಟನೆಗಳ ಮುನ್ನುಡಿಯಲ್ಲಿ ಅರಿಕೆ ಮಾಡಿಕೊಂಡಿದ್ದೇನೆ. ತಾನು ತಂದುದೆಲ್ಲವೂ ಚೊಕ್ಕಚಿನ್ನ ಇಲ್ಲವೆ ಆಣೆ ಮುತ್ತುಗಳೇ ಎಂಬ ಆತನ ಹೆಮ್ಮೆ ವ್ಯರ್ಥ. ತನಗೆ ದೊರೆತುದನ್ನು ಬಲ್ಲಿದರ ಎದುರು ತಂದಿರಿಸುವುದು ಆತನ ಕೆಲಸ. ಅದರಲ್ಲಿ ಬಹು ಭಾಗವು ಬೆಲೆಯುಳ್ಳದಿದೆಯೆಂದು ತಿಳಿದವರು ಹೇಳಿದರೆ ಅದುವೆ ಆತನ ಗೆಲವು; ಹಿರಿಯ ಹಿಗ್ಗು.

ಆರ್ಥಿಕ ಅನುಕೂಲತೆಗಳಿದ್ದವರು ಕೈಕೊಂಡರೆ ಇಂತಹ ಕೆಲಸಗಳು ಹೆಚ್ಚು ಚೆನ್ನಾಗಿ ಆಗಬಲ್ಲವು: ಎಡೆಬಿಡದೆ ಅವರು ಅದೇ ಕೆಲಸವನ್ನು ಮುಂದುವರಿಸಬಲ್ಲರು; ಗ್ರಂಥ ಸಂಗ್ರಹಾಲಯಗಳ ಲಾಭ ಪಡೆಯಲು ಎಲ್ಲಿ ಬೇಕಾದಲ್ಲಿ ಅಲೆಯಬಹುದು; ಇಲ್ಲವೆ ಅವನ್ನು ತಮ್ಮಲ್ಲಿಗೆ ಬರಮಾಡಿಕೊಳ್ಳಬಹುದು. ಆದರೆ, ಇವಾವ ಅನುಕೂಲತೆಗಳೂ ಇಲ್ಲವೆಂದು ಮುರುಟಿಕೊಂಡು ಕೆಮ್ಮನಿರಲಿಕ್ಕಾದೀತೆ? ಅದೂ ಹೇಡಿತನವೆಂಬ ವಿಚಾರದಿಂದ ನನಗಿರುವ ಅನುಕೂಲತೆಗಳಲ್ಲಿಯೇ ಕೈಲಾದ ಅಳಿಲು ಸೇವೆಯನ್ನು ಸಲ್ಲಿಸಿದ್ದೇನೆ; ಅದನ್ನು ಸವಿಮಾಡಿಕೊಳ್ಳಬೇಕಾಗಿ ಬಿನ್ನಹ.

ನನ್ನ ಈ ಬಗೆಯ ಕೆಲಸಕ್ಕೆ ಬೆನ್ನು ತಟ್ಟಿ ಹುರುಪು ಕೊಟ್ಟು ಮುನ್ನಡೆಸಿದ ಶ್ರೇಯಸ್ಸು ಮೈಸೂರ ಸರಕಾರದ ದೇವರಾಜ ಬಹದ್ದೂರ ಪಾರಿತೋಷಕ ಸಮಿತಿ ಮತ್ತು ಕರ್ನಾಟಕ ವಿದ್ಯಾವರ್ಧಕ ಸಂಘ ಇವರಿಗೆ ಇದೆ. ಏಕೆಂದರೆ, ಕನ್ನಡದಲ್ಲಿ ಈ ಬಗೆಯ ಗ್ರಂಥಗಳಿಗೆ ಸಾಮಾನ್ಯವಾಚಕರ ಕೈಯಿಂದ ಎರಡು ಕಾಸು ದೊರೆತು ಅಚ್ಚಿನ ವೆಚ್ಚದ ಹೊರೆಯು ದೂರವಾಗುವ ಆಸೆಯೆ ಇಲ್ಲ. ಆದುದರಿಂದ, ಈ ಮೊದಲಿನ ಪುಸ್ತಕಗಳ ಸಾಲದಲ್ಲಿಯೆ ಸಿಕ್ಕಿಬಿದ್ದು ಒರಲುತ್ತಿದ್ದೆನಾದರೆ ಈ ಲೇಖನದ ವಿಚಾರವು ಎಂದೊ ಕಮರಿಹೋಗುತ್ತಿತ್ತು! ಮೇಲಣ ಸಂಸ್ಥೆಯವರು ಗುಣಗ್ರಾಹಕತೆಯಿಂದ ಅಚ್ಚಿನ ವೆಚ್ಚದ ಕೆಲವೊಂದು ಅಂಶವನ್ನಾದರೂ ಮೆಚ್ಚುಕೊಟ್ಟು ನೆರವಾದುದಕ್ಕಾಗಿ ಅವರನ್ನು ನಾನು ನೆನೆಯದೆ ಇರಲಾರೆನು. ಈ ಬಾರಿ ಇದನ್ನು ಬೆಳಕಿಗೆ ತರಲು ಮುಂಬೈ ವಿಶ್ವವಿದ್ಯಾನಿಲಯದವರಿಂದ ಒಂದು ನೂರು ರೂಪಾಯಿಗಳ ಧನಸಹಾಯವು ದೊರೆತಿದೆ. ಈಗಿನ ವಿಪರೀತ ಬೆಲೆ ಏರಿದ ಕಾಲದಲ್ಲಿ ಇಷ್ಟರಿಂದ ಬಗೆಹರಿಯದು ಎಂಬುದು ನಿಜವಾದರೂ ಅದು ಒಂದು ವಿಶ್ವವಿದ್ಯಾನಿಲಯದಿಂದ ಬಂದ ನೆರವು ಎಂಬ ದೃಷ್ಟಿಯಿಂದ ಅದರ ಬೆಲೆ (ಗೌರವ) ಕಡಿಮೆಯಿಲ್ಲ. ಈ ನೆರವನ್ನಿತ್ತುದಕ್ಕಾಗಿ ನಾನು ಅವರಿಗೆ ತಲೆವಾಗುತ್ತೇನೆ.

ಇದನ್ನು ಬರೆಯಲು ಕೆಲವು ಗ್ರಂಥಸಹಾಯ ಮಾಡಿದ್ದಕ್ಕಾಗಿಯೂ ಗಳೆಯರಾಗಿ ನೆರವಾದುದಕ್ಕಾಗಿಯೂ ಶ್ರೀ ಬೆಂಗೆರೆ ಹುಚ್ಚರಾಯರು, ಶ್ರೀ ಆಪ್ಟೆ ಶಂಕರರಾಯರು, ಶ್ರೀ ನೆಗಳೂರು ರಂಗರು ಮೊದಲಾದವರಿಗೆ ನನ್ನ ವಂದನೆಗಳು.

ಶಂ. ಬಾ. ಜೋಶಿ

ಪೀಠಿಕೆ

ನುಡಿಯು ಮುಖ್ಯವಾಗಿ ಕಿವಿಯ ವಿಷಯ, ಎಂಬುದನ್ನು ಜನಗಳು ತೀರ ಮರೆತಿರುವಂತೆ ತೋರುತ್ತದೆ. ಇಂದಿನ ಅಚ್ಚುಕೂಟದ ಯುಗದಲ್ಲಿ ನುಡಿಯು ಕಣ್ಣಿನ ವಿಷಯವೆಂಬಂತೆ ಜನಸಾಮಾನ್ಯರ ಗ್ರಹಿಕೆಯಾಗಿದ್ದರೆ ಸೋಜಿಗವೇನು? ಶಬ್ದಸ್ವರೂಪವನ್ನು ನಿರ್ಧರಿಸುವಲ್ಲಿ, ಈಗ ಕಿವಿಗಿಂತ ಕಣ್ಣೇ ಹೆಚ್ಚಿನ ಅಧಿಕಾರವನ್ನು ವಹಿಸಿದೆ, 'ತುಬಾಕಿ' ಎಂಬ ಶಬ್ದವನ್ನು 'ಟುಬಾಕಿ' ಎಂದು ಏಕೆ ಬರೆಯಬಾರದು? ಹಾಗೆ ಬರೆದರೆ ಆಗದೆ? 'ಗುಂಡು ಹೊಡೆವಾಗ ಆಗುವ ಸದ್ದು ಎಂತಹದು?' ಎಂದು ಕೇಳಿದರೆ 'ಟುಬ್ (ಠುಬ್)' ಎಂದು ಹೇಳುವವಾದರೂ ಬರೆಯುವುದು ಮಾತ್ರ 'ತುಬಾಕಿ' ಎಂದೇ! 'ಹೀಗೇಕೆ?' ಎಂದು ಪ್ರಶ್ನಿಸಿದರೆ 'ಹಲವು ದಿನಗಳಿಂದ ಇದೇ ಬಗೆಯಾಗಿ ಬರೆವ ವಾಡಿಕೆಯುಂಟು, ಎಂದು ಹೇಳುವುದುಂಟು! ಇಲ್ಲಿ ಕಿವಿಯ ಅಧಿಕಾರವನ್ನು ಕಣ್ಣೇ ಅಪಹರಿಸಿದುದನ್ನು ಮನಗಾಣಬಹುದು.

ಆದರೆ, ಬರೆವಣಿಗೆಯಲ್ಲಿ ಕಿವಿಯ ಮಾತು ನಡೆಯದಿದ್ದುದಕ್ಕೂ ಒಂದು ಕಾರಣವುಂಟು. ಕೇಳಿದ ಎಲ್ಲ ಶಬ್ದಗಳನ್ನು (ನಾದವನ್ನು) ಕೇಳಿದ ಹಾಗೆ, ಎಂದರೆ ಇದ್ದುದು ಇದ್ದಂತೆ, ಸರಿಯಾಗಿ ಬರೆದು ತೋರುವುದು ಸಾಧ್ಯವೆ ಇಲ್ಲ. ಒಪ್ಪಿಗೆಯನ್ನು ಸೂಚಿಸುವಾಗ, ಅಥವಾ 'ಸರಿ, ಮುಂದೆ ಸಾಗಲಿ' ಎಂಬರ್ಥದಿಂದ ತಲೆದೂಗುವಾಗ, ಬಾಯಿಂದ ಅಲ್ಲಲ್ಲ-ಮೂಗಿನಿಂದ ಹೊರಡುವ 'ಹುಂ' ಎಂಬೀ ಬಗೆಯ ನುಡಿಯನ್ನು ಯಥಾವತ್ತಾಗಿ ಬರೆದು ತೋರುವುದು ಯಾರಿಗೆ ತಾನೆ ಸಾಧ್ಯ? ಇದನ್ನು ಬರಿ 'ಹುಂ' ಎಂದಿಷ್ಟೇ ಮೂಡಿಸಿದರೆ, ಆ 'ಹುಂ' ಕಾರವನ್ನು ಉಚ್ಚರಿಸುವಲ್ಲಿ ಸ್ವಲ್ಪ ಹೆಚ್ಚುಕಡಿಮೆಯಾದರೆ ಆಯ್ತು; ಎಲ್ಲವೂ ಅನರ್ಥ! ಅಪಾರ್ಥ! ಸಮ್ಮತಿಯ ಬದಲು ಅಸಮ್ಮತಿಯನ್ನು ಸೂಚಿಸಿದಂತಾಗುವುದು! 'ಹುಂ' ಎಂಬುದಕ್ಕೆ ಸಮ್ಮತಿ, ಅಸಮ್ಮತಿ, ಆಕ್ಷೇಪಣೆ, ನಿರೋಧ, ಪ್ರಶ್ನೆ, ಮೊದಲಾದ ಹಲವು ಭಿನ್ನಾರ್ಥಗಳು ಉಚ್ಚಾರ ಭೇದದಿಂದ ತಲೆದೋರುವುವು. ಆದರೆ, ಈ ಭಿನ್ನಭಿನ್ನ ಅರ್ಥದ ಹುಂಕಾರದಲ್ಲಿ ಹುದುಗಿರುವ ನಾದಭೇದವನ್ನು ಬರೆದು ತೋರುವುದು ಮಾತ್ರ ಅಶಕ್ಯ. ಏಕೆಂದರೆ ಲಿಪಿಯಲ್ಲಿ ಇದಕ್ಕೆಲ್ಲ ಬೇಕಾಗುವ ಗುರುತುಗಳು ಇಲ್ಲ. ನುಡಿಯೊಳಗಿನ ಉಚ್ಚಾರದ ಎಲ್ಲ ಸೂಕ್ಷ್ಮ ಭೇದಗಳನ್ನು ಮೂಡಿಸಿ ತೋರುವ ಗುರುತುಗಳು, ಎಂದರೆ ಅಕ್ಷರಗಳು ಇರುವ ಭಾಷೆಯೇ ಜಗತ್ತಿನಲ್ಲಿ ಹುಟ್ಟಿಲ್ಲ. ಹುಟ್ಟುವುದು ಸಾಧ್ಯವೂ ಇಲ್ಲ.

ಏಕೆಂದರೆ ನಾದವು ಅನಂತ; ಬರೆಹವು ಸಾಂತ. ನಾದವು ಸೂಕ್ಷ್ಮ; ಬರೆಹವು (ಅಕ್ಷರ ಚಿಹ್ನಗಳು) ಸ್ಥೂಲ. ನಾದವು ಗಾಳಿ; ಬರೆಹವು ಗಟ್ಟಿ. ಈ ಕಾರಣಗಳಿಂದಲೇ ಒಂದು ನಾದದಲ್ಲಿರುವ ಎಲ್ಲ ವೈವಿಧ್ಯಗಳನ್ನೂ, ತಾರತಮ್ಯಗಳನ್ನೂ ಸಂಪೂರ್ಣವಾಗಿ ಮೂಡಿಸಿ ತೋರುವುದಕ್ಕೆ ಲಿಪಿಯು ಅಸಮರ್ಥವಾಗಿದೆ. ಬರೆಹದ

ಗುರುತು ಆ ಮೂಲ ನಾದದ ಸ್ಥೂಲರೂಪ. ಭಾವಚಿತ್ರ (Photo). ಭಾವಚಿತ್ರದಿಂದ ಆ ಮೂಲ ವಸ್ತುವಿನ ಸಂಪೂರ್ಣವಾದ, ಸರಿಯಾದ ಕಲ್ಪನೆಯು ಉಂಟಾದೀತೆಂದು ಹೇಳುವುದು ಕಷ್ಟ. ನೆಳಲು ಒಡವೆ ಕೆಲವೊಂದು ಅಂಗದ ಸ್ಥೂಲ ಪ್ರತಿಬಿಂಬ ಅಥವಾ ಪ್ರತಿನಿಧಿ ಆಗಬಲ್ಲುದು; ನೆಳಲು ಒಡವೆಯನ್ನು ಬಹುಮಟ್ಟಿಗೆ ಹೋಲುವುದಾದರೂ ನೆಳಲೆ ಒಡವೆಯಾಗದು. ಸಾಂತವು ಅನಂತವನ್ನು, ಸೂಚಿಸಬಹುದು, ಹೆಚ್ಚಾದರೆ ಸಂಪೂರ್ಣವಾಗಿ ಅದನ್ನು ಚಿತ್ರಿಸಲರಿಯದು. ಆದುದರಿಂದ, ನಾದಮೂಲವಾದ ಭಾಷೆಯನ್ನು, ಬರೆಹದಲ್ಲಿ ಒಡಿದಿಡುವುದಾಗಲಿ, ಸಂಪೂರ್ಣವಾಗಿ ಪ್ರತಿಬಿಂಬಿಸಿ ತೋರುವುದಾಗಲಿ ಅಶಕ್ಯ. ಅಸಂಭಾವ್ಯ. ಈ ಕಾರಣದಿಂದಲೇ ನುಡಿಯು ಮುಖ್ಯವಾಗಿ ಕಿವಿಯ ವಿಷಯ; ಕಣ್ಣಿನ ವಿಷಯವಲ್ಲ, ಎಂದು ಒತ್ತಿ ಒತ್ತಿ ಹೇಳಬೇಕಾಗಿದೆ.

ಹಾಗಾದರೆ, ಲಿಪಿಯ ಮಹತ್ವವೇ ಇಲ್ಲವೆ? ಲಿಪಿಯೇ ಇಲ್ಲದಿದ್ದರೆ....? ಲಿಪಿಯೆ ಇಲ್ಲದಿದ್ದರೆ ಮೊದಲೆ ಅಸಿಸ್ಥಿತವಾದ ಮತ್ತು ಅಸ್ಥಿರವಾದ ನುಡಿಯು (ನಾದವು) ಇನ್ನೆಷ್ಟು ಅನಿಶ್ಚಿತ ಮತ್ತು ಅಸ್ಥಿರವಾಗುತ್ತಿದ್ದಿತೊ! ನುಡಿಯು ದಿನಕೊಂದು ರೂಪವನ್ನು ತಾಳಿದಂತೆ, ಅದನ್ನು ಕಟ್ಟಿನಲ್ಲಿ ಇಟ್ಟು, ಅದಕ್ಕೆ ಒಂದು ಬಗೆಯ ಸ್ಥೈರ್ಯವನ್ನು ತಂದ ಶ್ರೇಯಸ್ಸು ಬರೆಹಕ್ಕೇ ಇದೆ. ಹೀಗೆ ಬಿಗಿದಿಟ್ಟರೂ ನುಡಿಯು ತನ್ನ ಗುಣವನ್ನು ಮಾತ್ರ ಎಂದೂ ಬಿಟ್ಟಿಲ್ಲ; ಬಿಡುವುದು ಯುಕ್ತವೂ ಅಲ್ಲ. ಚೀನಿಭಾಷೆಯಲ್ಲಿ ಕಣ್ಣಿಗೆ ಕಾಂಬ ಶಬ್ದವು (ಬರೆದ ನುಡಿಯು) ಒಂದೇ ಇದ್ದರೂ ಅದರ ಉಚ್ಚಾರ ಭೇದದಿಂದ ಒಂದೊಂದು ಪದಕ್ಕೂ ಹತ್ತು-ಹದಿನೈದು ಬೇರೆ ಬೇರೆ ಅರ್ಥಗಳು ಆಗುವುವಂತೆ! ಸ್ವೀಡಿಶ್ ಭಾಷೆಯಲ್ಲೂ ಸುಮಾರಾಗಿ ಇದೇ ಸ್ಥಿತಿಯೆಂದು ಹೇಳುತ್ತಾರೆ. ತಮಿಳು ಭಾಷೆಯ ವರ್ಣಮಾಲೆಯಲ್ಲಿ ಕೆಲವೊಂದು ಅಕ್ಷರಗಳೇ ಕಡಿಮೆ ಇರುವುದರಿಂದ ಬರೆಯುವುದರಲ್ಲಿಯೂ ಅದನ್ನೆ ಓದುವುದರಲ್ಲಿಯೂ ಕೆಲವೊಂದು ಹೆಚ್ಚು ಕಡಿಮೆಯಾಗುತ್ತದೆ. 'ಗಾಂಧಿ' ಎಂಬುದನ್ನು ತಮಿಳಿನಲ್ಲಿ 'ಕಾಂತಿ' ಎಂದು ಬರೆಯಬೇಕಾಗುವುದು. ಮತ್ತು 'ಕಾಂತಿ' ಎಂದು ಬರೆದುದನ್ನು 'ಕಾಂದಿ' ಎಂದು ಓದುವ ವಾಡಿಕೆಯುಂಟು. ಕನ್ನಡದಲ್ಲಿ 'ಭಾವಿ' ಎಂದು ಬರೆವ ಮಾತನ್ನು 'ಬಾ(ಂ)ವಿ' ಎಂದು ಸೊಲ್ಲುವ ರೂಢಿಯಿಲ್ಲವೆ? ಇಂಗ್ಲಿಷಿನಲ್ಲಿ ವಾಲ್ಕಿಂಗ (Walking) ಎಂದು ಬರೆದು 'ವಾಕಿಂಗ' ಎಂದು ನುಡಿವರು. ಕರ್ನಲ್ ಎಂದು ಹೇಳುವುದನ್ನು 'Colonel' ಎಂದು ಬರೆಯುವರು! ಉಚ್ಚಾರ ನಿಶ್ಚಿತಿಯ ಬಗ್ಗೆ ತುಂಬ ಆಗ್ರಹಪಡುವ ಸಂಸ್ಕೃತದಲ್ಲಿಯೂ 'ಅಗ್ನಿಮೀಳೇ' ಎಂದು ಹೇಳುವ ಪದವು ಮೂಲದಲ್ಲಿ 'ಅಗ್ನಿಮೀಡೇ' ಎಂದಿರುವುದನ್ನು ಕಾಣಬಹುದು!

ಲಿಪಿಯಿಂದ ಬಂಧಿಸಿರುವಾಗ ಈ ಹಾಡು, ಎಂದ ಬಳಿಕ ಬರೆಹದ ಬಿಗುಪೇ ಇಲ್ಲದ ಅರೆಭಾಷೆಗಳಲ್ಲಿ ಏನು ಅನವಸ್ಥೆಯಾಗುತ್ತಿರಬಹುದೊ, ಅದನ್ನು ಕಲ್ಪಿಸುವುದಕ್ಕೂ ಕಷ್ಟಕರವಾದ ಮಾತು! ಲಿಪಿಯಿದ್ದರೂ ಒಂದೇ ನಾಡಿನ ಒಂದೊಂದು ಭಾಗದವರ ನುಡಿ ಒಂದೊಂದು ತೆರನಾಗಿರುತ್ತದೆ. ಒಂದು ಭಾಗದವರ ಆದೇ ಮಾತು, ಇನ್ನೊಂದು ಭಾಗದವರಿಗೆ ಅವರ ಉಚ್ಚಾರಗಳ ಅನಿಶ್ಚಿತತೆ ಅಸ್ಪಷ್ಟತೆಗಳ ಮೂಲಕ ಬೇಗನೆ ತಿಳಿಯುವುದಿಲ್ಲ. ಒಂದು ಭಾಗದವರು 'ಪಳದೆ' ಎಂದು ಹೇಳುವ ಪದಾರ್ಥವನ್ನು, ಇನ್ನೊಂದು ಕಡೆಯವರು 'ಪಳಿದ್ಯ' ಎನ್ನುವರು. ಇಂತಹ ಒಂದು ಕಡೆಯವರು ಇನ್ನೊಂದು ಕಡೆಗೆ ಹೋದಾಗ ಆಡುವ ಮಾತಿನ ಅರ್ಥವಾಗದ್ದರಿಂದ ಅರೆಹೊಟ್ಟೆಯಿಂದಲೆ ಏಳಬೇಕಾದ ಪ್ರಸಂಗವೂ ಬರುವದು! ಉಚ್ಚಾರ ಪದ್ಧತಿಯು ಸಾಧಾರಣ ಮಟ್ಟಿಗಾದರೂ ಒಂದೇ ಬಗೆಯಾಗಿ ಇಲ್ಲದಿದ್ದರೆ, ಒಂದೇ ನಾಡಿನವರ ಒಂದು ಭಾಷೆಯೇ, ಭಿನ್ನಭಿನ್ನ ಉಚ್ಚಾರದ ಬೇರೆಬೇರೆ ಭಾಗದವರಿಗೆ ಬೇರೆ ಭಾಷೆಯೆಂದೆನಿಸುವುದು; ನೂರಾರು ವರ್ಷಗಳಿಂದ ಇಂತಹ ಸ್ಥಿತಿಯ ಬೆಳೆದು ಬಿಟ್ಟರೆ ಈ ಭಾಷೆಗಳು ಒಂದು ಭಾಷೆಯ ಉಪಭಾಷೆಗಳೆನಿಸುವುವು. ಉಪಭಾಷೆಗಳೆ ಇನ್ನೂ ಹೆಚ್ಚಿನ ವ್ಯತ್ಯಾಸದಿಂದ ಸೋದರಭಾಷೆಗಳೆಂದೆನಿಸುವುವು. ನೃಪತುಂಗನ ಕಾಲದಲ್ಲಿ ಕನ್ನಡದ ನಾಡಿನಲ್ಲಿ 'ಕನ್ನಡಂಗಳ್' (ಹಲವು ಕನ್ನಡಗಳು) ಇದ್ದುವೆಂದು ಕವಿರಾಜಮಾರ್ಗದಿಂದ ಗೊತ್ತಾಗುತ್ತದೆ. ಆ ಸ್ಥಿತಿಯು ಇನ್ನೂ ಪೂರ್ಣವಾಗಿ ನಷ್ಟವಾಗಿಲ್ಲ, ಆದರೂ ಕನ್ನಡದ ಒಳನಾಡುಗಳಲ್ಲಿ ಇತ್ತೀಚೆ ಬಳಕೆ ಹೆಚ್ಚಾಗಿ, ಸ್ನೇಹ ಸಂಬಂಧಗಳು ಬೆಳೆಯುತ್ತಿರುವುದರಿಂದ

ಕನ್ನಡರಿಗೆಲ್ಲ ಸಾಮಾನ್ಯವಾದ ಒಂದು ಭಾಷೆಯು ತಲೆದೋರುತ್ತಿರುವುದು, ನಾಳಿನ ಅಖಂಡ ಕರ್ನಾಟದ ನಿಶ್ಚಿತ ಮುಂಗುರುತು ಎಂದು ಧೈರ್ಯವಾಗಿ ಹೇಳಬಹುದಾಗಿದೆ.

ಬರೆಹವು ಭಾಷೆಯ ದೇಹವಾಗಿದ್ದರೆ ಸೊಲ್ಲು (ಉಚ್ಚಾರ) ಅದರ ಜೀವಾಳ. ಸೊಲ್ಲು ಇಲ್ಲದ ಲಿಪಿ (ಬರೆಹ) ಬರಿ ಹೆಣ. ಕಣ್ಣಿನಿಂದ ಭಾಷೆಯ ದೇಹದ ಪರಿಚಯವಾಗಬಲ್ಲುದು; ಆದರೆ, ಅದರ ಜೀವಾಳವು ತಿಳಿಯಬೇಕಾದರೆ ಆಗ ಕಿವಿಯೇ ಬೇಕು. ಆವುದೊಂದು ಭಾಷೆಯ ಜೀವಾಳವು ಅದರ ನುಡಿಯಲ್ಲಿ ಎಂದರೆ ನಾದದಲ್ಲಿ ಇದೆ. ನುಡಿ, ಶಬ್ದ, ಸೊಲ್ಲು, ಪದ, ಮಾತು, ವಾಕ್, ಗಿರಾ, ಭಾಷೆ, ವಾಚಾ ಎಂಬವುಗಳ ಮೂಲಾರ್ಥವು ನಾದ, ಉಸಿರು ಅಥವಾ ದನಿ ಎಂದೇ ಇದೆ. ಭಾಷೆಯೆಂದರೆ ನಿರ್ಜೀವ ಬರೆಹವಲ್ಲ. ಬರೆದುದನ್ನು ಕಣ್ಣಿನಿಂದ ಸ್ಥೂಲವಾಗಿ ಗುರುತಿಸ ಬಂದೊಡನೆ, ಭಾಷೆಯು ಬಂದಿತೆಂಬುವುದು ಭ್ರಮೆ, ಅಕ್ಷರ ಸಂಜ್ಞೆಗಳ ಬಾಹ್ಯಪರಿಚಯದಿಂದಲೆ ಭಾಷೆಯನ್ನು ಕಲಿತೆನೆಂಬುವುದೂ, ಕೇವಲ ಭಾವಚಿತ್ರ (photo) ದಿಂದಲೆ ಯಾವುದೊಂದು ವ್ಯಕ್ತಿಯನ್ನು ಅರಿತೆನೆಂಬುದೂ ಎರಡೂ ಒಂದೇ.

ನುಡಿಯು ಮುಖ್ಯವಾಗಿ ಕಿವಿಯ ವಿಷಯ, ಎನ್ನುವುದರಿಂದ ನಾದವೇ ನುಡಿಯ ಜೀವಾಳ ಎಂಬುದಂತೂ ನಿಶ್ಚಿತ; ಅಲ್ಲದೆ ಇದರಿಂದ ಇನ್ನೂ ಒಂದು ಅತ್ಯಂತ ಮಹತ್ವದ ಮಾತು ಸಿದ್ಧವಾಗುತ್ತಿದೆ; ಭಾಷೆಯು ಉಂಟಾಗ ಬೇಕಾದರೆ-ಎಂದರೆ ಅದು ಒಡಮೂಡುವ ಕಾಲಕ್ಕೆ-ಯಾವಾಗಲೂ ಒಂದಕ್ಕಿಂತ ಹೆಚ್ಚು ವ್ಯಕ್ತಿಗಳಿರಲೇ ಬೇಕು. ನುಡಿ ಕಿವಿಗೆ ಬೀಳಬೇಕಾದರೆ, ಕೇಳಬೇಕಾದರೆ, ಆಡುವವನೊಬ್ಬ, ಮತ್ತು ಅದನ್ನು ಕೇಳುವವನೊಬ್ಬ ಹೀಗೆ ಕನಿಷ್ಠ ಇಬ್ಬರಾದರೂ ಇರಲೇಬೇಕಲ್ಲವೆ? ಆಡುವವನು ಇಲ್ಲವೆ ಹೇಳುವವನು ಇಲ್ಲದೆ ನುಡಿಯು ಕಿವಿಗೆ ಎಲ್ಲಿಂದ ಬಂದೀತು? ಒಬ್ಬನೇ ಆಡಿ ತನ್ನ ಮಾತನ್ನು ತಾನೇ ಕೇಳುತ್ತಾನೆಂದು ಎಣಿಸಿದರೂ, ಆಗ ಒಬ್ಬನೇ ಇಬ್ಬರಾಗುತ್ತಾರೆ. ನಾನು ಮಾತನ್ನು ಆಡುತ್ತಿದ್ದೇನೆ; ಹಾಡುತ್ತಿದ್ದೇನೆ, ಎಂಬ ಅರಿವು ತಲೆದೋರಿದೊಡನೆಯೆ ತಾನು ಒಂದು ವ್ಯಕ್ತಿಯಲ್ಲ, ತನ್ನಲ್ಲಿ ಇನ್ನೂ ಒಂದು ವ್ಯಕ್ತಿಯು ಹುದುಗಿಕೊಂಡಿದೆ, ಎಂಬ ಅನುಭವವು ಬರುತ್ತದೆ. ಅರಿವು ಇಲ್ಲದೆ ಆಡಿದ ನುಡಿ, ನುಡಿಯಲ್ಲ, ಬರಿ ಕೂಗಾಟ; ಕಿರಿಚಾಟ; ಅರಚಾಟ; ಉದ್ಗಾರ; ಕುತ್ತುಸಿರು; ನಿಟ್ಟುಸಿರು. ಉಸಿರು-ಉದ್ಗಾರಗಳು ಸೊಲ್ಲು ಅಥವಾ ಭಾಷೆಯಲ್ಲ. ಸೊಲ್ಲು (ಭಾಷೆ) ಎಂದೆನಿಸಬೇಕಾದರೆ ಒಬ್ಬನಿದ್ದವನು ಇಬ್ಬರಾಗಬೇಕಾಗುತ್ತದೆ. ಲೋಕದ ಸಿಹಿ-ಕಹಿಗಳನ್ನು ಅನುಭವಿಸಿ ಆಡುವ ಜೀವವೊಂದು; ಸಿಹಿ-ಕಹಿಗಳನ್ನು ಅನುಭವಿಸಿ, ಆಡುವ-ಮಾಡುವುದಕ್ಕೆಲ್ಲ ಬದಿಯಲ್ಲಿಯೇ ಸುಮ್ಮನಿದ್ದೂ ಸಾಕ್ಷೀಭೂತವಾಗಿರುವ 'ಪರ' ಜೀವವೊಂದು. ಈ ಬಗೆಯಾಗಿ ಒಂದು ಎರಡು ಆದಾಗಲೆ ಬಾಳು-ಬದುಕುಗಳು ಬೆಳೆದುದು. ಬಾಳು ಎಂದರೆ ಇರವು, ಎರಡರ (ಇರ್) ತಳಹದಿಯ ಮೇಲೆಯೆ ನಿಂತಿದೆ. ಈ ಸಂದರ್ಭದಲ್ಲಿ ಮುಂಡಕೋಪನಿಷತ್ತಿನ ಒಂದು ದಿವ್ಯವಚನದ ನೆನಪು ಆಗದೆ ಇರದು.

ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ!
ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನನ್ಯೋ ಅಭಿಚಾಕಶೀತಿ ॥ ೩.೧.೧॥

(ಒಂದು ಗಿಡದಲ್ಲಿ ಎರಡು ಗೆಡೆವಕ್ಕಿಗಳು ಕುಳಿತಿವೆ. ಅವರಲ್ಲಿ ಒಂದು ಹಕ್ಕಿ ಪಿಪ್ಪಲಹಣ್ಣನ್ನು ತಿನ್ನುತ್ತಿದ್ದು ಮತ್ತೊಂದು ಅದನ್ನು ನೊಡುತ್ತ ಬರಿ ಸಾಕ್ಷಿಯಾಗಿ ಕುಳಿತಿದೆ).

ಎಗ್ಗ (ಏಕ) ನು 'ಚತುರ' ನಾದಾಗಲೆ ಆತನಿಗೆ ತಿಳಿದವನೆಂಬ ಹೆಸರು, ತಿಳಿವಿನ ಒಡೆಯನೆ ವಾಕ್- ಪತಿ. ವಾಕ್ಪತಿಯಾದ ಬ್ರಹ್ಮನು ಚತುರ್ಮುಖ! ಸರಸ್ವತಿಯ ಒಡೆಯ! ನಮ್ಮ ಪುರಾತನರ ಈ ಸಂಕೇತವು ಎಷ್ಟು ಅರ್ಥಪೂರ್ಣವಾಗಿದೆ! ಎಷ್ಟು ನಿತಾಂತ ರಮಣೀಯವಾಗಿದೆ!

ಭಾಷೆ, ಎಂಬ ಹೆಸರಿಗೆ ತಕ್ಕುದಾದ ಸೊಲ್ಲು ಹೊರವಡಲು, ತೀರ ಕಡಿಮೆಯೆಂದರೂ ಇಬ್ಬರಾದರೂ ಬೇಕು. ಇಬ್ಬರಿಗಿಂತ ಕಡಿಮೆ ಇದ್ದಾಗ ಭಾಷೆಯೇ ಇಲ್ಲ, ಅದು ಭಾಷೆಯೂ ಅಲ್ಲ. ಬರಿ ವಾತ, ಮಾತಲ್ಲ.

ಪಶು-ಪಕ್ಷ್ಯಾದಿಗಳ ಕೂಗುಗಳಲ್ಲಿಯೂ ಈ ಬಗೆಯ ನುಡಿತನವು (ನಾದಶಕ್ತಿಯು) ಈಗಲೂ ಅನುಭವಕ್ಕೆ ಬರುತ್ತದೆ. ಅಹಾ, ಓ, ಅಯ್ಯೊ, ಚೀ ಮೊದಲಾದ ಉದ್ಗಾರಗಳು ಕಿವಿಗೆ ತಾಗಿದೊಡನೆಯೆ ಆ ಶಬ್ದದ ನುಡಿತದಿಂದ, ಅದನ್ನಾಡುವರ ಮನೋಭಾವನೆಯು ಅಂಗೈನೆಲ್ಲಿಯಷ್ಟು ಸ್ಪಷ್ಟವಾಗಿ ಗೋಚರವಾಗುತ್ತದೆ. ಬೆಕ್ಕಿನ ವಿಶಿಷ್ಟ ದನಿಯ ಮೇಲಿಂದಲೇ ಅದು ತನ್ನ ಮರಿಗಳೊಡನೆ ಚಿಣ್ಣಾಟವಾಡುತ್ತಿರುವುದೆ? ಅಥವಾ ಬೇರೆ ಬೆಕ್ಕಿನೊಡನೆ ಕಾಳಗ ಹೂಡಿದೆಯೇ? ಎಂಬುದನ್ನು ಸಹಜವಾಗಿ ಅರಿತುಕೊಳ್ಳಬಹುದಾಗಿದೆ. ಈ ತೆರನಾಗಿ ನಾದ ಮತ್ತು ಅರ್ಥಗಳು ಒಂದಕ್ಕೊಂದು ಹೊಂದಿಕೊಂಡಿರುವ ನುಡಿಗಳಿಗೆ 'ಹುಟ್ಟುನುಡಿ'ಗಳೆಂದು ಕರೆಯಬಹುದು. ಇವೆ ಸಹಜ ಶಬ್ದಗಳು.

ಮಾನವನ ನಡೆನುಡಿಗಳಲ್ಲಿ ಬುದ್ಧಿಯು ಹೆಚ್ಚು ಹೆಚ್ಚು ತಲೆದೋರಿದಂತೆ ಅವನ ಮೇಲಿನ ಭಾವನೆಗಳ ಸ್ವಾಮಿತ್ವವು ಕಡಿಮೆಯಾಗುತ್ತ ಹೋಗುವುದು. ಮಾತಿನ ರೀತಿ ಮಾರ್ಪಡುತ್ತ ನಡೆಯುವುದು. ಸಹಜ ಶಬ್ದಗಳ ಸ್ಥಳವನ್ನು ಲೋಕ-ಸಂಕೇತದಿಂದ ಉಂಟಾದ ಹಲವು ಮಾತುಗಳು ಆಕ್ರಮಿಸುವುವು. ನುಡಿತ (ನಾದ)ವು ಜೀವಾಳವಾಗಿರುವುದೇ 'ನುಡಿ'. ಸಂಕೇತವೇ ಪ್ರಧಾನವಾದುದು 'ಮಾತು'. ಆರಂಭದ ಭಾಷೆಯಲ್ಲಿ ನುಡಿಗಳು ವಿಪುಲವಾಗಿರುವಂತೆ ಬೆಳೆದ ಭಾಷೆಯಲ್ಲಿ ಮಾತುಗಳೇ ವಿಶೇಷವಾಗಿರುವುದು ನಿಜವಾದರೂ 'ನುಡಿ'ಗಳು ಇಲ್ಲದ ಸೊಲ್ಲು ಇಲ್ಲ.

ಮಾನವನ ವಿಕಾಸಕ್ಕೆ ಇವೆರಡೂ ಬೇಕು. ಆಡಿದ ನುಡಿಯ ನಾದವು ಎಂದರೆ ಭಾವವು ಹೃದಯವನ್ನು ಮುಟ್ಟುವುದು. ಹೇಳುವ ಮಾತಿನ ಸಂಕೇತವು, ಎಂದರೆ ವಿಚಾರವು ಬಗೆಯನ್ನು ಕುದುರಿಸುವುದು. ನಾದವು ಕವಿಯ ನುಡಿ; ಸಂಕೇತವು ಮನೀಷಿಯ ಮಾತು. ನಾದ ಅಥವಾ 'ಧ್ವನಿ'ಯು ಇಲ್ಲದುದು ಕಾವ್ಯವಲ್ಲ. ಸಾಹಿತ್ಯವೂ ಅಲ್ಲ. ಸಂಕೇತ (Symbol) ಇಲ್ಲದೆ ಶಾಸ್ತ್ರಗಳನ್ನು ವಿವರಿಸುವುದೆ ಸಾಧ್ಯವಿಲ್ಲ. ಸಾಹಿತ್ಯ-ಸಂಗೀತಗಳಲ್ಲಿ 'ಧ್ವನಿ'ಯು ಮಾನವನ ಅಂತರಂಗದೊಳಗಣ ಭಾವನಾತರಂಗಗಳನ್ನು ಅಲೆ ಅಲೆಯಾಗಿ ಹೊರ ಹೊಮ್ಮಿಸಬಲ್ಲುದು. ಶಾಸ್ತ್ರದೊಳಗಣ ಸಂಕೇತ ಶಕ್ತಿಯು ಮಾನವನ ಬುದ್ಧಿಗೆ ಅನಂತತ್ವದ ಸಾಕ್ಷಾತ್ಕಾರವನ್ನು ಮಾಡಿಸಬಲ್ಲುದು.

ಲೋಕದಲ್ಲಿ ಮೊದಲು ತಲೆದೋರಿದುದು 'ಮಾತು' ಅಲ್ಲ ; 'ನುಡಿ'. ಏಕೆಂದರೆ ಮೂಲತಃ ಮಾನವನು ಭಾವನೆಗಳ ಮೂರ್ತಿ. ಕಾಲಕ್ರಮದಲ್ಲಿ ಬುದ್ಧಿಯು ತಲೆದೋರುವುದು. ಆದುದರಿಂದ, ಬುದ್ಧಿಯ ಸಂಕೇತಯುಕ್ತವಾದ 'ಮಾತು' ಮೊದಲು ಅಲ್ಲ. ನಾದಶಕ್ತಿಯಿಂದಲೆ ಅರ್ಥವು ತಟ್ಟನೆ ಹೊಳೆ ಹೊಳೆದು ಅರ್ಥಪ್ರತೀತಿಯಾಗುವಂತಹ, ಹಾಡಿನಂತಹ ಧ್ವನಿಯುಕ್ತವಾದ ನುಡಿಯೆ ತೀರ ಮೊದಲ ಸೊಲ್ಲು. ಆದಿಭಾಷೆ. ಮೊದಲು, ಶಬ್ದಕೋಶಗಳು ಸಿದ್ಧವಾಗಿ ಬಳಿಕ ಭಾಷೆಯು ಹುಟ್ಟಲಿಲ್ಲ. ಕೋಶಗಳು ನುಡಿಯ ಗೋರಿ. ಪಿರಾಮಿಡ್ಡು. ಕೋಶಗಳಲ್ಲಿದ್ದುದು, ಪಿರಾಮಿಡ್ಡಿನಲ್ಲಿ ಕೆಡದಂತೆ ಕಾದಿಟ್ಟ ಶಬ್ದದೇಹ. ಭೌತಿಕ ಶರೀರ. ಈ ದೇಹದಲ್ಲಿ ಉಸಿರಾಡಬೇಕಾದರೆ ಅದು ನಾಲಗೆಯಲ್ಲಿ ನಲಿದಾಡಬೇಕು. ಆಗಲೆ, ಅದು ಜೀವಂತ ಭಾಷೆ. ನಾಲಗೆಯಲ್ಲಿ ಸಂಜೀವನೀಶಕ್ತಿಯಿದೆ. ಭಾಷೆಗಳಿಗೆ ಅಮೃತತ್ವವನ್ನೀಯುವುದು ಚೆನ್ನಾಲಗೆಯೇ.

ಕೋಶಗಳು ಮೊದಲು ಹುಟ್ಟಿ, ಬಳಿಕ ತಲೆದೋರಿದ ಭಾಷೆಗಳು ತೀರ ಇಲ್ಲವೆಂತಲ್ಲ. 'ಎಸ್ಪೆರಾಂಟೊ' 'ಇಡೊ' ದಂತಹವು ಕೆಲವಿವೆ. ಮುಂಚೆ ಶಬ್ದಕೋಶಗಳು ಸಿದ್ಧವಾಗಿ ತರುವಾಯ ಜನಗಳಲ್ಲಿ ಪ್ರಸಾರವಾಗಲು ಹೊರಟ ಭಾಷೆಗಳಿವು! ಇಂತಹ ಶಬ್ದಕ್ಕೆ ಇಂತಹ ಅರ್ಥವೆಂದು ಮೊದಲು 'ಸಂಕೇತ' ಮಾಡಿಕೊಳ್ಳುವುದು; ಬಳಿಕ ಆ ಸಂಕೇತ ಬಲದಿಂದ ಭಾಷೆಯನ್ನು ಬಳಕೆಯಲ್ಲಿ ತರಲು ಯತ್ನಿಸುವುದು! ಎಸ್ಪೆರಾಂಟೋದಂತಹ ಭಾಷೆಗಳು ಜನ್ಮತಾಳಿದ ಬಗೆಯಿದು. ಇನ್ನೊಬ್ಬರಿಗೆ ತಮ್ಮ ಗುಟ್ಟು ಗೊತ್ತಾಗಬಾರದೆಂದು ಮಕ್ಕಳು ಆಟದಲ್ಲಿ ಮಾಡಿಕೊಂಡ ಅಕ್ಷರಪಲ್ಲಟದ ಮಾತುಗಳೂ ವರ್ತಕರ ವ್ಯವಹಾರದ ಗುಹ್ಯಭಾಷೆಯೂ ಪ್ರತಿಯೊಂದು ರಾಷ್ಟ್ರದ ಗುಪ್ತಚಾರರ ಖಾತೆಯವರು ನೇರ್ಪಡಿಸಿಕೊಂಡಿರುವ ವಿಶಿಷ್ಟ ಭಾಷೆಯೂ, ವಿಜ್ಞಾನಿಗಳ ಶಾಸ್ತ್ರೀಯ ಪರಿಭಾಷೆಯೂ ತಂತಿಖಾತೆಯವರ ಸಂಕ್ಷಿಪ್ತವಾಣಿಯೂ ಜಗತ್ತನ್ನೆಲ್ಲ ಹಲವು ಭಾಷೆಗಳ ಗೊಂದಲದಿಂದ

ಉಳಿಸಬೇಕೆಂದು, ಒಂದೇ ಭಾಷೆಯಾದರೆ ಮಾನವ ಜನಾಂಗದ ಏಳ್ಗೆಯು ಬೇಗ ಆಗುವುದೆಂದು ಹುಟ್ಟಿದೊಡನೆಯೆ ಲೋಕೋದ್ಧಾರಕ್ಕೆ ಹೊರಟ ಎಸ್ಪಿರಾಂಟೊ, ಇಡೊ, ರೋ ಮೊದಲಾದುವೂ ಕೇವಲ ಸಂಕೇತ ಶಕ್ತಿಯ ಬಲದಿಂದ ಬದುಕಿರುವ ಭಾಷೆಗಳು. ಪ್ರಾಕೃತ ಸೃಷ್ಟಿಯಲ್ಲಿ ಏನೂ ಅಸ್ತಿತ್ವವೇ ಇಲ್ಲದುದರಿಂದ, ಇವಕ್ಕೆ 'ಅ-ಪ್ರಾಕೃತವಾಣಿ', 'ಅ-ಶರೀರ ವಾಣಿ' ಎಂದು ಸ್ವಲ್ಪ ನಗೆಮಾತಿನಿಂದ ಹೇಳಬಹುದಾಗಿದೆ. ಏಕೆಂದರೆ ಯಾವ ಹೃದಯದಲ್ಲಿಯೂ ಇವಕ್ಕೆ ಸಹ-ಜ, ಸ್ವಾಭಾವಿಕವಾದ ಸ್ಥಾನವಿಲ್ಲ.

ಲೋಕ-ಹೃದಯವೆಂಬ ನೆಲದಲ್ಲಿ ಬೇರು ಬಿಡದಿರುವ ಭಾಷೆಗಳು, ಬೆಳೆದು ಪ್ರವರ್ಧಮಾನ ಸ್ಥಿತಿಗೆ ಬರುವುದು ಎಂದೂ ಸಾಧ್ಯವಿಲ್ಲ. ಹೀಗಾಗುವುದಕ್ಕೆ ಇನ್ನೂ ಕೆಲವು ಕಾರಣಗಳಿವೆ: ಮೇಲ್ಕಾಣಿಸಿದ ಭಾಷೆಗಳೆಲ್ಲವೂ ನಿರ್ಮಾಣವಾದುದು, ಬುದ್ಧಿಯಿಂದ, ಎಣಿಕೆಯಿಂದ. ಇಂದು, ಒಬ್ಬ ಧೀಮಂತನಾದ ಯಂತ್ರಶಿಲ್ಪಿಯು ಸಹ್ಯ ಅಥವಾ ಹಿಮಾಲಯದ ಶಿಖರದಲ್ಲಿ ಒಂದು ಜಲಸಂಚಯವನ್ನು ನಿರ್ಮಿಸಿ, ಅದರಿಂದ ಒಂದು ಹೊಸ ಹೊಳೆಯು ಹರಿಯುವಂತೆ ಪ್ರಯತ್ನಪಟ್ಟರೆ! ಆ ಪ್ರವಾಹವು ಕೆಲವೊಂದು ದೂರ ಹರಿದುಬಾರದೆ ಇರದೆಂಬುದು ನಿಜ. ಆದರೆ, ಈ ಮಾಡು-ಹೊಳೆ (ಕೃತಕ ನದಿ), ಸಾಗರವನ್ನು ಸೇರುವ ಮೊದಲೆ, ನಡುವೆಯೆ ಗುಪ್ತಗಾಮಿನಿಯಾಗುವ ಸಂಭವವು ಹೆಚ್ಚಾಗಿದೆ. ಮಾಡು-ಹೊಳೆ, ಮಾಟದ ಹೊಳೆಯಾಗುವುದಕ್ಕೆ ಕಾರಣವೇನಂದರೆ, ಅದಕ್ಕೆ ಸ್ವಾಭಾವಿಕವಾಗಿ ತನ್ನ ತಾನೆ ಬಂದು ಸೇರುವ ನೀರಿನ ಪೂರೈಕೆಯ ಅಭಾವ. ತನ್ನ ತಾನೆ ಹುಟ್ಟಿ ಹರಿವ ಹೊಳೆಗೆ ತನ್ನ ಕಲ್ಪಕತೆಯಿಂದ ಆಣೆಕಟ್ಟು ಕಟ್ಟಿ ಮಾನವನು ತನ್ನ ಸುಖಸಂಪತ್ತನ್ನು ಹೆಚ್ಚಿಸಿಕೊಂಡಿದ್ದಾನೆ; ಆನಂದವನ್ನು ಪಡೆಯುತ್ತಿದ್ದಾನೆ. ಹಾಗೆಯೆ ಭಾವನೆಗಳ ಉಕ್ಕಿನಿಂದ ತನ್ನ ತಾನೆ ಹೊರ ಹೊಮ್ಮುವ ಅರ್ಥಪೂರ್ಣವಾದ ನಾದ-ಗಂಗೆಯನ್ನು, ಬುದ್ಧಿಯ ಬಲದಿಂದ ತನಗೆ ಅನುಕೂಲವಾಗುವಂತೆ ತಿರುಗಿಸಿಕೊಂಡು ಮಾನವನು ತನ್ನ ಸಂಸಾರ ಸೌಖ್ಯವನ್ನು ಹೆಚ್ಚಿಸಿಕೊಂಡಿದ್ದಾನೆ. ಬಾಳನ್ನು ಬೆಳೆಸಿಕೊಂಡು ಪರಮಾನಂದವನ್ನು ಸಂಪಾದಿಸುತ್ತಲಿದ್ದಾನೆ. ಆದರೆ, ಇದರ ಅರ್ಥವು ಬದ್ಧಿಯು ಭಾಷೆಯನ್ನು ಹುಟ್ಟಿಸಿದೆಯೆಂದಾಗುವುದಿಲ್ಲ. ಬುದ್ಧಿಯು ಭಾಷೆಯ ಕೃಷಿ ಮಾಡಿದೆ; ಹದಗೊಳಿಸಿದೆ; ಹುಟ್ಟಿಸಿಲ್ಲ. ಭಾಷೆಯ ಉಗಮ ಭಾವನೆಯಲ್ಲಿದೆ. ಇದನ್ನೆ ವೈದಿಕ ಪರಿಭಾಷೆಯಲ್ಲಿ ಋಷಿಗಳು ಹೀಗೆ ಹೇಳುವರು: ಅಗ್ನಿಯು ಭಾಷೆಯ ಜನಕ; ಇಂದ್ರನು ವ್ಯಾಕರಣಕಾರ; ವಿಸ್ತಾರಕ; (ಐತರೇಯ; ಬೃಹದಾರಣ್ಯಕ ೧.೩. ತೈತ್ತಿರೀಯ ಸಂ. ೩ - ೪. ೭.).

ಎಸ್ಪೆರಾಂಟೊ ಅಥವಾ ಶಾಸ್ತ್ರೀಯ ಪರಿಭಾಷೆಗಳಂತಹ ವಿಶಿಷ್ಟ ಭಾಷೆಗಳಿಂದ, ಬುದ್ಧಿಗಮ್ಯವಾದ ಕೆಲವೊಂದು ವಿಷಯಗಳನ್ನು ಸಾಮಾನ್ಯಭಾಷೆಗಿಂತಲೂ ಹೆಚ್ಚು ನಿಸ್ಸಂದಿಗ್ಧವಾದ ರೀತಿಯಲ್ಲಿ ಹೆಚ್ಚು ಚೆನ್ನಾಗಿ ವಿವರಿಸಬಹುದಾಗಿದೆ. 'ಜಲಜನಕವಾಯು ಮತ್ತು ಪ್ರಾಣವಾಯುಗಳು ೨: ೧ ಪ್ರಮಾಣದಲ್ಲಿ ಒಂದು ಗೂಡಿದರೆ ನೀರು ಉಂಟಾಗುವುದು'; ಎಂಬ ವಿವರಣೆಗಿಂತ, H_2O ಎಂಬುದರಿಂದ ಹೆಚ್ಚು ಸ್ಪಷ್ಟವಾದ ಕಲ್ಪನೆಯು ನಮಗೆ ಉಂಟಾಗುವುದು. ಪ್ರಾಣವಾಯು, ಜಲಜನಕವಾಯು ಇಂತಹ ಪದಗಳಿಗೆ ರೂಢಿಯಿಂದ ಒಂದಕ್ಕಿಂತ ಹೆಚ್ಚು ಅರ್ಥಗಳು ಅಂಟಿಕೊಂಡಿರುತ್ತವೆ. ಶಾಸ್ತ್ರೀಯ ವಿಚಾರ-ವಿಮರ್ಶೆಗಳಲ್ಲಿ, ಎಲ್ಲಿ ಅಸಂದಿಗ್ಧವಾದ ಒಂದು ಅರ್ಥವೇ ಅಭಿಪ್ರೇತವಾಗಿರುವುದೊ ಅಲ್ಲಿ, ಇಂತಹ ಅನೇಕಾರ್ಥಗಳಿಗೆ ಅವಕಾಶವಿರುವ ಶಬ್ದಗಳಿಗಿಂತ ಒಂದೇ ನಿಶ್ಚಿತಾರ್ಥದ ಪರಿಭಾಷೆಯೇ ಲೇಸೆಂಬುದು ನಿಜ. ಆದರೆ, ಪ್ರಯೋಗಶಾಲೆಯ ಸಂಕೇತದ ಭಾಷೆಯಾಗಲಿ, ವಿದ್ವತ್ ಸಭೆಯ ಪರಿಭಾಷೆಯಾಗಲಿ ಮಾನವನ ಜೀವನದ ಇನ್ನುಳಿದ ಅಂಗಗಳೊಳಗಿನ ಸೂಕ್ಷ್ಮವಾದ ಅನುಭವ, ಸಾಕ್ಷಾತ್ಕಾರಗಳನ್ನು ವಿವರಿಸಲು ಸಮರ್ಥವಾಗಲಾರದು. ಏಕೆಂದರೆ ಜೀವವು ಯಂತ್ರದಂತೆ ಏಕಾಂಗಿಯಲ್ಲ. ಬಹುಮುಖವಾಗಿದೆ. ಅದೇಕೆ? ಅನಂತವಾಗಿದೆ. ಆದುದರಿಂದಲೆ, ಜೀವನ-ಸತ್ಯವನ್ನು ವಿವರಿಸಲು ನಾನಾರ್ಥಕ ಶಬ್ದಗಳೂ ಧ್ವನಿ, ವ್ಯಂಗ್ಯವು ಕೂಡ ಅಸಮರ್ಥವಾಗಿವೆ. ಅದನ್ನು ಹಲವು ಬಗೆಯಿಂದ ಬಣ್ಣಿಸಿ ಕೊನೆಗೆ 'ನೇತಿ' 'ನೇತಿ' ಎಂದೂ ಹೇಳಬೇಕಾಗುತ್ತದೆ.

ಶಬ್ದಗಳೊಳಗಿನ ಅನೇಕಾರ್ಥಕ ಶಕ್ತಿಯನ್ನು-'ಧ್ವನಿ' ಶಕ್ತಿಯನ್ನು ತಾರ್ಕಿಕರೂ, ಶಾಸ್ತ್ರೀಯ ಪರಿಭಾಷೆಯವರೂ ತೆಗಳುತ್ತಾರೆ. ಏಕೆಂದರೆ ಶಬ್ದಾರ್ಥದ ಅನಿಶ್ಚಿತತೆಯು, ವಿಜ್ಞಾನದ ನಿಶ್ಚಿತ ತಿಳುವಳಿಕೆಗೆ ಅಡ್ಡಬರುತ್ತದೆ. ಆದರೆ, ವಿಜ್ಞಾನಿಗಳು ದೋಷವೆಂದು ಬಗೆಯುವ ಈ 'ಧ್ವನಿ' ಶಕ್ತಿಯನ್ನೆ ಸಾಹಿತಿಗಳು ಗುಣವೆಂದು ಗ್ರಹಿಸುವರು. ಒಡವೆಯ ಹೊರಮೈಯ ಉದ್ದಗಲಗಳನ್ನು ಅಳೆವುದು ವಿಜ್ಞಾನದ ಕೆಲಸ. ಇದಕ್ಕೆ ನಿಶ್ಚಿತ-ನೆಲೆಯ 'ಮಾತು'ಗಳೇ ಬೇಕು. ಏಕೆಂದರೆ, ಅದು ನಿಶ್ಚಿತ ಪರಿಮಿತಿಯದಾಗಿದೆ. ಆದರೆ ಅನುಭವವು ಎಂದರೆ ಸತ್ವವು ಶಬ್ದಕ್ಕೆ ಮೀರಿದುದು; ಎಂದರೆ ಶಬ್ದಗಳಿಂದ ಸಂಪೂರ್ಣ ವಿವರಿಸಿ ಹೇಳಲು ಅಸಾಧ್ಯವಾದುದು. ಇಂತಹ ಅನಂತ ವಿಶಾಲ ಅನುಭವವನ್ನು ಹೇಳಲು ಹವಣಿಸುವ ನುಡಿಯಲ್ಲಿಯೂ ಆ ಅನಂತದ ಛಾಯೆಯು ತೀರ ಅಲ್ಪಪ್ರಮಾಣದಲ್ಲಾದರೂ ಕಾಣಿಸಿಕೊಂಡರೆ ಸೋಜಿಗವೇನು? ಅಥವಾ ಅಂತಹ ಶಕ್ತಿಯು ಅಲ್ಪಪ್ರಮಾಣದಲ್ಲಾದರೂ ಇರದೆ ಅನುಭವವನ್ನು-ಆಂತರಿಕ ಸತ್ವವನ್ನು ಸೂಚಿಸುವುದಕ್ಕಾದರೂ ಅದು ಹೇಗೆ ಸಮರ್ಥವಾದೀತು?

ಹೃದಯದ ನುಡಿ ಸಹಜವಾದುದು; ಸ್ವಾಭಾವಿಕವಾದುದು. ಜಗತ್ತಿನ ಯಾವ ಭಾಗದ ಮಾನವರಿರಲಿ, ಅವರ ಒಲವು ನಲಿವು, ಮುನಿಸು ಮರುಕಗಳಲ್ಲಿ- ಅವುಗಳನ್ನು ವ್ಯಕ್ತಬಡಿಸುವ ಹಾವ, ಭಾವ ಮತ್ತು ಮೂಲ ಸೊಲ್ಲಿನಲ್ಲಿ ಎಷ್ಟೋ ಹೋಲಿಕೆಯಿರುವುದು ಕಂಡು ಬರುತ್ತದೆ. ಸಿಟ್ಟುಬಂದಾಗ ಕಣ್ಣು ಕೆಂಪಗಾಗುವುದು, ದುಃಖದಿಂದ ಮೋರೆ ಬಾಡುವುದು, ಸಂತೋಷದಲ್ಲಿ ಹಿಗ್ಗುವುದು, ಸಾಮಾನ್ಯವಾಗಿ ಎಲ್ಲರ ರೀತಿಯಾಗಿದೆ. ಮತ್ತು ಇಂತಹ ಮನೋಭಾವನೆಗಳಲ್ಲಿ ಹೊರಹೊಮ್ಮುವ ನುಡಿಗಳಲ್ಲಿಯೂ ಇದೇ ಬಗೆಯಾದ ಕೆಲವೊಂದು ಸಾಮ್ಯವು ಕಂಡು ಬಂದರೆ ಸೋಜಿಗವಲ್ಲ. ಮನುಷ್ಯರಲ್ಲಿ ಮಾತ್ರವಲ್ಲ, ಮನುಷ್ಯೇತರ ಪ್ರಾಣಿಗಳಲ್ಲಿ-ಪಶು-ಪಕ್ಷ್ಯಾದಿಗಳ ಶಬ್ದಗಳಲ್ಲಿಯೂ ಈ ತೆರನಾದ ಸಾಮ್ಯವನ್ನು ಕಂಡು ಹಿಡಿಯಬಹುದಾಗಿದೆ. ಮನವರಿಕೆಗಾಗಿ ಕೆಲವು ನುಡಿಗಳನ್ನು ವಿಮರ್ಶಿಸಬಹುದು:

ಕ. ಕೂಗು; ಕುವಿ; ಅ. ಕೂವು; ಮ. ಕೂವು; ತೆ. ಕೂಯು; ಕೂಕೆ;

ತು. ಕೂಗು;

ಸಂ. ಕೂ (ಧಾತು); ಕೂಜ್ (ಧಾ.); ಕೂಜನ;

E. Coo; Cooing; Croon; Crook; Creak;

ಕ. ಕರೆ; ಅ. ಕರ್ರೈ; ತು. ಕರೆ

ಸಂ. ಕ್ರಂದ್; ಕ್ರುಶ್; ಕಲ್;

E. Cry; F. Crier. L. Quiritare; E-Call. ON. Kalla; Du. Kallen Kreunen (groan); Lith: Klykin (cry); Kryksztauju; Hib. Cruisigh (music; song) Goth. Krikya; Hib. gair (a shout; an out cry) Goth. greta [to lament] Lith. Kalbu [to speak]; Kalba [speech]; Hib. gaill [speech].

ಇವುಗಳೊಡನೆ ಕೆಳಗಣ ಕೆಲವು ಪದಗಳನ್ನು ಹೋಲಿಸಿ ನೋಡಿ.

ಕ. ಕೇಗು; ಕೇಕೆ (ಕ್ಯಾಕಿ); ಕಿರ್‌ಚು; .... ಕೆಲೆ ಕಲ, ಕಲ=ಗಲಗಲ; ಕಿಲಿಕಿಲಿ=ಗಿಲಿಗಿಲಿ; - ಗಿಣಿ, ಕಿರಿ, ಕಿರಿ;..... ಗೇಲಿ; ಅ. ಕೇಲಿ; ತೆ. ಗೆಗ್ಗ ಲಿಂಚು; ಕೇಕರಿಂಚು;

ಸಂ. ಕೈ. (ಧಾ);=ಗೈ. ಕೇಕಾ (ರವ); ಕೀರ (ಗಿಳಿ); ಗಿರ್ (ಗಿರಾ); ಕಾ-ಗಾ... ಗಾನ; ಗೀತ; ಗಿರ್‌ವಾಣಿ, ಆದರಂತೆ

ಕ. ಚೀರು; ಚಿಲಿ, ಪಿಲಿ.... ಚಿಳ್ಳೆ, ಪಿಳ್ಳೆ (Chicken) ;......ಜರೆ; ಜರಚು. ಮುಂ.

E. Cheer; screem; Sreak; creak; sureech; chuckle and giggle.

Du. giggelen; G. gichelcn;

ಮೂಲದ್ರವ್ಯಕ್ಕೆ ಮಾನವನ ಕೈವಾಡವು ಸೇರಿ ಕಲಾಕುಸುರಿಯ ಒಂದು ಸುಂದರವಾದ ವಸ್ತುವು ಸಿದ್ಧವಾಗುವುದು. ಭಾಷೆಯೂ ಒಂದು ಕಲಾಕುಸುರಿಯ ವಸ್ತು. ಶಬ್ದ (ನಾದ) ವೇ ಇದರ ಮೂಲದ್ರವ್ಯ; ಮೂಲವಸ್ತು; 'ಪ್ರಕೃತಿ'. ಈ ಪ್ರಕೃತಿಗೆ ಪ್ರತ್ಯಯಾದಿಗಳು ಸೇರಿ ಬಗೆಬಗೆಯ ಅರ್ಥಭಾವಗರ್ಭಿತವಾದ ಅಂದ ಅಂದದ, ಬೆಡಗು ಬಿನ್ನಾಣದ, ಕುಸುರಿಯ ಚೆಲುವಿನ, ಇಂಪಿನ ಕಂಪಿನ ನುಡಿಗಳು ನೇರ್ಪಡುವುವು. ಹಿಗ್ಗಿನಲ್ಲಿ ಅಥವಾ ಕುಗ್ಗಿನಲ್ಲಿ ಎದೆಯಿಂದ ಉಕ್ಕಿ ಹೊರಹೊಮ್ಮುವ ದನಿಯೆ 'ನುಡಿ'ಯ ಮೊದಲು; (ಸಂ)ಗೀತದ ಮೂಲ. ಹೃದಯದ ನುಡಿಯೆ ಹಾಡು. ಅದುವೆ ಸಂಗೀತವೆಂದರೂ ಸಲ್ಲುವುದು. ಆದರೆ, ಅದು ಗಾಯಕರ ಆಲಾಪನೆಯ ಸಂಗೀತವಲ್ಲ; ಆ ಸಂಗೀತದ ತಾಯಿ. ತೊಡವು (ಆಭರಣ)ಗಳ ತಾಯಿಯಾದ ಚಿನ್ನವು ಇದ್ದಂತೆ. ಚಿನ್ನವು ಮೂಲದ್ರವ್ಯ. ಅದರಿಂದಾದ ಒಡವೆಗಳೂ ಚಿನ್ನವೆ ಆದರೂ ಅದೊಂದು ಕಲಾಕೃತಿ. ಇದರಲ್ಲಿ ಕೆಲವೊಂದು ಕೃತ್ರಿಮತೆ, ಅಸ್ವಾಭಾವಿಕತೆ ಅನಿವಾರ್ಯ.

ಭಾವಲೋಕದಲ್ಲಿ ಮೂಲ ಶಬ್ದದ್ರವ್ಯಕ್ಕೆ ಕೊರತೆಯಿಲ್ಲ, ಅದು ಎಲ್ಲರ ಸೊತ್ತು; ಭಾವುಕರ ಸಂಪತ್ತು. ಕುಶಲಕಲಾವಿದರು ಆ ಮೂಲದ್ರವ್ಯವನ್ನು ಎತ್ತಿಕೊಂಡು ಮತ್ತೆ ಒಂದು ಹೊಸ ಶಬ್ದ ಸೃಷ್ಟಿಯನ್ನೆ ನಿರ್ಮಿಸುವರು. ಇನ್ನೂ ಪ್ರಾಥಮಿಕ ಸ್ಥಿತಿಯಲ್ಲಿ ಇರುವವರು ಹದಗೊಳಿಸದ ಮೂಲದ್ರವ್ಯವನ್ನೇ ತಂದು ತಮ್ಮ ಅವಶ್ಯಕತೆಗಳನ್ನು ತೀರಿಸಿಕೊಳ್ಳುವರು. ಮನೆಯಲ್ಲಿ ಕಲಕಲ, ಗಲಗಲ ಮಾತು ಬಹಳವಾದಾಗ 'ಏನು ಕಟಕಟ ಇದು?' ಇಲ್ಲವೆ 'ಎಷ್ಟು ಗಲಾಟೆಯಿದು?' ಅಥವಾ 'ಏಕೆ ಈ ಕರ ಕರೆ (ರಸ ಕಸಿ)?' ಎನ್ನುವುದುಂಟು. ಇಲ್ಲವೆ 'ವಟ ವಟ ಸಾಕು ಮಾಡಿರಿ' ಎಂದು ಹೇಳುವುದುಂಟು. ಇಲ್ಲಿ 'ಕಲಕಲ,' 'ಗಲ ಗಲ,' 'ವಟ ವಟ' ಎಂಬುದಿದು ಶಬ್ದ- ದ್ರವ್ಯ. 'ಗಲಗಲ' ಎಂಬ ಶಬ್ದದ್ರವ್ಯದಿಂದ 'ಗಲಾಟೆ' ಎಂಬ ವ್ಯವಹಾರ್ಯ ನುಡಿ ಸಿದ್ಧವಾಯ್ತು.

'ಕಲ (ಕಲ)' ಎಂಬ ಪ್ರಕೃತಿಗೆ (ಮೂಲದ್ರವ್ಯಕ್ಕೆ) ಸಂಸ್ಕಾರ ಕೊಟ್ಟು ಸಿದ್ಧಪಡಿಸಿಕೊಂಡ ಶಬ್ದಗಳು ಕನ್ನಡದಲ್ಲಿ ಸಾಕಷ್ಟು ಇಲ್ಲ. ಈ ವಿಷಯದಲ್ಲಿ 'ಸಂಸ್ಕೃತ' ಭಾಷೆಗೆ ಆ ಹೆಸರು ಸಾರ್ಥಕವಾಗಿದೆ. ಮೂಲ ಶಬ್ದದ್ರವ್ಯಕ್ಕೆ ಸುಸಂಸ್ಕಾರಕೊಟ್ಟು ಅಂದಚೆಂದದ ವಿವಿಧ ಸೂಕ್ಷ್ಮಾರ್ಥದರ್ಶಕ ಶಬ್ದಗಳನ್ನು ಸಿದ್ಧಪಡಿಸಿಕೊಂಬುವುದಲ್ಲಿ ಸಂಸ್ಕೃತ ಭಾಷೆಯು ಎಲ್ಲರಿಗೂ ಆದರ್ಶವಾಗಿದೆಯೆಂಬಲ್ಲಿ ಸಂದೇಹವಿಲ್ಲ. 'ಕಲ್' ಎಂಬುದು ಧಾತುವಾಗಿಯೂ ಸಂಸ್ಕೃತದಲ್ಲಿದೆ. 'ಕಲ' (ನಾದ); 'ಕಲ' ಎಂಬುದನ್ನು ರವ, ಭಾಷಣ, ಕಂಠ, ಕೂಣಿಕಾ ಮುಂತಾದ ಬೇರೆ ಬೇರೆ ಪದಗಳೊಡನೆ ಸೇರಿಸಿ ಮಾಡಿಕೊಂಬ ಹೊಸ ಹೊಸ ಪ್ರಯೋಗಗಳಿಗಂತೂ ಎಣಿಕೆಯಿಲ್ಲ. 'ಕಲಹ' ಎಂಬುದರ ಮೂಲವು 'ಕಲ' ಎಂಬುದೇ ಆಗಿದೆ. 'ಕಲ್ಲ್' (ಶಬ್ದಮಾಡು) ಎಂಬ ಇನ್ನೊಂದು ಧಾತುವಿನ ಅಡಿಯಲ್ಲಿಯೂ 'ಕಲ' ಎಂಬುದೆ ಇದೆ.

ತಮಿಳಿನಲ್ಲಿಯೂ 'ಕಲ' ಎಂಬ ದ್ರವ್ಯದಿಂದ ನೇರ್ಪಡಿಸಿಕೊಂಡ ಹಲವು ನುಡಿಗಳಿವೆ. 'ಕಲ್ಲಲ್' (ಕಲ ಕಲ; ಗಲಾಟೆ); 'ಕಲ್ಲಿ' (ಗೇಲಿ; ಚೇಷ್ಟೆ); 'ಕಲ್ಲಿ' (ಗುಬ್ಬಿ); 'ಕಲ್ಲು' (to cause to sound); 'ಕಲಕಲ' (ಎಡೆಬಿಡದೆ ಶಬ್ದಮಾಡು) ಎಂಬುದು ಧಾತುವಾಗಿಯೂ ಇದೆ. ಅಲ್ಲದೆ 'ಕಲಿ' (ಗುಡುಗು, ಸದ್ದುಮಾಡು) ಎಂಬ ಧಾತುವೂ ಉಂಟು. 'ಕಲಿ' (ಶಬ್ದ); 'ಕಲಿ' (ಸಾಗರ, ಕಡಲು).... ಮುಂ. ಎಷ್ಟು ಬಗೆಬಗೆಯಾಗಿ ಬಳಸಿಕೊಂಡ ಜಾಣ್ಮೆಯಿಲ್ಲಿ ಕಾಣಿಸಿಕೊಂಡಿದೆ! ಆದರೆ ಕನ್ನಡದಲ್ಲಿ....?

'ವಟ್ ವಟ್' ಎಂಬುದು ಶಬ್ದದ್ರವ್ಯ. ಇದನ್ನು ಬಳಸದ ಜನಾಂಗಗಳೆ ವಿರಳ ಲೋಕದಲ್ಲಿ. ಸಂಸ್ಕೃತದವರಂತೂ ಇದನ್ನು ತಮ್ಮ ನಯವಾದ ಕೈವಾಡದಿಂದ ಅಲ್ಪಸ್ವಲ್ಪ ಮಾರ್ಪಡಿಸಿ ಉಪಯೋಗಿಸಿ ಕೊಂಡ ಚಾತುರ್ಯವು ಅನುಕರಣೀಯವಾಗಿದೆ. ವಟ್-ವದ್ (ವದತಿ); ವಚ್; ವಾಕ್ (ವಾಗ್); ವಾದ್ಯ;...... ಗ್ರೀಕ, ಲ್ಯಾಟಿನ್, ಜರ್ಮನ್ ಮುಂತಾದ ಭಾಷೆಗಳಲ್ಲಿಯೂ ಇದು ಉಂಟು. ಕನ್ನಡದಲ್ಲಿ ಇದೆ 'ಒದಜು'

ಎಂಬ ರೂಪದಲ್ಲಿ ಕಾಣಿಸಿಕೊಂಡಿದೆ. ತೆಲುಗಿನಲ್ಲಿ 'ವದಲು' (To Prattle; Prate; babble; chatter; Jabber). ಆರೇಮಾತಿನಲ್ಲಿ 'ಒರಡಣೇ'. ತಮಿಳಿನಲ್ಲಿ 'ಉದಲು'; ವೆಡು ವೆಡು [To speak roughly]. ವಿಳಿ [To call; sing; shout] ಇನ್ನು ಇಲ್ಲಿ 'ಉಸ್ ಉಸ್'; 'ವಸ್ ವಸ್'; 'ವರ್, ವಸ್' ಎಂಬೀ ಬಗೆಯ ಶಬ್ದದ್ರವ್ಯಕ್ಕೆ ಹತ್ತರ ಬಂದಂತಾಯ್ತು. ಉಚ್ಚಾರದಲ್ಲಿ ಉಕಾರವೆ ಒ ಮತ್ತು ವ ಕಾರದ ರೂಪ ತಾಳುವುದು ಎಲ್ಲರ ಅನುಭವದ ಮಾತಾಗಿದೆ. ಕ. ಉಸ್-ಉಸಿರು; ಉಶ್=ಶ್ವಸ್=ಸುಯ್. ಉಂಯ್ (ನೋವಿನಲ್ಲಿ ನರಳುವುದು); ತ. ಉರ್ (ಒದರಾಡು); ಉಯಿರ್ (ಉಸಿರು) ಉರಪ್ಪಲ್; ಉರಪ್ಪು (ರೊಪ್ಪ; Whoop; roaring sound ಸಂ. ರೌವ; ರಾವ; ವಿರಾವ); ಉರುಮ್ [ತೆ. ಉರುಮು; ಗುಡುಗು; alarm] ಉಲಲು [howl; scream]; ಕ, ಒರಲು; ಒರೆ (ಉಸಿರು).

ಕ. ಉಲಿ; ಊಳ್ [ululation] ಇದರೊಡನೆ ಸಂ. ಉಲೂಕ, E.owl ಹೋಲಿಸಬಹುದು ತ. ವಟ ವಟ [To. babble}; ವಟುತ್ತು [To chant, mutter]; ವಳ್ ಎನಲ್ [Barking Sound]; ವಳವಳಪ್ಪು [Vain talk] ಕ. ವೌ ವೌ; E. Bowwow; ಕ. ಬೊಗಳು; E. Barking 'ವವ' ಎಂದು ಧ್ವನಿಗೆಯ್ವ ಸಾಧನವೆ ವಾಯ್=ಬಾಯಿ. (ಹಿಂ. ಬಾತ=ವಾತ); ಸಂ. ವಾಯು; ವಾ (ಧಾ.) ಬೀಸು ವೀಸು.

ಕನ್ನಡದಲ್ಲಿ ಈ ಬಗೆಯಾಗಿ ಶಬ್ದದ್ರವ್ಯದಿಂದ ಅಂದ ಅಂದದ ಬಗೆಬಗೆಯಾದ ಹೊಸನುಡಿಗಳನ್ನು ಮಾಡಿಕೊಂಬುವ ಹುಮ್ಮಸವು ಇಲ್ಲದಂತಾಗಿರುವುದು ದುರ್ದೈವವು. 'ಲಕಲಕ'-'ಲುಕ ಲುಕು' ಹೊಳೆಯುತ್ತದೆ, ಎಂದು ಮಾತ್ರ ಹೇಳುವ ವಾಡಿಕೆಯಿದೆ. 'ಲಕ ಲಕ' ಎಂಬ ಶಬ್ದದ್ರವ್ಯದಿಂದ ವ್ಯವಹಾರ್ಯವಾದ ನಾಮ, ವಿಶೇಷಣ ಅಥವಾ ಧಾತುವನ್ನು ನೇರ್ಪಡಿಸಿಕೊಂಡಿಲ್ಲ. ಸಂಸ್ಕೃತದಲ್ಲಿ ನೋಡಿ: 'ಲಕಲಕ'-ಕಲಾ, ಎಂತಹ ಸೊಗಸಾದ ನುಡಿ! ಇಂಗ್ಲಿಷಿನ Lustre ಎಂಬುದಕ್ಕೆ ಮೂಲವಾದ lux lucis ಎಂಬಲ್ಲಿಯೂ 'ಲಕ್' ಎಂಬುದು ಹುದುಗಿಕೊಂಡಿದ್ದುದು ಹೊಳೆಯದೆ ಇರಲಾರದು. ಇಂಗ್ಲಿಷಿನ Light ಎಂಬಲ್ಲಿಯೂ 'ಲಕ್' ಎಂಬ ಮೂಲದ್ರವ್ಯವೆ ಉಂಟು. ಏಕೆಂದರೆ ಇಂಗ್ಲೀಷಿನ ಆ ಶಬ್ದದ ಉಗಮವನ್ನು ಗ್ರೀಕ್ leukos [white], ಲ್ಯಾಟಿನ್ lux [Light]; ಜರ್ಮನ್ licht ಎಂಬ ಪದಗಳಲ್ಲಿ ಕಂಡುಹಿಡಿದಿದ್ದಾರೆ. ಇವೆಲ್ಲಕ್ಕೂ ಆರ್ಯಭಾಷಾವರ್ಗದ Leak ಎಂಬುದು ಮೂಲವಿರಬೇಕೆಂದೂ ಹೇಳುತ್ತಾರೆ! ಲೊಕ್ ಅಥವಾ ಲೊಚ್ ಧಾತುವು ಸಂಸ್ಕೃತದಲ್ಲುಂಟು. 'ಲಕ್ ಲಕ್' ಎಂಬುದು ಈ ಲೋಕದಲ್ಲಿ ಕಣ್ಣಿದ್ದವರಿಗೆಲ್ಲರಿಗೂ ಹೊಳೆ ಹೊಳೆದು ಕಿವಿಗೆ ಆ ನಾದದ ಭಾಸವನ್ನುಂಟು ಮಾಡುವ ಪದವಿದು. ಇದರ ಮೇಲೆ ಆರ್ಯರಷ್ಟೇ ಉಳಿದ ಜನಾಂಗದ ಅಧಿಕಾರವೂ ಉಂಟು. ಆದರೆ ಜಗತ್ತಿನೊಳಗಿನ ಮೂಲದ್ರವ್ಯವು ಎಲ್ಲರ ಸೊತ್ತೆಂಬುದು ನಿಜವಿದ್ದರೂ ಅದನ್ನು ಯಾರು ಉಪಯೋಗಿಸಿಕೊಳ್ಳುವರೊ ಅವರದೆ ಅದು ಆಗುವುದೆಂಬುದೂ ಸುಳ್ಳಲ್ಲ. ಶಬ್ದಸಿದ್ಧಿಯ ಗೋಜಿಗೆ ಹೋಗದೆ 'ಲಕಲಕ ಹೊಳೆಯುತ್ತದೆ;' 'ಲಕ್ಕ ಐತಿ'; 'ಲುಕು ಲುಕು ಕಣ್ಣು'; ಎಂದು ಮುಂತಾದ ಮಾತಿನಲ್ಲಿ ಮೂಲದ್ರವ್ಯವನ್ನೆ ಬಳಸುವ ಕನ್ನಡಿಗರ ಅಲ್ಪಸಂತುಷ್ಟಿಯು ವ್ಯಕ್ತವಾಗುತ್ತದೆ!

ಶಬ್ದದ್ರವ್ಯ (ನಾದ) ದಿಂದ ಹೊಸ ಶಬ್ದವನ್ನು ಸೃಷ್ಟಿಸಿಕೊಳ್ಳುವ ಶಕ್ತಿಯು ಕನ್ನಡದಲ್ಲಿ ಇಲ್ಲವೆಂತಲ್ಲ. ಆದರೆ, ಮೈಗಳ್ಳತನದಿಂದ ಅಥವಾ ಹೆರವರ ಸೆಳತಕ್ಕೆ ಬಿದ್ದುಮೋಹಕ್ಕೆ ಒಳಗಾಗಿ ಕನ್ನಡಿಗರಿಗೆ ತಮ್ಮಲ್ಲಿರುವ ಈ ಶಕ್ತಿಯ ಅರಿವು ಇಲ್ಲದಂತಾಗಿದೆ! ಸರ್ವಜ್ಞನ ಮಾತಿನಲ್ಲಿ ಹೇಳುವುದಾದರೆ 'ಹಾಕಿದ ಉಂಕಿ ಹರಿದಂತೆ' ಆಗಿದೆ. ಅದನ್ನು ಮತ್ತೆ ಸರಿಪಡಿಸಿಕೊಳ್ಳುವುದು ಕರ್ತವ್ಯವಾಗಿದೆ. ಇಲ್ಲವಾದರೆ ಮೂಲದ್ರವ್ಯವನ್ನೆ ಬಳಸಿ ತಾವು ಇನ್ನೂ ಎಷ್ಟು ಪ್ರಾಥಮಿಕ ಸ್ಥಿತಿಯಲ್ಲಿರುವೆವು, ಎಂಬುದನ್ನು ಜಗತ್ತಿಗೆ ತೋರಿಸಿಕೊಳ್ಳಬೇಕು. ಅಥವಾ ಯಾವ ಎಗ್ಗು ಇಲ್ಲದೆ ಅಡಿಗಡಿಗೂ ಹೆರವರಲ್ಲಿ ಸಿದ್ಧಾನ್ನಕ್ಕಾಗಿ ಕೈಯೊಡ್ಡಿ ಎರವಲು ಬೇಡುವ ದೈನ್ಯವನ್ನಾದರೂ ಸ್ವೀಕರಿಸಬೇಕು. ಇದರಲ್ಲಿ ಯಾವ ಪಾಡೂ ಏಳ್ಗೆಯನ್ನು ಹಾರೈಸುವ ಜನಾಂಗಕ್ಕೆ ತಕ್ಕುದಲ್ಲವೆಂದು ಬೇರೆ ಹೇಳಬೇಕಾಗಿಲ್ಲ.

'ಗುಡುಗುಡು-ಗುಡುಗು; ಹರ್ ಹುರ್ [Hurrah]-ಹುರುಪು- (ಹುಮ್ಮಸ); ಸುರ್--ಸುಳಿ; ಸೋರು (ಸ್ರು; ಸ್ರೋತ; ಸ್ರವ); 'ಸಿ' ಎಂಬುದನ್ನು ಹೊರಗೆ ಉಸಿರುಬಿಟ್ಟು ಹೇಳಿದರೆ ಇಸ್-ಇಸ್ಸಿ; ಹೊಲಸು ಎಂಬರ್ಥ ಪದವಾಗುವುದು. 'ಸಿ' ಒಳಗೆ ಉಸಿರು ಸೆಳೆದು, ಹೇಳಿದರೆ ಸೀಪು [Sip] ; ಸಿಹಿ [Sweet] ಎಂಬ ನುಡಿಯಾಗುವುದು. ಲಲssಲ-ಲಾಲಿ; ಲಲ್ಲೆ. ತಿರ್-ತಿರಿ; ತಿರುಗು; ತಿರುಗಣೆ; ತಿರುವು; ತ್ರಿರ್‌ದು (ತಿದ್ದು); ಇವೆ ಮೊದ ಎಡೆಗಳಲ್ಲಿ ಕಾಣಬರುವ ಮೂಲನಾದದಿಂದ ಹೊಸನುಡಿಗಳನ್ನು ನೇರ್ಪಡಿಸಿಕೊಂಡ ಪುರಾತನರ ಕೌಶಲ್ಯವು ಈಗಲೂ ಅನುಕರಣೀಯವಾಗಿಲ್ಲವೆ? ತಿಳಿದವರೆಂದು ಹೆಮ್ಮೆ ಪಟ್ಟುಕೊಳ್ಳುವ ಕಲಿತ ಬುದ್ಧಿವಂತರಿಗಿಂತ ಸಹಜಭಾವದ ಮಕ್ಕಳೂ ಹೆಣ್ಣುಮಕ್ಕಳೂ ಈ ಬಗೆಯಾದ ಹೊಸ ಶಬ್ದಗಳನ್ನು ನೇರ್ಪಡಿಸಿಕೊಳ್ಳುವಲ್ಲಿ ಹೆಚ್ಚು ಪ್ರತಿಭಾವಂತರಾಗಿದ್ದಾರೆ, ಫಟ್-ಫಟ್ ಎಂದು ಕಿವಿ ಗಡಚಿಕ್ಕುವಂತೆ ಶಬ್ದ ಮಾಡುವ ಮೋಟಾರ ಸೈಕಲ್ಲಿಗೆ 'ಫಟಫಟಿ' ಎಂದು ನಾಮಕರಣ ಮಾಡಿರುವುದು ಇದಕ್ಕೆ ಒಳ್ಳೆಯ ದೃಷ್ಟಾಂತವಾಗಿದೆ.

ಮೂಲ ನಾದದ ಅರಿವಿನಿಂದ ಶಬ್ದಗಳನ್ನು ನುಡಿಯದಿರುವುದರಿಂದ ಸೊಲ್ಲಿನ ಸೊಬಗು ಕಡಿಮೆಯಾಗುವುದು. ಶಬ್ದಗಳಿಗೆ ಬರಿಯ ರೂಢಿಮೂಲಕವಾದ ಅರ್ಥವು ಮಾತ್ರ ಉಳಿದು ನುಡಿಯ ಔಚಿತ್ಯವು ತಿಳಿಯದಂತಾಗುವುದು. ಊದು-'ಊ'-ಉಫ್ ಎಂದು ಮಾಡು, ಅಲ್ಬರಿ, ಆಲ್, ಆಲು (ಕೂಗು), ಎಂಬ ಪದಗಳೊಡನೆ 'ಅಳು' ಎಂಬುದನ್ನು ಹೋಲಿಸಿ ನೋಡಿದಲ್ಲಿ. 'ಅಳು' ಎಂಬುದರಲ್ಲಿ ಹುದುಗಿರುವ ದುಃಖದ ದನಿಯು (ಕೂಗು) ಕಿವಿಗೆ ಬಾರದೆ ಇರದು. ಆರ್ (ಆರ್‌ದು), ಗರ್ಜಿಸು ಎಂಬರ್ಥದ ನುಡಿಯಿದೆ. ಆರ್ಪು, ಎಂದರೆ ಸಾಮರ್ಥ್ಯ ಎಂಬರ್ಥದ ಇನ್ನೊಂದು ನುಡಿಯುಂಟು 'ಆರ್ ಪು ಇದರ ಸೊಗಸು 'ಆರ್' ಎಂಬುದರೊಡನೆ ಹೋಲಿಸಿದಲ್ಲಿ ಚೆನ್ನಾಗಿ ತಿಳಿಯುವುದು. ಆರ್ಪು ಉಳ್ಳವನು ಗಜರಿ ಗರ್ಜಿಸುವನು. ಹೇಡಿಯಂತೆ ಬಾಯಳಿದು ಕುಳ್ಳಿರುವವನಲ್ಲ. ಕುಞ್ (ಕುಂಯಿ) ಎಂದು ಮಾಡುವುದು ನಾಯಮರಿಗಳ ಹುಟ್ಟುಗುಣ. ಆದುದರಿಂದಲೆ, ಅವುಗಳ ಮರಿಗಳಿಗೆ ಕುಞ್ನಿ, ಕುನ್ನಿ- ಎಂಬ ಸಾರ್ಥವಾದ ಹೆಸರು ಬಂದಿದೆ. ಚಿಲಿಪಿಲಿ ಮಾಡುವುದರಿಂದ ಚಿಳ್ಳೆ, ಪಿಳ್ಳೆಗಳು. ಈ ತೆರನಾಗಿ ಬಗೆದು ಭಾವಿಸಿದರೆ ಕನ್ನಡದ ಒಂದೊಂದು ನುಡಿಯೂ, ಎಷ್ಟೊಂದು ಉಚಿತಾರ್ಥವುಳ್ಳುದಾಗಿದೆ; ಸರಸವಾಗಿದೆ ಎಂಬುದರ ಮನವರಿಕೆಯಾಗದೆ ಇರದು. ಆದರೆ 'ನುಡಿ'ಗಳ ಒಳಗೆ ಹುದುಗಿರುವ ಆ ನಾದವನ್ನು ಕೇಳುವ ಕುತೂಹಲವು ಮೊದಲು ಜಾಗ್ರತವಾಗಬೇಕಲ್ಲವೆ?

ಕನ್ನಡದಲ್ಲಿ ಮೊದಲು ಇದ್ದ ಈ ಬಗೆಯ ನುಡಿತನವು (ನಾದಶಕ್ತಿಯು) ಕುಗ್ಗುವುದಕ್ಕೆ ಕನ್ನಡಿಗರಲ್ಲಿ ನಿನ್ನೆ ಮೊನ್ನೆಯವರೆಗೆ ದಿನದಿನಕ್ಕೂ ಹೆಚ್ಚುತ್ತ ನಡೆದ ಕಿವುಡತನವೇ ಮುಖ್ಯಕಾರಣವು. ನುಡಿಯೊಳಗಿನ ನಾದದ ಅರಿವು ಇದ್ದು, ಆ ನಾದಾ ಸಂಧಾನದಲ್ಲಿಯೆ ಜನಗಳ ಸೊಲ್ಲು ಸಾಗಿದ್ದರೆ ಅರ್ಕೆ=ಅಟ್ಟೆಯು ಅಕ್ಕೆ ಆಗುತ್ತಿದ್ದಿಲ್ಲ. ಏಕೆಂದರೆ, ಮೊದಲಿನ ಎರಡರಲ್ಲಿರುವ ನಾದಶಕ್ತಿಯು ಅಕ್ಕೆಯಲ್ಲಿಲ್ಲ. ಜೀರ್ಕೊಳವೆ-ಜೀಕಳಿಯಾಗುತ್ತಿದ್ದಿಲ್ಲ. ಕರ್ಚು ಇದರಲ್ಲಿರುವನಿತು ಅರ್ಥಶಕ್ತಿ ಕಚ್ಚುವಲ್ಲಿಲ್ಲ. ಕರ್ಬು ಎಂಬಲ್ಲಿ (ಅದನ್ನು) ತಿನ್ನುವಾಗ ಆಗುವ ಶಬ್ದವು ಕೇಳಬರುವಂತೆ 'ಕಬ್ಬು' ಎಂಬಲ್ಲಿ ಕೇಳಬರುವುದಿಲ್ಲ. ಚರ್‌ಚರ್ ಎಂದು ನುಡಿವ ಚಪ್ಪಲಿ ತಮಿಳಿನಲ್ಲಿ ಚೆರ್‌ಪು. ಮಲೆಯಾಳಿನಲ್ಲಿ ಚೆರಿಪ್ಪು; ತೆಲುಗಿನಲ್ಲಿ ಚೆಪ್ಪು. ಕೆರಹು ಅಥವಾ ಕೆರವು ಎಂಬಲ್ಲಿ ನಾದವೆ ಇಲ್ಲ. ಇದಕ್ಕಿಂತ ಕೆರ (ಚೆರ್-ಕೆರ್) ಎಂಬುದು ಲೇಸು. ನಾದವನ್ನು ನೆನೆದು ನುಡಿವ ತಿಳಿವು ತಲೆದೋರಿದರೆ ಇದೀಗ ನಿರ್ಜೀವವಾಗುತ್ತಲಿರುವ ಶಬ್ದಗಳು ಮತ್ತೆ ಸಜೀವವಾಗುವಲ್ಲಿ ಸಂದೇಹವಿಲ್ಲ.

ಭಾಷೆಯು ಬೆಳೆದ ಬಗೆಯಿದು: ಮೊದಲು ಅನುಕರಣ; ಅನುಕರಣದ ಅನುಸರಣ- ಸಾಮ್ಯ (ಸಾಮ್ಯ, ಹೋಲಿಕೆ, ಮಾದರಿಗಳಿಂದ ಶಬ್ದಗಳನ್ನು ನೇರ್ಪಡಿಸುವುದು); ಸಾಮ್ಯದ ಮುಂದಿನ ಮೆಟ್ಟು ಸಂಕೇತ. ಆದುದರಿಂದ 'ಶಬ್ದಾನುಕೃತಿ' ಅಥವಾ 'ಅನುಕೃತ ಶಬ್ದ'ಗಳು ಬಹುತರವಾಗಿ ಪ್ರಾಚೀನ ಭಾಷೆಯ ಅವಶೇಷಗಳೆಂದು ಹೇಳಬಹುದಾಗಿದೆ. ನಾದವಾಚಕ ಹೆಸರುಗಳು ಶಬ್ದಾನುಕೃತಿಗಳಾಗಿರುವುದೇ ವಾಡಿಕೆ. ಅಲ್ಲದೆ ಆ ನಾದದಿಂದ ಆ ವಸ್ತುವಿಗೂ ಅದೇ ಬಗೆಯಾಗಿ ಹೆಸರಿಸುವ ರೂಢಿಯೆ ಬಹುತರವಾಗಿ ಎಲ್ಲೆಲ್ಲಿಯೂ ಕಂಡುಬರುವುದು.

'ಗಂಟೆ' ಎಂಬುದು ಈ ಗುಂಪಿನ ಸುವಿಖ್ಯಾತವಾದ ಪ್ರಾತಿನಿಧಿಕ ಶಬ್ದ. ಆದರೆ, ಇಂಗ್ಲಿಷಿನ (gong) ಎಂಬಲ್ಲಿ ಇರುವ ನಾದವು (bell) ಎಂಬಲ್ಲಿ ಮಾತ್ರ ಇಲ್ಲ; ಆದುದರಿಂದ bell ಎಂಬುದು ಮೂಲದಲ್ಲಿ ಜಙ್ ಅಥವಾ ಗಙ್ ಎಂಬ ನಾದದಾಯಕ ವಸ್ತುವಾಗಿರಲಿಕ್ಕಿಲ್ಲ. ವಳ್ ವೆಳ್, ವಳ್ ವಿಳ್-ಬಳ್ ವಳ್ ಎಂಬ ನಾದವುಳ್ಳುದಾಗಿರಬೇಕು. ವಾದ್ಯಗಳ ಹೆಸರುಗಳು ಹೆಚ್ಚಾಗಿ ಅವುಗಳ ನಾದದಿಂದಲೆ ಬಂದಿವೆ.

ಮೇಕೆ, ಸಂ. ಮೇಷ ಎಂಬದು 'ಮ್ಯಾs' ಎಂಬ ನುಡಿತದಿಂದ ತಲೆದೋರಿದ್ದೆಂಬಲ್ಲಿ ಸಂದೇಹವೆ ಇಲ್ಲ. ಕಾಗೆ; ಗೂಬೆ; ಕಿಲಿ ಕಿಲಿ- ಗಿಳಿ; ಅ. ಮ. ಕಿಳಿ ಮತ್ತು ಕಿರಿಕಿರಿಯಿಂದ ಸಂ. ಕೀರ; ತೆ. ಚಿಲುಕ ಮುಂತಾದ ಪ್ರಾಣಿಗಳ ಹೆಸರುಗಳು ಶಬ್ದಾನುಕೃತಿಯೆಂದು ಸಹಜವಾಗಿ ಅರಿತುಕೊಳ್ಳಬಹುದಾಗಿದೆ.

ಸಿಟ್ಟು, ಜಗಳಾಟಗಳನ್ನು ಸೂಚಿಸುವ ಹಲವು ಶಬ್ದಗಳು ಆ ಭಾವನೆಯ ಕಾಲದಲ್ಲಿ ಉಂಟಾಗುವ ಶಬ್ದದ ಅನುಕರಣದಿಂದಲೆ ಹುಟ್ಟಿದುವುಗಳಾಗಿವೆ. ಕೀಱು ಎಂದರೆ ಸಿಟ್ಟಾಗು; (ಸಾಱಿಯುಂ ಕೀಱಿಯುಂ ನುಡಿವರ್-ಪಂಪ) ಅ. ಮ. ಗಳಲ್ಲಿ ಇದೇ ಚೀಱು ಎಂಬ ರೂಪದಲ್ಲಿದೆ. ತೆ. ಕೀರು (ಸರ್ಪದಂತೆ ಫೂತ್ಕಾರ ಮಾಡು ಅರ್ಥಾತ್ ರೊಚ್ಚಿಗೇಳು). ಹಿಂದಿನ ಕನ್ನಡಿಗರು 'ಕೀಱು' ಎಂಬುದನ್ನು ಸಿಟ್ಟಾಗು ಎಂಬರ್ಥದಲ್ಲಿಯೂ 'ಚೀಱು' ಎಂಬುದನ್ನು ಕೂಗು ಕಿರಚು ಎಂಬರ್ಥದಲ್ಲಿಯೂ ಒಂದು ನುಡಿಯನ್ನೇ ಎರಡು ಅಂದದಲ್ಲಿ ಬಳಸಿ ತಮ್ಮ ಶಬ್ದ-ಸಂಪತ್ತನ್ನು ಬೆಳಸಿಕೊಂಡಿದ್ದಾರೆ. ಆದರೆ ಅದರ ಅರಿವು ಇಂದು ಉಳಿಯದಿದ್ದುದು ಕನ್ನಡದ ದುರ್ದೈವ! 'ಸಿಟ್ಟು' ಎಂಬುದರ ಮೂಲ ರೂಪವು 'ಚಿಱ್ಱ' ಎಂಬುದಾಗಿದೆ. ಅ. ಮಚ್ಚಿಗಳಲ್ಲಿ ಇದು ಱ್ಱ; ಚೆಱ್ಱ ಅಥವಾ ಚೀಱ್ಱ ಎಂದೂ ತೆ. ನಲ್ಲಿ ಸೀಸ ಅಥವಾ ಚಿಂದು ಎಂದೂ ಇದೆ. ಗದ್ದರಿಸು, ಗುಡುಗು (ಸಿಟ್ಟಾಗು, growl) ಎಂಬುವೂ ಇದೇ ತೆರನಾದ ನುಡಿಗಳಾಗಿವೆ.

ಕಲಕಲ;- ಕಲಹ; ಕಳಕಳ; 'ಕಳ' (ಕಣ; ರಣ); ಸಂ. ರಣ ಎಂಬುದೂ ಕೂಗು, ಗರ್ಜನೆ (Roar) ಎಂಬರ್ಥದಲ್ಲಿಯೆ ಉಂಟೆಂದು ಕಂಡುಬರುತ್ತದೆ. ಈ ದೃಷ್ಟಿಯಿಂದ ವಿಚಾರಿಸಿದಲ್ಲಿ ಕಾಳಗ, ಕೊಳಗುಳ ಮತ್ತು ಕದನ ಎಂಬುವು ಅನುಕೃತ ಶಬ್ದಗಳೆಂದೇ ಹೇಳಬಹುದಾಗಿದೆ. ಕೋಲಾಹಲ ಎಂಬುದನ್ನೂ ಇವುಗಳೊಡನೆ ಹೋಲಿಸಿದಲ್ಲಿ ಅವುಗಳಲ್ಲಿರುವ ನಾದವು ಇನ್ನೂ ಸ್ಪಷ್ಟವಾಗುವುದು.

ಹರ್ಷವಿಷಾದದ ಉದ್ಗಾರಗಳು ಬಹುತರ ನಾದಯುಕ್ತವಾದುವೆಂದು ಹೇಳುವ ಕಾರಣವಿಲ್ಲ. ಅಲಲs (Lo), ಅಕಾ, ಅಕಟ, ಆಗಾ, (ಅಹಾ); ಹಲಹಲ-ಹರಹರ (Hurrah) ; ಕೆ-ಕೆ- ಎಂದು ಕೆಲೆ; ಸಂ. ಕೇಳಿ; ಎಂದು ಮುಂತಾದವು ಈ ಬಗೆಯ ನುಡಿಗಳಾಗಿವೆ.

ಕತಕತ-ಕುದಿಯುವುದು, ಸಂ. ಕ್ವಥ್; ಗಲಗಲ-ಗದ್‌ಗದ್-ಗದ್ದಲ, ಸಂ. ಗದ್ (ಮಾತಾಡು); ಎಂಬಿವೇ ಮುಂತಾದುವುಗಳ ತುಲನಾತ್ಮಕ ಅಭ್ಯಾಸವು ಆ ನುಡಿಗಳಲ್ಲಿ ಹುದುಗಿರುವ ನಾದವನ್ನು ಸ್ಪಷ್ಟಪಡಿಸಲಿಕ್ಕೆ ಸಹಾಯಕವಾಗದೆ ಇರದು.

ಈ ಬಗೆಯ ಅಭ್ಯಾಸವಾಗಿ ಹಲವು ಸೊಗಸಾದ ಕನ್ನಡದ ನುಡಿಗಳ ಪುನರುಜ್ಜೀವನವು ಆಗಬೇಕಾಗಿದೆ. ಹಲವು ಕಾರಣಗಳಿಂದ ಕನ್ನಡದ ಅನೇಕ ಪದಗಳಲ್ಲಿಯ ಸವಿಯು ತಿಳಿಯದಾಗಿದೆ. ಕಾಲಕ್ರಮದಲ್ಲಿ ಕನ್ನಡಿಗರ ಅಭಿರುಚಿಯು ಬದಲಾದುದೂ ಒಂದು ಮುಖ್ಯಕಾರಣವು. ಸಂಸ್ಕೃತ ಭಾಷೆಯ ಸಂಪರ್ಕದಿಂದ ಅಭಿರುಚಿಯಲ್ಲಿಯ ಇಂತಹ ಒಂದು ಅದ್ಭುತ ಪರಿವರ್ತನವು ಕನ್ನಡಿಗರಲ್ಲಾಯ್ತು; ಅದರ ಪರಿಣಾಮಗಳು ಅವರ ನುಡಿಯಲ್ಲಿಯೂ ಕಾಣಿಸಿಕೊಂಡವು. 'ಕಣ್‌ಕಣ್' ಎಂಬ ನಾದವು ಅಲ್ಪವೆನಿಸಿ 'ಖಣ್ ಖಣ್' ಅಥವಾ 'ಘಣ್ ಘಣ್' ಎಂದು ಕನ್ನಡಿಗರು ಹೇಳಲು ಆರಂಭಿಸಿದರು. 'ಕಡಲ್' ಎಂಬುದಕ್ಕಿಂತ 'ಖಡಲ್ ಎಂಬುದರಿಂದ ಇಷ್ಟಾರ್ಥವು ಸರಿಯಾಗಿ ವ್ಯಕ್ತವಾಗುತ್ತದೆಂದು ಎನಿಸಹತ್ತಿತು. ಆಗ ಸಂಸ್ಕೃತದಿಂದ 'ಮಹಾಪ್ರಾಣಗಳನ್ನು' ಎರವಾಗಿ ತಕ್ಕೊಳ್ಳಲಾಯಿತು. ಮೊದಲ ಕನ್ನಡದಲ್ಲಿ, ಖ, ಘ ಮುಂತಾದ ಅಕ್ಷರಗಳ ಆವಶ್ಯಕತೆಯೆ ಇದ್ದಿಲ್ಲ, ಏಕೆಂದರೆ ವರ್ಗದ ಪ್ರಥಮಾಕ್ಷರವನ್ನೆ ಅಲ್ಪ ಸ್ವಲ್ಪ ವ್ಯತ್ಯಾಸದಿಂದ ಉಸುರಿ ತಮ್ಮ ಇಷ್ಟಾರ್ಥವನ್ನು ಸೂಚಿಸುವ

ವಾಡಿಕೆಯಿದ್ದಿತು. ಸಂಸ್ಕೃತಭಾಷೆಯ ಪರಿಚಯವಾದ ಬಳಿಕ ಕನ್ನಡಿಗರ ಅಭಿರುಚಿಯಲ್ಲಿ ಉಂಟಾದ ಬದಲಾವಣೆಯ ಫಲವಾಗಿ ಅವರ ನುಡಿಯಲ್ಲಿ ಮಹಾಪ್ರಾಣಾದಿ ಹೊಸ ಉಚ್ಚಾರದ ಅಕ್ಷರಗಳು ತಲೆದೋರಿದುವು. 'ಕದ ಕದಿಸಿ ನಗು-' ಕಃ ಗಃ ಎಂದು, (ಗಹ ಗಹಿಸಿ) ಎಂದು ನಗುವನ್ನು ಬಣ್ಣಿಸಿ ಹೇಳುವರಷ್ಟೆ, ಮೂಲದಲ್ಲಿ ಹಕಾರವೆ ಇಲ್ಲದ ಕನ್ನಡದಲ್ಲಿ ಹಕಾರದ ಕೆಲಸವನ್ನು ಕ(ಗ) ಕಾರವು ಮಾಡುತ್ತಿತ್ತು. ಅದರಿಂದ ಹ್-ಹ್-ಹ್ ಎಂಬುದು ಕ್-ಕ್-ಕ್ ಎಂಬ ರೂಪದಲ್ಲಿ (ಕದಕ್ಕದಿಸು, ಗದಗದಿಸು) ಕಾಣಿಸಿಕೊಂಡಿದೆ- ಅಹಾ! ಎಂಬ ಉದ್ಗಾರವು ಅಕಾ! ಅಕಟಾ! ಎಂಬ ತೆರನಾಗಿದೆ.

ಸಂಸ್ಕೃತ ಮಹಾಪ್ರಾಣಗಳು ಬಂದು, ಕನ್ನಡ ಅಲ್ಪಪ್ರಾಣಗಳನ್ನು ಮೂಲೆಗುಂಪುಮಾಡಿದುವು. ಇಂಗ್ಲಿಷಿನ ಉಚ್ಚಾರಗಳು ಇಂದು ಕನ್ನಡದ ಮಾತಿನ ಮೇಲೆ ಪರಿಣಾಮ ಮಾಡಿಲ್ಲವೆ? ಆಡುವ ಮಾತು ಕನ್ನಡವಾದರೂ ಅರ್ಧಕ್ಕಿಂತ ಹೆಚ್ಚು ಇಂಗ್ರೇಜಿ ಬೆರಸುವುದುಂಟು. ಅಷ್ಟೇ ಅಲ್ಲ ಕನ್ನಡ ಮಾತುಗಳನ್ನೂ ಇಂಗ್ಲಿಷಿನ ರೀತಿಯಲ್ಲಿ ಉಸುರುವುದು! 'ಮೈಲ್ ಟ್ರೈನ್ನಿನಲ್ಲಿ ಬ್ಯಾಂಗ್ಲೋರಿನಿಂದ ಹೊರಟು, ಹೂಬ್ಲಿಗೆ ಟೆನ್ ಒಕ್ಲಾಕ್ಕಿಗೆ ಮುಟ್ಟಿದೆವು', ಎಂಬೀ ಬಗೆಯ ಸಂವಾದಗಳನ್ನು ಯಾರು ತಾನೇ ಕೇಳಿಲ್ಲ? ಬೆಂಗಳೂರು, ಹುಬ್ಬಳ್ಳಿ ಎಂಬೀ ಬಗೆಯ ಮಾತುಗಳನ್ನೂ ಇಂಗ್ಲಿಷಿನವರ ರೀತಿಯಲ್ಲಿ ಹೇಳುವ ಆವಶ್ಯಕತೆಯೇನೋ! ಕನ್ನಡಿಗರ ಅಭಿರುಚಿಯು ಬದಲಾದುದೆ ಇದೆಲ್ಲಕ್ಕೂ ಮೂಲಕಾರಣ. ಕನ್ನಡಿಗರ ಪ್ರಾಚೀನ ಪರಂಪರೆ ದೊಡ್ಡದು; ನಾಗರಿಕತೆ ಹಿರಿದಾದುದು. ಹೆರವರ ವಿಚಾರದಲ್ಲಿ ಆದರ ಆಸಕ್ತಿಗಳು ಕನ್ನಡಿಗರಿಗೆ ವಿಪರೀತ. ತಮ್ಮನ್ನು ಕೀಳ್ಗೆಗೆದುಕೊಂಡೂ ಹೆರವರ ಮಾನಕಾಪಾಡುವಲ್ಲಿ ಕನ್ನಡಿಗರ ಹುಮ್ಮಸ ವಿಶೇಷ. ತಮ್ಮ ಮಾತಿನಲ್ಲಿ ಬಂದ ಪರಭಾಷೆಯ ಪದಗಳನ್ನು ಆಯಾ ಭಾಷೆಯವರಂತೆಯೇ ಉಚ್ಚರಿಸಬೇಕೆಂಬ ಹಟ, ಜಗತ್ತಿನ ಉಳಿದ ಯಾವ ಜನಾಂಗಗಳಲ್ಲಿಯೂ ಅಷ್ಟು ಇಲ್ಲ. ಆದರೆ, ಕನ್ನಡಿಗರು ಮಾತ್ರ ಈ ವಿಷಯದಲ್ಲಿ ಎಲ್ಲರನ್ನೂ ಮೀರಿಸಿದ್ದಾರೆ. ಸಂಸ್ಕೃತ ಪದಗಳನ್ನು ಸಂಸ್ಕೃತದ ರೀತಿಯಲ್ಲಿಯೆ ಉಚ್ಚರಿಸಬೇಕೆಂದು ಕನ್ನಡಿಗರು ನಿರ್ಧರಿಸಿದ್ದಂತೂ ಸರಿಯೆ. ಆದರೆ, ಅದು ಹಿಂದೆ ಆಯ್ತು ಹೋಯ್ತು. ಇಂದು ಹಿಂದೀ, ಮರಾಠಿ, ಬಂಗಾಲಿ, ಇಂಗ್ಲಿಷ ಮುಂತಾದುವುಗಳ ವಿಚಾರದಲ್ಲಿಯೂ ಮತ್ತೆ ಅದೇ ರೀತಿಯು ಸರಿಯೆ? ಸಂಸ್ಕೃತ, ಹಿಂದಿ, ಮರಾಠಿ, ಬಂಗಾಲಿ. ಇಂಗ್ಲಿಷಿನವರೆಲ್ಲ ತಮ್ಮ ಸೊಲ್ಲಿನ ಹದವು ಕೆಡದಂತೆ ಮೊದಲು ನೋಡಿಕೊಳ್ಳುವರು. ತಮ್ಮ ಸೊಲ್ಲಿಗೆ ಸರಿಹೋಗದ ಪರಭಾಷೆಯ ಪದಗಳನ್ನು ಅಲ್ಪ. ಸ್ವಲ್ಪ ಮಾರ್ಪಡಿಸಿಕೊಂಡು ತಮ್ಮ ಮಾತಿನ ರೀತಿಗೆ ಅವನ್ನು ಒಗ್ಗಿಸಿಕೊಳ್ಳುವರು. ಸಂಸ್ಕೃತದಲ್ಲಿ ಕನ್ನಡ 'ಪೂ' ಎಂಬುದು 'ಪುಷ್ಪ'ವಾಯ್ತೆಂದು ಬಲ್ಲಿದರು ಕಂಡುಹಿಡಿದಿದ್ದಾರೆ. 'ಜಪಾನ' ಹಿಂದೀ ಉಚ್ಚಾರದಲ್ಲಿ 'ಜಾಪಾಽನ್' ಆಗುವುದು. 'ಕೋಡಬಳೆ' ಮರಾಠಿಯಲ್ಲಿ 'ಕಡಬೋಳೆ' ಆಗಿದೆ. 'ಮಂಗ' ಇಂಗ್ಲಿಷಿನಲ್ಲಿ 'ಮಂಕಿ' ಎಂಬ ರೂಪ ತಾಳಿತು. ಆದರೆ ಕನ್ನಡದಲ್ಲಿ ಎಲ್ಲವೂ ತಿರುವು ಮುರುವು! ಎಲ್ಲರನ್ನೂ ಆದರಿಸಬೇಕೆಂಬ ಅವಸರದಲ್ಲಿ ಕನ್ನಡಿಗರು ತಮ್ಮದನ್ನೆ ಮರೆತು ಬಿಟ್ಟಿದ್ದಾರೆ! ತಮ್ಮತನಕ್ಕೆ ಎರವಾಗಿದ್ದಾರೆ! ಇಂದು ಕನ್ನಡದ ಸೊಲ್ಲಿನ ರೀತಿಯಾವುದು? ಅದರ ವೈಶಿಷ್ಟ್ಯವೇನು? ಎಂಬುದನ್ನು ಜನಗಳಿಗೆ ಹೊಸದಾಗಿ ತಿಳಿಸಿ ಹೇಳುವ ಹೊತ್ತು ಬಂದಿದೆ!

ಚಲಚ್ಚಿತ್ರಪಟಗಳ ಹಾಡುಗಾರಿಕೆಯಿಂದ ನಿಜವಾದ ಸಂಗೀತವು ನಷ್ಟವಾಗುವ ಹೊತ್ತು ಬಂದಿದೆಯೆಂದು ಕುಲರಸಿಕರು ಮಿಡುಕುತ್ತಿರುವರು. ಕಿವಿಯಿರುವುದೆಂದು ಎಲ್ಲರಿಗೂ ಕೇಳಬರುವುದು ನಿಜವಾದರೂ ಕಿವಿದ ಇಂಪನ್ನು ಅರಿತು ಆನಂದಿಸಲು ತಿಳುವಳಿಕೆ ಬೇಕು. ತಾವು ಆಡುವುದು, ಬರೆಯುವುದು ಎಲ್ಲವು ಕನ್ನಡವೆಂಬ ಭಾವನೆಯೆ ಪ್ರತಿಯೊಬ್ಬರಿಗಿರುವುದಾದರೂ ಅದರಲ್ಲಿ ನಿಜವಾಗಿ ಕನ್ನಡತನವು (ಕನ್ನಡದ ಸೊಗಸು) ಎಷ್ಟಿದೆಯೆಂಬುದೇ ಸಂದೇಹಾಸ್ಪದವಾಗಿದೆ. ಇಂದು ಮತ್ತೆ ಕನ್ನಡಿಗರಲ್ಲಿ ಕನ್ನಡದ ಕಿಮಿಯು ಒಡಮೂಡಬೇಕಾಗಿದೆ. ಬೇರೆ ಸಂಗೀತಗಳ ಸವಿಯನ್ನು ಉಣ್ಣಲು ಕರ್ನಾಟ ಸಂಗೀತವನ್ನು ತೆಗಳಬೇಕಾಗಿಲ್ಲ; ತೊರೆಯಬೇಕಾದ ಕಾರಣವೂ ಇಲ್ಲ. ಹೆರವರ ಮಾತಿಗೆ ಮನಸೋತು ಕನ್ನಡಿಗರು ತಮ್ಮ ಕಿವಿ, ನಾಲಗೆಗಳನ್ನು ಕೆಡಿಸಿಕೊಂಡಿದ್ದಾರೆ. ಅದರಿಂದ ಕನ್ನಡದ ನಲ್ನುಡಿಗಳು ಕನ್ನಡಿಗರ ನಾಲಗೆಯಲ್ಲಿ ಕುಣಿಯುತ್ತಿಲ್ಲ. ಕಿವಿಯಲ್ಲಿ ನುಡಿಯುತ್ತಿರುವುದು ಪರರ ಸ್ವರಗಳೇ.

ಚೊಕ್ಕಟವಾದ ಕನ್ನಡದ ನುಡಿಗಳು ಹಿಂದೆ ಬಿದ್ದುದಕ್ಕೆ ಇದುವೆ ಮುಖ್ಯ ಕಾರಣ. ಇದರಿಂದ ಕನ್ನಡಕ್ಕೆ ಎಂದೂ ತುಂಬಿಬಾರದಂತಹ ಹಾನಿಯಾಗಿದೆ. ಇನ್ನು ಮೇಲಾದರೂ ಇದಕ್ಕೂ ಹೆಚ್ಚಿನ ಕೆಡಕು ತಟ್ಟಬಾರದಾಗಿದ್ದರೆ, ಕನ್ನಡದ ಸವಿಯನ್ನು ಅರಿವ ಕಿವಿಯವರಾಗಿ ಕನ್ನಡಿಗರೆಲ್ಲ ಕನ್ನಡದ ನಾಲಗೆಯಿಂದಲೇ ಮಾತನಾಡುವ ಪಣತೊಡಬೇಕು. ಏಕೆಂದರೆ ಕನ್ನಡವು ಮತ್ತೆ ಜೀವಂತ ಭಾಷೆಯಾಗಲು ಇದರ ಹೊರತು ಬೇರೆ ದಾರಿಯೆ ಇಲ್ಲ. 'ಹಾಗಾದರೆ ಕನ್ನಡವು ಜೀವಂತ ಭಾಷೆಯಾಗಿಲ್ಲವೆ?' ಎಂದು ಕೆಲರು ಚಟ್ಟನೆ ಸಿಡಿದು ನುಡಿಯಬಹುದು. ದಿನದಿನಕ್ಕೂ ಪರಭಾಷೆಯ ಪದಗಳು ಬಂದು ಕನ್ನಡದ ಸ್ಥಳವನ್ನು ಆಕ್ರಮಿಸುತ್ತಿರುವಾಗ, ಕನ್ನಡವು ತನ್ನ ಸೊಲ್ಲಿನೊಳಗಿನ ನುಡಿತನವನ್ನು (ಶಬ್ದಶಕ್ತಿಯನ್ನು) ಕಳೆದುಕೊಂಡು ಹುರುಳುಳ್ಳ ಮಾತುಗಳಿಗೆ ಎರವಾಗಿ ಸವೆದು ನವೆದು ಕುಗ್ಗಿಕುಸಿಯುತ್ತಿರುವಾಗ ಇಂದಿನ ಕನ್ನಡವು ಕೆಚ್ಚಿನ, ಕಸುವಿನ ನುಡಿಯೆಂದು ಹೇಳುವುದು ಸ್ವಲ್ಪ ತೂಕತಪ್ಪಿದ ಮಾತು ಎನಿಸಲಾರದೆ?

ಕನ್ನಡ ಕಿವಿಯು ಕಿವುಡಾಗಿ ಕನ್ನಡದೊಳಗಿನ ನುಡಿತವು ಕೇಳದಾಯಿತು. ಮಾತನಾಡುವಾಗ ಬಳಸುವ ಶಬ್ದಗಳು ಕೇವಲ ರೂಢಾರ್ಥವುಳ್ಳವು ಆದುವು; ಔಚಿತ್ಯದ ಸೊಗಸು ಮಾಯವಾಯ್ತು. ಉದಾಹರಣಾರ್ಥವಾಗಿ, ಇಂದು 'ನಡುಕ' ಶಬ್ದವು ನಮ್ಮ ಪಾಲಿಗೆ ಹುರುಳುಗೆಟ್ಟಿದೆ; ನಾದವಿಹೀನವಾಗಿದೆ. ಲಟಕಟಿಸು, ಗದಗದ ಅಥವಾ ಗಡಗಡನೆ (ನಡಗು) ಎಂಬ ನಾದವು ಅದರಲ್ಲಿ ಕೇಳಬರುವುದಿಲ್ಲ. ಲಕಾರವನ್ನು ಕನ್ನಡದ ಜನಸಾಮಾನ್ಯರು ನಕಾರದಂತೆ ಉಚ್ಚರಿಸುವುದನ್ನು ನೆನೆದರೆ ಹಲವು ಕನ್ನಡ ಬಳಗದ (ದ್ರಾವಿಡ ವರ್ಗದ) ನುಡಿಗಳ ತಿರುಳು ಗೊತ್ತಾಗುವುದು. ಲಿಂಗ=ನಿಂಗ; ಲಿಂಬಿ=ನಿಂಬಿ, ಲಟ್=ನಟ್, ಲಟ್ ಎಂದು ಲಟಿಕೆ ಮುರಿ=ನಟ್ ಎಂದು ನಟಿಕೆ ಮುರಿ. ಲಟಕ್ಕನೆ=ನಟಕ್ಕನೆ, ಲಡಲಡ=ನಡನಡ.... ನಡಗು. ನಡನಡನೆ ನಡುಗುವುದು ನಡುವು; ಅಥವಾ ನಡು (ಸಣ್ಣಾದುದು, ಬಳಕುವುದು ಎಂಬರ್ಥದಲ್ಲಿ). ಲುಟು ಲುಟು ನಡಿಗೆ ಎಂದು ಈಗಲೂ ಹೇಳುವ ವಾಡಿಕೆಯಲ್ಲಿ ನಡೆ ಎಂಬುದರ ಶಬ್ದದ್ರವ್ಯವೆ ಲಟಲಟ-ಲುಟುಲುಟು ಎಂಬುದರಲ್ಲಿ ಕಾಣಸಿಕೊಳ್ಳುತ್ತಿಲ್ಲವೆ? ನಲಿ ಎಂಬುದು ಲಲ್ಲೆಗೆ ಎಷ್ಟು ಹತ್ತಿರದ ನುಡಿಯೆಂದು ಬೇರೆ ಹೇಳಬೇಕೆ? ಲಲನೆ=ನಲ್ಲೆ! ನಲಿ, ನಗು-ಲಫ್‌ಹ್‌ಹ್ ಮಾಡು- Laugh!

ಇದರ ಮನವರಿಕೆಗಾಗಿ ತಮಿಳಿನ ಕೆಲವು ನುಡಿಗಳನ್ನು ಸರಿ ಹೋಲಿಸಿ ನೋಡಿ. ನಟ್ಟು ನಟ್ಟು (ಲೊಚ್ ಲೊಚ್) ಎನ್ನು chirping of lizard; ನಚ್ಚು to babble; prate. ನಾವಲ್ (ಸಂ ಲಪ್), ಕೂಗು; ವಿಲಾಪ. ನುದಲ್; ನುಡಿ; ಶಬ್ದ; ಸೊಲ್ಲು (ಸಂ. ನುದ್). ಮುಂ. ಲಲಲS ಎಂದು ನರಳು; ಲೊಳ ಲೊಳ್-ನೊಳ=ನೊಣ. ಲೋ-(ಅಯ್ಯೋ)-ನೋ(ವು) ಮುಂತಾದುವು, ಲಕಾರವು ನಕಾರವಾಗಿ ಕನ್ನಡದಲ್ಲಿ ವ್ಯವಹರಿಸಿದ್ದುದಕ್ಕೆ ಉದಾಹರಣಗಳು.

'ಮೊರೆ' ಎಂಬ ನುಡಿಯನ್ನು ತಕ್ಕೊಳ್ಳಬಹುದು. ಇದರ ಹುರುಳನ್ನರಿತು ಬಳಸುವ ಜನಗಳೆಷ್ಟು? ಅದರ ನುಡಿತವು ಕೇಳಬರದ್ದರಿಂದಲೆ ಅದು ಹೆಚ್ಚಾಗಿ ಹಳೆಯ ಕಾವ್ಯಗಳಲ್ಲಿ ಕಾಣಸಿಕೊಳ್ಳುವ ಪದವಾಗಿದೆ. ಇಂಗ್ಲೀಷ ಪದ್ಯಗಳನ್ನು ತಿಳಿಸಿ ಹೇಳುವಾಗ 'murmuring' ಎಂಬ ಶಬ್ದಾನುಕೃತಿಯ ಸೊಗಸನ್ನು ತಪ್ಪದೆ ತಿಳಿಸಿ ಹೇಳುವುದನ್ನು ಕಾಣಬಹುದು. murmur ದಲ್ಲಿ ನಾದವು ಕೇಳಬರುವುದಾದರೆ, ಅದನ್ನೆ 'ಮೊರೆ'ಯಲ್ಲಿ ಕಿವಿಯುವುದಕ್ಕೆ ಏಕೆ ತೊಂದರೆಯಾಗಬೇಕು? 'moan' ದಂತೆ ಮೊಱೆ, ಮೊಱೆಯಿಡು ಎಂಬುವಲ್ಲಿಯೂ ಅಳಲಿನ ದನಿಯು ಕೇಳಬರುವುದಿಲ್ಲವೇ? ಕಳಲ್-(ಖಳಲ್), ಕಡಲ್ (ಖಡಲ್) ಎಂದು ಎಡೆಬಿಡದೆ ಅಬ್ಬರಿಸುವ ಜಲಧಿಗೆ 'ಕಡಲು' ಎಂಬ ಹೆಸರು ಎಷ್ಟು ಸಮರ್ಪಕದಾಗಿದೆ! ಈ ಔಚಿತ್ಯವು sea ಅಥವಾ ಸಾಗರದಲ್ಲಿಲ್ಲ. ಆದರೆ ಇದು ಕೇಳಬರಲು ಕಿಮಿಯು ಕನ್ನಡವಾಗಿರಬೇಕಲ್ಲ! 'ಕರ್ದುಂಕು (crack) ಇದರೊಳಗಿನ ಶಬ್ದಾನುಕೃತಿಯನ್ನು ಕಿಮಿದು ಹಿಗ್ಗಿದ್ದರೆ ಈ ನುಡಿಯು ಕಣ್ಮರೆಯಾಗುತ್ತಿದ್ದಿಲ್ಲ. ಪಱ್ ಎನೆ 'ಪಾಱು' ಎಂಬುದರಲ್ಲಿರುವ ನಾದ ಶಕ್ತಿಯು 'ಹಾರು' ಎಂದಾದ ಮಾರ್ಪಾಟದಲ್ಲಿ ಉಳಿದಿಲ್ಲ. ಪ್ಯಾ ಪ್ಯಾ (ಬ್ಯಾ ಬ್ಯಾ) ಮಾಡುವವನೆ ಪೆಚ್ಚ(ಬೆಪ್ಪ), ಪೆದ್ದ;

ಪೇಲೆ (ಪ್ಯಾಲಿ); ಪೇಂಕುಳಿ; (ಆರೆ-ಪೇಂದ್ಯಾ; ವೇಡಾ); ಇವುಗಳೊಡನೆ ಇಂಗ್ಲೀಷಿನ Patter; babble ಎಂಬೀ ಬಗೆಯ ಪದಗಳೊಡನೆ ತೂಗಿ ನೋಡಬಹುದು.

ಸ್ವಲ್ಪ ಸೂಕ್ಷ್ಮವಾಗಿ ಕಿವಿದರೆ ಕಲಕಲ, ಚಿರ್ ಕಿರ್ ಎಂಬಿವೆ ಮೊದಲಾದ ನುಡಿಗಳಲ್ಲಿ ಒಂದು ಬಗೆಯ ಅರ್ಥವು ಹುದುಗಿಕೊಂಡಿರುವಂತೆ, ಅ, ಇ, ರ್, ಲ್ ಮೊದಲಾದ ಏಕಾಕ್ಷರಗಳಲ್ಲಿಯೂ ಕೆಲವೊಂದು ಹುರುಳಿರುವುದನ್ನು ಮನಗಾಣಬಹುದಾಗಿದೆ. 'ಮಗ' ಮತ್ತು 'ಮಗು' ಇವೆರಡೂ ಶಬ್ದಗಳು ಒಂದೆಯಾದರೂ ಅರ್ಥದಲ್ಲಿ ಅದೆಷ್ಟು ಸೂಕ್ಷ್ಮಭೇದ? 'ಮಗು' ಚಿಕ್ಕದು, ಹಸುಳೆ. ಮಗನೆಂದರೆ ಅದಕ್ಕೂ ದೊಡ್ಡವನು. ಮೂಲ ಶಬ್ದವು ಒಂದೇ ಯಾದರೂ ಈ ಬಗೆಯ ಅರ್ಥ ವ್ಯತ್ಯಾಸಕ್ಕೆ ಕಾರಣವು ಆವುದು? 'ಮಗ' ಎಂಬಲ್ಲಿಗಿಂತ 'ಮಗು' ಎಂಬುವಲ್ಲಿ ಒಂದು 'ಉ' ಕಾರವು ಹೆಚ್ಚಿದೆ. ಈ 'ಉ' ಕಾರವೆ, ಚಿಕ್ಕದು ಎಂಬರ್ಥಕ್ಕೆ ಕಾರಣವಾಗಿದೆಯೆಂದು ಹೇಳಿದರೆ ತಪ್ಪಾದೀತೆ?

'ಹಾಗೇನೂ ಇಲ್ಲ; ರೂಢಿಮೂಲಕವಾಗಿ ಬಂದ ಅರ್ಥವಿದು', ಎಂದೂ ಅಡ್ಡಮಾತಾಡಬಹುದಾಗಿದೆ. ಬಳಸುವ ಸಂದರ್ಭಕ್ಕನುಸರಿಸಿ ಮಾತುಗಳಿಗೆ ಅರ್ಥವಾಗುವುದುಂಟು; ಮೂಲತಃ ಅಕ್ಷರಗಳ ನಾದಕ್ಕೆ ಏನೂ ಅರ್ಥವಿಲ್ಲ, ಎಂದು ಹೇಳುವವರೂ ಇದ್ದಾರೆ. ಆದರೆ, ಈ ಮಾತು 'ನುಡಿ'ಗಳಿಗೆ ಸಂಪೂರ್ಣವಾಗಿ ಅನ್ವಯಿಸುವುದಿಲ್ಲ. ರೂಢಿಮೂಲಕವಾಗಿ ತಲೆದೋರಿದುವುಗಳಿಗೆ ಮಾತ್ರ ಸರಿಹೋಗುತ್ತದೆ. 'ಹೊನ್ನು' ಎಂಬ ಮಾತನ್ನು ಹಿತ್ತಾಳೆಯೆಂಬರ್ಥದಲ್ಲಿ ಪ್ರಯೋಗಿಸುವ ಸಂಕೇತವು ಗೊತ್ತಾದರೆ ಹಿತ್ತಾಳೆಯೆಂಬ ಪದಾರ್ಥವನ್ನು ನಿರ್ದೇಶಿಸುವಾಗ 'ಹೊನ್ನು' ಎಂಬುದೆ ವಾಡಿಕೆಯಾಗಬಹುದು. ನಿಜ. ಈ ಅರ್ಥದಿಂದಲೇ 'ಸಂಕೇತವಶಾತ್ ಭಾಷಾ' ಎಂದು ಹೇಳಿದ್ದುಂಟು. ಆದರೆ ತಟೆ, ತಡೆ, ತಟ್ಟು ಎಂಬ ನುಡಿಗಳಲ್ಲಿ ಹುದುಗಿಕೊಂಡಿರುವ ತಟ್ (ಥಟ್) (touch; tuck; thud) ಎಂಬ ತಾಗುವಾಗಿನ ನಾದವು ಅರ್ಥವಿಹೀನವೆಂದು, ಕೇಳಬರುವುದಿಲ್ಲವೆಂದು ಹೇಳುವುದು ಕಿವುಡತನವಾಗಲಿಕ್ಕಿಲ್ಲವೆ?

ಕಣಕಣ-ಗಣಗಣ-ಗಲಗಲ ಎಂಬುದು ಗಲಾಟೆಯಾಯ್ತು. ಆದರೆ ಅದುವೆ ಕುಣುಕುಣು-ಗುಣುಗುಣು ನಡೆದಿದೆಯೆಂದರೆ ಕಿವಿಮಾತು ಆಯ್ತು! ಈ ಅರ್ಥಭೇದಕ್ಕೆ ಕಾರಣವು 'ಉ' ಕಾರವೆಂಬಲ್ಲಿ ಸಂದೇಹವೇನು? ಇದರಂತೆಯೆ 'ಮೊರೆ'ಯಿಡುವುದಕ್ಕಿಂತ 'ಮುಳು ಮುಳು' ಅಳುವುದು ಹೊರಗೆ ಕೇಳಬರುವುದಿಲ್ಲ. ಕಲಕಲ (ಗಹಿಗಹಿಸಿ) ನಗು; ಮತ್ತು ಕುಲುಕುಲು (ಮುಗುಳು) ನಗೆಯಲ್ಲಿಯೂ ವ್ಯತ್ಯಾಸವನ್ನರಿಯದ ಚದುರನಾರು? ಉಕಾರದಂತೆ ಇಕಾರವೂ ಚಿಕ್ಕದೆಂಬಲ್ಲಿ ಹಲವೆಡೆಗೆ ಕಾಣಿಸಿಕೊಳ್ಳುತ್ತದೆ. ಉದಾ: ಚಿಕ್ಕ, ಕಿರಿ, ಕಿರು, ಪಿಳ್ಳೆ, ಇಟಟ (ಸಣ್ಣ) ಕಿರುಕುಳ ಮುಂ. ಇಲ್ಲಿ ಇ ಮತ್ತು ಉ ಕಾರಗಳೆಲ್ಲವೂ ಸಾರ್ಥಕವಾಗಿವೆ.

ಅ ಮತ್ತು ಆ ಕಾರಗಳು ದೂರವನ್ನು ತೋರಿಸುವುವು. ಅವ, ಆತ, ಅತ್ತ, ಅಲ್ಲಿ, ಆಗ, ಅಂದು ಇವೇ ಮೊದಲಾದುವೆಲ್ಲವೂ ಅ, ಆಗಳ ಸಾಮರ್ಥ್ಯಕ್ಕೆ ಒಳ್ಳೆ ಉದಾಹರಣವಾಗಿವೆ. ಇಲ್ಲಿ, ಇತ್ತ, ಇದು; ಉದು, ಉವನು, ಉವಳು, ಉಂದು ಮೊದಲಾದುವು ಇದರ ಮನವರಿಕೆಯನ್ನು ಮಾಡಿಕೊಡಬಲ್ಲ ನುಡಿಗಳಾಗಿವೆ. that ಮತ್ತು this ಗಳಲ್ಲಿರುವ a ಮತ್ತು i ಗಳು ಜೀವಸ್ವರಗಳು. ಅವುಗಳಲ್ಲಿ ಅದು ಮತ್ತು ಇದು ಎಂಬ ಅರ್ಥಸೂಚನೆಯನ್ನು ಕಾಣಬಹುದು.

ಕೆಲವು ಅಕ್ಷರಗಳು ಗತಿಸೂಚಕವಾಗಿವೆ, 'ಗಳಗಳ ಗುಳುಗುಳು ಎನುತ ಪರಿವವೊನಲ್' ಎಂಬಲ್ಲಿ ಳ ಕಾರವು ಗತಿಸೂಚಕವಾಗಿದೆ. ಳ ಕಾರಕ್ಕೆ ಹತ್ತಿರದು ವಾದ ಲಕಾರ ರಕಾರ ಮತ್ತು ಡಕಾರಗಳಲ್ಲಿಯೂ ಈ ಶಕ್ತಿಯು ಇಲ್ಲದಿಲ್ಲ. ಗಡಗಡನೆ ಉರುಳು; ಗಡಗಡ-ಗುಡುಗುಡು;......ಗುಳಿಗೆ....; ಗಡ (ನೆ); ಬಡಬಡ, ಬುಡುಬುಡು; ಬಳಬಳ ಬುಳುಬುಳ ಬೀಳು; ಬಳಬಳನೆ ಬಳಕು, (ಕಾಲು) ಬಳಬಳ ಎನ್ನು (ನೋಯು); ಸಳಸಳ, ಸುಳುಸುಳು, ಸುಳಿ; ಸುರುಳ್; ಸರ್, ಸುರ್, ಸುರಿ; ಸರುವು; ಸರಸರ-ಸಾರು-ಸಾಗು, ಚಲ ಚಲ, ಚಿಳಿ ಚಿಳಿ, ಚಳಿ (ನಡುಕ); ಅಲೆ ಇವೆ ಮುಂತಾದುವು.

ಆಡುವಾಗ ಅಥವಾ ಹೇಳುವಾಗ ಒತ್ತಿ ಇಲ್ಲವೆ ಎಳೆದು ಆಡುವುದೂ ಹೇಳುವುದೂ ಉಂಟು. ಅದರಿಂದ ಒಂದು ವಿಶೇಷಾರ್ಥವು ಉಂಟಾಗುತ್ತದೆ. 'ಕುಡು' ಎಂಬ ಧಾತುವಿದೆ. (೧) ಕುಡು=ಕೊಡು. ಕುಡು ಹೊಡೆಯೆಂಬರ್ಥದಲ್ಲಿ ಕುಟ್ಟು ಆಯ್ತು! ಏಕೆಂದರೆ ಕುಡುವುದು ಸ್ವಲ್ಪ; ಅದರಿಂದ ಬೀಳುವ ಏಟು ಸಾಲದು; ಚೆನ್ನಾಗಿ ಕುಡುವುದಾದರೆ ಕುಟ್ಟುವುದೆ ಸರಿ- (೨) ಕುಡು=ಕೊಡು;.... ಕೊಡಿಗೆ ಎಂಬರ್ಥದಲ್ಲಿ ಅದುವೆ ಕೋಡು;..... ಕೋಡಿ (ಕೆರೆ, ಸರೋವರಗಳ ನೀರನ್ನು ಹೊರಗೆ ಕೊಡುವುದು ಅಥವಾ ಬಿಡುವುದು); (೩) ಕುಡು (ಕೊಂಕು) ಎಂಬುದು ಇನ್ನೊಂದರ್ಥದಲ್ಲಿ 'ಕುಡಿ' ಎಂಬುದರ ಮೂಲವಾಗಿದೆ. ಕುಡಿ, ಕುಳೆಗಳನ್ನು ತುಲನೆ ಮಾಡಬಹುದು. ಅದರಂತೆ ಕುಡು (ಕೊಂಕು)-ಕೋಡು (ಕೊಂಬು, ಕೊಂಬೆ, ಟೊಂಗೆ) ಇವನ್ನೂ ತೂಗಿ ನೋಡಿಕೊಳ್ಳಬೇಕು. ಅವುಗಳಲ್ಲಿ ಉಂಟಾದ ಅಕ್ಷರಗಳ ವ್ಯತ್ಯಾಸವು ಅರ್ಥ ಭೇದಕ್ಕೆ ಹೇಗೆ ಕಾರಣವಾಯ್ತೆಂಬುದು ಕಂಡು ಬರಬಹುದು. 'ಬರಿದು' ಎಂದುದಕ್ಕಿಂತ 'ಬಚ್ಚ' ಎಂಬಲ್ಲಿ ವಿಶೇಷಾರ್ಥವುಂಟಾಗಿದೆ.

ಕೆಲವೊಂದು ಶಬ್ದಗಳು ಮನಸಿನ ಒಂದೊಂದು ಸ್ಥಿತಿಯನ್ನು ಸೂಚಿಸುತ್ತವೆ. ಉಂಡ, ತಿಂದ ಎಂಬುದರ ಬದಲು ಬಕ್ಕರಿಸಿದನೆಂಬುವ ಮನಃಸ್ಥಿತಿಯೆ ಬೇರೆಯೆಂಬುದನ್ನು ಬೇರೆ ಹೇಳಬೇಕೆ? ಗಪಗಪ ತಿಂದ ಎಂದರೆ ಬೇರೆ ಇನ್ನೊಂದು ಅರ್ಥ. ಬಕ್ ಎಂಬ ಶಬ್ದದ್ರವ್ಯವೆ ಭಕ್ಷದಲ್ಲಿರುವುದನ್ನು ಕಾಣಬಹುದು. 'ಗಪಗಪ' ಎಂಬ ಮೂಲ ಶಬ್ದದ್ರವ್ಯವನ್ನೇ ಕನ್ನಡಿಗರು ಬಳಸಿದ್ದಾರೆ! ಆದರೆ ಸಂಸ್ಕೃತದವರು ಇದರಿಂದ 'ಕಬಲ' (ಕವಳ) ಎಂಬ ಪದವನ್ನೂ ಇಂಗ್ಲಿಷಿನವರು gulp ಎಂಬುದನ್ನೂ ನೇರ್ಪಡಿಸಿಕೊಂಡಿರುವರು!

ಕನ್ನಡದಲ್ಲಿ ಆಗು, ಹೋಗು, ಇರು, ತಾಗು, ಬಾಳು ಎಂದು ಮುಂತಾಗಿ ಕಿರುನುಡಿಗಳೆ ಬಹಳ. ಅದರಿಂದ ತಮ್ಮ ಹುಮ್ಮಸ, ರೋಷ, ಆವೇಶಾದಿಗಳು ಸರಿಯಾಗಿ ಹೊರವಡುವುದಿಲ್ಲವೆಂದೇ ಕನ್ನಡದಲ್ಲಿ ಕುಟ್ಟು, ಆಡು, ಕೊಳ್ಳು ಮುಂತಾದುವುಗಳ ನೆರವಿನಿಂದಾದ ಹಲವು ಸಂಯುಕ್ತ ಕ್ರಿಯಾಪದಗಳು ತಲೆದೋರಿವೆ. ಬಿಸಿಲು ಬಹಳವಿದೆ, ಎಂಬಲ್ಲಿ ಬಿಸಿಲು ರಣಗುಟ್ಟುತ್ತಿದೆ, ಎಂದು ಹೇಳುವ ವಾಡಿಕೆಯಿದೆ. 'ಓಡಬೇಡ'; 'ಓಡಾಡಬೇಡ'. 'ಹೇಳಬೇಡ'; 'ಹೇಳಿಕೊಳ್ಳಬೇಡ' ಇವುಗಳನ್ನು ತೂಗಿ ಮೇಲಣ ಮಾತನ್ನು ಮನಗಾಣಬಹುದು.

ಅಲ್ಪಾಕ್ಷರದ ಶಬ್ದಗಳಿಗಿಂತ ಬಾಯ್ತುಂಬ ಆಡಬೇಕಾಗುವ ನುಡಿಗಳು ಕೆಲವೊಂದು ಪ್ರಸಂಗದಲ್ಲಿ ಅವಶ್ಯವಾಗುತ್ತವೆ. 'ಬಂದನು' ಎಂಬುದರ ಬದಲು 'ಬರುವಂಥಾತನಾದನು'; ರಾಮಪ್ಪ, ರಾಮಪ್ಪಣ್ಣ, ರಾಮಪ್ಪಣ್ಣನವರು, ರಾಮಪ್ಪಣ್ಣನವರುಗಳು ಮುಂತಾಗಿ ಬೆಳೆದುದನ್ನು ಕಾಣಬಹುದು. ಅದರಂತೆ ತರಗಾಬರಗಾ (ತಾರಗ ಬೀರಗ) ಮಾತನಾಡಿದನು, (ಸಿಕ್ಕಂತೆ ಮಾತನಾಡಿದ); ಅಡಸ್ಲ-ಬಡಸ್ಲ (ಸಿಕ್ಕದ್ದನ್ನೆಲ್ಲ) ತಿಂದನು; ಎಬಡಾತಬಡಾ (ಅಸಂಬದ್ಧ) ಮಾತು; ಹಚ್ಯಾ-ಹುಚ್ಯಾ ಮಾಡು ಮುಂತಾದವುಗಳೂ ಇದಕ್ಕೆ ದೃಷ್ಟಾಂತವಾಗಿವೆ. ಆದರೆ ದುರ್ದೈವದಿಂದ ಈ ಪದಗಳಿಗೆ ಅಷ್ಟು ಸಮ್ಮಾನ್ಯಸ್ಥಾನವು ಸಾಹಿತಿಗಳಿಂದ ದೊರೆಯದ್ದರಿಂದ ಅವೆಲ್ಲ ಇನ್ನೂ ತಲೆಯೆತ್ತಿ ಮೇಲೆ ಬಾರದೆಯೆ ಉಳಿದಿವೆ. ಎಬಡಾತಬಡಾ ಮಾತು ಎಂಬ ಬದಲು ಅಸಂಬದ್ಧ ಪ್ರಲಾಪ ಎಂದರೆ ಮೆಚ್ಚಿಕೆ ಪಂಡಿತ ಜನಗಳಿಗೆ! ತಮ್ಮಲ್ಲಿ ಪ್ರತಿಶಬ್ದಗಳಿರುವಾಗಲೂ ಪರಭಾಷೆಗಳಿಂದ ಎತ್ತಿದ ಹಲವು ಶಬ್ದಗಳಲ್ಲಿ, ಹಲವು ಬಾರಿ ಆ ಶಬ್ದದ ಅವಶ್ಯಕತೆಗಿಂತ, ಅದರೊಳಗಿನ ನಾದಾನುಸಂಧಾನದಲ್ಲಿರುವ ಅರ್ಥ ಪ್ರತೀತಿಯೆ ಆ ಪದದ ಲೋಕಪ್ರಿಯತೆಗೆ ಮುಖ್ಯ ಕಾರಣವಾಗಿರುತ್ತದೆ. ಸವಿ-ಸ್ವಾದ, ಸ್ವಾರಸ್ಯ; ನುಡಿ-ಶಬ್ದ, ಜೋಪಾನ-ಲಾಲನ; ಸಿಟ್ಟು-ಕ್ರೋಧ; ರೋಷ; ಅಳು-ರೋದನ; ತುಂಬಿ-ಭ್ರಮರ; ಸುಟ್ಟುರೆ (ಗಾಳಿ) - ಝುಂಝಾ ವಾತ; ಇದರಂತೆ ಧಾಂದಲೆ; ಧಂದೆ; ಬಡಾಯಿ ಲಡಾಯಿ ಮುಂತಾದುವು ಈ ಬಗೆಯ ಉದಾಹರಣಗಳಾಗಿವೆ.

ಇದೆಲ್ಲವೂ ಆಯ್ತು. ಆದರೆ, ನಮ್ಮ ದೇಶದ ತುಂಬಿ ಝೇಂಕರಿಸಿದರೆ, ಇಂಗ್ಲಿಷ ತುಂಬಿ (Bee) buzzing ಮಾಡುವುದಲ್ಲ! ನಮ್ಮ ನಾಡಿನಲ್ಲಿಯೆ ಉತ್ತರ ಕರ್ಣಾಟದ ಹೋರಿ ಡರಕಿ ಹಾಕಿದರೆ, ಮೈಸೂರ ಸೀಮೆಯದು ಗುಟರುತ್ತದೆ! ಇಂಗ್ಲೆಂಡಿನ ಕುದುರೆ niegh ಎಂದು ದನಿಗೆಯ್ದರೆ ಧಾರವಾಡದತ್ತಣ ಕುದುರೆ ಹೇಕರಿಸುವುದು; ಮೈಸೂರಿನದು ಕಿಳಿರುವುದು! ಶಬ್ದಾನುಕೃತಿಯ ಸಿದ್ಧಾಂತವು ನಿಜವಿದ್ದರೆ ಕೊನೆಗೆ ಪ್ರಾಣಿಗಳ ಧ್ವನಿವಾಚಕ ಶಬ್ದಗಳಲ್ಲಾದರೂ ಸಾಮ್ಯವಿರಬಾರದೆ? ಎಂದು ಪರಿಹಾಸಮಾಡಲು ಎಡೆಯಿಲ್ಲದಿಲ್ಲ.

ಭಾಷೆಯೊಳಗಿನ ಪ್ರತಿಯೊಂದು ಪದವೂ ಶಬ್ದಾನುಕೃತಿಯೇ ಆಗಿದೆ ಎಂದು ಹಠ ವಾದ ಹೂಡುವ ಅತಿವಾದಿಗಳನ್ನು ಎಚ್ಚರಿಸಲು ಈ ಬಗೆಯ ಕಟಕಿ, ಪರಿಹಾಸಗಳ ಅಂಜನವು ಅತ್ಯಗತ್ಯವಾದುದೇ ಆಗಿದೆ. ಆದರೆ ಇನ್ನೊಬ್ಬರನ್ನು ಎಚ್ಚರಿಸ ಹೊರಟವರು, ತಮ್ಮ ಬಾಯಿಂದಲೂ ಎಚ್ಚರಿಲ್ಲದವರಂತಹ ಅತಿಶಯೋಕ್ತಿಯ ಮಾತು ಹೊರಬೀಳದಂತೆ ಎಚ್ಚರಾಗಿರುವುದು ಅವಶ್ಯವಿದೆ. ಬೇರೆಬೇರೆ ಭಾಷೆಗಳ ಅನುಕೃತ ಶಬ್ದಗಳಲ್ಲಿ ಕೆಲವೊಂದು ವ್ಯತ್ಯಾಸವಿರುವುದು ನಿಜ. ಅದು ಅನಿವಾರ್ಯವೂ ಆಗಿದೆ. ಏಕೆಂದರೆ ಎಲ್ಲ ನಾಡಿನವರ ಉಚ್ಚಾರದ ರೀತಿ ಒಂದೇ ತೆರನಾಗಿಲ್ಲ; ಅಲ್ಲದೆ ನಾದವನ್ನು ಆಲಿಸುವುದರಲ್ಲಿಯೂ ಕೆಲವೊಂದು ವ್ಯತ್ಯಾಸವಾಗುತ್ತಿರುವ ಸಂಭವವಿದೆ. ಉದಾಹರಣಾರ್ಥವಾಗಿ 'ಕಾಗೆ' ಎಂಬ ನುಡಿಯು ಒಂದೊಂದು ಜನಾಂಗದ ಸೊಲ್ಲಿನಲ್ಲಿ ಒಂದೊಂದು ತೆರನಾಗಿರುವಂತೆ ಭಾಸವಾಗುವ ಹಾಗಿದೆ. ಕನ್ನಡದಲ್ಲಿಯೆ 'ಕಾಕಿ' ಎಂಬುವವರೂ ಇದ್ದಾರೆ-ಅ-ಕಕ್ಕಾಯ್; ಮತ್ತು ಕಾಕ್ಕೈ; ಮ. ಕಾಕ್ಕೆ; ತು. ಕಕ್ಕೆ; ತೆ. ಕಾಕಿ. ಸಂ. ಕಾಕ; Eng crow; OE. crawe; Dan. Krage; Du. Kra; ಇತ್ಯಾದಿ-ಕಿವಿದ ನಾದವನ್ನು ಅನುಕರಿಸಿ ತೋರುವಲ್ಲಿ ಆಗುವ ವ್ಯತ್ಯಾಸವನ್ನು ಇಲ್ಲಿ ಕೆಲಮಟ್ಟಿಗಾದರೂ ಮನಗಾಣಬಹುದಾಗಿದೆ- ಕಾಗೆಯ ದನಿಯಲ್ಲಿ 'ಕಾ' ಎಂದಿಷ್ಟೇ ಅಲ್ಲ; 'ಕರ್' ಎಂಬುದು (ರ್) ಹಲವರಿಗೆ ಕೇಳಬರುವುದು-ನಾದವನ್ನು ಇದ್ದಕ್ಕಿದ್ದಂತೆ ಅನುಕರಿಸಿ ತೋರುವುದಂತು ಅಸಾಧ್ಯ. ತಮಗೆ ಶಕ್ಯದ್ದಷ್ಟು ಹತ್ತಿರದ ಹೋಲಿಕೆಯಾಗುವಂತೆ ನುಡಿವ ಯತ್ನ ಮಾಡುವುದುಂಟು. ಆಗ ಕೆಲವೊಂದು ವ್ಯತ್ಯಾಸದಿಂದ ಅವು ಬೇರೆ ಬೇರೆ ಭಾಷೆಗಳಲ್ಲಿ ಕಾಣಿಸಿಕೊಳ್ಳುವುವು. ಸ್ವಲ್ಪ ಸೂಕ್ಷ್ಮವಾಗಿ ವಿಮರ್ಶಿಸಿದಲ್ಲಿ ಎಲ್ಲ ಭಾಷೆಗಳೊಳಗಿನ ಅನುಕೃತ ಶಬ್ದಗಳು ಮೂಲದಲ್ಲಿ ತೀರ ಹತ್ತಿರದುವಾಗಿರುತ್ತವೆಂಬುದು ಕಂಡುಬಾರದೆ ಇರದು. ಕೆಲವರಿಗೆ ನಗುವು ಕ್ಯಾಃ ಕ್ಯಾ.... ಅಥವಾ ಖೊಃ ಖೊಃ-ಎಂದು ಕೇಳಬರುವುದು; ಕೆಲರಿಗೆ ಹ್ಯಃ ಹ್ ಹ್...... ಎಂದು ಎನಿಸುವುದು. ಅದರಿಂದಲೇ ಒಂದು ಭಾಷೆಯಲ್ಲಿ ಕೆಲೆ, ಗೇಲಿ ಮಾಡು ಎಂಬ ನುಡಿಗಳು ತಲೆದೋರಿದ್ದರೆ ಮತ್ತೊಂದರಲ್ಲಿ ಹಸ್-ಹಾಸ್ಯ ಎಂಬ ಶಬ್ದಗಳು ಮೈದೋರಿವೆ. ಕಿವಿಯುವುದರಲ್ಲಿರುವ ಭೇದವೆ ಇದಕ್ಕೆ ಕಾರಣವಿರಬೇಕು. 'ಗೌರ' ವರ್ಣವನ್ನು ಕೆಲರು ಬಿಳಿ, ಕೆಲರು ಹಳದಿ, ಕೆಂಪು ಛಾಯೆಯುಳ್ಳುದೆಂದು ಬೇರೆ ಬೇರೆಯಾಗಿ ಹೇಳುವುದಿಲ್ಲವೆ? ಒಂದೇ ಬಣ್ಣವನ್ನೆ ದೃಷ್ಟಿ ಭೇದದಿಂದ ಎರಡು ಮೂರು ತೆರನಾಗಿ ಕಾಣುವಂತೆ, ಒಂದೇ ನಾದವನ್ನೆ ಕಿವಿಯ ಭೇದದಿಂದ ಸ್ವಲ್ಪ ಬೇರೆ ಬೇರೆಯಾಗಿ ಹೇಳುವುದು ಸಹಜವಾಗಿದೆ.

ಶಬ್ದವು ಮನುಷ್ಯನನ್ನು ಪುಟಿಸಬಲ್ಲುದು; ಜಿಗಿಸಬಲ್ಲುದು; ಕುಣಿಸಬಲ್ಲುದು. ಶಬ್ದಕ್ಕೊಂದು ಶಕ್ತಿಯಿದೆ. ತಾಲಬದ್ಧವಾದ ಮದ್ದಳೆಯ ನುಡಿತಕ್ಕೆ, ಕುಳಿತವರಿಗೂ ಎದ್ದು ಕುಣಿವ ಆವೇಶವುಂಟಾಗುವುದು. ಇದುವೆ ಆ ಶಕ್ತಿಯ ದ್ಯೋತಕ. ತಾಲ-ಲಯಕ್ಕನುಸರಿಸಿದ ಆಲಾಪನೆಗಳಿಂದ ವಿವಿಧ ಭಾವಗಳು ಹೃದಯದಲ್ಲಿ ಜಾಗ್ರತವಾಗುತ್ತವೆ. ಆದುದರಿಂದ, ನಾದ (ಶಬ್ದ)ವೆಂದರೆ ಭಾವ. ಭಾವವೆಂದರೆ ನಾದವೆಂದು ಹೇಳಿದರೆ ತಪ್ಪಾಗದು. ನಾದವು ಭಾವವನ್ನುಂಟು ಮಾಡುವಂತೆ, ಭಾವವು ನಾದವನ್ನು ನಿರ್ಮಿಸುವುದು. ಈ ಕಾರಣದಿಂದಲೆ ಭಾವಾವೇಶದಲ್ಲಿ ಹೊರಡುವ ಸೊಲ್ಲು, ನುಡಿಗಳಿಂದ ಎಂದರೆ ಸಹಜ ಶಬ್ದಗಳಿಂದ ತುಂಬಿರುತ್ತದೆಂದು ಹೇಳುವುದು.

ಭಾವನೆಯ ಆವೇಶದ ಭಾಷೆಯಲ್ಲಿ, ಎಂದರೆ ಹಾಡಿನಲ್ಲಿ, ಮಾತಿಗಿಂತಲೂ ನಾದಕ್ಕೆ ಪ್ರಥಮಸ್ಥಾನವಿರುತ್ತದೆ. ಎದೆಯಿಂದ ಉಕ್ಕುವ ಭಾವನೆಯು ಹಾಡಿನಂತೆ 'ರಾಗ' ಯುಕ್ತವಾಗಿಯೆ ಹೊರಬರುತ್ತದೆ. ಬುದ್ಧಿಪ್ರಧಾನರು, ಸುಶಿಕ್ಷಿತರು ಎನಿಸುವವರ ಸೊಲ್ಲಿನಲ್ಲಿ ಅದು ಅಷ್ಟು ಕಾಣಿಸಿಕೊಳ್ಳುವುದಿಲ್ಲವಾದರೂ ಸಾಮಾನ್ಯ ಹೆಂಗುಸರ ಹುಡುಗರ ಮಾತಿನಲ್ಲಿ ಒಂದು ಬಗೆಯ ಧಾಟಿ-ದನಿ (ರಾಗ ಎಳೆದ ಹಾಗೆ) ಇರುವುದನ್ನು ಕಾಣಬಹುದು. ಪ್ರಕೃತಿ ಮಾತೆಯ ಮಕ್ಕಳಾದ ಒಕ್ಕಲರು ಮೊದಲಾದವರ ಮಾತುಗಳೆಲ್ಲವೂ ಇದೇ ಬಗೆಯಾಗಿರುವುದಕ್ಕೆ ಅವರಲ್ಲಿ ಬುದ್ಧಿಗಿಂತ ಭಾವನೆಗಳ ವರ್ಚಸ್ಸು ವಿಶೇಷವಾಗಿರುವುದೆ ಮುಖ್ಯ ಕಾರಣವು. ಚಿಕ್ಕಮಕ್ಕಳು ಹೊಸದಾಗಿ ಗದ್ಯವನ್ನು ಪದ್ಯದಂತೆ ದನಿದೆಗೆದು ಓದುವುದನ್ನು ಯಾರು ತಾನೆ ಕೇಳಿಲ್ಲ?

ಸಾಮಾನ್ಯ ಜನಗಳು ಆಡುವ ಸೊಲ್ಲಿನಲ್ಲಿ ವಿಚಾರಯುಕ್ತವಾದ ಬಿಡಿಬಿಡಿ ಮಾತಿಗಿಂತಲೂ ಬರಿ ಬಾಯಿಯೆ ಹೆಚ್ಚಾಗಿರುತ್ತದೆ. ಅದರಲ್ಲೂ ಸಾಮಾನ್ಯ ಹೆಣ್ಣು ಮಕ್ಕಳಲ್ಲಿ ಇನ್ನೂ ಹೆಚ್ಚು. 'ಬಾಯಿ' ಎಂದು ಇದಕ್ಕಾಗಿಯೆ ಹೆಣ್ಣುಮಕ್ಕಳಿಗೆ ಪದವಿಯು ದೊರೆತಿರುವುದೇನೊ, ಮತ್ತೆ! ಹುಡುಗರ ಹುಹು, ಹೊಹೊ ಎಂಬ ಹುಯಿಲೂ ಅಷ್ಟಿಷ್ಟಲ್ಲ. ತಮ್ಮ ಹೃದ್ಗತವನ್ನು ವಿಚಾರಗಳಿಂದ ತಿಳಿಸಿ ಹೇಳುವುದನ್ನು, ಇವರು ಅರಿಯರು. ತಮ್ಮ ಅಂತರಂಗದಲ್ಲಿ ತಾಂಡವವಾಡುತ್ತಲಿರುವ ಭಾವವನ್ನು ಆಡಿಕೊಳ್ಳಲು ತೋಡಿಕೊಳ್ಳಲು ವಟವಟ, ವಡವಡ ನಡಿಸುವುದುಂಟು. ಅಥವಾ ಅವರ ಭಾವನೆಯು, ಅರ್ಥಯುಕ್ತ ನಾದವುಳ್ಳ ವಾಕ್ ಝರಿಯು ತನ್ನ ತಾನೆ ಹೊನಲಾಗಿ ಅವರ ಬಾಯಿಂದ ಹರಿಯಲಾರಂಭಿಸುವುದು. ದೂರದಿಂದ, ಅಲ್ಲಿ, ನಡೆದ ವಿಚಾರವು ಸ್ಪಷ್ಟವಾಗಿ ತಿಳಿಯದಿದ್ದರೂ ಆ ಶಬ್ದ (ನಾದ) ವನ್ನು ಕಿವಿದರೆ ಅದು ಲಲ್ಲೆಯ ನಲ್ವಾತೊ, ಇಲ್ಲವೆ ನಕ್ಕು ನೆಗೆದು ಕೆಲೆಯುತ್ತಿರುವ ಕೆಳೆಯರ ಹುಡುಗಾಟವೊ ಅಥವಾ ಕೇರಿ, ಕಿರಚಿ ನಡೆಸಿದ ಹೋರಾಟವೊ ಎಂಬುದನ್ನು 'ಧ್ವನಿ'ಯಿಂದ ನಿಶ್ಚಿತವಾಗಿ ಅರಿತುಕೊಳ್ಳಬಹುದಾಗಿದೆ; ಅದರ ಭಾವವನ್ನು ಗ್ರಹಿಸಬಹುದಾಗಿದೆ.

ಇಂತಹ ಸಂದರ್ಭದಲ್ಲಿ, ಅಲ್ಲಿ ಉಂಟಾಗುವ ಧ್ವನಿಯ ಮೊತ್ತದಲ್ಲಿ ಬಿಡಿ ಬಿಡಿ ಬಿಡಿಯಾದ ಮಾತು-ವಿಚಾರ ವಿಮರ್ಶೆಗಳಿಗೆ ಇಂಬಿರುವುದಿಲ್ಲ; ಇಡಿಯಾದ ಒಂದು ಭಾವವು ಅಲ್ಲಿ ಉಂಟಾಗುವ ಕಲಕಲದಿಂದ ತಾನೆ ತಾನಾಗಿ ಮೈದೋರುತ್ತದೆ. ವಿಚಾರ ಯುಗವೆಂದೆನಿಸುವ ಇಂದಿನ ಜನಸಾಮಾನ್ಯರ ಮಾತೆ ಈ ಬಗೆಯಾದ ಬಳಿಕ ಅಂದಿನ, ನಿಸರ್ಗದ ಕೈಗೊಂಬೆಗಳಂತಿದ್ದ-ಭಾವನಾಮೂರ್ತಿಗಳೆ ಆಗಿದ್ದ ಆ ಆದಿ-ಮಾನವರ ಸೊಲ್ಲು ಕೇವಲ ನಾದಮಯವಾಗಿದ್ದಿತೆಂದು ಸಹಜವಾಗಿ ಊಹಿಸಬಹುದಾಗಿದೆ. ಇಂದಿನಂತೆ ಅಂದಿನ ಸೊಲ್ಲಿನಲ್ಲಿ ಬಿಡಿಬಿಡಿ ಶಬ್ದ (Words)ಗಳಿರುವುದು ಸಾಧ್ಯವಿಲ್ಲ. ಅಂದಿನದು ಇಡಿಯಾದ ಒಂದೇ ನುಡಿ. 'ಕುಕೂಕೂಸ' ಎಂದು ಕೋಳಿಯ ಸೊಲ್ಲು ಒಂದೇ ಅಖಂಡವಾದ ನುಡಿ. ನಡುವೆ 'ಕು' ಅಥವಾ 'ಕೂ' ಎಂದಿಷ್ಟೇ ಹೇಳಿ ನಿಲ್ಲುವುದನ್ನು ಅದು ಅರಿಯದು. ಒಮ್ಮೆ ಆರಂಭವಾದ ಬಳಿಕ ನಡನಡುವೆ ನಿಲ್ಲುವುದನ್ನೆ ಅದು ಅರಿಯದು. ಅದರಂತೆ ಆದಿಭಾಷೆಯಲ್ಲಿ ಬಿಡಿಬಿಡಿ ಶಬ್ದಗಳಿಗೆ (words), ಅಥವಾ ಬೇರೆ ಬೇರೆ ವಾಕ್ಯಗಳಿಗೆ ಎಡೆಯಿಲ್ಲ. ಮೊದಲಿನಿಂದ ಕೊನೆಯ ವರೆಗೆ ಅವಿಚ್ಛಿನ್ನವಾದ ಅಖಂಡವಾದ ಒಂದೇ 'ನುಡಿ'. ಅಂದಿನವರ ಒಂದು ಮಾತು ಎಂದರೆ ಅದು ಒಂದು 'ಪದ'ವೆ ಆಗಿದ್ದಿತು. ಇಡಿಯಾದ ಒಂದು ಭಾವವು ಮೈಗೊಂಡುದೇ ಒಂದು 'ಪದ್ಯ' ಅಥವಾ ಒಂದು 'ಪದ' ಎಂಬ ಅರ್ಥವು ಈಗಲೂ ಇದೆ. ಅದರಲ್ಲಿ ಪದಚ್ಛೇದ ಮಾಡಿಕೊಂಡು ಶಬ್ದಗಳನ್ನು ವಿಂಗಡಿಸಿಕೊಳ್ಳಬೇಕು. ಆದರೆ ಅವಕ್ಕೆ ಸ್ವತಂತ್ರ ಅಸ್ತಿತ್ವವಿಲ್ಲ. ಹಾಡಿನಲ್ಲಿ 'ನುಡಿ' ಎಂಬುದಕ್ಕೂ ಇದೇ ಬಗೆಯಾದ ಅರ್ಥವು ಉಳಿದುಕೊಂಡು ಬಂದಿರುವ ಸೋಜಿಗವನ್ನು ಕಂಡುಕೊಳ್ಳಬಹುದಾಗಿದೆ. ಎರಡೆರಡು ನಾಲ್ಕು ನಾಲ್ಕು ಸಾಲಿನ ಒಂದು 'ನುಡಿ!' ಅದೆಲ್ಲವೂ ಒಂದು ರಾಗದಲ್ಲಿ ಸಾಗಿ ಕೊನೆಗಾಣಬೇಕು. ನಡುವೆ ಕಡಿದು ಕತ್ತರಿಸುವಂತಿಲ್ಲ. ಇದರಂತೆ ಅಂದಿನವರ ನುಡಿ-ಸೊಲ್ಲು-ಒಂದು ಪದ; ಹಾಡು. ಒಂದೊಂದು ನುಡಿಯೂ ಅವಿಚ್ಛಿನ್ನವಾದ ಅಖಂಡವಾದ ಪೂರ್ಣವಾಕ್ಯ. ಅದು ಅವರ ವಾಕ್ಕು ವಾಣಿ ಎಂಬುದೂ ಇದೇ ಬಗೆಯಾದ ಅಖಂಡ ಭಾವವನ್ನೆ ಸೂಚಿಸುತ್ತದೆ.

ಸಂಸ್ಕೃತ ವ್ಯಾಕರಣಕಾರರ ವಾಕ್ಯಸ್ಫೋಟದ ವಾದವೂ ಈ ಮಾತಿಗೆ ಬೆಂಬಲವನ್ನೀಯುತ್ತಲಿದೆ. 'ನಾನು ನಾಳೆ ಓದುತ್ತೇನೆ' ಎಂಬುದನ್ನು ಇಡಿಯಾಗಿ ಉಚ್ಚರಿಸಿದಾಗಲೆ ಅದಕ್ಕೆ ಪೂರ್ಣವಾದ ಅರ್ಥವಿದೆ. 'ನಾನು' ಅಥವಾ 'ಓದುತ್ತೇನೆ' ಎಂದು ಮುಂತಾದ ವಿಭಾಗಗಳು ಪೂರ್ಣವಾದ ಅರ್ಥದಾಯಕವಲ್ಲ. ಇಡಿಯಾಗಿ ನುಡಿಯಾಗಿ ಕಿವಿಗೆ ಬಿದ್ದಾಗಲೆ ಅದರ ಅರ್ಥದ ಅನುಭವವು ಬರುತ್ತದೆ. ವಾಕ್ಯವು ಪೂರ್ಣವಾಗದೆ (ಬಿಡಿಬಿಡಿಯಾದ ಶಬ್ದಗಳಿಂದ) ಅರ್ಥವು ಹೊರಬರುವುದಿಲ್ಲ. ಇಡಿಯಾದುದನ್ನು ಬಿಡಿಬಿಡಿಸಿ ನೋಡುವ ಸ್ವಭಾವವು ಮಾನವನಲ್ಲಿ ಕಾಲಾಂತರದಿಂದ ತಲೆದೋರಿತು. ಆಗ ಶಬ್ದಸ್ಫೋಟ, ಅಕ್ಷರ ಸ್ಫೋಟಗಳು ಶಕ್ಯವಾದುವು.

ಆರಂಭ ಕಾಲದ್ದು ಹಾಡಿನಂತಹ-ರಾಗಯುಕ್ತವಾದ, ಅಖಂಡವಾದ ನುಡಿ. ಅಲ್ಲಿ ಬಿಡಿ ಮಾತು (ಶಬ್ದ)ಗಳಿಗೆ ಅಸ್ತಿತ್ವವಿದ್ದಿಲ್ಲ. ಅವಿರಳವಾದ ಒಂದೇ ನುಡಿ (ದನಿ). 'ರಾಗರಸ; ಪದಕಸ'; ಎಂಬ ಲೋಕೋಕ್ತಿಯಲ್ಲಿ ಅಂದಿನ ಸೊಲ್ಲಿನ ಬಗೆಯ ಸೂಚನೆಯು ಸ್ಪಷ್ಟವಾಗಿ ದೊರೆಯುತ್ತದೆ. ಅಲ್ಲಿ ಒಂದೊಂದು ಪದಕ್ಕೆ (Word) ಅರ್ಥವಿಲ್ಲ. ಹಾಡಿನಂತೆ ಭಾವನೆಯ ಭಾಷೆಯಲ್ಲಿಯೂ, ಮಾತಿಗಿಂತ ನಾದಕ್ಕೆ-ಧ್ವನಿಗೇ ಪ್ರಾಮುಖ್ಯತೆಯಿರುತ್ತದೆ. ಹಾಡಿನ 'ನುಡಿ', 'ನುಡಿ'ಗಳೊಳಗಿಂದ ತುಂಬಿ ತುಂಬಿ ಹೊರಸೂಸುವ ನಾದದಿಂದಲೆ ಅದರಲ್ಲಿ ಅಡಕವಾದ ಅರ್ಥದ ಪ್ರತೀತಿಯಾಗುತ್ತಿರಬೇಕು; ಅದುವೆ ಮಾತ್ರ ಶ್ರೇಷ್ಠವಾದ ಪದ್ಯವೆಂದು ರಸಿಕ ವಿಮರ್ಶಕರು ಹೇಳುತ್ತಾರೆ. ಹಾಡು ಒಂದೇ ಏಕೆ? ಶ್ರೇಷ್ಠಕಾವ್ಯದ ಲಕ್ಷಣವೇನು? ಕಾವ್ಯದ ಆತ್ಮವು ಆವುದೆಂಬ ವಾದ ವಿವಾದಗಳು ನೂರಾರು ವರುಷಗಳಿಂದಲೂ ನಡೆದು ಕೊನೆಗೊಮ್ಮೆ 'ಧ್ವನಿ'ಯೆ ಕಾವ್ಯದ ಜೀವಾಳವೆಂಬ ಸಿದ್ಧಾಂತವು ಸರ್ವಮಾನ್ಯವಾಗಿದೆ. ಕಾವ್ಯದಲ್ಲಿ 'ಧ್ವನಿ' ಎಂದರೆ ವ್ಯಂಗ್ಯಾರ್ಥ, ಎಂದಿಷ್ಟೇ ಅರ್ಥವನ್ನು ಗ್ರಹಿಸಿದವರು ಕೆಲವರುಂಟು. ಪಡುವಣ ನಾಡಿನ ರಸಿಕರಾದ ಭಾವುಕರು ಶ್ರೇಷ್ಠಕಾವ್ಯದ ಲಕ್ಷಣಗಳನ್ನು ವಿವರಿಸುವಾಗ Sound, sence and suggestion ಎಂಬ ಮೂರು ಗುಣಗಳು ಅದರಲ್ಲಿರಬೇಕೆಂದು ಹೇಳುತ್ತಾರೆ. ಅವರ ಈ ಪ್ರತಿಪಾದನೆಯು ನಮ್ಮವರ 'ಧ್ವನಿ' ಸಿದ್ಧಾಂತವನ್ನೆ ಪುಷ್ಟೀಕರಿಸುತ್ತದೆ. ಪಾಶ್ಚಿಮಾತ್ಯರು ಮೂರು ಮಾತುಗಳಲ್ಲಿ ಹೇಳಿದ ತತ್ವವನ್ನು ನಮ್ಮ ರಸಿಕರಾದ ಅಲಂಕಾರ ಶಾಸ್ತ್ರಜ್ಞರು 'ಧ್ವನಿ' ಎಂಬ ಒಂದೇ ಪದದಿಂದಲೆ ಸೂಚಿಸಿದ್ದಾರೆ. 'ಧ್ವನಿ' ಎಂದರೆ Sense (ಅರ್ಥ) ಮತ್ತು Suggestion (ವ್ಯಂಗ್ಯ) ಎಂಬುದಂತೂ ಸರಿಯೆ. ಅಲ್ಲದೆ 'ಧ್ವನಿ' ಎಂಬಲ್ಲಿ Sound (ನಾದ) ಎಂಬ ಭಾವವೂ ಅದರಲ್ಲಿ ತುಂಬ ಇದೆ. ಆದರೆ, ಕೆಲವರು 'ಧ್ವನಿ' ಎಂದರೆ ಬರಿ Tone ಅಥವಾ ವ್ಯಂಗ್ಯ ಎಂದಿಷ್ಟೆ ಅರ್ಥಮಾಡುವರು. ಇದು, ಕಾವ್ಯದಲ್ಲಿ ಭಾವ ನಿರ್ಭರತೆಗಿಂತ ಬುದ್ಧಿ ಚಾಪಲ್ಯಕ್ಕೇ ಮುಖ್ಯ ಪಟ್ಟವನ್ನು ಕಟ್ಟಿದುದರ ಕುರುಹಾಗಿದೆ. ಇದರಿಂದಲೆ, ನಮ್ಮ ಕಾವ್ಯಗಳು, ನಡುವೆ ಕೆಲವೊಂದು ಕಾಲಶ್ಲೇಷಾದಿ ಅಲಂಕಾರಗಳ ಮೂಲಕ ತಮ್ಮ ಬುದ್ಧಿಯ ಕಸರತ್ತು ತೋರುವ ಗರುಡಿಗಳಂತಾಗಿದ್ದುದು ಕಂಡುಬರುತ್ತದೆ. ಕಾವ್ಯದಲ್ಲಿ 'ಧ್ವನಿ'ಯೆ ಮುಖ್ಯವೆಂದು ಲಾಕ್ಷಣಿಕರು ಹೇಳುವ ಮಾತು ಬಹಳ ಮಹತ್ವದ್ದಾಗಿದೆ. 'ಧ್ವನಿ' ಶಬ್ದಕ್ಕೆ ಅರ್ಥ ಮಾಡುವಾಗ ಅದರ ಲಕ್ಷಣಾರ್ಥವನ್ನೆ ಲಕ್ಷಿಸಿದರೆ ಆಗದು; ಮೂಲಾರ್ಥವನ್ನೂ ಎಣಿಕೆಯಲ್ಲಿ ಹಿಡಿಯಬೇಕಾಗುತ್ತದೆ. ಇಂತೀ ಬಗೆಯಾಗಿ ಹೃದಯದ ಝರಿಯಾದ ಹಾಡು-ಸಂಗೀತಗಳಂತೆ, ಕಾವ್ಯ-ಸಾಹಿತ್ಯದಲ್ಲೂ ದನಿ-ಧ್ವನಿಯೆ ಮುಖ್ಯವೆಂದು ಹೇಳಬೇಕಾಗುತ್ತದೆ. ವಿಶ್ವದ ಮೂಲತತ್ವವನ್ನು ಹುಡುಕುವುದಕ್ಕೆ ಹೊರಟ ಲೋಕದ ಮೇಧಾವಿಗಳ ಸೂಕ್ಷ್ಮ ಬುದ್ಧಿಯೂ ಕೊನೆಗೆ ಬಂದು ನಿಂತುದೆಲ್ಲಿ? 'ಶಬ್ದ-ಬ್ರಹ್ಮ' (ನಾದಬ್ರಹ್ಮ)ವೆ ವಿಶ್ವದ ಆತ್ಮವೆಂದು ವೇದಾಂತಿಗಳೂ ನಿರ್ಧರಿಸಿದ್ದಾರೆ. ಇದೇ ಬೈಬಲ್ಲಿನ 'Word' (befor the world).

ಆರಂಭ ಕಾಲದ ಭಾಷೆಯು 'ರಾಗ' ಯುಕ್ತವಾಗಿತ್ತು; ಎಂದು ಹಿಂದೆ ಒಮ್ಮೆ ಸೂಚಿಸಿದೆಯಷ್ಟೆ. ಅದನ್ನು ಇಲ್ಲಿ ಇನ್ನಿಷ್ಟು ಬಿಡಿಸಿ ಹೇಳುವುದು ಅವಶ್ಯವಾಗಿದೆ. ಅದು ರಾಗಯುಕ್ತವೆಂದರೆ, ನಾದಪ್ರಧಾನವಾಗಿತ್ತು; ಅದರಲ್ಲಿ ಬಿಡಿಬಿಡಿಯಾದ ಮಾತು ಅಥವಾ ಶಬ್ದಗಳು ಇರಲಿಲ್ಲ; ಇಡಿಯಾದ ಒಂದೇ ಭಾವವು ತುಂಬಿಕೊಂಡಿರುತ್ತಿತ್ತು. ಯಾವ ಬಣ್ಣವೂ ಇಲ್ಲದೆ ಆಡಬಹುದಾದ ಇಂದಿನ ಮಾತಿನಂತೆ ಇದ್ದಿಲ್ಲ. 'ನನಗೆ ಸಿಟ್ಟು ಬಂದಿದೆ' ಎಂದು ತುಂಬಾ ತಣ್ಣಗೆ ಕುಳಿತು, ಏರುದನಿಯಲ್ಲಿ ಅಲ್ಲ ಮತ್ತೆ-ಶಾಂತ ಸ್ವರದಿಂದಲೆ ಈಗಿನವರು ಹೇಳಬಹುದಾಗಿದೆ. ಆದರೆ ಅಂದಿನವರಿಗೆ ಇದು ಅರಿಯದ ಮಾತು. ಅಂದಿನದು ಬಣ್ಣಬಣ್ಣದ ನುಡಿ (ಸೊಲ್ಲು). ಸಿಟ್ಟಾಗಿದ್ದಾಗ 'ಕಿಡಿ ಕಿಡಿ' ಯಾಗುವುದು, ಕೆಂಡದಂತಾಗುವುದು ಮಾನವನ ಸಹಜ ಸ್ವಭಾವ. ಆದುದರಿಂದ, ಬಣ್ಣಗಳ ಮೂಲಕ ಮನೋಭಾವಗಳನ್ನು ವ್ಯಕ್ತಪಡಿಸುವುದೂ ಒಂದು ಪ್ರಾಚೀನ ಪದ್ಧತಿಯಾಗಿದೆ. ರಾಗಯುಕ್ತವಾದ, ಎಂದರೆ ಆವೇಶ, ಉದ್ವೇಗಾದಿ ಭಾವಗಳ ಒತ್ತಡದಿಂದ ಕೂಡಿದ ನುಡಿಯು ಹೊರಹೊಮ್ಮುವ ಕಾಲದಲ್ಲಿ ಅದಕ್ಕೆ ತಕ್ಕ ಮುಖವಿಕಾರಾದಿ ಹಾವಭಾವಗಳೂ ತನ್ನತಾನೆ ಆಗಹತ್ತುವುವು. ಇಂದು, ಹೇಳಿ ಕೇಳುವಾಗ ಅಥವಾ ಆಡುವಾಗ ಆಲಿಸುವಾಗ ಮನೋಭಾವಗಳು ತಮ್ಮ ಮೋರೆಯಲ್ಲಿ ತೋರದಂತೆ ಜಾಗರೂಕರಾಗಿರುವುದು ನಾಗರಿಕತೆಯ

ಲಕ್ಷಣವೆಂದು ಗ್ರಹಿಕೆಯಿದೆ. ಇಂತಹರು, ತಮ್ಮ ಭಾವನೆಗಳನ್ನು ಅಂಕೆಯಲ್ಲಿರಿಸಿಕೊಂಡ ಗಂಭೀರ ವೃತ್ತಿಯ ಸುಸಂಸ್ಕೃತ ಸದ್ಗೃಹಸ್ಥರೆಂದು ಎಣಿಸಲ್ಪಡುವರು. ತಮ್ಮ ಎದೆಯಲ್ಲಿ ಹುದುಗಿಸಿಟ್ಟುಕೊಂಡ ಕಪಟು (ಮೋಸ) ಹೊರಬೀಳಬಾರದೆಂದು ತಣ್ಣನೆಯ ಇರುವಿನ ಸೋಗು ಹಾಕಿದವರೂ ಇದೇ ಬಗೆಯಾಗಿ ಯಾವ ಬಣ್ಣವೂ ಇಲ್ಲದ ಮಾತುಗಳನ್ನು ಮುಖಮುದ್ರೆಯಲ್ಲಿ ಯಾವ ವ್ಯತ್ಯಾಸಗಳನ್ನೂ ತೋರಗೊಡದೆ ಆಡಬಲ್ಲರು. ಅದರಂತೆ ಒಳಗಣ ಜೀವಶಕ್ತಿಯು ಕಂದಿ ಕುಂದಿದವರ ಮಾತೂ ಇದೇ ತೆರನಾಗಿರಬಲ್ಲುದು, ಇವೆಲ್ಲವೂ ಸುಸಂಸ್ಕೃತ ಅಥವಾ ಕೃತಕ ಇಲ್ಲವೆ ಅಸ್ವಾಭಾವಿಕ ಮಾತುಗಳು ಸಹಜವಲ್ಲ. ನಮ್ಮಿಂದ ಹೊರಡುವ ಶಬ್ದವು ಭಾವಬೋಧಕವಾಗಿರಬೇಕಾಗಿದ್ದರೆ ಅರ್ಥಕ್ಕೆ ಸರಿಯಾದ ಉಚ್ಚಾರ, ಮತ್ತು ಉಚ್ಚಾರಕ್ಕೆ ತಕ್ಕ ಅಂಗಚೇಷ್ಟೆಗಳೂ ಒಂದಕ್ಕೊಂದು ಪೋಷಕವಾಗಿ ಇರಬೇಕಾಗುತ್ತದೆ. ಇವು ಅಂದಿನ ನುಡಿಯಲ್ಲಿ ಅವಿಗಲಿವಾಗಿ ಬೆರೆತುಕೊಂಡಿದ್ದುವು.

ಈ ಮಾತಿಗೆ ಕನ್ನಡದ 'ಆಡು' ಎಂಬ ಪದವು ಈಗಲೂ ಸಾಕ್ಷಿಯಾಗಿದೆ. ಇದು ಆರಂಭಕಾಲದ ಭಾಷಣದ ಸ್ವರೂಪವನ್ನು ಚೆನ್ನಾಗಿ ಸೂಚಿಸುವಂತಹುದಾಗಿದೆ. 'ಮಾತು' ಆಡುವುದಕ್ಕಿಂತ 'ಆಡು'ವುದರಲ್ಲಿ ವಿಶೇಷಾರ್ಥವಿದೆ. ಇಂದು ಇದರ ಅರ್ಥವು ಸಂಕುಚಿತವಾಗುತ್ತ ನಡೆದಿದ್ದರೂ ಮೂಲಾರ್ಥವು ಬಹಳ ವಿಶಾಲವಾದುದಾಗಿದೆ. 'ಆಡು' ಉಸಿರು, ಉಚ್ಚರಿಸು ಎಂಬ ಮುಖ್ಯಾರ್ಥದೊಡನೆ ನಲಿ, ಕೆಲಿ, ಕೂಗಾಡು ಹಾರಾಡು, ಹೋರಾಡು ಎಂಬ ಉಳಿದ ಭಾವಗಳ ಛಾಯೆಯೂ ಅದರಲ್ಲುಂಟು. ಆಟವೆಂದರೆ ಬರಿ ನಾಟ್ಯವಲ್ಲ. ಸಂಗೀತ-ಸಂಭಾಷಣೆಗಳಿಲ್ಲದುದು ಆಟವೆನಿಸದು. ಅದು ಕೇವಲ ಕುಣಿತ; ಆಟದಲ್ಲಿ ಹಾಡು ಮತ್ತು ಸಂಭಾಷಣೆ ಲೀಲಾ ವಿನೋದಗಳೊಡನೆ ಕೂಡಿದ ಅಭಿನಯವು ಇರುವುದು. ಇದುವೆ ಪರಿಪೂರ್ಣವಾದ ಭಾಷೆ. ಇದರೊಳಗಿನ ಸಂಗೀತ, ನಾಟ್ಯಾದಿ ಒಂದೊಂದು ಅಂಶವೂ ಸ್ವತಂತ್ರವಾಗಿ ಬೆಳೆದು, ಇಂದು ಒಂದೊಂದು ಬೇರೆ ಬೇರೆ ಕಲೆ ಅಥವಾ ಶಾಸ್ತ್ರವೆನಿಸಿಕೊಂಡಿದೆ. ಅಂದು, ಆಡುವುದೆಂದರೆ ಭಾವಕ್ಕೆ ಅನುಗುಣವಾದ ಆಂಗಿಕ ಚೇಷ್ಟೆಗಳೊಡನೆ ವಾಚಿಕ ಕ್ರಿಯೆಯನ್ನು ನಡುಸುವುದು (ತಮ್ಮ ಅಂತರಂಗದೊಳಗಿನ ಭಾವನೆಗಳನ್ನು ಈ ಬಗೆಯಾಗಿ ಹೊರಪಡಿಸುವುದು) ವಾಡಿಕೆಯಾಗಿದ್ದಿತು. ಆದುದರಿಂದ ಇಂಗ್ರೇಜಿಯ 'Expression' ಎಂಬುದಕ್ಕೆ ಸಮಾನಾರ್ಥಕವಾಗಿ 'ಆಟ' ಎಂಬ ಪದವನ್ನು ಉಪಯೋಗಿಸಬಹುದಾಗಿದೆ.

'ಆಟ'ದಲ್ಲಿ ಅರ್ಥಯುಕ್ತವಾದ ಶಬ್ದ (ನಾದ)ದೊಡನೆ, ಅದಕ್ಕೆ ಹೊಂದಿಕೆಯಾದ ಹಾವಭಾವಗಳೂ ಇರುವುವು. ಆವೇಶಯುಕ್ತವಾದ ಸಂಭಾಷಣಗಳಲ್ಲಿ ಮಾತಿನೊಡನೆ ಹಾವ-ಭಾವಗಳೂ ಹೇಗೆ ತನ್ನ ತಾನೆ ನಡೆದು ಬಿಡುವುವೆಂಬುದನ್ನು ಈಗಲೂ ಮನೆ ಮನೆಗಳಲ್ಲಿ ಕಂಡುಕೊಳ್ಳಬಹುದಾಗಿದೆ: 'ಮೂಗು ಮುರಿ', 'ಹಲ್ಲು ತಿನ್ನು', 'ಕೈ ಮಾಡು'. 'ತಲೆದೂಗು', 'ಬಾಯಿಬಿಡು' ಮುಂತಾದ ಮಾತುಗಳು, ಅಸಮ್ಮತಿ, ಸಿಟ್ಟು, ಸಿಡಕು, ಸಮ್ಮತಿಸು, ಸೋಜಿಗಗೊಳ್ಳು ಮುಂತಾದ ಮನೋಭಾವನೆಗಳನ್ನು ವ್ಯಕ್ತಪಡಿಸುವಾಗ ಆಗುವ ಸ್ವಾಭಾವಿಕವಾದ ಮುಖ ವಿಕಾರಾದಿ ಅಂಗ ಚೇಷ್ಟೆಗಳಿಂದಲೆ ಮೈವೆತ್ತಿವೆ. ಸಂಸ್ಕೃತದ ಆಶ್ಚರ್ಯವು, (ಆಃ+ಚರ್ಯ) ಸೋಜಿಗಗೊಂಡು ಆs.....ಎಂದು ಬಾಯ್ಬಿಟ್ಟುಕೊಂಡು ನಿಂತಂತಹ ವ್ಯಕ್ತಿಯ ಒಂದು ಚಿತ್ರವನ್ನೆ ಕಣ್ಣೆದುರು ನಿಲ್ಲಿಸುತ್ತದೆ! ಆ (ಹಾ), Ah, awe, ಅಕಾ! ಮೊದಲಾದುವು ಹೊರಡುವಾಗ ನಾದದೊಡನೆ, ಆ ಭಾವನೆಯನ್ನು ವ್ಯಕ್ತಗೊಳಿಸುವ 'ಆ' ಎಂದು ಬಾಯಿ ಬಿಟ್ಟು ನಿಲ್ಲುವ ವಿಸ್ಮಯ, ಭೀತಿಗಳಿಂದ ಬೆರೆತ ಆ ಮುಖಮುದ್ರೆಯನ್ನೂ ಮರೆಯಲಿಕ್ಕಾಗದು. ಈ ದೃಷ್ಟಿಯಿಂದ ಮುದ್ರೆ, ಅಭಿನಯಗಳೂ ಒಂದು ಭಾಷೆ. ಇದುವೆ ನಾಟ್ಯ, ನೃತ್ಯರೂಪದಲ್ಲಿ ವಿಕಸಿತವಾಗಿ ಲೋಕಕ್ಕೆ ಆನಂದವನ್ನೀಯುತ್ತಿದೆ.

ನಾದ ನುಡಿತಕ್ಕೆ ಮನಸೋಲದವರೆ ಇಲ್ಲ. ಬೆಥೂವನ್ನನ ಸಿಂಫನಿಯನ್ನು ಯುರೋಪಖಂಡವೆ ಹೊಗಳುತ್ತದೆ. ಶ್ರೀಕೃಷ್ಣನ ಕೊಳಲು ಲೋಕ ಮೋಹಕವಾಗಿದ್ದಿತೆಂದು ಭರತಖಂಡದಲ್ಲಿ ಐತಿಹ್ಯವುಂಟು. ಇವೆಲ್ಲವೂ ಕೇವಲ ಅತ್ಯುಕ್ತಿಗಳೆಂದು ಹೇಳುವುದಕ್ಕಾಗದು. ಒಂದಿಲ್ಲೊಂದು 'ನಾದ' ದಿಂದ ಸೆಳೆಯಲ್ಪಡದ ಮಾನವನಿಲ್ಲ. ಆ ನಾದಕ್ಕೆ ಹೊಂದಿಕೆಯಾಗುವ ರೀತಿಯಲ್ಲಿ ಪ್ರತಿಯೊಂದು ವ್ಯಕ್ತಿಯ ಜೀವನ-ಸಂಗೀತವು ಎಡೆಬಿಡದೆ ಸಾಗಿರುತ್ತದೆ. ಅವನ

ನಡೆ-ನುಡಿಗಳು ಆ ತಾಳಲಯಕ್ಕನುಸರಿಯೆ ಇರುತ್ತವೆ. ಈ 'ನಾದ'ವು ಪ್ರಾಣಿ ಮಾತ್ರಗಳಲ್ಲಿ ಭಾವ-ರೂಪದಿಂದ ಹುದುಗಿಕೊಂಡಿರುತ್ತದೆ. ಆ 'ನಾದ'ವು ಆ ವ್ಯಕ್ತಿಯ ಜೀವಾಳ. ಉಳಿದ ಶ್ರುತಿಗಳಿಗೆ ಕಿವಿಗೊಡದೆ ತನ್ನಷ್ಟಕ್ಕೆ ತಾನೇ ಕೂಗಿಕೊಳ್ಳುವವನ (ನಡೆದಿರುವವನ) ಪಾಡು ಅಪಶ್ರುತಿಯಲ್ಲಿ ಸಾಗಿರುತ್ತದೆಂದು ಬೇರೆ ಹೇಳಬೇಕಾದುದಿಲ್ಲ. ವಿಶ್ವಸಂಗೀತದ ಹಿನ್ನೆಲೆಯಲ್ಲಿ, ಅದರ ಸ್ವರಮೇಳದಲ್ಲಿ ಇರುವ ಪಾಡೆ ಪಾಡು. ಅದು ಸಹಜ ಜೀವನ. ಆ ಶ್ರುತಿಯನ್ನಾಲಿಸಿ ತನ್ನ ಪಾಡನ್ನು ತಿದ್ದಿಕೊಳ್ಳುವವನೆ ವಿಶ್ರುತನೆನಿಸುವನು.

ಕೃತ್ರಿಮತೆಯು ಎಷ್ಟೇ ಸುತ್ತಿಮುತ್ತಿ ಮಾನವನನ್ನು ತನ್ನ ಅಡ್ಡದಾರಿಗೆ ಒಯ್ಯಬೇಕೆಂದು ಹವಣಿಸಿದರೂ ಆತನ ಅಂತರಂಗದೊಳಗಿನ ಭಾವನೆಗಳ ಬುಗ್ಗೆಯು ಸಂಪೂರ್ಣವಾಗಿ ಇನ್ನೂ ಬತ್ತಿಲ್ಲ. ಬತ್ತಲಿಕ್ಕೂ ಇಲ್ಲ. ಸಹಜ ಭಾವದ ಮಗುವಿನೊಡನೆ ಆಡುವ ನುಡಿ ಎಂತಹದು? ನಲ್ಮೆಯವರೊಡನೆ ನಡೆದ ಸರಸ ಸಲ್ಲಾಪದ ಸೊಲ್ಲಿನ ಬಗೆಯು ಅದಾವುದು? ಇವೆಲ್ಲ ಎಡೆಗಳಲ್ಲಿ ಸಹಜ ಶಬ್ದಗಳಿಗೆ ಹೆಚ್ಚಿನ ಇಂಬು ಇರುವುದನ್ನು ಕಂಡುಕೊಳ್ಳಬಹುದಾಗಿದೆ.

ಹೊಸದು ಒಂದನ್ನು ಪಡೆವ ಗಡಿಬಿಡಿಯಲ್ಲಿ, ಅದರ ಬೆಲೆಯೆಂದೊ ಏನೊ, ಕೆಲಸಾರೆ ತಮ್ಮಲ್ಲಿ ಇದ್ದ ಒಂದನ್ನು ಕಳೆದುಕೊಳ್ಳಬೇಕಾಗುತ್ತದೆ. ಮಾನವನ ಕೆಲವೊಂದು ಶಕ್ತಿಗಳು ಹಿಂದಿನಕ್ಕಿಂತಲೂ ಇಂದು ಹೆಚ್ಚು ಬೆಳೆದಿರುವುದು ನಿಜ. ಆದರೆ, ಅಂದಿನವರಿಗಿದ್ದ ಕೆಲವೊಂದು ವಿಶೇಷಶಕ್ತಿ-ಸಾಮರ್ಥ್ಯಗಳಿಗೆ ಆತನು ಇಂದು ಎರವಾಗಿರುವುದೂ ಅಷ್ಟೇ ನಿಜ. ಈ ವಿಚಾರದಲ್ಲಿ ಲೆವಿ ಬ್ರುಹ್ಲ (Levy bruhl) ಎಂಬುವನು ಹೇಳುವುದೆಂದರೆ:

> "The primal man, who is still in us was a visionary of nature. He had a somnambulistic mind; modern mind has succeeded in relegating his ancient capacity for vision to a conditional passivity."*

ಉಡಿದು, ಕಡಿದು ಕೊಚ್ಚಿ, ಬಿಚ್ಚಿ, ನೋಡುವ ಸ್ವಭಾವವು ಮೈಯುಂಡಂತೆ, ಒಂದು ಒಡವೆಯನ್ನು ಇಡಿಯಾಗಿ ನೋಡುವ ಸ್ವಭಾವವು ಮಾಯವಾಗುತ್ತದೆ. ಬಗೆದು ನೋಡುವ ಬಗೆಯವರು ಇವರು. ವಿಚಾರ, ವಿಮರ್ಶನಾಶಕ್ತಿಗಳು ಹೆಚ್ಚಿದಂತೆ, ಭಾವಪರವಶತೆಯೂ ತನ್ಮೂಲಕ-ವಾದ ಕಣಸುಗಳನ್ನು ಕಾಣುವ ಸಾಮರ್ಥ್ಯವೂ ಮಾನವನಲ್ಲಿ ಕಡಿಮೆಯಾಗುತ್ತ ನಡೆದುದನ್ನು ಮಾನಸ ಶಾಸ್ತ್ರಜ್ಞರು ಒಪ್ಪಿಕೊಂಡಿದ್ದಾರೆ. ಮಕ್ಕಳೊಡನೆ ಬೊಂಬೆಗಳು ಮಾತನಾಡುತ್ತವೆ; ಮಕ್ಕಳು ಬೊಂಬೆಗಳೊಡನೆ ಮಾತನಾಡುತ್ತಾರೆ. ಅವರದೇ ಒಂದು ಲೋಕ. ಆ ಲೋಕದಲ್ಲಿ ಕೋಲು ಕುದುರೆಯಾಗುವುದು. ನಿರ್ಜೀವ ವಸ್ತುಗಳು ಸಜೀವವಾಗುವುವು. ಮಣ್ಣು-ಹೊನ್ನಾಗುವುದು. ಈ ಶಕ್ತಿಯು ಮುಂದೆ ಗಂಡಸರಲ್ಲಿ ಬಹುತರ ಏನೂ ಉಳಿಯುವುದಿಲ್ಲ; ಹೆಂಗಸರಲ್ಲಿ ಕೆಲವೊಂದು ಮಟ್ಟಿಗೆ ಜೀವಂತವಿರುವುದು, ಹಲವು ಬಾರಿ ಅನುಭವಕ್ಕೆ ಬರುವುದು.

ಇಂತಹರಿಗೆ, ಎಂದರೆ ಅದುವೆ ತಾನಾಗಿ, (ಭೂ-ಭವ), ತತ್‌ಮಯರಾಗಿ ಭಾವಿಸುವವರಿಗೆ ಶಬ್ದರೂಪವಾದ ಮಾತು (ವಿಚಾರ) ಮೊದಲು ಕಣ್ಣಿಗೆ ಕಾಣಿಸಿಕೊಳ್ಳುವುದು. ಎಂದರೆ ಆಡಬೇಕಾದುದು ಕೆಲವೊಂದು ರೂಪ ಆಕಾರ ತಾಳಿ ಮೂರ್ತಸ್ವರೂಪದಲ್ಲಿ ಕಣ್ಣೆದುರು ನಿಲ್ಲುವುದು. ಅಮೂರ್ತ ವಿಚಾರಗಳನ್ನು (abstract ideas) ಇವರು ಅರಿಯರು. ಕಂಡುದನ್ನು ಆಡುವವರು. ಒಂದರ್ಥದಿಂದ ಇವರು ವಾಸ್ತವವಾದಿಗಳು. ಅಮೂರ್ತವಿಚಾರಗಳನ್ನು ವಸ್ತುರೂಪವಾಗಿ ಕಾಣುವ ಅಸಾಧಾರಣವಾದ ಶಕ್ತಿಯು ಇವರಿಗೆ ಇರುತ್ತದೆ. ವೇದಗಳಿಗೆ ಕಾರಣವಾದ ಶಕ್ತಿಯು ಇದೇ. ಬೇರೆ ಬೇರೆ ನಾಡುಗಳಲ್ಲಿ ತಲೆತಲಾಂತರಗಳಿಂದ ಬಂದ ಪುರಾಣ (Mythology) ಕಥೆಗಳಿಗೆ ಜನ್ಮಕೊಟ್ಟ ಶಕ್ತಿಯಿದು.

---

* The Language of the Night

ಪೂರ್ವಸೂರಿಗಳು ಹೇಳುವ 'ಪಶ್ಯಂತಿವಾಣಿ'ಯು ಇದೇಯೆಂದು ನನಗೆ ತೋರುತ್ತದೆ. ಏಕೆಂದರೆ ಎಷ್ಟೋ ಮತ, ಪಂಥಗಳ ಗ್ರಂಥಗಳಲ್ಲಿ ಹೇಳಿದ ವಿವರಣೆಗಳಿಂದ ಸರಿಯಾದ ಅರ್ಥವೆ ಆಗುವುದಿಲ್ಲ. 'ಪಶ್ಯಂತಿ'ಯ ಮಸಮಸಕಾದ ಅನುಭವವಾದರೂ ಇಲ್ಲದವರಿಲ್ಲ. ತಮ್ಮ ಊರು, ಗೆಳೆಯರು, ಬಳಗದವರು ಮೊದಲಾದುವುಗಳ ವಿಚಾರದಲ್ಲಿ ಆಯಾ ಪ್ರಸಂಗದ ಚಿತ್ರಗಳ ಕಣ್ಣೆದುರಿಗೆ ನಿಂತಂತೆ ಆಗುವುದು ಸಾಮಾನ್ಯವಾಗಿ ಎಲ್ಲರ ಅನುಭವದ ವಿಷಯವಾಗಿದೆ. ಊರಿಗೆ ಹೊರಡುವುದು ಎಂಬ ವಿಚಾರವು ನಡೆದಾಗ, ಬಸ್ಸಿನಲ್ಲಿ ಇಲ್ಲವೆ ರೈಲಿನಲ್ಲಿ ಕುಳಿತ ಹಾಗೂ, ತಾನು ಆ ಊರನ್ನು ತಲುಪಿದ ಹಾಗೂ, ಅಲ್ಲಿ ತಮ್ಮವರು ಕರೆದೊಯ್ಯಲು ಬಂದ ಹಾಗೂ, ತಾನು ಅವರೊಡನೆ ಮಾತನಾಡಿದ ಹಾಗೂ ಹಲವಾರು ಸ್ಪಷ್ಟಾಸ್ಪಷ್ಟ ಚಿತ್ರಗಳು ಒಂದರ ಮುಂದೊಂದು ಕಾಣಿಸಿಕೊಳ್ಳಹತ್ತುವುವು. ಅಂದಿನವರಲ್ಲಿ ಈ ಶಕ್ತಿಯು ವಿಶೇಷ ಪ್ರಮಾಣದಲ್ಲಿತ್ತು. ಅವರು ಭಾಷೆಯನ್ನು ಕಂಡರು; ('ದದರ್ಶವಾಚಂ' ಋಕ್. ೧೦.೭೧.೪.) ನಿದ್ದೆಯಲ್ಲಿ ಕನಸು ಕಾಣುವಂತೆ, ಎಚ್ಚರಿದ್ದಾಗಲೆ ಕಣಸುಗಳನ್ನು ಇವರು ನೋಡ ಬಲ್ಲವರಾಗಿದ್ದರು. ಇಂದ್ರಾಗ್ನಿ-ವರುಣ-ಮಿತ್ರರೊಡನೆ ಮಾತನಾಡುತ್ತಿದ್ದರು. 'ಸಹಸ್ರಶೀರ್ಷಃ ಸಹಸ್ರಾಕ್ಷಃ ಸಹಸ್ರಪಾತ್' ಪುರುಷನನ್ನು ಇವರು ಕಂಡರು. ತತ್ತ್ವಜ್ಞಾನಾದಿ ಶಾಸ್ತ್ರಗಳ ಕೇವಲ ಅಮೂರ್ತ ವಿಚಾರಗಳಲ್ಲಿಯೆ ಆಸಕ್ತಿಯು ಹೆಚ್ಚಿದಂತೆ ಪಶ್ಯಂತಿವಾಣಿಗೆ ಮನುಷ್ಯನು ಎರವಾಗುತ್ತಾನೆ. ಪಶ್ಯಂತಿಯ ಪ್ರವೃತ್ತಿಯೆ ವಿಶೇಷವಾಗಿದ್ದವರು ಕೇವಲ ವಿಚಾರ ಪ್ರಧಾನವಾದ ವಿಷಯಗಳನ್ನು ಅಧ್ಯಯನಮಾಡಲು ಅಸಮರ್ಥರಾಗಿರುತ್ತಾರೆ. ಶರೀರ ಪ್ರಕೃತಿಯೂ ಚೆನ್ನಾಗಿದ್ದರೆ, ಇಂತಹರು ಮೈಕೈಯಿಂದ ಮುಟ್ಟಿ ತಟ್ಟಿ ಮಾಡಬೇಕಾದ ಕೆಲಸಗಳಲ್ಲಿ ಮೇಲ್ಮೆಯನ್ನು ಹೊಂದುತ್ತಾರೆ. ವಿಶೇಷ ತಾತ್ತ್ವಿಕ ವಿಚಾರಿಗಳೆನಿಸಿಕೊಳ್ಳುವುದಕ್ಕಾಗದಿದ್ದರೂ ಒಳ್ಳೆ 'ಆಚಾರಿ'ಗಳಾಗಬಹುದಾಗಿದೆ. ಕಲಾಕುಶಲರು, ಯಂತ್ರಶಿಲ್ಪವೆ ಮೊದಲಾದುವುಗಳಲ್ಲಿ ನಿಪುಣರು, ಎಂದೆನಿಸಬಹುದಾಗಿದೆ.

ವಿಚಾರಿಯು ಸಾರಗ್ರಾಹಿ. ಹೊರಮೈಯನ್ನು ಕಡೆಗಣಿಸಿ ಒಳಗಣ ತಿರುಳಿಗೆ ಹುರುಳಿಗೆ ಹಂಬಲಿಸುವುದು ಸಾರಗ್ರಾಹಿಯ ಸ್ವಭಾವವಾಗಿದೆ. ಆದರಿಂದ ಅವನು ಹೊರಗೆ ನೋಡುವುದಿಲ್ಲ. ಅವನು ನೋಡುವುದು ಒಳಗೆ, ಅವನ ಗುರಿ ಇದು ಅಲ್ಲ, ಅದು-ತತ್. ಈ ಬಗೆಯ ಇರುವಿನವರಿಗೆ ಕಾಣುವುದಿಲ್ಲ; ಹೆಚ್ಚಾಗಿ ಕೇಳ ಬರುವುದು. ಇವರು ಕಾಂಬುವುದಿಲ್ಲ. ಕಿವಿಯುವರು. ಮೊದಲನೆಯವರಿಗೆ ವಿಶ್ವದಲ್ಲಿ ಎಲ್ಲೆಲ್ಲೂ 'ಸಹಸ್ರಶೀರ್ಷಃ' ಪುರುಷನು ವ್ಯಾಪಿಸಿದ್ದುದು ಕಂಡಿತಾದರೆ, ಎರಡನೆಯವರಿಗೆ ವಿಶ್ವದ ಅಂತರಂಗದಲ್ಲಿ ನೆಲಸಿದುದೆಲ್ಲವೂ ಪರಮಾತ್ಮ ತತ್ತ್ವ, ಈ ವಿಶ್ವವು ಈಶನ ಆವಾಸ್ಯವೆಂಬ ಮಾತು ಕೇಳಿಸಿತು. ಇದುವೆ 'ಶ್ರುತಿ'. ಇದೆ 'ಮಧ್ಯಮಾ ವಾಣಿ'.

'ನನಗೆ ಇದು ಹೊಳೆಯಿತು'; 'ನನಗೆ ಇದು ಸರಿಯೆಂದು ಕಾಣುತ್ತದೆ'; ಎಂಬುದಿದು ಪಶ್ಯಂತಿಯ ನಿದರ್ಶಕ. 'ನನಗೆ ಎನಿಸುತ್ತದೆ'; 'ನನಗೆ ತಿಳಿಯಿತು' ಎಂಬುದು ಮಧ್ಯಮೆಯ ಸೂಚಕ. ಯಾವುದೊಂದು ಸಂಗತಿಯ ಜ್ಞಾನವು ಆಗುವುದಕ್ಕೆ ಇವೆ ಎರಡು ದಾರಿಗಳು. ಪ್ರತಿಯೊಬ್ಬರಿಗೂ ಕಾಣುವ ಅಥವಾ ಕೇಳುವುದರ ಸಂಪೂರ್ಣ ಅರಿವು ಇಲ್ಲದಿದ್ದರೂ ತಿಳಿವು ಉಂಟಾಗುವ ರೀತಿಯು ಇದೆಯೆಂಬುದು ಸುಳ್ಳಲ್ಲ. ನಾಟಕ, ಕಾದಂಬರಿಗಳೊಳಗಿನ ಸಂವಾದಗಳನ್ನು ಬರೆಯುವಾಗ ಆಯಾಪಾತ್ರಗಳು ಕಿವಿಯಲ್ಲಿ ನುಡಿದಂತೆ, ಆ ನುಡಿದುದನ್ನೆ ಬರೆದಂತೆ ಅನುಭವವಿದ್ದವರುಂಟು. ತಾವು ಬರೆಯುತ್ತಿರುವ ಗ್ರಂಥದ ಎಷ್ಟೋ ಪ್ರಕರಣಗಳು ಕಿವಿಯಲ್ಲಿ ಒಡನುಡಿದಂತೆ ಕೇಳಿ ಅವನ್ನೆ ಬಹುಮಟ್ಟಿಗೆ ಮುಂದೆ ಬರೆದು ಇಟ್ಟಂತೆ ಅನುಭವವಿದ್ದವರೂ ಉಂಟು. ಗಾಯಕರಿಗಂತೂ ಬೇರೆ ಬೇರೆ ರಾಗದ ಸ್ವರಮಾಲಿಕೆಯು ಕಿವಿಯಲ್ಲಿ ಯಾವಾಗಲೂ ಕುಣಿಯುತ್ತಿರಬೇಕಾಗುತ್ತದೆ. ಹಾಗಿಲ್ಲವಾದರೆ ಅವರು ಗಾಯಕರೆ ಆಗಲಾರರು. ಏಕೆಂದರೆ ಹಾಡಬೇಕಾದ ರಾಗವನ್ನು ಮೊದಲು ಕಿವಿಯಲ್ಲಿ ಆಲಿಸಿ, ಬಳಿಕ ಅದಕ್ಕೆ ಅನುಸರಿಸಿ ಮುಂದೆ ಅದನ್ನೇ ಹೇಳಬೇಕಾಗುತ್ತದೆ.

ಜನಗಳಲ್ಲಿ ಕೆಲರು ಕಿವಿಯ ಶಕ್ತಿ ವಿಶೇಷವಾಗಿರುವವರೂ, ಕೆಲರು ಕಣ್ಣಿನ ಕಸುವು ಹೆಚ್ಚಿರುವವರೂ ಇರುತ್ತಾರೆ. ಇದನ್ನು ಅವರ ಮಾತುಕಥೆಗಳಿಂದ ಚೆನ್ನಾಗಿ ಅರಿತುಕೊಳ್ಳಬಹುದಾಗಿದೆ. ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ವಾದ ಸಂವಾದಗಳಿಗಿಂತ ಕಣ್ಣೆದುರು ನಿಲ್ಲುವಂತಹ ವರ್ಣನೆಗಳೆ ವಿಶೇಷವಾಗಿವೆ.

ಕುಮಾರವ್ಯಾಸನ ಭಾರತದಲ್ಲಿ ಲಕ್ಷ್ಮೀಶನಂತಹ ವರ್ಣನಾ ಚಿತ್ರಗಳಿಲ್ಲ; ಅಲ್ಲಿ ಉತ್ತರಕುಮಾರನ ಮಾತು, ದ್ರೌಪದಿ-ಭೀಮರವಾದ, ಸಂವಾದಗಳು ಇದರ ಸೊಗಸೆ ಸೊಗಸು. ಅದರಿಂದ ಲಕ್ಷ್ಮೀಶನಿಗೆ ಕಣ್ಣೆ ಕಿವಿ, ಕುಮಾರವ್ಯಾಸನಿಗೆ ಕಿವಿಯೆ ಕಣ್ಣು ಆಗಿದ್ದಿತೆಂದು ಹೇಳಿದರೆ ವಿಶೇಷ ತಪ್ಪಾಗದು.

ಮನಸಿನ ಏಕಾಗ್ರತೆಯಲ್ಲಿ, ಧ್ಯಾನಾವಸ್ಥೆಯಲ್ಲಿ 'ಕಾಣುವ' ಅಥವಾ 'ಕೇಳುವ' ಅನುಭವವು, ಅವರವರ ತನ್ಮಯತೆಯ ಪ್ರಮಾಣದಲ್ಲಿ, ಸ್ವಲ್ಪ ಹೆಚ್ಚು ಕಡಿಮೆ ಪ್ರತಿಯೊಬ್ಬರಿಗೂ ಇರುತ್ತದೆ. ಉಪಾಸಕರು, ಭಕ್ತರು ಭಾವುಕರುಗಳಿಗೆ ಕನಸುಗಳೊ, ಕಣಸುಗಳೊ ಆಗಾಗ ಕಾಣಿಸಿಕೊಳ್ಳುತ್ತವೆಂಬುದು ಲೋಕವಿಶ್ರುತವಾದ ಸಂಗತಿ. ಆದರೆ ಅದೆಲ್ಲವೂ ಕೇವಲ ಭ್ರಮೆಯೆಂದು ಅಲ್ಲಗಳೆವವರೂ ಉಂಟು; ಅದರಂತೆ ಕಂಡುದೆಲ್ಲವೂ 'ಕಂಡಿತ' (ನಿಶ್ಚಯವಾಗಿಯೂ ಸತ್ಯ)ವೆಂದು ನೆರೆನಂಬುವವರೂ ಉಂಟು. ಆದರೆ ಸತ್ಯವು ಇವೆರಡೂ ಮತಗಳ ಸುವರ್ಣ ಮಧ್ಯದಲ್ಲಿದೆ. ಕಂಡಿತೆಂದು ಎನಿಸಿದುದನ್ನು ಬೇರೆ ಹಲವು ವಿಧಗಳಿಂದ ವಿಮರ್ಶಿಸಿದರೆ ಅದೆಲ್ಲವೂ ಕಂಡಿತ (ನಿಜ)ವೆಂದು ನಂಬುವುದು ಹಾನಿಗೆ ಕಾರಣವಾಗುವುದು. ಕಂಡುದು ಕಂಡಿತ (ನಿಜ)ವೆಂದು ಎರಡು ಮೂರು ತೆರನಾಗಿ, ಬೇರೆ ವಿಧದಿಂದ ಅನುಭವಕ್ಕೆ ಬಂದರೂ ಅದು 'ಕಾಕತಾಲ ನ್ಯಾಯ' ಎಂದು ಮುಂತಾಗಿ ಹೇಳಿ, ಅದು ಹುರುಳಿಲ್ಲದ ಹಳವಂಡವೆಂದು ಕಡೆಗಣಿಸುವುದು ಪ್ರಗತಿಗೆ ವಿರೋಧಕವಾಗಿದೆ. ಏಕೆಂದರೆ, ಈ ಬಗೆಯ ದುರಾಗ್ರಹದಿಂದ ಅಗಾಧವಾದ ಮನಸಿನ ಅಜ್ಞಾತ ರಾಜ್ಯದ ಸಂಶೋಧನವಾಗುವುದೇ ಅಶಕ್ಯವಾದೀತು. ಯುರೋಪ್, ಅಮೇರಿಕೆಯ ಆಧುನಿಕ ಮಾನಸ ಶಾಸ್ತ್ರಜ್ಞರೂ ಕೂಡ ಈ ದಿಕ್ಕಿನಲ್ಲಿ ವಿಚಾರಿಸತಕ್ಕ ಅದ್ಭುತ ಸಂಗತಿಗಳು ಹಲವು ಇವೆಯೆಂದು ಒಪ್ಪಿಕೊಳ್ಳುತ್ತಿರುವಾಗ, ನಮ್ಮಲ್ಲಿ ಹಲವರು ಈ ವಿಚಾರವನ್ನು ಹೀಗಳೆಯುವುದರಲ್ಲಿಯೇ ಹೆಮ್ಮೆಪಟ್ಟುಕೊಳ್ಳುತ್ತಿದ್ದಾರೆ.

ಅಯರ್ಲೆಂಡಿನ ಆಧುನಿಕ ಕವಿಯೂ ಅನುಭಾವಿಯೂ ರಾಷ್ಟ್ರಾಭಿಮಾನಿಯೂ ಆದ ಜಾರ್ಜರಸೆಲ್ಲ (A.E.) ಎಂಬವನು ಈ ವಿಚಾರದಲ್ಲಿ ತನ್ನ ಕೆಲವು ಅನುಭವಗಳನ್ನು The Candle of Vision ಎಂಬ ಹೊತ್ತಿಗೆಯಲ್ಲಿ ಬರೆದಿಟ್ಟಿದ್ದಾನೆ. ಒಂದೊಂದು ಅಕ್ಷರವನ್ನು ಸರಿಯಾದ ಕ್ರಮದಲ್ಲಿ ಉಚ್ಚರಿಸಿ ಧ್ಯಾನ ಮಾಡಿದರೆ ಅದಕ್ಕೊಂದು ವಿಶಿಷ್ಟ ಆಕಾರ ಮತ್ತು ಒಂದೊಂದು ಬಗೆಯ ಬಣ್ಣವಿರುವುದನ್ನು ಕಾಣಬಹುದೆಂದು ನಮ್ಮ ದೇಶದ ಆಗಮ, ತಂತ್ರಗ್ರಂಥಗಳಲ್ಲಿ ಕೆಲವೊಂದು ಉಲ್ಲೇಖಗಳು ದೊರೆಯುತ್ತವೆ. ಆ ಉಲ್ಲೇಖಗಳಂತೆ ಕೆಲವೊಂದು ಅನುಭವಗಳು ತನಗೂ ಉಂಟೆಂದು ಆತನು ಧೈರ್ಯವಾಗಿ ವಿವರಿಸಿ ಹೇಳಿದ್ದಾನೆ. 'ರಂ ಅಗ್ನಿ ಬೀಜಂ' ಎಂದು ತಂತ್ರಮಾರ್ಗಿಗಳು ಹೇಳುತ್ತಾರೆ. ಅದು ಸಂಪೂರ್ಣವಾಗಿ ಸರಿಯೆಂದೂ ತಾನೂ ಹಾಗೆಯೆ R ದ ಧ್ಯಾನದಲ್ಲಿ ಕಂಡಿರುವೆನೆಂದೂ ಏಈಯು ಹೇಳುತ್ತಾನೆ. ಈ ದೃಷ್ಟಿಯಿಂದ ಅಕ್ಷರಗಳಿಗೆ 'ವರ್ಣ'ಗಳೆಂಬ ಹೆಸರು ಸಾರ್ಥಕವಾಗಿದೆಯೆಂದು ಹೇಳಬೇಕಾಗುತ್ತದೆ.

ಭಾಷೆಯೊಳಗಿನ ಹಲವು ಪದಗಳು ಪಶ್ಯಂತಿವಾಣಿಯ ಫಲವಾಗಿವೆಯೆಂದು ಏಈಯ ಅಭಿಪ್ರಾಯ ವಾಗಿದೆ. ಕೆಂಪು ಎಂಬರ್ಥದ ಹಲವು ಮಾತುಗಳು ರಕಾರಯುಕ್ತವಾಗಿಯೆ ಇರುವುದು ಕೇವಲ ಘುಣಾಕ್ಷರ ನ್ಯಾಯವಾಗಿಲ್ಲವೆಂದು ಆತನು ಹೇಳುತ್ತಾನೆ. ರಕ್ತ, ರುಧಿರ, Red, Ruddy, ರುದ್ರ, ರಾಗ, ರಂಗು, ರತ್ನ, ಮುಂ. ಈ ಮಾತು ನಿಜವಿದ್ದರೆ, ರೋಷ, ರೊಚ್ಚು, ರೇಗು, ಮುಂತಾದವುಗಳಲ್ಲಿರುವ ರಕಾರವು ಅಲ್ಲಿರುವ ಕಿಡಿಯ-ಸಿಟ್ಟಿನ ಸೂಚಕವಾಗಿದೆಯೆಂದು ಹೇಳಬಹುದಲ್ಲವೆ? ಹಾಗಾದರೆ 'ಕೆಂಪು' ಎಂಬಲ್ಲಿ ರಕಾರವೇ ಇಲ್ಲವಲ್ಲ! ಈ ವಿಷಯದಲ್ಲಿ ಸಶಾಸ್ತ್ರೀಯವಾದ ಹೆಚ್ಚಿನ ಸಂಶೋಧನದ ಆವಶ್ಯಕತೆಯು ತುಂಬ ಇದೆ. ಏಕೆಂದರೆ ನಮ್ಮ ಹಳೆಯ ಗ್ರಂಥಗಳಲ್ಲಿಯೆ ಒಂದು ಅಕ್ಷರಕ್ಕೆ ಒಬ್ಬರು ಒಂದು ಬಣ್ಣ ಹೇಳಿದರೆ ಇನ್ನೊಬ್ಬರು ಇನ್ನೊಂದು ತೀರ ವಿರುದ್ಧವಾದ ಬಣ್ಣವುಂಟೆಂದು ಹೇಳುವರು! ಅವರಲ್ಲಿ ಯಾರ ದರ್ಶನ ಸರಿ, ಯಾರದು ತಪ್ಪು, ಎಂಬುದೆ ತಿಳಿಯದಾಗಿ 'ಇದೆಲ್ಲವೂ ಸಾಧಕರ ಭ್ರಮೆ; ಆದುದರಿಂದ ಎಲ್ಲವೂ ಸುಳ್ಳು' ಎಂದು ಹೇಳುವ ಚಪಲವುಂಟಾಗುವುದು.

ತನಗೆ ನಾದವು ಕೇಳಬರುತ್ತದೆ; ಬಣ್ಣಗಳು ಕಾಣುತ್ತವೆ, ಎಂದು ಮುಂತಾಗಿ ಹೇಳಿ, ಭಾವಿಕರಾದ ಅರೆಮರುಳರನ್ನು ತಮ್ಮ ಅನುಯಾಯಿಗಳನ್ನಾಗಿ ಮಾಡಿಕೊಳ್ಳಲಿಕ್ಕೊ ಅಥವಾ ಸ್ವಪ್ರತಿಷ್ಠೆಯನ್ನು ಬೆಳಸಿಕೊಳ್ಳಲಿಕ್ಕೊ

ಹವಣಿಸುವ ವ್ಯಕ್ತಿಗಳು ಸಮಾಜದಲ್ಲಿ ಅಲ್ಲಲ್ಲಿ ಇದ್ದಾರೆ. ಇಂತಹರ ಬಲೆಯಲ್ಲಿ ಸಿಲುಕಿ ಹಾನಿಗೆ ಈಡಾದವರೂ ಉಂಟು. ಅಥವಾ ಇಂತಹರ ಆತ್ಮವಂಚನೆಯನ್ನೊ ಅಥವಾ ಅವರ ಮಾಟ, ಮೋಸಗಳನ್ನೊ ಕಂಡು ಹೇಸಿ ಕೊಂಡವರೂ ಉಂಟು. ಆದುದರಿಂದ, ಈ ವಿಷಯದಲ್ಲಿ ಹೆಚ್ಚಿನ ವಿಚಾರ, ವಿಮರ್ಶೆಗಳನ್ನು ಮುಂದುವರಿಸುವುದೆ ಅಸಾಧ್ಯವಾದಂತಾಗಿದೆ.

'ಪಶ್ಯಂತಿ' ಎಂಬಂತೆ 'ಮಧ್ಯಮಾ' ಎಂಬ ಹೆಸರೂ ಅರ್ಥಪೂರ್ಣವಾಗಿದೆಯೆಂದು ನನಗೆ ಎನಿಸುತ್ತಿದೆ. ಹೃದಯವು 'ಮಧ್ಯಮಾ' ವಾಣಿಯ ಸ್ಥಾನವೆಂದು ಯೋಗ ಮತ್ತು ತಂತ್ರಗ್ರಂಥಗಳು ಏಕಕಂಠದಿಂದ ಹೇಳುತ್ತವೆ. ಹೃದಯದ ವಾಣಿಯೆಂದರೆ ನಾವು ಈ ಮೊದಲು ವಿವರಿಸಿದ 'ರಾಗ'ಯುಕ್ತವಾದ ಪ್ರಾಣಿಮಾತ್ರಗಳಿಗೆ ಸಹಜವಾದ ಭಾಷೆ. ಆದುದರಿಂದ, ಇದನ್ನು Instinctive Language ಅಥವಾ Language of Instincts ಎಂದು ಹೇಳಲು ಅಡ್ಡಿಯಿಲ್ಲ. ಇದು ಸಹಜವಾದುದು; ಎಂದರೆ ಹುಟ್ಟಿನೊಡನೆಯೆ ಬಂದುದು. ಆದುದರಿಂದ 'ಭಾಷೆ ಹುಟ್ಟಿತು' ಎಂದು ಹೇಳುವುದು ಅಷ್ಟು ತರ್ಕಶುದ್ಧವಾದ ಮಾತಲ್ಲ. ಪ್ರಾಣಿಗಳೊಡನೆ ಅದೂ ಹುಟ್ಟಿಯೆ ಬಿಟ್ಟಿದೆ. ಆದಕಾರಣ, ಹೀಗೆ ನೋಡಿದಲ್ಲಿ ಭಾಷೆಯು ಇಲ್ಲದ ಕಾಲವೆ ಇಲ್ಲ. 'ದೇವೀಂ ವಾಚಮ್ ಅಜನಯಂತ ದೇವಾಃ ತಾಂ ವಿಶ್ವರೂಪಾಃ ಪಶವಃ ವದಂತಿ' ಎಂದು ಋಗ್ವೇದವು ಹೇಳುವುದು ಒಂದರ್ಥದಿಂದ ತುಂಬ ಸರಿಯಿದೆ. (೭.೧೦೦-೧೧). ಜೈನ ವೈಯಾಕರಣಿಗಳು ವರ್ಣಿಸುವ 'ಸರ್ವ ಭಾಷಾಮಯೀ ಭಾಷಾ' ಅಥವಾ 'ಸರ್ವ ಭಾಷಾ ಸರಸ್ವತಿ' ಎಂದರೂ ಇದೆ ಮಧ್ಯಮಾ ವಾಣಿಯೆ ಆಗಿದೆ. ಇದು ಎಲ್ಲರಿಗೂ ಮಧ್ಯಮವಾಗಿರುವ ('Medium') ಭಾಷೆ. ಛಾಂದೋಗ್ಯದಲ್ಲಿ

> 'ಗಾಯತ್ರೀ ವಾ ಇದಂ ಸರ್ವಂ ಭೂತಂ ಯದಿದಂ ಕಿಂಚ ವಾಕ್ ವೈ ಗಾಯತ್ರೀ;
> ವಾಕ್ ವಾ ಇದಂ ಸರ್ವಂ ಭೂತಂ ಗಾಯತಿ';

ಎಂದು ವರ್ಣಿಸಿದುದು ಈ ವಾಣಿಯನ್ನಲ್ಲದೆ ಬೇರೆಯಲ್ಲ. 'ಶಿಶುರ್ವೇತ್ತಿ ಪಶುರ್ವೇತ್ತಿ' ಎಂದು ಮುಂತಾಗಿ ಜಗತ್ತಿನ ಪ್ರಾಣಿಮಾತ್ರಗಳಿಗೆಲ್ಲ ತಿಳಿವ ನುಡಿಯೆಂದು ವರ್ಣಿಸಲ್ಪಡುವ ಸಂಗೀತದ ಉಗಮವು ಮಧ್ಯಮಾ ವಾಣಿಯಲ್ಲಿಯೆ ಉಂಟೆಂದು ಹಿಂದೊಮ್ಮೆ ಸೂಚಿಸಿದ್ದಾಗಿದೆ. (ಪು. ೮. ೯, ೧೫).


ಸಾಮಾನ್ಯವಾಗಿ ಜೀವನದ ಎಲ್ಲ ಅಂಗಗಳಲ್ಲಿ ಸರಿಹೋಗುವ ವಿಕಾಸವಾದವು(Theory of Evolution), ಭಾಷೆಯ ವಿಚಾರದಲ್ಲಿಯೂ ಏಕೆ ಸರಿಯಿರಲಾರದು? ಕೆಲವು ಆಧುನಿಕ ಭಾಷಾ ಶಾಸ್ತ್ರಜ್ಞರು, ಹಲವು ಪ್ರಾಣಿಗಳ (ಕೂಗು, ಕಿರಚಾಟಗಳು) ಭಾಷೆಯ ತಳಹದಿಯ ಮೇಲೆಯೆ ಮಾನವನ ಭಾಷೆಯು ನಿಂತಿದೆಯೆಂದು ಪ್ರತಿಪಾದಿಸಿದ್ದೂ ಉಂಟು. ಮನುಷ್ಯನು ತನ್ನ ಮೊದಲಿನ ಆ ಹುಟ್ಟು-ನುಡಿಯನ್ನು ಇನ್ನೂ ಪೂರ್ಣ ಮರೆತಿಲ್ಲ. ಸ್ವಲ್ಪ ಅವನನ್ನು ತಡವಿ, ಆತನ ಮನವನ್ನು ತಟ್ಟಿ ಮುಟ್ಟಿ ನೋಡಿರಿ. ಒಳಗೆ ಆ ಮೂಲಮಾನವನು ಹುದುಗಿಕೊಂಡಿರುವುದು ಕಂಡುಬರುವುದು. ಆತನ 'ರಾಗ'ಯುಕ್ತ ಸೊಲ್ಲು ಕೇಳಬರುವುದು. ಆಽ, ಏ, ಹೋ, ಲಲಲಽ ಎಂದು ಮುಂತಾಗಿ ಮೂಲ ಭಾಷೆಯನ್ನೆ ಆಡಲಾರಂಭಿಸುವನು! ಮಾನವರ ಮಾತುಗಳಲ್ಲಿ ಈಗಲೂ ಉಳಿದುಕೊಂಡಿರುವ ಅನೇಕ ನುಡಿಗಳು, ಪ್ರಾಣಿಗಳ ಕೂಗಿನ ಸಂಸ್ಕೃತರೂಪಗಳೆಂದು ಸಿದ್ಧಪಡಿಸುವ ಪ್ರಯತ್ನವನ್ನು ಕೆಲವು ವಿದ್ವಾಂಸರು ನಡೆಸಿದ್ದಾರೆ. ಆ ರೀತಿಯಲ್ಲಿ ಕಾ-ಕರ್ ಎಂಬೀ ಬಗೆಯ ಕೂಗಿನ ಮಾರ್ಪಟ್ಟ ರೂಪವೆ 'ಕರೆ' ಎಂಬುದಾಗಿ ಹೇಳಬಹುದಾಗಿದೆ. ಈ ಕಾರಣದಿಂದಲೆ, ಈ ಬಗೆಯ ಭಾಷೆಗೆ ಪುರಾತನರು 'ಮಧ್ಯಮಾ ವಾಣಿ' ಎಂದು ಇಟ್ಟ ಹೆಸರು ತಕ್ಕುದಾಗಿದೆಯೆಂದು ಹೇಳಬೇಕಾಗುತ್ತದೆ.

ಹೃದಯದ ಊರ್ಮಿಯು ತಾನೆ ತಾನಾಗಿ ಕುಣಿಯ ಹತ್ತಿದಾಗ ಹಲವರಿಗೆ ಅದಕ್ಕೆ ಅನುಗುಣವಾದ ಚಿತ್ರಗಳು ಕಣ್ಣೆದುರು ನಿಲ್ಲುವುವು. ಇನ್ನು ಕೆಲವರಿಗೆ, ಆಗ ಶಬ್ದಲಹರಿಯು ಕಿವಿಯಲ್ಲಿ ನುಡಿದು, ಬಾಯಿಂದ ಹೊರಹೊಮ್ಮಲಾರಂಭಿಸುವುದು. ಮೊದಲನೆಯ ಅವಸ್ಥೆಗಿಂತ, ಎರಡನೆಯದರಲ್ಲಿ ಬುದ್ಧಿಯ ಕೈವಾಡವು ಸ್ವಲ್ಪ ಹೆಚ್ಚಾಗಿರುತ್ತದೆ. ಆದರೂ ಇವೆರಡೂ ಭಾಷೆಗಳು (ಪಶ್ಯಂತಿ ಮತ್ತು ಮಧ್ಯಮಾ) ಈ ಅವಸ್ಥೆಯಲ್ಲಿ ಕೇವಲ ವೈಯಕ್ತಿಕವಾದುವು; ಸ್ವಂತದ ಮಟ್ಟಿನವು ಎಂದು ಹೇಳಲು ಅಡ್ಡಿಯಿಲ್ಲ. ಇನ್ನುಳಿದವರಿಗೂ ಭಾಗವಹಿಸಲು

ಯೋಗ್ಯವಾಗಬೇಕಾದರೆ ಇವುಗಳನ್ನು ಆಡಿತೋರುವ ಅಥವಾ ತಿಳಿಸಿ ಹೇಳುವ ವಾಗ್‌ವೈಖರಿ ಬೇಕು. ಇದುವೆ 'ವೈಖರೀ ವಾಣಿ'. ವೈಖರಿಯಲ್ಲಿ ಬುದ್ಧಿ ವೈಭವವೆ ವೈಭವ. ಇಲ್ಲಿ ಭಾವನೆಗೆ ಗೌಣಸ್ಥಾನ. ಅದು ಬುದ್ಧಿಯ ಸಂಕೇತದಿಂದಲೆ ತನ್ನ ಕಾರ್ಯವನ್ನು ಸಾಧಿಸಬೇಕಾಗುತ್ತದೆ. 'ಸಂಕೇತ ವಶಾತ್ ಭಾಷಾ' ಎಂಬುದು ಇಲ್ಲಿ ಸತ್ಯ.

ರೂಢಿಯ ಮೂಲಕವಾಗಿ ಅರ್ಥಶಕ್ತಿಯನ್ನು ಪಡೆದ ಶಬ್ದಗಳು, ಸಂಕೇತಗಳು ಹೆಚ್ಚಾದಂತೆ ಆ ಭಾಷೆಯೊಳಗಿನ ಭಾವಸಾಮರ್ಥ್ಯವು ಕುಗ್ಗುತ್ತ ಹೋಗುವುದು. ಯಾವುದೊಂದು ಭಾಷೆಯೊಳಗಿನ ಕಾವ್ಯಶಕ್ತಿಯು, ಆ ಭಾಷೆಯೊಳಗಿನ ಸಹಜ ಶಬ್ದಗಳ-ಹುಟ್ಟುನುಡಿಗಳ ಪ್ರಮಾಣವನ್ನು ಅವಲಂಬಿಸಿರುತ್ತದೆ. ಕಾಳಿದಾಸನು ತನ್ನ ಮಹಾಕಾವ್ಯದ ಆದಿಯಲ್ಲಿ, ಪಾರ್ವತೀ-ಪರಮೇಶ್ವರರಂತೆ ಅಭಿನ್ನವಾಗಿ ಒಂದಿದ, ಹೊಂದಿದ ನಾದ (ವಾಕ್) ಮತ್ತು ಅರ್ಥಗಳ ಅಕೃತ್ರಿಮ ಸಂಬಂಧವುಳ್ಳ ಶಬ್ದ ಸಿದ್ಧಿಯು ತನಗೆ ಲಭಿಸಲಿ, ಎಂದು ಪ್ರಾರ್ಥಿಸಿದ್ದು ನಿರರ್ಥಕವಲ್ಲ. ಏಕೆಂದರೆ ಕಾವ್ಯ ಜೀವಾಳವೆ ಈ ಭಾಷೆ.

ಆದುದರಿಂದ, ಕನ್ನಡವೂ ತನ್ನೊಳಗಿನ ಕಾವ್ಯಶಕ್ತಿಗೆ ಎರವಾಗಬಾರದಾಗಿದ್ದರೆ, ಕನ್ನಡ ಕವಿಗಳೂ ಸಾಹಿತಿಗಳೂ ಹುರುಳುಗೆಟ್ಟು ಹಿಂದೆ ಬೀಳುತ್ತಿರುವ ಕನ್ನಡದೊಳಗಿನ ಚೊಕ್ಕಟವಾದ ಹುಟ್ಟುನುಡಿಗಳನ್ನು ಮತ್ತೆ ಬಳಕೆಗೆ ತರಬೇಕು. ಅಲ್ಲದೆ, ಇದೇ ಬಗೆಯ ಅಚ್ಚಕೆಚ್ಚಿನ ಅಂದಚೆಂದದ ಹೊಸ ನುಡಿಗಳನ್ನೂ ನೇರ್ಪಡಿಸಿಕೊಳ್ಳಬೇಕು. ಇಂದು ಕನ್ನಡವು ಬೆಳೆಯುತ್ತಿರುವುದೆಂಬ ಗ್ರಹಿಕೆಯಿದ್ದರೆ ಅದು ಮಬ್ಬು. ಏಕೆಂದರೆ ಎರವಲು ಸಿರಿಯಲ್ಲ; ಬಾವು ಮೈಯಲ್ಲ. ಒಂದು ಸಾಲ; ಇನ್ನೊಂದು ಅನಾರೋಗ್ಯ. ರೋಗ-ಸಾವಿನ ದಾರಿ. ಅನುದಿನವೂ ಹೊರಗಿನ ನೆತ್ತರವನ್ನು ಮೈಯಲ್ಲಿ ಚುಚ್ಚಿಸಿಕೊಂಡು ಬದುಕುತ್ತಿದ್ದರೆ ಅದು ಬದುಕೆ? ಜೀವಂತತನದ ಲಕ್ಷಣವೆ? ತನಗೆ ಬೇಕಾದ, ತನ್ನ ಬೆಳವಿಗೆ ಬೇಕಾಗುವ ನೆತ್ತರವನ್ನು ತಾನೆ ಉಂಟುಮಾಡಿಕೊಳ್ಳುವ ಪ್ರಾಣಿಯೆ ನಿಜವಾದ ಜೀವಂತ ಪ್ರಾಣಿಯಷ್ಟೆ. ಕನ್ನಡ ಬರೆಹಗಾರರು ತಮ್ಮ ಭಾವನೆ ಮತ್ತು ವಿಚಾರಗಳನ್ನು ವ್ಯಕ್ತಪಡಿಸಲು ತಕ್ಕುವಾದ ಶಬ್ದಗಳನ್ನು ತಮ್ಮ ಸೊಲ್ಲಿನಿಂದಲೆ ನೇರ್ಪಡಿಸಿಕೊಳ್ಳಲು ಎಂದಿನ ತನಕ ತಕ್ಕವರಾಗುವುದಿಲ್ಲವೊ ಅಲ್ಲಿಯ ತನಕ ಕನ್ನಡದ ಬೆಳವಣಿಗೆಯಾಗುತ್ತದೆಯೆಂಬ ಮಾತು ಬರಿ ಭ್ರಾಂತಿ, ಕೇವಲ ಆತ್ಮವಂಚನೆ ಎಂದು ಹೇಳಿದರೆ ತಪ್ಪೆ? ಶಾಕ್ತ ಮಾರ್ಗದಲ್ಲಿ ಶಬ್ದವು ನಾದ-ಬಿಂದು-ಕಲಾಯುಕ್ತವಾದುದೆಂದು ಹೇಳುವರು. ಇದನ್ನೆ, ರೂಪ, ಆಕಾರ ಮತ್ತು ವಸ್ತುವೆಂದು ಅಥವಾ ಶಬ್ದ (ನಾದ), ಅರ್ಥ ಮತ್ತು ವಸ್ತುವೆಂದು ಸ್ವಲ್ಪ ಬದಲಿಸಿಕೊಂಡು ಹೇಳಬಹುದು. ಪಶ್ಯಂತಿ, ಮಧ್ಯಮಾ ಮತ್ತು ವೈಖರಿಗಳು ಪರಿವಿಡಿಯಿಂದ ಅವಕ್ಕೆ ಸಂಬಂಧಿಸಿವೆ. ತಾತ್ವಿಕ ರೀತಿಯಿಂದ ಇಚ್ಛಾ, ಜ್ಞಾನ, ಕ್ರಿಯೆಗಳೆಂದು ಇವುಗಳಿಗೆ ಕರೆಯಬಹುದು. ಕಲಾ, ಕ್ರಿಯಾ, ವಸ್ತು ಅಥವಾ ವೈಖರೀ ರೂಪದಲ್ಲಿ ಅದು ನಮಗೆ ಸ್ಪಷ್ಟವಾಗಿ ಕಾಣಿಸಿಕೊಳ್ಳುವುದು.



ಕಾಣುವುದೆಲ್ಲರ ಬೇರುಗಳು, ಕಾಣದ ಎಡೆಯಲ್ಲಿ ಎಲ್ಲಿಯೊ ಹುದುಗಿಕೊಂಡಿರುತ್ತವೆಂಬ ಒಂದು ದೃಢವಾದ ನಂಬುಗೆಯು ಪುರಾತನರಲ್ಲಿ ನೆಲೆಗೊಂಡಿದ್ದಿತು. ಅದಕ್ಕಾಗಿಯೆ ವ್ಯಕ್ತವಾದ ಮೂರ್ತಸೃಷ್ಟಿಗೆ ಅವ್ಯಕ್ತವಾದ ಅಮೂರ್ತವಾದ ಆದಿಕಾರಣವೊಂದುಂಟೆಂಬುದು ಅವರ ನೆರೆನಂಬುಗೆ. ನುಡಿಯ ವಿಚಾರದಲ್ಲಿಯೂ ಈ ನೆಚ್ಚಿಕೆಯ ಪ್ರಭಾವವು ಕಂಡುಬರುತ್ತದೆ. ಪಶ್ಯಂತಿ, ಮಧ್ಯಮಾ, ವೈಖರಿಗಳಿಗೆ ಮೂಲವಾದ ಇನ್ನೊಂದು ನುಡಿಯುಂಟೆಂದು ಕಲ್ಪಿಸಿ ಅದಕ್ಕೇ 'ಪರವಾಣಿ' ಎಂದು ಕರೆದಿದ್ದಾರೆ.

> "ಚತ್ವಾರಿವಾಕ್ ಪರಿಮಿತಾಪದಾನಿ; ತಾನಿ ವಿದುಃ ಬ್ರಾಹ್ಮಣಾ ಯೇ ಮನೀಷಿಣಃ;
> ಗುಹಾತ್ರೀಣಿ ನಿಹಿತಾ ನೇಙ್ಗಯಂತಿ;
> ತುರೀಯಂ ವಾಚೋ ಮನುಷ್ಯಾ ವದಂತಿ"

(೧.೧೬೪.೪೫). ಸೊಲ್ಲಿನಲ್ಲಿ ನಾಲ್ಕು ಬಗೆ. ಅದನ್ನು ಬಲ್ಲಿದರಾದ ಬಲ್ಲವರೆ ಬಲ್ಲರು. ಆ ನಾಲ್ಕರಲ್ಲಿ ಮೂರು ಹೊರಗೆ ಕಾಣವು; ಗುಟ್ಟಿನವು. ನಾಲ್ಕನೆಯದು ಮನುಷ್ಯರ ನಾಲಗೆಯಲ್ಲಿ ನಲಿಯುತ್ತಿದೆ; ಇದೆ ವೈಖರಿ; ಎಂದು ಋಗ್ವೇದದಲ್ಲಿ ಸೂಚಿತವಾಗಿದೆ. ಪರವಾಣಿಯು 'ನಾದಬಿಂದು-ಕಲಾತೀತ'; 'ಭಾವನಾಗಮ್ಯ'; ಕೇವಲ ತಾತ್ವಿಕ; ಆದುದರಿಂದಲೆ ಅವ್ಯವಹಾರ್ಯ 'ಕೂಟಸ್ಥ'. 'ಮೂಲಾಧಾರದಲ್ಲಿರುವಂತಹದು'. 'ಚಿತ್‌ರೂಪ' ಮತ್ತು ಭೂಮಿತಿ (Geometry) ಯೊಳಗಿನ ಬಿಂದುವಿನಂತೆ ಇದೆಯೆಂದರೆ ಇದೆ; ಇಲ್ಲವೆಂದರೆ ಇಲ್ಲ. ಆದುದರಿಂದ ಇದು 'ಅವ್ಯಾಕೃತ' ಎಂದರೆ ಪೃಥಕ್ಕರಿಸಲು ಬಾರದಂತೆ ಇರುವುದು. 'ಅವಿಕಾರಿ'. 'ಅವಿಚಲಿತ'. 'ಅನುಪಜನ್ಯ'; ಎಂದರೆ ಸ್ವಯಂಭೂ, ಇನ್ನೊಂದರಿಂದ ಹುಟ್ಟಿದ್ದಲ್ಲ. 'ಅನಪಾಯ', ಎಂದರೆ ನಾಶರಹಿತ; ಆದುದರಿಂದ 'ನಿತ್ಯ.' ಈ ಅರ್ಥದಿಂದಲೆ 'ಅಕ್ಷರ' ಎಂಬ ಹೆಸರು ಸಾರ್ಥಕವಾಗಿದೆ. ಇದು ಕೇವಲ ತಾತ್ವಿಕ; ಎಂದರೆ ಸಾರರೂಪ-Spirit. ಆದುದರಿಂದಲೆ ಇದನ್ನು ಭಕ್ತರೂ ಭಾವುಕರೂ ಎಲ್ಲರೂ 'ಶಕ್ತಿ' ಸ್ವರೂಪದಲ್ಲಿ ಕಲ್ಪಿಸಿ ಆರಾಧಿಸುವರು. ಶಬ್ದಕ್ಕೊಂದು ಶಕ್ತಿಯುಂಟೆಂದು ಈ ಮೊದಲು ಹೇಳಿದೆಯಷ್ಟೇ. ಆ ಎಲ್ಲ ಶಕ್ತಿಯ ಆಗರವು ಇದು; ಮಹಾಶಕ್ತಿ. ಲೋಕಹೃದಯಗಳನ್ನು 'ಚೇತಯಂತೀ' ಆದಿಶಕ್ತಿ. ಇವಳೆ 'ಸರ್ವಾರ್ಥ ಧಾತ್ರೀ'; 'ಪ್ರಾಣದಾ'; 'ಪ್ರಾಣರೂಪಿಣೀ'; 'ವಿಶ್ವಮೋಹಿನೀ'; 'ಗಾಯತ್ರಿ'; ಎಂದು ಮುಂತಾಗಿ ಇವಳ ಸ್ವರೂಪ ವರ್ಣನೆಯನ್ನು ಮಾಡುವುದುಂಟು.

'ವಿಶ್ವತೋ ಮುಖೀ' ಎಂದು ವರ್ಣಿಸುವರಾದರೂ ಈ ಶಕ್ತಿಯನ್ನು ಎರಡು ಅಂದಲ್ಲಿ ಕಾಣುವುದೆ ವಾಡಿಕೆಯಾಗಿದೆ. (೧) 'ಕಲಾವತೀ' 'ಕಲಾಪೆ'ಯಾಗಿರುವ 'ಸತ್ಯಜ್ಞಾನಾನಂದ ರೂಪಿ'ಯಾದ 'ಭಾಷಾರೂಪ' 'ಸರಸ್ವತೀ' ಎಂಬುದು ಒಂದು ಅಂದ. (೨) 'ವೀರಮಾತೆ' 'ಪ್ರಾಣದೆ' ಎಂದೆನಿಸುವ ಎಲ್ಲರ ಅಮ್ಮ-ಜಗದಂಬೆಯ ಇನ್ನೊಂದು ಅಂದ. 'ಚಿದಗ್ನಿಕುಂಡ ಸಂಭೂತೆ', 'ಪರಂಜ್ಯೋತಿಃ ಸ್ವರೂಪಿಣೀ' 'ತೇಜಸ್ವಿನೀ'ಯೆಂಬ ಮಾತು ಇಬ್ಬರಿಗೂ ಸರಿಹೋಗುವುದಾದರೂ ಇಬ್ಬರ ಇರುವು ಬೇರೆ; ಇಬ್ಬರ ಬೆಡಗೂ ಬೇರೆ. ರಸವತಿಯು ಸರಸ್ವತಿ. ಎಲ್ಲ ರಸಗಳ ಅಧಿದೇವಿ. ಸರಸ್ವತಿಯು ಎಲ್ಲ ರಸಗಳ ಅಧಿದೇವಿಯಾದರೂ ವೀರದ ಅಧಿದೇವತೆ 'ಶಕ್ತಿ'; ದುರ್ಗೆಯೇ.? ಸರಸ್ವತಿಯನ್ನು ಸೌಂದರ್ಯದ ಅಧಿಷ್ಠಾತ್ರಿಯೆಂದೂ, ಶಕ್ತಿಯನ್ನು 'ಸರ್ವಲೋಕ ವಶಂಕರೀ' ಎಂದೂ ಲೋಕವು ಕಾಣುವುದು. ನವಿಲು ಸರಸ್ವತಿಯ ವಾಹನ. ನವಿಲು ಚೆಲುವಿನ ಪ್ರತೀಕ. ಸೌಂದರ್ಯದಲ್ಲಿ ನವಿಲನ್ನು ಮೀರುವ ಪ್ರಾಣಿ ಯಾವುದು? ಸೌಂದರ್ಯದ ಅಧಿದೇವಿಯೆನಿಸುವ ಸರಸ್ವತಿಯ ವಾಹನವು ನವಿಲು ಎಂಬುವಲ್ಲಿರುವ ಔಚಿತ್ಯವನ್ನು ಎಷ್ಟು ಹೇಳಿದರೂ ತೀರದು. ಅದರಂತೆ ದುರ್ಗೆ-ಶಕ್ತಿಯ ವಾಹನವೂ ಅಷ್ಟೇ ಉಚಿತವಾಗಿದೆ. ದುರ್ಗೆಯು ಸಿಂಹವಾಹಿನಿ. ಪರಾಕ್ರಮದಲ್ಲಿ ಸಿಂಹಕ್ಕೆ ಸಮಾನವಾದ ಪ್ರಾಣಿಯು ಅದಾವುದು? ಇಂತಿವು ಎರಡು ನಿಲುವುಗಳು. ಒಂದು, ಆನಂದಕ್ಕೆ ಕಾರಣವಾಗುವ ಸೌಂದರ್ಯ, ರಸ-ಸ್ವರೂಪ, ಇನ್ನೊಂದು ಅಭೀಷ್ಟಸಿದ್ಧಿಗೆ ನೆರವಾಗುವ ಶಕ್ತಿ, ಪರಾಕ್ರಮ ರೂಪ. ಒಂದು ಜ್ಞಾನಶಕ್ತಿ. ಇನ್ನೊಂದು ಕ್ರಿಯಾಶಕ್ತಿ.

ಜ್ಞಾನವು ತಿಳಿ; ಬಿಳಿ. ಸರಸ್ವತಿಯು ಧವಲಾಂಗಿ. ಕ್ರಿಯೆ-ಕೆಲಸ-ದುಡಿಮೆಯಲ್ಲಿ ನೆಲದ ಮೇಲಣ ಹುಡಿಯು ಮೈಗೆ ಅಂಟಿಕೊಳ್ಳುವುದು ಅನಿವಾರ್ಯ. ಶಕ್ತಿದೇವಿಯು ಶ್ಯಾಮಲಾಂಗಿ. ಸರಸ್ವತಿ ವೀಣಾಪಾಣಿ. ಶಕ್ತಿಯು ಕರಾಲ ಖಡ್ಗಧಾರಿ. ಸರಸ್ವತಿಯನ್ನ ಮೆಚ್ಚಿಸಲು ಧ್ಯಾನಧಾರಣಾದಿ ತಪಸ್ಸು ಸಾಕು. ಶಕ್ತಿಗೆ ಪ್ರಸಂಗದಲ್ಲಿ ನರಬಲಿಯೂ ಬೇಕು. ಸಾಹಿತ್ಯ ಸಂಗೀತಾದಿ ಕಲೋಪಾಸಕರೂ, ಜ್ಞಾನಮಾರ್ಗಿಗಳೂ ಸರಸ್ವತಿಯ ಸೇವಕರು. ಕರ್ಮಾಚಾರಿಗಳು, ಮಂತ್ರ-ತಂತ್ರ ಮಾರ್ಗಿಗಳು, ಇಂದ್ರಜಾಲ ಮಹೇಂದ್ರಜಾಲಾದಿ ಸಿದ್ಧಿಗಳ ಹಂಬಲಿಗರು, ಹೆಣ್ಣು ಹೊನ್ನು ಮಣ್ಣಿಗಾಗಿ ಬೆದೆ ಬೆದೆ ಬೆಂದು ಬಾಯ್ಬಿಡುವವರು, ಇವರಿಗೆಲ್ಲ ಶಕ್ತಿಯೆ ಕುಲದೈವತ. ಇವರೆ ಏಕೆ? ಲೋಕವೆಲ್ಲವೂ ಶಕ್ತಿಯ ಭಕ್ತರಿಂದಲೆ ತುಂಬಿದೆ. ಏಕೆಂದರೆ: ಸಂಸಾರದಲ್ಲಿ ಅಭೀಷ್ಟ ಸಿದ್ಧಿಯ ಹಾರೈಕೆ, ಆವಶ್ಯಕತೆಯೆ ಇಲ್ಲದ ಮಾನವನುಂಟೆ? ಎಲ್ಲರೂ ಒಂದಿಲ್ಲೊಂದು ಬಗೆಯ ನೋವಿನಿಂದ ನರಳುವವರೇ. ಆದುದರಿಂದ, ಈ ಮಹಾತಾಯಿಯ ನೋಹಿ (ವ್ರತಿ)ಗಳಲ್ಲದವರೆ ವಿರಳ. ಸರಸ್ವತಿಯನ್ನು ಮರೆತವರುಂಟು. ಶಕ್ತಿಯನ್ನು ನೆನೆಯದವರಿಲ್ಲ.

ಇಂತಿದು ನುಡಿಯ ಜೀವಾಳವು. ಇದು ಲೋಕದ ಜೀವಾಳವನ್ನು ತನ್ನೆಡೆಗೆ ಎರಡು ಅಂದದಿಂದ ಸೆಳೆದುಕೊಂಡಿದೆ. ಸೊಲ್ಲು ಲೋಕವನ್ನಾಳುತ್ತಿದೆ. ಒಂದು ನಾಡಿನ ಸೊಲ್ಲು ಎಂತಹದೊ ಅಂತಹರು ಅಲ್ಲಿಯ ಜನಗಳು. ಒಬ್ಬ ಜರ್ಮನ್ ತತ್ವಜ್ಞನು ಹೀಗೆಯೆ ಹೇಳಿದ್ದಾನೆ:

'Men are formed by Language, rather than lanuguage by men'

(Fichte).

ಈ ದೃಷ್ಟಿಯಿಂದ ಸೊಲ್ಲೆ ಲೋಕದ ತಾಯಿ, ಎಂಬುದು ಸುಳ್ಳಲ್ಲ. ಹೀಗಿರುವಾಗ ತಮ್ಮ ತಾಯನ್ನು ಕಡೆಗಣಿಸಿದವರಿಗೆ ಲೋಕದಲ್ಲಿ ಇಂಬೆಲ್ಲಿಯದು?

ನುಡಿಯ ಏಳ್ಗೆಯಾಗದೆ ನಾಡಿನ ಏಳ್ಗೆಯಿಲ್ಲ. ಯಾವಾಗಲೂ ನಮ್ಮ ಭಾಷೆಯ ವಿಸ್ತಾರದಷ್ಟೆ, ನಮ್ಮ ಹೃದಯದ ವಿಕಾಸ; ಬುದ್ಧಿಯ ವಿಸ್ತಾರ. ನಮ್ಮ ಅವ್ಯಕ್ತ ಮನಸ್ಸಿನ ವ್ಯಕ್ತರೂಪವೆ ಭಾಷೆ. ಯಾವನೊಬ್ಬನ ನುಡಿಯ ಮೇಲಿಂದ ಆತನ ನಡೆಯನ್ನು ಗೊತ್ತುಪಡಿಸಬಹುದಾಗಿದೆ. ಒಂದು ನಾಡಿನ ನುಡಿಯ ಮೇಲಿಂದ ಆ ನಾಡಿನ ಸಂಸ್ಕಾರವೆಂತಹದು, ಸಂಸ್ಕೃತಿಯು ಯಾವ ಮಟ್ಟದ್ದು, ಅದರ ಭಾವನಾಶಕ್ತಿಯ ಆಳವೆಷ್ಟು, ವಿಚಾರಶಕ್ತಿಯ ವಿಸ್ತಾರವೆಷ್ಟು, ಎಂದು ಮುಂತಾದ ಸಂಗತಿಗಳನ್ನು ಅರಿತುಕೊಳ್ಳಬಹುದು. ಒಂದು ನಾಡಿನ ನುಡಿಯೆಂದರೆ ಆ ನಾಡಿಗರ ಆತ್ಮಶಕ್ತಿಯು ನಿರ್ಮಿಸಿದ ಒಂದು ಮಹಾಕಾವ್ಯವೆಂದೂ ಹೇಳಬಹುದು.

ಪ್ರತಿಯೊಂದು ನಾಡಿನವರೂ ತಮ್ಮ ನುಡಿಯು ನಿಃಸತ್ವವಾಗಬಾರದೆಂದು ಎಡೆಬಿಡದೆ ದುಡಿಯುತ್ತಿದ್ದಾರೆ; ಹುರುಳುಳ್ಳದ್ದಾಗಬೇಕೆಂದು ಹೆಣಗುತ್ತಲಿದ್ದಾರೆ. ಶಬ್ದ ಸಂಪತ್ತು ಹೆಚ್ಚಾಗಬೇಕೆಂದು ಬಗೆಬಗೆಯ ಪ್ರಯೋಗಗಳನ್ನು ನಡೆಸಿದ್ದಾರೆ: ಇಂಗ್ಲಿಷಿನಲ್ಲಿ ಜೇಮ್ಸ ಜೊಯಸ್ ಎಂಬವನು ನಡಸಿದ ಅದ್ಭುತ ಪ್ರಯೋಗಗಳನ್ನು ಕಂಡು ಬೆದರಿ ಬೆರಗುಗೊಂಡವರುಂಟು. ಆತನು ಇಂಗ್ಲಿಷ ಭಾಷೆಗೆ ಕೇಡು ಬಗೆಯುತ್ತಲಿದ್ದಾನೆಂದು ಹಲವರಿಗೆ ಗಾಬರಿ. ಆದರೆ ಆತನಿಂದ ಇಂಗ್ಲಿಷಿನ ಸತ್ವವು ಹೆಚ್ಚಾಗುತ್ತಿದೆಯೆಂದು ಆತನ ಕೈವಾರಿಗಳಾಗಿರುವವರೂ ಕಡಿಮೆಯಿಲ್ಲ.

James Joyce the great composer of the word, in him we see
the decay of a sterile language and the prophecy of the future-
creative language*.

ಈತನು ಸತ್ವಶಾಲಿಯಾದ ನೂತನ ಭಾಷೆಯನ್ನೆ ನಿರ್ಮಿಸುತ್ತಿರುವನೆಂದು ಪ್ರಗತಿಪರ ಲೇಖಕರು ಆತನನ್ನು ಸ್ವಾಗತಿಸುತ್ತಿರುವರು.

---

* The Language of the Night, P.58

ಈತನ ಭಾಷೆಯು ಮಧ್ಯಮಾ ವಾಣಿಗೆ ತೀರ ಸಮೀಪವಾದುದೆಂದೂ, ಅದರಿಂದ ಅದು ಎಲ್ಲ ಜನಾಂಗದ ಭಾಷೆಗೆ ಹತ್ತಿರದ್ದಾಗ ಬಲ್ಲುದೆಂದೂ ಹೇಳುವರು.

> He undermines reason in language. He unmaskes the pragmatic spring. The vertical language is the true international language. The art is vertical instead of merely horizontal.

ಆಧುನಿಕ ಸಾಹಿತಿಯು ಭಾಷೆಯನ್ನು ಬರಿ ರೂಢಾರ್ಥದಲ್ಲಿ ಬಳಸಲು ಸಿದ್ಧನಿಲ್ಲ. ಆ ನುಡಿಯಲ್ಲಿ ಹುದುಗಿಕೊಂಡಿರುವ ನಾದಶಕ್ತಿಯನ್ನು ಕುರಿತು, ಮನಗಂಡು ಅದು ಹೊರಹೊಮ್ಮುವಂತೆ ಆ ಪದಗಳನ್ನು ತನ್ನ ಬರೆಹದಲ್ಲಿ ಬಳಸುತ್ತಾನೆ. ಬರಿಯ ಮಾತು, ಅರ್ಥವನ್ನು ಸೂಚಿಸುವುದೆಂದು ಆತನು ಎಂದೂ ನಂಬುವುದಿಲ್ಲ.

> "Does anyone realy believe" askes Maeterlink, "That by means of mere words any real communication can pass from man to man?"

ಇದನ್ನೆ ಸ್ವಾರೋ ಎಂಬಾತನು ಇನ್ನೂ ಚೆನ್ನಾಗಿ ವಿವರಿಸಿದ್ದಾನೆ. ಆತನು ಹೇಳುವುದೇನೆಂದರೆ:

> Writers of today are less concerned with meaning than was usual with writers in the past....It has always been recognized that words do more than merely express meaning; they sound and suggest. Sense and poetry; P. 5.(Constable).

ನುಡಿಯು ಅರ್ಥವನ್ನು ಸೂಚಿಸುವುದಲ್ಲದೆ ಅದಕ್ಕೊಂದು 'ಧ್ವನಿ'ಯೂ ಉಂಟು. ಆ ಧ್ವನಿಯಲ್ಲಿ ನಾದ ಮತ್ತು ವ್ಯಂಗ್ಯ ಎಂಬ ಎರಡು ಶಕ್ತಿಗಳು ಅಡಕವಾಗಿವೆ. ಆಧುನಿಕ ಲೇಖಕರು ತಮ್ಮ ಬರೆಹದಲ್ಲಿ ಬಳಸುವ ಪದಗಳಲ್ಲಿ ಹುದುಗಿರುವ ಈ ಎರಡೂ ಶಕ್ತಿಗಳ ಸಂಪೂರ್ಣ ಲಾಭ ಪಡೆಯುವುದಕ್ಕೆ ಹವಣಿಸುತ್ತಾರೆ. ಕನ್ನಡ ಸಾಹಿತಿಗಳೂ, ಇಂತೀ ಬಗೆಯಾಗಿ, ತಮ್ಮ ನುಡಿಯ ಜೀವಾಳವನ್ನೂ ಅರಿತು, ಅಳವಡಿಸಿಕೊಂಡು ಬರೆವ ಹುಮ್ಮಸವುಳ್ಳವರಾಗಲಾರರೆ?

ಕನ್ನಡವು ಒಂದು ಇನಿದಾದ ಜೇಂಗೊಡ. ಅದು ಬರಿಗೊಡವಾಗದಂತೆ ಕನ್ನಡ ತುಂಬಿಗಳು ಎಂದಿನಿಂದಲೂ ಎಡೆಬಿಡದೆ ಹೋರೆಯನ್ನು ನಡಸಿವೆ. ಅಮರ ಮಧುವಿದ್ಯೆಯ ವಿಖ್ಯಾತ ಋಷಿಯಾದ ದಧ್ಯಙ್ಙನ ಅಂದದಿಂದ ಹೇಳುವುದಾದರೆ (ಬೃಹದಾ. ೨.೫) ಹೀಗೆ ಒಡನುಡಿಯಬಹುದು:

"ಇಯಂ ವಾಕ್ ಸರ್ವೇಷಾಂ ಭೂತಾನಾಂ ಮಧು;
ಅಸ್ಯಾಃ ವಾಚಃ ಸರ್ವಾಣಿ ಭೂತಾನಿ ಮಧು".

ಈ ನುಡಿಯು ಎಲ್ಲ ನಾಡಿಗರ ಜೇನು (ಸಾರ). ಎಲ್ಲ ನಾಡಿಗರು ಈ ನುಡಿಯ ಜೇನು (ಸಾರ). ನಾಡಿಗರು ಎಂತಹರೊ ಅಂತಹದು ಅವರ ನುಡಿ. ನುಡಿಯು ಎಂತಹದೊ ಅಂತಹರು ಆ ನಾಡಿಗರು. ಈ ನುಡಿ ಎಂತಹದಾಗುವದೊ ಅಂತಹರು ನಾಳಿನ ಕನ್ನಡಿಗರು ಆಗುವರು. ಕನ್ನಡ ನಾಡಿನ ವೀರಸತ್ವ, ಸಾಹಸಗಳ ಯುಗವು ಒಂದಾಯ್ತು. ಅಂದು ಪಂಪಭಾರತ, ರನ್ನನ ಗದಾಯುದ್ಧದಂತಹ ಓಜಸ್ವಿಯಾದ ತೇಜಸ್ವಿಯಾದ ಮಹಾಕಾವ್ಯಗಳು ಹುಟ್ಟಿದುವು. ಆ ಬಗೆಯ ಮಹಾಕಾವ್ಯಗಳಿಂದ ಸ್ಫೂರ್ತಿಗೊಂಡ ಕನ್ನಡ ನಾಡಿನ ಅಂದಿನ ಸಾಮಾನ್ಯರು ಕೂಡ ತೇಜೋವಂತರಾಗಿ ತಮ್ಮ ಧೀರೋದಾತ್ತ ಕೃತಿಗಳಿಂದ ಅಜರಾಮರರಾದರು. ಭಾರತದ ಇತಿಹಾಸದಲ್ಲಿ ತಮ್ಮ ಹೆಸರನ್ನು ಸ್ಥಿರವಾಗಿ ಉಳಿಸಿಕೊಂಡರು. ಮುಂದೆ ಕನ್ನಡದ ಹದವು ಕೆಟ್ಟಿತು. ಕನ್ನಡ ನಾಡೂ ತಲೆ ತಗ್ಗಿಸಿ ಕುಗ್ಗಲಾರಂಭಿಸಿತು. ನೇಪಾಳ, ಬಂಗಾಳಗಳಲ್ಲಿಯೂ ಹೋಗಿ, ತಮ್ಮ ರಾಜ್ಯವನ್ನು ಸ್ಥಾಪಿಸಿದ ಕನ್ನಡಿಗರಿಗೆ ತಮ್ಮ ಮನೆಯಲ್ಲಿಯೆ ನೆಲೆಯಿಲ್ಲದಾಯ್ತು. ಅಂದು ತೆಲುಗು, ಗುಜರಾತಿ, ಮರಾಠಿಗಳನ್ನು

ತನ್ನ ತೋಳೆ ತೊಟ್ಟಿಲಾಗೆ ಸಾಕಿದ ಕನ್ನಡಕ್ಕೆ ಇಂದು ಅವುಗಳಿಂದಲೆ ಏಳಿಸಿ (ಏಡಿಸಿ) ನುಡಿಸಿಕೊಂಬ ಹೊತ್ತು ಬಂದಿದೆ. ಕನ್ನಡವು ನಿಃಸತ್ವವಾಗಿ ಅದನ್ನು ಉಸಿರಾಡಿಸುವ ಜನ ಸಾಮಾನ್ಯರೂ ನಿಃಸತ್ವರಾದರು. ಇಂದು ಮತ್ತೆ ಕನ್ನಡವು ವೀರರ ನುಡಿ, ವಿಚಾರಿಗಳ ಭಾಷೆ, ಕವಿಗಳ ಸೊಲ್ಲು ಆಗುವ ಅರ್ಹತೆಯನ್ನು ಪಡೆಯಬೇಕಿದ್ದರೆ ಕನ್ನಡದ ಕೆಚ್ಚು-ಅಂತಃ ಸತ್ವವು ಹೆಚ್ಚಾಗಬೇಡವೆ? ಕನ್ನಡವು ಹರುಳುಳ್ಳದಾದರೆ ಅದನ್ನಾಡುವ-ಕನ್ನಡವೆ ತಮ್ಮ ಪ್ರಾಣವಾಯುವಾಗಿರುವ ಜನ ಸಾಮಾನ್ಯರೂ ಹುರುಪಿನ ಹುಮ್ಮಸದ, ಅಚ್ಚಕೆಚ್ಚಿನ ಕಟ್ಟಾಳುಗಳೂ ಬಲ್ಲಾಳುಗಳೂ ಆಗದೆ ಇರಲಾರರು.

ಕನ್ನಡವು ಹಿಗ್ಗಿದರೆ ಕನ್ನಡಿಗರೂ ಹಿಗ್ಗುವರು.

ಹುಟ್ಟುನುಡಿಗಳ ಪಟ್ಟಿ

೧. ಹುಟ್ಟು ನುಡಿಗಳು ನಮ್ಮೊಡನೆಯೆ ಹುಟ್ಟಿ ಬಂದುವು. ಅವು ಕಲಿಕೆಯ ಕಲಿತ ಮಾತಲ್ಲ. ತಲೆಯಿಂದ ಬಂದುವಲ್ಲ; ಎದೆಯಿಂದ. ಯಾವ ಗಣಿತ ಎಣಿಕೆಗಳಿಂದಲ್ಲ; ಹೃದಯದ ಊರ್ಮಿಗಳ ಪ್ರಚೋದನೆಯಿಂದ; ಭಾವನೆಗಳ ಕಾವಿನಿಂದ.* ಬಾಯಳಿದ ಕೋಗಿಲೆಗೂ ಬಾಯಿ ಬಂದು ಅದರ ಎದೆಯಿಂದ ಹಾಡು ಹೊರ ಹೊಮ್ಮುವುದು ಯಾವಾಗ? ಚಳಿಗಾಲವು ತೀರಿ, ವಸಂತದ ಕಾವು ಉಂಟಾದೊಡನೆಯೆ, ನಲ್ಲ ನಲ್ಲೆಯರ ಒಡನಾಟ, ಬೇಟಗಳ ಚಿನ್ನಾಟ ಚೆಲ್ಲಾಟಗಳೊಡನೆ ಲಲ್ಲೆಯ ನಲ್ವಾತುಗಳು ಹೊನಲಾಗಿ ಹರಿಯಲಾರಂಭಿಸುವುವು. ಗೆಳೆತನ ಹಗೆತನಗಳ ತಿಕ್ಕಾಟದ ಕಾವು ಹೆಚ್ಚು ಕಡಿಮೆಯಾದಂತೆ ನುಡಿಯ ಮಿಡಿತವೂ ಸೌಮ್ಯ ಅಥವಾ ರುದ್ರ ರೂಪವನ್ನು ತಾಳುವುದು. ನುಡಿಯು ಇಂತು ತಲೆದೋರಿದುದು ಎದೆಯ ಕಾವಿನ ಬಿಸಿಯಲ್ಲಿ. ಭಾವನೆಗಳ ಉಕ್ಕಿನಲ್ಲಿ. ವಿಚಾರ ವಿಮರ್ಶೆಗಳ-ಶಾಂತಿ-ಸಂಯಮಗಳ ಸಾಮ್ಯಾವಸ್ಥೆಯಲ್ಲಿ ಅಲ್ಲ. ಆದುದರಿಂದಲೆ ಕವಿ ಮಾತಾಳಿ. ಮುನಿ ಮೌನಿ. ಭಾವನೆಗಳ ಕಾವು ಕವಿಯ ನಾಲಗೆಯನ್ನು ನಲಿನಲಿದಾಡಿಸಿ ಕುಣಿಸುವುದು. ಧ್ಯಾನ ಸಮಾಧಿಯ ಪ್ರಶಾಂತಿಯ ಕುಳಿರು (ತಂಪು) ಯೋಗಿಯ ನಾಲಗೆಯ ಹರಿದಾಟವನ್ನು ನಿಲ್ಲಿಸಿ ತಣ್ಣಗೆ ಕುಳ್ಳಿರಿಸುವುದು. ಇನ್ನು ಮುಂದೆ ಕೊಟ್ಟ ನುಡಿಗಳ ಅಂದವು ಇಂತಿದೆ. ಅವುಗಳ ಹಿಂದಿರುವ ಕಾವಿನ ಬಗೆ ಗೊತ್ತಾಗದೆ ಅವುಗಳ ಹುರುಳು ಸರಿಯಾಗಿ ತಿಳಿಯದು.

೨. ಸಾಮಾನ್ಯವಾಗಿ ಈ ನುಡಿಗಳ ಬೆಲೆಯುಳ್ಳ ಭಾಗವು ಮೊದಲಲ್ಲಿರುವುದುಂಟು. ಕೊನೆಯ ಅಂಶವು ಪ್ರತ್ಯಯ; ಅಥವಾ ಅಲ್ಲಿ ಬೆರೆತ ಬೇರೆ ಶಬ್ದ. ಈ ಭಾಗವು ಅಮುಖ್ಯ. ಆರಂಭದ ಭಾಗವೆ ನಿಜವಾದ 'ನುಡಿ' (ಶಬ್ದ). ಅದುವೆ ಶಬ್ದಬೀಜ; ಅಥವಾ ಶಬ್ದದ್ರವ್ಯ; ಇಲ್ಲವೆ ನುಡಿಯ ಪುದುಗಲು. ಅರ್ಥವತ್ತಾದ ಅರ್ಥದಾಯಕವಾದ ಭಾಗವೆ ಇದು. ಮಾತನಾಡುವಾಗ ಈ ಭಾಗವನ್ನೆ ಒತ್ತಿ ಉಚ್ಚರಿಸುವ ವಾಡಿಕೆಯಿದೆ.

ಉದಾ : ಅ'ದು; ಆ'ತ; ಸೀ'ಪು; ಒ'ದರು; ಅ'ಡ್ಡ. ತಿ'ಡ್ಡ ಮುಂ.

ಅಪವಾದ: ಉರ್'; ಆರ್'; ಉಸ್' ಮುಂ.

(i) ಅ ಮತ್ತು ಆ ಕಾರಗಳು ಹತ್ತಿರದುವು. ಆದುದರಿಂದ ಅವು ಕೆಲವೊಂದು ಹೊತ್ತಿನಲ್ಲಿ ಒಂದರೊಂದರ ಎಡೆಯಲ್ಲಿ ಬರುವುವು. ಉದಾ : ಅದು=ಆ;

---

* ಅಗ್ನಿರ್ವಾಕ್ ಭೂತ್ವಾ ಮುಖಂ ಪ್ರಾವಿಶತ್। -ಐತರೇಯ ಉಪನಿಷತ್‌ನಲ್ಲಿ ಬರುವ ಈ ಮಾತು ಮಾತಿನ ಸ್ವರೂಪ ಹಾಗೂ ಅವರ ತತ್ತ್ವವನ್ನು ಹೇಳುತ್ತದೆ. ಶಂಬಾ ಜೋಶಿ ಅವರು ಈ ಮಾತಿನ ನೆಲೆಯನ್ನು ಹಿಡಿದು ಹಲವು ಕಡೆಗಳಲ್ಲಿ ವ್ಯಾಖ್ಯಾನಿಸಿದ್ದಾರೆ (ಸಂ)

ಇದರಂತೆಯೆ ಇ, ಈ; ಉ, ಊ; ಎ, ಏ; ಕ, ಖ; ಕ, ಗ, ಘ; ಚ ಛ; ಚ. ಜ, ಝ; ಟ, ಠ; ಟ, ಡ, ಢ; ತ, ಥ; ತ, ದ. ಧ; ಪ, ಫ; ಪ, ಬ, ಭ';

(ii) ಕೆಲವೆಡೆಗಳಲ್ಲಿ ಇಕಾರವು ಎಕಾರವಾಗುವುದು. ಉದಾ : ಕಿಡು=ಕೆಡು ಇದರಂತೆ ಉ=ಒ; ಉ-ಒ-ವ; ಕ-ಚ, ಜ, ಸ; ಕ-ಗ-ಹ; ಡ-ಟ, ಳ, ರ, ಱ; ಲ-ಳ. ಳ-ಣ. ಮುಂ.

(iii) ಟವರ್ಗಕ್ಕೆ ತವರ್ಗ; ಕ=ಸ=ಚ; ಕ=ಹ=ಗ; ಮುಂ.

ನುಡಿಗಳ ಮಾರ್ಪಾಟನ್ನು ಅರಿಯುವಾಗ ಅವುಗಳನ್ನು ಉಸಿರುವಾಗ ಆಗುವ ಹೆಚ್ಚು ಕಡಿಮೆಗಳನ್ನು ಚೆನ್ನಾಗಿ ಕಿವಿಯುವುದು ಒಳಿತು.

೪. ಮುಂದಿನ ಪಟ್ಟಿಯನ್ನು ಸೂಕ್ಷ್ಮವಾಗಿ ವಿಮರ್ಶಿಸಿದಲ್ಲಿ, (೧) ಕನ್ನಡದಲ್ಲಿ ಮೂಲೆಗುಂಪಾದ ಆದರೆ, ಸೊಗಸಾಗಿರುವ ಅನೇಕ ನುಡಿಗಳಿಗೆ ಮತ್ತೆ ಹೊಸ ಜೀವವನ್ನು ತಂದುಕೊಡಬಹುದು. ಮತ್ತು (೨) ಸಂಸ್ಕೃತ, ತಮಿಳು ಮೊದಲಾದ ಭಾಷೆಯವರು ಮೂಲ ಶಬ್ದದ್ರವ್ಯದಿಂದ ಅನೇಕಾನೇಕ ಅಂದಚೆಂದ ನುಡಿಗಳನ್ನು ನೇರ್ಪಡಿಸಿಕೊಂಡಿದ್ದರೂ ಕನ್ನಡಿಗರು ಮಾತ್ರ ಮಾತು ಮಾತಿಗೂ ಇನ್ನು ಮೂಲದ್ರವ್ಯವನ್ನೇ ಬಳಸುತ್ತಿರುವುದು ಕಂಡುಬರಬಹುದು; (೩) ಇದನ್ನು ಕಂಡುಕೊಂಡು ತಮ್ಮ ನುಡಿಯ ಏಳ್ಗೆಗಾಗಿ ಹಂಬಲಿಸಿ ಹೆಣಗಾಡುತ್ತಿರುವ ಪ್ರತಿಭಾವಂತ ಬರಹಗಾರರು ತಮಿಳು, ಸಂಸ್ಕೃತದವರಂತೆ ತಾವೂ ಆ ಮೂಲದ್ರವ್ಯದಿಂದ ಹಲವು ಅಂದದ ಹೊಸ ನುಡಿಗಳನ್ನು ಮಾಡಿಕೊಳ್ಳುವ ಹದವನ್ನು ಅರಿತುಕೊಳ್ಳಬಹುದು.

ಉದಾ : ೧. ಕೀರು (ಕೆರಳು); ಕೆಲೆ; ಕೊಚ್ಚು, ಬೆಳೆ, ಪಿಳ್ಳೆ; ಮುಂ.

೨. ಗಪಗಪ (ತಿನ್ನು); ಲಕಲಕ ಅಥವಾ ಚಕಚಕ (ಹೊಳೆ) ಮುಂ.

೩. ಜಲ ಇದರಂತೆ 'ಜುಳು;' 'ಒರೆ' ಎಂಬುವುಗಳನ್ನು ನೀರು ಎಂಬರ್ಥದಲ್ಲಿ ಬಳಸಬಹುದು. ಪುಸ್-ಪುಸಿ; ಇದರಂತೆ ಟುಸ್ಸು (ಸುಳ್ಳು) ಎಂಬುದನ್ನು ಅಸತ್ಯವೆಂಬರ್ಥದಲ್ಲಿ ರೂಢಿಸಬಹುದು. ಉಳ್-ಉಂಟು ಎಂದರೆ ಸತ್ಯ; ಕುಸುಕುಸು-ಗುಸ್ಸು (ಸಿಟ್ಟು; ತಕರಾರು). ಮುಂ.

ಕೆಲವು ಸಂಕ್ಷೇಪಗಳ ವಿವರ

ಅ.	ಅಥವಾ ತ.	ಅರವು; ತಮಿಳು.
ಆ.		ಆರೆ (ಮರಾಠಿ).
ಕ.		ಕನ್ನಡ.
ತು.		ತುಳು.
ಮ.		ಮಲೆಯಾಳ.
ಸಂ.		ಸಂಸ್ಕೃತ.
ಹೋ.		ಹೋಲಿಸು.

ನುಡಿಯ ಪುದುಗಲು. (ಶಬ್ದದ್ರವ್ಯ)	ಅರ್ಥ	ಬೆಳೆದ ನುಡಿಬಳ್ಳಿವಳ್ಳಿ.
ಅ (ಆ)	೧ ಮೊಗವೆತ್ತಿ, ಇಲ್ಲವೆ ಬೆರಲಿನಿಂ ಅತ್ತ; ಅಲ್ಲಿ ಮುಂ. ದ ದೂರ ತೋರುವಲ್ಲಿ	ಅದು; ಅವ (ನು; ಳು); ಅತ; ಆ; ಆಗ;
ಅs-ಅಮ್	೧ ಒಪ್ಪಿಗೆ;	ಅಂ (ಹುಮ್); ಅ. ಆಮ್; ('ಆ' ನೋಡು).
	೨ ತಿರಸ್ಕಾರ; ಮೂದಲಿಕೆ	ಅsಂ (ಹುಂ, ಹಾಂ);
	೩. ಅಡ್ಡಿ.	ಅs; ಅಹಾ; ಆs
	೪. ಸರಳುವುದು ಆತ್ಮದರ್ಶಕ ಶಬ್ದ	ಅಂ=ಅಹಮ್.....ಅಣ್ಮು (ಸಾಮರ್ಥ್ಯ); ಅಣ್ಮು=ಅಮ್ಮು (ಸಮರ್ಥನಾಗು);
ಆಃ ಆಃ	೧ ನಗೆ;	ಅಹ್-ಹ್-ಹ್; ಹೋ. ಹಸ್ (ಸಂ).
ಅಹ್=	೨ ಬೆರಗು;	ಅಹಾ! ಅಕಾ, ಅಗಾ. ಅಕ(ಟ); ಅಕ್ಕ-(ಐ); ಅ. ಅಕ್ಕಡ; ಅಕ್ಕೋ=ಅಗೋ; ಅಕೋ=ಅಹೋ. ಮ. ಅದಾ; ಅ. ಅದೋ! 'ಅಪ್' ನೋಡು. (ಹೋ. ಆಃ+ಚರ್ಯ) (ಸಂ); Ah; A;
ಅಕ್,	೩ ದುಃಖ	

	೪ ಬೇಸರ; ಅಸಮ್ಮತಿ;	ಆಕಳಿಕೆ; ಆಕುಳಿಕೆ; ಅಕ್ಕಸ (ಕಕ್ಕಸ).
	೫ ಕರೆವಲ್ಲಿ;	ಅ ಕಾ=ಅಲಾ=ಎಲಾ; ಆ. ಅಗs (ಹೆಂಗಸರಿಗೆ); 'ಅಗಾ' ಜ್ಞಾನೇಶ್ವರಿಯಲ್ಲಿ ಗಂಡಸರನ್ನುದ್ದೇಶಿಸಿಯೂ ಇದೆ. [ಉಳಿದವರಿಗೆ ಅರೇ; ಅಹೋ ಬಹುವಚನದಲ್ಲಿ, ಎಲ್ಲರಿಗೂ] ; ಅ. ಅ ಗಲ್ (ಕೂಗು; ಕರೆ); ಹೋ.. ಅ ಅಟಾ; ಅಡಾ; ಮ ಎಡಾ; ತೆ. ಏರಾ; (ಕ ಎಲಾ); Halloo;
	೬ ನಡುಕದಲ್ಲಿ;	ಅಕ್-ಕ್-ಗ್-ಗ್....ಅಗಿ. (ಅಲೆ);
ಅಟ್	೧ ದೂರ ತಳ್ಳು;	ಅಟ್ = ಹತ್ = ಹಚ್;....ಅಟ್ಟು;
	೨ ತಾಗು;	ಅಟೆ = ತಟೆ; ಅಡೆ (ಹೊಡೆ); ಅಡರು.
ಅಪ್-ಬ್	೧ ಸೋಜಿಗ; ೨ ಗಾಬರಿ;	ಅಬಬ; ಅಬ್ಬಾ; ಅಪ್ಪಾ; (ಅಮಾ; ಅಮಮಾ; ಅಮ್ಮಯಾ = ದಮ್ಮಯ್ಯಾ);
	೩ ಕೂಗು ಗರ್ಜನೆ;	ಅಬ್ಬರ; ಅಬ್ಬರಿಸು; ಅಬುಬು ಎಂದು ದನಿ ಹೋ. ಅಡುರ್ (ಆರ್ಭಟೆ); ಅದಿರ್; ಅದುರು=ಅದಿರು (ಅದ್ರು); ಅದಿರ್ಪು.
ಅಯ್	ಸೋಜಿಗ ಗಾಬರಿ;	ಅಪ್ ನೋಡು; ಅಯ್ಯs (ಹೆಣ್ಣುಮಕ್ಕಳ ನುಡಿ); ಅಯ್ಯೊ; (ಅಹಾ). ಅಯಿಲು (ಗಾಬರಿ; ಪೆಚ್ಚು);
ಅರ್-ಆರ್	೧ ಸೋಜಿಗ;	ಅರರೆ!
	೨ ದುಃಖದಿಂದ ಕೂಗು;	ಅರಚು; (ಕಿರಚು); ಹೋ. ಅಳು. ಮ. ಅ. ಅರಟ್ಟು; ಆ. ಅರಡಣೇ; ಓರಡಣೇ; ಹೋ. ರವ-ಆರವ (ಸಂ). ಅ. ಅರವು (ಕೂಗು; ಧ್ವನಿಮಾಡು); ಅರಂದ್ಯೆ (ಅಳು).
	೩ ವೀರಗರ್ಜನೆ	ಆರ್ಬಟೆ; ಅರ್ಬು; ಅರ್ಬಾಟ; ಅರ್ಬಿಸು; ಆರ್ಚು; ಅರ್ಚಿಕೆ; ....ಆರ್ಪು. ಹೋ. ಆ. ಅರಡಣೇ; ಅರ್ವರ್-ಆರವಾರ. ಅ. ಅರಜ್ಞು (ಕೂಗು); ಅರರ=ಹರಹರ
	೪ ತಿಕ್ಕುವಾಗಿನ ನಾದ.	ಅರ್=ಅರೆ; ಅರ್ನ; ಅರಿತ;
ಅಲ್, ಅಲಲsಲs	೧ ಕೂಗು; ಉದ್ಗರಿಸು;	ಅಲಲಾ; ಅಲಾ; ಅಲೆ; ಅಲ್ರೆ; ಅಲಾ=ಹಲಾ= ಎಲಾ; ಅಲಲಲs=ಹಲಲಲs· ಅಲ್ಲ (ಖಾರಗೆಣಸು, ತಿಂದ ಬಳಿಕ ಅಲಲs ಮಾಡಹಚ್ಚುವುದು); ಅ. ಅಲ್ಲಾ (ಹಿಗ್ಗು, ಆನಂದಿಸು. ದುಃಖಿಸು). ಅಲಕ್ಕನ್ (ದುಃಖ); ಅಲಕ್ಕರಿ (ಅ, ಅ, ಏ ಏ ಮಾಡಿ ಏಡಿಸು); ಅಲಜು (ಕೂಗು); ಅಲಪ್ಪು (ಗಳಪು; ಬಡಬಡಿಸು); ಅಲಂ=ಅಳು.
	೨ ಹೊಯ್ದಾಟ	ಅಲೆ; ಅಲುಗು; ಅಲ್ಲಾಟ; ಹೋ. ಅಲ್ಲೋಲ (ಕಲ್ಲೋಲ); ಅಲುಬು (ಅಲುಗು);
ಅಸ್	ದಣಿವು,	ಅಸ್ = ಹುಸ್;......ಅಸುರ್ (ದಣಿವು);

ಆಸ್	ಬೇಸರು; ಗಡಿಬಿಡಿ	ಅಸಸಿ (ಚಿಃ; ಪುಃ);.......ಆಸರು (ಬೇಸರು.) ಅಸಿಮಿಸಿ (ಮಿಜಿಮಿಜಿ); ಅಸವಸ (ವಸವಸ) ಮಾಡು;
ಅಳ್	ಅಲ್‌ನೋಡು.	ಅಲೆಯುವುದು-ಅಳ್=ಅಲ್ (ನೀರು); ಅಳ್ಕ=ಅಳSಕ (ನೀರಿನಂತಹದು); ಅಳ್ಳೆ; ಅಳ್ಳೆವಿಳ್ಳೆ (ಅಳಬಳಕ); ಅಳ್ಳೆದೆಯವ....ಅಳು.
ಆ, ಆ	೧ ಕರೆವಾಗಿನ ನುಡಿ	ಆ, ಆ ಎಂದು ಪಾರಿವಾಳಗಳನ್ನು ಕರೆವವಾಡಿಕೆಯಿದೆ. ಆ, ಆ = ವಾ, ವಾ = ಬಾ, ಬಾ. ಬರು; ಇದರಿಂದಲೇ; ಆಗು (ಅಸ್ತಿತ್ವದಲ್ಲಿ ಬರು);
	೨ ಕೂಗು; ಕರೆ.	ಅಂಬಾ-ಆ....ಆವು; ಆಡು (ಪ್ರಾಣಿ), ಹೋ. ಅ. ಮ. ತು. ಏಡು, ಆ. ಏಡಕಾ; ಸಂ. ಅಜ ಆಂದೆಗ (ವಿಶಿಷ್ಟ ಜಾತಿಯ ಗೂಗೆ); ಅ, ಆದ್ಯೈ; ಮ. ಆಂದಾ; wol; ಆಲು (ಕೂಗು)....ಆಡು (ಧಾ) ಕೆಲೆ; ನಲಿ; ಲೀಲೆ ಮಾಡು. 'ಪಾ', 'ಬಾ', 'ಮಾ' ನೋಡು.
	೩ ಸೋಜಿಗ; ಕೌತುಕ.	ಆ; (ಅಚ್ಚರಿ); ಆ (ಹಾ)
	೪ ದುಃಖ,	ಅ (ಹಾ);
	೫ ಅಸಮ್ಮತಿ	ಆ = ಹಾ(ಂ).
	೬ ಪ್ರಶ್ನೆ	ಆ? ಆ (ರು). ಆ(ವ); ಆ(ವುದು) ಹೋ. ಏ(ನು);
ಆನ್	ಅಮ್ ನೋಡು.	ಆನ್ = ನಾನು. ಹೋ. ಅಹಮ್ (ಸಂ). ಆಣ್ಮ (ಒಡೆಯ); ಆಳು (ಸಮರ್ಥ);
ಆರ್	ಅರ್ ನೋಡು.	ತು. ಆರ್ಕುನಿ. ಸಂ. ಆರವಾರ; ಆರ್‌ತ;
ಆಲ್	ಅಲ್ ನೋಡು	ಆಲು (ಕೂಗು);
ಇ/ಈ	ಸಮೀಪ ದರ್ಶಕ;	ಇದು; ಇಲ್ಲಿ; ಇವ(ನು; ಳು); ಇತ್ತ; ಇಂದು; ಇದೊ (ಇಕೊ); ಈ; ಈತ; ಈಗ.
ಇಃ; ಇಸ್	ಹೇಸಿಕೆ;	ಇಸ್ಸಿ; ಹೋ. ಅಃ; ಹ್ಯಃ; ಹೆಃ; ಪೆಃ....ಪೇಸಿ (ಹೇಸಿ);
	ಅಸಮ್ಮತಿ (ಇಲ್ಲತು)!	ಇಃ, ಇಸ್, ಹೋ. ಅ. ಇಚಿ (ಇಳಿಕೆಯ್; ಏಡಿಸು; ಇ, ಇ, ಹೀ, ಹೀ ಮಾಡಿ ಹಲ್ಕಿರಿಯುವುದು; ಅಣಕವಾಡು ನಗು; ಹೀಯಾಳಿಸು); ಇಚಿಪ್ಪು (ಹಿಃ ಹಿಃ ನಗು); ಇಚ್ಚೈ (ಸದ್ದು; ಸಂಗೀತ);
ಇಕ್-ಇಗ್ ಇಡ್-ಇರ್	ಹೊಡೆ (Hit);	(ಹಕಾರವೆ ಇಲ್ಲದ ಕಾಲದಲ್ಲಿ ಇಕಾರವೂ ಆ ಕೊರತೆಯನ್ನು ತುಂಬಲು ನೆರವಾಗುತ್ತಿರಬೇಕು); ಇಡಿ (ಮುರಿ; ಕುಟ್ಟು); ಇಡು ಇಕ್ಕು (ಹೊಡೆ); ಹೋ. ಅ. ಇಚ್ಚೈ (ಸದ್ದು ಮಾಡು); ಇಚ್ಚೈ (ಶಬ್ದ; ಧ್ವನಿ). ಇಗಲ್ (ಹಗೆ; ಜಗಳ); ಇಗಲಾಟ್ಟಮ್ (ವಾದ, ಚರ್‌ಚೆ); Higgle & Hagal. ಇರಿ; ಈರ್ = ಹೀರು; ಸೆಳೆ.
ಇಮ್	ಸದ್ದು (ಶಬ್ದ);	ಅ. ಇಮಿಜ್ (ಜೇಂಕಾರ; Humming); ಆದುದರಿಂದ ಕನ್ನಡದ ಇಂಪು; ಇನಿ(ದು) ಈ ಬಳಗದ ನುಡಿಗಳೆಂದು ಎಣಿಸಬಹುದಾಗಿದೆ. ಅ. ಇರಂಗು (ಕೂಗು; ಅಳು); ಇಮಿರ್ (ಶಬ್ದ ಮಾಡು; ಜೇಂಕರಿಸು).
ಈ	೧ ಸೋಜಿಗದ	ಈ, ಈ;......ಹೀ-ಹೀ...ಹೇ....ಹೇ.

	ಉದ್ಗಾರ; ೨ ಹಲ್ಗಿರಿವಾಗ;	ಈ, ಈ ಮಾಡು......ಹೀಯಾಳಿಸು;
ಉಂ.	೧ ಒಪ್ಪಿಗೆ;	ಉ (ಹುಂ).
	೨ ಇಲ್ಲತು (ಅಸಮ್ಮತಿ);	ಉಂ ಹು(ಂ); ಹೋ. ಅ. ಉಂಗರಿ ಹುಂಕಾರ (ಅಸಹ್ಯ ಅಥವಾ ಅಸಮ್ಮತಿ; ಜೇಂಕಾರ;)
ಉಃ	೧ ಇಲ್ಲತು (ಅಸಮ್ಮತಿ)	ಉಃ; ಉಫ್-ಪುಃ (ಘು; 'ದೆಸೆವೆಣ್ಗಳ್ ಬಿರುವಿಸಿಲಂ ಬಸವಳಿದು ಉಃಫೆಂದು ಸುಯ್ದು')
	೨ ದಣಿವು;	ಉಬ್ಬಸ; ಉಬ್ಬಸಪಡು;
ಉಕ್ (ಉಗ್)	೧ ಹೊರಬರು;	ಉಕ್ಕು; ಉಗು; ಉಗುಳು; ಉಗ್ಗು (ತೊದಲು); (ನೀರು) ಉಗ್ಗು; ಹೋ. ಒಗು-ಒಗೆ,..... ಹೊಗೆ; ಒಕ್ಕ ಓಕರಿಕೆ; ಸಂ. ಉತ್ (ಮೇಲೆ ಬರು); 'ಉರ್' ನೋಡು.
	೨ ಉದ್ಗಾರ;	ಉಘೇ-ಉಘೇ.....ಉದೋ....ಉಧೋ; ಉಧೇ...ಉಧೇ (ಚಾಂಗು, ಚೆನ್ನು); ಭಲಾ. ಹೋ. ಅ. ಉಡೋ; ಎಡ; ಮತ್ತು ಅಡಾ, ಅಲಾ.
ಉಚ್	ಉಸ್ ನೋಡು;	
ಉಞ್	ನರಳುವುದು;	ಉಂಯಿ್=ಹೋಞ್ ಎಂದು ನರಳು; ಅಳು.
ಉಡ್	ಒಡೆ;	ಉಡಿ (ಒಡೆ) ಹೊ. Break; ಬಿರಿ; ಒದೆ (ಹೊಡೆ; ಥಳಿಸು).
ಉದ್	ಸದ್ದು;	ಉದರು (ಬೀಳು); ಹೋ.ಉಡಿ; ಒದರು ನೋಡು.
ಉಪ್ (ಫ್, ಉಸಿಸಿರು);		ಉಫ್ ಎಂದು ಊದು; ಉಃ ನೋಡು. ಹೋ. ಅ. ಫವಾರೆ; ಫೂತ್ಕಾರ (ಸಂ); ತು ಉಬ್ಬಿ (ಉಫ್ ಮಾಡಿ ಉಗಳು); ಉಬ್ಬು (ಊದು); ಉಬ್ಬರಿಸು; ಉಬ್ಬಳಿಕೆ (ಅಬ್ಬಳಿಕೆ);
ಉಯ್	೧ ಸುಯ್ಯು;	ಉ(ಂ)ಯ್ (ನರಳು); ಉಮ್ಮಳ. ಹೋ. ಅ. ಉಯರ್‌ವು; ಉಯವು (ನೋವು); ಉಯಿರ್ (ಉಸಿರು);
	೨ ಕೂಗು;	ಉಯ್ = ಹುಯ್....ಹುಯಿಲು
ಉರ್	೧ ಕೂಗು.	ಉರ್-ಒರ್;...ಉರಲು.....ಒರಲು; ಹೋ. ಅ. ಉರಪ್ಪು (ಕಿರಚು; ತೆ. ರೊಪ್ಪು; ಸಂ. ರು; ರೌತಿ, ರಾವ; ಅ. ಓರಡಣೇ. ಅ. ಉರರ್ರು (ಗುಡುಗು; ಗರ್ಜಿಸು);......ಕ. ಒಸೆ (ಮಾತಾಡು, ಹೇಳು). 'ಉಲಿ' ನೋಡು
	೨ ರೋಷ.... ಬೆಂಕೆ;	'ರಂ ಅಗ್ನಿ ಬೀಜಂ' ಎಂಬುದನ್ನು ಇಲ್ಲಿ ನೆನೆದುಕೊಳ್ಳಬಹುದು. ಉರ್...ಉರಿ; ಉರಿ; ಉರುಪು; ಉಬ್ಬೆ (ಉಷ್ಣ); ಉಮರು; ಅ. ಊಬ; ತು. ಉಟೆ; ಉರುಬೆ; ಉರುವಣಿಗೆ; ಉರಿಕ; ಉರಿಗ (ಕೋಪಿಷ್ಠ); ಉರಿಗೆ (ಕೋಪಿಷ್ಠೆ); ಉರುಗು (ಸಿಟ್ಟು); ಹೋ. ಅ. ಉರುಮ್ (ಗುಡುಗು); ತೆ. ಉರುಮು; 'ಮೊರೆ' ನೋಡು.
	೩ ಸದ್ದು;	ಉಲಿ ನೋಡು. ಉರುಳು (ಹೊರಳು) ಉರುಳೀಗಡ್ಡೆ; ಹೋ. ಅ. ಉರುಟ್ಟು (Roll); ಉಲುಕು ಸುರಿ (ದುಕೊಳ್ಳು; Sip up).

	೪ ಒಡೆ;	(ನೀರು) ಊರು; 'ಒರೆ' (ಬಸಿ); ಒಸೆ ನೋಡು ಹೋ. (Ooze); ಸುರ್ ನೋಡು.
ಉಲ್ (ಉರ್)	ಸದ್ದು;	ಉಲಿ; ಉಲುವು; [ಊಟ್]; ಉಲಿಪು;
	'ಒಳಒಳ'	ಹೋ. ಸಂ. ಉಕ್ತಿ; ಉಲೂಕ (ಗೂಗೆ);
	ನೋಡು;	ಅ. ಉಳರ್ (ಉರುಳು); ಉಳ್ಳೈ (ಕೂಗು); ಉಳಱು (ಗರ್ಜಸು); ಉಲುಕು (ಅಲುಗಾಡು; ಉಲುಕಾಡು ಹೋ. ಉರುಳು.
ಉಸ್	ಸದ್ದು (ಶಬ್ದ);	೧ ಉಸ್ ಎನ್ನು = ಹುಸ್ ಎಂದು ತಳ್ಳು; ಎಚ್ಚರಿಸು. ಹೋ. ಹುಷಾರ್ (?) ಅ. ಉಜುಂಬು ಉಶ್ ಉಶ್ ಮಾಡು).
	ಉಸಿರು	೨ ಉಸಿರು; ಉಸಿರಾಡಿಸು; ತು.ತೆ. ಉಸುರು ಉಸ್ ಎನ್ನು (ಬೇಸರ, ದಣಿವುಗಳಿಂದ); ಅ. ಉಚಿರ್; ಉಯಿರ್; ಊಂಜೆನಲ್ (ಉಶ್ ಎನ್ನು). ಹೋ. ಸಂ. ಶ್ವಸ್. ಉಂಞ್ ನೋಡು. ೩ ಉಸ್ = ಒಸ್....ಸಂ. ಸ್ರು (ಸುರಿ, ಒಸರು).
ಊ ಊ	ನಾದ	ಊದು (೧ ಊ ಊ ಮಾಡು; ಉಫ್ ಮಾಡು); ಉದುಗೊಳಿವೆ; ಅ. ಊದಲ್ (ಗಲಾಟೆ; ಅರ್‌ವರ್). ಊದು=ಉಬ್ಬು= ಉರ್‌ಬು.
ಊಳ್	ಉಲಿ;	ಹಕ್ಕಿ, ನರಿ, ನಾಯಿಗಳ ಕೂಗು; 'ಒಚ್ಚತಂ ಊಳ್ವ ಕೋಗಿಲೆ'; 'ನಿಷ್ಕಾರಣದೊಳ್ ಊಳ್ವ ನಾಯಿ'; 'ಪಗಲುಂ ನರಿಗಳ್ ಊಳಿದುವು'. ಅ. ಮ. ಊಳನ್ (ನರಿ); ಊಳಿ (ಸದ್ದು); ಹೋ. ಉಲೂಕ (Owl);
ಎ, ಏ	೧ ಕರೆವಲ್ಲಿ;	ಎ(ಲಾ); ಏ; (ಹೇ; ಹೋ. ಓ.); ಅ. ಎಲಾ (ಅಲಾ; ಎಲೆ);
	೨ ಪ್ರಶ್ನೆ	ಎಲ್ಲಿ; ಎತ್ತ; ಎಂದು; ಏನು; ಏಕೆ; ಏಸು.
	೩ ಉದ್ಗಾರ	ಏ=ಹೇ. ಅ. ಎಕ್ಕೆ (ದುಃಖೋದ್ಗಾರ).
	೪ ತಿರಸ್ಕಾರ	ಎ, ಏ= ಹೆ, ಹೇ. ಏಡಿಸು= ಏಳಿಸು; ಹೋ. ಸಂ ಹೇಲನ. ಅ. ವೇಡಾವಣೇ. ಅ ಏಚ್ಚು (ಹಳಿ); ಇಗಟು.
	೫ಕೂಗು;	ಏ. ಅ. ಏಂಗಲ್ [ಕೂಗು; ಅಳು; ಅsಂ ಏಂ ಎಂದು];
	ಸದ್ದು;	ಏ=ಕೇ [ಗು] ; ಏಃ ಏಃ-ಹಃ ಹಂ. ಅ. ಏಂಬು; ಏಂಬಲ್ [ಗಲಾಟೆ];
ಅ	ದಣಿವಿನಲ್ಲಿ ಮೇಲುಸಿರು	ಏರು [ತೇಕು];
ಐ=ಅಯ್	ಬೆರಗು	ಅಯ್ಯS=ಆಶ್ಚರ್ಯ; ಅಯ್ಯೊ [ದುಃಖ]; ಅ, ಐಯ್ಯಮ್ [ಸಂದೇಹ]
ಒ, ಓ	೧ ಉದ್ಗಾರ	ಓ ಒ =ಒಹೋ; Oh.
	೨ ನೆನಹು (ಸ್ಮರಣ)	ಓ, ಹೀಗೋ ಸರಿ; ನೆನಪಾಯ್ತು

	೩ ಕರೆವಲ್ಲಿ	ಓ, ರಾಯರೆ, ಬನ್ನಿ. Halloo
	೪ ಸಂದೇಹ	ಓ-ಹೀಗೊ?
ಒಕ್	೧ ಹೊರಬರು	ಒಕ್ಕು 'ಒಕ್ಕುದು ನೆತ್ತರ್ ಬಾಯಿಂ' [ಒಕ್ಕರಿಸು]; ಒಗಡಿಕೆ [ಓಕರಿಕೆ}; ಒಗಡಿಸು; ಒಕ್ಕುಳಿಸು [ಬಿಕ್ಕುಳಿಸು; ತೇಗು]; ಅ ಒಕ್ಕು ಕಾರು; [Gargle];
	೨ ಚೆಲ್ಲು	ಒಗು; ಒಗೆ; ಒಗರು;
ಒಚ್= ಒಚ್=ಒಡ್	೧ ಶಬ್ದ	ಒಟಒಟ; ಒಡಒಡ; ಹೋ. ಸಂ. ವಚ್; ವದ್; ವಾಕ್; ಒದರು; ತೆ. ವದರು. ಅ. ಓಚೈ [ಶಬ್ದ; ಧ್ವನಿ; ಸಾರುವ ಕೂಗು]; ಓಲಿ [ಕೂಗು];
	೨ ಸ್ಫೋಟ	ಒಡೆ, ಸಪ್ಪಳವಾಗು; ಹೊರಬೀಳು; ಚಿಮ್ಮು, ಜಿಗಿ. [ನೀರು ಒಡೆ; ಮುಗುಳು ಒಡೆ ಮುಂ]; ೩ ಒದೆ; ಒತ್ತು
ಒಞ್	೧ ನರಳು; ಅಳು; ಞ್=ಹೊಂಯಿ ಎಂದು ; ಒರ್ ನೋಡು	
	೨ ನೀರು ಹರಿವಾ	ಒನಲು [ಸ್ರೋತ; ಝುರಿ] ಒಳ್ಕು ನೋಡು. ಗಿನ ಸದ್ದು;
ಒರ್	೧ ಚೀರು;	ಒರಲು [ಕಿರಚು; ಆರ್ತ:ಧ್ವನಿ]; ಒರೆ [ಮಾತಾಡು; ಉಸುರು]. ಅ. ಒಟು [ತೆಗಳು; ಬೆಯ್]
	೨ ತಿಕ್ಕುವಾಗಿನ	ಒರ್-ಕರ್.....ಒರೆ; ಒರಸು; ಸದ್ದು
	೩ ನೀರು ಊರು;	ಉರ್ [Ooze] ಒರತೆ ಹೋ. [ನೀರು] ಬಸಿ; ಗಸಿ ವಾಗಿನ ಸದ್ದು;
ಒಲ್ (ವಳ್)	ಗತಿ ಸೂಚಕ;	೧ ವಿಲಿವಿಲಿ ಒದ್ದಾಡು; ಬಳಬಳ ನೋಡು ೨ ಒಲೆ [ಬಾಗು]; ಒಲಪು; ೩ ಒಳ್ಕು [ಪ್ರವಾಹ]; ಅ. ಒಳಗು, ತೆ. ಒಳಕು ಆ. ರು ಹೋ ಳ; ಓಥಾ;
ಒಸ್ (ವಸ್ ಭಸ್)	ಹೊರಗೆ ಬರು;	ಒಸ್ ಎನೆ ಒಸರು-ಬಸಿ; ಉಸ್ ನೋಡು. ಹೋ. OE. Wase [Ooze]; ON. Veisa. OE. Wos [juice];
ಓ	೧ ಗತಿಸೂಚಕ;	[ಓಡು]; ಅ. ಓ [ಹೋಗು ಮತ್ತು ಇರು]; ಓಪ್ಪು; ಓಟ್ಟು; ಓಚ್ಚು [ಓಡಿಸು]; ಹೋ. ಸಂ. ಓಘ; ಕ. ಪೋ [ಹೋ] ಗು;
	೨ ಪ್ರಶ್ನೆ ;	ಅವನು ರಾಮನು ಓ?
	೩ ಕರೆವಲ್ಲಿ;	ಓ; ಇರಲಿ....ಲೇಸೋ ಲೇಸು ಓದಿನ ಪರಿ; ಓವು [ಪ್ರೀತಿಸು; ಮೆಚ್ಚು; ಸಲುಹು];

	೪. ಒಪ್ಪಿಗೆ;	ಓರಾಯರೆ;
	೫ ಚೆಲ್ಲಾಟ,	ಓ; ಹೋ;...... 'ಓ' ಕುಳಿ [ಆಟ]; ಓಲಾಟ; ಹಿಗ್ಗು; ಓಲಾಡು; ಹೋ. ಅ. ಓಗ್ಯೆ. ಕ. ಒಸೆ
	೬ ನುಡಿತ	೧ ಓದು; ಹೋ. ಅ.ಓಲಿ; ಓಲ್; ಓಲಂ; ಓದ್ಯೆ; ಓಚ್ಯೆ; ಅ. ಕ. ತು. ಓಯ್, ಓಯಿ; [Halloo]; ಕ. ಓವಿ [ಹಾಡು] ಅ. ಓಲುಜು [ಲಾಲಿ, ಓವಿ ಹಾಡು]; ೨ ಓಲಗ [ವಾದ್ಯ; ವಾಲಗ]; ಹೋ.ಸಂ. ವಾದನ
ಓ=ಒಕ್	ಓಕರಿಕೆ.	ಅ. ಓಕಾರಿ
ಕ.ಕ್‌ಕ್-ಕ (ಗಗ್‌ಗ್)		ಕಹ್-ಖಹ್ ಎಂಬ ನಗು; ಸಂ. ಕಖ್ (ನಗು);
ಕಕ್-ಖಕ್	ಕಾರು;	ಕಕ್ಕು-ಕಾರು; ಕಃ-ಖಃ.....ಕ(ಃ)ಯ್=ಕಯ್ವೆ=ಕಹಿ (ಕ್‌ಇಗ್). ಸಂ. ಕಟು;
ಕಚ್-ಕಡ್	ಕಡಿ; ತುಳಿ	೧ ಕಚಕ್ಕನೆ ಕಚ್ಚು; ೨ ಕಚಪಚ ತುಳಿ; ೩ ಕಚಕಚ ಎನಿಸು (ಹೋ. ಕಸವಸ);
ಕಟ್-ಕಡ್ (ಕಳ್ ನೋಡು)	ಸದ್ದು	೧ ಕಟಕಟಿ (ತೊಂದರೆ); ಕಟರುರೊಟ್ಟಿ; ಕಟಕು (ಮಣ್ಣು); ಕಟಲ್-ಕಡಲ್ ಕಡಲೆ; ಕಟಂ (ಕುಟುಂ) ತಿನ್ನು; ಕಡ ಖಡಲ್ ಎಂದು ಗರ್ಜಿಸು; ಕಡಲು (ಸಮುದ್ರ); ಹೋ.ಅ. ಓಲಂ (ಓ ಎಂದು ಗರ್ಜಿಸುವುದು-ಸಾಗರ); ಆ. ಕಡಕಡಣೇ; ಕ. ಕಡಕಡೇ (ಮಹಾರುದ್ರ); ಕಡಕು (ಖಡಕು) ಆಸಾಮಿ. ಆ. ಕಡಕ ಭಾಷಾ (ಸಿಟ್ಟಿನ ಮಾತು); ಖಾಡಾಖಾಡಿ ಮಾತು ಕಡುಪು (ಹುರುಪು.ಆವೇಶ); ಹೋ.ಕತ್ತರಿ; Cut; ೨ ಕಟ್ಟಿಗೆ; ಗಚ್ ನೋಡು. (ಮಜ್ಜಿಗೆ)ಕಡೆ; ಕಟಿ; ಕಟಿಲು (ಮಜ್ಜಿಗೆ); ಆ ಕಥಿ (ಪಳದೆ); ಕಡಗೋಲು; ೩ ಕಡಿ (ಕಚ್ಚು); ಕಡಿವಾಣ. ಕಡಿ (ತುಂಡರಿಸು); ಕಟಕರಿಸು; ಕಟುಕ; ಆ. ಖಾಟೀಕ; ಕಟಕಿ(Irony); ಕರ್‌ತಿ ಅಥವಾ ಕಳ್ತಿ= [ಕತ್ತಿ] [ಸಂ. ಕಡ್; ಖಡ್‌ಗ; ಕರ್‌ತನ;] ಕಡಾಯ್ಲು (ಹೊಡೆ);
ಕಣ್ (ಗಣ್)	ನುಡಿತ	ಕಣಕಣ (ನಾದ); (ಸಂ. ಕ್ವಣ್; ಕಣ್; ಕಂಠ); ಕಣಿ (ಗಣಿ); ಕಣಿ (ಕಲ್ಲು) [ಸಂ. ಖನ್]; ಕಣಿ (ಹಲಗೆ ವಾದ್ಯ); ಕಣೆ [ಗಣೆ]; ಕಣಕೆ (ಗಣಕೆ); ಸಂ. ಕಂಕಣ]
ಕತ್-ಕುತ್	ನುಡಿತ	'ಕತ್‌ಕುತ್'......ಕತಿ (ಖತಿ ಸಿಟ್ಟು); ಅ. ಕತ್ತು (ಕರೆ. ಸದ್ದುಮಾಡು; ಕೂಗು); ಕತಮ್ (ಸಿಟ್ಟು); ಹೋ. ಸಂ. ಕಥ್;
ಕದ್ ಕದ	ಅಲೆ. ನಡುಕ; (ಕದಿಲು);	೧ ಕದಕ್ಕದಿಸಿ ನಗು (ಆ. ಖದಖದಾ ಹಸಣೇ) ಕದಟು (ಗದಟು); ಗದ್ದರಿಸು. ೨ ಕದಕದ=ಗದಗದ; (ಸಂ. ಗದ್; ಗದ); ಕದ (ಅಲುಗುವುದು); ೩ ಕದಡು; ಕದಲು; ಗದಡು; ಕದರು-ಕಡರ್ ಮಾಡುವುದು; (Spindle);

೪ ಕದಕದ=ಗದಗದ=ಗಲಗು; ಕದಲಿಸು; ಕದಲೆ (ಗಲಾಟೆ; ಗೊಂದಣ); ಕಾದು; [ಸಂ. ಕದನ; ಮತ್ತು ಕದ್ (ಧಾ.)
'ಕಲ' ನೋಡು.

ಕಪ್, ಗಪ್ಪ ೧ ಕಪ್ಪರಿಸು=ಕುಪ್ಪಳಿಸು (ಸಂ. ಪತ್)
೨ ಕಪಗಪ (ತಿನ್ನು); ಕಬಕ್-ಗಬಕ್ ಎನೆ (ತಿನ್ನು); [ಸಂ. ಕಬಳ; Gulp];

ಕರ್ ೧ ಕರೆ; [ಕಾವ್ ಕಾವ್ ಎಂದು ಕರೆ] ಅ. ಕರ್‍ಯ; ಮ. ಕರ (ಅಳು); ಕ. ಕರು (ಮರಿ). ಹೋ. ಸಂ. ಕ್ರಂದ್; Cry; ಕ. ಕಂದ.
೨ ಕರಗಸ (ಕರ್-ಗಸ್ ಎಂದು); ಕರ್‌ದುಂಕು (ಕದುಕು); ಕರ್‌ಚು; [Crack] ಕರಂಕುರುಂ (ತಿನ್ನು); ಕರ್‌ವು
ಅ. ಕಬ್ಬು (೯); ಹೋ. ಸಂ. ಚರ್‌ವ್; ಚರ್ವಣ;
೩ ಕರ್‌ಖರ್ ಎಂದು (ಗಂಟಲು) ಕೆರೆ;ಕರಕರೆನ್ನು; ಅ. ಕರಕರಪ್ಪು (ತುರಿ);.... ಕಾರು-ಕಕ್ಕು; ಕರಕರೆಪಡು (ಕಳವಳಪಡು); ಆ ಕಳಕಳಿ (ಕಕ್ಕುಲತೆ); ಕರು(ಂ) ಬು (ಹೊಟ್ಟೆ ಕಿಚ್ಚು; ಅಸೂಯೆ); ಹೋ. ಸಂ. ಕಂಡು (ತೀನಿ; ತುರಿ); ಕ(ರ್)ಜ್ಜಿ ಸಂ. ಖರ್ಜು; ಕಂಡೂಯ; ಆ. ಖರೂಜ; ಖರಡಣೇ (ಖರ್‍ರನೆ ಕೆರೆ).
೪ ಕರಡೆ (ವಾದ್ಯ ವಿಶೇಷ); 'ಕರಡೆಯ ಗಿರ್‌ಗಿಟಿ'; ಕರಡೆ (ಕರ್ ಎಂದು ಕಿರಚುವ ಪ್ರಾಣಿ); ಅ. ಕರಡಿ (ಕರಡೆಯು ಕಿರಚುವಂತೆ ಸದ್ದು ಮಾಡುವ ಒಂದು ವಾದ್ಯ-ತಮಿಳು ಕೋಶ); ಕರುವಿ (ತಮಿಳು ನಾಡಿನ ಒಂದು ವಾದ್ಯ ವಿಶೇಷ);
೫ ಕರೆ (ಬೀಳು); ಹಾಲು ಕರೆ; ಮಳೆಗರೆ; ಕಳ್ ನೋಡು.

ಕಲ್ ಕಲ್ ೧ ಕಲಕಲ (ನಿನಾದ); ಕಲಕಲಿಸಿ (ಕಳಕಳಿಸಿ) ನಗು; [ಹೋ. ಕದಕದಿಸಿ ನಗು]; ಕಲಕಲಾಟ; ಕಲಕಲ=ಗಲ ಗಲ; ಕಲ್‌ಕಲ್ (ಎಂದು) ಕಲಹ; ಕಲಿ (ವೀರ) [ಹೋ. ಆರ್‌ಪಿಗ];
೨ ಕಲ್=ಕಲಿ [ಹೋ. ಓದು]; ತು. ಅ. ಮ. ಕಲ್ (ಕಲಿ); ತೆ. ಕರಚು; [ಹೋ. ಅ. ಕಲಿಳ್ (ಅಳು)];
೩ ಗಣಗಣ=ಕಳಕಲ-ಕಲ್ಲು (ಕಣೆ); [ಹೋ. ಅ. ಕಲ್ಲು (ಒಂದು ವಾದ್ಯ; ನುಡಿಸು (ಧಾ)];
೪. ಕಲಿಬಿಲಿ=ಗಲಿಬಿಲಿ (ಕಿಲಿಬಿಲಿ; ಚಿಲಿ ಪಿಲಿ) [ಹೋ. ಗಡಿಬಿಡಿ];
೫. ಹೊಟ್ಟೆಯಲ್ಲಿ ಕಲಕಲ (ಕಳವಳ) ವಾಗು;
೬. ಕಲಕು=ಕದಡು=ಕಲಡು;
೭. ಕಲ್-ಕಾಲು.......ಗಡಗಡ=ಗಳಗಳ; ಕಳ್ ನೋಡು. [ಹೋ. ಅಡಿ; ಸಂ. ಪದ; ಚರಣ];

ಕವ್ ಕವಕ್ಕವ (ಕಾವ್ ಕಾವ್) ಎಂದು ಕರೆ; ಕವಕ್ಕನೆ (ಖಿಸಕ್ಕನೆ-ಖಾತಿಯಿಂದ) ಮಾತಾಡು; ಕೌಬೌ ಮಾಡು; ಅ. ಕವ್ವೈ (ಸದ್ದು; ಕಲಗಲ);

ಕಸ್ ೧ ಕಸ್-ಖಸ್ ಮಾಡು; [ಹೋ. ರಸಕಸಿ; (ತಿಕ್ಕಾಟ); ಸಂ. ಕರ್‌ಕಶ. ಕಸಿವಿಸಿ (ಕಳವಳ); ಕಶ್; ಕಷ್ (ಧಾ)
೨. ಕಸ್-ಖಸ್ ಎನೆ ಕಸಿ; ಕಸ್-ಗಸ್ ಎಂದು ತಿಕ್ಕು.
೩ ಕಸಿ (ಗಸಿ=ಬಸಿ); ಕಚಿಪಿಚಿ (ಹಸಿ); ಕಸರು (ಕಾಯಿ);

ಕಹ್ ೧ ಕಹ್=ಗಹ್ ಗಹಗಹಿಸಿ ನಗು. [ಹೋ. ಸಂ. ಕಖ್ (ನಗು)];

ಕಳ್ ೧ ಗತಿಸೂಚಕ. ಕಳ್ ಖಳ್ ಎಂದು ಪರಿ (ಪ್ರವಹಿಸು).... ಕಾಲು (ನಡೆ).... ಕಾಲುವೆ. ಅ. ಕಾಲ್ (ಪ್ರವಹಿಸು); [ಸಂ. ಕಲ್ (ಗಮ್); ಸ್ಖಲ;] ಕಾಳು (ನೀರ ಹನಿ); ಕಳ್ (ಬೀಳು) ಕಳಿ (ಕಡಿ); ಕಳಚು; ಕಳ್ (ಹಾಲು; ರಸ);
೨ ನಾದ. ಕಳಕಳಿಸಿ ನಗು; ಕಳಕಳ (ಕಲಕಲ); ಕಳವಳ; ಅ. ಕಳರು (ಗಜರು, ಸಾರು; ಕೀರು); ಕಳರಲ್ (ನುಡಿ, ಸೊಲ್ಲು); ಕಳಿ ಹಿಗ್ಗು; ಹೋ. ಕ. ಕಳಿರು (ಗರ್ಜಿಸು ಹೇಕರಿಸು);
೩ ಕಳ (ಕಣ; ಕಣ;) ಕಾಳಗ; ಹೋ. ಸಂ. ಕಲಹ. ಅ. ಕಾಳಮ್ (ಕಾಳೆ ವಾದ್ಯ);

ಕಾ, ಕಾ ೧ ನುಡಿತ; ಕಾಗೆಯ ಕರೆ-ಕೂಗು; ಕಾಗೆ, ಕಾಕೆ...... ಕಾಳೆ (ಕಹಳೆ); 'ಕರೆ' ನೋಡು.
೨ ಕಾದು (ಕಾಳಗಮಾಡು, ಹೋರು); ಕಾದಲು (ಕಾಳಗ); ಹೋ. ಅ. ಕಾದಲ್ (ಯುದ್ಧ); ಕಡಿ; ತುಂಡರಿಸು; ೩ ಪಕ್ಷಿಗಳ ಕಲಗಲ); ಕ. ಗದ್ದಲ; ಸಂ. ಹನ್-ಘಾತ;
೩ ಕಾರು (ಓಕರಿಸು)

ಕಿಕ್-ಖಿಕ್ ಕಿಕ್-ಖಿಕ್ಕನೆ ನಗು (ಅಪಹಾಸ; ಪರಿಹಾಸ);

ಕಿಚ್ ೧ ಕಿಚಪಿಚಿನೆ ಉಲಿವ ಪಕ್ಕಿ; ಕಿಚ್‌ಕಿಳ್ ಎಂದು ಕಿಳಿರು, ಹೇಕರಿಸು; ಕೀಚು (Chirp) ಕೀಚಕ್ಕಿ (ಸಂ, ಕ್ರೌಂಚ); ಕಿಚಗುಟ್ಟು; ಕೀಸರ (ಬಾಸರ); 'ಕಿಸ್' ನೋಡು. ಅ. ಕೀಚಾನ್ (ಕೂಸು);
೨ ಕಿಚಿಕಿಚಿ; ಕಿಚಿಪಿಚಿ (ಕೆಸರು; ಹಸಿ); ಆ ಚಿಕಿಚಿಕಿ; ಹೋ, ಚಿಕ್ಕಣ; ಅ. ಚಿಕಟ (ಜಿಗಟು);
೩ ಕಿಚಿಪಿಚಿ (ಗಜಿಬಿಜಿ); ಕಿಸ್‌ನೋಡು

ಕಿಟ್ ೧ ಕಿಟ್ಟನೆ ಕೀರು=ಚೀರು; (= ಚಿಟ್ಟನೆ); ಹೋ. ಗಿಡುಗ (ಪಕ್ಷಿ);
೨ ಕಿಟಿಪಿಟಿ (ಕಿರುಕುಳ; ಕಟಕಟಿ);

ಕಿಡ್ ಕಿಡುಬುಡಿಕ=ಕುಡುಬುಡಿಕ, ಹೋ. ಗಿಡುಕ್-ಗಿಲುಕ್. ಅ. ಕಿಡುಕ್ಕಟ್ಟಿ (ಸಣ್ಣವಾದ್ಯ); ಕಿಡುಕಿಡ್ಡೈ (ಲಟಕಟಿಸು; ನಡುಗು); ಕಿಡುಪಿಡಿ (ಗಡಿಬಿಡಿ); 'ಕಿಳ್' ನೋಡು.

ಕಿಣ್-ಕಿಸ್ ಕಿಂ (ಗಿಂ) ವೆಂಬ ನುಡಿತ ಕೇಳುವ ಅವಯವ, ಕಿಮಿ (ಕಿವಿ); [ಅ. ಕಿಣಿ (ಕೈತಾಳ ವಾದ್ಯ); ಸಂ. ಕಿಂಕಿಣಿ (ನಾದ)]
೧ ಕಿರಿ ಕಿರಿ (ಕಿಟಿಕಿಟಿ); ಅ. ಕಿರಕೀರ (ಕಿರುಕುಳ; ತಕರಾರು);

ಕಿರ್ ೨ ಕಿರುಗುಟ್ಟು; ಕೀರು (ಚೀರು; ಸಿಟ್ಟಾಗು); ಕಿರಚು=ಕಿಕ್ಕು; (ಹಲ್ಲು) ಕಿರಿ; ಕಿಕ್ಕಿರಿ (ಕೂಗು); 'ಕಿಕ್ಕಿರಿವುತಂ ನಾಮ ಕರೆವುತಂ'; ಕಿರಗುಡು;
೩ ಕಿರ್....ಕಿರಿಕಿರಿ=ಕಿಕ್ಕಿರಿ; ಆ ಕಿರ್‌ಝಾಡಿ (ಅಡವಿ);
೪ ಕಿರಿ=ಕೆರೆ (ಬೋಳಿಸು);
೫ ಕೆಲವು ಪ್ರಾಣಿಗಳ ಹೆಸರುಗಳು; ಸಂ. ಕೀರ (ಗಿಳಿ); ಕ 'ಚಿರ್' ನೋಡು, ಕಿರಬು; ಚಿರ್‌ಚು; ಕಿರಿಯ (ಚಿಕ್ಕವ) ಆ. ಕಿರಾವು (ಕೇಗು; ಕೂಗು);
೬ ಕೀರು=ಗೀರು;

ಕಿಲ್-ಗಿಲ್ ೧ ಕಿಲಿಕಿಲಿ ಮಾಡು. ಅ. ಕಿಳಿ (ಗಿಳಿ); ಕಿಲ್‌ಗಿಲ್ (ಗೆಜ್ಜೆ);
೨ ಕಿಲಕಿಲನೆ ನಗು; (ಹೋ. ಕೆಲೆ=ಕೆಳೆ); ಹೋ Glee
೩ ಕಿಲಿಕಲಿ=ಲಿಕಿಲಿಕಿ ಆಗು [ಸಡಿಲು]; ಕೀಲ;

ಕಿಸ್ ೧ ಕಿಸ್-ಖಿಸ್ ಎಂದು ಕಿರಿ; =ಸಿಟ್ಟಾಗು=ಕಿಸುರು=ಕಿನಿಸು=ಕಿಚ್ಚ, ಕೆಂಡವಾಗು, ಕೆಂಪಾಗು [ಹೋ. ಆ. ರಾಗ (ಕೆಂಪು)=ಸಿಟ್ಟು); ಖೇಸಕಣೆ, ಖೇಕಸಣೇ];
೨ ಕಿಸಿಕಿಸಿ [ಪಿಸಿಪಿಸಿ] ನಗು; ೩ ಕೀಸು (ಹೆರೆ); ಆ. ಖಿಸಣೇ;

ಕೀಳ್ ೧ ಕಿಲಿಕಿಲಿ, [ಗಿಲಿಗಿಲಿ]; ಅ. ಕಿಳಿ [ಗಿಳಿ]; ಕಿಳಪ್ಪು= ಭಾಷೆ; ವಾಕ್; ಕಿಳ್ವೆ [ಕೊಳಲು]; ಹೋ. ಕಿರ್. ಕಿಳಿರು; (ಅ. ಕನ್ನೈ. Neigh;];
೨ ಕಿಳಿರು [ಕೀರು; ಸಿಟ್ಟಾಗು];

ಕುಕ್ ೧ ಕುಕೂಕೂ [ಕೋಳಿಯ ಕೂಗು]; ಕುಕಿಲು [ಕೋಗಿಲದ ನುಡಿ]; ಕುಕಿಲ [ಕೋಕಿಲ]; ಕೊಕ್ಕ=ಕೋಳಿ; ಹೋ. Cock; Cockoo; ಸಂ. ಕುಕ್ಕುಟ;
೨ ಕುಕ್ಕು=ಗುಕ್ಕು;..... ಕುಕ್-ಖುಕ್ ಎನೆ ಕೆಮ್ಮು; ಅ. ಕುಕ್ಕಲ್. ಆ ಖೋಕಲಾ

ಕುಚ್ ೧ ಕುಚುಕುಚು [ಗುಜುಗುಜು]; ಹೋ ಕುಸುಕುಸು-ಗುಸುಗುಸು; [ಹರಟೆ] ಕೊಚ್ಚು;
೨ ಕುಚ್ಚು [ಕುದಿಸು];...... ಕುತ್ ನೋಡು.

ಕುಞ್ ೧ ಕುಞ್‌ಕುಞ್........ಕುಸುಕುಸು [ದನಿದೆಗೆ; ಅಳು];

ಕುಂಯಿ ಕುಞ್‌ನಿ=ಕುನ್ನಿ. ಹೋ. ಕೂ(ಂ) ಯು [ಕೂವು]; ಕೂಸು; ಸಂ. ಕೂಜ್; ಕುಣ್; ಕುಣಕಃ ಅ. ಕುಯ್ಯೋ. ಕುಯಿಲ್ [ನುಡಿ. ಮಾತಾಡು];

ಕುಟ್-ಕುಡ್ ೧ ಕುಟ್ [=ಗುಟ್;.....ಗುಟಕು]....ಕುಡಿ.
೨ ಕುಡು ಕುಡು [ನಡುಗು; ಲಟಕಟಿಸು;]..... ಕೋಡು [ನಡುಗು]; ಆ. ಕುಡಕುಡಣೇ; ಅ. ಕುಡಕುಡಿ [To rattle]; ಕುಡುಕುಡು (ಚಳಿಯಲ್ಲಿ ನಡುಗು);

೩ ಕುಟಕುಟ=ಟೊಕಡೊಕ; ಅ. ಕುಡ್ಡೈವು [Hollow]; ಕುಡುವು, ಕುಡುಹು [ವಾದ್ಯ];

೪ ಕುಟ್ಟು-ಕುಡು [ಕೊಡು]; ಕುಟುಕು [ಕಡಿ;] ಹೋ. ಸಂ. ಕೃತ್,Cut;

ಕುಶ್-ಕುದ್ ೧ ಕುತುಕುತು-ಕತಕ.....ಕುದಿ ಹೋ. ಸಂ. ಕ್ವಥ್; ಅ. ಕುದಂಬು [ಕೊದಿ];

ಕುತ್ ಕುಪ್ಪಳಿಸು [ಕುಪ್ಪರಿಸು];

ಕುಮ್ ಕುಮ್ಮು-ಗುಮ್ಮು[ಗುದ್ದು]; ಅ. ಮ. ಕುಮ್ಮು ಕುಮಕ್ಕು ತೆ. ಗುಮುಕು. ಹೋ. ಕುಟುರು [ಗರ್‌ಜಿಸು]; ಕುಮಿನ್ [ಗೆಜ್ಜೆಯ ಗಿಲುಕು]; ಕುಮು ಕುಮು [ಗರ್ಜನೆ]; ಕುಮ್ಮೈ [ಕುದಿ];

ಕುಯ್ ಕಂಯ್-ಕುಂಯ್ [ನಾಯ ಒರಲು]; ಕು[೦]ಯ್ಯೊ

ಕು(೦)ಯ್ [ಕೂಗು]=ಕುಯಿಲು-ಕೂಯು; ಅ. ಕುಯಿಲ್ [ಆಡು; ಹೇಳು; ಸೊಲ್ಲು; ಶಬ್ದ ಮಾಡು]; ಹೋ. ಸಂ. ಕೂಜ್; ಕೂಜನ; ಕ. ಕುಕಿಲ, ಕೋಕಿಲ; ಅ. ಕುಯಿರು, [ಹೇಳು; ನುಡಿ]; ಆ. ಕೋಲ್ಹೇ ಕುಯೀ [ನರೀ ಕೂಗು];

ಕುರ್-ಖುರ್ ಗುರ್ ೧ ಕುರೆ ಕುರೆ [ನಾಯಿಗೆ ಕರೆವ ಬಗೆ]; ಕುರ್-ಗುರ್-ಗೊರ್ [ನಾಯ ನುಡಿ]; ಕುಕ್ಕುರ [ನಾಯಿ]...ಅ. ಕುರ‍್ರೈ [ಅಲು; ಕೂಗು]; ಹೋ. ಸಂ. ಕ್ರೋಷ್ಟ [ನರಿ]; Crow [ಕಾಗೆ];

೨ ಕುರುಕು; ಕುರುಂ ಕುಟಂ [ತಿನ್ನು];

೩ ಕುರ್, ಕೊರ್ ಮಾಡುವ ಅವಯವರ ಕುರಲು [ಕೊರಲು]; ಕುರಲ್ [ಕೂಗು]; [ಹೋ. ಕುಳಲು-ಕೊಳಲು];... ಕುರ ಕುರಿ [ಬಾಯಿ, ಗಲಾಟೆ]; ಅ. ಕುರ ಕೂರ [ಗೊಣಗು; ತಕರಾರು]; ತೆ. ಕುರ್ರು ಅ. ಮ. ಕುರಲ್ [ಗರ್‌ಜನೆ]; ಕುರವ್ವೈ=ಕಡಲು;........ಕುರವ್ವೈ [ಕುರೊ ಎಂದು ಮಕ್ಕಳ ಕಿವಿಯಲ್ಲಿ ಕೂಗುವುದು],= ಕ. ಕುಟುಕುಟು ಕುರ್ರ; ಹೋ. ಸಂ. ಕ್ರುಧ್... ಕ್ರೋಧ [ಕೋಪ]; ಇದನ್ನು ಕೀರು-ಚೀರುಗಳೊಡನೆ ಹೋಲಿಸಬಹುದು; ಅ. ಕುಱುಂಬು [ಕದನ];

ಕುಲ್-ಗುಲ್ ೧ ಕುಲುಕುಲು=ಗುಲುಗುಲು; ಕುಲಕ್-ಗುಲಕ್; ಗುಲ್ಲು [ಸದ್ದು];

೨ ಕುಲುಕುಲು ನಗು; ಆ. ಗುಲುಗುಲು (ಅಕ್ಕರೆಯ ಮಾತು); ಅ. ಕುಲಾ [ಹಿಗ್ಗು]; ಕುಲಲಿ (ವೀರಾವೇಶದ ಗರ್‌ಜನೆ; ಜಯಧ್ವನಿ]; ಕುಲುಕು [ಅಲುಗು; ಕಲಡು]; [ಹೋ. ಗುಳಕ್]; ಆ. ಖುಳುಖುಳು ಕರಣೇ; ಅ; ಮ. ಕುಲುಕು; ಹೋ. ಕುಡು ಕುಡು; .... ಅ. ಕುಲುಂಗು; ಮ. ಕುಲುನ್ನು [ನಡುಗು];

ಕುಸ್ ೧ ಕುಸುಕುಸು=ಗುಸುಗುಸು ಮಾಡು (ಗೊಣಗು);.... ಕೂಸು; 'ಕುಚ್' ನೋಡು. ಆ. ಕುಜಬೂಜ (ಕುಣುಕುಣು, ಗುಣುಗುಣು); ಹೋ. ಸಂ. ಘುಷ್; ಘೋಷ;

೨ ಕುಸಿ; ಕುಸುಕುಸು (ಕಚಿಪಿಚಿ ಮಾಡು; ಕಿವುಚು; ಕಿಕ್ಕು; ಒಗೆ); ಆ. ಕುಸಕರಣೇ

ಕುಹ್ ಕುಹುಕುಹು=ಕೂಗು

ಕುಳ್ ೧ ಕುಳುಖುಳು=ಕುಡುಬುಡು [ಶಬ್ದ]; ಆ. ಖುಳಖುಳಾ [ಗಿಲಗಂಜಿ, ಆಟಿಗೆ]; ಕುಳಕ್-ಗುಳಕ್ [ಶಬ್ದ]; ೨. ಕುಳಲು=ಕೊಳಲು; ಹೋ. ಅ. ಕುಳರು [ಕೂಗು]; ತೊದಲ್ನುಡಿ; ಕುಳ (ಕೂಸು); ಕುಳಮು [ಗರ್‌ಜನೆ);

ಕೂ ಕೂವು=ಕೂಗು; ಸಂ. ಕೂಜ್, ಅ. ಕೂನ್ (ಗೂಗೆ); ಹೋ. ಅ. ಕೂಳಿಯರ್ [ವೀರರು; ಬೇಡರುಮುಂ]; ಇದನ್ನು ಆರ್‌ಪಿಗ, ಕಲಿಗಳೊಡನೆ ಹೋಲಿಸಬಹುದು.

ಕೆಕ್ ಕೆಕ್-ಖೆಕ್ [ನಗು]; ಅ. ಕೆಕ್ಕಲಿ; ತೆ. ಗೆಗ್ಗಲಿಂಚು [Checkle] ; ಕೇ [ಖೇ] ಕರಿಸು; ಕೆಕ್ಕರಿಕೆ [ಕೇಕರಿಕೆ]; ಕೆಕ್ಕಸ [ಬೈಗುಳ; ಕೆಃ ಎಂದು ಹೀಯಾಳಿಸು]; ಆ. ಖೇಕಸಣೇ; ಕೆಕ್ಕು [ದನಗಳನ್ನು ಕರೆವಾಗಿನ ದನಿ; ಚೆರ್ಯ ನೋಡು; ಕೆನೆ (ಹೇಕರಿಸು); ಅ. ಕನ್ಯೆ; ಕೇಗು; ಸಂ. ಕೇಕಾ (ರವ);

ಕೆಚ್-ಕೆರ್ (ಕಿಸ್) ೧ ಕೆರೆ (ಕೆದರು; ಗೀರು;); ಕೆರ್ ತು=ಕೆತ್ತು; ಹೋ. Crack; Scrach;

೨ ಕೆರಳು (ಕೆಳರು) ಹೋ. ಕೀರು; ಕಿಳಿರ್ [ಹೇಕರಿಸು; ಕೂಗು]; ಅ. ಕೆರಟ್ಟು (ಕರ್‌ಕಶ ಶಬ್ದ); ಕೆಚ್ಚು=ಕೀಚಿಡು.

೩ ಕೆರ್‌ಪು (ಕೆರ, ಕೆರಹು); ತ. ಚೆರಪು ಕ. ಚಪ್ಪಲಿ;

ಕೆಲ್ (ಕಿಲಿ) ೧ (ಕಿಲಿ ಕಿಲಿ) ಕೆಲೆ.... ಕೆಳೆ (ಗೆಳೆ); ಕೆಳೆಯ (ಗೆಳೆಯ); ಸಂ. ಕೇಳಿ.

೨. ಕೆಲೆ (ಕೂಗು; ಜಯಘೋಷ ಮಾಡು)=ಗೆಲೆ=ಗೆಲ್ಲು. ಅ. ಕೆಲಿಪ್ಪು (Joy); ಕ. ಗೆಲುಹು (ಸಂತೋಷ);

ಕೇ ೧ ಕೇಗು; ಕೇಕೆ; ಸಂ. ಕೇಕಾ; ಕೇಕಿನ್; ...... ಕೇವ (ಅಹಂಕಾರ); ಕೇಣ (ಮತ್ಸರ; ಸಿಟ್ಟು); ಕೇಕರಿಕೆ (ಖೇಕರಿಕೆ); ಅ. ಕೇಲಿ (ನಲಿದಾಟ; ಕೆಲೆದಾಟ;) ಕೇಳ್ವಿ (ಶಬ್ದ ನಾದ); ಕ. ಗೇಲಿ (ಹೀಯಾಳಿಕೆ).

೨ ಕೇರಿ (ಅ. ಚೇರಿ) ಜನರ ಗಲಾಟೆಯುಳ್ಳುದು, ಓಣಿ. ಅ. ಕೇರು (ಕುಜುಗುಜು, ಗುಣುಗಣು ಮಾತಾಡು);

ಕೊಕ್ ೧ ಕೊಕ್ ಕೊಕ್ ಎನೆ ನಗು.... ಕೊಳ್ಳನೆ ನಗು. 'ನಕ್ಕು ನಕ್ಕು ಮಾತಾಡುವ ಕೊಕ್ಕರೆ' (ಗಾದೆ ಮಾತು); ಆ. ಖೋಖೊ ಹಸಣೇ; ಖದ ಖದಾ ಹಸಣೇ; ಕೊಕ್-ಖೊಕ್ ಎಂದು ಕೆಮ್ಮು.... ಕೊಕ್ಕರಿಸು (ಗೆಲುವಿನಿಂದ ಕೂಗು); ಅ. ಕೊಕ್ಕರಿ; ತೆ. ಕೊಕ್ಕರಿಂಚು. ಹೋ. To Chuckle; Giggle; ಕೊಕ್ಕರಿಸು (ಅದೇ ದನಿ ಸ್ವಲ್ಪ ಬದಲಾದರ ಹಿಗ್ಗಿನ ಬದಲು ಹೀಯಾಳಿಸು ಎಂಬರ್ಥವಾಗುವುದು); ಕೊಚ್ಚು (ಹರಟೆ ಹೊಡೆ); ಅ. ಕೊಂಚು

೨ ಕೊಕ್ಕು; ಕೊಕ್ಕರೆ; ಸಂ. ಕೋಕ; ಕೊಕ್= Cluck; ಕೊಕ್ಕು-ಕೊಕ್ಕಿ=ಕುಕ್ಕುವ, ತಿನ್ನುವ ಚುಂಚು.

ಕೊಟ್ ೧ ಕೊಟ ಕೊಟ [ಟೊಕ ಟೊಕ=ಡೊಗ ಡೊಗ];... ಕೊಟ ಕೊಟ, ಕೊಟ್ ಟೊಕ ಮಾಡುವುದು ಕೊಡ; ಆ. ಖೋಟಾ (ಸುಳ್ಳು);

	೨ ಕೊಟ್=ಕುಟ್ಟು=ಕೊಟ್ಟಣ;
	೩ ಕೊಡು (ಕುಡು; ಹೊಡೆ); ಆ. ಕೊಟ್ಟು (ಹೊಡೆ; ಕುಟ್ಟು); ಕೊಟ್ಟು (ವಾದ್ಯ).
ಕೊಣ	೧ ಕೊಣ ಕೊಣ=ಗೊಣ ಗೊಣ; ಕೊಣಗು (ಕುಣಿ);
ಕೊಂಯ್	ಕೊಂಯ್=ಕುಂಯ್; ಆ. ಕೊನ್ನೈ (ತೊದಲ್ನುಡಿ);
ಕೊರ್	೧ ಕೊರ್-ಗೊರ್... ಕೊರಲು=ಕೊರಳು;..... ಕೊರ ಚಾಟ=ಅ. ಕೊರು ಕೊರು; ತೆ. ಕೊರ ಕೊರಲಾಡು; ಕೊರಚು=ಕೊಚ್ಚು (ಹರಟೆ). ಅ. ಕೊಱ್ರಮ್ (ಗೆಲುವು; ಶೌರ್ಯ; ಶಕ್ತಿ) ಹೋ. ಕ. ಆರ್‌ಪು.
	೨ ಕೊರೆ (ಹೋ. ಗೋರು); ಕೊಚ್ಚು (ಹರೆ);
ಕೊಳ್	೧ ಕೊಳ್-ಖೊಳ್ ಎನೆ ನಗು; ಕೊಳಲು (ಮುರಲಿ) ಅ. ಕೊಳ್ಳೈ (ಹಾಡು; ತಾಳ್ ಹಾಕು);
	೨ ಕೊಳಗುಳ (ಕಣ; ರಣ) ಹೋ. ತುಮುಲ; Tumult.
ಕೋ	೧ ಕೋಗಿಲ; ಕೋಳಿ; ಮ. ಅ. ಕೋಳಿ; ತೆ. ಕೋಡಿ; ತು.
(ಕುಕೂ)	ಕೋರಿ. ಅ. ಕೊಟ್ಟು (ವಾದ್ಯ);
	೨ ಕೋಡಿ=ಖೋಡಿ=ಕೌ (ಪೆದ್ದ, ಹುಚ್ಚ). ಮ. ಅ. ಕೋಟ್ಟೈ; ತೆ. ಕೋಡಿಗ; ಕ. ಕೋಡಗ. ಆ. ಕೋಡಗಾ (ನಾಣಿಲಿ)
ಗಕ್	೧ ಗಕ್ಕನೆ ನಿಲ್ಲು; ೨ ಗಗ್ಗರ (ಗಂಗರ); ಗಗ್ಗರಿ (ಗೆಜ್ಜೆ);
ಗಚ್	೧ ಗಚ್ಚು; ಗಟ್ ನೋಡು.
ಗಜ್	೧ ಗಜಬಜ (ಗಲಾಟೆ); ಆ. ಗಾಜಾವಾಜಾ; ಕ. ಗಜರು; ಗಜರಿ (ಗರ್ಜಿಸಿ); ಆ. ಗಜರ (Alarm);
ಗಟ್	೧ ನುಡಿತ; ಗಟಗಟ ಕುಡಿ; ಆ. ಗಟ್ಟ ಕರಣೇ (ನುಂಗಿ ನೀರು ಕುಡಿ); ೨ ಗಟ್ಟ (ಘಟ್ಟ); ಗಟ್ಟಿ; ಗಡಸು; ಹೋ. ಕಡವ; ಕಡಲ್; ಗಂಡು. ಗತಿಸೂಚಕ; ೩ ಕಲ್ ಕಳ್ ನೋಡು ಗಡಗಡ; ಗಡಗಡೆ- ಗಾಲಿ (ಕಾಲಿ; ಚಕ್ರ); ಗಾಡಿ; ಗಡದಡ=ಗಡಬಡ- ಗಡಿಬಿಡಿ ಆ. ಗಡಬಡ. ಅ. ಚಕ್ಕಟ್ಟಿ ಚಕ್ಕಟ್ಟಿ ಎನಲ್ (Repeated Thud)
ಗಣ್ (ಕಣ್)	೧ ಗಣಗಣ....ಗಂಟೆ (Gong) ಗಂಗಾಳ;
	೨ ಗಣಿ (ಕಣಿ); ಗಾಣ (ಗಾಳ); ಗಣಿ (ಖಣಿ);
ಗದ್	೧ ಗದಗದ=ಗಡಗಡ (ನಡುಗು); ಸಂ. ಗದ್ಗದ;
	೨ ಗದರು=ಗದ್ದರಿಸು; ಗನೆ; ಗದರು; ಅ. ಕನ್ನೈ= ಸಂ. ಗದ್ (ಮಾತಾಡು; ನುಡಿ);
ಗಪ್/ಗಬ್	ಗಪಗಪ=ಗಬಗಬ ತಿನ್ನು
ಗರ್	೧. ಗರ್ ಎನೆ ತಿರುಗು; 'ಗಿರ್' ನೋಡು.
	೨ ಗರ್‌ಜನೆ ಸಂ. ಗರ್‌ಜ್; ಗರ್‌ದ್; ಹೋ. Grunt
ಗಲ್	೧ ಗಲಗಲ=ಕಲಕಲ; ಗಲಾಟೆ; ಗಲಿಬಿಲಿ; ಆ. ಗಲಕಾ; ಗೆಜ್ಜೆಯ ಗಲುಹು; ೨ ಗಲ್ಲಣೆ; ಗಲ್ಲಿಸು; ೩ ಗಲಗು;

ಗವ್	೧ ಗವ್-ವೌ; ಗವ್ವ (ನಾಯ ಬೊಗಳು) ಗವುರು (ಗರ್ಜನೆ); ಗವುಜು, ಗವುಜಿ (ಗಣ್ಪೆ); ಗವುರ್ ಉಗಿವ ಹೆಗ್ಗಾಳಿ, ಗವುರಿ ಕಾಳಿ; ಅ. ಕವ್ವೈ (ಗಲಾಟೆ; ನಿಂದೆ, ಅಪವಾದ;) ಕ. ಕಬ್ಬೆ ಕಲಬ್ಬ (ಆಟದಲ್ಲಿ). ೨ ಗವಗವ (ಲೇನಿ);
ಗಸ್ (ಕಸ್)	೧ ಗಸ್‌ಗಸ್ ತಿಕ್ಕು ಸಂ. ಕಶ್, ಕಷ್, ಕಸ, ೨ ಗಸಕ್ಕೆನೆ (ಒಮ್ಮೆಲೆ; ಭೋಂಕೆನೆ);
ಗಹ್	ಕಕ್‌ಕ್=ಗಹ್; ಗಹಗಹಿಸಿ-ಕಳಕಳಿಸಿ ನಗು; (Glee)
ಗಳ್	೧ ಗಳಗಳ (ಕಳಕಳ); ಗಳಹು=ಗಳಪು (ಸೊರಹು);
ಗಾ	ಕಾ, ಕಾ=ಗಾ. ಗಾನ...'ಗೀ' ನೋಡು.
ಗಾಲ್	ಗಾಲಿ (ಕಾಲು, ಕಾಲಿ; ಹೋ. ಸಂ. ಚಲ್; ಚಕ್ರ ಕಾಲ್=ಚಾಲ್; ಚಲ್;)
ಗಾವ್	ಗಾವರ=ಗಾವಳ=ಗಾವಳಿ (ಸದ್ದು, ಗವುಜು); ಗಾವಳಿಗ (ಧಾಂದಲೆಕೋರ); ಹೋ. ಗಾ (ನ);
ಗಾಸ್ (ಕಸ್)	ಗಾಸಿ; ಗಾಸಿವೀಸಿ;
ಗಾಳ್	ಕಳಕಳ=ಗಳಗಳ.... ಗಾಳಿ (ಎಂದರೆ ಚಲಿಸುವುದು, ಶಬ್ದ ಮಾಡುವುದು); ಅ. ಕಾಲ್; ತು. ಗಾಲಿ;
ಗಿಜ್	೧ ಗಿಜಿ=ಗುಜು (ಮಾತು); ಗಿಜವಾಯಿ (ಅಸ್ಪಷ್ಟ ಮಾತಿನವ); ಗೀ ಜಗ (ಹಕ್ಕಿ); ೨ ಗಜಿಬಿಜಿ (ಗಲಾಟೆ);
ಗಿಟ್ (ಗಿರ್)	೧ ಗಿಟಗರೆ (ಧ್ವನಿಮಾಡು); ಗಿರ್‌ಗಿಟ್; ಗಿರಿಗಿಟ= ಗಿಟಗಿರಿ;.... ಗಿಡಗ (ಹಕ್ಕಿ); ೨ ಗಿಟಕು (ಟೆಂಗು) ೩ ಗೀಟು=ಗೀರು; ೪ ಗಿಟ್ಟು; ಗಿಡಿ (ಗಪಗಪ ಹೊಡಿ); ಹೋ. Grab.
ಗಿಮ್	ಗಿರ್ ನೋಡು; ಗಿಮಿ ಗಿಮಿ (ತಿರುಗು; ಸುತ್ತು)
ಗಿರ್	೧ ಗಿರ್ರನೆ ತಿರುಗು; ಗಿರಿಕೆ (ಸುತ್ತು ಲಾಗ; ಗಿರುಗುಟ್ಟು; ಗಿರ್‌ಗಟೆ (ಕರಡೆ ನಾದ); ಗಿರುಗಟೆ (ತಿರುಗಣೆ); ೨ ಗೀರು (ಗೀಟು; ಗೆರೆ); ೩ ಸಂ. ಗಿರಾ (ನುಡಿ); ಗೀತ;..... ಗಿಕ್ ಫಿಕ್ (ಮಂಗನ ನುಡಿ); ಕಿರಿ ಕಿರಿ ನೋಡು. ೪ (ಹಲ್ಲು) ಗಿರಿ (Grin);
ಗಿಲ್	ಗಿಲ್ ಗಿಲ್... ಗೆಜ್ಜೆ; ಗಿಲುಕ್; ಗಿಲಿಗಿಂಚೆ; ಗಿಲಿಗಿಲಿ;
ಗೀ	ಗೀಳಿಡು (ಛೀಳಿಡು) ಗೀಚಲು (ಗೀಜಲು) ಹಕ್ಕಿ; ಗೀಜಗನ ಹಕ್ಕಿ;...ಗೀಗೀ ಪದ; ಸಂ. ಗೀತ.
ಗುಕ್	೧ ಗುಕ್ (ಘುಕ್) ಸಂ. ಘೂಕ; ಕ. ಗೂಗೆ ೨ (ಎದೆ) ಗುಕ್ಕು ಎನ್ನು (ಹೆದರು); ೩ ಗುಕ್ಕ; ಗುಕ್ಕು-ಗುಗ್ಗು=ಉಗ್ಗು (ತೊದಲು);
ಗುಜು	ಗುಜುಗುಜು: (ಕುಚುಕುಚು); ಗುಜುಗುಜು ಮಾಪುರೆ (ಹುಡುಗೆಯರ ಆಟ); ಅ. ಕುಜಬೂಜ. ಸಂ. ಗಜ್ (ನುಡಿ, ಜೇಂಕರಿಸು);

ಗುಂಯ್	೧ ಗುಂಗಿ= ಗುಂಗುರ; ಗುಂಗಾಡಿ; ಗುಂಗಿಹುಳು;
	೨ ಗುಂಗು (ತನ್ಮಯತೆ; ವಿಸ್ಮೃತಿ);
ಗುಟ್	೧ ಗುಟುಗುಟು (ಕುಡಿ); ಗುಟ್ಟಿ (ಹಾಕು); ಗುಟುಕು; ಗುಟಕರಿಸು; ಹೋ. ಸಂ. ಗುಟಿ; ಗುಟಿಕಾ
	೨ ಗುಟರು (ಎತ್ತು ಹೋರಿ); ಗುಡುಗು;
ಗುಡು	೧ ಗುಡುಗುಡು (ಮಾಡು);... ಗುಡುಗು; ಹೋ. ಗುರು ಗುರು;
	೨ ಗುಡುಗುಡಿ; ೩ ಗುಡುಗುಡು ಉರುಳು; ಹೋ. ಗುಳು ಗುಳು;
ಗುತ್, ಗುದ್	೧ ಗುತ್ತು (ದಟ್ಟ) ಕಿರ್.... ಕಿಕ್ಕಿರಿ ನೋಡು.
	೨ ಗುದ್ದು (ಗುಮು=ಕುಮ್ಮು); ಗುದಿಗೆ (ಬಡಿಗೆ); ಗುದ್ದಲಿ ಸಂ. ಕುದ್ದಾಲ, ಆ. ಷೋರೆ; ೨ ಗುದುಗುದು (ತೀನಿ);
ಗುಣ್/ಗುಮ್	೧ ಗುಮ್ಮು= ಕುಮ್ಮು ೨ ಗುಂಡು(ಗುಡುಗುಡು; ಗುಳು ಗುಳು=ಗೋಲಿ); ಗುಳ್ಳಿ ೩ ಗುಮ್ಮು (ನೀರು)=ಗುಂಭ.
ಗುರ್	೧ ಗುರ್=ಗೊರ್=ಕೊರ್; ನಾಯಿಗುರ್ ಎನ್ನುವುದು. ಗುರುಗುಟ್ಟು; (Groan, Grin, Grnnt); ಗೊರಕೆ (Snore) ಹೋ. ಸಂ. ಗು. (ಧಾತು), ಮಾತಾಡು; ಸಾರು; (ಜೋಗು); ೨ ಗುರುಗುರು ಬೀಸು; ೩ ಗುರುಗುರು ಉಬ್ಬು; ಗುರೋಳಿ ಗುಳ್ಳೋರಿಗೆ (ಹೋಳಿಗೆ ಪ್ರಕಾರ);
ಗುಲ್	೧ ಗುಲುಗುಲು (ಕುಲುಕುಲ) ಮಾತು; ಗುಲ್ಲು=ಗವುಜಿ= ಉಲುವು.
	೨ ಗುಲುಕ್=ಘುಲುಕ್ (ಗೆಜ್ಜೆ);.... ಗುಳುಗುಳು.
ಗುಸ್ (ಕುಸ್)	೧ ಗುಸುಗುಟ್ಟು; ಗುಸು ಕುಸು ಮಾತಾಡು ಹಿಂ. ಘುಸ್ಸಾ (ಸಿಟ್ಟು);
ಗುಳ್	೧ ಗುಳುಂ ಎನೆ ನುಂಗು; ಗುಳುಗುಳು ನುಂಗು;
	೨ ಗುಳಕ್ ಎಂದು ಉರುಳು; ಗುಳಕ=ಗುಣಕ; ಗುಣಿ; ಗುಳ್ಳಿ=(ಆ. ಗೋಳಿ)=ಗೊಟ್ಟಿ. ೩ ಗುಡುಗುಡು ಉಬ್ಬಿದುದು ಗುಳ್ಳೆ.
ಗೂ	೧ ಗೂಗೆ=ಗೂಬೆ; ೨ ಗೂರು (ಉಬ್ಬಸ);
ಗೆ=ಕೆ	೧ ಗೇಲಿ; ಗೆಲ್ಲ; ಗೆಜ್ಜೆ [ಗಿಲ್, ಕಿಲ್]; ಹೋ. ಸಂ. ಗೇಯ [ಗೀತ]
ಗೊ	೧ ಗೋಗರೆ; ಗೊಣಗು; ಗೊರಕೆ;....ಗೊರವಂಕ
	೨ ಗೊಳ್-ಖೊಳ್ ಎಂದು ನಗು; ಗೊಳೊ ಎಂದು ಅಳು; ಗೋಳಿಡು, ಹೋ. ಸಂ. ಘುಷ್... ಘೋಷ. ಗೊಣಗು= ಗೊಜಗು; ಗೊಜಬಿಜ;
	೩ ಗೊಮ್-ಗೊಞ್ ಎಂದು ನೊಣ. ೪ ಗೋರು [ಕೊರೆ; ಗರೆ];
ಚಕ್	೧ ಚಕಚಕ=ಝುಗಝುಗ; ಚಿಕಚಿಕ; ಚಕಮಕಿ [ಕಲ್ಲು] ಹೋ. ಲಕಲಕ; ಸಂ. ಕಾಶ್; ಚಕಾಸ್;.... ಕ. ಚೆಕ್.... ಚೆಲ್.......ಚೆನ್.... ಕೆನ್; ಅ. ಶೆನ್..... 'ಚಣ್' ನೋಡು.
	೨ ಚಕ್ಕನೆ.... ಚಂಗನೆ [ಜಿಗಿ; ನೆಗೆ]; ೩ ಚಗಿ=[ಚಂಗು]=ಜಗಿ; ಚಚ್ಚು = ಜಜ್ಜು ಚಕಮಕಿ.

೩ ಚಕ, ಚಕ್ ನಡೆ [ಗತಿಯ ನಾದ]; ಚಟ[ಕ್] ಚಟ [ಕ್] ನಡೆ; ಅ. ಚಕ್ಕಟ್ಟಿ ಚಕ್ಕಟ್ಟಿ ಎನಲ್ ಹೋ. ಸಂ. ಶಕಟ; ಕ. ಚಕ್ಕಡಿ; ಸಂ. ಗಮ್... ಜಗಾಮ

ಚಾಚಾ ೧ ಚಚ=ಚಾಚಾ=ಚಾ; ಸಾ [ಮುಂದೆ ನಡೆ, ಸಾಗು ಎಂದು ದನಗಳನ್ನು ಪ್ರಚೋದಿಸುವಾಗ ಹೇಳುವ ವಾಡಿಕೆ); ಹೋ. ಸಂ ಚಲ; ಕ. ಸಾಗು; ಸಾರು.

ಚಟ್ ೧ ಚಟ್=ಛಟ್; ಚಟಲ್-ಚಳಿಲ್- ಚಟಿಲ್; ಚಟಾಕಿ;
೨ ಚಟಚಟ ನಡೆ; ಚಟುವಟಿಕೆ; ಚಟ್ಟನೆ ಏಳು;
೩ ಚಡಪಡ= ಚಟಪಟ (ಒದ್ದಾಟ);

ಚಣ್ (ಚಣ್) ೧ ಚಣ್=ಜಣ್; ಚಣಲ್=ಜಣತ; ಚಂಡೆ=ಚೆಂಡೆ [ಒಂದು ಬಗೆಯ ವಾದ್ಯ]; ಅ. ಚಕಡ್ಯೆ.

ಚಂ-ಚೆಂ ೧ ಚಕಂಡ್ಯೆ; ಚೆಂಡೆ; ಚಕ್ಕೆ; ಸಂ. ಚನ್ [ನುಡಿ]; Sound;
೨ ಚೆಣ್ ಚೆಣ್ [ಬಿಸಿಲು]; ಸಂ. ಚಂಡ-ಪ್ರಚಂಡ; ಕ. ಕೆಂಡ;.... ಸಂ. ಚಕ್; ಚಣ್; ಮತ್ತು ಕನ್ [ಹೊಳೆ]; ಕ. ಕನಿ [ಹೊಳೆ]; ಅ. ಮ. ಕನಿವು. ಕ. ಕನ್ನಡಿ [ಲಕಲಕ ಹೊಳೆಯುವ ವಸ್ತು]; ಕನಲು [ಹೋ. ಕಿಡಿಕಿಡಿಯಾಗು; ತಪ್ತನಾಗು; ಅ. ರಾಗ];

ಚಪ್ ೧ ಚಪ್=ಸಪ್. ಚಪ್ಪಳಿ [ಚಪ್ಪಾಳೆ]; ಚಪರಾಕಿ [ತಪ ರಾಕಿ]; ಚಪ್ಪರಿಸು [ತಟ್ಟು, ಹೊಡೆ]; ಚಪ್ಪು, ಜಪ್ಪು [ಚೀಪು]=ಜಬ್ಬು [ಜಗಿ, ಜಜ್ಜು];
೨ [ಗಳಗಳ] ಚಪ್ಪರಣೆ [Chirping]; ಬಾಯಿ ಚಪ್ಪರಿಸು.
೩ ಚಪ್ಪಲಿ [ಚೆರ್‌ಪು; ಕೆರ]; ಚಬಕ; ಚಪಚಪ ಹೊಡೆ;
೪ ಚಪ್ಪಟೆ; ಹೋ. ಸಟೆ [ಪುಸಿ]; ಸಪ್ಪೆ; ಅ. ಚಾಪಾಡು=ಸಾಪಾಡು; [Supp; Supper]; ಚಾಪ್ಪಿಡು; ಚಾರು=ಸಾರು;

ಚರ್ (ಸರ್) ೧ ಚರಚರ=[ಚಟಚಟ] ಸರಸರ [ನಡೆ]; ಹೋ. ಸಂ. ಚರ್; ಸರ್. ಕ. ಸರಿ; ಸಾರು; 'ಚಲ್' ನೋಡು;
೨ ಚರಚರ ಸರಸರ [ಹರಿ; ಕೊಯ್ಯು]; ಚರಕರ ತಿನ್ನು- ಹೋ. ಸಂ. ಚರ್‌ವ;

ಚಲ್, ಚಿಲ್ ೧ ಚಲಮಲನೆ ಸುಳಿ; ಚಳಪಳ; ಕೈ ಚಳಕ; ಕೈ. ಚಳಕ; ಸಂದಿನಲ್ಲಿ ಚಳಕ್ಕೆನ್ನು; ಚಳಕುಹಿಡಿ. ಹೋ. ಸಂ. ಚಲ್ [ನಡೆ] = ಚರ; ಅ. ಚಳಚಳ [ಹನಿ; ಹಸಿಯಾಗು;] ಜಲ [ನೀರು]; ಚಳಚಳ= ಚುಳುಚುಳು=ಜುಳುಜುಳು.
೨ ಚಲಚಲ=ಚಿಲಿಚಿಲಿ;... ಚಳಿ [ನಡುಕ]; [ಹಲ್ಲು; ಕೈ] ಚಳಿ. ಚಿಲ್; ಚೆಲ್ ನೋಡು.

ಚವ್ ೧ ಚವ್. ಚವಿ=ಸವಿ; ಅ. ಚಽವ; ಕ್ಲ. ಚವುಳು=ಚಪ್ಪೆ=ಸಪ್ಪೆ ಅ. ಚವಟ್ಟು ಸಂ. ಚರ್‌ವ್; chew;
೨ ಅ. ಚವಟ್ಟು=ಚಿವುಟು

ಚಕ್	ಚಿಕಿಚಿಕಿ=ಕಿಚಿಕಿಚಿ [ಜಗಿಜಗಿ]; ಚಿಕ್ಕಣ; ಅ. ಚಿಕ್ಕು=ಸಿಕ್ಕು [ತೊಡಕು; Stick] ಆ. ಚಕsಟ; [ಜಗಟು]; ಚೀಕ;
ಚಟ್=ಚರ್	೧ ಚಿಟ್ಟನೆ ಚೀರು; ಸಂ. ಚೀತ್‌ಕಾರ; ಆ. ಚಿಡಣೇ [ಸಿಟ್ಟಿಗೇಳು]; ಚಿಟ್=ಸಿಟ್;
	೨ ಚಿಟಿಸಿಟಿ ಮಳೆ; ೩ ಚಿಟಿಕಿಟಿ=ಚಿಟಿಪಿಟಿ [ಕಿರುಕುಳ, ತೊಂದರೆ]; [ತಲೆ] ಚಿಟ್ಟೆನ್ನ; ಚಿಚಿಚಿಟ [ತಲೆಹೊಡೆ, ನೋಯು]; ೪ ಚಿಟಿಕೆ; ಚಿಟಕು [ಮುರಿ]=ಚಟಕು ಮುರಿ;
ಚಪ್	ಚಪ್, ಚಟ್ ನೋಡು. ಚೀಪು=ಸೀಪು; [Sip];
ಚಿಂ	೧ ಚಿಂಯ್, ಚಿಂವ್ [ಚ್ಯಾಂಪ್ಯಾಂ=ಚಿಕ್ಕಮಕ್ಕಳು;]; ಚಿಂವಕ್ಕಿ; ಆ. ಚಿಮಣಿ [ಗುಬ್ಬಿ]; ಹೋ. ಚಿಳ್ಳೆ;
ಚರ್-ಚೀರ	೧ ಚಿರಿಚಿರಿ=ಕಿರಿಕಿರಿ; ಚಿರಿಚು [ನಗು]; ಚೀರು ಅ. ಬಿರಿ [ನಗು]; ಆ. ಚಿರಡೀಸಯೇಣೇ; ಚಿಡಣೇ [ಕಿರಿಕಿರಿಯಾಗು];
	೨ ಜಿರ್=ಜಿರ್; ಚೀರೇಳು; ಚಿರತೆ [ಚಿರ್‌ಚು; ಕಿರಬು];
	೩. ಚೀರು [ಸೀಳು]; ಚಿರ್‌ಣ=ಚೀರಣ; ಚಿವುರು; ಆ. ಚಿರಣೇ;
ಚಿಲ್	೧ ಚಿಲ್=ಜಿಲ್; ಚಿಲ್ಲೆಂದು ಸಿಡಿ, ಸೋರು; ಚಿಲ್ಲ=ಚಿಲ್ [ಛಿಲ್]; ಚಿಲುಮೆ [ಸೆಲೆ]; ಚೆಲ್ ನೋಡು;
	೨ ಚಿಲಿಪಿಲಿ....ಚಿಳ್ಳೆ ಪಿಳ್ಳೆ; ತೆ. ಚಿಲುಕ [ಗಿಳಿ]; ಚಿಲ್ಲರೆ [ಚಿಲ್+ಅರೆ]; ಅ. ಚಿಲ್ಲಿಡು [ಚಿಂಯ್ ಮಾಡು];
ಚಿಳ್	೧ ಚಿಲ್=ಚಿಳ್ಳೆಂದು ಹಾಲು ಕರೆ; ಚಿಳಿಚಿಳಿ ಬಾಯಿಗೆ ನೀರು ಊರು; [ಚಿಲುಮೆ];
	೨ ಚಿಳ್ ಪಿಳ್, ಚಿಳ್ಳೆ [ಮರಿ, ಕೂಸು]; ಹೋ. Chuckle ಅ. ಚಿಲಪ್ಪಡಿ [ಜಲ್ಪಕ]; ಚಿಲುಪ್ಪು [ಸಿಟ್ಟಾಗು]; ಚಿಲ್ಯೆ [ಕಿಲೆ];
	೩ ಚಿಳಿಲ್=ಛಟಿಲ್ ಎಂದು ಸುಡು; ಶಸ್ತ್ರಗಳ ತಾಕಲಾಟ;
ಚುಚು	೧ ನಾಯಿ ಕರೆವಾಗ; ಚು-ಛು [ನಾಯಿಗೆ ಹುರಿದುಂಬಿಸಿ ಮೇಲ್ವಾಯಲು ಪ್ರೇರಿಸುವಾಗ]; ೨ ಮರುಕ, ಮಿಡುಕಿನಲ್ಲಿ ತ್ಚು-ಚು, ಚು;
ಚುಟ್	೧ ಚುಟ್=ಸುಟ್; ಚುಟು ಚುಟು ಎಂದು ಸುಡು. ಅ. ಚುಡು [ಸುಡು]; ಚುಡರ್=ಸೊಡರು [ಬೆಳಕು; ಸೂರ್ಯ; ದೀಪ]; ಹೋ. ಪ್ರಾ. ಚುಲ್ಲಿ=ಆ. ಚೂಲ [ಒಲೆ];
	೨ ಜೀವವು ಚುಟುಚುಟು ಎನ್ನುತ್ತಿದೆ. ೩ ಚುಟಿಕೆ=ಚಿಟಿಕೆ.
ಚುಮು	ಚುಮುಚುಮು=ಜುಮುಜುಮು ನಸುಕು.
ಚುಂಯ್	ಚುಯ್, ಚುಟ್ ಎಂದು ಸುಡು; ಚುಯ್ ಎಂದು ಬೇಯು;
ಚುರ್	೧ ಚುರ್=ಸುರ್ ಎಂದು ಸುಡು; ಚುರ್‌ಚು [ಸುಡು]; ಚುರುಕು [ಬಿಸಿ]; ಆ. ಚರಕಾ; ಕ. ಚುರ್‌ಚು [ಸುಡು]; ಚುರ್....ಚೊಯ್.... ಚೂರ್‌ಣ [ಸುಣ್ಣ];
	೨ ಚುರುಚುರು [ತುರಿ; ತೀನಿ]; ಚುರಚಿ [ಗಿಡ]; ಮುಂದಿನ ಸಾಲು ಚುರ್‌ಚ್ರ=ಚುಚ್ಚು; ಚೂರಿ [ಛೂರಿ];

ಚುಳ್ ೧ ಚುಳ್=ಚಿಳ್; ಚುಳುಚುಳು [ಹಾಲು ಕರೆ]; ಚುಳು ಜುಳು [ನೀರ ಒರಸು]; ೨ ಚುಳು=ಸುಳು; ಅ. ಚುಳಬೂಳ [ಉಲುಹು; ಗಲಾಟೆ]; ಅ. ಚುಳಿಲ್=ಚುಳರು [ಹೊರಳಾಡು];

ಚೆ-ಚೆ ಅಲ್ಲ; ತಕ್ಕುದಲ್ಲವೆನ್ನುವಾಗ ಚೆಃ ಚೆಃ=ಛೇ ಛೇ, 'ಚ' ನೋಡು.

ಚೆಕ್-ಚೆನ್ ೧ ಚೆಕ್‌ಚಕ್; ಚೆಕ್ಕಚಕ್ಕ=ಜಗಜಗ=ಝುಗಝುಗ=ಜಳಜಳ ಹೋ. ಸಂ. ಜ್ವಲ್...ಚೆಂ=ಕೆಂ; ಅ. ಶೆನ್ ಚೆಲುವು; ಚೆಂದ [ಕೆಂದ]; ೨ ಚೆಂಗು=ಚಂಗು=ಜಿಗಿ. ಹೋ. ಸಂ. ಜಂಗಮ; ಗಮ್=ಜಗಾಮ; ೩ ಚೆಕ್ಕರಿಸು-ಚೆಯ್....ಎಂದು ಆಡುಗಳನ್ನು ಕರೆವ ಬಗೆ;

ಚೆಚ್ ಚೆಚ್ಚು=ಜಜ್ಜು.

ಚೆಲ್ ಚಲ್=ಚೆಲ್ ಚಂ, ಮತ್ತು ಚೆಂ ನೋಡು. ಚೆಲ್ಲು=ಚಲುಕು;

ಚೆಳ್ ಚೆರ್=ಚೊರ್ [ಸುಡುವಾಗಿ ಸದ್ದು]; ಅ. ಚೆರಲ್ [ಸಿಟ್ಟು; ಕೀರು=ಚೀರು]; ಚೆರುಂಬು=ಕ. ಕರುಂಬು (ಹಗೆ)

ಚೇ ಚಃ=ಚೇ=ಛೇ. ಅ. ಚೇವಲ್ [ಕಾವಲು]; ಚೇವಲ್ [ಕೋಳಿಯ ಒಂದು ಬಗೆ];

ಚೊರ್ ಚೊರ್=ಸೊರ್. ಅ. ಚೊರಿ=ಸುರಿ.

ಚೊಲ್ ಚೊಲ್=ಚೊಳ್....ಚೊಲ್ಲು. ಹೋ. ಸಂ. ಜಲ. 'ಚುಳ್' ನೋಡು.

ಜಕ್, ಜಗ್ ೧ ಜಕಜಕ ಜರೆ; ಜಂಕೆ [ಕೂಗು]; ಜಂಕಿಸು=ಝುಂಕಿಸು; [ಜಡಿದು ಝುಂಕಿಸು]; ಜಕ್ಕುಳಿಸು=ಜಕ್ಕುಲಿಸು [ಜರೆ; Jeer]; ಜಕ್ಕುಲಿ=ಜಕ್ಕುಲಿ; + ಉಲಿ [ವಿನೋದ]; ಹೋ. ಸಂ. ಗದ್ [ಜಗಾದ]; ಜ[ಂ]ಜ್ [ಕಾದು];

೨ ಜಗ್‌ಝುಗ್ ಎಂಬ ಧ್ವನಿ. 'ಝುಗ್‌ಜಗ್ ಟೂವಿಟ್ಟೂವೂ.' ಜಗಳ=ಝಗಡಾ; ಹೋ. ಕಲಕಲ.

೩ ಜಗ್ಗನೆ [ಕಸ್ಸನೆ-ಗಸ್ಗನೆ] ಜಗ್ಗು;

೪ ಜಗಿ [ನುರಿ]; ಹೋ. ಸಂ. ಜಜ್ [ಕಾದು];

೫ ಚಕ್-ಚಿಕ್ ಎನೆ [ಜಗ್ಗನೆ] ಬೆಳಗು; ಜಗಝುಗ [ಜಳಝುಗ]; ಹೋ. ಸಂ. ಜ್ವಲ್.

ಜಜ್ ಜಜ್ಜು=ಚೆಚ್ಚು, ಹೋ. ಅ. ಶೇಚ [ಕುಟ್ಟು];

ಜಟ್ ಜಟ್‌ಪಟ್=ಸಟ್‌ಪಟ್. ಅ. ಝುಟಪಟ; ಝುಟಾಪಟಿ [ಜಗಳ];

ಜಂ ೧ ಜಙ್=ಝುಙ್ ಅ. ಝಾಂಜ; ಜಂಗು [ದೊಡ್ಡ ಗೆಜ್ಜೆ];

೨ ಜಂಯ್-ಜ(ಂ)ವೆ [ಕುದುರೆಯ ಜವೆ]; ಹೋ. ಜ್ಯಾ.

೩ ಜನಿ [ಜಿನುಂಗು; ಹನಿ];

ಜಪ್-ಜಬ್ ೧ ಚಪ್ಪು=ಜಪ್ಪು=ಚೆಚ್ಚು=ಜಜ್ಜು; ಜಬ್ಬೆ [ಸಪ್ಪೆ]

೨ ಜಬ್ಬರಿಸು=ಜಬರಿಸು [ಜರ್‌ಬು]; ಹೋ. ಅ. ಚಪ್. ಕ. ಚಪ್ಪರಣೆ; ಸಂ. ಜಪ್; ಜಪ.

ಜಂ ಜಂ-ಜುಂ ಎನೆ ನವಿರೇರುವುದು. [ಜುಂಯ್].

ಜರ್ ೧ ಜರ್=ಸರ್.....[ಕಾಲು] ಜರೆ-ಜಾರು; ಜರ್ಗು [ಬೀಳುವ ಶಬ್ದ; Jerk];

೨ ಜರ್‌ಬು=ಜರಬು; ಜರ್ವು=ಜಂಕೆ=ಜರೆ - [ಚೀರು. Jeer] ಜರಚು. ಹೋ. ಸಂ. ಚರ್‌ಚೆ;

೩ ಜರಿಕಿ=ಜಿರಿಕಿ [ಕೆಪ್ಪು];

ಜಲ್-ಜಳ್ — ೧ [ಎದೆ] ಜಲ್ ಎನ್ನು. ೨ ಚಳ್-ಚಿಳ್....ಜಳಜಳ ಜುಳುಜುಳು [ಹರಿ]; ಜಲುಗು; ಜವುಗು=ಜವುಳು; ಜಳಕ; ಹೋ. ಸಂ. ಜಲ್ [ಪ್ರವಹಿಸು]; ಕ. ಅ. ಕಲ್. ಕಾಲು; ಕಳ್ L. Gelu, Goth, Kalds, Lith, Szala, Russ, Cholodngi, Hib, Gil.

ಜಿಕ್ — ೧ ಜಿಕ್-ಜಿಗ್....ಜಿಗಿ; ಜೀಕು....ಜಿಂಕೆ; ಹೋ. ಜಿಟ್ಟೆ=ಜಿಟ್ಟೆ;

೨ ಜಿಗಿಜಿಗಿ=ಕಿಚಿಕಿಚಿ; ಜಿಗಿ; ಜಿಗಟು=ಆ. ಚಿಕಟ; ಜಿಡ್ಡು.

೩ ಜೀಕುಳಿ=ಜೀರ್ ಕೊಳಿವೆ.

ಜಿಟ್=ಸಿಟ್ — ೧ ಜಿಟ್ಟೆ=ಚಿಟ್ಟೆ (ಮಿಡಚೆ);

೨ ಚಿಟಿ=ಸಿಟಿ; ಜಿಟಿಜಿಟಿ; ಚಿಟಿಚಿಟಿ=ಸಿಟಿಸಿಟಿ ಮಳೆ;

ಜಿಂ — ೧ ಜಿಂಜಿಂ ಮಳೆ=ಜಿನು (ಂ)ಗು (ತುಂತುರ ಹನಿ); ಜಿನುಗು (ಸೂಕ್ಷ್ಮ); ಅ. ಚಿಣುಕು; ತೆ. ಚಿನುಕು, ಆ. ಝಿಂಝಿಂ ಪಾವೂಸ;

೨ ಜಿನುಗು (ಗೆಣಗು; ಮೆಲ್ಲಗೆ ಮಾತನಾಡು); ಹೋ. ಚಿಂವ್ ಚಿಂವ್.

ಜಿರ್ — ೧ ಚಿರ್=ಜಿರ್; ಜೀರು (ಭಯ); ಜಿರೇಳು [ಕೂಗು; ಚೀರು]; ಜೀರುಂಡೆ, ಕಡುಜೀರಿಗೆ [ಹುಳು]; ೨ ಜಿರಿಜಿಟಿ ಮಳೆ; ೩ ಜಿರಿಜಿರಿ ಆಗು=ಜಿಲಿಜಿಲಿ ಆಗು [ತೀರ ಹರಿದು ಹೋಗು. ಜೀರಿಗೆ ಒಕ್ಕಲುಮಾಡು [ಚೂರುಚೂರಾಗಿ ಕಡಿ, ಕೊಚ್ಚು]; ಜೀರಿಗೆ [ಸಣ್ಣ, ಸೂಕ್ಷ್ಮ]; ಹೋ. ಸಂ. ಜೄ; ಜರ್‌ಜರ; ಜೀರ್‌ಣ; ಮುಂ.

ಜಿಲ್ — ೧ ಜಿಲ್=ಚಿಲ್; ಜಿಲಿಜಿಲಿ=ಚಿಳಿಚಿಳಿ [ನೀರು ಊರು]; ಜಿಲ್ಲಿ [ರಂಧ್ರ]; ಜಿಲಿಜಿಲಿ ಜುಳುಜುಳು ಹೋ ಸಂ. ಜಲ್; ಜಲ.

೨ ಜಿಲ್ಲಬಿ [ಪಕ್ವಾನ್ನ];

ಜುಟ್ — ಜಟುಜುಟು [ಹುಳಿಮಜ್ಜಿಗೆ]; ಹುಳಿಜೊಟ್ಟು.

ಜುಮ್ — ೧ ಜುಮ್ಮೆನ್ನು [ರೋಮಾಂಚಿತನಾಗು];

೨ ಜುಂಯ್ ಹಿಡಿ [ಮರವಡು];

ಜುರ್ — ೧ ಜುರುಜುರು=ಸುರುಸುರು [ಸೀಪು]; ಹೋ. ಆ. ಚೋಖಣೇ; ಜುರ್=ಸುರ್ ಎಂದು ಸೋರು;

೨ ಜುರುಜುರು ತೂಗು; ಜೂಗು (ತೂಗು); ಜುರಕೆ (ಜೀಕ; ಆಂದೋಲನ); ಜೂಗಳಿಕೆ (ತೂಕಡಿಕೆ); ಜುರು ಜುರು ಜೋಕಾಲಿ;

ಜುಳ್ — ಜುಳ್=ಚುಳ್=ಸುಳ್; ಜುಳುಜುಳು ನೀರು ಹರಿ;...., ಜೊಲ್ಲು; ಜವುಳು;

ಜೇ, ಜೇ — ಜೇಗೆಯ್ (ಜೆಯ್ ಎಂದು ಹೆದೆ ನುಡಿಸು); ಜ್ಯಾ; ಜೇಗಟೆ (ಜಾಂಗಟೆ); ಆ. ಝಾಂಜ; ಜೇಂಕರಿಸು-ಜೇಂಕಾರ; ಜೇನು; ಹೋ.

	ಅ.ಞ್ ಮಿರ್ (ಜೇಂಕರಿಸು); ಞ್ ಮಿರು (ಜೇನು); ಹೋ. ಞಮ್....ಞನ್......ಞಂಪು; ಞಞ್‌ಸರ=ಞಂಚರ
ಜೋಜೋ	೧ ಜೋಜೋ ಎಂದು ತೂಗು (ಜುರುಜುರು); ಜೋಗುಳ; ಜೋಕಾಲಿ [ಉಯ್ಯಾಲೆ]; ಜೋಪಾನ-ಜೋಕೆಮಾಡು; ಜೋಜೋ ಮಾಡು [ನಿದ್ದೆಮಾಡು] ಜೊಂಪು [ಜಂಪು]; ಅ. ಝೂಂಪ [ನಿದ್ರೆ; ಮರವೆ]; ಜೋಂಪಿಸು ನಿದ್ದೆ ಹೋಗು;
	೨ ಜೊರ್ರನೆ=ಜೋರನೆ ಜಗ್ಗು; ಜೋರು; ಅ. ಜೋರ [ಶಕ್ತಿ; ಕುಸುವು];
ಞ್, ಞ್	೧ ಉಞ್ [ಒರಲು; ಕೂಗು]; ಅ. ಞಞ್ಯೈ [ಮಗುವಿನ ಕೂಗು, ಹಟ]; ಞಮಲಿ=ನಾಞ್ ನಾಯಿ=ತೆ. ನೆಮಲಿ; ಞರಲ್ [ನುಡಿ, ದನಿಗೈ];
ಟಕ್	೧ ಟಕ್ ಟಿಕ್; [Tut, Tit....Tick] ತಟ್ಟು; ತಾಗು;
	೨ ಟಕವಿಕಟಕ= ತಾಳ; ತಕ್ಕತ್ತೈ.
	೩ ಟಕಮಕ [ನೋಡು]
	೪ ಟಗರು=ತಗರು ಹೋ. ಟಕ್ಕರ=ಡಿಕ್ಕಿ; ಅ. ಧಕ್ಕಾ ಮುಕ್ಕಿ [ತಾಗಲಾಟ];
	೫ ಟಕಡಕ=ಟೊಕಡೊಕ [ಟೊಳ್ಳು];
ಟಣ್	೧ ಟಣ್=ಡಣ್; ಟಂಟಣಿಸು=ಡಂಡಣಿಸು; ಟಂಕೆ [ಡಂಕೆ, ಢಕ್ಕೆ] ಅ. ಡಂಕಾ [ವಾದ್ಯ]; ಸಂ. ಟಂಕಾರ, ಟಣತ್ಕಾರ.
	೨ ಟಣ್ಣನೆ ಜಿಗಿ, ಟಣಪುಣ ಜಿಗಿ; ಟೆಪ್ಪರಿಸು [ಹಾಕು];
ಟಪ್	ಟಪಟಪ=ಪಟಪಟ; ಟಪ್‌ಟಿಪ್; ಟಪ್‌ಟುಪ್, ಎಂದು ಸೋರು; [Drip-Drop]. ಟಪ್=ತಪ್=ದಪ್ [ಧಪ್].
ಟಮ್	ಟಮ್=ಡಮ್; ಡಮರು, ಟಂಟುಂ....ಟುಮಕೆ; Tom tom.
ಟರ್	೧ ಟರ್=ಡರ್.....ಡರಕೆ [ತೇಗು];
	೨ ಟರ್ ಎನೆ ಹರಿ, ಹೋ. ಸಂ. ದೃ-ದಾರ [ಹರಿ, ಸೀಳು];
ಟಿಕ್‌ಟಿಂಗ್	ಟಿಕ್‌ಟಿಕ್ ಗಡಿಯಾರ; ಟಿಂಗಟಿಂಗ [ನಾದ]; ಹೋ. String; ತಂತಿ.
ಟಿಟಿ	ಟಿಟಿಟೀ....ಟಿಟ್ಟಿಭ (ಪಕ್ಕಿ)=ತೇನೆ ಹಕ್ಕಿ=ಟಿಂವಕ್ಕಿ.
ಟಿಸ್	ಟಿಸ್=ಟುಸ್=ಪುಸ್ [ಹುಸಿ; ಸುಳ್ಳು]; ಡಿಳ್ಳವಾಗು;
ಟುಕ್	ಟುಕುಟುಕು=ಡುಗುಡುಗು [ಅರೆಜೀವಿ]; ಅ. ದುಗುದುಗು; ಟುಕ್ಕ=ಫುಕ್ಕ.
ಟುಣ್	ಟುಣುಪುಣು=ಟಣಪುಣನೆ ತೊನೆ, ನೆಗೆ; ಜಿಗಿ.
ಟುಪ್	೧ ಟುಪ್‌ಟಪ್ [ಹನಿವ ಸದ್ದು]; ೨ ಟುಪ್=ಟುಬ್-ಟುಬಾಕಿ.
ಟುಮ್	ಟುಮ್=ಡುಮ್; ಟುಮಕಿ; ತಮ್ಮಟೆ=ದಮಡೆ.
ಟುಯ್	ಟುಂಯ್=ಟ್ರೊಂಯ್ ಎನೆ ತಂತಿ;.....Tomtom.
ಟುರ್	ಟುರ್=ಡುರ್; ಟರ್‌ಟುರ್ ಒದರು; ಡುರುಕಿ ಡರ್‌ಡುರ್ ನೋಡು.
ಟುಸ್	ಟುಸ್, ಫುಸ್ ಎನೆ ಹುಸಿ;

ಟೆಂ	೧ ಟೆಂಟಣಿಸು=ಡೆಂಡಣಿಸು; ಟ್ಯಾಂ ಟ್ಯಾಂ.......ಟೆಂಟೆಂ ಎಂದು ಅಳು. ೨ ಟೆಂಗು.
ಟೊಕ್	ಟೊಕ್‌ಟೊಕ್=ಡೊಗ್‌ಡೊಗ್....ಟೊಳ್ಳು=ಡೊಳ್ಳು.
ಡಕ್	೧ ಡಕ್=ಡಗ್=ಡೊಕ್....ಡಕ್ಕೆ [ವಾದ್ಯ]; ಡಗಡಗ [ಎದೆಬಡಿದು ಕೊಂಬುದು]; ಡಗೆ [ಟುಕುಟುಕು; ಡಗಡುಗು]; ೨ ಡಗ್ಗನೆ ತಾಗು [ಹಾಯು];
ಡಂ	೧ ಡಂ=ಢಂ. ಡಂಗುರ; ಆ. ಡಂಕಾ; ಡಾಂಗೋರಾ; ಡಂಡಂ ಢೋಲು; Drum; ಡಂಬರು=ಡೊಂಬರು; ೨ ಡಂಕೆ=ಟಂಕೆ [ಗುಣಿ, ಡೊಣ್ಣೆ];
ಡಬ್	ಡಬ್ಬು=ಡಪ್ಪು [ವಾದ್ಯ]; ಡಬ್ಬೆ [ಡಬ್ಬಾ];
ಡರ್	ಡರ್‌ಡುರ್ ಎನ್ನು....[ಸಂ. ದರ್‌ದುರ (ಕಪ್ಪೆ)]; ಡರಕು [ತೇಗು]; ಡರಕೆ;
ಡವ್	೧ ಡವಡವ [ಎದೆ]; ಡವಡವಿಕೆ [ಘುಕ್ಕು]; ೨ ಡವಣೆ=ದವಣೆ=ಡಳ್ಳೆ; ಡೋಲು;
ಡಳ	ಡಳಡಳ=ತಳತಳ=ತೊಳಗು; ಢಾಳ [ದೀಪ];
ಡಿಕ್	೧ ಡಿಕ್ಕ [ವಾದ್ಯ]; ೨ ಡಿಕ್ಕಿ [ಅಘಾತ];
ಡಿಂ	ಡಿಂ=ದಿಂ. ಡಿಂಡಿಮ; ದಿಮ್ಮು [ವಾದ್ಯ];
ಡುಗ್	ಡುಕುಡುಗು=ಟುಕುಟುಕು....ದುಗುಡ [ಚಿಂತೆ];
ಡುಂ	ಡುಂ=ದುಂ. ಡಂಡುಂ.....ದುಂದುಭಿ.
ಡುರ್	ಡುರ್ ಎನ್ನು [ಸೊಕ್ಕುಬರು];.....ದುರದುರನೆ ನೋಡು.
ಡೊಂ	ಡೊಂಬೆ=ದೊಂಬೆ. ಡೊಂ=ತೊಂ....ಡೊಂಬ(ರು);
ಡೊಕ್	ಡೊಕಡೊಕ; ಡೊಗರು [ಟೊಳ್ಳು]; ಡೊಳ್ಳು........ಢೋಲು;
ತಕ್	೧ ತಕತಕ ಕುಣಿ; ತಕ್ಕ ತೈ. [ಟಕ್....ದಕ್]; ೨ ತಗರು=ತಾಗು ತಟಿ; ತಗಲು; ತಡೆ; [ವಿರೋಧಿಸು]; ತಗರು [ಪ್ರಾಣಿ]; ೩ ತಕತಕ=ಚಕಚಕ ಹೊಳೆ, ತಳತಳಿಸು; [ದಗದಗ]; ಅ. ತಗದಗ [ಹೊಳೆ];
ತಟ್	ತಟಕು [ಹನಿ; ಹನಿಯು]; ತಟಕು=ತೊಟ್ಟು; ೨ ತಟ ತಟನೆ ಹನಿ ಆ. ತಡಕಣೇ [ಒಡಿ]; ೩ ತಟಕ್ಕನೆ-ಒಮ್ಮೆಲೆ; ಚಟಕ್ಕನೆ; ೪ ತಟತಟ ನೋಯು ಹೊಡೆ; [ಸಂ. ತಡ್=ತಾಡ]; ತಡಾಥಡಾ ಹೊಡೆ; ೫ ತಟ್=ಥಟ್ [ಸಂ. ಸ್ಥಾ]; ತಟೆ; ತಡೆ; ತಳ್ಳು; ತಟ; ತಟ್ಟೆ.
ತಪ್	೧ ತಪತಪನೆ ತೊಯು; ಟಪ್ ನೋಡು; (Drip); ಹೋ. ಸಂ. ದ್ರವ್ ೨ ತಪ್ಪ=ಧಪ್. (ತಪರಾಕಿ; Tap) ಧಪ್ಪನೆ ಹೊಡೆ; ಥಳಿಸು;
ತಮ್	ತಮ್ಮಟೆ; ದಮಡೆ;......(ತಂಬೂರಿ; ತಂತ್ರಿ);
ತರ್	೧ ತರಥರ ನಡುಗು; ತಾರಾತುರಿ; ಹೋ. ಸಂ. ತರಲ; ತ್ರಸ; ೨ ತರೆ=ತರಿ (ಕೆರೆ; ಕೆತ್ತು); ತರಗಾಬರಗು (ತಾರಗ ಬೀರ) ಬೆಯ್ಗುಳ;

೧ ತಳತಳ....ತಳತಳಿಸು (ತೊಳಗು); ೨ ತಳಮಳ; ತಳತಳ=ತತ್ತಳ= ತತ್ತರ; ತರ್ ನೋಡು; ತಳವೆಳಗು; ತತ್ತಳ....ತಲ್ಲಳ; ತಲ್ಲಣ; ತಳ್ಳಂಕ; ಅ. ತಳ್ಳೆ (ಕುದಿ);

ತಕ್=ತಾಗು; ತಾಟು; ತಾಟಿಸು (ಸಂ. ತಡ್-ತಾಡ); ತಾಂಡು; ತಾಂಟು (ಕುಣಿ); ತಾನ್ ದೀಮ್....ತಾನ್ ತೋಮ್;....ತಾರ (ಸ್ವರ);

೧ ತಿಂ=ಟಿಂವ್; ತಿಂ=ದಿಂ. ತಿತಿತೀತಿತಿ....ಓಲಗ ವಾದ್ಯದ ನುಡಿ. ಅ. ತಿತಿ (ಕೊಳಲು); ಹೋ. ತಿದಿ;

೨ ತಿಣ್ ಎನೆ ತಿಣಕು. ಅ. ತೀಟ್ಟು

ತಿಕಿಟ ದಿಕಿಟ ತಾ.... (ನೃತ್ಯ ವಾದ್ಯಗಳಲ್ಲಿ); ದಿಕ್‌ದಿಂ ನೋಡು.

೧ ತಿರ್‍ರನೆ ತಿರುಗು; ತಿರಿ; ತಿರುಗಣಿ; ತಿರುಪು; ತಿರುಪೆ.

೨ ತಿರ್‌ಕು=ತಿಕ್ಕು; ತಿರ್‌ದು=ತಿದ್ದು; ತಿರುವು;..... ತೀಡು; ತೇಯು; ತುತೂತೂ....ತುತೂರಿ. ಅ. ತುವ್ವೆ (ನುಡಿ; ಶಬ್ದಮಾಡು); ಹೋ. ಸಂ. ಧೂ (ಧಾತು); ಧ್ವನಿ; ತೂರ್ಯಸ್ವನ;

೧ ತುಂ=ದುಂ=ಡುಂ. (ಕೊಡದಲ್ಲಿ ಸಂಪೂರ್ಣ ನೀರು ಇದ್ದರೆ ಆಗ ಡುಂ-ದುಂ-ತುಂ ಎಂಬ ಗಂಭೀರ ನಾದ ಬರುವುದು, ಅದರಿಂದ ತುಂಬ ತುಂಬು; ಹೋ. ಆ. ತುಡುಂಬ=ತುಂಬು; ಅ. ತುಡುಂಬು (ಹೊರಸೂಸು; ತುಂಬು); ತುಳುಂಬು=ತುಳುಂಕು; ತುಃ=ಥು (ಹೋ. ಸಂ. ತುಬ್ಬ). ತೂಪಿರಿ=ತೂಪ್ಪು,

ತೂಪರು=ಜುಬರು (ಹನಿ); ತುಂತುರು ಹನಿ 'ತೂ' ನೋಡು.

ತುರುತುರು ನಡೆ; ಓಡು; ಹೋ. ಸಂ. ತ್ವರಾ; ತುರಗ;

೧ ತುಳುತುಳು ಅಲ್ಲಾಡು; ತುಳುಕು; ಹೋ. ಸಂ. ತುಲ (ದೋಲ್). ದೋಲಾಯಮಾನ; ಆ. ಡೂಲ (ಕಿವಿಯಲ್ಲಿಯ ಲಂಬಕ); ಡೋಲಣೇ (Dally) ಕ. ತೂಗು; ತೂಕ; ತೂಕಡಿಕೆ;

೨ ತುಳುತುಳು ಆ. ತುಕತುಕಣೇ, ತುಳತುಳಣೇ=ಲಕಲಕ ಹೊಳೆ ಕ. ತೊಳಗು; ಅ. ತುಳಂಗು; ತೆ. ತೊಳಂಗು;

೧ ತೂ=ಥು. ಆ. ಥುಂಕಣೇ; ಅ. ತುಟು (ಉಗುಳು);

ತುನಿ (ಹೇಸು); ಸಿಟ್ಟಾಗು;....ದೂರು (ಚಾಡಿ ಹೇಳು; ತೂಥೂ ಮಾಡು); ಹೋ. ತುತೂರಿ.

೨ ತೂಪಿರಿ (ತುಥು ಎಂದು ದೃಷ್ಟಿ ತೆಗೆ); ತೂಪರು=ತುಂತುರು;

೩ ತೂರು (ಕೇರು; ಚದರಿಸು); ಸಂ. ಧೂ (ಧಾತು);

೪ (ತು) ತೂತೂ ಮಾಡು;

೫ ತೂತು; ತೂಬು;

೬ ತೂರು, (ಚದರಿಸು) ತೂ (ಪ)ರು-ತುಂತುರು ಹನಿ;

೧ ತೆಂ=ಟೆಂ; ತೆಂಗು; ೨ ತೆಂಟು (ಮೊರದಿಂದ ಕೇರು);

	೩ ತೆಣರು (ತಿಣಕು); 'ತಿಂದಿಂ' ಹೋಲಿಸು. ಅ. ತೆನ್ (ಗೀತ); ಕ. ತೇನೆ (ಹಕ್ಕಿ); ಅ. ತೇನ್ (ಜೇನ್);
ತ್ಯೈ	(ತಾ)ತ್ಯೈ=ಥೈ; ತೈ ತೋಂ (ಕುಣಿತದ ತಾಳ);
ತೊಂ	೧ ತೊಂ=ಟೊಂ=ದೊಂ. ಟಣ್ಣನೆ ತೊನೆ (ಜಿಗಿ, ಕುಣಿ); ತೊನಸೆ=ತೊಣಚಿ;
	೨ ತೊಂಡು ತೊಳಸು (ಹೋ. ಕಲಕಲ); ಆ. ತೋಂಡ (ಬಾಯಿ); ಸಂ. ತುಂಡ; (ಹೋ. ಅ. ತುಣತುಣೇ=ಟುಂಯ್‌ಟುಂಯ್ ಏಕತಾರಿ); ಕ. ತೊಂಡು (ಗಳಪು; ಜರಚು); ತೊಂಡುಗೆಡೆವ ಶುಕಸಾರಿಕೆ; ಅ. ತೋಣುಪ್ಪು, ತೊನಿ; ಕ. ದೊಂಬೆ (ಧಾಂದಲೆ); ಹೋ. ತುಂಬಿ (ಜೇನು);
	೩ ತೊಂಗು=ತೂ(ಂ)ಗು=ತೊಂಗು (ಟೊಂಗೆ);
ತೊರ್	ತೊರ್=ಚೊರ್; ತೊರೆಬಿಡು; [ಅ. ಚೊರಿ (ಸುರಿ)]; ತೊರೆ=ಝುರಿ; ಹೋ. ತೋತೋ=ದೋಧೋ (ಮಳೆ; ಸೋನೆ);
ತೊಳ್	ತಳತಳ-ತುಳುತುಳು-ತೊಳಗು.
ದಕ್	೧ ದಕ್=ಡಕ್=ಧಕ್; ದಕ್ಕೆ (ಪೆಟ್ಟು);
	೨ ದಕ್=ಧಕ್; ಧಗಧಗನೆ ಉರಿ ಹೋ. ಸಂ. ದಹ್, ದಗ್ಧ
ದಡ್	೧ ದಡದಡ=ದುಡುದುಡು (ನಡೆ; ಓಡು); ದಟ್ಟಡಿ (ತಳರ್ ನಡೆ);
	೨ ದಡಿದಡಿಸು; ದಡಲ್; ದಡಕ್ ದಡಬಡ; ದಡಿ (ಬಡಿಗೆ); ಹೋ. ಸಂ. ದಂಡ;
ದಣ್	೧ ದಣದಣ ಉರಿ; ೨ ದಣ್ ಎನೆ ಅಪ್ಪಳಿಸು; ದಂಗೆ (ಧಾಂದಲೆ); ದಂದುಗ (ಹೋರೆ); ಆ. ಧಾಂಧೂಮ (ಗಲಾಟೆ, ದಂಗೆ);
ದಪ್	ದಪಧಪ=ದಬದಬ ಹೊಡಿ....ದಬ್ಬು (ತಳ್ಳು);
ದರ್	೧ ದರದರ ಎಳೆ, ಜಗ್ಗು; ಹೋ. ಸಂ. ದೃ(ದಾರ್);
	೨ ದರ್‌ದುರ್=ಡರ್‌ಡುರ್ (ದರ್‌ದುರ);
ದಸ್	ದಸ್‌ಧಸ್ ಎನ್ನು (ಪುಕ್ಕು);
ದಳ್	೧ ದಳದಳ ನೀರು ಸೋರು; ಆ. ದಲದಲ (ಜವುಳು);
	೨ ದಳದುಳೆನೆ ತುಳಿ; ತೊತ್ತಳದುಳಿ; ಆ. ತುಡವಣೇ; ಅ. ಕ. ತುಡಿ=ದುಡಿ (ವಾದ್ಯ);
ದಿಕ್	ದಿಕ್-ದಿಂಗನೆ ನೆಗೆ (ಹಾರು); ದಿಗದಿಗನೆ (ಒಮ್ಮೆಲೆ); ಆ. ಧಿಂಗಾಣಾ (ಧಾಂದಲೆ);
ದಿಂ	೧ ಧಿಮಿಕಿಟ, ಧಿಕ್ಕಿಟ; ಧಿಂಧಿಂ; ದಿಮ್ಮು (ಹಲಗೆ ವಾದ್ಯ); ತಿಂ=ದಿಂ (ಡಿಂಡಿಮ); ೨ ದಿಂ=ದುಂ; ದಿಂಕು=ದಿಂಕಿಡು (ದಿಕ್ಕೆಟ್ಟು ಓಡು); ೩ ತಲೆ ದಿಮ್ಮೆನ್ನು.
ದುಕು	ದುಕುದುಗು=ಡುಗುಡುಗು; ದುಗುಡ (ಚಿಂತೆ); ಆ. ದುಗಾಡ (ಚೀಣೆ); ಹೋ. ಸಂ ದುಃಖ;

ದುಡು	೧ ದುಡುದುಡು (ಓಡು; ನಡೆ); ದುಡುಕು=ತುಡುಕು. ೨ ದುಡುಂ ಎನೆ ದುಮುಕು;
ದುಂ	೧ ದುಮುದುಮು (ಒಳಗೊಳಗೆ) ಉರಿ; ಆ. ಧುಮಸಣೇ (ಚೆನ್ನಾಗಿ ಉರಿಯಾಗದೆ ಹೊಗೆಯುವುದು); ೨ ದುಂಬೆ=ತುಂಬೆ= ೩ ಆ. ಧಾಂಧುಂ (ದೊಂಬೆ); ೪ ದುಮದುಮೆ (ಹೋಳಿಯ ಹಾಡು); ತಮ್ಮಟೆಯೊಡನೆ ಹೇಳುವ ವಾಡಿಕೆಯಿದೆ.
ದೊಂ	ತೊಂ=ದೊಂ; ದೊಂಬೆ; 'ತೊಂಡು' ಹೋಲಿಸು.
ನನs	೧ (ತ) ನನನs=ಲಲಲs (ಹಾಡಿನ ಹುಟ್ಟು);..... ನಾದಿದಿನ್ನಾ....; ಹೋ. ಸಂ. ನದ್; ನಾದ; ೨ ನಲಿ; ನಲವು; ನನ್ನಿ;
ನಕ್	೧ ನಗು; ೨ ನಕ್ಕು=ನೆಕ್ಕು; ಹೋ. (ನ=ಲ); Laugh; ೩ ಲಿಹ್; Lick;
ನಚ್	ನಚ್=ಲಚ್=ಲೊಚ್; ಆ. ನಚ್ಚುನಚ್ಚು ಎನ್ನು=ಲಚ್ಚಲಚ್ಚ್ (ಲೊಚ್ಚ್ ಲೊಚ್ಚ ಎಂಬ ಹಲ್ಲಿಯ ನುಡಿ) ಕ. ನಚ್ಚು=ನಲಿ (ಕೆಲೆ); ಪ್ರೀತಿ (ಮೆಚ್ಚು); ನಚ್ಚಿನವ (ನು; ಳು); ಹೋ. ಸಂ. ನದ್; ನನ್‌ದ;
ನಟ್ / ಡ್	೧ ನಟನಟ=ಲಟಲಟ; ನಟಕಟಿಸು=ಲಟಕಟಿಸು; ನಡನಡೆನೆ ನಡುಗು; ನಡೆ (ಅಲೆ); ನಡಪು (ಜೋಜೋ ಎಂದು ಅಲೆದು ಆಡಿಸಿ-ತೂಗಿ, ಜೋಪಾನ ಮಾಡು); ೨ ನಟ್ಟೆಂದು=ಲಟ್ಟೆನೆ ಮುರಿ; ನಟಿಕೆ; ನಟಕು ತೆಗೆ (ಬೆರಲು ನಟಕ್; ಲಟಕ್ ಮಾಡಿ ದೃಷ್ಟಿ ತೆಗೆ);
ನರ್	೧ ನರನರನೆ ನರಳು, ನರಲು; ನರಕು (ತಿಣಿಕು; ತೆಣರು); ಹೋ. ಅ. ನರಿ (ಕಾಡಿಸು ಗೋಳಾಡಿಸು); ೨ ನರಿ (ನರಳುವ, ಒರಲುವ ಪ್ರಾಣಿ); ನಕ್ಕೆ=ನರಿ;
ನಲ್	ನಲನಲ=ಲಲಲಲ; ನಲಿ; 'ಲಲ್ಲೆ' 'ಲಾಲಿ' ಹೋಲಿಸು.
ನವ್	೧ ನವನವ=ಲವಲವ; ಲವಲವ=ರವರವ; ನವೆ ನಸೆ (ತೀನಿ); ೨ ನವನವ=ಲವಲವ; ಆ. ಲವಣೇ [ಅಲ್ಲಾಡು ಕ. ನವುರು= ನವಿರು [ರೋಮ; ಕುರುಳು] ಆ. ಲsವ [ಮೈಮೇಲಿನ ಸೂಕ್ಷ್ಮ ರೋಮ];
ನಳ್	ನಳನಳ=ನಲನಲ=ಮಲಮಲ [ಕೋಮಲ]; ನಳನಳಿಸು; ನಳಿ [ಕೋಮತೆ]; ಹೋ. ಲಳಿ [ಹಿಗ್ಗು; ಹುರುಪು];
ನಸ್	ನಸ್‌ನಸ್=ಲಸ್‌ಲಸ್; ನಸೆ=ನವೆ; ನಸನಸಣೇ.
ನುಡ್	ನುಡಿ; ಅ. ನುದಲ್ [ಶಬ್ದ; ನುಡಿ] ಹೋ. ಸಂ. ನುದ್, [Note];
ನೊ	ನೊ=ಲೊ; ೧ ನೋ [ಯು]; ನೋವು; ಹೋ. ನುದ್; Noise; ಅ. ನೊಡಿ; ನೊಡಿಕ್ ನೊಡುಕ್ಕು [ನುಡಿ];

೨ ನೊಣ=ನೊಳ [ಲೊಳಲೊಳ ಮಾಡುವ ಪ್ರಾಣಿ];
ಅ. ನೊಣನೊಣ [ಮೂಗಿನಿಂದ ಬರುವ ಮಾತಿನ ದನಿ];

ಪಕ್ ೧ ಪಕಪಕ=ವಕವಕ ಬಾಯಿಬಿಡು [ಕಸಿವಿಸಿಯಿಂದ];
೨ ಪಕಪಕ ನಗು=ಗಹಗಹಿಸಿ ನಗು [ಪ=ಹ]; ಪಕಪಕ ನಗುವವರನ್ನು ಕಂಡು ಬಿಕ್ಕಿಬಿಕ್ಕಿ ಅತ್ತರು [ಗಾದೆ];
೩ ಪಕ್ಕನೆ=ಫಕ್ಕನೆ=ಭಗ್ಗನೆ [ಒಮ್ಮೆಲೆ];

ಪಚ್ ೧ ಪಚಪಚ=ಪಚಿಪಚಿ [ಹಸಿಯಲ್ಲಿ ನಡೆವಾಗಿನ ಶಬ್ದ]; ಪಚಿ=ಬಸಿ=ಒಸೆ [ಒಸರು]; ಅ. ಪಚಪಚೀತ [ತುಂಬ ಹಸಿ]; ಕ. ಪಸಿ=ಹಸಿ;....ಪಾಚಿ; ಪಾವಸೆ [ಹಾವಸೆ]; ಪಸುರು; ಪಯಿರು-ಪಚ್ಚೆ; ಪಚ್ಚೆ [ಹಸರು ಹರಳು]; ಪಚಡಿ [ಹಸರು ಸೊಪ್ಪಿನಿಂದ ಮಾಡಿದ್ದು]; ತು. ಪಾಜೆ [ಪಾಚೆ]; ೨ ಪಚ್ಚು [ಭಾಗಮಾಡು;]

ಪಟ್ ೧ ಪಟ್=ಪತ್=ಪಡ=ಪಳ=ಬಳ; ಪಟಪಟ ಬೀಳು; ಪಡು; ಸಂ. ಪತ್ ಪಟಫಟ ಬಡಿ ಫಡಫಡ ಹೊಡೆ (ಅಡಿ); ಪಟಕ್ಕನೆ ಬಡಿ; ಪಟಾರನೆ; ಪಳಿರ್ ಎನೆ ಬಡಿ; ಕುಸ್ತಿಯ ಪಟ್ಟುಗಳು [ಹಿಡಿತ, ಹೊಡೆತ]; ಅ. ಪಡು [ಬಡಿ] Pat; ಅ. ಫಟಕಾ [ಏಟು];
೨ ಪಟಪಟಮಾಡುವುದು-ಪತಾಕೆ=ಪಳವಿಗೆ; ಗಾಳಿಪಟ;.....ಪತಂಗ;
೩ ಪಟಪಟ=ಬಡಬಡ=ಮಾತಾಡು, ಬಡಬಡಿಸು= ವಟವಟಿಸು; ಹೋ. ಸಂ. ಪಠ್; ಪಾಠ;

ಪಣ್/ನ್ ೧ ಪಣ್=ಪಟ್; ಪಣೆ=ಹಣೆ [ಹೊಡೆ]; ಪಣೆ=ಫಣೆ [ಕಣೆ; ಕೋಲು];
೨ ಪಣ=ಹಣ; ಪನಿ [ಕೂಗಾಟ; ಚೀರಾಟ]; 'ಬನ್ನಿ ಎಂದರೆ ಪನ್ನಿ ಹೆಚ್ಚು' [ಗಾದೆ;] ಪಂದೆ [ಪಂಯ್ ಕೊಂಯ್ ಮಾಡುವ ಪುಕ್ಕ ಪ್ರಾಣಿ]; ಅ. ಪಣಿ [ವಾದ್ಯ]; ಪಣ್ಣು [ಪಂs ಎಂದು] ಹಾಡು; ಪನ್ರಿ [ಹಂದೆ; ಮ ಪನ್ನಿ]; ಪಂಪಂ=ಬಂಭಂ', ಮತ್ತು ಪಾಡು ನೋಡು. ೨ ಪಣ್ಣು [ಪಕ್ವವಾಗು]; ಹೋ. ಸಂ. ಪಚ್, ಪಕ್ವ;
೪ ಪನಿ=ಹನಿ [ಪಟ್ಟ್ ಎಂದು ಬೀಳು];

ಪರ್ ಪರಪರ=ಭರಭರ; ಪರ್ ಎನೆ ಪಾರು; [Flutter, Fly, Float]; ಪರ್ ಎಂದು ಪರಿ=[ಹೋ. ಸಂ. ವಹ್. [ವರ್]; ಪರಿ=ಪಾಯ್; ಪಾಮು [ಹಾವು] [ಹೋ. ಸಂ. ಸರ್ಪ] ; ಪರಮೆ [ತುಂಬೆ];

ಪಲ್ ಪಲ್ಪಲ್=ಪಳ್ಪಳ್=ಬಳ್ಬಳ್; ೧ ಪಾಳ್ [ಹಾಳು];
ಅ. ಪsಡ [ಜಮೀನ];
೨ ಪಾಲ್=ಹಾಲು; ಹೋ Flow, Fall; ಅಳ್ ನೋಡು;

ಪಸ್ ಪಸ್=ಪಚ್; ಪಸಿ=ಹಸಿ; ಪಸುರು=ಹಸುರ; ಪಸುಳ=ಹಸುಳ; 'ಪಚ್' ನೋಡು.

ಪಳ ೧ ಪಳಪಳ=ಬಳಬಳ=ಪಡಪಡ; ಪಳಂಚು [ತಾಗು; ಬಡಿ]; ಪಳವಿಗೆ [ಪತಾಕೆ]; ೨ ಪಳಪಳ, ಪಿಳಿಪಿಳಿ ರೆಪ್ಪೆ ಹುಯ್ಯು;

೩ ಪಳಪಳ= ಬಳಬಳನೆ ಬೀಳು [ಉದುರು]; ಪಳಚು=ಹಳಚು [ಉದುರಿಬೀಳು];

ಪಾ ೧ ಪಾ=ಆ; ಪಾಡು=ಹಾಡು ಹೋ. ಸಂ. ಹಾಹಾಹುಹೂ [ಗಂಧರ್ವರ ಹೆಸರು; ಅಮರಕೋಶ] ಅ. ಪಾಣ್=ಪಣ್ [ಹಾಡು]; ಪಾಣು=ಪಾಣಿ [ಹಾಡು]; ಸಂ. ವಾಣೀ, ವಾಕ್; ೨ ಪಾ, ಪಾ.... ಎಂದು ಮಾಡುವುದು....ಪಾಪಾ=ಮಗು=ಪಾಕ=ಪೋತ, [Babe]. ಪಾಪೆ=ಹಾಹೆ [ಬೊಂಬೆ];..... ಪಾಪಾ=ಅಪ್ಪ= ಬಾಬಾ=ಬೊಪ್ಪ Pappa. ಪೊ-ಪೊಂ. ನೋಡು.

ಪಿಕ್ ಪಿಕವೊ-ಚಿಕವೊ ಎಂದು ಕೂಗುವುದು. ಪಿಕ; ಹೋ. ಪುಗಲ್ [ಕೂಗು];

ಪಿಚ್ ೧ ಕಿಚಪಿಚನೆ ಕೂಗು [ಮರಿ ಹಕ್ಕಿಗಳು]; ೨ ಪಿಚ್ ಎನೆ ಸಿಡಿ; ಚಿಮ್ಮು. ಪೀಚು [ಜೀಕುಳಿ]. [ಆ. ಪಿಚಕಾರಿ]; ಪಿಚ್ಚು; 'ಪಿಸ್'; 'ಪಿಳ್' ಹೋಲಿಸು; ಪಿಚಿಪಿಚಿ [ಹಸಿ]; ಪಿಚಿಪಿಚಿ ಉಗುಳು;

ಪಿಟ್ / ತ್ ೧ ಪಿಟ್ಟ ಎಂದು ಮಾತನಾಡಲಿಲ್ಲ. ಪಿಟಿಪಿಟಿ=ಕಿಟಿಪಿಟಿ [ಗಲಾಟೆ; ವಟವಟ]; ಹೋ. ಅ. ಪಿದರ್ರು [ಜರಚು; ಗಳಪು]; ಆ. ಫಿದಫಿದಾ ಹಸಣೀ

೨ ಪಿಟ್ಟೆಂದು-ಪಟ್ಟೆನೆ ಪಿಡಿ [ಹಿಡಿ]; [ಸಂ. ಪೀಡ್]; ಪಿಡಿ=ಪಿಳಿ.

ಪಿರ್ ಪಿರಿಪಿರಿ ತಿರುಗು; ಪಿರ್=ಫಿಕ್=ಭಿರ್; ಪಿರಿಕೆ [ತಿರುಪು]; ಆ. ಫಿರಣೀ. ಭಿರ್ರನೆ ಬೀಸು;

ಪಿಲ್ ಪಿಲ್=ಪಿಳ್.

ಪಿಸ್ ೧ ಪಿಸಿ=ಪಿಚಿ; ಪಿಸಿ=ಹಸಿ; ಪಿಸುಕು....ಪಿಂಜು=ಹಿಂಜು;

೨ ಪಿಸಿಪಿಸಿ ನಗು (Peals of Laughter) ಪಿಸುಗುಟ್ಟು, ಪಿಸುಣ [ಹಿಸುಣ]; ಪಿಸಿ-ಪಿಸ್ಸಿ [ಹೀಗಳೆವವ, Cynic]; [ಅ. ಪಿದರ್ರು ಗಳಪು; Prate)];

ಪಿಳ್ ೧ ಪಿಳ್=ಪಿಲ್; ಚಿಳ್‌ಪಿಳ್ ಎನೆ ಕರೆ [ಹಾಲು]; ಪಿಳಿ=ಹಿಳಿ= ಹಿಂಡು; ಆ. ಪಿಳಣೀ [Peel]; ೨ [ಚಿಲಿ] ಪಿಲಿ ಗುಟ್ಟು; [ಚಿಳ್ಳೆ] ಪಿಳ್ಳೆ; ೩ ಪಿಳಿಪಿಳಿ ಕಣ್ಣುಬಿಡು;

ಪೀ ಪಿಪೀ=ಪೀಪಿ=ಸೀಟಿ; [Pipe];

ಪುಕ್ ೧ ಪುಕುಪುಕು=ಬುಕುಬುಕು [ಎದೆ ಬಡಿದುಕೊಂಬ ಸದ್ದು]; ಪುಕ್ಕು [ಡಗೆ, ಗಾಬರಿ]; ಪುಕ್ಕ;

೨ ಫುಕ್-ಬುಕ್=ಭುಗಿಲ್ಲನೆ ಉರಿ; ೩ ಪುಗಲ್, ಪುಗಲ್ ಎಂದು ಕೋಗಿಲದ ದನಿ; [ಅ. ಪುಗಲ್ (ಹೇಳು; ಸಾರು; ಸೊಲ್ಲು) ಪುಗಳ್= ಪೊಗಳು=ಹೊಗಳು [ಹೋಹೋ; ಹೋಯ ಸೈಸೈ ಎನ್ನು; ಸ್ತುತಿಸು; Praise]; ತು. ಪುಗರ; ತೆ. ಪೊಗಡು; ಹೋ ಬೊಗಳು;

ಪುಟ್ ೧ ಪುಟುಪುಟು=ಪಿಟಿಪಿಟಿ ಮಾತಾಡು; ೨ ಪುಟನೆಗೆ; ಪುಟಿಗೆ; ಪುಟಿ; ಪುಟಕೊಡು [ಪುಷ್ಟಿ ಗೊಡು]; ೩ ಪುಟುಪುಟ ಹೊರಬೀಳು....

ಪುಟ್ಟು=ಹುಟ್ಟು; ಪುತುಪುತು=ಬುದುಬುದು [ಹೊರಬರು]; ಪುತುಪುತು=ಪುರುಪುರು;

ಪುಪೂ ಪುಪೂ ಎಂದು ಊಬು; ಪುಂಯ್; ಪುಂ=ಪೊಂ=ಬೊಂ; ಭೊಂ

ಪುಯ್ ಪುಯ್=ಹುಯ್; ಪುಯ್ಯಲು (ಹುಯಿಲು); ಪುಯ್ಯ ಲಿಡು=ಪುಯಲ್ಚು; [ಕೂಗಾಡು; ಗರ್‌ಜಿಸು]; ಪುಯಲ್ಚುವ ಪ್ರಾಣ ಪುಲಿ=ಹುಲಿ. ಹೋ. ಅ. ಪುಲಂಬು [ಧ್ವನಿಮಾಡು; ಎಡೆಬಿಡದೆ ನುಡಿ];

ಪುರ್ ೧ ಪುರುಷರು=ಬುರುಬರು [ಉರ್‌ಬು, ಉಬ್ಬು]; ಪುರುಪುರು= ಹುರುಹುರು..... ಹುರುಪು (ಉತ್ಸಾಹ);

೨ ಪುರಿ=ಹುರಿ [ಹೋ. ಕರೆ; ಸುಡು];

ಪುಸ್ ೧ ಪುಸ್=ಟುಸ್=ಟಿಸ್=ಪಿಸ್; ಪುಸಿ [ಒಳಗೆ ಹುರುಳಿಲ್ಲದ]= ಹುಸಿ; ಪುಸ್=ಪುಃ=ಪುಫು=ಹುಸ್ [ಹೊಡೆದೋಡಿಸು; ತಳ್ಳು; ಅಟ್ಟು]; ಪಾಲಾ ಪೂಃ, ಪೂ [ಗೆಳೆತನವಳಿದು ಅಗಲುವಾಗ ಹುಡುಗರು ಆಡುವ ನುಡಿ];

ಪುಳ್ ಪುಳುಪುಳು=ಬಳುಬಳು (ಬೀಳು);

ಪೆ, ಪೇ ಪಾಪಾ-ಬಾ-ಬಾ ಎಂದು ಮಕ್ಕಳು ಮೊದಲಲ್ಲಿ ಆಡುವ ನುಡಿ; (Prate; babble); ಇದರಿಂದಲೆ ಪ್ಯಾಪ್ಯಾ.... ಪೆ, ಪೇ ಎಂಬುದು ಶಬ್ದವಾಚಕ; ಮಾತಿನ ಸೂಚಕ. ಅ. ಪೇಚ್ಚು; ಪೇಚಲ, [ನುಡಿ; ಮಾತು]; ಪೇಚು [ಸೊಲ್ಲು; ಆದು Prate]; ಕ. ಪೇ ಪೇ ಮಾಡು [ತೊದಲು]; ಪೆಂಗೆ, ಪೇಂಕುಳಿ, ಪೆದ್ದ, ಪೆಚ್ಚ, ಪೇತು [ಹುಚ್ಚ, ಅರೆಮರುಳ]; [ಅ. ಪೇಂದ್ಯಾ (ಎಬಡ; ಹುಚ್ಚ); ಅ. ಪೇಂದು ಕಂಗೆಡು; ಪೆಚ್ಚನಾಗು; ಪೇದುರು=ಬೆದುರು]; ಪೇಳು=ಹೇಳು, ಮಾತಾಡು; ಹೋ. ಪಿಟಿಪಿಟಿ.

ಪೆಟ್ ಪೆಟ್ಲು, ಪೆಟ್ಲಲಕೊಳವೆ; ಪೆಟ್ಟು [ಏಟು; ಹೊಡತ]; ಆ. ಪೇಟ, (Pat);

ಪೆಃ ಪಿಸ್=ಪೆಃ=ಹೆಃ [ಅಸಮ್ಮತಿ ದರ್ಶಕ]; ಪೇಸಿ [ಹೇಸಿ; ಹೆಃ+ಇಸಿ]; ಪೇಸು=ಹೇಸು; ಹೋ. ಸಂ. ಹೇಯ; ಹಾ ಮತ್ತು ಹಿ ಧಾತು;

ಪೊಟ್ / ಡ್ ೧ ಪೊಡ್=ಪುಡ್;....ಫಡಫಡ ಪೊಡೆ (ಹೊಡೆ);

೨ ಪೊಟ್-ಪೊಟ್ಟು=ಪೊಳ್ಳು=ಹೊಟ್ಟು=ಟೊಳ್ಳು; ಪೊಟ್ಟೆ=ಹೊಟ್ಟೆ= ಪೊಡೆ=ಬೊಜ್ಜು; ಪೊಟ್ಟಳ=ಪೊಟ್ಟಣ;

ಪೊರ್ ೧ ಪೊರ್=ಪುರ್; ಪೊರಿ=ಪುರಿ=ಹುರಿ [Parch; Fry], ಪೊರ್‌ತು=ಪೊಳ್‌ತ್ತು=ಪೊತ್ತು=ಹೊತ್ತು. ಪೊಳೆ=ಹೊಳೆ; ಹೋ. ಪೊಂಗು [ಉರಿ; ಹೊತ್ತು];

೨ ಪೊರ್=ಪೋರ್=ಹೋರು [ಕಾದು]; ಹೊರಾಟ Fray; Fight; ಹೋ. ಅ. ಪೊರಿ ಪೊರಿ ಎನಲ್ ಹಳಿ, ಹೀಗಳೆ, ಬೈದಾಡು; ಬಡಿದಾಡು]; ಪೊರು [ಕಾದು]; ಹೊ, ಹೋ, ನೋಡು.

ಬಕ್	೧ ಪಕಪಕ=ಬಕಬಕ=ವಕವಕ ಬಾಯಿಬಿಡು;....ಓಕರಿಕೆ; ಹೋ. ಸಂ. ವಾಕ್; ೨ ಬಾಯಿ [ವದನ]; ಬಗಳು=ಬೊಗಳು=ಬಯ್ಯು; ಭಗ್ಗಣೆ [ಕುಕಿಲು]; ಬಗ್ಗಿಸು [ಕುಯಿಲು];
ಬಡ್	ವಡವಡ=ಬಡಬಡ; ಬಡಬಡಿಕೆ; ಬಡಬಡಿಸು [Babble]; ಸಂ. ವದ್;
ಬದ್	ಬದಬದ=ಬಡಬಡ ನೀರು ಬೀಳು [ಸುರಿ]; ಬದಬದ=ಬುದುಬುದು ಹೊರಬೀಳು;
ಬಬ	ಬಬಬ=ಅಬಬ [ಸೋಜಿಗ]; ಹೋ. ಅಬುಬು.
ಬರ್	ಬರ್=ಭರ್; ಭರಂಗೆಯ್;
ಬಲಬಳ	ಬಳ್ ನೋಡು.
ಬಸ್	ಬಸ್=ಭಸ್ [ಹೊಗೆ, ಉಗಿ, ಉಸಿರು] ಹೊರಬರುವ ಸದ್ದು;
ಬಳಬಳ	ಬಳಬಳ [ಎಡೆಬಿಡದೆ]; ಬಂಬಳ=ಬಂಬಲ=ಬಹಳ. ಆ. ಬಂಬಾಳ; ಬಂಭಾಳ;
ಬಾಬಾ	ಬಾಬಾ=ವಾವಾ; [Ba to open the mouth; ವಾಯ್= ಬಾಯಿ ಹೋಲಿಸು]; Baa ಬ್ಯಾ ಕುರಿಯ ಕೂಗು.
ಬಿಕ್	ಬಿಕ್=ಪಿಕ್; ಬಿಕ್ಕು; ಬಿಕ್ಕುಳಿಸು; ಬಿಕ್ಕಿ ಬಿಕ್ಕಿ ಅಳು; [ಪಿಕವೊ];
ಬುಕ್	ಬುಕುಬುಕು=ಪುಕುಪುಕು.....ಪುಕ್ಕು ನೋಡು.
ಬುಚು	ಬುಚುಬುಚು=ಪುಚುಪುಚು=ಬುಳುಬುಳು [ಪುಳು=ಹುಳು];
ಬುಡುಬುಡು	೧ ಬುಡುಬುಡಿಕ; ಕಿಡುಬುಡಿಕ; ೨ ಬುಡುಬುಡು [ನೀರಗುಳ್ಳೆ]; ಬೊಬ್ಬುಳಿ; ಸಂ. ಬುದ್ಬುದ [Bubble]; ಆ. ಬುಡಬುಡಾ; ೩ ಬುಡುಕ್=ಡುಬಕ್. ಎನೆ ಉರುಳು, ಬೀಳು;
ಬುರುಬುರು	೧ ಬುರುಬುರು=ಪುರುಪುರು ಉರಿ; ಉಬ್ಬು; ಬುರುಬುರಿ..... ಬುರುಡಿ=ಬುಡ್ಡಿ [ಬುಡುಬುಡಿ]; ೨ ಬುರ್=ಭುರ್=ಪುರ್ ಎನೆ ಹಾರು; [ತಿಡಿ];.....ಬೂರುಗು=ಬೂರಲ [ಅರಳೆಮರ];
ಬುಲ್	೧ ಬುಲ್‌ಬುಲ್ ನಾದ; ಬುಲ್‌ಬುಲ್ ಪಕ್ಷಿ; ಬುಲಬುಲ (ವಾದ್ಯ); ಆ. ಬೋಲ (ಸೊಲ್ಲು;)
ಬುಸ್	ಬುಸ್=ಭುಸ್=ಫುಸ್ (ಭುಜಗದ ಫೂತ್ಕಾರ); ಬುಸುಗುಟ್ಟು;
ಬೆ...ಬೆ.	೧ ಹೀಯಾಳಿಸುವಾಗ; ತಿರಸ್ಕರಿಸುವಾಗ; ಚಿಹಾಕು; ಚಿ=ಇಸ್ಸಿ.
ಬೆಬೇ	ಬೆಬೇ=ಬ್ಯಾಬ್ಯಾ (ಕುರಿಯ ಇಲ್ಲವೆ ಕರುವಿನ ಶಬ್ದ); (ಅಂ)ಬಾ; (ಅಂ)ಬೇ; [ಆ. ಬಕರೆ (ಕುರಿ)] ಬೆಕ್ಕರಿಸು (ಬ್ಯಾ ಎನ್ನು Bleat); ಬೆಪ್ಪ (ಪೆಂಗೆ; ಪೆದ್ದ); ಬೇಕರೆ (ದೈನ್ಯದಿಂದ ಕೂಗಿ, ಕರೆದು ಕೇಳು; ಬೇಡು; ಬೇ) ದೈನ್ಯದಿಂದ ಯಾಚಿಸು;......ಬೇಡು; ಬೇಳು (ಯಜ್ ಮತ್ತು ಯಾಚ್ ಎರಡೂ ಧಾತುಗಳಲ್ಲಿ ಅಡಕವಾಗಿರುವ ಅರ್ಥ ವಿಶೇಷವನ್ನು ಇದರಲ್ಲಿ ಕಂಡುಕೊಳ್ಳಬಹುದು); ಹೋ. ಭಿಕ್ಷ್ (Beg). 'ಪೆಪೇ' ನೋಡು.

ಬೊಬೊ ೧ ಪೊ=ಬೊ; ಬೊಬ್ಬೆ; ಬೊಬ್ಬಾಟ ಬೊಗಳು=ಬಗಳು (Bowwow); ಆ. ಬೋಭಾಟಾ; ಬೋಂಬ; ಬೋಲ (ಮಾತು);

ಬೋರ್ ಬೋರ್=ಭೋರ್=(ಪೋರ್); ಗರ್‌ಜನೆಯ ಶಬ್ದ; ಬೋರ್‌ಗರೆ; ಬೋರಾಡಿ (ಅಳು); ಬೋರಂಗಿ; ಬೊಗರೆ ಆ. ಭೋರಾ;

ಬೌಂ ಬೌಂ=ಭೌಂ=ಭೋರ್. ಬವಣೆ=ಭವಣೆ; ಸಂ. ಭ್ರಮ್.

ಮಗಮಗ ಮಗಮಗ=(ಸುಗಂಧ); ಹೋ. ಸಂ. ಘ್ರಾ; ಗಮ್‌ಧ; ಘಮಘಮ.

ಮಡ ಮಡ=ಡಮ್ (ಗುಂ); ಮಡು; (ಆಳವಾದ ನೀರು);

ಮರ್ ೧ ಮರಮರನೆ ಮರುಗು=ಮಮ್ಮಲನೆ ಮರುಗು; (Murmur); ಮರೋ ಸಾಕು, ಮರೋ ಬೇಡ ಎಂಬ ವಾಡಿಕೆಯಿದೆ.

೨ ಮರಳು (ಕುದಿ); ತೆ. ಮರುಗು;

೩ ಮರ; ಮರ (ಮೊರ); ಅ. ಮರಮ್ (ವಾದ್ಯ); ಹೋ. ಸಂ. ಮರ್‌ಮರ;

೪ ಮರಿ (ಕುನ್ನಿ, ಕೂಸು, ಮಗು); 'ಮೇ' ಹೋಲಿಸು.

ಮಲ ೧ (ಕಲಕು) ಮಲಕು (ಬೆರಿಕೆ; ಗಲಾಟೆ; ಸಂಮಿಶ್ರ); ಮಲಕು (ಗಂಟು); ಅ. ಮಲಕ್ಕು (ಗಲಾಟೆ; ಗೊಂದಲ); ಆ. ಮಳಮಳಣೇ (ಮಳಮಳ ಎನಿಸು; ಕಳವಳಿಸು); ಮರಮರ ಹೋಲಿಸು.

೨ ಮಲಮಲ (ಕೋಮಲ; ನಳಿ); ಅ. ಮವಿ ಮವಿಪ್ಪ (ಕೋಮಲ);

ಮಸ್ ೧ ಮಸ್, ಮುಸ್, ಮಾಡು (ಸೊಕ್ಕು); ಆ. ಮುಸಮುಸಣೇ.

೨ ಮಸೆ (ತಿಕ್ಕು); ಮಸಗು (ಮರ್‌ದನ ಮಾಡು; ತಾಗು, ರೊಚ್ಚಿಗೇಳು);

೩ ಮಸಮಸಕು (ಅಸ್ಪಷ್ಟ); ಮಳಮಳ ನೋಡು.ಂ

ಮಳ ಮಲ=ಮಳ; ಮಳಮಳಿಕೆ (ತಳಮಳ); (ಸಳ) ಮಳ ಕುದಿ=ಮರಳು (ಮಳ್ಳು);

ಮಾ ೧ ಮಾ-ಮ್ಯಾ-ಮೀ; ಮಾಂವ್-ಮಿಯಾಂವ್ (Mew)....ಆ. ಮಾಂಜರ (ಬೆಕ್ಕು); ೨ ಮಾಮಾ....ಅಮ್ಮಾ (Mama); [ಹೋ. ಸಂ. ಮಾ (ಧಾತು), ವೇದದಲ್ಲಿ ಕೂಗು, ಗುಟುರು, ಮೆಮಾಡು ಎಂಬರ್ಥದಲ್ಲಿದೆ. ಮೀ ಧಾತುವನ್ನು ಇದರೊಡನೆ ತೂಗು]... ಮಾತು (ಸೊಲ್ಲು, ವಾಚಾ); ಮಗು=ಮೊಗ; ಮರಿ; ಮಾ-ಹಮ್ಮಾ (ದನಕರು); ಅ. ಮಾ (ಪ್ರಾಣಿಗಳು, ಮಾಮ್ಯಾ, ಮೇ ಮಾಡುವಂತಹವು); ಮಾನ್, (ಕ. ತು. ತೆ.) ಜಿಂಕೆ, ಕುದುರೆ ಮೊದಲಾದ ಪ್ರಾಣಿ; ಜನಗಳು; ಮಾಟ್ಟು (ಮಾತು, ಶಬ್ದ); ಕ. ಮಾರೆ=ಮೋರೆ (ವದನ); 'ಮೊ' ನೋಡು;

ಮಿಕಿಮಿಕಿ ಮಿಕಿಮಿಕಿ ನೋಡು=ಮಿಳಮಿಳನೆ ನೋಡು. ಆ. ಮಿಚಿಮಿಚಿ ಪಾಹಣೇ;

ಮಿಟ್ ೧ ಮಿಟ್ಟನೆ ಮಿಡುಕು; ಮಿಟಿಮಿಟಿ-ಪಿಟಿಪಿಟಿ ಗೊಣಗುವುದು; ಅ. ಮಿಣಿಮಿಣಿ Mumble];

	೨ ಮಿಟುಕು, ಮೀಟು; ಕಣ್ಣುಮಿಟುಕು [ಹುಯ್ಯು]; ಆ. ಮಿಟಣೇ [ಮುಚ್ಚು]; ೩ ಮಿಡಿ; ಮೀಟು, ಮಿದಿ [ಕುಟ್ಟು]; ಮಿಡತೆ=ಮಿಡಚೆ;
ಮಿಣಿಮಿಣಿ	ಮಿಣಿಮಿಣಿ ದೀಪ [ಮಂದಪ್ರಕಾಶ]; ಮಿನುಗು [ಸ್ವಲ್ಪ ಹೊಳಪು]; ಮಿಂಚು; ಮೀನು [ನಕ್ಷತ್ರ]; ಮೀಂಬುಳು=ಮಿಂಚುಹುಳು;
ಮಿರಿಮಿರಿ	ಮಿರಿಮಿರಿ ಮಿಂಚು; ಮಿರುಗು; ಮೆರುಗು; ಮೆರೆ; ಮೆರವಣಿಗೆ; ಮಿಸುಕು; ಮಿಸುಗು; ಮಿಸುನಿ (ಹೊಳೆವುದು, ಹೊನ್ನು; ಕನಕ); ಆ. ಮಿರವಣೇ;
ಮಿಳಿಮಿಳಿ	೧ ಮಿಳಿಮಿಳಿ=ಮಿಣಿಮಿಣಿ (ಕಣ್ಣುಪೂರ್ಣ ತೆರೆಯದೆ) ನೋಡು; ಮೆಳ್ಳಗಣ್ಣು; ಮೆಳ್ಳ; ಮೆಳ್ಳೆ; ೨ ಮಿಳ್ಳೆ (ಸಣ್ಣಗಿಂಡಿ);
ಮು	೧ ಮೂಸು; ಮೂಗು; ಸಂ. ಮುಖ; ಹೋ. ಮೋರೆ;
ಮುರ್	ಮುರ್=ಮೊರ್; ೧ ಮುರಿ; ಮುರುಟು; ಮುಡಿ; ಮುದ್ದೆ; (ತಿರುವು) ಮುರುವು; ೨ ಅ. ಮುರತ್ (ನುಡಿ; ಕೂಗು); ಸಂ. ಮುರಲಿ (ಕೊಳಲು); ಮೊರ್ ನೋಡು.
ಮುಸ್	ಮುಸ್‌ಮುಸ್=ಬುಸ್‌ಭುಸ್; ಮುಸುಗುಡು; ಮುಸುಗುಟ್ಟು;... ಮುಸುಡು (ಮೋರೆ); ಮೂಸು; ಆ. ಮುಸ್ಕುಟ;
ಮುಳುಮುಳು	ಮುಳುಮುಳು ಅಳು;
ಮೆ, ಮೇ	ಮೆಮೇ-ಮ್ಯಾ, ಮ್ಯಾಂವ್; ....ಮೇಕೆ; ಸಂ ಮೇಷ; 'ಮಾ' ನೋಡು.
ಮೊ, ಮೊರ್	೧ ಮೊರೆ (ಗರ್‌ಜಿಸು; ಧ್ವನಿಮಾಡು; Murmur; moan); ಮೊರೆಯಿಡು; ಮೊಗ= ಮೋರೆ=ಮೋತಿ=ಮಾರೆ; ಮೊರಹು= ಮೊರೆತ (ಜೇಂಕಾರ. ಕೂಗು); ಹೋ. ಮುಳುಮುಳು ಅಳು; ಅ. ಮುರುಮುರು=ಮೊರುಮೊರು=ಮುಣುಮುಣುಕ (ಗುಣುಗುಣು); ೨ ಮೊರಳು (ಕುದಿ)=ಮರಳು; ೩ ಮೊರ (ಶೂರ್ಪ)=ಮರ. ೩ ಮೊಗು=ಮಗು=ಮರಿ; ಮೊಳಗು=ತೆ. ಮ್ರೋಗು. ಅ. ಮೊಳಿ (ನುಡಿ; ಆಡು); ಮೊಲ್ಲು=ಸದ್ದು; ಮೋಕರಿ (ಗರ್‌ಜಿಸು); ಮೋಕರಂ=ಕ. ಮೋಹರ (ಗಲಾಟೆ; ಗೊಂದಲ); ಅ. ಮೋಕ್ಕಾಳಾ (ಕೆಲೆತ; ನಗೆನುಡಿ; ಹಿಗ್ಗಿನ ಹಾಹೂ); ಹೋ. ಸಂ. ಮುದ್; ಮೋದ;
ರ್; ರಂ	೧ ರ್=ಅರ್; (ರೇ=ಎಲಾ=ಅರೆ); ೨ ರಂ=ರೆಂವ್=ರಿಂವ್ ಎಂದು ಅತಿವೇಗದ ನಾದ; ಸಂ. ರವ; ರಾಗ. ಕ. ರೊಂಯ್ ಎಂದು ಪತಂಗ ಮುಂ. ಹಾರಾಟ; ೩ ರೊಂಯ್ (ಹೊಂಯ್) ಎಂದು ಅಳು; ರಂಪು=ಗಲಾಟೆ; ರಂಕೆ=ರೆಂಕೆ=(ದನಗಳ ಗುಟರು); ರಚ್ಚೆ (ಚೀರಾಟ, ಅರಟ್ಟು=ಅರಡು); ರವಳಿ (ಕೂಗು, ರವ; ೨ ರವದಿ (ಜೋಳ, ಸಜ್ಜೆಗಳ ಎಲೆ-ಸದ್ದು ಮಾಡುವ ಸವುದೆ); ೩ ರವರವ ಎನ್ನು (ನಾಲಗೆ); ೪ ರಂ ರುಂ ಎಂದು ಹೊಡೆ;
ರಟ	ರಟರಟ ಕುದಿ; ರಟ್ಟು=ರಜ್ಜು=ರೊಜ್ಜು; ಹೋ. ಸಂ. ರಸ; ಗುಟ್ಟು ರಟ್ಟಾಯಿತು.

ರಪ್	೧ ರಪಾರಪಾ ಹೊಡೆ; ಆ. ರಪಾಟಾ (ಏಟು); ರಪ್ಪನೆ ಬೀಳು; ೨ ರಪ್ಪೆ=ರೆಪ್ಪೆ;
ರವ್	ರ್-ರಂ ನೋಡು.
ರಿಂವ್; ರುಂ	ರಿಂವ್ ಎಂದು ಎಸೆ (ಬೀಸು); ಹೊಡೆ; (Ringing); ರುಂ ಎಂದು ಗುದ್ದು;
ರುಪ್	ರುಪ್=ರುಬ್ ಎನೆ ಹೊಡೆ, ಗುದ್ದು; ರುಬ್ಬು (ಅರೆದು; ತಿರುವಿ ಸಣ್ಣಿಸು; ನುಣ್ಣಿಸು);
ರೇ	ರೇಗು (ಕೂಗು; ಚೀರು; ಸಿಟ್ಟಾಗು); [Rage; Rave; Rail; Roar];
ರೊಚ್ಚ್	೧ ರೊಚ್ಚು=ರೋತೆ=ರೊಜ್ಜು (ರಾಡಿಯಲ್ಲಿ ಕಾಲಿಡಲು ಆಗುವ ರೊಚ್ ಎಂಬೀ ಬಗೆಯ ನಾದದಿಂದ); ೨ ರೊಚ್ಚು=ರೋಸು-ರೌಸು.
ರೊಪ್	ರೊಪ್ಪ ಹಾಕು (ಕೂಗು);
ರೊಯ್	ರೊಯ್ ಹೊಯ್ ಎಂದು ಅಳು; ರೋಸು=ರೌಸು;
ರೊಸ್	ಆ. ರುಸಣೇ. ಸಂ. ರೋಷ;
ಲಲಲಽ	ಹಾಡಿನಲ್ಲಿ; ನನನಽ ಎಂಬಂತೆ; [ಲಕಾರವು ಅಲೆ; ಕೋಮಲತೆ, ಮತ್ತು ನಾದಸೂಚಕ];
ಲಕ್	ಲಕಲಕ ಹೊಳೆ; ಲಕಲಕಿಸು; ಆ. ಲಕಲಕಣೇ; ಲಕಾಕಣೇ [ಚಕಾಕಣೇ]; ಕ. ಲಕಾ ಲಕ್=ಸಂ. ಕಲಾ; ಕನ್; ಚನ್; ಕಾಸ್ ಮತ್ತು ಚಕಾಸ್ ನೋಡು. ಇದರೊಡನೆ ಕ. ಕನಿ [ಹೊಳೆ; ಪ್ರಕಾಶಿಸು]; ಲ=ನ. ಆದ್ದರಿಂದ ಕಲ್=ಕನ್. ಲಕಲಕಾ [ಎಂದರೆ ಹೊಳಪು]; ಕಲಾ; ಚಕಚಕಾ ಹೊಳೆ=ಕಾಸ್; ಏಕೆಂದರೆ ಚ=ಸ; ಈ ದೃಷ್ಟಿಯಿಂದ ಚಿನ್ನ ಮತ್ತು ಕನಕ. ಒಂದೇ ಅರ್ಥದುವು. ಮಿಸುನಿ ಹೋಲಿಸು. ಲಕಲುಕು; ಲುಕುಲುಕು ನೋಡು; ಸಂ. ಲೋಚನ; Look;
ಲಚ್	ಲಚ್‌ಲಚ್=ಮೊಚ್‌ಮೊಚ್ [೧ ತಿನ್ನುವಾಗಿನ ನಾಲಗೆಯ ಸದ್ದು; ೨ ಹಲ್ಲಿಯ ನುಡಿತ]; ಆ. ನಚುನಚು; ಲ=ನ; ಆದುದರಿಂದ ಲಾಲಽ ಮಾಡುವ ಅವಯವ ನಲ್-ನಾಲಗೆ; ಲಲಕಾರಿಸು;
ಲಟ್	ಲಟಲಟ, ಲುಟುಲುಟು ನಡೆ: ಲಟಪಟ ಒದ್ದಾಡು; ಲಡಬಡ ಅಲ್ಲಾಡು; ಲಾಗು; ಲಟಕಟಿಸು; ಲಟ್=ನಟ್,
ಲಪ್	ಲಪ್=ಲಬ್; ಲಪಲಬ ಹೊಯ್ಯುಕೊಳ್ಳು; ಬೊಬ್ಬಿಡು; ಲಬ್ಬೆ=ಬೊಬ್ಬೆ; ಸಂ. ಲಪ್; ಜಲ್ಪ; ಲಪನ (ಬಾಯಿ);
ಲಾಲಾ	ಲಾಲಿ (ಜೋಗುಳ); Lullaby; ಲಲ್ಲೆ ನುಡಿ; ಸಂ. ಲಾಲನ; ಲಲಿತ;
ಲವ್	೧ ಲವಲವ=ರವರವ [ತಿಂಡಿ; ನವೆ]; ಆ. ಡೋಳಾ ಲವಣೇ [ಕಣ್ಣು ರೆಪ್ಪೆ ಹುಯ್ಯು]; ೨ ಲವಲವಿಕೆ [ಅಪೇಕ್ಷೆ; ಹಾರೈಕೆ; ಜಿಜ್ಞಾಸೆ];
ಲೆ, ಲೊ	(ಅ) ಲಾ-ಲೆ; (ಅ) ಲೊ; (ಎ) ಲಾ, ಲೆ; (ಎ) ಲೊ; (ಕರೆವಾಗ; ಮತ್ತು ಸೋಜಿಗ, ದುಃಖಗಳಲ್ಲಿ Lo);

ಲೊಟ್	೧ ಲೊಟ್‌ಲೊಟ್=ಲೊಚ್‌ಲೊಚ್=ಲಚ್‌ಲಚ್; ೨ ಲೊಟಕು, ಲೊಟಗುಟ್ಟು (ಮಾತಾಡು, ತಿರಸ್ಕಾರದಲ್ಲಿ); ಲೊಟ= ಲೊಡ (ಟೊಕಡೊಕದಂತೆ ಟೊಳ್ಳಿನ ಸದ್ದು); ಲೊಟ್ಟೆ (ಟೊಳ್ಳು ನುಡಿ; ಹುರುಳಿಲ್ಲದ ಹರಟೆ); ಲೊಟ್ಟೆ ಹೊಡೆ;
ಲೊಳ್	೧ ಲೊಳ್‌ಮೊಳ್ ಎಂದು ಬೊಗಳು; ಲೊಳಲೊಟ್ಟೆ; ಲೊಳಲೊಟ್ಟೆ ಹೊಡೆ (ಗಳಹು; ಜರಟು; ಕೊಚ್ಚು); ೨ ಲೊಳ್‌ಲೊಳ ಮಾಡುವ ಹುಳು=ನೊಳ=ನೊಣ.
ವಕ್	ವಕಾವಕಾ=ಪಕಾಪಕಾ (ಬಾಯಿಬಿಡು); ವಾಕರಿಕೆ= ಓಕರಿಕೆ; 'ವಾ' ನೋಡು.
ವಟ್	ವಟವಟ=ವಡವಡ; ವಟಗುಟ್ಟು; ವಡವಡಮಾತು; ಸಂ. ವದ್ ಅ. ವಡಿ (ಗಾಳಿ); ಅ. ತೆ. ವದರು (ಒದರು; Utter); ಒಡ ಮತ್ತು ಬಡ್ ನೋಡು.
ವರ್	ವಳ್‌ವರ್ (ವರ್‌ಬರ್) ಎಂದು ಒರಲು; ಹೋ. Warble;
ವಲ್	ವಲವಲ=ವಿಲಿವಿಲಿ ಒಲೆದಾಡು; ಒದ್ದಾಡು; ಸಂ. ವಿವ್ಹಲ; ವ್ಹಲ್; Wail;
ವಸ್	ವಸ್‌ವಸ್=ಬಸ್‌ಬಸ್;
ವಳ	ವಳವಳ ಒಲೆದಾಡು; ಒದ್ದಾಡು; ಅ. ವಳವಳಣೇ; ಅ. ವಳಂಗು ಅಲೆ; ಉಲುಕು; ವಟವಟಿಸು; ನುಡಿ; ಕ. ವಣವಣ (ವಳವಳ) ಬೆರುಗು;
ವಾವಾ	೧ ವಾವಾ=ಬಾಬಾ ಎಂದು ಕರೆ; ಕೂಗು; 'ವಕ್' ಮತ್ತು 'ಪಾ' ನೋಡು. ೨ ವಾಯಿ=ಬಾಯಿ. ವಾತು=ಮಾತು; ಹೋ. ಸಂ. ವಾ ಮತ್ತು ವಾಕ್-ವಾಚ್;
ವಿರ್	ವರ್‌ವಿರ್ ಎಂದು ಕೂಗು; ಅ. ವಿರ್ (ಚೀರು); ವೀರಣ [ಎರಡೂಕಡೆಯಿಂದ ಬಾರಿಸುವ ವಾದ್ಯ];
ವಿಲಿವಿಲಿ	ವಿಲಿವಿಲಿ=ವಳವಳ ಒದ್ದಾಡು; ಅ. ವಿಲಾಯ [ತೊಂದರೆ; ಪೀಡೆ]; ಹೋ. Wail; Woe;
ವೌ	ವೌವೌ (Bowwow)=ಬೊಗಳು.
ಸ್	೧ ಸ್ ಎಂದು ಉಸಿರನ್ನು ಹೊರಗೆ ಬಿಟ್ಟು ಹೇಳಿದರೆ ಸ್-ಇಸ್ ಎಂದು ಹೇಸಿಕೆ; ಅಸಹ್ಯ, ತ್ಯಾಜ್ಯವೆಂಬರ್ಥವುಂಟಾಗುತ್ತದೆ. ಉದಾ: ಇಸ್, ಇಸ್ಸಿ; ಉಸ್=ಹುಶ್. ೨ ಸ್ ಎಂದು ಒಳಗೆ ಸೆಳೆದರೆ ಸವಿ, ಸ್ವಾದ, ಗ್ರಾಹ್ಯ ಎಂಬರ್ಥ ಸೂಚಕವಾಗುತ್ತದೆ. ಉದಾ; ಸವಿ; ಸೀಪು; ಸಿಹಿ; ತೆ. ಚವಿ ಅ. ಚವ; ಅ. ಚುವ್ವೆ (Chew); Eng; Sweet; Sup; Sip; ಸಂ. ಸ್ವದ್; ಸ್ವಾದ;
ಸಟ್	ಸಟ್=ಚಟ್ ಎಂದು ಸಿಡಿ; ಸಟಪಟ=ಚಟಪಟ; ಸದಕು=ಸದೆ [ಚಚ್ಚು, ಜಜ್ಜು]; ಅ. ಚದ್ಯೆ.

೧ ಸಪ್=ಚಪ್; ಸಪ್ಪಳ=ಸೊಪ್ಪಳ; ಸದ್ದು=ಶಬ್ದ;
೨ ಸಪ್‌ಸಪ್= ಚಪ್‌ಚಪ್ ಹೊಡೆ.
೧ ಸರ್ ಎನೆ ಸರಿ; ಸರಿ; ಸರವು (ಮಳೆ); ಸರುವು=ಝರಿ=ಸ್ರೋತ ಸಂ. ಸ್ರು. ೨ ಸರಿ=ಜರಿ.....ಸಾರು [ಸಾಗು; ಸಮೀಪಿಸು, ಹತ್ತಿರಕ್ಕೆ ಹೋಗು] ಸಂ. ಸೃ-ಸರ್; ಚರ್; ಕ. ಸರಸರ ನಡೆ;
೩ ಸರಲ; ಸರಳು [ಶರ, ಬಾಣ];
೧ ಸಳಸಳ; ಸಳಮಳ=ಚಲಮಲ; ಸಳಮಳ ಕುದಿ [ಎಸರು];
೨ ಸಳಿ=ಚಳಿ. ಸಂ. ಚಲ್.
ಸಾ=ಚಾ; ಹೋ ಸಂ. ಚಲ್; ಸಾಗು; ಸಾರು; [ಸಾ=ಚಾ]=ಹಚಾ [ನಾಯಿಗೆ ಹೋಗೆಂದು ತಳ್ಳುವುದು; ಸಾ=ಚಾ [ದನಗಳಿಗೆ]; (ಉ) ಸಾ [ಆಡು ಕುರಿಗಳಿಗೆ];
೧ ಸ್ ನೋಡು; ಸೀಟು=ಚೀಪು=ಸೀಪು [Sip];
೨ ಸೀನು [Sneeze]; ೩ ಸೀಟಿ; ಸಿಳ್ಳು;
ಸಿಟ್=ಚಿಟ್; ಸಿಟ್ಟೆಂದು ಸಿಡಿ; (ಚಿಟ್ಟೆ=ಜಿಟ್ಟೆ); ಸಿಡಿಲು; ತಲೆಸಿಡಿ, ಚಿಟ್ ಎನ್ನು; ಸಿಡುಕು=ಸಿಟ್ಟು.
ಸಿಳ್=ಚಿರ್; ಸಿರ್ ಎಂದು ಚಿವುರು;
ಸುಯ್; ಸುಸೂಕರಿಸು; ಸುಯ್ಲು (ಉಸಿರು); ಸೂಸು (ಹೊರಬೀಳು; ಸೋರು); ಸೊಲ್ಲು (ಭಾಷೆ); ಅ. ಚೊಲ್ಲು. ಸಂ. ಶ್ವಸ್, ಶ್ವಾಸ; Sigh;
೧ ಸುರ್=ಚುರ್; ಸುರುಸುರು ಸುಡು=ಸೋಡು; ಸೋಡ; ಸೊಡರು (ದೀಪ; ಸೂರ್ಯ);
೨ ಸುರುಸುರು=ಚುರುಚುರು; ಚುರಕು (ಬಿಸಿ); ಆ. ಚರಕಾ; ಸಂ. ಚೂರ್ಣ ಕ. ಸುಣ್ಣ
೩ ಸುರ್=ಸೊರ್ ಸುರ್ ಎಂದು ಸುರಿ; ಸೋರು;
ಸೊರೆಬಿಡು= ತೊರೆಬಿಡು; ಸಂ. ಸ್ರು; ಸ್ರವ್;
೪ ಸುರಿ, ಸುರಕೊಳ್ಳು. ಸಾರು ಸುರಕೊಳ್ಳುವರು.
ಸುಳುಸುಳು ಸುಳಿ; ಸುಳಿದಾಡು ಸುಳುವು; ಸುಳ್ಳೆನೆ ಬೀಸುವ ಗಾಳಿ; ಸುರ್ ನೋಡು. ಸೊ = ಚೊ ಸೊಲ್ಲು (ಭಾಷೆ); ಸೊರಹು (ಗಳಪು);
ಹಹ = ಹಹಾ; ಹಿಹೀ; ಹುಹು (ನಗೆಯ ಬಗೆಗಳು);
ಅಂ ನೋಡು; ಹಮ್ಮು (ಆತ್ಮಾಭಿಮಾನ); ಅ. ಹಂ; ಹಂಬಾ = ಅಂಬೇ; (ದನಗಳ ಕೂಗು); ಹಮ್ಮಾ = ಮಾ (ದನಗಳು);
ಅ. ಮಾ (ಪಶುಗಳು);
೧ ಹಾ = ಪಾ,........... ಹಾಡು ಹೋ. ಸಂ. ಹಾಹಾ; ಹೂಹೂ (ಗಂಧರ್ವರ ಹೆಸರುಗಳು); ೨ ಹಾ! ಹೋ ಉದ್ಗಾರ.

ಅಟ್ ನೋಡು; ಒಂದೊಂದು ಪ್ರಾಣಿ ವಿಶೇಷವನ್ನು ಅಟ್ಟುವಾಗ ಹೇಳುವ ರೀತಿ ಒಂದೊಂದು ಬಗೆಯಾಗಿದೆ: ಹಚ್ (ನಾಯಿಗೆ); ಹಟೊ (ಹಿಂಜರಿ, ಎಂಬಲ್ಲಿ ಹಿಂದುಸ್ತಾನಿಯಲ್ಲಿ): ಆ. ಹಟ್/ಡ್ (ನಾಯಿಗೆ); ಕ. ಹತ್ ಮಾಡು (ಹೊಡೆ, ಚಿಕ್ಕಮಕ್ಕಳ ಮಾತಿನಲ್ಲಿ); ಹಲ, ಹಲ್ಯಾ (ಕುದುರೆ, ಎತ್ತುಗಳಿಗೆ); ಹಪ್ (ಎಂದು ಅಪ್ಪಳಿಸು); ಆ. ಹಪಟಣೇ = ಅಪಟಣೇ; ಹೋ. ಸಂ. ಹನ್; ಹತ; ಘಾತ; ಕ. ಹಣಿ = ಅಣಿ (ಹೊಡೆ);

೧ ಹಂ = ಹುಂ [ಅಗಲಿ];

೨ ಹಂs [ವೇದನೆಯಲ್ಲಿ]; 'ಅಂ' ನೋಡು.

ಅಯ್ ನೋಡು; ೧ ಹಯ್ - ಹಾಯ್ - ಅಯ್ಯೊ-ಹಾ!

೨ ಹೈ = ಹಲ [ಕುದುರೆ ಅಟ್ಟುವಲ್ಲಿ];

೩ ಹಯಲ್ಲ-ಅಯಲ್ಲ[ಗಲಾಟೆ; ಗೊಂದಲ]; ಹೈದ; ಹೈಕಳು [ಗಲಾಟೆ ಮಾಡುವ ಸ್ವಭಾವದವರು; ತುಂಟ ಹುಡುಗರು; ಮಕ್ಕಳು];

ಹರ್ = ಅರ್; ಹರಹರ = ಹಲಹಲ [ಪ್ರೋತ್ಸಾಹಿಸಿ ಪ್ರೇರೇಡಿಸುವಾಗ; ಹೇಳುವ ರಣಗರ್ಜನೆ]; ಹೋ. Hurrah [ಇದೂ ಒಂದು ಕಾಲಕ್ಕೆ ರಣಗರ್ಜನೆಯಾಗಿದ್ದಿತೆಂದು ಆಕ್ಸಫರ್ಡ ಕೋಶವು ಹೇಳುತ್ತದೆ];...........ಪರ್= ಹರ್-ಪರಿ=ಹರಿ.... ಹಬ್ಬು.

೧ ಹಲಹಲಲs [ಉತ್ಸಾಹಾತಿರೇಕದಲ್ಲಿ]; 'ಹಲಲಲs ಸಾರಥಿ' ಎಂಬ ಉದ್ಗಾರಗಳು ದೊಡ್ಡಾಟಗಳಲ್ಲಿ ಪುರಾತನ ರಣಗರ್ಜನೆಯ ಅವಶೇಷಗಳಂತೆ ಈಗಲೂ ಉಳಿದಿವೆ.

೨ ಹಲು (೦) ಬು = ಪಲುಂಬು [ಕೂಗು; ದುಃಖಿಸು; ಆತುರ ಪಡು]; ಹಳಹಳಿ [ಮಿಡುಕು]; ಹಳಿ [ನಿಂದಿಸು]; ಆ. ಹಳಹಳ [ಪಶ್ಚಾತ್ತಾಪ];

೧ ವಿರೋಧದಲ್ಲಿ. ಹಾ, ಹಾಂ;

೨ ದುಃಖ, ಕೋಲಾಹಲಗಳಲ್ಲಿ ಹಾ; ಹಾಹಾಕಾರ;

೧ ಹಿಹೀ......ಹಹಹ (ನಗು); ಕಕ್-ಗ್ ನೋಡು.

೨ ಹಿಃ= ಚಿಃ ಹೀ [ಏಡಿಸುವಲ್ಲಿ]; ಹೀಹಾಳಿ [ನಿಂದೆ];

ಹೀಯಾಳಿಸು = ಹಳಿ [ತೆಗಳು];

೧ ಹಿರಿಹಿರಿ ಹಿಗ್ಗು; ಹೋ. Hilarity, Hilarious, ಹೃಷ್; ಹರ್ಷ;

ಹಿಸ್ = ಪಿಸ್; ಹಿಸ್ಸ ಮಾಡು=ಹೇಸು.

೧ ಹುಂ = ಉಂ; ಸಮ್ಮತಿ ಮೊದಲಾದ ಅರ್ಥದಲ್ಲಿ; ಹುಮ್ಮಸ, ಹುರುಪು [ಉತ್ಸಾಹ]; ೨ ಹುಹುಹು-[ಚಳಿಯ ನಡುಕ];

ಆ. ಹುಡಹುಡಿ [ಚಳಿ, ನಡುಕ]; ಕುಡುಕುಡು-ಕೋಡು ಹೋಲಿಸು

ಹುಯ್	೧ ಹುಯ್ = ಪುಯ್, ಹುಯಿಲು [ಗಲಾಟೆ]; ಹುಲುಬು [ಸುದ್ದಿ], ಹುಯ್ಕಿ, ಹೈ, ಹೊಯ್ ಕೈ [ಹೊಡೆದಾಟ, ದೊಂಬೆ], ... ಹುಲಿ,
	೨ ಹುಯ್ = ಹೊಯ್= ಹೊಡೆ.
ಹುರ್	೧ ಹುರ್ = ಪುರ್; ಹುರಿ; ಹುರುಪಳಿಸು (ಪುರುಪುರು ಸುಡು); ಹುರಿಕಡಲೆ (ಪುರಿಗಡಲೆ);
	೨ ಹುರ್=Hurrah; ಹರಹರ; ಹುರುಪು=ಹುಮ್ಮಸ (ಹುಂ ಎಂದು ಪ್ರೋತ್ಸಾಹಿಸು);
ಹುಸ್	೧ ಹುಸ್=ಉಸ್-ದಣಿವಿನ ನಿಟ್ಟುಸಿರು;
	೨ ನಿವಾರಿಸುವಲ್ಲಿ-ಹುರ್ (ತಳ್ಳು, ಅಟ್ಟು).
ಹೇಹೇ	೧ ಹೆ, ಹೇ-ಹಾಹಾ-ಹ್ಯಾಹ್ಯಾ ನಗು (Haha)
	೨ ಹೇಕರಿಸು (ಕುದುರೆ) ಸಂ. ಹೇಷಾರವ; ೩ ಹೇಳು=ಪೇಳು; 'ಪೇ' ನೋಡು ೩ ಹೇ=ಏ (ಕರೆವಾಗ) (೪) ಹೇಃ (ತಿರಸ್ಕಾರ) ಹೇಸು; ಹೇಸಿ; ಸಂ. ಹೇ;
ಹೋ	ಹೊ=ಓ; ೧ ಕರೆವಾಗ; ೨ ಹರಿವನಾದ (ಓಘ=) ಹೊನಲು (ಒನಲು; ಒಳ್ಳು; ಹೊಳೆ);
ಹೊಯ್	ಹೊಯ್=ಪೊಯ್; ಹೊಡೆ; ಪುಡ್ಡೆನೆ ಪೊಡೆ=ಹೊಡೆ.
ಳೊಳ್	ಲ=ಳ; ಳೊಳ್ಳ್ (ನಾಯ ಕೂಗು).

ಮಿಕ್ಕ ಮಾತುಗಳು

೧. ನುಡಿಯ ಹುಟ್ಟನ್ನು ಕುರಿತು ಪುರಾತನರ ಕೆಲವು ಮತಗಳು

೧. ಕಾಕಃ ಇತಿ ಶಬ್ದಾನುಕೃತಿಃ।

೨. ನ ಶಬ್ದಾನುಕೃತಿಃ ವಿದ್ಯತೇ, ಇತಿ ಔಪಮನ್ಯವಃ।

೩. ತತ್ರ ನಾಮಾನಿ ಆಖ್ಯಾತಜಾತಾನಿ, ಇತಿ ಶಾಕಟಾಯನಃ ನೈರುಕ್ತ ಸಮಯಃ ಚ।

೪. ನ ಸರ್ವಾಣಿ, ಇತಿ ಗಾರ್ಗ್ಯಃ ವೈಯಾಕರಣಾನಾಂ ಚೈಕೇ। -ನಿರುಕ್ತಂ

೫. ಶಕ್ತಃ ಪದಂ। ಅಸ್ಮಾತ್ ಪದಾತ್ ಅಯಂ ಅರ್ಥಃ ಬೋದ್ಧವ್ಯಃ, ಇತಿ ಈಶ್ವರಸಂಕೇತಃ ಶಕ್ತಿಃ।

ತರ್ಕಸಂಗ್ರಹಃ

೨. ವರ್ಣ ವಿಚಾರವು

ಪರಾಶಕ್ತಿಃ............ಪ್ರಜ್ಞಾನಘನ-ರೂಪಿಣೀ।.....

ಮಾತೃಕಾ ವರ್ಣರೂಪಿಣೀ ॥೧೬೭॥

ಟೀಕೆ: ಮಾತೃಕಾ ಅಕಾರಾದಿ ಕ್ಷಕಾರಾಂತಾಃ, ತಾಸಾಂ ವರ್ಣಾಃ ಶುಕ್ಲಾದಿ ರೂಪಾಣಿ ತಾನಿ ಏವ ರೂಪಂ ಸ್ವರೂಪಂ ಅಸ್ಯಾಃ। ತಾನಿಚ ಸನತ್ಕುಮಾರ ಸಂಹಿತಾಯಾಮ್। "ಅಕಾರಾಧ್ಯಾಃ ಸ್ವರಾ ಧೂಮ್ರಾಃ ಸಿಂದೂರಾಭಾಸ್ತು ಕಾದಯಃ। ಡಾದಿಫಾಂತಾಃ ಗೌರವರ್ಣಾ ಅರುಣಾಃ ಪಂಚಬಾದಯಃ॥ ಲಕಾರಾದ್ಯಾಃ ಕಾಂಚನಾಭಾ ಹಕಾರಾಂತ್ಯೌ ತಟಿನ್ನಿಭೌ" ಇತಿ। ತಂತ್ರಾಂತರೇತು 'ಸ್ಫಟಿಕಾಭಾಃ ಸ್ವರಾಃಪ್ರೋಕ್ತಾಃ ಸ್ಪರ್ಶಾ ವಿದ್ರುಮ ಸಂನಿಭಾಃ। ಯಾದಯೋ ನವಪೀತಾಃ ಸ್ಯುಃ ಕ್ಷಕಾರಸ್ಸಃ ತು ಅರುಣೋ ಮತ'. ಇತಿ। ಸರ್ವೇ ವರ್ಣಾಃ ಶುಕ್ಲಾ ಇತ್ಯಪಿ ಕ್ವಚಿತ್। ಮಾತೃಕಾ ವಿವೇಕೇ ತು 'ಅಕಾರಂ ಸರ್ವದೇವತ್ಯಂ ರಕ್ತಂ ಸರ್ವವಶಂ ಕರಮ್' ಇತ್ಯಾದಿನಾ ಪ್ರತ್ಯಕ್ಷರಂ ವರ್ಣವಿಶೇಷ ಉಕ್ತಃ। ಯದ್ವಾ ಏಕ ಪಂಚಾಶನ್ ಮಾತೃಕಾವರ್ಣಾ ಏವ ರೂಪಂ ಅಸ್ಯಾಃ।... ತದುಕ್ತಂ ಯಜ್ಞವೈಭವ ಖಂಡೇ 'ಯಥಾ ಪರತರಃ ಶಂಭುಃ ದ್ವಿಧಾಶಕ್ತಿ ಶಿವಾತ್ಮನಾ। ತಥೈವ ಮಾತೃಕಾದೇವೀ ದ್ವಿಧಾಭೂತಾ ಸತೀಸ್ವಯಮ್॥ ಏಕಕಾರೇಣ ಶಕ್ತೇಸ್ತು ವಾಚಿಕಾ ಚ ಇತರೇಣ ತು। ಶಿವಸ್ಯ ವಾಚಿಕಾ ಸಾಕ್ಷಾತ್ ವಿದ್ಯೇಯಂ ಪದಗಾಮಿನೀ' ಇತಿ। ಅಕಾರಾದಯಃ ಶ್ರೀಕಂಠಾದಿ ವಾಚಕಾಃ ಪೂರ್ಣೋದಯಾದಿ ವಾಚಕಾಃ ಚ ಇತಿ ಅಸ್ಯ ಅರ್ಥಃ ಉಕ್ತಃ ತತ್ ಟೀಕಾಯಾಮ್। ಅಕ್ಷಮಾಲಾ ಸ್ವರೂಪಿಣೀ ಇತಿ ವಾ। ಉಕ್ತಂ ಚ ಜ್ಞಾನಾರ್ಣವೇ

'ಅಕಾರಃ ಪ್ರಥಮೋ ದೇವೀ ಕ್ಷಕಾರೋಂತ್ಯಸ್ತತಃ ಪರಮ್। ಅಕ್ಷ ಮಾಲೇತಿ ವಿಖ್ಯಾತಾ ಮಾತೃಕಾವರ್ಣ ರೂಪಿಣೀ। ಶಬ್ದಬ್ರಹ್ಮ ಸ್ವರೂಪೇಯಂ ಶಬ್ದಾತೀತಂ ತು ಜಪ್ಯತ' ಇತಿ। ಮಾತೃಕಾವರ್ಣಾನ್ ರೂಪಯತಿ ಜನಯತಿ ಇತಿ ವಾ। ಅನುತ್ತರಾಖ್ಯ ಶಿವಸ್ಯ ಇಚ್ಛಾಶಕ್ತ್ಯಾ ಯೋಗಾದಿಕ್ರಮೇಣ ವರ್ಣೋತ್ಪತ್ತಿ ಪ್ರಕಾರಃ ಸೌಭಾಗ್ಯ ಸುಧೋದಯೇ ದ್ರಷ್ಟವ್ಯಃ। ಮಾತೃಕಾವರ್ಣಾನಾಂ ಏವ ಶ್ರೀಚಕ್ರಾತ್ಮಕತ್ವಂ ಮಾತೃಕಾವಿವೇಕೇ ಷಷ್ಠೇ ಪಟಲೇ ವಿಸ್ತರೇಣ ಪ್ರತಿಪಾದಿತಮ್। ಅತ ಏವ ಸನಂದನ ಸಂಹಿತಾಯಾಂ ಮಾತೃಕಾ ಚಕ್ರಯೋಃ ಐಕ್ಯವಿಭಾವನಂ ಕೈಲಾಸಪ್ರಸ್ತಾರ ಇತಿ ವ್ಯವಹೃತಂ ತಾದೃಶ ರೂಪವತೀ ಇತಿ ವಾ। ಪ್ರಚಂಡಾಜ್ಞೇತಿ ವಕ್ಷಮಾಣನಾಮ್ನೋರನ್ಯಯೋ ರ್ವೈಕ್ಯಮೂರೀ ಕೃತ್ಯ 'ಸ್ಕಂದೋತ್ಪಾದೇನ ಮಾತೃಕಾ' ಇತಿ ದೇವೀಪುರಾಣೇ ನಿರುಕ್ತ ದರ್ಶನಾತ್ ಚ ಮಾತೃಕಾ ಇತಿ। ಅವರ್ಣರೂಪಿಣೀ ಇತಿ ಚ ನಾಮದ್ವಯಂ ಸುವಚಮ್ ॥೧೬೭॥

- ಲಲಿತಾ ಸಹಸ್ರನಾಮ (ಭಾಸ್ಕರಾರ್ಕ ಟೀಕಾ ಸಹಿತ) ಪುಟ ೧೨೫

೩. ನಾದ ಮತ್ತು ವರ್ಣವಿಚಾರ

(ಅ) ಅನುಕೂಲ ಪವನನಿಂ ಜೀವನಿಷ್ಪದಿಂ ನಾಭಿಮೂಲದೊಳ್ ಕಹಳೆಯ ಪಾಂಗಿನವೊಲ್ ಶಬ್ದದ್ರವ್ಯಂ ಜನಿಯಿಸುಗುಂ; ಶ್ವೇತಂ; ಅದರ ಕಾರ್ಯಂ ಶಬ್ದಂ. **- ಶಬ್ದಮಣಿದರ್ಪಣ**

(ಆ) ಕೂಜಂತೀ ಕುಲಕುಂಡಲೀ ಚ ಮಧುರಂ ಮತ್ತಾಲಿಮಾಲಾಸ್ಫುಟಂ ವಾಚಂ ಕೋಮಲಕಾವ್ಯ ಬಂಧರಚನಾ ಭೇದಾತಿಭೇದಕ್ರಮ್ಯೆಃ। ಶ್ವಾಸೋಚ್ಛ್ವಾಸವಿಭಂಜನೇನ ಜಗತಾಂ ಜೀವೋ ಯಥಾ ಧಾರ್ಯತೇ. ಸಾ ಮೂಲಾಂಬುಜ ಗಹ್ವರೇ ವಿಲಸತಿಪ್ರೋದ್ದಾಮ ದೀಪ್ತಾವಲಿಃ ॥೧೧॥ -ಷಟ್‌ಚಕ್ರ ನಿರೂಪಣ

(ಇ) ಭಿದ್ಯಮಾನಾತ್ ಪರಾತ್‌ಬಿಂದೋಃ ಅವ್ಯಕ್ತಾತ್ಮಾರವೋಽಭವತ್। ತತ್ಪ್ರಾಪ್ಯ ಕುಂಡಲೀರೂಪಂ ಪ್ರಾಣಿನಾಂ ದೇಹಮಧ್ಯಗಂ। ವರ್ಣಾತ್ಮನಾವಿರ್ಭವತಿ ಗದ್ಯಪದ್ಯಾದಿಭೇದತಃ। -ಶಾರದಾತಂತ್ರ

(ಈ) ಸ್ವಾತ್ಮೇಚ್ಛಾಶಕ್ತಿಘಾತೇನ ಪ್ರಾಣವಾಯುಸ್ವರೂಪತಃ।
ಮೂಲಾಧಾರೇ ಸಮುತ್ಪನ್ನಃ ಪರಾಖ್ಯೋ ನಾದ ಉತ್ತಮಃ॥

(ಉ) ಝಿಲ್ಲೀವಾವ್ಯಕ್ತ ಮಧುರಾ ಕೂಜಂತೀ ಸತತೋಸ್ಥಿತಾ॥

(ಊ) ತದಭ್ಯಾಸಾತ್ ಯೋಗೀ ಪವನಸುಹೃದಾನ್ ಪಶ್ಯತಿಕಣಾನ್।
ತತಸ್ತನ್ಮಧ್ಯಾಂತಃ ಪ್ರವಿಲಸಿತರೂಪಾನಪಿ ಸದಾ॥

ಪವನಸುಹೃದಾನ್=ವಹ್ನೇನಾಂಕಣಾನ್, ವಹ್ನಿಕಣವತ್ ಜ್ಯೋತಿಃಸ್ಫುಲಿಂಗಾನ್ (ಪಶ್ಯತಿ).

೪. ಶಕ್ತಿ (ನಾದ) ಸ್ವರೂಪ

(ಅ) ನಾದಶಕ್ತಿಃ ಶಿವೋದಿತಾ।

(ಆ) ಸಚ್ಚಿದಾನಂದ ವಿಭವಾತ್ ಸಕಲಾತ್ ಪರಮೇಶ್ವರಾತ್। ಆಸೀತ್ ಶಕ್ತಿಃ ತತೋನಾದಃ, ನಾದಾತ್ ಬಿಂದುಃ ಸಮುದ್ಭವಃ **- ಶಾರದಾ ತಂತ್ರ**

(ಇ) ಶಿವಶಕ್ತಿ ಸಮಾಯೋಗಾತ್ ಅವ್ಯಕ್ತಾತ್ ಪರಮೇಶ್ವರಾತ್। ಆದ್ಯಾ ಭಗವತೀ ದೇವೀ ಸಾ ಏವ ತ್ರಿಪುರ ಸುಂದರೀ। ಆಸೀತ್ ಶಕ್ತಿ ತತೋ ನಾದಃ, ನಾದಾತ್ ಬಿಂದು ಸಮುದ್ಭವಃ॥

(ಈ) ದೇವೀಂ ಜ್ಯೋತಿಃ ಸ್ವರೂಪಾಂ ತ್ರಿನಯನ ವಿಲಸತ್ ಪಂಚವಕ್ತ್ರಾಂ ಸುದಂಷ್ಟ್ರೀಂ। ಹಸ್ತಾಂಭೋಜೇಷು ಚಾಪಂ ಶೂಲಮಪಿದಧತಿ ಪುಸ್ತಕಂ ಜ್ಞಾನ ಮುದ್ರಾಮ್॥

(ಇದು ಶಕ್ತಿ ಮತ್ತು ಸರಸ್ವತಿಯರು ಎಂದರೆ ನುಡಿಯ ಎರಡೂ ನಿಲುವುಗಳು ಒಂದುಗೂಡಿದ ಸ್ವರೂಪ)

(ಉ) ತ್ರಿನೇತ್ರಾಂ.....ಪುಸ್ತಕವೀಣಾಂ ಚ ಧಾರಿಣೀಂ ಸಿಂಹವಾಹಿನೀಮ್॥

(ಊ) ಹಸ್ತೈಃ....ದಧತೀಂ ಪುಸ್ತಕಂ ಜ್ಞಾನಸಮುದ್ರಾಮ್॥

(ಋ) ಶ್ಯಾಮಾಂ ಸೂಕ್ಷ್ಮಾಂ ಸೃಷ್ಟಿರೂಪಾಂ ಸೃಷ್ಟಿಸ್ಥಿತಿಲಯಾತ್ಮಿಕಾಮ್ ವಿಶ್ವಾತೀತಾಂಜ್ಞಾನರೂಪಾಂ ಚಿಂತಯೇತ್ ಊರ್ಧ್ವವಾಹಿನೀಮ್

(ೠ) ಪ್ರತಪ್ತಕಾಂಚನಾಭಾ ಸಾ ಶ್ಯಾಮಾ ಪರಿಕೀರ್ತಿತಾ॥

(ಎ) ಸರ್ವದಾ ಸುಖೀ....ಕ್ರಿಯಾವಾನ್ ಚ ಕಾಮಬೀಜೇನ ಚಾಲಿತಾ॥
ಕಾವು=(ಅಗ್ನಿ)=ಕಾಮ; ಅಗ್ನಿಯೆ ವಾಕ್ ಶಕ್ತಿಯಾಯಿತೆಂಬುದು - ಶ್ರುತಿ

೫. ಶಕ್ತಿಪೀಠ

(ಅ) ವಿಲಸತಿ ಸತತಂ ಕರ್ಣಿಕಾಮಧ್ಯಸಂಸ್ಥಂ ಕೋಣಂ ತತ್ ತ್ರೈಪುರಾಖ್ಯಂ ತಡಿದಿವ ವಿಲಸತ್ ಕೋಮಲಂ ಕಾಮರೂಪಮ್। ಕಂದರ್ಪೋನಾಮ ವಾಯುಃ ನಿವಸತಿ ಸತತಂ ತಸ್ಯ ಮಧ್ಯೇ ಸಮಂತಾತ್ ಜೀವೇಶೋ ಬಂಧುಜೀವ ಪ್ರಕರಮಭಿಹಸನ್ ಕೋಟಿಸೂರ್ಯಪ್ರಕಾಶಃ - ಷಟ್‌ಚಕ್ರ ನಿರೂಪಣಂ

(ಆ) ತ್ರಿಕೋಣಂ ತತ್ತು ವಿಜ್ಞೇಯಂ ಶಕ್ತಿಪೀಠಂ ಮನೋಹರಂ॥

(ಇ) ಮೂಲಾಧಾರೇ ತ್ರಿಕೋಣಾಖ್ಯೇ ಇಚ್ಛಾ-ಜ್ಞಾನ-ಕ್ರಿಯಾತ್ಮಿಕೇ।

(ಈ) ನಾದಬಿಂದೋರ್ಮಧ್ಯೇ ಸಿಂಹಾಸನೋಜ್ಜ್ವಲಮ್।

೬. ನುಡಿಯ ನಾಲ್ಕು ಬಗೆಗಳು ಮತ್ತು ಅದರ ಎಡೆಗಳು

(ಅ) ಸೂಕ್ಷ್ಮಾ ಕುಂಡಲಿನೀ ಮಧ್ಯೇ ಜೋತಿರ್ಮಾತ್ರಾ ಪರಾ ಮತಾ।
ಅಶ್ರೋತ್ರ ವಿಷಯಾತ್ ತಸ್ಮಾತ್ ಕಿಂಚಿದೇವೋರ್ಧ್ವಗಾಮಿನೀ॥
ಸ್ವಯಂಪ್ರಕಾಶಾ ಪಶ್ಯಂತೀ ಸುಷುಮ್ನಾ ನಾಭಿಮಾಶ್ರಿತಾ।
ಸೈವ ಹೃತ್ಪಂಕಜಂ ಪ್ರಾಪ್ಯ ಮಧ್ಯಮಾ ನಾದರೂಪಿಣೀ॥
ತತಃ ಸಂಜಲ್ಪ ಮಾತ್ರಾಸ್ಯಾದವಿಭಕ್ತೋರ್ಧ್ವಗಾಮಿನೀ।
ಸೈವೋರುಕಂಠತಾಲಸ್ಥಾ ಶಿರೋಘ್ರಾಣರದಾಶ್ರಿತಾ॥
ಜಿಹ್ವಾ ಮೂಲೋಷ್ಠನಿಸ್ಕೃತಾ ಕೃತವರ್ಣಪರಿಗ್ರಹಾ।
ಶಬ್ದಪ್ರಪಂಚ ಜನನೀ ಶ್ರೋತ್ರಗ್ರಾಹ್ಯಾ ತು ವೈಖರೀ॥

(ಆ) I ಹೃದಯಗೋ ಬುದ್ಧಿಯುಙ್ಮಧ್ಯಮಾಖ್ಯಃ।
II ಅನಾಹತೇ ಬುದ್ಧಿಸತ್ವೇಸಮೇತೋ ಮಧ್ಯಮೋಭಿಧಃ।

(೯)

ನುಡಿಯ ತೆರ	ಆವ ಮಟ್ಟದ ನುಡಿ	ಆವ ಬಗೆ	ಆರ ನುಡಿ
೧. ಪರಾ	ತುರೀಯಾವಸ್ಥೆ (ಶಬ್ದಾತೀತ) ಅವ್ಯವಹಾರ್ಯ (ತಾತ್ವಿಕ)	ಕೇವಲ ಬಿಂದುರೂಪ ಧ್ಯಾನಗಮ್ಯ	ಅನುಭಾವಿಗಳು (Mystics)
೨. ಪಶ್ಯಂತಿ	ಪ್ರಾಣಲೋಕ (ಬುದ್ಧಿಯು ಕಾಣಿಸಿ ಕೊಂಡಂತೆ ಇದು ಮಸಮಸಕಾಗುವುದು)	ಕಣ್ಣಿನ ನುಡಿ ಎಂದರೆ ವಿಚಾರಗಳು ವಸ್ತುರೂಪದಲ್ಲಿಯೆ ಕಾಣಿಸಿಕೊಳ್ಳು ವುವು. ವಸ್ತುವು ಎಂದೊಡನೆ ವರ್ಣ ರೂಪ ಆಕಾರಯುಕ್ತವಾದುದೆಂದು ಬೇರೆ ಹೇಳಬೇಕಾಗಿಲ್ಲ.	೧. ಪ್ರಕೃತಿಮಾತೆಯ ಮಕ್ಕಳು ೨. ಶಿಲ್ಪಿಗಳು: ಮೂರ್ತಿ ಮತ್ತು ಚಿತ್ರಶಿಲ್ಪಗಳು, ಯಂತ್ರಶಿಲ್ಪಿಗಳು (Engineers) ಸಾಹಿತಿಗಳ ಲ್ಲಿಯೂ ಒಂದು ಬಗೆಯವರು (ವರ್ಣನೆಗಳೆ ಜೀವಾಳವಾಗಿರುವ ಬರೆಹಗಾರರು) ಮುಂ.
೩. ಮಧ್ಯಮಾ	ಭಾವಲೋಕ	ಕಿವಿಯಲ್ಲಿ ನುಡಿದಂತೆ ಎನಿಸುವುದು. ನಾದಮಯ ಬುದ್ಧಿಯ ಕೈವಾಡಕ್ಕೆ ಇಲ್ಲಿ ಆರಂಭವಾಗುವುದು.	೩. ಭಕ್ತರೂ ಮಾಂತ್ರಿಕರೂ ಮೊದಲಾದ ವರ್ಗದವರು ೧. ಭಾವುಕರೂ ಭಕ್ತರೂ ಮೊದಲಾದವರು ೨. ಗಾಯಕರು ವಾದಕರು ಮುಂ. ೩. ಕವಿಗಳು, ನಾಟಕಕಾರರು ಮುಂ.
೪. ವೈಖರಿ	ವ್ಯವಹಾರಲೋಕ	ಮುಖ್ಯವಾಗಿ ಬುದ್ಧಿಯುಕ್ತ ವ್ಯವಹಾರದಲ್ಲಿ ಆಡುವ ಮಾತಾಡುವ ಸೊಲ್ಲು. ಹೆಚ್ಚಾಗಿ ಸಂಕೇತಪ್ರಧಾನ.	ವ್ಯವಹಾರ ಲೋಕದ ಭಾಷೆ (ಸಾಮೂಹಿಕ).

ಅನುಬಂಧಗಳು

ಶಂಬಾ ಕೃತಿಗಳ ವಿವರಣಾತ್ಮಕ ಸೂಚಿ

ಆಕರಗ್ರಂಥಗಳ ಸೂಚಿ

ಶಬ್ದಸೂಚಿ

ಶಂಬಾ ಕೃತಿಗಳ ವಿವರಣಾತ್ಮಕ ಸೂಚಿ

ಕಂನಡದ ನೆಲೆ

ಇದು ೧೯೩೯ರಲ್ಲಿ ಮೊದಲು ಮುದ್ರಣಗೊಂಡಿತು. ಈ ಪುಸ್ತಕಕ್ಕೆ ಇಂಗ್ಲಿಷಿನ ಉಪಶೀರ್ಷಿಕೆ ಉಂಟು. An Introduction to the History of Karnataka ಎಂಬುದೇ ಆ ಉಪಶೀರ್ಷಿಕೆ. Government of Bombay Karnataka Research Grant Publication ಸಹಾಯದಿಂದ ಪ್ರಕಟಿತವಾಗಿದೆ. ಇದು ಕರ್ನಾಟಕ ವಿದ್ಯಾವರ್ಧಕ ಸಂಘದ ಸುವರ್ಣ ಮಹೋತ್ಸವದ ಪ್ರಕಟಣೆ. ಈ ಪುಸ್ತಕವು ಕೆ. ಜಿ. ರಾಯದುರ್ಗ, ಮೋಹನ ಮುದ್ರಣಾಲಯ, ಧಾರವಾಡ ಇಲ್ಲಿ ಮುದ್ರಿತವಾಗಿದೆ. ಈ ಪುಸ್ತಕದ ಪ್ರಕಾಶಕರು: ಮಾಧವ ಬಲ್ಲಾಳ ಬಂಧುಗಳು ಸಾಧನಕೆರೆ, ಧಾರವಾಡ, "ತಮ್ಮ ಕಿರಿಯ ತಮ್ಮನಂತೆ ಬಗೆದು ಬಗೆಬಗೆಯ ನೆರವನ್ನಿತ್ತು ನಡುಪುತ್ತಿರುವ ಡಾಕ್ಟರ ಕಿರ್ಲೋಸ್ಕರ ಶ್ರೀಪಾದಂಗಳಲ್ಲಿ ಮುಡಿಪು" ಮಾಡಿದ್ದಾರೆ. ಪುಸ್ತಕದ ಕೊನೆಗೆ ವಿಷಯಸೂಚಿ, ವ್ಯಕ್ತಿಸೂಚಿ ನೀಡಿದ್ದಾರೆ. ಸಾ. ಪ್ರತಿ ೧ ರೂ ೮ ಆಣೆ, ಕ್ಯಾಲಿಕೋ ಪ್ರತಿ ೨ ರೂ. ಇದು ಡೆಮ್ಮೆ ೧/೮ ಆಕಾರವಿದ್ದು ಒಟ್ಟು ಪುಟಗಳು ೨೦೬, ಎರಡನೆಯ ಮುದ್ರಣ ೧೯೫೨ರಲ್ಲಿ ಬಂದಿತು. ಪುಸ್ತಕದ ಪ್ರಕಾಶಕರು ಸಮಾಜ ಪುಸ್ತಕಾಲಯ, ಧಾರವಾಡ. ಈ ಆವೃತ್ತಿಯನ್ನು "ನಾನಾ ಅನಿಮಿತ್ತ ಬಂಧುಗಳಿಂದ ಪಡೆದ ನೆರವಿನ ನೆನಹಿನಿಂದ ತಲೆವಾಗಿ ಅವರಿಗೆ ಸಲ್ಲಿಸಿದ ಕಾಣಿಕೆ" ಎಂದು ಮುಡಿಪು ಮಾಡಿದ್ದಾರೆ. ಇದರ ಮುದ್ರಕರು ಮತ್ತು ಪ್ರಕಾಶಕರು ಬಾಲಚಂದ್ರ ವೆಂಕಟೇಶ ಘಾಣೇಕರ, ಪ್ರತಿಭಾ ಮುದ್ರಣ, ಭಗತ್‌ಸಿಂಗ ಬೀದಿ ಧಾರವಾಡ. ಈ ಆವೃತ್ತಿಗೆ ಪ್ರಕಾಶಕರು ಒಂದು ಪುಟದ ಬರೆಹವನ್ನು ಬರೆದಿದ್ದಾರೆ. ಎರಡನೆಯ ಮುದ್ರಣಕ್ಕೆ ಪ್ರತ್ಯೇಕವಾದ ಅರಿಕೆಯನ್ನು ಶಂಬಾ ಅವರು ಬರೆದಿದ್ದಾರೆ. ಇದು ಕ್ರೌನ್ ೧/೮ ಆಕಾರವಿದ್ದು ಬೆಲೆ : ೩ ರೂಗಳನ್ನು ಇಡಲಾಗಿದೆ.

ಎಡೆಗಳು ಹೇಳುವ ಕಂನಾಡ ಕತೆ

ಇದು ೧೯೪೭ರಲ್ಲಿ ಪ್ರಕಟಗೊಂಡಿತು. ಈ ಪುಸ್ತಕದ ಪ್ರಕಾಶಕರು ಮಾಧವ ಬಲ್ಲಾಳ ಬಂಧುಗಳು, ಸಾಧನಕೆರೆ ಧಾರವಾಡ. ಶೇ. ಗೋ. ಕುಲಕರ್ಣಿ ಸಾಧನ ಮುದ್ರಣಾಲಯ, ಧಾರವಾಡ ಇವರು ಮುದ್ರಿಸಿದ್ದಾರೆ. ಇದರ ಬೆಲೆ ೩ ರೂ. ಪುಸ್ತಕದ ಕೊನೆಗೆ 'ಉಪಯುಕ್ತವಾದ ಗ್ರಂಥಗಳು' ಎಂಬಲ್ಲಿ ಇಂಗ್ಲಿಶ್, ಮರ್ಾಟಿ, ಗ್ರಂಥ-ಲೇಖನಗಳ ವಿವರ ಹಾಗೂ ಹಲವು ಬಗೆಯ ಕೋಶಗಳ ವಿವರಗಳುಂಟು. ಪುಸ್ತಕದ ಬೆಲೆ ೩ ರೂ. ಇದು ಆನಂತರ ಮುದ್ರಿತವಾಗಲಿಲ್ಲ. ಅರಿಕೆಯ ಕೊನೆಗೆ ಶಂಬಾ ಸೂಚಿಸಿರುವಂತೆ ಶಾಲಿವಾಹನಶಕ ೧೮೬೯

ಹಟ್ಟಿಯ ಹಬ್ಬದಂದು ಪ್ರಸ್ತುತ ಪುಸ್ತಕವು ಮುಗಿದಂತೆ ತೋರುತ್ತದೆ. ಇದು ಕ್ರೌನ್ ೧/೬ ಆಕಾರವಿದ್ದು ಒಟ್ಟು ಪುಟಗಳು ೨೪೮.

ಕನ್ನಡ ನುಡಿಯ ಹುಟ್ಟು

ಇದು ೧೯೩೭ರಲ್ಲಿ ಪ್ರಕಟಗೊಂಡಿತು. ಈ ಪುಸ್ತಕದ ಪ್ರಕಾಶಕರು ಮಾಧವ ಬಲ್ಲಾಳ ಬಂಧುಗಳು, ಸಾಧನಕೇರಿ, ಧಾರವಾಡ. ವೆಂಕಟೇಶ ಮಾಧವರಾವ ಜೋಶಿ, ಮೋಹನ ಮುದ್ರಣಾಲಯ, ಧಾರವಾಡ ಇವರು ಈ ಪುಸ್ತಕದ ಮುದ್ರಕರು. "ಕನ್ನಡವು ತಲೆಯೆತ್ತಿ ಬಾಳಬೇಕೆಂದು ಹಗಲಿರುಳು ತಮ್ಮ ಮೆಯ್ಮನಗಳಿಂದ ಸವೆಯುತ್ತಿರುವ ನೋಂಪಿಗಳಾದ.... ಅಡಿಯಲ್ಲಿ ಮುಡಿಪು" ಮಾಡಿದ್ದಾರೆ. ಪುಸ್ತಕದ ಕೊನೆಗೆ ಕರ್ನಾಟದ ವೀರಕ್ಷತ್ರಿಯರು ಬಗೆಗೆ The Indian P.E.N. ಇದರಲ್ಲಿ ಆರ್. ಆರ್. ದಿವಾಕರ್ ಅವರು ಬರೆದ ಅಭಿಪ್ರಾಯ, ದೇವುಡು ನರಸಿಂಹಶಾಸ್ತ್ರೀ ಬರೆದ ಒಕ್ಕಣೆ, Indian Culture Calcutta ಇದರಲ್ಲಿ ಬಿ. ಎ. ಎಸ್. ಅವರು ಬರೆದ ಅಭಿಪ್ರಾಯ, ಗೋವಿಂದ ಪೈ ಅವರ ಹರಕೆಗಳು ಇವೆ. ಅನಂತರ 'ಕಣ್ಮರೆಯಾದ ಕನ್ನಡ'ದ ಬಗೆಗೆ ಡಾ. ಎ. ವೆಂಕಟಸುಬ್ಬಯ್ಯ, ಆರ್. ವಿ. ಜಾಗೀರದಾರ, ಡಿ. ವಿ. ಗುಂಡಪ್ಪ, ಆಲೂರ ವೆಂಕಟರಾಯ, ಬಿ. ಎ. ಸಾಲೆತೊರೆ, ಇವರು ಬರೆದ ಅಭಿಪ್ರಾಯಗಳ ಪತ್ರಗಳಿವೆ. 'ಮಹಾರಾಷ್ಟ್ರದ ಮೂಲ'ದ ಬಗೆಗೆ ಮರಾಠಿ ವಿದ್ವಾಂಸರ ಪ್ರತಿಕ್ರಿಯೆಗಳನ್ನು ಕೊಟ್ಟಿದ್ದಾರೆ. ವಾಗ್ಭಟ ನಾರಾಯಣ ದೇಶಪಾಡೆ, ವಾಮನ ಮಲ್ಹಾರ ಜೋಶಿ, ಎಸ್. ಎನ್. ಬನಹಟ್ಟಿ, ಕೃ. ಪಾ. ಕುಲಕರ್ಣಿ, ನಾ. ಗೋ. ಚಾಫೇಕರ ಮುಂತಾದವರ ಪತ್ರಿಕೆ ಹಾಗೂ ಕಾಗದ ರೂಪದ ಅಭಿಪ್ರಾಯಗಳಿವೆ. ಮರು ಮುದ್ರಣ ಈ ಪುಸ್ತಕದ ಮೂರು ಬಾರಿ ಆಗಿವೆ. ಮೂರು ಮತ್ತು ನಾಲ್ಕನೆಯ (೧೯೭೧) ಮುದ್ರಣಗಳನ್ನು ಹೊರತಂದವರು ಮನೋಹರ ಘಾಣೇಕರ, ಸಮಾಜ ಪುಸ್ತಕಾಲಯ, ಧಾರವಾಡ. ಮುದ್ರಕರು ರವೀಂದ್ರ ಘಾಣೇಕರ, ಶಿವಾಜಿ ಬೀದಿ, ಪ್ರತಿಭಾ ಮುದ್ರಣ, ಧಾರವಾಡ. ಮೂರನೆಯ ಮುದ್ರಣಕ್ಕೆ ಶಂ.ಬಾ ಅರಿಕೆಯೊಂದು ಪ್ರತ್ಯೇಕವಾಗಿ ಬರೆದಿದ್ದಾರೆ. ಇದರ ಮೊದಲ ಮುದ್ರಣದಲ್ಲಿ ಬಂದಿದ್ದ 'ಬಿನ್ನಹ ಪತ್ರ' ಮೂರು ಮತ್ತು ನಾಲ್ಕನೆಯ ಮುದ್ರಣಗಳಲ್ಲಿ ಬಳಸಿಲ್ಲ. ಇದು ಕ್ರೌನ್ ೧/೮ ಆಕಾರವಿದ್ದು ಒಟ್ಟು ಪುಟಗಳು ೧೬೪. ಬೆಲೆ ೩ ರೂಗಳು. 'ಕಂನುಡಿಯ ಜೀವಾಳ' ಪುಸ್ತಕವನ್ನು ಪ್ರೊ. ಎಂ. ಮರಿಯಪ್ಪಭಟ್ಟ ಅವರು 'ಹಿಂದೂ' ಪತ್ರಿಕೆಯಲ್ಲಿ ಬರೆದ ಅಭಿಪ್ರಾಯವೂ ಉಂಟು.

ಕನ್ನಡ ನುಡಿಯ ಜೀವಾಳ

ಇದು ಯಾವ ವರ್ಷ ಪ್ರಕಟವಾದದ್ದೆಂದು ಎಲ್ಲೂ ತಿಳಿಸಿಲ್ಲ. ಪುಸ್ತಕದ ಹೊರಕವಚದಲ್ಲಿ 'ನುಡಿಯ ಗುಟ್ಟನ್ನು ಅರಿಯದವರು ನಾಲಗೆಯವರಲ್ಲ, ನಾಲಗೆಯಿಲ್ಲದವರು ಮಾನವರಲ್ಲ' ಎಂಬ ನುಡಿಯು ಅಚ್ಚಾಗಿದೆ. ಇದು ಮುಂಬಯಿ ವಿಶ್ವವಿದ್ಯಾನಿಲಯದ ನೆರವಿನಿಂದ ಪ್ರಕಟವಾಗಿದೆ. ನಾಗವರ್ಮ ಹಾಗೂ ಪ್ರಿಚರ್ಡ್ ಎಂಬ ವಿದ್ವಾಂಸರ ಸೂಕ್ತಿಗಳು ಒಳಪುಟಗಳಲ್ಲಿ ಇವೆ. ಸರಸ್ವತಿ ನಿಲಯ ಧಾರವಾಡ ಈ ಪ್ರಕಾಶನದ ಮೂಲಕ ಶ್ರೀ ಜಿ. ಕೆ. ಕೇಳಕರರು ಪ್ರಕಟಿಸಿದ್ದಾರೆ. ಶ್ರೀ ಜಿ. ಆರ್. ಪಂಡಿತರು, ಕೇಳಕರ ಮುದ್ರಣಾಲಯದಲ್ಲಿ ಮುದ್ರಿಸಿದ್ದಾರೆ. ಅರಿಕೆಯ ಕೊನೆಗೆ ಟಿ. ಎಫ್. ಕಿಟ್ಟೆಲ್, ಎ. ಮ್ಯಾನ್ನರ್, ಪಿ. ಶಂಕರನಾರಾಯಣ, ಬಿ. ಸೀತಾರಾಮಾಚಾರ್ಯ, ಮೋನಿಯರ್ ವಿಲಿಯಂಸ್, ಆಪ್ಟೆ ವಿ. ಎಸ್. ಇವರ ಶಬ್ದಕೋಶಗಳನ್ನು ಬಳಸಿದ ಬಗೆಗೆ ಸೂಚನೆಗಳಿವೆ. ಪುಸ್ತಕದ ಬೆಲೆ ೩ ರೂಪಾಯಿ. ಕ್ರೌನ್ ೧/೮ ಆಕಾರವಿದ್ದು ಒಟ್ಟು ಪುಟಗಳು: ೧೨೨

ಆಕರಗ್ರಂಥಗಳ ಸೂಚಿ

ಇಂಗ್ಲಿಷ್

Mugali R. S., *Heritage of Karnataka, Usha Sahithya Male, Mysore*

Henry Bradley, *Making of English*

Munshi K., *Gujarat and its literature*

Levy Bruhl, *The Language of the Night*

George Russell, *The Candle of Vision*

K. P. Jayaswal, *Hindu Polity*

P. K. Gode, *Studies in History of Indian Plants*

Childer, *Pali Dictionary*

Mannar A., *Tulu - English Dictionary*

Shankaranarayana P., *Telugu - English Dictionary*

Denadutta Bhandarkar, *Charmichel Lectures*

R. C. Mujumdar, *1931 Indian Historical Quarterly,* Sept P. 455

K. P. Gojwami, *1939 India Historical Quarterly,* pp. 137-143

Sense and Poetry (Constable)

Kadamba Kula

Castes and Tribes of Mysore

Castes and Tribes of South India

Annual Reports of Mysore Archaeological Department

Annual Report on South Indian Epigraphy

Inscriptions of Madras Presidency

Mysore Gazetteers

Bombay Gazetteers

Tamil Lexcion

Telugu Dictionary Madras University

Oxford English Dictionary

Andhra Historical Society Journal

Assam Research Society Journal

Annuals of Bhandarkar Oriental Research Institue

Journal of Bombay Historical Society

Karnatak Hisotrical Review

ಕನ್ನಡ

ಪಂಪ	**ಪಂಪಭಾರತಂ**	(೧೯೩೧) (ಸಂ) ಬೆಳ್ಳಾವೆ ವೆಂಕಟ ನಾರಾಯಣಪ್ಪ, ಕರ್ಣಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು
ರನ್ನ	**ಗದಾಯುದ್ಧಂ**	(೧೯೨೫) (ಸಂ) ಮಂ.ಆ. ರಾಮಾನುಜೈಯ್ಯಂಗರ್ ಕರ್ಣಾಟಕ ಕಾವ್ಯಕಲಾನಿಧಿ, ಮೈಸೂರು
ಕುಮಾರವ್ಯಾಸ	**ಆದಿಪರ್ವಂ**	(೧೯೧೨) (ಸಂ) ವಿ. ಶ್ಯಾಮಾಚಾರ್ಯ, ಪ್ರಾಚ್ಯವಿದ್ಯಾ ಸಂಶೋಧನಾಲಯ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
ರತ್ನಾಕರವರ್ಣಿ	**ಭರತೇಶ ವೈಭವ**	(೧೯೫೪) (ಸಂ) ಉಗ್ರಾಣ ಮಂಗೇಶರಾವ್ ಮಂಗಳೂರು
ನಯಸೇನ	**ಧರ್ಮಾಮೃತಂ**	(೧೯೨೪) (ಸಂ) ಪ್ರಾಚ್ಯವಿದ್ಯಾ ಸಂಶೋಧನಾಲಯ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
ಸಂಚಿಯ ಹೊನ್ನಮ್ಮ	**ಹದಿಬದೆಯ ಧರ್ಮ**	(೧೯೪೦) (ಸಂ) ಡಿ. ಚಂಪಾಬಾಯಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಬಸವಣ್ಣ	**ಬಸವಣ್ಣನವರ ಷಟ್‌ಸ್ಥಲದ ವಚನಗಳು**	(೧೯೫೧) (ಸಂ) ಶಿ. ಶಿ. ಬಸವನಾಳ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ
"	**ಬಸವೇಶ್ವರನ ವಚನಗಳು**	(೧೯೩೦), ಫ. ಗು.ಹಳಕಟ್ಟಿ, ಶಿವಾನುಭವ, ಗ್ರಂಥಮಾಲೆ, ಬಿಜಾಪುರ
ಸರ್ವಜ್ಞ	**ಸರ್ವಜ್ಞ ವಚನಗಳು**	(೧೯೨೭) (ಸಂ) ಚೆನ್ನಪ್ಪ ಉತ್ತಂಗಿ (ಸಿ.ಡಿ. ಉತ್ತಂಗಿ), ಧಾರವಾಡ
ನಾಗಚಂದ್ರ	**ಪಂಪರಾಮಾಯಣಂ**	(೧೯೩೨) (ಸಂ) ಪಂಡಿತ ಪರಿಶೋಧನೆ. ಕರ್ಣಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು
ರಾಘವಾಂಕ	**ಹರಿಶ್ಚಂದ್ರ ಕಾವ್ಯಂ**	(೧೯೩೦) (ಸಂ) ಮಂ. ಆ. ರಾಮಾನುಜೈಯ್ಯಂಗಾರ್ ಕರ್ಣಾಟಕ ಕಾವ್ಯಕಲಾನಿಧಿ, ಮೈಸೂರು
ಅಲ್ಲಮಪ್ರಭು	**ಪ್ರಭುದೇವರ ವಚನಗಳು**	(೧೯೩೧) (ಸಂ) ಫ. ಗು. ಹಳಕಟ್ಟಿ, ಶಿವಾನುಭವ ಗ್ರಂಥಮಾಲಾ , ಬಿಜಾಪುರ
ಆಂಡಯ್ಯ	**ಕಬ್ಬಿಗರ ಕಾವ**	(೧೯೩೪) (ಸಂ), ಮಂ. ಆ. ರಾಮಾನುಜೈಯ್ಯಂಗಾರ್, ಕರ್ಣಾಟಕ ಕಾವ್ಯಕಲಾನಿಧಿ, ಮೈಸೂರು
ರುದ್ರಭಟ್ಟ	**ಜಗನ್ನಾಥ ವಿಜಯಂ**	(೧೯೨೩) (ಸಂ), ಆರ್. ಶ್ಯಾಮಶಾಸ್ತ್ರೀ ಪ್ರಾಚ್ಯ ವಿದ್ಯಾಸಂಶೋಧನಾಲಯ, ಮೈಸೂರು
ಲಕ್ಷ್ಮೀಶ	**ಸಟೀಕಾ ಜೈಮಿನಿ ಭಾರತ**	(ಸಂ), ಕರಿಬಸವಪ್ಪ ಶಾಸ್ತ್ರೀ, ಮೈಸೂರು
ನಾಗವರ್ಮ	**ಕಾವ್ಯಾವಲೋಕನಂ**	(೧೯೩೯) (ಸಂ), ರಾ. ನರಸಿಂಹಾಚಾರ್ಯ ಪ್ರಾಚ್ಯವಿದ್ಯಾಸಂಶೋಧನಾಲಯ ಮೈಸೂರು ವಿಶ್ವವಿದ್ಯಾಲಯ, ಮೈಸೂರು
ತಿರುಮಲಾರ್ಯ	**ಚಿಕದೇವರಾಯ ವಂಶಾವಳಿ**	(೧೯೩೩) (ಸಂ) ಎಂ. ಎ. ರಾಮಾನುಜೈಯ್ಯಂಗಾರ್, ಕರ್ಣಾಟಕ ಕಾವ್ಯ ಕಲಾನಿಧಿ, ಮೈಸೂರು
ನಾಗವರ್ಮ	**ಛಂದೋಂಬುಧಿ**	(೧೯೪೬) (ಸಂ) ಎಚ್. ಎಸ್. ರಾಮಸ್ವಾಮಿ ಅಯ್ಯಂಗಾರ್, ಮೈಸೂರು
ನಾಗವರ್ಮ	**ಅಭಿಧಾನವಸ್ತುಕೋಶಂ**	(೧೯೩೩) (ಸಂ) ಎ. ವೆಂಕಟರಾವ್ ಎಚ್. ಶೇಷಯ್ಯಂಗಾರ್, ಮದರಾಸ ವಿಶ್ವ ವಿದ್ಯಾನಿಲಯ, ಮದರಾಸು
ಜಗನ್ನಾಥದಾಸ	**ಹರಿಕಥಾಮೃತಸಾರ**	(೧೯೩೬) (ಸಂ) ಪಾವಂಜೆ ಗುರುರಾಜ ರಾವ್, ಉಡುಪಿ, ಮಂಗಳೂರು
ಮುಳಿಯ ತಿಮ್ಮಪ್ಪಯ್ಯ	**ನಾಡೋಜ ಪಂಪ**	ಮಂಗಳೂರು

ಸಂಸ್ಕೃತ

ವ್ಯಾಸ	**ಶ್ರೀ ಮನ್ಮಹಾಭಾರತಂ**	(೧೯೧೦) ಟಿ. ವಿ. ವೈದ್ಯ (ಸಂ) ಮುಂಬಯಿ
ಅನ್ನಂಭಟ್ಟ	**ತರ್ಕಸಂಗ್ರಹಃ**	(೧೯೩೦) (ಸಂ) ವಾಗೀಶ್ವರ ಶಾಸ್ತ್ರೀ, ಪೂನಾ
ಹಾಲರಾಜ	**ಗಾಥಾಸಪ್ತಶತೀ**	(೧೯೧೨) (ಸಂ) ಕಾಶೀನಾಥ ಪಾಂಡುರಂಗ ಪರಬ್ ನಿರ್ಣಯಸಾಗರ ಮುದ್ರಣ, ಮುಂಬಯಿ
ಶಾರದಾತನಯ	**ಶಾರದಾತಿಲಕಂ**	(೧೯೩೨) (ಸಂ) ಕಾಶೀನಾಥ ಪಾಂಡುರಂಗ ಪರಬ್ ನಿರ್ಣಯಸಾಗರ ಮುದ್ರಣ, ಮುಂಬಯಿ
ಬಿಲ್ಹಣ	**ವಿಕ್ರಮಾಂಕದೇವ ಚರಿತಂ**	(೧೯೧೮) ಗುಜರಾಥಿ ಪ್ರೆಸ್, ಗುಜರಾತ್

ಶಬ್ದಸೂಚಿ

ಡಾ. ಶಂಕರರಾವ್ ಬಾಳದೀಕ್ಷಿತ ಜೋಶಿ ಅವರು ಕರ್ನಾಟಕ ಕಂಡ ಅತ್ಯಂತ ಶ್ರೇಷ್ಠ ಸಾಂಸ್ಕೃತಿಕ ಸಂಶೋಧಕರು. ನಮ್ಮ ಈ ನಾಡಿನ ಪ್ರತಿಭಾಪೂರ್ಣ ವಿದ್ವತ್ ಪರಂಪರೆಯಲ್ಲಿ ಡಾ. ಜೋಶಿ ಅವರದ್ದು ಅಪೂರ್ವವೂ ಮತ್ತು ವಿಶಿಷ್ಟವೂ ಆದ ಮಾರ್ಗ. ಜೋಶಿ ಅವರು ಹಿಡಿದಿರುವ ಮತ್ತು ನಡೆದುಬಂದಿರುವ ಈ ಮಾರ್ಗ ಅನ್ಯಸುಗಮವಾದುದಲ್ಲ. ಅವರು ಪರಂಪರಾಗತ ಸಂಶೋಧನೆಗೆ ಮತ್ತು ಕರ್ನಾಟಕದ ಸಾಂಸ್ಕೃತಿಕ ಹಾಗೂ ವಿದ್ವತ್ ಕ್ಷೇತ್ರಕ್ಕೆ ವಿನೂತನ ಆಯಾಮವನ್ನು ನೀಡಿದ ಅಪರೂಪದ ಸಂಶೋಧಕರು.

ಡಾ. ಶಂಬಾ ಅವರ ಆಸಕ್ತಿ, ಅಧ್ಯಯನ, ಸಂಶೋಧನೆ ಮತ್ತು ಚಿಂತನೆಗಳ ಬೀಸು ತುಂಬಾ ವ್ಯಾಪಕವಾದುದು. ಈ ಕಾರಣ ಅವರು ಇತಿಹಾಸದ ಭಾಷಾ ವಿಶ್ಲೇಷಣಾ ಪದ್ಧತಿಯನ್ನು–ಕರುನಾಡಿನ ಎಡೆಗಳ ಹೆಸರುಗಳ, ದೇವತಾ ಪ್ರತಿರೂಪಗಳ, ಸಾಂಕೇತಿಕ ನೆಲೆಗಳ, ಮನೋವೈಜ್ಞಾನಿಕ ಶೋಧನೆಗಳ, ಧಾರ್ಮಿಕ ಚಿಂತನೆಗಳ ಸಂಕೀರ್ಣ ಪಥವನ್ನು ಹಿಡಿದು ನಡೆದರು. ತಿರುವು ಮುರುವು ಆಗಿರುವ ಸಮಕಾಲೀನ ಮೌಲ್ಯಗಳ ಜೊತೆಗೆ ಪ್ರಾಚೀನ ಸಂಸ್ಕೃತಿಯ ಸಾಧಾರವಿವರಗಳನ್ನು ಇಟ್ಟು ತೌಲನಿಕವಾಗಿ ನೋಡಿದ್ದು ಮತ್ತು ವಿಶ್ಲೇಷಿಸಿದ್ದು ಜಾಗತಿಕ ಸಾಂಸ್ಕೃತಿಕ ಅಧ್ಯಯನದ ಅಖಂಡ ಇತಿಹಾಸದಲ್ಲೇ ಹೊಸಬಗೆಯದು.

ಡಾ. ಶಂಬಾ ಅವರದು ಬಹುಮುಖವಾದ ಮತ್ತು ಬಹುಶ್ರುತವಾದ ಅಪರೂಪದ ವ್ಯಕ್ತಿತ್ವ. ಅವರು ನಮ್ಮ ಸಾಂಸ್ಕೃತಿಕ ಚಿಂತಕರಲ್ಲಿ ಪ್ರಥಮರಲ್ಲಿ ಪ್ರಥಮರು. ಕಲ್ಪನಾಪ್ರಧಾನ ಸಾಂಪ್ರದಾಯಕ ಸಾಂಸ್ಕೃತಿಕ ಇತಿಹಾಸದ ಪರಂಪರೆಯ ಮೃದುಶಯ್ಯೆಯ ಮೇಲೆ ನಿರಾಳವಾಗಿ ಮಲಗಿದ್ದ ವೈದಿಕಶಾಹಿ ಚಿಂತನಕ್ರಮವನ್ನು ತಮ್ಮ ಜಾತ್ಯತೀತ ನಿಲುವಿನ ಸತ್ಯಶೋಧನೆಯ ಅಚ್ಚರಿಗೊಳಿಸುವ ಫಲಿತಗಳ ಮೂಲಕ ತಲ್ಲಣಗೊಳಿಸಿ, ಹೂತುಹೋಗಿದ್ದ ತಥ್ಯಗಳಿಗೆ ಜೀವದಾನ ಮಾಡಿ ಹೊಸಬೆಳಕಿನ ಪಥವನ್ನು ನಿರ್ಮಿಸಿದ ಅಸಾಧಾರಣ ವ್ಯಕ್ತಿ. ಅವರ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾಳಜಿಗಳು, ವಿಶಾಲ ನೆಲೆಗಟ್ಟಿನ ಸೂಕ್ಷ್ಮತಮ ಚಿಂತನೆಗಳು, ಅಪ್ರಿಯವಾದರೂ ಕಷ್ಟದ ಕಲ್ಲುಮುಳ್ಳುಗಳನ್ನು ತುಳಿದು ಸತ್ಯಸೂರ್ಯನನ್ನು ದರ್ಶನ ಮಾಡಿಸುವ ವಿದ್ವತ್ ತಪಸ್ಸು–ಇವುಗಳೆಲ್ಲ ಅನ್ಯಾದೃಶ್ಯವಾಗಿ ಮೈತಳೆದು ನಿಂತ ಅವರ ಬರಹಗಳ ಸುಮಾರು ೪೦೦೦ ಪುಟಗಳ ಬೃಹತ್ ರಾಶಿಯೇ ನಮ್ಮ ಮುಂದಿದೆ.

ಡಾ. ಎಚ್.ಜೆ. ಲಕ್ಕಪ್ಪಗೌಡ
ಅಧ್ಯಕ್ಷರು

ISBN 81-7713-00